ಶ್ರೀಮದಾನಂದತೀರ್ಥಭಗವತ್ಪಾದಪ್ರಣೀತ

ಮಹಾಭಾರತತಾತ್ಪರ್ಯನಿರ್ಣಯ

(ಸಂಸ್ಕೃತಮೂಲ, ಕನ್ನಡ ಅನುವಾದ, ವಿವರಣೆ ಹಾಗೂ
ಟಿಪ್ಪಣಿಗಳಲ್ಲಿನ ವಿಶೇಷಾಂಶಗಳೊಂದಿಗೆ)

ಸಂಪುಟ - ೫

(ಅಧ್ಯಾಯಗಳು : ೨೭ರಿಂದ ೩೨ರವರೆಗೆ)

ಸಂಪಾದನೆ, ಅನುವಾದ, ವಿವರಣೆ:

ಡಾ॥ ವ್ಯಾಸನಕೆರೆ ಪ್ರಭಂಜನಾಚಾರ್ಯ

ಪ್ರಕಾಶಕರು:

ಶ್ರೀವ್ಯಾಸಮಧ್ವಸಂಶೋಧನ ಪ್ರತಿಷ್ಠಾನ

'ಪಾಜಕ', ನಂ. 67, 50 ಅಡಿ ರಸ್ತೆ, ಹನುಮಂತನಗರ,

ಬೆಂಗಳೂರು - 560 019.

Śrīmadānandatīrthabhagavatpāda-praṇīta MAHĀBHĀRATATĀTPARYANIRṆAYA (Volume 5 : Adhyāya 27 to 32) — critically edited with Kannada rendering, explanatory notes and extracts from various Sanskrit Glosses — by Vidyāvācaspati, Darśanaratnam, Sacchāstravicakṣaṇaratnam, Pravacanācārya, Śāstrapravacanakesari, Madhvamatavardhana, Vidvaccūḍāmaṇi, Vedavidyāvicakṣaṇa, Paṇḍitaratnam, Vidyāvāridhi, Sacchāstrapravacanapraviṇa, Gītāratnākara, Tattvavācaspati, Jnānaratnākara (and Recipient of Karnataka State Sanskrit Award-1999 & Karnataka Rajyotsava Award-2002 and Śrī Vidyāmānya-Mahāpraśasti of Śrī Pejavar Mutt, Udupi) **Dr.Vyasanakere Prabhanjanacharya**, M.A., Ph.D., D.Litt., F.I.B.R., F.U.W.A., Principal (Rtd.), Govt. First Grade College, K.R.Puram, Bangalore and Published by **Aitareya Prakāśana Vyasanakere**, Publication wing of **Śrī VyāsaMadhva Samśodhana Pratiṣṭhāna** "Pajaka",No.67, Fifty Feet Road, Hanumanthanagar, Bangalore - 560019.

Phone : 2660 2802
2662 2345.

Internet : www.vyasamadhwa.org

E-mail : info@vyasamadhwa.org

First Edition : 2004 (1000 copies)
Pages : 828(112+528+188)

Price : Rs. 1600/- (for a set of five volumes)

© Dr. Vyasanakere Prabhanjanacharya

Typeset by :
Rayiprāṇa Impressions and
Śrī VyāsaMadhva Samśodhana Pratiṣṭhāna

Printed at :
Rāṣṭrotthāna Mudraṇālaya,
Bangalore -19.

ವಿಷಯ ಸೂಚೀ

ಸಂಕೇತಗಳ ವಿವರ xxvii

ಮುನ್ನುಡಿ xxviii-cxxii

ಮಹಾಭಾರತತಾತ್ಪರ್ಯನಿರ್ಣಯ (ಸಂಪುಟ - ೫) ೧-೬೦೮
(ಅಧ್ಯಾಯಗಳು : ೨೭ರಿಂದ ೩೨)

ಅಧ್ಯಾಯ - ೨೭ (ಕರ್ಣವಧಃ) ೧-೧೦೭

(ಕರ್ಣಸೇನಾಪತ್ಯ, ಭೀಮಸೇನನಿಂದ ಅಶ್ವತ್ಥಾಮನ ಪರಾಭವ, ಶಲ್ಯಸಾರಥ್ಯ, ಕರ್ಣನಿಂದ ಭಾರ್ಗವಾಸ್ತ್ರಪ್ರಯೋಗ, ಅರ್ಜುನಯುಧಿಷ್ಠಿರರ ವಿಚಿತ್ರಪ್ರಸಂಗ, ದುಃಶಾಸನವಧೆ, ಕರ್ಣಾರ್ಜುನರ ಯುದ್ಧ, ಕರ್ಣಾವಸಾನ)

ಸೇನಾಪತಿಯಾಗಿ ಕರ್ಣ - ಹದನಾರನೆಯ ದಿನದ ಯುದ್ಧ (೧) ೧
ಕುರುಪಾಂಡವಯುದ್ಧ - ಭೀಮನ ಪರಾಕ್ರಮ (೨) ೨
ಭೀಮನಿಂದ ಕ್ಷೇಮಧೂರ್ತಿಯ ವಧೆ (೩) ೨
ಭೀಮ ಅಶ್ವತ್ಥಾಮರ ಅದ್ಭುತಯುದ್ಧ (೫) ೩
ಅಸ್ತ್ರಯುದ್ಧದಲ್ಲೂ ಅಶ್ವತ್ಥಾಮನ ಪರಾಜಯ (೯) ೬
ಭೀಮನ ಪೆಟ್ಟಿಗೆ ಅಶ್ವತ್ಥಾಮನ ಮೂರ್ಛೆ (೧೦) ೭
ಭೀಮನಿಂದ ಗಜಸೇನೆಯ ವಿನಾಶ (೧೧) ೮
ಯುಧಿಷ್ಠಿರನಿಂದ ದುರ್ಯೋಧನನ ಪರಾಭವ (೧೩) ೧೦
ಭೀಮನಿಗೆ ಅಂಜಿ ದುರ್ಯೋಧನನ ಪಲಾಯನ (೧೪) ೧೦
ಕರ್ಣನಿಂದ ವಿರಥನಾದ ನಕುಲ (೧೫) ೧೧
ಸಾತ್ಯಕಿಯಿಂದ ವಿಂದಾನುವಿಂದರ ವಧ (೧೭) ೧೧
ಕೃಪನಿಗೆ ಅಂಜಿದ ಧೃಷ್ಟದ್ಯುಮ್ನ (೨೧) ೧೩
ಅರ್ಜುನನಿಂದ ವಿರಥನಾದ ಕರ್ಣ (೨೨) ೧೩
ಹದಿನೇಳನೆಯ ದಿನದ ಯುದ್ಧ (೨೩) ೧೪
ಶಲ್ಯ ಸಾರಥ್ಯಕ್ಕೆ ಕರ್ಣನ ಬಯಕೆ (೨೪) ೧೪
ಶಲ್ಯನ ಬಳಿಗೆ ದುರ್ಯೋಧನ (೨೫) ೧೬

ರಥಿಗಿಂತ ಸಾರಥಿ ಮಿಗಿಲು (೨೬) ೧೭
ಕರ್ಣನ ಸಾರಥಿಯಾಗಿ ಶಲ್ಯ (೨೭) ೧೮
ಕರ್ಣನ ದುರಹಂಕಾರ (೨೮) ೧೯
ಶಲ್ಯನಿಂದ ಕರ್ಣನ ತೇಜೋವಧೆ (೨೯) ೧೯
ದುರ್ಯೋಧನಾದಿಗಳ ರಕ್ಷಣೆಯಲ್ಲಿ ಕರ್ಣ (೩೦) ೨೧
ಕರ್ಣ ಯುಧಿಷ್ಠಿರರ ಯುದ್ಧ (೩೩) ೨೧
ಕರ್ಣನಿಂದ ಯುಧಿಷ್ಠಿರನ ಪರಾಭವ (೩೪) ೨೨
ಭೀಮನಿಂದ ದುರ್ಯೋಧನನ ಆಕ್ರಮಣ (೩೫) ೨೩
ಕರ್ಣನ ಮೇಲೆ ಕೆರಳಿದ ಭೀಮ (೩೭) ೨೪
ಭೀಮನ ಬಾಣಕ್ಕೆ ನಿಶ್ಚೇಷ್ಟನಾದ ಕರ್ಣ (೩೯) ೨೪
ಶಲ್ಯನ ಪ್ರಾರ್ಥನೆಯಿಂದ ಕರ್ಣನ ಮೋಚನ (೪೧) ೨೬
ಭೀಮನಿಂದ ಕೌರವ ಸೇನೆಯ ಪರಾಭವ (೪೩) ೨೭
ಅಶ್ವತ್ಥಾಮನ ಪರಾಕ್ರಮ (೪೪) ೨೭
ಯುಧಿಷ್ಠಿರನಿಂದ ಅಶ್ವತ್ಥಾಮರ ಪ್ರಾರ್ಥನೆ (೪೭) ೨೮
ಅರ್ಜುನ ಅಶ್ವತ್ಥಾಮರ ಅಪೂರ್ವಯುದ್ಧ (೪೮) ೨೯
ಅಶ್ವತ್ಥಾಮರ ಯುದ್ಧಕೌಶಲ - ಶರಪಂಜರದಲ್ಲಿ ಅರ್ಜುನ (೫೧) ೩೧
ಕೃಷ್ಣನಿಂದ ಅರ್ಜುನನ ಮೋಚನೆ (೫೨) ೩೨
ತುಂಡಾದ ಗಾಂಡೀವ ಜ್ಯಾ (೫೩) ೩೨
ಸಾರಥಿಯೂ ಆದ ಅಶ್ವತ್ಥಾಮ (೫೪) ೩೩
ಮತ್ತೊಮ್ಮೆ ಶರಪಂಜರದಲ್ಲಿ ಅರ್ಜುನ (೫೫) ೩೪
ಕೃಷ್ಣನಿಂದ ಪುನಃ ಅರ್ಜುನನ ಮೋಚನ (೫೬) ೩೪
ಮತ್ತೊಮ್ಮೆ ತುಂಡಾದ ಗಾಂಡೀವ ಜ್ಯಾ (೫೭) ೩೪
ಕೊನೆಗೂ ಸೋತ ಅಶ್ವತ್ಥಾಮ (೫೮) ೩೫
ಅರ್ಜುನನ ಗೆಲುವಿನ ಗುಟ್ಟು (೫೯) ೩೫
ಪಾಂಡ್ಯ ಅಶ್ವತ್ಥಾಮರ ಯುದ್ಧ (೬೧) ೩೬
ಅಶ್ವತ್ಥಾಮನಿಂದ ಪಾಂಡ್ಯನ ವಧೆ (೬೨) ೩೬

ಅರ್ಜುನನಿಂದ ದಂಡಧಾರನವಧೆ (೬೩) ೩೭
ಅಶ್ವತ್ಥಾಮ ಧೃಷ್ಟದ್ಯುಮ್ನರ ಯುದ್ಧ (೬೪) ೩೭
ವಿರಥನಾದ ಧೃಷ್ಟದ್ಯುಮ್ನ (೬೮) ೩೮
ಭೀಮಾರ್ಜುನರಿಂದ ಧೃಷ್ಟದ್ಯುಮ್ನನ ರಕ್ಷಣೆ (೭೦) ೩೯
ಕೃತವರ್ಮ ಧೃಷ್ಟದ್ಯುಮ್ನರ ಯುದ್ಧ (೭೨) ೪೦
ಕೃತವರ್ಮನ ಪರಾಭವ (೭೩) ೪೦
ದುರ್ಯೋಧನನಿಂದ ನಕುಲ ಸಹದೇವರ ಸೋಲು (೭೪) ೪೦
ದುರ್ಯೋಧನನಿಂದ ಯುಧಿಷ್ಠಿರನ ಸೋಲು (೭೫) ೪೧
ಭೀಮನಿಂದ ಕರ್ಣ ದುರ್ಯೋಧನರ ಪರಾಭವ (೭೬) ೪೧
ಭೀಮನಿಂದ ಸುಷೇಣನ ವಧೆ (೭೭) ೪೧
ಯುಧಿಷ್ಠಿರಾದಿಗಳನ್ನು ಜಯಿಸಿದ ಕರ್ಣ (೭೯) ೪೨
ದುರ್ಯೋಧನನನ್ನು ವಿರಥನನ್ನಾಗಿಸಿದ ಭೀಮ - ಶಿಬಿರದತ್ತ ಯುಧಿಷ್ಠಿರ (೮೧) ೪೩
ಭೀಮನ ಅಪೂರ್ವ ಪರಾಕ್ರಮ (೮೩) ೪೪
ಅರ್ಜುನನ ಪರಾಕ್ರಮ (೮೫) ೪೫
ಮತ್ತೊಮ್ಮೆ ಅರ್ಜುನ ಅಶ್ವತ್ಥಾಮರ ಯುದ್ಧ (೮೯) ೪೬
ಅರ್ಜುನನಿಂದ ಅಶ್ವತ್ಥಾಮನ ಪರಾಭವ (೯೦) ೪೬
ಕರ್ಣನ ಪರಾಕ್ರಮ (೯೧) ೪೭
ಕರ್ಣ ಧೃಷ್ಟದ್ಯುಮ್ನರ ಯುದ್ಧ (೯೨) ೪೭
ದುರ್ಯೋಧನನಿಂದ ಸಾತ್ಯಕಿ ಧೃಷ್ಟದ್ಯುಮ್ನರ ಪರಾಭವ (೯೪) ೪೭
ಭೀಮನ ಅದ್ಭುತ ಪರಾಕ್ರಮ (೯೬) ೪೮
ಭೀಮನಿಂದ ಸೈನ್ಯದ ಪಲಾಯನ - ದುರ್ಯೋಧನನ ಪರಾಜಯ (೯೭) ೪೮
ಕೆರಳಿದ ಕರ್ಣ (೯೯) ೪೯
ಕರ್ಣನಿಂದ ಭಾರ್ಗವಾಸ್ತ್ರಪ್ರಯೋಗ (೧೦೦) ೪೯
ಅಸ್ತ್ರಕ್ಕೆ ಮಣಿಯದ ಭೀಮ (೧೦೧) ೫೦
ಓಡಿ ಬದುಕಿದ ಪಾಂಡವ ವೀರರು (೧೦೨) ೫೦
ಯುಧಿಷ್ಠಿರನ ಬಳಿಗೆ ತೆರಳಲು ಭೀಮನಿಗೆ ಅರ್ಜುನನ ಪ್ರಾರ್ಥನೆ (೧೦೬) ೫೦

ತೆರಳಲು ಒಪ್ಪದ ಭೀಮ (೧೦೮) ೫೧
ಕೃಷ್ಣನಿಂದ ಭೀಮನ ಪ್ರಶಂಸೆ (೧೦೯) ೫೨
ಶಿಬಿರದಲ್ಲಿ ಅರ್ಜುನ (೧೧೦) ೫೩
ಅರ್ಜುನನ ನಿಂದೆ (೧೧೧) ೫೩
ಯುಧಿಷ್ಠಿರನಿಂದ ಭೀಮನ ಪ್ರಶಂಸೆ (೧೧೨) ೫೪
ಯುಧಿಷ್ಠಿರನ ವಧೆಗೆಂದು ಧಾವಿಸಿದ ಅರ್ಜುನ (೧೧೪) ೫೪
ಅರ್ಜುನನಿಗೆ ಶ್ರೀಕೃಷ್ಣನ ಉಪದೇಶ - ಸತ್ಯ ಶಬ್ದದ ನಿರ್ವಚನ (೧೧೫) ೫೫
ಧರ್ಮಶಬ್ದದ ನಿರ್ವಚನ (೧೧೬) ೫೬
ಸತ್ಯಹೇಳಿ ನರಕ ಕಂಡ ಬ್ರಾಹ್ಮಣ (೧೧೭) ೫೭
ಸ್ವರ್ಗಕ್ಕೆ ನಡೆದ ಬೇಟಿಗಾರ (೧೧೮) ೫೮
ಅರ್ಜುನನಿಂದ ಯುಧಿಷ್ಠಿರನ ನಿಂದೆ; ಭೀಮನ ಪ್ರಶಂಸೆ (೧೨೦) ೬೦
ಆತ್ಮಹತ್ಯೆ ಮಹಾಪಾಪ (೧೨೩) ೬೧
ಗುರುನಿಂದೆಯೇ ಗುರುಹತ್ಯೆ - ಆತ್ಮಪ್ರಶಂಸೆಯೇ ಆತ್ಮಹತ್ಯೆ (೧೨೪) ೬೨
ಅರ್ಜುನನ ಅಹಂಕಾರ ಖಂಡನೆ (೧೨೭) ೬೩
ಮತ್ತೆ ಒಂದಾದ ಅರ್ಜುನ ಯುಧಿಷ್ಠಿರರು (೧೨೮) ೬೪
ಶ್ರೀಕೃಷ್ಣನಿಂದ ಬದುಕಿದ ಅರ್ಜುನ ಧರ್ಮರಾಜರು (೧೨೯) ೬೪
ಅರ್ಜುನ ಯುಧಿಷ್ಠಿರರು ಮಾಡಿದ ಕೃಷ್ಣಸ್ತುತಿ (೧೩೦) ೬೫
ಕರ್ಣವಧೆಗಾಗಿ ಅರ್ಜುನನ ಪಯಣ (೧೩೧) ೬೭
ಕೃಷ್ಣನಿಂದ ಅರ್ಜುನನ ತೇಜೋವರ್ಧನೆ (೧೩೨) ೬೭
ಭೀಮನಿಂದ ಶತ್ರುನಾಶ (೧೩೩) ೬೮
ಭೀಮನಿಂದ ಶಕುನಿಯ ಪರಾಭವ (೧೩೪) ೬೯
ಭೀಮ ಶಕುನಿಯನ್ನು ಕೊಲ್ಲದಿರಲು ಕಾರಣ (೧೩೫) ೬೯
ಭೀಮನಿಂದ ಹತ್ತು ಜನ ಕೌರವರ ಪಲಾಯನ (೧೩೬) ೭೦
ಭೀಮ ದುಃಶಾಸನರ ಯುದ್ಧ (೧೩೭) ೭೧
ಭೀಮನಿಂದ ನೆಲಕಚ್ಚಿದ ದುಃಶಾಸನ (೧೩೮) ೭೧
ದುಃಶಾಸನನ ಎದೆಬಗೆದ ಭೀಮ (೧೩೯) ೭೨

ರಕ್ತಪಾನದ ನಾಟಕ (೧೪೦) ೭೨
ಭೀಮ ಕಂಡ ಮನ್ಯುಸೂಕ್ತ (೧೪೨) ೭೪
ಭೀಮನಿಂದ ದುರ್ಯೋಧನಾದಿಗಳ ಭರ್ತ್ಸನೆ (೧೪೪) ೭೭
ಭೀಮನಿಂದ ಹುಲಿಕುಣಿತ (೧೪೬) ೭೯
ಭೀಮನ ರುದ್ರನರ್ತನಕ್ಕೆ ಕರ್ಣಾದಿಗಳ ಭಯ (೧೪೮) ೮೦
ಕರ್ಣನ ದುರವಸ್ಥೆ (೧೪೯) ೮೦
ದುಃಶಾಸನನ ಮರಣ (೧೫೧) ೮೨
ಶೂನ್ಯವಾದ ರಣರಂಗ (೧೫೨) ೮೨
ಭೀಮನಿಂದ ಇಪ್ಪತ್ತು ಕೌರವರ ವಧೆ (೧೫೪) ೮೩
ನಕುಲ ವೃಷಸೇನರ ಯುದ್ಧ (೧೫೬) ೮೪
ಅರ್ಜುನನಿಂದ ವೃಷಸೇನನ ವಧೆ (೧೫೮) ೮೫
ಕರ್ಣಾರ್ಜುನರ ಯುದ್ಧ (೧೫೯) ೮೫
ಯುದ್ಧನೋಡಲು ಗಗನದಲ್ಲಿ ಸುರಾಸುರರ ಸಮೂಹ (೧೬೦) ೮೬
ಅರ್ಜುನನ ಗೆಲುವಿಗೆ ಬ್ರಹ್ಮನಲ್ಲಿ ಇಂದ್ರನ ಪ್ರಾರ್ಥನೆ (೧೬೩) ೮೭
ಕರ್ಣಾರ್ಜುನರ ಯುದ್ಧ (೧೬೫) ೮೮
ಭೀಮನಿಂದ ಅರ್ಜುನನಿಗೆ ಸ್ಫೂರ್ತಿ (೧೬೭) ೮೯
ಅರ್ಜುನನ ಅದ್ಭುತ ಪರಾಕ್ರಮ (೧೬೮) ೯೦
ಅಶ್ವತ್ಥಾಮನಿಂದ ದುರ್ಯೋಧನನಿಗೆ ನೀತಿಬೋಧೆ (೧೬೯) ೯೦
ಪಾಂಡವರು ಶಾಂತಿಪ್ರಿಯರು (೧೭೧) ೯೧
ದುರ್ಯೋಧನನ ನಿರಾಕರಣೆ (೧೭೩) ೯೩
ಕರ್ಣಾರ್ಜುನರ ಮಹಾಯುದ್ಧ (೧೭೪) ೯೩
ಗುರಿತಪ್ಪಿದ ಸರ್ಪಾಸ್ತ್ರ (೧೭೬) ೯೪
ಶ್ರೀಕೃಷ್ಣನಿಂದ ಅರ್ಜುನನ ರಕ್ಷಣೆ (೧೭೭) ೯೫
ಕರ್ಣನಿಗೆ ಅಸ್ತ್ರಗಳ ವಿಸ್ಮೃತಿ (೧೮೧) ೯೮
ಭೂಮಿ ನುಂಗಿದ ರಥಚಕ್ರ (೧೮೨) ೯೯
ಅರ್ಜುನನಿಂದ ಕರ್ಣವಧೆ (೧೮೩) ೧೦೩
ಪಾಂಡವರ ಹರ್ಷ (೧೮೬) ೧೦೭

ಅಧ್ಯಾಯ - ೨೮ (ಪಾಂಡವರಾಜ್ಯಪ್ರಾಪ್ತಿಃ) ೧೦೮-೨೩೦

(ಶಲ್ಯಸೇನಾಪತ್ಯ, ಶಲ್ಯವಧೆ, ಶಕುನಿ ಮೊದಲಾದವರ ವಧೆ, ದುರ್ಯೋಧನನ ಪಲಾಯನ, ಭೀಮನಿಂದ ದುರ್ಯೋಧನನ ಊರುಭಂಗ, ಅಶ್ವತ್ಥಾಮರಿಂದ ಉಪಪಾಂಡವರ ವಧೆ, ಭೀಮನಿಂದ ಅಶ್ವತ್ಥಾಮಪರಾಭವ, ಬ್ರಹ್ಮಶಿರೋಸ್ತ್ರ-ಪ್ರಸಂಗ, ಕೃಷ್ಣನಿಂದ ಪರೀಕ್ಷಿದ್ರಾಜನ ರಕ್ಷಣೆ, ಪಾಂಡವರ ಪುರಪ್ರವೇಶ)

ಹದಿನೆಂಟನೆಯ ದಿನದ ಯುದ್ಧ - ಸೇನಾಪತಿಯಾಗಿ ಶಲ್ಯ (೧) ೧೦೮

ಯುದ್ಧಾರಂಭ (೨) ೧೦೮

ಭೀಮಾದಿ ಕ್ರಮದಲ್ಲಿ ಪಾಂಡವರು (೩) ೧೦೮

ಅಶ್ವತ್ಥಾಮಾದಿ ಕ್ರಮದಲ್ಲಿ ಕೌರವರು (೫) ೧೦೯

ಭೀಮಾಶ್ವತ್ಥಾಮರ ಘೋರ ಯುದ್ಧ (೬) ೧೧೦

ಅಶ್ವತ್ಥಾಮರ ಪರಾಜಯ (೭) ೧೧೦

ಶಲ್ಯ ಅರ್ಜುನರ ಯುದ್ಧ (೮) ೧೧೦

ಭೀಮನಿಂದ ಅಶ್ವತ್ಥಾಮಾದಿಗಳ ಪುನಃ ಪರಾಭವ (೯) ೧೧೦

ಉಳಿದ ಕೌರವರೊಂದಿಗೆ ದ್ರೌಪದೀಪುತ್ರರು ಮೊದಲಾದವರ ಯುದ್ಧ (೧೧) ೧೧೧

ಸಹದೇವ ಶಕುನಿ ಮೊದಲಾದವರ ಯುದ್ಧ (೧೨) ೧೧೧

ಶಲ್ಯಾರ್ಜುನರ ಯುದ್ಧ (೧೪) ೧೧೨

ಶಲ್ಯನಿಂದ ಅರ್ಜುನನ ಮೂರ್ಛೆ (೧೫) ೧೧೨

ಅರ್ಜುನನಿಂದ ಶಲ್ಯ ಧನುರ್ಭಂಗ () ೧೧೨

ಮುಂದುವರೆದ ಶಲ್ಯಾರ್ಜುನರ ಯುದ್ಧ (೧೭) ೧೧೨

ಶಲ್ಯನಿಂದ ಗದಾಪ್ರಯೋಗ (೧೮) ೧೧೩

ಮತ್ತೊಮ್ಮೆ ಅರ್ಜುನನ ಮೂರ್ಛೆ - ಶಲ್ಯನ ಪರಾಭವ (೧೯) ೧೧೩

ಪುನಃ ಅರ್ಜುನನಿಗೆ ಆಘಾತ (೨೦) ೧೧೩

ಅರ್ಜುನನಿಂದ ಶಲ್ಯನ ಪರಾಭವ (೨೧) ೧೧೪

ಯುಧಿಷ್ಠಿರನಿಂದ ಶಲ್ಯನ ಅಶ್ವಗಳ ಸಂಹಾರ (೨೨) ೧೧೪

ಶಲ್ಯನಿಂದ ವಿರಥನಾದ ಯುಧಿಷ್ಠಿರ (೨೩) ೧೧೪

ಶಲ್ಯನಿಂದ ಸಾತ್ಯಕಿ ಮೊದಲಾದವರ ಪರಾಭವ (೨೪) ೧೧೪
ಭೀಮನಿಂದ ಶಲ್ಯನ ಪರಾಜಯ (೨೫) ೧೧೫
ಯುಧಿಷ್ಠಿರನಿಂದ ಶಲ್ಯನ ಮೇಲೆ ಶಕ್ತ್ಯಾಯುಧ ಪ್ರಯೋಗ (೨೮) ೧೧೬
ಯುಧಿಷ್ಠಿರನಿಂದ ಶಲ್ಯನ ವಧೆ (೩೦) ೧೧೭
ಅರ್ಜುನನಿಂದ ಸಂಶಪ್ತಕರವಧೆ (೩೨) ೧೧೭
ಭೀಮನಿಂದ ಉಳಿದ ಕೌರವರವಧೆ (೩೩) ೧೧೮
ಸಹದೇವನಿಂದ ಶಕುನಿ ಉಲೂಕರವಧೆ (೩೪) ೧೧೮
ಅಶ್ವತ್ಥಾಮಾದಿಗಳ ಪಲಾಯನ (೩೫) ೧೧೯
ವ್ಯಾಸರಿಂದ ಸಂಜಯನ ರಕ್ಷಣೆ (೩೬) ೧೧೯
ದುರ್ಯೋಧನನ ಪರಾಕ್ರಮ - ಭೀಮನಿಂದ ದುರ್ಯೋಧನನ ಪರಾಭವ (೩೭) ೧೨೦
ಭೀಮನಿಂದ ದುರ್ಯೋಧನನ ಅಶ್ವದ ಸಂಹಾರ (೪೦) ೧೨೧
ಪರಾಜಯಗೊಂಡ ದುರ್ಯೋಧನ ದ್ವೈಪಾಯನ ಸರೋವರದಲ್ಲಿ (೪೧) ೧೨೧
ಭೀಮಸೇನ ಸಮೋ ನಾಸ್ತಿ (೪೨) ೧೨೩
ಕೌರವ ಮಹಾವೀರ ಅಶ್ವತ್ಥಾಮ (೪೩) ೧೨೪
ದ್ವೈಪಾಯನ ಸರೋವರದಲ್ಲಿ ದುರ್ಯೋಧನನ ಜಲಸ್ತಂಭ (೪೫) ೧೨೪
ಪಾಂಡವರಿಂದ ದುರ್ಯೋಧನನ ಅನ್ವೇಷಣೆ (೪೭) ೧೨೫
ಪಾಂಡವರನ್ನು ಕಂಡು ಅಶ್ವತ್ಥಾಮಾದಿಗಳ ಪಲಾಯನ (೪೮) ೧೨೫
ಯುಧಿಷ್ಠಿರನಿಂದ ದುರ್ಯೋಧನನಿಗೆ ಯುದ್ಧಕ್ಕೆ ಆಹ್ವಾನ (೪೯) ೧೨೬
ದುರ್ಯೋಧನನ ಶಾಠ್ಯದ ಉತ್ತರ (೫೦) ೧೨೭
ಧರ್ಮರಾಜನ ಆಗ್ರಹದ ಆಹ್ವಾನ (೫೧) ೧೨೮
ಮೇಲೆದ್ದು ಬಂದ ದುರ್ಯೋಧನ (೫೪) ೧೨೯
ದುರ್ಯೋಧನನಿಂದ ತನ್ನ ಸ್ಥಿತಿಯ ನಿರೂಪಣೆ (೫೫) ೧೩೦
ಕವಚಾದಿಗಳನ್ನು ನೀಡಲು ಯುಧಿಷ್ಠಿರನ ಆಶ್ವಾಸನೆ (೫೭) ೧೩೧
ಯಾರಾದರೂ ಒಬ್ಬನನ್ನು ಆರಿಸಿಕೋ! (೫೮) ೧೩೧
ದುರ್ಯೋಧನನಿಂದ ಭೀಮನ ಆಯ್ಕೆ (೫೯) ೧೩೨
ದುರ್ಯೋಧನನ ಮೇಲೆ ನುಗ್ಗಿದ ಭೀಮ (೬೦) ೧೩೩

ಶ್ರೀಕೃಷ್ಣ ತಿಳಿಸಿದ ಭೀಮನ ಮಹಿಮೆ (೬೧)	೧೩೩
ಭೀಮನಿಂದ ಊರುಭಂಗ ಪ್ರತಿಜ್ಞೆ (೬೯)	೧೩೮
ಭೀಮ ದುರ್ಯೋಧನರ ಗದಾಯುದ್ಧ (೭೦)	೧೩೮
ಬಲರಾಮನ ಆಗಮನ (೭೧)	೧೩೯
ಮುಂದುವರೆದ ಭೀಮ ದುರ್ಯೋಧನರ ಯುದ್ಧ (೭೨)	೧೪೦
ಭೀಮನಿಂದ ದುರ್ಯೋಧನನ ಊರುಭಂಗ (೭೩)	೧೪೧
ಭೀಮನಿಂದ ದುರ್ಯೋಧನನ ಶಿರೋಮರ್ದನ - ಋಷಭಸೂಕ್ತದರ್ಶನ (೭೬)	೧೪೪
ಬಲರಾಮನಿಗೆ ಅಂಜದ ಬಲಭೀಮ (೭೯)	೧೪೮
ಭೀಮನದು ಅಧರ್ಮವಲ್ಲ (೮೧)	೧೪೯
ದ್ವಾರಕೆಗೆ ನಡೆದ ಬಲರಾಮ (೮೪)	೧೫೧
ಯುಧಿಷ್ಠಿರನ ಧರ್ಮಜಿಜ್ಞಾಸೆ (೮೫)	೧೫೨
ಶ್ರೀಕೃಷ್ಣನಿರೂಪಿಸಿದ ಧರ್ಮಸೂಕ್ಷ್ಮ (೮೬)	೧೫೨
ದುರ್ಯೋಧನ ಮಾಡಿದ ಕೃಷ್ಣನಿಂದೆ (೯೫)	೧೫೬
ದುರ್ಯೋಧನ ಮಹಾಪಾಪಿ ಎಂದು ನಿರೂಪಿಸಿದ ಶ್ರೀಕೃಷ್ಣ (೯೬)	೧೫೬
ದುರ್ಯೋಧನನ ದುರ್ಬುದ್ಧಿ (೧೦೦)	೧೫೮
ದುರ್ಯೋಧನನ ಮೇಲೆ ಪುಷ್ಪವೃಷ್ಟಿ (೧೦೪)	೧೬೦
ಪುಷ್ಪವೃಷ್ಟಿಯಿಂದ ಫಲನಿರ್ಣಯ ಆಗದು (೧೦೫)	೧೬೨
ದುರ್ಯೋಧನನಿಗೆ ತಮಸ್ಸೇ ಗತಿ (೧೦೬)	೧೬೨
ನೀಗದ ಧರ್ಮರಾಜನ ಸಂಶಯ (೧೧೦)	೧೬೪
ಪಾಂಡವರ ಜಯಘೋಷ (೧೧೧)	೧೬೪
ಕೃಷ್ಣ ಯುಯುತ್ಸುಗಳಿಂದ ಧೃತರಾಷ್ಟ್ರ ಗಾಂಧಾರಿಯರ ಸಾಂತ್ವನ (೧೧೨)	೧೬೫
ಕೌರವರ ಶಿಬಿರಕ್ಕೆ ಪಾಂಡವರು (೧೧೪)	೧೬೬
ನರಿ ನಾಯಿಗಳ ಬಾಯಿಗೆ ದುರ್ಯೋಧನ (೧೧೫)	೧೬೮
ಅಶ್ವತ್ಥಾಮಾದಿಗಳ ವನಪ್ರವೇಶ (೧೧೮)	೧೭೧
ಅಶ್ವತ್ಥಾಮ ಕಂಡ ವಧೋಪಾಯ (೧೧೯)	೧೭೧
ಶಿಬಿರದ ದ್ವಾರದಲ್ಲಿ ಕಂಡ ಭೂತಪತಿ (೧೨೨)	೧೭೩

ಶಿವಾಶ್ವತ್ಥಾಮರ ಯುದ್ಧ (೧೨೪) ೧೭೪
ಅಶ್ವತ್ಥಾಮ ಮಾಡಿದ ಮಾನಸಯಜ್ಞ (೧೨೫) ೧೭೪
ಶಿವನಿಂದ ಆಯುಧಪ್ರದಾನ (೧೨೭) ೧೭೬
ಅಶ್ವತ್ಥಾಮನಿಂದ ಶಿಬಿರಪ್ರವೇಶ (೧೩೧) ೧೭೭
ಅಶ್ವತ್ಥಾಮನಿಂದ ಧೃಷ್ಟದ್ಯುಮ್ನನ ಸಂಹಾರ (೧೩೨) ೧೭೮
ಧೃಷ್ಟದ್ಯುಮ್ನ ಕಾಣುತ್ತಿದ್ದ ದುಃಸ್ವಪ್ನ (೧೩೬) ೧೭೦
ಮೂಲರೂಪಕ್ಕೆ ತೆರಳಿದ ಧೃಷ್ಟದ್ಯುಮ್ನ (೧೩೭) ೧೭೧
ಶಿಖಂಡಿ ಮೊದಲಾದವರ ಸಂಹಾರ (೧೩೮) ೧೭೨
ಉಪಪಾಂಡವರ ಸಂಹಾರ - ಶರ್ವತ್ರಾತನಾದ ಭೀಮಪುತ್ರ (೧೩೯) ೧೭೨
ಚೇಕಿತಾನಾದಿಗಳ ಸಂಹಾರ (೧೪೪) ೧೭೪
ಶಿಬಿರದ ದಹನ (೧೪೫) ೧೭೪
ಶಿಬಿರದ ಹೊರಗೆ ಕೃಪ ಕೃತವರ್ಮರಿಂದ ನರಮೇಧ (೧೪೬) ೧೭೫
ಸೂತನು ಉಳಿದ ಬಗೆ (೧೪೭) ೧೭೫
ದ್ರೌಪದಿಯ ಮುಂದೆ ದುರಂತದ ನಿವೇದನೆ (೧೪೮) ೧೭೫
ದುರ್ಯೋಧನನ ಬಳಿಗೆ ಅಶ್ವತ್ಥಾಮ (೧೪೯) ೧೭೬
ದುರ್ಯೋಧನನ ಮರಣ (೧೫೦) ೧೭೭
ಭೀಮನ ಭಯದಿಂದ ಅಶ್ವತ್ಥಾಮನ ಪಲಾಯನ (೧೫೧) ೧೭೯
ಅಶ್ವತ್ಥಾಮನಿಂದ ಬ್ರಹ್ಮಶಿರೋಸ್ತ್ರಪ್ರಯೋಗ (೧೫೨) ೧೭೯
ಬ್ರಹ್ಮಶಿರೋಸ್ತ್ರದ ಮಂತ್ರ ಹಾಗೂ ದೇವತೆ (೧೫೪) ೧೮೦
ಅಶ್ವತ್ಥಾಮ ಮಾಡಿದ್ದ ಆಯುಧಯಾಚನೆ (೧೫೬) ೧೮೦
ಅರ್ಜುನನಿಂದಲೂ ಬ್ರಹ್ಮಶಿರೋಸ್ತ್ರಪ್ರಯೋಗ (೧೫೮) ೧೮೨
ಅಸ್ತ್ರಗಳ ಮಧ್ಯೆ ಪರಬ್ರಹ್ಮ ವೇದವ್ಯಾಸರು (೧೬೧) ೧೮೪
ಅಸ್ತ್ರೋಪಸಂಹಾರಕ್ಕೆ ವ್ಯಾಸರ ಆದೇಶ (೧೬೪) ೧೮೫
ಅರ್ಜುನನಿಂದ ಅಸ್ತ್ರೋಪಸಂಹಾರ (೧೬೬) ೧೮೬
ಅರ್ಜುನನ ಬ್ರಹ್ಮಚರ್ಯ-ಅಶ್ವತ್ಥಾಮರ ಅಬ್ರಹ್ಮಚರ್ಯ (೧೬೭) ೧೮೭
ಭೀಮನಿಗೆ ಶಿರೋಮಣಿಯ ಸಮರ್ಪಣೆ (೧೬೯) ೧೮೯

ಅರ್ಜುನನಿಂದ ಅಶ್ವತ್ಥಾಮರ ಅಸ್ತ್ರದ ಉಪಸಂಹಾರ (೧೭೨) ೨೦೦
ಅಶ್ವತ್ಥಾಮರ ಕೃಷ್ಣವಿರೋಧ (೧೭೩) ೨೦೧
ಪರೀಕ್ಷಿತನನ್ನು ಉಳಿಸಲು ಕೃಷ್ಣನ ಸಂಕಲ್ಪ (೧೭೭) ೨೦೩
ಅಶ್ವತ್ಥಾಮನಿಗೆ ಕೃಷ್ಣನೀಡಿದ ಶಾಪ (೧೭೮) ೨೦೩
ಅಶ್ವತ್ಥಾಮರ ಪ್ರಾರ್ಥನೆ (೧೮೩) ೨೦೬
ಅಶ್ವತ್ಥಾಮ ಕಂಡಿದ್ದ ಸ್ವಪ್ನ (೧೮೪) ೨೦೭
ಅಶ್ವತ್ಥಾಮರ ಭಾವಿಸಾಧನೆ (೧೮೮) ೨೦೮
ಪಾಂಡವಾಚಾರ್ಯನಾಗಿ ಕೃಪ - ದ್ವಾರಕೆಗೆ ಕೃತವರ್ಮ (೧೯೦) ೨೦೯
ಧರ್ಮರಾಜನ ಮುಡಿಯೇರಿದ ಮಣಿ (೧೯೨) ೨೧೦
ಪಾಂಡವರ ಪುರಪ್ರವೇಶ (೧೯೫) ೨೧೨
ಪುಡಿಯಾದ ಭೀಮ ವಿಗ್ರಹ (೧೯೬) ೨೧೨
ಧೃತರಾಷ್ಟ್ರನ ಕಪಟಶೋಕ (೧೯೬) ೨೧೨
ಭೀಮನನ್ನು ಕೊಲ್ಲುವುದು ಸರ್ವಥಾ ಅಶಕ್ಯ (೧೯೮) ೨೧೪
ಶ್ರೀಕೃಷ್ಣನ ಹಿತೋಕ್ತಿ (೧೯೯) ೨೧೫
ಶಾಂತನಾದ ಧೃತರಾಷ್ಟ್ರ (೨೦೦) ೨೧೫
ಕುನಖಿನಾದ ಧರ್ಮರಾಜ (೨೦೨) ೨೧೬
ಭೀಮನಿಂದ ಗಾಂಧಾರಿಯ ಸಾಂತ್ವನ (೨೦೪) ೨೧೭
ಅಧರ್ಮದಿಂದಲೇ ಪಾಪಿಗಳ ವಧೆ (೨೦೮) ೨೧೯
ಭೀಮ ರಕ್ತಪಾನ ಮಾಡಿಲ್ಲ (೨೧೦) ೨೧೯
ಸರ್ವ ಕೌರವರೂ ಅಪರಾಧಿಗಳೇ (೨೧೩) ೨೨೦
ಶಾಂತಳಾದ ಗಾಂಧಾರಿ (೨೧೯) ೨೨೨
ರಣಭೂಮಿಯಲ್ಲಿ ಸ್ತ್ರೀಜನರು (೨೨೦) ೨೨೨
ವೇದವ್ಯಾಸರಿಂದ ಗಾಂಧಾರಿಗೆ ದಿವ್ಯದೃಷ್ಟಿಪ್ರದಾನ (೨೨೨) ೨೨೩
ಶ್ರೀಕೃಷ್ಣನಿಗೆ ಗಾಂಧಾರಿಯ ಶಾಪ (೨೨೩) ೨೨೩
ಶ್ರೀಕೃಷ್ಣನ ಸಂಕಲ್ಪವೇ ಆಗಿದ್ದ ಶಾಪ (೨೨೪) ೨೨೪
ದ್ರೌಪದಿ ಕಂಡ ಕೌರವ ಪತ್ನಿಯರು (೨೨೬) ೨೨೫

ಯುದ್ಧಮೃತರ ಅಂತ್ಯಕ್ರಿಯೆ (೨೨೭) ೨೨೬
ಗಂಗೆಯಲ್ಲಿ ಜಲತರ್ಪಣ (೨೨೯) ೨೨೭
ಧರ್ಮರಾಜ ನೀಡಿದ ಶಾಪ (೨೩೦) ೨೨೭
ಕರ್ಣವಧೆಗಾಗಿ ಯುಧಿಷ್ಠಿರನ ಸಂತಾಪ (೨೩೧) ೨೨೮
ಶ್ರೀಕೃಷ್ಣನಾರದರಿಂದ ಕರ್ಣನ ಗುಣಕಥನ (೨೩೨) ೨೨೮
ರಾಜನಾಗಿ ಯುಧಿಷ್ಠಿರ (೨೩೩) ೨೩೦

ಅಧ್ಯಾಯ - ೨೯ (ಧರ್ಮರಾಜಸಂದೇಹನಿವೃತ್ತಿಕಥನಮ್) **೨೩೧-೨೬೫**

(ಧರ್ಮರಾಜನಿಗೆ ಪಟ್ಟಾಭಿಷೇಕ, ಚಾರ್ವಾಕಸಂಹಾರ, ಧರ್ಮರಾಜನ ವಿಷಾದ, ಭೀಷ್ಮೋಪದೇಶ, ಭಾಗವತಧರ್ಮವಿವೇಕ, ವರ್ಣಾಶ್ರಮಧರ್ಮಗಳು, ಸ್ತ್ರೀಧರ್ಮಗಳು, ತಮಃಸಾಧನಗಳು, ಪುರುಷಾರ್ಥವಿವೇಕ, ಕಾಮದ ಹಿರಿಮೆ)

ಭೀಮ ಯುಧಿಷ್ಠಿರರಿಗೆ ರಾಜ್ಯಾಭಿಷೇಕ (೧) ೨೩೧
ತ್ರಿದಂಡಿಯಾಗಿ ಚಾರ್ವಾಕ (೨) ೨೩೧
ವಿಪ್ರರಿಂದ ಚಾರ್ವಾಕ ಸಂಹಾರ (೩) ೨೩೨
ಕೃಷ್ಣತಿಳಿಸಿದ ಚಾರ್ವಾಕನ ಪೂರ್ವೇತಿಹಾಸ (೪) ೨೩೨
ಧರ್ಮರಾಜನ ಆಳ್ವಿಕೆ (೬) ೨೩೪
ಯುಧಿಷ್ಠಿರನ ವೈರಾಗ್ಯ (೭) ೨೩೪
ಯಾರ ಉಪದೇಶಕ್ಕೂ ಮಣಿಯದ ಯುಧಿಷ್ಠಿರ (೧೦) ೨೩೬
ಭೀಷ್ಮರ ಬಳಿಗೆ ತೆರಳಲು ವ್ಯಾಸ ಕೃಷ್ಣರ ಆದೇಶ (೧೨) ೨೩೬
ಭೀಷ್ಮರ ಬಳಿಗೆ ಧರ್ಮಾದಿಗಳು (೧೩) ೨೩೭
ಭೀಷ್ಮರಿಂದ ಸಕಲ ಧರ್ಮೋಪದೇಶ (೧೪) ೨೩೮
ಭೀಷ್ಮರಿಗೆ ಕೃಷ್ಣನೀಡಿದ ವರ (೧೫) ೨೩೮
ರಾಜನ ಭಾಗವತಧರ್ಮ (೧೭) ೨೪೦
ಭಾಗವತಧರ್ಮಗಳ ಸಂಗ್ರಹ (೧೮) ೨೪೦
ವಿಪ್ರಧರ್ಮ (೨೪) ೨೪೨
ಕ್ಷತ್ರಿಯಾದಿಗಳ ಧರ್ಮ (೨೫) ೨೪೨

ವೈಶ್ಯ ಶೂದ್ರರ ಧರ್ಮ (೨೯) ೨೪೫
ಹರಿಭಕ್ತಿಯೇ ಮುಖ್ಯ ಪೂಜಾರ್ಹತೆ (೩೦) ೨೪೬
ಹರಿಭಕ್ತನಾದ ವರ್ಣಹೀನನೂ ಪೂಜ್ಯ (೩೧) ೨೪೬
ಉಪದೇಶದ ಅರ್ಹತೆ (೩೨) ೨೪೭
ವರ್ಣಾವರನಿಗೆ ಉಪದೇಶದ ಪ್ರಸಕ್ತಿ ಬರದು (೩೩) ೨೪೮
ಸ್ತ್ರೀ ಪುರುಷರ ವಿಶೇಷ ಧರ್ಮಗಳು (೩೪) ೨೪೮
ತಮಃಸಾಧನಗಳು (೩೮) ೨೫೦
ಸಂದೇಹಶೀಲರಿಗೆ ನರಕಾದ್ಯನರ್ಥ (೪೩) ೨೫೩
ಮುಕ್ತಿಯ ಪ್ರಧಾನ ಅರ್ಹತೆ (೪೫) ೨೫೪
ಪುರುಷಾರ್ಥ ತಾರತಮ್ಯ ಜಿಜ್ಞಾಸೆ (೪೬) ೨೫೪
ವಿದುರ-ಅರ್ಜುನರ ವಿಚಾರ (೪೭) ೨೫೫
ಅರ್ಥವೇ ಶ್ರೇಷ್ಠ ಪುರುಷಾರ್ಥ ಎಂದ ಅರ್ಜುನ (೪೮) ೨೫೫
ಕಾಮವೇ ಪ್ರಧಾನ ಪುರುಷಾರ್ಥ ಎಂದ ಭೀಮ (೫೩) ೨೫೭
ಕಾಮ ಶಬ್ದಾರ್ಥದ ವಿವೇಚನೆ (೫೪) ೨೫೮
ಶ್ರೀಹರಿಯೇ ಮುಖ್ಯಕಾಮ್ಯ (೫೬) ೨೫೯
ಕಾಮದಲ್ಲಿ ತಾರತಮ್ಯ (೫೮) ೨೬೧
ಮೋಕ್ಷವೇ ಶ್ರೇಷ್ಠ ಪುರುಷಾರ್ಥ ಎಂದ ಯುಧಿಷ್ಠಿರ (೬೧) ೨೬೩

ಅಧ್ಯಾಯ - ೩೦ (ಪಾಂಡವಾಶ್ವಮೇಧಕಥನಮ್) ೨೬೬-೩೬೪

(ಪಾಂಡವರಾಜ್ಯಭಾರ, ಕಲಿನಿಗ್ರಹ, ಅನುಗೀತಾ, ಉದಂಕವೃತ್ತಾಂತ, ಪರೀಕ್ಷಿತನ ಜನನ, ಅಶ್ವಮೇಧಯಾಗ, ಬಭ್ರುವಾಹನಪ್ರಸಂಗ, ಲಕ್ಷಣಶಾಸ್ತ್ರದ ಹಿರಿಮೆ, ಯಾಗವೈಭವ, ಮುಂಗುಸಿಯ ಪ್ರಸಂಗ)

ವಸುವಾಗಿ ತೆರಳಿದ ಭೀಷ್ಮ - ಅಶ್ವಮೇಧಯಾಗಕ್ಕೆ ವ್ಯಾಸರ ಆದೇಶ (೧) ೨೬೬
ಧರ್ಮರಾಜನ ವಿಚಿತ್ರ ರಾಜ್ಯಭಾರ (೪) ೨೬೮
ಭೀಮಸೇನನ ಅಪೂರ್ವ ಭೋಗವೈಭವ (೭) ೨೭೦
ಭೀಮನಷ್ಟೇ ದ್ರೌಪದೀಪತಿ (೮) ೨೭೧

ಎರಡು ರೂಪದ ಭಾರತೀ (೧೦) ೨೭೩
ದೇವಿ ಎಂಬ ಮತ್ತೊಬ್ಬ ಭೀಮಪತ್ನಿ (೧೧) ೨೭೪
ಭೀಮನ ಇತರ ಇಪ್ಪತ್ತು ಪತ್ನಿಯರು (೧೨) ೨೭೪
ಭೀಮಸೇನನ ಧರ್ಮರಕ್ಷಣ ವೈಖರಿ (೧೩) ೨೭೫
ರಾಮರಾಜ್ಯದಂತಹ ಧರ್ಮರಾಜ್ಯ (೧೫) ೨೭೭
ಕೃತಯುಗಕ್ಕಿಂತ ಮಿಗಿಲಾದ ಕಲಿಯುಗ (೧೭) ೨೭೮
ಅರ್ಜುನನ ಜೀವನ ವೈಖರಿ (೧೮) ೨೮೦
ಸದಾ ಕೃಷ್ಣನಿಂದ ತತ್ತ್ವಶ್ರವಣ ಮಾಡಿದ ಅರ್ಜುನ (೧೯) ೨೮೦
ದುಃಶಾಸನನ ಮನೆಯಲ್ಲಿ ಅರ್ಜುನನ ಸಂಸಾರ (೨೦) ೨೮೧
ನಕುಲ ಸಹದೇವರ ಕಾರ್ಯ (೨೧) ೨೮೨
ಸೇನಾಪತಿಯಾಗಿ ಕೃಪ-ಧೃತರಾಷ್ಟ್ರನ ಸೇವೆಗೆ ಯುಯುತ್ಸು ಮೊದಲಾದವರು(೨೩) ೨೮೨
ಪಾಂಡವಕೀರ್ತಿನಾರಿ (೨೪) ೨೮೩
ಪಾಂಡವರ ರಾಜ್ಯದ ಅಪೂರ್ವತೆ (೨೫) ೨೮೬
ಭಾರತವೆಂಬ ಭಾರತಿ (೨೯) ೨೮೮
ಭೀಮನಿಂದ ಕಲಿ ಬಲಿಗಳ ನಿಗ್ರಹ (೩೧) ೨೮೯
ಭೀಮನ ಬಂಧನದಲ್ಲಿ ಕಲಿ (೩೨) ೨೯೦
ಧರ್ಮರಾಜನ ಪ್ರಶ್ನೆ (೩೩) ೨೯೦
ಕಲಿ ನೀಡಿದ ವಿಚಿತ್ರ ಉತ್ತರ - ಕಲಿ ಧರ್ಮ ಕೆಡಿಸುವ ಪರಿ (೩೪) ೨೯೧
ರಾಜನೇ ಕಾಲಕ್ಕೆ ಕಾರಣ (೩೭) ೨೯೧
ರಾಜರಲ್ಲಿ, ವಿಪ್ರರಲ್ಲಿ ಕಲಿಪ್ರವೇಶ (೩೮) ೨೯೩
ಧರ್ಮರಾಜನಿಂದ ಕಲಿಯ ಬಿಡುಗಡೆ (೪೧) ೨೯೪
ಧರ್ಮರಾಜನಿಗೆ ಕಲಿ ಒಪ್ಪಿಸಬೇಕಾದ ಕರ (೪೨) ೨೯೪
ಕೃಷ್ಣನಿಂದ ಕಲಿಯ ಶಾಸನ (೪೩) ೨೯೫
ಸಮುದ್ರ, ಗುಹೆಗೆ ಕಲಿ (೪೭) ೨೯೬
ಅನುಗೀತಾ ಪ್ರಸಂಗ (೪೮) ೨೯೭
ಅನುಗೀತಾ ಸಾರ (೪೯) ೨೯೮

ಜೀವ ತ್ರೈವಿಧ್ಯ (೫೨) ೨೯೯
ದೈಹಿಕ ಮಾನಸಿಕ ಲಕ್ಷಣಗಳು (೫೫) ೩೦೦
ಸುಭದ್ರೆಯೊಂದಿಗೆ ದ್ವಾರಕೆಗೆ ಕೃಷ್ಣನ ಪ್ರಯಾಣ (೫೭) ೩೦೧
ದುರ್ಯೋಧನನ ವಧೆಯಿಂದಾಗಿ ಕೆರಳಿದ ಉದಂಕ (೫೯) ೩೦೧
ಉದಂಕನಿಗೆ ವಿಶ್ವರೂಪದರ್ಶನ (೬೦) ೩೦೨
ಅಮೃತ ಕೊಡದೆ ವಂಚಿಸಿದ ಇಂದ್ರ (೬೩) ೩೦೪
ಹಾಗೆ ಇಂದ್ರ ವಂಚಿಸಲು ಕಾರಣ (೬೭) ೩೦೬
ಯಾದವರ ಸಭೆಯಲ್ಲಿ ಶ್ರೀಕೃಷ್ಣ (೬೯) ೩೦೭
ಅಭಿಮನ್ಯುವಿಗೆ ವಸುದೇವಾದಿಗಳಿಂದ ಶ್ರಾದ್ಧದಾನಾದಿಗಳು (೭೧) ೩೦೮
ಅಶ್ವಮೇಧಕ್ಕೆ ಯುಧಿಷ್ಠಿರನ ಚಿಂತೆ (೭೨) ೩೦೯
ವೇದವ್ಯಾಸರು ನೀಡಿದ ಅಕ್ಷಯ ಸಂಪತ್ತು (೭೪) ೩೧೦
ಪಾಂಡವರು ಹೊತ್ತುತಂದ ಸಂಪತ್ತು (೮೩) ೩೧೪
ಉದಂಕಮೇಘಗಳು (೮೫) ೩೧೫
ಪರೀಕ್ಷಿದ್ರಾಜ ಬದುಕಿದ (೮೮) ೩೧೭
ಪಾಂಡವರ ಹಸ್ತಿನಾಪುರಪ್ರವೇಶ (೯೦) ೩೧೮
ಅಶ್ವಮೇಧದ ಆರಂಭ (೯೩) ೩೧೯
ಯಜ್ಞಸಾಧನೆಗಳನ್ನು ಪೂರೈಸಿದ ಭೀಮಸೇನ (೯೫) ೩೨೦
ಅಶ್ವಮೇಧದ ಕುದುರೆಯ ಹಿಂದೆ ಅರ್ಜುನ (೯೬) ೩೨೦
ಒಬ್ಬರನ್ನೂ ಕೊಲ್ಲದ ಅರ್ಜುನ (೯೮) ೩೨೧
ಅರ್ಜುನ ಬಭ್ರುವಾಹನರ ಸಮಾಗಮ (೯೯) ೩೨೧
ಅರ್ಜುನನೊಂದಿಗೆ ಯುದ್ಧಮಾಡಲು ಉಲೂಪಿಯ ಪ್ರಚೋದನೆ (೧೦೧) ೩೨೩
ಮಗನ ಬಾಣಕ್ಕೆ ಮೂರ್ಛಿತನಾದ ಅರ್ಜುನ (೧೦೩) ೩೨೪
ಚಿತ್ರಾಂಗದೆಯ ಪ್ರಾಯೋಪವೇಶ (೧೦೫) ೩೨೫
ಚಿತ್ರಾಂಗದೆ ಮಾಡಿದ ಉಲೂಪಿಯ ಧಿಕ್ಕಾರ (೧೦೬) ೩೨೬
ಪ್ರಜ್ಞೆ ಮರಳಿದ ಅರ್ಜುನ (೧೦೯) ೩೨೭
ಅರ್ಜುನ ಪರಾಭವದ ದೈವಿಕ ಹಿನ್ನೆಲೆ (೧೧೦) ೩೨೭

ಪ್ರಸನ್ನನಾದ ಅರ್ಜುನ (೧೧೪) ೩೩೦
ದ್ವಾರಕೆಯಲ್ಲಿ ಅರ್ಜುನ (೧೧೫) ೩೩೦
ವಸುದೇವ ಕೊಡಿಸಿದ ಅಶ್ವಮೇಧದ ಕುದುರೆ (೧೧೬) ೩೩೦
ಹಸ್ತಿನಾಪುರಕ್ಕೆ ಮರಳಿದ ಅರ್ಜುನ (೧೧೮) ೩೩೧
ಯುಧಿಷ್ಠಿರನ ಸಾಮುದ್ರಿಕ ಜಿಜ್ಞಾಸೆ (೧೧೯) ೩೩೧
ಅರ್ಜುನನಲ್ಲಿದ್ದ ದುರ್ಲಕ್ಷಣಗಳು (೧೨೧) ೩೩೨
ಲಕ್ಷಣ ಶಾಸ್ತ್ರಕ್ಕೆ ವಿಶೇಷಾಧಿಕಾರಿಗಳು (೧೨೨) ೩೩೪
ಅರ್ಜುನನ ಇತರ ದುರ್ಲಕ್ಷಣಗಳು (೧೨೫) ೩೩೫
ದುರ್ಲಕ್ಷಣಗಳ ಫಲ (೧೨೬) ೩೩೫
ಪರಶುಕ್ಲತ್ರ್ಯರಿಗೆ ಸರ್ವಥಾ ದುಃಖವಿಲ್ಲ (೧೨೭) ೩೩೬
ಪಾಂಡವರ ಅಪೂರ್ವ ಅಶ್ವಮೇಧ (೧೩೧) ೩೩೭
ಪಾಂಡವರ ಯಜ್ಞದ ಅಪೂರ್ವತೆ (೧೩೩) ೩೩೮
ಯಾಗಸಭೆಯಲ್ಲಿ ನಡೆದ ವಾದಕಥೆಗಳು (೧೩೫) ೩೩೯
ದೇವತೆಗಳೂ ಕೊಂಡಾಡಿದ ಅಶ್ವಮೇಧ (೧೩೬) ೩೪೦
ಅಶ್ವಮೇಧದ ವೈಭವ (೧೩೮) ೩೪೧
ಹದಿನೈದು ವರ್ಷಗಳ ಯಜ್ಞ (೧೪೩) ೩೪೪
ಪಾಂಡವರು ಮಾಡಿದ ಸರ್ವಸಮರ್ಪಣೆ (೧೪೪) ೩೪೫
ಬಹುಸುವರ್ಣಕವಾದ ಅಶ್ವಮೇಧ (೧೫೪) ೩೫೨
ದೈತ್ಯ ಮುಂಗುಸಿಯ ಕಥೆ (೧೫೫) ೩೫೩
ಯಮನಿಗೆ ಆತಿಥ್ಯ ನೀಡಿದ ವಿಪ್ರಕುಟುಂಬ (೧೫೬) ೩೫೩
ಅತಿಥಿಯ ಪಾದೋದಕದ ಮಹಿಮೆ - ತಮಸ್ಸಿಗೆ ತೆರಳಿದ ಮುಂಗುಸಿ (೧೫೯) ೩೫೪
ದೈತ್ಯ ಮುಂಗುಸಿಯ ಹಿನ್ನೆಲೆ (೧೬೩) ೩೫೬
ಅರ್ಹತೆಯಿಂದಲೇ ಮುಖ್ಯಫಲ (೧೬೫) ೩೫೮
ಪಾಂಡವರ ಯಜ್ಞದ ಪ್ರಶಂಸೆ (೧೬೭) ೩೫೯
ವೈಷ್ಣವಕೃತವಾದದ್ದು ಅನಂತ (೧೬೯) ೩೬೦
ವೈಷ್ಣವತ್ವದ ತಾರತಮ್ಯ (೧೭೨) ೩೬೨
ಯುಧಿಷ್ಠಿರನಿಗೆ ಕೃಷ್ಣ ತಿಳಿಸಿದ ವೈಷ್ಣವಧರ್ಮಗಳು (೧೭೪) ೩೬೩

ಅಧ್ಯಾಯ - ೩೧ **೩೬೫-೪೧೩**

(ಶ್ರೀಕೃಷ್ಣಾವತಾರಚರಿತೇ ಶ್ರೀಕೃಷ್ಣಸನ್ನಿಧೌ ಪಾಂಡವರಾಜ್ಯಪಾಲನಮ್)

(ಯುಧಿಷ್ಠಿರನಿಗೆ ಭೀಮೋಪದೇಶ, ಧೃತರಾಷ್ಟ್ರನ ವಿರಕ್ತಿ, ವನಗಮನ, ವಿದುರನ ದೇಹತ್ಯಾಗ, ವ್ಯಾಸರ ಅನನ್ಯಹಿರಿಮೆ, ಧೃತರಾಷ್ಟ್ರಾದಿಗಳ ನಿರ್ಯಾಣ)

ಧರ್ಮಕಾರ್ಯಕ್ಕೆ ನಾಳೆಯೆಂದ ಧರ್ಮರಾಜ (೧) ೩೬೫
ಭೀಮನಿಂದ ಅಭೀಷ್ಟಸಿದ್ಧಿ (೨) ೩೬೫
ಭೀಮನಿಂದ ನಂದಿಘೋಷ (೩) ೩೬೮
ನಂದಿಘೋಷಕ್ಕೆ ಕಾರಣ (೪) ೩೬೯
ಧರ್ಮಪರನಾದ ಧರ್ಮರಾಜ (೫) ೩೬೯
ಧೃತರಾಷ್ಟ್ರನ ಬಗ್ಗೆ ಅನುಕಂಪ (೬) ೩೭೦
ಭೀಮನು ಧೃತರಾಷ್ಟ್ರನಿಗೆ ವೈರಾಗ್ಯ ಹುಟ್ಟಿಸಿದ ವೈಖರಿ (೭) ೩೭೧
ಇತರರಿಂದ ಧೃತರಾಷ್ಟ್ರನ ಸೇವೆ (೯) ೩೭೩
ಭೀಮಸೇನ ಮಾಡಿದ ಅಪೂರ್ವಕಾರ್ಯ (೧೧) ೩೭೫
ವಿದುರನಿಂದ ಭೀಮನ ಕಾರ್ಯದ ವಿಶ್ಲೇಷಣೆ (೧೪) ೩೭೬
ವಿದುರ ಬೋಧಿಸಿದ ವೈರಾಗ್ಯ (೧೫) ೩೭೭
ವಿದುರ ಮಾಡಿದ ಭೀಮನ ಪ್ರಶಂಸೆ (೧೬) ೩೭೮
ತಪಸ್ಸು ಮಾಡಲು ಸಂದೇಶ (೧೮) ೩೭೯
ಧೃತರಾಷ್ಟ್ರ ಕೈಗೊಂಡ ಉಪವಾಸ ವ್ರತ (೧೯) ೩೭೯
ಭೋಜನ ಸ್ವೀಕರಿಸಲು ಯುಧಿಷ್ಠಿರನ ಕೋರಿಕೆ (೨೦) ೩೮೦
ಅನುಜ್ಞೆ ಪಡೆಯಲು ಧೃತರಾಷ್ಟ್ರನ ಹಟ (೨೧) ೩೮೦
ಧರ್ಮರಾಜನ ಅಮೃತಸ್ಪರ್ಶ (೨೨) ೩೮೧
ತಪಸ್ಸಿಗೆ ತಾನೇ ತೆರಳಲು ಧರ್ಮರಾಜನ ನಿಶ್ಚಯ (೨೩) ೩೮೧
ತಪಸ್ಸಿಗೆ ತೆರಳುವ ಧೃತರಾಷ್ಟ್ರನ ದೃಢ ಸಂಕಲ್ಪ (೨೪) ೩೮೨
ವ್ಯಾಸಾಗಮನ (೨೫) ೩೮೩
ಧೃತರಾಷ್ಟ್ರನನ್ನು ಬೀಳ್ಕೊಡಲು ಧರ್ಮರಾಜನಿಗೆ ವ್ಯಾಸರ ಆದೇಶ (೨೬) ೩೮೩

ಧರ್ಮರಾಜನಿಗೆ ಧೃತರಾಷ್ಟ್ರನ ಧರ್ಮೋಪದೇಶ (೨೮) ೩೮೪
ಧೃತರಾಷ್ಟ್ರನಿಂದಲೂ ಧರ್ಮ ಕೇಳಿದ ಧರ್ಮರಾಜನ ವಿನಯ (೨೯) ೩೮೪
ಶ್ರಾದ್ಧಕ್ಕೆಂದು ಧೃತರಾಷ್ಟ್ರ ಮಾಡಿದ ಧನಯಾಚನೆ -
ಅದನ್ನು ನೀಡಲು ನಿರಾಕರಿಸಿದ ಭೀಮನ ಧರ್ಮದೀಕ್ಷೆ (೩೦) ೩೮೪
ದುರ್ಯೋಧನಾದಿಗಳು ಹಾಳಾಗಲಿ (೩೩) ೩೮೬
ಕರ್ಣನಿಗೆ ಶ್ರಾದ್ಧ ಮಾಡುವ ಅಧಿಕಾರ (೩೪) ೩೮೭
ತಮ್ಮ ಪಾಲಿನ ಹಣ ನೀಡಲು ಭೀಮನಿಗೆ ಧರ್ಮಜನ ಆದೇಶ (೩೫) ೩೮೭
ಧರ್ಮರಾಜನ ನಿರ್ಣಯಕ್ಕೆ ಅರ್ಜುನನ ಸಹಮತ (೩೮) ೩೮೯
ವಿದುರ ತಿಳಿಸಿದ ಭೀಮಧರ್ಮದ ಮರ್ಮ (೩೯) ೩೮೯
ಧರ್ಮಾರ್ಜುನರೂ ಧರ್ಮಿಷ್ಠರೇ (೪೧) ೩೯೦
ಧೃತರಾಷ್ಟ್ರ ಮಾಡಿದ ದುರ್ಯೋಧನಾದಿಗಳ ಶ್ರಾದ್ಧ (೪೨) ೩೯೦
ಮಕ್ಕಳ ತಪ್ಪಿಗೆ ಪ್ರಜೆಗಳ ಕ್ಷಮೆ ಬೇಡಿದ ಧೃತರಾಷ್ಟ್ರ (೪೩) ೩೯೧
ದುರ್ಯೋಧನಾದಿಗಳು ದುಷ್ಟರು ಎಂದ ಧೃತರಾಷ್ಟ್ರ (೪೭) ೩೯೩
ವನಗಮನಕ್ಕೆ ಅನುಮತಿ ನೀಡಲು ಧೃತರಾಷ್ಟ್ರನ ಪ್ರಾರ್ಥನೆ (೪೯) ೩೯೩
ಪಾಂಡವರನ್ನು ಅನುಸರಿಸಲು ಪ್ರಜೆಗಳಲ್ಲಿ ಕೋರಿಕೆ (೫೦) ೩೯೪
ಧೃತರಾಷ್ಟ್ರನನ್ನು ಹಿಂಬಾಲಿಸಿದ ಸಂಜಯಾದಿಗಳು (೫೩) ೩೯೫
ವನಕ್ಕೆ ನಡೆದ ಕುಂತಿ (೫೪) ೩೯೬
ಕುರುಕ್ಷೇತ್ರ ತಲುಪಿದ ಧೃತರಾಷ್ಟ್ರಾದಿಗಳು (೫೫) ೩೯೭
ಮೂರು ವರ್ಷಗಳ ಬಳಿಕ ಸದ್ಗತಿ ಎಂದ ನಾರದರು (೫೬) ೩೯೭
ಧೃತರಾಷ್ಟ್ರಾದಿಗಳನ್ನು ಕಾಣಲು ವ್ಯಾಸಾಶ್ರಮಕ್ಕೆ ಪಾಂಡವರು (೫೭) ೩೯೮
ಧರ್ಮರಾಜನಲ್ಲಿ ವಿದುರನ ಐಕ್ಯ (೫೮) ೩೯೮
ವ್ಯಾಸಾಗಮನ (೫೯) ೪೦೦
ಬಯಸಿದ್ದನ್ನು ಬೇಡಲು ವ್ಯಾಸರ ಆದೇಶ (೬೦) ೪೦೦
ಧೃತರಾಷ್ಟ್ರ ಗಾಂಧಾರಿಯರ ವಿಚಿತ್ರ ಬೇಡಿಕೆ (೬೧) ೪೦೨
ಮತ್ತೆ ಬದುಕಿದ ಮಡಿದವರು (೬೨) ೪೦೩
ಪತಿಗಳೊಂದಿಗೆ ತೆರಳಿದ ಸ್ತ್ರೀಸಂಕುಲ (೬೩) ೪೦೫

ಜನಮೇಜಯ ಕಂಡ ಪರೀಕ್ಷಿತ (೬೪) ೪೦೬
ಮರಳಿ ಹಸ್ತಿನಾಪುರಕ್ಕೆ ಪಾಂಡವರು (೬೬) ೪೦೮
ದಾವಾಗ್ನಿಯಲ್ಲಿ ಧೃತರಾಷ್ಟ್ರಾದಿಗಳ ನಿರ್ಯಾಣ (೬೭) ೪೦೮
ಪಾಂಡವರಿಂದ ಪಿತೃಕಾರ್ಯ (೬೮) ೪೧೦
ವ್ಯಾಸರಿಂದ ಸಂಜಯನಿಗೆ ಸದ್ಗತಿ (೭೦) ೪೧೨
ಪಾಂಡವರ ರಾಜ್ಯಭಾರ (೭೧) ೪೧೩

ಅಧ್ಯಾಯ - ೩೨ (ಶ್ರೀಮನ್ನಾರಾಯಣಾವತಾರಚರಿತಮ್) ೪೧೪-೪೩೮

(ಕುರುಕ್ಷೇತ್ರದಲ್ಲಿ ಶ್ರೀಕೃಷ್ಣ ಮಾಡಿದ ದ್ವಾದಶಾಬ್ದಸತ್ರ, ಯಾದವರ ನಿರ್ಯಾಣ, ಶ್ರೀಕೃಷ್ಣಪರಂಧಾಮಗಮನ, ಪಾಂಡವರ ಮಹಾಪ್ರಸ್ಥಾನ, ಯುಧಿಷ್ಠಿರನ ಸ್ವರ್ಗಾರೋಹಣ, ದೇವದಾನವರ ಮೂಲರೂಪಪ್ರಾಪ್ತಿ, ಬುದ್ಧಾವತಾರ, ಮಧ್ವಾವತಾರ, ದುರ್ಗಾವತಾರ, ಕಲ್ಕ್ಯವತಾರ, ಗ್ರಂಥಪರಿಸಮಾಪ್ತಿ)

ಕುರುಕ್ಷೇತ್ರದಲ್ಲಿ ಕೃಷ್ಣ ಮಾಡಿದ ಸತ್ರಯಾಗ (೧) ೪೧೪
ದೇವತೆಗಳು ಮುನಿಗಳು ಮಾಡಿದ ಶ್ರೀಕೃಷ್ಣಸೇವೆ (೨) ೪೧೫
ಜಗತ್ತಿಗೇ ಮುದ ನೀಡಿದ ಯಾಗ (೩) ೪೧೫
ಜಿಜ್ಞಾಸುಗಳಿಗೆ ತತ್ತ್ವನಿರ್ಣಯ (೪) ೪೧೫
ಸಕಲ ಪುರುಷಾರ್ಥಗಳ ಪ್ರಾಪ್ತಿ (೫) ೪೧೬
ವೈಕುಂಠದ ವಾತಾವರಣ (೬) ೪೧೬
ಸತ್ರಯಾಗದ ಪರಿಸಮಾಪ್ತಿ (೭) ೪೧೭
ಯಾದವರಿಗೆ ವಿಪ್ರಶಾಪ - ಉದ್ಧವನಿಗೆ ತರ್ತ್ವೋಪದೇಶ (೮) ೪೧೮
ಕೃತಯುಗವನ್ನು ಮೀರಿಸಿದ ಕಲಿಯುಗ (೧೦) ೪೨೦
ಬ್ರಹ್ಮಾದಿಗಳಿಂದ ಅವತಾರ ಪರಿಸಮಾಪ್ತಿಗೆ ಪ್ರಾರ್ಥನೆ (೧೨) ೪೨೧
ಯದುಕುಲದ ಉಪಸಂಹಾರದ ಹಿನ್ನೆಲೆ (೧೪) ೪೨೨
ಸ್ವಗೃಹದಲ್ಲಿ ಮರಣ ಪುಣ್ಯಕರವಲ್ಲ (೧೫) ೪೨೩
ದ್ವಾರಕೆಯಿಂದ ಪ್ರಭಾಸಕ್ಕೆ ಯಾದವರು (೧೬) ೪೨೩
ಯಾದವರ ವಿನಾಶ - ಬಲರಾಮನ ದೇಹತ್ಯಾಗ (೧೭) ೪೨೪

ಪಾಂಡವರಿಗೆ ದಾರುಕನ ಮೂಲಕ ಸಂದೇಶ (೧೮)	೪೨೬
ಜರಾ ಬೇಡನಿಂದ ಶರಪ್ರಯೋಗ (೧೯)	೪೨೬
ಬೇಡನಿಗೆ ಸದ್ಗತಿ ನೀಡಿದ ಕೃಷ್ಣ (೨೦)	೪೨೭
ಬೇಡನಾಗಿ ಬಂದಿದ್ದ ಭೃಗು (೨೨)	೪೨೮
ಶ್ರೀಕೃಷ್ಣನ ಪರಂಧಾಮಗಮನ ವೈಭವ (೨೪)	೪೩೧
ಭೂಲೋಕದಲ್ಲಿ ಕೃಷ್ಣರೂಪ - ಸೂರ್ಯಮಂಡಲದಲ್ಲಿ ಮತ್ತೊಂದು ರೂಪ (೨೫)	೪೩೧
ಬ್ರಹ್ಮಲೋಕದಲ್ಲಿ ನಾಲ್ಕನೆಯ ರೂಪ (೨೬)	೪೩೩
ಶ್ರೀಕೃಷ್ಣನೊಂದಿಗೆ ಬ್ರಹ್ಮನ ಏಕಾಂತ ಸಂಭಾಷಣೆ (೨೮)	೪೩೪
ಮೂಲರೂಪದೊಂದಿಗೆ ಶ್ರೀಕೃಷ್ಣನ ಐಕ್ಯ (೨೯)	೪೩೪
ತಮ್ಮ ಲೋಕಗಳಿಗೆ ಮರಳಿದ ಬ್ರಹ್ಮಾದಿಗಳು (೩೦)	೪೩೫
ಶ್ರೀಕೃಷ್ಣನ ದೇಹತ್ಯಾಗದ ನಾಟಕ (೩೧)	೪೩೫
ಬಲರಾಮಾದಿಗಳಿಗೆ ಅರ್ಜುನನಿಂದ ಅಂತ್ಯಕಾರ್ಯ (೩೪)	೪೩೭
ರುಕ್ಮಿಣಿ ಸತ್ಯಭಾಮೆಯರು ಅದೃಶ್ಯರಾದರು (೩೫)	೪೩೮
ಅವರಿಬ್ಬರದು ಅಪ್ರಾಕೃತ ಶರೀರ (೩೬)	೪೩೮
ಇತರ ಮಹಾಮಹಿಷಿಯರ ದೇಹತ್ಯಾಗ (೩೭)	೪೩೯
ರೇವತಿ ಮೊದಲಾದವರ ದೇಹತ್ಯಾಗ (೩೮)	೪೩೯
ವಸುದೇವನ ದೇಹತ್ಯಾಗ (೩೯)	೪೪೦
ಅರ್ಜುನನಿಂದ ವಸುದೇವಾದಿಗಳಿಗೆ ಅಂತ್ಯಕ್ರಿಯೆ (೪೦)	೪೪೦
ಸಮುದ್ರದಲ್ಲಿ ಮುಳುಗಿದ ದ್ವಾರಕೆ (೪೧)	೪೪೦
ಅರ್ಜುನನ ಹೀನಾಯ ಸೋಲು (೪೨)	೪೪೧
ಮ್ಲೇಚ್ಛರ ವಶರಾದ ಕೃಷ್ಣಪತ್ನಿಯರು (೪೩)	೪೪೧
ಅಸ್ತ್ರಮರೆತ ಅಸ್ತ್ರಜ್ಞಚೂಡಾಮಣಿ (೪೫)	೪೪೨
ಕುರುಕ್ಷೇತ್ರದಲ್ಲಿ ಶ್ರೀವ್ಯಾಸಸಂದರ್ಶನ (೪೬)	೪೪೩
ವ್ಯಾಸರಿಂದ ಅರ್ಜುನನ ಸಾಂತ್ವನ (೪೭)	೪೪೪
ಸದ್ಗತಿಗೆ ತೆರಳಿದ ಕೃಷ್ಣಪತ್ನಿಯರು (೪೮)	೪೪೪
ಅರ್ಜುನ ಮಾಡಿದ ರಾಜ್ಯವ್ಯವಸ್ಥೆ (೪೯)	೪೪೫

ಕೃಷ್ಣನ ಮರಿಮೊಮ್ಮಗನಿಗೆ ರಾಜ್ಯಾಭಿಷೇಕ (೫೦) ೪೪೬
ಪರೀಕ್ಷಿದ್ರಾಜನಿಗೆ ಪಟ್ಟಾಭಿಷೇಕ (೫೧) ೪೪೬
ಪರೀಕ್ಷಿತನಿಗೆ ರಾಜ್ಯಾಭಿಷೇಕ (೫೨) ೪೪೭
ಮ್ಲೇಚ್ಛರ ಶಿಕ್ಷಣಕ್ಕೆ ಪರೀಕ್ಷಿದ್ರಾಜನಿಗೆ ಆದೇಶ (೫೩) ೪೪೭
ಪಾಂಡವರ ಮಹಾಪ್ರಸ್ಥಾನಕ್ಕೆ ಕಾರಣ (೫೪) ೪೪೮
ದ್ರೌಪದಿಯಲ್ಲಿ ಐಕ್ಯಳಾದ ಕಾಳೀ (೫೬) ೪೪೯
ಹಸ್ತಿನಾಪುರದಲ್ಲೇ ಉಳಿದ ಸುಭದ್ರೆ ಮೊದಲಾದವರು (೫೭) ೪೪೯
ಪಾಂಡವರ ಮಹಾಪ್ರಸ್ಥಾನ (೫೮) ೪೪೯
ಸಮುದ್ರದಲ್ಲಿ ಗಾಂಡೀವ (೫೯) ೪೫೦
ಗಂಧಮಾದನದಲ್ಲಿ ಪಾಂಡವರು (೬೦) ೪೫೧
ಭೀಮಾದಿಗಳ ದೇಹಪಾತ (೬೨) ೪೫೨
ಯುಧಿಷ್ಠಿರ ಹೇಳಿದ ಅರ್ಜುನಾದಿಗಳ ದೋಷಗಳು (೬೪) ೪೫೪
ಭೀಮಾದಿಗಳದ್ದು ಇಚ್ಛಾಮರಣ (೬೫) ೪೫೪
ದ್ರೌಪದಿ ನಿರ್ದೋಷಳು (೬೮) ೪೫೬
ಭೀಮನೂ ನಿರ್ದೋಷ (೬೯) ೪೫೭
ಭೀಮನದು ಅಹಂಕಾರವಲ್ಲ (೭೦) ೪೫೮
ಇತರರ ದೋಷವು ದೇಹತ್ಯಾಗಕ್ಕೆ ಕಾರಣವಲ್ಲ (೭೧) ೪೫೯
ಯುಧಿಷ್ಠಿರನಿಗೂ ದೇಹತ್ಯಾಗ ಅನಿವಾರ್ಯ (೭೩) ೪೬೦
ಋಜುಗಳ ಹಿರಿಮೆ (೭೪) ೪೬೧
ಕೃಷ್ಣ ಮಾಡಿದ ಭೀಮ ಪ್ರಶಂಸೆ (೭೫) ೪೬೧
ಪಾಂಡವರ ದೇಹಪಾತದ ಕ್ರಮ (೭೮) ೪೬೨
ಧರ್ಮಜನ ಮುಂದೆ ದೇವರಥ (೮೦) ೪೬೩
ನಾಯಿಯ ರೂಪದಲ್ಲಿ ಯಮಧರ್ಮ (೮೧) ೪೬೪
ಗಗನ ಮಾರ್ಗದಲ್ಲಿ ಯುಧಿಷ್ಠಿರ (೮೪) ೪೬೫
ಇಂದ್ರಲೋಕದಲ್ಲಿ ದುರ್ಯೋಧನ (೮೫) ೪೬೬
ದುರ್ಯೋಧನನ ಬಗ್ಗೆ ಕಿಡಿ ಕಾರಿದ ಧರ್ಮರಾಜ (೮೬) ೪೬೭

ಪಾಂಡವರು ಮೊದಲಾದವರು ಎಲ್ಲಿ (೮೭)	೪೬೭
ಮಹಾಪಾಪಿ ದುರ್ಯೋಧನ (೮೯)	೪೬೮
ಬಂಧುಗಳಿಡೆಗೆ ಧರ್ಮರಾಜ (೯೩)	೪೬೯
ಧರ್ಮರಾಜನಿಗೆ ನರಕದರ್ಶನ (೯೫)	೪೭೦
ಧರ್ಮರಾಜನ ಬಂಧುಪ್ರೇಮ (೯೮)	೪೭೧
ಸ್ವರ್ಗ ಬೇಡವೆಂದ ಧರ್ಮರಾಜ (೯೯)	೪೭೨
ಮಾಯವಾದ ನರಕ (೧೦೦)	೪೭೨
ಸ್ವರ್ಗಕ್ಕೆ ಮಿಗಿಲಾದ ದಿವ್ಯಲೋಕ (೧೦೧)	೪೭೩
ಸತ್ತ್ವಪರೀಕ್ಷೆಯಲ್ಲಿ ಮತ್ತೊಮ್ಮೆ ಗೆದ್ದ ಧರ್ಮರಾಜ-ನರಕದರ್ಶನಕ್ಕೆ ಕಾರಣ (೧೦೨)	೪೭೪
ದೇಹ ತೊರೆಯಲು ಧರ್ಮರಾಜನಿಗೆ ಸಂದೇಶ (೧೦೭)	೪೭೮
ದುರ್ಯೋಧನಾದಿಗಳದು ಕೃತಕ ಸ್ವರ್ಗ (೧೦೮)	೪೭೯
ದೇವಾಂಶರಿಗೆ ಮುಕ್ತಿ ಖಚಿತ (೧೦೯)	೪೮೦
ಗಂಗೆಯಲ್ಲಿ ದೇಹ ತೊರೆದ ಯುಧಿಷ್ಠಿರ (೧೧೦)	೪೮೧
ಧರ್ಮರಾಜ ಕಂಡ ಬಂಧುಜನರು (೧೧೧)	೪೮೧
ಭೀಮನ ಪಕ್ಕದಲ್ಲಿ ದ್ರೌಪದಿ (೧೧೨)	೪೮೨
ದ್ರೌಪದಿ ಯಾರು? (೧೧೩)	೪೮೩
ಧರ್ಮರಾಜನಿಗೆ ಮೂಲರೂಪಪ್ರಾಪ್ತಿ (೧೧೪)	೪೮೫
ದೇವಾಂಶರ ಮೂಲರೂಪಪ್ರಾಪ್ತಿ (೧೧೯)	೪೮೫
ಪಾಂಡವರಿಗೆ ಮತ್ತೆ ಕೃಷ್ಣಸಮಾಗಮ (೧೨೦)	೪೮೬
ಅಸುರರಿಗೆ ಪುಣ್ಯಕ್ಷಯ (೧೨೧)	೪೮೬
ಭೂಲೋಕದಲ್ಲಿ ಅಸುರರ ಹುಟ್ಟು (೧೨೨)	೪೮೭
ಅಸುರರ ದುಃಖತಾರತಮ್ಯ (೧೨೩)	೪೮೭
ಕಲಿಯುಗದಲ್ಲಿ ಭೀಮಾವತಾರ (೧೨೫)	೪೮೮
ದ್ರೌಪದಿಯ ಮತ್ತೊಂದು ರೂಪ (೧೨೬)	೪೮೯
ಬ್ರಹ್ಮನಾಗಿ ಭೀಮ - ಸರಸ್ವತಿಯಾಗಿ ಭಾರತಿ (೧೨೭)	೪೯೦
ವಾಯುಭಾರತಿಯರ ವಿಶೇಷ ಹರಿಸೇವೆ (೧೨೮)	೪೯೧

ಉಕ್ತವಿಷಯಕ್ಕೆ ಪ್ರಮಾಣಗಳು (೧೨೯) ೪೯೧
ಭೀಷ್ಮರು ತಿಳಿಸಿದ ಭೀಮಾವತಾರ (೧೩೦) ೪೯೩
ಪಾಂಡವ ಸಂತತಿಯ ರಾಜ್ಯಭಾರ (೧೩೧) ೪೯೪
ಕಲಿಯುಗದಲ್ಲೂ ಉಳಿದುಕೊಂಡ ಧರ್ಮ (೧೩೨) ೪೯೪
ಧರ್ಮವಿಪ್ಲವಕ್ಕೆ ತ್ರಿಪುರಾಸುರರ ಅವತಾರ (೧೩೩) ೪೯೫
ಅಸುರರಿಗೂ ತಲುಪಿದ ತತ್ತ್ವವಿದ್ಯೆ (೧೩೪) ೪೯೫
ಅಸುರರು ಜ್ಞಾನ ಪಡೆಯಲು ಕಾರಣ (೧೩೫) ೪೯೬
ಜ್ಞಾನವಿರುವವರಿಗೆ ತಮಸ್ಸು ಆಗದು (೧೩೬) ೪೯೬
ದೇವತೆಗಳ ವಿಶಿಷ್ಟ ಕಾರ್ಯವೈಖರಿ (೧೩೮) ೪೯೮
ಬ್ರಹ್ಮಾದಿಗಳು ಮಾಡಿದ ಶ್ರೀಹರಿಯ ಪ್ರಾರ್ಥನೆ (೧೩೯) ೪೯೮
ಶುದ್ಧೋದನನಾಗಿ ತ್ರಿಪುರಾಸುರ - ಗಯೆಯಲ್ಲಿ ಬುದ್ಧಾವತಾರ (೧೪೦) ೪೯೯
ಬುದ್ಧರೂಪದ ವೈಭವ (೧೪೧) ೫೦೦
ಶಿಶುವಾಗಿ ದೇವವೃಂದವನ್ನು ಗೆದ್ದ ಬುದ್ಧ (೧೪೨) ೫೦೦
ಸಕಲ ದೇವತೆಗಳ ಪರಾಭವ (೧೪೩) ೫೦೧
ಶಿವಾದಿಗಳೂ ಪರಾಭವಗೊಂಡರು (೧೪೪) ೫೦೧
ಚಕ್ರಾಸನನಾಗಿ ಬುದ್ಧ (೧೪೫) ೫೦೨
ಬುದ್ಧನ ಉಪದೇಶ (೧೪೬) ೫೦೩
ಸುರವೃಂದಕ್ಕೆ ತಾರಕವಾದ ಬುದ್ಧದರ್ಶನ (೧೪೭) ೫೦೩
ಬೌದ್ಧದರ್ಶನದ ಅಂತರಾರ್ಥ (೧೪೮) ೫೦೪
ದೇವಲೋಕದಲ್ಲಿ ಬುದ್ಧರೂಪ (೧೫೩) ೫೦೯
ಜೈನಮತದ ಉಗಮ (೧೫೪) ೫೧೦
ಪ್ರಶಾಂತ ವಿದ್ಯೆ (೧೫೫) ೫೧೧
ಕ್ರೋಧವಶರ ಅವತಾರ (೧೫೬) ೫೧೨
ಕ್ರೋಧವಶರು ಮಾಡಿದ ಶೈವತಪಸ್ಸು (೧೫೭) ೫೧೩
ಭೀಮಾವತಾರ - ದುರ್ಗಾವತಾರ (೧೫೮) ೫೧೩
ಕಲಿಯುಗದ ಕೊನೆಯಲ್ಲಿ ಸುರಪ್ರಾರ್ಥನೆಯಂತೆ ಕಲ್ಕಿಯಾಗಿ ಶ್ರೀಹರಿ (೧೫೯) ೫೧೪

ಶಂಭಲದಲ್ಲಿ ಕಲ್ಕಿ ಅವತಾರ (೧೬೦) ೫೧೫
ಕಲ್ಕಿ ಶಬ್ದಾರ್ಥ - ಕಲಿಮಲ ಪರಿಹರಿಸಿದ ಕಲ್ಕಿ (೧೬೧) ೫೧೬
ಕಲ್ಕಿ ರೂಪದಿಂದ ಧರ್ಮಸ್ಥಾಪನೆ (೧೬೨) ೫೧೭
ಗ್ರಂಥೋಪಸಂಹಾರ (೧೬೩) ೫೧೮
ಗ್ರಂಥಕರ್ತೃಗಳ ಪರಿಚಯ (೧೬೪) ೫೧೮
ಮಧ್ವರೂಪದ ಹಿರಿಮೆ (೧೬೫) ೫೨೦
ಗ್ರಂಥ ಪ್ರಶಸ್ತಿ (೧೬೬) ೫೨೦
ಭಾಷ್ಯದಿಂದ ತತ್ತ್ವದ ಆವಿಷ್ಕಾರ (೧೬೮) ೫೨೨
ಬ್ರಹ್ಮಸೂತ್ರಭಾಷ್ಯಾದಿಗಳ ರಚನೆ (೧೬೯) ೫೨೩
ತೃತೀಯ ರೂಪದ ಅದ್ವಿತೀಯಕಾರ್ಯ (೧೭೦) ೫೨೩
ಮಧ್ವರ ವಾಯ್ವವತಾರಕ್ಕೆ ಪ್ರಮಾಣಗಳು (೧೭೧) ೫೨೪
ಗ್ರಂಥೋಕ್ತ ಸಕಲ ವಿಷಯಗಳು ಪ್ರಾಮಾಣಿಕ (೧೭೨) ೫೨೫
ಫಲಶ್ರುತಿ (೧೭೩) ೫೨೫
ವಾಯುದೇವರ ಅವತಾರತ್ರಯ (೧೭೪) ೫೨೬
ಕೃಷ್ಣಾರ್ಪಣ (೧೭೫) ೫೨೭

ಪರಿಶಿಷ್ಟಗಳು ೫೨೮-೭೧೬

೧) ಯಮಕಭಾರತಮ್ ೫೨೯-೫೩೫
೨) ಶ್ರೀಕೃಷ್ಣಪದ್ಯಮ್ ೫೩೬
೩) ಶ್ರೀಕೃಷ್ಣಮಾಲಾ ೫೩೬-೫೩೮
೪) ಶ್ರೀಕೃಷ್ಣರಾಮಾವತಾರಚರಿತರತ್ನಸಂಗ್ರಹಃ ೫೩೮-೫೪೦
೫) ಮಹಾಭಾರತತಾತ್ಪರ್ಯನಿರ್ಣಯಾಶಯಸಂಗ್ರಹಃ ೫೪೦-೫೪೪
೬) ಶ್ರೀರಾಮಚಾರಿತ್ರಮಂಜರೀ ೫೪೫-೫೪೬
೭) ಶ್ರೀಕೃಷ್ಣಚಾರಿತ್ರಮಂಜರೀ ೫೪೬-೫೫೦
೮) ಬಳಿತ್ಥಾಸೂಕ್ತಾರ್ಥ (ಯುಕ್ತಿಮಲ್ಲಿಕಾ) ೫೫೦-೫೫೨
೯) ಅಂಶಾವತಾರಃ ೫೫೩-೫೫೯

೧೦) ಅಂಶಾವೇಶಾವತಾರಾದಿ ವಿವರ (ಅಕಾರಾದಿ) ೫೬೦-೫೭೦
೧೧) ಕೆಲವು ವ್ಯಾಖ್ಯಾನಗಳಲ್ಲಿನ ವಿಶೇಷಾಂಶಗಳು ೫೭೧-೬೭೫
೧೨) ಮಹಾಭಾರತತಾತ್ಪರ್ಯನಿರ್ಣಯದ ಕೆಲವು ಸೂಕ್ತಿಗಳು ೫೭೬-೫೯೦
೧೩) ಮಹಾಭಾರತತಾತ್ಪರ್ಯನಿರ್ಣಯದ ವ್ಯಾಖ್ಯಾನಗಳ ಆದ್ಯಂತಶ್ಲೋಕಗಳು ೫೯೧-೬೦೨
೧೪) ಗರುಡಪುರಾಣದಲ್ಲಿ ದ್ರೌಪದ್ಯವತಾರದ ಹಿನ್ನೆಲೆ ೬೦೩-೬೦೮
೧೫) ಮಹಾಭಾರತತಾತ್ಪರ್ಯನಿರ್ಣಯಕೃತಿಯ ಶ್ಲೋಕಾರ್ಧಾನುಕ್ರಮಣಿಕಾ (ಅಕಾರಾದಿ) ೬೦೯-೬೧೬

*****

ಸಂಕೇತಗಳ ವಿವರ

೧. ಮಹಾಭಾರತತಾತ್ಪರ್ಯನಿರ್ಣಯದ ವ್ಯಾಖ್ಯಾನಗ್ರಂಥಗಳ ಸಂಕೇತಗಳ ವಿವರ

(ವೇ.) - ಶ್ರೀವೇದಾಂಗತೀರ್ಥಕೃತವ್ಯಾಖ್ಯಾನ
(ವಾ.) - ಶ್ರೀವಾದಿರಾಜತೀರ್ಥಕೃತ ಭಾವಪ್ರಕಾಶಿಕಾ
(ಜ.) - ಜನಾರ್ದನಭಟ್ಟಕೃತಪ್ರದಾರ್ಥಪ್ರದೀಪಿಕಾ
(ವ.) - ವರದರಾಜಾಚಾರ್ಯಕೃತಮಂದಸುಬೋಧಿನೀ
(ತಾ.) - ತಾಮ್ರವರ್ಣೀಶ್ರೀನಿವಾಸಾಚಾರ್ಯಕೃತಪ್ರಮೇಯಮಣಿಮಾಲಾ
(ಪ್ರ.) - ತಾಮ್ರವರ್ಣೀಶ್ರೀನಿವಾಸಾಚಾರ್ಯಕೃತಪ್ರಮೇಯಮಾಲಾ
(ಸ.) - ಶ್ರೀಸತ್ಯಾಭಿನವತೀರ್ಥಕೃತದುರ್ಘಟಾರ್ಥಪ್ರಕಾಶಿಕಾ
(ಫ.) - ಫಲಾರೀಯ
(ಶ್ರೀ.) - ಶ್ರೀನಿವಾಸಾಚಾರ್ಯಕೃತಭಾವಚಂದ್ರಿಕಾ
(ತಿ.) - ಜನಾರ್ದನಸೂನುತಿರುಮಲಸಂಗೃಹೀತ-ಅತಿವಿಶದವಾಕ್ಯವಿವೃತಿ(ಅತಿವಿಶದವಾಕ್ಯಪ್ರಕಾಶನ)
(ಮ.) - ಶ್ರೀವಿದ್ಯಾಧೀಶಶಿಷ್ಯಮಧುಸೂದನಭಿಕ್ಷುಸಂಗೃಹೀತಪ್ರಮಾಣಸಂಗ್ರಹಃ
(ರಾ.) - ಶ್ರೀವಾಸುದೇವಯತಿಗಳ ಪೂರ್ವಾಶ್ರಮವೃತ್ತರಾಮಾಚಾರ್ಯಕೃತಭಾವವಿವೃತಿಃ
(ಭಾ.ಶ್ರೀ.) - ಭಾರತ ಶ್ರೀನಿವಾಸಾಚಾರ್ಯಕೃತವ್ಯಾಖ್ಯಾನ
(ಚಿ.ಕೋ.) - ಚಿಟ್ಟೇ ಕೋನೇರ್ಯಾಚಾರ್ಯಕೃತವ್ಯಾಖ್ಯಾನ
(ಚ.) - ಶ್ರೀಚಕ್ರಪಾಣಿಶ್ರೀನಿವಾಸಾಚಾರ್ಯಕೃತ ವಿರೋದೋದ್ಧಾರಃ
(ವಿ.) - ಕರ್ನಾಟಕಕೃಷ್ಣಾಚಾರ್ಯಸೂನುವಿರಚಿತ ವಿರೋಧಭಂಜನೀ

೨. ಇತರಗ್ರಂಥಗಳ ಸಂಕೇತಗಳ ವಿವರ

ಬ್ರ.ಸೂ. - ಬ್ರಹ್ಮಸೂತ್ರ
ಸೂ.ಭಾ. - ಶ್ರೀಮದಾನಂದತೀರ್ಥಭಗವತ್ಪಾದಪ್ರಣೀತ ಬ್ರಹ್ಮಸೂತ್ರಭಾಷ್ಯ
ಭಾರತ - ಮಹಾಭಾರತ (ಗೋರಖ್‌ಪುರದ ಗೀತಾಪ್ರೆಸ್‌ನಿಂದ ಪ್ರಕಾಶಿತವಾದ ಪಾಠ)
ಕೃ. ಭಾರತ - ಮಹಾಭಾರತ (ಕುಂಭಕೋಣಂ ಟಿ.ಆರ್. ಕೃಷ್ಣಾಚಾರ್ಯರಿಂದ ಪ್ರಕಾಶಿತ ಪಾಠ)
ಬಿ.ಓ.ಆರ್.ಐ. ಭಾರತ- ಮಹಾಭಾರತ (ಪೂನಾ ಭಂಡಾರ್ಕರ್ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಪಾಠ)
ವಾ.ರಾ. - ವಾಲ್ಮೀಕಿರಾಮಾಯಣ
ಭಾ.ತಾ. - ಶ್ರೀಮದಾನಂದತೀರ್ಥಭಗವತ್ಪಾದಪ್ರಣೀತ ಭಾಗವತತಾತ್ಪರ್ಯನಿರ್ಣಯ
ಮ.ಭಾ.ತಾ.ನಿ. - ಮಹಾಭಾರತತಾತ್ಪರ್ಯನಿರ್ಣಯ
ಸು.ವಿ. - ಶ್ರೀನಾರಾಯಣಪಂಡಿತಾಚಾರ್ಯವಿರಚಿತ ಸುಮಧ್ವವಿಜಯ
ಪಾ.ಸೂ. - ಪಾಣಿನಿಸೂತ್ರ
ರು.ವಿ. - ಶ್ರೀವಾದಿರಾಜಶ್ರೀಚರಣವಿರಚಿತ ರುಕ್ಮಿಣೀಶವಿಜಯ
ಲಕ್ಷಾಲಂಕಾರ - ಶ್ರೀವಾದಿರಾಜಶ್ರೀಚರಣವಿರಚಿತ ಮಹಾಭಾರತಲಕ್ಷಾಲಂಕಾರ
ಗೀತಾ - ಭಗವದ್ಗೀತಾ
ಗೀ.ಭಾ. - ಶ್ರೀಮದಾನಂದತೀರ್ಥಭಗವತ್ಪಾದಪ್ರಣೀತಗೀತಾಭಾಷ್ಯ
ಗೀ.ತಾ. - ಶ್ರೀಮದಾನಂದತೀರ್ಥಭಗವತ್ಪಾದಪ್ರಣೀತಗೀತಾತಾತ್ಪರ್ಯ
ಸ.ಭಾ.ವಿ. - ಶ್ರೀವಾದಿರಾಜಶ್ರೀಚರಣವಿರಚಿತ ಸರಸಭಾರತೀವಿಲಾಸ

೩. ಇತರ ಸಂಕೇತಗಳ ವಿವರ :

ಅ: - ಅನುವಾದ
ವಿ: - ವಿವರಣೆ
ಶ್ಲೋ. - ಶ್ಲೋಕ
ಅ. - ಅಧ್ಯಾಯ

* * * * *

ಮುನ್ನುಡಿ

ಇತಿಹಾಸಪುರಾಣಭ್ಯೋರ್ಥವಚ್ಚಿತ್ತಾದ್ರಿಲೋಡಿತಾತ್ ।
ಜಾತಾಂ ಭಾರತತಾತ್ಪರ್ಯಸುಧಾಂ ಕಃ ಸನ್ನ ಸೇವತೇ ॥ (ಸುಮಧ್ವವಿಜಯ ೧೫/೭೬)

ಮಹಾಭಾರತತಾತ್ಪರ್ಯನಿರ್ಣಯದ ಅನುವಾದದ ಐದನೆಯ ಹಾಗೂ ಕೊನೆಯ ಸಂಪುಟ ಇದು. ಮಹಾಭಾರತತಾತ್ಪರ್ಯನಿರ್ಣಯದ ಅಧ್ಯಯನಕ್ಕೆ ಉಪಯುಕ್ತವಾದ ಅನೇಕ ವಿವರಗಳನ್ನು ಹೊಂದಿರುವುದು ಈ ಸಂಪುಟದ ವಿಶೇಷ. ಮಹಾಭಾರತತಾತ್ಪರ್ಯನಿರ್ಣಯದ ವೈಶಿಷ್ಟ್ಯ, ಸಂಕ್ಷಿಪ್ತವಿಷಯಸೂಚೀ ಮೊದಲಾದ ಅನೇಕವಿವರಗಳೊಂದಿಗೆ ಅದರ ಹಿರಿಮೆಯನ್ನು ಅರಿಯಲು ನೆರವಾಗುವ ವಿಷಯಗಳ ಸಂಗ್ರಹ ಇಲ್ಲಿದೆ. ಅಣುಮಹಾಭಾರತತಾತ್ಪರ್ಯನಿರ್ಣಯ ಎನ್ನಿಸಿರುವ ಆಚಾರ್ಯ ಶ್ರೀಮಧ್ವರ ಯಮಕಭಾರತದ ಪರಿಚಯವನ್ನೂ ನೀಡಲಾಗಿದೆ.

೧. ಮಹಾಭಾರತತಾತ್ಪರ್ಯನಿರ್ಣಯಃ

ಮಹಾಭಾರತ ಮತ್ತು ರಾಮಾಯಣಗಳು ವೈದಿಕ ಸಂಸ್ಕೃತಿಯ ವಿಶ್ವರೂಪವನ್ನು ದರ್ಶನ ಮಾಡಿಸುವ ಮಹೋನ್ನತ ಕೃತಿಗಳು. ರೋಚಕ ಕಥೆಯಿಂದಾಗಿ ಪಾಮರರಿಗೂ ಉದ್ಬೋಧಕ ತತ್ತ್ವಗಳಿಂದಾಗಿ ಪಂಡಿತರಿಗೂ ಸಮನಾಗಿಯೇ ಮೆಚ್ಚಿಗೆಯಾಗುವ ವಿಶಿಷ್ಟ ರಚನಾ-ಸಂವಿಧಾನವನ್ನು ಇವು ಒಳಗೊಂಡಿವೆ. ಮಹಾಭಾರತದ ವ್ಯಾಪ್ತಿಯಂತು ಅನುಪಮ. ವಿಶ್ವಸಾಹಿತ್ಯದಲ್ಲೇ ಅದ್ಭುತವೆನ್ನಿಸುವ ಗಾತ್ರ ಮತ್ತು ಆಳ ಚಿಂತನೆಗೆ ಒಳಪಡಿಸುವ ತತ್ತ್ವಗಳಿಂದಾಗಿ ಮಹಾಭಾರತ ತಾತ್ವಿಕ ವಿಶ್ವಕೋಶವಾಗಿ ಮಾನ್ಯವಾಗಿದೆ. ತನ್ನ ಅರ್ಥ ವಿಸ್ತಾರದಿಂದಾಗಿ ಎಂದಿಗೂ ಒಗಟಾಗಿಯೇ ಉಳಿಯುವ ವೈಶಿಷ್ಟ್ಯ ಮಹಾಭಾರತದ್ದು.

ರಾಮಾಯಣವು ಸಹ ಮತ್ತೊಂದು ಅದ್ಭುತಕೃತಿ. ವಾಲ್ಮೀಕಿರಾಮಾಯಣ ಮೊದಲಾಗಿ ಅನೇಕ ಕೃತಿಗಳಲ್ಲಿ ರಾಮಕಥೆಯು ಕಂಡುಬಂದರೂ, ಮೂಲತಃ ಹಯಗ್ರೀವರೂಪಿ ಪರಮಾತ್ಮನಿಂದ ಉಪದಿಷ್ಟವಾದ ಕೃತಿ ಮೂಲರಾಮಾಯಣ. ಹಯಗ್ರೀವದೇವರಿಂದ ರಚಿತ ಎಂಬ ಕಾರಣದಿಂದ ಅದು ಹಯಗ್ರೀವರಾಮಾಯಣವೂ ಹೌದು. ಮೂಲತಃ ಅದು ಶತಕೋಟಿಗ್ರಂಥಾತ್ಮಕವಾದ ವಿಶಿಷ್ಟಕೃತಿ. ವಾಲ್ಮೀಕಿ ರಾಮಾಯಣವು ಈ ಹಯಗ್ರೀವ-ರಾಮಾಯಣದ ಸಂಕ್ಷಿಪ್ತರೂಪ. ಹಯಗ್ರೀವದೇವರಿಂದ ಚತುರ್ಮುಖಬ್ರಹ್ಮದೇವರಿಗೆ ಉಪದಿಷ್ಟವಾಗಿ, ಅವರ ಮೂಲಕ ನಾರದರು ಉಪದೇಶ ಪಡೆದು, ಅವರು ಅದನ್ನು ವಾಲ್ಮೀಕಿ ಮುನಿಗಳಿಗೆ ಉಪದೇಶಿಸಿದ ವಿವರ ಮತ್ಸ್ಯಪುರಾಣದಲ್ಲಿ ಬಂದಿದೆ. ಅದನ್ನು ಅವರು ಇಪ್ಪತ್ತನಾಲ್ಕು ಸಾವಿರ ಶ್ಲೋಕಗಳಲ್ಲಿ ಸಂಗ್ರಹಿಸಿ, ನಿರೂಪಿಸಿದರು. ಅದೇ ಇಂದಿನ ವಾಲ್ಮೀಕಿರಾಮಾಯಣ.

ವಾಲ್ಮೀಕಿರಾಮಾಯಣದ ಮೊದಲಶ್ಲೋಕದಲ್ಲೇ ಇದಕ್ಕೆ ಪೋಷಕವಾದ ವಿವರಗಳು ತುಂಬಿವೆ. ಆದರೂ ಇದನ್ನೆಲ್ಲ ಬೇರೆ ಯಾರೂ ಗಮನಿಸಿರಲಿಲ್ಲ.

ಇಂತಹ ಮಹಾಭಾರತ ರಾಮಾಯಣಗಳ ಬಗ್ಗೆ ಸಮಗ್ರ ಮಾಹಿತಿ ನೀಡಿದ ಏಕಮಾತ್ರ ದಾರ್ಶನಿಕರು ಎಂಬುದು ಆಚಾರ್ಯಶ್ರೀಮಧ್ವರ ವೈಶಿಷ್ಟ್ಯ. ಇತರ ಆಚಾರ್ಯರು ಇವುಗಳಿಂದ ಕೆಲವು ವಾಕ್ಯಗಳನ್ನು ಉಲ್ಲೇಖಿಸಿದ್ದರೂ, ಆ ಕೃತಿಗಳ ಸಮಗ್ರ ವಿವರಣೆಗೆ ಹೊರಟಿಲ್ಲ; ತಾತ್ತ್ವಿಕ ವಿವೇಚನೆಯಂತೂ ದೂರದ ಮಾತೇ. ಇಂತಹ ಸನ್ನಿವೇಶದಲ್ಲಿ ಶ್ರೀಮದಾಚಾರ್ಯರ ಕೃತಿ ಜಿಜ್ಞಾಸುವ್ಯಂದಕ್ಕೆ ಮಾಡಿರುವ ಉಪಕಾರ ಅನುಪಮ. ಮಹಾಭಾರತತಾತ್ಪರ್ಯನಿರ್ಣಯವು ಶ್ರೀಮದಾಚಾರ್ಯರ ಕೃತಿಗಳಲ್ಲೆಲ್ಲಾ ಗಾತ್ರದಲ್ಲಿ ಅತ್ಯಂತ ಹಿರಿದಾದ ಕೃತಿ. ಐದುಸಾವಿರ ಶ್ಲೋಕಗಳಿಗಿಂತಲೂ ಹೆಚ್ಚಿನ ವ್ಯಾಪ್ತಿಯ ಅಂತಹ ಶ್ಲೋಕರೂಪದ ಕೃತಿ ಸಮಗ್ರ ಸಂಸ್ಕೃತ ಸಾಹಿತ್ಯದಲ್ಲೇ ವಿರಳ. ಮಹಾಭಾರತ, ರಾಮಾಯಣಗಳ ಸಮಗ್ರ ವಿಶ್ಲೇಷಣೆಯನ್ನು ಒಟ್ಟು ಮೂವತ್ತೆರಡು ಅಧ್ಯಾಯಗಳಲ್ಲಿ ಈ ಕೃತಿ ಒದಗಿಸುತ್ತಿದೆ.

ಮೊದಲ ಅಧ್ಯಾಯ ಸಕಲಶಾಸ್ತ್ರ ಪ್ರಮೇಯಗಳ ಸಂಕಲವಾದ **'ಸರ್ವಶಾಸ್ತ್ರಾರ್ಥ–ನಿರ್ಣಯ'**. ಎರಡನೆಯದು ಅದಕ್ಕೆ ಸಂವಾದಿಯಾಗಿ ಮಹಾಭಾರತದ ವಾಕ್ಯಗಳನ್ನು ಉದ್ಧರಿಸಿ ಕೊಡುವ **'ಸುವಾಕ್ಯೋದ್ಧಾರ'**. ಮೂರನೆಯದು ಭಗವಂತನ ವರಾಹಾದಿ ಅವತಾರಗಳ ವೈಭವವನ್ನೂ, ಶ್ರೀರಾಮಪ್ರಾದುರ್ಭಾವವನ್ನೂ ನಿರೂಪಿಸುವ **'ಸರ್ಗಾನುಸರ್ಗಲಯ–ಪ್ರಾದುರ್ಭಾವನಿರ್ಣಯ'**. ಮೂರನೆಯ ಅಧ್ಯಾಯದಲ್ಲಿ ಪ್ರಾರಂಭವಾಗುವ **ರಾಮಕಥಾನಿರ್ಣಯ** ನಾಲ್ಕನೆಯದರಿಂದ ಮುಂದುವರೆದು ಒಂಭತ್ತನೆಯ ಅಧ್ಯಾಯದಲ್ಲಿ ಮುಕ್ತಾಯವಾಗುತ್ತದೆ. ಹತ್ತನೆಯದು ಮಹಾಭಾರತದ ಕರ್ತೃವಾದ **ವೇದವ್ಯಾಸರ ಅವತಾರದ** ಬಗ್ಗೆ ಸಮಗ್ರ ಮಾಹಿತಿಗಳನ್ನು ಒದಗಿಸುವ ಮಹತ್ತ್ವದ ಅಧ್ಯಾಯ. ಹನ್ನೊಂದರಿಂದ ಮೂವತ್ತೆರಡರವರೆಗಿನ ಇತರ ಅಧ್ಯಾಯಗಳೆಲ್ಲ **ಮಹಾಭಾರತನಿರ್ಣಯ**ಕ್ಕೆ ಮೀಸಲು. ಇದಿಷ್ಟು ಕೃತಿಯ ಸ್ಥೂಲ ಪರಿಚಯ.

ಲಕ್ಷಶ್ಲೋಕಗಳ ವ್ಯಾಪ್ತಿಯ ಮಹಾಭಾರತದ ಮೂಲಕಥೆಯನ್ನು ಚೊಕ್ಕವಾಗಿ ಸಮಗ್ರವಾಗಿ ನಿರೂಪಿಸುವುದು ಇದರ ಮೊದಲ ಸಾಧನೆ. ಈ ಒಂದನ್ನು ಸಾಧಿಸುವುದರಲ್ಲಿ ಸಹ ಜಗತ್ತಿನ ಬೇರಾವ ಗ್ರಂಥವೂ ಇದರಷ್ಟು ಯಶಸ್ವಿಯಾಗಿಲ್ಲ. ಹಾಗೆ ನೋಡಿದರೆ, ಮಹಾಭಾರತದ ಸಮಗ್ರ ಪರಿಚಯವನ್ನು ನೀಡಲು ಹೊರಟ ಕೃತಿಗಳೇ ತುಂಬಾ ವಿರಳ. ಕ್ಷೇಮೇಂದ್ರನ ಭಾರತ–ಮಂಜರಿಯೊಂದೇ ಈ ಹಾದಿಯಲ್ಲಿ ಹೊರಟ ಗಮನಾರ್ಹ ಕೃತಿ. ತುಂಬಾ ವಿಸ್ತಾರವಾದ ಕೃತಿಯಾದರೂ ಸಹ ಮೂಲಕಥೆಯನ್ನು ಸೆರೆಹಿಡಿಯುವಲ್ಲಿ ಅದು ಅಷ್ಟಾಗಿ ಸಫಲವಾಗಿಲ್ಲ ಎಂಬುದಕ್ಕಿಂತ ವಿಫಲವಾಗಿದೆ ಎಂಬುದೇ ಸೂಕ್ತ. ಅಲ್ಲಿಯ ನಿರೂಪಣೆ ತೀರಾ ಯಾಂತ್ರಿಕ,

ಅಸಮಗ್ರ ಮತ್ತು ಎಷ್ಟೋ ಕಡೆ ಅಷ್ಟೇ ಅಸಮರ್ಪಕ. ಆದರೆ ಶ್ರೀಮದಾಚಾರ್ಯರ ತಾತ್ಪರ್ಯನಿರ್ಣಯ ದಿಗ್ಭ್ರಮೆ ಹುಟ್ಟಿಸುವಷ್ಟು ಅಚ್ಚರಿಯ ಸಮಗ್ರ ಕಥಾನಕ. ಯುದ್ಧ ಪ್ರಸಂಗಗಳ ನಿರೂಪಣೆಯಲ್ಲಂತೂ ,ಮಹಾಭಾರತದ ಅನಂತರದ ಆ ಬಗೆಯ ಯಶಸ್ವಿ ಕೃತಿ ಇದೊಂದೇ. ನಿರ್ಣಯದ ನಿರೂಪಣೆಯ ಅಚ್ಚುಕಟ್ಟು, ಸಮಗ್ರತೆ; ಸ್ಫುಟತೆ ಯಾವುದೂ ಕ್ಷೇಮೇಂದ್ರನ ಭಾರತಮಂಜರಿಯಲ್ಲಿ ಕಾಣಸಿಕ್ಕುವುದಿಲ್ಲ.

ಇನ್ನು ರಾಮಾಯಣದ ವ್ಯಾಪ್ತಿ ಈ ಮೊದಲೇ ತಿಳಿಸಿದಂತೆ ಮೂಲರಾಮಾಯಣವು ಶತಕೋಟಿಗ್ರಂಥಾತ್ಮಕವಾದ ಮಹೋನ್ನತಕೃತಿ. ಅದರ ಬಗ್ಗೆ ವ್ಯಾಖ್ಯಾನ, ವಿವರಣೆಗಳನ್ನು ನೀಡುವುದಿರಲಿ, ಅದರ ಅಸ್ತಿತ್ವವನ್ನೇ ಶ್ರೀಮಧ್ವರಿಗಿಂತ ಮುಂಚಿನ ಜನ ಗುರುತಿಸಿರಲಿಲ್ಲ. ವಾಲ್ಮೀಕಿರಾಮಾಯಣದ ಮಟ್ಟಿಗಿನ ವಿವರಗಳನ್ನು ಕ್ಷೇಮೇಂದ್ರನ ರಾಮಾಯಣಮಂಜರಿ ನಿರೂಪಿಸುತ್ತದೆ. ಆದರೆ ಭಾರತಮಂಜರಿಯಂತೆ ಅವನ ಈ ರಾಮಾಯಣಮಂಜರಿಯು ಕೇವಲ ಕಥಾಸಂಗ್ರಹಕ್ಕೆ ಮಾತ್ರ ಸೀಮಿತವಾದ ಕೃತಿ. ವಿಮರ್ಶೆ, ನಿರ್ಣಯಗಳ ಯಾವುದೇ ಪ್ರಯತ್ನವೂ ಇದರಲ್ಲಿ ನಡೆದಿಲ್ಲ.

ಇನ್ನು ಅನಂತಭಟ್ಟನ ಚಂಪೂಭಾರತ, ವಿದರ್ಭರಾಜ ಭೋಜನ ಚಂಪೂರಾಮಾಯಣ ಮೊದಲಾದ ಮಹಾಭಾರತ, ರಾಮಾಯಣ ಕಥಾಸಂಗ್ರಹರೂಪವಾದ ಇನ್ನು ಕೆಲವು ಕೃತಿಗಳು ಸಹ ಕ್ಷೇಮೇಂದ್ರನ ಕೃತಿಗಳಂತೆ ಕಥಾಸಂಗ್ರಹಕ್ಕೆ ಮಾತ್ರ ಸೀಮಿತಗೊಂಡ ಕಾವ್ಯಕೃತಿಗಳು. ಎಂದರೆ ರಾಮಾಯಣ, ಮಹಾಭಾರತಗಳ ಮೇಲೆ ವಿಮರ್ಶಾತ್ಮಕವಾದಂತಹ ಸಮಗ್ರಕೃತಿ ರಚಿತವಾಗಿರಲೇ ಇಲ್ಲ. ಆಚಾರ್ಯಶ್ರೀಮಧ್ವರ ಶ್ರೀಮಹಾಭಾರತತಾತ್ಪರ್ಯನಿರ್ಣಯ ಈ ದೃಷ್ಟಿಯಲ್ಲಿ ಅದ್ವಿತೀಯಕೃತಿ.

ಮಹಾಭಾರತತಾತ್ಪರ್ಯನಿರ್ಣಯದ ಮತ್ತೊಂದು ವಿಶೇಷತೆ ಎಂದರೆ ಮಹಾಭಾರತ ಹಾಗೂ ಕೃಷ್ಣಕಥೆಯ ಇತರ ಆಕರಗಳಾದ ಹರಿವಂಶ, ಭಾಗವತ, ವಿಷ್ಣುಪುರಾಣ ಮೊದಲಾದ ಇತರ ಸಕಲ ಗ್ರಂಥಗಳನ್ನೂ ಅಳವಡಿಸಿಕೊಂಡಿರುವ ರೀತಿ. ಈ ಬಗೆಯ ಪ್ರಯತ್ನವೂ ಆ ಮುಂಚೆ ನಡೆದಿರಲಿಲ್ಲ ಎಂಬುದು ಗಮನಾರ್ಹ. ಆ ಅರ್ಥದಲ್ಲಿ ಇದು ಭಾರತನಿರ್ಣಯವಾಗಿರುವಂತೆ ಹರಿವಂಶ ಮೊದಲಾದವುಗಳ ನಿರ್ಣಯವೂ ಆಗಿದೆ. ಹನುಮಂತ, ಭೀಮಸೇನರ ಪಾತ್ರಗಳ ವಿಶ್ಲೇಷಣೆಯ ಮೂಲಕ ಶ್ರೀವಾಯುಜೀವೋತ್ತಮತ್ವವೂ ಸಹ ವಿಶೇಷವಾಗಿ ನಿರೂಪಿತವಾಗಿದೆ.

ಶ್ರೀಕೃಷ್ಣನ ಕಥೆ. ಪಾಂಡವರ ಕಥೆ ಮೊದಲಾದವುಗಳ ವಿವರಗಳನ್ನು ಸಮಗ್ರವಾಗಿ ವಿಶ್ಲೇಷಿಸಿ, ಅದರಲ್ಲಿನ ಪ್ರಮುಖಸಮಸ್ಯೆಗಳನ್ನು ಸ್ಫುಟವಾಗಿ ಪರಿಹರಿಸುವುದು ಈ ಮಹಾಭಾರತ–ತಾತ್ಪರ್ಯನಿರ್ಣಯದ ಮತ್ತೊಂದು ಹಿರಿಮೆ. ರಾಮಾಯಣದ ವಾಲಿವಧೆ, ಸೀತಾಕೃತಿ ಅಪಹರಣ,

ಸೀತಾಪರಿತ್ಯಾಗ, ಮಹಾಭಾರತದ ದ್ರೌಪದಿಯ ಪಂಚಪತ್ನೀತ್ವ ಮೊದಲಾದ ಘಟ್ಟಗಳನ್ನು ಉದಾಹರಣೆಯಾಗಿ ನೀಡಬಹುದು.

ಮಹಾಭಾರತದ ಆಧ್ಯಾತ್ಮಿಕ ಶ್ರೀಮಂತಿಕೆಯನ್ನು ಮೊಟ್ಟಮೊದಲಬಾರಿಗೆ ಗುರುತಿಸಿ, ಅದು ಮೂಲತಃ ತಾತ್ವಿಕಕೃತಿ ಎಂಬುದಾಗಿ ನಿರೂಪಿಸಿದವರೂ ಶ್ರೀಮದಾಚಾರ್ಯರೇ. ಅವರು ಎರಡನೆಯ ಅಧ್ಯಾಯದಲ್ಲಿ ಮನ್ವಾದಿ, ಅಸ್ತೀಕಾದಿ, ಉಪಚರಾದಿ ಎಂಬ ಮೂರು ಬಗೆಯ ಅರ್ಥವಿಶೇಷಗಳನ್ನು ನಿರೂಪಿಸಿ ಕುರುಪಾಂಡವರು, ಅವರ ಅನುಯಾಯಿಗಳು ಮೊದಲಾಗಿ ಪ್ರತಿಯೊಬ್ಬರೂ ಹೇಗೆ ಆಧ್ಯಾತ್ಮಿಕ ತತ್ತ್ವಗಳ ಪ್ರತೀಕವಾಗಿರುವರು ಎಬುದನ್ನು ಸಾಧಾರವಾಗಿ ವಿವರಿಸಿರುವರು.

ಭಾರತಾದಿಗಳಲ್ಲಿ ಸಮಾಧಿ, ದರ್ಶನ, ಗುಹ್ಯ ಎಂಬ ಭಾಷಾತ್ರೈವಿಧ್ಯ, ವ್ಯತ್ಯಾಸ, ಪ್ರಾತಿಲೋಮ್ಯ, ಗೋಮೂತ್ರೀ, ಪ್ರಹ್ಲಸ, ಉಕ್ಷಣ, ಸುಧುರ ಮತ್ತು ಸಾಧು ಎಂಬ ಸಪ್ತಭೇದಗಳ ನಿರೂಪಣೆ, ವೈಧರ್ಭೀ, ಗೌಡೀ, ಪಾಂಚಾಲಿ ಮೊದಲಾದ ನೂರಾರು ಶೈಲಿಗಳ ಬಳಕೆ ಮೊದಲಾದವುಗಳ ಮೇಲೆ ಬೆಳಕು ಚೆಲ್ಲಿದ ಏಕಮಾತ್ರ ದಾರ್ಶನಿಕರೂ ಅವರೇ. ಹೀಗೆ ಮಹಾಭಾರತದ ಸಮಗ್ರದರ್ಶನ ಮಾಡಿಸುವ ವಿಶ್ವಸಾಹಿತ್ಯದ ಅಮರಕೃತಿ ಎಂಬುದು ಮಹಾಭಾರತತಾತ್ಪರ್ಯನಿರ್ಣಯದ ಹಿರಿಮೆ.

ಈ ಮಹಾಭಾರತತಾತ್ಪರ್ಯನಿರ್ಣಯವನ್ನು ಶ್ರೀಮಧ್ವರು ರಚಿಸಿದ್ದು ಸ್ವತಃ ಕೃತಿಕರ್ತೃಗಳಾದ ಶ್ರೀವೇದವ್ಯಾಸರ ಆದೇಶದಂತೆ. ಪ್ರಥಮ ಬಾರಿಗೆ ಉತ್ತರಬದರಿಯಲ್ಲಿ ಅವರು ಶ್ರೀವೇದವ್ಯಾಸ–ನಾರಾಯಣರನ್ನು ಸಂದರ್ಶಿಸಿದಾಗ ಅವರು ಇವರಿಗೆ ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ರಚಿಸಲು ಆದೇಶಿಸಿದರೆ, ದ್ವಿತೀಯಬಾರಿಯ ಬದರೀಯಾತ್ರೆಯಲ್ಲಿ ಅವರು ಬ್ರಹ್ಮಸೂತ್ರಭಾಷ್ಯವನ್ನು ಸಮರ್ಪಿಸಿದಾಗ, ಅವರು ಮಹಾಭಾರತಕ್ಕೂ ತಾತ್ಪರ್ಯ–ನಿರ್ಣಯವೊಂದನ್ನು ರಚಿಸಲು ಆದೇಶ ನೀಡಿದರು :

ಪಾರಾಶರ್ಯಃ ಪರತತ್ತ್ವಪ್ರಸಿದ್ಧ್ಯೈ ತಾತ್ಪರ್ಯಾರ್ಥಂ ಪರಮಂ ಭಾರತಸ್ಯ ।
ವ್ಯಕ್ತಂ ವಕ್ತುಂ ನಿಯುನಕ್ತಿ ಸ್ಮ ಸಾಕ್ಷಾದೇನಂ ಧನ್ಯಂ ಭುವನೇ ಮನ್ಯಮಾನಃ ॥ –(೧೦/೨೫)

ಅದರ ಫಲವಾಗಿ ರಚಿತವಾದ ಕೃತಿ ಮಹಾಭಾರತತಾತ್ಪರ್ಯನಿರ್ಣಯ. ಈ ವಿವರಗಳನ್ನೆಲ್ಲ ಸುಮಧ್ವವಿಜಯ ನೀಡಿದೆ; ಸ್ವತಃ ಶ್ರೀಮದಾಚಾರ್ಯರೇ ಈ ಬಗ್ಗೆ ಸಾಕಷ್ಟು ಬೆಳಕು ಚೆಲ್ಲಿರುವರು :

ಇತ್ಯೃಗ್ಯಜುಸ್ಸಾಮಾಥರ್ವಪಂಚರಾತ್ರೇತಿಹಾಸತಃ ।
ಪುರಾಣೇಭ್ಯಸ್ತಥಾನ್ಯೇಭ್ಯಃ ಶಾಸ್ತ್ರೇಭ್ಯೋ ನಿರ್ಣಯಃ ಕೃತಃ ॥

ವಿಷ್ಣ್ವಜ್ಞಯೈವ ವಿದುಷಾ ತತ್ಪ್ರಸಾದಬಲೋನ್ನತೇಃ ।
ಆನಂದತೀರ್ಥಮುನಿನಾ ಪೂರ್ಣಪ್ರಜ್ಞಾಭಿಧಾಯುಜಾ ॥
ತಾತ್ಪರ್ಯಂ ಶಾಸ್ತ್ರಾಣಾಂ ಸರ್ವೇಷಾಮುತ್ತಮಂ ಮಯಾ ಪ್ರೋಕ್ತಮ್ ।
ಪ್ರಾಪ್ಯಾನುಜ್ಞಾಂ ವಿಷ್ಣೋರೇತಜ್ಜ್ಞಾತ್ವೈವ ವಿಷ್ಣುರಾಪ್ತೋಽಸೌ ॥ (೧/೧೩೫-೧೩೭)

ಆನಂದತೀರ್ಥಾಖ್ಯಮುನಿಃ ಸುಪೂರ್ಣಪ್ರಜ್ಞಾಭಿಧೋ ಗ್ರಂಥಮಿಮಂ ಚಕಾರ ।
ನಾರಾಯಣೇನಾಭಿಹಿತೋ ಬದರ್ಯಾಂ ತಸ್ಯೈವ ಶಿಷ್ಯೋ ಜಗದೇಕಭರ್ತುಃ ॥
ಯಸ್ತತ್ಪ್ರಸಾದಾದಖಿಲಾಂಶ್ಚ ವೇದಾನ್ ಸಪಂಚರಾತ್ರಾನ್ ಸರಹಸ್ಯಸಂಗ್ರಹಾನ್ ।
ವೇದೇತಿಹಾಸಾಂಶ್ಚ ಪುರಾಣಯುಕ್ತಾನ್ ಯಥಾವದನ್ಯಾ ಅಪಿ ಸರ್ವವಿದ್ಯಾಃ ॥
ಸಮಸ್ತಶಾಸ್ತ್ರಾರ್ಥವಿನಿರ್ಣಯೋಽಯಂ ವಿಶೇಷತೋ ಭಾರತವರ್ತ್ಮಚಾರೀ ।
ಗ್ರಂಥಃ ಕೃತೋಽಯಂ ಜಗತಾಂ ಜನಿತ್ರಂ ಹರಿಂ ಗುರುಂ ಪ್ರೀಣಯತಾಽಮುನೈವ ॥
ವಿನಿರ್ಣಯೋ ನಾಸ್ಮಮುನಾ ವಿನಾ ಯದ್ವಿಪ್ರಸ್ಥಿತಾನಾಮಿಹ ಸರ್ವವಾಚಾಮ್ ।
ತದ್ಬ್ರಹ್ಮಸೂತ್ರಾಣಿ ಚಕಾರ ಕೃಷ್ಣೋ ವ್ಯಾಖ್ಯಾಽಥ ತೇಷಾಮಯಥಾ ಕೃತಾಽನ್ಯೈಃ ॥
– (೩೨/೧೬೭-೧೭೦)

ಪಾರಿವ್ರಾಜ್ಯಾಧಿರಾಜಃ ಪುನರಪಿ ಬದರೀಂ ಪ್ರಾಪ್ಯ ಕೃಷ್ಣಂ ಚ ನತ್ವಾ
ಕೃತ್ವಾ ಭಾಷ್ಯಾಣಿ ಸಮ್ಯಗ್ ವ್ಯತನುತ ಚ ಭವಾನ್ ಭಾರತಾರ್ಥಪ್ರಕಾಶಮ್ ॥
- ವಾಯುಸ್ತುತಿ (ಶ್ಲೋ. ೩೯)

ಪಾರಾಶರ್ಯಃ ಪರತತ್ತ್ವಪ್ರಸಿದ್ಧ್ಯೈ ತಾತ್ಪರ್ಯಾರ್ಥಂ ಪರಮಂ ಭಾರತಸ್ಯ ।
ವ್ಯಕ್ತಂ ವಕ್ತುಂ ನಿಯುನಕ್ತಿ ಸ್ಮ ಸಾಕ್ಷಾದೇನಂ ಧನ್ಯಂ ಭುವನೇ ಮನ್ಯಮಾನಃ ॥
– ಸುಮಧ್ವವಿಜಯಃ (೧೦/೨೫)

ಸ್ವತಃ ಶ್ರೀಮದಾಚಾರ್ಯರು ತಮ್ಮ ಕೃತಿಯಲ್ಲಿ ಇದರ ರಚನೆಯ ಹಿನ್ನೆಲೆಯನ್ನು ವಿವರವಾಗಿಯೇ ನೀಡಿರುವರು. ಇದು ರಚಿತವಾದ ಸ್ಥಳ ಉಡುಪಿ ಎಂಬ ಮಾತು ಅಣುಮಧ್ವ–ಚರಿತದಲ್ಲಿ ಬಂದಿದೆ :

ಪುನರ್ಗತ್ವಾ ಚ ಬದರೀಂ ವ್ಯಾಸಮಾನಮ್ಯ ಪೂರ್ಣಧೀಃ ।
ಭಾಷ್ಯಾದಿಸೇವಾಂ ವಿಜ್ಞಾಪ್ಯ ರೂಪ್ಯಪೀಠಮಿದಂ ಪುನಃ ॥
ಆಗತ್ಯ ಭಾರತಸ್ಯಾಥ ತಾತ್ಪರ್ಯಂ ಕರ್ಮನಿರ್ಣಯಮ್ ।
ಕೃತ್ವಾ ಚ ....॥ (ಶ್ಲೋ. ೮,೯)

ಹೀಗೆ ಮಹಾಭಾರತವನ್ನು ರಚಿಸಿದ ಶ್ರೀವೇದವ್ಯಾಸರ ಆದೇಶದಿಂದಲೇ ರಚಿತವಾದ ಅನನ್ಯಕೃತಿ ಮಹಾಭಾರತತಾತ್ಪರ್ಯನಿರ್ಣಯ. ಮೂಲಕಾರರು ವೇದವ್ಯಾಸರಾದರೆ, ತಾತ್ಪರ್ಯ–ನಿರ್ಣಯ ರಚಿಸಿದ ಶ್ರೀಮಧ್ವಾಚಾರ್ಯರು ನಿಜವಾದ ಅಭಿನವವೇದವ್ಯಾಸರು.

ಮಹಾಭಾರತತಾತ್ಪರ್ಯನಿರ್ಣಯದ ವೈಶಿಷ್ಟ್ಯ

೧) ಮಹಾಭಾರತತಾತ್ಪರ್ಯನಿರ್ಣಯ - ಶೀರ್ಷಿಕೆಯ ಔಚಿತ್ಯ

ಮಹಾಭಾರತತಾತ್ಪರ್ಯನಿರ್ಣಯ ಎಂಬ ಇದರ ಹೆಸರು ಸಹ ತುಂಬಾ ಅಪೂರ್ವವಾದುದು. ಮಹಾಭಾರತವು ಸಕಲಶಾಸ್ತ್ರಗಳ ಸಾರ, ಇದರ ನಿರ್ಣಯವೆಂದರೆ ಸಕಲಶಾಸ್ತ್ರಗಳ ನಿರ್ಣಯ ಎಂದೇ ಅರ್ಥ. ರಾಮಾಯಣದಲ್ಲಿ ಮಹಾಭಾರತದ ಕಥೆ ನಿರೂಪಿತವಾಗಿಲ್ಲ, ಆದರೆ ಮಹಾಭಾರತದ ವನಪರ್ವದಲ್ಲಿ ಮಾರ್ಕಂಡೇಯ ಸಮಾಸ್ಯಾರೂಪವಾಗಿ ರಾಮೋಪಾಖ್ಯಾನಪರ್ವ ಎಂಬ ಉಪಪರ್ವದಲ್ಲಿ ರಾಮಾಯಣದ ಕಥೆ ನಿರೂಪಿತವಾಗಿದೆ. ರಾಮಾಯಣತಾತ್ಪರ್ಯನಿರ್ಣಯವೆಂದಾಗಿ ಈ ಕೃತಿಯನ್ನು ಹೆಸರಿಸಿದ್ದರೆ ಮಹಾಭಾರತದ ತಾತ್ಪರ್ಯನಿರ್ಣಯವು ಅಪ್ರಸಕ್ತವಾಗುತ್ತಿತ್ತು, ಆದರೆ ಮಹಾಭಾರತತಾತ್ಪರ್ಯನಿರ್ಣಯ ಎಂದು ಹೆಸರಿಸಿದಾಗ ರಾಮಾಯಣತಾತ್ಪರ್ಯನಿರ್ಣಯವೂ ಅದರಲ್ಲಿ ಪ್ರಸಕ್ತವಾಗುತ್ತದೆ. ಅದರಿಂದಾಗಿ ಕ್ಷೇಮೇಂದ್ರ ರಾಮಾಯಣಮಂಜರೀ, ಭಾರತಮಂಜರೀ ಎಂಬ ಎರಡು ಪ್ರತ್ಯೇಕಕೃತಿಗಳನ್ನು ರಚಿಸಬೇಕಾಯಿತು. ಆದರೆ ಶ್ರೀಮಧ್ವರು ಮಹಾಭಾರತತಾತ್ಪರ್ಯನಿರ್ಣಯ ಎಂಬ ಹೆಸರಿನಲ್ಲಿ ಮಹಾಭಾರತದೊಂದಿಗೆ ರಾಮಾಯಣ, ಹರಿವಂಶ ಮೊದಲಾಗಿ ಸಕಲ ಆಕರಗ್ರಂಥಗಳಲ್ಲಿನ ಮುಖ್ಯವಿವರಗಳನ್ನು ಸಂಗ್ರಹಿಸಿ, ಅದನ್ನು ಸಮಸ್ತಶಾಸ್ತ್ರಾರ್ಥನಿರ್ಣಯವನ್ನಾಗಿ ಮಾಡಿರುವರು :

ಉಕ್ತಾ ರಾಮಕಥಾऽಪ್ಯಸ್ಮಿನ್ ಮಾರ್ಕಂಡೇಯಸಮಾಸ್ಯಯಾ ।
ತಸ್ಮಾದ್ಯದ್ಭಾರತೇ ನೋಕ್ತಂ ತದ್ಧಿ ನೈವಾಸ್ತಿ ಕುತ್ರಚಿತ್ ॥
ಅತ್ರೋಕ್ತಂ ಸರ್ವಶಾಸ್ತ್ರೇಷು ನಹಿ ಸಮ್ಯಗುದಾಹೃತಮ್ ।
ಇತ್ಯಾದಿ ಕಥಿತಂ ಸರ್ವಂ ಬ್ರಹ್ಮಾಂಡೇ ಹರಿಣಾ ಸ್ವಯಮ್ ॥ (೨/೫೦-೫೧)

ಸರ್ವಮೇತಚ್ಚ ಕಥಿತಂ ತತ್ರ ತತ್ರಾಮಿತಾತ್ಮನಾ ।
ವ್ಯಾಸೇನೈವ ಪುರಾಣೇಷು ಭಾರತೇ ಚ ಸ್ವಸಂವಿದಾ ॥ (೧೮/೨೯)

ಸಮಸ್ತಶಾಸ್ತ್ರಾರ್ಥವಿನಿರ್ಣಯೋऽಯಂ ವಿಶೇಷತೋ ಭಾರತವರ್ತ್ಮಚಾರೀ ।
ಗ್ರಂಥಃ ಕೃತೋऽಯಂ ಜಗತಾಂ ಜನಿತ್ರಂ ಹರಿಂ ಗುರುಂ ಪ್ರೀಣಯತಾऽಮುನೈವ ॥ (೩೨/೧೬೯)

೨) ರಾಮಾಯಣ ಮಹಾಭಾರತಗಳ ಕಥಾಸಂಗ್ರಹ

ರಾಮಾಯಣ, ಮಹಾಭಾರತಗಳ ಮುಖ್ಯಕಥೆಯನ್ನು ಗುರುತಿಸುವುದು ಸಾಮಾನ್ಯ ಕಾರ್ಯವೇನಲ್ಲ. ಅದಕ್ಕೆ ಮುಖ್ಯವಾಗಿ ಅವುಗಳ ಕೋಟಿ, ಲಕ್ಷ ಶ್ಲೋಕಗಳ ಅಪಾರವ್ಯಾಪ್ತಿ ಒಂದು ಕಾರಣವಾದರೆ, ಮುಖ್ಯಕಥೆಯ ಮಧ್ಯದಲ್ಲಿ ಬರುವ ಅನೇಕ ಉಪಾಖ್ಯಾನಗಳ ಸರಮಾಲೆ ಮತ್ತೊಂದು ಕಾರಣವಾಗುತ್ತದೆ. ಈ ಹಿನ್ನೆಲೆಯಲ್ಲಿ ಅವುಗಳ ಮುಖ್ಯಕಥೆಯನ್ನು ಗ್ರಹಿಸುವಲ್ಲಿಯೇ

ಎಂತಹ ಪರಿಣತರೂ ಗೊಂದಲಕ್ಕೊಳಗಾಗುವರು. ಹಾಗೆ ಮೂಲಕಥೆಯನ್ನು ನೇರವಾಗಿ ಒಂದೆಡೆ ಯಶಸ್ವಿಯಾಗಿ ನಿರೂಪಿಸಿದ ಏಕಮಾತ್ರಕೃತಿ ಎಂಬುದು ಮಹಾಭಾರತತಾತ್ಪರ್ಯನಿರ್ಣಯದ ಮೊದಲ ವೈಶಿಷ್ಟ್ಯ :

ಸರ್ವಸ್ಯ ನಿರ್ಣಯಸುವಾಕ್ಯಸಮುದ್ಧೃತೀ ತು ಸ್ವಾಧ್ಯಾಯಯೋರ್ಹರಿಪದಸ್ಮರಣೇನ ಕೃತ್ವಾ ।
ಆನಂದತೀರ್ಥವರನಾಮವತೀ ತೃತೀಯಾ ಭೈಮೀ ತನುರ್ಮರುತ ಆಹ ಕಥಾಃ ಪರಸ್ಯ ॥ (೩/೮)

೩) ಸಮಗ್ರ ಆಕರಗಳ ಅಳವಡಿಕೆ

ರಾಮಕಥೆ, ಕೃಷ್ಣಕಥೆಗಳು ರಾಮಾಯಣ, ಮಹಾಭಾರತಗಳಲ್ಲಿಮಾತ್ರವಲ್ಲದೆ, ಹರಿವಂಶ, ವಿಷ್ಣುಪುರಾಣ, ಭಾಗವತ ಮೊದಲಾದ ಇತರ ಅನೇಕ ಕಡೆಗಳಲ್ಲಿಯೂ ನಿರೂಪಿತವಾಗಿವೆ. ಅವುಗಳನ್ನೆಲ್ಲ ಅಳವಡಿಸಿಕೊಂಡು ಶ್ರೀರಾಮಕಥೆ, ಕೃಷ್ಣಕಥೆಗಳನ್ನು ಸಮಗ್ರವಾಗಿ ನಿರೂಪಿಸಿರು– ವುದು ಈ ಕೃತಿಯ ಮತ್ತೊಂದು ವಿಶೇಷ ಹಿರಿಮೆ :

ಇತ್ಯೃಗ್ಯಜುಸ್ಸಾಮಾಥರ್ವಪಂಚರಾತ್ರೇತಿಹಾಸತಃ ।
ಪುರಾಣೇಭ್ಯಸ್ತಥಾನ್ಯೇಭ್ಯಃ ಶಾಸ್ತ್ರೇಭ್ಯೋ ನಿರ್ಣಯಃ ಕೃತಃ ॥ (೧/೧೩೫)

ಇತ್ಯಶೇಷಪುರಾಣೇಭ್ಯಃ ಪಂಚರಾತ್ರೇಭ್ಯ ಏವ ಚ ।
ಭಾರತಾಚ್ಚೈವ ವೇದೇಭ್ಯೋ ಮಹಾರಾಮಾಯಣಾದಪಿ ॥
ಪರಸ್ಪರವಿರೋಧಸ್ಯ ಹಾನಾನ್ನಿರ್ಣೀಯ ತತ್ತ್ವತಃ ।
ಯುಕ್ತ್ಯಾ ಬುದ್ಧಿಬಲಾಚ್ಚೈವ ವಿಷ್ಣೋರೇವ ಪ್ರಸಾದತಃ ॥
ಬಹುಕಲ್ಪಾನುಸಾರೇಣ ಮಯೇಯಂ ಸತ್ಕಥೋದಿತಾ ।
ನೈಕಗ್ರಂಥಾಶ್ರಯಾ ತಸ್ಮಾನ್ನಾಶಂಕ್ಯಾತ್ರ ವಿರುದ್ಧತಾ ॥ (೯/೧೨೫-೧೨೮)

ವೇದೇಷು ಸಪುರಾಣೇಷು ಭಾರತೇ ಚಾವಗಮ್ಯತೇ ।
ಉಕ್ತೋಽರ್ಥಸ್ಸರ್ವ ಏವಾಯಂ ತಥಾ ಪೂರ್ವೋದಿತಾಶ್ಚ ಯೇ ॥ (೧೮/೧೫೨)

ಇತ್ಯಾದಿವಾಕ್ಯೋಕ್ತಮಿದಂ ಸಮಸ್ತಂ ತಥಾ ಪುರಾಣೇಷು ಚ ಪಂಚರಾತ್ರೇ ।
ಅತ್ರೋದಿತಾ ಯಾಶ್ಚ ಕಥಾಃ ಸಮಸ್ತಾ ವೇದೇತಿಹಾಸಾದಿವಿನಿರ್ಣಯೋಕ್ತಾಃ ॥
(೩೨/೧೭೫)

ಸಮಸ್ತಶಾಸ್ತ್ರಾರ್ಥವಿನಿರ್ಣಯೋಽಯಂ ವಿಶೇಷತೋ ಭಾರತವರ್ತ್ಮಚಾರೀ ।
ಗ್ರಂಥಃ ಕೃತೋಽಯಂ ಜಗತಾಂ ಜನಿತ್ರಂ ಹರಿಂ ಗುರುಂ ಪ್ರೀಣಯತಾಽಮುನೈವ ॥
ವಿನಿರ್ಣಯೋ ನಾಸ್ಯಮುನಾ ವಿನಾ ಯದ್ವಿಪ್ರಸ್ಥಿತಾನಾಮಿಹ ಸರ್ವವಾಚಾಮ್ ।
ತದ್ಬ್ರಹ್ಮಸೂತ್ರಾಣಿ ಚಕಾರ ಕೃಷ್ಣೋ ವ್ಯಾಖ್ಯಾತಥ ತೇಷಾಮಯಥಾ ಕೃತಾನ್ಯೈಃ ॥
(೩೨/೧೬೯-೧೭೦)

೪) ಆಕರಾಂತರಗಳಲ್ಲಿನ ವಿವರಗಳ ಸಮನ್ವಯ

ಅನೇಕ ಆಕರಗಳಲ್ಲಿ ರಾಮಕಥೆ, ಕೃಷ್ಣಕಥೆಗಳು ಬಂದಿದ್ದರೂ, ಅವುಗಳಲ್ಲಿ ಮೇಲ್ನೋಟಕ್ಕೆ ಹೊಂದಾಣಿಕೆ ಇರುವಂತೆ ಕಂಡುಬರುವುದಿಲ್ಲ. ಕೆಲವೊಮ್ಮೆ ಪರಸ್ಪರ ವಿರೋಧ ಎನ್ನಿಸುವ ನಿರೂಪಣೆಯೂ ಕೆಲವೆಡೆ ಗೋಚರಿಸುತ್ತದೆ. ಮಹಾಭಾರತತಾತ್ಪರ್ಯ ನಿರ್ಣಯವು ಅಲ್ಲಿಯ ವಿರೋಧಗಳನ್ನೆಲ್ಲ ಪರಿಹರಿಸಿ, ಯಾವುದೇ ಗೊಂದಲವಾಗದಂತೆ ಕಥಾಸರಣಿಯನ್ನು ಪ್ರಸ್ತುತಪಡಿಸುತ್ತದೆ :

ಇತ್ಯಶೇಷಪುರಾಣೇಭ್ಯಃ ಪಂಚರಾತ್ರೇಭ್ಯ ಏವ ಚ ।
ಭಾರತಾಚ್ಚೈವ ವೇದೇಭ್ಯೋ ಮಹಾರಾಮಾಯಣಾದಪಿ ॥
ಪರಸ್ಪರವಿರೋಧಸ್ಯ ಹಾನಾನ್ನಿರ್ಣೀಯ ತತ್ತ್ವತಃ ।
ಯುಕ್ತ್ಯಾ ಬುದ್ಧಿಬಲಾಚ್ಚೈವ ವಿಷ್ಣೋರೇವ ಪ್ರಸಾದತಃ ॥
ಬಹುಕಲ್ಪಾನುಸಾರೇಣ ಮಯೇಯಂ ಸತ್ಕಥೋದಿತಾ ।
ನೈಕಗ್ರಂಥಾಶ್ರಯಾ ತಸ್ಮಾನ್ನಾಶಂಕ್ಯಾತ್ರ ವಿರುದ್ಧತಾ ॥
ಕ್ವಚಿನ್ಮೋಹಾಯಾಸುರಾಣಾಂ ವ್ಯತ್ಯಾಸಃ ಪ್ರತಿಲೋಮತಾ ।
ಉಕ್ತಾ ಗ್ರಂಥೇಷು ತಸ್ಮಾದ್ವಿ ನಿರ್ಣಯೋಽಯಂ ಕೃತೋ ಮಯಾ ॥
ಏವಂ ಚ ವಕ್ಷ್ಯಮಾಣೇಷು ನೈವಾಶಂಕ್ಯಾ ವಿರುದ್ಧತಾ ।
ಸರ್ವಕಲ್ಪಸಮಶ್ಚಾಯಂ ಪಾರಂಪರ್ಯಕ್ರಮಃ ಸದಾ ॥
ಪುಂವ್ಯತ್ಯಾಸೇನ ಚೋಕ್ತಿಃ ಸ್ಯಾತ್ಪುರಾಣಾದಿಷು ಕುತ್ರಚಿತ್ ।
ಕೃಷ್ಣಾಮಾಹ ಯಥಾ ಕೃಷ್ಣೋ ಧನಂಜಯಶರೈರ್ಹತಾನ್ ॥
ಶತಂ ದುರ್ಯೋಧನಾದೀಂಸ್ತೇ ದರ್ಶಯಿಷ್ಯ ಇತಿ ಪ್ರಭುಃ ।
ಭೀಮಸೇನಹತಾಸ್ತೇ ಹಿ ಜ್ಞಾಯಂತೇ ಬಹುವಾಕ್ಯತಃ ॥
ವಿಸ್ತಾರೇ ಭೀಮನಿಹತಾಃ ಸಂಕ್ಷೇಪೇಽರ್ಜುನಪಾತಿತಾಃ ।
ಉಚ್ಯಂತೇ ಬಹವಶ್ಚಾನ್ಯೇ ಪುಂವ್ಯತ್ಯಾಸಸಮಾಶ್ರಯಾತ್ ॥
ವಿಸ್ತಾರೇ ಕೃಷ್ಣನಿಹತಾಃ ಬಲಭದ್ರಹತಾ ಇತಿ ।
ಉಚ್ಯಂತೇ ಚ ಕ್ವಚಿತ್ಕಾಲವ್ಯತ್ಯಾಸೋಽಪಿ ಕ್ವಚಿದ್ಭವೇತ್ ॥
ಯಥಾ ಸುಯೋಧನಂ ಭೀಮಃ ಪ್ರಾಹಸತ್ ಕೃಷ್ಣಸನ್ನಿಧೌ ।
ಇತಿ ವಾಕ್ಯೇಷು ಬಹುಷು ಜ್ಞಾಯಂತೇ ನಿರ್ಣಯಾದಪಿ ॥
ಅನಿರ್ಣಯೇ ತು ಕೃಷ್ಣಸ್ಯ ಪೂರ್ವಮುಕ್ತಾ ಗತಿಸ್ತತಃ ।
ವ್ಯತ್ಯಾಸಾಸ್ತ್ವೇವಮಾದ್ಯಾಶ್ಚ ಪ್ರಾತಿಲೋಮ್ಯಾದಯಸ್ತಥಾ ॥
ದೃಶ್ಯಂತೇ ಭಾರತಾದ್ಯೇಷು ಲಕ್ಷಣಗ್ರಂಥತಶ್ಚ ತೇ ।
ಜ್ಞಾಯಂತೇ ಬಹುಭಿರ್ವಾಕ್ಯೈಃ ನಿರ್ಣಯಗ್ರಂಥತಸ್ತಥಾ ॥

ತಸ್ಮಾದ್ವಿನಿರ್ಣಯಗ್ರಂಥಾನಾಶ್ರಿತ್ಯೈವ ಚ ಲಕ್ಷಣಮ್ ।
ಬಹುವಾಕ್ಯಾನುಸಾರೇಣ ನಿರ್ಣಯೋಽಯಂ ಮಯಾ ಕೃತಃ ॥ (೯/೧೨೫-೧೩೭)

ಇತೀರಿತಾ ರಾಮಕಥಾ ಪರಾ ಮಯಾ ಸಮಸ್ತಶಾಸ್ತ್ರಾನುಸೃತೇರ್ಥವಾಪಹಾ ।
ಪಠೇದಿಮಾಂ ಯಃ ಶೃಣುಯಾದಥಾಪಿ ವಾ ವಿಮುಕ್ತಬಂಧಶ್ಚರಣಂ ಹರೇರ್ವ್ರಜೇತ್ ॥
(೯/೧೪೨)

೫) ರಾಮಾಯಣ ಮಹಾಭಾರತಗಳ ಪರಸ್ಪರ ಸಂಬಂಧದ ವಿವೇಚನೆ

ರಾಮಾಯಣ ಮಹಾಭಾರತಗಳ ಪರಸ್ಪರ ಸಂಬಂಧ ತೀರ ವಿಶಿಷ್ಟವಾದುದು. ರಾಮಾಯಣದ ರಾಮನೇ ಮಹಾಭಾರತದ ಕೃಷ್ಣ, ಅಲ್ಲಿಯ ಹನುಮಂತ ಇಲ್ಲಿಯ ಭೀಮ; ಲಕ್ಷ್ಮಣ, ಬಲರಾಮ; ವಾಲಿ, ಅರ್ಜುನ; ಸುಗ್ರೀವ, ಕರ್ಣ; ಇತ್ಯಾದಿ. ಅಲ್ಲಿ ನಾಯಕನಾದ ರಾಮನ ವನವಾಸ, ಇಲ್ಲಿ ನಾಯಕರಾದ ಪಾಂಡವರ ವನವಾಸ; ಅಲ್ಲಿ ಮಂಥರೆಯ ಕುತಂತ್ರ, ಇಲ್ಲಿ ಶಕುನಿಯ ಕುತಂತ್ರ; ಅಲ್ಲಿ ರಾವಣನಿಂದ ಸೀತಾಪಹರಣಪ್ರಯತ್ನ, ಇಲ್ಲಿ ಜಯದ್ರಥನಿಂದ ದ್ರೌಪದ್ಯಪಹರಣಪ್ರಯತ್ನ; ಅಲ್ಲಿ ರಾಮ–ರಾವಣರ ಯುದ್ಧ, ಇಲ್ಲಿ ಕುರು–ಪಾಂಡವರ ಯುದ್ಧ; ಹೀಗೆ ಕಥಾಸರಣಿಯಲ್ಲೂ ತುಂಬಾ ಸಾಮ್ಯವಿದೆ. ಇದನ್ನು ಮೊದಲ ಬಾರಿಗೆ ಗುರುತಿಸಿ, ವಿವೇಚಿಸಿದ ಶ್ರೇಯಸ್ಸು ಸಹ ಮಹಾಭಾರತತಾತ್ಪರ್ಯನಿರ್ಣಯದ್ದೇ ಆಗಿದೆ. ಮೊದಲು ರಾಮಾವತಾರ, ಅನಂತರ ಕೃಷ್ಣಾವತಾರ; ಎರಡರಲ್ಲೂ ದೇವತೆಗಳದು ಭಗವಂತನ ಸೇವೆ. ಕೃಷ್ಣಾವತಾರ ಅನಂತರದ ಅವತಾರವಾದ್ದರಿಂದ ರಾಮಾವತಾರಕ್ಕಿಂತಲೂ ಕೃಷ್ಣಾವತಾರದಲ್ಲಿ ಅವರ ಸಾಧನೆ ಹೆಚ್ಚು ನಿರ್ಣಾಯಕ. ರಾಮಾವತಾರದಲ್ಲಿ ಅಪೂರ್ಣವಾದ ತಮ್ಮ ಸೇವೆಯನ್ನು ದೇವತೆಗಳು ಕೃಷ್ಣಾವತಾರದಲ್ಲಿ ಪೂರೈಸಿಕೊಂಡರು. ರಾಮಾವತಾರದಲ್ಲಿ ಹೆಚ್ಚಿನ ಪುಣ್ಯವನ್ನು ಗಳಿಸಿದ್ದ ಲಕ್ಷ್ಮಣ ಮೊದಲಾದವರು ಕೃಷ್ಣಾವತಾರದಲ್ಲಿ ಕಳೆದುಕೊಂಡು ತಮ್ಮ ಯೋಗ್ಯತೆಗೆ ಉಳಿಯುವಷ್ಟೇ ಪುಣ್ಯವನ್ನು ಹೊಂದಿದರು. ಆದ್ದರಿಂದಲೇ ರಾಮಾಯಣಕ್ಕಿಂತಲೂ ಮಹಾಭಾರತದ ಮಹತ್ತ್ವ ಹೆಚ್ಚಿನದು; ಮೊದಲಾದ ಅನೇಕ ವಿವರಗಳನ್ನು ನೀಡಿರುವ ಅನನ್ಯಕೃತಿ ಇದು :

ರಾಮಕಾರ್ಯಂ ತು ಯೈಃ ಸಮ್ಯಕ್ ಸ್ವಯೋಗ್ಯಂ ನ ಕೃತಂ ಪುರಾ ।
ತೈಃ ಪೂರಿತಂ ತತ್ ಕೃಷ್ಣಾಯ ಬೀಭತ್ಸ್ವಾದ್ಯೈಸ್ತಮಂತತಃ ॥
ಅಧಿಕಂ ಯೈಃ ಕೃತಂ ತತ್ರ ತೈರೂನಂ ಕೃತಮತ್ರ ತತ್ ।
ಕರ್ಣಾದ್ಯೈರಧಿಕಂ ಯೈಸ್ತು ಪ್ರಾದುರ್ಭಾವದ್ವಯೇ ಕೃತಮ್ ॥
ವಿವಿದಾದ್ಯೈರ್ಹಿ ತೈಃ ಪಶ್ಚಾದ್ವಿಪ್ರತೀಪಂ ಕೃತಂ ಹರೇಃ ।
ಪ್ರಾದುರ್ಭಾವದ್ವಯೇ ಹ್ಯಸ್ಮಿನ್ ಸರ್ವೇಷಾಂ ನಿರ್ಣಯಃ ಕೃತಃ ॥
ನೈತಯೋರಕೃತಂ ಕಿಂಚಿಚ್ಛುಭಂ ವಾ ಯದಿ ವಾಽಶುಭಮ್ ।
ಅನ್ಯತ್ರ ಪೂರ್ಯತೇ ಕ್ವಾಪಿ ತಸ್ಮಾದತ್ರೈವ ನಿರ್ಣಯಃ ॥

ಪಶ್ಚಾತ್ತನತ್ವಾತ್ ಕೃಷ್ಣಸ್ಯ ವೈಶೇಷ್ಯಾತ್ತತ್ರ ನಿರ್ಣಯಃ ।
ಪ್ರಾದುರ್ಭಾವಮಿಮಂ ತಸ್ಮಾತ್ ಗೃಹೀತ್ವಾ ಭಾರತಂ ಕೃತಮ್ ॥ (೨/೪೫-೪೯)

ಪುರಾ ಸ ವಾಲಿಮಾರಣಪ್ರಭೂತದೋಷಕಾರಣಾತ್ ।
ಸಹಸ್ರವರ್ಮನಾಮಿನಾऽಸುರೇಣ ವೇಷ್ಟಿತೋऽಜನಿ ॥
ಯಥಾ ಗ್ರಹೈರ್ವಿದೂಷ್ಯತೇ ಮತಿರ್ನೃಣಾಂ ತಥೈವ ಹಿ ।
ಅಭೂಚ್ಚ ದೈತ್ಯದೂಷಿತಾ ಮತಿರ್ದಿವಾಕರಾತ್ಮನಃ ॥
ತಥಾऽಪಿ ರಾಮಸೇವನಾದ್ಧರೇಶ್ಚ ಸನ್ನಿಧಾನಯುಕ್ ।
ಸುದರ್ಶನೀಯಕರ್ಣತಃ ಸ ಕರ್ಣನಾಮಕೋऽಭವತ್ ॥ (೧೧/೧೫೫-೧೫೭)

ಯದಾ ಸ ಮಾಸದ್ವಿತಯೀ ಬಭೂವ ತದಾ ರೋಹಿಣ್ಯಾಂ ಬಲದೇವೋऽಭಜಾತಃ ।
ಬಲೀ ಗುಣಾಢ್ಯಃ ಸರ್ವವೇದೀ ಯ ಏವ ಸೇವಾಖಿನ್ನೋ ಲಕ್ಷ್ಮಣೋऽಗ್ರೇ ಹರೇರ್ಭೂತ್ ॥
(೧೨/೧೦೬)

ಜಾತಾ ದೇವಕ್ಯಾಂ ಸಾ ಸುಭದ್ರೇತಿ ನಾಮ್ನಾ ಭದ್ರಾ ರೂಪೇಣಾನಕದುಂದುಭೇಸ್ತಾಮ್ ।
ಕೃತ್ವಾ ಪುತ್ರೀಂ ರೋಹಿಣೇ ಸ್ವಾಮರಕ್ಷತ್ಪೂರ್ವಂ ತು ಯಾऽऽಸೀತ್ ತ್ರಿಜಟೈವ ನಾಮ್ನಾ ॥
ಸೀತಾಯಾಃ ಪ್ರಾಜ್‌ನಿತ್ಯಶುಶ್ರೂಷಣಾತ್ ಸಾ ಬಭೂವ ವಿಷ್ಣೋರ್ಭಗಿನೀ ಪ್ರಿಯಾ ಚ ।
ಉಮಾವೇಶಾದ್ರೂಪಗುಣೋಪಪನ್ನಾ ಪದ್ಮೇಕ್ಷಣಾ ಚಂಪಕದಾಮಗೌರೀ ॥ (೨೦/೩೭,೩೮)

ಇದರಂತೆ ರಾಮಾಯಣದ ಖಳನಾಯಕನಾದ ರಾವಣನ ಅನುಯಾಯಿಗಳಾಗಿದ್ದ ಇಂದ್ರಜಿತ್, ಅಕ್ಷ ಮೊದಲಾದ ಅಸುರರು ಮಹಾಭಾರತದ ಖಳನಾಯಕನಾದ ದುರ್ಯೋಧನನ ಅನುಯಾಯಿಗಳಾಗಿ ದುಃಶಾಸನ, ಲಕ್ಷಣ ಮೊದಲಾದವರಾಗಿ ಜನಿಸಿದರು ಎಂಬ ಮಾಹಿತಿ ಇದರಲ್ಲಿದೆ :

ತದಾ ಕಲಿಶ್ಚ ರಾಕ್ಷಸಾ ಬಭೂವುರಿಂದ್ರಜಿನ್ಮುಖಾಃ ।
ವಿಚಿತ್ರವೀರ್ಯನಂದನಪ್ರಿಯೋದರೇ ಹಿ ಗರ್ಭಗಾಃ ॥ (೧೨/೧೯)

ಅವಧ್ಯ ಏವ ಸರ್ವತಃ ಸುಯೋಧನೇ ಸಮುತ್ಥಿತೇ ।
ಘೃತಾಭಪೂರ್ಣಕುಂಭತಃ ಸ ಇಂದ್ರಜಿತ್ ಸಮುತ್ಥಿತಃ ॥
ಸ ದುಃಖಶಾಸನೋऽಭವತ್ತತೋऽತಿಕಾಯಸಂಭವಃ ।
ಸ ವೈ ವಿಕರ್ಣ ಉಚ್ಯತೇ ತತಃ ಖರೋऽಭವದ್ಬಲೀ ॥
ಸ ಚಿತ್ರಸೇನನಾಮಕಸ್ತಥಾऽಪರೇ ಚ ರಾಕ್ಷಸಾಃ ।
ಬಭೂವುರುಗ್ರಪೌರುಷಾ ವಿಚಿತ್ರವೀರ್ಯಜಾತ್ಮಜಾಃ ॥ (೧೨/೪೨-೪೪)

ಉದ್ವಾಹ್ಯ ಕಾಶಿತನಯಾಂ ಗಿರಿಜಾಭವಿಷ್ಣಾಂ ಸಾಕ್ಷಾನ್ನರೇಷು ಜನಿತಾಂ ಪ್ರಥಮಾಮಲಕ್ಷ್ಮೀಮ್ ।
ತಸ್ಯಾಂ ಸುತಂ ತ್ವಜನಯತ್ ಪುರ ಆಸ ಯೋऽಕ್ಷಃ ..... ॥
ಪುತ್ರೋ ಬಭೂವ ಸ ತು ಲಕ್ಷಣನಾಮಧೇಯಃ .....॥ (೧೯/೨೦೧-೨೦೨)

೬) ವಾಯುಜೀವೋತ್ತಮತ್ತ್ವದ ಪ್ರತಿಪಾದನೆ

ರಾಮಾಯಣ, ಮಹಾಭಾರತಗಳಲ್ಲಿ ಶ್ರೀವಾಯುದೇವರ ಪಾತ್ರವನ್ನು ವಿವೇಚಿಸಿರುವ ಶ್ರೀಮದಾಚಾರ್ಯರ ರೀತಿ ಅತ್ಯಂತ ಅಪೂರ್ವ. ರಾಮಾಯಣದಲ್ಲಿ ರಾಮಭಕ್ತರಲ್ಲೆಲ್ಲ ಹನುಮಂತನಿಗೇ ಅಗ್ರಸ್ಥಾನ. ಶ್ರೀಕೃಷ್ಣಾವತಾರದಲ್ಲಿ ಶ್ರೀಕೃಷ್ಣಭಕ್ತರಲ್ಲೆಲ್ಲ ಶ್ರೀಭೀಮಸೇನನಿಗೇ ಅಗ್ರಸ್ಥಾನ. ರಾಮನಿಗೆ ಎಂದೂ ಅಪಚಾರವೆಸಗದ್ದು ಹನುಮಂತನ ಹಿರಿಮೆಯಾದರೆ, ಶ್ರೀಕೃಷ್ಣನಿಗೆ ಎಂದೂ ಅಪಚಾರವೆಸಗದ್ದು ಶ್ರೀಭೀಮಸೇನನ ಹಿರಿಮೆ. ಆದ್ದರಿಂದಲೇ ಅವರಿಬ್ಬರೂ ಶ್ರೀಹರಿಯ ಅಚ್ಛಿನ್ನಭಕ್ತರು. ಇಂದ್ರ ಮೊದಲಾದವರು ವಾಲಿ ಮೊದಲಾದ ರೂಪದಿಂದ ರಾಮನಿಗೆ ಅಪ್ರಿಯರಾಗಿ ವರ್ತಿಸಿದರೆ, ಅವರೇ ಕೃಷ್ಣಾವತಾರದಲ್ಲಿ ಅರ್ಜುನ ಮೊದಲಾದ ರೂಪದಿಂದ ಪ್ರಿಯರೆನ್ನಿಸಿ ಸೇವೆಸಲ್ಲಿಸಿದರು. ಸೂರ್ಯಮೊದಲಾದ ದೇವತೆಗಳು ಸುಗ್ರೀವ ಮೊದಲಾದ ರೂಪದಿಂದ ಶ್ರೀರಾಮಪ್ರಿಯರಾಗಿ ಸೇವೆಸಲ್ಲಿಸಿದರೆ, ಕೃಷ್ಣಾವತಾರದಲ್ಲಿ ಕರ್ಣ ಮೊದಲಾದ ರೂಪದಿಂದ ಅವತರಿಸಿ ದುರ್ಯೋಧನನ ಪಕ್ಷವಹಿಸಿ, ಶ್ರೀಕೃಷ್ಣನಿಗೆ ಅಪ್ರಿಯವೆಸಗಿದರು. ಆದರೆ ಶ್ರೀವಾಯುದೇವರು ಮಾತ್ರ ಹನುಮಂತನಾಗಿ ಶ್ರೀರಾಮಭಕ್ತಾಗ್ರೇಸರನೆನ್ನಿಸಿದರೆ, ಭೀಮಸೇನನಾಗಿ ಶ್ರೀಕೃಷ್ಣಭಕ್ತಾಗ್ರೇಸರೆನ್ನಿಸಿದರು. ಎಂದರೆ ಎರಡು ಅವತಾರಗಳಲ್ಲೂ ಅವರದ್ದೇ ಪ್ರಧಾನ ಭಗವತ್ಕಾರ್ಯಸಾಧಕತ್ವ. ಮಹಾಭಾರತತಾತ್ಪರ್ಯನಿರ್ಣಯದ ಈ ವಿವೇಚನೆ ಎಷ್ಟು ಮಾರ್ಮಿಕ ಎಂಬುದನ್ನು ಗಮನಿಸಬೇಕು :

ಭೂಭಾರಹಾರಿಣೋ ವಿಷ್ಣೋಃ ಪ್ರಧಾನಾಂಗಂ ಹಿ ಮಾರುತಿಃ ।
ಮಾಗಧಾದಿವಧಾದೇವ ದುರ್ಯೋಧನವಧಾದಪಿ ॥ (೨/೧೬)

ತಸ್ಮಾದ್ಬಲಪ್ರವೃತ್ತಸ್ಯ ರಾಮಕೃಷ್ಣಾತ್ಮನೋ ಹರೇಃ ।
ಅಂತರಂಗಂ ಹನೂಮಾಂಶ್ಚ ಭೀಮಸ್ತತ್ಕಾರ್ಯಸಾಧಕೌ ॥ (೨/೩೪)

ರಾಮಾಯಣದಲ್ಲಿ ಹನುಮಂತನಿಗಾಗಿ ಅಗ್ನಿ ಮೊದಲಾದ ಸಮಸ್ತದೇವತೆಗಳೂ ಸುಗ್ರೀವನ ಪಕ್ಷ ವಹಿಸಿದ್ದರೆ, ಮಹಾಭಾರತದಲ್ಲಿ ಭೀಮಸೇನನಿಗಾಗಿ ಆ ಎಲ್ಲ ದೇವತೆಗಳು ಅರ್ಜುನನ ಪಕ್ಷ ವಹಿಸಿದರು. ಹೀಗೆ ವಾಯುದೇವರ ಪಾತ್ರವೇ ಸಕಲರ ಸಾಧನೆಯಲ್ಲೂ ನಿರ್ಣಾಯಕವಾದುದು ಎಂಬ ಮಹತ್ತ್ವದ ವಿಷಯ ಇಲ್ಲಿ ನಿರೂಪಿತವಾಗಿದೆ :

ದೇಹೇಽಪಿ ಯತ್ರ ಪವನೋಽತ್ರ ಹರಿರ್ಯತೋಽಸೌ
ತತ್ರೈವ ವಾಯುರಿತಿ ವೇದವಚಃ ಪ್ರಸಿದ್ಧಮ್ ।
ಕಸ್ಮಿನ್ ವಹಂತ್ವಿತಿ ತಥೈವ ಹಿ ಸೋಽವತಾರೇ
ತಸ್ಮಾತ್ ಸ ಮಾರುತಿಕೃತೇ ರವಿಜಂ ರರಕ್ಷ ॥ (೫/೪೬)

೭) ವಾಯುದೇವರ ಶುದ್ಧಭಾಗವತಧರ್ಮ

ಶೇಷಾದಿದೇವತೆಗಳು ರಾಮಭಕ್ತರಾಗಿದ್ದಾಗಲೂ, ಕೃಷ್ಣಭಕ್ತರಾಗಿದ್ದಾಗಲೂ ಸಹ ಯಾವಾಗಲೂ ಒಂದೇ ರೀತಿಯಾಗಿ ವರ್ತಿಸದೆ, ಕೆಲವೊಮ್ಮೆ ಭಗವಂತನಿಗೆ ವಿರೋಧವಾಗಿಯೇ ವರ್ತಿಸಿರುವರು. ಆದ್ದರಿಂದ ಅವರು ಮೂಲರೂಪದಲ್ಲೂ, ಅವತಾರರೂಪದಲ್ಲೂ ಅಭಿನ್ನ–ಧರ್ಮರು ಎನ್ನಿಸದೇ ಹೋದರು. ಅವರು ಮೂಲತಃ ಭಾಗವತರೇ ಆದರೂ, ಭಗವತ್ಸೇವೆಯನ್ನು ಮಾಡುವಲ್ಲಿ ಒಮ್ಮೊಮ್ಮೆ ತಪ್ಪಿರುವುದುಂಟು. ಆದರೆ ವಾಯುದೇವರು ಮಾತ್ರ ಮೂಲರೂಪಲ್ಲೂ, ಅವತಾರರೂಪಗಳಲ್ಲೂ ಸದಾ ಶುದ್ಧಭಾಗವತಧರ್ಮರತರಾದ 'ಪರಮಭಾಗವತಶಿರೋ–ಮಣಿಗಳು'. ಈ ಬಗೆಯ ಭಗವನ್ನಿಷ್ಠೆ ಗರುಡಾದಿ ಇತರದೇವತೆಗಳಲ್ಲಿ ಕಾಣಸಿಗದು. ಆದ್ದರಿಂದಲೇ ವಾಯುದೇವರು ಪರಶುಕ್ಲತ್ರಯರಲ್ಲಿ ಒಬ್ಬರು ಎಂಬ ವಿವೇಚನೆ ತೀರ ವಿನೂತನ :

ಅನ್ಯೇ ಭಾಗವತತ್ವೇऽಪಿ ಭಿನ್ನಧರ್ಮಾಃ ಕ್ವಚಿತ್ ಕ್ವಚಿತ್ ।
ಸ್ಯಮಂತಕಾರ್ಥೇ ರಾಮೋऽಪಿ ಕೃಷ್ಣಸ್ಯ ವಿಮನಾऽಭವತ್ ॥
ಅವಮೇನೇऽರ್ಜುನಃ ಕೃಷ್ಣಂ ವಿಪ್ರಸ್ಯ ಶಿಶುರಕ್ಷಣೇ ।
ಪ್ರದ್ಯುಮ್ನ ಉದ್ಧವಸ್ಯಾಂಬೋऽನಿರುದ್ಧಾದ್ಯಾಶ್ಚ ಸರ್ವಶಃ ॥
ಹರೇರಿಷ್ಟಂ ಸುಭದ್ರಾಯಾಃ ಫಲ್ಗುನೇ ದಾನಮಂಜಸಾ ।
ಜ್ಞಾತ್ವಾऽಪಿ ರುರುಧುಸ್ಸಮ್ಯಕ್ ಸಾತ್ಯಕಿಃ ಕೃಷ್ಣಸಂಮಿತಮ್ ॥
ಕದಾಚಿನ್ನೃತೇ ಪಾರ್ಥಂ ಧರ್ಮಜೋऽಪಿ ನರಂ ಹರಿಮ್ ।
ಮತ್ವಾऽಬಿಭೇಜ್ಜರಾಸಂಧವಧೇ ಕೃಷ್ಣಮುದೀರಿತುಮ್ ॥
ಬಂಧನಂ ಶಂಕಮಾನೋऽಪಿ ಕೃಷ್ಣಸ್ಯ ವಿದುರೋऽಪಿ ತು ।
ಕೌರವೇಯಸಭಾಮಧ್ಯೇ ನಾವತಾರಮರೋಚಯತ್ ॥
ನಕುಲಃ ಕರದಾನಾಯ ಪ್ರೇಷಯಾಮಾಸ ಕೇಶವೇ ।
ಅವಮೇನೇ ಹರೇರ್ಬುದ್ಧಿಂ ಸಹದೇವಃ ಕುಲಕ್ಷಯಾತ್ ॥
ದೇವಕೀವಸುದೇವಾದ್ಯಾ ಮೇನಿರೇ ಮಾನುಷಂ ಹರಿಮ್ ।
ಭೀಷ್ಮಸ್ತು ಭಾರ್ಗವಂ ರಾಮಮವಮೇನೇ ಯುಯೋಧ ಚ ॥
ದ್ರೋಣಕರ್ಣದ್ರೌಣಿಕೃಪಾಃ ಕೃಷ್ಣಾಭಾವೇ ಮನೋ ದಧುಃ ।
ದೇವಾಶ್ಚಿವಾದ್ಯಾ ಅಪಿ ತು ವಿರೋಧಂ ಚಕ್ರಿರೇ ಕ್ವಚಿತ್ ॥
ಋಷಿಮಾನುಷಗಂಧರ್ವಾ ವಕ್ತವ್ಯಾಃ ಕಿಮತಃ ಪರೇ ।
ಜನ್ಮಜನ್ಮಾಂತರಾಜ್ಞಾನಾದವಜಾನಂತಿ ಯತ್ ಸದಾ ॥
ತಸ್ಮಾದೇಕೋ ವಾಯುರೇವ ಧರ್ಮೇ ಭಾಗವತೇ ಸ್ಥಿತಃ ।
ಲಕ್ಷ್ಮೀಸ್ಸರಸ್ವತೀ ಚೇತಿ ಪರಶುಕ್ಲತ್ರಯಂ ಸ್ಮೃತಮ್ ॥
ಸರ್ವಮೇತಚ್ಚ ಕಥಿತಂ ತತ್ರ ತತ್ರಾಮಿತಾತ್ಮನಾ ।
ವ್ಯಾಸೇನೈವ ಪುರಾಣೇಷು ಭಾರತೇ ಚ ಸ್ವಸಂವಿದಾ ॥ (೧೮/೧೯-೨೯)

೮) ಹನುಮಂತ ಭೀಮಸೇನರ ಪ್ರಾಧಾನ್ಯ

ಶ್ರೀರಾಮಸೇವೆ ಮಾಡಿದ ಸೂರ್ಯಾದಿದೇವತೆಗಳೆಲ್ಲ ಹನುಮಂತನ ಮೂಲಕವೇ ಶ್ರೀರಾಮನನ್ನು ಅರ್ಥಮಾಡಿಕೊಂಡು ಪೂಜಿಸಿದರು. ಅದರಂತೆ ಶ್ರೀಕೃಷ್ಣಸೇವೆ ಮಾಡಿದ ಇಂದ್ರಾದಿದೇವತೆಗಳೆಲ್ಲ ಶ್ರೀಭೀಮಸೇನನ ಮೂಲಕವೇ ಶ್ರೀಕೃಷ್ಣನನ್ನು ಅರ್ಥಮಾಡಿಕೊಂಡು ಆರಾಧಿಸಿದರು. ಶ್ರೀರಾಮಭಕ್ತನಾದ ಹನುಮಂತನನ್ನೇ ಅನುಸರಿಸಿ ಸುಗ್ರೀವಾದಿರೂಪದಿಂದ ಸೂರ್ಯಾದಿದೇವತೆಗಳು ಅನುಸರಿಸಿದರೆ, ಶ್ರೀಕೃಷ್ಣಭಕ್ತನಾದ ಭೀಮಸೇನನನ್ನೇ ಅರ್ಜುನಾದಿ–ರೂಪದಿಂದ ಅನುಸರಿಸಿ ಕೃತಕೃತ್ಯರಾದರು. ಎಂದರೆ ಭಗವಂತನಿಗೆ ಅತ್ಯಂತಪ್ರಿಯರಾಗಿ ವರ್ತಿಸಲು ಶ್ರೀವಾಯುದೇವರನ್ನು ಅನುಸರಿಸುವುದೇ ಖಚಿತವಾದ ಮಾರ್ಗ ಎಂದು ಅವರು ಸೂಚಿಸಿದರು. ಆದ್ದರಿಂದಲೇ ರಾಮಾವತಾರದಲ್ಲಿ ಹನುಮಂತನ ಪಕ್ಷವನ್ನು ವಹಿಸಿದ ಅವರೆಲ್ಲ ಕೃಷ್ಣಾವತಾರದಲ್ಲಿ ಭೀಮಸೇನನ ಪಕ್ಷವನ್ನು ವಹಿಸಿದರು. ಹಾಗೆ ಮಾಡದ ವಾಲಿ ರಾವಣಸಖ್ಯವನ್ನು ಹೊಂದಿ, ರಾಮಾಯಣದಲ್ಲಿ ಹತನಾದರೆ, ಕರ್ಣ ಮಹಾಭಾರತದಲ್ಲಿ ದುರ್ಯೋಧನಸಖ್ಯವನ್ನು ಹೊಂದಿ ಹತನಾದ. ಈ ವಿವೇಚನೆಯೂ ಮಹಾಭಾರತತಾತ್ಪರ್ಯನಿರ್ಣಯದ್ದೇ ಕೊಡುಗೆ :

ಏವಂ ಸ ಕೃಷ್ಣತನುರರ್ಜುನಮಪ್ಯರಕ್ಷದ್ಭೀಮಾರ್ಥಮೇವ ತದರಿಂ ರವಿಜಂ ನಿಹತ್ಯ ।
ಪೂರ್ವಂ ಹಿ ಮಾರುತಿಮವಾಪ ರವೇಃ ಸುತೋಽಯಂ ತೇನಾಸ್ಯ ವಾಲಿನಮಹನ್ ರಘುಪಃ ಪ್ರತೀಪಮ್ ॥
ಏವಂ ಸುರಾಶ್ಚ ಪವನಸ್ಯ ವಶೇ ಯತೋಽತಃ ಸುಗ್ರೀವಮತ್ರ ತು ಪರತ್ರ ಚ ಶಕ್ರಸೂನುಮ್ ।
ಸರ್ವೇ ಶ್ರಿತಾ ಹನುಮತಸ್ತದನುಗ್ರಹಾಯ ತತ್ಸಾಗಮದ್ರಘುಪತಿಃ ಸಹಲಕ್ಷ್ಮಣೇನ ॥
(೫/೪೬-೪೮)

ಭೀಮಾರ್ಥಂ ಕೇಶವೋಽನ್ಯೇ ಚ ದೇವಾಃ ಫಲ್ಗುನಪಕ್ಷಿಣಃ ॥
ಆಸನ್ ಯಥೈವ ರಾಮಾದ್ಯಾಸ್ತಂಗ್ರಹೇಣ ಹನೂಮತಃ ।
ಸುರಾಸ್ತುಗ್ರೀವಪಕ್ಷಸ್ಥಾ ಪೂರ್ವಮಾಸಂಸ್ತಥೈವ ಹಿ ॥
ತದರ್ಥಮೇವ ಭೀಮಸ್ಯ ಹ್ಯನುಜತ್ವಂ ಸುರೇಶ್ವರಃ ।
ಆಪ ಪೂರ್ವಾನುತಾಪೇನ ತೇನ ಭೀಮಸ್ತಥಾಽಕರೋತ್ ॥
ದುರ್ಯೋಧನಾರ್ಥಂ ಕರ್ಣಸ್ಯ ಪಕ್ಷಿಣೋ ದೈತ್ಯದಾನವಾಃ ।
ಆಸುಸ್ಸರ್ವೇ ಗ್ಲಹಾವೇತಾವಾಸತುಃ ಕರ್ಣಫಲ್ಗುನೌ ॥ (೧೮/೫೪- ೫೭)

೯) ಕೃಷ್ಣಕಥೆ ಪಾಂಡವಕಥೆಗಳ ಕಾಲಾನುಕ್ರಮದ ಸಮನ್ವಯ

ಮಹಾಭಾರತ, ಹರಿವಂಶ, ವಿಷ್ಣುಪುರಾಣ ಮತ್ತು ಭಾಗವತ ಮೊದಲಾದವುಗಳಲ್ಲಿ ಕೃಷ್ಣಕಥೆಯೊಂದಿಗೆ ಪಾಂಡವರ ಕಥೆಯೂ ಬಂದಿದೆ. ಅದರಲ್ಲೂ ಮಹಾಭಾರತ ವಿಶೇಷವಾಗಿ

ಪಾಂಡವಕಥೆಯಾದರೆ, ಭಾಗವತಾದಿಗಳು ಪ್ರಧಾನವಾಗಿ ಕೃಷ್ಣಕಥೆಯಾಗಿವೆ. ಆ ಎರಡು ಕಥೆಗಳಲ್ಲು ಸಹ ಕಾಲಕ್ರಮದ ಹೊಂದಾಣಿಕೆ ಹೇಗೆ? ಎಂದರೆ ಕೃಷ್ಣಾವತಾರವಾದಾಗ ಪಾಂಡವರು ಎಲ್ಲಿದ್ದರು? ಪಾಂಡವರ ವನವಾಸಕಾಲಕ್ಕೆ ಕೃಷ್ಣಕಥೆ ಯಾವ ಹಂತದಲ್ಲಿತ್ತು? ರುಕ್ಮಿಣೀಕಲ್ಯಾಣದ ಪ್ರಸಂಗದಲ್ಲಿ ಪಾಂಡವಕಥೆಯ ಘಟ್ಟ ಯಾವುದಾಗಿತ್ತು? ಮೊದಲಾದ ಪ್ರಶ್ನೆಗಳು ಉದ್ಭವಿಸುವುದು ಸಹಜ. ಈ ದಿಕ್ಕಿನಲ್ಲಿ ವಿಚಾರ ಮಾಡಿ, ಸಮರ್ಪಕ ಉತ್ತರ ನೀಡಿದ ವಿಕಮಾತ್ರ ಕೃತಿ ಎಂಬ ಹಿರಿಮೆಯೂ ಮಹಾಭಾರತತಾತ್ಪರ್ಯನಿರ್ಣಯಕ್ಕೇ ಸಲ್ಲುತ್ತದೆ. ಹನ್ನೊಂದನೆಯ ಅಧ್ಯಾಯದಿಂದ ಮುಂದಿನ ಎಲ್ಲ ಅಧ್ಯಾಯಗಳಲ್ಲೂ ಹೀಗೆ ಕೃಷ್ಣಕಥೆ, ಪಾಂಡವಕಥೆಗಳನ್ನು ಕಾಲಕ್ರಮದಲ್ಲಿ ಸ್ವಲ್ಪವೂ ಗೊಂದಲವಾಗದಂತೆ ನಿರೂಪಿಸಿರುವ ಅಪೂರ್ವ ಹಿರಿಮೆ ಇದರದು. ಶ್ರೀಕೃಷ್ಣ ನರಕಾಸುರನನ್ನು ವಧಿಸಿದ್ದು ಪಾಂಡವರು ಇಂದ್ರಪ್ರಸ್ಥದಲ್ಲಿ ರಾಜ್ಯವಾಳುತ್ತಿದ್ದಾಗ; ಪೌಂಡ್ರಕವಾಸುದೇವಾದಿಗಳನ್ನು ಸಂಹರಿಸಿದ್ದು ಪಾಂಡವರು ವನವಾಸದಲ್ಲಿದ್ದಾಗ; ಇವೇ ಮೊದಲಾದ ಅನೇಕಮಹತ್ತ್ವದ ವಿಚಾರಗಳು ಇದರಿಂದ ಸ್ಫುಟಪಡುವವು.

೧೦) ರಾಮಾಯಣ ಮಹಾಭಾರತಗಳಲ್ಲಿನ ಸಮಸ್ಯೆಗಳ ವಿಶ್ಲೇಷಣೆ

ರಾಮಾಯಣ ಮತ್ತು ಮಹಾಭಾರತಗಳಲ್ಲಿ ಅತ್ಯಂತ ಜಟಿಲವೆನ್ನಿಸುವ ಅನೇಕಸಮಸ್ಯೆಗಳು ತುಂಬಿವೆ. ವಾಲಿವಧೆ, ಶಂಬೂಕವಧೆ, ಸೀತಾಪರಿತ್ಯಾಗ ಮುಂತಾದ ರಾಮಾಯಣದ ಪ್ರಸಂಗಗಳು ಮೇಲ್ನೋಟಕ್ಕೆ ಅಪರಿಹಾರ್ಯವೆನ್ನಿಸಬಹುದಾದ ಸಂಗತಿಗಳು. ಅವಕ್ಕೆಲ್ಲ ಅತ್ಯಂತಸೂಕ್ತವೆನ್ನಿಸುವ ಪರಿಹಾರಗಳನ್ನು ಶಾಸ್ತ್ರದ ಹಿನ್ನೆಲೆಯಲ್ಲಿ ನೀಡಿರುವುದು ಮಹಾಭಾರತತಾತ್ಪರ್ಯನಿರ್ಣಯದ ಮತ್ತೊಂದು ಅಪೂರ್ವತೆ. ಉದಾಹರಣೆಗೆ ಶಂಬೂಕವಧ ಪ್ರಸಂಗವನ್ನು ಅವರು ವಿವೇಚಿಸಿರುವ ರೀತಿಯನ್ನು ಗಮನಿಸಬಹುದು :

ಅಥ ಶೂದ್ರತಪಶ್ಚರ್ಯಾನಿಹತಂ ವಿಪ್ರಪುತ್ರಕಮ್ ।
ಉಜ್ಜೀವಯಾಮಾಸ ವಿಭುರ್ಹತ್ವಾ ತಂ ಶೂದ್ರತಾಪಸಮ್ ॥
ಜಂಘನಾಮಾऽಸುರಃ ಪೂರ್ವಂ ಗಿರಿಜಾವರದಾನತಃ ।
ಬಭೂವ ಶೂದ್ರಃ ಕಲ್ಪಾಯುಃ ಸ ಲೋಕಕ್ಷಯಕಾಮ್ಯಯಾ ॥
ತಪಶ್ಚಚಾರ ದುರ್ಬುದ್ಧಿರಿಚ್ಛನ್ನಾಹೇಶ್ವರಂ ಪದಮ್ ।
ಅನನ್ಯವಧ್ಯಂ ತಂ ತಸ್ಮಾಜ್ಜಘಾನ ಪುರುಷೋತ್ತಮಃ ॥ (೯/೧೯-೨೧)

ಎಂದರೆ ಶಂಬೂಕನನ್ನು ರಾಮ ವಧಿಸಿದ್ದು ಅವನು ಶೂದ್ರತಪಸ್ವಿ ಎಂಬ ಕಾರಣದಿಂದಲ್ಲ. ಅವನು ಮೂಲತಃ ಜಂಘ ಎಂಬ ಅಸುರ. ಪಾರ್ವತಿಯ ವರವನ್ನು ಪಡೆದು, ಶೂದ್ರನಾಗಿ ಜನಿಸಿ, ಕಲ್ಪಾಯುಷ್ಯವನ್ನೂ ಹೊಂದಿ, ಘೋರತಪಸ್ಸಿನಲ್ಲಿ ತೊಡಗಿದ್ದ. ಅವನ ತಪಸ್ಸಿನ ಉದ್ದೇಶ ತನಗೆ

ವರ ನೀಡಿದ ಪಾರ್ವತಿಗೇ ಪತಿಯಾಗುವುದು. ಎಂದರೆ ಅವನು ಮೂಲತಃ ಶೂದ್ರನಲ್ಲ, ರಾಕ್ಷಸ; ಅವನ ತಪಸ್ಸಿನ ಉದ್ದೇಶ ಸಾತ್ತ್ವಿಕವಾಗಿರದೇ ಅತ್ಯಂತ ತಾಮಸವಾಗಿದ್ದಿತು. ಅದಕ್ಕೆಂದೇ ಶ್ರೀರಾಮನಿಂದ ಅವನ ಸಂಹಾರ. ವಾಲ್ಮೀಕಿರಾಮಾಯಣದಲ್ಲೂ ಈ ಅಂಶ ಸೂಚ್ಯವಾಗಿ ಬಂದಿದೆ :

ದೇವತ್ವಂ ಕಾಮಯೇ ರಾಮ ಸಶರೀರೋ ಮಹಾಯಶಃ ।
ನ ಮಿಥ್ಯಾऽಹಂ ವದೇ ರಾಮ ದೇವಲೋಕಜಿಗೀಷಯಾ ॥

– ವಾಲ್ಮೀಕಿರಾಮಾಯಣ (೭/೭೬/೨೩)

ಮಹಾಭಾರತವಂತು ಸಮಸ್ಯೆಗಳ ಬೀಡು. ದ್ರೌಪದಿಯ ಪಂಚಪತಿತ್ವ, ಭೀಮಸೇನನ ದುಃಶಾಸನರಕ್ತಪಾನ, ದುರ್ಯೋಧನನ ಊರುಭಂಗ ಮೊದಲಾದ ಮುಖ್ಯಸಮಸ್ಯೆಗಳನ್ನು ಪರಿಹರಿಸಲು ಆ ಮುಂಚಿನ ಯಾರಿಂದಲೂ ಸಾಧ್ಯವಾಗಿರಲಿಲ್ಲ, ಬದಲಾಗಿ ಅವೆಲ್ಲ ತಪ್ಪೇ ಎಂಬ ಭಾವನೆ ಬರುವಂತೆಯೇ ನಿರೂಪಿಸಿದವರೇ ಹೆಚ್ಚು. ಆದರೆ ಮಹಾಭಾರತತಾತ್ಪರ್ಯನಿರ್ಣಯ ಇವಕ್ಕೆಲ್ಲ ಮೂಲಗ್ರಂಥಗಳ ಆಧಾರದಿಂದಲೇ ನೀಡಿರುವ ಪರಿಹಾರ ತೀರ ವಿನೂತನವೂ, ಉಚಿತವೂ ಆದುದು. ಮಹಾಭಾರತತಾತ್ಪರ್ಯನಿರ್ಣಯ ಎಂಬ ಇದರ ಹೆಸರು ಅದೆಷ್ಟು ಔಚಿತ್ಯಪೂರ್ಣ ಎನ್ನುವುದನ್ನು ಇಂತಹ ವಿವೇಚನೆಗಳಿಂದ ಅರ್ಥಮಾಡಿಕೊಳ್ಳಬಹುದು.

ಕೌರವಸಭೆಯಲ್ಲಿ ದ್ರೌಪದಿಯು ಭೀಷ್ಮಾದಿಗಳನ್ನು ಪ್ರಶ್ನಿಸಿದಳು: 'ಯುಧಿಷ್ಠಿರನು ದ್ಯೂತದಲ್ಲಿ ಸೋತಿದ್ದು ಮೊದಲು ನನ್ನನ್ನೊ? ಅಥವಾ ತನ್ನನ್ನೋ?'. ಈ ಪ್ರಶ್ನೆಯ ಔಚಿತ್ಯವನ್ನು ವಿಶ್ಲೇಷಿಸುವುದರಲ್ಲಿ ಎಲ್ಲ ವಿಮರ್ಶಕರೂ ಸೋತವರೇ. ಆದರೆ ಇದರ ಬಗ್ಗೆ ತಾತ್ಪರ್ಯನಿರ್ಣಯ ನೀಡುವ ಬೆಳಕು ಎಷ್ಟು ಅಪೂರ್ವ ಎಂಬುದನ್ನು ಗಮನಿಸಬೇಕು. ಪತಿ ಎನ್ನಿಸಿದವನು ತನ್ನ ಪತ್ನಿಯನ್ನು ದ್ಯೂತದಲ್ಲಿ ಸೋಲುವ ಹಕ್ಕನ್ನು ಹೊಂದಿಯೇ ಇಲ್ಲ. ಆದ್ದರಿಂದ ಅವನು ಮೊದಲು ನನ್ನನ್ನು ಸೋಲುವುದು ಧರ್ಮವಲ್ಲ. ತನ್ನನ್ನು ಸೋತಾದ ಮೇಲೆ ಸಹ ಅವನು ತನ್ನ ಪತ್ನಿಯನ್ನು ಸೋಲುವಂತಿಲ್ಲ. ತಾನು ಸೋಲುವಾಗಲೇ ಅರ್ಧಾಂಗಿಯಾದ ತನ್ನ ಪತ್ನಿಯ ಸಮೇತನಾಗಿಯೇ ಸೋತಿರುತ್ತಾನೆ. ಪ್ರತ್ಯೇಕವಾಗಿ ಅವಳನ್ನು ಪಣವಾಗಿಟ್ಟು ಸೋಲುವ ಹಕ್ಕು ಅವನಿಗೆ ಇಲ್ಲವೇ ಇಲ್ಲ. ಪತ್ನಿ ಎಂದಿಗೂ ಸಹ ಅಧೀನಳಾಗಿರುವುದು ತನ್ನ ಪತಿಗೇ ಹೊರತು ಮತ್ತೊಬ್ಬ ಗಂಡಸಿಗಲ್ಲ:

ಕಥಂ ದ್ಯೂತೇ ಜಿತಾ ಚಾಹಮಜಿತೇ ಸ್ವಪತೌ ಸ್ಥಿತೇ।
ಸಮಾನಧರ್ಮಿಣೀಮಾಹುರ್ಭಾರ್ಯಾಂ ಯಸ್ಮಾದ್ವಿಪಶ್ಚಿತಃ ॥
ಸಹೈವ ಕರ್ಮ ಕರ್ತವ್ಯಂ ಪತೌ ದಾಸೇ ಹಿ ಭಾರ್ಯಯಾ।
ದಾಸೀತ್ವಂ ನ ಪೃಥಙ್ ಮೇ ಸ್ಯಾತ್ ಜಿತೇऽಪಿ ಹಿ ಪತೌ ತತಃ ॥ (೨೧/೩೩೦, ೩೩೧)

ಭೀಮಸೇನನು ರಕ್ತಪಾನ ಮಾಡಲೇ ಇಲ್ಲ. ತನ್ನ ಪ್ರತಿಜ್ಞೆಯನ್ನು ಪೂರೈಸಲೆಂದು ಪರಸ್ತ್ರೀಯರನ್ನು ಕೆಣಕುವ ದುಷ್ಪಜನರ ಮನಸ್ಸಿನಲ್ಲಿ ಭೀತಿ ಹುಟ್ಟಿಸಲೆಂದು ಕುಡಿದಂತೆ ನಟಿಸಿದನು ಮಾತ್ರ. ಇದನ್ನು ಮೂಲಭಾರತದ ಹಿನ್ನೆಲೆಯಲ್ಲಿ ಅವರು ಸಮರ್ಥಿಸಿರುವುದಂತೂ ತೀರ ವಿಶಿಷ್ಟವಾದುದು :

ಇತ್ಯುಕ್ತಾ ತಂ ಪುನಃ ಪ್ರಾಹ ಕಥಂ ತೇ ನರಶೋಣಿತಮ್ ।
ಪೀತಂ ನರೇಣೈವ ಸತಾ ನ ಪೀತಮಿತಿ ಸೋಽಬ್ರವೀತ್ ॥
ದಂತಾಂತರಂ ನ ಮೇ ಪ್ರಾಪ ಶೋಣಿತಂ ತತ್ ಸುತಸ್ಯ ತೇ ।
ಪ್ರತಿಜ್ಞಾಪಾಲನಾಯಾಪಿ ಪ್ರತಿಕರ್ತುಂ ಚ ತತ್ಕೃತಮ್ ॥
ಭೀಷಣಾಯ ಚ ಶತ್ರೂಣಾಂ ಪೀತವಚ್ಚ ಪ್ರದರ್ಶಿತಮ್ ।
ವೇದದೃಷ್ಟ್ಯಾ ಧರ್ಮೋಽಯಮಿತಿಪಾಪಜನಂ ಪ್ರತಿ ॥ (೨೮/೨೧೬-೨೧೮)

ಹೀಗೆ ದುಃಶಾಸನವಧೆಯ ಕಾರ್ಯವು ನಿಂದ್ಯವಾಗದೆ, ರಣಯಜ್ಞರೂಪವಾಗಿ ವಂದ್ಯವೇ ಆಯಿತು ಎಂದೂ ಸಹ ನಿರೂಪಿಸಿರುವರು :

ದಂತಾಂತರಂ ನ ಪ್ರವಿವೇಶ ತಸ್ಯ ರಕ್ತಂ ಹ್ಯಪೇಯಂ ಪುರುಷಸ್ಯ ಜಾನತಃ ॥
ತಥಾಽಪಿ ಶತ್ರುಪ್ರತಿಭೀಷಣಾಯ ಪಪಾವಿವಾಸ್ಯಾದ್ಯ ಪುನಃ ಪುನರ್ಭೃಶಮ್ ।
ಸ್ಮರನ್ನೃಸಿಂಹಂ ಭಗವಂತಮೀಶ್ವರಂ ಸ ಮನ್ಯುಸೂಕ್ತಂ ಚ ದದರ್ಶ ಭಕ್ತ್ಯಾ ॥
'ಯಸ್ತೇ ಮನ್ಯೋ' ಇತ್ಯತೋ ನಾರಸಿಂಹಂ ಸೋಮಂ ತಸ್ಮೈ ಚಾರ್ಪಯಚ್ಛೋಣಿತಾಖ್ಯಮ್ ।
ಯುದ್ಧಾಖ್ಯಯಜ್ಞೇ ಸೋಮಬುದ್ಧ್ಯಾಽರಿವಕ್ಷ ಇಹೇತಿ ಸಾಮ್ನಾ ಗದಯಾ ವಿಭಿಂದನ್ ॥
– (೨೭/೧೪೭-೧೪೯)

೧೧) ಸಂಶೋಧನದೃಷ್ಟಿ

ರಾಮಾಯಣ, ಮಹಾಭಾರತಗಳ ಅರ್ಥನಿರ್ಣಯದಂತೆ ಅವುಗಳ ಪಾಠನಿರ್ಣಯವೂ ಅತ್ಯಂತ ಜಟಿಲ. ಆ ಜಟಿಲತೆಯನ್ನು ಸಕಾರಣವಾಗಿ ವಿಶ್ಲೇಷಿಸುವ ಅವರ ವಾಕ್ಯಗಳು ಗ್ರಂಥಸಂಪಾದನಾಶಾಸ್ತ್ರಕ್ಕೆ ಸಂದಿರುವ ಅತ್ಯಂತ ಅಪೂರ್ವವಾದ ಕೊಡುಗೆ :

ಕ್ವಚಿದ್ ಗ್ರಂಥಾನ್ ಪ್ರಕ್ಷಿಪಂತಿ ಕ್ವಚಿದಂತರಿತಾನಪಿ ।
ಕುರ್ಯುಃ ಕ್ವಚಿಚ್ಚ ವ್ಯತ್ಯಾಸಂ ಪ್ರಮಾದಾತ್ ಕ್ವಚಿದನ್ಯಥಾ ॥
ಅನುತ್ಸನ್ನಾ ಅಪಿ ಗ್ರಂಥಾ ವ್ಯಾಕುಲಾ ಇತಿ ಸರ್ವಶಃ ।
ಉತ್ಸನ್ನಾಃ ಪ್ರಾಯಶಃ ಸರ್ವೇ ಕೋಟ್ಯಂಶೋಽಪಿ ನ ವರ್ತತೇ ॥
ಗ್ರಂಥೋಽಪ್ಯೇವಂ ವಿಲುಲಿತಃ ಕಿಮರ್ಥೋ ದೇವದುರ್ಗಮಃ ।
ಕಲಾವೇವಂ ವ್ಯಾಕುಲಿತೇ ನಿರ್ಣಯಾಯ ಪ್ರಚೋದಿತಃ ॥
ಹರಿಣಾ ನಿರ್ಣಯಾನ್ವಚ್ಮಿ ವಿಜಾನಂಸ್ತತ್ಪ್ರಸಾದತಃ ।

ಶಾಸ್ತ್ರಾಂತರಾಣಿ ಸಂಜಾನನ್ ವೇದಾಂಶ್ಚಾಸ್ಯ ಪ್ರಸಾದತಃ ॥
ದೇಶೇ ದೇಶೇ ತಥಾ ಗ್ರಂಥಾನ್ ದೃಷ್ಟ್ವಾ ಚೈವ ಪೃಥಗ್ವಿಧಾನ್ ।
ಯಥಾ ಸ ಭಗವಾನ್ ವ್ಯಾಸಃ ಸಾಕ್ಷಾನ್ನಾರಾಯಣಃ ಪ್ರಭುಃ ॥
ಜಗಾದ ಭಾರತಾದ್ಯೇಷು ತಥಾ ವಕ್ಷ್ಯೇ ತದೀಕ್ಷಯಾ ।
ಸಂಕ್ಷೇಪಾತ್ ಸರ್ವಶಾಸ್ತ್ರಾರ್ಥಂ ಭಾರತಾರ್ಥಾನುಸಾರತಃ ॥ (೨/೩-೮)

ಯಾವುದೇ ಗ್ರಂಥ ಜನಪ್ರಿಯವಾಗಿ ಕಾಲ ಕಳೆಯುತ್ತಾ ಹೋದಂತೆ ಮೇಲೆ ಸೂಚಿಸಿದ ಕಾರಣಗಳಿಂದ ಅವುಗಳ ಪಾಠಶುದ್ಧಿ ಮಲಿನವಾಗುತ್ತಾ ಹೋಗುತ್ತದೆ. ಇಂತಹ ಪ್ರಸಂಗ ಸಂಸ್ಕೃತಗ್ರಂಥಗಳಲ್ಲಂತೂ ತುಂಬಾ ಹೆಚ್ಚು. ಪುರಾಣಪ್ರಪಂಚವಂತೂ ಅಪಪಾಠದ ಹಾವಳಿಗೆ ವಿಶೇಷವಾಗಿ ಗುರಿಯಾಗಿದೆ. ವಾಲ್ಮೀಕಿರಾಮಾಯಣವೂ ಇದಕ್ಕೆ ಹೊರತಲ್ಲ. ಮೂಲ–ರಾಮಾಯಣವಂತೂ ಇಂದು ಸಂಪೂರ್ಣ ಲುಪ್ತವಾಗಿದೆ. ಮಹಾಭಾರತದ ಪಾಠಾಂತರಗಳಂತೂ ಊಹೆಗೆ ನಿಲುಕದಷ್ಟು ಅಸಂಖ್ಯ. ದಾಕ್ಷಿಣಾತ್ಯ ಹಾಗೂ ಔತ್ತರೇಯ ಎಂಬ ಎರಡು ಸ್ಪಷ್ಟ ಪಾಠಾಂತರಗಳನ್ನು ಸಂಶೋಧಕರು ಗಮನಿಸಿದ್ದಾರೆ. ಅವುಗಳಲ್ಲಿ ಕಂಡುಬರುವ ವ್ಯತ್ಯಾಸವೂ ಸಾಮಾನ್ಯವಾದುದೇನಲ್ಲ. ಈ ಎಲ್ಲ ಹಿನ್ನೆಲೆಯಲ್ಲಿ ಪಾಠಶುದ್ಧಿಯ ಬಗ್ಗೆ ಶ್ರೀಮಧ್ವಾಚಾರ್ಯರು ನುಡಿದಿರುವ ಮೇಲಿನ ಮಾತುಗಳು ಹೆಚ್ಚಿನ ಮಹತ್ತ್ವವನ್ನು ಪಡೆದುಕೊಳ್ಳುತ್ತವೆ. ಗ್ರಂಥಸಂಪಾದನಾಶಾಸ್ತ್ರದ ಬಗೆಗಿನ ಇತ್ತೀಚಿನ ಪ್ರಮುಖಗ್ರಂಥಗಳೂ ಸಹ ಮಧ್ವಾಚಾರ್ಯರ ಈ ಮಾತುಗಳನ್ನು ಉಲ್ಲೇಖಿಸಿರುವುದು ಗಮನಾರ್ಹ.

ಇಂತಹ ಪ್ರಸಂಗದಲ್ಲಿ ಪಾಠನಿರ್ಣಯಕ್ಕೆ ಅನುಸರಿಸಬೇಕಾದ ಮಾರ್ಗವನ್ನು ಅವರು ಸೂಚಿಸಿ, ಆ ರೀತಿಯಲ್ಲೇ ತಾವು ಶುದ್ಧಪಾಠವನ್ನು ನಿರ್ಣಯಿಸಿ, ಅರ್ಥವನ್ನು ವಿಶ್ಲೇಷಿಸಿರುವುದಾಗಿ ಅವರು ನೀಡಿರುವ ವಿವರಣೆ ತುಂಬಾ ಗಮನಾರ್ಹವಾದುದು :

ಶಾಸ್ತ್ರಾಂತರಾಣಿ ಸಂಜಾನನ್ ವೇದಾಂಶ್ಚಾಸ್ಯ ಪ್ರಸಾದತಃ ॥
ದೇಶೇ ದೇಶೇ ತಥಾ ಗ್ರಂಥಾನ್ ದೃಷ್ಟ್ವಾ ಚೈವ ಪೃಥಗ್ವಿಧಾನ್ ।
ಯಥಾ ಸ ಭಗವಾನ್ ವ್ಯಾಸಃ ಸಾಕ್ಷಾನ್ನಾರಾಯಣಃ ಪ್ರಭುಃ ॥
ಜಗಾದ ಭಾರತಾದ್ಯೇಷು ತಥಾ ವಕ್ಷ್ಯೇ ತದೀಕ್ಷಯಾ ।
ಸಂಕ್ಷೇಪಾತ್ ಸರ್ವಶಾಸ್ತ್ರಾರ್ಥಂ ಭಾರತಾರ್ಥಾನುಸಾರತಃ ॥ – (೨/೬-೮)

ಶ್ರೀಮದಾಚಾರ್ಯರ ಈ ನಿರ್ಣಯಕ್ರಮ ಅದೆಷ್ಟು ಪರಿಣಾಮಕಾರಿ ಎಂಬುದನ್ನು ಪೂನಾ ಭಂಡಾರ್‌ಕರ್ ಸಂಸ್ಥೆಯ ಮಹಾಭಾರತದ ಪರಿಷ್ಕೃತ ಪಾಠದ ಪ್ರಕಾಶನವನ್ನು ಗಮನಿಸಿದವರಿಗೆ ಮನವರಿಕೆಯಾಗುತ್ತದೆ. ಈ ತಾತ್ಪರ್ಯನಿರ್ಣಯದ ಬೆಳಕಿನಲ್ಲಿ ಮಹಾಭಾರತದ ಪಾಠನಿರ್ಣಯಕ್ಕೆ ಕೈಹಾಕಿದಾಗ ಇದರ ಉಪಕಾರ ಅದೆಷ್ಟು ಮಹತ್ತರ ಎಂಬುದು ತಿಳಿಯುವದು.

೧೨) ಅಂಶಾವತಾರಗಳ ನಿರೂಪಣೆ

ರಾಮಾಯಣ, ಮಹಾಭಾರತ ಹಾಗೂ ಪುರಾಣಗಳ ಮತ್ತೊಂದು ವೈಶಿಷ್ಟ್ಯ ಅಲ್ಲಿ ಕಂಡುಬರುವ ದೇವದೈತ್ಯರ ಅಂಶಾವತಾರಗಳ ವಿವರಣೆ. ಮಹಾಭಾರತದ ಆದಿಪರ್ವದಲ್ಲಂತೂ ಅಂಶಾವತರಣಪರ್ವ ಎಂಬ ಉಪಪರ್ವವೇ ಉಂಟು. ಅದರ ಇತರ ಸ್ಥಳಗಳಲ್ಲೂ, ಪುರಾ–ಣಾಂತರಗಳಲ್ಲೂ ಅವುಗಳ ಉಲ್ಲೇಖ ವಿಶೇಷವಾಗಿ ಕಂಡುಬರುತ್ತವೆ. ರಾಮಾಯಣ, ಮಹಾಭಾರತಗಳ ಪ್ರಮುಖ ದೇವದೈತ್ಯರ ಅಂಶಾವತಾರ ವಿಶೇಷವಾಗಿ ಪ್ರಚಾರದಲ್ಲಿದೆ. ಆದರೆ ಅವನ್ನೆಲ್ಲ ವ್ಯವಸ್ಥಿತವಾಗಿ ನಿರೂಪಿಸಿರುವ ಅಸಾಧಾರಣ ಹಿರಿಮೆ ಮಹಾಭಾರತತಾತ್ಪರ್ಯ–ನಿರ್ಣಯದ್ದು. ಮಹಾಭಾರತವನ್ನು ಕುರಿತು ಗ್ರಂಥ ರಚಿಸಿರುವ ಬೇರಾರೂ ತೀರ ಸಾಮಾನ್ಯ ರೀತಿಯಲ್ಲೂ ಇವುಗಳ ವಿವರಣೆಯ ಬಗ್ಗೆ ಯತ್ನಿಸಿಲ್ಲ. ಆದರೆ ಶ್ರೀಮಧ್ವರು ನೀಡಿದ ವಿವರಗಳು ತುಂಬಾ ಸಮಗ್ರವಾಗಿದ್ದು, ಅವುಗಳನ್ನೆಲ್ಲ ಶ್ರೀನಾರಾಯಣಪಂಡಿತರು ತಮ್ಮ 'ಅಂಶಾವತಾರ' ಎಂಬ ಕೃತಿಯಲ್ಲಿ ಅಕಾರಾದಿಕ್ರಮದಲ್ಲಿ ಪಟ್ಟಿಮಾಡಿ ಕೊಟ್ಟಿರುವರು (ಪರಿಶಿಷ್ಟದಲ್ಲಿ ಈ ಕೃತಿಯನ್ನು ಸಮಗ್ರವಾಗಿ ಕೊಡಲಾಗಿದೆ).

೧೩) ವರ ಶಾಪಗಳ ವಿವೇಚನೆ

ಇತಿಹಾಸ, ಪುರಾಣಪ್ರಪಂಚದ ಮತ್ತೊಂದು ವೈಶಿಷ್ಟ್ಯ ಅವುಗಳಲ್ಲಿ ಉದ್ದಕ್ಕೂ ಕಂಡುಬರುವ ವರಶಾಪಗಳ ವಿವರಗಳು. ಸಾಮಾನ್ಯವಾಗಿ ದೈತ್ಯರ ಉನ್ನತಿಗೆ ವರಗಳು ಕಾರಣವಾಗಿದ್ದರೆ, ದೇವತೆಗಳ ಕ್ಲೇಶಗಳಿಗೆ ಅವರಿಗೆ ಒದಗಿದ್ದ ಶಾಪಗಳು ಕಾರಣವಾಗಿರುತ್ತವೆ. ಕೆಲವು ಪ್ರಸಂಗಗಳಲ್ಲಿ ದೈತ್ಯರಿಗೆ ಶಾಪಗಳೂ, ದೇವತೆಗಳಿಗೆ ವಿಶೇಷವರಗಳೂ ಸಹ ಇರುವುದುಂಟು. ಇವೆಲ್ಲವುಗಳ ವಿವೇಚನೆಯನ್ನು ವಿಶೇಷರೀತಿಯಲ್ಲಿ ಮಾಡುವ ಪ್ರಯತ್ನ ಮುಂಚಿನ ಯಾವ ವ್ಯಾಖ್ಯಾನಕಾರರಿಂದಲೂ ನಡೆದಿರಲಿಲ್ಲ. ಶ್ರೀಮಧ್ವರ ಮಹಾಭಾರತ–ತಾತ್ಪರ್ಯನಿರ್ಣಯ ಇಂತಹ ವರಶಾಪಗಳ ಬಗ್ಗೆಯೂ ಸಹ ಉಚಿತವೂ, ಸಮಗ್ರವೂ ಆದ ವಿವರಗಳನ್ನು ನೀಡಿದೆ. ಉದಾಹರಣೆಗೆ ಕರ್ಣನ ಪ್ರಸಂಗವನ್ನು ಗಮನಿಸಬಹುದು. ಕರ್ಣನಿಗೆ ಪರಶುರಾಮರ ಶಾಪವಿದ್ದ ವಿವರವನ್ನು ಜನ ತಿಳಿದಿರುವರು. ಆದರೆ ಆತನಿಗೆ ಪರಶುರಾಮರಿಂದ ಲಭಿಸಿದ್ದ ಅಪೂರ್ವ ವರ, ಅನುಗ್ರಹಗಳನ್ನು ಯಾರೂ ಗಮನಿಸಿಲ್ಲ. ಅದರ ವಿವರಗಳನ್ನು ಸಮಗ್ರ ನೀಡಿರುವ ಶ್ರೇಯಸ್ಸು ಈ ಕೃತಿಯದು :

ಅಥಾಹ ರಾಮಸ್ತಮಸತ್ಯವಾಚೋ ನ ತೇ ಸಕಾಶೇ ಮಮ ವಾಸಯೋಗ್ಯತಾ ।
ತಥಾऽಪಿ ತೇ ನೈವ ವೃಥಾ ಮದೀಯಾ ಭಕ್ತಿರ್ಭವೇಜ್ಜೇಷ್ಯಸಿ ಸರ್ವಶತ್ರೂನ್ ॥

ಅಸ್ಪರ್ಧಮಾನಂ ನ ಕಥಂಚನ ತ್ವಾಂ ಜೇತಾ ಕಶ್ಚಿತ್ ಸ್ಪರ್ಧಮಾನಸ್ತು ಯಾಸಿ ।
ಪರಾಭೂತಿಂ ನಾತ್ರ ವಿಚಾರ್ಯಮಸ್ತಿ ಪ್ರಮಾದೀ ತ್ವಂ ಭವಿತಾ ಚಾಸ್ತ್ರಸಂಖ್ಯೇ ॥
ಯಾಹೀತಿ ತೇನೋಕ್ತ ಉದಾರಕರ್ಮಣಾ ಕರ್ಕೋ ಯಯೌ ತಂ ಪ್ರಣಮ್ಯೇಶತಾರಮ್।
(೧೫/೫೭-೫೯)

ದ್ವಾವಿಂಶತಿಮಯುದ್ಧೇ ತು ರಾಮದತ್ತಂ ಸುಭಾಸ್ವರಮ್ ।
ಅಭೇದ್ಯಂ ರಥಮಾರುಹ್ಯ ವಿಜಯಂ ಧನುರೇವ ಚ ॥
ತದ್ದತ್ತಮೇವ ಸಂಗೃಹ್ಯ ತೂಣೀ ಚಾಕ್ಷಯಸಾಯಕೌ । (೨೬/೧೪೬-೧೪೭)

ಈ ಮಾತುಗಳಲ್ಲಿ ಅನುಗ್ರಹದ ವಿವರದೊಂದಿಗೆ ಶಾಪದ ವಿವರವೂ ಸ್ಪುಟವಾಗಿ ನಿರೂಪಿತವಾಗಿದೆ.

೧೪) ಜೀವದ್ವ್ಯಾವೇಶ

ಪೂತನಾ, ಶಿಶುಪಾಲ, ದಂತವಕ್ರ ಮೊದಲಾದ ಅಸುರರು ಸದ್ಗತಿಯನ್ನು ಪಡೆದು–ಕೊಂಡಂತೆ ಭಾಗವತಾದಿಗ್ರಂಥಗಳಲ್ಲಿ ಕಂಡುಬರುತ್ತದೆ. ಅಲ್ಲದೆ ಪೂತನೆ ತಾಟಕೆಯೆಂಬ ರಾಕ್ಷಸಿ, ಶಿಶುಪಾಲನು ಹಿರಣ್ಯಕಶಿಪು, ದಂತವಕ್ರನು ಹಿರಣ್ಯಾಕ್ಷ ಮೊದಲಾದ ವಿವರಗಳು ಅವುಗಳಲ್ಲೇ ಬಂದಿದ್ದು ಅವರೆಲ್ಲ ಸ್ವರೂಪತಃ ಭಗವದ್ದ್ವೇಷಿಗಳಾದ ಅಸುರರು. ಅವರಿಗೆಲ್ಲ ದುರ್ಗತಿ ಉಚಿತ ಎಂಬ ಮಾತು ಅವುಗಳಲ್ಲೇ ಬಂದಿದೆ. ಎಂದರೆ ಅವರಿಗೆ ಸದ್ಗತಿ ಆಗುವುದು ಹೇಗೆ ಉಚಿತ? ಈ ವಿರೋಧದ ಪರಿಹಾರವನ್ನು ಆಚಾರ್ಯರು ಪರಿಹರಿಸಿರುವ ರೀತಿ ತುಂಬಾ ಅಪೂರ್ವವಾದುದು :

ಸಾ ತಾಟಕಾ ಚೋರ್ವಶೀಸಂಪ್ರವಿಷ್ಟಾ ಕೃಷ್ಣಾವಧ್ಯಾನಾನ್ನಿರಯಂ ಸಂಜಗಾಮ ॥
ಸಾ ತೂರ್ವಶೀ ಕೃಷ್ಣಭುಕ್ತಸ್ತನೇನ ಪೂತಾ ಸ್ವರ್ಗಂ ಪ್ರಯಯೌ ತತ್‌ಕ್ಷಣೇನ ।
ಸಾ ತುಂಬುರೋಃ ಸಂಗತ ಆವಿವೇಶ ರಕ್ಷಸ್ತನುಂ ಶಾಪತೋ ವಿತ್ತಪಸ್ಯ ।
ಕೃಷ್ಣಸ್ಪರ್ಶಾಚ್ಛುದ್ಧರೂಪಾ ಪುನರ್ದಿವಂ ಯಯೌ ತುಷ್ಟೇ ಕಿಮಲಭ್ಯಂ ರಮೇಶೇ ॥
(೧೨/೮೭,೮೮)

ವಿಡೂರಥಸ್ತಮೋಽಗಚ್ಛದ್ದಂತವಕ್ರೇ ಚ ಯೋಽಸುರಃ ॥
ಹರೇಶ್ಚ ಪಾರ್ಷದಃ ಕ್ಷಿಪ್ರಂ ಹರಿಮೇವ ಸಮಾಶ್ರಿತಃ ।
ಕೃಷ್ಣೇ ಪ್ರಾಪ್ತೇ ಸ್ವಲೋಕಂ ಚ ನಿಃಸೃತ್ಯಾಸ್ಮಾತ್ ಸ್ವರೂಪತಃ ॥
ಏಕೀಭಾವಂ ಸ್ವರೂಪೇಣ ದ್ವಾರಪೇಣ ಗಮಿಷ್ಯತಿ । (೨೧/೩೯-೪೧)

ನಿಕೃತ್ಯಮಾನಕಂಧರಃ ಸುಭಕ್ತಿಮಾನಭೂದ್ಧರೌ ।
ಸಮಾಶ್ರಿತಶ್ಚ ಯೋಽಸುರೋ ಮಹಾತಮಃ ಪ್ರಪೇದಿವಾನ್ ॥
ಜಯಃ ಪ್ರವಿಶ್ಯ ಕೇಶವಂ ಪುನಶ್ಚ ಪಾರ್ಷದೋಽಭವತ್ । (೨೧/೨೬೨-೨೬೩)

೧೫) ಸಂಗ್ರಹಣ ಕೌಶಲ

ರಾಮಾಯಣ, ಮಹಾಭಾರತದಂತಹ ಬೃಹದ್ಗ್ರಂಥಗಳನ್ನು ಸಂಗ್ರಹಿಸುವ ಕಾರ್ಯ ಊಹೆಗೂ ನಿಲುಕದಷ್ಟು ಗಹನ. ವಿವರಗಳು ಹೆಚ್ಚಿದಂತೆ ಗ್ರಂಥದ ವ್ಯಾಪ್ತಿ ಹೆಚ್ಚುವುದು. ಗ್ರಂಥದ ವ್ಯಾಪ್ತಿಯನ್ನು ಮಿತಿಗೊಳಿಸಲು ಹೊರಟಾಗ ಮುಖ್ಯ ವಿವರಗಳು ತಪ್ಪಿ ಹೋಗುವ ಅಪಾಯವೂ ಉಂಟು. ಆದರೆ ಮಹಾಭಾರತತಾತ್ಪರ್ಯನಿರ್ಣಯ ಯಾವ ಮುಖ್ಯ ವಿವರಗಳೂ ಬಿಟ್ಟು ಹೋಗದಂತೆ ಮೂಲದ ಪ್ರಸಂಗಗಳನ್ನು ಸಂಗ್ರಹಿಸುವ ರೀತಿ ಅನ್ಯಾದೃಶವಾದುದು. ವಿರಾಧವೃತ್ತಾಂತ ಮೊದಲಾದ ಪ್ರಸಂಗಗಳಲ್ಲಿನ ಶ್ರೀಮದಾಚಾರ್ಯರ ಸಂಗ್ರಹಣಕೌಶಲವನ್ನು ಇಲ್ಲಿ ಉದಾಹರಣೆಯಾಗಿ ಗಮನಿಸಬಹುದು :

ರಾಮೋಽಪಿ ತತ್ರ ದದೃಶೇ ಧನದಸ್ಯ ಶಾಪಾದ್ಗಂಧರ್ವಮುರ್ವಶಿರತೇರಥ ಯಾತುಧಾನೀಮ್ ।
ಪ್ರಾಪ್ತಂ ದಶಾಂ ಸಪದಿ ತುಂಬುರುನಾಮಧೇಯಂ ನಾಮ್ನಾ ವಿರಾಧಮಪಿ ಶರ್ವವರಾದವಧ್ಯಮ್ ॥
ಭಂಕ್ತ್ವಾಽಸ್ಯ ಬಾಹುಯುಗಲಂ ಬಿಲಗಂ ಚಕಾರ ಸಮ್ಮಾನಯನ್ ವಚನಮಂಬುಜಜನ್ಮನೋಽಸೌ ।
ಪ್ರಾದಾಚ್ಚ ತಸ್ಯ ಸುಗತಿಂ ನಿಜಗಾಯಕಸ್ಯ ಭಕ್ಷಾರ್ಥಮಂಸಕಮಿತೋಽಪಿ ಸಹಾನುಜೇನ
(೫/೨೦, ೨೧)

ಈ ಎರಡು ಶ್ಲೋಕಗಳಲ್ಲಿ ವಿರಾಧನ ಮೂಲರೂಪ, ಅವನ ಅಸುರನಾಗಲು ಕುಬೇರನ ಶಾಪವೆಂಬ ಕಾರಣ, ಅದಕ್ಕೆ ಅವನು ಮಾಡಿದ ಉರ್ವಶೀಗಮನ, ಅವನಿಗಿದ್ದ ರುದ್ರದೇವರ ವರ, ಬ್ರಹ್ಮದೇವರ ವಿಶೇಷ ವರ ಮತ್ತು ಅವನು ಶ್ರೀರಾಮನನ್ನು ಲಕ್ಷ್ಮಣನ ಸಮೇತ ತಿನ್ನಲು ಯತ್ನಿಸಿದ ಹಿನ್ನೆಲೆ, ಅವನ ಕೈಗಳನ್ನು ಕತ್ತರಿಸಿ, ಶ್ರೀರಾಮ ಅವನನ್ನು ಸಂಹರಿಸಿದ್ದು ಮೊದಲಾದ ಎಲ್ಲ ವಿವರಗಳೂ ಸ್ಪಷ್ಟವಾಗಿ, ನೇರವಾಗಿ ಪ್ರತಿಪಾದಿತವಾಗಿರುವುದನ್ನು ಗಮನಿಸಬೇಕು. ಇಂತಹ ವಿಸ್ಮಯಕಾರಕವಾದ ಸಮಗ್ರ ಸಂಸ್ಕೃತಸಾಹಿತ್ಯದಲ್ಲೇ ಅಶ್ರುತಪೂರ್ವ.

ಮಹಾಭಾರತದ ಕರ್ಣಪರ್ವದಲ್ಲಿ ಬಂದಿರುವ ಎರಡು ಕಥೆಗಳನ್ನು ಆಚಾರ್ಯರು ಒಂದೊಂದೇ ಶ್ಲೋಕದಲ್ಲಿ ಸಂಗ್ರಹಿಸಿರುವ ರೀತಿಯಂತೂ ಅತ್ಯದ್ಭುತ :

ಕೌಶಿಕಾಖ್ಯೋ ಬ್ರಾಹ್ಮಣೋ ಹಿ ಲೀನಂ ಗ್ರಾಮಜನಂ ಕ್ವಚಿತ್ ।
ತಸ್ಕರೇಷ್ವಭಿಧಾಯೈವ ನಿರಯಂ ಪ್ರತ್ಯಪದ್ಯತ ॥
ಕಶ್ಚಿದ್ವ್ಯಾಧೋ ಮೃಗಂ ಹತ್ವಾ ಮಾತಾಪಿತೃನಿಮಿತ್ತತಃ ।
ಭಕ್ಷಾರ್ಥಮಭ್ಯಗಾತ್ ಸ್ವರ್ಗಮಸುರೋಽಸೌ ಮೃಗೋ ಯತಃ ॥ (೨೭/೧೨೧-೧೨೨)

೧೬) ಅಪೂರ್ವ ಶಬ್ದಪ್ರಯೋಗ

ಪಾಣಿನೀಯ ವ್ಯಾಕರಣಕ್ಕೆ ಅನುಗುಣವೆನ್ನಿಸದ ಅಪೂರ್ವಪ್ರಯೋಗಗಳನ್ನು ಶ್ರೀಮದಾ–ಚಾರ್ಯರು ಕೆಲವು ಕಡೆ ಮಾಡಿರುವರು. ಇದು ಅವರು ಮಹಾವ್ಯಾಕರಣವನ್ನು ಪ್ರಧಾನವಾಗಿ

ಅನುಸರಿಸಿದ್ದಕ್ಕೆ ಗಮಕ. 'ಚಕರ'(೪/೧೯), 'ಅವೈಹಿ'(೭/೩೮), 'ಅಮುಂಚತ್' (೧೩/೧೦೨), 'ಕರಾಂಸಿ' (೧೪/೬೫), 'ಸ್ವಪ್ಸ್ಯಂತು' (೨೬/೨೬೫) ಮೊದಲಾದ ಇಂತಹ ಪ್ರಯೋಗಗಳ ಬಗ್ಗೆ ಶ್ರೀವಾದಿರಾಜಸ್ವಾಮಿಗಳ ಭಾವಪ್ರಕಾಶಿಕೆಯಲ್ಲಿನ ಮಾತುಗಳು ಅತ್ಯಂತ ಗಮನಾರ್ಹವಾಗಿದೆ :

ಕ್ವಚಿದಮುಂಚದಿತ್ಯಾದಿನಾ ಲೌಕಿಕಪ್ರಯೋಗಂ ಕರೋಮಿ। ಕ್ವಚಿದಮುಚದಿತ್ಯಾದಿನಾ ವೈದಿಕಪ್ರಯೋಗಂ ಕರೋಮಿ। ಅತೋಽಹಂ ಲೌಕಿಕಾಲೌಕಿಕಪಾಂಡಿತ್ಯಚತುರತ್ವಾತ್ ತ್ರೈಲೋಕ್ಯಾಚಾರ್ಯ ಇತಿ ಸೂಚಿತಮ್॥ - (೧೩/೧೦೨)

ತಸ್ಮಾನ್ಮಹಾವ್ಯಾಕರಣಜ್ಞೈರ್ಮಹಾವೈದಿಕಶಿರೋಮಣಿಭಿರ್ಯತ್ಪ್ರಯುಕ್ತಂ ಸ ಏವ ಪ್ರಯೋಗಃ ಸಾಧುಃ ॥ - (೧೪/೮೮)

೧೭) ಮೂಲಗ್ರಂಥಗಳ ವಾಕ್ಯಗಳನ್ನು ಅಳವಡಿಸಿಕೊಳ್ಳುವ ವೈಖರಿ

ಮಹಾಭಾರತ, ಭಾಗವತ ಮೊದಲಾದ ಗ್ರಂಥಗಳ ಮೂಲಶ್ಲೋಕಗಳನ್ನು ತಮ್ಮ ವಾಕ್ಯ–ಗಳೊಂದಿಗೆ ಜೋಡಿಸಿಕೊಂಡು ನಿರೂಪಿಸುವ ಮತ್ತೊಂದು ವೈಶಿಷ್ಟ್ಯವೂ ಶ್ರೀಮದಾಚಾರ್ಯರ ಕೃತಿಗಳಲ್ಲಿ ಗೋಚರಿಸುತ್ತದೆ. ತಾತ್ಪರ್ಯನಿರ್ಣಯದಲ್ಲಿ ಅನೇಕ ಕಡೆ ಇಂತಹ ರಚನೆಗಳನ್ನು ಕಾಣಬಹುದು :

ತದಾ ವಿಮಾನಾವಲಿಭಿರ್ನಭಸ್ತಲಂ ದಿದೃಕ್ಷತಾಂ ಸಂಕುಲಮಾಸ ನಾಕಿನಾಮ್ ।
ಸುರಾನಕಾ ದುಂದುಭಯೋ ವಿನೇದಿರೇ ಜಗುಶ್ಚ ಗಂಧರ್ವವರಾಃ ಸಹಸ್ರಶಃ ॥ (೪/೩೩)

ಯತ್ಪಾದಪಂಕಜರಜಃ ಶಿರಸಾ ಬಿಭರ್ತಿ ಶ್ರೀರಬ್ಜಜಶ್ಚ ಗಿರಿಶಃ ಸಹ ಲೋಕಪಾಲೈಃ ।
ಸರ್ವೇಶ್ವರಸ್ಯ ಪರಮಸ್ಯ ಹಿ ಸರ್ವಶಕ್ತೇಃ ಕಿಂ ತಸ್ಯ ಶತ್ರುಹನನೇ ಕಪಯಃ ಸಹಾಯಾಃ ॥ (೫/೪೯)

ಸ ಕ್ರೋಧದೀಪ್ತನಯನಾಂತಹತಃ ಪರಸ್ಯ ಶೋಷಂ ಕ್ಷಣಾದುಪಗತೋ ದನುಜಾದಿಸತ್ತ್ವೈಃ ।
ಸಿಂಧುಶ್ಚಿರಸ್ಯರ್ಹಣಂ ಪರಿಗೃಹ್ಯ ರೂಪೀ ಪಾದಾರವಿಂದಮುಪಗಮ್ಯ ಬಭಾಷ ಏತತ್ ॥
ತಂ ತ್ವಾ ವಯಂ ಜಡಧಿಯೋ ನ ವಿದಾಮ ಭೂಮನ್ ಕೂಟಸ್ಥಮಾದಿಪುರುಷಂ ಜಗತಾಮಧೀಶಮ್ ।
ತ್ವಂ ಸತ್ತ್ವತಸ್ಸುರಗಣಾನ್ ರಜಸೋ ಮನುಷ್ಯಾಂಸ್ತಾರ್ತೀಯತೋಽಸುರಗಣಾನಭಿತಸ್ತಥಾಽಸ್ಯಾಃ ॥
ಕಾಮಂ ಪ್ರಯಾಹಿ ಜಹಿ ವಿಶ್ರವಸೋಽವಮೇಹಂ ತ್ರೈಲೋಕ್ಯರಾವಣಮವಾಪ್ನುಹಿ ವೀರಪತ್ನೀಮ್ ।
ಬಧ್ನೀಹಿ ಸೇತುಮಿಹ ತೇ ಯಶಸೋ ವಿತತ್ಯೈ ಗಾಯಂತಿ ದಿಗ್ವಿಜಯಿನೋ ಯಮುಪೇತ್ಯ ಭೂಪಾಃ ॥
- (೮/೧೦-೧೨)

ಶಿಲೋಂಛವೃತ್ತ್ಯೈವ ಹಿ ವರ್ತಯನ್ಸ ಧರ್ಮಂ ಮಹಾಂತಂ ವಿರಜಂ ಜುಷಾಣಃ ।
ಉವಾಸ ನಾಗಾಖ್ಯಪುರೇ ಸಖಾಽಽಸ ದೇವವ್ರತಸ್ಯಾಥ ಕೃಪಸ್ಯ ಚೈವ ॥ (೧೧/೭೧)

ಕ್ರಮಾತ್ ಸಂಸ್ಕಾರಾನ್ ಕ್ಷತ್ರಿಯಾಣಾಮವಾಪ್ಯ ತೇಽವರ್ಧಂತ ಸ್ವತವಸೋ ಮಹಿತ್ವನಾ ।
ಸರ್ವೇ ಸರ್ವಜ್ಞಾಃ ಸರ್ವಧರ್ಮೋಪಪನ್ನಾಃ ಸರ್ವೇ ಭಕ್ತಾಃ ಕೇಶವೇಽತ್ಯಂತಯುಕ್ತಾಃ ॥
(೧೨/೧೩೭)

ಕನ್ಯೈವ ಸಾಽಭವದತಃ ಪ್ರತಿವಾಸರಂ ಚ ಜನ್ಮಾಭವದ್ಭೃಮತೇಃ ಪೃಥಗೇವ ನಾಶಾತ್ ।
ಪ್ರಾಯೋ ಹಿ ನಾಭಮತಿನಾಶಮವಾಪ ವಾನೇ ತಸ್ಮಾನ್ನರುಚ್ಚ ಸಕಲೇಷ್ವಭವಿಷ್ಣ ಆಸೀತ್ ॥
(೧೯/೧೮೪ ॥

ಸ ತಾನ್ ಕ್ರಮೇಣೈವ ನಿಕೃತ್ತಕಂಧರಾಂಧರೋತ್ತಮೈರತ್ರ ವಿಧಾಯ ವಿಪ್ರಃ ।
ನಿನಾಯ ಲೋಕಂ ಪರಮರ್ಕಮಂಡಲಂ ವ್ರಜಂತಿ ನಿರ್ಭಿದ್ಯ ಯಮೂರ್ಧ್ವರೇತಸಃ ॥ (೨೬/೮೦)

ಸ ಪಾಂಚಜನ್ಯೋಽಚ್ಯುತವಕ್ತ್ರವಾಯುನಾ ಭೃಶಂ ಸುಪೂರ್ಣೋದರನಿಃಸೃತಧ್ವನಿಃ ।
ಜಗದ್ವಿರಿಂಚೇಶಸುರೇಂದ್ರಪೂರ್ವಕಂ ಪ್ರಕಂಪಯಾಮಾಸ ಯುಗಾತ್ಯಯೇ ಯಥಾ ॥ (೨೬/೯೩)

ಈ ಮೇಲಿನ ಶ್ಲೋಕಗಳೆಲ್ಲ ಒಂದೆರಡು ಪದಗಳ ವ್ಯತ್ಯಾಸಗಳೊಂದಿಗೆ ಕ್ರಮವಾಗಿ ಭಾಗವತ(೭/೮/೩೬), ಭಾಗವತ(೧೦/೫೮/೩೮), ಭಾಗವತ (೯/೧೦/೧೩–೧೫), ಭಾಗವತ (೧೧/೧೭/೪೩), ಋಗ್ವೇದ (೧/೮೫/೭), ಮಹಾಭಾರತ (ಆದಿಪರ್ವ ೧೯೭/೧೪), ಭಾಗವತ (೪/೧೧/೫) ಹಾಗೂ ಮಹಾಭಾರತ(ದ್ರೋಣಪರ್ವ ೭೩/೫೨)ದ ಶ್ಲೋಕಗಳೇ ಆಗಿವೆ.

ಇವುಗಳ ಔಚಿತ್ಯವನ್ನು ಶ್ರೀವಾದಿರಾಜರು ತಮ್ಮ ಭಾವಪ್ರಕಾಶಿಕೆಯಲ್ಲಿ ವಿಶೇಷವಾಗಿ ನಿರೂಪಿಸಿರುವರು :

''ತೇಽವರ್ಧಂತ ಸ್ವತವಸೋ ಮಹಿತ್ವನಾ'' ಇತಿ ಶ್ರುತೇಃ ಪಾದಂ ಸ್ವಶ್ಲೋಕೇ ಪಾದತ್ವೇನ ಕಥಯತಾಽಽಚಾರ್ಯೇಣ ಸ್ವಗ್ರಂಥಸ್ಯ ಛಂದಃ ಸಮಾನತಾ ಸೂಚಿತಾ। ನಹಿ ಸೌವರ್ಣಸರ್ವಾಂಗಂ ವಿನಾ ಪಾದಮಾತ್ರಂ ಸೌವರ್ಣಂ ಕ್ವಾಪಿ ದೃಷ್ಟಮ್। ಅತಃ ಶ್ಲೋಕೈಕಪಾದಸ್ಯ ಶ್ರೌತತ್ವೇ ಸರ್ವೋಽಪಿ ಶ್ಲೋಕಃ ಶ್ರುತಿಸಮಾನ ಏವೇತಿ ಕಥಂ ನ ಸಿಧ್ಯೇದಿತಿ ಭಾವಃ। - (೧೨/೧೩೭)

ಕಿಂ ಬಹುನಾ ''ಬಭೂವ ಕನ್ಯೈವ ಗತೇ ಗತೇಽಹನಿ'' ಇತಿ ''ಕನ್ಯೈವ ಸಾಽಭವದತಃ ಪ್ರತಿವಾಸರಂ ಚ'' ಇತಿ ಪದವಿನ್ಯಾಸಯೋರರಪ್ಯೈಕವಿಧ್ಯಾತ್ಪ್ರಮಾಣಕಶಿರೋಮಣಿರ್ಗ್ರಂಥಕಾರ ಇತಿ ಜ್ಞೇಯಮ್॥ (೧೯/೧೮೪)

ಅತೋ ನ ಕೇವಲಮರ್ಥತಃ ಸಾಮ್ಯಂ ಕಿಂತು ಶಬ್ದತೋಽಪಿ ಗುರುಶಿಷ್ಯಗ್ರಂಥಯೋಃ ಸಾಮ್ಯಮ್। ಕ್ವಚಿತ್ ಕ್ವಚಿತ್ ಗುರುವಾಕ್ಯರತ್ನೈಃ ಸಹ ಸುವಾಕ್ಯಹೈಮಮಣಿಮಾಲಾಮಲಂಕುರುತೇ ಭಗವಾನಾಚಾರ್ಯ ಇತಿ ಜ್ಞೇಯಮ್। - (೨೧/೩೧೫)

೧೮) ಛಂದೋವೈವಿಧ್ಯ

ಛಂದೋವೈವಿಧ್ಯ ಮಹಾಭಾರತತಾತ್ಪರ್ಯನಿರ್ಣಯದ ಮತ್ತೊಂದು ವೈಶಿಷ್ಟ್ಯ. ಅಕ್ಷರವೃತ್ತ ಮಾತ್ರಾವೃತ್ತ ಎರಡನ್ನೂ ವಿಶೇಷವಾಗಿ ಬಳಸಿರುವ ಶ್ರೀಮದಾಚಾರ್ಯರು ಅನೇಕ ಕಡೆ ಉಪಜಾತಿಯನ್ನು ವಿಶಿಷ್ಟರೀತಿಯಲ್ಲಿ ಅಳವಡಿಸಿರುವರು. ವಿಷಯದ ಮಹತ್ತ್ವಕ್ಕೆ ತಕ್ಕಂತೆ ಛಂದಸ್ಸನ್ನು ಬಳಸುವ ವಿಶಿಷ್ಟಶೈಲಿ ಅವರದು. ಸುಂದರಕಾಂಡನಿರೂಪಣೆಯ ಏಳನೆಯ ಅಧ್ಯಾಯ, ಯುದ್ಧಕಾಂಡನಿರೂಪಣೆಯ ಎಂಟನೆಯ ಅಧ್ಯಾಯ, ಭೀಷ್ಮಾದಿಗಳ ಜನನದ ವಿವರ ನೀಡುವ ಹನ್ನೊಂದನೆಯ ಅಧ್ಯಾಯ, ಕ್ರಮವಾಗಿ ಸಭಾಪರ್ವ, ವನಪರ್ವ, ವಿರಾಟಪರ್ವ, ಉದ್ಯೋಗ–ಪರ್ವ ನಿರೂಪಣೆಯ ಇಪ್ಪತ್ತೊಂದು, ಇಪ್ಪತ್ತೆರಡು, ಇಪ್ಪತ್ತಮೂರು ಮತ್ತು ಇಪ್ಪತ್ತನಾಲ್ಕನೆಯ ಅಧ್ಯಾಯಗಳು ಮೊದಲಾದವುಗಳಲ್ಲಿ ಪ್ರಮಾಣಿಕಾ, ಅನುಷ್ಟುಪ್, ವಸಂತತಿಲಕ ಮೊದಲಾದ ಅನೇಕ ವಿವಿಧವೃತ್ತಗಳು ವಿಶಿಷ್ಟರೀತಿಯಲ್ಲಿ ಬಳಕೆಯಾಗಿವೆ. ಇವುಗಳಿಂದಾಗಿ ಕಥಾನಿರೂಪಣೆಯ ಓಟ, ವಿಶ್ಲೇಷಣೆ ಹಾಗೂ ವಿಮರ್ಶೆಗಳಿಗೆ ತೀರ ವಿನೂತನವಾದ ಗತಿ ದೊರಕಿರುವುದನ್ನು ಕಾಣಬಹುದು. ಇಂದ್ರವಜ್ರಾ, ಉಪೇಂದ್ರವಜ್ರಾ, ಇಂದ್ರವಂಶ, ವಂಶಸ್ಥ ಮಾಲಿನೀ, ಶಾಲಿನೀ, ಸ್ರಗ್ಧರಾ, ದ್ರುತವಿಲಂಬಿತ, ರಥೋದ್ಧತಾ, ಶಾರ್ದೂಲವಿಕ್ರೀಡಿತ, ಮಂಜುಭಾಷಿಣೀ, ದಲಿತಾ, ವಾತೋರ್ಮಿ ಮೊದಲಾದ ವಿವಿಧ ಛಂದಸ್ಸು ಸಹ ವಿಶಿಷ್ಟರೀತಿಯಲ್ಲಿ ಬಳಕೆಯಾಗಿವೆ. ವಿವಿಧವೃತ್ತಗಳ ಜೋಡಣೆಯಾದ ಉಪಜಾತಿಯಂತು ಆಚಾರ್ಯರದ್ದೇ ವೈಶಿಷ್ಟ್ಯ.

೧೯) ಉಪಾಖ್ಯಾನಗಳ ಬಗ್ಗೆ ಹೊಸಬೆಳಕು

ಇತಿಹಾಸಪುರಾಣಗಳೆಂದರೆ ಉಪಾಖ್ಯಾನಗಳ ಮಹಾಸಾಗರವೇ ಸರಿ. ಉಪಾಖ್ಯಾನ–ಗಳಿಲ್ಲದ ಇತಿಹಾಸಪುರಾಣಗಳನ್ನು ಊಹಿಸಲೂ ಸಾಧ್ಯವಿಲ್ಲ. ಆದರೆ ಅಂತಹ ಉಪಾಖ್ಯಾನಗಳ ಒಟ್ಟು ಹಿನ್ನೆಲೆ ಏನು? ಅವುಗಳ ಆಂತರ್ಯ ಎಂತಹುದು? ಎಂಬುದರ ಬಗ್ಗೆಯೂ ತಾತ್ಪರ್ಯ–ನಿರ್ಣಯ ನೀಡುವ ಮಾಹಿತಿ ಅತ್ಯಂತ ಮೌಲಿಕ :

ಮಾರ್ಕಂಡೇಯಸ್ತದಾಗತ್ಯ ತೇಷಾಮಕಥಯತ್ ಕಥಾಃ ।
ಬಹ್ವ್ಯಶ್ಚೈವ ವಿಚಿತ್ರಾಶ್ಚ ಭಾಷಾತ್ರಯಸಮನ್ವಿತಾಃ ॥
ಲೋಕದರ್ಶನಮಾಶ್ರಿತ್ಯ ದೇವಾಶ್ಚ ಮುನಯಸ್ತಥಾ ।
ಬ್ರೂಯುಃ ಕಥಾಸ್ತತ್ರ ಶಿಷ್ಟಾ ಗ್ರಾಹ್ಯಾ ನಾರ್ಥಃ ಕಥಂಚನ ॥
ಅರ್ಥಃ ಸಮಾಧಿಭಾಷಾಸು ಗ್ರಾಹ್ಯಃ ಸರ್ವೋಽಪ್ಯಸಂಶಯಮ್ ।
ಪರದರ್ಶನಭಾಷಾಸು ಜ್ಞೇಯಂ ತದ್ದರ್ಶನಂ ತಥಾ ॥

ಗ್ರಾಹ್ಯೋ ನಾರ್ಥೋ ವೈದಿಕಂ ತು ದರ್ಶನಂ ಗ್ರಾಹ್ಯಮೇವ ಚ ।
ಅನ್ಯಾರ್ಥೋ ಗುಹ್ಯಭಾಷಾಸು ಗ್ರಾಹ್ಯ ಏವಂ ವಿನಿರ್ಣಯಃ ॥ (೨೨/೩೯೪- ೩೯೭)

೨೦) ಇತಿಹಾಸಪುರಾಣಗಳ ಆಧ್ಯಾತ್ಮಿಕ ಮೌಲ್ಯ

ರಾಮಾಯಣ, ಮಹಾಭಾರತಗಳನ್ನು ಮಹತ್ತ್ವದ ಶಾಸ್ತ್ರೀಯಗ್ರಂಥಗಳು ಎಂದು ಅರ್ಥಮಾಡಿಕೊಳ್ಳುವಲ್ಲೇ ಅನೇಕ ಮತಾಚಾರ್ಯರೂ ಸಹ ಗಮನಹರಿಸಿರಲಿಲ್ಲ. ಮೂಲತಃ ಅವು ಮೂಲಶಾಸ್ತ್ರಗಳ ಅತ್ಯಂತಪ್ರಮುಖ ಘಟಕಗಳು ಎಂದು ನಿರೂಪಿಸಿ, ಮಹಾಭಾರತವಂತೂ ಶಾಸ್ತ್ರರಾಜ ಎಂದು ಸ್ಥಾಪಿಸಿದ ಅಪೂರ್ವತೆಯೂ ಆಚಾರ್ಯ ಶ್ರೀಮಧ್ವರದಾಗಿದೆ. ರಾಮಾಯಣ, ಮಹಾಭಾರತಗಳು ಒಂದರ್ಥದಲ್ಲಿ ಮಹಾಕಾವ್ಯಗಳಾದರೂ, ಮೂಲತಃ ಅವೆರಡೂ ಇತಿಹಾಸಗಳು. ಪುರಾಣಗಳಿಗಿಂತ ಮೇಲಿನ ಸ್ಥಾನ ಅವುಗಳದು. ಇನ್ನೂ ಹೆಚ್ಚಾಗಿ ಅವೆರಡೂ ಭಾಗವತಾದಿಪುರಾಣಗಳನ್ನೊಳಗೊಂಡಂತೆ ಆಧ್ಯಾತ್ಮಿಕ ಕೃತಿಗಳು. ಅವುಗಳ ಪ್ರಧಾನ ಮೌಲ್ಯ ಅಡಗಿರುವುದೇ ಅವುಗಳ ಆಧ್ಯಾತ್ಮಿಕತೆಯಲ್ಲಿ. ಆಧ್ಯಾತ್ಮಿಕಮೌಲ್ಯ ಅವುಗಳಲ್ಲಿ ಓತಪ್ರೋತವಾಗಿದೆ ಎಂದು ನಿರೂಪಿಸಿ, ಅವುಗಳನ್ನು ಅರ್ಥೈಸಿಕೊಳ್ಳಲು ಅವರು ಮಾರ್ಗದರ್ಶನವನ್ನೂ ನೀಡಿರುವರು. ಮಹಾಭಾರತದ ಆಧ್ಯಾತ್ಮಿಕ ವಿವೇಚನೆಯ ಬಗ್ಗೆ ಅವರ ವಿವರಣೆಯನ್ನು ಇಲ್ಲಿ ಗಮನಿಸಬಹುದು :

ಭಕ್ತಿರ್ಜ್ಞಾನಂ ಸವೈರಾಗ್ಯಂ ಪ್ರಜ್ಞಾ ಮೇಧಾ ಧೃತಿಃ ಸ್ಥಿತಿಃ ।
ಯೋಗಃ ಪ್ರಾಣೋ ಬಲಂ ಚೈವ ವೃಕೋದರ ಇತಿ ಸ್ಮೃತಃ ॥
ಏತದ್ದಶಾತ್ಮಕೋ ವಾಯುಸ್ತಸ್ಮಾದ್ಭೀಮಸ್ತದಾತ್ಮಕಃ ।
ಸರ್ವವಿದ್ಯಾ ದ್ರೌಪದೀ ತು ಯಸ್ಮಾತ್ ಸೈವ ಸರಸ್ವತೀ ॥
ಅಜ್ಞಾನಾದಿಸ್ವರೂಪಸ್ತು ಕಲಿರ್ದುರ್ಯೋಧನಃ ಸ್ಮೃತಃ ।
ವಿಪರೀತಂ ತು ಯಜ್ಞಾನಂ ದುಶ್ಶಾಸನ ಇತೀರಿತಃ ॥
ನಾಸ್ತಿಕ್ಯಂ ಶಕುನಿರ್ನಾಮ ಸರ್ವದೋಷಾತ್ಮಕಾಃ ಪರೇ ।
ಧಾರ್ತರಾಷ್ಟ್ರಾಸ್ತ್ವಹಂಕಾರೋ ದ್ರೌಣೇ ರುದ್ರಾತ್ಮಕೋ ಯತಃ ॥
ದ್ರೋಣಾದ್ಯಾ ಇಂದ್ರಿಯಾಣ್ಯೇವ ಪಾಪಾನ್ಯನ್ಯೇ ತು ಸೈನಿಕಾಃ ।
ಪಾಂಡವೇಯಾಶ್ಚ ಪುಣ್ಯಾನಿ ತೇಷಾಂ ವಿಷ್ಣುರ್ನಿಯೋಜಕಃ ॥
ಏವಮಧ್ಯಾತ್ಮನಿಷ್ಠಂ ಹಿ ಭಾರತಂ ಸರ್ವಮುಚ್ಯತೇ ।
ದುರ್ವಿಜ್ಞೇಯಮತಃ ಸರ್ವೈರ್ಭಾರತಂ ತು ಸುರೈರಪಿ ॥
ಸ್ವಯಂ ವ್ಯಾಸೋ ಹಿ ತದ್ವೇದ ಬ್ರಹ್ಮಾ ವಾ ತತ್ಪ್ರಸಾದತಃ ।
ತಥಾಽಪಿ ವಿಷ್ಣುಪರತಾ ಭಾರತೇ ಸಾರಸಂಗ್ರಹಃ ॥
ಇತ್ಯಾದಿ ವ್ಯಾಸವಾಕ್ಯೈಸ್ತು ವಿಷ್ಣೂತ್ಕರ್ಷೋಽವಗಮ್ಯತೇ । (೨/೧೪೧-೧೪೮)

೨೧) ಮೂಲಗ್ರಂಥಗಳ ಅರ್ಥವೈಭವ :

ವೇದಗಳಿಂದ ಹಿಡಿದು ಇತಿಹಾಸಪುರಾಣಗಳ ವರೆಗಿನ ಆಕರಗ್ರಂಥಗಳನ್ನು ಒಂದರ್ಥದಲ್ಲಿ ಮಾತ್ರ ನೋಡುವ ಸೀಮಿತದೃಷ್ಟಿ ಪ್ರಚಾರದಲ್ಲಿತ್ತು. ಕೆಲವರಂತೂ ತತ್ತ್ವವೇದಕ, ಅತತ್ತ್ವ–ವೇದಕ ಮೊದಲಾಗಿ ವಿಭಾಗ ಮಾಡಿ ಆ ಒಂದು ಅರ್ಥವನ್ನೂ ಸಹ ಮತ್ತಷ್ಟು ಸೀಮಿತ–ಗೊಳಿಸಿದ್ದರು. ಆದರೆ ಆಚಾರ್ಯ ಶ್ರೀಮದ್ವರು ಮೂಲಶಾಸ್ತ್ರಗಳ ಅರ್ಥವೈಭವದ ಬಗ್ಗೆ ಹೊಸದೃಷ್ಟಿಯನ್ನೇ ನೀಡಿದರು. ಅವರು ಹೇಳುವಂತೆ ವೇದಗಳಿಗೆ ಅತಿ ಕಡಿಮೆ ಎಂದರೂ ಮೂರು ಅರ್ಥ. ಮಹಾಭಾರತಕ್ಕೆ ಅತಿಕಡಿಮೆ ಎಂದರೂ ಹತ್ತು ಅರ್ಥಗಳು, ವಿಷ್ಣುಸಹಸ್ರನಾಮದ ಪ್ರತಿಯೊಂದು ನಾಮಕ್ಕೂ ಕನಿಷ್ಠ ನೂರು ಅರ್ಥಗಳು. ತಮ್ಮ ಈ ಮಾತಿಗೆ ಆಧಾರವಾಗಿ ಸ್ಕಂದಪುರಾಣದ ವಚನವನ್ನು ಋಗ್ಭಾಷ್ಯದಲ್ಲಿ ಉಲ್ಲೇಖಿಸಿದ್ದರೆ, ಈ ಕೃತಿಯಲ್ಲಿ ಮಹಾಭಾರತ–ವಾಕ್ಯವನ್ನು ಉಲ್ಲೇಖಿಸಿ ವಿವರಿಸಿರುವರು :

ತ್ರಯೋಽರ್ಥಾಃ ಸರ್ವವೇದೇಷು ದಶಾರ್ಥಾಃ ಸರ್ವಭಾರತೇ ।
ವಿಷ್ಣೋಃ ಸಹಸ್ರನಾಮಾಪಿ ನಿರಂತರಶತಾರ್ಥಕಮ್ ॥ – (ಋಗ್ಭಾಷ್ಯೋದ್ಧೃತಸ್ಕಂದಪುರಾಣವಚನ)

ಭಾರತಾರ್ಥಸ್ತ್ರಿಧಾ ಪ್ರೋಕ್ತಃ ಸ್ವಯಂ ಭಗವತೈವ ಹಿ ॥
ಮನ್ವಾದಿ ಕೇಚಿದ್ಭ್ರವತೇ ಹ್ಯಾಸ್ತೀಕಾದಿ ತಥಾಽಪರೇ ।
ತಥೋಪರಿಚರಾದ್ಯನ್ಯೇ ಭಾರತಂ ಪರಿಚಕ್ಷತೇ ॥
ಸಕೃಷ್ಣಾನ್ ಪಾಂಡವಾನ್ ಗೃಹ್ಯ ಯೋಽಯಮರ್ಥಃ ಪ್ರವರ್ತತೇ ।
ಪ್ರಾತಿಲೋಮ್ಯಾದಿವೈಚಿತ್ರ್ಯಾತ್ತಮಾಸ್ತೀಕಂ ಪ್ರಚಕ್ಷತೇ ॥
ಧರ್ಮೋ ಭಕ್ತ್ಯಾದಿದಶಕಃ ಶ್ರುತಾದಿಃ ಶೀಲವೈನಯೌ ।
ಸಬ್ರಹ್ಮಕಾಸ್ತು ತೇ ಯತ್ರ ಮನ್ವಾದಿಂ ತಂ ವಿದುರ್ಬುಧಾಃ ॥ (೨/೧೩೬-೧೩೯)

೨೨) ಕಾವ್ಯಸೌಂದರ್ಯ

ಸಾಹಿತ್ಯಿಕಕೃತಿಯಾಗಿಯೂ ಮಹಾಭಾರತತಾತ್ಪರ್ಯನಿರ್ಣಯ ತೀರ ವಿಶಿಷ್ಟವಾದ ಕೃತಿ. ಅವುಗಳಲ್ಲಿನ ಶಬ್ದಜೋಡಣೆ, ಸರಸಶೈಲಿ, ಮನೋಜ್ಞಪದಪುಂಜಗಳು, ಊಹಾತೀತವಾದ ಓಟ, ಉದ್ದಕ್ಕೂ ಕಂಡುಬರುವ ಉಪಮಾ, ರೂಪಕ, ಅರ್ಥಾಂತರನ್ಯಾಸಾದಿ ಅಲಂಕಾರಗಳು, ಮನೋಹರವರ್ಣನೆಗಳು ಓದುಗನಿಗೆ ವಿನೂತನ ಅನುಭವವನ್ನು ನೀಡುತ್ತವೆ :

ರಾಮರಾಜ್ಯದ ವರ್ಣನೆ :

ಪ್ರಶಾಸತೀಶೇ ಪೃಥಿವೀ ಬಭೂವ ವಿರಿಂಚಿಲೋಕಸ್ಯ ಸಮಾ ಗುಣೋನ್ನತೌ ।
ಜನೋಽಖಿಲೋ ವಿಷ್ಣುಪರೋ ಬಭೂವ ನ ಧರ್ಮಹಾನಿಶ್ಚ ಬಭೂವ ಕಸ್ಯಚಿತ್ ॥

ಗುಣೈಶ್ಚ ಸರ್ವೈರುದಿತಾಶ್ಚ ಸರ್ವೇ ಯಥಾಯಥಾ ಯೋಗ್ಯತಯೋಚ್ಚನೀಚಾಃ ।
ಸಮಸ್ತರೋಗಾದಿಭರುಜ್ಝಿತಾಶ್ಚ ಸರ್ವೇ ಸಹಸ್ರಾಯುಷ ಊರ್ಜಿತಾ ಧನೈಃ ॥
ಸರ್ವೇ ಜನಾ ನಿತ್ಯಬಲೋಪಪನ್ನಾ ಯಥೇಷ್ಟಬುದ್ಧ್ಯಾ ಚ ಸದೋಪಪನ್ನಾಃ ।
ಸಮಸ್ತದೋಷೈಶ್ಚ ಸದಾ ವಿಹೀನಾಸ್ಸರ್ವೇ ಸುರೂಪಾಶ್ಚ ಸದಾ ಮಹೋತ್ಸವಾಃ ॥
ಸರ್ವೇ ಮನೋವಾಕ್ತನುಭಿಸ್ಸದೈವ ವಿಷ್ಣುಂ ಯಜಂತೇ ನತು ಕಂಚಿದನ್ಯಮ್ ।
ಸಮಸ್ತರತ್ನೋದ್ಭರಿತಾ ಚ ಪೃಥ್ವೀ ಯಥೇಷ್ಟಧಾನ್ಯಾ ಬಹುದುಗ್ಧಗೋಮತೀ ॥
ಸಮಸ್ತಗಂಧಾಶ್ಚ ಸದಾऽತಿಹೃದ್ಯಾ ರಸಾ ಮನೋಹಾರಿಣ ಏವ ತತ್ರ ।
ಶಬ್ದಾಶ್ಚ ಸರ್ವೇ ಶ್ರವಣಾತಿಹಾರಿಣಃ ಸ್ಪರ್ಶಾಶ್ಚ ಸರ್ವೇ ಸ್ಪರ್ಶೇಂದ್ರಿಯಪ್ರಿಯಾಃ ॥
ನ ಕಸ್ಯಚಿದ್ದುಃಖಮಭೂತ್ಕಥಂಚಿನ್ನ ವಿತ್ತಹಾನಿಶ್ಚ ಬಭೂವ ಕಶ್ಚನ ।
ನಾಧರ್ಮಶೀಲೋ ನ ಚ ಕಶ್ಚನಾಪ್ರಜೋ ನ ದುಷ್ಕೃಜ್ಜೋ ನೈವ ಕುಭಾರ್ಯಕಶ್ಚ ॥
ಸ್ತ್ರಿಯೋ ನ ಚಾಸನ್ ವಿಧವಾಃ ಕಥಂಚಿನ್ನ ವೈ ಪುಮಾಂಸೋ ವಿಧುರಾ ಬಭೂವುಃ ।
ನಾನಿಷ್ಟಯೋಗಶ್ಚ ಬಭೂವ ಕಸ್ಯಚಿನ್ನ ಚೇಷ್ಟಹಾನಿರ್ನ ಚ ಪೂರ್ವಮೃತ್ಯುಃ ॥
ಯಥೇಷ್ಟಮಾಲ್ಯಾಭರಣಾನುಲೇಪನಾಃ ಯಥೇಷ್ಟಪಾನಾಶನವಾಸಸೋऽಖಿಲಾಃ ।
ಬಭೂವುರೀಶೇ ಜಗತಾಂ ಪ್ರಶಾಸತಿ ಪ್ರಕೃಷ್ಟಧರ್ಮೇಣ ಜನಾರ್ದನೇ ನೃಪೇ ॥

- (೯/೪-೧೧)

ವ್ಯಾಸಾವತಾರದ ವರ್ಣನೆ :

ದ್ವೀಪೇ ಭಗಿನ್ಯಾಸ್ತು ಯಮಸ್ಯ ವಿಶ್ವಕೃತ್ ಪ್ರಕಾಶತೇ ಜ್ಞಾನಮರೀಚಿಮಂಡಲಃ ।
ಪ್ರಭಾಸಯನ್ಖಂಡಬಹಿಸ್ತಥಾऽಂತಃ ಸಹಸ್ರಲಕ್ಷಾಮಿತಭಾನುದೀಧಿತಿಃ ॥
ಅಗಣ್ಯದಿವ್ಯೋರುಗುಣಾರ್ಣವಃ ಪ್ರಭುಃ ಸಮಸ್ತವಿದ್ಯಾಧಿಪತಿರ್ಜಗದ್ಗುರುಃ ।
ಅನಂತಶಕ್ತಿರ್ಜಗದೀಶ್ವರೇಶ್ವರಸ್ಸಮಸ್ತದೋಷಾತಿವಿದೂರವಿಗ್ರಹಃ ॥

ಶುಭಮರತಕವರ್ಣೋ ರಕ್ತಪಾದಾಬ್ಜನೇತ್ರಾಧರಕರನಖರಸನಾಗ್ರಶ್ಚಕ್ರಶಂಖಾಬ್ಜರೇಖಃ ।
ರವಿಕರವರಗೌರಂ ಚರ್ಮ ಚೈಣಂ ವಸಾನಸ್ತಟದಮಲಜಟಾಸಂದೀಪ್ತಚೂಡಂ ದಧಾನಃ ॥

ವಿಸ್ತೀರ್ಣವಕ್ಷಾಃ ಕಮಲಾಯತಾಕ್ಷೋ ಬೃಹದ್ಭುಜಃ ಕಂಬುಸಮಾನಕಂಠಃ ।
ಸಮಸ್ತವೇದಾನ್ ಮುಖತಸ್ಸಮುದ್ಗಿರನ್ನನಂತಚಂದ್ರಾಧಿಕಕಾಂತಿಸನ್ಮುಖಃ ॥

ಪ್ರಬೋಧಮುದ್ರಾಭಯದೋರ್ದ್ವಯಾನ್ವಿತೋ ಯಜ್ಞೋಪವೀತಾಜಿನಮೇಖಲೋಲ್ಲಸನ್ ।
ದೃಶಾ ಮಹಾಜ್ಞಾನಭುಜಂಗದಷ್ಟಮುಜ್ಜೀವಯಾನೋ ಜಗದತ್ಯರೋಚತ॥

(೧೦/೫೦-೫೫)

ರಾಮಾಯಣ ಮಹಾಭಾರತಗಳ ಅಪಾರ ಯಶಸ್ಸಿಗೆ ಅವುಗಳಲ್ಲಿ ಬಂದಿರುವ ಯುದ್ಧ–ವರ್ಣನೆಯೂ ಒಂದು ಪ್ರಮುಖ ಕಾರಣ. ಪ್ರಪಂಚದ ಬೇರಾವ ಕೃತಿಯೂ ಸಮರದ ಚಿತ್ರವನ್ನು

ಅಷ್ಟು ಪರಿಣಾಮಕಾರಿಯಾಗಿ ನೀಡಿಲ್ಲ. ಭಾಸಕಾಳಿದಾಸಾದಿ ವಿಶ್ವಖ್ಯಾತಿಯ ಮಹಾಕವಿಗಳೂ ಸಹ ಯುದ್ಧಗಳ ವರ್ಣನೆಗೆ ತೊಡಗಿಲ್ಲ. ಮಹಾಭಾರತದ ಅನಂತರ ಯುದ್ಧವರ್ಣನೆಯನ್ನು ಯಶಸ್ವಿಯಾಗಿ, ಪರಿಣಾಮಕಾರಿಯಾಗಿ ಮುಂದಿಟ್ಟ ಏಕಮಾತ್ರ ಕೃತಿ ಎಂಬುದು ಇದರ ಮತ್ತೊಂದು ಹಿರಿಮೆ.

ಅಲಂಕಾರಗಳು :

ಉಪಮಾ, ರೂಪಕ ಮೊದಲಾದ ಅಲಂಕಾರಗಳ ಬಳಕೆ ಈ ಕೃತಿಯ ಉದ್ದಕ್ಕೂ ಕಂಡುಬರುತ್ತದೆ :

೧) ಶ್ರೀವೇದವ್ಯಾಸ, ಶ್ರೀರಾಮ ಹಾಗೂ ಶ್ರೀಕೃಷ್ಣ – ಈ ಮೂರು ರೂಪಗಳನ್ನು ಕ್ರಮವಾಗಿ ಸೂರ್ಯ, ಚಂದ್ರ ಹಾಗೂ ಸಾಗರ ಎಂಬುದಾಗಿ ಸುಂದರರೂಪಕದಲ್ಲಿ ವರ್ಣಿಸುವ ಮೂರನೆಯ ಅಧ್ಯಾಯದ ಮಂಗಲಪದ್ಯಗಳು ಅದೆಷ್ಟು ಮನೋಜ್ಞ ಎಂಬುದು ಮೇಲ್ನೋಟಕ್ಕೇ ಗಮನಕ್ಕೆ ಬರುತ್ತದೆ :

ಜಯತ್ಯಜೋಽಖಿಂಡಗುಣೋರುಮಂಡಲಃ ಸದೋದಿತೋ ಜ್ಞಾನಮರೀಚಿಮಾಲೀ ।
ಸ್ವಭಕ್ತಹಾರ್ದೋಽಚ್ಚತಮೋನಿಹಂತಾ ವ್ಯಾಸಾವತಾರೋ ಹರಿರಾತ್ಮಭಾಸ್ಕರಃ ॥
ಜಯತ್ಯಜೋಽಕ್ಷೀಣಸುಖಾತ್ಮಬಿಂಬಃ ಸ್ವೈಶ್ವರ್ಯಕಾಂತಿಪ್ರತತಃ ಸದೋದಿತಃ ।
ಸ್ವಭಕ್ತಸಂತಾಪದುರಿಷ್ಟಹಂತಾ ರಾಮಾವತಾರೋ ಹರಿರೀಶಚಂದ್ರಮಾಃ ॥
ಜಯತ್ಯಸಂಖ್ಯೋರುಬಲಾಂಬುಪೂರೋ ಗುಣೋಚ್ಚರತ್ನಾಕರ ಆತ್ಮವೈಭವಃ ।
ಸದಾ ಸದಾತ್ಮಜ್ಞನದೀಭರಾಪ್ಯಃ ಕೃಷ್ಣಾವತಾರೋ ಹರಿರೇಕಸಾಗರಃ ॥ (೩/೧-೩)

೨) ಶ್ರೀರಾಮನು ಮಿಥಿಲೆಯನ್ನು ಪ್ರವೇಶಿಸುವ ವೈಭವವನ್ನು ಚಿತ್ರಿಸುವ ರೂಪಕ, ಉಪಮೆಗಳು ಹೀಗಿದೆ :

ಪಪುರ್ನಿರ್ಯಾಂತಂ ಸರಸಾಕ್ಷಿಭೃಂಗೈರ್ವರಾನನಾಬ್ಜಂ ಪುರುಷೋತ್ತಮಸ್ಯ ।
ವಿದೇಹನಾರೀನರವರ್ಯಸಂಘಾ ಯಥಾ ಮಹಾಪೌರುಷಿಕಾಸ್ತದಂಘ್ರಿಮ್ ॥ (೪/೧೩)

೩) ಶೂರ್ಪನಖಿಯು ಶ್ರೀರಾಮನನ್ನು ತನ್ನ ಪತಿಯಾಗು ಎಂದು ಕೇಳುವ ಸನ್ನಿವೇಶ ಕತ್ತಲೆಯು ಸೂರ್ಯನ ಯೋಗವನ್ನು ಬಯಸುವಂತಿತ್ತು ಎಂದು ವರ್ಣಿಸುವ ಉಪಮೆಯ ಸೌಂದರ್ಯ ಊಹಾತೀತ :

ರಾಮಂ ಸಮೇತ್ಯ ಭವ ಮೇ ಪತಿರಿತ್ಯವೋಚದ್ಭಾನುಂ ಯಥಾ ತಮ ಉಪೇತ್ಯ ಸುಯೋಗಕಾಮಂ ॥
(೫/೨೫)

೩) ಕುಂಭಕರ್ಣಪುತ್ರನಾದ ನಿಕುಂಭನು ಹನುಮಂತನ ಎದೆಯ ಮೇಲೆ ಪ್ರಾಸಾಯುಧವನ್ನು ಅಪ್ಪಳಿಸಿದಾಗ ಅದು ಗರುಡನ ಮೇಲೆ ಇಂದ್ರ ಪ್ರಯೋಗಿಸಿದ ವಜ್ರಾಯುಧದಂತೆ ವಿಫಲವಾಯಿತು ಎಂಬ ಮತ್ತೊಂದು ಉಪಮೆ ಹೀಗಿದೆ :

ವಿಚೂರ್ಣತೋಽಸೌ ತದುರಸ್ಕಭೇದ್ಯೇ ಯಥೈವ ವಜ್ರೋ ವಿಪತೌ ವೃಥಾಽಭವತ್ ॥ (೮/೩೧)

ಗ್ರಂಥದುದ್ದಕ್ಕೂ ಕಂಡುಬರುವ ಇಂತಹ ಪರಿಣಾಮಕಾರಿಯಾದ ಅಲಂಕಾರಗಳ ಬಳಕೆ ಸನ್ನಿವೇಶದ ಸಮಗ್ರಗ್ರಹಿಕೆಗೆ ನೀಡುವ ನೆರವು ಅಪಾರ.

೨೩) ಹರಿಸರ್ವೋತ್ತಮತ್ತ್ವದ ಪ್ರತಿಪಾದನೆ

ವೇದಾದಿಸಮಸ್ತಶಾಸ್ತ್ರಗಳ ಒಟ್ಟು ಹೃದಯ ವಿಷ್ಣುಸರ್ವೋತ್ತಮತ್ತ್ವದ ಪ್ರತಿಪಾದನೆ. ರಾಮಾಯಣ, ಮಹಾಭಾರತಗಳಂತೂ ಮೇಲ್ನೋಟಕ್ಕೇ ವಿಷ್ಣುಪರಕೃತಿಗಳು. ರಾಮಾಯಣದ ರಾಮ, ಮಹಾಭಾರತದ ಕೃಷ್ಣ ಇಬ್ಬರೂ ವಿಷ್ಣುವಿನ ಅವತಾರ. ಅವರ ಮಹಿಮೆ ಹೇಳುವ ಅವೆರಡೂ ವೈಷ್ಣವಕೃತಿಗಳೇ. ಭಾಗವತಾದಿಪುರಾಣಗಳು ವಿಷ್ಣುವಿನ ಅವತಾರಗಳನ್ನೇ ವರ್ಣಿಸುವ ವೈಷ್ಣವಪುರಾಣಗಳು. ಇತರ ಯಾವುದೇ ಮೂಲಕೃತಿಯಲ್ಲೂ ಸಹ ಮೂಲತಃ ವಿಷ್ಣು–ಸರ್ವೋತ್ತಮತ್ತ್ವವೇ ಪ್ರತಿಪಾದಿತವಾಗಿದೆ. ಭಾರತೀಯ ತತ್ತ್ವಶಾಸ್ತ್ರದ ಶಿಖರ ಭಗವದ್ಗೀತೆ ಶ್ರೀಕೃಷ್ಣನ ಉಪದೇಶ. ಅವನು ಭಗವಂತನಾದ್ದರಿಂದಲೇ ಅದು ಭಗವದ್ಗೀತೆ. ಸರ್ವಶ್ರೇಷ್ಠ ಸ್ತೋತ್ರವಾದ ವಿಷ್ಣುಸಹಸ್ರನಾಮ ಹೆಸರಿಂದಲೇ ಸೂಚಿತವಾಗುವಂತೆ ವಿಷ್ಣುಪರಕೃತಿ. ಆಪಾತತಃ ಕೆಲವೆಡೆ ಅನ್ಯದೇವತಾಪಾರಮ್ಯ ಕಂಡುಬಂದರೂ, ಪೂರ್ವಾಪರ ಸಮನ್ವಯ ಮಾಡಿಕೊಂಡಾಗ ಮೂಲತಃ ವಿಷ್ಣುಪಾರಮ್ಯವೇ ಸಕಲಶಾಸ್ತ್ರಗಳ ಮಹಾತಾತ್ಪರ್ಯ ಎಂಬುದು ಅವರ ಸ್ಪಷ್ಟ ನಿರೂಪಣೆ :

ವೇದೇ ರಾಮಾಯಣೇ ಚೈವ ಪುರಾಣೇ ಭಾರತೇ ತಥಾ ।
ಆದಾವಂತೇ ಚ ಮಧ್ಯೇ ಚ ವಿಷ್ಣುಃ ಸರ್ವತ್ರ ಗೀಯತೇ ॥
ಆಲೋಡ್ಯ ಸರ್ವಶಾಸ್ತ್ರಾಣಿ ವಿಚಾರ್ಯ ಚ ಪುನಃ ಪುನಃ ।
ಇದಮೇಕಂ ಸುನಿಷ್ಪನ್ನಂ ಧ್ಯೇಯೋ ನಾರಾಯಣಃ ಸದಾ ॥

ರಾಮಾಯಣದಲ್ಲಿ ರಾಮಭಕ್ತರಲ್ಲಿ ಹಿರಿಯ ಹನುಮಂತ, ಸುಗ್ರೀವ ಮೊದಲಾದ ಎಲ್ಲರೂ ಸಹ ಹನುಮಂತನಿಂದ ಉಪಕೃತರು. ಅವನ ಮೂಲಕವೇ ಶ್ರೀರಾಮನಕೃಪೆಗೆ ಪಾತ್ರರಾದವರು. ಮಹಾಭಾರತದಲ್ಲಿ ಕೃಷ್ಣಸೇವಕರಲ್ಲಿ ಭೀಮಸೇನನದು ಅಗ್ರಸ್ಥಾನ. ಅರ್ಜುನ ಮೊದಲಾದ ಎಲ್ಲ ಸಾತ್ತ್ವಿಕರು ಆತನನ್ನು ಅವಲಂಬಿಸಿ, ಯಶಸ್ಸನ್ನು ಕಂಡವರು. ದುರ್ಯೋಧನ, ಜರಾಸಂಧ

ಮೊದಲಾದಂತಹ ಮಹಾಖಳರು ಭೀಮನಿಂದಲೇ ಹತರಾದವರು. ಎಂದರೆ ಈ ಹನುಮಂತ, ಭೀಮಸೇನರಿಬ್ಬರೂ ಜೀವೋತ್ತಮನಾದ ಶ್ರೀವಾಯುದೇವರ ಅವತಾರ. ಇವರಿಬ್ಬರಿಂದಲೂ ಆರಾಧ್ಯನಾದ ಶ್ರೀರಾಮ, ಶ್ರೀಕೃಷ್ಣ ಇಬ್ಬರೂ ಮಹಾವಿಷ್ಣುವಿನ ಅವತಾರ. ಹೀಗೆ ಜೀವೋತ್ತಮರಾದ ಶ್ರೀವಾಯುದೇವರಿಂದ ವಂದ್ಯನೆಂಬ ಕಾರಣಕ್ಕೂ ಸಹ ಶ್ರೀವಿಷ್ಣುವಿನ ಸರ್ವೋತ್ತಮತ್ವ ಸಿದ್ಧವಾಗುತ್ತದೆ ಎಂಬುದನ್ನು ಮನೋಜ್ಞವಾಗಿ ಪ್ರತಿಪಾದಿಸಿರುವರು :

ನಿರ್ಣಯಃ ಸರ್ವಶಾಸ್ತ್ರಾಣಾಂ ಸದೃಷ್ಟಾಂತೋ ಹಿ ಭಾರತೇ ।
ಕೃತೋ ವಿಷ್ಣುವಶತ್ವಂ ಹಿ ಬ್ರಹ್ಮಾದೀನಾಂ ಪ್ರಕಾಶಿತಮ್ ॥
ಯತಃ ಕೃಷ್ಣವಶೇ ಸರ್ವೇ ಭೀಮಾದ್ಯಾಃ ಸಮ್ಯಗೀರಿತಾಃ ।
ಸರ್ವೇಷಾಂ ಜ್ಞಾನದೋ ವಿಷ್ಣುಃ ಯಶೋದಾತೇತಿ ಚೋದಿತಃ ॥
ಯಸ್ಮಾತ್ ವ್ಯಾಸಾತ್ಮನಾ ತೇಷಾಂ ಭಾರತೇ ಯಶ ಊಚಿವಾನ್ ।
ಜ್ಞಾನದಶ್ಚ ಶುಕಾದೀನಾಂ ಬ್ರಹ್ಮರುದ್ರಾದಿರೂಪಿಣಾಮ್ ॥ (೨/೧೨-೧೪)

೨೩) ಇತಿಹಾಸಪುರಾಣಗಳ ವಿವೇಚನೆಗೆ ಮಾರ್ಗದರ್ಶನ

ಇತಿಹಾಸಪುರಾಣ ಪ್ರಪಂಚ ಅತ್ಯಂತ ಗಹನವಾದುದು :

''ಯದಿ ವಿದ್ಯಾಚ್ಚತುರ್ವೇದಾನ್ ಸಾಂಗೋಪನಿಷದಾನ್ ದ್ವಿಜಃ।
ನ ಚೇತ್ ಪುರಾಣಂ ಸಂವಿದ್ಯಾನ್ನೈವ ಸ ಸ್ಯಾದ್ ವಿಚಕ್ಷಣಃ॥

ಅದರ ಪರಿಜ್ಞಾನವಿಲ್ಲದೆ ವೇದೋಪನಿಷತ್ತುಗಳ ಅರ್ಥನಿರ್ಣಯವಂತೂ ಅಶಕ್ಯ :

ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್।
ಬಿಭೇತ್ಯಲ್ಪಶ್ರುತಾದ್ ವೇದೋ ಮಾಮಯಂ ಪ್ರಚಲಿಷ್ಯತಿ॥''

ಅಂದರೆ ಇತಿಹಾಸಪುರಾಣಗಳು ಒಂದರ್ಥದಲ್ಲಿ ಸಮಗ್ರವೈದಿಕಸಾಹಿತ್ಯದ ಭಾಷ್ಯ. ಆದರೆ ತನ್ನ ಜಟಿಲತೆಯಿಂದಾಗಿ ಇತಿಹಾಸಪುರಾಣಪ್ರಪಂಚ ತೆರೆದುಕೊಳ್ಳುವುದು ದುರ್ಲಭ. ಈ ನಿಟ್ಟಿನಲ್ಲಿ ಮಹಾಭಾರತತಾತ್ಪರ್ಯನಿರ್ಣಯದ ಕೊಡುಗೆ ಅಪಾರ. ಈ ಮೊದಲೇ ಹೇಳಿರುವಂತೆ ಅದು ಸಮಗ್ರ ಇತಿಹಾಸಪುರಾಣಗಳ ಭಾಷ್ಯ. ಇತಿಹಾಸ ಪುರಾಣಗಳ ಅರ್ಥಗಳನ್ನು ನಿರ್ಣಯಿಸುವುದರ ಜೊತೆಗೆ ನಿರ್ಣಯಕ್ಕೆ ಮಾರ್ಗದರ್ಶಕವಾದ ಸೂತ್ರಗಳನ್ನು ಸಹ ನೀಡಿರುವುದು ಈ ಕೃತಿಯ ಮತ್ತೊಂದು ಹಿರಿಮೆ:

ನಿರ್ಣಯಾಯೈವ ಯತ್ಪ್ರೋಕ್ತಂ ಬ್ರಹ್ಮಸೂತ್ರಂ ತು ವಿಷ್ಣುನಾ ।
ವ್ಯಾಸರೂಪೇಣ ತದ್ಗ್ರಾಹ್ಯಂ ತತ್ಪ್ರೋಕ್ತಾಃ ಸರ್ವನಿರ್ಣಯಾಃ ॥

ಯಥಾರ್ಥವಚನಾನಾಂ ಚ ಮೋಹಾರ್ಥಾನಾಂ ಚ ಸಂಶಯಮ್ ।
ಅಪನೇತುಂ ಹಿ ಭಗವಾನ್ ಬ್ರಹ್ಮಸೂತ್ರಮಚೀಕ್ಲೃಪತ್ ॥
ತಸ್ಮಾತ್ಸೂತ್ರಾರ್ಥಮಾಗೃಹ್ಯ ಕರ್ತವ್ಯಃ ಸರ್ವನಿರ್ಣಯಃ ।
ಸರ್ವದೋಷವಿಹೀನತ್ವಂ ಗುಣೈಸ್ಸರ್ವೈರುದೀರ್ಣತಾ ॥ (೧/೪೨-೪೪)

ವ್ಯತ್ಯಾಸಾಸ್ತ್ವೇವಮಾದ್ಯಾಶ್ಚ ಪ್ರಾತಿಲೋಮ್ಯಾದಯಸ್ತಥಾ ॥
ದೃಶ್ಯಂತೇ ಭಾರತಾದ್ಯೇಷು ಲಕ್ಷಣಗ್ರಂಥತಶ್ಚ ತೇ ।
ಜ್ಞಾಯಂತೇ ಬಹುಭಿರ್ವಾಕ್ಯೈಃ ನಿರ್ಣಯಗ್ರಂಥತಸ್ತಥಾ ॥
ತಸ್ಮಾದ್ವಿನಿರ್ಣಯಗ್ರಂಥಾನಾಶ್ರಿತ್ಯೈವ ಚ ಲಕ್ಷಣಮ್ ।
ಬಹುವಾಕ್ಯಾನುಸಾರೇಣ ನಿರ್ಣಯೋಽಯಂ ಮಯಾ ಕೃತಃ ॥
ಉಕ್ತಂ ಲಕ್ಷಣಶಾಸ್ತ್ರೇ ಚ ಕೃಷ್ಣದ್ವೈಪಾಯನೋದಿತೇ ।
ತ್ರಿಭಾಷಾಂ ಯೋ ನ ಜಾನಾತಿ ರೀತೀನಾಂ ಶತಮೇವ ಚ ॥
ವ್ಯತ್ಯಾಸಾದೀನ್ ಸಪ್ತಭೇದಾನ್ವೇದಾದ್ಯರ್ಥಂ ತಥಾ ವದೇತ್ ।
ಸ ಯಾತಿ ನಿರಯಂ ಘೋರಮನ್ಯಥಾಜ್ಞಾನಸಂಭವಮ್ ।
ಇತ್ಯನ್ಯೇಷು ಚ ಶಾಸ್ತ್ರೇಷು ತತ್ರ ತತ್ರೋದಿತಂ ಬಹು ॥
ವ್ಯತ್ಯಾಸಃ ಪ್ರಾತಿಲೋಮ್ಯಂ ಚ ಗೋಮೂತ್ರೀ ಪ್ರಹ್ವಸಸ್ತಥಾ ।
ಉಕ್ಷಣಸ್ಸುಧುರಃ ಸಾಧು ಸಪ್ತ ಭೇದಾಃ ಪ್ರಕೀರ್ತಿತಾಃ ॥
ಇತ್ಯಾದಿಲಕ್ಷಣಾನ್ಯತ್ರ ನೋಚ್ಯಂತೇಽನ್ಯಪ್ರಸಂಗತಃ ।
ಅನುಸಾರೇಣ ತೇಷಾಂ ತು ನಿರ್ಣಯಃ ಕ್ರಿಯತೇ ಮಯಾ । (೯/೧೩೫-೧೪೧)

ಭಾಷಾಸ್ತು ತ್ರಿವಿಧಾಸ್ತತ್ರ ಮಯಾ ವೈ ಸಂಪ್ರದರ್ಶಿತಾಃ ॥
ಉಕ್ತೋ ಯೋ ಮಹಿಮಾ ವಿಷ್ಣೋಸ್ಸ ತೂಕ್ತೋ ಹಿ ಸಮಾಧಿನಾ ।
ಶೈವದರ್ಶನಮಾಲಂಬ್ಯ ಕ್ವಚಿಚ್ಛೈವೀ ಕಥೋದಿತಾ ॥
ಸಮಾಧಿಭಾಷಯೋಕ್ತಂ ಯತ್ತತ್ಸರ್ವಂ ಗ್ರಾಹ್ಯಮೇವ ಹಿ ।
ಅವಿರುದ್ಧಂ ಸಮಾಧೇಸ್ತು ದರ್ಶನೋಕ್ತಂ ಚ ಗೃಹ್ಯತೇ ॥
ಆದ್ಯಂತಯೋರ್ವಿರುದ್ಧಂ ಯದ್ದರ್ಶನಂ ತದುದಾಹೃತಮ್ ।
ದರ್ಶನಾಂತರಸಿದ್ಧಂ ಚ ಗುಹ್ಯಭಾಷಾಽನ್ಯಥಾ ಭವೇತ್ ॥ (೨/೧೧೯-೧೨೧)

ಎಂದರೆ ಬ್ರಹ್ಮಸೂತ್ರ ಮೊದಲಾದಂತಹ ನಿರ್ಣಾಯಕಶಾಸ್ತ್ರಗಳ ಅಧ್ಯಯನ, ಉಪಕ್ರಮ, ಉಪಸಂಹಾರ, ಅರ್ಥವಾದ, ಉಪಪತ್ತಿ ಅಭ್ಯಾಸ, ಅಪೂರ್ವತಾ, ಫಲ ಎಂಬ ಷಡ್ವಿಧ–ತಾತ್ಪರ್ಯನಿರ್ಣಯಗಳ ಅಳವಡಿಕೆ, ಸಮಾಧಿ, ದರ್ಶನ ಮತ್ತು ಗುಹ್ಯ ಎಂಬ ಭಾಷಾತ್ರಯದ ವಿವೇಚನೆ, ವೈದರ್ಭೀ, ಗೌಡೀ, ಪಾಂಚಾಲಿ ಮೊದಲಾದ ಮೂರು ಶೈಲಿಗಳ ಪರಿಜ್ಞಾನ, ವ್ಯತ್ಯಾಸ, ಪ್ರಾತಿಲೋಮ್ಯ, ಗೋಮೂತ್ರೀ, ಪ್ರಹ್ವಸ, ಉಕ್ಷಣ, ಸುಧುರ ಮತ್ತು ಸಾಧು ಎಂಬ

ಸಪ್ತವಿಧನಿರೂಪಣಾಪ್ರಭೇದಗಳ ಪರಿಕಲ್ಪನೆ – ಇಷ್ಟೆಲ್ಲ ಪರಿಕರಗಳ ಹಿನ್ನೆಲೆಯಲ್ಲಿ ಮಾತ್ರ ಇತಿಹಾಸಪುರಾಣಗಳ ಹೃದಯವನ್ನು ಅರಿಯಲು ಸಾಧ್ಯ ಎಂದರ್ಥ. ಈ ದೃಷ್ಟಿಕೋನ ಸಮಗ್ರ ವಿಮರ್ಶನಪ್ರಪಂಚಕ್ಕೇ ಆಚಾರ್ಯ ಶ್ರೀಮಧ್ವರ ವಿನೂತನ ಕೊಡುಗೆ.

೨೪) ಪಾತ್ರಚಿತ್ರಣ

ಮಹಾಭಾರತ ತನ್ನ ತತ್ತ್ವ ಹಾಗೂ ಕಥೆಗಳಿಂದ ವಿಶ್ವದ ಅನುಪಮಕೃತಿಯಾಗಿರುವಂತೆ, ಅಪೂರ್ವಪಾತ್ರಪ್ರಪಂಚದಿಂದಾಗಿಯೂ ಅದ್ವಿತೀಯವೆನ್ನಿಸಿದೆ. ಆಜೀವಬ್ರಹ್ಮಚಾರಿಯಾದ ಕುರುಕುಲಪಿತಾಮಹ ಭೀಷ್ಮ, ಕುರುಪಾಂಡವರು ಮೊದಲಾಗಿ ಸಮಸ್ತಕ್ಷತ್ರಿಯವೃಂದದ ಆಚಾರ್ಯ ದ್ರೋಣ, ಧರ್ಮಸ್ವರೂಪನೆನ್ನಿಸಿದ ರಾಜ ಯುಧಿಷ್ಠಿರ, ಅಪ್ರತಿಮ ಧನುರ್ಧಾರಿ ಎನ್ನಿಸಿದ ಅರ್ಜುನ, ಮೇಲ್ನೋಟಕ್ಕೆ ಪಂಚಪತಿಗಳನ್ನು ಹೊಂದಿದ್ದಂತೆ ಕಂಡರೂ ವಿಶ್ವದ ಅಗ್ರಮಾನ್ಯ ಪತಿವ್ರತಾಶಿರೋಮಣಿಯೆನ್ನಿಸಿದ ದ್ರೌಪದೀ, ಸ್ವತಃ ಸೂರ್ಯಾವತಾರನಾಗಿಯೂ ಜೀವನ ಪೂರ್ತಿ ದುರ್ಯೋಧನಾದಿದುಷ್ಟಶಕ್ತಿಗಳ ಗ್ರಹಣಕ್ಕೆ ಒಳಗಾದ ಕರ್ಣ, ಪುತ್ರವ್ಯಾಮೋಹದಿಂದಾಗಿ ಒಳಗೂ ಕುರುಡನಾಗಿದ್ದ ಧೃತರಾಷ್ಟ್ರ. ತನ್ನ ಮಕ್ಕಳನ್ನು ಸಾತ್ತ್ವಿಕ ಮಾರ್ಗದಲ್ಲಿಯೇ ಪೂರ್ಣ ಅಭ್ಯುದಯ ಕಾಣಲು ಪ್ರಯತ್ನಿಸಿ ಯಶಸ್ವಿಯಾದ ಕುಂತೀ, ದುರ್ಯೋಧನಾದಿದುಷ್ಟಕೌರವರ ತಾಯಿ ಎನ್ನಿಸಿಕೊಂಡು ವ್ಯಾಮೋಹಕ್ಕೆ ಬೀಳದೆ ಧರ್ಮಪ್ರಜ್ಞೆಯನ್ನು ಮೆರೆದ ಗಾಂಧಾರಿ, ಎಲ್ಲಕ್ಕೂ ಮಿಗಿಲಾಗಿ ಸಮಸ್ತದುಷ್ಟಕೂಟಕ್ಕೆ ಸಿಂಹಸ್ವಪ್ನವಾಗಿ ಮೆರೆದ ಭೀಮಸೇನ, ಸಮಗ್ರಕಾರ್ಯಗಳ ಸೂತ್ರಧಾರನಾದ ಭಗವಂತ ಶ್ರೀಕೃಷ್ಣ– ಹೀಗೆ ಇಲ್ಲಿಯ ಒಂದೊಂದು ಪಾತ್ರವೂ ಅತ್ಯಂತ ವಿಶಿಷ್ಟ. ಇಂತಹ ಪಾತ್ರಗಳ ಹಿರಿಮೆಗರಿಮೆಗಳನ್ನು ದುಷ್ಟಪಾತ್ರಗಳ ದುರ್ಗುಣಗಳನ್ನು ಮೂಲಕೃತಿಯ ಬೆಳಕಿನಲ್ಲಿ ಸಮಗ್ರವಾಗಿ ವಿವೇಚಿಸುವ ಅಸಾಮಾನ್ಯಕೃತಿ ಎಂಬುದಾಗಿಯೂ ಮಹಾಭಾರತ–ತಾತ್ಪರ್ಯನಿರ್ಣಯ ಅತಿಮುಖ್ಯವೆನ್ನಿಸುವ ಕೃತಿ.

ಪಾಂಡುರಾಜ, ಅರ್ಜುನ, ದ್ರೋಣ ಮೊದಲಾದವರ ಹಿರಿಮೆಗಳನ್ನು ಸೂಕ್ತವಿಶೇಷಣಗಳ ಮೂಲಕ ಚಿತ್ರಿಸುವ ಅವರ ಕೆಲವು ವಾಕ್ಯಗಳನ್ನು ಗಮನಿಸಬಹುದು:

ಪಾಂಡುಶ್ಚ ಪುತ್ರಕಗುಣೈಃ ಸ್ವಗುಣೈಶ್ಚ ಸಾಕ್ಷಾತ್ಕೃಷ್ಣಾತ್ಮಜಸ್ಯತಮಸ್ಯ ಪದೈಕಭಕ್ತಃ ।
ಲೋಕಾನವಾಪ ವಿಮಲಾನ್ಮಹಿತಾನ್ಮಹದ್ಭಿಃ ಕಿಂ ಚಿತ್ರಮತ್ರ ಹರಿಪಾದವಿನಮ್ರಚಿತ್ತೇ ॥ (೧೪/೫೪)

ದೇಯಾ ಚ ಕನ್ಯಾ ನಾಸ್ತಿ ಪಾರ್ಥೇನ ತುಲ್ಯೋ ವರೋಽಸ್ಮಾಕಂ ಕೌರವೇಯಶ್ಚ ಪಾರ್ಥಃ ।
ಪೌತ್ರಶ್ಚ ಕೃಷ್ಣಸ್ಯ ಸುಪೂರ್ಣಶಕ್ತೇಃ ಪೈತೃಷ್ವಸೇಯೋ ವೀರತಮೋ ಗುಣಾಢ್ಯಃ ॥ (೨೦/೨೦೨)

ಅಥಾಖಿಲಾನಾಂ ಪೃಥಿವೀಪತೀನಾಮಾಚಾರ್ಯಮಗ್ರ್ಯಂ ರಥಿನಾಂ ಸುವಿದ್ಯಮ್ ।
ರಾಮಸ್ಯ ವಿಶ್ವಾಧಿಪತೇಸ್ಸುಶಿಷ್ಯಂ ಚಕ್ರೇ ಚಮೂಪಂ ಧೃತರಾಷ್ಟ್ರಪುತ್ರಃ ॥ (೨೬/೧)

೨೫) ದೇವತಾತಾರತಮ್ಯದ ವಿವೇಚನೆ

ರಾಮಾಯಣ, ಮಹಾಭಾರತಗಳ ಕಥೆಯಲ್ಲಿನ ವಿವಿಧಪಾತ್ರಗಳು ವರ್ತಿಸುವ ಪರಿಯಲ್ಲಿ ಆ ಪಾತ್ರಗಳ ಸ್ವರೂಪಯೋಗ್ಯತೆ ಪ್ರತಿಫಲಿತವಾಗಿದ್ದು, ಅವುಗಳ ತಾರತಮ್ಯವೂ ಸಹ ಸ್ಫುಟಪಡುತ್ತದೆ. ಮೂಲಗ್ರಂಥಗಳಲ್ಲಿ ಪ್ರತಿಪಾದಿತವಾದ ದೇವತಾತಾರತಮ್ಯ ಹಾಗೂ ದೈತ್ಯತಾರತಮ್ಯಗಳು ಉದ್ದಕ್ಕೂ ಕಂಡುಬರುತ್ತದೆ ಎಂಬುದನ್ನು ಸಹ ಸಮಗ್ರವಿವೇಚಿಸುವ ಕೃತಿಯಾಗಿಯೂ ಮಹಾಭಾರತತಾತ್ಪರ್ಯನಿರ್ಣಯ ಅತ್ಯಂತ ಗಮನಾರ್ಹ. ಇತಿಹಾಸ–ಪುರಾಣಗಳ ಸಕಲ ಆಖ್ಯಾನ ಉಪಾಖ್ಯಾನಗಳಿಗೂ ಈ ದೇವತಾತಾರತಮ್ಯದಲ್ಲಿಯೇ ಮಹಾತಾತ್ಪರ್ಯ. ತಾರತಮ್ಯದಲ್ಲಿ ವ್ಯತ್ಯಾಸವಾದಂತೆ ಕಂಡುಬರುವ ಪ್ರಸಂಗಗಳನ್ನು ಅವರು ವಿಶ್ಲೇಷಿಸಿ, ಅಲ್ಲಿಯ ಆಂತರ್ಯವನ್ನು ಸ್ಫುಟಪಡಿಸಿರುವರು :

ಬಲದೇವಸ್ತತಃ ಪಶ್ಚಾತ್ತತಃ ಪಶ್ಚಾಚ್ಚ ಫಲ್ಗುನಃ ।
ನರಾವೇಶಾದನ್ಯಥಾ ತು ದ್ರೌಣಿಃ ಪಶ್ಚಾತ್ತತೋಽಪರೇ ॥ (೨/೪೩)

ಅಕ್ಷಯಾವಿಷುಧೀ ದಿವ್ಯೌ ಧ್ವಜೋ ವಾನರಲಕ್ಷಣಃ ।
ಗಾಂಡೀವಂ ಧನುಷಾಂ ಶ್ರೇಷ್ಠಂ ತೇನ ದ್ರೌಣೇರ್ವರೋಽರ್ಜುನಃ ॥ (೨/೧೭೮)

೨೬) ತಾತ್ತ್ವಿಕವಿಶ್ಲೇಷಣೆ

ಇತಿಹಾಸಪುರಾಣಗಳು ಮೂಲತಃ ಆಧ್ಯಾತ್ಮಿಕಮೌಲ್ಯಗಳ ವಿವೇಚನೆಯಾಗಿವೆ. ಮಹಾಭಾರತದ ಆಧ್ಯಾತ್ಮಿಕಮೌಲ್ಯ ಮೇಲ್ನೋಟಕ್ಕೆ ಅತಿಸ್ಪಷ್ಟ ಎಂದು ತೋರಿಸುತ್ತ ಅವುಗಳನ್ನು ಅವರು ತೆರೆದಿಟ್ಟಿರುವ ರೀತಿ ಅನನ್ಯವಾದುದು.

ಮಹಾಭಾರತದ ತಾತ್ತ್ವಿಕ ಮೌಲ್ಯದ ಬಗ್ಗೆ ಗಮನಹರಿಸಿದ ಆಧುನಿಕ ವಿದ್ವಾಂಸರಾದ ಡಾ॥ವಿ.ಎಸ್.ಸುಕ್ಥಂಕರ್ ಅವರು, ಮಹಾಭಾರತದ ತಾತ್ತ್ವಿಕವಿವೇಚನೆಯ ಬಗ್ಗೆ ಮೊದಲ ಬಾರಿಗೆ ಬೆಳಕು ಚೆಲ್ಲಿದ ಶ್ರೇಯಸ್ಸು ಮಹಾಮಹಿಮರಾದ ಶ್ರೀಆನಂದತೀರ್ಥರದು ಎಂದು ತುಂಬು ಗೌರವದಿಂದ ಉಲ್ಲೇಖಿಸಿರುವರು :

..... I will only mention that this is no new discovery of mine, but that such psychological and metaphysical explanations of the characters and the plot of the *Mahābhārata* are scattered in the ancient Indian commentaries of the epic, the best known among them being the *Mahābhārata-tātparya-nirṇaya* of Ānandatīrtha, the great Madhvācārya, who has clearly stated in that work that the story of the Great Epic has been related in such a way as to convey also an allegorical meaning :

evam adhyātmaniṣṭhaṁ hi Bhāratam sarvam ucyate /
durvijñeyam ataḥ sarvair Bhāratam tu surair api //

Ānandatīrtha explains the symbolism by giving the psychological concepts corresponding to many of the important characters, differing partly from those given by me. .....

- On the Meaning of the Mahābhārata
Pub : Asiatic Society of Bombay,
Town hall, Bombay, 1957.

೨೭) ವಿಮರ್ಶೆಯ ಸೂತ್ರಗಳು

ಮಹಾಭಾರತದ ಪಾತ್ರಗಳ ವಿಮರ್ಶೆಗೆ ನೆರವಾಗುವ ಮೂಲಭೂತ ವಿವೇಚನಾ–ಸರಣಿಯನ್ನು ಈ ಕೃತಿ ಒದಗಿಸುತ್ತದೆ. ಬ್ರಾಹ್ಮಣರ ಹಿರಿಮೆಯನ್ನು ಅವರ ಜ್ಞಾನದಿಂದಲೂ, ಕ್ಷತ್ರಿಯರ ಹಿರಿಮೆಯನ್ನು ಅವರ ಬಾಹುಬಲದಿಂದಲೂ, ಸ್ತ್ರೀಯರ ತಾರತಮ್ಯವನ್ನು ಅವರ ರೂಪಸಂಪತ್ತಿನಿಂದಲೂ ನಿರ್ಣಯಿಸಬೇಕು ಎಂಬ ಅವರ ವಿವೇಚನೆ ತೀರ ವಿನೂತನವಾದುದು. ಇಂತಹ ವಿವೇಚನೆಗೆ ನೆರಬಾಗುವ ಜ್ಞಾನ, ಬಲ ರೂಪಗಳು ಸ್ವಾಭಾವಿಕವಾಗಿರಬೇಕೇ ಹೊರತು, ವರ, ಶಸ್ತ್ರಗಳಿಂದಾಗಿ ಬಂದವುಗಳಾಗುರಬಾರದು ಎಂಬ ಎಚ್ಚರವನ್ನೂ ಅವರು ನೀಡಿರುವರು :

ಯೋ ಯ ಏವ ಬಲಜ್ಯೇಷ್ಠಃ ಕ್ಷತ್ರಿಯೇಷು ಸ ಉತ್ತಮಃ ।
ಅಂಗಂ ಚೇದ್ವಿಷ್ಣುಕಾರ್ಯೇಷು ತದ್ಭಕ್ತ್ಯೈವ ನ ಚಾನ್ಯಥಾ ॥
ಬಲಂ ನೈಸರ್ಗಿಕಂ ತಚ್ಚೇದ್ದಾಸ್ಯಾದೇಸ್ತದನ್ಯಥಾ ।
ಅನ್ಯಾವೇಶನಿಮಿತ್ತಂ ಚೇದ್ಬಲಮನ್ಯತ್ಕಕಂ ಹಿ ತತ್ ॥
ದೇವೇಷು ಬಲಿನಾಮೇವ ಭಕ್ತಿಜ್ಞಾನೇ ನ ಚಾನ್ಯಥಾ ।
ಸ ಏವ ಚ ಪ್ರಿಯೋ ವಿಷ್ಣೋರ್ನಾನ್ಯಥಾ ತು ಕಥಂಚನ ॥
ತಸ್ಮಾದ್ಯೋ ಯೋ ಬಲಜ್ಯೇಷ್ಠಃ ಸ ಗುಣಜ್ಯೇಷ್ಠ ಏವ ಚ ।
ಬಲಂ ಹಿ ಕ್ಷತ್ರಿಯೇ ವ್ಯಕ್ತಂ ಜ್ಞಾಯತೇ ಸ್ಥೂಲದೃಷ್ಟಿಭಿಃ ॥
ಜ್ಞಾನಾದಯೋ ಗುಣಾ ಯಸ್ಮಾತ್ ಜ್ಞಾಯಂತೇ ಸೂಕ್ಷ್ಮದೃಷ್ಟಿಭಿಃ ।
ತಸ್ಮಾದ್ಯತ್ರ ಬಲಂ ತತ್ರ ವಿಜ್ಞಾತವ್ಯಾ ಗುಣಾಃ ಪರೇ ॥
ದೇವೇಷ್ವೇವ ನ ಚಾನ್ಯೇಷು ವಾಸುದೇವಪ್ರತೀಪತಃ ।
ಕ್ಷತ್ರಾದನ್ಯೇಷ್ವಪಿ ಬಲಂ ಪ್ರಮಾಣಂ ಯತ್ರ ಕೇಶವಃ ।
ಪ್ರವೃತ್ತೋ ದುಷ್ಟನಿಧನೇ ಜ್ಞಾನಕಾರ್ಯೇ ತದೈವ ಚ ॥
ಅನ್ಯತ್ರ ಬ್ರಾಹ್ಮಣಾನಾಂ ತು ಪ್ರಮಾಣಂ ಜ್ಞಾನಮೇವ ಹಿ ।
ಕ್ಷತ್ರಿಯಾಣಾಂ ಬಲಂ ಚೈವ ಸರ್ವೇಷಾಂ ವಿಷ್ಣುಕಾರ್ಯತಾ ॥ (೨/೧೭-೨೩)

ಯತ್ರ ರೂಪಂ ತತ್ರ ಗುಣಾಃ ಭಕ್ತ್ಯಾದ್ಯಾಃ ಸ್ತ್ರೀಷು ನಿತ್ಯಶಃ ।
ರೂಪಂ ಹಿ ಸ್ಥೂಲದೃಷ್ಟೀನಾಂ ದೃಶ್ಯಂ ವ್ಯಕ್ತಂ ತತೋ ಹಿ ತತ್ ॥
ಪ್ರಾಯೋ ವೇತ್ತುಂ ನ ಶಕ್ಯಂತೇ ಭಕ್ತ್ಯಾದ್ಯಾಃ ಸ್ತ್ರೀಷು ಯತ್ತತಃ ।
ಯಾಸಾಂ ರೂಪಂ ಗುಣಾಸ್ತಾಸಾಂ ಭಕ್ತ್ಯಾದ್ಯಾ ಇತಿ ನಿಶ್ಚಯಃ ॥
ಪ್ರಾಯೋ ವೇತ್ತುಂ ನ ಶಕ್ಯಂತೇ ಭಕ್ತ್ಯಾದ್ಯಾಃ ಸ್ತ್ರೀಷು ಯತ್ತತಃ ।
ಯಾಸಾಂ ರೂಪಂ ಗುಣಾಸ್ತಾಸಾಂ ಭಕ್ತ್ಯಾದ್ಯಾ ಇತಿ ನಿಶ್ಚಯಃ ॥
ತಚ್ಚ ನೈಸರ್ಗಿಕಂ ರೂಪಂ ದ್ವಾತ್ರಿಂಶಲ್ಲಕ್ಷಣೈರ್ಯುತಮ್ ।
ನಾಲಕ್ಷಣಂ ವಪುರ್ಮಾತ್ರಂ ಗುಣಹೇತುಃ ಕಥಂಚನ ॥
ಆಸುರೀಣಾಂ ವರಾದೇಸ್ತು ವಪುರ್ಮಾತ್ರಂ ಭವಿಷ್ಯತಿ ।
ನ ಲಕ್ಷಣಾನ್ಯತಸ್ತಾಸಾಂ ನೈವ ಭಕ್ತಿಃ ಕಥಂಚನ ॥ (೨/೩೬-೩೯)

೨೮) ಪ್ರಮಾಣೋದಾಹರಣೆ

ಆಚಾರ್ಯರ ಇತರ ಕೃತಿಗಳಂತೆ ಈ ಕೃತಿಯೂ ಪ್ರಮಾಣೋದಾಹರಣೆಗಳಿಂದ ತುಂಬಿದೆ. ತಾವು ಹೇಳುವ ಪ್ರತಿ ವಿಚಾರವನ್ನು ಸಹ ಸೂಕ್ತಪ್ರಮಾಣದೊಂದಿಗೆ ದೃಢಪಡಿಸುವ ಅವರ ಅಪೂರ್ವಶೈಲಿ ವಿಮರ್ಶನಪ್ರಪಂಚದ ಮತ್ತೊಂದು ಅದ್ಭುತ. ತಾತ್ಪರ್ಯನಿರ್ಣಯದ ಮೊದಲೆರಡು ಅಧ್ಯಾಯಗಳ ಬಹುಭಾಗ ಮೂಲತಃ ಇಂತಹ ಪ್ರಮಾಣಸಂಗ್ರಹವೇ ಆಗಿದೆ. ಕಥಾನಿರೂಪಣೆಯ ಪ್ರಸಂಗದಲ್ಲೂ ಅವರು ಮೂಲದಲ್ಲಿ ಬಳಕೆಯಾದ ಪದಗಳನ್ನೇ ಪ್ರಧಾನವಾಗಿ ಆಳವಡಿಸಿಕೊಂಡಿರುವುದು ಕೃತಿಯನ್ನು ಪಾರದರ್ಶಕವನ್ನಾಗಿಸಿದ್ದು ಜಿಜ್ಞಾಸುಗಳಿಗೆ ಅತ್ಯಂತ ಉಪಕಾರಕವೆನ್ನಿಸಿದೆ.

ತಾತ್ಪರ್ಯನಿರ್ಣಯೋದಾಹೃತಪ್ರಮಾಣಗ್ರಂಥಗಳು :

೧) ಬ್ರಹ್ಮಸೂತ್ರ - ೧/೨೪, ೧/೭೬
೨) ಭವಿಷ್ಯತ್ಪರ್ವ - ೧/೩೦-೪೭, ೭೮-೯೮, ೧೨೭, ೧೨೮, ೨/೧೨೯-೧೩೦
೩) ವರಾಹಪುರಾಣ - ೧/೪೮, ೪೯, ೨೨/೧೬೪, ೧೬೫
೪) ಸ್ಕಂದಪುರಾಣ - ೧/೫೨-೫೬
೫) ಪದ್ಮಪುರಾಣ - ೧/೫೬-೮, ೨೨/೧೫೯, ೧೬೦
೬) ಋಗ್ವೇದ - ೧/೯೯, ೧೨/೧೩೬ ಇತ್ಯಾದಿ
೭) ಅಥರ್ವಣೋಪನಿಷತ್ - ೧/೬೪
೮) ತೈತ್ತಿರೀಯೋಪನಿಷತ್ - ೧/೬೫
೯) ಕಠೋಪನಿಷತ್ - ೧/೭೭

೧೦) ಶ್ವೇತಾಶ್ವತರೋಪನಿಷತ್ - ೧/೧೦೨

೧೧) ಪಂಚರಾತ್ರಮ್ - ೧/೧೨೦-೧೨೬

೧೨) ಬ್ರಹ್ಮಾಂಡಪುರಾಣಮ್ - ೨/೯-೫೨, ೨/೧೭೧, ೧೭೨

೧೩) ಮಾರ್ಕಂಡೇಯಪುರಾಣ - ೨/೫೩, ೫೪

೧೪) ವಾಯುಪ್ರೋಕ್ತಮ್ - ೨/೫೫, ೫೬

೧೫) ಭಗವದ್ಗೀತಾ - ೧/ ೨/೮೬-೧೦೭ ಇತ್ಯಾದಿ

೧೬) ಭಾಗವತಪುರಾಣಮ್ - ೨/೧೩೧-೧೩೩, ೮/೧೦-೧೨

೧೭) ಬಳಿತ್ಥಸೂಕ್ತಮ್ - ೨/೧೫೨-೧೫೬

೧೮) ಲಕ್ಷಣಶಾಸ್ತ್ರಮ್ - ೮/೧೩೮-೧೪೦

೧೯) ಪೈಂಗಿಶ್ರುತಿಃ - ೨೮/೨೧೫

೨೦) ಮಹಾರಾಮಾಯಣಮ್ - ೮/೧೨೫

೨೧) ಮೂಲರಾಮಾಯಣಮ್ - ೧/೩೦

೨೯) ಸೂಕ್ತಿಗಳು

ಕೆಲವು ಮುಖ್ಯ ಪ್ರಸಂಗಗಳಿಂದ ಹೊರಹೊಮ್ಮುವ ತತ್ತ್ವಗಳನ್ನು ಆಚಾರ್ಯರು ಸಾರ್ವಕಾಲಿಕ ಮಹತ್ತ್ವದ ಸೂಕ್ತಿಗಳ ರೂಪದಲ್ಲಿ ನಿರೂಪಿಸಿರುವರು. ಶ್ಲೋಕರೂಪವಾಗಿ, ಕೆಲವೊಮ್ಮೆ ಶ್ಲೋಕಭಾಗವಾಗಿ ಪರಿಣಾಮಕಾರಿಯಾಗಿ ನಿರೂಪಿತವಾಗಿರುವಂತಹ ಸೂಕ್ತಿಗಳು ಅಂತಹ ಯಾವುದೇ ಸಂದರ್ಭದಲ್ಲೂ ಸಹ ತತ್ತ್ವಾನ್ವೇಷಣೆಯನ್ನು ಸುಲಭ ಗ್ರಾಹ್ಯವನ್ನಾಗಿಸುವ ಸೂತ್ರಗಳಂತೆ ಅತ್ಯಂತ ಉಪಯುಕ್ತವಾಗುತ್ತವೆ :

ಪ್ರಾಯಃ ಸ್ವಕಾರ್ಯೇ ಪ್ರತಿಪಾದಿತೇ ಹಿ ಮದೋದ್ಧತಾ ನ ಪ್ರತಿಕರ್ತುಮೀಶತೇ ॥ (೬/೨೯)

ನಿತ್ಯಾತಿದುಃಖಮನಿವೃತ್ತಿಸುಖವ್ಯಪೇತಮಂಧಂ ತಮೋ ನಿಯತಮೇತಿ ಹರಾವಭಕ್ತಃ ।
ಭಕ್ತೋಽಪಿ ಕಂಜಜಗಿರೀಶಮುಖೇಷು ಸರ್ವಧರ್ಮಾರ್ಣವೋಽಪಿ ನಿಖಿಲಾಗಮನಿರ್ಣಯೇನ ॥
ಯೋ ವೇತ್ತಿ ನಿಶ್ಚಿತಮತಿರ್ಹರಿಮಬ್ಜಜೇಶಪೂರ್ವಾಖಿಲಸ್ಯ ಜಗತಸ್ಸಕಲೇಽಪಿ ಕಾಲೇ ।
ಸೃಷ್ಟಿಸ್ಥಿತಿಪ್ರಲಯಮೋಕ್ಷದಮಾತ್ಮತಂತ್ರಂ ಲಕ್ಷ್ಮ್ಯಾ ಅಪೀಶಮತಿಭಕ್ತಿಯುತಸ್ಸ ಮುಚ್ಯೇತ್ ॥
ತಸ್ಮಾದನಂತಗುಣಪೂರ್ಣಮಮುಂ ರಮೇಶಂ ನಿಶ್ಚಿತ್ಯ ದೋಷರಹಿತಂ ಪರಯೈವ ಭಕ್ತ್ಯಾ ।
ವಿಜ್ಞಾಯ ದೈವತಗಣಾಂಶ್ಚ ಯಥಾಕ್ರಮೇಣ ಭಕ್ತ್ಯಾ ಹರೇರಿತಿ ಸದೈವ ಭಜೇತ ಧೀರಃ ॥
(೧೩/೧೩೩-೧೩೫)

ಧರ್ಮೋ ಹಿ ಸರ್ವವಿದುಷಾಮಪಿ ದೈವತಾನಾಂ ಪ್ರಾಪ್ತೇ ನರೇಷು ಜನನೇ ನರವತ್ ಪ್ರವೃತ್ತಿಃ ।
ಜ್ಞಾನಾದಿಗೂಹನಮುತಾಧ್ಯಯನಾದಿರತ್ರ ತಜ್ಜ್ಞಾಪನಾರ್ಥಮವಸದ್ಭಗವಾನ್ ಗುರೌ ಚ ॥
(೧೪/೫)

ಕೃಷ್ಣಾಶ್ರಯೋ ವಸತಿ ಯತ್ರ ಜನೋಽಪಿ ತತ್ರ ವೃದ್ಧಿರ್ಭವೇತ್ ಕಿಮು ರಮಾಧಿಪತೇರ್ನಿವಾಸೇ ।
ವೃಂದಾವನಂ ಯದಧಿವಾಸತ ಆಸ ಸಂಧ್ಯಜ್ ಮಾಹೇಂದ್ರಸದ್ಮಸದೃಶಂ ಕಿಮು ತತ್ರ ಪುರ್ಯಾಮ್ ॥
(೧೪/೭)

ನಿತ್ಯಪ್ರಭೂತಸುಶುಭಪ್ರತಿಭೋಽಪಿ ವಿಷ್ಣೋಃ ಶ್ರುತ್ವಾ ಪರಾಂ ಪುನರಪಿ ಪ್ರತಿಭಾಮವಾಪ ।
ಕೋ ನಾಮ ವಿಷ್ಣ್ವನುಪಜೀವಕ ಆಸ ಯಸ್ಯ ನಿತ್ಯಾಶ್ರಯಾದಭಹಿತಾಽಪಿ ರಮಾ ಸದಾ ಶ್ರೀಃ ॥
(೧೫/೫)

ಕ್ಷೇಮಾಯ ನೋ ಭವತಿ ವೋ ಬಲವದ್ವಿರೋಧಃ (೧೯/೧೦)

ಕೋ ನಾಮ ಸತ್ಸು ವಿಷಮಃ ಪ್ರಭವೇತ್ಸುಖಾಯ ॥ (೧೯/೪೫)

ವಿರೋಧಿ ಧರ್ಮಸ್ಯ ವಿನಾಶಕಾರಣಮ್ । (೨೯/೨೯೬)

ಯೇ ಧರ್ಮಂ ನ ವದಂತೀಹ ನ ತೇ ವೃದ್ಧಾ ಇತೀರಿತಾಃ।
ಅವೃದ್ಧಮಂಡಿತಾಂ ನೈವ ಸಭೇತ್ಯಾಹುರ್ಮನೀಷಿಣಃ ॥ (೨೧/೩೨೯)

ಉತ್ತಮೇ ವಚಸಾ ಶಿಕ್ಷಾ ಮಧ್ಯಮೇಽರ್ಥಾಪಹಾರಣಮ್ ॥
ಅಧಮೇ ದೇಹದಂಡಶ್ಚ ..... ॥ (೨೧/೩೩೯,೩೪೦)

ಪತಿತಸ್ಯಾಸ್ಯ ದೇಹಸ್ಯ ಕಾಷ್ಠವಿಷ್ಠಾಸಮಸ್ಯ ಚ ॥
ಫಲಾನಿ ತ್ರೀಣಿ ಶಿಷ್ಯಂತೇ ವಿದ್ಯಾ ಕರ್ಮ ಸುತಾ ಇತಿ। (೨೧/೩೬೭,೩೬೮)

೩೦) ಮಹಾಭಾರತದ ಸರ್ವಶಾಸ್ತ್ರೋತ್ತಮತ್ವ

ಮಹಾಭಾರತವನ್ನು ಇತರ ಮತಾಚಾರ್ಯರು ಅನೇಕ ಪ್ರಮಾಣಗಳಲ್ಲಿ ಒಂದು ಎಂದು ಸಾಮಾನ್ಯ ರೀತಿಯಲ್ಲಿ ಉಲ್ಲೇಖಿಸಿರುವ ಪ್ರಸಂಗವೇ ಹೆಚ್ಚು. ಆದರೆ ಮಹಾಭಾರತವು ವೇದಾದಿಗಳಿಗಿಂತಲೂ ಮಿಗಿಲಾದ ಸರ್ವೋತ್ಕೃಷ್ಟವಾದ ಶಾಸ್ತ್ರ; ಮಹಾಭಾರತವೆಂಬ ಅದರ ಹೆಸರೇ ಅದರ ಹಿರಿಮೆಯನ್ನು ಸಾರುತ್ತದೆ. ಬ್ರಹ್ಮಾಂಡ, ಮಾರ್ಕಂಡೇಯ ಮೊದಲಾದ ಇತರ ಅನೇಕ ಪುರಾಣಗಳಲ್ಲೂ ಮಹಾಭಾರತದ ಹಿರಿಮೆ ಸ್ಪಷ್ಟವಾಗಿ ನಿರೂಪಿತವಾಗಿದೆ. ಅದರ ನಿರ್ಣಯವೆಂದರೆ ಸಮಸ್ತಶಾಸ್ತ್ರಾರ್ಥನಿರ್ಣಯ ಎಂದೇ ಅರ್ಥ ಎಂದು ಸಮರ್ಥಿಸಿದ ಹಿರಿಮೆಯೂ ಶ್ರೀಮದಾಚಾರ್ಯರದು.

ನಿರ್ಣಯಃ ಸರ್ವಶಾಸ್ತ್ರಾಣಾಂ ಭಾರತಂ ಪರಿಚಕ್ಷತೇ ।
ಭಾರತಂ ಸರ್ವವೇದಾಶ್ಚ ತುಲಾಮಾರೋಪಿತಾಃ ಪುರಾ ॥
ದೇವೈರ್ಬ್ರಹ್ಮಾದಿಭಿಃ ಸರ್ವೈಃ ಋಷಿಭಿಶ್ಚ ಸಮನ್ವಿತೈಃ ।
ವ್ಯಾಸಸ್ಯೈವಾಜ್ಞಯಾ ತತ್ರ ತ್ವತ್ಕರಿಷ್ಯತ ಭಾರತಮ್ ॥
ಮಹತ್ವಾದ್ಭಾರವತ್ವಾಚ್ಚ ಮಹಾಭಾರತಮುಚ್ಯತೇ ।
ನಿರುಕ್ತಮಸ್ಯ ಯೋ ವೇದ ಸರ್ವಪಾಪೈಃ ಪ್ರಮುಚ್ಯತೇ ॥
ನಿರ್ಣಯಃ ಸವರ್ಶಾಸ್ತ್ರಾಣಾಂ ಸದೃಷ್ಟಾಂತೋ ಹಿ ಭಾರತೇ ।
ಕೃತೋ ವಿಷ್ಣುವಶತ್ವಂ ಹಿ ಬ್ರಹ್ಮಾದೀನಾಂ ಪ್ರಕಾಶಿತಮ್ ॥ (೨/೯-೧೨)

ಉಕ್ತಾ ರಾಮಕಥಾऽಪ್ಯಸ್ಮಿನ್ ಮಾರ್ಕಂಡೇಯಸಮಾಸ್ಯಯಾ ।
ತಸ್ಮಾದ್ಯದ್ಭಾರತೇ ನೋಕ್ತಂ ತದ್ದಿ ನೈವಾಸ್ತಿ ಕುತ್ರಚಿತ್ ॥
ಅತ್ರೋಕ್ತಂ ಸರ್ವಶಾಸ್ತ್ರೇಷು ನಹಿ ಸಮ್ಯಗುದಾಹೃತಮ್ ।
ಇತ್ಯಾದಿ ಕಥಿತಂ ಸರ್ವಂ ಬ್ರಹ್ಮಾಂಡೇ ಹರಿಣಾ ಸ್ವಯಮ್ ॥
ಮಾರ್ಕಂಡೇಯೇऽಪಿ ಕಥಿತಂ ಭಾರತಸ್ಯ ಪ್ರಶಂಸನಮ್ ।
ದೇವತಾನಾಂ ಯಥಾ ವ್ಯಾಸೋ ದ್ವಿಪದಾಂ ಬ್ರಾಹ್ಮಣೋ ವರಃ ॥
ಆಯುಧಾನಾಂ ಯಥಾ ವಜ್ರಮೋಷಧೀನಾಂ ಯಥಾ ಯವಾಃ ।
ತಥೈವ ಸರ್ವಶಾಸ್ತ್ರಾಣಾಂ ಮಹಾಭಾರತಮುತ್ತಮಮ್ ॥
ವಾಯುಪ್ರೋಕ್ತೇऽಪಿ ತತ್ರೋಕ್ತಂ ಭಾರತಸ್ಯ ಪ್ರಶಂಸನಮ್ ।
ಕೃಷ್ಣದ್ವೈಪಾಯನಂ ವ್ಯಾಸಂ ವಿದ್ಧಿ ನಾರಾಯಣಂ ಪ್ರಭುಮ್ ॥
ಕೋ ಹ್ಯನ್ಯಃ ಪುಂಡರೀಕ್ಷಾನ್ಮಹಾಭಾರತಕೃದ್ಭವೇತ್ ।
ಏವಂ ಹಿ ಸರ್ವಶಾಸ್ತ್ರೇಷು ಪೃಥಕ್ಪೃಥಗುದೀರಿತಮ್ ।
ಉಕ್ತೋऽರ್ಥಃ ಸರ್ವ ಏವಾಯಂ ಮಾಹಾತ್ಮ್ಯಕ್ರಮಪೂರ್ವಕಃ ॥ (೨/೫೦-೫೫)

ಮಹಾಭಾರತದ ಸರ್ವಶಾಸ್ತ್ರೋತ್ತಮತ್ವವನ್ನು ಶ್ರೀಮದಾಚಾರ್ಯರು ತಮ್ಮ ಗೀತಾಭಾಷ್ಯಾದಿ ಇತರ ಕೃತಿಗಳಲ್ಲೂ ನಿರೂಪಿಸಿರುವರು.

೩೧) ಮೂಲಶ್ಲೋಕಗಳ ವ್ಯಾಖ್ಯಾನಪದ್ಧತಿ

ಮೂಲಗ್ರಂಥಗಳ ವ್ಯಾಖ್ಯಾನಕ್ಕೆ ಮಾರ್ಗದರ್ಶನ ನೀಡಿರುವುದಲ್ಲದೆ, ಕೆಲವು ಮೂಲಶ್ಲೋಕಗಳಿಗೆ ವ್ಯಾಖ್ಯಾನವನ್ನು ನೀಡಿ, ಆ ಕ್ರಮವನ್ನು ತೋರಿಸಿಕೊಟ್ಟಿರುವುದು ಈ ಕೃತಿಯ ಮತ್ತೊಂದು ವಿಶೇಷ :

ನಾರಾಯಣಂ ಸುರಗುರುಂ ಜಗದೇಕನಾಥಂ ಭಕ್ತಪ್ರಿಯಂ ಸಕಲಲೋಕನಮಸ್ಕೃತಂ ಚ ।
ತ್ರೈಗುಣ್ಯವರ್ಜಿತಮಜಂ ವಿಭುಮಾದ್ಯಮೀಶಂ ವಂದೇ ಭವಘ್ನಮಮರಾಸುರಸಿದ್ಧವಂದ್ಯಮ್ ॥
-ಮಹಾಭಾರತಮ್

ಜ್ಞಾನಪ್ರದಃ ಸ ಭಗವಾನ್ ಕಮಲಾವಿರಿಂಚಿಶರ್ವಾದಿಪೂರ್ವಜಗತೋ ನಿಖಿಲಾದ್ವರಿಷ್ಠಃ ।
ಭಕ್ತ್ಯೈವ ತುಷ್ಯತಿ ಹರಿಪ್ರವಣತ್ವಮೇವ ಸರ್ವಸ್ಯ ಧರ್ಮ ಇತಿ ಪೂರ್ವವಿಭಾಗಸಂಸ್ಥಃ ॥
ನಿರ್ದೋಷಕಃ ಸ್ಮೃತಿವಿಹೀನ ಉದಾರಪೂರ್ಣಸಂವಿದ್ಘನಃ ಪ್ರಥಮಕೃತ್ ಸಕಲಾತ್ಮಶಕ್ತಃ ।
ಮೋಕ್ಷೈಕಹೇತುರಸುರೂಪಸುರೈಶ್ಚ ಮುಕ್ತೈರ್ವಂದ್ಯಃ ಸ ಏಕ ಇತಿ ಚೋಕ್ತಮಥೋತ್ತರಾರ್ಧೇ ॥
ನಮ್ಯತ್ವಮುಕ್ತಮುಭಯತ್ರ ಯತಸ್ತತೋಽಸ್ಯ ಮುಕ್ತೈರಮುಕ್ತಕಗಣೈಶ್ಚ ವಿನಮ್ಯತೋಕ್ತಾ ।
ಇತ್ಥಂ ಹಿ ಸರ್ವಗುಣಪೂರ್ತಿರಮುಷ್ಯ ವಿಷ್ಣೋಃ ಪ್ರಸ್ತಾವಿತಾ ಪ್ರಥಮತಃ ಪ್ರತಿಜಾನತೈವ ॥
-ಮಹಾಭಾರತತಾತ್ಪರ್ಯನಿರ್ಣಯಃ(೨/೫೮-೬೦)

ಸೃಷ್ಟ್ವಾ ಬ್ರಹ್ಮಾದಯೋ ದೇವಾ ನಿಹತಾ ಯೇನ ದಾನವಾಃ ।
ತಸ್ಮೈ ದೇವಾಧಿದೇವಾಯ ನಮಸ್ತೇ ಶಾರ್ಙ್ಗಧಾರಿಣೇ ॥ -ಮಹಾಭಾರತಮ್

ಸ್ರಷ್ಟೃತ್ವಂ ದೇವಾನಾಂ ಮುಕ್ತಿಸ್ರಷ್ಟೃತ್ವಮುಚ್ಯತೇ ನಾನ್ಯತ್ ।
ಉತ್ಪತ್ತಿರ್ದೈತ್ಯಾನಾಮಪಿ ಯಸ್ಮಾತ್ ಸಮ್ಮತಾ ವಿಶೇಷೋಽಯಮ್ ॥
ಅಥ ಚ ದೈತ್ಯಹತಿಸ್ತಮಸಿ ಸ್ಥಿರಾ ನಿಯತಸಂಸ್ಥಿತಿರೇವ ನ ಚಾನ್ಯಥಾ ।
ತನುವಿಭಾಗಕೃತಿಃ ಸಕಲೇಷ್ವಿಯಂ ನ ಹಿ ವಿಶೇಷಕೃತಾ ಸುರದೈತ್ಯಗಾ ॥
-ಮಹಾಭಾರತತಾತ್ಪರ್ಯನಿರ್ಣಯಃ(೨/೬೩-೬೪)

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ವ್ಯಾಸಂ ತತೋ ಜಯಮುದೀರಯೇತ್ -ಮಹಾಭಾರತಮ್

ಜಯೋ ನಾಮೇತಿಹಾಸೋಽಯಂ ಕೃಷ್ಣದ್ವೈಪಾಯನೇರಿತಃ ।
ವಾಯುರ್ನರೋತ್ತಮೋ ನಾಮ ದೇವೀತಿ ಶ್ರೀರುದೀರಿತಾ ॥
ನಾರಾಯಣೋ ವ್ಯಾಸ ಇತಿ ವಾಚ್ಯವಕ್ಷ್ಯರೂಪಕಃ ।
ಏಕಃ ಸ ಭಗವಾನುಕ್ತಃ ಸಾಧಕೇಶೋ ನರೋತ್ತಮಃ ॥
ಉಪಸಾಧಕೋ ನರಶ್ಚೋಕ್ತೋ ದೇವೀ ಭಾಗ್ಯಾತ್ಮಿಕಾ ನೃಣಾಮ್ ।
ಸರಸ್ವತೀ ವಾಕ್ಯರೂಪಾ ತಸ್ಮಾನ್ನಮ್ಯಾ ಹಿ ತೇಽಖಿಲಾಃ ।
ಕೃಷ್ಣೌ ಸತ್ಯಾ ಭೀಮಪಾರ್ಥೌ ಕೃಷ್ಣೇತ್ಯುಕ್ತಾ ಹಿ ಭಾರತೇ ॥
-ಮಹಾಭಾರತತಾತ್ಪರ್ಯನಿರ್ಣಯಃ (೩/೪-೭)

ಅಶ್ವಮೇಧಃ ಕ್ರತುಶ್ರೇಷ್ಠೋ ಜ್ಯೋತಿಃಶ್ರೇಷ್ಠೋ ದಿವಾಕರಃ ।
ಬ್ರಾಹ್ಮಣೋ ದ್ವಿಪದಾಂ ಶ್ರೇಷ್ಠೋ ದೇವಶ್ರೇಷ್ಠಸ್ತು ಮಾರುತಃ ॥ -ಮಹಾಭಾರತ

ಯಜ್ಞಾಧಿಕೋ ಹ್ಯಶ್ವಮೇಧೋ ಮನುಷ್ಯದೃಶ್ಯೇಷು ತೇಜಸ್ವ್ಯಧಿಕೋ ಹಿ ಭಾಸ್ಕರಃ ।
ವರ್ಣೇಷು ವಿಪ್ರಃ ಸಕಲೈರ್ಗುಣೈರ್ವರೋ ದೇವೇಷು ವಾಯುಃ ಪುರುಷೋತ್ತಮಾದೃತೇ ॥
(೧೨/೫೧)

೩) ಸಮಸ್ತಶಾಸ್ತ್ರಾರ್ಥನಿರ್ಣಯ

ತಾವು ರಚಿಸಿರುವ ಮಹಾಭಾರತತಾತ್ಪರ್ಯನಿರ್ಣಯವು ಅತ್ಯಂತ ಪ್ರಾಮಾಣಿಕವಾದುದು. ಅದು ಮಹಾಭಾರತದ ನಿರ್ಣಯ ಮಾತ್ರವಾಗಿರದೆ, ಸಮಸ್ತಶಾಸ್ತ್ರಾರ್ಥನಿರ್ಣಯವೂ ಆಗಿದೆ. ತಾವು ನಿರೂಪಿಸಿದ ಪ್ರತಿಯೊಂದು ವಿಚಾರವೂ ಸಹ ಮೂಲಶಾಸ್ತ್ರಗಳಲ್ಲಿಯೇ ಪ್ರತಿಪಾದಿತವಾಗಿದೆ. ಆದ್ದರಿಂದ ಅದು ಅತ್ಯಂತ ಗ್ರಾಹ್ಯವಾದ ಕೃತಿ ಎಂಬುದನ್ನು ಅವರು ಘೋಷಿಸಿರುವರು :

ಇತ್ಯ ೃಗ್ಯಜುಸ್ಸಾಮಾಥರ್ವಪಂಚರಾತ್ರೇತಿಹಾಸತಃ ।
ಪುರಾಣೇಭ್ಯಸ್ತಥಾಽನ್ಯೇಭ್ಯಃ ಶಾಸ್ತ್ರೇಭ್ಯೋ ನಿರ್ಣಯಃ ಕೃತಃ ॥
ವಿಷ್ಣ್ವಾಜ್ಞಯೈವ ವಿದುಷಾ ತತ್ಪ್ರಸಾದಬಲೋನ್ನತೇಃ ।
ಆನಂದತೀರ್ಥಮುನಿನಾ ಪೂರ್ಣಪ್ರಜ್ಞಾಭಿಧಾಯುಜಾ ॥
ತಾತ್ಪರ್ಯಂ ಶಾಸ್ತ್ರಾಣಾಂ ಸರ್ವೇಷಾಮುತ್ತಮಂ ಮಯಾ ಪ್ರೋಕ್ತಮ್ ।
ಪ್ರಾಪ್ಯಾನುಜ್ಞಾಂ ವಿಷ್ಣೋರೇತಜ್ಜ್ಞಾತ್ವೈವ ವಿಷ್ಣುರಾಪ್ತೋಽಸೌ ॥ (೧/೧೩೫-೧೩೭)

ಉಕ್ತಃ ಪೂರ್ವಾಧ್ಯಾಯೇ ಶಾಸ್ತ್ರಾಣಾಂ ನಿರ್ಣಯಃ ಪರೋ ದಿವ್ಯಃ ।
ಅಥ ಭಾರತವಾಕ್ಯಾನ್ಯೇತೈರೇವಾಧ್ಯವಸ್ಯಂತೇ ॥ (೨/೨)

ಸಮಸ್ತಶಾಸ್ತ್ರಾರ್ಥವಿನಿರ್ಣಯೋಽಯಂ ವಿಶೇಷತೋ ಭಾರತವರ್ತ್ಮಚಾರೀ ।
ಗ್ರಂಥಃ ಕೃತೋಽಯಂ ಜಗತಾಂ ಜನಿತ್ರಂ ಹರಿಂ ಗುರುಂ ಪ್ರೀಣಯತಾಽಮುನೈವ ॥
ವಿನಿರ್ಣಯೋ ನಾಸ್ಯಮುನಾ ವಿನಾ ಯದ್ವಿಪ್ರಸ್ಥಿತಾನಾಮಿಹ ಸರ್ವವಾಚಾಮ್ ।
ತದ್ಬ್ರಹ್ಮಸೂತ್ರಾಣಿ ಚಕಾರ ಕೃಷ್ಣೋ ವ್ಯಾಖ್ಯಾಽಥ ತೇಷಾಮಯಥಾ ಕೃತಾಽನ್ಯೈಃ ॥
ನಿಗೂಹಿತಂ ಯತ್ಪುರುಷೋತ್ತಮತ್ವಂ ಸೂತ್ರೋಕ್ತಮಪ್ಯತ್ರ ಮಹಾಸುರೇಂದ್ರೈಃ ।
ಜೀವೈಶ್ವರೈಕ್ಯಂ ಪ್ರವದದ್ಭಿರುಗ್ರೈರ್ವ್ಯಾಖ್ಯಾಯ ಸೂತ್ರಾಣಿ ಚಕಾರ ಚಾವಿಃ ॥
ವ್ಯಾಸಾಜ್ಞಯಾ ಭಾಷ್ಯವರಂ ವಿಧಾಯ ಪೃಥಕ್ ಪೃಥಕ್ ಚೋಪನಿಷತ್ಸುಭಾಷ್ಯಮ್ ।
ಕೃತ್ವಾಽಖಿಲಾನ್ಯಂ ಪುರುಷೋತ್ತಮಂ ಚ ಹರಿಂ ವದಂತೀತಿ ಸಮರ್ಥಯಿತ್ವಾ ॥
ತನುಸ್ಮೃತೀಯಾ ಪವನಸ್ಯ ಸೇಯಂ ಸದ್ಭಾರತಾರ್ಥಪ್ರತಿದೀಪನಾಯ ।
ಗ್ರಂಥಂ ಚಕಾರೇಮಮುದೀರ್ಣವಿದ್ಯಾ ಯಸ್ಮಿನ್ ರಮಂತೇ ಹರಿಪಾದಭಕ್ತಾಃ ॥
(೩೨/೧೬೯-೧೭೩)

ಸರ್ವಶಾಸ್ತ್ರಾರ್ಥನಿರ್ಣಯವೆಂಬ ಹೆಸರಿನ ಪ್ರಥಮಾಧ್ಯಾಯವಂತು ನಿಜವಾದ ಅರ್ಥದಲ್ಲಿ ಸಮಸ್ತಶಾಸ್ತ್ರಾರ್ಥನಿರ್ಣಯವೇ ಆಗಿದ್ದು, ಅದು ಒಂದರ್ಥದಲ್ಲಿ ಬ್ರಹ್ಮಸೂತ್ರಭಾಷ್ಯದ ಸಾರ–

ಸಂಗ್ರವೂ, ಇನ್ನೊಂದರ್ಥದಲ್ಲಿ ಅವರ ಅಣುಭಾಷ್ಯ (ಸರ್ವಶಾಸ್ತ್ರಾರ್ಥಸಂಗ್ರಹ)ದ ವಿವರಣ–ರೂಪವೂ ಆಗಿದ್ದು, ಸಮಸ್ತಶಾಸ್ತ್ರತತ್ತ್ವಗಳ ತವನಿಧಿ ಎನ್ನಿಸಿದೆ. ಅದು ದ್ವೈತಸಿದ್ಧಾಂತದ ಕೈಪಿಡಿಯಾಗಿಯೂ ಮಾನ್ಯವಾಗುತ್ತದೆ. ಇಪ್ಪತ್ತೈದನೆಯ ಅಧ್ಯಾಯದ ಪ್ರಾರಂಭದಲ್ಲಿ ಒಟ್ಟು ಹದಿ–ನೆಂಟು ಶ್ಲೋಕಗಳಲ್ಲಿ ಸಮಗ್ರಗೀತಾರ್ಥವನ್ನು ಸಂಗ್ರಹಿಸಿರುವ ರೀತಿಯೂ ಅನುಪಮವಾದುದು.

೩೩) ಜಿಜ್ಞಾಸುಗಳ ಮಾರ್ಗದರ್ಶಿ :

ಇಂತಹ ಅದ್ಭುತಕೃತಿಯನ್ನು ನೀಡಿರುವುದಲ್ಲದೆ, ಇಲ್ಲಿಯ ಮಾರ್ಗದರ್ಶನದ ಹಿನ್ನೆಲೆಯಲ್ಲಿ ಸಂಶೋಧಕರು ಅವಶ್ಯ ಪ್ರವರ್ತಿಸಲೇಬೇಕು. ಇಲ್ಲಿ ನೀಡಿರುವುದು ದಿಗ್ದರ್ಶನ ಎಂಬ ಸ್ಫೂರ್ತಿದಾಯಕವಾದ ಮಾತನ್ನು ಆಡಿ ಜಿಜ್ಞಾಸುಗಳ ಸಾಧನಕ್ರಮವನ್ನು ಸಹ ಸೂಚಿಸಿ, ನಿಜವಾದ ಅರ್ಥದಲ್ಲಿ ಶ್ರೀಮದಾಚಾರ್ಯರು ಆದರ್ಶಗುರುಗಳಾಗಿರುವರು:

ಇತ್ಯಾದ್ಯನಂತವಾಕ್ಯಾನಿ ಸಂತ್ಯೇವಾರ್ಥೇ ಎವಕ್ಷತೇ ।
ಕಾನಿಚಿದ್ದರ್ಶಿತಾನ್ಯತ್ರ ದಿಙ್ಮಾತ್ರಪ್ರತಿಪತ್ತಯೇ ॥ – (೨/೧೭೯)

೩೪) ವ್ಯಾಖ್ಯಾನಗಳು*

ಇಂತಹ ಅಪೂರ್ವಕೃತಿಯಾದ ಮಹಾಭಾರತತಾತ್ಪರ್ಯನಿರ್ಣಯಕ್ಕೆ ಸಹಜವಾಗಿಯೇ ಅನೇಕ ವ್ಯಾಖ್ಯಾನಗಳು ರಚಿತವಾಗಿವೆ. ಆಚಾರ್ಯರ ಗ್ರಂಥಗಳಲ್ಲಿ ಅತಿ ಹೆಚ್ಚು ವ್ಯಾಖ್ಯಾನಿಸಲ್ಪಟ್ಟಿರುವ ಗ್ರಂಥ ಇದೇ ಎನ್ನಬಹುದು. ಇದರ ಪ್ರಪ್ರಥಮ ವ್ಯಾಖ್ಯಾನ ರಚಿಸಿದ ಕೀರ್ತಿ ಶ್ರೀಜಯತೀರ್ಥರ ಸಾಕ್ಷಾಚ್ಛಿಷ್ಯರಾದ ಶ್ರೀವ್ಯಾಸತೀರ್ಥರದು. ಶ್ರೀವೇದಾಂಗತೀರ್ಥರು, ಶ್ರೀವಾದಿರಾಜರು ಮೊದಲಾದ ಅಗ್ರಮಾನ್ಯ ಗ್ರಂಥಕಾರರು ಇದಕ್ಕೆ ವ್ಯಾಖ್ಯಾನ ರಚಿಸಿರುವರು. ಶ್ರೀರಾಘವೇಂದ್ರಸ್ವಾಮಿಗಳ **ಮಹಾಭಾರತತಾತ್ಪರ್ಯನಿರ್ಣಯಾಶಯಸಂಗ್ರಹ** ಎಂಬ ಕೃತಿ ತಾತ್ಪರ್ಯನಿರ್ಣಯದ ಪ್ರತಿಯೊಂದು ಅಧ್ಯಾಯದ ಸಾರವನ್ನು ಒಂದೊಂದೇ ಶ್ಲೋಕದಲ್ಲಿ ಸಂಗ್ರಹಿಸುವ ವಿಶಿಷ್ಟಕೃತಿಯಾಗಿದೆ.

೧) ಶ್ರೀಜಯತೀರ್ಥರ ಸಾಕ್ಷಾಚ್ಛಿಷ್ಯರಾದ ವ್ಯಾಸತೀರ್ಥರ ಟೀಕೆ (ಭಾರತಭಾವಪಂಚಿಕಾ)

೨) ಸೋದೆಮಠದ ಶ್ರೀರತ್ನಗರ್ಭತೀರ್ಥರ ವ್ಯಾಖ್ಯಾನ

೩) ಶ್ರೀವೇದಾಂಗತೀರ್ಥರ ಪದಾರ್ಥದೀಪಿಕಾ

೪) ಶ್ರೀವಾದಿರಾಜಸ್ವಾಮಿಗಳ ಭಾವಪ್ರಕಾಶಿಕಾ

---

* ಇವುಗಳಲ್ಲಿ ಹೆಚ್ಚಿನ ಸಂಖ್ಯೆಯ ವ್ಯಾಖ್ಯಾನಗಳು ನನ್ನ ಹಸ್ತಪ್ರತಿ ಸಂಗ್ರಹ(ಶ್ರೀಜಯತೀರ್ಥ ಸಂಸ್ಕೃತ ಲಿಖಿತ ಗ್ರಂಥಾಲಯ, ವ್ಯಾಸನಕೆರೆ)ದಲ್ಲಿವೆ. ಉಳಿದವುಗಳ ವಿವರವನ್ನು ಪರಿಶಿಷ್ಟದಲ್ಲಿ ಕೊಡಲಾಗಿದೆ.

೫) ಶ್ರೀಸತ್ಯಾಭಿನವತೀರ್ಥರು(ದುರ್ಘಟಾರ್ಥಪ್ರಕಾಶಿಕಾ)

೬) ಶ್ರೀವಿದ್ಯಾಧೀಶರ ಶಿಷ್ಯರಾದ ಮಧುಸೂದನಭಿಕ್ಷುಗಳ ಪ್ರಮಾಣಸಂಗ್ರಹ

೭) ಶ್ರೀಸತ್ಯಧರ್ಮತೀರ್ಥಕೃತ ವ್ಯಾಖ್ಯಾನ (ನಾಲ್ಕನೆಯ ಅಧ್ಯಾಯಕ್ಕೆ ಮಾತ್ರ)

೮) ಶ್ರೀಸಂಕರ್ಷಣಾಚಾರ್ಯರು (ಶುಭಪ್ರಕಾಶಿಕಾ)

೯) ಶ್ರೀಆದ್ಯವರದರಾಜಾಚಾರ್ಯರ ಮಂದಸುಬೋಧಿನೀ

೧೦) ನೃಸಿಂಹಾಚಾರ್ಯಸೂನು ಶ್ರೀಅನಂತಭಟ್ಟೀಯ (ಸತತ್ತ್ವಮಾಲಾ)

೧೧) ಶ್ರೀಜನಾರ್ದನಭಟ್ಟೀಯ ಪದಾರ್ಥಪ್ರದೀಪಿಕಾ

೧೨) ತಾಮ್ರಪರ್ಣೀಶ್ರೀನಿವಾಸಾಚಾರ್ಯರ ಪ್ರಮೇಯಮಾಲಾ

೧೩) ತಾಮ್ರಪರ್ಣೀಶ್ರೀನಿವಾಸಾಚಾರ್ಯರ ಪ್ರಮೇಯಮಣಿಮಾಲಾ

೧೪) ಮಹಾಭಾರತತಾತ್ಪರ್ಯನಿರ್ಣಯಟೀಕಾ -ಶ್ರೀಛಲಾರಿ ನರಸಿಂಹಾಚಾರ್ಯರು

೧೫) (ಭಾರತ)ಶ್ರೀನಿವಾಸಾಚಾರ್ಯರು (ಡಂಬಳ ಆನಂದತೀರ್ಥಾಚಾರ್ಯರ ಶಿಷ್ಯರು)

೧೬) ಶ್ರೀಅನಂತಾಚಾರ್ಯರ ತಂತ್ರಮಾಲಾ

೧೭) ಶ್ರೀಕರ್ನಾಟಕ ಶ್ರೀನಿವಾಸಾಚಾರ್ಯರ ಭಾವಚಂದ್ರಿಕಾ

೧೮) ಜನಾರ್ದನಸೂನು ತಿರುಮಲ ಸಂಗೃಹೀತ ಪ್ರಮಾಣಸಂಗ್ರಹ
(ಅತಿವಿಶದವಾಕ್ಯಾರ್ಥವಿವೃತಿಃ)

೧೯) ಶ್ರೀನರಸಿಂಹಾಚಾರ್ಯರು ಸಂಥಿ (ಉತ್ತರಾದಿಮಠದ ಗ್ರಂಥಾಗಾರ, ಹೊಸಪೇಟೆ)

೨೦) ಶ್ರೀಲಕ್ಷ್ಮೀನೃಸಿಂಹಾಚಾರ್ಯರು ಜಂಬುಖಂಡೀ

೨೧) ಶ್ರೀವಿಠಲಾಚಾರ್ಯಸೂನು ನಾರಾಯಣಾಚಾರ್ಯರು(ಗೂಢವಾಕ್ಯಾರ್ಥವಿವೃತಿಃ,
ತಂಜಾವೂರು ಸರಸ್ವತೀಮಹಲ್ ಗ್ರಂಥಾಲಯ)

೨೨) ಶ್ರೀನವರತ್ನ ಪುರುಷೋತ್ತಮಾಚಾರ್ಯರು(ಶ್ರೀಸತ್ಯಧರ್ಮತೀರ್ಥರು)

೨೩) ಶ್ರೀಕಾಶೀ ಶ್ರೀನಿವಾಸಾಚಾರ್ಯರು

೨೪) ಶ್ರೀಚಿಟ್ಟಕೋನೇರಿ ಆಚಾರ್ಯರಕೃತಸರ್ವಟೀಕಾನುಸಾರಿಣೀ
ಶ್ರೀಕರ್ನಾಟಕಕೃಷ್ಣಾಚಾರ್ಯರು

೨೫) ಕರ್ನಾಟಕಕೃಷ್ಣಾಚಾರ್ಯಸೂನುಕೃತ ವಿರೋಧಭಂಜಿನೀ

೨೬) ಮಹಾಭಾರತತಾತ್ಪರ್ಯನಿರ್ಣಯಭಾವವಿವೃತಿ(ಶ್ರೀವಾಸುದೇವಯತೀಂದ್ರರ
ಪೂರ್ವಾಶ್ರಮಪೌತ್ರ ರಾಮಾಚಾರ್ಯರಕೃತ)

೨೭) ಶ್ರೀಚಕ್ರಪಾಣಿಶ್ರೀನಿವಾಸಾಚಾರ್ಯಕೃತವಿರೋಧೋದ್ಧಾರಃ (ಕಂಟಕೋದ್ಧಾರಃ)

೨೮) ಶ್ರೀನರಸಿಂಹಾಚಾರ್ಯಕೃತಮಹಾಭಾರತತಾತ್ಪರ್ಯನಿರ್ಣಯಟೀಕಾ

ಅನುಪಲಬ್ಧ

೧) ಶ್ರೀವರದತೀರ್ಥರು
೨) ಶ್ರೀನಿವಾಸತೀರ್ಥರು ಬಿದರಹಳ್ಳಿ
೩) ಉಮರ್ಜೀ ಪ್ರಹ್ಲಾದಕೃಷ್ಣಾಚಾರ್ಯರು
೪) ಶ್ರೀವಿಜಯಧ್ವಜತೀರ್ಥರು
೫) ಕುಂಡಲಗಿರಿ ಆಚಾರ್ಯರು

ಇವರು ಮಹಾಭಾರತತಾತ್ಪರ್ಯನಿರ್ಣಯಕ್ಕೆ ವ್ಯಾಖ್ಯಾನ ರಚಿಸಿರುವರು ಎಂದು ಪ್ರತೀತಿ ಉಂಟು; ಆದರೆ ಅವು ದೊರೆತಿಲ್ಲ; ಪ್ರಾಚೀನವ್ಯಾಖ್ಯಾನಗಳಲ್ಲೂ ಉಲ್ಲೇಖಿಸಲ್ಪಟ್ಟಿಲ್ಲ.

ಇವುಗಳಲ್ಲಿ ಮಹಾಭಾರತತಾತ್ಪರ್ಯನಿರ್ಣಯದ ಹೊಸ ಒಳನೋಟಗಳನ್ನು ಒದಗಿಸುವ ಅಪೂರ್ವವ್ಯಾಖ್ಯಾನ ಶ್ರೀವಾದಿರಾಜಶ್ರೀಚರಣರ *ಭಾವಪ್ರಕಾಶಿಕಾ. ಈ ದೃಷ್ಟಿಯಲ್ಲಿ ತಾತ್ಪರ್ಯನಿರ್ಣಯದ ವ್ಯಾಖ್ಯಾನಗಳಲ್ಲಿ ಅಗ್ರಮಾನ್ಯವೆಂಬುದು ಇದರ ಹಿರಿಮೆ. ವರದರಾಜೀಯ, ಜನಾರ್ದನೀಯ, ಚಟ್ಟೀಕೋನೇರೀಯ ಮತ್ತು ಕಾಶೀಶ್ರೀನಿವಾಸಾಚಾರ್ಯರ ವ್ಯಾಖ್ಯಾನಗಳು ಶ್ಲೋಕಾರ್ಥವನ್ನು ಸಮಗ್ರವಾಗಿ ಗ್ರಹಿಸಲು ಹೆಚ್ಚು ಉಪಯುಕ್ತವಾದ ವ್ಯಾಖ್ಯಾನಗಳು. ತಾಮ್ರಪರ್ಣಿ ಶ್ರೀನಿವಾಸಾಚಾರ್ಯರು ಇದರ ಮೇಲೆ ಪ್ರಮೇಯಮಾಲಾ ಮತ್ತು ಪ್ರಮೇಯಮಣಿಮಾಲಾ ಎಂಬ ಎರಡು ವ್ಯಾಖ್ಯಾನಗಳನ್ನು ರಚಿಸಿದ್ದು ಅವುಗಳ ಸ್ವರೂಪ ವಿಮರ್ಶನರೂಪವಾದುದು. ಎರಡು ವ್ಯಾಖ್ಯಾನಗಳನ್ನು ರಚಿಸಿರುವ ಗ್ರಂಥಕಾರರು ಎಂಬುದು ಇವರ ಹಿರಿಮೆ. ಆ ಎರಡರಲ್ಲೂ ಅವರು ತಮ್ಮ ವಿರೋಧೋದ್ಧಾರ ಎಂಬ ಕೃತಿಯನ್ನು ಉಲ್ಲೇಖಿಸಿರುವರು. ಪ್ರಮಾಣಸಂಗ್ರಹಸ್ವರೂಪದ ಕೃತಿಗಳು ಅವುಗಳ ಹೆಸರಿನಿಂದಲೇ ವೇದ್ಯವಾಗುವಂತೆ ಮೂಲದ ವಿವರಗಳನ್ನು ಸ್ಫುಟಪಡಿಸುವ ಪ್ರಮಾಣಗಳ ಸಂಕಲನರೂಪ–ವಾಗಿವೆ. ಶ್ರೀಸತ್ಯಾಭಿನವತೀರ್ಥರ ವ್ಯಾಖ್ಯಾನ ಅನೇಕ ಆಕ್ಷೇಪಗಳಿಗೆ ಸೂಕ್ತ ಪರಿಹಾರವನ್ನು ನೀಡುವ ಅಪೂರ್ವಕೃತಿ. ಶ್ರೀಸತ್ಯಧರ್ಮತೀರ್ಥರು ನಾಲ್ಕನೆಯ ಅಧ್ಯಾಯಕ್ಕೆ ಮಾತ್ರ ವ್ಯಾಖ್ಯಾನ ರಚಿಸಿರುವುದಾಗಿ ಅವರ ಚರಿತ್ರಕಾವ್ಯದಲ್ಲೇ ನಿರೂಪಿತವಾಗಿದೆ. ಇದು ಅವರು ಪೂರ್ವಾಶ್ರಮದಲ್ಲಿ ರಚಿಸಿದ ಕೃತಿ. ಅವರು ವಾಲ್ಮೀಕಿರಾಮಾಯಣದಲ್ಲಿನ ಬಾಲಕಾಂಡದ ಹೊರತು ಇತರ ಆರುಕಾಂಡಗಳಿಗೂ ಟಿಪ್ಪಣಿ ಬರೆದಿರುವರು. ನಾಲ್ಕನೆಯ ಅಧ್ಯಾಯ ಬಾಲಕಾಂಡದ ಕಥಾನಿರೂಪಣೆಯಾಗಿರುವುದರಿಂದ ಅದಕ್ಕೆ ಮಾತ್ರ ವ್ಯಾಖ್ಯಾನ ರಚಿಸುವ ಮೂಲಕ ಒಟ್ಟಾಗಿ

---

* ಇದನ್ನು ಅವರ ಲಕ್ಷಾಲಂಕಾರ ಹಾಗೂ ಸರಸಭಾರತೀವಿಲಾಸ ಮೊದಲಾದ ಇತರಕೃತಿಗಳಲ್ಲಿ ವಿಶೇಷಾಂಶಗಳೊಂದಿಗೆ, ಮಹಾಭಾರತಾದಿಗ್ರಂಥಗಳ ಸಂವಾದಿಪ್ರಮಾಣಗಳೊಂದಿಗೆ ನಮ್ಮ ಶ್ರೀವ್ಯಾಸಮಧ್ವ-ಸಂಶೋಧನಪ್ರತಿಷ್ಠಾನವು ಪ್ರಕಾಶನ ಪಡಿಸಿದೆ (೧೯೯೮).

ಸಮಗ್ರರಾಮಾಯಣಕ್ಕೆ ಟಿಪ್ಪಣಿ ರಚಿಸಿದ ಹಿರಿಮೆ ಅವರದು. ಶಬ್ದಗಳನ್ನು ಬಗೆಬಗೆಯಾಗಿ ನಿರ್ವಚನ ಮಾಡಿ ಅಪೂರ್ವಾರ್ಥಗಳನ್ನು ನಿರೂಪಿಸುವ ಅವರ ಶೈಲಿಯನ್ನು ಇಲ್ಲೂ ಕಾಣಬಹುದು. ನಾಲ್ಕನೆಯ ಅಧ್ಯಾಯದ 'ಇತ್ಯಾದ್ಯನಂತಾನಿ' ಎಂಬ ಕೊನೆಯ ಶ್ಲೋಕಕ್ಕೆ ಅವರು ಹದಿನೆಂಟು ಬಗೆಯಲ್ಲಿ ವಿವರಣೆ ನೀಡಿರುವುದು ಅತ್ಯಂತ ರೋಚಕಸಂಗತಿ.

ಮೊದಲ ವಿಸ್ತೃತವ್ಯಾಖ್ಯಾನ ಎಂಬ ಹಿರಿಮೆ ಶ್ರೀವೇದಾಂಗತೀರ್ಥರದಾದರೆ, ಪ್ರಥಮವ್ಯಾಖ್ಯಾನ ಎಂಬುದು ಶ್ರೀವ್ಯಾಸತೀರ್ಥರ ಕೃತಿಯ ಹಿರಿಮೆ. ಇವೆರಡನ್ನೂ ಅನಂತರದ ಹೆಚ್ಚಿನ ವ್ಯಾಖ್ಯಾನಗಳು ಉಲ್ಲೇಖಿಸಿವೆ ಎಂಬುದೂ ಗಮನಾರ್ಹ. ಸತ್ಯಾಭಿನವೀಯ, ಜನಾರ್ದನೀಯ ಟಿಪ್ಪಣಿಗಳು ಮುದ್ರಿತವಾಗಿವೆ. ಇತರ ಟಿಪ್ಪಣಿಗಳು ಇನ್ನೂ ಬೆಳಕು ಕಂಡಿಲ್ಲ. ಅವುಗಳಲ್ಲಿನ ವಿಶೇಷಾಂಗಳನ್ನು ಸೂಕ್ತ ಸ್ಥಳಗಳಲ್ಲಿ ಪ್ರಕೃತ ಅನುವಾದಕೃತಿಯಲ್ಲಿ ಅಳವಡಿಸಲಾಗಿದೆ. ಹೆಚ್ಚಿನ ಕೃತಿಗಳು ಸಮಗ್ರ ಉಪಲಬ್ಧವಿರುವುದು ವಿಶೇಷ.

೨. ಯಮಕಭಾರತ

ಭಗವಂಶ್ಚಿತ್ರಕವಿತಾಂ ಲೌಕಿಕೀಂ ದರ್ಶಯನ್ ಕಿಲ ।
ಗೋಪ್ಯಂ ಭಾರತಸಂಕ್ಷೇಪಮಕೃಥಾ ವಿಶ್ವವಿಸ್ಮಯಮ್ ॥

(ಸುಮಧ್ವವಿಜಯ ೧೫/೮೩)

ಯಮಕಭಾರತವು ಮಹಾಭಾರತವನ್ನು ಕುರಿತು ಶ್ರೀಮದಾಚಾರ್ಯರು ನೀಡಿರುವ ಮತ್ತೊಂದು ಕೃತಿ. ಇದೂ ಶ್ಲೋಕರೂಪದ ರಚನೆಯೇ. ಆದರೆ ಗಾತ್ರದಲ್ಲಿ ಅದು ಎಷ್ಟು ದೊಡ್ಡದೋ ಇದು ಅಷ್ಟೇ ಚಿಕ್ಕದು; ಎಂದರೆ ಅದರ ವ್ಯಾಪ್ತಿ ಐದುಸಾವಿರ ಶ್ಲೋಕಗಳನ್ನು ಮೀರಿದ್ದರೆ, ಇದರಲ್ಲಿಯ ಶ್ಲೋಕ ಸಂಖ್ಯೆ ಎಂಭತ್ತೊಂದು ಮಾತ್ರ. ಅಷ್ಟು ವಿಸ್ತೃತಕೃತಿಯನ್ನು ನೀಡಿದ ವ್ಯಕ್ತಿಯೇ ಇಂತಹ ಸಂಕ್ಷಿಪ್ತರೂಪವನ್ನೂ ನೀಡಿರುವರು. ಇದು ಅಂತಹವರಿಗಷ್ಟೇ ಸಾಧ್ಯವಾಗುವ ಕಾರ್ಯವೂ ಹೌದು. 'ಮಹಾಭಾರತತಾತ್ಪರ್ಯ' ಎಂಬ ಹೆಸರಿನಿಂದ ಪ್ರಸಿದ್ಧವಿರುವ ಈ ಕೃತಿ ಒಂದರ್ಥದಲ್ಲಿ ಮಹಾಭಾರತತಾತ್ಪರ್ಯನಿರ್ಣಯದ ಸಾರಸಂಗ್ರಹರೂಪವಾಗಿದ್ದು, ಅಣುಮಹಾ–ಭಾರತತಾತ್ಪರ್ಯನಿರ್ಣಯವೇ ಆಗಿದೆ – ಭಾಷ್ಯಕ್ಕೆ ಅಣುಭಾಷ್ಯವಿದ್ದಂತೆ. ಇನ್ನೊಂದು ಅರ್ಥದಲ್ಲಿ ಇಡೀ ಮಹಾಭಾರತದ ಸಾರವೂ ಆಗಿದೆ. ಇದರ ಮತ್ತೊಂದು ಹೆಸರು ಭಾರತತಾತ್ಪರ್ಯ ಎಂದೇ. ಹದಿನೆಂಟು ಪರ್ವಗಳ ಭಾರತವನ್ನು ಎಂಭತ್ತೊಂದು ಶ್ಲೋಕಗಳಲ್ಲಿ ಸಂಗ್ರಹಿಸಿರುವುದರಲ್ಲಿ ಸಂಖ್ಯೆಯ ಔಚಿತ್ಯವೂ ಸೇರಿದೆ. ಎಂದರೆ ೧೮ ಪರ್ವಗಳ ಅದೂ 'ಜಯ', ೮೧ ಶ್ಲೋಕಗಳ ಇದೂ 'ಜಯ'ವೇ.

ಒಮ್ಮೆ ತುಂಬಿದ ವಿದ್ವತ್ಸಭೆಯಲ್ಲಿ ಇವರಿಂದ ಎಲ್ಲ ಬಗೆಯಲ್ಲೂ ಸೋತ ವಿದ್ವಾಂಸರುಗಳು ಇವರ ಕಾವ್ಯಪ್ರತಿಭೆಯನ್ನು ತಿಳಿಯುವ ಅಭಿಲಾಷೆ ವ್ಯಕ್ತಪಡಿಸಿದಾಗ, ತಕ್ಷಣವೇ ರಚಿತವಾದ ಕೃತಿ ಇದು ಎಂಬುದಾಗಿ ಸುಮಧ್ವವಿಜಯ ಉಲ್ಲೇಖಿಸಿದೆ:

ಭಗವಂಶ್ಚಿತ್ರಕವಿತಾಂ ಲೌಕಿಕೀಂ ದರ್ಶಯನ್ ಕಲ ।
ಗೋಪ್ಯಂ ಭಾರತಸಂಕ್ಷೇಪಮಕೃಥಾ ವಿಶ್ವವಿಸ್ಮಯಮ್॥ –ಸುಮಧ್ವವಿಜಯ(೧೫/೮೩)

ಎಂದರೆ ಇದು ಅವರ ಆಶುಕವಿತೆ. ಅತ್ಯಂತ ಜಟಿಲವಾದ ಯಮಕಾಲಂಕಾರದಲ್ಲಿ ಸ್ಫುರಿಸಿ ಬಂದ ಕಾರಣದಿಂದ ಇದು ಯಮಕಭಾರತ. ಯಮಕದ ಅನೇಕ ಪ್ರಾಕಾರಗಳನ್ನು ತೆರೆದಿಡುತ್ತಲೇ, ಕೃಷ್ಣಕಥೆಯ ಮರ್ಮವನ್ನು ಬಿಚ್ಚಿಡುವ ಈ ಕೃತಿ ಅಪೂರ್ವ ಚಿತ್ರಕಾವ್ಯವೂ ಹೌದು, ಶ್ರೇಷ್ಠ ಶಾಸ್ತ್ರಕೃತಿಯೂ ಹೌದು. ಕೃಷ್ಣಭೀಮ, ದ್ರೌಪದಿ ಮೊದಲಾದವರ ವ್ಯಕ್ತಿತ್ವವನ್ನು ತುಂಬಾ ಸರಸವಾಗಿ ಇದು ನಿರೂಪಿಸಿತ್ತದೆ. ಇದರಲ್ಲಿಯ –

ಭಾ ಭಾ ಭಾ ಭಾ ಭಾ ಭಾ ಭಾ ಭಾ ಭಾ ಭಾ ಭಾ ಭಾ ಭಾ ಭಾ ।
ಭಾ ಭಾ ಭಾ ಭಾ ಭಾ ಭಾ ಭಾ ಭಾ ಭಾ ಭಾ ಭಾ ಭಾ ಭಾ ॥

ಎಂಬ ಇಪ್ಪತ್ತೆಂಟು 'ಭಾ' ಕಾರಗಳ ಏಕಾಕ್ಷರಯಮಕ ಇಡೀ ಸಂಸ್ಕೃತ ಸಾಹಿತ್ಯದಲ್ಲೇ ಅಪೂರ್ವ. ಆದಕ್ಕೆ ಅವರೇ ನೀಡಿರುವ ವಿವರಣೆಯನ್ನು ಅವರ ಸಾಕ್ಷಾಚ್ಛಿಷ್ಯರುಗಳಾದ ನರಹರಿತೀರ್ಥರು ಮತ್ತು ಹೃಷೀಕೇಶತೀರ್ಥರು ದಾಖಲಿಸಿರುವರು. ಅವರ ಮತ್ತೊಂದು ಕೃತಿ 'ಭಾಗವತತಾತ್ಪರ್ಯನಿರ್ಣಯ'ದಲ್ಲೂ ಮಹಾಭಾರತತಾತ್ಪರ್ಯನಿರ್ಣಯಕ್ಕೆ ಬೇಕಾದ ಅನೇಕ ವಿವರಗಳು ತುಂಬಿವೆ.

ಇದಕ್ಕೆ ನರಹರಿತೀರ್ಥರು ಶ್ಲೋಕರೂಪ ಮತ್ತು ವಾಕ್ಯರೂಪವಾದ ಎರಡು ಟೀಕೆಗಳನ್ನು ರಚಿಸಿರುವರು. ಯಮಕಭಾರತದ ಮೇಲೆ ಟೀಕೆ ರಚಿಸಿರುವ ಪ್ರಾಚೀನ ಟೀಕಾಕಾರರು ಇವರೊಬ್ಬರೇ ಎನ್ನಬಹುದು. ಇವರ ವ್ಯಾಖ್ಯಾನ ಅನೇಕ ರೀತಿಯಲ್ಲಿ ವಿಶಿಷ್ಟವಾಗಿದ್ದು ಮೂಲದ ಅರ್ಥಗಾಂಭೀರ್ಯವನ್ನು ಅರಿಯಲು ತುಂಬಾ ಉಪಕಾರವಾಗಿದೆ. ಶ್ರೀಯಾದವಾರ್ಯರ ಟೀಕೆಯು ಅಧ್ಯಯನ ಪರಂಪರೆಯಲ್ಲಿ ವಿಶೇಷವಾಗಿ ಬಳಕೆಯಲ್ಲಿದೆ. ವಿಜಯಧ್ವಜತೀರ್ಥರು ಇದರ ಮೇಲೆ ಟೀಕೆಯನ್ನು ರಚಿಸಿರುವ ಉಲ್ಲೇಖವುಂಟು.

ಯಮಕಭಾರತದ ಟೀಕೆಗಳು

೧) ಶ್ರೀನರಹರಿತೀರ್ಥಕೃತಶ್ರೀಕೃಷ್ಣಲೀಲಾಪ್ರಕಾಶಿಕಾ (ಶ್ಲೋಕರೂಪಟೀಕಾ)

೨) ಶ್ರೀನರಹರಿತೀರ್ಥಕೃತವಾಕ್ಯರೂಪಟೀಕಾ

೩) ಶ್ರೀನಾರಾಯಣಪಂಡಿತಾಚಾರ್ಯಕೃತಟೀಕಾ

೪) ಶ್ರೀವಿಜಯಧ್ವಜತೀರ್ಥಕೃತಟೀಕಾ

೫) ಶ್ರೀವ್ಯಾಸತೀರ್ಥಕೃತಟೀಕಾ

೬) ಶ್ರೀಯದುಪತ್ಯಾಚಾರ್ಯಕೃತಟೀಕಾ

೭) ಛಲಾರೀ ಶ್ರೀನರಸಿಂಹಾಚಾರ್ಯಕೃತಟೀಕಾ

೮) ಶ್ರೀರೊಟ್ಟವೇಂಕಟಾದ್ರಿಭಟ್ಟಕೃತಟೀಕಾ

೯) ತಾಮ್ರಪರ್ಣಿ ಶ್ರೀನಿವಾಸಾಚಾರ್ಯಕೃತಟೀಕಾ-ಶ್ರೀಕೃಷ್ಣಲೀಲಾಮಣಿಮಾಲಾ

೧೦) ಭಾಸ್ಕರಭಟ್ಟತನುಜತಿಮ್ಮಣ್ಣಭಟ್ಟಸೂನುಶ್ರೀತಮ್ಮಣ್ಣಭಟ್ಟಕೃತಟೀಕಾ

೧೧) ಶ್ರೀವೇಂಕಟೇಶ್ವರೀಯಟೀಕಾ

೧೨) ಶ್ರೀಭಗವಂತರಾಯಕೃತಟೀಕಾ

೧೩) ಗೂಢಕರ್ತೃಕ

******

ಪಂಚಮಸಂಪುಟದಲ್ಲಿನ ಅಧ್ಯಾಯಗಳ ವಿವೇಚನೆ

ಪ್ರಕೃತಸಂಪುಟದಲ್ಲಿ ಇಪ್ಪತ್ತೇಳರಿಂದ ಮೂವತ್ತೆರಡರವರೆಗಿನ ಒಟ್ಟು ಆರು ಅಧ್ಯಾಯಗಳ ಅನುವಾದ ಹಾಗೂ ವಿವರಣೆಗಳು ಬಂದಿವೆ. ಇದರೊಂದಿಗೆ ಗ್ರಂಥ ಮುಕ್ತಾಯವಾಗುವುದು.

ಇಪ್ಪತ್ತೇಳನೆಯ ಅಧ್ಯಾಯ (ಶ್ಲೋಕಸಂಖ್ಯೆ : ೧೮೬)

ಹದಿನಾರನೆಯ ದಿನದ ಯುದ್ಧ, ಕರ್ಣನ ಸೇನಾಪತ್ಯ, ಭೀಮ ಅಶ್ವತ್ಥಾಮರ ಮಧ್ಯೆ ನಡೆದ ಸಾರ್ವಕಾಲಿಕದಾಖಲೆಯ ಮಹಾ ಅಸ್ತ್ರಯುದ್ಧ, ಅಶ್ವತ್ಥಾಮನ ಪರಾಭವ, ಭೀಮನ ಗಜಸೇನೆಯ ಮೇಲಿನ ಯುದ್ಧ, ಯುಧಿಷ್ಠಿರನಿಂದ ದುರ್ಯೋಧನ ವಿರಥನಾದದ್ದು, ಯುಧಿಷ್ಠಿರನ ರಕ್ಷಣೆಗೆ ಗದಾಪಾಣಿಯಾಗಿ ಭೀಮಸೇನನ ಆಗಮನ, ದುರ್ಯೋಧನನ ಪರಾಭವ, ಕರ್ಣನಿಂದ ನಕುಲನ ಪರಾಭವ, ಸಾತ್ಯಕಿಯಿಂದ ವಿಂದಾನುವಿಂದರ ವಧೆ, ಕೃಪರಿಂದ ಧೃಷ್ಟದ್ಯುಮ್ನನ ಸೋಲು, ಕರ್ಣಾರ್ಜುನರ ಯುದ್ಧದಲ್ಲಿ ಕರ್ಣನ ಪರಾಭವ, ಅಂದು ರಾತ್ರಿ ಕರ್ಣದುರ್ಯೋಧನ ಸಮಾಲೋಚನೆ, ಕರ್ಣನ ಅಪೇಕ್ಷೆಯಂತೆ ದುರ್ಯೋಧನ ಶಲ್ಯನನ್ನು ಅವನ ಸಾರಥ್ಯಕ್ಕೆ ಒಪ್ಪಿಸಿದ್ದು, ಹದಿನೇಳನೆಯ ದಿನದ ಯುದ್ಧ, ಕರ್ಣಶಲ್ಯರ ವಿವಾದ, ಶಲ್ಯನಿಂದ ಕರ್ಣನ ತೇಜೋವಧೆ, ಕರ್ಣನಿಂದ ಯುಧಿಷ್ಠಿರ ನಕುಲ ಸಹದೇವರ ಪರಾಭವ, ಭೀಮನಿಂದ ದುರ್ಯೋಧನನ ಪರಾಭವ,

ಭೀಮನಿಂದ ಕರ್ಣನ ಸೋಲು ಹಾಗೂ ಮೂರ್ಛೆ, ಭೀಮನಿಂದ ಮೂರು ಅಕ್ಷೋಹಿಣಿ ಕುರುಸೇನೆಯ ಪರಾಭವ, ಅಶ್ವತ್ಥಾಮನಿಂದ ಧೃಷ್ಟದ್ಯುಮ್ನ ಯುಧಿಷ್ಠಿರಾದಿಗಳ ಪರಾಭವ, ಅರ್ಜುನ ಅಶ್ವತ್ಥಾಮರ ಅಪೂರ್ವ ಅಸ್ತ್ರಯುದ್ಧ, ಎರಡು ಬಾರಿ ಅಶ್ವತ್ಥಾಮನಿಂದ ಅರ್ಜುನನಿಗೆ ಶರಪಂಜರದಲ್ಲಿ ಬಂಧನ ಹಾಗೂ ಗಾಂಡೀವದ ಜ್ಯಾದ ಛೇದನ, ಕೃಷ್ಣಾನುಗ್ರಹದಿಂದ ಅರ್ಜುನನ ಅಶ್ವತ್ಥಾಮ ಜಯ, ಅಶ್ವತ್ಥಾಮನಿಂದ ಪಾಂಡ್ಯನ ಸಂಹಾರ, ಅಶ್ವತ್ಥಾಮನಿಂದ ಧೃಷ್ಟದ್ಯುಮ್ನನ ಪರಾಭವ, ಭೀಮಾರ್ಜುನರಿಂದ ಧೃಷ್ಟದ್ಯುಮ್ನನ ರಕ್ಷಣೆ, ದುರ್ಯೋಧನನಿಂದ ನಕುಲ ಸಹದೇವ ಹಾಗೂ ಯುಧಿಷ್ಠಿರರ ಪರಾಭವ, ಕರ್ಣನಿಂದ ಯುಧಿಷ್ಠಿರನ ಪರಾಭವ, ಅವನು ಶಿಬಿರಕ್ಕೆ ತೆರಳಿ ವಿಶ್ರಾಂತಿ ಪಡೆದದ್ದು, ಮತ್ತೊಮ್ಮೆ ಭೀಮನಿಂದ ದುರ್ಯೋಧನ ರಥಾದಿಹೀನನಾದದ್ದು, ಭೀಮನಿಂದ ಅಶ್ವತ್ಥಾಮ ಕರ್ಣರ ಪರಾಭವ, ಮತ್ತೊಮ್ಮೆ ಅರ್ಜುನ ಅಶ್ವತ್ಥಾಮರ ಅಸ್ತ್ರಯುದ್ಧ, ಅದರಲ್ಲೂ ಅಶ್ವತ್ಥಾಮನಿಂದ ಅರ್ಜುನನ ಶರಪಂಜರದಲ್ಲಿ ಬಂಧನ ಹಾಗೂ ಗಾಂಡೀವದ ಜ್ಯಾದ ಛೇದನ, ಮತ್ತೊಮ್ಮೆ ಕೃಷ್ಣಾನುಗ್ರಹದಿಂದ ಅರ್ಜುನನ ಅಶ್ವತ್ಥಾಮಜಯ, ಕರ್ಣನಿಂದ ಧೃಷ್ಟದ್ಯುಮ್ನ ಸಾತ್ಯಕಿಯರ ಪರಾಭವ, ಭೀಮನ ಪರಾಕ್ರಮಕ್ಕೆ ನಲುಗಿದ ಕುರುಸೇನೆ, ಭೀಮನಿಂದ ದುರ್ಯೋಧನನ ಪರಾಭವ, ಕರ್ಣನಿಂದ ಭಾರ್ಗವಾಸ್ತ್ರಪ್ರಯೋಗ, ಯುಧಿಷ್ಠಿರನ ಕ್ಷೇಮವಾರ್ತೆ ತಿಳಿಯಲು ಅರ್ಜುನನ ಕಾತರ, ಭೀಮನಲ್ಲಿ ಕೋರಿಕೆ, ಯುದ್ಧ ಬಿಟ್ಟು ತೆರಳಲು ಭೀಮನ ನಿರಾಕರಣೆ, ಅರ್ಜುನನ ಕೋರಿಕೆಯಂತೆ ಕೃಷ್ಣ ಅವನನ್ನು ಶಿಬಿರಕ್ಕೆ ಕರೆದೊಯ್ದದ್ದು, ಅರ್ಜುನ ಯುಧಿಷ್ಠಿರರ ವಿಚಿತ್ರ ಕಲಹ, ಕೃಷ್ಣನಿಂದ ಅದರ ಪರಿಹಾರ, ಪ್ರಕರಣದ ಸುಖಾಂತ, ಮರಳಿ ರಣರಂಗಕ್ಕೆ ಅರ್ಜುನ, ಭೀಮನ ಅಮೋಘ ಯುದ್ಧಕೌಶಲ, ಭೀಮನಿಂದ ಶಕುನಿ ಹಾಗೂ ಕೌರವರ ಪರಾಜಯ, ಭೀಮ ಮಾಡಿದ ದುಃಶಾಸನವಧೆ, ಭೀಮನಿಂದ ಮನ್ಯುಸೂಕ್ತದರ್ಶನ, ಭೀತರಾದ ಕರ್ಣ ಅಶ್ವತ್ಥಾಮಾದಿಗಳು, ಭೀಮನಿಂದ ಇನ್ನೂ ಇಪ್ಪತ್ತು ಕೌರವರ ವಧೆ, ಅರ್ಜುನನಿಂದ ವೃಷಸೇನನ ವಧೆ, ಕರ್ಣಾರ್ಜುನರ ದ್ವಂದ್ವಯುದ್ಧ, ಯುದ್ಧದರ್ಶನಕ್ಕೆ ಗಗನದಲ್ಲಿ ನೆರೆದ ಬ್ರಹ್ಮಾದಿದೇವತೆಗಳು, ಭೀಮನಿಂದ ಅರ್ಜುನನಿಗೆ ಸ್ಫೂರ್ತಿದಾನ, ಅರ್ಜುನನ ಅದ್ಭುತಯುದ್ಧ, ದುರ್ಯೋಧನನಿಗೆ ಅಶ್ವತ್ಥಾಮನ ಹಿತೋಕ್ತಿ, ಕರ್ಣಾರ್ಜುನರ ಘೋರಸಂಗ್ರಾಮ, ಕರ್ಣನ ನಾಗಾಸ್ತ್ರದಿಂದ ಕೃಷ್ಣನಿಂದ ಅರ್ಜುನನ ಸಂರಕ್ಷಣೆ, ಕಿರೀಟ ಕಳೆದುಕೊಂಡ ಕಿರೀಟಿ, ಅಶ್ವಸೇನನ ವಧೆ, ಅರ್ಜುನನಿಂದ ಕರ್ಣನ ವಧೆ, ಭೀಮನ ಅಪೂರ್ವಪರಾಕ್ರಮ, ಕರ್ಣವಧೆಯಿಂದ ಯುಧಿಷ್ಠಿರನಿಗಾದ ಸಂಭ್ರಮ — ಇವಿಷ್ಟು ಈ ಅಧ್ಯಾಯದಲ್ಲಿನ ಮುಖ್ಯ ವಿಷಯಗಳು.

ಭೀಮ ಅಶ್ವತ್ಥಾಮರ ಮಧ್ಯೆ ನಡೆದ ಅಪೂರ್ವ ಅಸ್ತ್ರಯುದ್ಧ ಈ ಅಧ್ಯಾಯದ ಪ್ರಾರಂಭದಲ್ಲಿ ಬಂದಿರುವ ಅಪೂರ್ವಘಟ್ಟ. ಭೀಮ ಅರ್ಜುನಾದಿ ಸಮಸ್ತರನ್ನೂ ಮೀರಿಸಿದ ಸರ್ವಶ್ರೇಷ್ಠ ಅಸ್ತ್ರಜ್ಞ ಎಂಬುದಾಗಿ ದೇವತೆಗಳೂ ಕೊಂಡಾಡಿದ ವಿವರ ಇಲ್ಲಿದೆ:

ತದ್ಯುದ್ಧಮಾಸೀದತಿಘೋರಮದ್ಭುತಂ ಪುರಾ ಯಥಾ ನಾಸ ಚ ಕಸ್ಯಚಿತ್ ಕ್ವಚಿತ್ ॥
ದೃಷ್ಟ್ವೈವ ತದ್ದೇವಗಂಧರ್ವಎಪ್ರಾ ಊಚುರ್ನೇದೃಗ್ದೃಷ್ಟಪೂರ್ವಂ ಸುಯುದ್ಧಮ್ ।
ನ ಚೋತ್ತರಂ ವಾऽಪಿ ಭವಿಷ್ಯತೀದೃಕ್ ಕಲಾಂ ಚ ಸರ್ವಾಣಿ ನ ಪೋಡಶೀಮಿಯುಃ ॥
ನೈತಾದೃಶೀ ಜ್ಞಾನಸಂಪದ್ಬಲಂ ವಾ ದ್ವಯಂ ಕುತೋ ವಾಯುಮೃತೇ ಶಿವಂ ತಥಾ ।
ದ್ವಯೋಃ ಸಮಾಹಾರ ಇಹ ದ್ವಯೋರಪಿ ಜ್ಞಾನಸ್ಯ ಬಾಹ್ವೋಶ್ಚ ಬಲಸ್ಯ ಸೂರ್ಜಿತಃ ॥
ಇತೀರ್ಯಮಾಣೇ ವಿಬುಧೈರ್ನರೋತ್ತಮೌ ದಿಶಃ ಸಮಸ್ತಾ ಗಗನಂ ಚ ಪತ್ರಿಭಿಃ ।
ನಿರಂತರಂ ಚಕ್ರತುರುತ್ತಮೌಜಸೌ ದೃಷ್ಟ್ವೈವ ತದ್ಭೀತಿಮಗುರ್ಮಹಾರಥಾಃ ॥
ಶರಾಸನೇ ಮಾರುತಿನಾ ನಿರಾಕೃತೇ ದ್ರೌಣಿರ್ಮಹಾಸ್ತ್ರಾಣಿ ಮುಮೋಚ ತಸ್ಮಿನ್ ।
ತಾನ್ಯಸ್ತ್ರವಿದ್ಯೈರ್ಬಲವಾನವಿಸ್ಮಯಃ ಸಂಶಾಮಯಾಮಾಸ ಸುತೋऽನಿಲಸ್ಯ ॥
ಪುನಃ ಶರೈರೇವ ಪರಸ್ಪರಂ ತಾವಯುಧ್ಯತಾಂ ಚಿತ್ರಮಲಂ ಚ ಸುಷ್ಠು ।
ತದಾ ತು ಭೀಮಸ್ಯ ಶರೈರ್ಭೃಶಾರ್ದಿತಃ ದ್ರೌಣಿಃ ಪಪಾತಾಶು ದೃಢಂ ವಿಚೇತನಃ ॥
– (೨೭/೫-೧೦)

ಪ್ರಾಯಃ ಇತರ ಸಂಸ್ಕೃತ ಮೊದಲಾದ ಎಲ್ಲ ಭಾಷೆಯ ಗ್ರಂಥಗಳಲ್ಲೂ ಲುಪ್ತವಾಗಿ, ಪಂಪಭಾರತದಲ್ಲಿ ಮಾತ್ರ ಈ ಪ್ರಸಂಗ ಸ್ವಲ್ಪಮಟ್ಟಿಗೆ ಉಳಿದುಕೊಂಡಿದೆ ಎಂಬುದು ಸೋಜಿಗ.

ಕರ್ಣನ ಕೋರಿಕೆಯಂತೆ ದುರ್ಯೋಧನ ಶಲ್ಯನನ್ನು ಅವನ ಸಾರಥಿಯನ್ನಾಗಿ ಮಾಡಿದ್ದು ಮುಂದಿನ ರೋಚಕಘಟ್ಟ. ರಥಿಗಿಂತ ಸಾರಥಿಯು ಸಕಲಗುಣಗಳಿಂದಲೂ ಮಿಗಿಲಾಗಿರಬೇಕು ಎಂದು ತಿಳಿಸುವ ದುರ್ಯೋಧನ ಅದಕ್ಕೆ ನಿದರ್ಶನವನ್ನಾಗಿ ಕೃಷ್ಣನ ಪಾರ್ಥಸಾರಥ್ಯ, ಬ್ರಹ್ಮನ ರುದ್ರಸಾರಥ್ಯಗಳನ್ನು ನೀಡುವುದು ತುಂಬಾ ಅಪೂರ್ವ. ಕೃಷ್ಣಸಾರಥ್ಯದಲ್ಲಿ ಅವನ ಸರ್ವೋತ್ತಮತ್ವ ನಿರೂಪಿತವಾದರೆ, ಬ್ರಹ್ಮಸಾರಥ್ಯದಲ್ಲಿ ಅವರ ಜೀವೋತ್ತಮತ್ವ ನಿರೂಪಿತವಾಗಿದೆ. ಇಂತಹ ಪ್ರಧಾನತತ್ತ್ವಗಳು ದುರ್ಯೋಧನನ ಬಾಯಿಂದ ಬಂದಿರುವುದು ಅವು ಸರ್ವಮಾನ್ಯವಾದ ಸಿದ್ಧಾಂತವೆನ್ನಲು ಮತ್ತೊಂದು ದಾಖಲೆ :

ಬುದ್ಧ್ಯಾ ಬಲೇನ ಜ್ಞಾನೇನ ಧೈರ್ಯಾದ್ಯೈರಪಿ ಯೋऽಧಿಕಃ ।
ರಥಿನಃ ಸಾರಥಿಃ ಸ ಸ್ಯಾದರ್ಜುನಸ್ಯ ಯಥಾ ಹರಿಃ ।
ಯಥಾ ಶಿವಸ್ಯ ಬ್ರಹ್ಮಾऽಭೂತ್ ದಹತಸ್ತ್ರಿಪುರಂ ಪುರಾ ॥ – (೨೭/೨೬)

ಶಲ್ಯ ಕರ್ಣನ ತೇಜೋವಧೆಗೆಂದು ನಿರೂಪಿಸುವ ಕಾಗೆ ಹಂಸ ಹಾಗೂ ನರಿ ಸಿಂಹಗಳ ಕಥೆಯನ್ನು ಆಚಾರ್ಯರು ಒಂದೇ ಶ್ಲೋಕದಲ್ಲಿ ಸಂಗ್ರಹಿಸಿರುವ ರೀತಿ ತುಂಬಾ ಅಪೂರ್ವವಾದುದು:

ಕಾಕಗೋಮಾಯುಧರ್ಮಾ ತ್ವಂ ಹಂಸಸಿಂಹೋಪಮಂ ರಣೇ ।
ಮಾ ಯಾಹಿ ಪಾರ್ಥಂ ಮಾ ಯಾಹಿ ಹತೋऽನೇನ ಯಮಕ್ಷಯಮ್ ।
ಇತ್ಯುಕ್ತೋ ರವಿಜೋ ಮದ್ರಾನ್ ನಿತರಾಂ ಪರ್ಯಕುತ್ಸಯತ್ ॥ – (೨೭/೩೦)

ಎರಡು ಬಾರಿ ಕರ್ಣನಿಗೆ ಸೋತು ಪ್ರಾಣಸಂಶಯಕ್ಕೊಳಗಾಗಿದ್ದ ಯುಧಿಷ್ಠಿರನನ್ನು ಭೀಮ ದುರ್ಯೋಧನನಿಗೆ ಅಂತಹ ಪರಿಸ್ಥಿತಿ ಉಂಟುಮಾಡುವ ಮೂಲಕ ಸಂರಕ್ಷಿಸಿದ್ದು ಅವನ ಅಪಾರಕೌಶಲಕ್ಕೆ ಶ್ರೇಷ್ಠ ನಿದರ್ಶನ :

ಕೃತ್ವಾ ತಮಾಶು ವಿರಥಂ ಧನುರಸ್ಯ ಕಂಠೇ ಸಜ್ಯಂ ನಿಧಾಯ ಪರುಷಾ ಗಿರ ಆಹ ಚೋಚ್ಚೈಃ ।
ದೃಷ್ಟ್ವೈವ ಮಾರುತಿರಮುಂ ಭೃಶಮಾತುತೋದ ದುರ್ಯೋಧನಂ ವಿರಥಕಾರ್ಮುಕಮಾಶು ಕೃತ್ವಾ ॥
– (೨೭/೩೪)

ಕರ್ಣನನ್ನು ಒಂದೇ ಬಾಣದಿಂದ ಮೂರ್ಛಿತನಾಗಿಸಿ, ಅವನ ಸಂಹಾರಕ್ಕೆಂದು ಭೀಮಸೇನ ಉಗ್ರರೂಪದಿಂದ ಧಾವಿಸಿದ ಪ್ರಸಂಗ ಭೀಮನ ಅನುಪಮವಾದ ಬಲಾದಿಗುಣಗಳಿಗೆ ದ್ಯೋತಕ. ಪರೋಕ್ಷವಾದ ಶ್ರೀಹರಿನಿಂದೆಯನ್ನು ಸಹ ಪ್ರತಿಭಟಿಸುವ ಭೀಮನ ಭಗವನ್ನಿಷ್ಠೆ ಇಲ್ಲಿ ತೆರೆದುಕೊಂಡಿರುವ ರೀತಿ ಅದ್ಭುತವಾದುದು :

ರಾಜಾವನಾಯ ಶಿನಿಪುಂಗವಪಾರ್ಷತೌ ಚ ಸಂದಿಶ್ಯ ಕರ್ಣಮಭಿಗಚ್ಛತ ಆಸ ರೂಪಮ್॥
ಅಂತೇ ಕೃತಾಂತನರಸಿಂಹತನೋರ್ಯಥೈವ ವಿಷ್ಣೋರ್ಹರಂ ಗ್ರಸತ ಆತ್ತಸಮಸ್ತವಿಶ್ವಮ್ ।
ತದ್ವೇಗತಃ ಪ್ರತಿಚಚಾಲ ಧರಾ ಸಮಸ್ತಾ ವಿದ್ರಾವಿತಾ ಚ ಸಕಲಾ ಪ್ರತಿವೀರಸೇನಾ ॥....
ನಿಂದಾಂ ಹರೇಸ್ತು ವಿದಧಾತಿ ಪರೋಕ್ಷಗೋಽಪಿ ಯಸ್ತಂ ಪ್ರಗೃಹ್ಯ ಕರವಾಣಿ ವಿಜಿಹ್ವಮೇವ ।
ಏವಂ ಹಿ ವಾಯುತನಯಸ್ಯ ಮಹಾಪ್ರತಿಜ್ಞಾ ಛೇತ್ತುಂ ಸ ತೇನ ರವಿಜಸ್ಯ ಸಸಾರ ಜಿಹ್ವಾಮ್ ॥
– (೨೭/೩೭,೩೮,೪೦)

ಅರ್ಜುನಾಶ್ವತ್ಥಾಮರ ಮಧ್ಯೆ ನಡೆದ ಯುದ್ಧದಲ್ಲಿ ಅರ್ಜುನನ ವಿಜಯಕ್ಕೆ ಕಾರಣವಾದ ವಿವರಗಳ ಸಂಗ್ರಹ ಮನನೀಯವಾದುದು :

ಸಾರಥಿತ್ವಾತ್ ಕೇಶವಸ್ಯ ಧ್ವಜಸ್ಥತ್ವಾದ್ಧನೂಮತಃ ।
ಗಾಂಡಿವತ್ವಾತ್ ಕಾರ್ಮುಕಸ್ಯ ಚೇಷುಧ್ಯೋರಕ್ಷಯತ್ವತಃ ॥
ಅವಧ್ಯತ್ವಾತ್ ತಥಾಽಶ್ವಾನಾಮಭೇದ್ಯತ್ವಾದ್ರಥಸ್ಯ ಚ ।
ಅತೋ ಯೋದ್ಧುಂ ಸಮರ್ಥೋಽಪಿ ನಾದ್ಯ ಯಾಮಿ ಧನಂಜಯಮ್॥
– (೨೭/೫೯, ೬೦)

ಮುಂದೆ ನಡೆದ ಅರ್ಜುನಯುಧಿಷ್ಠಿರರ ಕಲಹಪ್ರಸಂಗದಲ್ಲಿ ಬಂದಿರುವ ಸತ್ಯಧರ್ಮಗಳ ವ್ಯಾಖ್ಯೆ ಅಧ್ಯಾತ್ಮದ ಒಳನೋಟವನ್ನು ತೋರುವ ಅಪೂರ್ವಪ್ರಸಂಗವಾಗಿದ್ದು, ಅಲ್ಲಿ 'ಸತ್ಯಂ ವದ ಧರ್ಮಂ ಚರ' ಎಂಬ ಉಪನಿಷದ್ವಾಕ್ಯಗಳ ಭಾಷ್ಯವೇ ಪ್ರಕಟವಾಗಿದೆ ಎನ್ನಬಹುದು :

ಸತ್ಯಸ್ಯ ವಚನಂ ಶ್ರೇಯಃ ಸತ್ಯಜ್ಞಾನಂ ತು ದುಷ್ಕರಮ್ ।
ಯತ್ ಸತಾಂ ಹಿತಮತ್ಯಂತಂ ತತ್ ಸತ್ಯಮಿತಿ ನಿಶ್ಚಯಃ ॥

ಧರ್ಮಸ್ಯ ಚರಣಂ ಶ್ರೇಯೋ ಧರ್ಮಜ್ಞಾನಂ ತು ದುಷ್ಕರಮ್ ।
ಯಃ ಸತಾಂ ಧಾರಕೋ ನಿತ್ಯಂ ಸ ಧರ್ಮ ಇತಿ ನಿಶ್ಚಯಃ ॥ – (೨೭/೧೧೫, ೧೧೬)

ಇದರ ವಿವರಣೆಗಾಗಿ ಶ್ರೀಕೃಷ್ಣ ನೀಡಿದ ಕೌಶಿಕನ ಕಥೆಯನ್ನು ಒಂದೇ ಶ್ಲೋಕದಲ್ಲೂ, ವ್ಯಾಧನ ಕಥೆಯನ್ನು ಎರಡು ಶ್ಲೋಕಗಳಲ್ಲೂ ಸಂಗ್ರಹಿಸಿರುವ ಕೌಶಲ ಅನನ್ಯವಾದುದು. ಅಣುಭಾಷ್ಯದಲ್ಲಿ ಭಾಷ್ಯಾರ್ಥ ನಿರೂಪಿಸಿರುವ ಅವರ ಸಂಗ್ರಹಣಾಕೌಶಲ ಕಥಾಸಂಗ್ರಹದಲ್ಲೂ ಹೀಗೆ ವ್ಯಕ್ತವಾಗಿರುವುದು ಅಪೂರ್ವ.

ಅದೇ ಪ್ರಸಂಗದಲ್ಲಿ ಬಂದಿರುವ ಆತ್ಮಹತ್ಯೆ, ಗುರುಹತ್ಯೆ ಮೊದಲಾದವುಗಳ ಬಗ್ಗೆ ಬಂದಿರುವ ವಿವರಗಳು ಎಲ್ಲಕಾಲಕ್ಕೂ ಸಲ್ಲುವ ಅಪೂರ್ವಸೂಕ್ತಿಗಳು :

ಮತಿಪೂರ್ವಂ ದೇಹನಾಶಾತ್ ಪಾಪಂ ಮಹದವಾಪ್ಯತೇ ।
ಧರ್ಮಾರ್ಥಕಾಮಮೋಕ್ಷಾಣಾಂ ಸಾಧನಂ ದೇಹತೋಽಸ್ತಿ ಯತ್ ॥
...ವಧೋ ಗುರೂಣಾಂ ತ್ವಂಕಾರಃ ಸ್ವಪ್ರಶಂಸೈವ ಚಾತ್ಮನಃ ॥...
ಗುರುನಿಂದಾಽಽತ್ಮಪೂಜಾ ಚ ನ ಧರ್ಮಾಯ ಭವೇತ್ ಕ್ವಚಿತ್॥
– (೨೭/೧೨೩, ೧೨೪, ೧೨೬)

ಆ ಪ್ರಸಂಗದಲ್ಲಿ ಅರ್ಜುನನ ಬಾಯಲ್ಲಿ ಬಂದ ಭೀಮಪ್ರಶಂಸೆ ವಾಯುಜೀವೋತ್ತಮತ್ವಕ್ಕೆ ಮತ್ತೊಂದು ನಿದರ್ಶನವಾಗಿದೆ :

ಭೀಮೋ ಮಾಂ ಗರ್ಹಿತುಂ ಯೋಗ್ಯೋ ಯೋ ಹ್ಯಸ್ಮಾಕಂ ಸದಾ ಗತಿಃ ।
ಯೋ ಯುಧ್ಯತೇ ಸರ್ವವೀರೈರದ್ಯಾಪಿ ತ್ವಂ ತು ನಿಂದಕಃ ॥ – (೨೭/೧೨೧)

ಆ ಪ್ರಸಂಗದ ಒಟ್ಟು ಸಾರವನ್ನು ಸೆರೆಹಿಡಿದಿರುವ ಈ ಮಾತುಗಳೂ ಗಮನಾರ್ಹ :

ನಾಹಂ ವೇದ ಪರಂ ಧರ್ಮಂ ಕೃಷ್ಣ ಏವ ಗತಿರ್ಮಮ ।
ಇತಿ ಭಾವಂ ಸಮುತ್ಪಾದ್ಯ ದೋಷಾನ್ ನಾಶಯಿತುಂ ಹರಿಃ ।
ಕಾರಯಾಮಾಸ ತತ್ಸರ್ವಮರ್ಜುನೇನ ಜಗತ್ಪತಿಃ ॥ – (೨೭/೧೨೭)

ಮಹಾಭಾರತದಲ್ಲಿ ಒಂದು ಅಧ್ಯಾಯಪೂರ್ತಿ ನಿರೂಪಿತವಾಗಿರುವ ಭೀಮು ಸಮಸ್ತಕುರುಸೇನೆಯನ್ನು ಎದುರಿಸಿದ ಪ್ರಸಂಗದ ಸಂಗ್ರಹ ಒಂದೇ ಶ್ಲೋಕದಲ್ಲಿ ಬಂದಿರುವುದು ಮತ್ತೊಂದು ಗಮನಾರ್ಹ ಅಂಶ :

ಭೀಮಸ್ತದಾ ಶತ್ರುಬಲಂ ಸಮಸ್ತಂ ವಿದ್ರಾವಯಾಮಾಸ ಜಘಾನ ಚಾಜೌ ।
ವೀರಾನ್ ರಣಾಯಾಭಿಮುಖಾನ್ ಸ್ವಯಂತ್ರಾ ಕುರ್ವಂಶ್ಚ ವಾರ್ತಾ ರಮಮಾಣ ಏವ ॥
– (೨೭/೧೩೩)

ಹದಿನೇಳನೆಯ ದಿನದ ಅತ್ಯಂತಮಹತ್ತ್ವಪೂರ್ವವಾದ ಘಟ್ಟ ಭೀಮನಿಂದ ನಡೆದ ದುಃಶಾಸನನ ವಧೆ. ನರಸಿಂಹ ಮಾಡಿದ ಹಿರಣ್ಯಕಶಿಪುವಿನ ವಧೆಯನ್ನು ಹೋಲುವ ಆ ಪ್ರಸಂಗದ ವಿವರಗಳನ್ನು ಅತ್ಯಂತಪರಿಣಾಮಕಾರಿಯಾಗಿ ನಿರೂಪಿಸುವ ಶ್ಲೋಕಗಳು ಹೀಗಿವೆ :

ತಂ ರೂಕ್ಷವಾಚೋ ಮುಹುರರ್ಪಯಂತಂ ವಿಧಾಯ ಭೀಮೋ ವಿರಥಂ ಕ್ಷಣೇನ ।
ಪ್ರಗೃಹ್ಯ ಭೂಮೌ ನಿಪಾತ್ಯ ವಕ್ಷೋ ವಿದಾರಯಾಮಾಸ ಗದಾಪ್ರಹಾರತಃ ॥
ಆಕ್ರಮ್ಯ ಕಂಠಂ ಚ ಪದೋದರೇಽಸ್ಯ ನಿವಿಶ್ಯ ಪಶ್ಯನ್ ಮುಖಮಾತ್ತರೋಷಃ ।
ವಿಕೋಶಮಾಕಾಶನಿಭಂ ವಿಧಾಯ ಮಹಾಸಿಮಸ್ಯೋರಸಿ ಸಂಚಖಾನ ॥
ಕೃತ್ವಾಽಸ್ಯ ವಕ್ಷಸ್ಯುರುಸತ್ತಟಾಕಂ ಪಪೌ ನಿಕಾಮಂ ತೃಷಿತೋಽಮೃತೋಪಮಮ್ ।
ತಚ್ಚೋಣತಾಂಭೋ ಭ್ರಮದಕ್ಷಮೇನಂ ಸಂಸ್ಮಾರಯಾಮಾಸ ಪುರಾ ಕೃತಾನಿ ॥
ವಾಕ್ಸಾಯಕಾಂಶ್ಚಾಸ್ಯ ಪುರಾ ಸಮರ್ಪಿತಾನ್ ಸಂಸ್ಮಾರಯಾಮಾಸ ಪುನಃ ಪುನರ್ಭೃಶಮ್ ।
ದಂತಾಂತರಂ ನ ಪ್ರವಿವೇಶ ತಸ್ಯ ರಕ್ತಂ ಹ್ಯಪೇಯಂ ಪುರುಷಸ್ಯ ಜಾನತಃ ॥
ತಥಾಽಪಿ ಶತ್ರುಪ್ರತಿಭೀಷಣಾಯ ಪಪಾವಿವಾಸ್ವಾದ್ಯ ಪುನಃ ಪುನರ್ಭೃಶಮ್ ।
ಸ್ಮರನ್ ನೃಸಿಂಹಂ ಭಗವಂತಮೀಶ್ವರಂ ಸ ಮನ್ಯುಸೂಕ್ತಂ ಚ ದದರ್ಶ ಭಕ್ತ್ಯಾ ॥
'ಯಸ್ತೇ ಮನ್ಯೋ' ಇತ್ಯತೋ ನಾರಸಿಂಹಂ ಸೋಮಂ ತಸ್ಮೈ ಚಾರ್ಪಯಚ್ಚೋಣತಾಖ್ಯಮ್ ।
ಯುದ್ಧಾಖ್ಯಯಜ್ಞೇ ಸೋಮಬುದ್ಧ್ಯಾಽರಿವಕ್ಷ ಇಹೇತಿ ಸಾಮ್ನಾ ಗದಯಾ ವಿಭಿಂದನ್ ॥

– (೨೭/೧೩೮, ೧೪೩)

ಇಲ್ಲಿಯ ನಿರೂಪಣೆಯಲ್ಲಿ ಭೀಮ ವಾಸ್ತವವಾಗಿ ದುಃಶಾಸನನ ರಕ್ತವನ್ನು ಪಾನ ಮಾಡಲಿಲ್ಲ ಎಂಬ ಅತ್ಯಂತಮುಖ್ಯವಾದ ಪ್ರಮೇಯ ನಿರೂಪಿತವಾಗಿದೆ. ಅದರಂತೆ ಭೀಮಸೇನ ದುಃಶಾನವಧೆಯನ್ನು ನರಸಿಂಹನಿಗೆ ಸಲ್ಲಿಸಿದ ಶ್ರೇಷ್ಠವಾದ ಯಜ್ಞರೂಪದ ಪೂಜೆಯೇ ಆಗಿತ್ತು ಎಂಬುದನ್ನೂ, ಆಗ ಋಷಭಸೂಕ್ತವನ್ನು ಸಂದರ್ಶಿಸಿ, ಅದನ್ನು ನರಸಿಂಹನಿಗೆ ಸಮರ್ಪಿಸಿದ ಎಂಬ ಮತ್ತೊಂದು ಮಹಾಪ್ರಮೇಯವನ್ನೂ ಸಹ ಇಲ್ಲಿ ನಿರೂಪಿಸಿರುವರು. ಹಾವು ಕಚ್ಚಿದಾಗ ಬಾಯಿಂದ ಅದರ ವಿಷವನ್ನು ಹೀರುವ ಜನ ಅದನ್ನು ಸ್ವಲ್ಪವೂ ಕುಡಿಯದೆ ಇರುವ ಪ್ರಸಂಗ ಭೀಮಸೇನ ದುಃಶಾಸನನ ರಕ್ತವನ್ನು ಬಾಯಲ್ಲಿ ಹಾಕಿಕೊಂಡರೂ, ವಸ್ತುತಃ ಒಂದು ಹನಿಯನ್ನೂ ಕುಡಿಯಲಿಲ್ಲ ಎಂಬುದನ್ನು ಸ್ಫುಟಪಡಿಸುವ ಪ್ರಸಂಗವಾಗಿದೆ ಎಂಬುದನ್ನು ಗಮನಿಸಬೇಕು.

ಅಶ್ವತ್ಥಾಮ ದುರ್ಯೋಧನನಿಗೆ ತಿಳಿಸುವ ಹಿತೋಕ್ತಿಯನ್ನೆಲ್ಲ ಮಹಾಭಾರತದ ಶ್ಲೋಕದಿಂದಲೇ ಸಂಗ್ರಹಿಸುವ ಇಲ್ಲಿಯ ರೀತಿಯೂ ಗಮನಾರ್ಹ :

ಧನಂಜಯಸ್ತಿಷ್ಠತಿ ವಾರಿತೋ ಮಯಾ ಜನಾರ್ದನೋ ನೈವ ವಿರೋಧಮಿಚ್ಛತಿ ।
ವೃಕೋದರಸ್ತದ್ವಚನೇ ಸ್ಥಿತಃ ಸದಾ ಯುಧಿಷ್ಠಿರಃ ಶಾಂತಮನಾಸ್ತಥಾ ಯಮೌ॥

–(೨೭/೧೭೧)

ಕರ್ಣ ಅರ್ಜುನನ ಮೇಲೆ ಪ್ರಯೋಗಿಸುದ್ದು ನಾಗಾಸ್ತ್ರ ಮಾತ್ರವಾಗಿರದೆ, ಬ್ರಹ್ಮಾಸ್ತ್ರದಿಂದಲೂ ಕೂಡಿತ್ತು ಕರ್ಣನಿಗೆ ಅತ್ಯಂತವೇಗದಿಂದ ಬ್ರಹ್ಮಾಸ್ತ್ರವನ್ನು ಪ್ರಯೋಗಿಸುವ ಸಿದ್ಧಿ ಪರಶುರಾಮರ ಅನುಗ್ರಹದಿಂದ ಲಬ್ಧವಾಗಿತ್ತು ಎಂಬ ಅಪೂರ್ವಮಾಹಿತಿ ಕರ್ಣಾರ್ಜುನರ ದ್ವಂದ್ವಯುದ್ಧಪ್ರಸಂಗದಲ್ಲಿ ಬಂದಿದೆ :

ನಿರಾಕೃತೋ ನಾಗಮಯಂ ಶರೋತ್ತಮಂ ಬ್ರಹ್ಮಾಸ್ತ್ರಯುಕ್ತಂ ವಿಸಸರ್ಜ ವಾಸವೌ ॥ ...
ಬ್ರಹ್ಮಾಸ್ತ್ರಸ್ಯಾತಿವೇಗಿತ್ವಂ ಪ್ರಾಪ್ತಂ ಕರ್ಣೇನ ಭಾರ್ಗವಾತ್ ॥ – (೨೭/೧೭೬, ೧೮೦)

ಕರ್ಣ ಪ್ರಯೋಗಿಸಿದ ಅತಿವೇಗದ ಬ್ರಹ್ಮಾಸ್ತ್ರವನ್ನು ಮೋಘಗೊಳಿಸಿದ ಶ್ರೀಕೃಷ್ಣ ಸ್ವತಃ ಪರಬ್ರಹ್ಮ ಎಂಬುದು ಸ್ಫುಟಪಡುವುದು. ಒಟ್ಟಾಗಿ ಸೂರ್ಯಾವತಾರನಾದ ಕರ್ಣನ ಪತನವನ್ನು ನಿರೂಪಿಸುವ ಕರ್ಣಪರ್ವ ಸೌರಮತದ ನಿರಾಸರೂಪವಾಗಿದ್ದು ಬ್ರಹ್ಮಸೂತ್ರಗಳ ಪತ್ಯುರಧಿಕರಣದ ವ್ಯಾಖ್ಯೆಯಂತಿದೆ ಎಂಬ ವಿವರ ನಿರ್ಣಯದ ವಿಷಯಗಳಿಂದ ಸ್ಫುಟಪಡುವುದು. ಅದರಂತೆ ಆರಂಭದಲ್ಲಿ ಬರುವ ಶಲ್ಯಸಾರಥ್ಯಪ್ರಸಂಗ ಕರ್ಣ ತನಗೆ ಕೃಷ್ಣನ ಸಾರಥ್ಯವಿಲ್ಲ ಎಂದು ಮಾತ್ರ ಗುರುತಿಸಿದ್ದರ ಫಲ. ಆದರೆ ಅರ್ಜುನನಂತೆ ತನಗೆ ಹನುಮದ್ಧ್ವಜವಿಲ್ಲ ಎಂಬುದನ್ನು ಗಮನಿಸದೇ ಇದ್ದದ್ದರಲ್ಲಿ ಅವನ ದುರಂತ ಅಡಗಿದೆ ಎಂಬುದೂ ಸೂಚಿತ. ಕೃಷ್ಣನ ಸಾರಥ್ಯ ಗೀತೋಪದೇಶಾದಿಗಳ ಮೂಲಕ ಅರ್ಜುನನಿಗೆ ತೇಜೋವರ್ಧಕವಾದರೆ, ಶಲ್ಯನ ಸಾರಥ್ಯ ಕರ್ಣನಿಗೆ ತೇಜೋವಧೆಯಲ್ಲಿ ಪರ್ಯವಸಾನವಾದದ್ದು ಗಮನಾರ್ಹ. ಜನಾರ್ದನನ ನೇತೃತ್ವದಂತೆ ಇತರ ಯಾರ ನೇತೃತ್ವವೂ ತಾರಕವಾಗದು ಎಂಬುದಕ್ಕೆ ಇದು ಸೂಚಕ.

ಇಪ್ಪತ್ತೆಂಟನೆಯ ಅಧ್ಯಾಯ (ಶ್ಲೋಕಸಂಖ್ಯೆ : ೨೩೩)

ಹದಿನೆಂಟನೆಯ ದಿನದ ಯುದ್ಧ, ಶಲ್ಯ ಸೇನಾಪತ್ಯ, ಭೀಮನಿಂದ ಅಶ್ವತ್ಥಾಮಾದಿಗಳ ಪರಾಭವ, ಶಲ್ಯಾರ್ಜುನರ ಘೋರಸಂಗ್ರಾಮ, ಮೂರು ಬಾರಿ ಶಲ್ಯನಿಂದ ಅರ್ಜುನನ ಮೂರ್ಛೆ, ಶಲ್ಯನ ಪರಾಭವ, ಭೀಮಶಲ್ಯರ ಯುದ್ಧ, ಭೀಮನ ಪೆಟ್ಟಿಗೆ ಶಲ್ಯ ನಲುಗಿದ್ದು, ಭೀಮನಿಂದ ಸಂಪೂರ್ಣ ಪರಾಭವಗೊಂಡ ಶಲ್ಯ ಕವಚಾದಿಹೀನನಾಗಿ ಯುಧಿಷ್ಠಿರನನ್ನು ಎದುರಿಸಿದ್ದು, ಯುಧಿಷ್ಠಿರನಿಂದ ಶಲ್ಯವಧೆ, ಶಲ್ಯನಿಗೆ ಸದ್ಗತಿ, ಭೀಮನಿಂದ ಉಳಿದ ಕೌರವರ ಸಂಹಾರ, ಸಹದೇವನಿಂದ ಉಲೂಕ ಶಕುನಿಯರ ಸಂಹಾರ, ಕೃಪಾಶ್ವತ್ಥಾಮಕೃತವರ್ಮರ ಪಲಾಯನ ಹಾಗೂ ವನಪ್ರವೇಶ, ದುರ್ಯೋಧನನಿಂದ ಯುಧಿಷ್ಠಿರಾದಿಗಳ ಪರಾಭವ, ಭೀಮನಿಂದ ವಿರಥನಾದ ದುರ್ಯೋಧನ, ಗಜಾರೂಢನಾದ ದುರ್ಯೋಧನನ ಪರಾಕ್ರಮ, ಭೀಮನಿಂದ ಗಜದ ಸಂಹಾರ, ಅಶ್ವಾರೂಢನಾಗಿ ದುರ್ಯೋಧನನ ಯುದ್ಧ, ಭೀಮನಿಂದ ಅಶ್ವದ ಸಂಹಾರ, ಗದಾಪಾಣಿಯಾಗಿ

ದುರ್ಯೋಧನನ ಪಲಾಯನ, ದ್ವೈಪಾಯನಸರೋವರದಲ್ಲಿ ಅವನ ಪ್ರವೇಶ, ಉಭಯ ಸೈನ್ಯಗಳಲ್ಲಿ ಮಹಾಪರಾಕ್ರಮ ತೋರಿದ ವೀರರುಗಳ ವಿವರ – 'ಭೀಮಸೇನಸಮೋ ನಾಸ್ತಿ', ದ್ವೈಪಾಯನಸರೋವರದಲ್ಲಿ ಮಂತ್ರಜಪಕ್ಕೆ ತೊಡಗಿದ ದುರ್ಯೋಧನ, ಅಶ್ವತ್ಥಾಮಾದಿ–ಗಳೊಂದಿಗೆ ಮಂತ್ರಾಲೋಚನೆ, ಸರೋವರದ ಬಳಿಗೆ ಕೃಷ್ಣಸಮೇತರಾಗಿ ಪಾಂಡವರ ಆಗಮನ, ಯುಧಿಷ್ಠಿರನ ಮಾತುಗಳಿಂದ ಕೆರಳಿದ ದುರ್ಯೋಧನ ಯುದ್ಧಕ್ಕೆ ಸಿದ್ಧನಾದದ್ದು, ಭೀಮು–ದುರ್ಯೋಧನರ ಗದಾಯುದ್ಧ, ಬಲರಾಮನ ಆಗಮನ, ಮುಂದುವರೆದ ಭೀಮದುರ್ಯೋಧನರ ಯುದ್ಧ, ಭೀಮನಿಂದ ದುರ್ಯೋಧನನ ಊರುಭಂಗ, ಭೀಮನಿಂದ ಋಷಭಸೂಕ್ತದ ದರ್ಶನ, ದುರ್ಯೋಧನನ ಶಿರೋಮರ್ದನ, ಬಲರಾಮನ ಕೋಪ, ಕೃಷ್ಣನಿಂದ ಭೀಮನ ಪ್ರಶಂಸೆ, ಬಲರಾಮನ ನಿರ್ಗಮನ, ಯುಧಿಷ್ಠಿರನ ಧರ್ಮಜಿಜ್ಞಾಸೆ, ದುರ್ಯೋಧನನಿಂದ ಕೃಷ್ಣನ ನಿಂದೆ, ಕೃಷ್ಣನ ಉತ್ತರ, ದುರ್ಯೋಧನನ ಮೇಲೆ ಪುಷ್ಪವೃಷ್ಟಿ, ಯಾವಪುಷ್ಪವೃಷ್ಟಿಯೂ ದುರ್ಯೋಧನನಿಗೆ ಸದ್ಗತಿ ನೀಡದು ಎಂಬ ಕೃಷ್ಣನ ಘೋಷಣೆ, ಶ್ರೀಕೃಷ್ಣನಿಂದ ಧೃತರಾಷ್ಟ್ರ–ಗಾಂಧಾರಿಯರ ಸಾಂತ್ವನ, ಶ್ರೀಕೃಷ್ಣ ಪಾಂಡವರೊಂದಿಗೆ ಕೌರವರ ಶಿಬಿರಕ್ಕೆ ನಡೆದದ್ದು, ದುರ್ಯೋಧನನಿಂದ ಅಶ್ವತ್ಥಾಮನಿಗೆ ಪಟ್ಟಾಭಿಷೇಕ, ಕೃಪಕೃತವರ್ಮರೊಂದಿಗೆ ಕಾಡಿನಲ್ಲಿ ಅಶ್ವತ್ಥಾಮ, ರಾತ್ರಿಯಲ್ಲಿ ಗೂಬೆಗಳು ನಡೆಸಿದ ಕಾಗೆಗಳ ಸಂಹಾರದಿಂದ ಅಶ್ವತ್ಥಾಮ ಪಡೆದ ಸ್ಫೂರ್ತಿ, ಕಗ್ಗೊಲೆಗೆಂದು ಪಾಂಡವರ ಶಿಬಿರದತ್ತ ಅಶ್ವತ್ಥಾಮನ ಗಮನ, ಅವನನ್ನು ಹಿಂಬಾಲಿಸಿದ ಕೃಪ ಕೃತವರ್ಮರು, ದ್ವಾರದಲ್ಲಿ ಶಿವನಿಂದ ಅಶ್ವತ್ಥಾಮನ ಪರಾಭವ, ಅಶ್ವತ್ಥಾಮ ಮಾಡಿದ ಮಾನಸಯಜ್ಞ, ಹರಿಯ ಆದೇಶದಂತೆ ಶಿವ ಅಶ್ವತ್ಥಾಮನಿಗೆ ಶಸ್ತ್ರಾಸ್ತ್ರಗಳನ್ನು ಮರಳಿ ನೀಡಿದ್ದು, ಶಿವನ ನಿರ್ಗಮನ, ಪಾಂಡವಶಿಬಿರದಲ್ಲಿ ಅಶ್ವತ್ಥಾಮನಿಂದ ಧೃಷ್ಟದ್ಯುಮ್ನಾದಿ ಸಕಲರ ಸಂಹಾರ, ಶರ್ವತ್ರಾತ ಮಾತ್ರ ಸುರಕ್ಷಿತನಾದದ್ದು, ಸ್ತ್ರೀಯರ ಶಿಶುಗಳ ಸಂಹಾರಕ್ಕೆಂದು ಶಿಬಿರದ ದಹನ, ದೈವವಶಾತ್ ಬದುಕಿದ ಧೃಷ್ಟದ್ಯುಮ್ನನ ಸೂತ, ಅವನು ದ್ರೌಪದಿಗೆ ತಿಳಿಸಿದ ಅಶ್ವತ್ಥಾಮನ ಕುಕೃತ್ಯ, ಉಪಪಾಂಡವರ ತಲೆಗಳನ್ನು ನೋಡಿ ಪೈಶಾಚಿಕತೃಪ್ತಿಯಿಂದ ದುರ್ಯೋಧನನ ಮರಣ, ವ್ಯಾಸಾಶ್ರಮದತ್ತ ಅಶ್ವತ್ಥಾಮನ ಪಲಾಯನ, ಅಶ್ವತ್ಥಾಮನ ಬೆನ್ನಟ್ಟಿದ ಭೀಮಸೇನ, ಭೀಮಸೇನನಿಂದ ಅಶ್ವತ್ಥಾಮನ ಪರಾಭವ, ಅಶ್ವತ್ಥಾಮನಿಂದ ಬ್ರಹ್ಮಶಿರೋಸ್ತ್ರಪ್ರಯೋಗ, ಧರ್ಮಾರ್ಜುನರೊಂದಿಗೆ ಅಲ್ಲಿಗೆ ಶ್ರೀಕೃಷ್ಣನ ಆಗಮನ, ಅರ್ಜುನನಿಂದಲೂ ಬ್ರಹ್ಮಶಿರೋಸ್ತ್ರಪ್ರಯೋಗ, ಮಧ್ಯೆ ನಿಂತು ಬ್ರಹ್ಮಶಿರೋಸ್ತ್ರಗಳನ್ನು ತಡೆದ ವೇದವ್ಯಾಸರು, ವ್ಯಾಸವಚನದಿಂದ ಅರ್ಜುನನ ಐಷೀಕಾಸ್ತ್ರಸಂಹಾರ, ಐಷೀಕಾಸ್ತ್ರಸಂಹಾರಕ್ಕೆ ಅಶ್ವತ್ಥಾಮನ ಅಸಾಮರ್ಥ್ಯ, ಶ್ರೀಕೃಷ್ಣನಿಂದ ಅದರ ಕಾರಣದ ವಿವರಣೆ, ಅರ್ಜುನನಿಂದಲೇ ಅವನ ಅಸ್ತ್ರದ ಉಪಸಂಹಾರ, ಮಾತೃನಿಂದಾದರೂ ಐಷೀಕಾಸ್ತ್ರಸಂಹಾರ ಮಾಡಲು ವೇದವ್ಯಾಸರ ಆದೇಶ,

ಪಂಚಪಾಂಡವರನ್ನು ಮಾತ್ರ ಬಿಡಲು ಅಶ್ವತ್ಥಾಮನ ಸಮ್ಮತಿ, ಉತ್ತರೆಯ ಗರ್ಭವನ್ನು ಕೊಲ್ಲದಿರಲು ಕೃಷ್ಣನ ಆದೇಶ, ಅಶ್ವತ್ಥಾಮನಿಂದ ಕೃಷ್ಣನ ಆದೇಶದ ಉಲ್ಲಂಘನೆ, ಕೃಷ್ಣನಿಂದ ಅಶ್ವತ್ಥಾಮನಿಗೆ ಶಾಪ, ವ್ಯಾಸರ ಅನುಮೋದನೆ, ಕಾಡು ಸೇರಿದ ಅಶ್ವತ್ಥಾಮ, ಚಿರಂಜೀವಿಯಾದ ಅಶ್ವತ್ಥಾಮನ ಮುಂದಿನ ಸಾಧನೆಗಳ ವಿವರ, ಪಾಂಡವಸಂತತಿಯ ಆಚಾರ್ಯನಾಗಿ ಕೃಪ, ವ್ಯಾಸರ ಆದೇಶದಂತೆ ಅಶ್ವತ್ಥಾಮ ಭೀಮನಿಗೆ ಶಿರೋಮಣಿಯನ್ನು ನೀಡಿದ್ದು, ಭೀಮನಿಂದ ದ್ರೌಪದಿಯ ಮೂಲಕ ಅದು ಧರ್ಮರಾಜನ ಕಿರೀಟಮಣಿಯಾದದ್ದು, ಪಾಂಡವರ ಪುರಪ್ರವೇಶ, ಭೀಮನನ್ನು ಕೊಲ್ಲಲು ಧೃತರಾಷ್ಟ್ರನ ಧೂರ್ತತನ, ಭೀಮನ ವಿಗ್ರಹ ಪುಡಿಯಾದದ್ದು, ಕೃಷ್ಣನಿಂದ ಭೀಮನ ಹಿರಿಮೆಯ ವರ್ಣನೆ, ಶಾಂತನಾದ ಧೃತರಾಷ್ಟ್ರ, ಗಾಂಧಾರಿಯ ನೋಟದಿಂದ ಕುನಖನಾದ ಧರ್ಮರಾಜ, ಗಾಂಧಾರಿಯನ್ನು ನಿರುತ್ತರಳನ್ನಾಗಿಸಿದ ಭೀಮ, ಸ್ತ್ರೀಪರ್ವದ ಕಥೆ, ರಣಾಂಗಣದಲ್ಲಿ ಗಾಂಧಾರಿ ಮೊದಲಾದವರೊಂದಿಗೆ ವ್ಯಾಸರ ಪ್ರವೇಶ, ಗಾಂಧಾರಿಗೆ ವ್ಯಾಸರು ನೀಡಿದ ದಿವ್ಯದೃಷ್ಟಿ, ಗಾಂಧಾರಿ ಕೃಷ್ಣನಿಗೆ ನೀಡಿದ ಶಾಪ, ಸರ್ವಸಮರ್ಥನಾದ ಕೃಷ್ಣ ಹಾಗೆ ಶಾಪ ನೀಡಿಸಲು ಕಾರಣ, ಕೃಷ್ಣ ದ್ರೌಪದಿಗೆ ತೋರಿದ ಕೌರವರ ಪತ್ನಿಯರ ಗೋಳಾಟ, ಪಾಂಡವರಿಂದ ಮೃತರ ಅಂತ್ಯಸಂಸ್ಕಾರ, ಪಾಂಡವರಿಂದ ಮೃತರಿಗೆ ತರ್ಪಣ, ಕರ್ಣ ಕೌಂತೇಯನೆಂದು ಸಾರಿದ ಕುಂತಿ, ದುಃಖತಪ್ತನಾದ ಯುಧಿಷ್ಠಿರನಿಂದ ಸ್ತ್ರೀಕುಲಕ್ಕೆ ಶಾಪ, ಕೃಷ್ಣ ನಾರದರಿಂದ ಕರ್ಣನ ಗುಣಕಥನ — ಇವು ಈ ಅಧ್ಯಾಯದಲ್ಲಿನ ಮುಖ್ಯವಿಷಯಗಳು.

ಎಂದಿನಂತೆ ಈ ಅಧ್ಯಾಯದಲ್ಲೂ ಶ್ರೀಮದಾಚಾರ್ಯರ ನಿರ್ಣಯದ ಅಪೂರ್ವತೆ ಎದ್ದು ಕಾಣುತ್ತದೆ. ಕುರುಪಾಂಡವರ ಸೇನೆಗಳ ಮುಖಾಮುಖಿಯನ್ನು ವರ್ಣಿಸುವ ಅಧ್ಯಾತ್ಮಗರ್ಭಿತವಾದ ಅವರ ವಿವರಣೆಯ ವೈಖರಿ ಹೀಗಿದೆ :

ಅಗ್ರೇ ಭೀಮಃ ಪಾಂಡವಾನಾಂ ಮಧ್ಯೇ ರಾಜಾ ಯುಧಿಷ್ಠಿರಃ ।
ಪೃಷ್ಠೇ ಗಾಂಡೀವಧನ್ವಾऽऽಸೀದ್ವಾಸುದೇವಾಭಿರಕ್ಷಿತಃ ॥
ಚಕ್ರರಕ್ಷೌ ಯಮೌ ರಾಜ್ಞೋ ಧೃಷ್ಟದ್ಯುಮ್ನಶ್ಚ ಸಾತ್ಯಕಿಃ ।
ನೃಪಸ್ಯ ಪಾರ್ಶ್ವಯೋರಾಸ್ತಾಮಗ್ರೇऽನ್ಯೇಷಾಂ ಗುರೋಃ ಸುತಃ ॥
ಮಧ್ಯೇ ಶಲ್ಯಃ ಪೃಷ್ಠತೋऽಭೂದ್ಭ್ರಾತೃಭಿಶ್ಚ ಸುಯೋಧನಃ ।
ಚಕ್ರರಕ್ಷೌ ತು ಶಲ್ಯಸ್ಯ ಶಕುನಿಸ್ತತ್ಸುತಸ್ತಥಾ ।
ಕೃಪಶ್ಚ ಕೃತವರ್ಮಾ ಚ ಪಾರ್ಶ್ವಯೋಃ ಸಮವಸ್ಥಿತೌ ॥ – (೨೮/೩-೫)

ಸಾತ್ತ್ವಿಕತಾಮಸರ ಮುಖಾಮುಖಿಯ ಅಧ್ಯಾತ್ಮ ಇದರಲ್ಲಿ ಅಡಗಿರುವ ಪರಿ ಅನನ್ಯವಾದುದು. ಇದರ ವಿವರಗಳನ್ನು ಅನುವಾದದಲ್ಲಿಯೇ ಕಾಣಬಹುದು.

ಕೌರವಪಕ್ಷವನ್ನು ಸೇರಿ ದುರಂತವನ್ನು ಶಲ್ಯ ಕಂಡರೂ, ಸತ್ಯಧರ್ಮರತನಾದ ಶಲ್ಯನಿಗೆ ಸದ್ಗತಿಪ್ರಾಪ್ತಿಯ ಹಿನ್ನೆಲೆಯ ನಿರೂಪಣೆ, ಭೀಷ್ಮದ್ರೋಣಾದಿ ಕೌರವಪಕ್ಷದಲ್ಲಿನ ಸಾತ್ತ್ವಿಕಚೇತನರ ಸದ್ಗತಿಯನ್ನು ನಿರೂಪಿಸುವ ಸೂತ್ರದಂತಿರುವುದು ಗಮನಾರ್ಹ :

ಸತ್ಯಧರ್ಮರತಃ ಶಲ್ಯ ಇಂದ್ರಸ್ಯಾತಿಥಿತಾಮಗಾತ್ ॥ – (೨೮/೩೧)

ದುರ್ಯೋಧನ ದ್ವೈಪಾಯನಸರೋವರದಲ್ಲಿ ಮಂತ್ರಜಪವನ್ನು ಪೂರೈಸಿದ್ದರೆ ಆಗುತ್ತಿದ್ದ ಪರಿಣಾಮವನ್ನು ನಿರೂಪಿಸುವ ಶ್ಲೋಕಗಳು ಹೀಗಿವೆ :

ಮಂತ್ರಾ ದುರ್ವಾಸಸಾ ದತ್ತಾ ಮೃತಸಂಜೀವನಪ್ರದಾಃ ।
ಜಲೇ ಸ್ಥಿತ್ವಾ ಜಪನ್ ಸಪ್ತದಿನೈಃ ಸರ್ವಾನ್ ಮೃತಾನಪಿ ।
ಉದ್ಧರೇದ್ಧಾರ್ತರಾಷ್ಟ್ರೋಽಯಂ ಸ್ಮರವಧ್ಯಾಶ್ಚ ತೇ ಪುನಃ ॥ – (೨೮/೪೬)

ಯುಧಿಷ್ಠಿರ ಸಮರಕ್ಕೆ ದುರ್ಯೋಧನನನ್ನು ಆಹ್ವಾನಿಸಿದ ಮಾತುಗಳಲ್ಲಿ ಅವನ ಅಪಾರಕ್ಷಾತ್ರತೇಜಸ್ಸು ಗೋಚರಿಸಿದರೆ, ಅದಕ್ಕೆ ನೀಡಿದ ದುರ್ಯೋಧನನ ಉತ್ತರದಲ್ಲಿ ಅವನ ಹತಾಶಪರಿಸ್ಥಿತಿ ಬಿಂಬಿತವಾಗಿರುವುದು ಅಪೂರ್ವ :

ತಮಾಹ ಧರ್ಮಜೋ ರಾಜಾ ಯಸ್ತ್ವಂ ಕೃಷ್ಣೇ ಸಮಾಗತೇ ।
ಸೂಚ್ಯಗ್ರವೇಧಿತಾಂ ಪೃಥಿವೀಂ ದಾತುಂ ನೈಚ್ಛಃ ಕಥಂ ಪುನಃ ॥
ಘಾತಯಿತ್ವಾ ಸರ್ವಪೃಥ್ವೀಂ ಭೀಷ್ಮದ್ರೋಣಮುಖಾನಪಿ ।
ದಾತುಮಿಚ್ಛಸಿ ಸರ್ವಾಂ ಚ ಪೃಥ್ವೀಂ ನಾದ್ಯ ವಯಂ ಪುನಃ ॥
ಅಹತ್ವಾ ಪ್ರತಿಗೃಹ್ಣೀಮ ಏಹಿ ಯುದ್ಧೇ ಸ್ಥಿರೋ ಭವ ।
ನ ಕುರೂಣಾಂ ಕುಲೇ ಜಾತಸ್ತ್ವಂ ಹಿ ಭೀತೋ ಹ್ಯಪೋऽವಿಶಃ ॥ ....

ಉವಾಚ ಚೈಕ ಏವಾಹಮಕರೀಟೋ ವಿವರ್ಮಕಃ ।
ಭವಂತೋ ಬಹವೋ ವರ್ಮಶಿರಸ್ತ್ರಾಣಯುತಾ ಅಪಿ ॥

– (೨೮/೫೧-೫೩,೫೫)

ಭೀಮ ದುರ್ಯೋಧನನನ್ನು ಕೊಂದಿದ್ದು ಧರ್ಮಸಮ್ಮತ ಎಂಬುದನ್ನು ಕೃಷ್ಣ ನಿರೂಪಿಸುವ ಶ್ಲೋಕಗಳಲ್ಲಿ ಭೀಮನ ಮೇಲಿರುವ ಅವನ ಅಪಾರಪ್ರೀತಿ ವ್ಯಕ್ತವಾಗಿರುವ ರೀತಿ ಹೀಗಿದೆ :

ಆಹ ಧರ್ಮೇಣ ನಿಹತೋ ಭೀಮೇನಾಯಂ ಸುಯೋಧನಃ ॥
ನ ಮಂಡಲೇऽಭಸಾರೇ ವಾ ನಾಪಸಾರೇ ಚ ನಾಭಿತಃ ।
ಅಧೋ ಹನ್ಯಾದ್ವಂಚಯಂತಂ ಅಧೋ ಹತ್ವಾ ನ ದುಷ್ಯತಿ ॥
ಕೃತಾ ಪ್ರತಿಜ್ಞಾ ಚ ವೃಕೋದರೇಣ ಭೇತ್ಸ್ಯೇ ತವೋರೂ ಇತಿ ಯುಕ್ತಪೂರ್ವಕಮ್ ।
ಸಂಶ್ರಾವಯಾನೇನ ತದೇಷ ಧರ್ಮತೋ ಜಘಾನ ದುರ್ಯೋಧನಮಗ್ರ್ಯಕರ್ಮಾ ॥

– (೨೮/೮೧-೮೩)

ಶ್ರೀಕೃಷ್ಣ ಧರ್ಮರಾಜನಿಗೆ ಅಸ್ಪಷ್ಟ ಉತ್ತರ ನೀಡಿ ಗೊಂದಲದಲ್ಲಿ ಕೆಡವಿದ ಪ್ರಸಂಗದ ಹಿನ್ನೆಲೆಯನ್ನು ವಿವರಿಸುವ ಮಾತಿನಲ್ಲಿ ಅಡಗಿರುವ ಧರ್ಮಸೂಕ್ಷ್ಮವನ್ನು ಇಲ್ಲಿ ತಿಳಿಸಿರುವ ರೀತಿ ಹೀಗಿದೆ :

ಅಪಿ ಸಂಶಯಿನಂ ಚಕ್ರೇ ಧರ್ಮರಾಜಂ ಜಗತ್ಪತಿಃ ॥
ಭೂಭಾರಕ್ಷತಿಜೋ ಧರ್ಮೋ ಮಚ್ಚುಶ್ರೂಷಾತ್ಮಕಸ್ತು ಯಃ ।
ಭೀಮಸ್ಯೈವ ಭವೇತ್ ಸಮ್ಯಗಿತಿ ಬುದ್ಧ್ಯಾ ಪರಃ ಪ್ರಭುಃ ॥
ಸ್ವೇನೈವ ಬಲಭದ್ರಾಯ ಜನಾಯ ಚ ಪುನಃ ಪುನಃ ।
ಶ್ರುತ್ವಾऽಪ್ಯುಕ್ತಂ ನ ತತ್ಯಾಜ ಸಂಶಯಂ ಧರ್ಮಜೋ ಯತಃ ॥
ತತೋऽಪ್ಯಸಂಶಯಂ ಕೃಷ್ಣೋ ನ ಚಕಾರ ಯುಧಿಷ್ಠಿರಮ್ ।
ಮುಖ್ಯಂ ಧರ್ಮಂ ಹಿ ಭಗವಾನ್ ಬಲಾಯಾಹ ಜನಾಯ ಚ ॥
ಧರ್ಮೇಣೈವ ಹತೋ ರಾಜಾ ಧಾರ್ತರಾಷ್ಟ್ರಃ ಸುಯೋಧನಃ ।
ಇತಿ ಯದ್ವಕ್ಷ್ಯತಿ ಪುನರ್ನಿಶ್ಚಯಾರ್ಥೇऽರ್ಜುನಾಯ ಚ ॥ – (೨೮/೯೦-೯೪)

ದುರ್ಯೋಧನನ ಆಕ್ಷೇಪಕ್ಕೆ ಉತ್ತರವಾಗಿ ಕೃಷ್ಣ 'ಪಾಂಡವರು ಮಹಾಧರ್ಮಿಷ್ಠರೆಂದೂ, ದುರ್ಯೋಧನ ಮಹಾಪಾಪಿಯೆಂದೂ' ತಿಳಿಸಿದ್ದು ಹೀಗಿದೆ :

ನ ಪಾಂಡವೇಷ್ವಸ್ತಿ ತತೋ ಹಿ ಕಿಂಚಿತ್ಪಾಪಂ ಪ್ರಯತ್ನಾಚ್ಚ ನಿಸರ್ಗತೋऽಪಿ ।
ಗುಣಾಧಿಕಾಸ್ತೇ ಮದುಪಾಶ್ರಯಾಶ್ಚ ಕೋ ನಾಮ ತೇಷ್ವಣ್ವಪಿ ಪಾಪಮಾಹ ॥
ನಿಸರ್ಗತಃ ಪಾಪತಮಸ್ತ್ವಮನ್ಯಾನ್ ಧರ್ಮಸ್ಥಿತಾನ್ ಪಾಪಪಥೇ ನಿಧಾಯ ।
ಸ್ವಯಂ ಚ ಪಾಪೇ ನಿರತಃ ಸದೈವ ಪಾಪಾತ್ ಸುಪಾಪಾಂ ಗತಿಮೇವ ಯಾಸಿ ॥
– (೨೮/೯೮-೯೯)

ದುರ್ಯೋಧನ ತನ್ನಿಂದಾದ ಅನರ್ಥದ ಬಗ್ಗೆ ಪರಿತಪಿಸದೆ, ತನ್ನ ಜೀವನ ಸಾರ್ಥಕ ಎಂದು ಕೊಚ್ಚಿಕೊಳ್ಳುವ ಮಾತಿನಲ್ಲಿ ಅವನ ಅಸುರಸ್ವಭಾವ ವ್ಯಕ್ತವಾಗುವ ರೀತಿಯನ್ನು ಸಂಗ್ರಹಿಸುವ ಶ್ಲೋಕಗಳು ಹೀಗಿವೆ :

ಸ್ವಂತೋತ್ತಮೋ ನಾಮ ಕ ಏವ ಮತ್ತಃ ಕೋ ನಾಮ ದೋಷೋऽಸ್ತಿ ಮಯಾ ಕೃತೋऽತ್ರ ॥
ಇಷ್ಟಂ ಚ ಯಜ್ಞೈಶ್ಚರಿತಂ ಚ ಪೂರ್ತೈಃ ಪದಂ ರಿಪೂಣಾಂ ನಿಹತಂ ಹಿ ಮೂರ್ಧ್ನಿ ।
ಮೃತ್ಯುಶ್ಚ ಸಂಗ್ರಾಮಶಿರಸ್ಯವಾಪ್ತೋ ರಣೋನ್ಮುಖೇನೈವ ಮಯಾ ಕಿಮನ್ಯತ್ ॥
– (೨೮/೧೦೦, ೧೦೧)

ಇಷ್ಟಾ ಭೋಗಾ ಮಯಾ ಭುಕ್ತಾಃ ಪ್ರಾಪ್ತಾ ಚ ಪರಮಾ ಗತಿಃ ।
ದುಃಖಿನೋ ದುಃಖಮಾಪ್ನ್ಯಂತಿ ಪಾರ್ಥಾಸ್ತೇ ಕೂಟಯೋಧಿನಃ ॥
ಚಂದ್ರಸೂರ್ಯನಿಭೈಃ ಶೂರೈರ್ಧಾರ್ಮಿಕೈಃ ಸದ್ಭಿರುಜ್ಝಿತಾ ।
ಕೇವಲಾ ರತ್ನಹೀನೇಯಂ ಪಾಂಡವೈರ್ಭುಜ್ಯತಾಂ ಮಹೀ ॥ – (೨೮/೧೦೨, ೧೦೩)

ಧೃಷ್ಟದ್ಯುಮ್ನನನ್ನು ಕೊಲ್ಲುತ್ತಾ ಅಶ್ವತ್ಥಾಮ ಹೇಳುವ ಧರ್ಮನಿರ್ಣಾಯಕವಾದ ಮಾತು ಮನನೀಯವಾದುದು :

ನ ಸಂತಿ ಹಿ ಬ್ರಹ್ಮಹಣಾಂ ಸುಲೋಕಾ ವಿಶೇಷತಶ್ಚೈವ ಗುರುದ್ರುಹಾಂ ಪುನಃ ।
ನ ಧರ್ಮಯುದ್ಧೇನ ವಧಾರ್ಹಕಾಶ್ಚ ಯೇ ತ್ವದ್ವಿಧಾಃ ಪಾಪತಮಾಃ ಸುಪಾಪ॥ –(೨೮/೧೩೪)

ಅರ್ಜುನ ಬ್ರಹ್ಮಶಿರೋಸ್ತ್ರವನ್ನು ಪ್ರಯೋಗಿಸುವಾಗ ಅಶ್ವತ್ಥಾಮರಿಗೆ, ಸಕಲಪ್ರಾಣಿಗಳಿಗೆ ಹಾಗೂ ತನಗೆ ಕ್ಷೇಮ ಚಿಂತಿಸಿದ ಹಿನ್ನೆಲೆ ರೀತಿಯನ್ನು ಇಲ್ಲಿ ತಿಳಿಸಿರುವರು :

ಅನಸ್ತ್ರಜ್ಞೇಷು ಮುಕ್ತಂ ತದ್ದನ್ಯಾದಸ್ತ್ರಮುಚಂ ಯತಃ ।
ಗುರುಭಕ್ತ್ಯಾ ತತೋ ದ್ರೌಣೇಃ ಸ್ವಸ್ತ್ಯಸ್ತ್ವಿತ್ಯಾಹ ವಾಸವಿಃ ॥
ತದಸ್ತ್ರಯೋಸ್ತು ಸಂಯೋಗೇ ಭೂತಾನಾಂ ಸಂಹೃತಿರ್ಭವೇತ್ ।
ಭೂತಾನಾಂ ಸ್ವಸ್ತಿರಪ್ಯತ್ರ ಕಾಂಕ್ಷಿತಾ ಕರುಣಾತ್ಮನಾ ॥ –(೨೮/೧೬೦, ೧೬೧)

ಅರ್ಜುನ ಅಶ್ವತ್ಥಾಮರಲ್ಲಿನ ವ್ಯತ್ಯಾಸವನ್ನು ಕೃಷ್ಣ ತಿಳಿಸಿರುವ ಪರಿ ಹೀಗಿದೆ :

ಕ್ಷತ್ರತೇಜಾ ಬ್ರಹ್ಮಚಾರೀ ಕೌಮಾರಾದಪಿ ಪಾಂಡವಃ ।
ನಿವರ್ತನೇ ತತಃ ಶಕ್ತೋ ನಾಯಂ ದ್ರೋಣಾತ್ಮಜೋಽಪಿ ಸನ್ ॥
ಅಬ್ರಹ್ಮಚರ್ಯಾದಿತ್ಯುಕ್ತೇ ವ್ಯಾಸೋ ದ್ರೌಣಿಮಭಾಷತ ।
ನಿವರ್ತನಾಸಮರ್ಥಸ್ತ್ವಂ ದೇಹಿ ನೈಸರ್ಗಿಕಂ ಮಣಿಮ್ ॥ – (೨೮/೧೬೭, ೧೬೮)

ಭಾಗವತದಲ್ಲಿ ಬಂದಿರುವ ಅಶ್ವತ್ಥಾಮ ಸ್ವಪ್ನದಲ್ಲಿ ಕಂಡ ದೃಶ್ಯದ ವಿಶ್ಲೇಷಣೆಯ ಸಂಗ್ರಹ ಹೀಗಿದೆ:

ಸ್ವಪ್ನೇ ಹಿ ದ್ರೌಪದೇಯಾನಾಂ ವಧೋ ದೃಷ್ಟೋ ತೃನಾ ನಿಶಿ ।
ಅರ್ಜುನೇನ ಪ್ರತಿಜ್ಞಾತಂ ದ್ರೌಪದ್ಯೈ ಸ್ವವಧಂ ಪ್ರತಿ ॥
ನಿಬಧ್ಯಾನಯನಂ ಚೈವ ತೇನೈವ ಶಿಬಿರಂ ಪ್ರತಿ ।
ಮುಂಚೇತಿ ದ್ರೌಪದೀವಾಕ್ಯಂ ನೇತಿ ಭೀಮವಚಸ್ತಥಾ ॥
ಕೃಷ್ಣವಾಕ್ಯಾನ್ಮಣಿಂ ಹೃತ್ವಾ ದೇಶಾನ್ನಿರ್ಯಾತನಂ ತಥಾ ।
ಇತ್ಯಾದಿಸ್ವಪ್ನದೃಷ್ಟಂ ಯತ್ ಪ್ರಾಯಃ ಸತ್ಯಮಭೂದಿತಿ ॥ –(೨೮/೧೮೫-೧೮೭)

ಧೃತರಾಷ್ಟ್ರ ನಿಜವಾದ ಭೀಮನನ್ನು ಆಲಿಂಗಿಸಿದ್ದರೆ ವಜ್ರಕ್ಕಿಂತ ದೃಢನಾದ ಭೀಮನಿಗೆ ಯಾವ ಅಪಾಯವೂ ಆಗುತ್ತಿರಲಿಲ್ಲ. ಅದರಿಂದಾಗಿ ಧೃತರಾಷ್ಟ್ರನ ಮನಸ್ಸಿನಲ್ಲಿದ್ದ ದುರ್ಬುದ್ಧಿ ಪ್ರಕಟವಾಗುತ್ತಿರಲಿಲ್ಲ. ಅದು ಪ್ರಕಟವಾಗಿ ಅವನು ತನ್ನ ಚಿಂತನೆಯನ್ನು ಬದಲಾಯಿಸಿಕೊಳ್ಳಲಿ ಎಂಬ ಉದ್ದೇಶದಿಂದಲೇ ಕೃಷ್ಣ ನಿಜವಾದ ಭೀಮನ ಬದಲು ಉಕ್ಕಿನ ಭೀಮಾಕೃತಿಯನ್ನು ಅವನ ಮುಂದಿರಿಸಿ ವಂಚಿಸಿದ :

.ವಜ್ರಾಚ್ಚ ದೃಢದೇಹತ್ವಾದವಿಕಾರೇ ವೃಕೋದರೇ ।
ನ ದೋಷೋ ವಿವೃತೋಽಸ್ಯ ಸ್ಯಾದಿತಿ ಕೃಷ್ಣೇನ ವಂಚಿತಃ ॥ – (೨೮/೨೦೧)

ಗಾಂಧಾರಿಗೆ ಭೀಮಸೇನ ತಾನು ದುಃಶಾಸನನ ರಕ್ತವನ್ನು ಪಾನ ಮಾಡಲಿಲ್ಲ ಹಾಗೂ ದುರ್ಯೋಧನನನ್ನು ನಾಭಿಯ ಕೆಳಗೆ ಹೊಡೆದು ಸಂಹರಿಸಿದ್ದು ಸರ್ವಥಾ ಅಧರ್ಮವಲ್ಲ ಎಂದು ಸಮರ್ಥಿಸಿದ ಮಹಾಭಾರತದ ಶ್ಲೋಕಗಳ ಭಾವವನ್ನು ವಿವರಿಸುವ ಇಲ್ಲಿಯ ಶ್ಲೋಕಗಳು ಅತ್ಯಂತ ಗಮನಾರ್ಹ :

ಯಥಾಪ್ರತಿಜ್ಞಂ ಭ್ರಾತೃವ್ಯಾನ್ ರಣೇ ಮಮ ನಿಜಘ್ನುಷಃ ।
ಕ್ವಾಧರ್ಮಃ ಕ್ಷತ್ರಜಾತೇಸ್ತು ತದ್ಧಾನೌ ಜೀವನಂ ನ ಹಿ ॥
ಪಾಪಾ ನ ಶುದ್ಧಧರ್ಮೇಣ ಹಂತವ್ಯಾ ಇತಿ ಚ ಶ್ರುತಿಃ ।
ಅನ್ಯವತ್ ಪಾಪಹನನಂ ಪಾಪಾಯೇತ್ಯಾಹ ಹಿ ಶ್ರುತಿಃ ।
ಅತೋಽಸುರಾನ್ ನೈಕೃತಿಕಾನ್ ನಿಕೃತ್ಯಾ ಘ್ನಂತಿ ದೇವತಾಃ ॥
'ನಿಕೃತ್ಯಾ ನಿಕೃತಿಂ ಹನ್ಯಾನ್ನಿಕೃತ್ಯಾ ನೈವ ಧಾರ್ಮಿಕಾನ್' ।
ಇತಿ ಶ್ರುತಿರ್ಹಿ ಪರಮಾ ಪಠ್ಯತೇ ಪೈಂಗಿಭಿಃ ಸದಾ ॥
ಇತ್ಯುಕ್ತಾ ತಂ ಪುನಃ ಪ್ರಾಹ ಕಥಂ ತೇ ನರಶೋಣಿತಮ್ ।
ಪೀತಂ ನರೇಣೈವ ಸತಾ ನ ಪೀತಮಿತಿ ಸೋಽಬ್ರವೀತ್ ॥
ದಂತಾಂತರಂ ನ ಮೇ ಪ್ರಾಪ ಶೋಣಿತಂ ತತ್ ಸುತಸ್ಯ ತೇ ।
ಪ್ರತಿಜ್ಞಾಪಾಲನಾಯಾಪಿ ಪ್ರತಿಕರ್ತುಂ ಚ ತತ್ಕೃತಮ್ ॥
ಭೀಷಣಾಯ ಚ ಶತ್ರೂಣಾಂ ಪೀತವಚ್ಚ ಪ್ರದರ್ಶಿತಮ್ ।
ವೇದದೃಷ್ಟಶ್ಚ ಧರ್ಮೋಽಯಮಿತಿ ಪಾಪಜನಂ ಪ್ರತಿ ॥ – (೨೮/೨೦೭-೨೧೨)

ದುರ್ಯೋಧನ ದುಃಶಾನರಂತೆ ಇತರ ಕೌರವರು ಮಾಡಿದ್ದ ಪಾಪಗಳ ಸಂಗ್ರಹ ಹೀಗಿದೆ :

ಅಪರಾಧಃ ಸ ಏಕೋಽಪಿ ಕಿಂ ನಾಸ್ತೀತ್ಯವದತ್ ಸ ತಾಮ್ ।
ಸರ್ವೈಃ ಸಮೇತೈಃ ಕೃಷ್ಣಸ್ಯ ಬಂಧನಾಯ ವಿನಿಶ್ಚಿತಮ್ ॥
ಅನ್ಯಾನಿ ಚ ಸುಪಾಪಾನಿ ಕೃತಾನ್ಯತ್ರ ಪುರಾಽಪಿ ಚ ।
ವಾಸುದೇವಂ ಸಭಾಸಂಸ್ಥಂ ಬ್ರುವಾಣಂ ಧರ್ಮಸಂಹಿತಮ್ ॥
ಪುನಃ ಪುನರವಜ್ಞಾಯ ಯಾಂತಂ ದುರ್ಯೋಧನಂ ಬಹಿಃ ।
ಸರ್ವೇಽನ್ವಗಚ್ಛನ್ ..... ॥ – (೨೮/೨೧೫-೨೧೭)

ಇಪ್ಪತ್ತೊಂಭನೆಯ ಅಧ್ಯಾಯ (ಶ್ಲೋಕಸಂಖ್ಯೆ : ೬೧)

ವ್ಯಾಸಕೃಷ್ಣರಿಂದ ಮಹಾರಾಜ ಯುವರಾಜರಾಗಿ ಯುಧಿಷ್ಠಿರ ಭೀಮರಿಗೆ ಪಟ್ಟಾಭಿಷೇಕ, ತ್ರಿದಂಡಿಯತಿಯ ರೂಪದಲ್ಲಿ ಬಂದ ದುರ್ಯೋಧನನ ಸ್ನೇಹಿತನಾದ ಚಾರ್ವಾಕನೆಂಬ ಅಸುರ–ನಿಂದ ಯುಧಿಷ್ಠಿರನ ನಿಂದೆ, ವಿಪ್ರಶಾಪದಿಂದ ಅವನು ಭಸ್ಮವಾದದ್ದು, ಶ್ರೀಕೃಷ್ಣ ತಿಳಿಸಿದ ಆ

ಅಸುರನ ಹಿನ್ನೆಲೆ, ಧರ್ಮರಾಜನ ರಾಜ್ಯಭಾರ, ಬಂಧುವಧೆಯ ವ್ಯಥೆಯಿಂದ ಯುಧಿಷ್ಠಿರನ ರಾಜ್ಯತ್ಯಾಗದ ಯೋಚನೆ, ಯಾರ ಮಾತಿಗೂ ತೃಪ್ತಿ ಹೊಂದದ ಅವನನ್ನು ಶ್ರೀಕೃಷ್ಣ ಭೀಷ್ಮರ ಬಳಿಗೆ ಕರೆದೊಯ್ದದ್ದು, ಭೀಷ್ಮರಿಗೆ ಬಲಜ್ಞಾನಗಳನ್ನು ನೀಡಿ ಅವರಲ್ಲಿ ನಿಂತು ಶ್ರೀಕೃಷ್ಣನಿಂದ ಸಕಲಧರ್ಮಗಳ ಉಪದೇಶ, ಭಾಗವತಧರ್ಮಪಾಲನೆ ಹಾಗೂ ಅದಕ್ಕೆ ಬರುವ ವಿಘ್ನಗಳ ಪರಿಹಾರ ರಾಜನ ಪ್ರಥಮಕರ್ತವ್ಯ, ಭಾಗವತಧರ್ಮಗಳ ವಿವರ, ತತ್ತ್ವೋಪದೇಶ ಬ್ರಾಹ್ಮಣನ ಪ್ರಧಾನಕರ್ತವ್ಯ, ಆಪತ್ಕಾಲದಲ್ಲಿ ಅನ್ಯವರ್ಣಗಳ ಧರ್ಮದ ವಿಧಿ, ವೈಶ್ಯಾದಿಗಳ ಧರ್ಮ, ಹರಿಭಕ್ತಿ ಪ್ರಧಾನಸಲ್ಲಕ್ಷಣ, ಹರಿಭಕ್ತರಾದ ಶೂದ್ರಾದಿಗಳೂ ಪೂಜ್ಯರು, ಹರಿಭಕ್ತನಲ್ಲದ ವಿಪ್ರ ಪೂಜ್ಯನೆನ್ನಿಸಲಾರ, ಕ್ಷತ್ರಿಯಾದಿಗಳ ಉಪದೇಶಾಧಿಕಾರಗಳ ಚಿಂತನೆ, ಸ್ತ್ರೀಯರಿಗೆ ವಿಹಿತವಾದ ಜ್ಞಾನದ ಸ್ವರೂಪ, ಸ್ತ್ರೀಪುರುಷರ ಪ್ರಧಾನಧರ್ಮಗಳು, ಉತ್ತಮಸ್ತ್ರೀಯರ ಸ್ಮರಣೆಯೂ ಸರ್ವಾನರ್ಥಹೇತು, ದ್ರೌಪದಿ ಮೊದಲಾದ ಉತ್ತಮಸ್ತ್ರೀಯರಿಗೆ ವೇದದಲ್ಲೂ ಅಧಿಕಾರ, ಸಚ್ಛೂದ್ರರಿಗೆ ಪೌರುಷೇಯಗ್ರಂಥಗಳ ಪರಿಜ್ಞಾನದ ವಿಧಿ, ವಿಷ್ಣುನಾಮ ಸರ್ವರಿಗೂ ಮುಖ್ಯಕರ್ತವ್ಯ, ಮಿಥ್ಯಾಜ್ಞಾನ ಅನರ್ಥಹೇತು, ವೈಷ್ಣವರಲ್ಲೂ ತಾರತಮ್ಯ, ಸಂಶಯ ನರಕಹೇತು, ವಿಷ್ಣು ವೈಷ್ಣವರ ಮಾತಿನಿಂದ ಪಾಪಪರಿಹಾರ, ಧರ್ಮರಾಜ ಮಾಡಿದ ಪುರುಷಾರ್ಥಜಿಜ್ಞಾಸೆ, ಧರ್ಮವೇ ಶ್ರೇಷ್ಠವೆಂದ ವಿದುರ, ಅರ್ಥವೇ ಮಿಗಿಲೆಂದ ಅರ್ಜುನ, ಅರ್ಥದಲ್ಲೂ ದೈವಮಾನುಷಾದಿಪ್ರಭೇದ, ಅರ್ಥ ಮೋಕ್ಷಸಾಧನವಾಗುವ ರೀತಿ, ಕಾಮವನ್ನೇ ಶ್ರೇಷ್ಠ ಪುರುಷಾರ್ಥವೆಂದ ಭೀಮ, ಕಾಮದ ಹಿರಿಮೆಯ ಬಗ್ಗೆ ಭೀಮಸೇನ ನೀಡಿದ ಬಗೆಬಗೆಯ ಕಾರಣಗಳು, ಸತ್ಕಾಮನೆಯಿಲ್ಲದ ಸರ್ವವೂ ನಿರರ್ಥಕ, ಪುರುಷಾರ್ಥಗಳ ಪರಿಕಲ್ಪನೆಯಲ್ಲೇ ಕಾಮದ ಹಿನ್ನೆಲೆ, ಕಾಮದಲ್ಲಿ ತಾರತಮ್ಯ, ಯುಧಿಷ್ಠಿರನಿಂದ ಭೀಮನ ಪ್ರಶಂಸೆ, ಮೋಕ್ಷವೇ ಶ್ರೇಷ್ಠಪುರುಷಾರ್ಥವೆಂಬ ಅವನ ವಿಚಾರ — ಇವು ಈ ಅಧ್ಯಾಯದ ಪ್ರಧಾನವಿಷಯಗಳು.

ನಾಸ್ತಿಕ್ಯದ ಸಂಕೇತವಾಗಿದ್ದ ಚಾರ್ವಾಕನ ಪೂರ್ವೇತಿಹಾಸ ಈ ಅಧ್ಯಾಯದ ಆರಂಭದ ಭಾಗದ ಮುಖ್ಯಘಟ್ಟ :

ಭಸ್ಮೀಕೃತೇಽಸ್ಮಿನ್ ಯತಿವೇಷಧಾರಿಣಿ ಯುಧಿಷ್ಠಿರಂ ದುಃಖಿತಂ ವೃಷ್ಣಿಸಿಂಹಃ ।
ಪ್ರೋವಾಚ ನಾಯಂ ಯತಿರುಗ್ರಕರ್ಮಾ ಸುಯೋಧನಸ್ಯೈವ ಸಖಾ ಸುಪಾಪಃ ॥
ರಕ್ಷೋಽಧಮೋಽಯಂ ನಿಹತೋಽದ್ಯ ವಿಪ್ರೈಸ್ತನ್ಮಾ ಶುಚಃ ಕೃತಕಾರ್ಯೋಽಸಿ ರಾಜನ್ ॥
– (೨೯/೪,೫)

ಮೇಲ್ನೋಟಕ್ಕೆ ಭೀಷ್ಮೋಪದೇಶದಂತೆ ಕಾಣುವ ಶಾಂತಿಪರ್ವ ಅನುಶಾಸನಪರ್ವಗಳ ಬಹುಭಾಗ ವಾಸ್ತವವಾಗಿ ಕೃಷ್ಣೋಪದೇಶವೇ ಆಗಿದೆ ಎಂಬ ಇಲ್ಲಿಯ ವಿಶ್ಲೇಷಣೆ ಅಪೂರ್ವವಾದುದು :

ತತ್ರೋವಾಚಾಖಿಲಾನ್ ಧರ್ಮಾನ್ ಕೃಷ್ಣೋ ಭೀಷ್ಮಶರೀರಗಃ ॥
ಭೀಷ್ಮೋ ಹ್ಯಾಹ ಹರಿಂ ಪಾರ್ಥಾ ಬೋಧನೀಯಾಸ್ತ್ವಯೈವ ಹಿ ।
ಕಾ ಶಕ್ತಿರ್ಮಮ ದೇವೇಶ ಪಾರ್ಥಾನ್ ಬೋಧಯಿತುಂ ಪ್ರಭೋ ॥
ಇತ್ಯುಕ್ತೋ ಭಗವಾನಾಹ ತ್ವಚ್ಛೈತ್ಯೈರ್ಯ ತ್ವಯಿ ಸಂಸ್ಥಿತಃ ।
ಪ್ರವಕ್ಷ್ಯಾಮ್ಯಖಿಲಾನ್ ಧರ್ಮಾನ್ ಸೂಕ್ಷ್ಮಂ ತತ್ತ್ವಮಪೀತಿ ಹ॥ –(೨೯/೧೪-೧೬)

ಭಾಗವತಧರ್ಮಗಳ ಸಂಗ್ರಹನಿರೂಪಣೆ ಇಲ್ಲಿಯ ಪ್ರಧಾನಘಟ್ಟ :

ಮನೋವಾಕ್ಕರ್ಮಭಿರ್ವಿಷ್ಣೋರಚ್ಛಿದ್ರತ್ವೇನ ಚಾರ್ಚನಮ್ ।
ಪೂರ್ಣಾಶೇಷಗುಣೋ ವಿಷ್ಣುಃ ಸ್ವತಂತ್ರಶ್ಚೈಕ ಏವ ತು ॥
ತದ್ವಶಂ ಸರ್ವಮನ್ಯಚ್ಚ ಸರ್ವದೇತಿ ವಿನಿಶ್ಚಯಃ ।
ದೇವತಾಕ್ರಮವಿಜ್ಞಾನಮಪೂಜಾಽನ್ಯಸ್ಯ ವೈ ಹರೇಃ ॥
ಪೂಜಾ ಭಾಗವತತ್ವೇನ ದೇವಾದೀನಾಂ ಚ ಸರ್ವಶಃ ।
ವೃಥಾ ಕರ್ಮಾಕೃತಿಃ ಕ್ವಾಪಿ ನಿರಾಶೀಸ್ತ್ವಂ ಸದೈವ ಚ ॥
ವಿಷ್ಣೋರ್ಭಾಗವತಾನಾಂ ಚ ಪ್ರತೀಪಸ್ಯಾಕೃತಿಃ ಸದಾ ।
ಪರಸ್ಪರವಿರೋಧೇ ತು ವಿಶಿಷ್ಟಸ್ಯಾನುಕೂಲತಾ ॥
ಪ್ರಿಯಂ ವಿಷ್ಣೋಸ್ತದೀಯಾನಾಮಪಿ ಸರ್ವಂ ಸಮಾಚರೇತ್ ।
ಧರ್ಮಮಪ್ಯಪ್ರಿಯಂ ತೇಷಾಂ ನೈವ ಕಿಂಚಿತ್ ಸಮಾಚರೇತ್ ॥
ಸಾಮ್ಯೇ ವಿರೋಧೇ ಚ ಬಹೂನನುವರ್ತೇತ ವೈಷ್ಣವಾನ್ ।
ಏತೇ ಸಾಧಾರಣಾ ಧರ್ಮಾ ಜ್ಞೇಯಾ ಭಾಗವತಾ ಇತಿ ॥ – (೨೯/೧೮-೨೩)

ವಿಪ್ರಾದಿಗಳಲ್ಲಿನ ದಂಡವಿಷಯದಲ್ಲಿನ ಅರ್ಹತೆಯ ಬಗೆಗಿನ ಮಾತುಗಳು ಗಮನಾರ್ಹ–ವಾದವು :

ಶಾರೀರದಂಡಸಂತ್ಯಾಗಃ ಪುತ್ರಭಾರ್ಯಾದಿಕಾನೃತೇ ।
ತತ್ರಾಪಿ ನಾಂಗಹಾನಿಃ ಸ್ಯಾದ್ವೇದನಾ ವಾ ಚಿರಂ ನ ತು ॥
ನ ಚಾರ್ಥದಂಡಃ ಕರ್ತವ್ಯೋ ವಿಪ್ರವೈಶ್ಯಾದಿಭಿಃ ಕ್ವಚಿತ್ ।
ಶಾರೀರದಂಡವಿಷಯೇ ವೈಶ್ಯಾದೀನಾಂ ಚ ವಿಪ್ರವತ್ ॥ – (೨೯/೨೪-೨೫)

ಹರಿಭಕ್ತಿಯೇ ಆದರಕ್ಕೆ ಕಾರಣವಾಗುವ ಪರಮಧರ್ಮ ಎಂಬುದು ಇಲ್ಲಿ ನಿರೂಪಿತ–ವಾಗಿರುವ ವಿಶಿಷ್ಟಧರ್ಮವಿವೇಕ :

ಹರಿಭಕ್ತಾವನುಚ್ಚಸ್ತು ವರ್ಣೋಚ್ಚೋ ನಾತಿಪೂಜ್ಯತೇ ॥
ವಿನಾ ಪ್ರಣಾಮಂ ಪೂಜ್ಯಸ್ತು ವರ್ಣಹೀನೋ ಹರಿಪ್ರಿಯಃ ।
ಆದರಸ್ತತ್ರ ಕರ್ತವ್ಯೋ ಯತ್ರ ಭಕ್ತಿರ್ಹರೇರ್ವರಾ ॥ – (೨೯/೩೦, ೩೧)

ಬ್ರಾಹ್ಮಣನ ಅನಂತರ ಕ್ಷತ್ರಿಯಾದಿಗಳ ಉಪದೇಶದ ಅರ್ಹತೆಯ ಬಗ್ಗೆ ಬಂದಿರುವ ತಾರತಮ್ಯವಿವೇಚನೆ ಇಲ್ಲಿಯ ಮತ್ತೊಂದು ವಿಶೇಷಾಂಶ :

ಜ್ಞಾಪನಂ ಕ್ಷತ್ರಿಯಾಣಾಂ ಚ ಧರ್ಮೋ ವಿಪ್ರಾಭ್ಯನುಜ್ಞಯಾ ।
ತದಭಾವೇ ತು ವೈಶ್ಯಾನಾಂ ಶೂದ್ರಸ್ಯ ಪರಮಾಪದಿ ॥
ವರ್ಣೇಷ್ವಜ್ಞೇಷ್ವವರ್ಣಸ್ತು ನ ಜ್ಞಾನೀ ಸ್ಯಾತ್ ಕಥಂಚನ ।
ಇತಿ ಶ್ರುತೇರವರ್ಣಸ್ಯ ಜ್ಞಾಪನಪ್ರಾಪ್ತಿರೇವ ನ ॥ – (೨೯/೩೨-೩೩)

ಸ್ತ್ರೀಪುರುಷರಲ್ಲಿನ ಪರಸ್ಪರ ನಿಷ್ಠೆಯ ಬಗ್ಗೆ ಇಲ್ಲಿ ಬಂದಿರುವ ಮಾತುಗಳು ಪುರುಷರ ಬಗ್ಗೆ ಶಾಸ್ತ್ರಗಳದು ಸೌಮ್ಯಧೋರಣೆ ಎಂಬ ಆಕ್ಷೇಪಕ್ಕೆ ಉತ್ತರವಾಗಿವೆ :

ಸ್ವೀಯಪುನ್ನಿಯತಿಃ ಸ್ತ್ರೀಣಾಂ ಸ್ವದಾರನಿಯತಿರ್ನೃಣಾಮ್ ।
ಧರ್ಮೋ ಗುರೂತ್ತಮಾನಾಂ ತು ಕೃತ್ಯೈರಾಂಧ್ಯಂ ತಮೋ ವ್ರಜೇತ್ ॥
ಗುಣಸರ್ವಸ್ವಹಾನಿಃ ಸ್ಯಾದುತ್ತರೋತ್ತರತೋಽತ್ರ ಚ ।
ಅಧೋಽಧೋಽಧಿಕದೋಷಃ ಸ್ಯಾತ್ ಸ್ತ್ರೀಣಾಮನ್ಯತ್ರ ಮಧ್ಯತಃ ॥
– (೨೯/೩೪, ೩೫)

ಉತ್ತಮಸ್ತ್ರೀಯರಿಗೆ ವೇದಾಧಿಕಾರವೂ ಉಂಟು ಎಂಬ ಇಲ್ಲಿಯ ವಿವರ ಶಾಸ್ತ್ರಾಧಿಕಾರದ ಬಗ್ಗೆ ಒಂದು ವಿಶೇಷಮಾಹಿತಿ :

ವೇದಾ ಅಪ್ಯುತ್ತಮಸ್ತ್ರೀಭಿಃ ಕೃಷ್ಣಾದ್ಯಾಭಿರಿವಾಖಿಲಾಃ ।
ದೇವ್ಯೋ ಮುನಿಸ್ತ್ರಿಯಶ್ಚೈವ ನರಾದಿಕುಲಜಾ ಅಪಿ ।
ಉತ್ತಮಾ ಇತಿ ವಿಜ್ಞೇಯಾಃ ಸಚ್ಛೂದ್ರೈರಪ್ಯವೈದಿಕಮ್ ॥ – (೨೯/೩೬, ೩೭)

ಸರ್ವವರ್ಣದವರಿಗೂ ಹರಿನಾಮ ಕಡ್ಡಾಯ ಎಂಬುದು ಸಾಧನೆಯ ಬಗ್ಗೆ ಬಂದಿರುವ ಮತ್ತೊಂದು ವಿಶಿಷ್ಟ ಉಲ್ಲೇಖ :

ಜ್ಞೇಯಮನೈರ್ಹರೇರ್ನಾಮ ನಿಜಕರ್ತವ್ಯಮೇವ ಚ ॥ – (೨೯/೩೭)

ಮುಂದಿನ ವಿವರಗಳೆಲ್ಲ ತಮಃಸಾಧಕವಾದ ಅಧರ್ಮಗಳ ಸಂಗ್ರಹಾನುವಾದ :

ಸರ್ವಥಾಽಂಧಂ ತಮೋ ಯಾತಿ ವರಂ ಸದೃಶಮೇವ ವಾ ।
ಯೋ ವಿಷ್ಣೋರ್ಮನ್ಯತೇ ಕಿಂಚಿದ್ಗುಣೈಃ ಕೈಶ್ಚಿದಪಿ ಕ್ವಚಿತ್ ॥
ಬ್ರಹ್ಮೇಶಾನಾದಿಕಮಪಿ ಭೇದಂ ಯೋ ವಾ ನ ಮನ್ಯತೇ ।
ಭೇದದೃಕ್ ತದ್ಗುಣಾದೌ ಚ ಪ್ರಾದುರ್ಭಾವಗತೇಽಪಿ ಯಃ ॥
ಪ್ರಾಕೃತಂ ದೇಹಮಥವಾ ದುಃಖಾಜ್ಞಾನಶ್ರಮಾದಿಕಮ್ ।
ಮನ್ಯತೇ ತಾರತಮ್ಯಂ ವಾ ತದ್ಭಕ್ತೇಷ್ವನ್ಯಥೈವ ಯಃ ॥

ಮನೋವಾಕ್ತನುಭಿರ್ಯೋ ವಾ ತಸ್ಮಿಂಸ್ತದ್ಭಕ್ತ ಏವ ವಾ ।
ವಿರೋಧಕೃದ್ವಿಷ್ಣ್ವಧೀನಾದನ್ಯತ್ ಕಿಂಚಿದಪಿ ಸ್ಮರನ್ ॥
ಅನ್ಯಾಧೀನತ್ವವಿಚ್ಛಾಸ್ಯ ಸರ್ವಪೂರ್ತ್ಯವಿದೇವ ಚ ।
ಭಕ್ತಿಹೀನಶ್ಚ ತೇ ಸರ್ವೇ ತಮೋಽಂಧಂ ಯಾಂತ್ಯಸಂಶಯಮ್॥ -(೨೯/೨೮-೪೨)

ವಿಷ್ಣು ವೈಷ್ಣವವಾಕ್ಯಗಳಿಂದ ಪಾಪಕರ್ಮಗಳ ಪರಿಹಾರ ಎಂಬ ಇಲ್ಲಿಯ ಮಾತು ಪ್ರಾಯಶ್ಚಿತ್ತ ವಿವೇಕದ ಬಗ್ಗೆ ಬೆಳಕು ಚೆಲ್ಲುವ ವಿಶೇಷಾಂಶ :

ವಿಷ್ಣುವೈಷ್ಣವವಾಕ್ಯೇನ ಹಾನಿಃ ಪಾಪಸ್ಯ ಕರ್ಮಣಃ ॥ – (೨೯/೪೫)

ಅರ್ಜುನನ ಮಾತಿನಲ್ಲಿರುವ ಅರ್ಥದ ಬಗೆಗಿನ ವಿವರಗಳು ಅರ್ಥದ ಸ್ಥಾನಮಾನದ ಬಗೆಗಿನ ಧಾರ್ಮಿಕಚಿಂತನೆಯ ಸಾರಸರ್ವಸ್ವವಾಗಿವೆ :

ಸಾರಂ ಸ ದ್ವಿವಿಧೋ ಜ್ಞೇಯೋ ದೈವೋ ಮಾನುಷ ಏವ ಚ ।
ದೈವೋ ವಿದ್ಯಾ ಹಿರಣ್ಯಾದಿರ್ಮಾನುಷಃ ಪರಿಕೀರ್ತಿತಃ ॥
ಮಧ್ಯಮೋ ಧರ್ಮ ಏವಾತ್ರ ಸಾಧ್ಯಂ ಸಾಧನಮೇವ ಚ ।
ವಿದ್ಯಾಹ್ವಯೋಽರ್ಥೋ ಧರ್ಮಸ್ಯ ವಿದ್ಯಯೈವ ವಿಮುಚ್ಯತೇ ॥
ಮಾನುಷೋಽರ್ಥೋಽಪಿ ವಿದ್ಯಾಯಾಃ ಕಾರಣಂ ಸುಪ್ರಯೋಜಿತಃ ।
ತುಷ್ಟೋಽರ್ಥೇನ ಗುರುರ್ಯಸ್ಮಾತ್ ಕೈವಲ್ಯಂ ದಾತುಮಪ್ಯಲಮ್ ॥
ಧರ್ಮಾರ್ಥತಾಂ ವಿನಾಽಪ್ಯರ್ಥೈಸ್ತುಷ್ಯೇಯುರ್ಗುರುದೇವತಾಃ ।
ಯದ್ಯನುದ್ದೇಶತೋ ಧರ್ಮೋಽಪ್ಯರ್ಥಮೇವಾನುಸಂವ್ರಜೇತ್ ॥
ಗುರುತಾಽರ್ಥಗತೈವ ಸ್ಯಾತ್ ಕಾಮೋಽಧಸ್ತಾದ್ಧಿ ನಿಷ್ಫಲಃ ॥ – (೨೯/೪೮-೫೨)

ಕಾಮವೆಂಬ ಪುರುಷಾರ್ಥದ ಬಗ್ಗೆ ಭೀಮ ನೀಡುವ ಅಪೂರ್ವವಿವೇಚನೆ ಭಗವದ್ಗೀತೆಯ 'ಧರ್ಮಾವಿರುದ್ಧೋ ಭೂತೇಷು ಕಾಮೋಽಸ್ಮಿ ಭರತರ್ಷಭ' (೭/೧೧) ಎಂಬ ಮಾತಿಗೆ ಭಾಷ್ಯದಂತಿರುವುದು ಗಮನಾರ್ಹ. ಲೌಕಿಕಕಾಮನೆಗೂ , ಪುರುಷಾರ್ಥಗಳಲ್ಲೊಂದಾದ ಕಾಮಕ್ಕೂ ಇರುವ ವ್ಯತ್ಯಾಸವನ್ನು ಬಲ್ಲವರಿಗೆ ಭೀಮನ ಈ ಮಾತುಗಳ ತಾತ್ತ್ವಿಕಮಹತ್ತ್ವದ ಅರಿವಾಗುವುದು:

.... ನ ಕಾಮಾದತಿರಿಕ್ತಮಸ್ತಿ ಕಿಂಚಿಚ್ಛುಭಂ ಕ್ವಾವರತಾಂ ಸ ಯಾಯಾತ್ ॥
ಕಾಮ್ಯಂ ಹಿ ಕಾಮಾಭಿಧಮಾಹುರಾರ್ಯಾಃ ಕಾಮ್ಯಾಃ ಪುಮರ್ಥಾಃ ಸಹ ಸಾಧನೈರ್ಯತ್ ।
ಅಕಾಮ್ಯತಾಂ ಯಾತ್ಯಪುಮರ್ಥ ಏವ ಪುಮರ್ಥಿತತ್ವಾದ್ಧಿ ಪುಮರ್ಥ ಉಕ್ತಃ ॥
ವಿಜ್ಞಾನಭಕ್ತ್ಯಾದಿಕಮಪ್ಯತೀವ ತತ್ಸಾಧನಂ ಕಾಮ್ಯಬಹಿಷ್ಕೃತಂ ಚೇತ್ ।
ನ ಸಾಧನಂ ಸ್ಯಾತ್ ಪರಮೋ ಹಿ ಮೋಕ್ಷೋ ನ ಸಾಧ್ಯತಾಂ ಯಾತಿ ವಿನಾ ಹಿ ಕಾಮಾತ್ ॥
ಪರಾತ್ ಪರೋಽಪ್ಯಾದಿಪುಮಾನ್ ಹರಿಶ್ಚ ಸ್ವಸ್ಯೇತರೇಷಾಮಪಿ ಕಾಮ್ಯ ಏವ ।
ಅಕಾಮಿತೋಽವಾಗ್ಗತಿಮೇವ ದದ್ಯಾತ್ ಕಾಮಃ ಪುಮರ್ಥೋಽಖಿಲ ಏವ ತೇನ ॥

ಇಚ್ಛೈವ ಕಾಮೋಽಸ್ತು ತಥಾಽಪಿ ನೈತಾಮೃತೇ ಹಿ ಚಿತ್ತ್ವಂ ಘಟಕುಡ್ಯವತ್ ಸ್ಯಾತ್ ।
ಸಾರಸ್ವತಃ ಸೈವ ಚಿದಾತ್ಮಕಾಽಪಿ ಸಾ ಚೇತನಾ ಗೂಢತನುಃ ಸದೈವ ॥ –(೨೯/೫೩-೫೭)

ಧರ್ಮಾರ್ಥಸಮ್ಮತವಾದ ಕಾಮ ಉತ್ತಮ; ಕೇವಲಧರ್ಮ ಅಥವಾ ಕೇವಲ ಅರ್ಥಕ್ಕೆ ಸಮ್ಮತವಾದ ಕಾಮ ಮಧ್ಯಮ; ಧರ್ಮಾರ್ಥವೆರಡಕ್ಕೂ ವಿರುದ್ಧವಾದ ಕಾಮ ಅಧಮ ಎಂಬ ಇಲ್ಲಿಯ ಕಾಮದಲ್ಲಿನ ತಾರತಮ್ಯದ ವಿವೇಚನೆ ದುಷ್ಕಾಮನೆಯನ್ನು ತೊರೆದು ಸತ್ಕಾಮನೆಯನ್ನು ರೂಢಿಸಿಕೊಳ್ಳಲು ನೀಡುವ ನೆರವು ಅಪಾರವಾದುದು :

ನ ಪ್ರಶ್ನಯೋಗ್ಯಃ ಪೃಥಗೇಷ ಕಾಮಸ್ತೇನೈವ ರಾಜನ್ ಯದಿ ತಾರತಮ್ಯಮ್ ।
ಇಚ್ಛಸ್ಯಯಂ ತೇ ತ್ರಿವಿಧೋ ಹಿ ವೇದ್ಯೋ ಧರ್ಮಾರ್ಥಯುಕ್ತಃ ಪರಮೋ ಮತೋಽತ್ರ ॥
ಏಕಾವಿರೋಧೀ ಯದಿ ಮಧ್ಯಮೋಽಸೌ ದ್ವಯೋರ್ವಿರೋಧೀ ತು ಸ ಏವ ನೀಚಃ ॥
–(೨೯/೫೮, ೫೯)

ಜ್ಞಾನಿಯಾದವನು ಅನಿಷಿದ್ಧವಾದ ಸಕಲಭೋಗಗಳನ್ನೂ ಹೊಂದಿ, ಸಕಲರಿಗೂ ಕಾಮ್ಯನಾದ ಶ್ರೀಹರಿಯನ್ನು ಆರಾಧಿಸಿ ಕೃತಕೃತ್ಯನಾಗಬೇಕು ಎಂಬುದು ಇಲ್ಲಿ ಬಂದಿರುವಂತೆ ಕಾಮವಿವೇಚನೆಯ ಸಾರಸರ್ವಸ್ವ :

ತಸ್ಮಾತ್ ಸ್ವಬುದ್ಧಿಪ್ರಮದಾಭಿರೇವ ಕಾಮಂ ರಮೇಥಾ ಅನುರೂಪಕಾಮಃ ॥
ರಾಜನ್ ನ ಕಾಮಾದಪರಂ ಶುಭಂ ಹಿ ಪರೋ ಹಿ ಕಾಮೋ ಹರಿರೇವ ಯೇನ ।
ಪ್ರಾಜ್ಞಃ ಸುಹೃಚ್ಚಂದನಸಾರಲಿಪ್ತೋ ವಿಚಿತ್ರಮಾಲ್ಯಾಭರಣೈರುಪೇತಃ ॥ –(೨೯/೫೯-೬೦)

ಮೂವತ್ತನೆಯ ಅಧ್ಯಾಯ (ಶ್ಲೋಕಸಂಖ್ಯೆ : ೧೭೫)

ಭೀಷ್ಮರ ದೇಹತ್ಯಾಗ, ನೊಂದ ಯುಧಿಷ್ಠಿರನಿಗೆ ಅಶ್ವಮೇಧಯಾಗ ಮಾಡಲು ವ್ಯಾಸರ ಆದೇಶ, ಧರ್ಮರಾಜನ ವಿರಕ್ತಜೀವನ, ಇಪ್ಪತ್ತಮೂರು ಪತ್ನಿಯರೊಂದಿಗೆ ಭೀಮನ ವೈಭವದ ಜೀವನ, ಅವನ ಅತ್ಯಂತ ಅಪೂರ್ವವಾದ ರಾಜ್ಯನಿರ್ವಹಣೆ, ದ್ರೌಪದಿ ಕಾಳಿಯರು ಭೀಮನ ಪ್ರಧಾನಪತ್ನಿಯರು ಎಂಬ ನಿರೂಪಣೆ, ಭೀಮನು ಧರ್ಮಪ್ರಸಾರಕ್ಕೆ ಕೈಗೊಂಡ ವಿಶೇಷಕ್ರಮಗಳು, ಅದರಿಂದ ಕಲಿಯುಗಕ್ಕೆ ಲಭಿಸಿದ ವಿಶೇಷಹಿರಿಮೆ, ಅರ್ಜುನಾದಿಗಳ ಜೀವನಕ್ರಮ, ಪಾಂಡವರ ಅಪೂರ್ವ ರಾಜ್ಯಭಾರಕ್ರಮ, ದ್ರೌಪದಿಯ ಹಿರಿಮೆ, ಭೀಮ ಮಾಡಿದ ಕಲಿನಿಗ್ರಹ, ಕಲಿ ಧರ್ಮರಾಜ್ಯಕ್ಕೆ ನೀಡಬೇಕಾದ ನಾಲ್ಕು ಕರಗಳ ವಿವರ, ಕಲಿಯ ನಿರ್ಗಮನ, ಅರ್ಜುನನ ಪ್ರಾರ್ಥನೆಯಂತೆ ಕೃಷ್ಣನಿಂದ ಅವನಿಗೆ ಅನುಗೀತೆಯ ಉಪದೇಶ, ಕೃಷ್ಣನ ದ್ವಾರಕಾಪ್ರಯಾಣ, ಉದಂಕನಿಗೆ ಕೃಷ್ಣನ ವಿಶ್ವರೂಪಪ್ರದರ್ಶನ, ಇಂದ್ರನ ಮೂಲಕ ಕೃಷ್ಣ ಕಳುಹಿಸಿದ ಅಮೃತದಿಂದ ಉದಂಕವಂಚಿತನಾದ ಬಗೆ, ಅಭಿಮನ್ಯುವಿನ ವಧೆಯ ವಿವರವನ್ನು ತಿಳಿದ

ವಸುದೇವಾದಿಗಳಿಂದ ಅವನಿಗೆ ಶ್ರಾದ್ಧದಾನ, ಅಶ್ವಮೇಧಯಾಗಕ್ಕೆ ಆರ್ಥಿಕಸಮಸ್ಯೆಯನ್ನು ಎದುರಿಸಿದ ಧರ್ಮರಾಜನಿಗೆ ವ್ಯಾಸರು ನೀಡಿದ ಪರಿಹಾರ, ಅದರಂತೆ ಹಿಮಾಲಯದಲ್ಲಿದ್ದ ಅಪಾರಪ್ರಮಾಣದ ಸುವರ್ಣವನ್ನು ತಮ್ಮಂದಿರೊಂದಿಗೆ ತೆರಳಿ ವ್ಯಾಸರ ನೇತೃತ್ವದಲ್ಲಿ ಯುಧಿಷ್ಠಿರ ಪಡೆದುಕೊಂಡ ವಿವರ, ಯಜ್ಞನಿರ್ದೇಶಕರಾಗಿ ಶ್ರೀವೇದವ್ಯಾಸರು, ಭೀಮ ನಿರ್ಮಿಸಿದ ಸುವರ್ಣದ ಯಾಗಶಾಲೆ, ವ್ಯಾಸರ ಆದೇಶದಂತೆ ಯಜ್ಞಕುದುರೆಯ ಹಿಂದೆ ದಿಗ್ವಿಜಯಕ್ಕಾಗಿ ನಡೆದ ಅರ್ಜುನ, ಯುದ್ಧದಲ್ಲಿ ಯಾರನ್ನೂ ಕೊಲ್ಲದಿರಲು ಅರ್ಜುನನಿಗೆ ಯುಧಿಷ್ಠಿರನ ಆದೇಶ, ಅರ್ಜುನ ಬಭ್ರುವಾಹನರ ಯುದ್ಧ, ಬಭ್ರುವಾಹನನ ಪೆಟ್ಟಿಗೆ ಅರ್ಜುನನ ದೀರ್ಘಮೂರ್ಛೆ, ಚಿತ್ರಾಂಗದೆ ಬಭ್ರುವಾಹನರ ಪ್ರಾಯೋಪವೇಶ, ನಾಗಲೋಕದಿಂದ ತಂದ ವಿಶಲ್ಯಕರಣಿಯ ಮೂಲಕ ಉಲೂಪಿಯಿಂದ ಅರ್ಜುನನಿಗೆ ಮೋಹದ ಪರಿಹಾರ, ಉಲೂಪಿ ವಿವರಿಸಿದ ಅರ್ಜುನನ ಪರಾಭವದ ಹಿನ್ನೆಲೆ, ದ್ವಾರಕೆಯಲ್ಲಿ ಪ್ರದ್ಯುಮ್ನಾದಿಗಳು ಯಜ್ಞಾಶ್ವವನ್ನು ಕಟ್ಟಿಹಾಕಿದ್ದು, ಅರ್ಜುನನಿಂದ ವಿಷಯ ತಿಳಿದ ವಸುದೇವನಿಂದ ಅಶ್ವದ ವಿಮೋಚನೆ, ಅರ್ಜುನ ಹಸ್ತಿನಾಪುರಕ್ಕೆ ಮರಳಿದ್ದು, ಕೃಷ್ಣನಿಂದ ಅರ್ಜುನನಲ್ಲಿದ್ದ ದುರ್ಲಕ್ಷಣದ ವಿವರಣೆ, ದ್ರೌಪದಿಯಿಂದ ಅವನ ಇತರ ದುರ್ಲಕ್ಷಣಗಳನ್ನು ವಿವರಿಸದಿರಲು ಕೃಷ್ಣನಲ್ಲಿ ಕೋರಿಕೆ, ಲಕ್ಷಣಶಾಸ್ತ್ರದ ಪರಿಜ್ಞಾನಕ್ಕೆ ಸಮಸ್ತ ದುರ್ಲಕ್ಷಣವರ್ಜಿತರೂ ಸಮಸ್ತಸಲ್ಲಕ್ಷಣಯುತರೂ ಆದ ಋಜುಗಳು ಮಾತ್ರವೇ ಪೂರ್ಣಾಧಿ-ಕಾರಿಗಳು ಎಂಬ ವಿವರ, ಪಾಂಡವರ ಯಜ್ಞವರ್ಣನೆ, ಪಾಂಡವರ ಯಜ್ಞ ಪಂಚಾಶ್ವಮೇಧಾತ್ಮಕ-ವಾಗಿ ಹದಿನೈದು ವರ್ಷಗಳವರೆಗೆ ನಡೆದು ಬಹುಸುವರ್ಣಕ ಎನ್ನಿಸಿದ್ದು, ಪಾಂಡವರು ವ್ಯಾಸರಿಗೆ ಮಾಡಿದ ಸರ್ವಾರ್ಪಣೆ, ವ್ಯಾಸರಿಂದ ಪಾಂಡವರಿಗೆ ಪುನಃ ರಾಜ್ಯಪ್ರದಾನ, ಋತ್ವಿಕ್ಕುಗಳಿಗೆ ದಕ್ಷಿಣೆಯ ವಿಭಾಗ, ಯಜ್ಞಮಂಟಪಕ್ಕೆ ನಕುಲರೂಪದಲ್ಲಿ ಕ್ರೋಧಾಭಿಮಾನಿ ಅಸುರನ ಆಗಮನ, ಪತ್ನೀಪುತ್ರಸ್ನುಷಾಸಮೇತನಾದ ವಿಪ್ರನೊಬ್ಬ ಮಾಡಿದ ಅತಿಥಿಸತ್ಕಾರರೂಪ ಯಜ್ಞಕ್ಕೂ ಪಾಂಡವರ ಆ ಯಜ್ಞ ಸಾಟಿಯಲ್ಲವೆಂಬ ಆ ಮುಂಗುಸಿಯ ವಚನ, ಆ ಮುಂಗುಸಿಗೆ ದೊರೆತ ದುರ್ಗತಿ, ಕೃಷ್ಣ ತಿಳಿಸಿದ ಮುಂಗುಸಿಯ ಹಿನ್ನೆಲೆ, ಯಜ್ಞಫಲಸಂಪಾದನೆಗೆ ಕಾರಣವಾಗುವ ಸಾಧನಪರಿಕರದ ವಿಶ್ಲೇಷಣೆ, ಪಾಂಡವರ ಯಜ್ಞ ಸರ್ವಶ್ರೇಷ್ಠಯಜ್ಞಗಳಲ್ಲೊಂದು ಎಂಬ ನಿರೂಪಣೆ, ಕೃಷ್ಣನಿಂದ ಧರ್ಮರಾಜನ ವಿವಿಧ ವೈಷ್ಣವಧರ್ಮವಿಷಯಕಪ್ರಶ್ನೆಗಳಿಗೆ ಉತ್ತರ — ಇವು ಈ ಅಧ್ಯಾಯದಲ್ಲಿನ ಮುಖ್ಯವಿಷಯಗಳು.

ಭೀಮನ ಇತರ ಪತ್ನಿಯರ ಹಾಗೂ ಅವನ ಸರ್ವೋತ್ತುಂಗ ಎಂಬ ಪುತ್ರನ ವಿವರ ಇದರ ಆರಂಭಭಾಗದಲ್ಲಿ ಬಂದಿದೆ :

> ಸರ್ವೋತ್ತುಂಗೋ ನಾಮತಃ ಪ್ರಾಣವಾಯೋರಂಶೋ ನಿಶಾಯಾಂ ಗುರುಪುತ್ರಸೂದಿತಃ ।
> ಮಾತಾऽಸ್ಯ ದೇವೀತಿ ಚ ರೌಹಿಣೇಯೀ ಭೀಮಪ್ರಿಯಾऽऽಸೀದ್ಯಾ ಪುರಾऽಸ್ಯೈವ ರಾಕಾ ॥

ಅನ್ಯಾಶ್ಚಾಸುರ್ವಾಸುದೇವ್ಯೋ ದಿಶೋ ಯಾ ಆಪಃ ಪೂರ್ವಂ ವಿಂಶತಿರಗ್ಯ್ರರೂಪಾಃ ।
ತಾಭಿರ್ಯುತೋ ದೈವತೈರಪ್ಯಲಭ್ಯಾನಭುಂಕ್ತ ಭೋಗಾನ್ ವಿಬುಧಾನುಗಾರ್ಚಿತಃ ॥
– (೩೦/೧೧, ೧೨)

ಭೀಮಸೇನ ಪ್ರತಿಗ್ರಾಮದಲ್ಲೂ ಐದೈದು ವಿದ್ವಾಂಸರನ್ನು ವೇತನ ನೀಡಿ ನಿಯಮಿಸಿ, ಭಾಗವತಧರ್ಮಗಳ ಶಿಕ್ಷಣವನ್ನು ಮಾಡಿಸುತ್ತಿದ್ದ ಅಪೂರ್ವವಿವರ ಇಲ್ಲಿಯ ಮತ್ತೊಂದು ವಿಶೇಷಾಂಶ. ಇದು ಧರ್ಮಪ್ರಸಾರವನ್ನು ಪರಿಣಾಮಕಾರಿಯಾಗಿ ಮಾಡಲು ನೀಡುವ ದಿಗ್ದರ್ಶನ ಅಪೂರ್ವವಾದುದು :

ರರಕ್ಷ ಧರ್ಮಾನಖಿಲಾನ್ ಹರೇಃ ಸ ನಿಧಾಯ ವಿಪ್ರಾನನುಶಾಸ್ಯ ಯುಕ್ತಾನ್ ।
ಸದ್ವೈಷ್ಣವಾನ್ ವಿದುಷಃ ಪಂಚ ಪಂಚ ಸವೇತನಾನ್ ಗ್ರಾಮಮನು ಸ್ವಕೀಯಾನ್ ॥
ದಧಾರ ದಂಡಂ ತದವರ್ತಿಷು ಸ್ವಯಂ ಜಗ್ರಾಹ ಚಾನ್ವೇವ ಮುದಾऽಥ ತದ್ಗತಾನ್ ।
ತದ್ವೃತ್ತಮನ್ಯೈರಪಿ ವಿಪ್ರವರ್ಯ್ಯೈಃ ಸಂಶೋಧಯನ್ ಸರ್ವಮಸೌ ಯಥಾ ವ್ಯಧಾತ್ ॥
– (೩೦/೧೩-೧೪)

ರಾಮರಾಜ್ಯದ ಪ್ರತಿರೂಪದಂತಿದ್ದ ಭೀಮರಕ್ಷಿತವಾದ ಧರ್ಮರಾಜ್ಯದ ರಕ್ಷಣೆ ಇದರಲ್ಲಿನ ಮತ್ತೊಂದು ಅಪೂರ್ವಘಟ್ಟ :

ನಾವೈಷ್ಣವಃ ಕಶ್ಚಿದಭೂತ್ ಕುತಶ್ಚಿನ್ನೈವಾನ್ಯನಿಷ್ಠೋ ನ ಚ ಧರ್ಮಹಂತಾ ।
ನ ವಿಧ್ಯವರ್ತೀ ನ ಚ ದುಃಖಿತೋऽಭೂನ್ನಾಪೂರ್ಣವಿತ್ತಶ್ಚ ತದೀಯರಾಷ್ಟ್ರೇ ॥
ವಾಸಿಷ್ಠವೃಷ್ಣಿಪ್ರವರೌ ಪ್ರಪಶ್ಯತಾಂ ತಾಭ್ಯಾಂ ಚ ಭೀಮೇನ ಮುನೀಶ್ವರೈಶ್ಚ ।
ಸಂಶಿಕ್ಷಿತಾನಾಂ ಪ್ರಥಮಾದ್ಯುಗಾಚ್ಚ ಗುಣಾಧಿಕಃ ಕಲಿರಾಸೀತ್ ಪ್ರಜಾನಾಮ್ ॥
ಶುಭಂ ಮಹತ್ ಸ್ವಲ್ಪಫಲಂ ಕೃತೇ ಹಿ ವಿಪರ್ಯಯೇಣಾಶುಭಮೇಷ ದೋಷಃ ।
ತದ್ಧೀನಮಪ್ಯುಚ್ಚಶುಭಂ ಕೃತಾದ್ಯುಗಾಚ್ಚಕ್ರೇ ಕಲಿಂ ಮಾರುತಿರಚ್ಯುತಾಶ್ರಯಾತ್ ॥ ....
ದ್ವಿರೂಪಕೃಷ್ಣಪ್ರಹಿತೇಷು ಪಾಂಡುಷು ಕ್ಷಿತಿಂ ಪ್ರಶಾಸತ್ಸು ನ ಕಶ್ಚನಾತುರಃ ।
ನ ಚಾಕ್ರಮಾನ್ಮೃತ್ಯುರಭೂನ್ನ ನಾರ್ಯೋ ವಿಧವ್ಯಕಾ ನೋ ವಿಧುರಾ ನರಾಶ್ಚ ॥
ಶಬ್ದಾದಯಶ್ಚಾಸುರತೀವ ಹೃದ್ಯಾ ನಿಕಾಮವರ್ಷೀ ಚ ಸುರೇಶ್ವರೋऽಭೂತ್ ।
ಪ್ರಜಾ ಅನಾಸ್ಪೃಷ್ಟಸಮಸ್ತತಾಪಾ ಅನನ್ಯಭಕ್ತ್ಯಾऽಚ್ಯುತಮರ್ಚಯಂತಿ ॥
ಪೃಥ್ವೀ ಚ ಗಾವಃ ಸಸರಸ್ವತೀಕಾ ನಿಕಾಮದೋಹಾ ಅಭವನ್ ಸದೈವ ।
ಅಬಾಧ್ದಿನದ್ಯೋ ಗಿರಿವೃಕ್ಷಜಂಗಮಾಃ ಸರ್ವೇऽಪಿ ರತ್ನಪ್ರಸವಾ ಬಭೂವುಃ ॥
ಕೃಷ್ಣಾಶ್ರಯಾತ್ ಸರ್ವಮಿದಂ ವಶೇ ತೇ ವಿಧಾಯ ಸಮ್ಯಕ್ ಪರಿಪಾಲಯಂತಃ ।
ದಿವೀವ ದೇವಾ ಮುಮುದುಃ ಸದೈವ ಮುನೀಂದ್ರಗಂಧರ್ವನೃಪಾದಿಭಿರ್ವೃತಾಃ ॥
– (೧೫-೧೭, ೨೪-೨೭)

ಪಾಂಡವರ ಕೀರ್ತಿಯನ್ನು ಸಾರುವ ಮಹಾಭಾರತಕೃತಿಯನ್ನು ಸಾಕ್ಷಾತ್ ದ್ರೌಪದಿ ಎಂದು ಕರೆದು, ಆ ರೂಪಕದಿಂದ ದ್ರೌಪದಿಯೊಂದಿಗೆ ಮಹಾಭಾರತದ ಹಿರಿಮೆಯನ್ನು ಸಾರಿರುವ ರೀತಿ ಉತ್ತಮಶಾಸ್ತ್ರಕಾವ್ಯಕ್ಕೆ ನಿದರ್ಶನವಾಗಿದೆ :

ಸಮುಜ್ಜ್ವಲಾ ಪಾಂಡವಕೀರ್ತಿನಾರೀ ಪದಂ ನಿಧಾಯಾಸುರಪಕ್ಷಮೂರ್ಧಸು ।
ವರಾಭಯೇ ಚೈವ ಸತಾಂ ಕರಾಭ್ಯಾಂ ಕೃಷ್ಣಪ್ರಸೂತಾ ಜಗದಂಡಮಾವೃಣೋತ್ ॥
ಪಾತಾಲಪಾದಾಂ ಪೃಥಿವೀನಿತಂಬಾಮಾಕಾಶಮಧ್ಯಾಂ ಕರಸಂತತಾಶಾಮ್ ।
ಗ್ರಹರ್ಕ್ಷತಾರಾಭರಣದ್ಯುವಕ್ಷಸಂ ವಿರಿಂಚಲೋಕಸ್ಥಿತಸನ್ಮುಖಾಂಬುಜಾಮ್ ॥
ವಿಕುಂಠನಾಥಾಭಯಹಸ್ತಮಾದರಾನ್ಮೂರ್ಧ್ನಾ ವಹಂತೀಂ ವರಭಾರತಾಖ್ಯಾಮ್ ।
ನಿಶಮ್ಯ ತಾಮೀಕ್ಷ್ಯ ಸಮಸ್ತಲೋಕಾಃ ಪವಿತ್ರಿತಾ ವೇದಿಭವಾಮಿವಾನ್ಯಾಮ್ ॥
– (೩೦/೨೮-೩೦)

ಭೀಮನಿಂದ ನಡೆದ ಕಲಿನಿಗ್ರಹಕಾರ್ಯ ಇದರಲ್ಲಿನ ಮುಂದಿನ ಪ್ರಧಾನಘಟ್ಟ. ಕೃಷ್ಣನ ಆದೇಶದಂತೆ ಕಲಿನಿಗ್ರಹವನ್ನು ಮಾಡುವ ಸಾಮರ್ಥ್ಯ ವಾಯುದೇವರದು ಮಾತ್ರ ಎಂಬುದು ಇಲ್ಲಿಯ ಮುಖ್ಯಾಂಶ. ಕಾಲಕ್ಕಿಂತ ರಾಜ ಪ್ರಧಾನ ಎಂಬ ಇಲ್ಲಿಯ ತತ್ತ್ವ ಸಾಧಕರಿಗೆ ಯಾವ ಕಾಲವೂ ಸಹ ಭಗವದಾರಾಧನೆಗೆ, ಧರ್ಮಪಾಲನೆಗೆ ಅಡ್ಡಿಯಾಗದು ಎಂಬ ಸಂದೇಶವನ್ನು ನೀಡುವುದು :

ಕಾಲೋ ವಾ ಕಾರಣಂ ರಾಜ್ಞೋ ರಾಜಾ ವಾ ಕಾಲಕಾರಣಮ್ ।
ಇತಿ ತೇ ಸಂಶಯೋ ಮಾ ಭೂದ್ರಾಜಾ ಕಾಲಸ್ಯ ಕಾರಣಮ್ ॥ – (೩೦/೩೭)

ಕಲಿ ತನ್ನ ಆಕ್ರಮಣದ ವಿಧಿಯನ್ನು ವಿವರಿಸುತ್ತಾ ತಾನು ಮೊದಲು ಧರ್ಮ ಪಾಲಿಸುವ ರಾಜರನ್ನು, ಧರ್ಮೋಪದೇಶ ಮಾಡುವ ವಿಪ್ರರನ್ನೂ ಪ್ರವೇಶಿಸುವುದಾಗಿ ತಿಳಿಸಿ, ತಾನು ದೃಷ್ಟಿ ಬೀರಿದಲ್ಲಿ ಸದ್ಗುಣಗಳಾಗಲಿ, ವೇದಗಳಾಗಲಿ, ಉತ್ತಮಯುಕ್ತಿಗಳಾಗಲಿ ಉಳಿದುಕೊಳ್ಳಲಾರವು ಎಂದು ತಿಳಿಸುವುದು ತುಂಬಾ ವಿಶಿಷ್ಟವಾದ ಭಾಗ. ಧರ್ಮವಿಪ್ಲವದ ಈ ರೀತಿಯನ್ನು ತಿಳಿದವರು ಧರ್ಮಮಾರ್ಗವನ್ನು ತೊರೆಯದಿರಲು ಸಾಧ್ಯವಾಗುವುದು ಎನ್ನಬಹುದು :

ತಮುವಾಚ ಕಲಿಃ ಕಾಲೇ ಮದೀಯೇ ತ್ವಾದೃಶಃ ಕುತಃ ।
ರಾಜಾನಂ ಪೂರ್ವಮಾವಿಶ್ಯ ವಿಪ್ರಾಂಶ್ಚ ಸ್ಯಾಮಹಂ ನೃಪ ॥...
ಮದೀಯಕಾಲೇ ಭೂಪಾಲ ವಿಪ್ರವೇದವಿರೋಧಿನಿ ।
ಮದ್ದೃಷ್ಟಿಪಾತೇ ಕ್ವ ಗುಣಾಃ ಕ್ವ ವೇದಾಃ ಕ್ವ ಸುಯುಕ್ತಯಃ ॥ – (೩೦/೩೮-೪೦)

ಆದರೆ ಕೃಷ್ಣರಕ್ಷಿತರಾದ ಪಾಂಡವರ ಮೇಲೆ ತನ್ನ ಆಟ ನಡೆಯದು ಎಂದು ತಿಳಿಸುವ ಕಲಿ ತನ್ನಿಂದ ಪಾರಾಗುವ ಉಪಾಯವನ್ನೂ ತಿಳಿಸಿರುವುದು ಗಮನಾರ್ಹ :

ವಾಸುದೇವಸಹಾಯೇಷು ತೇಜೋ ಯುಷ್ಮಾಸು ಮೇ ನ ಹಿ ।
ಕ್ಷರಾಜಾऽಸಾವೃತೇ ಯುಷ್ಮಾನ್ ಯೋ ಮಯಾ ನಾಭಿಭೂಯತೇ ॥ – (೩೦/೩೯)

ಕಲಿ ಧರ್ಮರಾಜನಿಗೆ ನೀಡಬೇಕಾದ ಕಾಣಿಕೆಗಳ ವಿವರವು ಕಲಿಯುಗದಲ್ಲೂ ಧರ್ಮ ಉಳಿದುಕೊಳ್ಳುವ ನಾಲ್ಕು ಸ್ಥಳಗಳನ್ನು ನಿರೂಪಿಸುವುದು :

.....ಕರಂ ತತ್ರಾಪಿ ನೋऽರ್ಪಯ ।
ಸೀಮಾಧಿರ್ಬಹುವಾಕ್ಯಂ ಚ ತುಲಾಮಾನೇ ಚ ಮೇ ಕರಃ ॥
ನೈವಾತಿಕ್ರಮಮೇತೇಷಾಂ ಕುರು ಸರ್ವಾತ್ಮನಾ ಕ್ವಚಿತ್ ॥ – (೩೦/೪೨,೪೩)

ಕೃಷ್ಣ ಅರ್ಜುನನಿಗೆ ಉಪದೇಶಿಸಿದ ಸಾವಿರಾರು ಶ್ಲೋಕಗಳ ಅನುಗೀತೆಯ ಸಾರಸರ್ವಸ್ವವನ್ನು ಇಲ್ಲಿ ಸಂಗ್ರಹಿಸಿರುವ ರೀತಿ ಹೀಗಿದೆ :

ವಾಣೇ ಪ್ರಾಣೋ ವಾಸುದೇವ ಇತ್ಯೇತೈರಖಿಲಂ ತತಮ್ ।
ಸರ್ವೋತ್ತಮತ್ವಮೇತೇಷಾಂ ಸರ್ವಮೇತದ್ವಶೇ ಜಗತ್ ।
ಉತ್ತರೋತ್ತರಮೇತೇऽಪಿ ಗುಣೋಚ್ಚಾಸ್ತದ್ವಶೇ ಪರೇ ॥
ಇತ್ಥಂ ಹರೇರ್ವಶೇ ಸರ್ವಂ ಗುಣಪೂರ್ಣಶ್ಚ ಸ ಪ್ರಭುಃ ।
ಏಕ ಏವ ನ ಚಾನ್ಯೋऽಸ್ತಿ ಪ್ರಾಣೋಚ್ಚಾತದಧೋ ರಮಾ ॥
ಸ ಹುತಾಶ ಇತಿ ಪ್ರೋಕ್ತೋ ಹುತಮತ್ತ್ಯಖಿಲಂ ಯತಃ ।
ವಾಕ್ಪಾಣಮಧ್ಯಗೋ ನಿತ್ಯಂ ಧಾರಯತ್ಯಖಿಲಂ ಜಗತ್ ॥
ಸ ಈಶೋ ಬ್ರಹ್ಮರುದ್ರಾದ್ಯಾ ಜೀವಾ ಏವ ಪ್ರಕೀರ್ತಿತಾಃ ।
ಏತಸ್ಯಾನಾದಿಸದ್ಭಕ್ತಾ ಮುಕ್ತಯೋಗ್ಯಾ ಹಿ ತೇ ಸ್ಮೃತಾಃ ॥
ಅನಾದಿದ್ವೇಷಿಣೋ ಯೇऽಸ್ಮಿಂಸ್ತಮೋಯೋಗ್ಯಾಃ ಸುಪಾಪಿನಃ ।
ಮಿಶ್ರಾ ಮಧ್ಯಾ ಇತಿ ಜ್ಞೇಯಾಃ ಸಂಸಾರಪರಿವರ್ತಿನಃ ॥
ಏವಂ ಜೀವಾಸ್ತ್ರಿಧಾ ಪ್ರೋಕ್ತಾ ಭವಂತ್ಯೇತೇ ನ ಚಾನ್ಯಥಾ ।
ತಾರತಮ್ಯಂ ಚ ವಿಜ್ಞೇಯಂ ಲಿಂಗೈರ್ದೈಹಿಕಮಾನಸೈಃ ॥
ವಿಷ್ಣೋರ್ಲಿಂಗಾನುಸಾರಿತ್ವಾತ್ ತಾರತಮ್ಯಾತ್ ತದೀಕ್ಷಣಮ್ ।
ವಿಷ್ಣೋಸ್ತದನುಗಾನಾಂ ಚ ಪ್ರೀತಿಕೃದ್ಧರ್ಮ ಈರಿತಃ ॥
ಅಧರ್ಮೋऽನ್ಯ ಇಯಂ ನಿಷ್ಠಾ ಪ್ರಲಾಪಃ ಕಿಂ ಕರಿಷ್ಯತಿ ॥ – (೩೦/೪೯-೫೬)

ಗಾಂಧಾರಿಗೆ ಶಾಪ ನೀಡಲು ಅವಕಾಶವಿತ್ತ ಕೃಷ್ಣ ಉದಂಕನಿಗೆ ತನ್ನ ವಿಶ್ವರೂಪವನ್ನು ತೋರಿ, ಅದಕ್ಕೆ ಅವಕಾಶ ನೀಡದಿರಲು ಕಾರಣವನ್ನು ಹೀಗೆ ಸಂಗ್ರಹಿಸಿರುವರು :

ತಂ ಶಪ್ತವಧಕೋಪೇನ ಶಪ್ತುಮಾತ್ಮಾನಮುದ್ಯತಮ್ ।
ಕೇಶವೋऽಶಮಯದ್ವಾಕ್ಯೈರ್ವಿಶ್ವರೂಪಂ ಪ್ರದರ್ಶ್ಯ ಚ ॥

ಮದ್ಭಕ್ತೋ ನಿತರಾಮೇಷ ಮದಾರಾಧನತತ್ಪರಃ ।
ಮಾಮವಜ್ಞಾಯ ನಿರಯಂ ಮಾऽನುತ್ಥಾನಂ ವ್ರಜೇದಿತಿ ॥
ಕೃಪಯಾ ವಾಸುದೇವೇನ ಬೋಧಿತಃ ಶಾಂತಮಾನಸಃ ।
ಪಶ್ಚಾತ್ತಾಪಾಭಿತಪ್ತಾತ್ಮಾ ತಮೇವ ಶರಣಂ ಯಯೌ ॥ – (೩೦/೫೯-೬೧)

ಉದಂಕನಿಗೆ ಅಮೃತ ಕುಡಿಯುವ ಅವಕಾಶವನ್ನು ತಪ್ಪಿಸಲು ನೀಡಿರುವ ಕಾರಣ ಅಮೃತದ ಮಹತ್ತ್ವವನ್ನು ಮತ್ತೊಂದು ರೀತಿಯಲ್ಲಿ ನಿರೂಪಿಸುವುದು :

ಅಸಾಧಾರಣಮನ್ನಂ ಹಿ ದೇವಾನಾಮಮೃತಂ ಸದಾ ।
ಅನ್ಯಪೀತಿಸ್ತತಸ್ತಸ್ಯ ದೇವಾನಾಂ ಪರಮಾಪ್ರಿಯಾ ॥ – (೩೦/೬೭)

ರಾಜಸೂಯಯಾಗದಲ್ಲಿ ಮಾಡಿದ್ದಂತೆ ಈ ಅಶ್ವಮೇಧಯಾಗದ ಪ್ರಸಂಗದಲ್ಲಿಯೂ ಸಹ ಭೀಮಸೇನನೇ ಶ್ರೀವೇದವ್ಯಾಸರ ನಿರ್ದೇಶನದಂತೆ ಯಜ್ಞಶಾಲಾದಿಗಳನ್ನು ನಿರ್ಮಿಸಿದ್ದು ಮತ್ತೊಂದು ಮುಖ್ಯ ಉಲ್ಲೇಖ :

ಸಾಧನಾನಿ ತು ಸರ್ವಾಣಿ ಶಾಲಾಂ ಚೈವ ಹಿರಣ್ಮಯೀಮ್ ।
ಪವಮಾನಸುತಶ್ಚಕ್ರೇ ಕೃಷ್ಣದ್ವೈಪಾಯನೇರಿತಃ ॥ – (೩೦/೯೫)

ಅಶ್ವಮೇಧಯಾಗದ ಪ್ರಸಂಗದಲ್ಲಿ ಅಶ್ವರಕ್ಷಕನಾಗಿ ತೆರಳಿದ ಅರ್ಜುನ ಯುಧಿಷ್ಠಿರನ ಆದೇಶದಂತೆ ಒಬ್ಬನನ್ನೂ ಕೊಲ್ಲಲಿಲ್ಲ ಎಂಬ ಇಲ್ಲಿಯ ವಿವರ ಜೈಮಿನಿಭಾರತದಲ್ಲಿ ಬಂದಿರುವ ಸುಧನ್ವಸುರಥಾದಿ ಅನೇಕರನ್ನು ಅರ್ಜುನ ವಧಿಸಿದ ವಿವರ ವಸ್ತುಸ್ಥಿತಿಯಲ್ಲವೆಂಬುದನ್ನು ನಿರೂಪಿಸುವುದು :

ಯುಧಿಷ್ಠಿರಾಜ್ಞಯಾ ತೇನ ನ ಕಶ್ಚಿನ್ನಿಹತಸ್ತದಾ ॥ – (೩೦/೯೮)

ಮಹಾಭಾರತದಲ್ಲಿ ಉಲೂಪಿ ಮೂರ್ಛಿತನಾದ ಅರ್ಜುನನನ್ನು ನಾಗಲೋಕದಿಂದ ಸಂಜೀವನವನ್ನು ತಂದು ಎಚ್ಚರಿಸಿದ ಎಂಬ ಸಾಮಾನ್ಯ ಉಲ್ಲೇಖವನ್ನು ಹಾಗೆ ತಂದದ್ದು ವಿಶಲ್ಯಕರಣಿ ಎಂದು ತಿಳಿಸುವ ಮೂಲಕ ವಿವರಿಸಿರುವುದು ಇಲ್ಲಿಯ ಮತ್ತೊಂದು ವಿಶೇಷ :

ನಾಗಲೋಕಾತ್ ಸಮಾದಾಯ ವಿಶಲ್ಯಕರಣೀಂ ಕ್ಷಣಾತ್ ।
ಉತ್ಥಾಪಯಾಮಾಸ ಪತಿಂ ತ್ರಿಲೋಕಾಧಿರಥಂ ತಯಾ ॥ – (೩೦/೧೦೯)

ಅರ್ಜುನನ ದುರ್ಲಕ್ಷಣಗಳನ್ನು ವಿವರಿಸುವ ಪ್ರಸಂಗದಲ್ಲಿ ಅವನಲ್ಲಿ ಉದರದ ಕಿಂಚಿದಾಧಿಕ್ಯ, ವೃಷಣಾಧಿಕ್ಯ, ಸವ್ಯಬಾಹುವಿನ ಆಧಿಕ್ಯ ಎಂಬ ಇತರ ಮೂರು ದುರ್ಲಕ್ಷಣಗಳಿದ್ದವು ಎಂಬುದು ಅಪೂರ್ವವಿವರ :

ಉದರಸ್ಯ ಕಿಂಚಿದಾಧಿಕ್ಯಂ ವೃಷಣಾಧಿಕ್ಯಮೇವ ಚ ।
ಸವ್ಯಬಾಹೋಸ್ತಥಾऽऽಧಿಕ್ಯಂ ದುರ್ಲಕ್ಷಣಮಥೋऽರ್ಜುನೇ ॥ – (೩೦/೧೨೫)

ದೇಹದ ದುರ್ಲಕ್ಷಣಗಳು ಸಾಮಾನ್ಯವಾಗಿ ಸ್ವರೂಪಕ್ಕೆ ಅನ್ವಯಿಸುವಂತಾಗಿದ್ದು, ಅವುಗಳು ಜ್ಞಾನಾನಂದಾದಿಗುಣಗಳಲ್ಲಿನ ನ್ಯೂನತೆಗೆ ಸೂಚಕ ಎಂಬುದಾಗಿ ಅವುಗಳ ಫಲವನ್ನು ಇಲ್ಲಿ ತಿಳಿಸಿರುವರು :

ಜ್ಞಾನಾನಂದಹ್ರಾಸಕರಾ ಹ್ಯೇತೇ ದೋಷಾಃ ಸದಾತನಾಃ ॥ – (೩೦/೧೨೬)

ಈ ಭಾಗದಲ್ಲಿ ಬಂದಿರುವ ನಾರಾಯಣ, ಲಕ್ಷ್ಮಿ ಹಾಗೂ ಋಜುಗಳ ಹಿರಿಮೆಯ ವಿವರ ಶಾಸ್ತ್ರಗಳ ಮಹಾಪ್ರಮೇಯಗಳಲ್ಲಿ ಸೇರಿದೆ :

ಸಮಸ್ತಜೀವರಾಶೌ ತು ದುರ್ಲಕ್ಷಣವಿವರ್ಜಿತೌ ।
ಪೂರ್ಣಚಿತ್ಸುಖಶಕ್ತ್ಯಾದೇರ್ಯೋಗ್ಯೌ ಕೃಷ್ಣಾ ಚ ಮಾರುತಿಃ ॥ ೧೨೭ ॥
ಅನಾದಿದುಃಖಹೀನತ್ವೇ ಸುಖಾಧಿಕ್ಯೇ ಚ ಲಕ್ಷಣಮ್ ।
ರುಗ್ಮಿಣೀಸತ್ಯಭಾಮಾದಿರೂಪಾಯಾಃ ಶ್ರಿಯ ಏವ ತು ॥
ಮುಖ್ಯಂ ತತೋऽಪಿ ಮುಖ್ಯಂ ತು ಸ್ವಾತಂತ್ರ್ಯಾದೇರಶೇಷತಃ ।
ಗುಣರಾಶೇಃ ಪರಂ ಲಿಂಗಂ ನಿತ್ಯಂ ವ್ಯಾಸಾದಿರೂಪಿಣಃ ।
ವಿಷ್ಣೋರೇವ ನ ಚಾನ್ಯಸ್ಯ ಸ ಹ್ಯೇಕಃ ಪೂರ್ಣಸದ್ಗುಣಃ ॥ – (೩೦/೧೨೭-೧೨೯)

ಅಶ್ವಮೇಧಯಾಗದ ವರ್ಣನೆಯ ಭಾಗ ಈ ಕೃತಿಯಲ್ಲಿನ ಅಪೂರ್ವದೀರ್ಘವರ್ಣನೆ–ಗಳಲ್ಲಿ ಒಂದಾಗಿದೆ. ಮತ್ತೊಂದು ರೀತಿಯಲ್ಲಿ ಇಲ್ಲಿ ಉತ್ತಮಯಜ್ಞದ ಲಕ್ಷಣಗಳೆಲ್ಲ ಕ್ರೋಡೀಕೃತವಾಗಿವೆ ಎಂಬುದು ಗಮನಾರ್ಹ :

ತತಃ ಸ ಯಜ್ಞೋ ಯದುವೀರರಕ್ಷಿತೋ ವ್ಯಾಸೋಪದಿಷ್ಟೋ ಮುನಿಭಿಃ ಪ್ರವರ್ತಿತಃ ।
ಅಶೋಭತಾಲಂ ಸಕಲೈರ್ನೃಪೈಶ್ಚ ಸಮಾಗತೈರ್ವಿಪ್ರವರೈಶ್ಚ ಜುಷ್ಟಃ ॥
ಸ ಕೃಷ್ಣಯುಗ್ಭೇನ ಚ ಭಾರ್ಗವೇಣ ತ್ರಿಧಾ ವಿಭಕ್ತೇನ ಪರೇಣ ಪುಂಸಾ ।
ಅಧಿಷ್ಠಿತೋऽಶೋಭತ ವಿಶ್ವಮೇತದ್ವಿಶ್ವಾದಿರೂಪೇಣ ಯಥೈವ ತೇನ ॥
ಯಥಾ ವಿರಿಂಚಸ್ಯ ಪುರಾ ಸ ಯಜ್ಞೋ ಯಥೈವ ಶಕ್ರಸ್ಯ ಶತಕ್ರತುತ್ವೇ ।
ತಥೈವ ಸೋऽಭೂದ್ವಿಧಿಶರ್ವಶಕ್ರಪೂರ್ವೈಃ ಸುರೈರಾವಿರಲಂಕೃತೋऽಧಿಕಮ್ ॥
ನ ದೇವಗಂಧರ್ವಮುನಿಸ್ವಧರ್ಮಮರ್ತ್ಯಾದಿಕೇಷ್ವಾಸ ಸ ಯೋऽತ್ರ ನಾಸ ।
ಸ್ವಲಂಕೃತೈರ್ನಾಕಿಜನೈಃ ಸಕಾಂತೈರರೂಚನ್ನಾಕವದೇತದೋಕಃ ॥
ತತ್ರೈವ ತತ್ರಾನ್ವಿ ಸಸಂಶಯಾನಿ ನಿಃಸಂಶಯಾನ್ಯಾಸುರಲಂ ವಿವಾದೇ ।
ಪರಸ್ಪರೋತ್ಥೇ ಹರಿಣಾ ತ್ರಿರೂಪಿಣಾ ಸಂಸ್ಥಾಪಿತಾನ್ಯಗ್ರ್ಯವಚೋಭಿರುಚ್ಚೈಃ ॥

ಪ್ರಗೀತಗಂಧರ್ವವರಃ ಪ್ರನೃತ್ತಸದಪ್ಸರಾಃ ಸಂತತವಾದಿವಿಪ್ರಃ ।
ವಿವೇಚಯದ್ದೇವನೃಪೌಘ ಏಕೋ ರರಾಜ ರಾಜಾऽಖಿಲಸತ್ಕೃತೂನಾಮ್ ॥
ಸಮಸ್ತದೇವ್ಯಃ ಸಹವಾಸುದೇವ್ಯಃ ಸ್ವಲಂಕೃತಾಃ ಫುಲ್ಲಮುಖಾರವಿಂದಾಃ ।
ವಿಚೇರುರತ್ಯೈವ ಸಹಾಪ್ಸರೋಭಿರ್ನಿಷೇದುರಪ್ಯಚ್ಯುತಸತ್ಕಥಾರಮಾಃ ॥
ನ ವೈ ಮುಮುಕ್ಷುರ್ನ ಬುಭೂಷುರತ್ರ ನ ವೈ ವಿವಿತ್ಸುಶ್ಚ ಕುತೋ ಬುಭುಕ್ಷುಃ ।
ಅಸತ್ಕಾಮಾ ಅಭವನ್ ಕುತಶ್ಚಿತ್ ಪ್ರದಾತರಿ ಪ್ರಾಜ್ಞವರೇऽನಿಲಾತ್ಮಜೇ ॥
ದಿನೇ ದಿನೇ ತತ್ರ ಮಹಾನ್ನಪರ್ವತಾಃ ಸಭಕ್ಷ್ಯಸಾರಾ ರಸವಂತ ಊರ್ಜಿತಾಃ ।
ನದ್ಯಃ ಪಯಃಸರ್ಪಿರಜಸ್ರಪೂರ್ಣಾಃ ಸಮಾಕ್ಷಿಕಾದ್ಯಾ ಅಪಿ ಪಾಯಸಹ್ರದಾಃ ॥
ಹ್ರದಾ ಮಹಾಂತಸ್ತ್ರಿದಶಾದಿಯೋಗ್ಯಾಃ ಸುಯೋಗಯುಕ್ತಾ ಹರಿಚಂದನಾದೇಃ ।
ತಥಾऽಂಜನಾಲಕ್ತಕಮುಖ್ಯಮಂಡನದ್ರವ್ಯಾಗ್ಯವಾಪ್ಯೋ ಮಣಿಕಾಂಚನೋದ್ಭವಾಃ ॥
ಯಥೇಷ್ಟಪಾನಾಶನಭೋಗಶಿಷ್ಟಾಃ ಸಹಸ್ರಶೋ ಮಾರುತಿನಾ ತು ಕಾರಿತಾಃ ।
ಗಂಧಾ ರಸಾದ್ಯಾಶ್ಚ ಸಮಸ್ತಭೋಗಾ ದಿವೀವ ತತ್ರಾಸುರತೀವ ಹೃದ್ಯಾಃ ॥
ನೈತಾದೃಶಃ ಕಶ್ಚನ ಭೂತಪೂರ್ವೋ ಮಖೋ ವಿನಾ ರಾಮವಿರಿಂಚವಜ್ರಿಣಾಮ್ ।
ಮಖಾನಿತಿ ಪ್ರೋಚುರಶೇಷಲೋಕಾ ದೃಷ್ಟ್ವಾ ಮಖಂ ತಂ ಪುರುಷೋತ್ತಮೇರಿತಮ್ ॥
ಸ ಏವಮದ್ಧಾ ಹರಿದೈವತಃ ಕ್ರತುಃ ಪಂಚಾಶ್ವಮೇಧಾತ್ಮಕ ಉಚ್ಚಕಲ್ಪಃ ।
ದಿನೇ ದಿನೇ ಸ್ವರ್ದ್ಧಗುಣೋ ಬಭೂವ ಮುದಾವಹೋ ವತ್ಸರಪಂಚಕತ್ರಯಮ್ ॥

– (೩೦/೧೩೧-೧೪೩)

ಬಳಿಕ ಪಾಂಡವರು ಮಾಡಿದ ಸರ್ವಾರ್ಪಣೆಯ ವಿವರಗಳನ್ನು ನೀಡಿ, ಆ ಯಜ್ಞದ ಅವಭೃಥಕಾಲದಲ್ಲಿ ನಡೆದ ಮುಂಗುಸಿಯ ಕಥೆಯನ್ನು ತಿಳಿಸಿರುವರು. ಆ ಪ್ರಸಂಗದಲ್ಲಿ ಬಂದಿರುವ ಕರ್ಮಫಲದ ಕಾರಣಗಳ ಸಂಗ್ರಹ ಸಾಧಕರ ಪಾಲಿಗೆ ಅತ್ಯಂತ ಉಪಯುಕ್ತವಾದುದು :

ಯದ್ಯಪ್ಯಲ್ಪಧನತ್ಯಕ್ತಂ ವಿತ್ತಂ ಬಹುಫಲಂ ಭವೇತ್ ।
ತಥಾऽಪ್ಯನಂತಫಲದಾಃ ಕರ್ತುರೇವ ಮಹಾಗುಣಾಃ ॥
ಸತಾಂ ಪ್ರೀತಿಶ್ಚ ತತ್ರಾಪಿ ಸದ್ಗುರೋ ಹರಿರೇವ ಹಿ ।
ಪಾರ್ಥೇಭ್ಯೋऽಭ್ಯಧಿಕಃ ಕರ್ತಾ ಸಮೋ ವಾ ಕೋ ಗುಣೈರ್ಭವೇತ್ ॥
ಸತಾಂ ಚ ಪ್ರವರೋ ವಿಷ್ಣುಃ ಸದ್ಭಿರ್ಮುನಿಸುರೈರ್ಯುತಃ ।
ಪ್ರತ್ಯಕ್ಷತಃ ಕಾರಯತಿ ಪಾರ್ಥೈಃ ಪ್ರಿಯತಮೈಶ್ಚ ತೈಃ ॥
ಯಂ ಮಖಪ್ರವರಂ ತಸ್ಯ ಸಮಂ ಕಿಂ ಶುಭಸಾಧನಮ್ ।
ಪಠಂತಿ ಪೈಂಗಿನಶ್ಚೈತಾನ್ಮಂತ್ರಾನನರ್ಥಕಾನಿಹ ॥
ಅವೈಷ್ಣವಕೃತಂ ಕರ್ಮ ಸರ್ವಮಂತವದುಚ್ಯತೇ ।
ಅನಂತಂ ವೈಷ್ಣವಕೃತಂ ತತ್ರ ವರ್ಣಕ್ರಮಾತ್ ಪರಮ್ ॥

ವೈಷ್ಣವೈರಪಿ ಮರ್ತ್ಯೈರ್ಯತ್ಕೃತಂ ಶತಗುಣಂ ತತಃ ।
ಗಾಂಧರ್ವಂ ಕರ್ಮ ತಸ್ಮಾಚ್ಚ ಪಿತೃಭಿರ್ಮುನಿಭಿಸ್ತತಃ ॥
ದೇವಶಕ್ರಶಿವಬ್ರಹ್ಮಕೃತಂ ತಸ್ಮಾತ್ ಕ್ರಮೇಣ ಚ ।
ಶತೋತ್ತರಮಿತಿ ಜ್ಞೇಯಂ ನಾನ್ಯದ್ಬ್ರಹ್ಮಕೃತೋಪಮಮ್ ॥
ವೈಷ್ಣವತ್ವಂ ಕ್ರಮಾದ್ವೃದ್ಧಂ ಬ್ರಹ್ಮಾಂತಂ ಜೀವರಾಶಿಷು ।
ಫಲಾಧಿಕ್ಯಂ ಕರ್ಮಣಾಂ ಹಿ ವಿಷ್ಣೋಃ ಪ್ರೀತ್ಯೈವ ನಾನ್ಯಥಾ ॥– (೩೦/೧೬೫-೧೭೨)

ಇದರೊಂದಿಗೆ ಧರ್ಮರಾಜನ ಪ್ರಾರ್ಥನೆಯಂತೆ ಕೃಷ್ಣ ತಿಳಿಸಿದ ಧರ್ಮಸರ್ವಸ್ವದ ಸಂಗ್ರಹ ಅಶ್ವಮೇಧಪರ್ವದ ಕೊನೆಯಲ್ಲಿ ಬಂದಿದ್ದು ಅದರ ಉಲ್ಲೇಖವನ್ನು ಇಲ್ಲಿ ಹೀಗೆ ಮಾಡಲಾಗಿದೆ :

ಅಥ ಪೃಷ್ಟೋ ವಾಸುದೇವಃ ಸುರವಿಪ್ರಾದಿಸಂಸದಿ ।
ಯುಧಿಷ್ಠಿರೇಣ ಸಂಹೃಷ್ಟೋ ಜಗಾದಾಶೇಷತಃ ಪ್ರಭುಃ ॥
ತೇ ಚ ಶ್ರುತ್ವಾಽಖಿಲಾನ್ ಧರ್ಮಾನ್ ಭಕ್ತ್ಯಾ ಪರಮಯಾ ಯುತಾಃ ।
ಪೂಜಯಂತೋ ಜಗನ್ನಾಥಮಾಪುಶ್ಚ ಪರಮಾಂ ಮುದಮ್॥–(೩೦/೧೭೪,೧೭೫)

ಹೀಗೆ ಈ ಅಧ್ಯಾಯ ಬಗೆಬಗೆಯ ಧರ್ಮಸೂಕ್ಷ್ಮಗಳ ವಿವರಗಳಿಂದ ತುಂಬಾ ಅಪೂರ್ವವೆನ್ನಿಸಿದೆ.

ಮೂವತ್ತೊಂದನೆಯ ಅಧ್ಯಾಯ (ಶ್ಲೋಕಸಂಖ್ಯೆ : ೭೧)

ಪಾಂಡವರ ಮಂದುವರೆದ ರಾಜ್ಯಭಾರ, ಮಧ್ಯರಾತ್ರಿಯಲ್ಲಿ ಬ್ರಾಹ್ಮಣನೊಬ್ಬ ಯಜ್ಞಕ್ಕೋಸ್ಕರ ದ್ರವ್ಯವನ್ನು ಯಾಚಿಸಲೆಂದು ಬಂದಾಗ ಧರ್ಮರಾಜ ಬೆಳಿಗ್ಗೆ ಕೊಡುವೆ ಎನ್ನುವುದು, ಆ ವಿಪ್ರ ಭೀಮನ ಬಳಿಗೆ ತೆರಳಿ ಬೇಡಿದಾಗ ಭೀಮು ತನ್ನ ಅನರ್ಘ್ಯಹಸ್ತಾಭರಣವನ್ನೇ ನೀಡುವುದು, ಬಳಿಕ ಭೀಮು ಮಾಡಿಸಿದ ನಂದಿಘೋಷ, ಮನುಷ್ಯದೇಹದಲ್ಲಿದ್ದೂ 'ನಾಳೆ ಕೊಡುವೆ' ಎನ್ನುವ ಮೂಲಕ ತನ್ನ ಆಯುಷ್ಯದ ಬಗ್ಗೆ ಹಾಗೆ ಭರವಸೆ ಹೊಂದಿದ್ದ ಧರ್ಮರಾಜನ ರೀತಿಯ ಬಗ್ಗೆ ಭೀಮಸೇನ ಮಾಡಿದ ವಿಮರ್ಶೆ ಎಂದು ಅದರ ಹಿನ್ನೆಲೆಯನ್ನು ತಿಳಿದ ಯುಧಿಷ್ಠಿರ ಭೀಮು ನೀಡಿದ ಎಚ್ಚರಿಕೆಯನ್ನು ಸ್ವಾಗತಿಸಿ, ಅಂದಿನಿಂದ ಇನ್ನೂ ಹೆಚ್ಚಾಗಿ ಧರ್ಮಪರನಾದದ್ದು, ವಿಷಯ–ಲೋಲುಪನಾದ ಧೃತರಾಷ್ಟ್ರನನ್ನು ಎಚ್ಚರಿಸಲೆಂದು ಅವನಿಗೆ ವೈರಾಗ್ಯ ಹುಟ್ಟಿಸುವಂತಹ ಕಾರ್ಯಗಳನ್ನು ಭೀಮಸೇನ ಮಾಡಿದ್ದು, ಅದರ ಆಂತರ್ಯವನ್ನು ತಿಳಿಯದೆ ಭೀಮನ ಬಗ್ಗೆ ಅಪ್ರೀತನಾದ ಧೃತರಾಷ್ಟ್ರನಿಗೆ ವಿದುರ ಅವನ ತಪ್ಪನ್ನು ವಿವರಿಸಿ, ಭೀಮನೇ ನಿಜವಾದ ಹಿತೈಷಿ ಎಂಬುದನ್ನು ನಿರೂಪಿಸಿದ್ದು, ಆಗ ತನ್ನ ತಪ್ಪಿನ ಅರಿವಾಗಿ ವೈರಾಗ್ಯಭಾವವನ್ನು ಹೊಂದಿ ವನಕ್ಕೆ ತೆರಳಿ

ತಪಸ್ಸನ್ನಾಚರಿಸಿ ದೋಷಮುಕ್ತನಾಗಲೆಂದು ಉಪವಾಸವನ್ನು ಕೈಗೊಂಡು ಯುಧಿಷ್ಠಿರನಿಂದ ಅನುಮತಿ ಪಡೆಯಬಯಸಿದ್ದು, ಆಗ ವ್ಯಾಸರು ಆಗಮಿಸಿ ಯುಧಿಷ್ಠಿರನಿಗೆ ತಿಳಿಹೇಳಿ, ಧೃತರಾಷ್ಟ್ರನಿಗೆ ಅನುಮತಿ ನೀಡಲು ಆದೇಶಿಸಿದ್ದು, ಅನುಮತಿ ಪಡೆದ ಧೃತರಾಷ್ಟ್ರ ಧರ್ಮರಾಜನಿಗೆ ರಾಜನೀತಿಯನ್ನು ಉಪದೇಶಿಸಿದ್ದು, ಧರ್ಮರಾಜ ಅದನ್ನು ವಿನಯದಿಂದ ಕೇಳಿದ್ದು, ವನಕ್ಕೆ ತೆರಳುವ ಮುನ್ನ ಶ್ರಾದ್ಧಕಾರ್ಯಕ್ಕೆಂದು ಧೃತರಾಷ್ಟ್ರ ಬಯಸಿದ ಧನವನ್ನು ನೀಡಲು ಭೀಮ ನಿರಾಕರಿಸಿದ್ದು, ಧರ್ಮರಾಜಾದಿಗಳು ತಮ್ಮ ಪಾಲಿನ ಧನವನ್ನು ನೀಡಿ ಧೃತರಾಷ್ಟ್ರನಿಗೆ ನೆರವಾದದ್ದು, ವಿದುರನಿಂದ ಭೀಮನ ಪರಿಶುದ್ಧಧರ್ಮನಿಷ್ಠೆಯನ್ನು ಕೇಳಿ ಧೃತರಾಷ್ಟ್ರ ಸಂತುಷ್ಟನಾದದ್ದು, ಹತ್ತು ದಿನಗಳ ಕಾಲ ನಿರಂತರ ಶ್ರಾದ್ಧಕಾರ್ಯವನ್ನು ಪೂರೈಸಿ, ಧೃತರಾಷ್ಟ್ರ ಪ್ರಜೆಗಳ ಮುಂದೆ ತನ್ನ ಮಕ್ಕಳ ಪರವಾಗಿ ಕ್ಷಮೆ ಯಾಚಿಸಿ, ಗಾಂಧಾರೀ ವಿದುರ ಸಂಜಯರೊಂದಿಗೆ ವನಕ್ಕೆ ತೆರಳಿದ್ದು, ಕುಂತಿ ಅವರನ್ನು ಹಿಂಬಾಲಿಸಿ ನಡೆದದ್ದು, ಕುರುಕ್ಷೇತ್ರದ ವ್ಯಾಸಾಶ್ರಮದಲ್ಲಿ ಧೃತರಾಷ್ಟ್ರಾದಿಗಳು ನೆಲೆಸಿದ್ದು, ಪಾಂಡವರೊಮ್ಮೆ ಅವರನ್ನು ನೋಡಲೆಂದು ತೆರಳಿದ್ದಾಗ, ವಿದುರ ದೇಹ ತೊರೆದು ಯುಧಿಷ್ಠಿರನಲ್ಲಿ ಐಕ್ಯ ಹೊಂದಿದ್ದು, ವ್ಯಾಸರು ಬೇಡಿದ್ದನ್ನು ಕೊಡುವ ವರವನ್ನು ನೀಡಿದಾಗ, ಧೃತರಾಷ್ಟ್ರ ಗಾಂಧಾರಿಯರು ಕುರುಕ್ಷೇತ್ರಸಮರದಲ್ಲಿ ಮಡಿದವರನ್ನೆಲ್ಲ ಕಾಣಬಯಸಿದ್ದು, ಅದರಂತೆ ಸಮಸ್ತರನ್ನೂ ಶ್ರೀವ್ಯಾಸರು ಅವರವರ ಲೋಕದಿಂದ ಕರೆಸಿ ತೋರಿಸಿದ್ದು, ಹಾಗೆ ಬಂದವರೊಂದಿಗೆ ವ್ಯಾಸರ ಆದೇಶದಂತೆ ಅವರ ಪತ್ನಿಯರೆಲ್ಲ ಗಂಗೆಯಲ್ಲಿ ದೇಹ ತೊರೆದು ಹಿಂಬಾಲಿಸಿದ್ದು, ಇದನ್ನು ಕೇಳಿ ಜನಮೇಜಯ ರಾಜ ತನ್ನ ತಂದೆ ಪರೀಕ್ಷಿದ್ರಾಜನನ್ನು ತೋರಿಸಲು ಕೇಳಿಕೊಂಡಿದ್ದು, ವ್ಯಾಸರು ಅವನ ಅಪೇಕ್ಷೆಯನ್ನು ಪೂರೈಸಿದಾಗ ಜನಮೇಜಯ ಭಾರತದಲ್ಲಿ ಅಪಾರವಿಶ್ವಾಸವನ್ನು ಹೊಂದಿದ್ದು, ಮುಂದೆ ಧೃತರಾಷ್ಟ್ರ ಗಾಂಧಾರಿ ಕುಂತಿಯರು ಕಾಳ್ಗಿಚ್ಚಿನಲ್ಲಿ ದೇಹ ತೊರೆದದ್ದು, ವಿಷಯ ತಿಳಿದ ಪಾಂಡವರು ಅವರಿಗೆಲ್ಲ ಊರ್ಧ್ವದೈಹಿಕಕಾರ್ಯಗಳನ್ನೆಲ್ಲ ಪೂರೈಸಿ ಸದ್ಗತಿಗೆ ನೆರವಾದದ್ದು, ಸಂಜಯ ಬಳಿಕ ವೇದವ್ಯಾಸರ ಬಳಿ ತೆರಳಿ ಉತ್ತಮಲೋಕವನ್ನು ಪಡೆದದ್ದು, ಆ ವೇಳೆಗೆ ಪಾಂಡವರ ಹದಿನೆಂಟು ವರ್ಷಗಳ ಆಳ್ವಿಕೆ ಪೂರೈಸಿದ್ದು — ಇವು ಈ ಅಧ್ಯಾಯದಲ್ಲಿನ ಮುಖ್ಯವಿಷಯಗಳು.

ಬ್ರಾಹ್ಮಣನ ಪ್ರಸಂಗದಿಂದ ಆರಂಭವಾಗುವ ಈ ಅಧ್ಯಾಯದಲ್ಲಿ ಮುಂದೆ ಧೃತರಾಷ್ಟ್ರನ ಬಗ್ಗೆ ಭೀಮ ಹೊಂದಿದ ಅನುಕಂಪದ ಬಗ್ಗೆ ವಿವರವನ್ನು ನೀಡುವ ಅಪೂರ್ವಶ್ಲೋಕ ಹೀಗಿದೆ :

ಅಥಾಂಬಿಕೇಯಂ ವಿಷಯೇಷು ಸಕ್ತಂ ದುಃಸಂಗದುಷ್ಟಂ ಕೃತಭೂರಿದೋಷಮ್ ।
ಸಮಸ್ತರಾಜಾಪ್ಯಯಹೇತುಭೂತಂ ವಿಚಾರ್ಯ ತಂ ಮಾರುತಿರನ್ವಕಂಪತ ॥ – (೩೧/೬)

ವ್ಯಾಸರು ಆಗಮಿಸಿ ಯುಧಿಷ್ಠಿರನಿಗೆ ಧೃತರಾಷ್ಟ್ರನ ತಪಸ್ಸಿಗೆ ಅನುಮತಿ ನೀಡಲೆಂದು ತಿಳಿಸಿದ ಮಾತು ಭೀಮನ ವಿಚಾರಕ್ಕೆ ಅವರು ವ್ಯಕ್ತಪಡಿಸಿದ ಸಹಮತಕ್ಕೆ ಶ್ರೇಷ್ಠನಿದರ್ಶನ :

ಸರ್ವಜ್ಞಃ ಸರ್ವಕರ್ತೇಶ ಆವಿರ್ಭೂತೋಽಬ್ರವೀನ್ನೃಪಮ್ ॥
ತಪಸಾ ಸರ್ವದೋಷಾಣಾಂ ಕ್ಷಯಕಾಮಮಿಮಂ ನೃಪಮ್ ।
ಅನುಜಾನೀಹಿ ನೈವಾಸ್ಯ ಧರ್ಮವಿಘ್ನಕರೋ ಭವ ॥
ಕಾಲೇ ನಿರ್ವೇದಮಾಪನ್ನಸ್ತಪಸಾ ದಗ್ಧಕಿಲ್ಬಿಷಃ ।
ಶುಭಾಂ ಗತಿಮಯಂ ಯಾಯಾದನ್ಯಥಾ ನ ಕಥಂಚನ ॥ – (೩೧/೨೫-೨೭)

ಭೀಮು ಧೃತರಾಷ್ಟ್ರ ಶ್ರಾದ್ಧಕಾರ್ಯಕ್ಕೆಂದು ಬಯಸಿದ ಹಣವನ್ನು ನೀಡದೆ, ತನ್ನ ಧರ್ಮಪ್ರಜ್ಞೆಯನ್ನು ಮೆರೆದದ್ದನ್ನು ವಿವರಿಸಿದ ಮಾತುಗಳು ಹೀಗಿವೆ :

ತಮಾಹ ಭೀಮಃ ಪಾಪಾನಾಂ ವಿಮುಖಾನಾಂ ಮಧುದ್ವಿಷಃ ॥
ಪಾರಲೌಕಿಕಸಾಹಾಯ್ಯಂ ನ ಕಾರ್ಯಮಿತರಾರ್ಥತಃ ।
ದತ್ತೇನಾಪಿ ಹಿ ವಿತ್ತೇನ ಪುತ್ರಶ್ರಾದ್ಧಂ ಕರಿಷ್ಯತಿ ।
ತಜ್ಜ್ಞಾತ್ವಾ ದದತಾಂ ದೋಷೋ ಭವೇದಿತಿ ವಿಚಿಂತಯನ್ ॥
ಕಷ್ಟಾತ್ ಕಷ್ಟತರಂ ಯಾಂತು ಸರ್ವೇ ದುರ್ಯೋಧನಾದಯಃ ॥ – (೩೧/೩೧-೩೩)

ವನಕ್ಕೆ ತೆರಳುತ್ತಾ ಧೃತರಾಷ್ಟ್ರ ಪಟ್ಟಣಿಗರ ಮುಂದೆ ಕ್ಷಮೆಯಾಚಿಸುತ್ತಾ ಆಡಿದ ಮಾತುಗಳು ದುರ್ಯೋಧನಾದಿಗಳ ದುರ್ವರ್ತನೆಯ ಬಗ್ಗೆ ಹಿಡಿದ ಕನ್ನಡಿಯಂತಿವೆ :

ಧರ್ಮತೋ ರಕ್ಷಿತಾ ಯೂಯಮಸ್ಮತ್ಪೂರ್ವೈರ್ಮಹಾತ್ಮಭಿಃ ।
ನ ಚಾಹಂ ಪರಮಸ್ನೇಹಾದ್ಯುಷ್ಮಾಭಿಃ ಸುಕೃಪಾಲುಭಿಃ ।
ಅರಕ್ಷಿತೇತಿ ಕಥಿತಃ ಪ್ರಮಾದಾದಪಿ ಸಜ್ಜನಾಃ ॥
ಇಷ್ಟಂ ಚ ಯಜ್ಞೈಃ ಪೂರ್ತೈಶ್ಚ ಚರಿತಂ ಯುಷ್ಮದಾಶ್ರಯಾತ್ ।
ಪುತ್ರಸ್ತು ಮಮ ಪಾಪಾತ್ಮಾ ಸರ್ವಕ್ಷತ್ರವಿನಾಶಕಃ ।
ಸರ್ವಾತಿಶಂಕೀ ಮೂಢಶ್ಚ ವೃದ್ಧಾನಾಂ ಶಾಸನಾತಿಗಃ ॥
ಸೌಭ್ರಾತ್ರಂ ಯೇನ ಸಂತ್ಯಜ್ಯ ಪಾಂಡವೇಷು ಮಹಾತ್ಮಸು ।
ಕೃತಂ ವಿರೂಪಂ ಸುಮಹತ್ ಕುರ್ಯಾದನ್ಯಾಪರಃ ಕ್ವಚಿತ್ ॥
ಅಪ್ರಿಯಾಣಿ ಚ ಕೃಷ್ಣಸ್ಯ ಸುಬಹೂನ್ಯಾಚರತ್ ಕುಧೀಃ ।
ಪ್ರಾಯಶ್ಚೇನಾಪಿ ಮಂದೇನ ಯುಷ್ಮಾಸ್ವಪ್ಯಶಿವಂ ಕೃತಮ್ ॥
ಭ್ರಾತರೋಽಸ್ಯ ಚ ಸರ್ವೇಽಪಿ ತಚ್ಛೀಲಮನುವರ್ತಿನಃ ।
ಹತಾಶ್ಚ ಸ್ವೇನ ಪಾಪೇನ ಸಸುತಾಮಾತ್ಯಬಾಂಧವಾಃ ॥ – (೩೧/೪೪-೪೮)

ಮುಂದೆ ಧೃತರಾಷ್ಟ್ರನ ಅಪೇಕ್ಷೆಯಂತೆ ಶ್ರೀವೇದವ್ಯಾಸರು ಕುರುಕ್ಷೇತ್ರಸಮರದಲ್ಲಿ ಮಡಿದವರನ್ನೆಲ್ಲ ಮರಳಿ ತೋರಿಸಿದ ವಿವರ, ಜನಮೇಜಯರಾಜನಿಗೆ ಮಾತ್ರವಲ್ಲದೆ, ಅದನ್ನು ಕೇಳುವ ಸಕಲರಿಗೂ ಮಹಾಭಾರತದಲ್ಲಿ ಶ್ರದ್ಧಾಭಕ್ತಿಗಳನ್ನು ವಿಶೇಷವಾಗಿ ಹೆಚ್ಚಿಸುವಂತಿದೆ :

ತತಸ್ತು ತೇ ಸತ್ಯವತೀಸುತಸ್ಯ ಸರ್ವೇಶ್ವರಸ್ಯಾಜ್ಞಯಾ ಸರ್ವ ಏವ ।
ಸಮಾಗತಾಃ ಸ್ವರ್ಗಲೋಕಾತ್ ಕ್ಷಣೇನ ದತ್ತಾ ಚ ದಿವ್ಯಾ ದೃಗಮುಷ್ಯ ರಾಜ್ಞಃ ।
ಊಷುಶ್ಚ ರಾತ್ರಿಂ ಪರಮಾಜ್ಞಯೈವ ಸರ್ವೇ ಸ್ವಭಾರ್ಯಾಸಹಿತಾ ಯಥಾ ಪುರಾ ॥
ತೃಪ್ತಃ ಸದಾರೋ ನೃಪತಿಶ್ಚ ತತ್ರ ಸರ್ವೇಽಪಿ ದೃಷ್ಟ್ವಾ ಮಹದದ್ಭುತಂ ತತ್ ।
ಅಥಾಜ್ಞಯೈವಾಸ್ಯ ಪರಸ್ಯ ಸರ್ವಾಃ ಸ್ತ್ರಿಯೋ ನಿಜೇಶೈಃ ಸಹಿತಾ ಯಯುಃ ಸ್ವಃ ॥
ಏನೋತ್ತರಾಂ ತಾಂ ತು ಕಥಾಂ ನಿಶಮ್ಯ ಪಾರೀಕ್ಷಿತೋಽಯಾಚತ ತಾತದೃಷ್ಟಿಮ್ ।
ತಂ ಚಾನಯಾಮಾಸ ತದೈವ ಕೃಷ್ಣೋ ಹ್ಯಚಿಂತ್ಯಶಕ್ತಿಃ ಸ ವಿಕುಂಠಲೋಕಾತ್ ॥
ದೃಷ್ಟ್ವೈವ ಪಾರೀಕ್ಷಿತ ಆಪ ತುಷ್ಟಿಂ ಸ್ವತಾತಮೀಶೇನ ಸಮಾಹೃತಂ ಪುನಃ ।
ಸಂಪೂಜ್ಯ ತಂ ಕೃಷ್ಣಮಪೀಶವಂದ್ಯಂ ಕ್ಷಮಾಪಯಾಮಾಸ ಪರೀಕ್ಷಿದಾತ್ಮಜಃ ।
ಚಕ್ರೇ ಚ ವಿಸ್ರಂಭಮತೀವ ಭಾರತೇ ಪುನಶ್ಚ ತತ್ರತ್ಯಜನೈಃ ಸಮೇತಃ ॥

– (೩೧/೬೨-೬೫)

ಮೂವತ್ತೆರಡನೆಯ ಅಧ್ಯಾಯ (ಶ್ಲೋಕಸಂಖ್ಯೆ : ೧೭೫)

ಕೃಷ್ಣ ಕುರುಕ್ಷೇತ್ರದಲ್ಲಿ ಹನ್ನೆರಡು ವರ್ಷಗಳ ಅಪೂರ್ವಯಜ್ಞವೊಂದನ್ನು ಆಚರಿಸಿದ್ದು, ಅದರಲ್ಲಿ ಬ್ರಹ್ಮಾದಿದೇವತೆಗಳೆಲ್ಲ ಸೇವಕರಾಗಿ ಭಾಗವಹಿಸಿದ್ದು, ಅದರಲ್ಲಿ ಭಾಗವಹಿಸಿದ ಜನಗಳಿಗೆ ವಿಶೇಷತತ್ತ್ವಜ್ಞಾನಪ್ರಾಪ್ತಿಯಾದದ್ದು, ಯಾದವರಿಗೆ ಕೃಷ್ಣವಿಪ್ರಶಾಪ ಒದಗಿಸಿದ್ದು, ಕೃಷ್ಣ ಉದ್ಧವನಿಗೆ ಜ್ಞಾನೋಪದೇಶ ಮಾಡಿ ಬದರಿಕಾಶ್ರಮಕ್ಕೆ ಕಳುಹಿಸಿದ್ದು, ಕೃಷ್ಣನ ಆಳ್ವಿಕೆಯಲ್ಲಿ ಕಲಿಯುಗವು ಕೃತಯುಗಕ್ಕಿಂತ ಮಿಗಿಲೆನ್ನಿಸಿದ್ದು, ಬ್ರಹ್ಮಾದಿಗಳ ಪ್ರಾರ್ಥನೆಯಂತೆ ಕೃಷ್ಣ ಪರಂಧಾಮಕ್ಕೆ ತೆರಳಲು ಸಂಕಲ್ಪಿಸಿದ್ದು, ಯಾದವರನ್ನೆಲ್ಲ ಕೃಷ್ಣ ಪ್ರಭಾಸಕ್ಕೆ ಕರೆದೊಯ್ದದ್ದು, ಯಾದವರು ಪರಸ್ಪರ ಹೊಡೆದಾಟದಲ್ಲಿ ದೇಹ ತೊರೆದು ಮೂಲರೂಪ ಸೇರಿದ್ದು, ಬಲರಾಮನ ನಿರ್ಯಾಣ, ಜರಾನಾಮಕ ಬೇಡ ಕೃಷ್ಣನ ಪಾದಕ್ಕೆ ಬಾಣ ಹೊಡೆದದ್ದು, ಕೃಷ್ಣ ಅಸುರ ಮೋಹನಕ್ಕೆಂದು ಕೃತಕದೇಹವನ್ನು ಸೃಷ್ಟಿಸಿ ಹಾಕಿ, ದೇಹ ತೊರೆದಂತೆ ಮಾಡಿದ್ದು, ಪರಂಧಾಮಕ್ಕೆ ತೆರಳುತ್ತಾ ಭೂಲೋಕ, ಸೂರ್ಯಮಂಡಲ, ಶಿವಲೋಕ ಹಾಗೂ ಬ್ರಹ್ಮಲೋಕಗಳಲ್ಲಿ ತನ್ನ ವಿಶೇಷರೂಪಗಳನ್ನು ಇರಿಸಿದ್ದು, ವೈಕುಂಠಲೋಕದಲ್ಲಿ ಮುಕ್ತಪೂಜಿತನಾಗಿ ನೆಲೆಸಿದ್ದು, ವಸುದೇವಾದಿಗಳ ದೇಹತ್ಯಾಗ, ರುಗ್ಮಿಣೀ ಸತ್ಯಭಾಮೆಯರು ಸಹ ಅಸುರಮೋಹನಕ್ಕೆಂದು ದೇಹ ತ್ಯಜಿಸಿದಂತೆ ಮಾಡಿದ್ದು, ಇತರ ಮಹಾಮಹಿಷಿಯರ ದೇಹತ್ಯಾಗ, ಅರ್ಜುನನಿಂದ ಮೃತದೇಹಗಳ ಸಂಸ್ಕಾರ, ದ್ವಾರಕೆಯಿಂದ ಸ್ತ್ರೀಯರೊಂದಿಗೂ, ಬಾಲಕರೊಂದಿಗೂ ಹೊರಟ ಅರ್ಜುನ ಮಾರ್ಗಮಧ್ಯದಲ್ಲಿ ಆಭೀರರಿಂದ ಪರಾಜಿತನಾದದ್ದು, ಕೃಷ್ಣನ ಹದಿನಾರುಸಾವಿರದ ನೂರು

ಪತ್ನಿಯರು ಕೃಷ್ಣಶಾಪದಿಂದಾಗಿ ಮ್ಲೇಚ್ಛವಶರಾದದ್ದು, ಅರ್ಜುನ ದುಃಖಿತನಾಗಿ ವ್ಯಾಸಾಶ್ರಮಕ್ಕೆ ತೆರಳಿ ಅವರ ಮುಂದೆ ತನ್ನ ನೋವನ್ನು ನಿವೇದಿಸಿಕೊಂಡಿದ್ದು, ಅಪಹೃತರಾದ ಕೃಷ್ಣಪತ್ನಿಯರು ಗೋವಿಂದೈಕಾದಶೀವ್ರತವನ್ನಾಚರಿಸಿ, ಸರಸ್ವತೀನದಿಯಲ್ಲಿ ದೇಹ ತೊರೆದದ್ದು, ಅರ್ಜುನ ಕುರುಕ್ಷೇತ್ರಾದಿಗಳಲ್ಲಿ ರಾಜ್ಯವ್ಯವಸ್ಥೆ ಮಾಡಿದ್ದು, ಪಾಂಡವರು ಮಹಾಪ್ರಸ್ಥಾನ ಕೈಗೊಂಡಿದ್ದು, ಕಾಳಿ ದ್ರೌಪದಿಯಲ್ಲಿ ಐಕ್ಯ ಹೊಂದಿದ್ದು, ಅಗ್ನಿಯ ಪ್ರಾರ್ಥನೆಯಂತೆ ಯುಧಿಷ್ಠಿರ ಅರ್ಜುನನಿಂದ ಗಾಂಡೀವವನ್ನು ಸಮುದ್ರದಲ್ಲಿ ಹಾಕಿಸಿದ್ದು, ಮುಂದೆ ಬದರಿಕಾಶ್ರಮದಲ್ಲಿ ದ್ರೌಪದಿ ಮೊದಲಾದವರು ದೇಹವನ್ನು ತೊರೆದದ್ದು, ಅವರ ಋಣಮೋಚನಕ್ಕೆ ಭೀಮಸೇನ ಧರ್ಮರಾಜನಿಂದ ದೋಷಗಳನ್ನು ಹೇಳಿಸಿದ್ದು, ಯುಧಿಷ್ಠಿರ ತನಗೆ ತೋಚಿದ ದೋಷಗಳನ್ನು ಹೆಳಿದ್ದು, ಅವೆಲ್ಲವೂ ವಾಸ್ತವವಾಗಿ ಅವರ ದೇಹತ್ಯಾಗಕ್ಕೆ ಕಾರಣವಾಗಿರಲಿಲ್ಲ, ಭೀಮದ್ರೌಪದಿ–ಯರಿಗಂತೂ ಯಾವ ದೋಷಗಳೂ ಇರಲೇ ಇಲ್ಲ ಎಂಬ ಮುಖ್ಯತತ್ತ್ವ, ತನ್ನೊಂದಿಗೆ ಬಂದ ನಾಯಿಯನ್ನೂ ದೇವರಥದಲ್ಲಿ ಕುಳ್ಳಿರಿಸಕೊಳ್ಳಲು ಧರ್ಮರಾಜ ಬಯಸಿದ್ದು, ಆಗ ನಾಯಿ ರೂಪದಲ್ಲಿದ್ದವನು ಯಮಧರ್ಮನೆಂದು ತಿಳಿದದ್ದು, ಧರ್ಮರಾಜ ದೇವರಥದಲ್ಲಿ ಕುಳಿತು ಸ್ವರ್ಗಕ್ಕೆ ನಡೆದದ್ದು, ಉಪಸ್ವರ್ಗದಲ್ಲಿ ದುರ್ಯೋಧನಾದಿ ದುಷ್ಟರನ್ನು ಕಂಡ ಯುಧಿಷ್ಠಿರ ಕೋಪದಿಂದ ಅವರನ್ನೆಲ್ಲ ನಿಂದಿಸಿದ್ದು, ಬಳಿಕ ಅಂತಹ ಸ್ವರ್ಗ ತನಗೆ ಬೇಕಿಲ್ಲವೆಂದು ತಿಳಿಸಿ, ಭೀಮಾದಿಗಳ ಬಳಿಗೆ ತೆರಳಬಯಸಿದಾಗ ದೇವತೆಗಳು ಅವನಿಗೆ ನರಕದರ್ಶನ ಮಾಡಿಸಿದ್ದು, ಭೀಮಾದಿಗಳಿಗಾಗಿ ತಾನು ಅಲ್ಲಿರಲೂ ಸಿದ್ಧ ಎಂದು ಯುಧಿಷ್ಠಿರ ನುಡಿದಾಗ, ಇಂದ್ರಾದಿದೇವತೆಗಳು ಪ್ರತ್ಯಕ್ಷರಾಗಿ 'ಭೀಮಾದಿಗಳು ಪರಿಶುದ್ಧರು; ಅವರಿಗೆಂದೂ ನರಕದ ಪ್ರಸಕ್ತಿಯೇ ಇಲ್ಲ' ಎಂದು ತಿಳಿಸಿದ್ದು, ಧರ್ಮರಾಜ 'ಅಶ್ವತ್ಥಾಮಾ ಹತಃ' ಎಂದು ನುಡಿಯುವಲ್ಲಿ ಕೃಷ್ಣನ ಮಾತನ್ನು ಶಂಕಿಸಿದ್ದರಿಂದ ಅವನಿಗೆ ಅಂತಹ ನರಕದರ್ಶನ ಆಗಬೇಕಾಯಿತು ಎಂದು ತಿಳಿಸಿದ್ದು, ಅವರ ಮಾತಿನಂತೆ ಯುಧಿಷ್ಠಿರ ಆಕಾಶಗಂಗೆಯಲ್ಲಿ ದೇಹವನ್ನು ತೊರೆದು ತನ್ನ ಮೂಲರೂಪವನ್ನು ಸೇರಹೊರಟಿದ್ದು, ಆಗ ಭೀಮಾದಿಗಳನ್ನೆಲ್ಲ ಅವರ ಮೂಲರೂಪದ ಪಕ್ಕದಲ್ಲೇ ಕಂಡದ್ದು, ದೇವತೆಗಳಿಂದ ದ್ರೌಪದೀರೂಪದ ವಿಶೇಷದ ಬಗ್ಗೆ ತಿಳಿದದ್ದು, ಮುಂದೆ ಸಕಲದೇವಾಂಶರೂ ತಮ್ಮ ಮೂಲರೂಪಗಳನ್ನು ಸೇರಿದ್ದು, ಅಲ್ಲಿಯೂ ಪುನಃ ಕೃಷ್ಣನೊಂದಿಗೆ ವಿಶೇಷವಾಗಿ ಪಾಂಡವರು ವಿಹರಿಸಿದ್ದು, ಮುಂದೆ ಅಸುರರು ಕಲಿಯುಗದಲ್ಲಿ ಅವತರಿಸಿ ಬ್ರಹ್ಮೈಕ್ಯಚಿಂತನೆಯಿಂದ ಅಧೋಗತಿಗೆ ತೆರಳಿದ್ದು, ಅವರಿಂದ ಪ್ರಸಾರವಾದ ದುರ್ಮತದ ನಿಗ್ರಹಕ್ಕೆಂದು ಭೀಮ ಮಧ್ವರೂಪದಿಂದ ಅವತರಿಸಿ ವಿಷ್ಣುತತ್ತ್ವವನ್ನು ಸಾರಿದ್ದು, ಅದೇ ಸಮಯದಲ್ಲಿ ದ್ರೌಪದೀ ಮೊದಲಾದವರು ಅವತರಿಸಿದ್ದು, ಮುಂದೆ ವಾಯು ಬ್ರಹ್ಮನಾಗಿಯೂ, ಭಾರತಿ ಸರಸ್ವತಿಯಾಗಿಯೂ

ಮುಕ್ತಿಗೆ ನಡೆಯುವುದು, ಶ್ರೀವೇದವ್ಯಾಸರಿಂದ ರಕ್ಷಿತವಾದ ತತ್ತ್ವಜ್ಞಾನದ ಪ್ರಭಾವದಿಂದಾಗಿ ಪಾಂಡವರ ಸಂತತಿಯ ಆಳ್ವಿಕೆಯ ಬಳಿಕವೂ ಧರ್ಮಪ್ರಸಾರ ವಿಶೇಷವಾಗಿ ನಡೆದದ್ದು, ಅದರಿಂದಾಗಿ ಅಸುರರೂ ತತ್ತ್ವ ತಿಳಿಯುವಂತಾದದ್ದು, ಅದನ್ನು ತಪ್ಪಿಸಲೆಂದು ದೇವತೆಗಳು ಪ್ರಾರ್ಥಿಸಿದಾಗ ಶ್ರೀಹರಿ ಬುದ್ಧರೂಪದಿಂದ ಅವತರಿಸಿದ್ದು, ಆ ಬುದ್ಧದರ್ಶನದ ಆಪಾತಾರ್ಥದಿಂದ ಮೋಹಿತರಾಗಿ ಅಸುರರು ಪುನಃ ದುರ್ಮಾರ್ಗ ಹಿಡಿದು ಅಧೋಗತಿಗೆ ತೆರಳಿದ್ದು, ಪ್ರಶಾಂತವಿದ್ಯಾ ಎಂಬ ಹೆಸರಿನ ಅದರ ಅಂತರಾರ್ಥದ ವಿವರಣೆ, ಅದನ್ನು ಬುದ್ಧರೂಪದ ಶ್ರೀಹರಿಯಿಂದಲೇ ಕೇಳಿ ದೇವತೆಗಳು ನಲಿದದ್ದು, ಬಳಿಕ ಅವತರಿಸಿದ ಕ್ರೋಧವಶಾದಿಗಳ ವಿನಾಶಕ್ಕೆಂದು ಭೀಮಾವತಾರ– ವಾದದ್ದು, ಮುಂದೆ ವಿಪ್ರಕುಲದಲ್ಲಿ ದುರ್ಗಾವತಾರವಾಗಿ ಅವಳಿಂದ ಅಸುರರ ವಿನಾಶ ನಡೆಯುವುದು, ಕಲಿಯುಗದ ಕೊನೆಯಲ್ಲಿ ಅಧರ್ಮ ಪೂರ್ಣವಿಜೃಂಭಿಸತೊಡಗಿದಾಗ ಬ್ರಹ್ಮಾದಿಗಳ ಪ್ರಾರ್ಥನೆಯಂತೆ ಶ್ರೀಹರಿ ಕಲ್ಕಿಯಾಗಿ ಅವತರಿಸಿ ಸಮಸ್ತದುಷ್ಟರನ್ನೂ ನಾಶ ಮಾಡಿ, ಪುನಃ ಧರ್ಮಮಾರ್ಗವನ್ನು ಪ್ರಚುರ ಪಡಿಸುವುದು – ಈ ಅಧ್ಯಾಯದಲ್ಲಿ ಬಂದಿರುವ ಪ್ರಮುಖವಿಷಯಗಳು.

ಇದರ ಕೊನೆಯಲ್ಲಿ ಈ ಕೃತಿಯನ್ನು ಪೂರ್ಣಪ್ರಜ್ಞ ಎಂಬ ಮತ್ತೊಂದು ಹೆಸರಿನ ಆನಂದತೀರ್ಥರು ಬದರಿಯಲ್ಲಿನ ನಾರಾಯಣದೇವರು ನೀಡಿದ ಆದೇಶದಂತೆ ರಚನೆ ಮಾಡಿದ ವಿವರ, ಅವರ ಸಕಲಶಾಸ್ತ್ರಗಳ ಪರಿಜ್ಞಾನದ ವೈಭವ, ಅವರಿಂದ ರಚಿತವಾದ ಮಹಾಭಾರತ– ತಾತ್ಪರ್ಯನಿರ್ಣಯದ ಮಹಿಮೆ, ವ್ಯಾಸಕೃತಬ್ರಹ್ಮಸೂತ್ರಾದಿಗಳ ಮಹಿಮೆ, ಅವುಗಳ ಅಪವ್ಯಾಖ್ಯಾನಗಳ ನಿರಾಸಕ್ಕೆಂದು ಭಾಷ್ಯಾದಿಗ್ರಂಥಗಳ ರಚನೆ, ಸಕಲಶಾಸ್ತ್ರಗಳ ಸಾರವೂ ಹರಿಸರ್ವೋತ್ತಮತ್ವಪ್ರತಿಪಾದನೆಯೇ ಆಗಿದೆ ಎಂಬ ನಿರೂಪಣೆ, ಮಧ್ವರು ವಾಯುದೇವರ ತೃತೀಯಾವತಾರವೆನ್ನಲು ಶ್ರುತಿಗಳ ಉದಾಹರಣೆ, ಈ ಗ್ರಂಥದಲ್ಲಿನ ಸಕಲವಿವರಗಳೂ ವೇದೇತಿಹಾಸಗಳ ಸುನಿರ್ಣಿತವಿಚಾರಗಳು ಎಂಬ ಘೋಷಣೆ ಮಾಡಿ ಈ ಗ್ರಂಥ ಧರ್ಮಾದಿಮೋಕ್ಷಾಂತಸಕಲಪುರುಷಾರ್ಥಗಳಿಗೆ ಸಾಧನ, ಅದಕ್ಕಿಂತ ಮಿಗಿಲಾಗಿ ವಿಶೇಷವಾಗಿ ನಾರಾಯಣನ ಪ್ರೀತಿಗೆ ಕಾರಣ ಎಂದು ತಿಳಿಸಿ, ತಮ್ಮ ಅವತಾರತ್ರಯಗಳನ್ನು ನಿರೂಪಿಸಿ, ಕೃತಿಯನ್ನು ಶ್ರೀಹರಿಗೆ ಸಮರ್ಪಿಸಿರುವರು.

ಕೃಷ್ಣನ ಅಪೂರ್ವಯಾಗವನ್ನು ವರ್ಣಿಸಿದ ಅನಂತರ ಆರಂಭದ ಭಾಗದಲ್ಲಿ ಯದುಕುಲೋಪಸಂಹಾರಕ್ಕೆ ಕಾರಣವನ್ನು ನೀಡಿ, ಬಳಿಕ 'ಪುಣ್ಯಕ್ಷೇತ್ರವಾಗಿದ್ದರೂ ಸ್ವಗೃಹದಲ್ಲಿ ಮರಣಿಸದೆ, ಮತ್ತೊಂದು ಅಲ್ಪಪುಣ್ಯಕ್ಷೇತ್ರದಲ್ಲಾದರೂ ದೇಹ ತೊರೆಯುವುದೇ ಹೆಚ್ಚು ಪುಣ್ಯಕರ' ಎಂಬ ವಿಶೇಷಾಂಶವನ್ನು ತಿಳಿಸಿರುವರು :

ಪ್ರಾಚುರ್ಯೇ ಸಜ್ಜನಸ್ಯ ಸ್ಯಾನ್ನ ಕಲೇರ್ವೃದ್ಧಿರಂಜಸಾ ।
ಇತಿ ಸ್ವಕುಲಸಂಹೃತ್ಯೈ ಪ್ರಭಾಸಮನಯತ್ ಪ್ರಭುಃ ॥
ಪುಣ್ಯಕ್ಷೇತ್ರೇಽಪಿ ನ ಮೃತಿಃ ಸ್ವಗೃಹೇ ತ್ವತಿಧರ್ಮದಾ ।
ಗತ್ವೈವಾಲ್ಪಮಪಿ ಕ್ಷೇತ್ರಂ ಸ್ಯಾನ್ಮಹತ್ಫಲಮಿತ್ಯಜಃ ॥
ಪ್ರಕಾಶಯಿತುಮೇವೈತಾನ್ ಪ್ರಭಾಸಾಯ ಕುಶಸ್ಥಲಾತ್ ।
ನೀತ್ವಾ ದಾನಾನಿ ಸದ್ಧರ್ಮಾಂಸ್ತೈರಕಾರಯದಚ್ಯುತಃ ॥ – (೩೨/೧೪-೧೬)

ಕೃಷ್ಣ ವಿವಿಧಸ್ಥಳಗಳಲ್ಲಿ ತನ್ನ ರೂಪವನ್ನು ಇರಿಸಿದ ವಿವರ ತುಂಬಾ ಅಪೂರ್ವವಾದುದು :

ಗೋಪಾಲಮಂತ್ರಂ ಭಜತಾಂ ಫಲಪ್ರದೋ ಹ್ಯೇಕೇನ ರೂಪೇಣ ಸ ಭುವ್ಯದೃಶ್ಯಃ ।
ತಸ್ಥೌ ದ್ವಿತೀಯೇನ ಚ ಸೂರ್ಯಮಂಡಲೇ ತೃತೀಯಮಾಸೀಚ್ಛವಪೂಜಿತಂ ವಪುಃ ॥
ಸಂಪೂಜಿತಂ ಬ್ರಹ್ಮಲೋಕೇ ಚತುರ್ಥಂ ಕಂಜೋದ್ಭವೇನಾಥ ಪರಂ ಸ್ವಧಾಮ ।
ಸಮಾಪ್ನುವಾನಂ ವಪುರಸ್ಯ ಪಂಚಮಂ ಭಕ್ತ್ಯಾಽನ್ವಯುರ್ದೇವವರಾಃ ಸ್ವಶಕ್ತ್ಯಾ ॥
– (೩೨/೨೫, ೨೬)

ಕೃಷ್ಣಾವತಾರದಲ್ಲಿ ದೇಹತ್ಯಾಗದ ಭ್ರಾಂತಿಯನ್ನು ಹುಟ್ಟಿಸಿದಕ್ಕೆ ವಿಶೇಷಕಾರಣವನ್ನು ಇಲ್ಲಿ ಹೇಳಿರುವುದು ಗಮನಾರ್ಹ :

ಯತೋ ನ ದರ್ಶಿತಾ ಭ್ರಾಂತಿಃ ಪ್ರಾದುರ್ಭಾವೇಷ್ವಪಿ ಕ್ವಚಿತ್ ।
ದೇಹತ್ಯಾಗಾನುಕಾರೇಣ ಹರಿಣಾ ತದಿಹಾಚ್ಯುತಃ ॥
ಮೋಹಯಿತ್ವಾಽಸುರಾನಂಧಂತಮಃ ಪ್ರಾಪಯಿತುಂ ಪ್ರಭುಃ ।
ಚಿದಾನಂದೈಕದೇಹೋಽಪಿ ತ್ಯಕ್ತಂ ದೇಹಮಿವಾಪರಮ್ ॥
ಸೃಷ್ಟ್ವಾ ಸ್ವದೇಹೋಪಮಿತಂ ಶಯಾನಂ ಭುವ್ಯಗಾದ್ದಿವಮ್ ॥ – (೩೨/೩೧-೩೩)

ಮೃತಿಕಾಲದಲ್ಲಿ ದೋಷ ಹೇಳುವವರಿಗೆ ಮೃತನ ಋಣದಿಂದ ಪರಿಹಾರ ಎಂಬ ವಿಶೇಷಾಂಶ ಇದರಲ್ಲಿದೆ :

ಮೃತಿಕಾಲೇ ಹಿ ಯೋ ಯಸ್ಯ ದೋಷಂ ವಕ್ತ್ಯೃಣಮೋಚನಮ್ ।
ತಸ್ಮಾತ್ ಸ್ಯಾದುಕ್ತದೋಷಸ್ಯೇತ್ಯಾಹ ಯಚ್ಚ್ರುತಿರೇವ ತತ್ ।
ಋಣಮೋಕ್ಷಾಯ ಸರ್ವೇಷಾಂ ಭೀಮೋ ದೋಷಾನವಾದಯತ್ ॥ – (೩೨/೬೪)

ವಾಸ್ತವವಾಗಿ ವಿಶೇಷವಾಗಿ ಪಾಂಡವರು ಇಚ್ಛಾಮರಣಿಗಳು ಎಂದು ಇಲ್ಲಿ ನಿರೂಪಿತವಾಗಿದೆ :

ಸ್ವಚ್ಛಂದಮೃತ್ಯವೋ ಯೋಗಾದ್ದೇಹಾನುತ್ಸೃಜ್ಯ ಪಾಂಡವಾಃ ।
ಕೃಷ್ಣಾ ಚಾಪುಃ ಪರಂ ಸ್ಥಾನಂ ಯನ್ನ ಯಾಂತ್ಯಪಿ ದೇವತಾಃ ।

ಇತಿ ಶ್ರುತೇರ್ನ ತೇ ಪಾಪಾದ್ದೇಹಾಂಸ್ತತ್ಯಜುರೂರ್ಜಿತಾಃ ॥
ಋಣಾನ್ಮುಚ್ಯ ದೋಷೋಕ್ತ್ಯಾ ಸ್ವಾನಾಂ ಭೀಮಃ ಸ್ವಕಾಂ ತನುಮ್ ।
ತತ್ಯಾಜ ಪರಮಂ ಧ್ಯಾಯನ್ನಾಪ ಚ ಸ್ಥಾನಮುತ್ತಮಮ್ ।
ಇತಿ ಸ್ಕಂದಪುರಾಣೋಕ್ತಂ ವ್ಯಾಸವಾಕ್ಯಮೃಷೀನ್ ಪ್ರತಿ ॥ – (೩೨/೬೬-೬೭)

ಅರ್ಜುನಾದಿಗಳ ದೋಷ ಅವರ ದೇಹತ್ಯಾಗಕ್ಕೆ ಕಾರಣವಾಗಲಿಲ್ಲ; ಭೀಮದ್ರೌಪದಿ–ಯರಿಗಂತೂ ಯಾವ ದೋಷಗಳೂ ಇಲ್ಲ ಎಂಬ ಮತ್ತೊಂದು ವಿಶೇಷಾಂಶ ಇಲ್ಲಿ ಬಂದಿದೆ :

ಭೀಮಾದೃತೇ ಹಿ ಚತುರ್ಷು ಪಕ್ಷಪಾತಸ್ತು ವಾಸವೌ ।
ಯೋಗ್ಯ ಏವೇತಿ ಕೃಷ್ಣಾಯಾ ನ ದೋಷಃ ಸ್ಯಾತ್ ಕಥಂಚನ ॥
ನೀತಿರೂಪೇ ವೀರ್ಯಬಲೇ ಮಹಾಂತ್ಯೇಷಾಂ ಯತಃ ಕ್ರಮಾತ್ ।
ಪ್ರಾಣತ್ವಾದ್ಯೋಗಶಕ್ತಿಶ್ಚ ನ ಹಿ ದೋಷಾಯ ಮಾರುತೇಃ ॥
ಯಥಾಸ್ವರೂಪವಿಜ್ಞಾನಮಾತ್ಮನ್ಯಪಿ ನ ದೋಷಕೃತ್ ।
ಇತಿ ವ್ಯಾಸಸ್ಮೃತೇರೇಷಾಮುಕ್ತದೋಷೋದ್ಭವಃ ಕಥಮ್ ॥
ಕದಾಚಿದತಿಮಾನೋಽಪಿ ತ್ರಯಾಣಾಮೇಷು ಜಾಯತೇ ।
ತಥಾಽಪಿ ತತ್ಫಲಂ ನೈತತ್ ತಾರತಮ್ಯಂ ಹಿ ಮುಕ್ತಿಗಮ್ ॥
ಗುಣದೋಷಾಧಿಕಾಲ್ಪತ್ವಾದತ್ರಸ್ಥಮಪಿ ಹಿ ಶ್ರುತಮ್ ।
ಪ್ರಾರಬ್ಧಕರ್ಮನಾಶೇ ಹಿ ಪತೇದ್ದೇಹೋಽಪ್ಯಪಾಪಿನಃ ॥
ಯುಧಿಷ್ಠಿರೋಽಪಿ ಹಿ ಸ್ವರ್ಗಂ ಬುಭುಜೇ ನೈವ ತತ್ತನುಃ ।
ಅತಿಮಾನಾದಯೋ ದೋಷಾಃ ಕುತ ಏವ ಹಿ ಮಾರುತೇಃ ॥
ಅನಾದಿಕಾಲತಃ ಸರ್ವದೋಷಹೀನಾ ಗುಣಾಧಿಕಾಃ ।
ಸರ್ವಜೀವಗಣೇಭ್ಯೋ ಯೇ ತೇ ಹಿ ವಾಯುತ್ವಮಾಪ್ನುಯುಃ ।
ಋಜವೋ ನಾಮ ಯೇ ದೇವಾ ದೇವಾನಾಮಪಿ ದೇವತಾಃ ॥
ಅಭಾವಂ ಹ್ಯತಿಮಾನಾದೇರ್ಭೀಮಸ್ಯಾಹ ಚ ಕೇಶವಃ ॥
ಯತ್ಕಿಂಚಾತ್ಮನಿ ಕಲ್ಯಾಣಂ ಸಂಭಾವಯಸಿ ಪಾಂಡವ ।
ಸಹಸ್ರಗುಣಮಪ್ಯೇತತ್ ತ್ವಯಿ ಸಂಭಾವಯಾಮ್ಯಹಮ್ ॥
ಇತಿ ತಸ್ಮಾದ್ಯಥಾ ಯುದ್ಧೇ ಧರ್ಮಹಾನಿಮಮನ್ಯತ ।
ಏವಮತ್ರಾಪ್ಯಧರ್ಮೇಣ ದೇಹಪಾತಂ ನೃಪೋಽಬ್ರವೀತ್ ॥
ಪೂಜ್ಯೇಭ್ಯಃ ಪೂರ್ವಮೇವೈಷಾಂ ದೇಹಪಾತಮಭೀಪ್ಸತಾಮ್ ।
ತತ್ಕ್ರಮಾತ್ ದೇಹಪಾತೋಽಭೂನ್ನ ಪಾಪಾನ್ಮುಚ್ಯತಾಂ ಯಥಾ ॥
ನ ಹಿ ಪಾಪಫಲಾನ್ಮುಕ್ತೌ ದೇಹಪಾತಃ ಕಥಂಚನ ।
ಕಿಂ ತು ಕರ್ಮಕ್ಷಯಾದೇವ ತಥಾ ಸರ್ವತ್ರ ನಿಶ್ಚಿತಃ ॥ – (೩೨/೬೮-೭೯)

ಉಪಸ್ವರ್ಗದಲ್ಲಿ ದುರ್ಯೋಧನಾದಿಗಳನ್ನು ಕಂಡು ಯುಧಿಷ್ಠಿರ ನುಡಿಯುವ ಮಾತುಗಳು ಅವರ ಬಗ್ಗೆ ಅವನಿಗಿದ್ದ ಸ್ಪಷ್ಟಪರಿಕಲ್ಪನೆಯನ್ನು ಸ್ಫುಟಪಡಿಸುವುದು :

ಇತ್ಯುಕ್ತ ಆಹ ಪಾಪೋಽಯಂ ಪೃಥಿವೀಕ್ಷಯಕಾರಕಃ ।
ಸರ್ವಾತಿಶಂಕೀ ಮಿತ್ರಧ್ರುಙ್ ನಾರಾಯಣಪರಾಙ್ಮುಖಃ ॥
ನಾಸ್ತಿಕೋಽತಿಶಠಃ ಕ್ರೂರೋ ದ್ವೇಷ್ಟಾ ವಿಷ್ಣೋಶ್ಚ ತದ್ಭಾವಾಮ್ ।
ಕಥಂ ದುರ್ಯೋಧನಃ ಸ್ಥಾನಂ ಸರ್ವೋತ್ತಮಮವಾಪ್ತವಾನ್ ॥ –(೩೨/೮೯-೯೦)

ತನ್ನ ಬಂಧುಜನರನ್ನು ಬಿಟ್ಟು ತನಗಾವ ಸ್ವರ್ಗವೂ ಬೇಕಿಲ್ಲ ಎಂದು ಧರ್ಮರಾಜ ನುಡಿಯುವ ಮಾತು ಅವನ ಸಹಜಧರ್ಮಪ್ರಜ್ಞೆಗೆ ಹಿಡಿದ ಕನ್ನಡಿ :

ಆಹ ದೂತಂ ಯಥೇಷ್ಟಂ ತ್ವಂ ಗಚ್ಛ ನಾಹಮಿತೋ ವ್ರಜೇ ।
ನ ಚ ಸ್ವರ್ಗೇಣ ಮೇ ಕಾರ್ಯಂ ತ್ಯಕ್ತ್ವಾ ಸ್ವಜನಮೀದೃಶಮ್ ॥ – (೩/೯೮-೯೯)

ಕೃಷ್ಣನ ಮಾತಿನಲ್ಲಿ ವಿಶ್ವಾಸ ತೋರದ್ದರಿಂದಾಗಿ ಧರ್ಮರಾಜನಿಗೆ ನರಕದರ್ಶನವಾಗ–ಬೇಕಾಯಿತು ಎಂಬುದು ಇಲ್ಲಿಯ ಮತ್ತೊಂದು ವಿಶೇಷಾಂಶ :

ಶಕ್ರೋಽಪ್ಯುವಾಚೈನಮಿದಂ ಮೃಷಾ ತೇ ಪ್ರದರ್ಶಿತಂ ದ್ರೋಣಕೃತೇ ಮೃಷಾ ಗಿರಃ ॥
ಕೃಚ್ಛ್ರಾದಿದಂ ತೇ ಕಥಿತಂ ನ ಚಾತಿವಿಸ್ರಂಭ ಆಸೀತ್ ತವ ಕೃಷ್ಣವಾಕ್ಯೇ ।
ನ ಹ್ಯಜ್ಞಯಾ ವಾಸುದೇವಸ್ಯ ಕಿಂಚಿತ್ ಪಾಪಂ ಭವೇತ್ ಸರ್ವವಿಧರ್ಮಿಣೋಽಪಿ ॥
ಬ್ರಹ್ಮಾಪರಾಕ್ಷ್ಯೇಽಪಿ ವಿಕರ್ಮ ಸೂಚಕಂ ಪ್ರಾರಬ್ಧಪಾಪಸ್ಯ ವಿನಾಶನಂ ಯಥಾ ॥
– (೩೨/೧೦೨-೧೦೪)

ಕಲಿಯುಗದಲ್ಲಿ ಭೀಮ ಮಧ್ವರಾಗಿ ಅವತರಿಸುವ ಉಲ್ಲೇಖ ಅವರ *ಕಾಲನಿರ್ಣಯಕ್ಕೆ ತುಂಬಾ ಉಪಯುಕ್ತವಾದ ಮಾಹಿತಿ. ಭಾರತೀಯ, ಅರ್ಜುನಾದಿಗಳ ಅವತಾರವೂ ಆದ ಉಲ್ಲೇಖ ಇದೇ ಪ್ರಸಂಗದಲ್ಲಿ ಬಂದಿರುವುದು ಗಮನಾರ್ಹ :

ಚತುಃಸಹಸ್ರೇ ತ್ರಿಶತೋತ್ತರೇ ಗತೇ ಸಂವತ್ಸರಾಣಾಂ ತು ಕಲೌ ಪೃಥಿವ್ಯಾಮ್ ।
ಜಾತಃ ಪುನರ್ವಿಪ್ರತನುಃ ಸ ಭೀಮೋ ದೈತ್ಯೈರ್ನಿಗೂಢಂ ಹರಿತತ್ತ್ವಮಾಹ ॥
ತದೈವ ಕೃಷ್ಣೋಽಪಿ ಭುವಿ ಪ್ರಜಾತಾ ಪ್ರೀತ್ಯೈ ಹರೇರಂಧತಮಸ್ಯಪಾತಯತ್ ।
ಮಹಾಸುರಾನ್ ವಿಷ್ಣುಪರಾರ್ಜುನಾದ್ಯಾಃ ಕೃತೇ ಪ್ರಜಾತಾ ಹರಿತೋಷಣಾಯ ॥
– (೩೨/೧೨೫-೧೨೬)

---

* ಇದರಂತೆ ಶ್ರೀಮಧ್ವಾಚಾರ್ಯರ ಕಾಲ ಕ್ರಿ.ಶ.೧೨೦೦-೧೨೭೯ ಎಂದಾಗುವುದು. ವಿವರಗಳನ್ನು ನಮ್ಮ ಪ್ರಕಾಶನದ 'ಶ್ರೀಮಧ್ವಾಚಾರ್ಯರ ಕಾಲನಿರ್ಣಯ' ಎಂಬ ಕೃತಿಯ ದ್ವಿತೀಯಾವೃತಿಯಲ್ಲಿನೋಡಬಹುದು.

ಬಳಿಕ ದುರ್ಜನರಿಗೂ ಜ್ಞಾನ ಲಭಿಸಲು ಕಾರಣಗಳು, ಅದರಲ್ಲಿರುವ ಅನೌಚಿತ್ಯ ಹಾಗೂ ಅದರ ನಿವಾರಣೆಗೆಂದು ಶ್ರೀಹರಿ ವಹಿಸಿರುವ ಕಾರ್ಯಗಳ ಬಗ್ಗೆ ವಿವರಗಳು ಈ ಪ್ರಸಂಗದಲ್ಲಿ ಬಂದಿದೆ :

ಉತ್ಪಾದಿತತ್ವಾತ್ ತು ದುರಾಗಮಾನಾಂ ತತ್ಸಂಪ್ರದಾಯಸ್ಯ ಚ ನಾಶಿತತ್ವಾತ್ ।
ಪ್ರಸಾರಿತತ್ವಾಚ್ಚ ಸದಾಗಮಾನಾಂ ಪಾಪಾ ಅಪಿ ಜ್ಞಾನಮವಾಪುರೇತತ್ ॥
ಶುನಾ ಪುರೋಡಾಶಮಿವಾವಲೀಢಂ ವೇದಶ್ರುತಿಂ ವಾಽಂತ್ಯಜನೈರವಾಪ್ತಾಮ್ ।
ಅನಂತದುಃಖಾಪ್ತಿಸುಯೋಗ್ಯದೈತ್ಯೈರ್ವಿದ್ಯಾಮವಾಪ್ತಾಂ ತು ನ ಸೇಹಿರೇ ಸುರಾಃ ॥
ನಾವಾಗ್ಗತಿಃ ಕ್ವಾಪಿ ಸುವೇದಿನಾಂ ಭವೇತ್ ಪ್ರಾಪ್ಯಂ ಸುಖಂ ನಿತ್ಯಮವಶ್ಯಮೇಭಿಃ ।
ಪ್ರಾಪ್ಯಂ ತಮೋಽಂಧಂ ತ್ವಸುರೈರ್ನ ಮುಕ್ತಿಃ ಕದಾಚಿದಾಪ್ಯೇತದಚಿಂತಯನ್ ಸುರಾಃ ॥
ಜ್ಞಾನಪ್ರದಾನಾಯ ಸತಾಂ ತದನ್ಯಜ್ಞಾನಪ್ರಣಾಶಾಯ ಚ ವಿಷ್ಣುನೈತೇ ।
ಕ್ಲೃಪ್ತಾಸ್ತತಸ್ತೇ ಸವಿರಿಂಚಶರ್ವಾ ವಿಜ್ಞಾಪಯಾಮಾಸುರುಪೇತ್ಯ ವಿಷ್ಣುಮ್ ॥

– (೩೨/೧೩೫-೧೩೮)

ಬೌದ್ಧದರ್ಶನದ ಅಂತರಾರ್ಥವನ್ನು ನಿರೂಪಿಸುವ ಶ್ಲೋಕಗಳಂತೂ ವ್ಯಾಖ್ಯಾನಪರಂಪರೆಗೆ ಹೊಸ ತಿರುವನ್ನು ನೀಡುವಷ್ಟು ಅಪೂರ್ವವಾದವುಗಳು :

ಕ್ಷಣಾದಯಃ ಕ್ಷಣಿಕಾಸ್ತದ್ವಿಶೇಷಾ ಯತಃ ಪ್ರಯಾಂತ್ಯೇವ ನಿಸರ್ಗತೋಽಖಿಲಾಃ ।
ತತಃ ಸ್ಥಿರತ್ವೇಽಪಿ ವಿಶೇಷಸಂಶ್ರಯಾದುಕ್ತಂ ಕ್ಷಣಸ್ಥಾಯಿ ಮಯಾ ಸಮಸ್ತಮ್ ॥
ತದ್ವಾನ್ ವಿಶೇಷಶ್ಚ ಯತೋ ನ ಭಿನ್ನೌ ಸದಾ ಸ್ವನಿರ್ವಾಹಕಶಕ್ತಿಯುಕ್ತೌ ।
ಅತಃ ಕ್ಷಣಸ್ಥಾಯಿ ಸಮಸ್ತಮೇತತ್ ಸ್ಥಿರಾತ್ಮಕಂ ಚೇತಿ ಹಿ ನಾಸ್ತಿ ಭೇದಃ ॥
ಜ್ಞೋಽಹಂ ಸದೈಕಃ ಪರಮೋ ಮಯೈತತ್ ಸದಾಽನನೀಯಂ ಹಿ ಯತೋಽಸ್ವತಂತ್ರಮ್ ।
ಜ್ಞಾನಾತ್ಮಕಂ ವಿಶ್ವಮತೋ ಮಯೋಕ್ತಂ ಜಡಸ್ವರೂಪಂ ಚ ಕಿಮು ಸ್ಮ ಚೇತನಮ್ ॥
ಶಂಶೀಲಕೋಽಹಂ ಯತ ಏವ ಚೋಚ್ಚಃ ಶುನಾಮಕಸ್ತದ್ಧಿ ಮಯಾ ನಿಧೇಯಮ್ ।
ಶೂನ್ಯಾಭಧಂ ದೋಷವಿರುದ್ಧರೂಪೋ ದೋಷೋಜ್ಝಿತೋಽನ್ಯಸ್ತ್ವಖಿಲಾದನಾಮಾ ॥
ಏನೈವ ಸಾದ್ಯಂ ತ್ವಸದೇವಮತಸ್ತ್ವಭಾವ ಏನೈವ ಭವೇದ್ಯತಸ್ತತ್ ।
ಇತ್ಯಾದಿ ಬೋದ್ಧವ್ಯಮಿದಂ ಸಮಸ್ತಂ ಮಯೋದಿತಂ ಕ್ವಾಪಿ ನ ಹೇಯಮಸ್ತಿ ॥

– (೩೨/೧೪೮, ೧೫೨)

ಕಲ್ಕ್ಯವತಾರ, ಅದರಿಂದಾದ ಸಾಧನೆಗಳ ವಿವರ ಹೀಗಿದೆ :

ನಾರಾಯಣಸ್ಯೈಃ ಸ್ತುತಿಪೂರ್ವಮರ್ಥಿತೋ ಭವಾಯ ಲೋಕಸ್ಯ ಸ ಶಂಭಲಾಖ್ಯೇ ।
ಗ್ರಾಮೇ ಮುನೇರ್ವಿಷ್ಣುಯಶೋಭಿಧಸ್ಯ ಗೃಹೇ ಬಭೂವಾವಿರಚಿಂತ್ಯಶಕ್ತಿಃ ॥
ಕಲೇಸ್ತು ಕಾತ್ಕಾರತ ಏವ ಕಲ್ಕೀ ಜ್ಞಾನಂ ಕಲಂ ಕಂ ಸುಖಮೇವ ತದ್ವಾನ್ ।
ಕಲ್ಕೀತಿ ವಾ ತೇನ ಸಮಸ್ತದಸ್ಯುವಿನಾಶನಂ ತೇನ ದಿನಾದ್ವ್ಯಧಾಯಿ ॥

ಅಧರ್ಮವೃತ್ತಂ ವಿಮುಖಂ ಹರೇಶ್ಚ ನಿಹತ್ಯ ನಿಃಶೇಷಜನಂ ತುರಂಗೀ ।
ಸಂಸ್ಥಾಪಯಾಮಾಸ ಸುಧರ್ಮಸೇತುಂ ಜ್ಞಾನಂ ಸ್ವಭಕ್ತಿಂ ಚ ನಿಜಪ್ರಜಾಸು ॥

– (೩೨/೧೬೦-೧೬೨)

ಅನಂತರದ ಉಪಸಂಹಾರಶ್ಲೋಕಗಳಲ್ಲಿ ಗ್ರಂಥರಚನೆಯ ಹಿನ್ನೆಲೆಯಿಂದ ಪ್ರಾರಂಭಿಸಿ ಫಲಶ್ರುತಿಯವರೆಗೆ ಅನೇಕವಿಷಯಗಳು ತುಂಬಾ ಪರಿಣಾಮಕಾರಿಯಾಗಿ ನಿರೂಪಿತವಾಗಿವೆ :

ಇತ್ಯಾದ್ಯನಂತಾನಿ ಹರೇರುದಾರಕರ್ಮಾಣಿ ರೂಪಾಣಿ ಚ ಸದ್ಗುಣಾಶ್ಚ ।
ನಿತ್ಯವ್ಯಪೇತಾಖಿಲದೋಷಕಸ್ಯ ಬ್ರಹ್ಮೇತ್ಯನಂತೇತಿ ಚ ನಾಮ ಯೇನ ॥
ಆನಂದತೀರ್ಥಾಖ್ಯಮುನಿಃ ಸುಪೂರ್ಣಪ್ರಜ್ಞಾಭಿಧೋ ಗ್ರಂಥಮಿಮಂ ಚಕಾರ ।
ನಾರಾಯಣೇನಾಭಿಹಿತೋ ಬದರ್ಯಾಂ ತಸ್ಮೈವ ಶಿಷ್ಯೋ ಜಗದೇಕಭರ್ತುಃ ॥
ಯಸ್ತತ್ಪ್ರಸಾದಾದಖಿಲಾಂಶ್ಚ ವೇದಾನ್ ಸಪಂಚರಾತ್ರಾನ್ ಸರಹಸ್ಯಸಂಗ್ರಹಾನ್ ।
ವೇದೇತಿಹಾಸಾಂಶ್ಚ ಪುರಾಣಯುಕ್ತಾನ್ ಯಥಾವದನ್ಯಾ ಅಪಿ ಸರ್ವವಿದ್ಯಾಃ ॥
ಸಮಸ್ತಶಾಸ್ತ್ರಾರ್ಥವಿನಿರ್ಣಯೋಽಯಂ ವಿಶೇಷತೋ ಭಾರತವರ್ತ್ಮಚಾರೀ ।
ಗ್ರಂಥಃ ಕೃತೋಽಯಂ ಜಗತಾಂ ಜನಿತ್ರಂ ಹರಿಂ ಗುರುಂ ಪ್ರೀಣಯತಾತ್ಸಮುನೈವ ॥
ವಿನಿರ್ಣಯೋ ನಾಸ್ತ್ಯಮುನಾ ವಿನಾ ಯದ್ವಿಪ್ರಸ್ಥಿತಾನಾಮಿಹ ಸರ್ವವಾಚಾಮ್ ।
ತದ್ಬ್ರಹ್ಮಸೂತ್ರಾಣಿ ಚಕಾರ ಕೃಷ್ಣೋ ವ್ಯಾಖ್ಯಾತಥ ತೇಷಾಮಯಥಾಕೃತಾನ್ಯೈಃ ॥
ನಿಗೂಹಿತಂ ಯತ್ಪುರುಷೋತ್ತಮತ್ವಂ ಸೂತ್ರೋಕ್ತಮಪ್ಯತ್ರ ಮಹಾಸುರೇಂದ್ರೈಃ ।
ಜೀವೈಶ್ವರ್ಯೈಕ್ಯಂ ಪ್ರವದದ್ಭಿರುಗ್ರೈರ್ವ್ಯಾಖ್ಯಾಯ ಸೂತ್ರಾಣಿ ಚಕಾರ ಚಾವಿಃ ॥
ವ್ಯಾಸಾಜ್ಞಯಾ ಭಾಷ್ಯವರಂ ವಿಧಾಯ ಪೃಥಕ್ ಪೃಥಕ್ ಚೋಪನಿಷತ್ಸುಭಾಷ್ಯಮ್ ।
ಕೃತ್ವಾಽಖಿಲಾನ್ಯಂ ಪುರುಷೋತ್ತಮಂ ಚ ಹರಿಂ ವದಂತೀತಿ ಸಮರ್ಥಯಿತ್ವಾ ॥
ತನುಸ್ಮೃತೀಯಾ ಪವನಸ್ಯ ಸೇಯಂ ಸದ್ಭಾರತಾರ್ಥಪ್ರತಿದೀಪನಾಯ ।
ಗ್ರಂಥಂ ಚಕಾರೇಮಮುದೀರ್ಣವಿದ್ಯಾ ಯಸ್ಮಿನ್ ರಮಂತೇ ಹರಿಪಾದಭಕ್ತಾಃ ॥
ತೃತೀಯಮಸ್ಯ ವೃಷಭಸ್ಯ ದೋಹಸೇ ದಶಪ್ರಮತಿಂ ಜನಯಂತ ಯೋಷಣಃ ।
ನಿರ್ಯದೀಂ ಬುಧ್ನಾನ್ನಹಿಷಸ್ಯ ವರ್ಪಸ ಈಶಾನಾಸಃ ಶವಸಾ ಕ್ರಂತ ಸೂರಯಃ ।
ಯದೀಮನು ಪ್ರದಿವೋ ಮಧ್ವ ಆಧವೇ ಗುಹಾಸಂತಂ ಮಾತರಿಶ್ವಾ ಮಥಾಯತಿ ॥
ಇತ್ಯಾದಿವಾಕ್ಯೋಕ್ತಮಿದಂ ಸಮಸ್ತಂ ತಥಾ ಪುರಾಣೇಷು ಚ ಪಂಚರಾತ್ರೇ ।
ಅತ್ರೋದಿತಾ ಯಾಶ್ಚ ಕಥಾಃ ಸಮಸ್ತಾ ವೇದೇತಿಹಾಸಾದಿವಿನಿರ್ಣಯೋಕ್ತಾಃ ॥
ತಸ್ಮಾದಯಂ ಗ್ರಂಥವರೋಽಖಿಲೋರುಧರ್ಮಾದಿಮೋಕ್ಷಾಂತಪುಮರ್ಥಹೇತುಃ ।
ಕಿಂಚೋದಿತೈರಸ್ಯ ಗುಣೈಸ್ತತೋಽನ್ಯೈರ್ನಾರಾಯಣಃ ಪ್ರೀತಿಮುಪೈತ್ಯತೋಽಲಮ್ ॥
ಯಸ್ಯ ತ್ರೀಣ್ಯುದಿತಾನಿ ವೇದವಚನೇ ರೂಪಾಣಿ ದಿವ್ಯಾನ್ಯಲಂ
ಬಟ್ ತದ್ದರ್ಶತಮಿತ್ಥಮೇವ ನಿಹಿತಂ ದೇವಸ್ಯ ಭರ್ಗೋ ಮಹತ್ ।

ವಾಯೋ ರಾಮವಚೋನಯಂ ಪ್ರಥಮಕಂ ಪಕ್ಷೋ ದ್ವಿತೀಯಂ ವಪು-
ರ್ಮಧ್ವೋ ಯತ್ ತು ತೃತೀಯಮೇತದಮುನಾ ಗ್ರಂಥಃ ಕೃತಃ ಕೇಶವೇ ॥
ಯಃ ಸರ್ವಗುಣಸಂಪೂರ್ಣಃ ಸರ್ವದೋಷವಿವರ್ಜಿತಃ ।
ಪ್ರೀಯತಾಂ ಪ್ರೀತ ಏವಾಲಂ ವಿಷ್ಣುರ್ಮೇ ಪರಮಃ ಸುಹೃತ್ ॥ – (೩೨/೧೬೩-೧೭೫)

******

ಹಿಂದಿನ ಸಂಪುಟದಂತೆ ಈ ಸಂಪುಟದಲ್ಲೂ ಮೂಲಶ್ಲೋಕಗಳು, ಅದರ ಅನುವಾದ, ವಿವರಣೆ, ಸಂವಾದಿಯಾದ ಮೂಲಗ್ರಂಥಗಳ ಶ್ಲೋಕಗಳು, ಅಡಿಟಿಪ್ಪಣಿಯಲ್ಲಿ ವ್ಯಾಖ್ಯಾನಗಳ ವಿಶೇಷಾಂಶಗಳು ಮೊದಲಾದವುಗಳನ್ನು ಕೊಡಲಾಗಿದೆ.

******

ಮಹಾಭಾರತತಾತ್ಪರ್ಯನಿರ್ಣಯದ ಅನುವಾದಕಾರ್ಯ ಪೂರೈಸಿದ್ದು ೧೯೭೬ ರಲ್ಲಿ. ಅದು ನಾನು ಚಿಕ್ಕಮಗಳೂರಿನ ಸರ್ಕಾರಿ ಕಾಲೇಜಿನಾಲ್ಲಿ ಅಧ್ಯಾಪಕನಾಗಿದ್ದ ಕಾಲ. ಆಗ ಈ ಬೃಹದ್ಗಾತ್ರದ ಗ್ರಂಥವನ್ನು ಪ್ರಕಟಿಸುವ ಸಾಧ್ಯತೆ ಸ್ವಲ್ಪವೂ ಇರಲಿಲ್ಲ. ಅನಂತರವೂ ಅನೇಕವರ್ಷಗಳ ಕಾಲ ಇದರ ಪ್ರಕಾಶನಕಾರ್ಯ ಸಾಧ್ಯವಾಗಲಿಲ್ಲ. ಮುಂದೆ ೧೯೯೩ರಲ್ಲಿ ಮೊದಲ ಒಂಭತ್ತು ಅಧ್ಯಾಯಗಳ ಅನುವಾದದ ಭಾಗವನ್ನು ಪರಮಪೂಜ್ಯ ಶ್ರೀಪೇಜಾವರಮಠಾಧೀಶರಾದ ಶ್ರೀವಿಶ್ವೇಶ–ತೀರ್ಥಶ್ರೀಪಾದರು ತಮ್ಮ ಅಖಿಲಭಾರತಮಾಧ್ವಮಹಾಮಂಡಲ ಮತ್ತು ಆನಂದತೀರ್ಥ ಪ್ರತಿಷ್ಠಾನಗಳ ಸರ್ವಮೂಲಗ್ರಂಥಗಳ ಅನುವಾದದ ಯೋಜನೆಯಲ್ಲಿ ಇದನ್ನು ಪ್ರಕಟಿಸಿದ್ದರು. ಕಾರಣಾಂತರಗಳಿಂದ ಇದರ ಮುಂದಿನ ಭಾಗಗಳು ಪ್ರಕಾಶನಗೊಳ್ಳಲಿಲ್ಲ. ಮೊದಲ ಭಾಗವನ್ನು ಓದಿದ ಜನಗಳಿಂದ ವಿಶೇಷಬೇಡಿಕೆ ಬರುತ್ತಿದ್ದರೂ, ಅಪಾರವೆಚ್ಚದ ಇದರ ಪ್ರಕಾಶನಕಾರ್ಯವನ್ನು ಕೈಗೊಳ್ಳಲು ಸಾಧ್ಯವಾಗಲಿಲ್ಲ. ಮುಂದೆ ಶ್ರೀಮದಾನಂದತೀರ್ಥರ ಸರ್ವಮೂಲಗ್ರಂಥಗಳ ಪ್ರಕಾಶನಕಾರ್ಯದಲ್ಲಿ ತೊಡಗಿದ್ದರಿಂದ ಇದರ ಪ್ರಕಾಶನ ನೆನೆಗುದಿಗೆ ಬಿದ್ದಿತು. ಅನಂತರ ಆ ಸರ್ವಮೂಲಗ್ರಂಥಗಳ ಕನ್ನಡ (೨೦೦೨), ಬಳಿಕ ತೆಲುಗು (೨೦೦೩) ಆವೃತ್ತಿಗಳ ಪ್ರಕಾಶನಕಾರ್ಯ ಹಮ್ಮಿಕೊಳ್ಳಲಾಯಿತು. ಈ ಮಧ್ಯೆ ಪ್ರಕಾಶನದ ವೆಚ್ಚ ಅಪಾರವಾಗಿ ಹೆಚ್ಚಿದ್ದರಿಂದ ಇದು ಬೆಳಕು ಕಾಣುವುದು ಸಾಧ್ಯವಾಗಿರಲಿಲ್ಲ. ಆ ವೇಳೆಗೆ ಮುದ್ರಣವೆಚ್ಚವನ್ನು ಸಂಪೂರ್ಣವಾಗಿ ಭರಿಸಿ ಪ್ರಕಾಶನದಲ್ಲಿ ಪಾಲ್ಗೊಳ್ಳಲು ಬಂದವರು **ಶ್ರೀಮತಿ ಶುಭಾ ರಂಗನಾಥ್** ಹಾಗೂ **ಶ್ರೀ ಡಿ.ಎಸ್.ರಂಗನಾಥ್** ದಂಪತಿಗಳು. ಅವರು ತುಂಬಾ ಉತ್ಸಾಹ, ಶ್ರದ್ಧೆ, ಭಕ್ತಿಗಳಿಂದ ಇದರ ಮುದ್ರಣಕಾರ್ಯದಲ್ಲಿ ಭಾಗವಹಿಸಿದ್ದರಿಂದಾಗಿ ಇದು ಬೆಳಕು ಕಾಣಲು ಸಾಧ್ಯವಾಯಿತು. ಅವರು

೨೦೦೧ರಲ್ಲಿ ತಮ್ಮನ್ನು ಅಗಲಿದ ತಮ್ಮ ಸುಪುತ್ರ ಶ್ರೀನಿವಾಸ ಶ್ರೇಯಸ್‌ನ ಸದ್ಗತಿಗಾಗಿ ಈ ಗ್ರಂಥದ ಪ್ರಕಾಶನಕಾರ್ಯದಲ್ಲಿ ಪಾಲ್ಗೊಂಡಿರುವರು. ಶ್ರೀಮನ್ಮಧ್ವಾಚಾರ್ಯರ ಮೇರುಕೃತಿಯೊಂದು ಅನುವಾದದೊಂದಿಗೆ ಬೆಳಕು ಕಾಣಲು ಅವರು ಸಲ್ಲಿಸಿರುವ ಸೇವೆ ಅಮೋಘವಾದುದು. ತಮ್ಮ ಪುತ್ರನ ಸದ್ಗತಿಪ್ರಾಪ್ತಿಗಾಗಿ ಈ ದಂಪತಿಗಳು ಕೈಗೊಂಡಿರುವ ಪುಣ್ಯಕಾರ್ಯಗಳು ಆಶ್ಚರ್ಯ ಹುಟ್ಟಿಸುವಷ್ಟು ಮಹತ್ತ್ವಪೂರ್ಣವಾಗಿವೆ. ಬಗೆಬಗೆಯಲ್ಲಿ ಹೀಗೆ ತಮ್ಮ ಪುತ್ರನ ಶ್ರೇಯಸ್ಸಿಗಾಗಿ ಶ್ರೀಹರಿವಾಯುಗಳ ಅನುಗ್ರಹವನ್ನು ಸಂಪಾದಿಸಿಕೊಡಲು ಇವರು ಕೈಗೊಂಡಿರುವ ಪುಣ್ಯ–ಕಾರ್ಯಗಳು ಇತಿಹಾಸದ ಪುಟಗಳಲ್ಲಿ ದಾಖಲೆಯಾಗಿ ಉಳಿಯುವುದರಲ್ಲಿ ಸಂಶಯವಿಲ್ಲ. ಅವರಿಗೆ ನಮ್ಮ ಪ್ರತಿಷ್ಠಾನ ವಿಶೇಷವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತದೆ.

******

ಹೆಚ್ಚಿನ ಸಂಖ್ಯೆಯಲ್ಲಿ ವ್ಯಾಖ್ಯಾನಗಳು ದೊರೆತಂತೆ ಅನುವಾದಗ್ರಂಥದ ಗಾತ್ರವೂ ಬೆಳೆಯತೊಡಗಿತು. ನನ್ನ ಸಂಗ್ರಹದಲ್ಲಿ ದೊರೆತ ಇಪ್ಪತ್ತಕ್ಕೂ ಹೆಚ್ಚಿನ ವ್ಯಾಖ್ಯಾನಗಳು ಮೂಲದ ಭಾವವನ್ನು ವಿವರಿಸುವಲ್ಲಿ ನೀಡಿರುವ ನೆರವು ಅಪಾರವಾದುದು. ಅನುವಾದದ ಕಾರ್ಯ ಇನ್ನೂ ಹೆಚ್ಚು ಸ್ಫುಟವಾದದ್ದು ಪ್ರಾತಃಸ್ಮರಣೀಯರಾದ ಶ್ರೀವಿದ್ಯಾಮಾನ್ಯತೀರ್ಥರು ತಮ್ಮ ೧೯೮೬–೮೭ರ ಪರ್ಯಾಯದ ಅವಧಿಯಲ್ಲಿ ಉಡುಪಿಯ ಶ್ರೀ ಕೃಷ್ಣನ ಸನ್ನಿಧಾನದಲ್ಲಿ ಸಮಗ್ರಮಹಾಭಾರತದ ಪ್ರವಚನಸೇವೆಗೆ ಅವಕಾಶ ಕಲ್ಪಿಸಿದಾಗ. ಅನಂತರವೂ ಅವರು ೧೯೯೫ರಲ್ಲಿ ಬೆಂಗಳೂರಿನ ಪೂರ್ಣಪ್ರಜ್ಞವಿದ್ಯಾಪೀಠದಲ್ಲಿ ತಮ್ಮ ಆ ವರ್ಷದ ಚಾತುರ್ಮಾಸ್ಯದ ಅವಧಿಯಲ್ಲಿ ೬೩ ದಿನಗಳ ಕಾಲ ನಿರಂತರ ಮಹಾಭಾರತದ ಪ್ರವಚನವನ್ನು ಏರ್ಪಡಿಸಿದ್ದು ಅನುವಾದದ ವಿಶೇಷಪರಿಪಾಕಕ್ಕೆ ಕಾರಣವಾಯಿತು. ಆ ಶ್ರೀಪಾದರ ವಿಶೇಷಾನುಗ್ರಹದ ಹಿನ್ನೆಲೆಯಲ್ಲಿ ಗ್ರಂಥ ಇಷ್ಟು ಬೃಹದ್ರೂಪ–ವನ್ನು ತಾಳಲು ಕಾರಣವಾಯಿತು.

ಇದರೊಂದಿಗೆ ಬೆಂಗಳೂರು, ಮೈಸೂರು, ಚೆನ್ನೈ, ಹೈದರಾಬಾದ್, ಧಾರವಾಡ, ತುಮಕೂರು ಮೊದಲಾದ ಅನೇಕ ಊರುಗಳ ಮಾಧ್ವಸಂಘಗಳಲ್ಲಿ ಹಾಗೂ ಶ್ರೀರಾಘವೇಂದ್ರ ಸ್ವಾಮಿಗಳ ಮಠಗಳಲ್ಲಿ ನಡೆದ ಮಹಾಭಾರತದ ಪ್ರವಚನಗಳನ್ನು ಇಲ್ಲಿ ಉಲ್ಲೇಖಿಸಲೇಬೇಕು. ಇದರಿಂದಾಗಿ ಮೂಲಗ್ರಂಥವನ್ನು ಅನೇಕಸಲ ಆವೃತ್ತಿಮಾಡುವ ಸದವಕಾಶ ದೊರೆಯಿತು. ಆ ಅವಧಿಯಲ್ಲೇ ಅನೇಕ ಹಸ್ತಲಿಖಿತಗ್ರಂಥಗಳ ಸಂಗ್ರಹ ಕಾರ್ಯವೂ ವಿಶೇಷವಾಗಿ ನಡೆಯಿತು.

ಪ್ರಕೃತ ಕೃತಿಯಲ್ಲಿ ಮೂಲಶ್ಲೋಕಗಳು, ಅನುವಾದ, ವಿಶೇಷವಿವರಗಳು ಹಾಗೂ ವಿವಿಧಟಿಪ್ಪಣಿಗಳಲ್ಲಿನ ಆ ವಿಷಯಕ್ಕೆ ಸಂಬಂಧಿಸಿದ ವಿವರಗಳನ್ನು ಕೊಡಲಾಗಿದೆ.

ಮೂಲಮಹಾಭಾರತ, ರಾಮಾಯಣ, ಹರಿವಂಶ, ಶ್ರೀಮದ್ಭಾಗವತ ಮೊದಲಾದ ಆಕರ ಗ್ರಂಥಗಳಲ್ಲಿನ ಆಯ್ದ ಭಾಗಗಳನ್ನು ವಿಶೇಷವಾಗಿ ಕೊಡಲಾಗಿದೆ. ಶ್ರೀಮದಾಚಾರ್ಯರ ನಿರೂಪಣೆಯ ಗ್ರಹಣಕ್ಕೆ ಸಹಾಯವಾಗುವ ವಿವರಗಳ ಸಂಗ್ರಹಕ್ಕೆ ವಿಶೇಷ ಗಮನ ನೀಡಲಾಗಿದೆ. ಈ ಗ್ರಂಥದ ವಿಶೇಷ ಅಧ್ಯಯನ ನಡೆಸುವ ಜಿಜ್ಞಾಸುಗಳಿಗೆ ಹೆಚ್ಚಿನ ಅನುಕೂಲವಾಗುವುದೆಂದು ನಿರೀಕ್ಷಿಸಲಾಗಿದೆ. ನನ್ನ ಸಂಗ್ರಹದಲ್ಲಿ ದೊರೆತ ವ್ಯತ್ಯಾಸ ಮೊದಲಾದ ಸಪ್ತಭೇದಗಳ ಬಗೆಗಿನ ಬ್ರಹ್ಮಾಂಡಪುರಾಣದ ವಚನಗಳನ್ನು ನಾಲ್ಕನೆಯ ಸಂಪುಟದ ಕೊನೆಯಲ್ಲಿ ಕೊಡಲಾಗಿದೆ. ಈ ಕೊನೆಯ ಸಂಪುಟದಲ್ಲಿ ಮಹಾಭಾರತತಾತ್ಪರ್ಯನಿರ್ಣಯದ ಅಧ್ಯಯನಕ್ಕೆ ಪೂರಕವಾಗುವ ಅನೇಕವಿವರಗಳು ಸಂಕಲಿತವಾಗಿವೆ. ಅಣುಮಹಾಭಾರತತಾತ್ಪರ್ಯನಿರ್ಣಯವೆನ್ನಿಸುವ ಅವರ ಯಮಕಭಾರತ ಕೃತಿಯನ್ನೂ, ಕೃಷ್ಣಮಹಿಮೆಯನ್ನು ಸಾರುವ ಕಂದುಕಸ್ತುತಿಯನ್ನೂ, ಅದರೊಂದಿಗೆ ಶ್ರೀನಾರಾಯಣಪಂಡಿತಾಚಾರ್ಯರು, ಶ್ರೀವಾದಿರಾಜರು, ಶ್ರೀರಾಘವೇಂದ್ರಸ್ವಾಮಿಗಳು ರಚಿಸಿರುವ ತಾತ್ಪರ್ಯನಿರ್ಣಯವನ್ನಾಧರಿಸಿದ ಅನೇಕ ಕೃತಿಗಳನ್ನು ಕೊಡಲಾಗಿದೆ. ರಾಮಾಯಣ, ಮಹಾಭಾರತಗಳಲ್ಲಿನ ದೇವದೈತ್ಯರ ಅಂಶ, ಆವೇಶ, ಅವತಾರಗಳ ಬಗ್ಗೆ ಸಮಗ್ರ ಮಾಹಿತಿ ನೀಡುವ ಶ್ರೀನಾರಾಯಣಪಂಡಿತಾಚಾರ್ಯರ ಅಂಶಾವತಾರ ಕೃತಿಯನ್ನು ನೀಡಲಾಗಿದ್ದು, ಅದರ ವಿವರಗಳನ್ನು ಪ್ರತ್ಯೇಕವಾಗಿ ಅಕಾರಾದಿಕ್ರಮದಲ್ಲಿ ಕೊಡಲಾಗಿದೆ. ಕೊನೆಯ ಪರಿಶಿಷ್ಟವಾಗಿ ಗ್ರಂಥದ ಶ್ಲೋಕಾರ್ಧಾನುಕ್ರಮಣಿಕೆಯನ್ನು ನೀಡಲಾಗಿದೆ.

******

ಮಹಾಭಾರತತಾತ್ಪರ್ಯನಿರ್ಣಯದ ಇತರ ವ್ಯಾಖ್ಯಾನಗಳಲ್ಲಿನ ಕೆಲವು ವಿಶೇಷಾಂಶ–ಗಳನ್ನು ಮತ್ತು ಉಪಲಬ್ಧವಿರುವ ಎಲ್ಲ ವ್ಯಾಖ್ಯಾನಗಳ ಆದ್ಯಂತ ಭಾಗಗಳನ್ನು ಸಹ ಕೊನೆಯಲ್ಲಿ ನೀಡಲಾಗಿದ್ದು ಮಹಾಭಾರತದ ವಿಶೇಷ ಅಧ್ಯಯನಕ್ಕೆ ನೆರವಾಗುವ ಅನೇಕವಿವರಗಳನ್ನು ನೀಡಲಾಗಿದೆ. ಹೀಗೆ ಆಚಾರ್ಯ ಮಧ್ವರ ಈ ಕೃತಿ ಅತ್ಯಂತ ಮಹತ್ತ್ವಪೂರ್ಣವಾದ ಕೃತಿಯಾಗಿದೆ ಎಂಬುದನ್ನು ಅನೇಕಬಗೆಯಲ್ಲಿ ಇಲ್ಲಿ ನಿರೂಪಿಸಲಾಗಿದೆ.

ಮಹಾಭಾರತತಾತ್ಪರ್ಯನಿರ್ಣಯದ ಕನ್ನಡ ಅನುವಾದಗಳಲ್ಲಿ ಶ್ರೀವಾದಿರಾಜತೀರ್ಥ–ಶ್ರೀಚರಣರದ್ದೆಂದು ಪ್ರಸಿದ್ಧವಾದ ಕೃತಿ ಅತ್ಯಂತಪ್ರಾಚೀನವಾದುದು. ಶಿಥಿಲಶೈಲಿ ಹಾಗೂ ವಾದಿರಾಜರ ಸಂಸ್ಕೃತವ್ಯಾಖ್ಯಾನದೊಂದಿಗೆ ಅನೇಕವಿವರಗಳಲ್ಲಿ ಕಂಡುಬರುವ ವಿರೋಧಗಳಿಂದಾಗಿ ಅದು ಶ್ರೀವಾದಿರಾಜರ ಕೃತಿ ಎಂದು ಒಪ್ಪುವುದು ಸರ್ವಥಾ ಅಸಾಧ್ಯ. ಆದರೆ ಅದರಲ್ಲಿನ ಇತರ ಅನೇಕವಿವರಗಳಿಂದಾಗಿ ಅದರ ಉಪಯುಕ್ತತೆಯನ್ನು ಅಲ್ಲಗಳೆಯಲಾಗದು. ಪ್ರಾಯಃ ವಾದಿರಾಜಾಚಾರ್ಯರೆಂಬ ವಿದ್ವಾಂಸರೊಬ್ಬರ ಕೃತಿ ಶ್ರೀವಾದಿರಾಜರ ಹೆಸರಿನಲ್ಲಿ ತಪ್ಪಾಗಿ ಪ್ರಸಿದ್ಧಿಗೆ

ಬಂದಿರಬೇಕು. ಇತ್ತೀಚಿನ ಅನುವಾದಗಳಲ್ಲಿ ಶ್ರೀಅಗ್ರಹಾರ ನಾರಾಯಣತಂತ್ರಿಗಳ ಅನುವಾದ ಮೊದಲನೆಯದು. ಅನಂತರ ಪಂ. ಶ್ರೀ ಕೊರ್ಲಹಳ್ಳಿ ನರಸಿಂಹಾಚಾರ್ಯ ಹಾಗೂ ಪಂ. ಶ್ರೀ ಹಯವದನಪುರಾಣಿಕರ ಅನುವಾದಗಳು ಗಮನಾರ್ಹ. ಗುಲ್ಬರ್ಗದ ಶ್ರೀ ಆರ್. ಹೆಚ್. ಕುಲಕರ್ಣಿ ಎಂಬವರು ಬರೆದಿರುವ ಅನುವಾದವೂ ಪ್ರಕಟಿತವಾಗಿದೆ. ಅನೇಕ ಸಂಸ್ಕೃತ ವ್ಯಾಖ್ಯಾನಗಳಲ್ಲಿನ ವಿಶೇಷಾಂಶಗಳು ಹಾಗೂ ಪ್ರಮಾಣಸಂಕಲನಗಳಿಂದ ಕೂಡಿದ ವಿಸ್ತೃತ ಅನುವಾದ ಎಂಬ ದೃಷ್ಟಿಯಿಂದ ನಮ್ಮ ಪ್ರಕಾಶನದ ಈ ಅನುವಾದ ಅವೆಲ್ಲವುಗಳಿಗಿಂತ ಬೇರೆ ಬಗೆಯದು ಎಂದು ಭಾವಿಸಬಹುದು.

******

ಇದರ ಪ್ರಕಾಶನಕಾರ್ಯ ತ್ವರಿತಗೊಳಿಸಲು ಆರ್ಥಿಕನೆರವಿನೊಂದಿಗೆ ಒಂದು ಹಂತದಲ್ಲಿ ಮುಂದೆ ಬಂದವರು ಮುನವಳ್ಳಿಯ ಡಾ. ಎ.ಜಿ. ನಾಯಕ್ ಅವರು. ಡಿಟಿಪಿ ಕಾರ್ಯವನ್ನು ಸಮಗ್ರವಾಗಿ ನಿರ್ವಹಿಸಿದವರು ಶ್ರೀ ಜಿ. ಶೈಲೇಶ್ ಕುಮಾರ್ ಹಾಗೂ ಶ್ರೀ ವಿ. ಮಾರುತಿರಾವ್ ಅವರು. ಕರಡು ತಿದ್ದುವಲ್ಲಿ ಅಪಾರಶ್ರಮವಹಿಸಿ ತಮ್ಮನ್ನು ತೊಡಗಿಸಿಕೊಂಡವರು ಚಿ. ಶ್ರೀನಿಧಿ ಹಾಗೂ ನನ್ನ ಪುತ್ರ ಚಿ. ಜಯಂತ. ಮುದ್ರಣಕಾರ್ಯವನ್ನು ನಿರ್ವಹಿಸಿದವರು ರಾಷ್ಟ್ರೋತ್ಥಾನ ಮುದ್ರಣಾಲಯದವರು. ಗ್ರಂಥವಿತರಣೆ ಮೊದಲಾದ ಕಾರ್ಯದಲ್ಲಿ ಪಾಲ್ಗೊಂಡವರು ಶ್ರೀ ಎಂ.ಎಸ್. ಕಲಘಟಗಿ, ಶ್ರೀ ಆರ್.ಎನ್.ಸಿಂಹ ಹಾಗೂ ಶ್ರೀ ಟಿ.ಎನ್.ಪ್ರಾಣೇಶ್. ಮುದ್ರಣಕಾರ್ಯದ ಮೇಲ್ವಿಚಾರಣೆ ನಿರ್ವಹಿಸಿದವರು ಶ್ರೀ ಕೆ.ಎ.ಚಿನಾಯ್ ಅವರು. ಬಿಡುಗಡೆಯ ಸಮಾರಂಭವನ್ನು ಯಶಸ್ವಿಯಾಗಿ ಕಾರ್ಯರೂಪಕ್ಕೆ ತಂದವರು ಶ್ರೀ ಸಿ.ಆರ್.ಮುರಳಿ. ಇವರೆಲ್ಲರಿಗೂ ನಮ್ಮ ಪ್ರಕಾಶನ ಋಣಿಯಾಗಿದೆ.

ಬೆಂಗಳೂರು ವ್ಯಾಸನಕೆರೆ ಪ್ರಭಂಜನಾಚಾರ್ಯ

ತಾರಣ – ಬಲಿಪ್ರತಿಪತ್ (ದೀಪಾವಳಿ)

೧೩–೧೧–೨೦೦೪, ಶನಿವಾರ

ಅನುಗ್ರಹಪತ್ರ

॥ ಶ್ರೀ ರಾಮೋ ವಿಜಯತೇ ॥

ಸ್ವಸ್ತಿಶ್ರೀಮತ್ಪರಮಹಂಸೇತ್ಯಾದಿಬಿರುದಾವಲಿವಿಭೂಷಿತವೈದಿಕವೈಷ್ಣವದ್ವೈತಸಿದ್ಧಾಂತಸ್ಥಾಪಕ
ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಕರಕಮಲಸಂಜಾತಅಷ್ಟೋತ್ತರಶತಶ್ರೀಹೃಷೀಕೇಶತೀರ್ಥ
ಸಂಪ್ರದಾಯಪ್ರವರ್ತಕರಾದ ಶ್ರೀಭಂಡಾರಕೇರಿ-ಪಲಿಮಾರು ಉಭಯಮಠಾಧೀಶರಾದ

ಶ್ರೀ ೧೦೮ ಶ್ರೀ ವಿದ್ಯಾಮಾನ್ಯತೀರ್ಥಶ್ರೀಪಾದರು

ವಿದ್ಯಾವಾಚಸ್ಪತಿ ಡಾ॥ ವ್ಯಾಸನಕೆರೆ ಪ್ರಭಂಜನಾಚಾರ್ಯ ಇವರಿಗೆ ನೀಡಿದ

ಅನುಗ್ರಹ ಪತ್ರ

ಪ್ರಾಭಂಜನಂ ಪ್ರವಚನಂ ಉತ್ಕೃಷ್ಟಂ ಅಮೃತೋಪಮಮ್ ।
ಪ್ರಾಣೇ ನಾರಾಯಣೇ ಚೈವ ಸತಾಂ ಭಕ್ತಿಪ್ರವರ್ಧಕಮ್ ॥

ಸ್ವಧರ್ಮಾಚರಣೇ ಸಕ್ತಾನ್ ವಿದಧತ್ ಸಜ್ಜನಾನ್ ಬಹೂನ್ ।
ಶತಾಧಿಕೇಭ್ಯಃ ಶಿಷ್ಯೇಭ್ಯಃ ಶಾಸ್ತ್ರಪಾಠಯುತಂ ಸದಾ ।
ಏಷಾಮಾಶಿಷಮಾಶಾಸ್ತೇ ವಿದ್ಯಾಮಾನ್ಯಾಭಿಧೋ ಯತಿಃ ॥

ಆರೋಗ್ಯಂ ಪೂರ್ಣಮಾಯುಷ್ಯಂ ಪೂರ್ಣಶ್ಚಾನುಗ್ರಹೋ ಹರೇಃ ।
ಪ್ರವರ್ಧತಾಂ ಭಕ್ತಿರಲಂ ಪೂರ್ಣಪ್ರಜ್ಞಗುರಾವಪಿ ॥

ಹರಿಃ ಪರತಮೋ ನಾನ್ಯಃ ಪ್ರಾಣಃ ಪರತಮೋ ಗುರುಃ ।
ವ್ಯಾಖ್ಯಾತೈವಂಚ ಸತತಂ ಭೂಯಾತ್ ಖ್ಯಾತಃ ಶುಕೋ ಯಥಾ ॥

ಜ್ಞಾನರತ್ನಾಕರ ಇತಿ ವಿದ್ಯಾಮಾನ್ಯಯತೀಶ್ವರೈಃ ।
ಪ್ರಭಂಜನಾಚಾರ್ಯನಾಮ್ನೇ ಪ್ರಶಸ್ತಿಃ ಪ್ರತಿಪಾದಿತಾ ॥

ಸದಾಚಾರೇ ಪ್ರವಕ್ತೃತ್ವೇ ವಿನಯಾದಿಗುಣೇಷ್ವಪಿ ।
ಪ್ರಭಂಜನಸಮೋ ನಾಸ್ತಿ ವಿದ್ಯಾಮಾನ್ಯಾ ಹಿ ಸಾಕ್ಷಿಣಃ ॥

ಬಹುಧಾನ್ಯಸಂವತ್ಸರಸ್ಯ
ಆಷಾಢ ಶುಕ್ಲಷಷ್ಠೀ
೩೦-೬-೧೯೯೮, ಬೆಂಗಳೂರು

ಶ್ರೀವಿದ್ಯಾಮಾನ್ಯತೀರ್ಥಶ್ರೀಪಾದಾಃ
ಶ್ರೀಪಲಿಮಾರುಭಂಡಾರಕೇರಿಮಠ
ಉಡುಪಿ

ಅಧ್ಯಾಯ - ೨೭

(ಕರ್ಣವಧಃ)

(ಕರ್ಣಸೇನಾಪತ್ಯ, ಭೀಮಸೇನನಿಂದ ಅಶ್ವತ್ಥಾಮನ ಪರಾಭವ, ಶಲ್ಯಸಾರಥ್ಯ,
ಕರ್ಣನಿಂದ ಭಾರ್ಗವಾಸ್ತ್ರಪ್ರಯೋಗ, ಅರ್ಜುನಯುಧಿಷ್ಠಿರರ
ವಿಚಿತ್ರಪ್ರಸಂಗ, ದುಃಶಾಸನವಧೆ, ಕರ್ಣಾರ್ಜುನರ ಯುದ್ಧ, ಕರ್ಣಾವಸಾನ)

ಸೇನಾಪತಿಯಾಗಿ ಕರ್ಣ - ಹದನಾರನೆಯ ದಿನದ ಯುದ್ಧ

ಅಥಾನುಜ್ಞಾಮುಪಾದಾಯ ದ್ರೌಣೇರ್ದುರ್ಯೋಧನೋ ನೃಪಃ ।
ಕರ್ಣಂ ಸೇನಾಪತಿಂ ಚಕ್ರೇ ಸೋಽಗಾದ್ಯುದ್ಧಾಯ ದಂಶಿತಃ ॥ ೧ ॥

ಅ: ಬಳಿಕ ರಾಜನಾದ ದುರ್ಯೋಧನ ಅಶ್ವತ್ಥಾಮನ ಅನುಮತಿಯನ್ನು ಪಡೆದು ಕರ್ಣನನ್ನು ಸೇನಾಪತಿಯನ್ನಾಗಿ ಮಾಡಿದ. ಕರ್ಣನು ಕವಚಾದಿಗಳನ್ನು ಧರಿಸಿ ಯುದ್ಧಕ್ಕೆ ಹೊರಟ.

ಎ: ೧) ಇಲ್ಲಿ ಸೇನಾಪತ್ಯಕ್ಕಾಗಿ ಕರ್ಣ, ಅಶ್ವತ್ಥಾಮರು ಪರಸ್ಪರ ಸ್ಪರ್ಧೆಗಿಳಿದಂತೆ ಭಟ್ಟ-ನಾರಾಯಣನ ವೇಣೀಸಂಹಾರ ಮತ್ತು ಪಂಪನ ವಿಕ್ರಮಾರ್ಜುನವಿಜಯಗಳಲ್ಲಿ ಬಂದಿದೆ. ಅವರಿಬ್ಬರಲ್ಲಿ ಅತ್ಯಂತ ಹೀನಾಯವಾದ ರೀತಿಯ ಮಾತುಕತೆ ನಡೆದಂತೆಯೂ ಅವು ಚಿತ್ರಿಸಿವೆ.

೨) ಆದರೆ, ಮಹಾಭಾರತದಲ್ಲಿ ಬಂದಿರುವಂತೆ ಅವರಿಬ್ಬರಲ್ಲಿ ಅಂತಹ ಸ್ಪರ್ಧೆಯೇನೂ ನಡೆಯದೇ ಅಶ್ವತ್ಥಾಮರೇ ಸ್ವತಃ ಅನುಮತಿ ನೀಡಿ ಕರ್ಣನಿಗೆ ಸೇನಾಪತ್ಯವನ್ನು ಕೊಡಿಸಿದರು ಎಂಬುದು ನಿರ್ಣಯ.

೩) ಮಹಾಭಾರತದ ಕೆಲವು ಪ್ರತಿಗಳಲ್ಲಿ ಆ ಸಂಘರ್ಷದ ವಿವರಗಳು ಬಂದಿದ್ದರೂ, ಅವು ಪ್ರಕ್ಷಿಪ್ತ ಎಂಬುದು ನಿರ್ಣಯದ ಈ ಭಾಗದಿಂದಲೂ, ಪೂನಾ ಭಂಡಾರ್ಕರ್ ಸಂಸ್ಥೆಯ ಸಂಶೋಧಿತ ಪ್ರತಿಗಳಿಂದಲೂ ದೃಢಪಡುವುದು.

---

೧. ದಂಶಿತಃ ಬದ್ಧಕವಚಃ – (ಜ.)

೧. ಏತದಾಚಾರ್ಯತನಯಾಚ್ಛ್ರುತ್ವಾ ರಾಜಂಸ್ತವಾತ್ಮಜಃ ।
ಆಶಾಂ ಬಹುಮತೀಂ ಚಕ್ರೇ ಕರ್ಣಂ ಪ್ರತಿ ಸ ವೈ ಸದಾ ॥ – ಭಾರತ (ಕರ್ಣ. ೧೦/೧೮)

ಕುರುಪಾಂಡವಯುದ್ಧ - ಭೀಮನ ಪರಾಕ್ರಮ

ತತ್ರಾಭವದ್ಯುದ್ಧಮತೀವ ದಾರುಣಂ
ಪಾಂಡೋಃ ಸುತಾನಾಂ ಧೃತರಾಷ್ಟ್ರಜೈರ್ಗಜೇ ।
ತತ್ರೋದಯಾದ್ರಿಪ್ರತಿಮೇ ಪ್ರದೃಶ್ಯತೇ
ಭೀಮೋ ಯಥೋದ್ಯತ್ಸವಿತಾऽತಿನಿರ್ಮಲಃ ॥ ೨ ॥

ಅ: ಕರ್ಣನ ಸೇನಾಪತ್ಯದಲ್ಲಿ ಕೌರವರೊಡನೆ ಪಾಂಡವರಿಗೆ ಅತ್ಯಂತ ದಾರುಣವಾದ ಸಮರ ನಡೆಯಿತು. ಆಗ ರಣರಂಗದಲ್ಲಿ ಉದಯಾದ್ರಿಯಂತಿದ್ದ ಆನೆಯ ಮೇಲೆ ಉದಿಸುವ ಅತ್ಯಂತ ನಿರ್ಮಲನಾದ ಸೂರ್ಯನಂತೆ ಭೀಮ ಕಂಗೊಳಿಸಿದ.

ವಿ: ಆ ಹದಿನಾರನೇ ದಿವಸದ ಯುದ್ಧದಲ್ಲಿ ಭೀಮ ಮೊದಲಿಗೆ ಗಜಾರೂಢನಾಗಿ ಯುದ್ಧಕ್ಕಿಳಿದ ವರ್ಣನೆಯಿದೆ :

ಮಧ್ಯೇ ವೃಕೋದರೋऽಭ್ಯಾಯಾತ್ ತ್ವದೀಯಾನ್ ನಾಗಯೂರ್ಗತಃ ।
ಸ ನಾಗಪ್ರವರೋऽತ್ಯುಗ್ರೋ ವಿಧಿವತ್ ಕಲ್ಪಿತೋ ಬಭೌ ॥
ಉದಯಾದ್ರ್ಯಗ್ರ್ಯಭವನಂ ಯಥಾऽಭ್ಯುದಿತಭಾಸ್ಕರಮ್॥ -ಭಾರತ(೮/೧೨/೨೨)

ಮೂಲಭಾರತದ ಈ ಶ್ಲೋಕದ ಭಾವ ಹೀಗೆ ಸಂಗೃಹೀತವಾಗಿದೆ ಎಂದು ತಿಳಿಯಬಹುದು. ಉನ್ನತವಾದ ಆನೆ ಉದಯಾದ್ರಿಯಂತೆ ಕಂಗೊಳಿಸುತ್ತಿದ್ದರೆ, ಅದರ ಮೇಲೆ ಕುಳಿತಿದ್ದ ಅಪಾರ ತೇಜಸ್ಸಿನ ಭೀಮಸೇನ ಉದಿಸುವ ಸೂರ್ಯನಂತೆ ಕಂಗೊಳಿಸುತ್ತಿದ್ದ ಎಂಬುದು ಇದರ ಭಾವ.

ಭೀಮನಿಂದ ಕ್ಷೇಮಧೂರ್ತಿಯ ವಧೆ

ತಂ ಕಾಲಯಂತಂ ನೃಪತೀನ್ ಕ್ಷೇಮಧೂರ್ತಿ-
ರಭ್ಯಾಗಮತ್ ತಸ್ಯ ಗಜಂ ಜಘಾನ ।
ತಂ ವೀರ್ಯಮತ್ತಂ ಪ್ರತಿಲಭ್ಯ ಭೀಮೋ
ನಿನಾಯ ಮೃತ್ಯೋಃ ಸದನಾಯ ಶೀಘ್ರಮ್ ॥ ೩ ॥

ಅ: ರಾಜರನ್ನೆಲ್ಲ ಸದೆಬಡಿಯುತ್ತಿದ್ದ ಭೀಮನನ್ನು ಕ್ಷೇಮಧೂರ್ತಿ ಎದುರಿಸಿದ; ಭೀಮನ ಆನೆಯನ್ನು ಕೊಂದ. ಬಲದಿಂದ ಕೊಬ್ಬಿದ್ದ ಅವನನ್ನು ಎದುರಿಸಿ ಭೀಮಸೇನ ಕೂಡಲೇ ಯಮಪುರಿಗೆ ಅಟ್ಟಿದ.

---

೨. ಭೀಮೋ ಅತಿಗೌರವರ್ಣ ಇತಿ ಭಾವಃ। -(ಜ.)

ಎ: ತನ್ನಾನೆಯನ್ನು ಕ್ಷೇಮಧೂರ್ತಿ ಕೊಂದಾಗ ಭೀಮ ಅವನ ಆನೆಯನ್ನೂ ಗದೆಯಿಂದ ಅಪ್ಪಳಿಸಿ ಕೊಂದ; ಬಳಿಕ ಅವನನ್ನೂ ಕೊಂದುಹಾಕಿದ :

ತಸ್ಯ ಭೀಮೋಽಪಿ ದ್ವಿರದಂ ಗದಯಾ ಸಮಪೋಥಯತ್ ।
ತಸ್ಮಾತ್ ಪ್ರಮಥಿತಾನ್ನಾಗಾತ್ ಕ್ಷೇಮಧೂರ್ತಿಮವಪ್ಲುತಮ್ ॥
ಉದ್ಯತಾಯುಧಮಾಯಾಂತಂ ಗದಯಾಹನ್ ವೃಕೋದರಃ ।
ಸ ಪಪಾತ ಹತಃ ಸಾಸಿರ್ವ್ಯಸುಸ್ತಮಭತೋ ದ್ವಿಪಮ್ ॥

– ಭಾರತ (ಕರ್ಣ. ೧೨/೪೩.೪೪)

ನಿಹತ್ಯ ತಂ ಮಾರುತಿರಭ್ಯಕೃಂತತ್
ಶಿರಾಂಸಿ ಯೂನಾಂ ಪರಪಕ್ಷಪಾತಿನಾಮ್ ।
ವಿಕ್ಷೋಭಯಾಮಾಸ ಚ ಶತ್ರುಸೈನ್ಯಂ
ಸಿಂಹೋ ಯಥೈವ ಶ್ವಸೃಗಾಲಯೂಥಮ್ ॥ ೪ ॥

ಅ: ಭೀಮಸೇನ ಅವನನ್ನು ಕೊಂದು ಶತ್ರುಪಕ್ಷದಲ್ಲಿದ್ದ ತರುಣರ ತಲೆಗಳನ್ನು ತರಿದು ಹಾಕಿದ. ಸಿಂಹ ನರಿಗಳ ಹಿಂಡನ್ನು ಹೇಗೋ ಹಾಗೆ ಶತ್ರುಸೈನ್ಯವನ್ನು ಕ್ಷೋಭೆಗೊಳಿಸಿದ.

ಭೀಮ ಅಶ್ವತ್ಥಾಮರ ಅದ್ಭುತಯುದ್ಧ

ಸಂಕ್ಷೋಭ್ಯಮಾಣಂ ತದನೀಕಮೀಕ್ಷ್ಯ
ದ್ರೌಣೀ ರಥೇನ ಪ್ರತಿಜಗ್ಮಿವಾಂಸ್ತಮ್ ।
ತದ್ಯುದ್ಧಮಾಸೀದತಿಘೋರಮದ್ಭುತಂ
ಪುರಾ ಯಥಾ ನಾಸ ಚ ಕಸ್ಯಚಿತ್ ಕ್ವಚಿತ್ ॥ ೫ ॥

---

೫. ತತ್ರ ಸಿದ್ಧಾ ಮಹಾರಾಜ ಸಂಪತಂತೋಽಬ್ರುವನ್ ವಚಃ ।
ಯುದ್ಧಾನಾಮಪಿ ಸರ್ವೇಷಾಂ ಯುದ್ಧಮೇತದಿತಿ ಪ್ರಭೋ ॥
ಸರ್ವಯುದ್ಧಾನಿ ಚೈತಸ್ಯ ಕಲಾಂ ನಾರ್ಹಂತಿ ಷೋಡಶೀಮ್ ।
ನೇದೃಶಂ ಚ ಪುನರ್ಯುದ್ಧಂ ಭವಿಷ್ಯತಿ ಕದಾಚನ ।
ಅಹೋ ಜ್ಞಾನೇನ ಸಂಪನ್ನಾವುಭೌ ಬ್ರಾಹ್ಮಣಕ್ಷತ್ರಿಯೌ ॥
ಅಹೋ ವೀರ್ಯೇಣ ಸಂಪನ್ನಾವುಭೌ ಚೋಗ್ರಪರಾಕ್ರಮೌ ।
ಅಹೋ ಭೀಮಬಲೋ ಭೀಮ ಏತಸ್ಯ ಚ ಕೃತಾಸ್ತ್ರತಾ ॥
ಅಹೋ ವೀರ್ಯಸ್ಯ ಸಾರತ್ವಮಹೋ ಸೌಷ್ಠವಮೇತಯೋಃ ॥
ಸ್ಥಿತಾವೇತೌ ಹಿ ಸಮರೇ ಕಾಲಾಂತಕಯಮೋಪಮೌ ॥ – ಭಾರತ (ದ್ರೋಣ. ೧೫೯/೨೭/೩೧)

ಅ: ಆ ಸೇನೆ ಹಾಗೆ ಉಲ್ಲೋಲಕಲ್ಲೋಲವಾದದ್ದನ್ನು ಕಂಡು ಅಶ್ವತ್ಥಾಮ ರಥದಿಂದ ಭೀಮನನ್ನು ಎದುರಿಸಿದ. ಅವರಿಬ್ಬರ ಅಂತಹ ಯುದ್ಧ ಹಿಂದೆಂದೂ ಎಲ್ಲೂ, ಯಾರಿಗೂ ನಡೆದಿರಲಿಲ್ಲ. ಅತ್ಯಂತ ಘೋರವೂ, ಅದ್ಭುತವೂ ಆಗಿತ್ತು.

ವಿ: ಭೀಮಾಶ್ವತ್ಥಾಮರ ಆ ಯುದ್ಧ ವಿಶ್ವದಾಖಲೆಯ ಮಹಾಯುದ್ಧ ಎಂದರ್ಥ. ಅದನ್ನು ಮುಂದೆ ಸಕಾರಣವಾಗಿ ವಿವರಿಸಿರುವರು.

ದೃಷ್ಟ್ವೈವ ತದ್ದೇವಗಂಧರ್ವವಿಪ್ರಾ
ಊಚುರ್ನೈದೃಗ್ದೃಷ್ಟಪೂರ್ವಂ ಸುಯುದ್ಧಮ್ ।
ನ ಚೋತ್ತರಂ ವಾऽಪಿ ಭವಿಷ್ಯತೀದೃಕ್
ಕಲಾಂ ಚ ಸರ್ವಾಣಿ ನ ಷೋಡಶೀಮಿಯುಃ ॥ ೬ ॥

ಅ: ಅದನ್ನು ನೋಡುತ್ತಲೇ ದೇವತೆಗಳು, ಗಂಧರ್ವರು, ಮುನಿಗಳು ನುಡಿದರು : ಇಂತಹ ಮಹಾಯುದ್ಧವನ್ನು ಹಿಂದೆಂದೂ ನಾವು ಕಂಡಿರಲಿಲ್ಲ, ಇಂತಹುದು ಮುಂದೆಂದೂ ನಡೆಯುವುದೂ ಇಲ್ಲ. ಇತರ ಎಲ್ಲ ಯುದ್ಧಗಳೂ ಇದರ ಹದಿನಾರನೇ ಒಂದಂಶಕ್ಕೂ ಸಾಟಿಯಾಗವು.

ವಿ: ೧) ಜಗತ್ತಿನ ಯುದ್ಧಗಳನ್ನೆಲ್ಲ ಕಂಡವರು ದೇವ, ಗಂಧರ್ವ, ಮುನಿಗಳು. ಅವರು ಈ ಯುದ್ಧವನ್ನು ಕಾಣುತ್ತಲೇ ತೆಗೆದ ಉದ್ಗಾರವಿದು. ಇತರ ಯುದ್ಧಗಳೆಲ್ಲ ಭೀಮಾಶ್ವತ್ಥಾಮರ ಯುದ್ಧದ ಹದಿನಾರನೇ ಒಂದಂಶಕ್ಕೂ ಸಮನಾಗವು ಎಂಬ ಮಾತು ಮಹಾಭಾರತದಲ್ಲಿದೆ.

೨) ಭೀಮಸೇನ ಅಸ್ತ್ರಜ್ಞನೆಂಬುದನ್ನು ಜಗತ್ತು ಅರಿಯಲೆಂದು ಶ್ರೀಕೃಷ್ಣ ಅಲಂಬುಸನ ಮೇಲೆ ಒಂದು ಬಾರಿ, ಅಶ್ವತ್ಥಾಮನ ಮೇಲೆ ಒಂದು ಬಾರಿ ಅಸ್ತ್ರಯುದ್ಧಮಾಡಲು ಆದೇಶ ನೀಡಿದ ವಿವರ ಹದಿನೆಂಟನೆಯ ಅಧ್ಯಾಯದಲ್ಲಿ ಬಂದಿದೆ. ಅಶ್ವತ್ಥಾಮರು ತಮ್ಮ ತಂದೆ ಬದುಕಿರುವವರೆಗೂ ಪಾಂಡವರೊಂದಿಗೆ ಮೈತ್ರಿ ಹೊಂದಿರುವುದಾಗಿ ಕೃಷ್ಣನಿಗೆ ವಚನ ನೀಡಿದ್ದರು. ಈಗ ದ್ರೋಣರು ಹತರಾಗಿರುವುದರಿಂದ ಅಶ್ವತ್ಥಾಮ ಪೂರ್ಣಪ್ರಮಾಣದಲ್ಲಿಯೇ ಯುದ್ಧ ಮಾಡಿ ಸೋತದ್ದು ಭೀಮನ ಅಸಾಮಾನ್ಯಪರಾಕ್ರಮಕ್ಕೆ ಅತ್ಯುತ್ತಮನಿದರ್ಶನ.

ಅದ್ಭುತಂ ಚಾಪ್ಯಚಿಂತ್ಯಂ ಚ ದೃಷ್ಟ್ವಾ ಕರ್ಮ ತಯೋ ರಣೇ ।
ಸಿದ್ಧಚಾರಣಸಂಘಾನಾಂ ವಿಸ್ಮಯಃ ಸಮಪದ್ಯತ ॥
ಪ್ರಶಂಸಂತಿ ತದಾ ದೇವಾಃ ಸಿದ್ಧಾಶ್ಚ ಪರಮರ್ಷಯಃ ।
ಸಾಧು ದ್ರೌಣೇ ಮಹಾಬಾಹೋ ಸಾಧು ಭೀಮೇತಿ ಚಾಬ್ರುವನ್ ॥ – ಭಾರತ (ಕರ್ಣ. ೧೫/೩೪,೩೫)

೬. ಪೂರ್ವೈರಸ್ಮತ್ಕುಲವೃದ್ಧೈರ್ದೃಷ್ಟಂ ವಾ ನೈವ ನಾಭೂತ್। – (ಜ.)

ನೈತಾದೃಶೀ ಜ್ಞಾನಸಂಪದ್ಬಲಂ ವಾ
ದ್ವಯಂ ಕುತೋ ವಾಯುಮೃತೇ ಶಿವಂ ತಥಾ ।
ದ್ವಯೋಃ ಸಮಾಹಾರ ಇಹ ದ್ವಯೋರಪಿ
ಜ್ಞಾನಸ್ಯ ಬಾಹ್ವೋಶ್ಚ ಬಲಸ್ಯ ಸೂರ್ಜಿತಃ ॥ ೭ ॥

ಅ: ಇಂತಹ ಜ್ಞಾನಸಂಪತ್ತಾಗಲೀ, ಬಲವಾಗಲೀ ವಾಯುವನ್ನು ಹಾಗೆಯೇ ಶಿವನನ್ನು ಹೊರತು ಬೇರೆಲ್ಲೂ ಇರವು. ಈ ಎರಡು ಒಟ್ಟು ಸೇರುವುದು ಇನ್ನೆಲ್ಲಿ ಸಾಧ್ಯ? ಇವರಿಬ್ಬರಲ್ಲೂ ಜ್ಞಾನಬಲ ಮತ್ತು ಬಾಹುಬಲ – ಎರಡರ ಪೂರ್ಣ ಸಮಾವೇಶ ಇದೆ.

ವಿ: ೧) ಮಹಾಭಾರತದಲ್ಲಿ ಬಂದಿರುವ ಶ್ಲೋಕಗಳ ಸಾರ ಇದು. ಯುದ್ಧ ರೋಚಕವೆನ್ನಿಸುವುದು ಪರಸ್ಪರ ಸಮಾನರಲ್ಲಿ ನಡೆದಾಗ ಮಾತ್ರ.

೨) ಬ್ರಹ್ಮ ವಾಯುಗಳು ಜೀವಕೋಟಿಯಲ್ಲಿ ಅತ್ಯುತ್ತಮರು, ಅವರಿಬ್ಬರಲ್ಲಿ ದೋಷಗಳೇ ಇಲ್ಲವಾದ್ದರಿಂದ ಎಂದೂ ವಿರೋಧದ ಪ್ರಸಕ್ತಿಯೇ ಒದಗುವುದಿಲ್ಲ.

೩) ಅನಂತರದ ಸ್ಥಾನ ತಾರತಮ್ಯದಲ್ಲಿ ಗರುಡ, ಶೇಷ, ರುದ್ರರದು. ಇಲ್ಲಿ ವಾಯುವಿನ ಅವತಾರನಾದ ಭೀಮಸೇನ ಹಾಗೂ ಶಿವನ ಅವತಾರನಾದ ಅಶ್ವತ್ಥಾಮರು ಕಾದಾಟಕ್ಕೆ ತೊಡಗಿರುವರು. ಇಬ್ಬರೂ ಅಪೂರ್ವ ಜ್ಞಾನಿಗಳು, ಅಪಾರ ಬಲಶಾಲಿಗಳು. ಆದ್ದರಿಂದಲೇ ಅವರಿಬ್ಬರ ಯುದ್ಧ ಅತ್ಯಂತ ರೋಚಕ ಎಂದು ಭಾವ.

೪) ರಾಮ–ರಾವಣರ ಯುದ್ಧ ರಾಮ–ರಾವಣರ ಯುದ್ಧದಂತೆಯೇ ಇತ್ತು; ಅದಕ್ಕೆ ಮತ್ತೊಂದು ಸಾಟಿಯಲ್ಲ ಎಂಬ ಮಾತಿದೆ – **'ರಾಮರಾವಣಯೋರ್ಯುದ್ಧಂ ರಾಮ–ರಾವಣಯೋರಿವ'**. ಆದರೆ, ರಾಮ ಸಾಕ್ಷಾತ್ ಶ್ರೀಹರಿ, ಅನಂತಾನಂತ ಕಲ್ಯಾಣಗುಣಪರಿಪೂರ್ಣ. ರಾವಣ ಹಿರಣ್ಯಕಶಿಪು ಎಂಬ ಮಹಾರಾಕ್ಷಸನ ಅವತಾರ, ಅವನೊಳಗಿದ್ದ ಆವೇಶ ಜಯ ಎಂಬ ವಿಷ್ಣುವಿನ ದ್ವಾರಪಾಲಕನದು. ರಾವಣನಿಗೆ ಬ್ರಹ್ಮನ ವರವಿದ್ದರೂ ಸಹ ಶ್ರೀಹರಿಯ ಮುಂದೆ ನಗಣ್ಯವಾದುದು. ಆದ್ದರಿಂದ ರಾಮ–ರಾವಣರ ಯುದ್ಧ ಎಂದೂ ಸಮಾನರೆನ್ನಿಸುವವರ ಮಧ್ಯೆ ನಡೆದ ಯುದ್ಧವಾಗಿರಲಿಲ್ಲ. ಆದ್ದರಿಂದ ಅದು ಭೀಮಾಶ್ವತ್ಥಾಮರ ಯುದ್ಧದಷ್ಟು ಮಹತ್ವಪೂರ್ಣ–ದ್ದಾಗಿರಲಿಲ್ಲ.

---

೭. ದ್ವಯೋಃ ಸಮಾಹಾರ ಇಹ ದ್ವಯೋರಿತ್ಯತ್ರ ದ್ವಯೋಃ = ಭೀಮಾಶ್ವತ್ಥಾಮ್ನೋಃ। ಜ್ಞಾನಸ್ಯ ಬಾಹ್ವೋರ್ಬಲಸ್ಯೇತಿ ದ್ವಯೋಃ – (ವಾ.)

೫) ಆದರೆ, ಭೀಮಾಶ್ವತ್ಥಾಮರ ಯುದ್ಧ ಹಾಗಲ್ಲ. ಶಿವಾವತಾರನಾದ ಅಶ್ವತ್ಥಾಮ ಭೀಮನಿಗೆ ಸಂಪೂರ್ಣ ಸಮನಲ್ಲವಾದರೂ, ಋಜು ಕಕ್ಷೆಯ ನಂತರ ಅವನದೇ ಸ್ಥಾನವಾದ್ದರಿಂದ ಹೋರಾಟದ ಮಟ್ಟಿಗೆ ಕುತೂಹಲಕ್ಕೆ ಅವಕಾಶವಿದೆ. ಆದ್ದರಿಂದಲೇ ಭೀಮ, ಅಶ್ವತ್ಥಾಮರ ಯುದ್ಧವೇ ವಿಶ್ವದಾಖಲೆಯ ಮಹಾಯುದ್ಧವೆಂಬುದು ಮಥಿತಾರ್ಥ.

ಇತೀರ್ಯಮಾಣೇ ವಿಬುಧೈರ್ನರೋತ್ತಮೌ
ದಿಶಃ ಸಮಸ್ತಾ ಗಗನಂ ಚ ಪತ್ರಿಭಿಃ ।
ನಿರಂತರಂ ಚಕ್ರತುರುತ್ತಮೌಜಸೌ
ದೃಷ್ಟ್ವೈವ ತದ್ಭೀತಿಮಗುರ್ಮಹಾರಥಾಃ ॥ ೮ ॥

ಅ: ದೇವತೆಗಳು ಹೀಗೆ ನುಡಿಯುತ್ತಿದ್ದಂತೆಯೇ ಪುರುಷಶ್ರೇಷ್ಠರೂ, ಉತ್ತಮ ಪರಾಕ್ರಮಿಗಳೂ ಆದ ಭೀಮ-ಅಶ್ವತ್ಥಾಮರು ಬಾಣಗಳಿಂದ ಸಮಸ್ತ ದಿಕ್ಕುಗಳನ್ನು, ಗಗನವನ್ನು ಎಡೆಯಿಲ್ಲದಂತೆ ತುಂಬಿಸಿಬಿಟ್ಟರು. ಅದನ್ನು ನೋಡುತ್ತಲೇ ಮಹಾರಥಿಕರು ಭೀತಿಹೊಂದಿದರು.

ವಿ: ಇಲ್ಲಿ ದೇವತೆಗಳು ಎಂದರೆ ಹಿಂದಿನ ಶ್ಲೋಕದಲ್ಲಿ ತಿಳಿಸಿರುವಂತೆ ದೇವತೆಗಳು, ಗಂಧರ್ವರು, ಮುನಿಗಳು ಮೊದಲಾದವರು ಎಂದರ್ಥ.

ಅಸ್ತ್ರಯುದ್ಧದಲ್ಲೂ ಅಶ್ವತ್ಥಾಮನ ಪರಾಜಯ

ಶರಾಸನೇ ಮಾರುತಿನಾ ನಿರಾಕೃತೇ
ದ್ರೌಣಿರ್ಮಹಾಸ್ತ್ರಾಣಿ ಮುಮೋಚ ತಸ್ಮಿನ್ ।
ತಾನ್ಯಸ್ತ್ರವಿದ್ಯೈರ್ಬಲವಾನವಿಸ್ಮಯಃ
ಸಂಶಾಮಯಾಮಾಸ ಸುತೋಽನಿಲಸ್ಯ ॥ ೯ ॥

---

೯. ಮಹಾಸ್ತ್ರಾಣಿ ಮುಮೋಚೇತ್ಯತ್ರ ಧನುರ್ನಿರಪೇಕ್ಷಶಕ್ತಿಪ್ರಾಸಾಸಿಪರಶ್ವಧಶತಘ್ನೀಪ್ರಭೃತೀನಿ ಮಹಾಸ್ತ್ರಾಣೀತ್ಯರ್ಥಃ । ಮಂತ್ರಪೂರ್ವಕತಯಾ ಪ್ರಯುಕ್ತತ್ವಾತ್ ಶಸ್ತ್ರಾಣ್ಯೇವೈತಾನಿ ಅಸ್ತ್ರಾಣ್ಯಪೀತಿ ಜ್ಞೇಯಮ್ – (ವಾ.)

೯. ಗದೆಯೊಳೇ ಜಟ್ಟಿಗಂ ಪವನನಂದನನೆಂಬರಾ ಮಾತು ಮಾತದ-
ಲ್ಲದು ಸುರಸಿಂಧುಪುತ್ರ ಗುರು ಕರ್ಣ ಕೃಪ ಪ್ರಮುಖ್ಯರಿಂತು ನೀ-
ರಿದರೇ ಶರಾಸನಾಗಮದೊಳೋಂಬನಮಂಬರದೊಳ್ ಸುರರ್ಕಳೇಂ
ಪುದಿತನೋ ಬಾಣ ಜಾಲದೇ ಗುರು ಪ್ರಿಯನಂದನನಂ ಮರುತ್ಸುತಮ್ ॥ – ಪಂಪಭಾರತ (೧೦/೬೭)

ಆ: ಅಶ್ವತ್ಥಾಮನ ಬಿಲ್ಲನ್ನು ಭೀಮಸೇನ ಕತ್ತರಿಸಿಹಾಕಿದಾಗ ಅಶ್ವತ್ಥಾಮ ಭೀಮನ ಮೇಲೆ ಮಹಾಸ್ತ್ರಗಳನ್ನು ಪ್ರಯೋಗಿಸತೊಡಗಿದ. ಮಹಾಬಲನಾದ ಭೀಮಸೇನ ಚಕಿತನಾಗದೇ ಅವುಗಳನ್ನೆಲ್ಲ ಮಹಾಸ್ತ್ರಗಳಿಂದಲೇ ಉಪಶಮನಗೊಳಿಸಿದ.

ಎ: ೧) ಬಾಣಗಳ ಯುದ್ಧ ಮುಗಿದ ಮೇಲೆ ಅಸ್ತ್ರಗಳ ಯುದ್ಧ ಪ್ರಾರಂಭವಾಯಿತು, ಅದರಲ್ಲೂ ಅಶ್ವತ್ಥಾಮನ ಪ್ರತಿಯೊಂದು ಅಸ್ತ್ರಕ್ಕೂ ಭೀಮಸೇನ ಪ್ರತ್ಯಸ್ತ್ರವನ್ನು ಪ್ರಯೋಗಿಸಿ ತನ್ನ ಅಸಮಾನವಾದ ಅಸ್ತ್ರವಿದ್ಯಾಕೌಶಲವನ್ನು ಪ್ರಯೋಗಿಸಿದ. ಅಶ್ವತ್ಥಾಮ ಶಕ್ತಿಪ್ರಾಸ ಮೊದಲಾದ ಆಯುಧಗಳನ್ನು ಅಸ್ತ್ರಗಳಿಂದ ಅಭಿಮಂತ್ರಿಸಿ ಭೀಮನ ಮೇಲೆ ಪ್ರಯೋಗಿಸಿದಾಗ ಭೀಮ ಅವುಗಳನ್ನು ಯಥೋಚಿತವಾದ ಪ್ರತ್ಯಸ್ತ್ರಗಳಿಂದಲೇ ನಾಶಪಡಿಸಿದ.

೨) ಭೀಮನ ಅಂತಹ ಅಸ್ತ್ರಕೌಶಲವನ್ನು ನೋಡಿ ದೇವತೆಗಳು ದಿಗ್ಭ್ರಾಂತರಾಗಿ ಮುಕ್ತ ಕಂಠದಿಂದ ಪ್ರಶಂಶಿಸಿದರು. ತನಗೆ ಸ್ವಪ್ರತಿಭಾಬಲದಿಂದಲೇ ಅಸ್ತ್ರಪರಿಜ್ಞಾನ ಪೂರ್ಣವಾಗಿ ಉಂಟು ಎಂಬುದನ್ನು ಭೀಮ ಸ್ಫುಟಪಡಿಸಿದ. ಹಾಗೆ ಮಾಡಲೂ ಸಹ ಶ್ರೀಕೃಷ್ಣನ ಆಜ್ಞೆಯೇ ಕಾರಣವಾಗಿತ್ತು (೧೮/೧೨, ೧೩). ಭೀಮನ ಅಸ್ತ್ರಕೌಶಲವನ್ನು ದೇವತೆಗಳು ಕೊಂಡಾಡಿದ ಬಗೆ ಪಂಪಭಾರತದಲ್ಲೂ ನಿರೂಪಿತವಾಗಿರುವುದು ಗಮನಾರ್ಹ.

೩) ಭೀಮ ಜ್ಞಾನದ ಸಂಕೇತ; ಶಿವಾವತಾರನಾದ ಅಶ್ವತ್ಥಾಮ ಮನಸ್ಸಿನ ಸಂಕೇತ. ಭೀಮನಿಂದ ಅಶ್ವತ್ಥಾಮನ ನಿಗ್ರಹ ಎಂಬುದು ಜ್ಞಾನದಿಂದ ಮನಸ್ಸಿನ ನಿಗ್ರಹ ಎಂಬ ತತ್ತ್ವಕ್ಕೆ ಸೂಚಕ.

ಭೀಮನ ಪೆಟ್ಟಿಗೆ ಅಶ್ವತ್ಥಾಮನ ಮೂರ್ಛೆ

ಪುನಃ ಶರೈರೇವ ಪರಸ್ಪರಂ ತಾ-
ವಯುಧ್ಯತಾಂ ಚಿತ್ರಮಲಂ ಚ ಸುಷ್ಠು ।
ತದಾ ತು ಭೀಮಸ್ಯ ಶರೈರ್ಭೃಶಾರ್ದಿತಃ
ದ್ರೌಣಿಃ ಪಪಾತಾಶು ದೃಢಂ ವಿಚೇತನಃ ॥ ೧೦ ॥

---

೧೦. ಪುನಃ ಶರೈರೇವೇತಿ ವದತಾ ಪ್ರಾಗ್ಯುದ್ಧಂ ತದುಕ್ತರೀತ್ಯಾ ನ ಶರೈರಿತಿ ಸೂಚಿತಮ್। ಪುನರಿತಿ ವದತಾ ಇದಾನೀಂ ಧನುರಂತರಂ ಗೃಹೀತ್ವಾ ಯುದ್ಧಂ ಕೃತಮಿತಿ ಸೂಚಿತಮ್ – (ವಾ.)

೧೦. ತತಸ್ತು ಸಾರಥಿಜ್ಞಾತ್ವಾ ದ್ರೋಣಪುತ್ರಮಚೇತನಮ್ ।
ಅಪೋವಾಹ ರಣಾದ್ರಾಜನ್ ಸರ್ವಸೈನ್ಯಸ್ಯ ಪಶ್ಯತಃ ॥ – ಭಾರತ (ದ್ರೋಣ. ೧೫೫/೪೩)

ಅ: ಮತ್ತೆ ಬಾಣಗಳಿಂದಲೇ ಅವರಿಬ್ಬರೂ ಅತ್ಯಂತ ಆಶ್ಚರ್ಯಕರವಾಗಿ ಪರಸ್ಪರ ಚೆನ್ನಾಗಿ ಕಾದಾಡಿದರು. ಆಗ ಭೀಮನ ಬಾಣಗಳಿಂದ ಬಹಳವಾಗಿ ಪೀಡಿತನಾದ ಅಶ್ವತ್ಥಾಮ ಕೂಡಲೇ ಗಾಢವಾದ ಮೂರ್ಛೆಗೊಳಗಾಗಿ ಬಿದ್ದ.

ಎ: ೧) ಅಸ್ತ್ರಯುದ್ಧದ ಅನಂತರ ಪುನಃ ಬಾಣಯುದ್ಧವೇ ನಡೆದು ಕೊನೆಗೆ ಭೀಮನ ಬಾಣಕ್ಕೆ ಅಶ್ವತ್ಥಾಮ ಪ್ರಜ್ಞಾಹೀನನಾಗಿ ಬಿದ್ದುಬಿಟ್ಟ :

ತತಸ್ತು ಸಾರಥಿರ್ಜ್ಞಾತ್ವಾ ದ್ರೋಣಪುತ್ರಮಚೇತನಮ್ ।
ಅಪೋವಾಹ ರಣಾದ್ ರಾಜನ್ ಸರ್ವಸೈನ್ಯಸ್ಯ ಪಶ್ಯತಃ ॥ – ಭಾರತ (೮/೧೫/೪೩)

ಹೀಗೆ ಆ ವಿಶ್ವಖ್ಯಾತಿಯ ಸಮರದಲ್ಲಿ ಜಯಗಳಿಸಿದ ಸಾಧನೆ ಭೀಮಸೇನನದಾಯಿತು. ಇದು ವಾಯುಜೀವೋತ್ತಮತ್ವವನ್ನು ಅತ್ಯಂತ ಸಮರ್ಥವಾಗಿ ಪ್ರತಿಪಾದಿಸುವ ಅಪೂರ್ವ ಘಟ್ಟ.

೨) ಪ್ರಚಲಿತ ಮೂಲಮಹಾಭಾರತದಲ್ಲೂ ಒಂದು ಅಧ್ಯಾಯ ಪೂರ್ತಿ ನಿರೂಪಿತವಾಗಿರುವ ಈ ಘಟ್ಟ ಅನುವಾದಗಳಲ್ಲೂ, ಕುಮಾರವ್ಯಾಸಭಾರತದಲ್ಲೂ ಪೂರ್ಣವಾಗಿ ಬಿಟ್ಟು ಹೋಗಿರುವುದು ತುಂಬಾ ಆಶ್ಚರ್ಯಕರ.

೩) ಪಂಪಭಾರತದಲ್ಲಿ ಮಾತ್ರ ಇದು ಭೀಮನ ವಿಜಯದಲ್ಲಿಯೇ ಪರ್ಯವಸಾನವಾಗುವಂತೆ ಯಥಾರ್ಥವಾಗಿ ನಿರೂಪಿತವಾಗಿರುವುದು ಗಮನಾರ್ಹ.

೪) ಅಶ್ವತ್ಥಾಮ ಭೀಮನಿಂದ ಆ ಮುಂಚೆಯೂ ಅನೇಕ ಸಲ ಪರಾಭವಗೊಂಡ ವಿವರ ಈಗಾಗಲೇ ಬಂದಿದೆ. ಆದರೆ, ಆಗ ಅಶ್ವತ್ಥಾಮರು ಕೃಷ್ಣನಿಗೆ ವಚನ ನೀಡಿದ್ದಂತೆ ಪೂರ್ಣಬಲವನ್ನು ಪ್ರದರ್ಶಿಸಿರಲಿಲ್ಲ(೨೪/೭೮). ಆದರೆ, ಇಂದು ಮಾತ್ರ ಅವರು ತಮ್ಮ ಸಮಸ್ತ ಶಕ್ತಿಯನ್ನು ವಿನಿಯೋಗಿಸಿಯೇ ಕಾದಿದರೂ ಇನ್ನಿಲ್ಲದಂತೆ ಸೋಲನ್ನೇ ಕಂಡರು.

೫) ನಾರಾಯಣಾಸ್ತ್ರ ಪ್ರಸಂಗದಲ್ಲೂ ಅವರದು ಭೀಮನ ವಿರುದ್ಧ ಪರಾಜಯವೇ ಆಗಿತ್ತು ಅದಕ್ಕೆ ಅವರು ಧಿಕ್ಕಾರವೆಂದು ರಣರಂಗವನ್ನು ತ್ಯಜಿಸಿ ಹೊರಟಿದ್ದೇ ಗಮಕ (೨೬/೩೧೦).

ಭೀಮನಿಂದ ಗಜಸೇನೆಯ ವಿನಾಶ

ಭೀಮಶ್ಚ ವಿಹ್ವಲತನುಃ ಸ ತು ಕಿಂಚಿದೇವ
ಪೂರ್ವಂ ಗತೇ ಗುರುಸುತೇ ಪ್ರಯಯೌ ಕ್ಷಣೇನ ।
ನಿರ್ಧೂತಯುದ್ಧಶ್ರಮ ಆತ್ತಧನ್ವಾ
ಯೋದ್ಧುಂ ಗಜೌಘಂ ಪ್ರತಿನಾದಿತಾಶಃ ॥ ೧೧ ॥

ಅ: ಅಶ್ವತ್ಥಾಮ ಮೂರ್ಛೆಗೊಂಡು ತೆರಳಿದ ಮೇಲೆ ಮೊದಲು ಸ್ವಲ್ಪಮಾತ್ರವೇ ಆಯಾಸಗೊಂಡಿದ್ದ ಭೀಮಸೇನ ಕ್ಷಣದಲ್ಲೇ ಯುದ್ಧದ ಬಳಲಿಕೆಯನ್ನು ಪರಿಹರಿಸಿಕೊಂಡು ಧನುಸ್ಸನ್ನೆತ್ತಿ ಸಿಂಹನಾದದಿಂದ ದಿಕ್ಕುಗಳನ್ನು ಪ್ರತಿಧ್ವನಿಸುತ್ತಾ ಗಜಸೇನೆಯೊಂದಿಗೆ ಯುದ್ಧಕ್ಕೆ ತೆರಳಿದ.

ಎ: ೧) ಅಶ್ವತ್ಥಾಮ ಗಾಢಮೂರ್ಛೆಗೆ ಒಳಗಾದರೆ, ಭೀಮಸೇನ ಅಂತಹ ಯುದ್ಧದಲ್ಲಿ ಸ್ವಲ್ಪಮಾತ್ರವೇ ಬಳಲಿದ. ಇದು ಆತನ ಸ್ಪಷ್ಟ ವಿಜಯಕ್ಕೆ ನಿದರ್ಶನ.

೨) ಆ ರೀತಿಯ ಬಳಲಿಕೆಯನ್ನೂ ಸಹ ಭೀಮ ನಟಿಸಿದ್ದೇ ಹೊರತು ವಸ್ತುಸ್ಥಿತಿಯಲ್ಲ. ವಾಯುವಿಗೆ ಬಳಲಿಕೆ ಇತ್ಯಾದಿ ದೋಷಗಳು ಇಲ್ಲ ಎಂಬ ವಿವರ ಉಪನಿಷತ್ತುಗಳಲ್ಲೇ ಬಂದಿದೆ.

೩) ಶಿವನಿಗಿಂತ ಇನ್ನೂರು ಗುಣ ಮಿಗಿಲಾದ ವಾಯುವಿನ ಅವತಾರನಾದ ಭೀಮಸೇನನಿಗೆ ಅಲ್ಲಿ ಆಯಾಸಗೊಳ್ಳುವ ಪ್ರಸಕ್ತಿಯೂ ಇರಲೇ ಇಲ್ಲ.

೪) ಮಹಾಭಾರತದಲ್ಲಿ ಬಂದಿರುವ ಮಾತು ಸಂಜಯನ ಕಣ್ಣಿಗೆ ಕಂಡಂತಹ ವರ್ಣನೆ ಮಾತ್ರವಾದ್ದರಿಂದ ಭೀಮಸೇನ ಹಾಗೆ ತೋರಿದ್ದು ಮಾತ್ರ ಎಂಬುದಕ್ಕಷ್ಟೇ ಅದು ಆಧಾರ.

ತಸ್ಮಿನ್ ಗಜಾನ್ ಮರ್ದಯತಿ ಧಾರ್ತರಾಷ್ಟ್ರೋ ಯುಧಿಷ್ಠಿರಮ್ ।
ಆಯಾದ್ಯುದ್ಧಾಯ ತೌ ಯುದ್ಧಂ ರಾಜಾನೌ ಚಕ್ರತುಶ್ಚಿರಮ್ ॥ ೧೨ ॥

ಅ: ಭೀಮಸೇನ ಆನೆಗಳನ್ನು ದಮನಗೊಳಿಸುತ್ತಿದ್ದಾಗ, ದುರ್ಯೋಧನ ಯುದ್ಧಕ್ಕೆಂದು ಧರ್ಮರಾಜನ ಮೇಲೆ ತೆರಳಿದ. ರಾಜರಾದ ಅವರಿಬ್ಬರು ಬಹುಕಾಲ ಯುದ್ಧ ಮಾಡಿದರು.

ಎ: ಪಾಂಡವರಾಜ ಹಾಗೂ ಕೌರವರಾಜರಲ್ಲಿ ನಡೆದ ಯುದ್ಧವೆಂಬ ಕಾರಣಕ್ಕೆ ಅದು ರೋಚಕವಾಗಿತ್ತು ಎಂದರ್ಥ.

---

೧೧. ಭೀಮಶ್ಚ ವಿಹ್ವಲತನುಃ ಸ ತು ಕಿಂಚಿದೇವೇತ್ಯತ್ರ ಗುರುಸುತೇ ಗತೇ= ದೃಢತರಮೂರ್ಛಾಂ ಗತೇ ಸತಿ। ಪೂರ್ವಂ ಕಿಂಚಿದ್ವಿಹ್ವಲತನುಃ ಸ ಭೀಮೋऽಪಿ ಕ್ಷಣೇನ ನಿರ್ಗೂತಯುದ್ಧಶ್ರಮಃ ಸನ್ ಗಜೌಘಂ ಯೋದ್ಧುಂ ಯಯಾವಿತಿ ಯೋಜನಾ – (ವಾ.)

೧೧. ಕೇವಲಂ ವಿಹ್ವಲತನುಃ ನ ಪುನಃ ವಿಹ್ವಲಮನಾಃ ಇತಿ ಭಾವಃ। – (೨೨/೨೯೧)

೧೨. ಕಿಂಚಿದ್ವಿಹ್ವಲಾ ಚಂಚಲಾ ತನುರ್ಯಸ್ಯ ಸ ತಥಾ। – (ಜ.)

ಯುಧಿಷ್ಠಿರನಿಂದ ದುರ್ಯೋಧನನ ಪರಾಭವ

ತತ್ರ ತಂ ವಿರಥಂ ಚಕ್ರೇ ಸಹಸೈವ ಯುಧಿಷ್ಠಿರಃ ।
ಸ ಗದಾಮಾದದೇ ಗುರ್ವೀಂ ತಂ ಭೀಮೋಽಭ್ಯಪತದ್ಗದೀ ॥ ೧೩ ॥

ಅ: ಕೂಡಲೇ ಧರ್ಮರಾಜ ದುರ್ಯೋಧನನನ್ನು ವಿರಥನನ್ನಾಗಿ ಮಾಡಿದ. ದುರ್ಯೋಧನ ಆಗ ದೊಡ್ಡ ಗದೆಯನ್ನು ಎತ್ತಿಕೊಂಡ. ಆಗ ಗದಾಪಾಣಿಯಾಗಿ ಭೀಮಸೇನ ಅವನ ಮೇಲೆ ನುಗ್ಗಿದ.

ವಿ: ದುರ್ಬಲನಾದ ಧರ್ಮರಾಜ ಮಹಾಬಲಿಷ್ಠನಾದ ದುರ್ಯೋಧನನನ್ನು ವಿರಥನನ್ನಾಗಿ ಮಾಡಲು ಅವನಿಗಿದ್ದ ನೈತಿಕ ಧೈರ್ಯ ಕಾರಣವಾಗಿತ್ತು ಎಂದು ತಿಳಿಯಬೇಕು. ಎಂತಹ ಬಲಿಷ್ಠನೂ ನೀತಿ ತಪ್ಪಿದಾಗ ದುರ್ಬಲನಾಗುವುದಕ್ಕೆ ಇದು ನಿದರ್ಶನ. ಬಳಿಕ ದುರ್ಯೋಧನ ತನ್ನ ಗದೆಯನ್ನು ಕೈಗೆತ್ತಿಕೊಳ್ಳಲು ಭೀಮ ಧರ್ಮರಾಜನ ರಕ್ಷಣೆಗಾಗಿ ಅಲ್ಲಿಗೆ ಧಾವಿಸಿದ. ಭೀಮನ ಅವತಾರ–ವಾಗಿದ್ದುದೇ ಧರ್ಮದ ರಕ್ಷಣೆಗಾಗಿ ಎಂಬುದಕ್ಕೆ ಇದು ದ್ಯೋತಕ (೧೨/೫೦).

ಭೀಮನಿಗೆ ಅಂಜಿ ದುರ್ಯೋಧನನ ಪಲಾಯನ

ದೃಷ್ಟ್ವಾ ಕೃಪಸ್ತಂ ಸ್ವರಥಮಾರೋಪ್ಯಾಪಯಯೌ ತತಃ ।
ತದೈವ ಕರ್ಣನಕುಲೌ ಭೃಶಂ ಬಾಣೈರಯುಧ್ಯತಾಮ್ ॥ ೧೪ ॥

ಅ: ಭೀಮನನ್ನು ನೋಡಿ ಕೃಪ ದುರ್ಯೋಧನನನ್ನು ತನ್ನ ರಥದಲ್ಲಿ ಏರಿಸಿಕೊಂಡು ಅಲ್ಲಿಂದ ತೆರಳಿಬಿಟ್ಟನು. ಆಗಲೇ ಕರ್ಣ ಮತ್ತು ನಕುಲರು ಬಾಣಗಳಿಂದ ಜೋರಾಗಿ ಕಾದತೊಡಗಿದರು.

ವಿ: ೧) ಗದಾಪಾಣಿಯಾದ ಭೀಮನನ್ನು ಕಾಣುತ್ತಲೇ ದುರ್ಯೋಧನನನ್ನು ಸಂರಕ್ಷಿಸಲೆಂದು ಅಲ್ಲಿಗೆ ಧಾವಿಸಿದ ಕೃಪ ಅವನನ್ನು ತನ್ನ ರಥದಲ್ಲಿ ಕೂಡಿಸಿಕೊಂಡು ಪಲಾಯನ ಮಾಡಿದ.

೨) ಭೀಮನಿಗೆ ಕಲಿ ಅಂಜುವುದಕ್ಕೆ ಇದು ಒಂದು ಉತ್ತಮ ನಿದರ್ಶನ. ಆದ್ದರಿಂದಲೇ ವಾಯುಸ್ತುತಿಪಠಣೆಯಿಂದ ಕಲಿಬಾಧೆ ಪರಿಹಾರವಾಗುವುದು ನಿಶ್ಚಿತ ಎಂದು ತಿಳಿಯುವುದು.

೩) ದುರ್ಯೋಧನ ಹಾಗೆ ಪಲಾಯನ ಮಾಡುವ ಮೂಲಕ ಕ್ಷತ್ರಿಯಧರ್ಮದಿಂದ ಚ್ಯುತನಾದ ಎಂಬುದನ್ನೂ ಗಮನಿಸಬೇಕು.

ಕರ್ಣನಿಂದ ವಿರಥನಾದ ನಕುಲ

ನಕುಲಂ ವಿರಥಂ ಕೃತ್ವಾ ಕರ್ಣೋ೭ಥ ಪ್ರಪಲಾಯಿನಮ್ ।
ಅನುದ್ರುತ್ಯ ಚ ವೇಗೇನ ಕಂಠೇ ಧನುರವಾಸೃಜತ್ ॥ ೧೫ ॥

ಅ: ನಕುಲನನ್ನು ಕರ್ಣ ವಿರಥನನ್ನಾಗಿ ಮಾಡಿ ಪಲಾಯನ ಮಾಡತೊಡಗಿದ ಅವನನ್ನು ವೇಗದಿಂದ ಬೆನ್ನುಹತ್ತಿ ಅವನ ಕತ್ತಿಗೆ ಬಿಲ್ಲಿನಿಂದ ತಿವಿದ.

ಉಕ್ತ್ವಾ ಚ ಪರುಷಾ ವಾಚಃ ಕುಂತ್ಯಾ ವಚನಗೌರವಾತ್ ।
ನ ಜಘಾನೈವ ನಕುಲಂ ವಿಸೃಜ್ಯ ಚ ಯಯೌ ಪರಾನ್ ॥ ೧೬ ॥

ಅ: ಕಟುವಾದ ಮಾತುಗಳಿಂದ ಅವನನ್ನು ಬೈದು ಕುಂತಿಗೆ ನೀಡಿದ ಮಾತಿಗೆ ಗೌರವ ನೀಡಿ ಕರ್ಣ ನಕುಲನನ್ನು ಕೊಲ್ಲದೇ ಬಿಟ್ಟು ಇತರರ ಮೇಲೆ ಏರಿಹೋದ.

ವಿ: ದ್ರೋಣಪರ್ವದ ಕೊನೆಯಲ್ಲಿ ಸಹದೇವನನ್ನು ವಿರಥನನ್ನಾಗಿಸಿ ಕಂಠದಲ್ಲಿ ಧನುಸ್ಸನ್ನು ಸಿಕ್ಕಿಸಿ ಅಪಹಾಸ್ಯ ಮಾಡಿದಂತೆ ಕರ್ಣ ಇಲ್ಲಿ ನಕುಲನನ್ನೂ ಹಾಗೆ ಮಾಡಿ ಅಪಹಾಸ್ಯ ಮಾಡಿದನು (೨೬/೨೩೦). ಆದರೂ, ಅವನನ್ನು ಕೊಲ್ಲದೇ ಬಿಡಲು ಕುಂತಿಗೆ ನೀಡಿದ ವಚನ ಕಾರಣವಾಯಿತು (೨೪/೭೯).

ಸಾತ್ಯಕಿಯಿಂದ ವಿಂದಾನುವಿಂದರ ವಧ

ವಿಂದಾನುವಿಂದಾವಥ ಕೈಕಯೌ ರಣೇ
ಸಮಾಸದತ್ ಸಾತ್ಯಕಿರುಗ್ರವಿಕ್ರಮಃ ।
ತಯೋರಮುಷ್ಯಾಭವದುಗ್ರವೈಶಸಂ
ಪ್ರವರ್ಷತೋರುತ್ತಮಸಾಯಕಾನ್ ಬಹೂನ್ ॥ ೧೭ ॥

ಅ: ಕೇಕಯದೇಶದ ವಿಂದ ಮತ್ತು ಅನುವಿಂದರನ್ನು ಉಗ್ರಪರಾಕ್ರಮಿಯಾದ ಸಾತ್ಯಕಿ ಯುದ್ಧದಲ್ಲಿ ಎದುರಿಸಿದ. ಉತ್ತಮವಾದ ಬಹುಸಂಖ್ಯೆಯ ಬಾಣಗಳನ್ನು ಮಳೆಗರೆಯತೊಡಗಿದ; ಅವರಿಬ್ಬರಿಗೆ ಅವನೊಂದಿಗೆ ಉಗ್ರ ಹೋರಾಟ ನಡೆಯಿತು.

---

೧೭. ವಿಂದಾನುವಿಂದೌ ಕೈಕೇಯೌ ಸಾತ್ಯಕಿಃ ಸಮವಾರಯತ್ ॥ – ಭಾರತ (ದ್ರೋಣ. ೧೩೨/೬)

ತಾಭ್ಯಾಂ ನಿರುದ್ದಃ ಸಹಸಾ ಜಹಾರ
ತತ್ರಾನುವಿಂದಸ್ಯ ಶಿರೋಽಥ ವಿಂದಃ ।
ಯುಯೋಧ ಶೈನೇಯಮಥಾರಥಾವುಭೌ
ಪರಸ್ಪರಂ ಚಕ್ರತುರುತ್ತಮಾಹವೇ ॥ ೧೮ ॥

ಅ: ಅವರಿಬ್ಬರಿಂದ ತಡೆಯಲ್ಪಟ್ಟ ಸಾತ್ಯಕಿ ಕೂಡಲೇ ಅನುವಿಂದನ ತಲೆಯನ್ನು ಕತ್ತರಿಸಿದ. ಬಳಿಕ ವಿಂದ ಸಾತ್ಯಕಿನೊಡನೆ ಯುದ್ಧ ಮಾಡಿದ. ಆ ಉತ್ತಮವಾದ ಯುದ್ಧದಲ್ಲಿ ಅವರಿಬ್ಬರೂ ಪರಸ್ಪರರನ್ನು ವಿರಥರನ್ನಾಗಿಸಿಕೊಂಡರು.

ತತಶ್ಚ ಚರ್ಮಾಸಿಧರೌ ಪ್ರಚೇರತುಃ
ಶ್ಯೇನೌ ಯಥಾಽಽಕಾಶತಲೇ ಕೃತಶ್ರಮೌ ।
ನಿಕೃತ್ಯ ಚಾನ್ಯೋನ್ಯಮುಭೌ ಚ ಚರ್ಮಣೀ
ವರಾಸಿಪಾಣೀ ಯುಗಪತ್ ಸಮೀಯತುಃ ॥ ೧೯ ॥

ಅ: ಬಳಿಕ ಉತ್ತಮ ಅಸ್ತ್ರವಿದ್ಯಾಪರಿಣತರಾದ ಅವರಿಬ್ಬರೂ ಕತ್ತಿ ಗುರಾಣಿಗಳನ್ನು ಹಿಡಿದು ಗಗನದಲ್ಲಿ ಗಿಡುಗಗಳಂತೆ ಕಾದತೊಡಗಿದರು. ಒಬ್ಬರು ಮತ್ತೊಬ್ಬರ ಗುರಾಣಿಗಳನ್ನು ಕತ್ತರಿಸಿಕೊಂಡು ಉತ್ತಮವಾದ ಖಡ್ಗಗಳನ್ನು ಕೈಯಲ್ಲಿ ಹಿಡಿದು ಒಂದೇ ಬಾರಿಗೆ ಮುಂದೆ ನುಗ್ಗಿದರು.

ವಿ: ಗಿಡುಗಗಳ ಇಂತಹ ಯುದ್ಧದ ಉಲ್ಲೇಖ ಈಗಾಗಲೇ ಬಂದಿದೆ (೧೦/೪೪).

ತತ್ರಾಪಹಸ್ತೇನ ಶಿರಃ ಸಕುಂಡಲಂ
ಜಹಾರ ವಿಂದಸ್ಯ ಮೃಧೇ ಸ ಸಾತ್ಯಕಿಃ ।
ನಿಹತ್ಯ ತಂ ಬಂಧುಜನೈಃ ಸುಪೂಜಿತೋ
ಜಗಾಮ ಶತ್ರೂನಪರಾನ್ ಪ್ರಕಂಪಯನ್ ॥ ೨೦ ॥

ಅ: ಸಾತ್ಯಕಿ ಆಗ ಕುಂಡಲ ಸಮೇತವಾದ ವಿಂದನ ತಲೆಯನ್ನು ಮುಂಗೈಯಿಂದಲೇ ಯುದ್ಧದಲ್ಲಿ ಹಾರಿಸಿದ. ಅವರಿಬ್ಬರನ್ನೂ ಕೊಂದು ಬಂಧುಜನರಿಂದ ಬಹಳವಾಗಿ ಪೂಜಿತನಾಗಿ ಸಾತ್ಯಕಿ ಇತರ ಶತ್ರುಗಳಲ್ಲಿ ನಡುಕ ಹುಟ್ಟಿಸುತ್ತಾ ಮುಂದೆ ಸಾಗಿದ.

ಕೃಪನಿಗೆ ಅಂಜಿದ ಧೃಷ್ಟದ್ಯುಮ್ನ

ಕೃಪಮಾಯಾಂತಮೀಕ್ಷ್ಯೈವ ತಪಸಾ ಮಾಂ ಪ್ರಪೀಡಯೇತ್ ।
ಇತಿ ಮತ್ವಾ ಪಾರ್ಷತಸ್ತು ಭೀಮಂ ಶರಣಮೇಯಿವಾನ್ ॥ ೨೧ ॥

ಅ: ಧೃಷ್ಟದ್ಯುಮ್ನ ತನ್ನನ್ನು ಎದುರಿಸಲು ಕೃಪ ಬರುತ್ತಿದ್ದುದನ್ನು ನೋಡಿಯೇ ತಪಃಶಕ್ತಿಯಿಂದ ಅವನು ತನ್ನನ್ನು ಬಹಳವಾಗಿ ಪೀಡಿಸಬಹುದೆಂದು ತಿಳಿದು ಭೀಮನನ್ನು ಶರಣುಹೊಕ್ಕ.

ವಿ: ಕೃಪಾಚಾರ್ಯರ ತಪಶ್ಶಕ್ತಿಯಿಂದ ತನ್ನನ್ನು ಭೀಮ ರಕ್ಷಿಸಬಲ್ಲನೆಂದು ಧೃಷ್ಟದ್ಯುಮ್ನ ಅವನನ್ನು ಮೊರೆಹೊಕ್ಕದ್ದು ಭೀಮನ ತಪಶ್ಶಕ್ತಿ ಕೃಪಾಚಾರ್ಯರ ತಪಶ್ಶಕ್ತಿಗಿಂತ ಮಿಗಿಲಾಗಿತ್ತು ಎಂಬುದಕ್ಕೆ ಸೂಚಕ ಎಂದು ತಿಳಿಯಬಹುದು – **'ಭೀಮಸೇನ ಸಮೋ ನಾಸ್ತಿ...'**.

ಅರ್ಜುನನಿಂದ ವಿರಥನಾದ ಕರ್ಣ

ಕರ್ಣಂ ಸಮಂತಾತ್ ಪ್ರತಿಕಾಲಯಂತಂ
ವರೂಥಿನೀಮಿಂದ್ರಸುತಃ ಸಮಭ್ಯಯಾತ್ ।
ಕ್ಷಣಾತ್ತಮಾಜೌ ವಿರಥಂ ಚ ಚಕ್ರೇ
ತತೋಽಪಹಾರಂ ಸ ಚಕಾರ ಚಮ್ವಾಃ ॥ ೨೨ ॥

ಅ: ಎಲ್ಲೆಡೆಗಳಿಂದಲೂ ಸೈನ್ಯವನ್ನು ಸದೆಬಡಿಯುತ್ತಿದ್ದ ಕರ್ಣನನ್ನು ಅರ್ಜುನ ಎದುರಿಸಿ ತೆರಳಿದ. ಕ್ಷಣದಲ್ಲೇ ಅವನನ್ನು ವಿರಥನನ್ನಾಗಿ ಮಾಡಿದ. ಬಳಿಕ ಕರ್ಣ ಸೇನೆಯನ್ನು ಹಿಂತೆಗೆದುಕೊಂಡ.

ವಿ: ಹೀಗೆ ಕರ್ಣ ವಿರಥನಾಗುವುದರೊಂದಿಗೆ ಹದಿನಾರನೆಯ ದಿವಸದ ಯುದ್ಧ ಮುಕ್ತಾಯ–ವಾಯಿತು ಎಂದು ತಿಳಿಯಬೇಕು.

---

೨೧. ಮುಹ್ಯತೇ ಮೇ ಮನಸ್ತಾತ ಗಾತ್ರಸ್ವೇದಶ್ಚ ಜಾಯತೇ ।
ವೇಪಥುಶ್ಚ ಶರೀರೇ ಮೇ ರೋಮಹರ್ಷಶ್ಚ ಸಾರಥೇ ॥
ವರ್ಜಯನ್ ಬ್ರಾಹ್ಮಣಂ ಯುದ್ಧೇ ಶನೈರ್ಯಾಹಿ ಯತೋಽರ್ಜುನಃ ॥
ಅರ್ಜುನಂ ಭೀಮಸೇನಂ ವಾ ಸಮರೇ ಪ್ರಾಪ್ಯ ಸಾರಥೇ ॥
ಕ್ಷೇಮಮದ್ಯ ಭವೇದೇವಮೇಷಾ ಮೇ ನೈಷ್ಠಿಕೀ ಮತಿಃ ॥
(ಧೃಷ್ಟದ್ಯುಮ್ನನ ವಚನ) – ಭಾರತ (ಕರ್ಣ. ೨೬/೧೬,೧೭)

ಹದಿನೇಳನೆಯ ದಿನದ ಯುದ್ಧ

ಪರಾಜಿತಃ ಸಂಯತಿ ಸೂರ್ಯಸೂನುಃ
ಸುತೇನ ಶಕ್ರಸ್ಯ ಸ ಧಾರ್ತರಾಷ್ಟ್ರಮ್ ।
ಜಗಾದ ಬಾಹುಂ ಪ್ರತಿಗೃಹ್ಯ ಪಾರ್ಥೋ
ಜಿಗಾಯ ಮಾಮನ್ಯಮನಸ್ಕಮಾಜೌ ॥ ೨೩ ॥

ಅ: ಅರ್ಜುನನಿಂದ ಯುದ್ಧದಲ್ಲಿ ಪರಾಭವಗೊಂಡ ಕರ್ಣ ದುರ್ಯೋಧನನ ಕೈ ಹಿಡಿದು ಹೇಳಿದ : 'ನನ್ನ ಮನಸ್ಸು ಬೇರೆಡೆಯಿದ್ದಾಗ ಅರ್ಜುನ ನನ್ನನ್ನು ಸೋಲಿಸಿದ'.

ವಿ: ಯುದ್ಧಕ್ಕೆಂದೇ ತೆರಳಿದ್ದ ಕರ್ಣ ತನ್ನ ಮನಸ್ಸು ಬೇರೆಡೆಯಿತ್ತು ಎಂದು ಹೇಳುವ ಮೂಲಕ ತಾನು ಪೂರ್ಣಪ್ರಮಾಣದಲ್ಲಿ ಯುದ್ಧ ಮಾಡಲಿಲ್ಲ ಎಂದು ತಿಳಿಸಿದಂತಾಯಿತು. ಅದು ಒಂದು ರೀತಿಯಲ್ಲಿ ಕ್ಷತ್ರಿಯಧರ್ಮದ ಲೋಪವೇ ಸರಿ.

ಶಲ್ಯ ಸಾರಥ್ಯಕ್ಕೆ ಕರ್ಣನ ಬಯಕೆ

ಕಾಮಂ ರಥೋ ಮೇ ಧನುರಪ್ಯಭೇದ್ಯಂ
ದತ್ತಂ ಭೃಗೂಣಾಮಧಿಪೇನ ದಿವ್ಯಮ್ ।
ಯಂತಾ ನ ತಾದೃಙ್ಮಮ ಯಾದೃಶೋ ಹರಿಃ
ಶಲ್ಯೋ ಯದಿ ಸ್ಯಾತ್ ತ್ವದರಿಂ ನಿಹನ್ಯಾಮ್ ॥ ೨೪ ॥

---

೨೪. ಕಾಮಂ ಕಾಮ್ಯೋ ಮತ್ಕಾಮನಾ ವಿಷಯಭೂತೋ ರಥೋ ದತ್ತಂ ದತ್ತಃ ಮೇ ಕಾಮಂ ಕಾಮ್ಯಮಭೇದ್ಯಂ ದಿವ್ಯಂ ಧನುರಪಿ ದತ್ತಮಿತಿ ॥ – (ಸ.)

೨೪. ಸರ್ವಾಯುಧಮಹಾಮಾತ್ರಂ ವಿಜಯಂ ನಾಮ ತದ್ಧನುಃ ।
ಇಂದ್ರಾರ್ಥಂ ಪ್ರಿಯಕಾಮೇನ ನಿರ್ಮಿತಂ ವಿಶ್ವಕರ್ಮಣಾ ॥
ಯೇನ ದೈತ್ಯಗಣಾನ್ ರಾಜನ್ ಜಿತವಾನ್ ವೈ ಶತಕ್ರತುಃ ।
ಯಸ್ಯ ಘೋಷೇಣ ದೈತ್ಯಾನಾಂ ವ್ಯಾಮುಹ್ಯಂತ ದಿಶೋ ದಶ ॥
ತದ್ಭಾರ್ಗವಾಯ ಪ್ರಾಯಚ್ಛತ್ಕೃತಃ ಪರಮಸಂಮತಮ್ ।
ತದ್ ದಿವ್ಯಂ ಭಾರ್ಗವೋ ಮಹ್ಯಮದದಾತ್ ಧನುರುತ್ತಮಮ್ ॥ – ಭಾರತ (ಕರ್ಣ. ೩೧/೪೨-೪೪)

೨೪. ಸಾರಥಿಸ್ತಸ್ಯ ಗೋವಿಂದೋ ಮಮ ತಾದೃಙ್ ನ ವಿದ್ಯತೇ ॥ – ಭಾರತ (ಕರ್ಣ. ೩೧/೫೨)

ಅಯಂ ತು ಸದೃಶಃ ಶೌರೇಃ ಶಲ್ಯಃ ಸಮಿತಿಶೋಭನಃ ।
ಸಾರಥ್ಯಂ ಯದಿ ಮೇ ಕುರ್ಯಾದ್ ಧ್ರುವಸ್ತೇ ವಿಜಯೋ ಭವೇತ್ ॥ – ಭಾರತ (ಕರ್ಣ. ೩೧/೫೮)

ಅ: ನನಗೆ ಬೇಕಾದ ರಥ, ಅಭೇದ್ಯವಾದ ದಿವ್ಯಧನುಸ್ಸುಗಳನ್ನು ಪರಶುರಾಮರು ನೀಡಿರುವರು. ಆದರೆ ಕೃಷ್ಣನಂತಹ ಸಾರಥಿ ನನಗಿಲ್ಲ. ಶಲ್ಯ ನನಗೆ ಸಾರಥಿಯಾದಲ್ಲಿ ನಿನ್ನ ಶತ್ರುವನ್ನು ಕೊಲ್ಲಬಲ್ಲೆ.

ಎ: ೧) ಕರ್ಣ ಅಂದಿನ ಸೋಲಿಗೆ ಕಾರಣ ನೀಡಿ ಬಳಿಕ ಅರ್ಜುನನಂತೆ ತನಗೂ ಅಭೇದ್ಯವಾದ ರಥ ಮತ್ತು ಧನುಸ್ಸುಗಳು ಇದ್ದರೂ ಕೃಷ್ಣನಂತಹ ಸಾರಥಿ ಮಾತ್ರ ಇಲ್ಲದಿರುವುದರಿಂದ ಗೆಲುವು ಸಾಧ್ಯವಾಗುತ್ತಿಲ್ಲ, ಶಲ್ಯ ಸಾರಥ್ಯವನ್ನು ಮಾಡಿದಲ್ಲಿ ಶತ್ರು ನಾಶವನ್ನು ಮಾಡುವುದಾಗಿ ಭರವಸೆಯಿತ್ತ:

ಅಯಂ ತು ಸದೃಶಃ ಶೌರೇಃ ಶಲ್ಯಃ ಸಮಿತಿಶೋಭನಃ ।
ಸಾರಥ್ಯಂ ಯದಿ ಮೇ ಕುರ್ಯಾದ್ಧ್ರುವಸ್ತೇ ವಿಜಯೋ ಭವೇತ್ ॥

– ಭಾರತ (ಕರ್ಣ. ೩೧/೫೮)

೨) ಅರ್ಜುನನಂತೆ ಕರ್ಣನಿಗೂ ಅಭೇದ್ಯವಾದ ರಥ, ಧನುಸ್ಸು ಮತ್ತು ಅಕ್ಷಯ ಬತ್ತಳಿಕೆಗಳು ಇದ್ದ (೧೫/೫೦) ವಿವರ ಪಂಪಭಾರತ, ಕುಮಾರವ್ಯಾಸಭಾರತಗಳಲ್ಲಿ ಬಂದಿಲ್ಲ. ಅವನ್ನೆಲ್ಲ ಪರಶುರಾಮರು ನೀಡುವ ಮೂಲಕ ಅವನ ಮೇಲೆ ಅಪಾರ ಅನುಗ್ರಹ ಮಾಡಿದ್ದರು ಎಂಬ ಅಪೂರ್ವ ಅಂಶ ಅದರಿಂದಾಗಿ ಜನರಿಗೆ ತಿಳಿಯದಂತಾಗಿದೆ.

೩) ಕರ್ಣ ಶಲ್ಯನನ್ನು ಕೃಷ್ಣನಿಗೆ ಸಮಾನನೆಂದು ಭಾವಿಸುವ ಮೂಲಕ ಶ್ರೀಹರಿಗೆ ಸಮನಾದವನು ಮತ್ತೊಬ್ಬನಿಲ್ಲ ಎಂಬ ಮೂಲ ತತ್ವಕ್ಕೆ ಅಪಚಾರ ಮಾಡಿರುವನು ಎಂಬುದನ್ನು ಗಮನಿಸಬೇಕು :

ಏವಮಭ್ಯಧಿಕಃ ಪಾರ್ಥಾದ್ಭವಿಷ್ಯಾಮಿ ಗುಣೈರಹಮ್ ।
ಶಲ್ಯೋಽಪ್ಯಧಿಕಃ ಕೃಷ್ಣಾದರ್ಜುನಾದಪಿ ಚಾಪ್ಯಹಮ್ ॥ –ಭಾರತ(ಕರ್ಣ.೩೧/೬೧)

೪) ಸೀಮಿತ ಬಲದ ಶಲ್ಯರಾಜನೆಲ್ಲಿ? ಅಮಿತಬಲದ ಶ್ರೀಕೃಷ್ಣನೆಲ್ಲಿ? ಇಂತಹ ವ್ಯತ್ಯಾಸವನ್ನು ಗಮನಿಸದೇ ಅವರಿಬ್ಬರಲ್ಲಿ ಸಾಮ್ಯವನ್ನು ತಿಳಿದದ್ದು ಕರ್ಣನ ಪರಾಭವಕ್ಕೆ ಒಂದು ಪ್ರಮುಖ ಕಾರಣವಾಯಿತು ಎಂದೂ ತಿಳಿಯಬಹುದು; ಈ ರೀತಿ ಶ್ರೀಹರಿಗೆ ಇತರರ ಸಾಮ್ಯವನ್ನು ತಿಳಿಯುವುದು ನವವಿಧದೋಷಗಳಲ್ಲಿ ಒಂದು ಎಂಬುದಾಗಿ ಪರಿಗಣಿತವಾಗಿದೆ :

ಜೀವಾಭೇದೋ ನಿರ್ಗುಣತ್ವಮಪೂರ್ಣಗುಣತಾ ತಥಾ ।
ಸಾಮ್ಯಾಧಿಕ್ಯೇ ತದನ್ಯೇಷಾಂ ಭೇದಸ್ತದ್ಗತ ಏವ ಚ ॥
ಪ್ರಾದುರ್ಭಾವವಿಪರ್ಯಾಸಸ್ತದ್ಭಕ್ತದ್ವೇಷ ಏವ ಚ ।
ತತ್ಪ್ರಮಾಣಸ್ಯ ನಿಂದಾ ಚ ದ್ವೇಷಾ ಏತೇಽಖಿಲಾ ಮತಾಃ ॥ – (೧/೧೧೦, ೧೧೧)

ಶಲ್ಯನ ಬಳಿಗೆ ದುರ್ಯೋಧನ

ಇತೀರಿತೇ ಸೌತ್ಯಕೃತೇ ಸ ಶಲ್ಯಂ
ಪ್ರೋವಾಚ ಸ ಕ್ರುದ್ಧ ಇವಾಭವತ್ ತದಾ ।
ದುರ್ಯೋಧನೋ ರಥಿನಃ ಸಾರಥೇಸ್ತು
ವ್ಯಾವರ್ಣಯನ್ನುತ್ತಮತಾಮಶಾಮಯತ್ ॥ ೨೫ ॥

ಅ: ಕರ್ಣ ಹೀಗೆನ್ನಲು ದುರ್ಯೋಧನ ಸಾರಥ್ಯ ವಹಿಸಲೆಂದು ಶಲ್ಯನನ್ನು ಕೇಳಿಕೊಂಡ. ಅವನು ಆಗ ಕೆರಳಿದವನಂತೆ ನಟಿಸಿದ. ದುರ್ಯೋಧನ ರಥಿಕನಿಗಿಂತ ಸಾರಥಿಯ ಉತ್ತಮತ್ವವನ್ನು ಬಹುವಾಗಿ ಬಣ್ಣಿಸುತ್ತಾ ಅವನನ್ನು ಸಮಾಧಾನಪಡಿಸಿದ.

ವಿ: ೧) ಕರ್ಣನ ಮಾತಿನಂತೆ ದುರ್ಯೋಧನ ಶಲ್ಯನನ್ನು ಕರ್ಣನ ಸಾರಥ್ಯ ವಹಿಸುವಂತೆ ಕೇಳಿಕೊಂಡಾಗ ಶಲ್ಯ ಅದರಿಂದ ಬಹಳವಾಗಿ ಕೆರಳಿದವನಂತೆ ನಟಿಸಿದ :

ಅವಮನ್ಯಸಿ ಗಾಂಧಾರೇ ಧ್ರುವಂ ಚ ಪರಿಶಂಕಸೇ ।
ಯನ್ಮಾಂ ಬ್ರವೀಷಿ ವಿಶ್ರಬ್ಧಂ ಸಾರಥ್ಯಂ ಕ್ರಿಯತಾಮಿತಿ ॥ –(ಇತ್ಯಾದಿ)ಭಾರತ (೮/೩೨/೩೨)

ಮೂರ್ಧಾಭಿಷಿಕ್ತರಾಜನಾದ ತಾನು ಸೂತಪುತ್ರನಾದ ಕರ್ಣನಿಗೆ ಸಾರಥಿಯಾಗುವುದು ಸರ್ವಥಾ ಅನುಚಿತ ಎಂದು ವಾದಿಸಿದ (ಕರ್ಣ.೩೨/೪೯, ೫೦):

ಅಹಂ ಮೂರ್ಧಾಭಿಷಿಕ್ತೋ ಹಿ ರಾಜರ್ಷಿಕುಲಜೋ ನೃಪಃ ।
ಮಹಾರಥಃ ಸಮಾಖ್ಯಾತಃ ಸೇವ್ಯಃ ಸ್ತುತ್ಯಶ್ಚ ವಂದಿನಾಮ್ ॥
ಸೋಽಹಮೇತಾದೃಶೋ ಭೂತ್ವಾ ನೇಹಾರಿಬಲಸೂದನಃ ।
ಸೂತಪುತ್ರಸ್ಯ ಸಂಗ್ರಾಮೇ ಸಾರಥ್ಯಂ ಕರ್ತುಮುತ್ಸಹೇ ॥–ಭಾರತ(೭/೩೨/೪೯,೫೦)

೨) ಆದರೆ, ಧರ್ಮರಾಜನಿಗೆ ಅವನಾಗಲೇ ಕರ್ಣನ ತೇಜೋಭಂಗ ಮಾಡುವ ವಚನ ನೀಡಿದ್ದರಿಂದ, ಕರ್ಣನ ಸಾರಥ್ಯವನ್ನು ನಿರ್ವಹಿಸುವುದು ಅವನಿಗೆ ಬೇಕಾದ ಕಾರ್ಯವೇ ಆಗಿತ್ತು (೨೪/೩೨). ಆದರೂ ಹಾಗೆ ತಕ್ಷಣ ಒಪ್ಪಿಕೊಂಡಲ್ಲಿ ದುರ್ಯೋಧನನಿಗೆ ಸಂಶಯ ಉಂಟಾದೀತು ಎಂಬ ಭಾವನೆಯಿಂದ ಶಲ್ಯ ಹಾಗೆ ನಟಿಸಿದ ಎಂದು ತಿಳಿಯಬೇಕು.

೩) ದುರ್ಯೋಧನ ಆಗ ಸಾರಥಿಯಾಗುವುದು ಎಂದೂ ಘನತೆಗೆ ಕುಂದು ತರುವಂತಹುದಲ್ಲ, ವಾಸ್ತವಿಕವಾಗಿ ರಥಿಗಿಂತ ಸಾರಥಿಯ ಸ್ಥಾನವೇ ಮಿಗಿಲಾದುದು ಎಂದು ಬಗೆಬಗೆಯಾಗಿ ವಿವರಿಸಿದ ಎಂದರ್ಥ.

---

೨೫. ರಥಿನಃ ಸಾರಥೇಸ್ತು ಇತ್ಯತ್ರ ರಥಿನಃ ಸಕಾಶಾತ್ –(ವಾ.)

ರಥಿನೋಽಭ್ಯಧಿಕೋ ವೀರ ಕರ್ತವ್ಯೋ ರಥಸಾರಥಿಃ ।
ತಸ್ಮಾತ್ ತ್ವಂ ಪುರುಷವ್ಯಾಘ್ರ ನಿಯಚ್ಛ ತುರಗಾನ್ ಯುಧಿ॥ –ಭಾರತ(ಕರ್ಣ.೩೫/೨)

ರಥಿಗಿಂತ ಸಾರಥಿ ಮಿಗಿಲು

ಬುದ್ಧ್ಯಾ ಬಲೇನ ಜ್ಞಾನೇನ ಧೈರ್ಯಾದ್ಯೈರಪಿ ಯೋಽಧಿಕಃ ।
ರಥಿನಃ ಸಾರಥಿಃ ಸ ಸ್ಯಾದರ್ಜುನಸ್ಯ ಯಥಾ ಹರಿಃ ।
ಯಥಾ ಶಿವಸ್ಯ ಬ್ರಹ್ಮಾಽಭೂತ್ ದಹತಸ್ತ್ರಿಪುರಂ ಪುರಾ ॥ ೨೬ ॥

ಅ: ಬುದ್ಧಿ, ಬಲ, ಜ್ಞಾನ, ಧೈರ್ಯ ಮೊದಲಾದ ಗುಣಗಳಿಂದ ಯಾವನು ರಥಿಕನಿಗಿಂತ ಮಿಗಿಲಾಗಿರುವನೋ ಅವನೇ ರಥಿಗೆ ಸಾರಥಿಯಾಗಬೇಕು. ಅರ್ಜುನನಿಗೆ ಕೃಷ್ಣ ಇರುವಂತೆ. ಹಿಂದೆ ತ್ರಿಪುರದಹನಕ್ಕೆ ಹೊರಟ ಶಿವನಿಗೆ ಬ್ರಹ್ಮ ಇದ್ದಂತೆ.

ವಿ: ೧) 'ರಥಿಗಿಂತ ಸಾರಥಿಯೇ ಮಿಗಿಲು. ಏಕೆಂದರೆ ರಥಿಯನ್ನು ಸಂರಕ್ಷಿಸುವ ಹೊಣೆ ಅವನದು. ಆದರಿಂದಾಗಿ ಬುದ್ಧಿ ಬಲ, ಜ್ಞಾನ, ಧೈರ್ಯ ಮೊದಲಾದ ಗುಣಗಳಲ್ಲಿ ರಥಿಕನಿಗಿಂತ ಅವನೇ ಮಿಗಿಲಾಗಿರಬೇಕು. ಅರ್ಜುನನಿಗಿಂತ ಮಿಗಿಲಾದ ಕೃಷ್ಣ ಅರ್ಜುನನನ್ನು ಸದಾ ಪಾಲಿಸುವಂತೆ ನೀನು ಕರ್ಣನನ್ನು ಪಾಲಿಸು' ಎಂದು ದುರ್ಯೋಧನ ಶಲ್ಯನನ್ನು ಕೇಳಿಕೊಂಡ :

ಯಥಾ ಚ ಸರ್ವಥಾಽಽಪತ್ಸು ವಾರ್ಷ್ಣೇಯಃ ಪಾತಿ ಪಾಂಡವಮ್ ।
ತಥಾ ಮದ್ರೇಶ್ವರಾದ್ಯ ತ್ವಂ ರಾಧೇಯಂ ಪ್ರತಿಪಾಲಯ ॥ – (೮/೩೨/೮)

೨) ಅರ್ಜುನನು ಹಾಗೆ ಸಾರಥಿಯಾದ್ದರಿಂದಲೇ ಉತ್ತರಕುಮಾರ ಧರ್ಮ ತೊರೆಯ–ದಿರಲು ಸಾಧ್ಯವಾಯಿತು (೨೩/೪೧).

೩) ತ್ರಿಪುರಾಸುರದಹನಕಾಲಕ್ಕೆ ಶಿವನಿಗೆ ಅವನಿಗಿಂತ ಮಿಗಿಲಾದ ಬ್ರಹ್ಮ ಸಾರಥಿಯಾಗಿ–ದ್ದಿಲ್ಲವೇ ಎಂಬುದು ದುರ್ಯೋಧನನ ವಿವರಣೆ.

---

೨೬. ಬುದ್ಧ್ಯಾ ಬಲೇನೇತ್ಯತ್ರ ರಣಾಂಕಣೇ ನಿರಾಯುಧತಯಾ ಸ್ಥಿತಸ್ಯ ಸೂತಸ್ಯ ಧೈರ್ಯೋದ್ದೀಪನಾಯ ಬಲಮಪ್ಯಪೇಕ್ಷಿತಮ್। ಅನ್ಯಥಾ ಉತ್ತರಕುಮಾರವದ್ಭೀತ್ಯಾ ಪಲಾಯನಮಪಿ ಕುರ್ಯಾದಿತಿ ಭಾವಃ। ಬುದ್ಧಿರ್ನಾಮ ಸಹಜಬುದ್ಧಿಃ। ಜ್ಞಾನಮ್ ಸೂತಶಾಸ್ತ್ರಾದಿಕೌಶಲಾಭಿಜ್ಞತಾ – (ವಾ.)

೨೬. ಏವಂ ಸ ಭಗವಾನ್ ದೇವಃ ಸರ್ವಲೋಕಪಿತಾಮಹಃ।
ಸಾರಥ್ಯಮಕರೋತ್ ತತ್ರ ಬ್ರಹ್ಮಾ ರುದ್ರೋಽಭವದ್ ರಥೀ॥
– (ಇದು ಶಲ್ಯನನ್ನು ಕುರಿತು ದುರ್ಯೋಧನನ ವಚನ) (೮/೩೫/೧)

''ರಥೋಪರಿಸ್ವೀಕರಣಾದುದಾತ್ತಃ ಸಾರಥಿರ್ಮತಃ'' – ಇತಿ ವ್ಯಾಸನಿರುಕ್ತೇ (ಭಾ. ತಾ. ೧೦/೯೪/೩೪)

ತಥಾ ಚ ಶಕಟಚಕ್ರೇಣ ಯುತಂ ಅಬ್ಜಚಕ್ರಮಿತ್ಯರ್ಥಃ। – ತಥಾಹಿ ವಿರೋಧಭಂಜಿನ್ಯಾಂ

೪) ಮಹಾಭಾರತದ ಈ ಭಾಗದಲ್ಲಿ ತ್ರಿಪುರಾಸುರದಹನದ ಕಥೆ ವಿವರವಾಗಿ ನಿರೂಪಿತವಾಗಿದೆ (ಕರ್ಣಪರ್ವ, ಅಧ್ಯಾಯ ೩೩, ೩೪).

೫) ದುರ್ಯೋಧನನ ಈ ಮಾತುಗಳಲ್ಲಿ ಅರ್ಜುನನಿಗಿಂತ ಕೃಷ್ಣ ಶ್ರೇಷ್ಠ ಎಂದೂ, ಶಿವನಿಗಿಂತ ಬ್ರಹ್ಮ ಶ್ರೇಷ್ಠ ಎಂದೂ ನಿರೂಪಿತವಾಗಿದೆ. ಮೊದಲನೆಯದು ವಿಷ್ಣು ಸರ್ವೋತ್ತಮತ್ವಕ್ಕೂ, ಎರಡನೆಯದು ವಾಯು ಜೀವೋತ್ತಮತ್ವಕ್ಕೂ ಗಮಕ.

೬) ದುರ್ಯೋಧನನ ಬಾಯಲ್ಲಿ ಈ ಎರಡು ತತ್ತ್ವಗಳು ಹೀಗೆ ಬಂದಿದ್ದರೂ ಅವನಿಗೆ ಅವುಗಳಲ್ಲಿ ದೀಕ್ಷೆಯಿಲ್ಲದೇ ಶಲ್ಯನನ್ನು ಕರ್ಣನ ಸಾರಥ್ಯಕ್ಕೆ ಒಪ್ಪಿಸುವ ಮಟ್ಟಿಗೆ ಮಾತ್ರ ಉಪಯೋಗಿಸಿಕೊಂಡಿದ್ದರಿಂದ ಅವನಿಗೆ ಅವುಗಳ ಫಲ ಲಭಿಸಲಿಲ್ಲ.

೭) ತತ್ತ್ವವನ್ನು ಇತರ ಸಾಧನಕ್ಕಾಗಿ ಬಳಸಿಕೊಳ್ಳುವುದು ದೀಕ್ಷೆಯ ಲಕ್ಷಣವಲ್ಲ ಎನ್ನಲು ಇದೊಂದು ಉತ್ತಮ ನಿದರ್ಶನ.

೮) ಮನಃಪೂರ್ತಿಯಾಗಿ ಅವರಡನ್ನೂ ಭಾವಿಸಿದ್ದಲ್ಲಿ ದುರ್ಯೋಧನ ಕೃಷ್ಣ ಭೀಮರ ಎದುರು ಯುದ್ಧಮಾಡುವ ಪ್ರಸಂಗವೇ ಒದಗುತ್ತಿರಲಿಲ್ಲ ಎಂಬುದನ್ನು ಗಮನಿಸಬೇಕು.

ಕರ್ಣನ ಸಾರಥಿಯಾಗಿ ಶಲ್ಯ

ಇತ್ಯಾದಿವಾಕ್ಯೈಃ ಸಂಶಾಂತ ಇವ ಶಲ್ಯೋಽಥ ಸಾರಥಿಃ ।
ಬಭೂವ ತೇನ ಸಹಿತಃ ಸೇನಾಂ ವ್ಯೂಹ್ಯ ರವೇಃ ಸುತಃ ॥ ೨೭ ॥

ಅಃ ಇವೇ ಮೊದಲಾದ ವಾಕ್ಯಗಳಿಂದ ಶಲ್ಯ ಸಮಾಧಾನಗೊಂಡಂತೆ ನಟಿಸಿ ಕರ್ಣನಿಗೆ ಸಾರಥಿಯಾದನು. ಅವನೊಂದಿಗೆ ಕರ್ಣ ಸೇನೆಯನ್ನು ವ್ಯೂಹವಾಗಿ ನಿಲ್ಲಿಸಿದ.

ವಿಃ ೧) ಶಲ್ಯನಿಗೆ ಹಿಂದೆ ಹೇಳಿದಂತೆ ಸಾರಥ್ಯ ಅಪೇಕ್ಷಿತವೇ ಆಗಿದ್ದರೂ ಅದನ್ನು ತೋರಿಸಿಕೊಳ್ಳದೆ ದುರ್ಯೋಧನನ ಮಾತುಗಳಿಂದ ಸಮಾಧಾನ ಹೊಂದಿದವನಂತೆ ತೋರಿಕೊಂಡು ಸಾರಥ್ಯವನ್ನು ನಿರ್ವಹಿಸಲು ಸಮ್ಮತಿಸಿದ.

೨) ದುರ್ಯೋಧನ ಶಲ್ಯನನ್ನು ಹೊಗಳುತ್ತಾ ಅವನನ್ನು ಕೃಷ್ಣನಿಗಿಂತ ಮಿಗಿಲು ಎಂದುಬಿಡುವನು. ಇದು ದುರ್ಯೋಧನನಿಗೆ ವಿಷ್ಣುಸರ್ವೋತ್ತಮತ್ವದ ದೀಕ್ಷೆ ಇಲ್ಲದ್ದಕ್ಕೆ ಉತ್ತಮ ನಿದರ್ಶನ. ಅವನಿಗೆ ತನ್ನ ಕಾರ್ಯಸಾಧನೆ ಮುಖ್ಯವಾಗಿತ್ತೇ ಹೊರತು ಸರ್ವಥಾ ತತ್ವಚಿಂತನೆಯಲ್ಲ. ಶಲ್ಯ ತನ್ನ ಸಾರಥ್ಯ ವಹಿಸಿದ್ದರಿಂದ ಕರ್ಣ ಸ್ಥೈರ್ಯ ಹೆಚ್ಚಿದವನಾಗಿ ಯುದ್ಧಕ್ಕೆ ಅಣಿಯಾದ.

೩) ಹಾಗೆ ಮೂರ್ಧಾಭಿಷಿಕ್ತನಾದ ಶಲ್ಯನನ್ನು ತನ್ನ ಸಾರಥಿಯನ್ನಾಗಿ ಮಾಡಿಕೊಳ್ಳುವ ಮೂಲಕ ಕರ್ಣ ಸೂತಪುತ್ರನೆಂಬ ಕಾರಣದಿಂದ ತನ್ನಲ್ಲಿ ಉಂಟಾಗಿದ್ದ ಕೀಳರಿಮೆಯನ್ನು ನಿವಾರಿಸಿಕೊಳ್ಳಲು ಪ್ರಯತ್ನಿಸಿದ ಎಂದೂ ತಿಳಿಯಬಹುದು.

೪) ಉತ್ತಮರನ್ನು ತಮ್ಮ ವಶವರ್ತಿಗಳನ್ನಾಗಿ ಮಾಡಿಕೊಳ್ಳುವ ಮೂಲಕ ಸಾಮಾನ್ಯರು ತಮ್ಮ ಕೀಳರಿಮೆಯನ್ನು ಪರಿಹರಿಸಿಕೊಳ್ಳಲು ಪ್ರಯತ್ನಿಸುವುದು ಮನಃಶಾಸ್ತ್ರದ ವಿವರಣೆಯೂ ಆಗಿದೆ.

ಕರ್ಣನ ದುರಹಂಕಾರ

ಗಚ್ಛನ್ ಯುದ್ಧಾಯ ದರ್ಪೇಣ
ಪ್ರಾಹ ಮೇ ಯೋಽರ್ಜುನಂ ಪುಮಾನ್ ।
ದರ್ಶಯೇತ್ ತಸ್ಯ ದಾಸ್ಯಾಮಿ
ಪ್ರೀತೋ ವಿತ್ತಮನರ್ಗಲಮ್ ॥ ೨೮ ॥

ಅ: ಕರ್ಣ ಯುದ್ಧಕ್ಕೆ ತೆರಳುತ್ತಾ ಸೊಕ್ಕಿನಿಂದ ನುಡಿದ : ''ಯಾವ ಪುರುಷ ನನಗೆ ಅರ್ಜುನನನ್ನು ತೋರಿಸುವನೋ ಅವನಿಗೆ ಪ್ರೀತನಾಗಿ ಅಪರಿಮಿತ ಸಂಪತ್ತನ್ನು ನೀಡುವೆ''.

ವಿ: ೧) ಕರ್ಣ ತನ್ನ ಅಹಂಕಾರವನ್ನು ಪ್ರದರ್ಶಿಸಲೆಂದು ವಿಚಿತ್ರವಾಗಿ ವರ್ತಿಸುವುದನ್ನು ಗಮನಿಸಬೇಕು. ''ಅರ್ಜುನನೆಲ್ಲೋ ತಲೆಮರೆಸಿಕೊಂಡಿರುವನು. ಅವನನ್ನು ತೋರಿಸಿಕೊಟ್ಟವರಿಗೆ ಬಹುಮಾನ ನೀಡುವೆನು'' ಎಂಬಂತಹ ಮಾತುಗಳನ್ನಾಡುತ್ತಾ ವಿಕೃತವಾದ ಸಂತೃಪ್ತಿಯನ್ನು ಪಡೆಯಲು ಅವನು ಬಯಸುತ್ತಿರುವುದು ಸ್ಪಷ್ಟ.

೨) ಇದು ದುರ್ಯೋಧನನಂತಹ ನೀಚನೊಂದಿಗೆ ಸಖ್ಯ ಬೆಳೆಸಿದ್ದರ ಫಲ.

ಶಲ್ಯನಿಂದ ಕರ್ಣನ ತೇಜೋವಧೆ

ಇತ್ಯುಕ್ತವಂತಂ ಬಹುಶಃ ಪ್ರಾಹ ಶಲ್ಯಃ ಪ್ರಹಸ್ಯ ಚ ।
ನಿವಾತಕವಚಾ ಯೇನ ಹತಾ ದಗ್ಧಂ ಚ ಖಾಂಡವಮ್ ।
ಕೋ ನಾಮ ತಂ ಜಯೇನ್ಮರ್ತ್ಯೋ ದೃಷ್ಟೋ ವೋಽಪಿ ಸ ಗೋಗ್ರಹೇ ॥ ೨೯ ॥

---

೨೮. ಯೋ ಮಾಮದ್ಯ ಮಹಾತ್ಮಾನಂ ದರ್ಶಯೇಚ್ಛ್ವೇತವಾಹನಮ್ ।
ತಸ್ಮೈ ದದ್ಯಾಮಭಿಪ್ರೇತಂ ಧನಂ ಯನ್ಮನಸೇಚ್ಛತಿ ॥ – ಇತ್ಯಾದಿ (ಕರ್ಣ. ೩೮/೨-೨೫)

೨೯. ಕಃ ಬ್ರಹ್ಮಾ ಜಯೇದಿತ್ಯಾವರ್ತ್ಯ ಯೋಜ್ಯಮ್। ...ಗುಹೇ ಪಾಂಡವಾಜ್ಞಾತವಾಸಾನಂತರಂ ಕೃತಗೋಗ್ರಹಣೇ ದೃಷ್ಟಃ। – (ಜ.)

ಅ: ಕರ್ಣ ಹಾಗೆಂದಾಗ ಶಲ್ಯ ಪರಿಹಾಸ ಮಾಡಿ ನುಡಿದ 'ಅರ್ಜುನನಿಂದ ನಿವಾತಕವಚರು ಹತರಾಗಿರುವರು, ಖಾಂಡವ ಬೂದಿಯಾಯಿತು. ಅಂಥವನನ್ನು ಯಾವ ಮಾನವ ತಾನೇ ಜಯಿಸಿಯಾನು. ಉತ್ತರ ಗೋಗ್ರಹಣದಲ್ಲೂ ನೀವು ಅವನನ್ನು ಕಂಡಿರುವಿರಿ.

ವಿ: 'ಕಃ ಜಯೇತ್' ಎಂಬುದಕ್ಕೆ ಅರ್ಜುನನನ್ನು ಜಯಿಸಲು ಬ್ರಹ್ಮನಿಗೆ ಸಾಧ್ಯ ಎಂದೂ ಅರ್ಥ.

ಕಾಕಗೋಮಾಯುಧರ್ಮಾ ತ್ವಂ ಹಂಸಸಿಂಹೋಪಮಂ ರಣೇ ।
ಮಾ ಯಾಹಿ ಪಾರ್ಥಂ ಮಾ ಯಾಹಿ ಹತೋಽನೇನ ಯಮಕ್ಷಯಮ್ ।
ಇತ್ಯುಕ್ತೋ ರವಿಜೋ ಮದ್ರಾನ್ ನಿತರಾಂ ಪರ್ಯಕುತ್ಸಯತ್ ॥ ೩೦ ॥

ಅ: ಕಾಗೆ ನರಿಗಳಂತಹ ನೀನು ಹಂಸ ಸಿಂಹಗಳಂತಹ ಅರ್ಜುನನನ್ನು ಯುದ್ಧದಲ್ಲಿ ಎದುರಿಸದಿರು. ಅವನಿಂದ ಹತನಾಗಿ ಯಮಲೋಕಕ್ಕೆ ತೆರಳದಿರು. ಶಲ್ಯ ಹೀಗೆನ್ನಲು ಕರ್ಣ ಮದ್ರದೇಶದ ಜನರನ್ನು ಬಹಳವಾಗಿ ತೆಗಳತೊಡಗಿದ.

ವಿ: ೧) ಶಲ್ಯ ಕರ್ಣನ ಸೊಕ್ಕಿನ ಮಾತುಗಳಿಗೆ ತತ್ಕ್ಷಣವೇ ಪ್ರತಿಯಾಗಿ ಪರಿಹಾಸದಿಂದ ಉತ್ತರ ನೀಡಿದ. ಅರ್ಜುನನ ಪರಾಕ್ರಮವನ್ನು ವರ್ಣಿಸಿ ಅವನನ್ನು ಗೆಲ್ಲುವುದು ಇವನಿಗೆ ಸರ್ವಥಾ ಅಸಾಧ್ಯ ಎಂದು ತಿಳಿಸಿದ; ಉತ್ತರಗೋಗ್ರಹಣಕಾಲದಲ್ಲಿ ಏಕಾಂಗಿಯಾದ ಅರ್ಜುನನಿಗೆ ಕರ್ಣ ಸಮೇತನಾಗಿ ಕೌರವರೆಲ್ಲಾ ಸೋತು ಬಂದದ್ದನ್ನು ಜ್ಞಾಪಿಸಿದ.

೨) ಕಾಗೆ–ಹಂಸ, ನರಿ–ಸಿಂಹಗಳ ಕಥೆಗಳನ್ನು ಹೇಳಿ ಕಾಗೆ, ನರಿಗಳಂತಹ ಕರ್ಣ, ಹಂಸ ಸಿಂಹದಂತಹ ಅರ್ಜುನನನ್ನು ಎದುರಿಸುವುದು ಅಪಹಾಸ್ಯಕ್ಕೆ ಸಾಧನ ಮಾತ್ರವಲ್ಲದೇ ಕರ್ಣನ ಅವಸಾನಕ್ಕೂ ಕಾರಣ ಎಂದು ಜರಿದ;

೩) ಹಾಗೆ ಮಾಡುವ ಮೂಲಕ ಶಲ್ಯ ತಾನು ಧರ್ಮರಾಜನಿಗೆ ನೀಡಿದ ಕರ್ಣನ ತೇಜೋವಧೆಯ ಕಾರ್ಯವನ್ನು ಪೂರೈಸಿದ ಎಂದು ತಿಳಿಯಬೇಕು.

೪) ಅದಕ್ಕೆ ಸಮರ್ಥ ಉತ್ತರ ನೀಡಲಾಗದ ಕರ್ಣ ಮದ್ರದೇಶದ ಜನರನ್ನು ನಿಂದಿಸ–ತೊಡಗಿದ.

ಶಲ್ಯೋಽಪಿ ಸರ್ವದೇಶೇಷು ನೀಚಮಧ್ಯೋತ್ತಮಾ ನರಾಃ ।
ಸಂತೀತ್ಯುಕ್ತ್ವಾಽಸ್ಯ ಸಾರಥ್ಯಂ ಚಕ್ರೇ ಪಾರ್ಥಹಿತೇಪ್ಸಯಾ ॥ ೩೧ ॥

---

೩೧. ಸರ್ವತ್ರ ಬ್ರಾಹ್ಮಣಾಃ ಸಂತಿ ಸಂತಿ ಸರ್ವತ್ರ ಕ್ಷತ್ರಿಯಾಃ ।
ವೈಶ್ಯಾಃ ಶೂದ್ರಾಸ್ತಥಾ ಕರ್ಣ ಸ್ತ್ರಿಯಃ ಸಾಧ್ವ್ಯಶ್ಚ ಸುವ್ರತಾಃ ॥ – ಶಲ್ಯವಚನ (ಕರ್ಣ. ೪೫/೪೨)

ಅ: ಶಲ್ಯನು ಆಗ ಎಲ್ಲ ದೇಶಗಳಲ್ಲೂ ನೀಚ, ಮಧ್ಯಮ, ಮತ್ತು ಉತ್ತಮರಾದ ಜನರು ಇದ್ದೇ ಇರುವರು ಎಂದು ನುಡಿದು ಅರ್ಜುನನ ಹಿತವನ್ನು ಬಯಸಿ ಕರ್ಣನ ಸಾರಥ್ಯವನ್ನು ಮಾಡತೊಡಗಿದ.

ವಿ: ೧) ಕರ್ಣನ ಮಾತಿಗೆ ಪ್ರತಿಯಾಗಿ ಶಲ್ಯ ಅಂಗದೇಶದ ಜನರನ್ನೂ ಸಹ ತೆಗಳಿ ದೇಶವೆಂದ ಮೇಲೆ ಎಲ್ಲ ಬಗೆಯ ಜನರೂ ಇದ್ದೇ ಇರುವರು. ಬರೀ ಕೆಟ್ಟ ಜನರನ್ನೇ ನೋಡಿ ಅಪಹಾಸ್ಯ ಮಾಡುವುದು ತರವಲ್ಲ ಎಂದು ಎಚ್ಚರಿಸಿದ ಎಂದರ್ಥ.

೨) ಇಲ್ಲಿ '**ಪಾರ್ಥಹಿತೇಪ್ಸಯಾ**' ಎಂಬುದಕ್ಕೆ ಪಾಂಡವರ ಹಿತ ಬಯಸಿ, ವಿಶೇಷವಾಗಿ ಅರ್ಜುನನ ಹಿತ ಬಯಸಿ ಎಂದು ಅರ್ಥ. ಶಲ್ಯ ಮಾಡುತ್ತಿದ್ದುದು ಕರ್ಣನ ಸಾರಥ್ಯವನ್ನಾದರೂ, ಹಿತ ಬಯಸಿದ್ದು ಅರ್ಜುನನದು. ಯಾವ ಪಕ್ಷದಲ್ಲಿದ್ದರೂ ಸಜ್ಜನರ ಹಿತವನ್ನೇ ಬಯಸಬೇಕು ಎಂಬ ತತ್ತ್ವಕ್ಕೆ ಇದು ಸೂಚಕ.

ದುರ್ಯೋಧನಾದಿಗಳ ರಕ್ಷಣೆಯಲ್ಲಿ ಕರ್ಣ

ಕರ್ಣೋಽಥ ಶಲ್ಯನಿಯತೇನ ರಥೇನ ಪಾರ್ಥ-
ಸೇನಾಮವಾಪ್ಯ ವಿದುಧಾವ ಶರೈಃ ಸಮಂತಾತ್ ।
ಸಂರಕ್ಷಿತೋ ಯುಧಿ ಸುಯೋಧನಗೌತಮಾದ್ಯೈ-
ರಾಚಾರ್ಯಜೇನ ಚ ಮಹಾಸ್ತ್ರವಿದಾಂ ವರೇಣ ॥ ೩೨ ॥

ಅ: ಬಳಿಕ ಕರ್ಣ ಶಲ್ಯ ಓಡಿಸುತ್ತಿದ್ದ ರಥದಲ್ಲಿ ಕುಳಿತು ಪಾಂಡವಸೇನೆಯನ್ನು ತಲುಪಿ ಎಲ್ಲೆಡೆ-ಗಳಿಂದಲೂ ಬಾಣಗಳಿಂದ ಸದೆಬಡಿಯತೊಡಗಿದ. ಅವನನ್ನು ಯುದ್ಧದಲ್ಲಿ ದುರ್ಯೋಧನ, ಕೃಪ ಮೊದಲಾದವರು ಹಾಗೂ ಮಹಾಸ್ತ್ರ ಬಲ್ಲವರಲ್ಲಿ ಶ್ರೇಷ್ಠನಾದ ಅಶ್ವತ್ಥಾಮ ರಕ್ಷಿಸುತ್ತಿದ್ದರು.

ಕರ್ಣ ಯುಧಿಷ್ಠಿರರ ಯುದ್ಧ

ತಂ ಭೀಮಪಾರ್ಷತಶಿನಿಪ್ರವರಾಭಿಗುಪ್ತಾ
ಸಾ ಪಾಂಡವೇಯಪೃತನಾಽಭವವರ್ಷ ಬಾಣೈಃ ।
ತಾಂ ಸೂರ್ಯಸೂನುರಥ ಬಾಣವರೈರ್ವಿದಾರ್ಯ
ಸಂಪ್ರಾರ್ದಯಚ್ಛಿತಶರೈರಪಿ ಧರ್ಮಸೂನುಮ್ ॥ ೩೩ ॥

---

೩೩. 'ವಿದಾರ್ಯ ಕರ್ಣಸ್ತಾಂ ಸೇನಾಂ ಯುಧಿಷ್ಠಿರಮಥಾದ್ರವತ್' ಇತಿ ಕರ್ಣಪರ್ವಣಿ । – (ಜ.)

ಅ: ಕರ್ಣನನ್ನು ಭೀಮ, ಧೃಷ್ಟದ್ಯುಮ್ನ, ಸಾತ್ಯಕಿಗಳಿಂದ ಚೆನ್ನಾಗಿ ಪಾಲಿತವಾಗಿದ್ದ ಪಾಂಡವ-ಸೇನೆ ಬಾಣಗಳ ಮಳೆಗರೆದು ಎದುರಿಸಿತು. ಆ ಸೇನೆಯನ್ನು ಕರ್ಣ ಉತ್ತಮ ಬಾಣಗಳಿಂದ ಸದೆಬಡಿಯುತ್ತಾ ಧರ್ಮರಾಜನನ್ನು ಹರಿತವಾದ ಬಾಣಗಳಿಂದ ಬಹಳವಾಗಿ ಪೀಡಿಸಿದ.

ವಿ: ಕರ್ಣ ಧರ್ಮರಾಜರ ಯುದ್ಧದಲ್ಲಿ ಮೊದಲು ಧರ್ಮರಾಜ ಗೆದ್ದರೂ(ಕರ್ಣ. ೪೯/೨೧, ೨೨), ಬಳಿಕ ಮತ್ತೆ ಯುದ್ಧ ಮಾಡಿದ ಕರ್ಣ ಧರ್ಮರಾಜನನ್ನು ಸೋಲಿಸಿ ಅವನನ್ನು ಬಹಳವಾಗಿ ನೋಯಿಸಿದ ಎಂದರ್ಥ (ಕರ್ಣ. ೪೯/೪೦–೪೩) :

ಕರ್ಣನಿಂದ ಯುಧಿಷ್ಠಿರನ ಪರಾಭವ

ಕೃತ್ವಾ ತಮಾಶು ವಿರಥಂ ಧನುರಸ್ಯ ಕಂಠೇ
ಸಜ್ಯಂ ನಿಧಾಯ ಪರುಷಾ ಗಿರ ಆಹ ಚೋಚ್ಚೈಃ ।
ದೃಷ್ಟೈವ ಮಾರುತಿರಮುಂ ಭೃಶಮಾತುತೋದ
ದುರ್ಯೋಧನಂ ವಿರಥಕಾರ್ಮುಕಮಾಶು ಕೃತ್ವಾ ॥ ೩೪ ॥

ಅ: ಕೂಡಲೇ ಧರ್ಮರಾಜನನ್ನು ವಿರಥನನ್ನಾಗಿ ಮಾಡಿ ಅವನ ಕತ್ತಿನಲ್ಲಿ ಹೆದೆಯೇರಿಸಿದ್ದ ಧನುಸ್ಸನ್ನು ಸಿಕ್ಕಿಸಿ ಕ್ರೂರವಾದ ಮಾತುಗಳನ್ನು ಗಟ್ಟಿಯಾಗಿ ನುಡಿದ. ಅದನ್ನು ನೋಡುತ್ತಲೇ ಭೀಮಸೇನ ದುರ್ಯೋಧನನನ್ನು ಬೇಗನೇ ವಿರಥನನ್ನಾಗಿಯೂ, ಧನುಸ್ಸಿನಿಂದ ರಹಿತನನ್ನಾಗಿಯೂ ಮಾಡಿ ಬಹಳವಾಗಿ ಪೀಡಿಸತೊಡಗಿದ.

ವಿ: ೧) ನಕುಲ, ಸಹದೇವರಿಗೆ ಮಾಡಿದ್ದಂತೆ ಕರ್ಣ ಧರ್ಮರಾಜನಿಗೂ ಕತ್ತಿಗೆ ಬಿಲ್ಲು ಸಿಕ್ಕಿಸಿ ಅಪಹಾಸ್ಯ ಮಾಡಿದ. ಧರ್ಮರಾಜನ ಆ ಶೋಚನೀಯ ಸ್ಥಿತಿಯನ್ನು ಕಂಡು ಭೀಮಸೇನ

---

೩೪. ಪವಿತ್ರೀಕರ್ತುಮಾತ್ಮಾನಂ ಸ್ಕಂಧೇ ಸಂಸ್ಪೃಶ್ಯ ಪಾಣಿನಾ ।

೩೪. ದೃಷ್ಟ್ವೈವ ಮಾರುತಿರಮುಂ ಇತ್ಯತ್ರ ಅಮುಂ= ಸ್ವಾಗ್ರಜಪೀಡಾಂ ಕುರ್ವಾಣಂ ಕರ್ಣಂ ದೃಷ್ಟ್ವೈವ ದುರ್ಯೋಧನಂ ಭೃಶಮಾತುತೋದೇತಿ ಸಂಬಂಧಃ। ಭಾರೇಣ ಏಕತುಲೋನ್ನಮನೇ ಅಪರತುಲಾಪಸರಣವದ್ ದುರ್ಯೋಧನಸ್ಯ ಪ್ರಾಣಸಂಕಟೇ ಕಾರಿತೇ ಕರ್ಣಃ ಯುಧಿಷ್ಠಿರಂ ವಿಹಾಯ ಸ್ವಯಮೇವಾಯಾಸ್ಯತೀತಿ ಬುದ್ಧ್ಯಾ ದುರ್ಯೋಧನಸ್ಯೈವ ಪ್ರಾಣಸಂದೇಹಂ ಕಾರಿತವಾನಿತಿ ಭಾವಃ। ಕರ್ಣಾಪಸರಣದುರ್ಯೋಧನಪ್ರಾಣ-ಸಂಕಟಾಖ್ಯಕಾರ್ಯದ್ವಯಲಾಭಾತ್, ಕೇವಲಂ ಕರ್ಣಾಪಸರಣಾಯ ನ ಗತವಾನಿತಿ ಭಾವಃ ॥ – (ವಾ.)

೩೪. ಗ್ರಹೀತುಮಿಚ್ಛನ್ ಸ ಬಲಾತ್ ಕುಂತೀವಾಕ್ಯಂ ಚ ಸೋಽಸ್ಮರತ್ ॥ – ಭಾರತ (ಕರ್ಣ. ೪೯/೫೨)

ದುರ್ಯೋಧನನನ್ನು ಪೀಡಿಸತೊಡಗಿದ. ಹಾಗೆ ಮಾಡುವ ಮೂಲಕ ಕರ್ಣ ಧರ್ಮರಾಜನನ್ನು ಬಿಟ್ಟು ತನ್ನ ಬಳಿಗೆ ಬರುವಂತೆ ಮಾಡಿಕೊಂಡ.

೨) ಇಲ್ಲೂ ಸಹ ಭೀಮನ ಅಪಾರವಾದ ಕೌಶಲ ಕಾಣಿಸುವುದು :

ತಂ ತು ಭೀಮೋ ಮುಹೂರ್ತೇನ ವ್ಯಶ್ವಸೂತರಥಧ್ವಜಮ್ ।
ಚಕ್ರೇ ಲೋಕೇಶ್ವರಂ ತತ್ರ ತೇನಾತುಷ್ಯಂತ ವೈ ಜನಾಃ ॥
ತತೋಽಪಾಯಾನ್ನೃಪಸ್ತತ್ರ ಭೀಮಸೇನಸ್ಯ ಗೋಚರಾತ್ ॥ –(೮/೬೧/೫೨,೫೩)

ಧರ್ಮರಾಜನನ್ನು ಬಿಡಿಸಲು ಕರ್ಣನ ಮೇಲೆ ಯುದ್ಧಕ್ಕೆ ಹೋಗದೇ ದುರ್ಯೋಧನನನ್ನು ಪೀಡಿಸಿ ಧರ್ಮರಾಜನನ್ನು ಬಿಟ್ಟು ಕರ್ಣನೇ ತನ್ನೆಡೆಗೆ ಬರುವಂತೆ ಮಾಡಿಕೊಂಡಿದ್ದು ಭೀಮಸೇನನ ಹಿರಿಮೆ; ಇಂತಹ ಕೌಶಲವನ್ನೇ ಯೋಗ ಎನ್ನುವರು.

೩) ಇದು ಚತುರಂಗದಾಟದಲ್ಲಿ ರಾಜನಿಗೆ 'ಚೆಕ್' ಇಡುವ ಕ್ರಮವನ್ನು ಹೋಲುವುದು.

ಭೀಮನಿಂದ ದುರ್ಯೋಧನನ ಆಕ್ರಮಣ

ತಂ ಪ್ರಾಣಸಂಶಯಗತಂ ನೃಪತಿಂ ನಿರೀಕ್ಷ್ಯ
ಕರ್ಣಂ ಜಗಾದ ಯುಧಿ ಮದ್ರಪತಿಃ ಪ್ರದರ್ಶ್ಯ ।
ಯಸ್ಯಾರ್ಥಮೇಷ ಸಮರಸ್ತ್ವಮಿಯಂ ಚ ಸೇನಾ
ತಂ ತ್ವಂ ಯಮಸ್ಯ ಸದನಂ ಪ್ರಯಿಯಾಸುಮದ್ಯ ॥ ೩೫ ॥

ಭೀಮೇನ ಪೀಡಿತಮಮುಂ ಪರಿಪಾಹಿ ಶೀಘ್ರಂ
ಕಿಂ ತೇ ಯುಧಿಷ್ಠಿರಮಿಮಂ ಹಿ ಮುಧಾ ನಿಪೀಡ್ಯ ।
ಶ್ರುತ್ವಾಽಸ್ಯ ವಾಕ್ಯಮತಿಹಾಯ ಯುಧಿಷ್ಠಿರಂ ತಂ
ಕರ್ಣೋ ಯಯೌ ನೃಪತಿರಕ್ಷಣತತ್ಪರೋಽಲಮ್ ॥ ೩೬ ॥

ಅ: ದುರ್ಯೋಧನ ಪ್ರಾಣಾಪಾಯಕ್ಕೆ ಗುರಿಯಾದದ್ದನ್ನು ನೋಡಿ ಶಲ್ಯ ಕರ್ಣನಿಗೆ ಅವನನ್ನು ತೋರಿಸಿ ಹೇಳಿದ : 'ಯಾರಿಗಾಗಿ ಈ ಯುದ್ಧ, ನೀನು, ಈ ಸೇನೆ ಎಲ್ಲವೂ ಇವೆಯೋ ಅವನೀಗ ಯಮಲೋಕಕ್ಕೆ ತೆರಳಲು ಸಿದ್ಧನಾಗಿರುವನು. ಭೀಮನಿಂದ ಪೀಡಿತನಾಗಿರುವ ಅವನನ್ನು ಕೂಡಲೇ ಸಂರಕ್ಷಿಸು. ಧರ್ಮರಾಜನನ್ನು ಹೀಗೆ ವ್ಯರ್ಥ ಪೀಡಿಸುವುದರಿಂದೇನು?'. ಅವನ ಮಾತನ್ನು ಕೇಳಿ ಕರ್ಣ ಧರ್ಮರಾಜನನ್ನು ಬಿಟ್ಟು ದುರ್ಯೋಧನನನ್ನು ರಕ್ಷಿಸಲೆಂದು ಧಾವಿಸಿದ.

ಕರ್ಣನ ಮೇಲೆ ಕೆರಳಿದ ಭೀಮ

ದೃಷ್ಟ್ವೈವ ತಂ ಪವನಸೂನುರಭಿತ್ವಿಯಾಯ
ಕ್ರೋಧಾದ್ದಿಧಕ್ಷುರಿವ ಕರ್ಣಮಮೇಯಧಾಮಾ ।
ರಾಜಾವನಾಯ ಶಿನಿಪುಂಗವಪಾರ್ಷತೌ ಚ
ಸಂದಿಶ್ಯ ಕರ್ಣಮಭಿಗಚ್ಛತ ಆಸ ರೂಪಮ್ ॥ ೩೭ ॥

ಅಂತೇ ಕೃತಾಂತನರಸಿಂಹತನೋರ್ಯಥೈವ
ವಿಷ್ಣೋರ್ಹರಂ ಗ್ರಸತ ಆತ್ತಸಮಸ್ತವಿಶ್ವಮ್ ।
ತದ್ವೇಗತಃ ಪ್ರತಿಚಚಾಲ ಧರಾ ಸಮಸ್ತಾ
ವಿದ್ರಾವಿತಾ ಚ ಸಕಲಾ ಪ್ರತಿವೀರಸೇನಾ ॥ ೩೮ ॥

ಅ: ಕರ್ಣನನ್ನು ಕಂಡೊಡನೆಯೇ ಭೀಮಸೇನ ಅವನನ್ನು ಕೋಪದಿಂದ ಸುಟ್ಟುಬಿಡುವವನಂತೆ ಎದುರಿಸಿಬಂದ. ಅಪಾರ ತೇಜಸ್ಸಿನ ಅವನು ಧರ್ಮರಾಜನ ರಕ್ಷಣೆಗೆಂದು ಸಾತ್ಯಕಿ ಧೃಷ್ಟದ್ಯುಮ್ನರನ್ನು ಕಳುಹಿಸಿ ಕರ್ಣನ ಬಳಿಗೆ ಧಾವಿಸಿದಾಗ ಅವನ ರೂಪ ಪ್ರಳಯ ಕಾಲದಲ್ಲಿ ಎಲ್ಲ ಜಗತ್ತನ್ನು ಲಯಗೈದ ಶಿವನನ್ನು ನುಂಗಲು ಬರುವ ಕೃತಾಂತ ನರಸಿಂಹನ ರೂಪದಂತೆ ಇದ್ದಿತು. ಅವನ ವೇಗಕ್ಕೆ ಭೂಮಿಯೆಲ್ಲ ಗಡಗಡನೆ ನಡುಗಿತು. ಶತ್ರುಸೇನೆಯೆಲ್ಲ ಕಂಗೆಟ್ಟು ಓಡತೊಡಗಿತು.

ವಿ: ಕರ್ಣನ ಮೇಲೆ ಭೀಮನ ಅಂತಹ ಅಪಾರ ಕೋಪಕ್ಕೆ ಕಾರಣ ಮುಂದೆ ನಿರೂಪಿತವಾಗಿದೆ. ಕೃತಾಂತನರಸಿಂಹ ಎಂದರೆ ಪ್ರಲಯಕಾಲದ ನರಸಿಂಹ ಎಂದರ್ಥ (ನಖಸ್ತುತಿ ಶ್ಲೋ. ೨).

ಭೀಮನ ಬಾಣಕ್ಕೆ ನಿಶ್ಚೇಷ್ಟನಾದ ಕರ್ಣ

ವೈಕರ್ತನೇನ ಶರಸಂಚಯತಾಡಿತಃ ಸ
ಬಾಣಂ ಚ ವಜ್ರಸದೃಶಂ ಪ್ರಮುಮೋಚ ತಸ್ಮಿನ್ ।
ತೇನಾಹತೋ ಮೃತಕವತ್ ಸ ಪಪಾತ ಕರ್ಣೋ
ಭೀಮಃ ಕ್ಷುರಂ ಚ ಜಗೃಹೇಽಭಿಯಯೌ ಚ ಪದ್ಭ್ಯಾಮ್ ॥ ೩೯ ॥

---

೩೭. ಸೋಽಬ್ರವೀತ್ ಸಾತ್ಯಕಿಂ ವೀರಂ ಧೃಷ್ಟದ್ಯುಮ್ನಂ ಚ ಪಾರ್ಷತಮ್ ।
ಯೂಯಂ ರಕ್ಷತ ರಾಜಾನಂ ಧರ್ಮಾತ್ಮಾನಂ ಯುಧಿಷ್ಠಿರಮ್ ॥ – ಭಾರತ (ಕರ್ಣ. ೫೦/೮)

ಅ: ಕರ್ಣನಿಂದ ಬಾಣಸಮೂಹಗಳಿಂದ ಹೊಡೆಯಲ್ಪಟ್ಟ ಭೀಮಸೇನ ವಜ್ರಸದೃಶವಾದ ಬಾಣವನ್ನು ಅವನ ಮೇಲೆ ಪ್ರಯೋಗಿಸಿದ. ಅದರಿಂದ ಪೆಟ್ಟುತಿಂದ ಕರ್ಣ ಶವದಂತೆ ಬಿದ್ದ. ಭೀಮ ಕತ್ತಿಯನ್ನು ಕೈಗೆತ್ತಿಕೊಂಡು ಕಾಲ್ನಡೆಯಿಂದಲೇ ಕರ್ಣನ ಬಳಿಗೆ ತೆರಳಿದ.

ಎ: ಅವನ ಬಾಣಗಳ ಸುರಿಮಳೆಯನ್ನು ಲೆಕ್ಕಿಸದೆ, ಒಂದೇ ಬಾಣದಿಂದ ಕರ್ಣನನ್ನು ಗಾಢ ಮೂರ್ಛೆಗೆ ಒಳಗಾಗಿಸಿದ ಭೀಮನ ಈ ಪರಾಕ್ರಮ ಅತ್ಯಂತ ಅಮೋಘ ಎಂಬುದನ್ನು ಗಮನಿಸಬೇಕು.

ನಿಂದಾಂ ಹರೇಸ್ತು ವಿದಧಾತಿ ಪರೋಕ್ಷಗೋಽಪಿ
ಯಸ್ತಂ ಪ್ರಗೃಹ್ಯ ಕರವಾಣಿ ವಿಜಿಹ್ವಮೇವ ।
ಏವಂ ಹಿ ವಾಯುತನಯಸ್ಯ ಮಹಾಪ್ರತಿಜ್ಞಾ
ಛೇತ್ತುಂ ಸ ತೇನ ರವಿಜಸ್ಯ ಸಸಾರ ಜಿಹ್ವಾಮ್ ॥ ೪೦ ॥

---

೩೮. ತ್ರೈಲೋಕ್ಯಸ್ಯ ಸಮಸ್ತಸ್ಯ ಶಕ್ತಃ ಕ್ರುದ್ಧೋ ನಿವಾರಣೇ ।
ಬಿಭರ್ತಿ ಸದೃಶಂ ರೂಪಂ ಯುಗಾಂತಾಗ್ನಿಸಮಪ್ರಭಮ್ ॥ – ಭಾರತ (ಕರ್ಣ. ೫೦/೧೭)

೩೯. ಸ ವಿಸೃಷ್ಟೋ ಬಲವತಾ ಬಾಣೋ ವಜ್ರಾಶನಿಸ್ವನಃ ।
ಅದಾರಯದ್ ರಣೇ ಕರ್ಣಂ ವಜ್ರವೇಗೋ ಯಥಾಽಚಲಮ್ ॥ – ಭಾರತ (ಕರ್ಣ. ೫೦/೪೬)

೩೯. ಸ ಭೀಮಸೇನಾಭಿಹತಃ ಸೂತಪುತ್ರಃ ಕುರೂದ್ವಹ ।
ನಿಷಸಾದ ರಥೋಪಸ್ಥೇ ವಿಸಂಜ್ಞಃ ಪೃತನಾಪತಿಃ ॥ – ಭಾರತ (ಕರ್ಣ. ೫೦/೪೬, ೪೭)

೪೦. ಉಚ್ಚೈಃ ಪರುಷಾ ಗಿರ ಇತಿ ವದತಾ ಕ್ವೇದಾನೀಂ ಭವತಾಂ ರಕ್ಷಕಃ ಕೃಷ್ಣಃ ಇತ್ಯಾದಿ ಹರ್ಯವಜ್ಞಾ-ರೂಪವಾಕ್ಯಮಪ್ಯುಕ್ತಮಿತಿ ಸೂಚಿತಮ್। ಇದಮೇವ ಹ್ಯೇಕಾಂತಭಕ್ತಾನಾಂ ಶ್ರೋತ್ರಯೋರುಚ್ಚೈಃ ಪರುಷರೂಪಂ ವಚನಮ್। ''ಜೀವಾಭೇದೋ ನಿರ್ಗುಣತ್ವಮಪೂರ್ಣಗುಣತಾ ತಥಾ। ಸಾಮ್ಯಧಿಕ್ಯೇ ತದನ್ಯೇಷಾಂ ಭೇದಸ್ತದ್ಭಕ್ತ ಏವ ಚ ॥ ಪ್ರಾದುರ್ಭಾವವಿಪರ್ಯಾಸಸ್ತದ್ಭಕ್ತದ್ವೇಷ ಏವ ಚ। ತತ್ಪ್ರಮಾಣಸ್ಯ ನಿಂದಾ ಚ ದ್ವೇಷಾ ಏತೇಽಖಿಲಾ ಮತಾಃ'' ॥ ಇತಿ (೧/೧೧೦,೧೧೧) ವಚನಾತ್ ಪರಮವೈಷ್ಣವಸ್ಯಾಗ್ರಜನಿಂದಾಽಪಿ ವಿಷ್ಣುನಿಂದೈವ। ಏವಂ ಚ ಉಭಯಥಾಽಪಿ ವಿಷ್ಣುನಿಂದಾಯಾಃ ಅಧುನೈವ ಕರ್ಣೇನ ಕೃತತ್ವಾತ್ ಭೀಮಸ್ಯ ಮಹಾನ್ ಕೋಪೋಽಭೂದಿತಿ ಭಾವೇನಾಹ ನಿಂದಾಂ ಹರೇಸ್ತ್ವಿತಿ। – (ವಾ.)

೪೦. ಕರ್ಣೇನ ಯುಧಿಷ್ಠಿರಸ್ಯ ಪುರ ಏವ ಶ್ರೀಕೃಷ್ಣನಿಂದಾಯಾಃ ಕೃತತ್ವಾದಿತಿ ಭಾವಃ। – (ವ.)

೪೦. 'ನಿಂದಾಂ ಹರೇಸ್ತು ವಿದಧಾತಿ ಪರೋಕ್ಷಗೋಽಪಿ ಯಸ್ತಂ ಪ್ರಗೃಹ್ಯ ಕರವಾಣಿ ವಿಜಿಹ್ವಮೇವ' ಇತ್ಯತ್ರ ಕರತಲಾಮಲಕವತ್ ಸಮಸ್ತಜಗದ್ವ್ಯಾಪಾರವತೋ ವಾಯ್ವಂಶಸಂಭವಸ್ಯ ಭೀಮಸ್ಯಾಪಿ ಸರ್ವಜಗದ್ವ್ಯಾಪಾರಾ-ಪರೋಕ್ಷವತ್ತ್ವೇನ ಪರೋಕ್ಷತ್ವಾಭಾವಾತ್ ಕಥಂ ಪರೋಕ್ಷೇಽಪೀತ್ಯುಕ್ತಮಿತಿ ಚೇತ್ ಸತ್ಯಮ್ । ದೇವಾನಾಂ ಮಾನುಷತ್ವೇ ಸರ್ವಾಪರೋಕ್ಷತ್ವೇಽಪಿ ಪರೋಕ್ಷವದ್ವರ್ತನಂ ಧರ್ಮ ಇತ್ಯುಕ್ತತ್ವಾತ್ ತದಪೇಕ್ಷಯೇಯಮುಕ್ತಿಃ । ತಥಾಹಿ 'ಧರ್ಮೋ ಹಿ ಸರ್ವವಿದುಷಾಮಪಿ ದೇವತಾನಾಂ ಪ್ರಾಪ್ತೇ ನರೇಷು ಜನನೇ ನರವತ್ ಪ್ರವೃತ್ತಿಃ । ಜ್ಞಾನಾದಿಗೂಹನಮುತಾಧ್ಯಯನಾದಿರತ್ರ,' ಇತಿ ॥ – (ರಾ.)

ಅ: ಹಿಂದಿನಿಂದಲೇ ಆಗಲಿ ಶ್ರೀಹರಿಯ ನಿಂದೆಯನ್ನು ಯಾವನು ಮಾಡುವನೋ ಅವನನ್ನು ಹಿಡಿದು ನಾಲಿಗೆ ಕತ್ತರಿಸುವೆ ಎಂದು ಭೀಮನ ಪ್ರತಿಜ್ಞೆ. ಆದ್ದರಿಂದ ಕರ್ಣನ ನಾಲಿಗೆಯನ್ನು ಕತ್ತರಿಸಲೆಂದು ಅವನ ಬಳಿಗೆ ಸಾಗಿದ.

ಏ: ದ್ಯೂತಸಭೆಯಲ್ಲಿ ದುರ್ಯೋಧನಪ್ರೀತ್ಯರ್ಥವಾಗಿ ಕರ್ಣ ಕೃಷ್ಣನನ್ನು ಕೆಟ್ಟದಾಗಿ ನಿಂದಿಸಿದ್ದ. ಅದಕ್ಕೆ ಶಿಕ್ಷೆ ನೀಡಲೆಂದು ಭೀಮನ ಇಂತಹ ಅಪಾರ ಕೋಪ ಎಂದು ತಿಳಿಯಬೇಕು; ಕರ್ಣನ ಅಂತಹ ದುರ್ವರ್ತನೆಗೆ ಕಾರಣನಾದ ಒಳಗಿದ್ದ ನರಕಾಸುರನ ಮೇಲೆ ಭೀಮನ ಅಂತಹ ಕೋಪ ಎಂದು ತಿಳಿಯಬೇಕು.

ಶಲ್ಯನ ಪ್ರಾರ್ಥನೆಯಿಂದ ಕರ್ಣನ ಮೋಚನ

ಆಯಾಂತಮಂತಿಕಮಮುಂ ಪ್ರಸಮೀಕ್ಷ್ಯ ಶಲ್ಯೋ
ನೇತ್ಯಾಹ ಹೇತುಭಿರಹೋ ನ ಮೃಷಾ ಪ್ರತಿಜ್ಞಾ ।
ಕಾರ್ಯಾ ತ್ವಯೈವ ಪುರುಹೂತಸುತಸ್ಯ ಜಿಹ್ವಾಂ
ಮಾ ತೇನ ಪಾತಯ ಮರುತ್ಸುತ ಸೂತಸೂನೋಃ ॥ ೪೧ ॥

ಅ: ಭೀಮಸೇನ ಹತ್ತಿರಕ್ಕೆ ಬರುತ್ತಿದ್ದುದನ್ನು ಗಮನಿಸಿ ಶಲ್ಯ ಸಕಾರಣವಾಗಿ ಅದನ್ನು ತಡೆದು ಹೇಳಿದ 'ನೀನು ಅರ್ಜುನನ ಪ್ರತಿಜ್ಞೆಯನ್ನು ಸುಳ್ಳಾಗಿಸುವುದು ಬೇಡ, ಆದ್ದರಿಂದ ಭೀಮ! ಈ ಸೂತಪುತ್ರನ ನಾಲಿಗೆಯನ್ನು ಕತ್ತರಿಸಬೇಡ'.

ಏ: ೧) ಭೀಮ ನಾಲಿಗೆಯನ್ನು ಕತ್ತರಿಸಿದರೂ ಬಳಿಕ ಅರ್ಜುನ ಕರ್ಣನನ್ನು ಕೊಂದು ಪ್ರತಿಜ್ಞೆಯನ್ನು ಪೂರೈಸಬಹುದಲ್ಲ ಎಂಬುದಕ್ಕೆ ವಾದಿರಾಜೀಯದಲ್ಲಿ ಅಪೂರ್ವ ಉತ್ತರವಿದೆ –

---

೪೧. ನ ಮೃಷಾ ಪ್ರತಿಜ್ಞೇತ್ಯತ್ರ, ಪುರುಹೂತಸುತಸ್ಯ ಪ್ರತಿಜ್ಞಾ ತ್ವಯೈವ ಮೃಷಾ ನ ಕಾರ್ಯಾ। ಜಿಹ್ವಾಚ್ಛೇದೇ ಅಭಿಮಾನೀ ಕರ್ಣಃ ನ ಜೀವೇತ್। ಛಿನ್ನಜಿಹ್ವಸ್ಯ ಛಿನ್ನಸ್ಯಾಂಗಹೀನತ್ವೇನ ತದ್ವಧೋಽಪಿ ವೀರಾಣಾಮನುಚಿತಃ। ಏವಂ ಚ ತ್ವಯೈವ ಕರ್ಣಸ್ಯ ಜಿಹ್ವಾಚ್ಛೇದೇ ದ್ವೇಧಾಽಪ್ಯರ್ಜುನಪ್ರತಿಜ್ಞಾ ವ್ಯರ್ಥಾ ಸ್ಯಾತ್। ತೇನ ಕಾರಣೇನ ಸೂರ್ಯ-ಸುತಸ್ಯ ಜಿಹ್ವಾಂ ಮಾ ಪಾತಯೇತಿ ಯೋಜನಾ – (ವಾ.)

೪೧. ಹೇತುಭಿಃ ಹೇತುಪ್ರತಿಪಾದಕವಾಕ್ಯೇನ ... । – (ಸ.)

೪೧. ಏತಸ್ಮಿನ್ನಂತರೇ ದೃಷ್ಟ್ವಾ ಮದ್ರರಾಜೋ ವೃಕೋದರಮ್ ।
ಜಿಹ್ವಾಂ ಛೇತ್ತುಂ ಸಮಾಯಾಂತಂ ಸಾಂತ್ವಯನ್ನಿದಮಬ್ರವೀತ್ ॥ – ಭಾರತ (ಕರ್ಣ. /೫೦/೪೮)

೪೧. ಅರ್ಜುನೇನ ಪ್ರತಿಜ್ಞಾತೋ ವಧಃ ಕರ್ಣಸ್ಯ ಶುಷ್ಮಿಣಃ ।
ತಾಂ ತಥಾ ಕುರು ಭದ್ರಂ ತೇ ಪ್ರತಿಜ್ಞಾಂ ಸವ್ಯಸಾಚಿನಃ ॥ – ಭಾರತ (ಕರ್ಣ. /೫೦/೪೯)

ನಾಲಿಗೆ ಕತ್ತರಿಸಿದರೆ ಸ್ವಾಭಿಮಾನಿಯಾದ ಕರ್ಣ ಜೀವಿಸಿರಲಾರ. ಒಂದು ವೇಳೆ ಅವನು ಬದುಕಿದ್ದರೂ ಅಂತಹ ಅಂಗವಿಕಲನನ್ನು ಕೊಲ್ಲುವುದರಿಂದ ಅರ್ಜುನನಿಗೆ ಶೋಭೆಯೂ ಉಂಟಾಗದು. ಆದ್ದರಿಂದ ಅರ್ಜುನನ ಪ್ರತಿಜ್ಞೆ ಯಶಸ್ವಿಯಾಗಿ ನಡೆಯಲು ಕರ್ಣನನ್ನು ನಾಲಿಗೆ ಕತ್ತರಿಸದೇ ಉಳಿಸುವುದೇ ಉಚಿತ ಎಂಬುದು ಶಲ್ಯನ ಭಾವವಾಗಿತ್ತು.

೨) ಇದನ್ನೆಲ್ಲಾ ಭೀಮ ಬಲ್ಲವನೇ ಆಗಿದ್ದರೂ ಕರ್ಣನಿಗೆ ಆ ರೀತಿ ಮಾಡಹೊರಡುವ ಮೂಲಕ ಹರಿನಿಂದಕರ ಮೇಲೆ ತಾನು ಉಗ್ರವಾಗಿ ವರ್ತಿಸುವ ಕ್ರಮವನ್ನು ಲೋಕಕ್ಕೆ ತಿಳಿಸಿದ ಎಂದು ತಿಳಿಯಬೇಕು.

ಇತ್ಯುಕ್ತ್ವಾ ಪ್ರಮುಖಾತ್ ತಸ್ಯ ರಥೇನೈವ ತು ಮದ್ರರಾಟ್ ।
ವೈಕರ್ತನಮಪೋವಾಹ ಸರ್ವಲೋಕಸ್ಯ ಪಶ್ಯತಃ ॥ ೪೨ ॥

ಅ: ಹೀಗೆಂದ ಶಲ್ಯ ಸಕಲಜನರು ನೋಡುತ್ತಿದ್ದಂತೆಯೇ ಕರ್ಣನನ್ನು ರಥದಿಂದ ಭೀಮನ ಎದುರಿನಿಂದ ದೂರಕ್ಕೆ ಕರೆದೊಯ್ದ.

ಏ ಕರ್ಣನ ಖಚಿತ ಸೋಲಿನ ಮತ್ತೊಂದು ಪ್ರಸಂಗ ಅದಾಯಿತು ಎಂದರ್ಥ. ಇದು ಭೀಮನಿಂದ ಕರ್ಣ ಮತ್ತೊಮ್ಮೆ ಮೂರ್ಛಿತನಾದ ಪ್ರಸಂಗವಾಯಿತು.

ಭೀಮನಿಂದ ಕೌರವ ಸೇನೆಯ ಪರಾಭವ

ಜಿತ್ವಾ ಸೂರ್ಯಸುತಂ ಭೀಮಃ ಕೌರವಾಣಾಮನೀಕಿನೀಮ್ ।
ಸರ್ವಾಂ ವಿದ್ರಾವಯಾಮಾಸ ದ್ರೌಣಿದುರ್ಯೋಧನಾವೃತಾಮ್ ॥ ೪೩ ॥

ಅ: ಭೀಮಸೇನ ಕರ್ಣನನ್ನು ಸೋಲಿಸಿ, ಅಶ್ವತ್ಥಾಮ ದುರ್ಯೋಧನರಿಂದ ಕೂಡಿದ್ದ ಕೌರವಸೇನೆಯನ್ನೆಲ್ಲ ಹೊಡೆದೋಡಿಸತೊಡಗಿದ.

ಅಶ್ವತ್ಥಾಮನ ಪರಾಕ್ರಮ

ಅಕ್ಷೌಹಿಣೀತ್ರಯಂ ತೇನ ತದಾ ವಿಲುಲಿತಂ ಕ್ಷಣಾತ್ ।
ತದೈವ ಗುರುಪುತ್ರೋಽಯಾತ್ ಪಾಂಡವಾನಾಮನೀಕಿನೀಮ್ ॥ ೪೪ ॥

---

೪೨. ತತೋ ಮದ್ರಾಧಿಪೋ ದೃಷ್ಟ್ವಾ ವಿಸಂಜ್ಞಂ ಸೂತನಂದನಮ್ ।
ಅಪೋವಾಹ ರಥೇನಾಜೌ ಕರ್ಣಮಾಹವಶೋಭನಮ್ ॥ (ಕರ್ಣ. /೫೦/೪೮)

ಅ: ಭೀಮ ಆಗ ಕ್ಷಣಮಾತ್ರದಲ್ಲಿ ಮೂರು ಅಕ್ಷೌಹಿಣೀಸೇನೆಯನ್ನು ಸದೆಬಡಿದಿದ್ದ. ಆಗಲೇ ಅಶ್ವತ್ಥಾಮ ಪಾಂಡವರ ಸೇನೆಯೊಳಗೆ ನುಗ್ಗಿದ.

ವಿಮೃದ್ಯ ಸಕಲಾಂ ಸೇನಾಂ ಕೃತ್ವಾ ಚ ವಿರಥಂ ನೃಪಮ್ ।
ಧೃಷ್ಟದ್ಯುಮ್ನಂ ಯಮೌ ಚೈವ ಸಾತ್ಯಕಿಂ ದ್ರೌಪದೀಸುತಾನ್ ।
ಕ್ಷಣೇನ ವಿರಥೀಕೃತ್ಯ ಸರ್ವಾಂಶ್ಚಕ್ರೇ ನಿರಾಯುಧಾನ್ ॥ ೪೫ ॥

ಅ: ಅಶ್ವತ್ಥಾಮ ಪಾಂಡವಸೇನೆಯನ್ನೆಲ್ಲ ಸದೆಬಡಿಯುತ್ತಾ ಧರ್ಮರಾಜನನ್ನು ವಿರಥನನ್ನಾಗಿ ಮಾಡಿದ. ಧೃಷ್ಟದ್ಯುಮ್ನನನ್ನು, ನಕುಲಸಹದೇವರನ್ನು, ಸಾತ್ಯಕಿಯನ್ನು ಮತ್ತು ದ್ರೌಪದೀಪುತ್ರರನ್ನು ಎದುರಿಸಿ, ಅವರನ್ನೆಲ್ಲ ಕ್ಷಣದಲ್ಲೇ ವಿರಥರನ್ನಾಗಿಸಿ, ಆಯುಧಹೀನರನ್ನಾಗಿ ಮಾಡಿದ.

ತಾನ್ ಭಗ್ನದರ್ಪಾನ್ ರಣತೋಽಪಯಾತಾ-
ನನ್ವೇವ ಬಾಣಾವೃತಮಂತರಿಕ್ಷಮ್ ।
ಕುರ್ವನ್ ಯಯೌ ಧರ್ಮರಾಜಸ್ತಮಾಹ
ಕಿಂ ನಃ ಸ್ವಧರ್ಮೇ ನಿರತಾನ್ ವಿಹಂಸಿ ॥ ೪೬ ॥

ಯುಧಿಷ್ಠಿರನಿಂದ ಅಶ್ವತ್ಥಾಮರ ಪ್ರಾರ್ಥನೆ

ಕ್ಷತ್ರಿಯಾನ್ ಪರಧರ್ಮಸ್ಥೋ ಮಾ ಹಿಂಸೀರಿತಿ ಚೋದಿತಃ ।
ಪ್ರಹಸ್ಯ ತಾನ್ ವಿಹಾಯೈವ ಯಯೌ ಯತ್ರಾಚ್ಯುತಾರ್ಜುನೌ ॥ ೪೭ ॥

---

೪೪. ಅಕ್ಷೌಹಿಣ್ಯಸ್ತಥಾ ತಿಸ್ರೋ ಧಾರ್ತರಾಷ್ಟ್ರಸ್ಯ ಸಂಹತಾಃ ।
ಕ್ರುದ್ಧೇನ ಭೀಮಸೇನೇನ ನರಸಿಂಹೇನ ವಾರಿತಾಃ ॥

೪೫. ನ ಶಕ್ನುವಂತಿ ವೈ ಪಾರ್ಥಂ ಪಾರ್ಥಿವಾಃ ಸಮುದೀಕ್ಷಿತುಮ್ ।
ಏತೇ ಭೀಮಸ್ಯ ಸಂತ್ರಸ್ತಾಃ ಸಿಂಹಸ್ಯೇವೇತರೇ ಮೃಗಾಃ ॥
ಶರೈಃ ಸಂತ್ರಾಸಿತಾಃ ಸಂಖ್ಯೇ ನ ಲಭಂತೇ ಸುಖಂ ಕ್ವಚಿತ್ ॥ – ಭಾರತ (ಕರ್ಣ. ೬೦/೮೬-೮೮)

೪೭. ಬ್ರಾಹ್ಮಣೇನ ತಪಃ ಕಾರ್ಯಂ ದಾನಮಧ್ಯಯನಂ ತಥಾ ।
ಕ್ಷತ್ರಿಯೇಣ ಧನುರ್ನಾಮ್ನಂ ಸ ಭವಾನ್ ಬ್ರಾಹ್ಮಣಬ್ರುವಃ ॥
(ಇದು ಅಶ್ವತ್ಥಾಮನನ್ನು ಕುರಿತು ಯುಧಿಷ್ಠಿರನ ವಚನ) – ಭಾರತ (ಕರ್ಣ. ೫೫/೩೩)

ಅ: ಯುಧಿಷ್ಠಿರ ಮೊದಲಾದವರೆಲ್ಲ ಭಗ್ನದರ್ಪರಾಗಿ ಯುದ್ಧದಿಂದ ಹಿಮ್ಮೆಟ್ಟುತ್ತಿದ್ದಂತೆಯೇ ಅಶ್ವತ್ಥಾಮ ಗಗನವನ್ನೆಲ್ಲ ಬಾಣಗಳಿಂದ ತುಂಬಿಸುತ್ತಾ ನಡೆದ; ಧರ್ಮರಾಜ ಕೇಳಿದ : ''ಸ್ವಧರ್ಮದಲ್ಲಿ ತೊಡಗಿದ ಕ್ಷತ್ರಿಯರಾದ ನಮ್ಮನ್ನು ಪರಧರ್ಮದಲ್ಲಿ ತೊಡಗಿದ ನೀನು ಏತಕ್ಕೆ ಪೀಡಿಸುತ್ತಿರುವಿ? ಹಾಗೆ ಪೀಡಿಸದಿರು''. ಧರ್ಮರಾಜ ಹೀಗೆನ್ನಲು ಅಶ್ವತ್ಥಾಮ ಜೋರಾಗಿ ನಕ್ಕು, ಅವರನ್ನು ಬಿಟ್ಟು ಕೃಷ್ಣಾರ್ಜುನರಿದ್ದಲ್ಲಿಗೆ ತೆರಳಿದ.

ವಿ: ೧) ಎದುರಿಸಿದವನೊಂದಿಗೆ ಧೈರ್ಯದಿಂದ ಹೋರಾಡುವ ಬದಲು ಹಾಗೆ ದೈನ್ಯದಿಂದ ಕೇಳಿಕೊಂಡಿದ್ದಕ್ಕೆ ಅಶ್ವತ್ಥಾಮ ಧರ್ಮರಾಜನ ಮಾತಿಗೆ ಜೋರಾಗಿ ನಕ್ಕ.

೨) ವೇದವ್ಯಾಸರೇ ತನಗೆ ಆಜ್ಞೆ ನೀಡಿರುವಾಗ, ತಾನು ಯುದ್ಧ ಮಾಡುವುದರಲ್ಲಿ ತಪ್ಪೇನಿದೆ? ಎಂಬ ಭಾವನೆಯೂ ಸಹ ಅವನ ನಗುವಿಗೆ ಕಾರಣವಾಗಿತ್ತು ಎಂದು ತಿಳಿಯಬಹುದು.

೩) ಆದರೂ ಧರ್ಮರಾಜನ ಮಾತನ್ನು ಮನ್ನಿಸಿ, ಅಶ್ವತ್ಥಾಮರು ತಾನು ಯುದ್ಧಮಾಡಲು ಅರ್ಜುನನೇ ಸರಿ ಎಂದು ಅವನಿದ್ದಲ್ಲಿಗೆ ಹೊರಟ ಎಂದರ್ಥ.

೪) ಧರ್ಮರಾಜಾದಿಗಳು ತುಂಬಾ ದುರ್ಬಲರಾದರೆ, ಭೀಮ ಅತ್ಯಂತ ಪ್ರಬಲ. ಆದ್ದರಿಂದ ಸ್ವಲ್ಪ ಹತ್ತಿರವೆನ್ನಿಸುವ ಅರ್ಜುನನೊಂದಿಗೆ ಹೋರಾಡುವುದೇ ಯೋಗ್ಯ ಎಂದು ಭಾವಿಸಿ, ಅಲ್ಲಿಗೆ ತೆರಳಿದ ಎಂದು ತಿಳಿಯಬೇಕು.

ಅರ್ಜುನ ಅಶ್ವತ್ಥಾಮರ ಅಪೂರ್ವಯುದ್ಧ

ಸಂಶಪ್ತಕೈಸ್ತತ್ರ ಸಂಯುಧ್ಯಮಾನಂ
ಸಮಾಹ್ವಯಾಮಾಸ ಸುರೇಂದ್ರಸೂನುಮ್ ।
ಸ ಬಾಣಯುಕ್ತಂ ಭುಜಗೇಂದ್ರಕಲ್ಪ-
ಮುನ್ನಮ್ಯ ಬಾಹುಂ ಯುಧಯೇ ಸುಶೂರಮ್ ॥ ೪೮ ॥

ಅ: ಅಲ್ಲಿ ಸಂಶಪ್ತಕರೊಂದಿಗೆ ಬಹಳವಾಗಿ ಹೋರಾಡುತ್ತಿದ್ದ ಇಂದ್ರಪುತ್ರನೂ, ಮಹಾಶೂರನೂ ಆದ ಅರ್ಜುನನನ್ನು ಅಶ್ವತ್ಥಾಮ ಮಹಾಸರ್ಪದಂತಿದ್ದ ಬಾಣಹಿಡಿದ ತೋಳನ್ನು ಮೇಲೆತ್ತಿ ಯುದ್ಧಕ್ಕೆ ಕರೆದ.

---

೪೮. ಸೇಷುಣಾ ಪಾಣಿನಾऽಹೂಯ ಪ್ರಹಸನ್ ದ್ರೌಣಿರಬ್ರವೀತ್ ।
ವೃತಃ ಸರ್ವಾತ್ಮನಾ ತ್ವದ್ಯ ಯುದ್ಧಾತಿಥ್ಯಂ ಪ್ರಯಚ್ಛ ಮೇ ॥ (ಕರ್ಣ. ೧೬/೨೨)

ವಿ: ೧) 'ಸುರೇಶಸೂನುವಮ್' ಎಂಬ ಪದದ ಮೂಲಕ ಅರ್ಜುನ ಅಸ್ತ್ರವಿದ್ಯಾಶಿಷ್ಯನಾದ ಇಂದ್ರನ ಅವತಾರ ಎಂಬ ವಿಶೇಷಾಂಶ ಸೂಚಿತವಾಗಿದೆ.

೨) ಬಾಣ ಹಿಡಿದ ಕೈಯನ್ನು ಮೇಲೆತ್ತುವುದು ರಣಾಹ್ವಾನಕ್ಕೆ ಸೂಚನೆ ಎಂದು ಇದರಿಂದ ತಿಳಿಯುವುದು. ಒಂದು ರೀತಿಯಲ್ಲಿ ಇದು ಮತ್ತೊಂದು ಕಿರಾತಾರ್ಜುನೀಯವಾಯಿತು.

ಪಾರ್ಥಃ ಸಂಶಪ್ತಕಗಣೈಃ ಸಂಸೃಷ್ಟಃ ಸಮರಾರ್ಥಿಭಿಃ ।
ಆಹೂತೋ ದ್ರೌಣಿನಾ ಚೈವ ಕಾರ್ಯಂ ಕೃಷ್ಣಮಪೃಚ್ಛತ ।
ಚೋದಯಾಮಾಸ ಚ ಹಯಾನ್ ಕೃಷ್ಣೋ ದ್ರೌಣಿರಥಂ ಪ್ರತಿ ॥ ೪೯ ॥

ಅ: ಅರ್ಜುನ ಸಮರಾರ್ಥಿಗಳಾದ ಸಂಶಪ್ತಕರ ಗುಂಪಿನೊಂದಿಗೆ ಕಾದುತ್ತಿದ್ದವನು ಅಶ್ವತ್ಥಾಮ ಯುದ್ಧಕ್ಕೆ ಕರೆದಾಗ ಆಗ ತನ್ನ ಕರ್ತವ್ಯವೇನೆಂದು ಕೃಷ್ಣನನ್ನು ಕೇಳಿದ. ಕೃಷ್ಣ ಕುದುರೆಗಳನ್ನು ಅಶ್ವತ್ಥಾಮರ ರಥದತ್ತ ಓಡಿಸಿದ.

ವಿ: ೧) ಒಬ್ಬರೊಂದಿಗೆ ತಾನೀಗ ಯುದ್ಧ ಮಾಡುತ್ತಿರುವನು. ಅಶ್ವತ್ಥಾಮರು ತನ್ನನ್ನು ಯುದ್ಧಕ್ಕೆ ಕರೆಯುತ್ತಿರುವರು. ಆಗೇನು ಮಾಡುವುದು ಎಂಬುದು ಅರ್ಜುನನ ಪ್ರಶ್ನೆ. ಅದನ್ನು ಪರಿಹರಿಸಿಕೊಳ್ಳಲು ಕೃಷ್ಣನನ್ನು ಕೇಳಿಕೊಂಡ.

೨) ಹೀಗೆ ಅರ್ಜುನ ಕೃಷ್ಣನನ್ನು ಕೇಳಿಕೊಂಡದ್ದು ಗಾಯತ್ರೀಮಂತ್ರಪಠನೆ ಮಾಡಿ–ದಂತಾಯಿತು ಎಂದು ತಿಳಿಯಬೇಕು.

೩) ಕೃಷ್ಣ ಬಾಯಿಂದ ಉತ್ತರ ನೀಡದೆ, ರಥವನ್ನು ಅಶ್ವತ್ಥಾಮರತ್ತ ಓಡಿಸುವ ಮೂಲಕ ಪರಿಹಾರ ಸೂಚಿಸಿದ. ಶ್ರೀಕೃಷ್ಣ ಹಾಗೆ ಕುದುರೆಗಳನ್ನು ಓಡಿಸಿದ್ದು ಬುದ್ಧಿಗಳನ್ನು ಪ್ರೇರೇಪಿಸಿ, ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಸಂಕೇತ ಎಂದು ತಿಳಿಯಬಹುದು.

೪) ಅರ್ಜುನ ಶ್ರವಣಾದಿಗಳ ಸಂಕೇತ. ಶಾಸ್ತ್ರಶ್ರವಣಾದಿಗಳಲ್ಲಿ ತೊಡಗಿದವರಿಗೆ ಹಾಗೆ ದೇವರನ್ನು ಮೊರೆಹೋಗುವುದು ಸಾಧ್ಯವಾಗುವುದು ಎಂಬ ಸೂಚನೆ ಇಲ್ಲಿದೆ.

---

೪೯. ಬಹುಮೇನೇऽರ್ಜುನೋऽऽತ್ಮಾನಮಿತಿ ಚಾಹ ಜನಾರ್ದನಮ್ ।
ಸಂಶಪ್ತಕಾಶ್ಚ ಮೇ ವಧ್ಯಾ ದ್ರೌಣಿರಾಹ್ವಯತೇ ಚ ಮಾಮ್ ॥
ಯದತ್ರಾನಂತರಂ ಪ್ರಾಪ್ತಂ ಶಂಸ ಮೇ ತದ್ಧಿ ಮಾಧವ ॥
ಆತಿಥ್ಯಕರ್ಮಾಭ್ಯುತ್ಥಾಯ ದೀಯತಾಂ ಯದಿ ಮನ್ಯಸೇ ॥ – ಭಾರತ (ಕರ್ಣ. ೧೬/೨೫)

೪೯. ಏವಮುಕ್ತೋऽವಹತ್ ಪಾರ್ಥಂ ಕೃಷ್ಣೋ ದ್ರೋಣಾತ್ಮಜಾಂತಿಕೇ ।
ಚೈತ್ರೇಣ ವಿಧಿನಾऽऽಹೂತಂ ವಾಯುರಿಂದ್ರಮಿವಾಧ್ವರೇ ॥ – ಭಾರತ (ಕರ್ಣ. ೧೬/೨೬)

ಉಭೌ ಚ ತಾವಸ್ತ್ರವಿದಾಂ ಪ್ರಧಾನೌ
ಮಹಾಬಲೌ ಸಂಯತಿ ಜಾತದರ್ಪೌ ।
ಶರೈಃ ಸಮಸ್ತಾಃ ಪ್ರದಿಶೋ ದಿಶಶ್ಚ
ದ್ರೌಣೇಂದ್ರಸೂನೂ ತಿಮಿರಾಃ ಪ್ರಚಕ್ರತುಃ ॥ ೫೦ ॥

ಅ: ಅಸ್ತ್ರಜ್ಞರಲ್ಲಿ ಪ್ರಧಾನರಾದ, ಮಹಾಬಲಿಷ್ಠರಾದ, ದರ್ಪದಿಂದ ಬೀಗುತ್ತಿದ್ದ ಅರ್ಜುನ ಅಶ್ವತ್ಥಾಮರಿಬ್ಬರು ಯುದ್ಧದಲ್ಲಿ ಬಾಣಗಳಿಂದ ಎಲ್ಲ ದಿಕ್ಕುವಿದಿಕ್ಕುಗಳಲ್ಲಿ ಕತ್ತಲೆ ಕವಿಸಿದರು.

ಅಶ್ವತ್ಥಾಮರ ಯುದ್ಧ ಕೌಶಲ - ಶರಪಂಜರದಲ್ಲಿ ಅರ್ಜುನ

ದ್ರೌಣಿಸ್ತದಾ ಸ್ಯಂದನವಾಜಿರೋಮ-
ಸ್ವರೋಮಕೂಪಧ್ವಜಕಾರ್ಮುಕೇಭ್ಯಃ ।
ಶರಾನಮೋಘಾನ್ ಸತತಂ ಸೃಜಾನೋ
ಬಬಂಧ ಪಾರ್ಥಂ ಶರಪಂಜರೇಣ ॥ ೫೧ ॥

ಅ: ಅಶ್ವತ್ಥಾಮ ಆಗ ರಥ, ಕುದುರೆಗಳ ರೋಮ, ತನ್ನ ರೋಮಕೂಪಗಳು, ಧ್ವಜ ಮತ್ತು ಧನುಸ್ಸುಗಳಿಂದ ಅಮೋಘವಾದ ಬಾಣಗಳನ್ನು ಸತತ ಪ್ರಯೋಗಿಸುತ್ತಾ ಅರ್ಜುನನನ್ನು ಶರಪಂಜರದಿಂದ ಕಟ್ಟಿಹಾಕಿದ.

ವಿ: ೧) ಅಶ್ವತ್ಥಾಮರ ಅಪೂರ್ವ ಅಸ್ತ್ರಕೌಶಲದ ವಿವರ ಇಲ್ಲಿದೆ. ಅವರು ಬಾಣಗಳನ್ನು ಸುರಿಸುತ್ತಿದ್ದರೆ, ಅವು ಅವರ ರಥ, ಕುದುರೆ ಮೊದಲಾದ ಎಲ್ಲವುಗಳಿಂದಲೂ ನುಗ್ಗಿಬರುವಂತೆ ತೋರುತ್ತಿದ್ದವು ಎಂದರ್ಥ :

ಇಷುಧೇರ್ಧನುಷಶ್ಚೈವ ಜ್ಯಾಯಾಶ್ಚೈವಾಥ ಮಾರಿಷ ।
ವಾಹ್ಯೇಃ ಕರಾಭ್ಯಾಮುರಸೋ ವದನಘ್ರಾಣನೇತ್ರತಃ ॥
ಕರ್ಣಾಭ್ಯಾಂ ಶಿರಸೋಽಂಗೇಭ್ಯೋ ಲೋಮವರ್ಮಭ್ಯ ಏವ ಚ ।
ರಥಧ್ವಜೇಭ್ಯಶ್ಚ ಶರಾ ನಿಷ್ಪೇತುರ್ಬ್ರಹ್ಮವಾದಿನಃ ॥ – ಭಾರತ (ಕರ್ಣ. ೧೬/೩೪,೩೫)

---

೫೦. ತಿಮಿರಾಃ ಪ್ರಚಕ್ರತುರಿತ್ಯತ್ರ "ಅರ್ಶಾದಿಭ್ಯೋಽಜ" ತಿ ವಚನಾತ್ ತಿಮಿರಾಃ= ತಿಮಿರವತೀರಿತ್ಯರ್ಥಃ – (ವಾ.)

೨) ವಿಶ್ವಾಮಿತ್ರ ತನ್ನನ್ನು ಬಲಾತ್ಕಾರದಿಂದ ಎಳೆದೊಯ್ಯಲು ಪ್ರಯತ್ನಿಸಿದಾಗ ಕಾಮಧೇನುವು ಸಹ ಇದರಂತೆ ತನ್ನ ದೇಹದ ಸಕಲ ಭಾಗಗಳಿಂದ ಶಸ್ತ್ರಪಾಣಿಗಳಾದ ಯೋಧರನ್ನು ಸೃಷ್ಟಿಸಿದ ಪ್ರಸಂಗ ಮಹಾಭಾರತದಲ್ಲಿ ಬಂದಿದೆ :

ಅಸೃಜತ್ ಪಹ್ಲವಾನ್ ಪುಚ್ಛಾತ್ ಪ್ರಸ್ರವಾದ್ದ್ರವಿಡಾಂಧ್ರಕಾನ್ ।
ಯೋನಿದೇಶಾಚ್ಚ ಯವನಾನ್ ಶಕೃತಃ ಶಬರಾನ್ ಬಹೂನ್ ॥
ಮೂತ್ರತಶ್ಚಾಸೃಜತ್ ಕಾಂಚ್ಚಿಚ್ಛಬರಾಂಶ್ಚೈವ ಪಾರ್ಶ್ವತಃ ।
ಪೌಂಡ್ರಾನ್ ಕಿರಾತಾನ್ ಯವನಾನ್ ಸಿಂಹಲಾನ್ ಬರ್ಬರಾನ್ ಖಸಾನ್ ॥
ಚಿಬುಕಾಂಶ್ಚ ಪುಲಿಂದಾಂಶ್ಚ ಚೀತಾನ್ ಹೂಣಾನ್ ಸಕೇರಲಾನ್ ।
ಸಸರ್ಜ ಫೇನತಃ ಸಾ ಗೌರ್ಮ್ಲೇಚ್ಛಾನ್ ಬಹುವಿಧಾನಪಿ ॥

–ಭಾರತ (ಆದಿ. ೧೭೪/೩೬, ೩೮)

ಕೃಷ್ಣನಿಂದ ಅರ್ಜುನನ ಮೋಚನೆ

ತಸ್ಮಿನ್ ನಿಬದ್ಧೇ ಹರಿರಪ್ರಮೇಯೋ
ವಿಬೋಧಯಾಮಾಸ ಸುರೇಂದ್ರಸೂನುಮ್ ।
ಆಲಿಂಗನೇನಾಸ್ಯ ದದೌ ಬಲಂ ಚ
ಸ ಉತ್ಥಿತೋಽಸ್ತ್ರಾಣ್ಯಮುಚನ್ಮಹಾಂತಿ ॥ ೫೨ ॥

ಅ: ಅರ್ಜುನ ಹಾಗೆ ಶರಪಂಜರದಲ್ಲಿ ಬದ್ಧನಾದಾಗ, ಅಪ್ರಮೇಯನಾದ ಶ್ರೀಕೃಷ್ಣ ಅವನಿಗೆ ತಿಳಿಹೇಳಿದ. ಅವನನ್ನು ಆಲಿಂಗಿಸಿಕೊಂಡು ಬಲವನ್ನೂ ನೀಡಿದ. ಅರ್ಜುನ ಅದರಿಂದ ಹೊರಬಂದು ಮಹಾಸ್ತ್ರಗಳನ್ನು ಪ್ರಯೋಗಿಸತೊಡಗಿದ.

ವಿ: ಭೀಮನು ಅಶ್ವತ್ಥಾಮರನ್ನು ಸ್ವಶಕ್ತಿಯಿಂದ ಪರಾಭವಗೊಳಿಸಿದಂತೆ, ಅರ್ಜುನನಿಗೆ ಮಾಡಲು ಸಾಧ್ಯವಾಗಲಿಲ್ಲ. ಅದಕ್ಕೆ ಕೃಷ್ಣನ ವಿಶೇಷವಾದ ರಕ್ಷಣೆಯೇ ಬೇಕಾಯಿತು ಎಂಬುದು ಇಲ್ಲಿಯ ವಿಶೇಷ.

ತುಂಡಾದ ಗಾಂಡೀವ ಜ್ಯಾ

ನಿವಾರ್ಯ ತಾನಸ್ತ್ರವರೈರ್ಗುರೋಃ ಸುತ-
ಶ್ಚಿಚ್ಛೇದ ಚ ಜ್ಯಾಂ ಯುಧಿ ಗಾಂಡಿವಸ್ಯ ।
ವವರ್ಷ ಪಾರ್ಥಂ ಚ ಶರೈರಥಾನ್ಯಾ
ಜ್ಯಾಽಽಸೀತ್ ತಯಾ ಗಾಂಡಿವಂ ಸೋಽಪ್ಯಯುಂಕ್ತ ॥ ೫೩ ॥

---

೫೨. ಸ ಉತ್ಥಿತೋಽಸ್ತ್ರಾಣೀತ್ಯತ್ರ ಉತ್ಥಿತಃ= ಶರಪಂಜರಾದುತ್ಥಿತಃ ಊರ್ಧ್ವಂಗತಃ –(ವಾ.)

ಅ: ಅಶ್ವತ್ಥಾಮ ಅರ್ಜುನನ ಆ ಅಸ್ತ್ರಗಳನ್ನು ಶ್ರೇಷ್ಠವಾದ ಅಸ್ತ್ರಗಳಿಂದ ಪರಿಹರಿಸಿ, ಅವನ ಗಾಂಡೀವಧನುಸ್ಸಿನ ಹಗ್ಗವನ್ನು ಕತ್ತರಿಸಿದ. ಅರ್ಜುನನ ಮೇಲೆ ಬಾಣಗಳ ಮಳೆಯನ್ನೂ ಸುರಿಸಿದ. ಕೂಡಲೇ ಗಾಂಡೀವಕ್ಕೆ ಮತ್ತೊಂದು ಜ್ಯಾ ಮೂಡಿಬಂತು. ಅರ್ಜುನ ಅದನ್ನು ಗಾಂಡೀವಕ್ಕೆ ಕಟ್ಟಿದ.

ವಿ: ೧) ಗಾಂಡೀವದಂತೆ, ಅದರ ಹಗ್ಗವೂ ದಿವ್ಯವಾದುದೇ ಆಗಿದ್ದಿತು. ಆದ್ದರಿಂದ ಕತ್ತರಿಸಲ್ಪಟ್ಟ ಅದು ಮತ್ತು ಬೆಳೆಯಿತು. ಬೇರೊಂದು ಹಗ್ಗ ತರುವ ಪ್ರಸಂಗವೇ ಒದಗದೆ, ಅದನ್ನೇ ಅರ್ಜುನ ಪುನಃ ಕಟ್ಟಿ ಯುದ್ಧಕ್ಕೆ ತೊಡಗಿದ ಎಂದರ್ಥ; ಸಾಮಾನ್ಯ ಧನುಸ್ಸಾಗಿದ್ದಲ್ಲಿ ನಿರುಪಯುಕ್ತವಾಗುತ್ತಿತ್ತು.

೨) ಕತ್ತರಿಸಿದ ಬಳಿ ಮತ್ತೆ ಚಿಗುರುವಂತೆ, ಅದು ಪುನಃ ಬೆಳೆಯಿತು ಎಂದು ಶ್ರೀವಾದಿರಾಜರು ದೃಷ್ಟಾಂತಪೂರ್ವಕ ವಿವರಿಸಿರುವರು. ಇಂತಹ ಅಪೂರ್ವತೆಯಿಂದಾಗಿ ಗಾಂಡೀವಧನುಸ್ಸು ಅತ್ಯಪೂರ್ವಧನುಸ್ಸುಗಳಲ್ಲಿ ಒಂದೆನ್ನಿಸಿದೆ. ಜೀವೋತ್ತಮರಾದ ಬ್ರಹ್ಮದೇವರ ಧನುಸ್ಸು ಹಾಗಿರುವುದರಲ್ಲಿ ಅಚ್ಚರಿಯೇನಿಲ್ಲ.

ಸಾರಥಿಯೂ ಆದ ಅಶ್ವತ್ಥಾಮ

ತತಃ ಶರೇಣ ಕುಪಿತಃ ಶಿತೇನ ದ್ರೌಣಿಸಾರಥೇಃ ।
ಶಿರೋ ಜಹಾರ ಕೌಂತೇಯಃ ಸಾರಥ್ಯಂ ಸೋಽಕರೋತ್ ಸ್ವಯಮ್ ॥೫೪॥

ಅ: ಬಳಿಕ ಕ್ರುದ್ಧನಾದ ಅರ್ಜುನ ತೀಕ್ಷ್ಣವಾದ ಬಾಣದಿಂದ ಅಶ್ವತ್ಥಾಮನ ಸಾರಥಿಯ ಶಿರಸ್ಸನ್ನು ಹಾರಿಸಿದ. ಆಗ ಅಶ್ವತ್ಥಾಮ ತಾನೇ ಸಾರಥ್ಯವನ್ನೂ ಮಾಡತೊಡಗಿದ.

ವಿ: ಅಶ್ವತ್ಥಾಮರನ್ನು ನೇರವಾಗಿ ಸೋಲಿಸುವುದು ಅಸಾಧ್ಯವೆಂದು ಬಗೆದ ಅರ್ಜುನ, ಅವರ ಸಾರಥಿಯನ್ನು ಕೊಂದು ಸಮಸ್ಯೆಯನ್ನು ಸೃಷ್ಟಿಸಿದ. ಆದರೆ ಮಹಾನಿಪುಣರಾದ ಅಶ್ವತ್ಥಾಮರು ಅದರಿಂದ ಕಂಗೆಡದೆ, ಸಾರಥ್ಯವನ್ನೂ ನಿರ್ವಹಿಸುತ್ತಲೇ ಯುದ್ಧವನ್ನು ಮುಂದುವರೆಸಿದರು.

---

೫೩. ಅನ್ಯಾ ಜ್ಯಾSSಸೀದಿತ್ಯತ್ರ ಚಾಪವತ್ ಗಾಂಡೀವಜ್ಯಾಯಾ ಅಚ್ಛೇದ್ಯತ್ವಾತ್ ಛಿನ್ನಾಗ್ರಲತಾವತ್ತ್ವೇವ ಜ್ಯಾ ಪುನರಂಕುರಿತಾSSಸೀದಿತಿ ಭಾವೇನಾಹ ಅಥಾನ್ಯಾ ಜ್ಯಾSSಸೀದಿತಿ। ಅನ್ಯಾ ಛಿನ್ನಾದನ್ಯಾ ಅಚ್ಛಿನ್ನೇತ್ಯರ್ಥಃ। ಅತ ಏವ ಸಂಧಾಯ ತಾಂ ಪುನರಿತಿ ಗ್ರಂಥಕಾರಃ ಸ್ವಯಮೇವ ವಕ್ಷ್ಯತಿ। ತಾಮೇವ ಸಂಧಾಯೇತ್ಯರ್ಥಃ। ಅತ ಏವ ಛಿನ್ನಾಗ್ರಲತಾವದಿತಿ ಪ್ರಾಗಸ್ಮಾಭಿರ್ನಿದರ್ಶನಮದರ್ಶಿ ॥ – (ವಾ.)

೫೪. ಸ ವಿದ್ಧ್ವಾ ಮರ್ಮಸು ದ್ರೌಣಿಂ ಪಾಂಡವಃ ಪರವೀರಹಾ ।
ಸಾರಥಿಂ ಚಾಸ್ಯ ಭಲ್ಲೇನ ರಥನೀಡಾದಪಾತಯತ್ ॥ – ಭಾರತ (ಕರ್ಣ. ೬೪/೨೮)

ಮತ್ತೊಮ್ಮೆ ಶರಪಂಜರದಲ್ಲಿ ಅರ್ಜುನ

ಶರಾನ್ ವಿಸೃಜತಾ ತೇನ ಸಾರಥ್ಯಮಪಿ ಕುರ್ವತಾ ।
ಶರಕೂಟೇನ ಪಾರ್ಥಃ ಸ ಪುನರ್ಬದ್ಧೋ ದ್ವಿಜನ್ಮನಾ ॥ ೫೫ ॥

ಅ: ಬಾಣಗಳನ್ನು ಬಿಡುತ್ತಾ, ಸಾರಥ್ಯವನ್ನೂ ಮಾಡುತ್ತಾ, ಅಶ್ವತ್ಥಾಮ ಬಾಣವ್ಯೂಹದಿಂದ ಮತ್ತೊಮ್ಮೆ ಅರ್ಜುನನನ್ನು ಬಂಧಿಸಿದ.

ವಿ: ಸಾರಥ್ಯವನ್ನು ನಿರ್ವಹಿಸುತ್ತಾ ಪುನಃ ಅರ್ಜುನನನ್ನು ಹಾಗೆ ಬಂಧಿಸಿದ ಅಶ್ವತ್ಥಾಮರ ಹಿರಿಮೆ ಲೋಕಪೂಜ್ಯವಾಯಿತು.

ಕೃಷ್ಣನಿಂದ ಪುನಃ ಅರ್ಜುನನ ಮೋಚನ

ಪುನರಾಲಿಂಗ್ಯ ಕೃಷ್ಣಸ್ತಮಧಾಚ್ಛತ್ರುವಿಘಾತಕಮ್ ।
ಬಲಮಸ್ಮಿಂಸ್ತತಃ ಪಾರ್ಥ ಉತ್ತಸ್ಥೌ ಶರಚಾಪಭೃತ್ ॥ ೫೬ ॥

ಅ: ಶ್ರೀಕೃಷ್ಣ ಮತ್ತೊಮ್ಮೆ ಅವನನ್ನು ಆಲಿಂಗಿಸಿಕೊಂಡು, ಶತ್ರುವನ್ನು ಸದೆಬಡಿಯುವಂತಹ ಬಲವನ್ನು ಅವನಿಗೆ ನೀಡಿದ; ಬಳಿಕ ಅರ್ಜುನ ಬಂಧನದಿಂದ ಬಿಡುಗಡೆ ಹೊಂದಿ ಬಿಲ್ಲುಬಾಣಗಳನ್ನೆತ್ತಿಕೊಂಡ.

ಮತ್ತೊಮ್ಮೆ ತುಂಡಾದ ಗಾಂಡೀವ ಜ್ಯಾ

ವವರ್ಷ ಚ ಶರಾನ್ ಭೂಯೋ ದ್ರೋಣಪುತ್ರೋಽರಿಮರ್ದನಃ ।
ಪುನಸ್ತಸ್ಯ ನುನೋದ ಜ್ಯಾಂ ದ್ರೌಣಿಃ ಸಂಧಾಯ ತಾಂ ಪುನಃ ।
ಪಾರ್ಥೋ ದ್ರೋಣಸುತಸ್ಯಾಶ್ವರಶ್ಮೀಂಶ್ಚಿಚ್ಛೇದ ಸಾಯಕೈಃ ॥ ೫೭ ॥

ಅ: ಶತ್ರುನಾಶಕನಾದ ಅರ್ಜುನ ಪುನಃ ಅಶ್ವತ್ಥಾಮರ ಮೇಲೆ ಬಾಣಗಳನ್ನು ಸುರಿಸತೊಡಗಿದ. ಅಶ್ವತ್ಥಾಮ ಅವನ ಗಾಂಡೀವದ ಹಗ್ಗವನ್ನು ಮತ್ತೊಮ್ಮೆ ತುಂಡರಿಸಿದ. ಅರ್ಜುನ ಅದನ್ನು ಮತ್ತೆ ಕಟ್ಟಿಕೊಂಡು, ಅಶ್ವತ್ಥಾಮನ ಕುದುರೆಗಳ ಹಗ್ಗವನ್ನು ಬಾಣಗಳಿಂದ ಕತ್ತರಿಸಿಹಾಕಿದ.

---

೫೫. ಸ ಸಂಗೃಹ್ಯ ಸ್ವಯಂ ವಾಹಾನ್ ಕೃಷ್ಣೌ ಪ್ರಾಚ್ಛಾದಯಚ್ಛರೈಃ ।
ತತ್ರಾದ್ಭುತಮಪಶ್ಯಾಮ ದ್ರೌಣೇಯ ಪರಾಕ್ರಮಮ್ ॥
ಪ್ರಾಯಚ್ಛತ್ ತುರಗಾನ್ ಯಚ್ಚ ಫಾಲ್ಗುನಂ ಚಾಪ್ಯಯೋಧಯತ್ ।
ಯದಸ್ಯ ಸಮರೇ ರಾಜನ್ ಸರ್ವೇ ಯೋಧಾ ಅಪೂಜಯನ್ ॥ – ಭಾರತ (ಕರ್ಣ. ೬೪/೨೯, ೩೦)

ಕೊನೆಗೂ ಸೋತ ಅಶ್ವತ್ಥಾಮ

ವಿರಶ್ಮಯೋ ಹಯಾ ದ್ರೌಣೇಃ ಪುನಃ ಪಾರ್ಥಶರಾಹತಾಃ ।
ಅಪೋಹುರ್ದೂರಮೇತಸ್ಮಾತ್ ಸೋಽಪಿ ಸಂಸ್ಥಾಪ್ಯ ತಾನ್ ಪುನಃ ।
ಚಿಂತಯಾಮಾಸ ನೈತಸ್ಮಾದಧಿಕಂ ಶಕ್ಯತೇಽರ್ಜುನೇ ॥ ೫೮ ॥

ಅ: ಹಗ್ಗವಿಲ್ಲದಾದ ಅಶ್ವತ್ಥಾಮರ ಕುದುರೆಗಳು ಮರಳಿ ಅರ್ಜುನನ ಬಾಣಗಳಿಂದ ಪೀಡಿತವಾಗಿ ಅವನಿಂದ ದೂರಕ್ಕೆ ಓಡಿದವು. ಅಶ್ವತ್ಥಾಮ ಅವುಗಳನ್ನು ಪುನಃ ನಿಯಂತ್ರಿಸಿ, ಆಲೋಚಿಸಿದ : ''ಅರ್ಜುನನ ಮೇಲೆ ಇದಕ್ಕಿಂತ ಹೆಚ್ಚಿನದು ಸಾಧ್ಯವಾಗದು''.

ವಿ: ಮಹಾಭಾರತದಲ್ಲಿ ಇದರ ವಿವರ ಹೀಗಿದೆ :

ಕ್ಷಿಪ್ರಂ ರಶ್ಮೀನಥಾಶ್ವಾನಾಂ ಕ್ಷುರಪ್ರೈಶ್ಚಿಚ್ಛಿದೇ ಜಯಃ ।
ಪ್ರಾದ್ರವಂಸ್ತುರಗಾಸ್ತೇ ತು ಶರವೇಗಪ್ರಪೀಡಿತಾಃ ॥

– ಭಾರತ (ಕರ್ಣ. ೬೪/೩೧)

ಅರ್ಜುನನ ಗೆಲುವಿನ ಗುಟ್ಟು

ಸಾರಥಿತ್ವಾತ್ ಕೇಶವಸ್ಯ ಧ್ವಜಸ್ಥತ್ವಾದ್ಧನೂಮತಃ ।
ಗಾಂಡಿವತ್ವಾತ್ ಕಾರ್ಮುಕಸ್ಯ ಚೇಷುಧ್ಯೋರಕ್ಷಯತ್ವತಃ ॥ ೫೯ ॥

ಅವಧ್ಯತ್ವಾತ್ ತಥಾಽಶ್ವಾನಾಮಭೇದ್ಯತ್ವಾದ್ರಥಸ್ಯ ಚ ।
ಅತೋ ಯೋದ್ಧುಂ ಸಮರ್ಥೋಽಪಿ ನಾದ್ಯ ಯಾಮಿ ಧನಂಜಯಮ್ ॥೬೦॥

ಅ: ಕೃಷ್ಣನು ಸಾರಥಿಯಾಗಿರುವನು; ಹನುಮಂತ ಧ್ವಜದಲ್ಲಿರುವನು; ಗಾಂಡೀವ ಧನುಸ್ಸಾಗಿರುವುದು; ಬತ್ತಳಿಕೆಗಳು ಅಕ್ಷಯವಾಗಿರುವವು; ಅದರಂತೆ ಅಶ್ವಗಳೂ ಅವಧ್ಯವಾಗಿರುವವು; ರಥವೂ ಅಭೇದ್ಯವಾದುದು. ಆದ್ದರಿಂದ ನಾನು ಹೋರಾಡಲು ಸಮರ್ಥನಾಗಿದ್ದರೂ, ನಾನೀಗ ಅರ್ಜುನನ ಮೇಲೆ ಹೋರಾಡಲು ತೆರಳೆನು''

ವಿ: ೧) ಅರ್ಜುನನಿಗಿರುವ ವಿಶೇಷಸಾಧನಸಾಮಗ್ರಿಯ ವಿವರ ಇಲ್ಲಿದೆ. ಸರ್ವೋತ್ತಮನಾದ ಕೃಷ್ಣ ಸಾರಥಿಯಾಗಿ ಮುಂದೆಯೂ, ಜೀವೋತ್ತಮನಾದ ಹನುಮಂತ ಧ್ವಜದಲ್ಲಿ ಮೇಲೆಯೂ ಕುಳಿತಿರುವಾಗ ಅವನನ್ನು ಜಯಿಸುವುದು ಅಸಾಧ್ಯ. ಅವುಗಳು ಇಲ್ಲವಾದಲ್ಲಿ ಅರ್ಜುನ ಅಶ್ವತ್ಥಾಮ–

---

೫೮. ದೂರಮಪೋಹುಃ= ದೂರಂ ದುದ್ರುವುಃ – (ವಾ.)

ರಿಗೆ ಸೋಲುವುದು ನಿಶ್ಚಿತ. ಆದ್ದರಿಂದ ತಾರತಮ್ಯದಲ್ಲಿ ಅಶ್ವತ್ಥಾಮರೇ ಮಿಗಿಲಾದವರಾದರೂ, ಇಲ್ಲಿ ಅರ್ಜುನನನ್ನು ಗೆಲ್ಲಲು ಅವರಿಗೆ ಸಾಧ್ಯವಾಗಲಿಲ್ಲ ಎಂದು ಈಗಾಗಲೇ ತಿಳಿಸಿರುವರು :

ಬಲದೇವಸ್ತತಃ ಪಶ್ಚಾತ್ ತತಃ ಪಶ್ಚಾಚ್ಚ ಫಲ್ಗುನಃ ।
ನರಾವೇಶಾದನ್ಯಥಾ ತು ದ್ರೌಣಿಃ ಪಶ್ಚಾತ್ ತತೋಽಪರೇ ॥...
ಅಕ್ಷಯಾವಿಷುಧೀ ದಿವ್ಯೌ ಧ್ವಜೋ ವಾನರಲಕ್ಷಣಃ ।
ಗಾಂಡೀವಂ ಧನುಷಾಂ ಶ್ರೇಷ್ಠಂ ತೇನ ದ್ರೌಣೇರ್ವರೋಽರ್ಜುನಃ ॥ –(೨/೪೩.೧೭೮)

೨) ಇದು ಶ್ರವಣಾದಿಗಳ ಬಲದಿಂದ ಮನೋನಿಗ್ರಹ ಸಾಧ್ಯ ಎಂಬುದಕ್ಕೆ ಸೂಚಕ.

ಪಾಂಡ್ಯ ಅಶ್ವತ್ಥಾಮರ ಯುದ್ಧ

ಏವಂ ಸ ಮತ್ವಾ ಪ್ರವಿವೇಶ ಸೇನಾಂ
ಪಾಂಡೋಃ ಸುತಾನಾಮಥ ತಂ ಸಮಭ್ಯಯಾತ್ ।
ಪಾಂಡ್ಯಸ್ತಯೋರಾಸ ಸುಯುದ್ಧಮದ್ಭುತಂ
ಪ್ರವರ್ಷತೋಃ ಸಾಯಕಪೂಗಮುಗ್ರಮ್ ॥ ೬೧ ॥

ಅ: ಹೀಗೆ ಆಲೋಚಿಸಿ, ಅಶ್ವತ್ಥಾಮ ಪಾಂಡವರ ಸೇನೆಯನ್ನು ಪ್ರವೇಶಿಸಿದ. ಅವನನ್ನು ಎದುರಿಸಿ ಪಾಂಡ್ಯದೇಶದ ರಾಜ ಬಂದ. ಅವರಿಬ್ಬರಿಗೂ ಅದ್ಭುತವಾದ ಮಹಾಯುದ್ಧ ನಡೆಯಿತು. ಇಬ್ಬರೂ ಉಗ್ರವಾದ ಬಾಣಸಮೂಹವನ್ನು ಸುರಿಸಿದರು.

ವಿ: ಈ ಪಾಂಡ್ಯರಾಜ ಚಿತ್ರಾಂಗದೆಯ ತಂದೆ; ವೀರಸೇನ ಎಂದು ಹೆಸರು (೨೦/೧೬೦).

ಅಶ್ವತ್ಥಾಮನಿಂದ ಪಾಂಡ್ಯನ ವಧೆ

ಅಷ್ಟಾವಷ್ಟಶತಾನ್ಯೂಹುಃ ಶಕಟಾನಿ ಯದಾಯುಧಮ್ ।
ಅಹ್ನಸ್ತದಷ್ಟಭಾಗೇನ ದ್ರೌಣಿಶ್ಚಿಕ್ಷೇಪ ತತ್ರ ಹ ॥ ೬೨ ॥

---

೬೨. ಅಷ್ಟಾವಷ್ಟಗವಾನೀತ್ಯತ್ರ ಅಷ್ಟೌ ಗಾವಃ ವೃಷಾಃ ಯೇಷಾಂ ತಾನಿ ಅಷ್ಟಗವಾನೀತಿ ಶಕಟಾನಾಂ ವಿಶೇಷಣಮ್। ಸಮಾಸಾಂತಗೋಶಬ್ದಾದವಾದೇಶೇ ಕೃತೇ ಅಷ್ಟಗವಾನೀತಿ ರೂಪನಿಷ್ಪತ್ತಿರಿತಿ ಜ್ಞೇಯಮ್। ಅಹ್ನಶ್ಚತ್ವಾರೋ ಯಾಮಾಃ ತತ್ರಾಷ್ಟಮೋ ಭಾಗಃ ಯಾಮಾರ್ಧಮ್। –(ವಾ.)

೬೨. ಅಷ್ಟಾವಿತಿ ಪದಚ್ಛೇದಃ। ಅಷ್ಟಶತಾನಿ ಹಿ ತಥಾ। ಅಷ್ಟೌ ಚ ಅಷ್ಟಾಧಿಕಾಷ್ಟಶತಾನೀತ್ಯರ್ಥಃ। ಶಕಟಾನಿ ಯತ್ ಯಾನಿ। ಅಯುಧಂ ಆಯುಧಾನಿ। ಆಯುಧಮಿತಿ ಜಾತ್ಯೇಕವಚನಮ್। –(ಜ.)

೬೨. ಅಷ್ಟಶತಾನಿ ತಥಾ ಅಷ್ಟೌ ಚ ಅಷ್ಟಾಧಿಕೋಽಷ್ಟಶತಾನೀತ್ಯರ್ಥಃ। –(ವ.)

ಎಂಟು ಎತ್ತುಗಳು ಹೂಡಿದ ನೂರು ಬಂಡಿಗಳು ಹೊರಬಲ್ಲ ಆಯುಧಗಳನ್ನು ಅಶ್ವತ್ಥಾಮ ಹಗಲಿನ ಎಂಟನೆಯ ಒಂದು ಭಾಗದಷ್ಟು ಕಾಲದಲ್ಲಿ ಪ್ರಯೋಗಿಸಿದ.

ಏ: 'ಅಷ್ಟಾವಷ್ಟಗವಾನ್ಯೂಹಃ' ಎಂದು ವಾದಿರಾಜೀಯಪಾಠ. ಅಶ್ವತ್ಥಾಮರ ಅಪಾರ ಅಸ್ತ್ರಕೌಶಲವನ್ನು ವಿವರಿಸುವ ಮತ್ತೊಂದು ಪ್ರಸಂಗವಿದು; ಹಗಲಿನ ಎಂಟನೆಯ ಒಂದು ಭಾಗ ಎಂದರೆ 'ಯಾವಾರ್ಧ' – ಒಂದೂವರೆ ಘಂಟೆ ಎಂದರ್ಥ.

ಅರ್ಜುನನಿಂದ ದಂಡಧಾರನವಧೆ

ಅಥ ತಂ ವಿರಥಂ ಕೃತ್ವಾ ಛಿತ್ವಾ ಕಾರ್ಮುಕಮಾಹವೇ ।
ಸಕುಂಡಲಂ ಶಿರೋ ದ್ರೌಣೇರ್ಜಹಾರ ಮಕುಟೋಜ್ವಲಮ್ ॥ ೬೩ ॥

ಅ: ಬಳಿಕ ಅವನನ್ನು ಯುದ್ಧದಲ್ಲಿ ವಿರಥನನ್ನಾಗಿ ಮಾಡಿ, ಬಿಲ್ಲನ್ನು ಕತ್ತರಿಸಿ, ಅವನ ಕುಂಡಲಸಮೇತವಾದ ಕಿರೀಟಶೋಭಿತವಾದ ಶಿರಸ್ಸನ್ನು ಅಶ್ವತ್ಥಾಮ ಕತ್ತರಿಸಿದ.

ಅಶ್ವತ್ಥಾಮ ಧೃಷ್ಟದ್ಯುಮ್ನರ ಯುದ್ಧ

ಅಥ ವಿದ್ರಾವಯಾಮಾಸ ಪೃತನಾಂ ಪಾಂಡವೀಂ ಶರೈಃ ।
ತದಾ ಜಘಾನ ಪಾರ್ಥೋಽಪಿ ದಂಡಧಾರಾಖ್ಯಮಾಗಧಮ್ ॥ ೬೪ ॥

ಅ: ಬಳಿಕ ಅಶ್ವತ್ಥಾಮ ಪಾಂಡವಸೇನೆಯನ್ನು ಬಾಣಗಳಿಂದ ಹೊಡೆದೋಡಿಸತೊಡಗಿದ. ಆಗ ಅರ್ಜುನನು ದಂಡಧಾರ ಎಂಬ ಮಗಧದೇಶದ ದೊರೆಯನ್ನು ಕೊಂದುಹಾಕಿದ.

ಏ: ಅರ್ಜುನ ಅವನೊಂದಿಗೆ ಅವನ ಸೋದರನನ್ನು ಸಂಹರಿಸಿದ ವಿವರವೂ ಮಹಾ–ಭಾರತದಲ್ಲಿದೆ.

ವಿದ್ರಾವ್ಯಮಾಣಾಂ ಪೃತನಾಂ ನಿರೀಕ್ಷ್ಯ
ಗುರೋಃ ಸುತೇನಾಭ್ಯಗಮತ್ ತ್ವರಾವಾನ್ ।
ಧೃಷ್ಟದ್ಯುಮ್ನಸ್ತಂ ಸ ಊಚೇ ಸುಪಾಪಂ
ಹನಿಷ್ಯೇ ತ್ವಾಮದ್ಯ ಯುದ್ಧೇ ಗುರುಘ್ನಮ್ ॥ ೬೫ ॥

---

೬೨. ಅಷ್ಟಾವಷ್ಟಗವಾನ್ಯೂಹಃ ಶಕಟಾನಿ ಯದಾಯುಧಮ್ ।
ಅಹ್ನಸ್ತದಷ್ಟಭಾಗೇನ ದ್ರೌಣಿಶ್ಚಿಕ್ಷೇಪ ಮಾರಿಷ ॥ – ಭಾರತ (ಕರ್ಣ.೨೧/೯೦)

ಅ: ತಮ್ಮ ಸೇನೆ ಅಶ್ವತ್ಥಾಮನಿಂದ ಹೊಡೆದೋಡಿಸಲ್ಪಡುತ್ತಿದ್ದುದನ್ನು ಕಂಡು, ಧೃಷ್ಟದ್ಯುಮ್ನ ತ್ವರೆಯಿಂದ ಆಗಮಿಸಿದ. ಅಶ್ವತ್ಥಾಮ ಅವನಿಗೆ ನುಡಿದ : ''ಗುರುಹತ್ಯೆ ಮಾಡಿದ ಮಹಾಪಾಪಿಯಾದ ನಿನ್ನನ್ನು ಈಗ ಯುದ್ಧದಲ್ಲಿ ಕೊಲ್ಲುವೆ''.

ವಿ: ಗುರುದ್ರೋಹವೇ ಮಹಾಪಾಪವಾಗಿರುವಾಗ, ಗುರುಹತ್ಯೆ ಮಹಾಪಾತಕವೆಂಬುದು ಕೈಮುತ್ಯಸಿದ್ಧ ಎಂಬುದನ್ನು ಸೂಚಿಸಲು 'ಸುಪಾಪಂ' ಎಂದಿರುವರು, ಎಂದು ತಿಳಿಯಬಹುದು.

ಇತ್ಯುಕ್ತೋ ದರ್ಶಯಾಮಾಸ ಪಾರ್ಷತಃ ಖಡ್ಗಮುತ್ತಮಮ್ ।
ಅಯಂ ತವ ಪಿತುರ್ಹಂತಾ ವದಿಷ್ಯತಿ ತವೋತ್ತರಮ್ ॥ ೬೬ ॥

ಅ: ಅಶ್ವತ್ಥಾಮ ಹೀಗೆನ್ನಲು ಧೃಷ್ಟದ್ಯುಮ್ನ ತನ್ನ ಉತ್ತಮವಾದ ಖಡ್ಗವನ್ನು ತೋರಿಸಿದ. ''ನಿನ್ನ ತಂದೆಯನ್ನು ಕೊಂದಿರುವ ಈ ಖಡ್ಗ ನಿನಗೆ ಉತ್ತರ ನೀಡುವುದು''.

ಇತ್ಯುಕ್ತ್ವಾ ಧನುರಾದಾಯ ವವರ್ಷ ಚ ಶರಾನ್ ಬಹೂನ್ ।
ತಯೋಃ ಸಮಭವದ್ಯುದ್ಧಂ ತುಮುಲಂ ರೋಮಹರ್ಷಣಮ್ ॥ ೬೭ ॥

ಅ: ಧೃಷ್ಟದ್ಯುಮ್ನ ಹೀಗೆ ನುಡಿದು, ಧನುಸ್ಸನ್ನು ತೆಗೆದುಕೊಂಡು, ಅನೇಕಬಾಣಗಳ ಮಳೆಗರೆದ. ಅವರಿಬ್ಬರ ಮಧ್ಯೆ ರೋಮಹರ್ಷಕವಾದ ದ್ವಂದ್ವಯುದ್ಧ ಸಮವಾಗಿಯೇ ನಡೆಯಿತು.

ವಿರಥನಾದ ಧೃಷ್ಟದ್ಯುಮ್ನ

ತತ್ರ ತಂ ಪಾರ್ಷತಂ ದ್ರೌಣಿಃ ಕ್ಷಣೇನ ವಿರಥಾಯುಧಮ್ ।
ಕೃತ್ವಾಽಂತಾಯ ಶರಾಂಸ್ತೀಕ್ಷ್ಣಾ ನ್ ಮುಮೋಚ ನ ಚ ತಸ್ಯ ತೇ ।
ತ್ವಚಂ ಚ ಚಿಚ್ಛೇದುರ್ದ್ರೌಣಿಃ ಖಡ್ಗಹಸ್ತೋಽಭಿಜಗ್ಮಿವಾನ್ ॥ ೬೮ ॥

---

೬೬. ಪ್ರತಿವಾಕ್ಯಂ ಸ ಏವಾಸಿರ್ಮಾಮಕೋ ದಾಸ್ಯತೇ ತವ ।
ಯೇನೈವ ತೇ ಪಿತುರ್ದತ್ತಂ ಯತಮಾನಸ್ಯ ಸಂಯುಗೇ ॥ – ಭಾರತ (ಕರ್ಣ. ೫೯/೩೨)

೬೮. ಸ ಪಾರ್ಷತಸ್ಯ ರಾಜೇಂದ್ರ ಧನುಂ ಶಕ್ತಿಂ ಗದಾಂ ಧ್ವಜಮ್ ।
ಹಯಾನ್ ಸೂತಂ ರಥಂ ಚೈವ ನಿಮೇಷಾದ್ವ್ಯಧಮಚ್ಛರೈಃ ॥ – ಭಾರತ (ಕರ್ಣ. ೫೯/೪೦)

ಖಡ್ಗೇನ ಸಾಸ್ತ್ರೈಃ ಶಸ್ತ್ರೈರಪ್ಯನಿರ್ಭಿಣ್ಣತ್ವಚಂ ತದಾ ।
ಮೌರ್ವ್ಯಾ ಮಮಂಥ ಧನುಷಃ ಪಾತಯಿತ್ವಾ ಧರಾತಲೇ ॥ ೬೯ ॥

ಅ: ಅಶ್ವತ್ಥಾಮ ಧೃಷ್ಟದ್ಯುಮ್ನನನ್ನು ಕ್ಷಣದಲ್ಲೇ ವಿರಥನನ್ನಾಗಿಯೂ, ಆಯುಧಹೀನನನ್ನಾಗಿಯೂ ಮಾಡಿ, ಅವನನ್ನು ಕೊಲ್ಲಲೆಂದು ಹರಿತವಾದ ಬಾಣಗಳನ್ನು ಪ್ರಯೋಗಿಸಿದ. ಆದರೆ ಅವು ಅವನ ಚರ್ಮವನ್ನೂ ಸಹ ಕತ್ತರಿಸದಾದವು. ಅಶ್ವತ್ಥಾಮ ಖಡ್ಗವನ್ನು ಕೈಗೆತ್ತಿಕೊಂಡು ಅವನ ಮೇಲೆ ನುಗ್ಗಿದ. ಖಡ್ಗದಿಂದಲೂ, ಅಸ್ತ್ರಶಸ್ತ್ರಗಳಿಂದಲೂ ಅವನ ಚರ್ಮವೂ ಸಹ ಗಾಯಗೊಳ್ಳಲಿಲ್ಲ. ಆಗ ಅವನನ್ನು ನೆಲಕ್ಕೆ ಕೆಡವಿ, ಬಿಲ್ಲಿನ ಹಗ್ಗದಿಂದ ಸೆಳೆಯತೊಡಗಿದ.

ವಿ: ೧) ಧೃಷ್ಟದ್ಯುಮ್ನ ಅಗ್ನಿಯ ಅವತಾರನಾದ್ದರಿಂದ ಅವನನ್ನು ಶಸ್ತ್ರಾಸ್ತ್ರಗಳಿಂದ ಗಾಯಗೊಳಿಸಲು ಸಹ ಅಶ್ವತ್ಥಾಮರಿಗೆ ಸಾಧ್ಯವಾಗಲಿಲ್ಲ.

೨) ಅಗ್ನಿಯ ಅವತಾರನಾದ ನೀಲನನ್ನು ಕೊಲ್ಲಲು ರಾವಣನಿಗೆ ಆಗ್ನೇಯಾಸ್ತ್ರದಿಂದಲೂ ಸಾಧ್ಯವಾಗಲಿಲ್ಲ ಎಂಬ ವಿವರ ಈಗಾಗಲೇ ಬಂದಿರುವುದನ್ನು ಗಮನಿಸಬೇಕು (೮/೮೧). ಉರಿಯುವ ಬೆಂಕಿಯನ್ನು ಅಸ್ತ್ರಗಳಿಂದ ಚುಚ್ಚಿ ಆರಿಸಲು ಸಾಧ್ಯವಿಲ್ಲವಷ್ಟೆ!

ಭೀಮಾರ್ಜುನರಿಂದ ಧೃಷ್ಟದ್ಯುಮ್ನನ ರಕ್ಷಣೆ

ಆಕೃಷ್ಯಮಾಣಂ ಪಾರ್ಷತಂ ದೃಷ್ಟ್ವಾ ಕೃಷ್ಣಪ್ರಚೋದಿತಃ ।
ಪಾರ್ಥೋ ಭೀಮಶ್ಚೋಭಯತಃ ಶರೈರಭಿನಿಜಘ್ನತುಃ ॥ ೭೦ ॥

ಅ: ಹಾಗೆ ಸೆಳೆದಾಡಲ್ಪಡುತ್ತಿದ್ದ ಧೃಷ್ಟದ್ಯುಮ್ನನನ್ನು ನೋಡಿ, ಕೃಷ್ಣಪ್ರೇರಿತನಾದ ಅರ್ಜುನನೂ, ಭೀಮನೂ ಇಕ್ಕೆಲಗಳಿಂದಲೂ ಬಾಣಗಳಿಂದ ಹೊಡೆಯತೊಡಗಿದರು.

ಸ ತಾಭ್ಯಾಂ ವಜ್ರಸದೃಶೈಃ ಶರೈರಭಿಹತೋ ಭೃಶಮ್ ।
ವಿಸೃಜ್ಯ ಪಾರ್ಷತಂ ಸ್ವೀಯಮಾರುರೋಹ ರಥಂ ಪುನಃ ॥ ೭೧ ॥

ಅ: ವಜ್ರಸದೃಶವಾದ ಬಾಣಗಳಿಂದ ಅವರಿಬ್ಬರಿಂದ ಬಹಳವಾಗಿ ಹೊಡೆಯಲ್ಪಟ್ಟ ಅಶ್ವತ್ಥಾಮ ಧೃಷ್ಟದ್ಯುಮ್ನನನ್ನು ಬಿಟ್ಟು, ಮತ್ತೆ ತನ್ನ ರಥವನ್ನು ಏರಿದ.

ವಿ: ಧೃಷ್ಟದ್ಯುಮ್ನನನ್ನು ಆಗ ಕೊಲ್ಲಲು ಅಶ್ವತ್ಥಾಮ ಸಫಲನಾಗದಿದ್ದರೂ, ಅವನನ್ನು ಕೊಲ್ಲುವ ಉಪಾಯವನ್ನು ಕಂಡುಕೊಳ್ಳುವಲ್ಲಿ ಮಾತ್ರ ಸಫಲನೇ ಆಗಿದ್ದ. ಆದ್ದರಿಂದ ಮುಂದೆ ಹದಿನೆಂಟನೆಯ ದಿನದ ರಾತ್ರಿಯಲ್ಲಿ (೨೮/೧೩೭) ಅವನನ್ನು ಸುಲಭವಾಗಿ ಕೊಲ್ಲಲು ಸಾಧ್ಯವಾಯಿತು ಎಂದು ತಿಳಿಯಬಹುದು.

ಕೃತವರ್ಮ ಧೃಷ್ಟದ್ಯುಮ್ನರ ಯುದ್ಧ

ಜಗಾಮ ಚ ತತೋಽನ್ಯತ್ರ ಪಾಂಚಾಲ್ಯೋಽಪಿ ರಥಂ ಪುನಃ ।
ಆರುಹ್ಯಾನ್ಯಂ ಸ್ವಾತ್ತಧನ್ವಾ ಕೃತವರ್ಮಾಣಮಭ್ಯಯಾತ್ ॥ ೭೨ ॥

ಅ: ಅಶ್ವತ್ಥಾಮ ಹಾಗೆ ರಥವೇರಿದ ಮೇಲೆ ಬೇರೆಡೆಗೆ ನಡೆದ. ಧೃಷ್ಟದ್ಯುಮ್ನನೂ ಮತ್ತೆ ಬೇರೊಂದು ರಥವನ್ನೇರಿ, ತನ್ನ ಧನುಸ್ಸನ್ನೆತ್ತಿಕೊಂಡು ಕೃತವರ್ಮನ ಮೇಲೆ ಸಾಗಿದ.

ಕೃತವರ್ಮನ ಪರಾಭವ

ತಯೋರಾಸೀತ್ ಸುತುಮುಲಂ ಯುದ್ಧಮದ್ಭುತದರ್ಶನಮ್ ।
ತತ್ರ ನಾತಿಪ್ರಯತ್ನೇನ ಪಾಂಚಾಲ್ಯೋ ವಿರಥಾಯುಧಮ್ ।
ಚಕಾರ ಕೃತವರ್ಮಾಣಂ ತಮಪೋವಾಹ ಗೌತಮಃ ॥ ೭೩ ॥

ಅ: ಧೃಷ್ಟದ್ಯುಮ್ನ ಕೃತವರ್ಮರಿಗೆ ನೋಡಲು ಅದ್ಭುತವಾದ ದ್ವಂದ್ವಯುದ್ಧ ನಡೆಯಿತು. ಆ ಯುದ್ಧದಲ್ಲಿ ಧೃಷ್ಟದ್ಯುಮ್ನ ಹೆಚ್ಚಿನ ಪ್ರಯತ್ನವಿಲ್ಲದೆ ಕೃತವರ್ಮನನ್ನು ವಿರಥನನ್ನಾಗಿಯೂ, ನಿರಾಯುಧನನ್ನಾಗಿಯೂ ಮಾಡಿದ. ಕೃಪ ಕೃತವರ್ಮನನ್ನು ಬೇರೆಡೆಗೆ ಕರೆದೊಯ್ದ.

ದುರ್ಯೋಧನನಿಂದ ನಕುಲ ಸಹದೇವರ ಸೋಲು

ಅಥ ದುರ್ಯೋಧನೋ ರಾಜಾ ಮಾದ್ರೇಯಾವಭ್ಯಯಾದ್ ರಥೀ ।
ತಾಭ್ಯಾಂ ತಸ್ಯಾಭವದ್ ಘೋರಂ ಯುದ್ಧಮದ್ಭುತದರ್ಶನಮ್ ।
ತತ್ರ ನಾತಿಪ್ರಯತ್ನೇನ ತೇನ ತೌ ವಿರಥೀಕೃತೌ ॥ ೭೪ ॥

ಅ: ಮತ್ತೊಂದೆಡೆ ರಾಜನಾದ ದುರ್ಯೋಧನ ನಕುಲಸಹದೇವರನ್ನು ರಥದಲ್ಲಿ ಕುಳಿತು ಎದುರಿಸಿದ. ಅವರೊಬ್ಬರೊಂದಿಗೆ ನೋಡಲು ಅದ್ಭುತವಾದ ಭಯಂಕರಯುದ್ಧ ನಡೆಯಿತು. ಹೆಚ್ಚಿನ ಪ್ರಯತ್ನವಿಲ್ಲದೆ ಆ ಯುದ್ಧದಲ್ಲಿ ದುರ್ಯೋಧನ ನಕುಲಸಹದೇವರನ್ನು ವಿರಥರನ್ನಾಗಿಸಿದ.

ವಿ: ದುರ್ಯೋಧನನಿಂದ ನಕುಲಸಹದೇವರು ಸುಲಭವಾಗಿ ಪರಾಭವಗೊಂಡದ್ದು ಕಲಿಯುಗದಲ್ಲಿ ಶೀಲವಿನಯಗಳು ಸುಲಭವಾಗಿ ಮೂಲೆಗುಂಪಾಗುವುದಕ್ಕೆ ನಿದರ್ಶನ.

ದುರ್ಯೋಧನನಿಂದ ಯುಧಿಷ್ಠಿರನ ಸೋಲು

ಸ್ವಯಂ ಯುಧಿಷ್ಠಿರೋ ರಾಜಾ ತದಾ ತಂ ಸಮವಾರಯತ್ ।
ವ್ಯಶ್ವಸೂತಧ್ವಜಂ ಚಕ್ರೇ ತಂ ಚ ದುರ್ಯೋಧನೋ ರಣೇ ॥ ೭೫ ॥

ಅ: ಆಗ ರಾಜನಾದ ಯುಧಿಷ್ಠಿರ ದುರ್ಯೋಧನನನ್ನು ತಾನೇ ಎದುರಿಸಿದ. ದುರ್ಯೋಧನ ಯುದ್ಧದಲ್ಲಿ ಅವನ ಕುದುರೆ, ಸಾರಥಿ, ಧ್ವಜಗಳನ್ನು ನಾಶಮಾಡಿದ.

ಭೀಮನಿಂದ ಕರ್ಣ ದುರ್ಯೋಧನರ ಪರಾಭವ

ಅಥಾಗತಂ ಸೂರ್ಯಸುತಂ ಪುನಶ್ಚ
ಜಗಾಮ ಭೀಮೋ ರಭಸೋ ರಥೇನ ।
ದುರ್ಯೋಧನಂ ಚಾಸ್ಯ ಸಮಕ್ಷಮೇವ
ಚಕಾರ ವೀರೋ ವಿರಥಂ ಕ್ಷಣೇನ ॥ ೭೬ ॥

ಅ: ಆ ವೇಳೆಗೆ ಮರಳಿ ಬಂದ ಕರ್ಣನನ್ನು ಎದುರಿಸಿ, ವೀರನಾದ ಭೀಮಸೇನ ರಥದಿಂದ ವೇಗವಾಗಿ ತೆರಳಿದ; ಅವನ ಎದುರೇ ದುರ್ಯೋಧನನನ್ನು ಕ್ಷಣದಲ್ಲೇ ವಿರಥನನ್ನಾಗಿಸಿದ.

ವಿ: ಭೀಮನ ಬಾಣದ ಪೆಟ್ಟು ತಿಂದು, ಪ್ರಜ್ಞಾಹೀನನಾಗಿದ್ದ ಕರ್ಣ, ಈ ವೇಳೆಗೆ ಮರಳಿ ಯುದ್ಧಕ್ಕೆ ಆಗಮಿಸಿದ ಎಂದರ್ಥ.

ಭೀಮನಿಂದ ಸುಷೇಣನ ವಧೆ

ನಿವಾರ್ಯ ಕರ್ಣಂ ಚ ಶರೈರಮುಷ್ಯ
ಸೂನೋಃ ಸುಷೇಣಸ್ಯ ಶಿರಶ್ಚಕರ್ತ ।
ಪಪಾತ ಭೂಮೌ ಸ ಪಿತುಃ ಸಮೀಪೇ
ಯಥಾ ಹತಃ ಸತ್ಯಸೇನೋಽಮುನೈವ ॥ ೭೭ ॥

ಅ: ಭೀಮ ಕರ್ಣನನ್ನು ಬಾಣಗಳಿಂದ ತಡೆದು, ಅವನ ಮಗನಾದ ಸುಷೇಣನ ತಲೆಯನ್ನು ಕತ್ತರಿಸಿದ. ಅವನು ತಂದೆಯ ಬಳಿಯಲ್ಲಿ ಭೂಮಿಯ ಮೇಲೆ ಬಿದ್ದ. ಅದರಂತೆ ಸತ್ಯಸೇನನೂ ಅವನಿಂದಲೇ ಹತನಾಗಿದ್ದ.

ವಿ: ಸತ್ಯಸೇನನನ್ನು ಅಶ್ವ ಸೂತ ಆಯುಧ ಧ್ವಜಹೀನನನ್ನಾಗಿ ಮಾಡಿ, ಕ್ಷುರದಿಂದ ತಲೆಕತ್ತರಿಸಿ–ದ್ದಂತೆ ಸುಷೇಣನನ್ನೂ ಭೀಮಸೇನ ಕೊಂದ ಎಂದರ್ಥ (ಕರ್ಣಪರ್ವ ೪೩/೨೭–೨೯).

ಯಥೈವ ಕರ್ಣಾವರಜೌ ಪುರೈವ
ನಿಶಾಯುದ್ಧೇ ಕರ್ಣಪುರಃ ಪ್ರಪಾತಿತೌ ।
ಹತಂ ತಮೀಕ್ಷ್ಯೈವ ಏಕರ್ತನಾತ್ಮಜಃ
ಕ್ರೋಧಾನ್ವಿತೋ ಭೀಮಸೇನಂ ವಿಹಾಯ ।
ಯಯೌ ಪ್ರಮೃದ್ಯೈವ ಚಮೂಂ ಯುಧಿಷ್ಠಿರಂ
ರಥೇ ಪರೇ ಸ್ವಶ್ವಯುತೇ ವ್ಯವಸ್ಥಿತಮ್ ॥ ೭೮ ॥

ಅ: ಕರ್ಣನ ತಮ್ಮಂದಿರಾದ ಇಬ್ಬರೂ ರಾತ್ರಿಯುದ್ಧದಲ್ಲಿ ಕರ್ಣನೆದುರೇ ಭೀಮನಿಂದ ಹಾಗೆಯೇ ಹತರಾಗಿದ್ದರು. ತನ್ನ ಮಗ ಹತನಾದದ್ದನ್ನು ನೋಡುತ್ತಲೇ ಕರ್ಣ ಕೋಪ-ಗೊಂಡವನಾಗಿ ಭೀಮಸೇನನನ್ನು ಬಿಟ್ಟು ಸೇನೆಯನ್ನು ನಾಶಗೊಳಿಸುತ್ತಾ, ಒಳ್ಳೆಯ ಅಶ್ವಗಳನ್ನು ಹೂಡಿದ್ದ ಮತ್ತೊಂದು ರಥದಲ್ಲಿ ಕುಳಿತಿದ್ದ ಧರ್ಮರಾಜನ ಮೇಲೆ ಸಾಗಿದ.

ವಿ: ೧) ತನ್ನ ಮಕ್ಕಳನ್ನು ಭೀಮ ಕೊಂದಾಗ, ಕರ್ಣನಿಗೆ ಬಹಳವಾಗಿ ಕೋಪ ಬಂದದ್ದು ಭೀಮನ ಮೇಲೆಯೇ ಆದರೂ, ಅವನು ಯುದ್ಧಕ್ಕೆ ತೆರಳಿದ್ದು ಮಾತ್ರ ಧರ್ಮರಾಜನ ಮೇಲೆ ಎಂಬ ವಿಶೇಷಾಂಶವನ್ನು ಗಮನಿಸಬೇಕು.

೨) ಭೀಮನಿಂದ ಅನೇಕಬಾರಿ ಪರಾಭವಗೊಂಡಿದ್ದ ಕರ್ಣ, ಭೀಮನನ್ನು ಎದುರಿಸಲು ಅಂಜಿ, ಧರ್ಮರಾಜನ ಬಳಿಗೆ ತೆರಳಿದ ಎಂದರ್ಥ.

೩) ಭೀಮ ಹೀಗೆ ಕರ್ಣನ ಮಕ್ಕಳನ್ನು ಅವನೆದುರೇ ಕೊಂದದ್ದು ತನ್ನ ಮಗನಾದ ಘಟೋತ್ಕಚನನ್ನು ಕರ್ಣ ಕೊಂದಿದ್ದಕ್ಕೆ ಪ್ರತ್ಯುತ್ತರದಂತಿತ್ತು ಎನ್ನಬಹುದು.

ಯುಧಿಷ್ಠಿರಾದಿಗಳನ್ನು ಜಯಿಸಿದ ಕರ್ಣ

ನ್ಯವಾರಯೇತಾಂ ಶಿನಿಪೌತ್ರಪಾರ್ಷತೌ
ಕೃಷ್ಣಾಸುತಾಃ ಸೋಮಕಸಂಘಯುಕ್ತಾಃ ।
ಸ ತಾನ್ ಸಮಸ್ತಾನ್ ವಿರಥಾನ್ ವಿಧಾಯ
ಯುಧಿಷ್ಠಿರಂ ಪ್ರಾಪ ಯುತಂ ಯಮಾಭ್ಯಾಮ್ ॥ ೭೯ ॥

ಅ: ಸಾತ್ಯಕಿ, ಧೃಷ್ಟದ್ಯುಮ್ನ, ದ್ರೌಪದೀಪುತ್ರರು, ಪಾಂಚಾಲರ ಗುಂಪಿನಿಂದ ಸಮೇತರಾಗಿ ಕರ್ಣನನ್ನು ತಡೆದರು. ಕರ್ಣ ಅವರೆಲ್ಲರನ್ನೂ ವಿರಥರನ್ನಾಗಿ ಮಾಡಿ, ನಕುಲಸಹದೇವ-ರೊಂದಿಗಿದ್ದ ಯುಧಿಷ್ಠಿರನನ್ನು ಎದುರಿಸಿದ.

---

೭೮. ದೃಷ್ಟಾಂತಕಥನವ್ಯಾಜೇನ ಪೂರ್ವಕೃತಭೀಮಪರಾಕ್ರಮಮಾಹ– ಯಥೇತಿ । –(ಸ.)

ನಿಹತ್ಯ ಸೋಽಶ್ವಾನ್ ಯುಧಿ ಧರ್ಮಸೂನೋ-
ರ್ನಿರಾಯುಧೌ ತೌ ಚ ಯಮೌ ಚಕಾರ ।
ತಾನೇಕಯಾನೋಪಗತಾನ್ ಪುನಶ್ಚ
ಮಮರ್ದ ಬಾಣೈಶ್ಚ ವಚೋಭಿರುಗ್ರೈಃ ॥ ೮೦ ॥

ಅ: ಕರ್ಣ ಯುದ್ಧದಲ್ಲಿ ಧರ್ಮರಾಜನ ಕುದುರೆಗಳನ್ನು ಸಂಹರಿಸಿದ. ನಕುಲಸಹದೇವರನ್ನು ನಿರಾಯುಧರನ್ನಾಗಿ ಮಾಡಿದ. ಆ ಮೂವರೂ ಒಂದೇ ರಥದಲ್ಲಿ ಕುಳಿತು ಎದುರಿಸಿ ಬಂದಾಗ, ಅವರನ್ನು ಬಾಣಗಳಿಂದಲೂ, ಕ್ರೂರವಾದ ಮಾತುಗಳಿಂದಲೂ ಹಿಂಸಿಸಿದ.

ದುರ್ಯೋಧನನನ್ನು ವಿರಥನನ್ನಾಗಿಸಿದ ಭೀಮ - ಶಿಬಿರದತ್ತ ಯುಧಿಷ್ಠಿರ

ತದೈವ ಮೋಕ್ಷಾಯ ನೃಪಸ್ಯ ಭೀಮೋ
ದುರ್ಯೋಧನಂ ವಿರಥಂ ಸಂವಿಧಾಯ ।
ವಿವ್ಯಾಧ ಮರ್ಮಸ್ವತಿತೀಕ್ಷ್ಣಸಾಯ-
ಕೈಸ್ತಂ ದರ್ಶಯಾಮಾಸ ರವೇಃ ಸುತಾಯ ॥ ೮೧ ॥

ಶಲ್ಯಸ್ತದಾ ಧರ್ಮಸುತಂ ವಿಹಾಯ
ಕರ್ಣೋ ಯಯೌ ತತ್ರ ಯುಧಿಷ್ಠಿರೋಽಪಿ ।
ಗತ್ವಾ ಶನೈಃ ಶಿಬಿರಂ ತತ್ರ ಶಿಶ್ಯೇ
ಕರ್ಣೋ ಯದಾ ರಾಜಗೃಧ್ನೀ ಜಗಾಮ ॥ ೮೨ ।

ಅ: ಧರ್ಮರಾಜನ ಬಿಡುಗಡೆಗೆಂದೇ ಆಗ ಭೀಮ ದುರ್ಯೋಧನನನ್ನು ವಿರಥನನ್ನಾಗಿ ಮಾಡಿ, ಅವನ ಮರ್ಮಸ್ಥಾನಗಳಲ್ಲಿ ಅತ್ಯಂತ ಹರಿತವಾದ ಬಾಣಗಳಿಂದ ಹೊಡೆದು ಪೀಡಿಸಿದ. ಅವನನ್ನು ಕರ್ಣನಿಗೆ ಆಗ ಶಲ್ಯ ತೋರಿಸಿದ. ಕರ್ಣ ಧರ್ಮರಾಜನನ್ನು ಬಿಟ್ಟು, ಅಲ್ಲಿಗೆ ತೆರಳಿದ.

---

೮೦. ಚಕಾರ – ನ ಕೇವಲಂ ಯುಧಿಷ್ಠಿರಂ ಪ್ರಾಪ, ಕಿಂತು ಧರ್ಮಸೂನೋರಶ್ವಾನ್ನಿಹತ್ಯ ತೌ ಯಮೌ ನಿರಾಯುಧೌ ಚಕಾರೇತಿ ಚೇತಿ ಕ್ರಿಯಾಸಮುಚ್ಚಯಾರ್ಥಃ । –(ಸ.)

೮೨. ತಥಾ ರಾಧೇಯ ಕ್ರಿಯತಾಂ ರಾಜಾ ಮುಚ್ಯೇತ ನೋ ಯಥಾ ।
ಪಶ್ಯೈನಂ ಭೀಮಸೇನೇನ ಗ್ರಸ್ತಮಾಹವಶೋಭಿನಮ್ ॥
ಪರಿತ್ರಾಹ್ಯೇನಮಚ್ಯೇತ್ಯ ಸಂಶಯಂ ಪರಮಂ ಗತಮ್ ।
ಕಿಂ ನು ಮಾದ್ರೀಸುತೌ ಹತ್ವಾ ರಾಜಾನಂ ಚ ಯುಧಿಷ್ಠಿರಮ್ ॥ – ಭಾರತ (ಕರ್ಣ. ೬೩/೨೭,೨೯)

ದುರ್ಯೋಧನನನ್ನು ರಕ್ಷಿಸಲೆಂದು ಕರ್ಣ ಅತ್ತ ನಡೆದಾಗ, ಧರ್ಮರಾಜನು ಮೆಲ್ಲನೆ ಶಿಬಿರಕ್ಕೆ ತೆರಳಿ, ಅಲ್ಲಿ ಮಲಗಿಬಿಟ್ಟ.

ಎ: ೧) ಹೀಗೆ ಧರ್ಮರಾಜನಿಗೆ ಪರಮಾಪತ್ತು ಒದಗಿದ ಪ್ರತಿಸಂದರ್ಭದಲ್ಲೂ ಭೀಮನೇ ಅವನನ್ನು ಸಂರಕ್ಷಿಸುವನು ಎಂಬುದನ್ನು ಗಮನಿಸಬೇಕು.

೨) ಈ ಕಾರಣದಿಂದಲೂ, ಅರ್ಜುನ ಮೊದಲಾದ ಇತರ ಎಲ್ಲರಿಗಿಂತಲೂ ಭೀಮನ ಪಾತ್ರವೇ ಪ್ರಧಾನ ಎಂದಾಗುವುದು; ಜ್ಞಾನ ರಕ್ಷಣೆ ನೀಡುವಂತೆ ಬೇರಾವುದೂ ರಕ್ಷಿಸದು ಎಂದು ಭಾವ – 'ನ ಹಿ ಜ್ಞಾನೇನ ಸದೃಶಂ ....'.

ಭೀಮನ ಅಪೂರ್ವ ಪರಾಕ್ರಮ

ದ್ರೌಣಿಃ ಕೃಪಶ್ಚಾತ್ರ ತದೈವ ಜಗ್ಮತು-
ಸ್ತದಾ ಭೀಮೋ ದ್ರೌಣಿಕರ್ಣೌ ಜಗಾಮ ।
ಕೃಪೋ ನೃಪಂ ರಥಮಾರೋಪಯಚ್ಚ
ವಿದ್ಧಂ ಶರೈರ್ಭೀಮಬಾಹುಪ್ರಮುಕ್ತೈಃ ॥ ೮೩ ॥

ಅ: ಅಶ್ವತ್ಥಾಮಕೃಪರು ಆಗಲೇ ದುರ್ಯೋಧನನತ್ತ ನಡೆದರು. ಆಗ ಭೀಮ ಅಶ್ವತ್ಥಾಮ, ಕರ್ಣರನ್ನು ಎದುರಿಸಿದ. ಭೀಮನ ತೋಳಿನಿಂದ ಬಿಡಲ್ಪಡುತ್ತಿದ್ದ ಬಾಣಗಳಿಂದ ಪೆಟ್ಟುತಿಂದಿದ್ದ ದುರ್ಯೋಧನನನ್ನು ಕೃಪ ತನ್ನ ರಥದಲ್ಲಿ ಏರಿಸಿಕೊಂಡ.

---

೮೨. ಕರ್ಣೋ ಯದಾ ರಾಜಗೃದ್ಧೀತ್ಯತ್ರ "ಗೃಧಿ ಆಕಾಂಕ್ಷಾಯಾ" ಮಿತಿ ಧಾತೋಃ ರಾಜಗೃದ್ಧೀ = ರಾಜ-ರಕ್ಷಣಾಕಾಂಕ್ಷೀ । – (ವಾ.)

೮೨. ಯದಾ ರಾಜಗೃದ್ಧೀ ರಾಜ್ಞಃ ಸುಯೋಧನಸ್ಯ ಗೃದ್ಧೀ ರಕ್ಷಣಾಕಾಂಕ್ಷೀ ಗೃಧು ಅಭಿಕಾಂಕ್ಷಾಯಾಮಿತಿ ಧಾತುಃ – (ಜ.)

೮೨. ಪ್ರಾಪ್ಯ ಸೇನಾನಿವೇಶಂ ಚ ಮಾರ್ಗಣೈಃ ಕ್ಷತವಿಕ್ಷತಃ ।
ಅವತೀರ್ಣೋ ರಥಾತ್ ತೂರ್ಣಮವಿಶಚ್ಛಯನಂ ಶುಭಮ್ ॥ – ಭಾರತ (ಕರ್ಣ. ೬೩/೩೪)

೮೨. ಇತಿ ಶಲ್ಯವಚಃ ಶ್ರುತ್ವಾ ರಾಧೇಯಃ ಪೃಥಿವೀಪತೇ ।
ದೃಷ್ಟ್ವಾ ದುರ್ಯೋಧನಂ ಚೈವ ಭೀಮಗ್ರಸ್ತಂ ಮಹಾಹವೇ ।
ರಾಜಗೃದ್ಧೀ ಭೃಶಂ ಚೈವ ಶಲ್ಯವಾಕ್ಯಪ್ರಚೋದಿತಃ ॥ – ಭಾರತ (ಕರ್ಣ. ೬೩/೩೦)

ತವ ಪುತ್ರಂ ಪರಿತ್ರಾತುಮಭ್ಯಧಾವತ ವೀರ್ಯವಾನ್ ॥ – ಭಾರತ (ಕರ್ಣ. ೬೩/೩೧)

೮೨. ರಾಜಗೃದ್ಧೀ ರಾಜ್ಞೋ ದುರ್ಯೋಧನಸ್ಯ ರಕ್ಷಣಕಾಮಃ ... । – (ವ.)

ನೃಪಂ ಸಮಾದಾಯ ಕೃಪೇऽಪಯಾತೇ
ಭೀಮಾರ್ದಿತೌ ದ್ರೌಣಿಕರ್ಣೌ ಶರೌಘೈಃ ।
ವಿಹಾಯ ತಂ ಜಗ್ಮತುಃ ಸೋಮಕಾನಾಂ
ಚಮೂಂ ಶರೌಘೈರಭಿಪಾತಯಂತೌ ॥ ೮೪ ॥

ಅ: ದುರ್ಯೋಧನನನ್ನು ಕರೆದುಕೊಂಡು ಕೃಪ ಹೊರಟುಹೋದ ಮೇಲೆ, ಭೀಮನಿಂದ ಬಾಣಸಮೂಹಗಳಿಂದ ಪೀಡಿತರಾದ ಕರ್ಣ ಅಶ್ವತ್ಥಾಮರು ಭೀಮನನ್ನು ಬಿಟ್ಟು ಪಾಂಚಾಲ-ಸೈನ್ಯವನ್ನು ಬಾಣಗಳ ಪ್ರವಾಹಗಳಿಂದ ಹೊಡೆದು ಬೀಳಿಸುತ್ತಾ ಸಾಗಿದರು.

ಅರ್ಜುನನ ಪರಾಕ್ರಮ

ಅಥಾತ್ರ ರಾಜಾನಮಚಕ್ಷಮಾಣೋ
ಧನಂಜಯೋ ವಾಸುದೇವಪ್ರಣುನ್ನಃ ।
ಅಭ್ಯಾಯಯೌ ಪಾರ್ಷತಃ ಸ್ವಾಂ ತು ಸೇನಾಂ
ಕರ್ಣಾರ್ದಿತಾಂ ವೀಕ್ಷ್ಯ ಕುರೂನಪೀಡಯತ್ ॥ ೮೫ ॥

ಅ: ಆಗ ಯುದ್ಧರಂಗದಲ್ಲಿ ರಾಜನಾದ ಯುಧಿಷ್ಠಿರನನ್ನು ಕಾಣದೇ, ಕೃಷ್ಣಪ್ರೇರಿತನಾದ ಅರ್ಜುನ ಶಿಬಿರದ ಕಡೆಗೆ ಹೊರಟುನಿಂತ. ಧೃಷ್ಟದ್ಯುಮ್ನ ತನ್ನ ಸೇನೆ ಕರ್ಣನಿಂದ ನಾಶ ಹೊಂದುತ್ತಿದ್ದುದನ್ನು ನೋಡಿ, ಕೌರವರನ್ನು ಪೀಡಿಸತೊಡಗಿದ.

ನ್ಯವಾರಯತ್ ಸಮಾಯಾಂತಂ ಕಪಿಪ್ರವರಕೇತನಮ್ ।
ದ್ರೌಣಿರ್ದುಃಶಾಸನಶ್ಚೈವ ಧೃಷ್ಟದ್ಯುಮ್ನಮವಾರಯತ್ ॥ ೮೬ ॥

ಅ: ಸಾಗಿಬರುತ್ತಿದ್ದ ಕಪಿಧ್ವಜನಾದ ಅರ್ಜುನನನ್ನು ಅಶ್ವತ್ಥಾಮ ತಡೆದ. ಧೃಷ್ಟದ್ಯುಮ್ನನನ್ನು ದುಃಶಾಸನ ತಡೆದ.

ಉಭಾವತಿರಥೌ ತೌ ತು ಶಸ್ತ್ರೌಘೈರಭ್ಯವರ್ಷತಾಮ್ ।
ದುಃಶಾಸನಃ ಪಾರ್ಷತಶ್ಚ ಕುರ್ವಂತೌ ಬಾಣಜಂ ತಮಃ ॥ ೮೭ ॥

---

೮೫. ತದುಕ್ತಂ ಕರ್ಣಪರ್ವಣಿ। ಏವಮುಕ್ತಃ ಪುನಃ ಪ್ರಾಯಾದ್ರಾಜ್ಞಮಿಚ್ಛನ್ಯುಧಿಷ್ಠಿರಮ್ ಇತಿ। – (ಜ.)

ಅ: ಅತಿರಥರಾದ ದುಃಶಾಸನ ಮತ್ತು ಧೃಷ್ಟದ್ಯುಮ್ನರು ಬಾಣಗಳಿಂದ ಕತ್ತಲೆ ಕವಿಸುತ್ತಾ ಶಸ್ತ್ರಾಸ್ತ್ರಗಳ ಮಳೆಯನ್ನು ಕರೆಯತೊಡಗಿದರು.

ತತ್ರ ದುಃಶಾಸನೇನಾಜೌ ಸ್ತಂಭಿತೋ ದ್ರುಪದಾತ್ಮಜಃ ।
ಯತಮಾನೋಽಪಿ ನಿರ್ಯತ್ನಃ ಕೃತೋ ಯುದ್ಧೇ ನಿರಾಯುಧಃ ॥ ೮೮ ॥

ಅ: ಆ ಯುದ್ಧದಲ್ಲಿ ದುಃಶಾಸನ ಧೃಷ್ಟದ್ಯುಮ್ನನನ್ನು ಸ್ತಂಭೀಭೂತನನ್ನಾಗಿಸಿದ. ಎಷ್ಟು ಪ್ರಯತ್ನಿಸಿದರೂ, ಧೃಷ್ಟದ್ಯುಮ್ನನ ಪ್ರಯತ್ನ ಸಫಲವಾಗದೆ ಯುದ್ಧದಲ್ಲಿ ನಿರಾಯುಧನಾಗಿಸಲ್ಪಟ್ಟ.

ಮತ್ತೊಮ್ಮೆ ಅರ್ಜುನ ಅಶ್ವತ್ಥಾಮರ ಯುದ್ಧ

ತದಾಽಭವದ್ಯುದ್ಧಮತೀವ ದಾರುಣಂ
ದ್ರೌಣೇಸ್ತನೂಜೇನ ತು ವಜ್ರಪಾಣೇಃ ।
ತತ್ರಾಪಿ ಬದ್ಧಃ ಶರಪಂಜರೇಣ
ಪಾರ್ಥೋಽಪನುತ್ತಾಽಪಿ ಹಿ ಗಾಂಡಿವಜ್ಯಾ ॥ ೮೯ ॥

ಅ: ಆಗ ಅತ್ಯಂತದಾರುಣವಾದ ಯುದ್ಧ ಅರ್ಜುನನಿಗೂ, ಅಶ್ವತ್ಥಾಮನಿಗೂ ನಡೆಯಿತು. ಆ ಯುದ್ಧದಲ್ಲೂ ಅಶ್ವತ್ಥಾಮ ಅರ್ಜುನನನ್ನು ಶರಪಂಜರದಿಂದ ಬಂಧಿಸಿದ. ಅವನ ಗಾಂಡೀವದ ಹಗ್ಗವನ್ನೂ ಕತ್ತರಿಸಿದ.

ವಿ: ಈ ಯುದ್ಧದಲ್ಲೂ ಅಶ್ವತ್ಥಾಮ ಹಿಂದೆ ಮಾಡಿದ್ದಂತೆ ಅರ್ಜುನನನ್ನು ಶರಪಂಜರದಿಂದ ಬಂಧಿಸಿದನು ಮತ್ತು ಗಾಂಡೀವದ ಹಗ್ಗವನ್ನು ಕತ್ತರಿಸಿದ ಎಂದರ್ಥ.

ಅರ್ಜುನನಿಂದ ಅಶ್ವತ್ಥಾಮನ ಪರಾಭವ

ಪಾರ್ಥೋಽಪಿ ಕೃಷ್ಣೇಧಿತಬಾಹುವೀರ್ಯೋ
ನಿಹತ್ಯ ಸೂತಂ ಗುರುಪುತ್ರಕಸ್ಯ ।
ಛಿತ್ವಾ ಚ ರಶ್ಮೀಂಸ್ತುರಗಾನಮುಷ್ಯ
ವಿದ್ರಾವಯಾಮಾಸ ಶರೈಃ ಸುದೂರಮ್ ॥ ೯೦ ॥

ಅ: ಬಳಿಕ ಅರ್ಜುನ ಶ್ರೀಕೃಷ್ಣನಿಂದ ಬಾಹುಬಲ ಹೆಚ್ಚಿಸಲ್ಪಟ್ಟವನಾಗಿ ಅಶ್ವತ್ಥಾಮನ ಸಾರಥಿ-ಯನ್ನು ಕೊಂದು, ಅವನ ಕುದುರೆಗಳ ಹಗ್ಗಗಳನ್ನು ಕತ್ತರಿಸಿ, ಬಾಣಗಳಿಂದ ದೂರಕ್ಕೆ ಓಡಿಸಿದ.

ಏ: ಅಂತೂ ಅಶ್ವತ್ಥಾಮರು ಅರ್ಜುನನ್ನು ಶರಪಂಜರದಿಂದ ಬಂಧಿಸಿದ್ದು, ಅವನ ಗಾಂಡೀವದ ಹಗ್ಗವನ್ನು ಕತ್ತರಿಸಿದ್ದು ಮೂರು ಬಾರಿ ಎಂಬುದು ವಿಶೇಷ. ಅರ್ಜುನ ಹಿಂದೆ ಮಾಡಿದ್ದಂತೆ ಮಾಡಿ, ಅಶ್ವತ್ಥಾಮರನ್ನು ದೂರಕ್ಕೆ ಹೋಗುವಂತೆ ಮಾಡಿದ. ಅಶ್ವತ್ಥಾಮರನ್ನು ಹೀಗೆ ಸೋಲಿಸಲು ಅರ್ಜುನನಿಗೆ ಸಾಧ್ಯವಾದದ್ದು ಶ್ರೀಕೃಷ್ಣಾನುಗ್ರಹಾದಿಗಳಿಂದ ಮಾತ್ರ.

ಕರ್ಣನ ಪರಾಕ್ರಮ

ಅತೀತ್ಯ ಪುತ್ರಂ ತು ಗುರೋಃ ಸಮಾಗತೇ
ಪಾರ್ಥೇ ಕರ್ಣೋ ದ್ರಾವಯಾಮಾಸ ಸೇನಾಮ್ ।
ಪಾಂಡೋಃ ಸುತಾನಾಂ ಶರವರ್ಷಧಾರೋ
ದುರ್ಯೋಧನಶ್ಚಾನುಯಯೌ ತಮೇವ ॥ ೯೦ ॥

ಅ: ಅಶ್ವತ್ಥಾಮನನ್ನು ಗೆದ್ದು ಪಾರ್ಥ ಮುಂದೆ ಬಂದಾಗ, ಕರ್ಣ ಪಾಂಡುಪುತ್ರರ ಸೇನೆಗಳನ್ನು ಬಾಣಗಳ ಮಳೆಗರೆಯುತ್ತಾ ಓಡಿಸತೊಡಗಿದ; ಅವನನ್ನೇ ಹಿಂಬಾಲಿಸಿ ದುರ್ಯೋಧನನೂ ನಡೆದ.

ಕರ್ಣ ಧೃಷ್ಟದ್ಯುಮ್ನರ ಯುದ್ಧ

ಕರ್ಣಮಾಯಾಂತಮಾಲೋಕ್ಯ ದ್ರಾವಯಂತಂ ನಿಜಾಂ ಚಮೂಮ್ ।
ಧನುರನ್ಯತ್ ಸಮಾದಾಯ ಧೃಷ್ಟದ್ಯುಮ್ನೋ ನ್ಯವಾರಯತ್ ॥ ೯೨ ॥

ಅ: ಕರ್ಣನು ಬರುತ್ತಿರುವುದನ್ನು, ತನ್ನ ಸೇನೆಯನ್ನು ಓಡಿಸುತ್ತಿದ್ದುದನ್ನು ಕಂಡು ಧೃಷ್ಟದ್ಯುಮ್ನ ಬೇರೊಂದು ಧನುಸ್ಸನ್ನು ತೆಗೆದುಕೊಂಡು ಅವನನ್ನು ತಡೆದ.

ತಯೋರಾಸೀನ್ಮಹದ್ಯುದ್ಧಂ ಚಿರಂ ಸಮಮವಿಶ್ರಮಮ್ ।
ತದೈವ ಸಾತ್ಯಕಿರ್ವೀರೋ ದುರ್ಯೋಧನಮವಾರಯತ್ ॥ ೯೩ ॥

ಅ: ಅವರಿಬ್ಬರಿಗೂ ಬಹುಕಾಲ ಬಿಡುವಿಲ್ಲದ ಮಹಾಯುದ್ಧ ಸಮವಾಗಿಯೇ ನಡೆಯಿತು. ಆಗಲೇ ವೀರನಾದ ಸಾತ್ಯಕಿ ದುರ್ಯೋಧನನನ್ನು ತಡೆದ.

ದುರ್ಯೋಧನನಿಂದ ಸಾತ್ಯಕಿ ಧೃಷ್ಟದ್ಯುಮ್ನರ ಪರಾಭವ

ನಿವಾರಿತಃ ಸಾತ್ಯಕಿನಾ ರಣೇ ದುರ್ಯೋಧನೋ ನೃಪಃ ।
ನಿಹತ್ಯ ಸಾತ್ಯಕೇರಶ್ವಾನ್ ದ್ರೌಪದೇಶ್ಚಾಪಮಚ್ಛಿನತ್ ॥ ೯೪ ॥

ಅ: ಯುದ್ಧದಲ್ಲಿ ಸಾತ್ಯಕಿಯಿಂದ ತಡೆಯಲ್ಪಟ್ಟ ದುರ್ಯೋಧನ ಸಾತ್ಯಕಿಯ ಕುದುರೆಗಳನ್ನು ಸಂಹರಿಸಿ, ಧೃಷ್ಟದ್ಯುಮ್ನನ ಧನುಸ್ಸನ್ನು ತುಂಡರಿಸಿದ.

ತದಂತರೈವ ಕರ್ಣೋಽಪಿ ಪಾರ್ಷತಾಶ್ವಾನಪಾತಯತ್ ।
ತಯೋರ್ವಿರಥಯೋರೇವಂ ಭಗ್ನಂ ತತ್ ಪಾಂಡವಂ ಬಲಮ್ ॥ ೯೫ ॥

ಅ: ಈ ಮಧ್ಯೆ ಕರ್ಣನೂ ಧೃಷ್ಟದ್ಯುಮ್ನನ ಅಶ್ವಗಳನ್ನು ಕೊಂದು ಕೆಡವಿದ. ಸಾತ್ಯಕಿ ಧೃಷ್ಟದ್ಯುಮ್ನರು ವಿರಥರಾಗುತ್ತಲೇ ಪಾಂಡವಸೇನೆ ಚೆಲ್ಲಾಪಿಲ್ಲಿಯಾಯಿತು.

ಭೀಮನ ಅದ್ಭುತ ಪರಾಕ್ರಮ

ಬಲಂ ಸ್ವಕೀಯಂ ಬಹುಧಾ ವಿಭಿನ್ನಂ
ಸಮೀಕ್ಷ್ಯ ಭೀಮೋ ಮೃಗರಾಜಕೇತುಃ ।
ಕೃತ್ವಾ ಧರಾಕಂಪಕಮುಗ್ರನಾದಂ
ರಣೇಽಭ್ಯಯಾತ್ ಕೌರವರಾಜಸೈನ್ಯಮ್ ॥ ೯೬ ॥

ಅ: ತಮ್ಮ ಸೇನೆ ಬಹುರೀತಿಯಲ್ಲಿ ನಾಶವಾಗುತ್ತಿದ್ದುದನ್ನು ನೋಡಿ, ಸಿಂಹಧ್ವಜನಾದ ಭೀಮಸೇನ ಭೂಮಿ ಕಂಪಿಸುವಂತಹ ಸಿಂಹನಾದವನ್ನು ಮಾಡಿ, ಕೌರವರಾಜನ ಸೇನೆಯನ್ನು ಯುದ್ಧದಲ್ಲಿ ಎದುರಿಸಿದ.

ಭೀಮನಿಂದ ಸೈನ್ಯದ ಪಲಾಯನ – ದುರ್ಯೋಧನನ ಪರಾಜಯ

ನಾದೇನ ಬಾಣೈಶ್ಚ ವೃಕೋದರೇಣ
ಭಗ್ನಂ ತದಾ ಕೌರವಸೈನ್ಯಮಾಶು ।
ದಿಶೋ ವಿದುದ್ರಾವ ಸುಯೋಧನೋಽಪಿ
ಕೃತೋ ರಣೇ ತೇನ ವಿವಾಹನಾಯುಧಃ ॥ ೯೭ ॥

ಅ: ಭೀಮಸೇನನ ಸಿಂಹನಾದದಿಂದಲೂ, ಬಾಣಗಳಿಂದಲೂ ಆಗ ಕುರುಸೇನೆ ಕೂಡಲೇ ಭಗ್ನವಾಗಿ, ದಿಕ್ಕಾಪಾಲಾಗಿ ಓಡಿತು. ಯುದ್ಧದಲ್ಲಿ ದುರ್ಯೋಧನ ಭೀಮಸೇನನಿಂದ ರಥವನ್ನೂ ಆಯುಧಗಳನ್ನೂ ಕಳೆದುಕೊಂಡ.

---

೯೫. ತದಂತರಾ ಸಾತ್ಯಕೇರಸ್ತ್ರಹನನದ್ರೌಪದಿಚಾಪಚ್ಛೇದನಯೋರ್ಮಧ್ಯೇ – (ಜ.)

೯೬. ಧ್ವಜಂ ತು ಭೀಮಸೇನಸ್ಯ..... ಭ್ರಾಜಮಾನಂ ಮಹಾಸಿಂಹಮ್ ..... ॥ – ಭಾರತ (ದ್ರೋಣ. ೨೩/೮೩)

ದೃಷ್ಟ್ವೈವ ತತ್ ಪಾಂಡವಾನಾಂ ಚ ಸೇನಾ
ಸಮಾವೃತ್ತಾ ಕ್ಷಿಪ್ರಮವಾರ್ಯವೇಗಾ ।
ತಯಾ ಪುನಃ ಕೌರವಾಣಾಂ ಬಲಂ ತ-
ದ್ಭಗ್ನಂ ದೂರಾದ್ದೂರತರಂ ಪ್ರದುದ್ರುವೇ ॥ ೯೮ ॥

ಅ: ಅದನ್ನು ನೋಡುತ್ತಲೇ ಪಾಂಡವ ಸೇನೆ ತಡೆಯಲಾಗದ ವೇಗದಿಂದ ಮರಳಿ ಯುದ್ಧಕ್ಕೆ ಕೂಡಲೇ ಆಗಮಿಸಿತು. ಅದರಿಂದ ಕೌರವರ ಆ ಸೇನೆ ಪರಾಭವಗೊಂಡು ದೂರದಿಂದ ದೂರಕ್ಕೆ ಜೋರಾಗಿ ಓಡಿಹೋಯಿತು.

ವಿ: ೧) ಆ ಮುಂಚೆ ಶತ್ರುಗಳಿಗೆ ಅಂಜಿದ್ದ ಪಾಂಡವ ಸೇನೆ ಭೀಮನ ಪರಾಕ್ರಮವನ್ನು ಕಂಡದ್ದರಿಂದಾಗಿ ಮರಳಿ ಅಪಾರ ಚೈತನ್ಯವನ್ನು ಹೊಂದಿ ಯುದ್ಧಕ್ಕೆ ಧಾವಿಸಿ ಕೌರವಸೇನೆಯನ್ನು ಪುಡಿಗೈಯ್ಯತೊಡಗಿತು.

೨) ಭೀಮನ ಪರಾಕ್ರಮದ ಅಪೂರ್ವಪರಿಣಾಮ ಇಲ್ಲಿ ನಿರೂಪಿತವಾಗಿದೆ.

ಕೆರಳಿದ ಕರ್ಣ

ಹನ್ಯಮಾನಂ ದಿಶೋ ಯಾಂತಂ ಪಾಂಚಾಲ್ಯೈರ್ಭೀಮಸಂಶ್ರಯಾತ್ ।
ಸುಯೋಧನಬಲಂ ದೃಷ್ಟ್ವಾ ಜಜ್ವಾಲಾಧಿರಥಿಃ ಕ್ರುಧಾ ॥ ೯೯ ॥

ಅ: ಭೀಮನನ್ನು ಆಶ್ರಯಿಸಿದ ಪಾಂಚಾಲರಿಂದ ಪೆಟ್ಟು ತಿಂದು ದಿಕ್ಕಾಪಾಲಾಗಿ ದುರ್ಯೋಧನನ ಸೇನೆ ಓಡುತ್ತಿದ್ದುದನ್ನು ಕಂಡು ಕರ್ಣ ಕೋಪದಿಂದ ಉರಿಯತೊಡಗಿದ.

ಕರ್ಣನಿಂದ ಭಾರ್ಗವಾಸ್ತ್ರಪ್ರಯೋಗ

ಸೋಽಮೋಘಂ ರಾಮದೈವತ್ಯಮಸ್ತ್ರಂ ಭಾರ್ಗವಸಂಜ್ಞಿತಮ್ ।
ಸರ್ವಾಸ್ತ್ರನಾಶಕಂ ದಿವ್ಯಮಪ್ರತಿದ್ವಂದ್ವಮಾದದೇ ॥ ೧೦೦ ॥

ಅ: ಕರ್ಣನು ಪರಶುರಾಮದೇವತಾಕವಾದ ಭಾರ್ಗವ ಎಂಬ ಹೆಸರಿನ ಅಮೋಘವಾದ ದಿವ್ಯಾಸ್ತ್ರವನ್ನು ತೆಗೆದುಕೊಂಡ. ಅದು ಇತರ ಸಕಲ ಅಸ್ತ್ರಗಳನ್ನೂ ನಾಶಮಾಡಬಲ್ಲ ಪ್ರತ್ಯಸ್ತ್ರವೇ ಇರದ ದಿವ್ಯಾಸ್ತ್ರ.

---

೧೦೦. ಸಂನಿವಾರ್ಯ ಚ ಯೋಧಾನ್ ಸ ಸತ್ಯೇನ ಶಪಥೇನ ಚ ।
ಪ್ರಾಯೋಜಯದಮೇಯಾತ್ಮಾ ಭಾರ್ಗವಾಸ್ತ್ರಂ ಮಹಾಬಲಃ ॥ – ಭಾರತ (ಕರ್ಣ. ೬೪/೪೭-೫೮)

ಅಸ್ತ್ರಕ್ಕೆ ಮಣಿಯದ ಭೀಮ

ತಚ್ಚ ಭೀಮಪುರೋಗೇಷು ಸೈನ್ಯೇಷ್ವಮುಚದುಲ್ಬಣಮ್ ।
ತದಸ್ತ್ರಂ ವರ್ಜಯಾಮಾಸ ಭೀಮಂ ರಾಮಪ್ರಸಾದತಃ ॥ ೧೦೧ ॥

ಅ: ಕರ್ಣ ಉಲ್ಬಣವಾದ ಆ ಭಾರ್ಗವಾಸ್ತ್ರವನ್ನು ಭೀಮ ಮೊದಲಾದವರಿದ್ದ ಸೇನೆಯ ಮೇಲೆ ಪ್ರಯೋಗಿಸಿದ. ಆ ಅಸ್ತ್ರ ಪರಶುರಾಮನ ಅನುಗ್ರಹದಿಂದಾಗಿ ಭೀಮನನ್ನು ಬಿಟ್ಟುಬಿಟ್ಟಿತು.

ವಿ: ಶ್ರೀಹರಿಯ ವಿಶೇಷಾನುಗ್ರಹಪಾತ್ರನಾದ ವಾಯುದೇವರ ಮೇಲೆ ಯಾವ ಅಸ್ತ್ರಗಳೂ ಸಹ ಎಷ್ಟುಮಾತ್ರಕ್ಕೂ ಪರಿಣಾಮ ಬೀರಲಾರವು ಎಂಬುದಕ್ಕೆ ಇದೊಂದು ಅಪೂರ್ವ ನಿದರ್ಶನ.

ಓಡಿ ಬದುಕಿದ ಪಾಂಡವ ವೀರರು

ಅನ್ಯೇ ತು ದುದ್ರುವುಃ ಕೇಚಿಚ್ಛಿಷ್ಟಾಃ ಪ್ರಾಪುರ್ಯಮಕ್ಷಯಮ್ ।
ನ ಹ್ಯಸ್ತ್ರಂ ದ್ರಾವಮಾಣಾಂಸ್ತದ್ದಂತಿ ತೇನ ಸಪಾರ್ಷತಾಃ ॥ ೧೦೨ ॥

ಪಾಂಚಾಲಾ ದ್ರೌಪದೇಯಾಶ್ಚ ಶೈನೇಯಾದ್ಯಾಶ್ಚ ಸರ್ವಶಃ ।
ಪಲಾಯನೇನೋರ್ವರಿತಾ ಅರ್ಜುನೋಽಪ್ಯಸ್ತ್ರಮುದ್ಯತಮ್ ॥ ೧೦೩ ॥

ವೀಕ್ಷ್ಯ ಪ್ರತ್ಯಸ್ತ್ರಹೀನಂ ತದಪ್ರಾಪ್ಯೈವ ರವೇಃ ಸುತಮ್ ।
ವಾಸುದೇವಮಿದಂ ಪ್ರಾಹ ವರ್ಜಯಿತ್ವೈವ ಸೂತಜಮ್ ॥ ೧೦೪ ॥

ಅನ್ಯತ್ರ ಯಾಮಿ ನೈವಾಸ್ಮಾದಸ್ತ್ರಾಜ್ಜೀವನಮನ್ಯಥಾ ।
ಇತ್ಯೂಚಿವಾಂಸಂ ಪಾರ್ಥಂ ತಂ ಕೃಷ್ಣೋಽಪ್ರಾಪ್ಯೈವ ಸೂತಜಮ್ ॥ ೧೦೫ ॥

ಯುಧಿಷ್ಠಿರನ ಬಳಿಗೆ ತೆರಳಲು ಭೀಮನಿಗೆ ಅರ್ಜುನನ ಪ್ರಾರ್ಥನೆ

ಅನ್ಯೇನೈವ ಪಥಾ ಭೀಮಂ ಪ್ರಾಪಯಾಮಾಸ ವಿಶ್ವಕೃತ್ ।
ತತ್ರಾರ್ಜುನೋಽವದದ್ಭೀಮಂ ಯಾಹಿ ದ್ರಷ್ಟುಂ ಯುಧಿಷ್ಠಿರಮ್ ॥ ೧೦೬ ॥

ಪ್ರವೃತ್ತಿಂ ವಿದ್ಧಿ ಭೂಪಸ್ಯ ಮಾಂ ತು ಸಂಶಪ್ತಕಾ ಯುಧೇ ।
ಆಹ್ವಯಂತಿ ಹತೋಚ್ಛೇಷಾಸ್ತಾನಹಂ ಯಾಮಿ ತದ್ಯುಧೇ ॥ ೧೦೭ ॥

---

೧೦೫. ಅನ್ಯತ್ರ ಯುದ್ಧನ್ ಸನ್ನಿತಿ ವಾಕ್ಯಶೇಷಃ । –(ಜ.)

೧೦೫. ಪಶ್ಯ ಕೃಷ್ಣಮಹಾಬಾಹೋ ಭಾರ್ಗವಾಸ್ತ್ರಸ್ಯ ವಿಕ್ರಮಮ್ ।
ನೈತದಸ್ತ್ರಂ ಹಿ ಸಮರೇ ಶಕ್ಯಂ ಹಂತುಂ ಕದಾಚನ ॥(ಅರ್ಜುನನ ವಚನ) –(ಕರ್ಣ. ೬೪/೬೧/೬೪)

ಅ: ಕೆಲವರು ಓಡಿದರು, ಮತ್ತೆ ಉಳಿದ ಕೆಲವರು ಯಮಲೋಕವನ್ನು ತಲುಪಿದರು. ಆ ಅಸ್ತ್ರ ಪಲಾಯನ ಮಾಡುವವರನ್ನು ಕೊಲ್ಲುವಂತಹುದಲ್ಲ. ಧೃಷ್ಟದ್ಯುಮ್ನ ಮೊದಲಾದ ಪಾಂಚಾಲರು, ದ್ರೌಪದಿಯ ಮಕ್ಕಳು, ಸಾತ್ಯಕಿ ಮೊದಲಾದವರು ಪಲಾಯನ ಮಾಡಿದ್ದರಿಂದಾಗಿ ಬದುಕುಳಿದರು. ಅರ್ಜುನನೂ ಸಹ ಆ ಅಸ್ತ್ರ ಬರುತ್ತಿದ್ದುದನ್ನು ಕಂಡು ಅದಕ್ಕೆ ಪ್ರತ್ಯಸ್ತ್ರವಿಲ್ಲ ಎಂಬುದನ್ನು ತಿಳಿದು ಅವನನ್ನು ಎದುರಿಸದೇ ಕೃಷ್ಣನಿಗೆ ಕೇಳಿಕೊಂಡ 'ಈ ಕರ್ಣನನ್ನು ಬಿಟ್ಟು ನಾನು ಬೇರೆಡೆಗೆ ತೆರಳುವೆನು, ಇಲ್ಲವಾದಲ್ಲಿ ಈ ಅಸ್ತ್ರದಿಂದ ಬದುಕಲಾಗದು'. ಹೀಗೆ ಅರ್ಜುನನು ನುಡಿಯಲು ಸರ್ವಕರ್ತೃವಾದ ಕೃಷ್ಣ ಅವನನ್ನು ಕರ್ಣನಿಂದ ತಪ್ಪಿಸಿ ಮತ್ತೊಂದು ದಾರಿಯಿಂದಲೇ ಭೀಮನ ಬಳಿಗೆ ತಲುಪಿಸಿದ. ಅಲ್ಲಿ ಅರ್ಜುನ ಭೀಮನಿಗೆ ಕೇಳಿಕೊಂಡ 'ನೀನು ಧರ್ಮರಾಜನನ್ನು ಕಾಣಲು ತೆರಳು. ಅವನ ಸಮಾಚಾರವನ್ನು ತಿಳಿದು ಬಾ. ನನ್ನನ್ನು ಯುದ್ಧದಲ್ಲಿ ಅಳಿದುಳಿದ ಸಂಶಪ್ತಕರು ಕರೆಯುತ್ತಿರುವರು. ಅದರಿಂದ ನಾನು ಅವರ ಮೇಲೆ ಯುದ್ಧಕ್ಕೆ ತೆರಳುವೆ'.

ವಿ: ೧) ನಾರಾಯಣಾಸ್ತ್ರ ನಮಸ್ಕರಿಸಿದವರನ್ನು ಕೊಲ್ಲದೇ ಬಿಡುವಂತಹ ಅಸ್ತ್ರವಾದರೆ, (೨೬/೨೯) ಭಾರ್ಗವಾಸ್ತ್ರ ಪಲಾಯನ ಮಾಡುವವರನ್ನು ಕೊಲ್ಲದೇ ಬಿಡುವಂತಹ ಅಸ್ತ್ರ.

೨) ಶ್ರೀಹರಿಯು ಅಂತಹ ಕರುಣಾಳು, ನಮಸ್ಕರಿಸಿದವರನ್ನು, ತನ್ನನ್ನು ಕಂಡು ಭಯಪಟ್ಟು ಓಡುವವರನ್ನು ಕೊಲ್ಲದೇ ಉಳಿಸುವನು.

೩) ಹಾಗೆ ಉಳಿಸುವ ಮೂಲಕ ತಾನು ಶರಣಾದವರನ್ನು, ಅಂಜಿದವರನ್ನು ಕೊಲ್ಲುವಂತಹವನಲ್ಲ ಎಂದು ಲೋಕಕ್ಕೆ ಸಾರಿದ ಎಂದು ತಿಳಿಯಬೇಕು.

ತೆರಳಲು ಒಪ್ಪದ ಭೀಮ

ಇತ್ಯೂಚಿವಾಂಸಂ ತಮುವಾಚ ಭೀಮೋ
ಜಾನನ್ ಸ್ವಬಾಹ್ವೋರ್ಬಲಮಪ್ರಮೇಯಮ್ ।
ಸಂಶಪ್ತಕಾನ್ ಸೂತಜಂ ಕೌರವಾಂಶ್ಚ
ಯೋತ್ಸ್ಯೇಽಹಮೇಕಸ್ತ್ವಮುಪೈಹಿ ಭೂಪಮ್ ॥ ೧೦೮ ॥

---

೧೦೭. ಜ್ಞಾತುಂ ಪ್ರಯಾಹ್ಯಾಶು ತಮದ್ಯ ಭೀಮ ಸ್ಥಾಸ್ಯಾಮ್ಯಹಂ ಶತ್ರುಗಣಾನ್ ನಿರುದ್ಧ್ಯ । -ಭಾರತ(ಕರ್ಣ ೬೫/೭)

೧೦೮. ..... ಸಂಶಪ್ತಾಃ ಪ್ರತ್ಯನೀಕಂ ಸ್ಥಿತಾ ಮೇ ।
ಏತಾನಹತ್ವಾ ಽದ್ಯ ಮಯಾ ನ ಶಕ್ಯಮಿತೋ ಽಪಯಾತುಂ ರಿಪುಸಂಘಗೋಷ್ಠಾತ್ । -ಭಾರತ(ಕರ್ಣ ೬೫/೯)

ಅ: ಅರ್ಜುನ ಹೀಗೆ ನುಡಿಯಲು ಸಾಕಲ್ಯೇನ ಅರಿಯಲಾಗದ ತನ್ನ ಬಾಹುಬಲವನ್ನು ಅರಿತಿದ್ದ ಭೀಮಸೇನ ಅವನಿಗೆ ತಿಳಿಸಿದ 'ಸಂಶಪ್ತಕರನ್ನು, ಸೂತಪುತ್ರನಾದ ಕರ್ಣನನ್ನು, ಕೌರವರನ್ನು ನಾನೊಬ್ಬನೇ ಎದುರಿಸಿ ಯುದ್ಧ ಮಾಡುವೆ; ನೀನು ರಾಜನ ಬಳಿಗೆ ತೆರಳು'.

ವಿ: ಅವರೆಲ್ಲರನ್ನು ಏಕಕಾಲಕ್ಕೆ ತಾನು ಮಾತ್ರ ಎದುರಿಸಬಲ್ಲೆ ಎಂಬ ಅರ್ಜುನನ ಅಹಂಕಾರವನ್ನು ಭೀಮ ಹಾಗೆ ಹೇಳುವ ಮೂಲಕ ಪರಿಹರಿಸಿದ. ಇಲ್ಲಿ 'ನೀನು ತೆರಳು' ಎಂಬುದಕ್ಕೆ ತರ್ಕಮುದ್ರೆಯಿಂದ 'ನೀನು ಬೇಕಾದರೆ ತೆರಳು' ಎಂದು ಅರ್ಥವಾಗುವುದು.

ಕೃಷ್ಣನಿಂದ ಭೀಮನ ಪ್ರಶಂಸೆ

ತ್ಯಕ್ತ್ವಾ ರಣಂ ನಾಹಮಿತೋ ವ್ರಜೇಯಂ
ನ ಮಾಂ ವದೇತ್ ಕಶ್ಚನ ಯುದ್ಧಭೀತಮ್ ।
ಇತಿ ಬ್ರುವಾಣಂ ತಮನಂತಶಕ್ತಿಃ
ಪ್ರೀತಃ ಕೃಷ್ಣಃ ಪ್ರಶಶಂಸಾಧಿಕೇಷ್ಟಮ್ ॥ ೧೦೯ ॥

ಅ: 'ನಾನು ಯುದ್ಧವನ್ನು ತೊರೆದು ಇಲ್ಲಿಂದ ತೆರಳಲಾರೆ, ನನ್ನನ್ನು ಯಾರೂ ಯುದ್ಧಕ್ಕೆ ಅಂಜಿದವನು ಎಂದು ಆಡಿಕೊಳ್ಳುವಂತಾಗಬಾರದು' ಹೀಗೆ ನುಡಿದ ಪರಮಪ್ರಿಯನಾದ ಭೀಮನನ್ನು ಅನಂತಶಕ್ತಿಸಂಪನ್ನನಾದ ಶ್ರೀಕೃಷ್ಣ ಅತ್ಯಂತಪ್ರೀತಿಯಿಂದ ಬಹಳವಾಗಿ ಕೊಂಡಾಡಿದ.

ವಿ: ೧) ಕೃಷ್ಣ ಭೀಮನನ್ನು ಪ್ರಶಂಶಿಸಿದ ಮಾತು ಹೀಗಿದೆ (ಕರ್ಣಪರ್ವ ೬೫/೧೪):

ತತೋ ಹಯಾನ್ ಸರ್ವದಾಶಾರ್ಹಮುಖ್ಯಃ ಪ್ರಚೋದಯನ್ ಭೀಮಮುವಾಚ ಚೇದಮ್ ।
ನೈತಚ್ಚಿತ್ರಂ ತವ ಕರ್ಮಾದ್ಯ ಭೀಮ ಯಾಸ್ಯಾಮ್ಯಹಂ ಜಹಿ ಪಾರ್ಥಾರಿಸಂಘಾನ್ ॥

೨) ಯುದ್ಧರಂಗದಲ್ಲಿ ಯಾವುದೇ ಕಾರಣದಿಂದಲೂ ಶತ್ರುಗಳನ್ನು ಎದುರಿಸದೇ ಹೋಗುವುದು ಕ್ಷತ್ರಿಯಧರ್ಮವೆನ್ನಿಸದು ಎಂಬುದು ಭೀಮ ತೋರಿದ ಧರ್ಮಸೂಕ್ಷ್ಮ.

---

೧೦೮. ಅಥಾಬ್ರವೀದರ್ಜುನಂ ಭೀಮಸೇನಃ ಸ್ವವೀರ್ಯಮಾಸಾದ್ಯ ಕುರುಪ್ರವೀರ ।
ಸಂಶಪ್ತಕಾನ್ ಪ್ರತಿಯೋತ್ಸ್ಯಾಮಿ ಸಂಖ್ಯೇ ಸರ್ವಾನಹಂ ಯಾಹಿ ಧನಂಜಯ ತ್ವಮ್ ॥
ಅಹಂ ಹಿ ಯದ್ಧರ್ಜುನ ಯಾಮ್ಯಮಿತ್ಯಾ ವದಂತಿ ಮಾಂ ಭೀತ ಇತಿ ಪ್ರವೀರಾಃ ॥
(ಭೀಮನ ವಚನ) – ಭಾರತ (ಕರ್ಣ. ೬೫/೧೦,೮)

೧೦೯. ತತೋ ಹಯಾನ್ ಸರ್ವದಾಶಾರ್ಹಮುಖ್ಯಃ ಪ್ರಚೋದಯನ್ ಭೀಮಮುವಾಚ ಚೇದಮ್ ।
ನೈತಚ್ಚಿತ್ರಂ ತವ ಕರ್ಮಾದ್ಯ ಭೀಮ ಯಾಸ್ಯಾಮ್ಯಹಂ ಜಹಿ ಪಾರ್ಥಾರಿಸಂಘಾನ್ ॥ – ಭಾರತ (೮/೬೫/೧೪)

೩) ವಿದ್ಯಾರ್ಥಿ ಪರೀಕ್ಷೆಯ ಮಧ್ಯೆ ತನ್ನ ಬಂಧುಬಾಂಧವರ ಯೋಗಕ್ಷೇಮ ತಿಳಿದುಬರುವ ಅವಕಾಶವನ್ನು ಇಂದಿನ ಪರೀಕ್ಷಾಪದ್ಧತಿಯೂ ಸಹ ನೀಡಲಾರದಲ್ಲವೆ!

ಶಿಬಿರದಲ್ಲಿ ಅರ್ಜುನ

ಯಯೌ ಯುಧಿಷ್ಠಿರಂ ದ್ರಷ್ಟುಂ ಶಿಬಿರಂ ಸಾರ್ಜುನೋ ಹರಿಃ ।
ದೃಷ್ಟ್ವಾತೌ ನೃಪತಿಃ ಕರ್ಣಂ ಹತಂ ಮತ್ವಾ ಶಶಂಸ ಹ , ॥ ೧೧೦ ॥

ಅ: ಶ್ರೀಕೃಷ್ಣ ಅರ್ಜುನನೊಂದಿಗೆ ಯುಧಿಷ್ಠಿರನನ್ನು ಕಾಣಲೆಂದು ಶಿಬಿರಕ್ಕೆ ತೆರಳಿದ. ಧರ್ಮರಾಜ ಅವರಿಬ್ಬರನ್ನು ಕಂಡು ಕರ್ಣ ಸತ್ತನೆಂದು ತಿಳಿದು ಹೊಗಳತೊಡಗಿದ.

ವಿ: ಹಾಗೆ ಯುದ್ಧದ ಮಧ್ಯದಲ್ಲಿ ಅರ್ಜುನ ಶಿಬಿರಕ್ಕೆ ತೆರಳಿದ್ದನ್ನು ಕಂಡು ಧರ್ಮರಾಜ ಅರ್ಜುನ ಹಾಗೆ ಅಕಾಲದಲ್ಲಿ ಶಿಬಿರಕ್ಕೆ ಹಿಂದಿರುಗಲು ಅವನು ಕರ್ಣನನ್ನು ಕೊಂದಿದ್ದು ಕಾರಣವಾಗಿರಬಹುದು ಎಂದು ಭಾವಿಸಿ ಅವನನ್ನು ಹೊಗಳಿದ ಎಂದರ್ಥ.

ಅರ್ಜುನನ ನಿಂದೆ

ಅಭಿವಾದ್ಯ ಹನಿಷ್ಯಾಮೀತ್ಯುಕ್ತಃ ಪಾರ್ಥೇನ ಸ ಕ್ರುಧಾ ।
ಭೃಶಂ ವಿನಿಂದ್ಯ ಬೀಭತ್ಸುಮಾಹ ಕೃಷ್ಣಾಯ ಗಾಂಡಿವಮ್ ।
ದೇಹಿ ಪುತ್ರಂ ಸ ರಾಧಾಯಾ ಹನಿಷ್ಯತಿ ನ ಸಂಶಯಃ ॥ ೧೧೧ ॥

ಅ: ಅರ್ಜುನ ಅವನಿಗೆ ನಮಸ್ಕರಿಸಿ ನುಡಿದ 'ಮುಂದೆ ಕರ್ಣನನ್ನು ಕೊಲ್ಲುವೆ'. ಅವನು ಹಾಗೆನ್ನಲು ಧರ್ಮರಾಜ ಅರ್ಜುನನನ್ನು ಬಹಳವಾಗಿ ನಿಂದಿಸಿ ನುಡಿದ 'ಗಾಂಡೀವವನ್ನು ಕೃಷ್ಣನಿಗೆ ಕೊಡು, ಅವನು ಆ ರಾಧೇಯಸನ್ನು ಕೊಲ್ಲುವನು, ಇದರಲ್ಲಿ ಸಂಶಯವಿಲ್ಲ'.

ವಿ: ೧) ತನ್ನನ್ನು ಕರ್ಣ ಬಹಳವಾಗಿ ನೋಯಿಸಿದ್ದರಿಂದ ಧರ್ಮರಾಜನಿಗೆ ಅಂತಹ ಕರ್ಣ ಬದುಕಿರುವುದು ಬೇಡವಾಗಿತ್ತು, ಅವನನ್ನು ಕೊಲ್ಲದೇ ಅರ್ಜುನ ಶಿಬಿರಕ್ಕೆ ಮರಳಿದ್ದು ಅವನಿಗೆ ಅಗಾಧವಾದ ಕೋಪಕ್ಕೆ ಕಾರಣವಾಗಿತ್ತು.

---

೧೧೦. ಸ್ವಾಗತಂ ದೇವಕೀಮಾತಃ ಸ್ವಾಗತಂ ತೇ ಧನಂಜಯ ।
ಪ್ರಿಯಂ ಮೇ ದರ್ಶನಂ ಗಾಢಂ ಯುವಯೋರಚ್ಯುತಾರ್ಜುನೌ ॥
ಅಕ್ಷತಾಭ್ಯಾಮರಿಷ್ಟಾಭ್ಯಾಂ ಹತಃ ಕರ್ಣೋ ಮಹಾರಥಃ ।
ಆಶೀವಿಷಸಮಂ ಯುದ್ಧೇ ಸರ್ವಶಾಸ್ತ್ರವಿಶಾರದಮ್ ॥ .... (ಇತ್ಯಾದಿ) – ಭಾರತ (ಕರ್ಣ. ೬೬/೧೨)

೧೧೦. ಭೀಮಸೇನಪ್ರಭಾವಾತ್ತು ಯಜ್ಜೀವಾಮಿ ಧನಂಜಯ ।
ತನ್ಮಮಾಚಕ್ಷ್ವ ಹಾರ್ದ್ದೀನ ಯಥಾ ಕರ್ಣೋ ಹತಸ್ತ್ವಯಾ ॥ – ಭಾರತ (ಕರ್ಣ. ೬೭/೧೪,೨೩)

೨) ಅದರಿಂದಾಗಿ ಅವನು ಅರ್ಜುನನನ್ನು ಬೈಯ್ಯುವ ಭರದಲ್ಲಿ ಗಾಂಡೀವವನ್ನು ಕೃಷ್ಣನಿಗೆ ಕೊಡಲು ಹೇಳಿಬಿಡುವನು.

ಯುಧಿಷ್ಠಿರನಿಂದ ಭೀಮನ ಪ್ರಶಂಸೆ

ಅಥ ವಾ ಭೀಮ ಏವೈನಂ ನಿವೃತ್ತೇ ತ್ವಯಿ ಪಾತಯೇತ್ ।
ತ್ವಂ ತು ಕುಂತ್ಯಾ ವೃಥಾ ಸೂತಃ ಕ್ಲೀಬೋ ಮಿಥ್ಯಾಪ್ರತಿಶ್ರವಃ ॥ ೧೧೨ ॥

ಅ: 'ಅಥವಾ ನೀನು ಯುದ್ಧ ತೊರೆದಲ್ಲಿ ಭೀಮನೇ ಅವನನ್ನು ಹೊಡೆದು ಬೀಳಿಸುವನು. ಕುಂತಿ ನಿನ್ನನ್ನು ಹಡೆದದ್ದು ವ್ಯರ್ಥ, ನೀನು ಷಂಡ, ಸುಳ್ಳುಪ್ರತಿಜ್ಞೆಯವನು.

ಅಹಂ ತು ಸೂತಪುತ್ರೇಣ ಕ್ಲಿಷ್ಟೋ ಮಾರುತತೇಜಸಾ ।
ಜೀವಾಮೀತ್ಯಗ್ರಜೇನೋಕ್ತ ಉದ್ಬಬರ್ಹಾಸಿಮುತ್ತಮಮ್ ॥ ೧೧೩ ॥

ಅ: ನಾನಾದರೂ ಆ ಸೂತಪುತ್ರನಾದ ಕರ್ಣನಿಂದ ಸಂಕ್ಲೇಶಕ್ಕೊಳಗಾಗಿ ಭೀಮನ ಪರಾಕ್ರಮದಿಂದಾಗಿ ಬದುಕುಳಿದಿರುವೆ'. ಅಣ್ಣನಾದ ಧರ್ಮರಾಜ ಹೀಗೆನ್ನಲು ಅರ್ಜುನ ಉತ್ತಮವಾದ ಖಡ್ಗವನ್ನು ಒರೆಯಿಂದೆಳೆದ.

ವಿ: ಧರ್ಮರಾಜನ ಈ ನಿಂದೆಯ ಮಾತುಗಳ ಹಿಂದೆ ಅವನಿಗೆ ಕರ್ಣನಿಂದಾಗಿದ್ದ ಅಪಾರ ಹಿಂಸೆಯ ಪರಿಣಾಮ ಎದ್ದು ಕಾಣುವುದು ಎಂಬುದನ್ನು ಗಮನಿಸಬೇಕು.

ಯುಧಿಷ್ಠಿರನ ವಧೆಗೆಂದು ಧಾವಿಸಿದ ಅರ್ಜುನ

ವಾಸುದೇವಸ್ತಮಾಹೇದಂ ಕಿಮೇತದಿತಿ ಸರ್ವವಿತ್ ।
ತಮಾಹ ಗಾಂಡಿವಂ ದಾತುಂ ಯೋ ವದೇತ್ ತದ್ವಧೋ ಮಯಾ ।
ಪ್ರತಿಜ್ಞಾತಸ್ತತೋ ಹನ್ಮಿ ನೃಪಮಿತ್ಯಾಹ ತಂ ಹರಿಃ ॥ ೧೧೪ ॥

---

೧೧೧. 'ಧನುಶ್ಚತತ್ ಕೇಶವಾಯ ಪ್ರಯಚ್ಛ' (ಯುಧಿಷ್ಠಿರನ ವಚನ) – ಭಾರತ (ಕರ್ಣ. ೬೮/೧/೩೦)

೧೧೨. ಕುಂತ್ಯಾ ವೃಥಾ ಸೂತ ಇತ್ಯತ್ರ ''ಷೂಙ್ ಪ್ರಾಣಿಪ್ರಸವೇ'' ಇತಿ ಧಾತೋಃ ಸೂತಃ= ಪ್ರಸೂತಃ – (ವಾ.)

೧೧೪. ಅನ್ಯಸ್ಮೈ ದೇಹಿ ಗಾಂಡಿವಮಿತಿ ಮಾಂ ಯೋऽಭಿಚೋದಯೇತ್ ।
ಭಿಂದ್ಯಾಮಹಂ ತಸ್ಯ ಶಿರ ಇತ್ಯಪಾಂಶುವ್ರತಂ ಮಮ ॥ – ಭಾರತ (ಕರ್ಣ. ೬೯/೯)

ಹನ್ಯಾಮಹಂ ಕೇಶವ ತಂ ಪ್ರಸಹ್ಯ ಭೀಮೋ ಹನ್ಯಾತ್ ತೂಬರಕೇತಿ ಚೋಕ್ತಃ । (ಕರ್ಣ. ೬೯/೭೩)

ಅ: ಸರ್ವಜ್ಞನಾದ ಕೃಷ್ಣ ಅವನನ್ನು ಕೇಳಿದ 'ಇದೇನು' ಎಂದು. ಅರ್ಜುನ ತಿಳಿಸಿದ 'ಗಾಂಡೀವವನ್ನು ಮತ್ತೊಬ್ಬರಿಗೆ ಕೊಡಲು ಯಾವನು ಹೇಳುವನೋ ಅವನನ್ನು ಕೊಲ್ಲುವುದಾಗಿ ನಾನು ಪ್ರತಿಜ್ಞೆ ಮಾಡಿರುವೆ, ಆದ್ದರಿಂದ ಅವನನ್ನೀಗ ಕೊಂದುಹಾಕುವೆ' ಅವನು ಹೀಗೆನ್ನಲು ಕೃಷ್ಣ ತಿಳಿಸಿದ.

ಎ: ಹಿಂದೆ ತಿಳಿಸಿದಂತೆ (೨೬/೧೭೫) ಕ್ಷತ್ರಿಯಕುಮಾರರು ಅಸ್ತ್ರವಿದ್ಯಾಭ್ಯಾಸದ ಪ್ರಾರಂಭ–ಕಾಲದಲ್ಲಿ ಒಂದು ರಹಸ್ಯಪ್ರತಿಜ್ಞೆಯನ್ನು ಕೈಗೊಳ್ಳಬೇಕು. ಅರ್ಜುನ ಕೈಗೊಂಡಿದ್ದ ಪ್ರತಿಜ್ಞೆ ಇದಾಗಿತ್ತು ಎಂದರ್ಥ.

ಅರ್ಜುನನಿಗೆ ಶ್ರೀಕೃಷ್ಣನ ಉಪದೇಶ - ಸತ್ಯ ಶಬ್ದದ ನಿರ್ವಚನ

ಸತ್ಯಸ್ಯ ವಚನಂ ಶ್ರೇಯಃ ಸತ್ಯಜ್ಞಾನಂ ತು ದುಷ್ಕರಮ್ ।
ಯತ್ ಸತಾಂ ಹಿತಮತ್ಯಂತಂ ತತ್ ಸತ್ಯಮಿತಿ ನಿಶ್ಚಯಃ ॥ ೧೧೫ ॥

ಅ: ಸತ್ಯದ ನುಡಿ ಶ್ರೇಯಸ್ಕರವಾದದ್ದು, ಆದರೆ ಸತ್ಯವನ್ನು ಅರಿಯುವುದು ತುಂಬಾ ಕಷ್ಟ, ಯಾವುದು ಸಜ್ಜನರಿಗೆ ಅತ್ಯಂತ ಹಿತವೋ ಅದೇ ಸತ್ಯವೆಂಬುದು ನಿರ್ಣಯ.

---

೧೧೫. ಯದಿತಿ । ಯದನೃತಮಪಿ । ಸತಾಮತ್ಯಂತಹಿತಂ ತದೇವ ಸತ್ಯಮಿತಿ ನಿಶ್ಚಯಃ । ನ ತು ಯಥಾರ್ಥ-ಮೇವೇತ್ಯರ್ಥಃ। –(ವ.)

೧೧೫. ಯತ್ರ ಯದ್ಯಪೀತ್ಯಾದೇಃ ಶೇಷಃ ಸತ್ಯಸ್ಯ ವಚನಮಿತ್ಯಾದೇರಾವೃತ್ತಿಃ । ಯದ್ಯಪಿ 'ಸತ್ಯಸ್ಯ ವಚನಂ ಶ್ರೇಯಂ ಸಾಧನಂ ತಥಾಪಿ ಸತ್ಯಸ್ಯ ವಚನಂ ದುಷ್ಕರಂ ಯತಃ ಸತ್ಯಜ್ಞಾನಂ ತು ದುಷ್ಕರಮ್' ಅತಃ ಸತ್ಯವಚನಂ ದುಷ್ಕರಮಿತಿ । ಏತೇನ ಸತ್ಯವಚನಂ ಶ್ರೇಯ ಇತ್ಯುಕ್ತಾರ್ಥೋಪಪಾದಕತ್ವಾಭಾವಾತ್ ಸತ್ಯಜ್ಞಾನಂ ತು ದುಷ್ಕರಮಿತಿ ವಾಕ್ಯಮಸಂಗತಮಿತಿ ಚೋದ್ಯಂ ಪರಾಸ್ತಮ್ । ಸತ್ಯಜ್ಞಾನಂ ದುಷ್ಕರಮಿತ್ಯೇತತ್ ಸತ್ಯಸ್ಯ ವಚನಂ ಶ್ರೇಯ ಇತ್ಯಸ್ಯೋಪಪಾದಕಂ ನ ಕಿಂತು ಸತ್ಯಸ್ಯ ವಚನಂ ದುಷ್ಕರಮಿತ್ಯಸ್ಯೋಪಪಾದಕಮಿತ್ಯಭ್ಯುಪಗಮಾತ್ । ಧರ್ಮಸ್ಯ ವಚನಂ ಶ್ರೇಯೋ ಧರ್ಮಜ್ಞಾನಂ ತು ದುಷ್ಕರಮಿತ್ಯುತ್ತರವಾಕ್ಯಮೇವಮೇವ ಯೋಜ್ಯಮ್ ॥ –(ಸ.)

೧೧೫. ಸತ್ಯಸ್ಯ ವಚನಂ ಸಾಧು ನ ಸತ್ಯಾತ್ ವಿದ್ಯತೇ ಪರಮ್ ।
ತತ್ತ್ವೇನೈವ ಸುದುರ್ಜ್ಞೇಯಂ ಪಶ್ಯ ಸತ್ಯಮನುಷ್ಠಿತಮ್ ॥ –ಭಾರತ (ಕರ್ಣ. ೬೯/೩೧)

ಸತ್ಯಸ್ಯ ವಚನಂ ಶ್ರೇಯಃ ಸತ್ಯಂ ಜ್ಞಾನಂ ಹಿತಂ ಭವೇತ್ ।
ಯದ್ ಭೂತಹಿತಮತ್ಯಂತಂ ತದ್ ವೈ ಸತ್ಯಂ ಪರಂ ಮತಮ್ ॥ –ಇತಿ (ಮನು. ೨೧೩/೩೧)

ಉಕ್ತ್ವಾಽನೃತಂ ಭವೇದ್ಯತ್ರ ಪ್ರಾಣಿನಾಂ ಪ್ರಾಣರಕ್ಷಣಮ್ ।
ಅನೃತ್ರ ತತ್ರ ಸತ್ಯಂ ಸ್ಯಾತ್ ಸತ್ಯಮಪ್ಯನೃತಂ ಭವೇತ್ ॥ –ಪದ್ಮಪುರಾಣ (೫/೧೫/೩೯)

ವಿ: ೧) 'ಸತ್ಯಂ ವದ' ಎಂಬ ಶಾಸ್ತ್ರವಚನದಂತೆ ಸತ್ಯವನ್ನು ನುಡಿಯುವುದು ಶ್ರೇಯಸ್ಕರ–ವೆಂಬುದು ನಿರ್ವಿವಾದ. ಆದರೆ, ಸತ್ಯದ ಸ್ವರೂಪವನ್ನು ಅರ್ಥ ಮಾಡಿಕೊಳ್ಳುವುದು ಮಾತ್ರ ಅಷ್ಟು ಸುಲಭಸಾಧ್ಯವಾದ ವಿಚಾರವಲ್ಲ.

೨) ಇದ್ದುದನ್ನು ಇದ್ದಂತೆಯೇ ಹೇಳುವುದು ಸತ್ಯವೆಂಬುದು ಲೋಕದ ಪರಿಕಲ್ಪನೆ. ಆದರೆ, ವಾಸ್ತವಿಕವಾಗಿ ಸತ್ಯದ ಮುಖ್ಯ ಲಕ್ಷಣ ಅದಲ್ಲ. ಸಜ್ಜನರಿಗೆ ಹಿತವಾಗುವ ನುಡಿಯೇ ನಿಜವಾಗಲೂ ಸತ್ಯ ಎನ್ನಿಸುವುದು ಎಂದರ್ಥ.

೩) ಸತ್ಯ ಎಂಬ ಪದದಲ್ಲೇ ಸತಾಂ ಇದಂ ಸತ್ಯಂ ಎಂಬ ಈ ಅರ್ಥ ಅಡಗಿದೆ.

ಧರ್ಮಶಬ್ದದ ನಿರ್ವಚನ

ಧರ್ಮಸ್ಯ ಚರಣಂ ಶ್ರೇಯೋ ಧರ್ಮಜ್ಞಾನಂ ತು ದುಷ್ಕರಮ್ ।
ಯಃ ಸತಾಂ ಧಾರಕೋ ನಿತ್ಯಂ ಸ ಧರ್ಮ ಇತಿ ನಿಶ್ಚಯಃ ॥ ೧೧೬ ॥

ಅ: ಧರ್ಮದ ಆಚರಣೆ ಶ್ರೇಯಸ್ಕರವಾದುದು. ಆದರೆ, ಧರ್ಮದ ಪರಿಜ್ಞಾನ ತುಂಬಾ ದುಷ್ಕರವಾದುದು. ಯಾವುದು ಸಜ್ಜನರ ಪೋಷಣೆಗೆ ಸದಾ ಕಾರಣವೋ, ಅದೇ ಧರ್ಮ ಎಂಬುದು ನಿರ್ಣಯ.

ವಿ: ಧರ್ಮಂ ಚರ ಎಂಬ ಮಾತಿನಂತೆ ಧರ್ಮಾಚರಣೆ ಶ್ರೇಯಸ್ಕರ ಎಂಬುದು ನಿಶ್ಚಿತ. ಆದರೆ, ಧರ್ಮದ ಸ್ವರೂಪವನ್ನು ಅರಿತುಕೊಳ್ಳುವುದು ತುಂಬಾ ಕಷ್ಟಸಾಧ್ಯವಾದ ವಿಚಾರ. ಶಾಸ್ತ್ರೋಕ್ತ–ವಾದ ಕೆಲವು ಧರ್ಮಗಳನ್ನು ಅವು ಇದ್ದಂತೆಯೇ ಆಚರಿಸಬೇಕೆಂಬುದು ಸಾಮಾನ್ಯವಾದ ಧರ್ಮದ

---

೧೧೬. ಸತಾಂ ಧಾರಕಃ ಉಪಕಾರಕಃ ಸ ಏವ ಧರ್ಮೋ ನ ತ್ವಹಿಂಸಾದಿರೂಪ ಏವೇತಿ ನಿಶ್ಚರ್ಯಃ । – (ವ.)

೧೧೬. ಧಾರಣಾದ್ ಧರ್ಮಮಿತ್ಯಾಹುರ್ಧರ್ಮೋ ಧಾರಯತೇ ಪ್ರಜಾಃ ।
ಯತ್ ಸ್ಯಾತ್ ಧಾರಣಸಂಯುಕ್ತಂ ಸ ಧರ್ಮ ಇತಿ ನಿಶ್ಚಯಃ ॥ – ಭಾರತ (ಕರ್ಣ. ೬೯/೫೮)

ಸತಾಂ ವೃದ್ಧಿಕರೋ ಧರ್ಮಸ್ತ್ವಸತಾಂ ಹ್ಯಸಕಾರಕಃ ।
ಅಯಂ ತು ನಿಶ್ಚಿತೋ ಧರ್ಮೋ ಹ್ಯಧರ್ಮೋಽನ್ಯೋ ವಿನಿಶ್ಚಿತಃ ॥
ಹರ್ಷಃ ಸತ್ಸು ತಥಾಽಸತ್ಸು ಧರ್ಮೋ ಧರ್ಮವಿಪರ್ಯಯಃ ।
ತೇಷಾಂ ವೃದ್ಧೌ ತಥಾ ಹಾನೌ ಸರ್ವಂ ಜ್ಞೇಯಮಶೇಷತಃ ॥
ಏತದರ್ಥಂ ಚ ಧರ್ಮಾಣಾಂ ಮರ್ಯಾದಾ ವೈದಿಕಾದಿಕಾ ।
ಮೂಲಧರ್ಮವಿರುದ್ಧಾತು ಸಾ ನ ಗ್ರಾಹ್ಯಾ ಕಥಂಚನ ॥ – ಇತಿ ಚ (ಭಾ. ತಾ. ೧೧/೨/೪೮)

ಧರ್ಮಃ ಸತ್ಯ ಇತಿ ಪ್ರೋಕ್ತೋ ಧರ್ಮಶ್ಚಾಪಿ ಹರೇಃ ಪ್ರಿಯಃ ॥ – ಬ್ರಾಹ್ಮಪುರಾಣ (ಭಾ. ತಾ. ೩/೨೦/೫)

ಪರಿಕಲ್ಪನೆ. ಆದರೆ, ಸಜ್ಜನರ ಉಳಿವಿಗೆ ಕಾರಣವಾಗುವಂತಹ ಧರ್ಮವೇ ನಿಜವಾದ ಧರ್ಮ ಎಂಬುದು ಧರ್ಮದ ಪ್ರಧಾನ ಲಕ್ಷಣ ಎಂದರ್ಥ. ಧರ್ಮ ಎಂಬ ಪದದಲ್ಲೇ ಸದ್ಧಾರಕಃ ಧರ್ಮಃ ಎಂಬ ಈ ಲಕ್ಷಣ ಉಕ್ತವಾಗಿದೆ.

ಸತ್ಯಹೇಳಿ ನರಕ ಕಂಡ ಬ್ರಾಹ್ಮಣ

ಕೌಶಿಕಾಖ್ಯೋ ಬ್ರಾಹ್ಮಣೋ ಹಿ ಲೀನಂ ಗ್ರಾಮಜನಂ ಕ್ವಚಿತ್ ।
ತಸ್ಕರೇಷ್ವಭಿಧಾಯೈವ ನಿರಯಂ ಪ್ರತ್ಯಪದ್ಯತ ॥ ೧೧೭ ॥

ಅ: ಕೌಶಿಕನೆಂಬ ಬ್ರಾಹ್ಮಣ ಒಮ್ಮೆ ಅಡಗಿದ್ದ ಗ್ರಾಮದ ಜನರನ್ನು ಕಳ್ಳರಿಗೆ ತಿಳಿಸಿ-ಕೊಟ್ಟದ್ದರಿಂದಾಗಿಯೇ ನರಕವನ್ನು ಹೊಂದಿದ.

ವಿ: ೧) ಕೌಶಿಕನೆಂಬ ಬ್ರಾಹ್ಮಣ ಮೌನವ್ರತವನ್ನು ಕೈಗೊಂಡಿದ್ದ. ಒಮ್ಮೆ ಕಳ್ಳರ ಗುಂಪಿಗೆ ಅಂಜಿದ ಗ್ರಾಮ ಜನರ ಗುಂಪು ಅವನ ಆಶ್ರಮಕ್ಕೆ ಬಂದು ರಕ್ಷಣೆಗಾಗಿ ಅಡಗಿಕೊಂಡರು. ತಮ್ಮನ್ನು ರಕ್ಷಿಸಲು ಅವನನ್ನು ಪ್ರಾರ್ಥಿಸಿದರು ಸಹ. ಬಳಿಕ ಕಳ್ಳರು ಬಂದು ಅವನನ್ನು ಆ ಜನರ ಬಗ್ಗೆ ಪ್ರಶ್ನಿಸಿದಾಗ ಅವನು ಸಂಜ್ಞೆಯಿಂದಲೇ ಜನರು ಅಡಗಿರುವುದನ್ನು ತೋರಿಸಿದ. ತಾನು ಸತ್ಯವನ್ನು ಪಾಲಿಸಿದ್ದಕ್ಕಾಗಿ ಹೆಮ್ಮೆ ಪಟ್ಟ ಸಹ.

೨) ಅದರಿಂದಾಗಿ ಸ್ವರ್ಗ ದೊರೆಯುವುದೆಂಬ ನಿರೀಕ್ಷೆಯಲ್ಲಿದ್ದ ಅವನಿಗೆ ಮರಣಾನಂತರ ದೊರೆತದ್ದು ಭಯಂಕರ ನರಕವಾಗಿತ್ತು. ಅವನು ನುಡಿದ ಸತ್ಯವಚನ ಜನರ ಕಲ್ಯಾಣಕ್ಕೆ ಕಾರಣವಾಗುವ ಬದಲು ಅವರ ಅವನತಿಗೇ ಕಾರಣವಾಗಿತ್ತು.

೩) ಅವನು ಹೇಳಿದ್ದು ನಿಜವಾದ ವಿಚಾರವೇ ಆಗಿದ್ದರೂ ಅದರ ಪರಿಣಾಮ ದುರಂತಕ್ಕೆ ಕಾರಣವಾಗಿತ್ತು. ಅಂತಹ ಸತ್ಯವಚನ ಸತ್ಯವಚನವೆನ್ನಿಸದು.

೪) ಅಂತಹ ಸಂದರ್ಭದಲ್ಲಿ ಸುಳ್ಳನ್ನು ಹೇಳುವುದೇ ಸತ್ಯ ವಚನ ಹೊರತು, ಸತ್ಯವನ್ನು ನುಡಿಯುವುದಲ್ಲ.

೫) ಈ ವಿವೇಚನೆಯನ್ನು ತಿಳಿಯಲಾಗದ ಆ ಕೌಶಿಕ ನರಕಭಾಜನನಾದ ಎಂಬುದು ಈ ಕಥೆಯ ವಿವರ. ಮಹಾಭಾರತದಲ್ಲಿ ವಿಸ್ತಾರವಾಗಿ ಬಂದಿರುವ ಈ ಕಥೆಯನ್ನು ಶ್ರೀಮದಾಚಾರ್ಯರು ಒಂದೇ ಶ್ಲೋಕದಲ್ಲಿ ಹೀಗೆ ಸಂಗ್ರಹಿಸಿಕೊಟ್ಟಿರುವ ಪರಿ ಅತ್ಯಂತ ಅಪೂರ್ವವಾದುದು ಎಂದು ಗಮನಿಸಬೇಕು.

ಸ್ವರ್ಗಕ್ಕೆ ನಡೆದ ಬೇಟೆಗಾರ

ಕಶ್ಚಿದ್ವ್ಯಾಧೋ ಮೃಗಂ ಹತ್ವಾ ಮಾತಾಪಿತೃನಿಮಿತ್ತತಃ ।
ಭಕ್ಷಾರ್ಥಮಭ್ಯಗಾತ್ ಸ್ವರ್ಗಮಸುರೋಽಸೌ ಮೃಗೋ ಯತಃ ।
ಉಪದ್ರವಾಯ ಲೋಕಸ್ಯ ತಪಶ್ಚರತಿ ದುರ್ಮತಿಃ ॥ ೧೧೮ ॥

ಅ: ಒಬ್ಬ ಬೇಡ ತಂದೆ ತಾಯಿಗಳ ಭಕ್ಷಣೆಗೋಸ್ಕರವಾಗಿ ಮೃಗವನ್ನು ಕೊಂದು ಸ್ವರ್ಗವನ್ನು ಪಡೆದುಕೊಂಡನು. ಆ ಮೃಗ, ಲೋಕದ ಉಪದ್ರವಕ್ಕೋಸ್ಕರ ತಪಸ್ಸು ಮಾಡುತ್ತಿದ್ದ ಒಬ್ಬ ಅಸುರನಾಗಿದ್ದೇ ಅದಕ್ಕೆ ಕಾರಣ.

ವಿ: ೧) ಒಬ್ಬ ಬೇಡ ತನ್ನ ತಂದೆ ತಾಯಿಗಳ ಆಹಾರಕ್ಕೋಸ್ಕರ ಬೇಟೆಯಾಡುತ್ತಿದ್ದವನು ಒಂದು ಮೃಗವನ್ನು ಕೊಂದುಹಾಕಿದ. ಮೇಲ್ನೋಟಕ್ಕೆ ಅದು ಒಂದು ಹಿಂಸೆಯ ಕಾರ್ಯ. ಅದರಿಂದಾಗಿ ನರಕವೇ ದೊರೆಯಬೇಕಿತ್ತು.

೨) ಆದರೆ, ಅವನಿಗೆ ನರಕದ ಬದಲು ಸ್ವರ್ಗವೇ ಲಭಿಸಿತು. ಅದಕ್ಕೆ ಕಾರಣ ಅವನು ಕೊಂದ ಮೃಗ ಸಾಮಾನ್ಯವಾದ ಪ್ರಾಣಿಯಾಗಿರದೇ ಒಬ್ಬ ಅಸುರನೇ ಆಗಿದ್ದ. ಅಸುರ ಮೃಗದ ರೂಪದಲ್ಲಿ ಸಂಚರಿಸುತ್ತಾ ಜನರನ್ನು ಪೀಡಿಸುವ ಮಹಾದುಷ್ಟನಾಗಿದ್ದ. ಅವನನ್ನು ಹಾಗೆ ಕೊಲ್ಲುವ ಮೂಲಕ ಅವನು ಜನರ ರಕ್ಷಣೆಗೆ ಕಾರಣನಾದ. ಅದರಿಂದಾಗಿ ಅವನಿಗೆ ಸದ್ಗತಿ ಲಭಿಸಿತು.

೩) ಇಲ್ಲೂ ಸಹ ಮೇಲ್ನೋಟಕ್ಕೆ ಅಧರ್ಮವೆನ್ನಿಸುವ ಮೃಗಹತ್ಯೆ ಅದರ ಹಿನ್ನೆಲೆಯಿಂದಾಗಿ ಪರಮ ಧರ್ಮವಾಗಿಬಿಟ್ಟಿದೆ.

೪) ಹೀಗೆ ಧರ್ಮದ ಸ್ವರೂಪ ಅತ್ಯಂತ ಜಟಿಲವಾದುದು. ಸಜ್ಜನರಿಗೆ ಹಿತವಾಗುವ ರೀತಿಯಲ್ಲಿ ನಡೆದಾಗ ಮಾತ್ರವೇ ಅದು ಧರ್ಮವೆನ್ನಿಸುವುದೇ ಹೊರತು ಯಾಂತ್ರಿಕವಾಗಿ ಕರ್ತವ್ಯವನ್ನು ಪಾಲಿಸುವುದರಿಂದಲ್ಲ ಎಂಬುದು ಇದರ ಸಾರಾಂಶ. ಹಿಂದಿನ ಶ್ಲೋಕದಂತೆಯೇ ಈ ಶ್ಲೋಕದಲ್ಲಿಯೂ ಸಹ ಮಹಾಭಾರತದಲ್ಲಿ ಬಂದಿರುವ ಕಥೆಯ ಸಂಗ್ರಹವಿದೆ. ಹೀಗೆ ಅದ್ಭುತ ಸಂಗ್ರಹ ಕೌಶಲ ಶ್ರೀಮಧ್ವಾಚಾರ್ಯರದು. ತಮ್ಮ ಬ್ರಹ್ಮಸೂತ್ರ ಭಾಷ್ಯದ ಸಾರಸರ್ವಸ್ವವನ್ನು

---

೧೧೮. ನನು ಫಲಮೂಲಾದಿನಾ ಕ್ಷುತ್ಪರಿಹಾರಸಂಭವಾತ್ ಕಥಂ ಮೃಗವಧೋ ಧರ್ಮೋ ಽಭೂದಿತ್ಯತ ಆಹ। ಅಸುರ ಇತಿ ಯತಃ ಅಸೌ ಮೃಗೋಽಸುರಃ ಲೋಕಸ್ಯ ಉಪದ್ರವಾಯ ತಪಶ್ಚರತಿ। ಅತ ಏವ ದುರ್ಮತಿಃ ದುಷ್ಟಹನನಸ್ಯ ಲೋಕೋಪಕಾರಕತ್ವಾತ್ ಧರ್ಮೋ ಭೂದಿತಿ ಭಾವಃ। – (ಜ.)

೧೧೮. ಮಾತಾಪಿತೃಶಬ್ದೇನ ಮಾತಾಪಿತೃಜೀವನಂ ಗೃಹ್ಯತೇ । ಮಾತಾಪಿತೃನಿಮಿತ್ತತಃ ಮಾತಾಪಿತೃಜೀವನನಿಮಿತ್ತೇನ ಭಕ್ಷಾರ್ಥಂ ..... ॥ – (ಸ.)

೧೧೯. ಸ್ವೋತ್ತಮತಿರಸ್ಕಾರಃ ತದ್ವಧ ಏವೇತಿ ಭಾವಃ । – (ಜ.)

ಕೇವಲ ಮೂವತ್ತೆರಡು ಶ್ಲೋಕಗಳಲ್ಲಿ ಸಂಗ್ರಹಿಸಿರುವ ಮಹಾನುಭಾವರಾದ ಅವರಿಗೆ ಇದೇನೂ ಹೊಸತಲ್ಲ.

ತಸ್ಮಾತ್ ಸದ್ಧಾರಕೋ ಧರ್ಮ ಇತಿ ಕೃತ್ವಾ ವಿನಿಶ್ಚಯಮ್ ।
ಮಾ ನೃಪಂ ಜಹಿ ಸತ್ಯಾಂ ತ್ವಂಕುರು ವಾಚಂ ತಿರಸ್ಕುರು ॥ ೧೧೯ ॥

ಅ: ಆದ್ದರಿಂದ ಸಜ್ಜನರ ಉಳಿವಿಗೆ ಕಾರಣವಾಗುವುದೇ ಧರ್ಮ ಎಂದು ಸರಿಯಾಗಿ ನಿಶ್ಚಯಮಾಡಿಕೊಂಡು ಧರ್ಮರಾಜನನ್ನು ಕೊಲ್ಲದಿರು. ಅವನನ್ನು ನೀನು ಎಂಬುದಾಗಿ ಅವಮಾನಿಸು. ಆ ಮೂಲಕ ನಿನ್ನ ವಚನವನ್ನು ಸತ್ಯಮಾಡಿಕೋ.

ವಿ: ೧) ಧರ್ಮಪಾಲನೆಯಲ್ಲಿ ಮಾತ್ರವಲ್ಲದೆ ಅದನ್ನು ಅನುಸರಿಸುವ ರೀತಿಯಲ್ಲೂ ಸಹ ವಿವೇಕವನ್ನು ಹೊಂದಿರಬೇಕು ಎಂಬುದು ಇಲ್ಲಿಯ ಭಾವ; **'ಧರ್ಮಸ್ಯ ತತ್ತ್ವಂ ನಿಹಿತಂ ಗುಹಾಯಾಂ'** (ವನ. ೩೧೩/೧೧೭) ಎಂಬ ಮಾತಿನ ವಿವರಣೆಯಂತೆ ಈ ಪ್ರಸಂಗವಿರುವುದನ್ನು ಗಮನಿಸಬೇಕು.

೨) ಧರ್ಮರಾಜನನ್ನು ಕೊಲ್ಲುವುದು ಅತ್ಯಂತ ಪಾಪಕಾರ್ಯವಾದ್ದರಿಂದ ಅದನ್ನು ಸರ್ವಥಾ ಮಾಡಕೂಡದು, ಅದರಂತೆ ಪ್ರತಿಜ್ಞೆಯನ್ನು ನೆರವೇರಿಸುವುದೂ ಸಹ ಧರ್ಮವೇ. ಅದನ್ನು ನೆರವೇರಿಸದಿದ್ದಲ್ಲಿ ಮಾತು ತಪ್ಪಿದ ದೋಷವೂ ತಪ್ಪಿದ್ದಲ್ಲ. ಹೀಗೆ ಧರ್ಮಸಂಕಟದ ಆ ಸನ್ನಿವೇಶದಲ್ಲಿ ಧರ್ಮರಾಜನನ್ನು ಕೊಲ್ಲುವ ಬದಲು ಅವನನ್ನು ಕ್ರೂರ ವಚನಗಳಿಂದ ನಿಂದಿಸಿದರೆ ಕೊಂದಂತೆಯೇ ಆಗುವುದು. ಗುರುಹಿರಿಯರನ್ನು ನೀನು ಎಂದು ಏಕವಚನದಿಂದ ಸಂಭೋದಿಸುವುದೇ ಕೊಂದ ಪಾಪಕ್ಕೆ ಕಾರಣವಾಗುವುದು ಎಂದು ತಾತ್ಪರ್ಯ.

---

೧೧೯. ಜ್ಯೇಷ್ಠವಧಾದ್ಧರ್ಮನಾಶೋ ಜಾತ ಇತಿ ಭೀತೇನ ತ್ವಯಾऽऽತ್ಮವಧೇ ಕೃತೇ ಪುನರಪಿ ಧರ್ಮನಾಶ ಏವ ಭವತಿ। – ಲಕ್ಷಾಲಂಕಾರ

೧೧೯. ಮಾ ನೃಪಂ ಜಹೀತ್ಯತ್ರ ನೃಪಂ ಮಾ ಜಹಿ ಕಿಂ ತು ತ್ವಂ ಕುರು= ತ್ವಂಕಾರಂ ಕುರು। ತಿರಸ್ಕುರು= ತಿರಸ್ಕಾರಂ ಕುರು। ತೇನ ವಾಚಂ= ಹನ್ಮೀತಿ ವಾಚಂ ಸತ್ಯಾಂ ತ್ವಂ ಕುರ್ವಿತಿ ಪೂರ್ವಪದಾದ್ವಿಭಕ್ತ್ಯೋಃ ತ್ವಂ ಕುರ್ವಿತಿ ಪದಯೋರಾವೃತ್ಯಾ ಯೋಜನಾ। ಉತ್ತಮಾನಾಂ ತ್ವಂಕಾರಹುಂಕಾರಾವೇವ ವಧ ಇತಿ ಭಾವಃ। ಅತ ಏವ ''ವಧೋ ಗುರೂಣಾಂ ತ್ವಂಕಾರಃ'' ಇತಿ (೧೩೦) ವಕ್ಷ್ಯತೇ – (ವಾ.)

೧೧೯. ಸ್ವೋತ್ತಮತಿರಸ್ಕಾರೋऽಪಿ ತದ್ವಧಪ್ರಾಯ ಇತಿ ಭಾವಃ। – (ವ.)

೧೧೯. ತ್ವಮಿತ್ಯತ್ರ ಭವಂತಂ ಹಿ ಬ್ರೂಹಿ ಪಾರ್ಥ ಯುಧಿಷ್ಠಿರಮ್ ।
ತ್ವಮಿತ್ಯುಕ್ತೋ ಹಿ ನಿಹತೋ ಗುರುರ್ಭವತಿ ಭಾರತ ॥...
ಅವಧೇನ ವಧ ಪ್ರೋಕ್ತೋ ಯದ್ಗುರುಸ್ತ್ವಮಿತಿ ಪ್ರಭುಃ ॥ – (ಕರ್ಣ. ೬೯/೮೩, ೮೬)

ಅರ್ಜುನನಿಂದ ಯುಧಿಷ್ಠಿರನ ನಿಂದೆ; ಭೀಮನ ಪ್ರಶಂಸೆ

ಇತ್ಯುಕ್ತೋ ಬಹುಧಾऽನಿಂದತ್ ಕ್ರೋಧಾದೇವಾರ್ಜುನೋ ನೃಪಮ್ ।
ತ್ವಂ ನೃಶಂಸಃ ಕೃತಘ್ನಶ್ಚ ನಿರ್ವೀರ್ಯಃ ಪರುಷಂವದಃ ।
ತ್ವತ್ತಃ ಸುಖಂ ನಾಸ್ತಿ ಕಿಂಚಿನ್ನ ಮಾಂ ಗರ್ಹಿತುಮರ್ಹಸಿ ॥ ೧೨೦ ॥

ಭೀಮೋ ಮಾಂ ಗರ್ಹಿತುಂ ಯೋಗ್ಯೋ ಯೋ ಹ್ಯಸ್ಮಾಕಂ ಸದಾ ಗತಿಃ ।
ಯೋ ಯುಧ್ಯತೇ ಸರ್ವವೀರೈರದ್ಯಾಪಿ ತ್ವಂ ತು ನಿಂದಕಃ ।
ಇತ್ಯಾದ್ಯುಕ್ತ್ವಾऽऽತ್ಮನಾಶಾಯ ವಿಕೋಶಂ ಕೃತವಾನಸಿಮ್ ॥ ೧೨೧ ॥

ಅ: ಕೃಷ್ಣ ಹೀಗೆ ತಿಳಿಸಲು ಅರ್ಜುನ ಕೋಪದಿಂದಲೇ ಧರ್ಮರಾಜನನ್ನು ಅನೇಕ ತೆರನಾಗಿ ನಿಂದಿಸತೊಡಗಿದ 'ನೀನು ಕಟುಕ, ಕೃತಘ್ನ, ನಿರ್ವೀರ್ಯ, ಬಿರು ನುಡಿಗಳನ್ನು ಆಡುವವನು, ನಿನ್ನಿಂದ ಸ್ವಲ್ಪವೂ ಸುಖವಿಲ್ಲ. ನೀನು ನನ್ನನ್ನು ನಿಂದಿಸಲು ಅರ್ಹತೆ ಪಡೆದಿಲ್ಲ. ನಮಗೆ ಸದಾ ಗತಿಯಾಗಿರುವ ಭೀಮನೇ ನನ್ನನ್ನು ನಿಂದಿಸಲು ಯೋಗ್ಯ. ಅವನು ಈಗಲೂ ಸಕಲ ವೀರರೊಂದಿಗೆ ಯುದ್ಧ ಮಾಡುತ್ತಿರುವನು. ನೀನು ಎಲ್ಲರನ್ನೂ ನಿಂದಿಸುವವನಷ್ಟೇ'. ಇದೇ ಮೊದಲಾಗಿ ನುಡಿದು ಅರ್ಜುನ ಆತ್ಮಹತ್ಯೆ ಮಾಡಿಕೊಳ್ಳಲೆಂದು ಖಡ್ಗವನ್ನು ಪುನಃ ವರೆಯಿಂದ ಹೊರತೆಗೆದ.

ವಿ: ೧) ಅರ್ಜುನ ಹಿರಿಯರನ್ನು ನಿಂದಿಸಿದರೆ ಕೊಂದಂತಾಗುವುದು ಎಂಬ ಕೃಷ್ಣನ ಮಾತಿನಂತೆ ಧರ್ಮರಾಜನನ್ನು ನಿಂದಿಸತೊಡಗಿದ. ಆ ನಿಂದೆ ಹೆಸರಿಗೆ ಮಾತ್ರ ನಿಂದೆಯಾಗಿರದೇ ನಿಜವಾದ ಕೋಪದಿಂದಲೇ ನಿಂದೆಯಾಗಿದ್ದಿತು ಎಂಬುದನ್ನು ಗಮನಿಸಬೇಕು.

೨) ಅರ್ಜುನ ತನ್ನ ಮಾತುಗಳಲ್ಲಿ ಧರ್ಮರಾಜನ ಬಗ್ಗೆ ತನ್ನ ಅಂತರಾಳದಲ್ಲಿದ್ದ ಕೋಪವನ್ನೆಲ್ಲ ಹೊರಹಾಕಿದ ಎಂಬುದನ್ನು ಗಮನಿಸಬೇಕು. ಹಾಗೆ ಅವನನ್ನು ನಿಂದಿಸಿದ ಮೇಲೆ ಅರ್ಜುನ ಮತ್ತೆ ಖಡ್ಗವನ್ನು ವರೆಯಿಂದ ತೆಗೆದ. ಅದರ ಉದ್ದೇಶ ತನ್ನನ್ನೇ ಕೊಂದು–ಕೊಳ್ಳುವುದಾಗಿತ್ತು

೩) ಇಲ್ಲಿ ಧರ್ಮರಾಜನನ್ನು ನಿಂದಿಸುತ್ತಲೇ ಅರ್ಜುನ ಭೀಮನನ್ನು ಹೊಗಳುತ್ತಿರುವುದನ್ನು ಗಮನಿಸಬೇಕು. ಭೀಮ ತನಗಿಂತ ಮಿಗಿಲಾದವನು; ತಮ್ಮೆಲ್ಲರಿಗೂ ರಕ್ಷಣೆ ನೀಡುವಂತಹ

---

೧೨೦. ಭೀಮಸ್ತುಮಾಮರ್ಹತಿ ಗರ್ಹಣಾಯ ಯೋ ಯುಧ್ಯತೇ ಸರ್ವಲೋಕಪ್ರವೀರೈಃ ।
(ಅರ್ಜುನನ ವಚನ) – ಭಾರತ (ಕರ್ಣ. ೭೦/೨/೨೧)

ಮಹಾಮಹಿಮ ಎಂಬುದನ್ನು ಅರ್ಜುನ ಇಲ್ಲಿ ಸ್ಪಷ್ಟವಾಗಿಯೇ ತಿಳಿಸಿರುವನು. ಇದರಿಂದಾಗಿ ಭೀಮನ ಹಿರಿಮೆ ಅಪೂರ್ವ ಎಂಬುದು ಮತ್ತೊಮ್ಮೆ ದೃಢಪಡುವುದು.

ಪುನಃ ಕೃಷ್ಣೇನ ಪೃಷ್ಟಃ ಸನ್ ಸ್ವಾಭಿಪ್ರಾಯಮುವಾಚ ಸಃ ।
ತಚ್ಛ್ರುತ್ವಾ ಗರ್ಹಯಿತ್ವೈನಂ ಪುನರಾಹ ಜನಾರ್ದನಃ ॥ ೧೨೨ ॥

ಅ: ಮತ್ತೆ ಕೃಷ್ಣ ಕೇಳಿದಾಗ ಅರ್ಜುನ ತನ್ನ ಮನೋಗತವನ್ನು ತಿಳಿಸಿದ. ಅದನ್ನು ಕೇಳುತ್ತಲೇ ಕೃಷ್ಣ ಅವನನ್ನು ಬೈದು ಮತ್ತೆ ತಿಳಿಸಿದ.

ವಿ: ೧) ಪೂಜ್ಯನಾದ ಅಣ್ಣನನ್ನು ನಿಂದಿಸಿದ್ದರಿಂದ ತನಗೆ ಗುರುಹತ್ಯಾ ಪಾಪವೊದಗಿದೆ. ಅಂತಹ ಪಾಪಕ್ಕೆ ಆತ್ಮಹತ್ಯೆಯೇ ಪ್ರಾಯಶ್ಚಿತ್ತ ಅದರಿಂದಾಗಿ ತನ್ನನ್ನು ಕೊಂದುಕೊಳ್ಳಲೆಂದು ಹಾಗೆ ಖಡ್ಗ ಕೈಗೆತ್ತಿಕೊಂಡೆ ಎಂದು ಅರ್ಜುನ ನುಡಿಯಲು ಕೃಷ್ಣ ಅರ್ಜುನನನ್ನು ಮತ್ತೊಮ್ಮೆ ಬೈದು ತಿಳುವಳಿಕೆ ನೀಡಿದ ಎಂದರ್ಥ.

ಆತ್ಮಹತ್ಯೆ ಮಹಾಪಾಪ

ಮತಿಪೂರ್ವಂ ದೇಹನಾಶಾತ್ ಪಾಪಂ ಮಹದವಾಪ್ಯತೇ ।
ಧರ್ಮಾರ್ಥಕಾಮಮೋಕ್ಷಾಣಾಂ ಸಾಧನಂ ದೇಹತೋಽಸ್ತಿ ಯತ್ ॥ ೧೨೩ ॥

ಅ: ಬುದ್ಧಿಪೂರ್ವಕವಾಗಿ ದೇಹನಾಶಮಾಡಿಕೊಳ್ಳುವುದು ಮಹಾಪಾತಕಕ್ಕೆ ಕಾರಣ. ದೇಹದಿಂದ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳ ಸಾಧನೆ ಆಗುವುದಲ್ಲವೇ.

ವಿ: ೧) ದೇಹ ಸಾಧನಶರೀರ ಎಂದೇ ಪ್ರಸಿದ್ಧ. ಧರ್ಮಾದಿ ನಾಲ್ಕು ಪುರುಷಾರ್ಥಗಳನ್ನು ಪಡೆಯಲು ಅಗತ್ಯವಾದ ಸಾಧನವನ್ನು ದೇಹದಿಂದಲೇ ಮಾಡಬೇಕು.

೨) ಅಂತಹ ಅಮೂಲ್ಯವಾದ ದೇಹವನ್ನು ತಿಳಿದೇ ನಾಶಮಾಡಿಕೊಳ್ಳುವುದು ಮಹಾ ಪಾತಕ, ಆದ್ದರಿಂದ ಆತ್ಮಹತ್ಯೆ ಘೋರ ಪಾಪವೇ ಸರಿ ಎಂದರ್ಥ.

---

೧೨೨. ಸ್ವಾಭಿಪ್ರಾಯಮುವಾಚ ಸ ಇತ್ಯತ್ರ ಸ್ವಾಭಿಪ್ರಾಯಂ = ಪುಣ್ಯಶ್ಲೋಕಂ ಧರ್ಮರತಂ ದಯಾಶೀಲಂ ಜ್ಯೇಷ್ಠಂ ವಿನಿಂದ್ಯ ಕಥಂ ಜೀವಾಮಿ। ಅತಃ ಸ್ವಶಿರ ಏವ ಸ್ವಾಸಿನಾ ಛಿನದ್ಮೀತಿ ಸ್ವಾಭಿಪ್ರಾಯಮಿತ್ಯರ್ಥಃ ॥ – (ವಾ.)

೧೨೩. ಮತಿಪೂರ್ವಂ ದೇಹಹಾನಾತ್ – (ಜ. ಪಾಠ.)

೧೨೩. ಸಾಧನಂ ದೇಹತೋಽಸ್ತಿ ಯದಿತ್ಯತ್ರ ಸಾಧನಂ= ಸಿದ್ಧಿಃ ಭಾವೇ ಲ್ಯುಟ್। ದೇಹತ ಏವಾಸ್ಯ ಕರಾಭ್ಯಾಂ ಸಂಧ್ಯಾವಂದನಾದಿಕರಣಾತ್ ಧರ್ಮಸಿದ್ಧಿಃ। ಯಾಚನಾರ್ಥಂ ಪದ್ಭ್ಯಾಂ ರಾಜಮಂದಿರಾದಿಗಮನಾದಿನಾಽರ್ಥ-ಸಿದ್ಧಿಃ। ವಾಗಾದಿನಾ ಶ್ರವಣಮನನಾದೇಃ ಕರಣಾತ್ ಮೋಕ್ಷಸಿದ್ಧಿರಿತಿ ಭಾವಃ ॥ – (ವಾ.)

೩) ಆತ್ಮಹತ್ಯೆ ಮಾಡಿಕೊಳ್ಳುವ ಜನತೆಗೆ ಕೃಷ್ಣ ನೀಡಿರುವ ಎಚ್ಚರವಿದು ಎಂದು ಭಾವಿಸಬೇಕು. ಎಂತಹ ನೋವಿನ ಪ್ರಸಂಗದಲ್ಲೂ ಮನುಷ್ಯ ಅದನ್ನು ಸರಿಯಾದ ರೀತಿಯಲ್ಲಿ ಪರಿಹರಿಸಿಕೊಳ್ಳುವ ಮಾರ್ಗವನ್ನು ತಿಳಿಯಲು ಪ್ರಯತ್ನಿಸಬೇಕೇ ಹೊರತು ಆತ್ಮಹತ್ಯೆಯಂತಹ ಹೀನಕಾರ್ಯಕ್ಕೆ ತೊಡಗಬಾರದು.

೪) ಜನ ತಿಳಿದಿರುವಂತೆ ಆತ್ಮಹತ್ಯೆ ಸಮಸ್ಯೆಗಳಿಗೆ ಪರಿಹಾರವಲ್ಲ, ಅದೇ ಒಂದು ಮಹಾಸಮಸ್ಯೆ ಎಂದರ್ಥ.

ಗುರುನಿಂದೆಯೇ ಗುರುಹತ್ಯೆ - ಆತ್ಮಪ್ರಶಂಸೆಯೇ ಆತ್ಮಹತ್ಯೆ

ಅತೋ ಮಾ ತ್ಯಜ ದೇಹಂ ತು ಕುರು ಚಾತ್ಮಪ್ರಶಂಸನಮ್ ।
ವಧೋ ಗುರೂಣಾಂ ತ್ವಂಕಾರಃ ಸ್ವಪ್ರಶಂಸೈವ ಚಾತ್ಮನಃ ॥ ೧೨೪ ॥

ಅ: ಆದ್ದರಿಂದ ನೀನು ದೇಹವನ್ನು ತೊರೆಯಬೇಡ, ಆದರೆ ಆತ್ಮಪ್ರಶಂಸೆಯನ್ನು ಮಾಡಿಕೋ. ನೀನು ಎಂದು ಕರೆಯುವುದೇ ಗುರುಹಿರಿಯರ ವಧೆ, ಸ್ವಪ್ರಶಂಸೆಯೇ ಆತ್ಮಹತ್ಯೆ.

ವಿ: ೧) ತ್ವಂಕಾರದಿಂದ ಗುರುಹಿರಿಯರನ್ನು ಕೊಂದ ಪಾಪ ಘಟಿಸುವಂತೆ ಆತ್ಮಪ್ರಶಂಸೆಯಿಂದ ಆತ್ಮಹತ್ಯೆಯ ಪಾಪ ಘಟಿಸುವುದು ಎಂದರ್ಥ. ಪೂಜ್ಯನಾದ ಧರ್ಮರಾಜನನ್ನು ನಿಂದಿಸುವ ಮೂಲಕ ಅವನನ್ನು ಕೊಂದಂತಾಗಿರುವುದರಿಂದ ಪ್ರತಿಜ್ಞೆ ಈಡೇರಿದೆ.

೨) ಆದರೆ, ಹಾಗೆ ಅವನನ್ನು ಕೊಂದದ್ದು ವಾಸ್ತವಿಕವಾಗಿ ಅಲ್ಲದೇ ಮಾತುಗಳಿಂದ ಮಾತ್ರವಾದ್ದರಿಂದ ಅದಕ್ಕೆ ಪ್ರಾಯಶ್ಚಿತ್ತವಾಗಿ ಆತ್ಮಪ್ರಶಂಸೆಯ ಮೂಲಕ ಆತ್ಮಹತ್ಯೆ ಮಾಡಿಕೊಳ್ಳ–ಬೇಕೇ ಹೊರತು ನಿಜವಾಗಿಯೂ ದೇಹವನ್ನು ನಾಶಮಾಡಿಕೊಳ್ಳುವ ಮೂಲಕ ಸರ್ವಥಾ ಅಲ್ಲ.

೩) ಗುರುಹಿರಿಯರನ್ನು ನಿಂದಿಸುವುದು ಮಹಾಪಾಪ; ಅದರಂತೆ ತನ್ನನ್ನು ಹೊಗಳಿ–ಕೊಳ್ಳುವುದೂ ಸಹ ಮಹಾಪಾಪ ಎಂಬ ಅಪೂರ್ವತತ್ತ್ವ ಇಲ್ಲಿ ನಿರೂಪಿತವಾಗಿದೆ.

೪) ಶಾಸ್ತ್ರ ಒಟ್ಟು ಹೇಳಿದ್ದು ಮಹಾತ್ಮರ ನಿಂದೆ ಬೇಡ, ಸ್ವಪ್ರಶಂಸೆಯೂ ಬೇಡ. ಜನ ಮಾಡುವುದು ಮಾತ್ರ ಮಹಾತ್ಮರ ನಿಂದೆ, ಮತ್ತು ಸ್ವಪ್ರಶಂಸೆಗಳನ್ನೇ. ಭಾಗವತಸಾರೋದ್ಧಾರದಲ್ಲಿ

---

೧೨೪. ಗುರೂಣಾಂ ಸ್ವೋಚ್ಚನಾಮ್ । –(ವ.)

೧೨೪. ಬ್ರವೀಹಿ ವಾಚಾऽದ್ಯ ಗುಣಾನಿಹಾತ್ಮನಸ್ತಥಾ ಹತಾತ್ಮಾ ಭವಿತಾऽಸಿ ಪಾರ್ಥ ॥
–ಇತ್ಯಾದಿ ಶ್ರೀಕೃಷ್ಣವಾಕ್ಯ ಭಾರತ (ಕರ್ಣ. ೭೦/೨೯)

೧೨೪. ಸರ್ವಥಾऽನಾರ್ಯಕರ್ಮೈತತ್ ಪ್ರಶಂಸಾ ಸ್ವಯಮಾತ್ಮನಃ । –ಭಾರತ (ಉದ್ಯೋಗೇ. ೭೬/೬)

೧೨೪. ತ್ವಂಕಾರೋऽಪಿ ಗುರೂಣಾಂ ವಧಃ ಆತ್ಮನಃ । ಸ್ವಸ್ಯ ಸ್ವಪ್ರಶಂಸೈವ ಸ್ವಕರ್ತೃಕಪ್ರಶಂಸಾऽಪಿ ಆತ್ಮನಂ ಸ್ವಯಂ ವಧ ಇತಿ । –(ಸ.)

ಈ ಎರಡು ಪ್ರಸಂಗಗಳನ್ನು ಮಹನ್ನಿಂದಾವರ್ಜನಪ್ರಕರಣ, ಆತ್ಮಪ್ರಶಂಸಾಪ್ರಕರಣ ಎಂಬ ಎರಡು ಪ್ರಕರಣಗಳಲ್ಲಿ ವಿಶೇಷವಾಗಿ ವಿವರಿಸಿರುವುದು ಗಮನಾರ್ಹ. ಇದರಿಂದಾಗಿ ಮಹಾತ್ಮರ ಹತ್ಯೆ ಹಾಗೂ ಆತ್ಮಹತ್ಯೆ ಎಂಬ ಎರಡು ಪಾತಕಗಳನ್ನು ಒಟ್ಟಾಗಿಯೇ ಸಂಪಾದಿಸಿಕೊಂಡಂತಾ-ಗುವುದು ಎಂಬ ಎಚ್ಚರವನ್ನು ಇಲ್ಲಿ ನೀಡಲಾಗಿದೆ.

ಇತ್ಯುಕ್ತಃ ಸ ತ್ವಹಂಕಾರಾಚ್ಛಶಂಸ ಸ್ವಗುಣಾನಲಮ್ ॥ ೧೨೫ ॥

ಅ: ಕೃಷ್ಣ ಹೀಗೆನ್ನಲು ಅರ್ಜುನ ಅಹಂಕಾರದಿಂದ ತನ್ನ ಗುಣಗಳನ್ನು ಬಹಳವಾಗಿ ಹೇಳಿಕೊಂಡ.

ಗುರುನಿಂದಾऽऽತ್ಮಪೂಜಾ ಚ ನ ಧರ್ಮಾಯ ಭವೇತ್ ಕ್ವಚಿತ್ ।
ತಥಾऽಪ್ಯರ್ಜುನಹಾರ್ದಂ ತತ್ ಸಂಪ್ರಕಾಶ್ಯ ಜನಾರ್ದನಃ ।
ತಸ್ಯ ಲಜ್ಜಾಂ ಸಮುತ್ಪಾದ್ಯ ನಾಶಯಿತ್ವಾ ಚ ತಂ ಮದಮ್ ॥ ೧೨೬ ॥

ಅ: ಗುರುಗಳ ನಿಂದೆ ಹಾಗೂ ಆತ್ಮಪ್ರಶಂಸೆ ಎಂದೂ ಧರ್ಮಸಾಧನೆಗೆ ಕಾರಣವಾಗವು. ಆದರೂ, ಅರ್ಜುನನ ಆಂತರ್ಯವನ್ನು ಶ್ರೀಕೃಷ್ಣ ಹಾಗೆ ಪ್ರಕಟಪಡಿಸಿದ. ಅವನಿಗೆ ಲಜ್ಜೆಯನ್ನು ಹುಟ್ಟಿಸಿ, ಅವನಿಗೆ ಹುಟ್ಟಿದ ಅಹಂಕಾರವನ್ನು ಪರಿಹರಿಸಿದ.

ವಿ: ಶ್ರೀಕೃಷ್ಣ ಈ ಪ್ರಸಂಗದ ಮೂಲಕ ಅರ್ಜುನನ ಮನಸ್ಸಿನೊಳಗೆ ಹುದುಗಿದ್ದ ಅಹಂಕಾರ-ವನ್ನು ಹಾಗೂ ಧರ್ಮರಾಜನ ಒಳಗಿನ ಅಸಮಾಧಾನವನ್ನು ಹೊರಗೆ ಹಾಕಿಸಿ ಅವನಿಗೆ ನಾಚಿಕೆ ಹುಟ್ಟಿಸಿ ಅವನ ಉದ್ಧಾರಕ್ಕೆ ಕಾರಣನಾದ ಎಂದರ್ಥ.

ಅರ್ಜುನನ ಅಹಂಕಾರ ಖಂಡನೆ

ನಾಹಂ ವೇದ ಪರಂ ಧರ್ಮಂ ಕೃಷ್ಣ ಏವ ಗತಿರ್ಮಮ ।
ಇತಿ ಭಾವಂ ಸಮುತ್ಪಾದ್ಯ ದೋಷಾನ್ ನಾಶಯಿತುಂ ಹರಿಃ ।
ಕಾರಯಾಮಾಸ ತತ್ಸರ್ವಮರ್ಜುನೇನ ಜಗತ್ಪತಿಃ ॥ ೧೨೭ ॥

ಅ: ನಾನು ಮುಖ್ಯ ಧರ್ಮವನ್ನು ತಿಳಿದವನಲ್ಲ, ನನಗೆ ಕೃಷ್ಣನೇ ಗತಿ ಎಂಬ ಭಾವವನ್ನು ಚೆನ್ನಾಗಿ ಹುಟ್ಟಿಸಿ ಅವನ ದೋಷಗಳನ್ನು ಪರಿಹರಿಸಲೆಂದು ಜಗದೊಡೆಯನಾದ ಕೃಷ್ಣ ಅರ್ಜುನನಿಂದ ಅದೆಲ್ಲವನ್ನೂ ಮಾಡಿಸಿದ.

---

೧೨೬. ಅರ್ಜುನೇನ ತತ್ಸರ್ವಂ ಗುರುನಿಂದಾऽऽತ್ಮಪ್ರಶಂಸನಾದಿಕಮ್ । -(ಜ.)

ವಿ: ೧) ಒಮ್ಮೆ ಅರ್ಜುನ ಆಗಲೇ ಗೀತೆಯನ್ನು ಕೇಳಿದವನಾಗಿದ್ದರೂ ಅದರ ಭಾವವನ್ನು ಪೂರ್ಣವಾಗಿ ಗ್ರಹಿಸದೇ ಯಾಂತ್ರಿಕವಾಗಿ ನಡೆದುಕೊಂಡದ್ದು ಅವನಿಗಿನ್ನೂ ಪರಿಪಕ್ವತೆ ಪೂರ್ಣವಾಗಿ ಲಭಿಸಿಲ್ಲ ಎಂಬುದಕ್ಕೆ ದ್ಯೋತಕವಾಯಿತು. ಕೃಷ್ಣ ಈ ಪ್ರಸಂಗದ ಮೂಲಕ ಅವನ ಆ ನ್ಯೂನತೆಯನ್ನು ಪರಿಹರಿಸಿ ಹೆಚ್ಚು ಪರಿಪಾಕ ಹುಟ್ಟುವಂತೆ ಮಾಡಿ ಅನುಗ್ರಹಿಸಿದ ಎಂದರ್ಥ.

ಮತ್ತೆ ಒಂದಾದ ಅರ್ಜುನ ಯುಧಿಷ್ಠಿರರು

ತತ ಏತದವಿಜ್ಞಾನಾತ್ ಕುಪಿತೋ ನೃಪತಿರ್ಭೃಶಮ್ ।
ಆಹಾಸ್ತು ರಾಜಾ ಭೀಮಸ್ತ್ವಂ ಯುವಾ ಮಾಂ ಜಹಿ ಚ ಸ್ವಯಮ್ ।
ವನಂ ವಾ ವಿಫಲೋ ಯಾಮೀತ್ಯುಕ್ತ್ವೋತ್ತಸ್ಥೌ ಸ್ವತಲ್ಪತಃ ॥ ೧೨೮ ॥

ಅ: ಬಳಿಕ ಇದಾವುದರ ಪರಿವೆಯಿಲ್ಲದ ಧರ್ಮರಾಜ ಬಹಳವಾಗಿ ಕೆರಳಿದ, ಹಾಗೂ ಹೇಳಿದ: 'ಭೀಮ ಮಹಾರಾಜನಾಗಲಿ, ನೀನು ಯುವರಾಜನಾಗು; ನನ್ನನ್ನು ನೀನೇ ಕೊಂದುಬಿಡು. ಇಲ್ಲವಾದಲ್ಲಿ ಅಪ್ರಯೋಜಕನಾದ ನಾನು ಕಾಡಿಗೆ ತೆರಳುವೆನು' ಎನ್ನುತ್ತಾ ತಾನು ಮಲಗಿದ್ದ ಹಾಸಿಗೆಯಿಂದ ಮೇಲೆದ್ದ.

ವಿ: ಆ ವೇಳೆಗೆ ಧರ್ಮರಾಜ ಹಾಸಿಗೆಯಿಂದ ಮೇಲೇಳುತ್ತಾ ತಿಳಿಸಿದ – ಅಪ್ರಯೋಜಕನಾದ ತಾನಿನ್ನು ಬದುಕಿ ಪ್ರಯೋಜನವೇನು? ತನ್ನನ್ನು ಅರ್ಜುನ ಕೊಲ್ಲಲಿ ಅಥವಾ ಕಾಡಿಗೆ ತೆರಳಿ ತಾನು ತಪಸ್ಸು ಮಾಡುವೆನು ಎಂದು ತಿಳಿಸಿದ. ಅರ್ಜುನನಿಂದ ಅಂತಹ ಕಟು ವಾಕ್ಯಗಳನ್ನು ಕೇಳಿದ ಅವನು ಹಾಗೆ ನುಡಿದದ್ದು ಸಹಜವೇ ಆಗಿತ್ತು.

ಶ್ರೀಕೃಷ್ಣನಿಂದ ಬದುಕಿದ ಅರ್ಜುನ ಧರ್ಮರಾಜರು

ತಂ ವಾಸುದೇವಃ ಪ್ರತಿಗೃಹ್ಯ ಹೇತು-
ಮುಕ್ತ್ವಾ ಸರ್ವಂ ಶಮಯಾಮಾಸ ನೇತಾ ।
ಪಾರ್ಥಶ್ಚ ಭೂಪಸ್ಯ ಪಪಾತ ಪಾದಯೋಃ
ಕ್ಷಮಾಪಯನ್ ಸೋಽಪಿ ಸುಪ್ರೀತಿಮಾಪ ॥ ೧೨೯ ॥

---

೧೨೮. ಗಚ್ಛಾಮ್ಯಹಂ ವನಮವೋದ್ಧ ಪಾಪಃ ಸುಖಂ ಭವಾನ್ ವರ್ತತಾಂ ಮದ್ವಿಹೀನಃ ।
ಯೋಗ್ಯೋ ರಾಜೋ ಭೀಮಸೇನೋ ಮಹಾತ್ಮಾ..... – ಯುಧಿಷ್ಠಿರವಚನ (ಕರ್ಣ. ೭೦/೪೫, ೪೬)

ಅ: ಲೋಕನಾಯಕನಾದ ಶ್ರೀಕೃಷ್ಣ ಅವನನ್ನು ತಡೆದು ನಿಲ್ಲಿಸಿ ಎಲ್ಲ ಕಾರಣವನ್ನು ತಿಳಿಸಿ ಸಮಾಧಾನಪಡಿಸಿದ. ಅರ್ಜುನ ಧರ್ಮರಾಜನ ಎರಡೂ ಪಾದಗಳಿಗೆರಗಿ ಕ್ಷಮೆ ಬೇಡಿದ. ಧರ್ಮರಾಜ ತುಂಬಾ ಸಂತುಷ್ಟನಾದ.

ಎ: ೧) ಅಂತಹುದೇ ಪ್ರಸಂಗ ಭೀಮನಿಗೆ ಒದಗಿದ್ದಾಗ ಭೀಮ ಅತ್ಯಂತ ವಿವೇಕದಿಂದ ವರ್ತಿಸಿ ''ತೂಬರ ಎಂದು ಕರ್ಣ ಕರೆದಿರುವುದರಿಂದ ನನ್ನ ಪ್ರತಿಜ್ಞೆಯಂತೆ ನಾನು ಅವನನ್ನು ಕೊಲ್ಲಬೇಕಾಗಿದೆ. ಆದರೆ ಅವನನ್ನು ಕೊಲ್ಲುವುದಾಗಿ ನೀನು ಪ್ರತಿಜ್ಞೆ ಮಾಡಿರುವೆ. ಈಗ ನೀನೇ ತಿಳಿಸು ನಾನೇ ಅವನನ್ನು ಕೊಲ್ಲಲೋ, ಅಥವಾ ನೀನೇ ಕೊಲ್ಲುತ್ತೀಯಾ?'' ಎಂದು ಅರ್ಜುನನಿಗೆ ತಿಳಿಸಿ ಅರ್ಜುನ ತಾನೇ ಕೊಲ್ಲುವುದಾಗಿ ಮತ್ತೊಮ್ಮೆ ಸ್ಫುಟಪಡಿಸಿದಾಗ ಭೀಮ ತಾನೇ ಕೊಲ್ಲದೇ ಅರ್ಜುನನಿಗೆ ಅವಕಾಶ ನೀಡಿದ. ಇದರಿಂದ ಭೀಮ ಪೂರ್ಣಪ್ರಜ್ಞ ಎಂಬುದು ಮನವರಿಕೆ–ಯಾಗುವುದು.

೨) ಆದರೆ, ಮಹಾರಾಜನಾದ ಧರ್ಮರಾಜನಾಗಲೀ, ಅಪ್ರತಿಮ ಧನುರ್ಧಾರಿಯೆನಿಸಿದ ಅರ್ಜುನನಾಗಲೀ ಹಾಗೆ ಪೂರ್ಣಪ್ರಜ್ಞತ್ವವನ್ನು ಹೊಂದಿದವರಲ್ಲ ಎಂಬುದಕ್ಕೂ ಇದು ನಿದರ್ಶನ.

ಅರ್ಜುನ ಯುಧಿಷ್ಠಿರರು ಮಾಡಿದ ಕೃಷ್ಣಸ್ತುತಿ

ತೌ ಭ್ರಾತರೌ ವಾಸುದೇವಪ್ರಸಾದಾ–
ನ್ಮಹಾಪದೋ ಮುಕ್ತಿಮಾಪ್ಯಾತಿಹೃಷ್ಟೌ।
ಭಕ್ತ್ಯಾ ಸಮಸ್ತಾಧಿಪತಿಂ ಶಶಂಸತು–
ಸ್ತ್ವಯಾ ಸಮಃ ಕೋ ನು ಹರೇ ಹಿತೋ ನಃ ॥ ೧೩೦ ॥

ಅ: ಆ ಇಬ್ಬರು ಸೋದರರು ಶ್ರೀಕೃಷ್ಣನ ಅನುಗ್ರಹದಿಂದ ಮಹಾಪತ್ತಿನಿಂದ ಬಿಡುಗಡೆ ಹೊಂದಿದವರಾಗಿ ತುಂಬಾ ಸಂತೋಷಿಸಿದರು. ಭಕ್ತಿಯಿಂದ ಸಕಲೇಶ್ವರನಾದ ಕೃಷ್ಣನನ್ನು ಬಹಳವಾಗಿ ಕೊಂಡಾಡಿದರು: 'ಹರಿಯೇ, ನಮಗೆ ನಿನಗಿಂತ ಮಿಗಿಲಾದ ಮತ್ತೊಬ್ಬ ಹಿತೈಷಿ ಯಾರಿರುವರು?'.

---

೧೩೦. ಅನುನೀತೋಽಸ್ಮಿ ಗೋವಿಂದ ತಾರಿತಶ್ಚಾಸ್ಮಿ ಮಾಧವ।
ಮೋಚಿತಾ ವ್ಯಸನಾದ್ ಘೋರಾದ್ ವಯಮದ್ಯ ತ್ವಯಾಽಚ್ಯುತ॥
– ಯುಧಿಷ್ಠಿರವಚನ (ಕರ್ಣ. ೭೦/೫೮-೬೦)

ಎಃ ೧) ಅಂತೂ ಧರ್ಮರಾಜ, ಅರ್ಜುನರ ಪಾಲಿನ ಅತ್ಯಂತ ದೊಡ್ಡ ಆಪತ್ತು ಪರಿಹಾರವಾಯಿತು. ಆ ಪ್ರಸಂಗದಲ್ಲಿ ಒಂದು ವೇಳೆ ಕೃಷ್ಣನು ಎದುರಿಗೆ ಇರುತ್ತಿರಲಿಲ್ಲವಾದರೆ, ಎಂತಹ ಮಹಾದುರಂತ ನಡೆದು ಹೋಗುತ್ತಿತ್ತು ಎಂಬುದನ್ನು ಊಹಿಸಬಹುದು. ಅದು ತಪ್ಪಲು ಅವನ ಪರಮಾನುಗ್ರಹ ಕಾರಣವಾಯಿತು. ಅದನ್ನು ಅವರೂ ಸಹ ಆಗಲೇ ಅರ್ಥ ಮಾಡಿಕೊಂಡರು. ಅದಕ್ಕೆಂದು ಕೃಷ್ಣನನ್ನು ಬಹಳವಾಗಿ ಸ್ತುತಿಸಿ ತಮ್ಮ ಕೃತಜ್ಞತೆಯನ್ನು ಸಮರ್ಪಿಸಿದರು.

೨) ನಿತ್ಯ ಜೀವನದಲ್ಲೂ ಹೀಗೆಯೇ, ಎಂತಹ ಪರಮಾಪ್ತರ ಮಧ್ಯೆಯೂ ಯಾವುದೋ ಸಣ್ಣ ಕಾರಣಕ್ಕೆ ಅಪಾರವಾದ ವೈರಭಾವ ಹುಟ್ಟುವುದು ಹೊಸತೇನಲ್ಲ. ತಂದೆ ಮಕ್ಕಳು, ಗಂಡ–ಹೆಂಡಿರು, ಅಣ್ಣ–ತಮ್ಮಂದಿರು, ಅಕ್ಕ–ತಂಗಿಯರು, ಸ್ವಾಮಿ–ಭೃತ್ಯರು ಮೊದಲಾಗಿ ಯಾರಲ್ಲಿಯೂ ಒಂದೇ ತೆರನಾದ ಪ್ರೀತಿ ಇರಬೇಕೆಂಬ ನಿಯಮವಿಲ್ಲ. ಆದರೂ ಅಂತಹ ಪ್ರೀತಿ ಉಳಿದುಕೊಂಡು ಬಂದಿದೆಯಾದಲ್ಲಿ ಅದಕ್ಕೆ ಶ್ರೀಹರಿಯ ಪರಮಾನುಗ್ರಹವೇಮುಖ್ಯ ಕಾರಣ ಎಂದು ತಿಳಿಯಬೇಕು. ಬೃಹದಾರಣ್ಯಕೋಪನಿಷತ್ತಿನಲ್ಲಿ ಈ ವಿಷಯ ವಿವರವಾಗಿ ನಿರೂಪಿತವಾಗಿದೆ.

ಸ ಹೋವಾಚ ನ ವಾ ಅರೇ ಪತ್ಯುಃ ಕಾಮಾಯ ಪತಿಃ ಪ್ರಿಯೋ ಭವತ್ಯಾತ್ಮನಸ್ತು ಕಾಮಾಯ ಪತಿಃ ಪ್ರಿಯೋ ಭವತಿ। ನ ವಾ ಅರೇ ಜಾಯಾಯೈ ಕಾಮಾಯ ಜಾಯಾ ಪ್ರಿಯಾ ಭವತ್ಯಾತ್ಮನಸ್ತು ಕಾಮಾಯ ಜಾಯಾ ಪ್ರಿಯಾ ಭವತಿ। ನ ವಾ ಅರೇ ಪುತ್ರಾಣಾಂ ಕಾಮಾಯ ಪುತ್ರಾಃ ಪ್ರಿಯಾ ಭವಂತ್ಯಾತ್ಮನಸ್ತು ಕಾಮಾಯ ಪುತ್ರಾಃ ಪ್ರಿಯಾ ಭವಂತಿ। ನ ವಾ ಅರೇ ವಿತ್ತಸ್ಯ ಕಾಮಾಯ ವಿತ್ತಂ ಪ್ರಿಯಂ ಭವತ್ಯಾತ್ಮನಸ್ತು ಕಾಮಾಯ ವಿತ್ತಂ ಪ್ರಿಯಂ ಭವತಿ। ನ ವಾ ಅರೇ ಬ್ರಹ್ಮಣಃ ಕಾಮಾಯ ಬ್ರಹ್ಮ ಪ್ರಿಯಂ ಭವತ್ಯಾತ್ಮನಃ ಕಾಮಾಯ ಬ್ರಹ್ಮ ಪ್ರಿಯಂ ಭವತಿ। ನ ವಾ ಅರೇ ಕ್ಷತ್ರಸ್ಯ ಕಾಮಾಯ ಕ್ಷತ್ರಂ ಪ್ರಿಯಂ ಭವತ್ಯಾತ್ಮನಸ್ತು ಕಾಮಾಯ ಕ್ಷತ್ರಂ ಪ್ರಿಯಂ ಭವತಿ। ನ ವಾ ಅರೇ ಲೋಕಾನಾಂ ಕಾಮಾಯ ಲೋಕಾಃ ಪ್ರಿಯಾ ಭವಂತ್ಯಾತ್ಮನಸ್ತು ಕಾಮಾಯ ಲೋಕಾಃ ಪ್ರಿಯಾ ಭವಂತಿ। ನ ವಾ ಅರೇ ದೇವಾನಾಂ ಕಾಮಾಯ ದೇವಾಃ ಪ್ರಿಯಾ ಭವಂತ್ಯಾತ್ಮನಸ್ತು ಕಾಮಾಯ ದೇವಾಃ ಪ್ರಿಯಾ ಭವಂತಿ। ನ ವಾ ಅರೇ ಭೂತಾನಾಂ ಕಾಮಾಯ ಭೂತಾನಿ ಪ್ರಿಯಾಣಿ ಭವಂತ್ಯಾತ್ಮನಸ್ತು ಕಾಮಾಯ ಭೂತಾನಿ ಪ್ರಿಯಾಣಿ ಭವಂತಿ। ನ ವಾ ಅರೇ ಸರ್ವಸ್ಯ ಕಾಮಾಯ ಸರ್ವಂ ಪ್ರಿಯಂ ಭವತ್ಯಾತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ। ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯೋ ಮೈತ್ರೇಯ್ಯಾತ್ಮನೋ ವಾ ಅರೇ ದರ್ಶನೇನ ಶ್ರವಣೇನ ಮತ್ಯಾ ವಿಜ್ಞಾನೇನೇದಂ ಸರ್ವಂ ವಿದಿತಮ್॥ – ಬೃಹದಾರಣ್ಯಕೋಪನಿಷತ್ (೪/೪/೫)

೨) ಶ್ರೀಮದ್ಭಾಗವತವೂ ಇದನ್ನು ನಿರೂಪಿಸಿದೆ.

'ಪ್ರಾಣಬುದ್ಧಿಮನಃಖಾತ್ಮದೇಹಾಪತ್ಯಧನಾದಯಃ।
ಯತ್ಸಂಪರ್ಕಾತ್ ಪ್ರಿಯಾ ಆಸಂಸ್ತತಃ ಕೋನ್ವಪರಃ ಪ್ರಿಯಃ' ॥

– ಭಾಗವತ(೧೦/೩೨/೨೭)

೩) ವಾಲಿ–ಸುಗ್ರೀವರು ಇಬ್ಬರು ಪ್ರಾಣಪ್ರಿಯ ಸೋದರರಾಗಿದ್ದರೂ ಸುಗ್ರೀವನ ಪ್ರಾರ್ಥನೆಯಂತೆಯೇ ವಾಲಿ ಶ್ರೀರಾಮನಿಂದ ಹತನಾದ ರಾಮಾಯಣದ ಕಥೆ ಇಂತಹ ಮತ್ತೊಂದು ಅಪೂರ್ವ ನಿದರ್ಶನ ಎಂದು ತಿಳಿಯಬೇಕು.

೪) ಧರ್ಮಾರ್ಜುನರ ಮಧ್ಯದ ವಿರಸವನ್ನು ಹೀಗೆಪರಿಹರಿಸಿದ ಕೃಷ್ಣ ಕೌರವ ಪಾಂಡವರ ಮಧ್ಯದ ವಿರಸವನ್ನು ಮಾತ್ರ ಪರಿಹರಿಸದೇ ಸಮರದಲ್ಲಿಯೇ ಕೊನೆಗಾಣಿಸಿದ. ಅದಕ್ಕೆ ಧರ್ಮಾರ್ಜುನರು ಪರಮ ಸಾತ್ವಿಕರಾಗಿದ್ದುದು, ಕೌರವ ಪಾಂಡವರಲ್ಲಿ ಪಾಂಡವರು ಯೋಗ್ಯರಾಗಿದ್ದಂತೆ, ಕೌರವರು ಅಯೋಗ್ಯರಾಗಿದ್ದುದೂ ಆಯಾ ರೀತಿಯಲ್ಲಿ ವರ್ತಿಸಲು ಕಾರಣ ಎಂದು ತಿಳಿಯಬೇಕು.

ಕರ್ಣವಧೆಗಾಗಿ ಅರ್ಜುನನ ಪಯಣ

ತತಃ ಪ್ರಣಮ್ಯ ಬೀಭತ್ಸುರಗ್ರಜಂ ಪರಿರಂಭಿತಃ ।
ತೇನಾಭಿನಂದಿತಃ ಪ್ರೀತ್ಯಾ ಚಾಶೀರ್ಭಿಃ ಪ್ರಯಯೌ ಯುಧೇ ॥ ೧೩೧ ॥

ಅ: ಅರ್ಜುನ ಆ ಬಳಿಕ ಅಣ್ಣನಾದ ಧರ್ಮರಾಜನಿಗೆ ನಮಸ್ಕರಿಸಿ ಅವನಿಂದ ಪ್ರೀತಿ-ಯಿಂದ ಆಲಿಂಗಿತನಾಗಿ ಅವನ ಆಶೀರ್ವಚನಗಳಿಂದ ಅಭಿನಂದಿತನಾಗಿ ಯುದ್ಧಕ್ಕೆ ತೆರಳಿದ.

ವಿ: ಯುಧಿಷ್ಠಿರಾದಿಗಳಲ್ಲಿ ಮುಂಚಿನಂತೆ ಪೂರ್ಣಪ್ರೀತಿಯೇ ಮಾಡಿದ್ದುದನ್ನು ಈ ಮಾತುಗಳಲ್ಲಿ ಕಾಣಬಹುದು.

ಕೃಷ್ಣನಿಂದ ಅರ್ಜುನನ ತೇಜೋವರ್ಧನೆ

ತಂ ಶಂಕಿತಂ ಕರ್ಣಜಯೇ ಸ್ವಿನ್ನಗಾತ್ರಂ ಹರಿಸ್ತದಾ ।
ಸಂಕೀರ್ತ್ಯ ಪೂರ್ವಕರ್ಮಾಣಿ ನರಾವೇಶಂ ವಿಶೇಷತಃ ।
ವ್ಯಂಜಯಾಮಾಸ ಧೈರ್ಯಂ ಚ ತಸ್ಯಾಸೀತ್ ತೇನ ಸುಸ್ಥಿರಮ್ ॥ ೧೩೨ ॥

ಅ: ಕರ್ಣನನ್ನು ಗೆಲ್ಲುವ ಬಗ್ಗೆ ಅರ್ಜುನ ಸಂದೇಹಗೊಂಡು ಬೆವತುಹೋದಾಗ, ಕೃಷ್ಣ ಅರ್ಜುನನಿಗೆ ಅವನ ಹಿಂದಿನ ಸಾಧನೆಗಳನ್ನು ವಿವರಿಸಿ ಅವನೊಳಗಿದ್ದ ನರಾವೇಶವನ್ನು ಅಭಿವ್ಯಕ್ತಗೊಳಿಸಿದ. ಅದರಿಂದಾಗಿ ಅವನ ಧೈರ್ಯ ಸ್ಥಿರಗೊಂಡಿತು.

---

೧೩೨. ಪ್ರಯಾತಸ್ಯಾಥ ಪಾರ್ಥಸ್ಯ ಮಹಾನ್ ಸ್ವೇದೋ ವ್ಯಜಾಯತ ।
ಚಿಂತಾ ಚ ವಿಪುಲಾ ಜಜ್ಞೇ ಕಥಂ ಚೇದಂ ಭವಿಷ್ಯತಿ ॥ (ಕರ್ಣ. /೭೨/೧೬)

ವಿ: ೧) ಕರ್ಣನನ್ನು ಕೊಂದೇ ಮರಳುವುದಾಗಿ ಯುಧಿಷ್ಠಿರನಿಗೆ ವಚನ ನೀಡಿ ಶಿಬಿರದಿಂದ ಹೊರಟ ಅರ್ಜುನನಿಗೆ ಅದನ್ನು ಸಾಧಿಸಲು ಸಾಧ್ಯವಾದೀತೇ ಎಂಬ ಶಂಕೆ ಮೂಡಿ ಭೀತಿಯಿಂದ ಮೈ ಬೆವತಾಗ, ಕೃಷ್ಣ ಅವನಿಗೆ ಧೈರ್ಯ ತುಂಬಿದ ಎಂದರ್ಥ.

೨) ಅರ್ಜುನನಿಗೆ ಸಾರಥಿಯಾದ ಕೃಷ್ಣ ಅವನಿಗೆ ಹೀಗೆ ಧೈರ್ಯ ತುಂಬುತ್ತಿದ್ದರೆ, ಕರ್ಣನಿಗೆ ಸಾರಥಿಯಾಗಿದ್ದ ಶಲ್ಯ ಅವನಿಗೆ ಇದ್ದ ಧೈರ್ಯವನ್ನೂ ಕಳೆದುಹಾಕುತ್ತಿದ್ದ ಎಂಬುದನ್ನೂ ಗಮನಿಸಬೇಕು.

೩) ಶ್ರೀಹರಿಯಂತೆ ಉತ್ತೇಜನ ನೀಡಿ ಇತರರಾರೂ ಕಾರ್ಯಸಾಧನೆಗೆ ನೆರವಾಗಲಾರರು ಎಂಬುದಕ್ಕೂ ಇದು ದ್ಯೋತಕ.

ಭೀಮನಿಂದ ಶತ್ರುನಾಶ

ಭೀಮಸ್ತದಾ ಶತ್ರುಬಲಂ ಸಮಸ್ತಂ
ವಿದ್ರಾವಯಾಮಾಸ ಜಘಾನ ಚಾಜೌ ।
ವೀರಾನ್ ರಣಾಯಾಭಿಮುಖಾನ್ ಸ್ವಯಂತ್ರಾ
ಕುರ್ವಂಶ್ಚ ವಾರ್ತಾ ರಮಮಾಣ ಏವ ॥ ೧೩೩ ॥

ಅ: ಆಗ ಭೀಮಸೇನ ಸಕಲ ಶತ್ರುಸೇನೆಯನ್ನೂ ಹೊಡೆದೋಡಿಸುತ್ತಿದ್ದ. ಯುದ್ಧಕ್ಕೆಂದು ಆಗಮಿಸಿದ ವೀರರುಗಳನ್ನು ಯುದ್ಧದಲ್ಲಿ ಕೊಂದುಹಾಕಿದ. ತನ್ನ ಸಾರಥಿಯೊಂದಿಗೆ ವಿನೋದದ ವಾರ್ತೆಯನ್ನು ಆಡುತ್ತಲೇ ಅದನ್ನೆಲ್ಲ ಮಾಡಿದ.

ವಿ: ೧) ಅರ್ಜುನ ಹಾಗೆ ಶಿಬಿರಕ್ಕೆ ಹೋಗಿ ಮರಳಿ ಬರುವವರೆಗೂ ಭೀಮಸೇನ ಯುದ್ಧದ ಭಾರವನ್ನೆಲ್ಲ ತಾನೊಬ್ಬನೇ ಹೊತ್ತು ಶತ್ರುಸೇನೆಯನ್ನು ಅನಾಯಾಸದಿಂದ ಸದೆಬಡಿಯುತ್ತಿದ್ದ. ತನ್ನ ಸಾರಥಿಯಾದ ವಿಶೋಕನೊಂದಿಗೆ ವಿನೋದದ ಮಾತುಗಳನ್ನಾಡುತ್ತಲೇ ಅಂತಹ ಮಹತ್ಕಾರ್ಯವನ್ನು ಲೀಲಾಜಾಲವಾಗಿ ಮಾಡುತ್ತಿದ್ದ.

೨) ಇದು 'ಭೀಮಸೇನಸಮೋ ನಾಸ್ತಿ' ಎಂಬುದಕ್ಕೆ ನಿದರ್ಶನ. ಅರ್ಜುನಾದಿ ಇತರರು ಈ ರೀತಿಯಾಗಿ ಸಮಸ್ತ ಯುದ್ಧಭಾರವನ್ನು ಹೊತ್ತವರಲ್ಲ ಎಂಬುದನ್ನೂ ಗಮನಿಸಬೇಕು.

---

೧೩೩. ಸ್ವಯಂತ್ರಾ ಕುರ್ವನ್ನಿತ್ಯತ್ರ ಸ್ವಯಂತ್ರಾ = ಸ್ವಸಾರಥಿನಾ ವಿಶೋಕೇನ – (ವಾ.)

೧೩೩. ವಾರ್ತಾಂ ಯುದ್ಧಗೋಷ್ಠೀಂ ಕುರ್ವನ್ ..... ರಮಮ್ಪ್ರಾಣ ಇತ್ಯನೇನ ಭಯರಹಿತತ್ವಂ ಸೂಚಿತಮ್। – (ಜ.)

೧೩೩. ಭಾರತ ಕರ್ಣಪರ್ವ (ಅ. ೭೬ ಶ್ಲೋ. ೧-೪೦)

ಅಸ್ಮಿನ್ ಯುದ್ಧೇ ಭೀಮಸೇನ ತ್ವಯಿ ಭಾರಃ ಸಮಾಹಿತಃ ।
ಧೂರರ್ಜುನೇನ ವೋಢವ್ಯಾ ವೋಢವ್ಯಾ ಇತರೇ ಜನಾಃ ॥ – (೨/೧೬೮)

ಭೀಮನಿಂದ ಶಕುನಿಯ ಪರಾಭವ

ತದಾऽऽಸದತ್ ತಂ ಶಕುನಿಃ ಸಸೈನ್ಯೋ
ದುರ್ಯೋಧನಸ್ಯಾವರಜೈರುಪೇತಃ ।
ತಂ ಭೀಮಸೇನೋ ವಿರಥಂ ನಿರಾಯುಧಂ
ವಿಧಾಯ ಬಾಣೈರ್ಭುವಿ ಚ ನ್ಯಪಾತಯತ್ ॥ ೧೩೪ ॥

ಅ: ಆಗ ಶಕುನಿ ತನ್ನ ಸೇನೆಯೊಂದಿಗೂ, ದುರ್ಯೋಧನನ ತಮ್ಮಂದಿರೊಂದಿಗೂ ಕೂಡಿಕೊಂಡು ಭೀಮಸೇನನ ಮೇಲೆ ಧಾವಿಸಿದ. ಭೀಮ ಅವನನ್ನು ಕೂಡಲೇ ವಿರಥನನ್ನಾಗಿಯೂ, ನಿರಾಯುಧನನ್ನಾಗಿಯೂ ಮಾಡಿ ಬಾಣಗಳಿಂದ ಹೊಡೆದು ನೆಲಕ್ಕೆ ಕೆಡವಿದ.

ಭೀಮ ಶಕುನಿಯನ್ನು ಕೊಲ್ಲದಿರಲು ಕಾರಣ

ನ ಜಘ್ನಿವಾಂಸ್ತಂ ಸಹದೇವಭಾಗಂ
ಪ್ರಕಲ್ಪಿತಂ ಸ್ವೇನ ತದಾऽಕ್ಷಗೋಷ್ಠ್ಯಮ್ ।
ತಂ ಮೂರ್ಚ್ಛಿತಂ ಶ್ವಾಸಮಾತ್ರಾವಶೇಷಂ
ದುರ್ಯೋಧನಃ ಸ್ವರಥೇನಾಪನಿನ್ಯೇ ॥ ೧೩೫ ॥

ಅ: ಅವನು ಸಹದೇವನ ಪಾಲು ಎಂಬುದಾಗಿ ತಾನೇ ದ್ಯೂತದ ಸಭೆಯಲ್ಲಿ ವ್ಯವಸ್ಥೆ ಮಾಡಿದ್ದರಿಂದ ಭೀಮ ಶಕುನಿಯನ್ನು ಕೊಲ್ಲಲಿಲ್ಲ. ಮೂರ್ಛಿತನಾಗಿ ಉಸಿರು ಮಾತ್ರ ಉಳಿದುಕೊಂಡಿದ್ದ ಶಕುನಿಯನ್ನು ದುರ್ಯೋಧನ ತನ್ನ ರಥದಲ್ಲಿ ದೂರಕ್ಕೆ ಕರೆದೊಯ್ದ.

---

೧೩೫. ಭಾರತ (ಕರ್ಣ. ೭೭/೪೮-೭೦)

ತಸ್ಯಾಶ್ವಾಂಶ್ಚತುರೋ ಹತ್ವಾ ಸೂತಂ ಚೈವ ವಿಶಾಂಪತೇ ।
ಧ್ವಜಂ ಚಿಚ್ಛೇದ ಭಲ್ಲೇನ ತ್ವರಮಾಣಃ ಪರಾಕ್ರಮೀ ॥ – ಭಾರತ (ಕರ್ಣ. ೭೭/೭೬)

ನಿಪಪಾತ ತದಾ ಭೂಮೌ ಕಿಂಚಿತ್ಕಾಕೋ ನರಾಧಿಪಃ ।
..... ಪುತ್ರಸ್ತವ ವಿಶಾಂಪತೇ ॥ ಅಪೋವಾಹ ರಥೇನಾಜೌ ... ॥ – ಭಾರತ (ಕರ್ಣ. ೭೭/೭೦, ೭೧)

ವಿಃ ೧) ಭೀಮು ಆಗ ಶಕುನಿಯನ್ನು ಕೊಲ್ಲಬಹುದಿತ್ತು ಆದರೆ, ಅವನು ಸಹದೇವನಿಂದಲೇ ಸಾಯಬೇಕೆಂದು ದ್ಯೂತ ಸಭೆಯಲ್ಲಿ ತಾನು ಹಾಗೂದ್ರೌಪದಿ ಇಬ್ಬರೂ ಶಪಥ ತೊಟ್ಟಿದ್ದರಿಂದ ಅವನನ್ನು ಕೊಲ್ಲದೇ ಬಿಟ್ಟನು ಎಂದರ್ಥ. ಹೀಗೆ ಪ್ರತೀ ಸಂದರ್ಭದಲ್ಲೂ ವಿವೇಕದಿಂದ ನಡೆದು–ಕೊಳ್ಳುವುದು ಭೀಮನ ವಿಶೇಷ ಹಿರಿಮೆ. ಭೀಮನಿಂದ ಶಕುನಿಯ ಸೋಲು ತತ್ವಜ್ಞಾನಕ್ಕೆ ನಾಸ್ತಿಕ್ಯ ಮಣಿಯುವ ರೀತಿಗೂ ಅಪೂರ್ವ ನಿದರ್ಶನ. ಭೀಮು ಜ್ಞಾನದ ಸಂಕೇತವಾಗಿದ್ದಂತೆ ಶಕುನಿ ನಾಸ್ತಿಕ್ಯದ ಸಂಕೇತವೂ ಆಗಿರುವನು ಎಂಬ ವಿವರ ಈಗಾಗಲೇ ಬಂದಿದೆ. ದ್ಯೂತಕಿತವರನ್ನು ಸ್ವತಃ ಕೊಲ್ಲಬಾರದು.

೨) ಹನುಮಂತನಾಗಿದ್ದಾಗ ಅಕ್ಷಕುಮಾರನನ್ನು ಸಂಹರಿಸಿದ್ದು ದ್ಯೂತಕಿತವರನ್ನು ವಧಿಸುವುದಕ್ಕೆ ಸಂಕೇತದಂತಿದೆ.

ಭೀಮನಿಂದ ಹತ್ತು ಜನ ಕೌರವರ ಪಲಾಯನ

ದುರ್ಯೋಧನಸ್ಯಾವರಜಾ ದಶಾತ್ರ
ಪ್ರದುದ್ರುವುರ್ಭೀಮಸೇನಂ ವಿಹಾಯ ।
ತದಾऽರ್ಜುನಂ ವಾಸುದೇವಂ ಚ ದೃಷ್ಟ್ವಾ
ಪ್ರೀತಃ ಶ್ರುತ್ವಾ ಧರ್ಮರಾಜಪ್ರವೃತ್ತಿಮ್ ॥ ೧೩೬ ॥

ಅ: ಆ ಯುದ್ಧದಲ್ಲಿ ದುರ್ಯೋಧನನ ಹತ್ತು ಜನ ತಮ್ಮಂದಿರು ಭೀಮನನ್ನು ಬಿಟ್ಟು ದೂರಕ್ಕೆ ವೇಗದಿಂದ ಓಡಿದರು. ಭೀಮಸೇನ ಆಗ ಅರ್ಜುನ ಕೃಷ್ಣರನ್ನು ನೋಡಿ ಹಾಗೂ ಭೀಮಸೇನ ಧರ್ಮರಾಜನ ಕ್ಷೇಮವಾರ್ತೆಯನ್ನು ಕೇಳಿ ಸಂತುಷ್ಟನಾದ.

ವಿಃ ಶಕುನಿಯೊಂದಿಗೆ ಬಂದಿದ್ದ ಕೌರವರು ಭೀಮನ ಪರಾಕ್ರಮವನ್ನು ನೋಡಿಯೇ ಓಡಿಬಿಟ್ಟರು. ಭೀಮು ಕೃಷ್ಣಾರ್ಜುನರ ಮೂಲಕ ಧರ್ಮರಾಜನ ಕ್ಷೇಮವಾರ್ತೆಯನ್ನು ಕೇಳಿ ಆನಂದಿಸಿದ. ಭೀಮನ ಹಿತೋಕ್ತಿಯನ್ನು ಅರ್ಥಮಾಡಿಕೊಂಡು ಅರ್ಜುನ ಶಿಬಿರಕ್ಕೆ ಹೋಗದಿದ್ದಲ್ಲಿ ಆ ಅನರ್ಥ ಘಟಿಸುತ್ತಿರಲಿಲ್ಲ. ಯುದ್ಧದಂತಹ ಪರಮ ಕರ್ತವ್ಯವನ್ನು ತೊರೆದು ಹೋದದ್ದರಿಂದ ಅಂತಹ ಸಂಕಟದ ಪರಿಸ್ಥಿತಿ ನಿರ್ಮಾಣವಾಯಿತು. ಹಾಗೆ ಮಾಡದ ಭೀಮು ಆನಂದದಿಂದ ಶತ್ರು ಜಯವನ್ನು ಸಾಧಿಸಿದ್ದ– 'ಸ್ವಧರ್ಮೇ ನಿಧನಂ ಶ್ರೇಯಃ ...'.

---

೧೩೬. ಭೀಮಸೇನಂ ಸಮಾಸಾದ್ಯ ಮುಹೂರ್ತಂ ಸೋऽಭ್ಯವರ್ತತ ।
ಸಮಾಗಮ್ಯ ಚ ಭೀಮೇನ ಮಂತ್ರಯಿತ್ವಾ ಚ ಫಾಲ್ಗುನಃ ॥
ವಿಶಲ್ಯಮರುಜಂ ಚಾಸ್ಮೈ ಕಥಯಿತ್ವಾ ಯುಧಿಷ್ಠಿರಮ್ ।
ಭೀಮಸೇನಾಭ್ಯನುಜ್ಞಾತಸ್ತತಃ ಪ್ರಾಯಾದ್ ಧನಂಜಯಃ ॥ – ಭಾರತ (ಕರ್ಣ. ೮೦/೨೩,೨೪)

ಭೀಮ ದುಃಶಾಸನರ ಯುದ್ಧ

ಪುನಶ್ಚ ನಿಘ್ನಂತಮರಿಪ್ರವೀರಾನ್
ವಿದ್ರಾವಯಂತಂ ಚ ನಿಜಾಂ ವರೂಥಿನೀಮ್ ।
ಸಸಾರ ದುಃಶಾಸನ ಆತ್ತಧನ್ವಾ
ಭೀಮೋಽಪಿ ತಂ ಸಿಂಹ ಇವಾಭಿಪೇದಿವಾನ್ ॥ ೧೩೭ ॥

ಅ: ಮತ್ತೆ ಶತ್ರು ಮಹಾವೀರರನ್ನು ಕೊಲ್ಲುತ್ತಲೂ, ತಮ್ಮ ಸೇನೆಯನ್ನು ಹೊಡೆದೋಡಿಸುತ್ತಲೂ ಇದ್ದ ಭೀಮನನ್ನು ದುಶ್ಶಾಸನ ಧನುಸ್ಸನ್ನು ಕೈಗೆತ್ತಿಕೊಂಡು ಎದುರಿಸಿದ. ಭೀಮ ಸಿಂಹದಂತೆ ಅವನನ್ನು ಆಕ್ರಮಿಸಿದ.

ಭೀಮನಿಂದ ನೆಲಕಚ್ಚಿದ ದುಃಶಾಸನ

ತಂ ರೂಕ್ಷವಾಚೋ ಮುಹುರರ್ಪಯಂತಂ
ವಿಧಾಯ ಭೀಮೋ ವಿರಥಂ ಕ್ಷಣೇನ ।
ಪ್ರಗೃಹ್ಯ ಭೂಮೌ ನಿಪಾತ್ಯ ವಕ್ಷೋ
ವಿದಾರಯಾಮಾಸ ಗದಾಪ್ರಹಾರತಃ ॥ ೧೩೮ ॥

ಅ: ಕ್ರೂರನುಡಿಗಳನ್ನು ಮತ್ತೆ ಮತ್ತೆ ನುಡಿಯುತ್ತಿದ್ದ ಆ ದುಶ್ಶಾಸನನನ್ನು ಭೀಮ ಕ್ಷಣದಲ್ಲೇ ವಿರಥನನ್ನಾಗಿ ಮಾಡಿ ಹಿಡಿದು ಭೂಮಿಯ ಮೇಲೆ ಬೀಳಿಸಿ ಗದಾಪ್ರಹಾರದಿಂದ ಅವನ ಎದೆಯನ್ನು ಸೀಳಿದ.

ವಿ: ೧) ಭೀಮ ದುಶ್ಶಾಸನರ ಮಧ್ಯೆ ಭಯಂಕರ ಯುದ್ಧ ನಡೆದು ಭೀಮ ಕ್ಷಣಮಾತ್ರದಲ್ಲೇ ದುಶ್ಶಾಸನನ ರಥವನ್ನು ಪುಡಿಮಾಡಿ, ಅವನನ್ನು ಕೆಳಕ್ಕೆ ಕೆಡವಿ ಅವನ ಎದೆಯನ್ನು ಸೀಳಿ ಹಾಕಿದ.

೨) ದುಶ್ಶಾಸನನು ಆಗಲೂ ಭೀಮನನ್ನು ಕೆಟ್ಟ ಮಾತುಗಳಿಂದ ದೂಷಿಸುತ್ತಲೇ ಇದ್ದ. ತನ್ನ ಬಲಗೈಯನ್ನು ಮೇಲೆತ್ತಿ ತಾನು ಇದೇ ಕೈಯಿಂದಲೇ ದ್ರೌಪದಿಯ ಕೇಶಪಾಶಗಳನ್ನು ಎಳೆದದ್ದು ಎಂದು ಹೇಳಿಕೊಂಡ. ಕೂಡಲೇ ಭೀಮಸೇನ ಅವನ ಕೈಯನ್ನು ಕತ್ತೆಸೆದು ಅವನ ಎದೆಯನ್ನು ಸೀಳಿಹಾಕಿದ ಎಂಬ ವಿವರ ಮಹಾಭಾರತದಲ್ಲಿದೆ (ಕರ್ಣಪರ್ವ ೮೩/೨೩,೨೪):

---

೧೩೮. ಏವಂ ಕ್ರುದ್ಧೋ ಭೀಮಸೇನಃ ಕರೇಣ ಉತ್ಪಾಟಯಾಮಾಸ ಭುಜಂ ಮಹಾತ್ಮಾ।
ದುಃಶಾಸನಂ ತೇನ ಸ ವೀರಮಧ್ಯೇ ಜಘಾನ ವಜ್ರಾಶನಿಸಂನಿಭೇನ ॥
ಉತ್ಕೃತ್ಯ ವಕ್ಷಃ ಪತಿತಸ್ಯ ಭೂಮಾವಥಾಪಿಬಚ್ಛೋಣಿತಮಸ್ಯ ಕೋಷ್ಣಮ್ ॥ (ಕರ್ಣ. ೮೩/೨೨,೨೮)

ಅನೇನ ಯಜ್ಞಸೇನ್ಯಾ ಮೇ ಭೀಮ ಕೇಶಾ ವಿಕರ್ಷಿತಾಃ ।
ಪಶ್ಯತಾಂ ಕುರುಮುಖ್ಯಾನಾಂ ಯುಷ್ಮಾಕಂ ಚ ಸಭಾಸದಾಮ್ ॥ ...

ದುಃಶಾಸನನ ಎದೆಬಗೆದ ಭೀಮ

ಆಕ್ರಮ್ಯ ಕಂಠಂ ಚ ಪದೋದರೇಽಸ್ಯ
ನಿವಿಶ್ಯ ಪಶ್ಯನ್ ಮುಖಮಾತ್ತರೋಷಃ ।
ವಿಕೋಶಮಾಕಾಶನಿಭಂ ವಿಧಾಯ
ಮಹಾಸಿಮಸ್ಯೋರಸಿ ಸಂಚಖಾನ ॥ ೧೩೯ ॥

ಅ: ಕಾಲಿನಿಂದ ದುಶ್ಶಾಸನನ ಕತ್ತನ್ನು ಒತ್ತಿ ಅವನ ಹೊಟ್ಟೆಯ ಮೇಲೆ ಕುಳಿತು ಬಹಳ ಕೋಪದಿಂದ ಕೂಡಿದವನಾಗಿ ಅವನ ಮುಖವನ್ನೇ ದಿಟ್ಟಿಸುತ್ತಾ ಆಕಾಶವರ್ಣದಿಂದ ಕೂಡಿದ್ದ ತನ್ನ ಮಹಾಖಡ್ಗವನ್ನು ಒರೆಯಿಂದ ತೆಗೆದು ಅವನ ಎದೆಯಲ್ಲಿ ಜೋರಾಗಿ ಚುಚ್ಚಿದ.

ವಿ: ಭೀಮ ಪ್ರತಿಜ್ಞೆ ಮಾಡಿದ್ದಂತೆ(೨೧/೩೫ಳ) ಅವನ ಎದೆಯನ್ನು ಖಡ್ಗದಿಂದ ಸೀಳಿ ಹಾಕಿದ ಎಂದರ್ಥ.

ರಕ್ತಪಾನದ ನಾಟಕ

ಕೃತ್ವಾಽಸ್ಯ ವಕ್ಷಸ್ಯುರುಸತ್ತಟಾಕಂ
ಪಪೌ ನಿಕಾಮಂ ತೃಷಿತೋಽಮೃತೋಪಮಮ್ ।
ತಚ್ಚೋಣಿತಾಂಭೋ ಭ್ರಮದಕ್ಷಮೇನಂ
ಸಂಸ್ಮಾರಯಾಮಾಸ ಪುರಾ ಕೃತಾನಿ ॥ ೧೪೦ ॥

ಅ: ಅವನ ಎದೆಯಲ್ಲಿ ದೊಡ್ಡ ರಕ್ತದ ಮಡುವನ್ನು ನಿರ್ಮಿಸಿ ಬಾಯಾರಿದವನು ಅಮೃತ ಕುಡಿಯುವಂತೆ ಅವನ ರಕ್ತವನ್ನು ಯಥೇಚ್ಛವಾಗಿ ಪಾನ ಮಾಡಿದ. ದುಶ್ಶಾಸನನ ಕಣ್ಣುಗಳು ತಿರುಗುತ್ತಿದ್ದಂತೆ ಅವನು ಹಿಂದೆ ಮಾಡಿದ್ದ ದುಷ್ಕಾರ್ಯಗಳನ್ನು ಭೀಮ ನೆನಪಿಸತೊಡಗಿದ.

---

೧೩೯. ಅಸಿಂ ಸಮುದ್ಯಮ್ಯ ಸಿತಂ ಸುಧಾರಂ ಕಂಠೇ ಪದಾಽಽಕ್ರಮ್ಯ ಚ ವೇಪಮಾನಮ್ । (ಕರ್ಣ. ೮೩/೧೯)

೧೪೦. ಪ್ರಮಾಣಕೋಟ್ಯಾಂ ಶಯನಂ ಕಾಲಕೂಟಭೋಜನಮ್ ।
ದಂಶನಂ ಚಾಹಿಭಿಸ್ತೀಕ್ಷ್ಣೈಃ ದಾಹೋ ಜಾತುಗೃಹೇ ತು ಯತ್ ।
ದ್ಯೂತೇನ ರಾಜ್ಯಹರಣಂ ಅರಣ್ಯೇ ವಸತಿಶ್ಚ ಯಾ ।
ದ್ರೌಪದ್ಯಾಃ ಕೇಶಪಕ್ಷಸ್ಯ ಗ್ರಹಣಂ ಚ ಸುದಾರುಣಮ್ ॥
– ಇತ್ಯಾದಿ ಭೀಮವಚನಾದ್ದುಃಶಾಸನಂ ಪ್ರತಿ ಕರ್ಣಪರ್ವಣಿ (೮೩/೪೪-೪೬) ॥ – (ವಿ.)

ಎ: ಇಲ್ಲಿಯೂ ಸಹ ಸಭೆಯಲ್ಲಿ ಪ್ರತಿಜ್ಞೆಗೈದಿದ್ದಂತೆ (೨೧/೩೫೪) ಅವನ ರಕ್ತವನ್ನು ಪಾನ ಮಾಡಿದ ಎಂದರ್ಥ. ವಾಸ್ತವವಾಗಿ ಭೀಮು ರಕ್ತಪಾನ ಮಾಡಲಿಲ್ಲ ಎಂಬ ವಿವರ ಮುಂದೆ ಬಂದಿದೆ (೨೮/೨೧೧, ೨೧೨).

ವಾಕ್ಸಾಯಕಾಂಶ್ಚಾಸ್ಯ ಪುರಾ ಸಮರ್ಪಿತಾನ್
ಸಂಸ್ಮಾರಯಾಮಾಸ ಪುನಃ ಪುನರ್ಭೃಶಮ್ ।
ದಂತಾಂತರಂ ನ ಪ್ರವಿವೇಶ ತಸ್ಯ
ರಕ್ತಂ ಹ್ಯಪೇಯಂ ಪುರುಷಸ್ಯ ಜಾನತಃ ॥ ೧೪೧ ॥

ಅ: ದುಶ್ಶಾಸನ ಹಿಂದೆ ನುಡಿದಿದ್ದ ಅವನ ಬಾಣದಂತಹ ಚುಚ್ಚು ಮಾತುಗಳನ್ನೆಲ್ಲ ಮತ್ತೆ ಮತ್ತೆ ಬಹಳವಾಗಿ ನೆನಪಿಸಿದ. ನರಶೋಣಿತ ಪಾನಯೋಗ್ಯವಲ್ಲ ಎಂದು ಭೀಮ ತಿಳಿದವನಾದ್ದರಿಂದ ದುಶ್ಶಾಸನನ ರಕ್ತ ಅವನ ಹಲ್ಲಿನ ಒಳಗೆ ಪ್ರವೇಶಿಸಲಿಲ್ಲ.

ಎ: ೧) ಮೇಲ್ನೋಟಕ್ಕೆ ಭೀಮು ದುಶ್ಶಾಸನನ ರಕ್ತವನ್ನು ಪಾನ ಮಾಡುತ್ತಿದ್ದಂತೆ ಕಂಡರೂ ವಾಸ್ತವಿಕವಾಗಿ ಭೀಮು ಅವನ ರಕ್ತವನ್ನು ಪಾನ ಮಾಡುತ್ತಿರಲಿಲ್ಲ ಎಂಬ ವಿಶೇಷ ಪ್ರಮೇಯ ಇಲ್ಲಿ ಸೂಚಿತವಾಗಿದೆ.

೨) ಮಹಾಭಾರತವನ್ನು ಕುರಿತು ಬರೆದ ಯಾರೂ ಈ ಅಪೂರ್ವ ಅಂಶವನ್ನು ಗಮನಿಸಿಲ್ಲ ಎಂಬುದು ಅಚ್ಚರಿಯ ಸಂಗತಿ. ಭೀಮಸೇನ ರಕ್ತಪಾನಮಾಡುವುದಾಗಿ ಪ್ರತಿಜ್ಞೆ ಮಾಡಿದ್ದರಿಂದ ಅದನ್ನು ಸತ್ಯಗೊಳಿಸಲೆಂದು ಕುಡಿದಂತೆ ನಟಿಸಿದನೇ ಹೊರತು ನಿಜವಾಗಿಯೂ ಕುಡಿಯಲಿಲ್ಲ ಎಂದು ತಿಳಿಯಬೇಕು. ಪ್ರತಿಜ್ಞೆ ಮಾಡುವಾಗಲೇ ಭೀಮು ಅದನ್ನು ತಿಳಿಸಿರುವುದನ್ನು ಗಮನಿಸಬೇಕು – **'ಪಿಬಾಮಿ ರಕ್ತಂ ಜಗತಃ ಸಮಕ್ಷಂ'**. ನಾನು ಲೋಕದ ಕಣ್ಣಿಗೆ ಕಾಣುವಂತೆ ರಕ್ತ ಕುಡಿಯುವೆ, ನಿಜಕ್ಕೂ ರಕ್ತ ಕುಡಿಯುವುದಿಲ್ಲ ಜನ ಹಾಗೆ ತಿಳಿಯುವಂತೆ ಮಾಡುವೆ ಎಂದು ಇದರ ಅಂತರಾರ್ಥ.

೩) ಇದನ್ನೆಲ್ಲ ಸ್ವತಃ ಭೀಮಸೇನ ಮುಂದೆ ಗಾಂಧಾರಿಗೆ ತಿಳಿಸುವನು (೨೮/೨೧೧, ೨೧೨).

೪) ರಕ್ತ ಕುಡಿಯುವೆನೆಂಬ ಮಾತು ಲೋಕದಲ್ಲೂ ಸಹ ಒಂದು ವಾಗ್ರೂಢಿಯಾಗಿ ಪ್ರಚಾರದಲ್ಲಿದೆ, ಅದಕ್ಕೆ ಕೊಲ್ಲುವೆನು ಎಂದಷ್ಟೇ ಅರ್ಥ. ಭೀಮು ಮಾಡಿದ್ದೂ ಅದನ್ನೇ ಎಂದು ತಿಳಿಯಬೇಕು.

೫) ಅಲ್ಲದೇ ಪುರಾಣಗಳ ಪರಿಭಾಷೆಯಂತೆ ಕೃತಯುಗದಲ್ಲಿ ಪ್ರಾಣ ಅಸ್ಥಿಗತ, ತ್ರೇತೆಯಲ್ಲಿ ಮಾಂಸಗತ, ದ್ವಾಪರದಲ್ಲಿ ರಕ್ತಗತ, ಕಲಿಯುಗದಲ್ಲಿ ಅನ್ನಗತ. ಅದು ದ್ವಾಪರಯುಗವಾದ್ದರಿಂದ

ಪ್ರಾಣ ರಕ್ತಗತ, ಆದ್ದರಿಂದ ರಕ್ತಹೀರುವೆ ಎಂಬುದಕ್ಕೆ ಪ್ರಾಣ ತೆಗೆಯುವೆ ಎಂದೇ ಮುಖ್ಯಾರ್ಥ–ವಾಗುವುದು ಎಂಬುದನ್ನೂ ಗಮನಿಸಬೇಕು.

೬) ಹೀಗೆ ಭೀಮನ ಪ್ರತಿಜ್ಞೆ ಒಂದು ವೃತ್ತಿಯಾಗಿರದೇ ಲೋಕಕ್ಕೆ ಎಚ್ಚರ ನೀಡುವಂತಹ ಒಂದು ಭಯಾನಕ ದೃಶ್ಯವಷ್ಟೇ ಆಗಿತ್ತು ಎಂಬುದನ್ನು ತಿಳಿಯಬೇಕು.

ಭೀಮ ಕಂಡ ಮನ್ಯುಸೂಕ್ತ

ತಥಾಽಪಿ ಶತ್ರುಪ್ರತಿಭೀಷಣಾಯ
ಪಪಾವಿವಾಸ್ವಾದ್ಯ ಪುನಃ ಪುನರ್ಭೃಶಮ್ ।
ಸ್ಮರನ್ ನೃಸಿಂಹಂ ಭಗವಂತಮೀಶ್ವರಂ
ಸ ಮನ್ಯುಸೂಕ್ತಂ ಚ ದದರ್ಶ ಭಕ್ತ್ಯಾ ॥ ೧೪೨ ॥

ಅ: ಆದರೂ ಶತ್ರುಗಳಿಗೆ ಭೀತಿ ಹುಟ್ಟಿಸಲೆಂದು ಭೀಮಸೇನ ಅವನ ರಕ್ತವನ್ನು ಮತ್ತೆ ಮತ್ತೆ ಆಸ್ವಾದಿಸಿ ಕುಡಿದಂತೆ ತೋರಿಸಿದ. ಭಗವಂತನೂ, ಸರ್ವೇಶ್ವರನೂ ಆದ ನರಸಿಂಹನನ್ನು ಸ್ಮರಿಸುತ್ತಾ ಭೀಮಸೇನ ಭಕ್ತಿಯಿಂದ ಮನ್ಯುಸೂಕ್ತವನ್ನು ಸಾಕ್ಷಾತ್ಕಾರ ಮಾಡಿಕೊಂಡ.

ವಿ: ೧) ಭೀಮಸೇನನ ಆ ಕಾರ್ಯ ನರಸಿಂಹ ರೂಪದ ಶ್ರೀಹರಿಯ ಹಿರಣ್ಯಕಶಿಪು ಸಂಹಾರದ ಕಾರ್ಯಕ್ಕೆ ಸ್ಮಾರಕವಾಗಿತ್ತು ಎಂಬ ಭಾವ ಇಲ್ಲಿದೆ. ಜಗತ್ತಿನ ಇತಿಹಾಸದಲ್ಲಿ ಶತ್ರುವನ್ನು ಹೀಗೆ ಅತ್ಯಂತ ಭಯಾನಕವಾಗಿ ಸಂಹರಿಸಿದ ಎರಡು ಪ್ರಸಂಗಗಳು ಇವು.

೨) ವಾಯುವಿನ ಆವೇಶವಿದ್ದ ಪ್ರಹ್ಲಾದನ ದ್ವೇಷಿಯಾದ ಹಿರಣ್ಯಕಶಿಪುವನ್ನು ಎದೆಬಗೆದು ನರಸಿಂಹರೂಪದಿಂದ ಶ್ರೀಹರಿ ಹಾಗೆ ಕೊಂದಿದ್ದರೆ, ವಾಯುದೇವರೇ ಆದ ಭೀಮಸೇನ ತನ್ನ ದ್ವೇಷಿಯನ್ನು ಹೀಗೆ ಎದೆಬಗೆದು ಸಂಹರಿಸಿದ.

---

೧೪೨. ದೇಹವಿಹ್ವಲತಾಪ್ರಾಪಕ ಅತ್ಯಲ್ಪಶ್ರಮವಿಧೂನನಂ ವಾನಿತಿ ಜ್ಞೇಯಮ್ । ಮನ್ಯುಸೂಕ್ತಮಿತಿ । ಮನ್ಯುಸೂಕ್ತಸ್ಯೈತದ್ದಿನೇ ಮುನಿದೇವೇಷು ಪ್ರಾಪ್ತತ್ವೇಽಪಿ ಇತಃ ಪೂರ್ವಂ ನರೇಷು ಪ್ರವೃತ್ತಭಾವಾತ್ । ಭೀಮಾನಧೀತಸ್ಯ ಜ್ಞಾತಸ್ಯ ತತ್ಪೂರ್ವಮನುಚ್ಚಾರಿತಸ್ಯ ತದಾನೀಮುಚ್ಚಾರಣೇನ ದದರ್ಶೇತ್ಯರ್ಥಃ । ಸ್ವಾಪೇಯಸ್ಯಾಪಿ ಸುರಾವದ್ ಹೋಮ್ಯತ್ವಂ ಸಂಭವತಿ। ಅತ ಏವೋಕ್ತಂ ಯದ್ ಘ್ರಾಣ ಭಕ್ಷೋವಿಹಿತಃ ಸುರಾಣಾಮಿತೀತಿ ಜ್ಞೇಯಂ।

– (ತಾ.)

* ಮನ್ಯುಸೂಕ್ತಕ್ಕೆ ಶ್ರೀಧೀರೇಂದ್ರತೀರ್ಥರು ಅಪೂರ್ವವ್ಯಾಖ್ಯಾನ ರಚಿಸಿರುವರು. ಗೂಢಕರ್ತೃಕವಾದ ಮನ್ಯುಸೂಕ್ತಭಾಷ್ಯ ಎಂಬ ವಿಸ್ತೃತವ್ಯಾಖ್ಯಾನವೊಂದು ನನ್ನ ಸಂಗ್ರಹದಲ್ಲಿದೆ.

೩) ಹೀಗೆ ಮನ್ಯುಸೂಕ್ತವನ್ನು ದರ್ಶನ ಮಾಡುತ್ತಾ ದುಃಶಾಸನನ ಎದೆ ಬಗೆದ ಭೀಮಸೇನ ಋಷಭಸೂಕ್ತವನ್ನು ದರ್ಶನ ಮಾಡುತ್ತಾ ದುರ್ಯೋಧನನ ತಲೆ ತುಳಿದ ವಿವರ ಮುಂದೆ ಬಂದಿದೆ (೨೮/೭೬). ಹೀಗೆ ಈ ಎರಡು ಸೂಕ್ತಗಳೂ ದೈತ್ಯಹನನಕ್ಕೆ ದ್ಯೋತಕವಾಗಿರುವುದು ವಿಶೇಷ.

೪) ಆವರೆಗೂ ದೇವಲೋಕದಲ್ಲಿ ಮಾತ್ರ ಅಧ್ಯಯನ ಪರಂಪರೆಯಲ್ಲಿದ್ದ ಮನ್ಯುಸೂಕ್ತ ಭೀಮಸೇನದೃಷ್ಟವಾಗಿ ಭೂಲೋಕದಲ್ಲೂ ಪ್ರಸಾರಕ್ಕೆ ಬರಲು ಕಾರಣವಾಯಿತು ಎಂಬ ವಿಶೇಷಾಂಶ ತಾಮ್ರಪರ್ಣೀಯದಲ್ಲಿದೆ.

'ಯಸ್ತೇ ಮನ್ಯೋ' ಇತ್ಯತೋ ನಾರಸಿಂಹಂ
ಸೋಮಂ ತಸ್ಮೈ ಚಾರ್ಪಯಚ್ಛೋಣಿತಾಖ್ಯಮ್ ।
ಯುದ್ಧಾಖ್ಯಯಜ್ಞೇ ಸೋಮಬುದ್ಧ್ಯಾ ಽರಿವಕ್ಷ
ಇಹೇತಿ ಸಾಮ್ನಾ ಗದಯಾ ವಿಭಿಂದನ್ ॥ ೧೪೩ ॥

ಅ: 'ಯಸ್ತೇ ಮನ್ಯೋ' ಎಂಬ ಮನ್ಯುನಾಮಕ ನರಸಿಂಹನೇ ದೇವತೆಯಾದ ಮನ್ಯುಸೂಕ್ತವನ್ನು ಕಾಣುತ್ತ ರಕ್ತವೆಂಬ ಸೋಮರಸವನ್ನು ಆ ಯುದ್ಧವೆಂಬ ಯಜ್ಞದಲ್ಲಿ ಭೀಮಸೇನ ನರಸಿಂಹನಿಗೆ ಸಮರ್ಪಿಸಿದ. ಆಗ ಶತ್ರುವಿನ ಎದೆಯನ್ನು ಸೋಮವೆಂದು ಬಗೆದು ಇಹ ಎಂಬ ಸಾಮಮಂತ್ರದಿಂದ ಗದೆಯಿಂದ ಜಜ್ಜಿಹಾಕಿದ.

ವಿ: ೧) ಯುದ್ಧವೇ ಯಜ್ಞ, ಬಾಯಿಯೇ ಆಹವನೀಯ ಎಂಬ ಅಗ್ನಿಕುಂಡ, ದುಃಶಾಸನನ ವಕ್ಷಸ್ಥಳವೇ ಸೋಮಲತೆ, ಗದೆಯೇ ಅದನ್ನು ಜಜ್ಜುವ ಕಲ್ಲು, ರಕ್ತವೇ ಅದರಿಂದ ಬಂದ ಸೋಮರಸ; ಅದನ್ನು ಭೀಮು ಜಜ್ಜುತ್ತಾ ಹೇಳಿದ ಮಂತ್ರ 'ಇಹ' ಎಂಬ ಸಾಮ ಎಂಬುದು ಇಲ್ಲಿಯ ವಿವರ.

---

೧೪೩. ಯಸ್ತೇ ಮನ್ಯೋ ವಿಧದ್ವಜ್ರಸಾಯಕೇತ್ಯಾದಿಕಂ ಮನ್ಯುಸೂಕ್ತಂ ಮನ್ಯುನಾಮ್ನೋ- ನೃಸಿಂಹಸ್ಯ ಪ್ರತಿಪಾದಕಂ ಸೂಕ್ತಮ್ । – (ಜ.)

೧೪೩. ನಾರಸಿಂಹಂ ನರಸಿಂಹದೇವತಾಕಂ ದುಃಶಾಸನವಕ್ಷೋವಿದಾರಕಾಲೇ ಸ್ವಯಂಪ್ರತಿಭಾಬಲೇನ ತೇನ ಮನ್ಯುಸೂಕ್ತೇನ ನೃಸಿಂಹಂ ತುಷ್ಟಾವೇತಿ ಭಾವಃ ॥ – (ವ.)

೨) ಭೀಮಸೇನ ಹೀಗೆ ರಣವನ್ನು ಯಜ್ಞವೆಂದು ಅನುಸಂಧಾನದಿಂದ ಶತ್ರುಗಳನ್ನು ಬಲಿಪಶುವಾಗಿ ನರಸಿಂಹನಿಗೆ ಸಮರ್ಪಿಸಿ ಅದನ್ನು ನರಸಿಂಹದೇವತಾಕವಾದ ಯಜ್ಞವಾಗಿ ಪರ್ಯವಸಾನ ಮಾಡಿದ ಎಂದು ಭಾವ.

೩) ಪಂಪಭಾರತ, ವೇಣೀಸಂಹಾರ, ಕುಮಾರವ್ಯಾಸಭಾರತ ಮೊದಲಾದ ಕೃತಿಗಳಲ್ಲಿ ಭೀಮಸೇನ ರಕ್ತವನ್ನೇ ಕುಡಿದ ಎಂದು ನಿರೂಪಿತವಾಗಿರುವುದು ಮಹಾಭಾರತಕ್ಕೆ ಅನುಗುಣ–ವಾದುದಲ್ಲ. ವೇಣೀಸಂಹಾರನಾಟಕದಲ್ಲಿ ಅದನ್ನು ಕುಡಿದದ್ದು ರಾಕ್ಷಸರಾಕ್ಷಸಿಯರು ಎಂಬ ಉಲ್ಲೇಖವಿರುವುದು ಗಮನಾರ್ಹ.

೪) ದ್ರೌಪದಿಯನ್ನು ಅಲ್ಲಿಗೆ ಕರೆಸಿ ಅವಳನ್ನು ತೊಡೆಯ ಮೇಲೆ ಕೂರಿಸಿಕೊಂಡು, ದುಶ್ಶಾಸನನ ರಕ್ತದಿಂದ ಅವಳ ತಲೆಗೂದಲನ್ನು ತೋಯಿಸಿ, ಅವನ ದಂತಪಂಕ್ತಿಯನ್ನೇ ಕಿತ್ತು ಬಾಚಣಿಗೆಯನ್ನಾಗಿ ಮಾಡಿ ಅವನ ಕರುಳನ್ನು ಹೂವಿನಂತೆ ಮುಡಿಸಿ ರಕ್ತದ ತಿಲಕವಿಟ್ಟ ಎಂಬ ವಿವರ ಕುಮಾರವ್ಯಾಸ ಭಾರತದಲ್ಲಿದೆ.

೫) ಆದರೆ, ಮಹಾಭಾರತದಲ್ಲಿ ಬಂದಿರುವ ವಿವರಗಳನ್ನು ಯಥಾವತ್ತಾಗಿ ನಿರೂಪಿಸಿರುವುದು ಶ್ರೀಮಧ್ವರ ಈ ಕೃತಿಯ ಹಿರಿಮೆ. ಕುಮಾರವ್ಯಾಸಭಾರತದ ವಿವರಗಳೆಲ್ಲಾ ಕೇವಲ ಕಲ್ಪನೆಯಾಗಿದ್ದು ಅಗ್ರಾಹ್ಯವಾಗಿವೆ ಎಂದು ತಿಳಿಯಬೇಕು.

೬) ದುಃಶಾಸನವಧೆಯ ಭಯಾನಕತೆಯನ್ನು ನಿರೂಪಿಸುವ ಭರದಲ್ಲಿ ಕವಿಯೇ ಹಾಗೆ ಭಾವೋದ್ವೇಗಕ್ಕೊಳಗಾಗಿ ಹಾಗೆ ಬರೆದಿರಬೇಕು ಎನ್ನದೆ ವಿಧಿಯಿಲ್ಲ.

೭) ಕೆಲವು ಹರಿದಾಸರ ಕೃತಿಗಳಲ್ಲೂ ಕುಮಾರವ್ಯಾಸಭಾರತದ ವಿವರಗಳು ಸೇರಿ–ಕೊಂಡಿವೆ. ಅದಕ್ಕೆ ಮುಖ್ಯ ಕಾರಣ ಅವು ಮೂಲತಃ ಜ್ಞಾನಿಗಳೆನಿಸಿದ ಹರಿದಾಸರ ಕೃತಿಗಳಾಗಿರದೇ, ಪ್ರಕ್ಷೇಪಗಳೆನ್ನದೇ ವಿಧಿಯಿಲ್ಲ.

೮) ಹರಿದಾಸರಂತಹ ಮಧ್ವದೀಕ್ಷೆಯ ಮಹನೀಯರು ಆಚಾರ್ಯರಿಗೆ ಅಸಮ್ಮತವಾದ ವಿವರಗಳನ್ನು ಹಾಗೆ ತಮ್ಮ ಕೃತಿಗಳಲ್ಲಿ ನಿರೂಪಿಸುವುದು ಸರ್ವಥಾ ಅಸಂಭಾವಿತ ಎಂಬುದನ್ನು ಗಮನಿಸಬೇಕು.

೯) ಭೀಮ ಹೀಗೆ ನರಸಿಂಹನ ಕಾರ್ಯವನ್ನು ಅನುಕರಿಸುವ ಮೂಲಕ ತಾನು ಶ್ರೀಹರಿಯ ಸಾಕ್ಷಾತ್ ಪ್ರತಿಬಿಂಬ ಎಂಬ ಪ್ರಮೇಯವನ್ನು ಸಹ ನಿರೂಪಿಸಿರುವನೆಂದು ತಿಳಿಯಬೇಕು – **'ಆಭಾಸಕೋಽಸ್ಯ ಪವನಃ ...'**.

ಭೀಮನಿಂದ ದುರ್ಯೋಧನಾದಿಗಳ ಭರ್ತ್ಸನೆ

ಉವಾಚ ವಾಚಂ ಪುರುಷಪ್ರವೀರಃ
ಸತ್ಯಾಂ ಪ್ರತಿಜ್ಞಾಂ ಲೋಕಮಧ್ಯೇ ವಿಧಾಯ ।
ಯಾಃ ಸಪತಯಸ್ತಾ ಅಪತಯೋ ಹಿ ಜಾತಾ
ಯಾ ಸಾऽಪತಿಃ ಸಾ ಸಪತಿಶ್ಚ ಜಾತಾ ॥ ೧೪೪ ॥

ಅ: ಪುರುಷಶ್ರೇಷ್ಠನಾದ ಭೀಮಸೇನ ತನ್ನ ಪ್ರತಿಜ್ಞೆಯನ್ನು ಲೋಕದ ಮಧ್ಯೆ ಸತ್ಯವನ್ನಾಗಿ ಮಾಡಿ ಈ ಮಾತನ್ನು ನುಡಿದ : ಯಾವ ಸ್ತ್ರೀಯರು ಹಿಂದೆ ಪತಿಗಳನ್ನು ಹೊಂದಿದವರಾಗಿದ್ದರೋ, ಅವರೆಲ್ಲ ಈಗ ಪತಿಹೀನರಾದರು. ಆದರೆ ಪತಿರಹಿತಳೆನ್ನಿಸಿದ್ದವಳು ಈಗ ಪತಿಸಹಿತಳೆನ್ನಿಸಿಕೊಂಡಿರುವಳು.

ವಿ: ೧) ದ್ಯೂತ ಸಭೆಯಲ್ಲಿ ಕರ್ಣ ದುಶ್ಶಾಸನರು ದ್ರೌಪದಿಯನ್ನು **'ಅಪತಿರ್ಹ್ಯಸಿ'** ಎಂದು ಗೇಲಿ ಮಾಡಿದ್ದರು. ಅದಕ್ಕೆ ಭೀಮು ಹೀಗೆ ಪ್ರತ್ಯುತ್ತರ ನೀಡಿರುವನೆಂದು ತಿಳಿಯಬೇಕು.

೨) ಈಗ ಕೌರವರು ಮೃತರಾಗುತ್ತಿರುವುದರಿಂದ ಅವರ ಪತ್ನಿಯರೆಲ್ಲ ಪತಿರಹಿತರಾಗುತ್ತಿರುವರು ಎಂದರ್ಥ.

ಪಶ್ಯಂತು ಚಿತ್ರಾಂ ಪರಮಸ್ಯ ಶಕ್ತಿಂ
ಯೇ ವೈ ತಿಲಾಃ ಷಂಡತಿಲಾ ಬಭೂವುಃ ।
ಏನಂ ಗೃಹೀತಂ ಚ ಮಯಾ ಯದೀಹ
ಕಶ್ಚಿತ್ ಪುಮಾನ್ ಮೋಚಯತು ಸ್ವವೀರ್ಯಾತ್ ॥ ೧೪೫ ॥

ಅ: ಸರ್ವೋತ್ತಮನಾದ ಶ್ರೀಹರಿಯ ಅದ್ಭುತ ಶಕ್ತಿಯನ್ನು ನೋಡಿರಿ, ಯಾರು ಹಿಂದೆ ಗಟ್ಟಿ ಎಳ್ಳು ಎನ್ನಿಸಿಕೊಂಡಿದ್ದರೋ ಅವರೆಲ್ಲ ಈಗ ಜೊಳ್ಳಿಳ್ಳುಗಳಾಗಿರುವರು. ನನ್ನಿಂದ ಹಿಡಿಯಲ್ಪಟ್ಟಿರುವ ಇವನನ್ನು ಯಾವನಾದರೂ ಗಂಡಸು ತನ್ನ ಸಾಮರ್ಥ್ಯದಿಂದ ಬಿಡಿಸಿಕೊಳ್ಳಬಹುದು.

---

೧೪೫. ಯೇ ವೈ ತಿಲಾ ಷಂಡತಿಲಾ ಇತ್ಯತ್ರ ಯೇ ಷಂಡತಿಲಾ ಇತಿ ಪ್ರಾಗುಕ್ತಾಃ ತೇ ತಿಲಾಃ ಸತ್ತಿಲಾಃ ಬಭೂವುಃ – (ವಾ.)

೧೪೫. ತತ್ರಾಹ ಕರ್ಣಂ ಚ ಸುಯೋಧನಂ ಚ ಕೃಪಂ ದ್ರೌಣಿಂ ಕೃತವರ್ಮಾಣಮೇವ ।
ನಿಹನ್ಮಿ ದುಃಶಾಸನಮದ್ಯ ಪಾಪಂ ಸಂರಕ್ಷ್ಯತಾಮದ್ಯ ಸಮಸ್ತಯೋಧಾಃ ॥ – ಭಾರತ (ಕರ್ಣ. ೮೩/೧೬)

ಎಃ ೧) ದುರ್ಯೋಧನಾದಿಗಳು ದ್ಯೂತ ಸಭೆಯಲ್ಲಿ ಪಾಂಡವರನ್ನು ಜೊಳ್ಳೆಳ್ಳುಗಳೆಂದು ಕರೆದು ಕುಚೋದ್ಯ ಮಾಡಿದ್ದರು. ಅದಕ್ಕೆ ಭೀಮ ನಿಜಕ್ಕೂ ಜೊಳ್ಳೆಳ್ಳುಗಳಾಗಿದ್ದವರು ಕೌರವರೇ ಹೊರತು ತಾವಲ್ಲ ಎನ್ನುವುದನ್ನು ದುಶ್ಶಾಸನನ ವಧೆಯ ಮೂಲಕ ಉತ್ತರ ನೀಡಿದ ಎಂದರ್ಥ.

೨) ಜೊಳ್ಳೆಳ್ಳು ಎಂಬುದು ಷಂಡತನವನ್ನು, ಪೌರುಷಹೀನತೆಯನ್ನು ಸೂಚಿಸುವ ಪದ. ಪಾಂಡವರು ಧರ್ಮಕ್ಕೆ ಕಟ್ಟುಬಿದ್ದವರಾಗಿ ಸುಮ್ಮನೆ ಕುಳಿತಿದ್ದುದನ್ನು ಷಂಡತನ ಎಂದು ಅವರು ಗೇಲಿ ಮಾಡಿದ್ದರು.

೩) ಅದಕ್ಕೆ ಭೀಮ ಹೋರಾಡಲಾಗದೇ ಸಾಯುವ ಕೌರವರದ್ದೇ ಷಂಡತನ ಹೊರತು ತಮ್ಮದಲ್ಲ ಎಂದು ಸ್ಪುಟಪಡಿಸಿದ. ಗಂಡಸರೆನ್ನಿಸಿಕೊಳ್ಳುವವರು ಅವರಲ್ಲಿದ್ದಲ್ಲಿ ಅವರೀಗ ಅವನನ್ನು ಬಿಡಿಸಿಕೊಳ್ಳುವ ಸಾಹಸವನ್ನಾದರೂ ಮಾಡಬಹುದಲ್ಲ ಎಂಬ ಸವಾಲನ್ನು ನೀಡಿದ್ದ.

೪) ಭೀಮ ಹಾಗೆ ಕರೆಯುತ್ತಾ ಕೌರವರ ಕಡೆಯವರು ಯಾರೂ ಬರದೇ ಹೋದಾಗ ತನ್ನ ಕಡೆಯವರನ್ನೇ ಕರೆಯಲು ತೊಡಗಿದನೆಂದು, ಆಗ ಅವನನ್ನು ಬಿಡಿಸಿಕೊಳ್ಳಲೆಂದು ಅರ್ಜುನ ತೆರಳಲು ಉದ್ಯುಕ್ತನಾದಾಗ ಕೃಷ್ಣ ಅವನನ್ನು ತಡೆದನೆಂದೂ ಕುಮಾರವ್ಯಾಸಭಾರತದಲ್ಲಿ ಬಂದಿದೆ :

ಅಹುದಹುದು ತಪ್ಪೇನು ತಪ್ಪೇ- । ನಹಿತದುಃಶಾಸನನ ಸಲಹುವೆ-
ನಹಿತಬಲವೆನಗನಿಲಸುತನೆನುತೈದೆ ಬರೆ ಕಂಡು ।
ಬಹಳ ಭೀತಿಯೊಳಸುರರಿಪು ಸ- । ನ್ನಿಹಿತ ಚಾಪವ ಹಿಡಿದು ಮನದು-
ಮ್ಮಹವ ಕೆಡಿಸಿ ಕಿರೀಟಿಯನು ನಿಲಿಸಿದನು ರಥದೊಳಗೆ ॥

ಅಹುದು ಭೀಮನ ಗೆಲುವ ಭಟನೀ- । ನಹೆಯಲೆ ನಾವಂಜುವೆವು ನಿ-
ರ್ವಹಿಸಬಹುದೇ ಕಾಲರುದ್ರನ ಕೆಣಕಿ ಕೆದನದಲಿ ।
ಸಹಜವಿದು ಸಾಕ್ಷಾದುಮಾಪತಿ । ಯಹ ಕಣಾ ಪವನಜನ ನೋಡಲು
ಬಹಡೆ ನೋಡೆಂದಸುರರಿಪು ನುಡಿದನು ಧನಂಜಯಗೆ ॥

ಕಂಡನರ್ಜುನ ತ್ರಿಪುರದಹನದ । ಖಂಡಪರಶುವೊಲಿರ್ದ ಭೀಮನ
ದಂಡಿಯನು ಥಟ್ಟೈಸಿ ಭೂತಗಳೆಡಬಲದೊಳಿರಲು ।
ಚಂಡಬಲನಹನೈ ವೃಕೋದರ । ಗಂಡುಗಲಿಗಿದಿರಾವನೆನುತಾ-
ಖಂಡಲಾತ್ಮಜನೆರಗಿದನು ಮುರವೈರಿಯಂಘ್ರಿಯಲಿ ॥ – (ಕರ್ಣ ೧೯/೬೭-೬೯)

೫) ಆದರೆ ಭೀಮ ಹಾಗೆ ನೀಡಿದ ಆಹ್ವಾನ ಶತ್ರುಪಂಥದವರಿಗೇ ಹೊರತು ಸ್ವಪಕ್ಷ–ದವರಿಗೆ ಸರ್ವಥಾ ಆಗಿರಲಿಲ್ಲ. ಭೀಮನ ಪ್ರತಿಜ್ಞೆಯನ್ನು ಬಲ್ಲ ಅರ್ಜುನ ಹಾಗೆ ಬಿಡಿಸಿಕೊಳ್ಳಲು ತೆರಳುವ ಅವಿವೇಕವನ್ನು ಮಾಡುವುದೂ ಸರ್ವಥಾ ಅಸಾಧ್ಯ. ಇದನ್ನೆಲ್ಲಾ ಗಮನಿಸದೇ ಕವಿ ಹಾಗೆ ಕಲ್ಪಿಸಿರುವುದು ಅವನ ಇತಿಮಿತಿಗಳನ್ನಷ್ಟೇ ಸೂಚಿಸುವುದು ಎಂದು ತಿಳಿಯದೆ ವಿಧಿಯಿಲ್ಲ.

ಭೀಮನಿಂದ ಹುಲಿಕುಣಿತ

ಇತಿ ಬ್ರುವಾಣಃ ಪುನರೇವ ರಕ್ತಂ
ಪಪೌ ಸುಧಾಂ ದೇವವರೋ ಯಥಾ ದಿವಿ ।
ಪುನಶ್ಚ ಸಪ್ರಾಣಮಮುಂ ವಿಸೃಜ್ಯ
ನದನ್ ನನರ್ತಾರಿಬಲೇ ನಿರಾಯುಧಃ ॥ ೧೪೬ ॥

ಅ: ಹೀಗೆ ನುಡಿಯುತ್ತಾ ಭೀಮಸೇನ ದೇವಶ್ರೇಷ್ಠರು ಅಮೃತ ಸವಿಯುವಂತೆ ಆ ರಕ್ತವನ್ನು ಪಾನ ಮಾಡತೊಡಗಿದ. ಬಳಿಕ ಅವನಿನ್ನು ಉಸಿರಾಡುತ್ತಿದ್ದಂತೆಯೇ ಭೀಮ ಅವನನ್ನು ಬಿಟ್ಟು ಶತ್ರುಸೇನೆಯಲ್ಲಿ ನಿರಾಯುಧನಾಗಿ ಸಿಂಹನಾದ ಮಾಡುತ್ತಾ ಕುಣಿಯತೊಡಗಿದ.

ವಿ: ಇಲ್ಲಿಯೂ ಸಹ ರಕ್ತಪಾನ ಮಾಡಿದ ಎಂಬುದಕ್ಕೆ ರಕ್ತಪಾನ ಮಾಡಿದಂತೆ ಮಾಡಿದ ಎಂದು ತಿಳಿಯಬೇಕು. ದುಶ್ಶಾಸನನು ಬದುಕಿರುವಾಗಲೇ ಅವನ ಸುತ್ತ ಭೀಮ ಕುಣಿಯುತ್ತಾ ಅವನ ಸಂಕಟವನ್ನು ಬಹಳ ಹೆಚ್ಚಿಸಿದ ಎಂದು ತಿಳಿಯಬೇಕು. ಹಾಗೆ ಕುಣಿದದ್ದು ಹುಲಿಕುಣಿತ ಎಂಬ ವಿವರ ಮುಂದೆ ಬಂದಿದೆ. (೧೫೮).

ಪ್ರತ್ಯನೃತ್ಯನ್ ಪುರಾ ಯೇಽಸ್ಮಾನ್ ಪುನರ್ಗೌರಿತಿ ಗೌರಿತಿ ।
ತಾನ್ ವಯಂ ಪ್ರತಿನೃತ್ಯಾಮಃ ಪುನರ್ಗೌರಿತಿ ಗೌರಿತಿ ॥ ೧೪೭ ॥

ಅ: ''ನಮ್ಮನ್ನು ಬಸವ, ಬಸವ ಎಂದು ಮತ್ತೆ ಮತ್ತೆ ಅಣಕಿಸಿ ಕುಣಿದವರನ್ನು ನಾವೀಗ ಪ್ರತಿಯಾಗಿ ಬಸವ, ಬಸವ ಎಂದು ಅಣಕಿಸಿ ಕುಣಿದಾಡುವೆವು''.

ವಿ: ಪಾಂಡವರು ಕಾಡಿಗೆ ತೆರಳುತ್ತಿದ್ದಾಗ ದುಶ್ಶಾಸನ ಅವರ ಸುತ್ತ 'ಗೌಃ ಗೌಃ' ಎಂದು ಕುಣಿದಾಡಿದ ವಿವರ ಹಿಂದೆ ಬಂದಿದೆ. ಇಲ್ಲಿ ಭೀಮ ಅದಕ್ಕೆ ಉತ್ತರ ನೀಡುತ್ತಾ ಅದಕ್ಕೆ ಪ್ರತಿಯಾಗಿ ಈಗ 'ಗೌಃ ಗೌಃ' ಎಂದು ನಾವು ಕುಣಿಯುತ್ತಿರುವೆವು ಎಂದು ತಿಳಿಸುತ್ತಿರುವನು. ಆ ಹುಲಿಕುಣಿತದ ಮೂಲಕ ತಾವು ದುಷ್ಟರೆಂಬ ವ್ಯಗಗಳ ಪಾಲಿಗೆ ಹುಲಿಗಳು ಎಂಬ ತತ್ತ್ವವನ್ನೂ ಸೂಚಿಸಿದಂತಿದೆ.

---

೧೪೭. ಪುನರ್ಗೌರಿತಿ ಗೌರಿತೀತ್ಯತ್ರ ದುರ್ಯೋಧನೋಽಪಿ ಗೌಃ ದುಶ್ಶಾಸನೋಽಪಿ ಗೌಃ ವಯಂ ತು ಶಾರ್ದೂಲಾ ಇತಿ ಪ್ರತಿನೃತ್ಯಾಮ ಇತಿ ಭಾವಃ । ಯದ್ವಾ ದುರ್ಯೋಧನೋಽಪಿ ತೃಣಂ ದುಶ್ಶಾಸನೋಽಪಿ ತೃಣಂ ಅಹಮಪಿ ಗೌಃ= ನಂದೀಶ್ವರಃ ಅರ್ಜುನೋಽಪಿ ಗೌಃ= ನಂದೀಶ್ವರಃ ಇತಿ ಪ್ರನೃತ್ಯಾಮ ಇತ್ಯರ್ಥಃ – (ವಾ.)

೧೪೭. ಯೇ ತದಾಸ್ಮಾನ್ ಪ್ರನೃತ್ಯಂತಿ ಪುನರ್ಗೌರಿತಿ ಗೌರಿತಿ ।
ತಾನ್ ವಯಂ ಪ್ರತಿನೃತ್ಯಾಮಃ ಪುನರ್ಗೌರಿತಿ ಗೌರಿತಿ ॥ – ಭಾರತ (ಕರ್ಣ. ೮೩/೪೪)

ಭೀಮನ ರುದ್ರನರ್ತನಕ್ಕೆ ಕರ್ಣಾದಿಗಳ ಭಯ

ಇತಿ ಬ್ರುವನ್ ನೃತ್ಯಮಾನೋಽರಿಮಧ್ಯ
ಆಸ್ಫೋಟಯಂಶ್ಚತ್ರುಗಣಾನಜೋಹವೀತ್ ।
ಶಶಾಕ ಚ ದ್ರಷ್ಟುಮಮುಂ ನ ಕಶ್ಚಿ-
ದ್ವೈಕರ್ತನದ್ರೌಣಿಸುಯೋಧನಾದಿಷು ॥ ೧೪೮ ॥

ಅ: ಹೀಗೆ ನುಡಿಯುತ್ತಾ ಶತ್ರುಗಳ ಮಧ್ಯೆ ಕುಣಿದಾಡುತ್ತಾ ಭೀಮಸೇನ ಘರ್ಜಿಸುತ್ತಾ ಶತ್ರು ಸಮೂಹವನ್ನು ಯುದ್ಧಕ್ಕೆ ಆಹ್ವಾನಿಸಿದ. ಆಗ ಆ ಭೀಮನನ್ನು ಕಾಣಲೂ ಸಹ ಕರ್ಣ, ಅಶ್ವತ್ಥಾಮ, ದುರ್ಯೋಧನ ಮೊದಲಾದವರಲ್ಲಿ ಯಾವ ಒಬ್ಬನೂ ಸಮರ್ಥನಾಗಲಿಲ್ಲ.

ವಿ: ೧) ಭೀಮ ಹಾಗೆ ದುಶ್ಶಾಸನನನ್ನು ರಕ್ಷಿಸಿಕೊಳ್ಳಲು ಕರೆಯಿತ್ತರೂ ದುರ್ಯೋಧನ ಮೊದಲಾಗಿ ಯಾರೂ ಅವನ ರಕ್ಷಣೆಗೆ ಧೈರ್ಯ ತೋರಲಿಲ್ಲ ಎಂದರ್ಥ.

೨) ದುಶ್ಶಾಸನನಿಗೆ ಪಾಪಕಾರ್ಯಕ್ಕೆ ಪ್ರಚೋದನೆಯಿತ್ತಿದ್ದ ದುರ್ಯೋಧನ ಈಗ ಸುಮ್ಮನೆ ನೋಡುತ್ತಿದ್ದನೇ ಹೊರತು ಅವನ ರಕ್ಷಣೆಗೆ ಯತ್ನಿಸಲಿಲ್ಲ. ಪಾಪಿಗಳ ರೀತಿ ಇಂತಹುದು. ನಿಷಿದ್ಧ ಕಾರ್ಯಗಳನ್ನು ಮಾಡಲು ಪ್ರೇರೇಪಿಸುವ ಅವಿವೇಕಿ ಜನ, ತಮ್ಮ ಮಾತಿನಂತೆ ನಡೆದವರು ಹೀಗೆ ಹೀನಾಯವಾಗಿ ಅನರ್ಥಕ್ಕೆ ಗುರಿಯಾದಾಗ ಅವರನ್ನು ಸರ್ವಥಾ ರಕ್ಷಿಸಲು ಬರಲಾರರು ಎಂಬುದು ಇಲ್ಲಿಯ ಅಪೂರ್ವ ಎಚ್ಚರಿಕೆ.

೩) ಹಾಗೆ ಬರಲಾರರು ಮಾತ್ರವಲ್ಲ ಅವರಿಗಿಂತ ಮುಂಚಿತವಾಗಿಯೇ ಅವರೇ ಅನರ್ಥಕ್ಕೆ ಗುರಿಯಾಗುವರು ಎಂಬುದನ್ನೂ ಗಮನಿಸಬೇಕು.

೪) ಇದರಿಂದ ಪಾಪಕಾರ್ಯವನ್ನು ತಾನಾಗಿಯೂ ಮಾಡಬಾರದು, ಮತ್ತೊಬ್ಬರ ಪ್ರೇರಣೆಯಿಂದಲೂ ಮಾಡಬಾರದು ಎಂಬ ತತ್ವ ನಿರೂಪಿತ.

ಕರ್ಣನ ದುರವಸ್ಥೆ

ಭಯಾಚ್ಚ ಕರ್ಣಸ್ಯ ಪಪಾತ ಕಾರ್ಮುಕಂ
ನಿಮೀಲಯಾಮಾಸ ತದಾಽಕ್ಷಿಣೀ ಚ ।
ಸಂಬೋಧಿತೋ ಮದ್ರರಾಜೇನ ಯುದ್ಧೇ
ಸ್ಥಿತಃ ಕಥಂಚಿತ್ ಸ ತು ಪಾರ್ಥಭಾಗಃ ॥ ೧೪೯ ॥

ಅ: ಭಯದಿಂದಾಗಿ ಕರ್ಣನ ಬಿಲ್ಲು ಕೈಜಾರಿಬಿತ್ತು, ಅವನಾಗ ಎರಡು ಕಣ್ಣುಗಳನ್ನೂ ಮುಚ್ಚಿಕೊಂಡ; ಮದ್ರರಾಜನಾದ ಶಲ್ಯ ಬಹಳವಾಗಿ ಎಚ್ಚರಿಸಿದಾಗ ಅವನು ಅರ್ಜುನನ ಪಾಲು ಎಂದು ಮೀಸಲಾಗಿದ್ದ ಕಾರಣದಿಂದಾಗಿ ಹೇಗೋ ಸಾಯದೇ ಬದುಕಿಕೊಂಡ.

ವಿ: ಕರ್ಣ ಭೀಮನ ಆ ಭಯಾನಕ ಕಾರ್ಯವನ್ನು ನೋಡಿಯೇ ಭಯದಿಂದ ಪ್ರಾಣ ಕಳೆದುಕೊಳ್ಳಬೇಕಿತ್ತು, ಆದರೂ ಹಾಗೆ ಅವನು ಸಾಯದೇ ಬದುಕಿರಲು ಭೀಮ ಅವನನ್ನು ಅರ್ಜುನನ ಪಾಲು ಎಂದು ಸಂಕಲ್ಪಿಸಿದ್ದೇ ಕಾರಣವಾಯಿತು ಎಂದು ತಿಳಿಯಬೇಕು. ಈ ರೀತಿ ಕರ್ಣ ಅನೇಕಬಾರಿ ಭೀಮನಿಂದ ಸಾಯದೆ ಬದುಕಿದ ಎಂಬುದನ್ನು ಗಮನಿಸಬೇಕು.

ದ್ರೌಣಿರ್ವಿಹಾಯೈನಮಪಾಜಗಾಮ
ದೂರಂ ತದಾ ಭೀಮಸೇನೋ ಜಗಾದ ।
ಪೀತಃ ಸೋಮೋ ಯುದ್ಧಯಜ್ಞೇ ಮಯಾऽದ್ಯ
ವಧ್ಯಃ ಪಶುರ್ಮೇ ಹರಯೇ ಸುಯೋಧನಃ ॥ ೧೫೦ ॥

ಅ: ಅಶ್ವತ್ಥಾಮ ಭೀಮನನ್ನು ಬಿಟ್ಟು ದೂರಕ್ಕೆ ತೆರಳಿದ. ಭೀಮಸೇನ ತಿಳಿಸಿದ 'ರಣಯಜ್ಞದಲ್ಲಿ ನಾನಿಂದು ಸೋಮಪಾನ ಮಾಡಿದೆ. ಇನ್ನು ಶ್ರೀಹರಿಪ್ರೀತಿಗಾಗಿ ದುರ್ಯೋಧನನನ್ನು ಕೊಲ್ಲಬೇಕಾಗಿದೆ'.

ವಿ: ೧) ದುಶ್ಶಾಸನನ ರಕ್ತವನ್ನು ಹೀರುವ ಮೂಲಕ ಸೋಮಪಾನ ಪೂರೈಸಿರುವ ತಾನು ಮುಂದೆ ದುರ್ಯೋಧನನನ್ನು ಪಶುಬಲಿಯನ್ನಾಗಿ ನೀಡಿ ರಣಯಜ್ಞವನ್ನು ಮುಕ್ತಾಯಗೊಳಿಸ–ಬೇಕಾಗಿದೆ ಎಂಬುದು ಭೀಮನ ಆಶಯವಾಗಿತ್ತು.

೨) ಕುಮಾರವ್ಯಾಸಭಾರತದಲ್ಲಿ ಹಾಗೆ ಸತ್ತ ದುಶ್ಶಾಸನ ತೊಂಭತ್ತೊಂಭತ್ತನೆಯವನು; ಇನ್ನು ಉಳಿದುಕೊಂಡಿದ್ದು ದುರ್ಯೋಧನ ಮಾತ್ರ ಎಂಬ ನಿರೂಪಣೆಯಿದೆ ('**...ರಿಪುಕೌರವರ ನೂರ್ವರ ಕಡಿವ ಭಾಷೆಗಳಿವಗೆ ಪೂರಾಯವು ಸುಯೋಧನಹರಣವೊಂದುಳಿಯೆ**'–ಕರ್ಣ. ೧೯/೯೨). ಆದರೆ ಈ ಬಳಿಕವೇ ದುರ್ಯೋಧನನ ಇತರ ಅನೇಕ ತಮ್ಮಂದಿರು ಭೀಮನಿಂದ ಸಾಯುವ ವಿವರ ಬಂದಿ–ರುವುದರಿಂದ ಅದೂ ಸಹ ಮಹಾಭಾರತಕ್ಕೆ ಅನುಗುಣವಲ್ಲದ ನಿರೂಪಣೆ ಎಂದೇ ತಿಳಿಯಬೇಕು.

---

೧೫೦. ಆಜೋಹವೀತ್= ಆಜುಹಾವೇತ್ಯರ್ಥಃ "ಆಜೋಹವೀದಶ್ವಿನಾ ವರ್ತಿಕಾವಾಂ" (ಋ. ೧/೧೧೭/೧೬) ಇತಿವತ್ ಅಯಂ ಪ್ರಯೋಗಃ – (ವಾ.)

೧೫೦. ಆಜೋಹವೀತ್ ಸಮಾಹ್ವಯತ್ ಯೋದ್ಧುಮಿತಿ ಶೇಷಃ । – (ಜ.)

೧೫೯. ತತಃ ಕರ್ಣೋ ಮಹಾರಾಜ ಪ್ರವಿವೇಶ ಮಹದ್ಭಯಮ್ ।
ದೃಷ್ಟ್ವಾ ಭೀಮಸ್ಯ ವಿಕ್ರಾಂತಮಂತಕಸ್ಯ ಪ್ರಜಾಸ್ವಿವ ॥ – ಭಾರತ (ಕರ್ಣ. ೮೪/೭)

ದುಃಶಾಸನನ ಮರಣ

ಇತಿ ಬ್ರುವನ್ ಮೃತಮುತ್ಸೃಜ್ಯ ಶತ್ರುಂ
ದುರ್ಯೋಧನಂ ಚಾಶು ರುಷಾऽಭಿದುದ್ರುವೇ ।
ಆಯಾಂತಮೀಕ್ಷ್ಯೈವ ತಮುಗ್ರಪೌರುಷಂ
ದುದ್ರಾವ ಭೀತಃ ಸ ಸುಯೋಧನೋ ಭೃಶಮ್ ॥ ೧೫೧ ॥

ಅ: ಹೀಗೆ ಹೇಳುತ್ತಲೇ ಸತ್ತುಹೋಗಿದ್ದ ದುಶ್ಶಾಸನನನ್ನು ಬಿಟ್ಟು ಶತ್ರುವಾದ ದುರ್ಯೋಧನನ ಮೇಲೆ ಕೂಡಲೇ ಭೀಮಸೇನ ಕೋಪದಿಂದ ನುಗ್ಗಿದ. ಉಗ್ರಪರಾಕ್ರಮಿಯಾದ ಭೀಮ ಹಾಗೆ ಬರುತ್ತಿದ್ದುದನ್ನು ಕಾಣುತ್ತಲೇ ಬಹಳವಾಗಿ ಭಯಗೊಂಡ ದುರ್ಯೋಧನ ದೂರಕ್ಕೆ ಓಡಿದ.

ವಿ: ೧) ಭೀಮ ಹಾಗೆ ಕುಣಿದು ದುಶ್ಶಾಸನನ ಬಳಿಗೆ ತೆರಳಿದಾಗ ಅವನು ಆಗಲೇ ಸತ್ತಿದ್ದ. ಆಗ ಭೀಮ ನುಡಿದ : 'ದುಃಶಾಸನ! ಸಾವು ನಿನ್ನನ್ನು ಕಾಪಾಡಿತು' ('**ಮೃತ್ಯುನಾ ರಕ್ಷಿತೋऽಸಿ**') :

ಅಥಾಹ ಭೀಮಃ ಪುನರುಗ್ರಕರ್ಮಾ ದುಃಶಾಸನಂ ಕ್ರೋಧಪರೀತಚೇತಾಃ ।
ಗತಾಸುಮಾಲೋಕ್ಯ ವಿಹಸ್ಯ ಸುಖರಂ ಕಿಂ ವಾ ಕುರ್ಯಾಂ ಮೃತ್ಯುನಾ ರಕ್ಷಿತೋऽಸಿ ॥

– ಭಾರತ (ಕರ್ಣ. ೮೩/೩೨)

೨) ಹಾಗೆ ಹೇಳುವ ಮೂಲಕ ದುಃಶಾಸನನಂಥವರ ಬದುಕಿಗಿಂತ ಸಾವೇ ಮೇಲಾದದ್ದು ಎಂಬುದನ್ನು ಸೂಚಿಸಿದ ಎಂದು ತಿಳಿಯಬೇಕು.

ಶೂನ್ಯವಾದ ರಣರಂಗ

ಬಲದ್ವಯಂ ಚಾಪಯಯೌ ವಿಹಾಯ
ಭಯಾದ್ಭೀಮಂ ಕೃಷ್ಣಪಾರ್ಥೌ ವಿನೈವ ।
ಆಯೋಧನಂ ಶೂನ್ಯಮಭೂನ್ಮುಹೂರ್ತಂ
ನನರ್ತ ಭೀಮೋ ವ್ಯಾಘ್ರಪದೇನ ಹರ್ಷಾತ್ ॥ ೧೫೨ ॥

ಅ: ಶ್ರೀಕೃಷ್ಣಾರ್ಜುನರ ಹೊರತು ಎರಡೂ ಸೇನೆಗಳು ಭಯದಿಂದ ಭೀಮನನ್ನು ಬಿಟ್ಟು ಪಲಾಯನ ಮಾಡಿದ್ದವು. ರಣರಂಗ ಒಂದು ಮುಹೂರ್ತ ಕಾಲ ಶೂನ್ಯವಾಗಿತ್ತು. ಆಗ ಭೀಮ ಆನಂದದಿಂದ ಹುಲಿಹೆಜ್ಜೆ ಹಾಕಿ ಕುಣಿದ.

---

೧೫೨ ಶೂನ್ಯಂ ಪ್ರಾಣರಹಿತಮ್ । – (ವ.)

ಎ: ೧) ಭೀಮ ಹಾಗೆ ದುಶ್ಶಾಸನನನ್ನು ಹೊಡೆದುರುಳಿಸಿ ಕುಣಿಯುವಾಗ ಎರಡು ಸೇನೆಗಳೂ ಕಂಗಾಲಾಗಿ ಓಡಿಹೋಗಿದ್ದವು ಎನ್ನುವ ಮೂಲಕ ಅದರ ಭೀಕರತೆಯನ್ನು ಅತ್ಯಂತ ಪರಿಣಾಮ-ಕಾರಿಯಾಗಿ ನಿರೂಪಿಸಿರುವರು. ಗಿಜಿಗಿಜಿಗುಟ್ಟುತ್ತಿದ್ದ ರಣರಂಗ ಒಂದು ಮುಹೂರ್ತಕಾಲ ಶೂನ್ಯರಂಗವಾಗಿದ್ದುದು ಭೀಮಸಾಹಸದ ಪರಿಣಾಮ.

೨) ಭೀಮ ಆಗ ಹುಲಿಹೆಜ್ಜೆ ಹಾಕಿ ಕುಣಿಯುವ ಮೂಲಕ ಕೌರವರು ಬಲಿಪಶುಗಳು ಎನ್ನುವುದನ್ನು ಮತ್ತೊಂದು ರೀತಿಯಲ್ಲಿ ಸೂಚಿಸಿದ ಎಂದಾಗುವುದು.

ಸಂಕಲ್ಪ್ಯ ಶತ್ರೂನ್ ಗೋವದೇವಾಜಿಮಧ್ಯೇ
ಶಾರ್ದೂಲವತ್ ತಚ್ಚರಿತಂ ನಿಶಾಮ್ಯ ।
ಜಹಾಸ ಕೃಷ್ಣಶ್ಚ ಧನಂಜಯಶ್ಚ
ಶಶಂಸತುಶ್ಚೈನಮಭಿಪ್ರಹೃಷ್ಟೌ ॥ ೧೫೩ ॥

ಅ: ಯುದ್ಧದ ಮಧ್ಯದಲ್ಲಿ ಶತ್ರುಗಳನ್ನು ಪಶುಗಳಂತೆ ಸಂಕಲ್ಪಿಸಿ ಹುಲಿಯಂತೆ ಭೀಮ ಕುಣಿದದ್ದನ್ನು ಕಂಡು ಕೃಷ್ಣ ಸಂತೋಷದಿಂದ ನಕ್ಕ; ಅರ್ಜುನನೂ ನಕ್ಕ. ಅತ್ಯಂತ ಸಂತೋಷದಿಂದ ಅವರಿಬ್ಬರೂ ಭೀಮನನ್ನು ಕೊಂಡಾಡಿದರು.

ಎ: ಧರ್ಮರಾಜ ಕರ್ಣನಿಂದ ಪೆಟ್ಟುತಿಂದು ಶಿಬಿರದಲ್ಲಿ ಮಲಗಿದ್ದರಿಂದ ಅವನು ಆಗ ರಣರಂಗದಲ್ಲಿರಲಿಲ್ಲ ಎಂಬ ವಿವರ ಆಗಲೇ ಬಂದಿದೆ (ಶ್ಲೋ. ೮೨).

ಭೀಮನಿಂದ ಇಪ್ಪತ್ತು ಕೌರವರ ವಧೆ

ಯದಾ ಸ ರಂಗಃ ಪವಮಾನಸೂನುನಾ
ಶೂನ್ಯಃ ಕೃತಸ್ತತ್ರ ಮುಹೂರ್ತಮಾತ್ರಾತ್ ।
ದುರ್ಯೋಧನಸ್ಯಾವರಜಾಃ ಶರೌಘೈ-
ರವೀವೃಷನ್ ಭೀಮಮುದಾರಸತ್ತ್ವಮ್ ॥ ೧೫೪ ॥

ಅ: ಭೀಮಸೇನನಿಂದ ಆ ರಣರಂಗ ಒಂದು ಮುಹೂರ್ತ ಕಾಲ ಶೂನ್ಯವಾಗಿತ್ತು. ಬಳಿಕ ದುರ್ಯೋಧನನ ತಮ್ಮಂದಿರು ಬಾಣಗಳ ಪ್ರವಾಹಗಳನ್ನು ಸುರಿಸುತ್ತಾ ಮಹಾಪರಾಕ್ರಮಿ-ಯಾದ ಭೀಮನನ್ನು ಎದುರಿಸಿದರು.

ತಾನ್ ಮಾರುತಿರ್ಬಾಣವರೈರ್ನಿಕೃತ್ತ-
ಶೀರ್ಷಾನ್ ಯಮಾಯಾನಯದಾಶು ವೀರಃ ।
ತಸ್ಮಿನ್ ದಿನೇ ವಿಂಶತಿಧಾರ್ತರಾಷ್ಟ್ರಾ
ಹತಾಸ್ತದನ್ಯೇ ಸಮರಾತ್ ಪ್ರದುದ್ರುವುಃ ॥ ೧೫೫ ॥

ಅ: ಭೀಮಸೇನ ಉತ್ತಮ ಬಾಣಗಳಿಂದ ಅವರೆಲ್ಲರ ತಲೆಕತ್ತರಿಸಿ ಯಮಲೋಕಕ್ಕೆ ಕೂಡಲೇ ಅಟ್ಟಿದ. ಆ ದಿನದಲ್ಲಿ ಭೀಮನಿಂದ ಒಟ್ಟು ಇಪ್ಪತ್ತು ಜನ ಕೌರವರು ಹತರಾದರು. ಉಳಿದವರು ಯುದ್ಧದಿಂದ ಓಡಿಹೋದರು.

ವಿ: ಆ ದಿನ ಸತ್ತ ಕೆಲವು ಕೌರವರ ಹೆಸರು ಹೀಗಿದೆ – ದುಃಶಾಸನ, ನಿಷಂಗೀ, ಕವಚೀ, ಪಾಶೀ, ದಂಡಧಾರ, ಧನುರ್ಗ್ರಹ, ಅಲೋಲುಪ, ಶಲ, ಸಂಧ, ವಾತವೇಗ ಮತ್ತು ಸವರ್ಚಸ್.

ದಶ ರಾಜನ್ ಮಹಾವೀರ್ಯಾ ಭೀಮಂ ಪ್ರಾಚ್ಛಾದಯನ್ ಶರೈಃ ।
ನಿಷಂಗೀ ಕವಚೀ ಪಾಶೀ ದಂಡಧಾರೋ ಧನುರ್ಗ್ರಹಃ ॥
ಅಲೋಲುಪಃ ಶಲಃ ಸಂಧೋ ವಾತವೇಗಸುವರ್ಚಸೌ ।
ಏತೇ ಸಮೇತ್ಯ ಸಹಿತಾ ಭ್ರಾತೃವ್ಯಸನಕರ್ಷಿತಾಃ ॥ ...
ಭೀಮಃ ಕ್ರೋಧಾಗ್ನಿರಕ್ತಾಕ್ಷಃ ಕ್ರುದ್ಧಃ ಕಾಲ ಇವಾಬಭೌ ।
ತಾಂಸ್ತು ಭಲ್ಲೈರ್ಮಹಾವೇಗೈರ್ದಶಭಿರ್ದಶ ಭಾರತಾನ್ ॥
ರುಕ್ಮಾಂಗದಾನ್ ರುಕ್ಮಪುಂಖೈಃ ಪಾಥೋರ್ ನಿನ್ಯೇ ಯಮಕ್ಷಯಮ್ ॥
– ಭಾರತ (ಕರ್ಣ. ೮೪/೨,೩,೫,೬)

ನಕುಲ ವೃಷಸೇನರ ಯುದ್ಧ

ಕರ್ಮಾಣ್ಯನನ್ಯೋಪಯಿಕಾನಿ ಭೀಮೇ
ಕುರ್ವತ್ಯೇವಂ ಭೀತಭೀತೇಽರಿಸಂಘೇ ।
ನಿಮೀಲಿತಾಕ್ಷೇ ಚ ಭಯೇನ ಕರ್ಣೇ
ಕರ್ಣಾತ್ಮಜೋ ನಕುಲಂ ಪ್ರತ್ಯಧಾವತ್ ॥ ೧೫೬ ॥

ಅ: ಇತರರಿಗೆ ನೀಗದ ಕಾರ್ಯಗಳನ್ನು ಭೀಮ ಹಾಗೆ ಮಾಡುತ್ತಿದ್ದಾಗ ಶತ್ರುಸಮೂಹ ಬಹಳವಾಗಿ ಭಯಗೊಂಡಿತು. ಕರ್ಣನೂ ಭಯದಿಂದ ಕಣ್ಣುಗಳನ್ನು ಮುಚ್ಚಿಕೊಂಡ. ಆಗ ಕರ್ಣಪುತ್ರನಾದ ವೃಷಸೇನ ನಕುಲನ ಮೇಲೆ ನುಗ್ಗಿದ.

---

೧೫೬. ಅನನ್ಯೋಪಯಿಕಾನಿ ಅನ್ಯಂ ಉಪಯಂತಿ ತಾನಿ ಅನ್ಯೋಪಯಿಕಾನಿ ನ ಅನ್ಯೋಪಯಿಕಾನಿ ಅನನ್ಯೋಪಯಿಕಾನಿ ಭೀಮಾದನ್ಯೈರಸಾಧ್ಯಾನೀತ್ಯರ್ಥಃ। .....ಭೀಮಭೀತ ಇತಿ ವಾ ಪಾಠಃ। – (ಜ.)

ಮಾದ್ರೀಸುತೋ ವೃಷಸೇನಂ ಶರೌಘೈ-
ರವಾರಯತ್ ತಂ ವಿರಥಂ ಚಕಾರ ।
ಕರ್ಣಾತ್ಮಜಃ ಸೋಽಪ್ಯಸಿಚರ್ಮಪಾಣಿ-
ಸ್ತಸ್ಯಾನುಗಾಂಸ್ತ್ರಿಸಹಸ್ರಂ ಜಘಾನ ॥ ೧೫೭ ॥

ಅ: ನಕುಲ ವೃಷಸೇನನನ್ನು ಬಾಣಗಳ ಪ್ರವಾಹದಿಂದ ತಡೆದ. ವೃಷಸೇನ ಅವನನ್ನು ವಿರಥನನ್ನಾಗಿಸಿದ. ಆಗ ನಕುಲ ಕತ್ತಿ ಗುರಾಣಿಗಳನ್ನು ಕೈಗೆತ್ತಿಕೊಂಡು ವೃಷಸೇನನ ಮೂರು ಸಾವಿರ ಅನುಯಾಯಿ ಸೈನಿಕರನ್ನು ಕೊಂದುಹಾಕಿದ.

ಅರ್ಜುನನಿಂದ ವೃಷಸೇನನ ವಧೆ

ಕರ್ಣಾತ್ಮಜಸ್ತಸ್ಯ ಸಂಛಿದ್ಯ ಚರ್ಮ
ಭೀಮಾರ್ಜುನಾದೀನಪಿ ಬಾಣಸಂಘೈಃ ।
ಅವೀವೃಷತ್ ತಸ್ಯ ಪಾರ್ಥಃ ಶರೇಣ
ಗ್ರೀವಾಬಾಹೂರೂನ್ ಯುಗಪಚ್ಚಕರ್ತ ॥ ೧೫೮ ॥

ಅ: ವೃಷಸೇನ ಅವನ ಗುರಾಣಿಯನ್ನು ಕತ್ತರಿಸಿ, ಭೀಮ, ಅರ್ಜುನ ಮೊದಲಾದವರ ಮೇಲೂ ಬಾಣಗಳ ಗುಂಪನ್ನು ಸುರಿಸಿದನು. ಅರ್ಜುನ ಒಂದೇ ಬಾಣದಿಂದ ಆ ವೃಷಸೇನನ ಕತ್ತು ತೋಳು ಹಾಗೂ ತೊಡೆಗಳನ್ನು ಒಂದೇಸಲಕ್ಕೆ ಕತ್ತರಿಸಿಹಾಕಿದ.

ವಿ: ಅರ್ಜುನ ಹಾಗೆ ಮಾಡುವ ಮೂಲಕ ಶಕಟಾಬ್ಜಚಕ್ರವ್ಯೂಹದಲ್ಲಿ ಕರ್ಣನ ಮುಂದೆ ಮಾಡಿದ್ದ (೨೬/೫) 'ನಿನ್ನ ಮಗನನ್ನು ನಿನ್ನೆದುರೇ ಕೊಚ್ಚಿಹಾಕುವೆ ಎಂಬ ಪ್ರತಿಜ್ಞೆಯನ್ನು ಪೂರೈಸಿದ.

ಕರ್ಣಾರ್ಜುನರ ಯುದ್ಧ

ಏಕೇನ ಬಾಣೇನ ಸುತೇ ಹತೇ ಸ್ವೇ
ವೈಕರ್ತನೋ ವಾಸವಿಮಭ್ಯಧಾವತ್ ।
ತಯೋರಭೂದ್ದ್ವೈರಥಯುದ್ಧಮದ್ಭುತಂ
ಸರ್ವಾಸ್ತ್ರವಿದ್ವರಯೋರುಗ್ರರೂಪಮ್ ॥ ೧೫೯ ॥

---

೧೫೯. ದ್ವೌ ರಥಿಕೌ ಯಸ್ಮಿನ್ ತತ್ ದ್ವಿರಥಂ ತಚ್ಚ ತತ್ ಯುದ್ಧಂ ಚ ತಥಾ। ತತಃ ಸ್ವಾರ್ಥೇ ಅಣ್ ದ್ವಂದ್ವ-ಯುದ್ಧಮಿತ್ಯರ್ಥಃ। –(ಜ.)

ಅ: ತನ್ನ ಮಗ ಅರ್ಜುನನಿಂದ ಹತನಾದಾಗ ಕರ್ಣ ಅರ್ಜುನನ ಮೇಲೆ ನುಗ್ಗಿದ. ಸಕಲಾಸ್ತ್ರಪರಿಣತರಲ್ಲಿ ಅಗ್ರೇಸರರಾದ ಅವರಿಬ್ಬರಿಗೂ ಅತ್ಯಂತ ಅದ್ಭುತವಾದ, ಭಯಂಕರವಾದ ದ್ವಂದ್ವಯುದ್ಧನಡೆಯಿತು.

ಯುದ್ಧ ನೋಡಲು ಗಗನದಲ್ಲಿ ಸುರಾಸುರರ ಸಮೂಹ

ಪಕ್ಷಗ್ರಹಾಸ್ತತ್ರ ಸುರಾಸುರಾಸ್ತಯೋ-
ರನ್ಯೇ ಚ ಜೀವಾ ಗಗನಂ ಸಮಾಸ್ಥಿತಾಃ ।
ಮಹಾನ್ ವಿವಾದೋಽಪ್ಯಭವತ್ ತಯೋಃ ಕೃತೇ
ತದಾ ಗಿರೀಶೋಽವದದಬ್ಜಯೋನಿಮ್ ॥ ೧೬೦ ॥

ಅ: ಅವರಿಬ್ಬರ ಪಕ್ಷವನ್ನು ಆಗ ದೇವತೆಗಳು, ಅಸುರರು ಹಿಡಿದರು. ಇತರ ಜೀವಿಗಳೂ ಗಗನದಲ್ಲಿ ನೆರೆದವು. ಅವರಿಬ್ಬರಿಗಾಗಿ ಅವರಲ್ಲಿ ದೊಡ್ಡ ವಿವಾದ ಹುಟ್ಟಿಬಿಟ್ಟಿತು. ಆಗ ಶಿವ ಬ್ರಹ್ಮನನ್ನು ಕೇಳಿಕೊಂಡ :

ವಿ: ದೇವಪಕ್ಷದವರು ಅರ್ಜುನ ಗೆಲ್ಲಲೆಂದು ವಾದಿಸಿದರೆ, ಅಸುರಪಕ್ಷದವರು ಕರ್ಣ ಗೆಲ್ಲಲೆಂದು ವಾದಿಸಿದರು. ಆ ಕಾರಣದಿಂದ ಅವರೆಲ್ಲರ ಮಧ್ಯೆ ಉಂಟಾದ ದೊಡ್ಡ ವಿವಾದವನ್ನು ಪರಿಹರಿಸಲೆಂದು ಶಿವ ಬ್ರಹ್ಮನನ್ನು ಕೇಳಿಕೊಂಡ ಎಂದರ್ಥ.

ಸುರಾಸುರಾಣಾಂ ಭೀಮದುರ್ಯೋಧನೌ ದ್ವೌ
ಸಮಾಶ್ರಯೌ ತತ್ಪ್ರಿಯೌ ಕರ್ಣಪಾರ್ಥೌ ।
ಪ್ರಾಣೋಪಮೌ ತೇನ ಚೈತತ್ಕೃತೇ ತೇ
ಸುರಾಸುರಾಃ ಕರ್ತುಮಿಚ್ಛಂತಿ ಯುದ್ಧಮ್ ॥ ೧೬೧ ॥

ಅ: ಸುರಾಸುರರಿಗೆ ಭೀಮ, ದುರ್ಯೋಧನರು ಆಸರೆಯಾಗಿರುವರು. ಕರ್ಣಾರ್ಜುನರು ಅವರಿಬ್ಬರಿಗೆ ಪ್ರಿಯರು, ಪ್ರಾಣಸಮಾನರು. ಅದರಿಂದ ಇವರಿಬ್ಬರಿಗಾಗಿ ಈ ಸುರಾಸುರರು ಯುದ್ಧಮಾಡಲು ಬಯಸಿರುವರು.

---

೧೬೦. ದೇವದಾನವಗಂಧರ್ವಾಃ ಪಿಶಾಚೋರಗರಾಕ್ಷಸಾಃ ।
ಪ್ರತಿಪಕ್ಷಗ್ರಹಂ ಚಕ್ರುಃ ಕರ್ಣಾರ್ಜುನಸಮಾಗಮೇ ॥ – ಭಾರತ (ಕರ್ಣ. ೮೭/೩೭-೫೫)

೧೬೧. ಸಮೋಽಸ್ತು ವಿಜಯೋ ದೇವ ಏತಯೋರ್ನರಸಿಂಹಯೋಃ ॥ – ಭಾರತ (ಕರ್ಣ. ೮೭/೬೪)

ತದಾ ವಿನಾಶೋ ಜಗತಾಂ ಮಹಾನ್ ಸ್ಯಾತ್
ತೇನಾನಯೋಃ ಸಮಮೇವಾಸ್ತು ಯುದ್ಧಮ್ ।
ಇತೀರಿತೇ ವಾಸವಃ ಪದ್ಮಯೋನಿಂ
ಜಗಾದ ಕೃಷ್ಣೋ ಯತ್ರ ಜಯಶ್ಚ ತತ್ರ ॥ ೧೬೨ ॥

ಅ: ಆಗ ಜಗತ್ತಿಗೆ ಮಹಾವಿನಾಶ ಉಂಟಾದೀತು, ಆದ್ದರಿಂದ ಇವರಿಬ್ಬರಿಗೂ ಸಮನಾದ ಯುದ್ಧವೇ ಆಗಲಿ. ಶಿವ ಹೀಗೆನ್ನಲು ಇಂದ್ರ ಬ್ರಹ್ಮದೇವರಿಗೆ ಹೇಳಿದ : ''ಎಲ್ಲಿ ಕೃಷ್ಣನೋ ಅಲ್ಲಿಯೇ ಜಯ''.

ಅರ್ಜುನನ ಗೆಲುವಿಗೆ ಬ್ರಹ್ಮನಲ್ಲಿ ಇಂದ್ರನ ಪ್ರಾರ್ಥನೆ

ಕಾಮೋ ನ ಕೃಷ್ಣಸ್ಯ ಮೃಷಾ ಭವೇದ್ಧಿ
ಕಾಮೋಽಸ್ಯ ಪಾರ್ಥಸ್ಯ ಜಯಂ ಪ್ರದಾತುಮ್ ।
ಇತ್ಯೂಚಿವಾನ್ ವಾಸವಃ ಫಲ್ಗುನಸ್ಯ
ಜಯೋಽಸ್ತು ಕರ್ಣಸ್ಯ ವಧಸ್ತಥೇತಿ ।
ಉಕ್ತ್ವಾನಮತ್ ಕಂಜಭವಸ್ತಥೇತಿ
ಪ್ರಾಹಾಸುರಾನ್ ದೇವತಾಶ್ಚಾಬಭಾಷೇ ॥ ೧೬೩ ॥

ಅ: ಶ್ರೀಕೃಷ್ಣನ ಸಂಕಲ್ಪವೆಂದೂ ಸುಳ್ಳಾಗದು. ಅರ್ಜುನನಿಗೆ ಜಯ ನೀಡುವುದು ಅವನ ಸಂಕಲ್ಪ. ಹೀಗೆ ಹೇಳಿದ ಇಂದ್ರ ''ಅರ್ಜುನನಿಗೆ ಜಯವಾಗಲಿ, ಹಾಗೆಯೇ ಕರ್ಣ ಹತನಾಗಲಿ'' ಎಂದು ನುಡಿದು ಇಂದ್ರ ಬ್ರಹ್ಮನಿಗೆ ನಮಸ್ಕರಿಸಿದ. ಬ್ರಹ್ಮ 'ಹಾಗೆಯೇ ಆಗಲಿ' ಎಂದು ತಿಳಿಸಿದ. ಬಳಿಕ ಅಸುರರಿಗೂ ದೇವತೆಗಳಿಗೂ ಹೇಳಿದ.

ವಿ: ಹರನ ಪ್ರಾರ್ಥನೆಗಿಂತ ಹರಿಯ ಸಂಕಲ್ಪ ದೊಡ್ಡದು ಎಂದು ಇಂದ್ರ ಬ್ರಹ್ಮದೇವರನ್ನು ಪ್ರಾರ್ಥಿಸಿಕೊಂಡು ಅರ್ಜುನ ರೂಪದ ತನಗೇ ಜಯ ದೊರೆಯಬೇಕೆಂದ. ಅದಕ್ಕೆ ಬ್ರಹ್ಮದೇವರು ಸಮ್ಮತಿಸಿದರು. ಆ ಮೂಲಕ ತಾವು ಸದಾ ಹರಿಸಂಕಲ್ಪದಂತೆಯೇ ನಡೆಯುವವರು ಎಂದು ತಿಳಿಸಿಕೊಟ್ಟರು.

---

೧೬೨. ಸಮಮಸ್ತ್ವನಯೋರ್ಯುದ್ಧಮಿತಿ ಪ್ರಾಹ ಪ್ರಜಾಪತಿಃ ।
ವಾಕ್ಯಂ ಶಿವಸ್ಯ ತಚ್ಛ್ರುತ್ವಾ ಶಕ್ರೋ ನೇತ್ಯಾಹ ಸತ್ವರಃ ॥ – ಐತರೇಯಭಾಷ್ಯೋದಾಹೃತ ಭಾರತವಚನ (೨/೫೩)

೧೬೩. ಸಮೋಽಸ್ತು ವಿಜಯೋ ದೇವ ಏತಯೋರ್ನರಸಿಂಹಯೋಃ ।
ಕರ್ಣಾರ್ಜುನ ವಿವಾದೇನ ಸರ್ವಂ ಸಂಶಯಿತಂ ಜಗತ್ ॥ – ಭಾರತ (ಕರ್ಣ. ೮೭/೬೪,೬೫)

ನ ಕರ್ಣಾರ್ಜುನಯೋರರ್ಥೇ ವಿರೋಧಂ ಕುರುತ ಕ್ವಚಿತ್ ।
ಭೀಮದುರ್ಯೋಧನಾರ್ಥೇ ವಾ ಪಶ್ಯಂತ್ವೇವ ಚ ಸಂಯುಗಮ್ ।
ಇತ್ಯುಕ್ತೇ ಶಾಂತಿಮಾಪನ್ನಾ ದದೃಶುಃ ಸಂಯುಗಂ ತಯೋಃ ॥ ೧೬೪ ॥

ಅ: ''ಕರ್ಣಾರ್ಜುನರಿಗೋಸ್ಕರವಾಗಲೀ, ಭೀಮ-ದುರ್ಯೋಧನರ ಸಲುವಾಗಿ ಆಗಲೀ ನೀವು ಎಲ್ಲೂ ಜಗಳವಾಡಕೂಡದು. ಅವರ ಯುದ್ಧವನ್ನು ಮಾತ್ರ ನೋಡುತ್ತಿರಿ''. ಬ್ರಹ್ಮ ಹೀಗೆ ನುಡಿಯಲು ಅವರೆಲ್ಲ ಶಾಂತಿ ಹೊಂದಿದವರಾಗಿ ಅವರಿಬ್ಬರ ಯುದ್ಧವನ್ನು ನೋಡ-ತೊಡಗಿದರು.

ವಿ: ಮಹಾಭಾರತದಲ್ಲಿ ಪ್ರಜಾಪತಿ ಬ್ರಹ್ಮನಲ್ಲಿ ಕರ್ಣಾರ್ಜುನರ ಯುದ್ಧ ಸಮವಾಗುವಂತೆ ಕೇಳಿಕೊಳ್ಳುವನು ಎಂದಿದೆ :

ಸಮಮಸ್ತ್ವನಯೋರ್ಯುದ್ಧಮಿತಿ ಹ್ಯಾಹ ಪ್ರಜಾಪತಿಃ।
ವಾಕ್ಯಂ ಶಿವಸ್ಯ ತಚ್ಛ್ರುತ್ವಾ ಶಕ್ರೋ ನೇತ್ಯಾಹ ಸತ್ವರಃ ॥ಇತಿ ಚ ಭಾರತೇ
–(ಐತರೇಯಭಾಷ್ಯ)

ಇಲ್ಲಿಯ ಪ್ರಜಾಪತಿ ಶಬ್ದಕ್ಕೆ ಶಿವ ಎಂದೇ ಅರ್ಥವೆಂದು ನಿರ್ಣಯದ ಆಶಯ. ಮಹಾಭಾರತದ ಆ ವಾಕ್ಯವನ್ನು ಉಲ್ಲೇಖಿಸಿ ಆಚಾರ್ಯರು ಐತರೇಯಭಾಷ್ಯದಲ್ಲಿ ಪ್ರಜಾಪತಿ ಶಬ್ದ ಶಿವವಾಚಕ ಎಂಬುದನ್ನು ಸಮರ್ಥಿಸಿರುವರು :

ಪ್ರಜಾಪತಿಃ ಶಿವಃ ಶೇಷೋ ಲಿಂಗಮಿತ್ಯಭಿಧೀತೇ।
ಲಿಂಗಾಭಿಮಾನೀ ಲೋಕಸ್ಯ ಸ್ರಷ್ಟಾ ಗಿರಿಶ ಏವ ಹಿ ॥ ಇತಿ ಶೈವಪುರಾಣೇ।

ಬ್ರಹ್ಮದೇವರ ಮಾತನ್ನು ಸುರರಂತೆ ಅಸುರರೂ ಸಹ ಪಾಲಿಸಿದರು ಎಂಬುದು ಇಲ್ಲಿಯ ವಿಶೇಷ. ಅಸುರರಿಗೆ ಹಾಗೆ ಬ್ರಹ್ಮದೇವರ ಬಗ್ಗೆ ವಿಶೇಷ ಗೌರವ ಭಾವನೆಯಿರುವುದರಿಂದಲೇ ಅವರಲ್ಲಿ ಮಹಾಸುರರು ಅವರನ್ನೇ ಕುರಿತು ತಪಸ್ಸು ಮಾಡುವರು ಎಂದು ತಿಳಿಯಬಹುದು.

ಕರ್ಣಾರ್ಜುನರ ಯುದ್ಧ

ವವರ್ಷತುಸ್ತೌ ಚ ಮಹಾಸ್ತ್ರಶಸ್ತ್ರೈ-
ರ್ಭೀಮೋ ರಥಸ್ಥೋಽವರಜಂ ಜುಗೋಪ ।
ಶೈನೇಯಪಾಂಚಾಲಮುಖಾಶ್ಚ ಪಾರ್ಥ-
ಮಾವಾರ್ಯ ತಸ್ಥುಃ ಪ್ರಸಭಂ ನದಂತಃ ॥ ೧೬೫ ॥

ಅ: ಕರ್ಣಾರ್ಜುನರಿಬ್ಬರೂ ಮಹಾಸ್ತ್ರಗಳ ಹಾಗೂ ಮಹಾಶಸ್ತ್ರಗಳ ಮಳೆಯನ್ನು ಸುರಿಸಿದರು. ರಥದಲ್ಲಿದ್ದ ಭೀಮ ಅರ್ಜುನನನ್ನು ರಕ್ಷಿಸತೊಡಗಿದ. ಸಾತ್ಯಕಿ, ಧೃಷ್ಟದ್ಯುಮ್ನ ಮೊದಲಾದವರೆಲ್ಲ ಅರ್ಜುನನನ್ನು ಸುತ್ತುಗಟ್ಟಿ ಬಲವಾಗಿ ಸಿಂಹನಾದ ಮಾಡುತ್ತಾ ನಿಂತರು.

ದುರ್ಯೋಧನದ್ರೌಣಿಮುಖಾಶ್ಚ ಕರ್ಣಂ
ರರಕ್ಷುರಾವಾರ್ಯ ತದಾऽऽಸ ಯುದ್ಧಮ್ ।
ತತ್ರಾರ್ಜುನಂ ಬಾಣವರೈಃ ಸ ಕರ್ಣಃ
ಸಮರ್ದಯಾಮಾಸ ವಿಶೇಷಯನ್ ರಣೇ ।
ತದಾ ನದನ್ ಭೀಮಸೇನೋ ಜಗಾದ
ಗದಾಂ ಸಮಾದಾಯ ಸಮಾತ್ತರೋಷಃ ॥ ೧೬೬ ॥

ಅ: ದುರ್ಯೋಧನ, ಅಶ್ವತ್ಥಾಮ ಮೊದಲಾದವರು ಕರ್ಣನನ್ನು ರಕ್ಷಿಸಲೆಂದು ಅವನ ಸುತ್ತ ನೆರೆದರು; ಆಗ ಯುದ್ಧ ನಡೆಯಿತು. ಆ ಯುದ್ಧದಲ್ಲಿ ಕರ್ಣ ಬಾಣಗಳ ಗುಂಪುಗಳಿಂದ ಅರ್ಜುನನನ್ನು ಮೀರಿಸುತ್ತಾ ಬಹಳವಾಗಿ ಪೀಡಿಸತೊಡಗಿದ. ಆಗ ಭೀಮಸೇನ ಗರ್ಜಿಸುತ್ತಾ ಕೋಪದಿಂದ ಗದೆಯನ್ನು ಕೈಗೆತ್ತಿಕೊಂಡು ನುಡಿದ:

ಭೀಮನಿಂದ ಅರ್ಜುನನಿಗೆ ಸ್ಫೂರ್ತಿ

ಅಹಂ ಚೈನಂ ಗದಯಾ ಪೋಥಯಾಮಿ
ತ್ವಂ ವಾ ಜಹೀಮಂ ಸಮುಪಾತ್ತವೀರ್ಯಃ ।
ಕೃಷ್ಣೋऽಪಿ ತಂ ಬೋಧಯಾಮಾಸ ಸಮ್ಯಕ್
ನರಾವೇಶಂ ವ್ಯಂಜಯನ್ ಭೂಯ ಏವ ॥ ೧೬೭ ॥

ಅ: ''ನಾನೇ ಗದೆಯಿಂದ ಕರ್ಣನನ್ನು ಕೊಂದುಬಿಡುವೆ, ಅಥವಾ ನೀನೇ ಈಗಲೇ ಇವನನ್ನು ಪರಾಕ್ರಮ ತೋರಿಸಿ ಕೊಂದುಬಿಡು''. ಭೀಮ ಹೀಗೆ ನುಡಿಯಲು ಕೃಷ್ಣನೂ ಅರ್ಜುನನೊಳಗಿನ ನರಾವೇಶವನ್ನು ಇನ್ನೂ ವಿಶೇಷವಾಗಿ ಅಭಿವ್ಯಕ್ತಿಗೊಳಿಸಲೆಂದು ತಿಳುವಳಿಕೆ ನೀಡಿದ.

---

೧೬೭. ತಯಾ ಧೃತ್ಯಾ ಸೂತಪುತ್ರಂ ಜಹಿ ತ್ವಮಹಂ ಚೈನಂ ಗದಯಾ ಪೋಥಯಿಷ್ಯೇ ।
– ಭಾರತ (ಕರ್ಣ.೮೯/೪೨)

ವಿ: ೧) ಭೀಮು ಗದೆ ಹಿಡಿದು ಅರ್ಜುನನಿಗೆ ಹೀಗೆಂದದ್ದು ಕೃಷ್ಣ ಚಕ್ರ ಹಿಡಿದು ವಿವೇಕ ನೀಡಿದ ಪ್ರಸಂಗವನ್ನು ಜ್ಞಾಪಿಸುತ್ತದೆ, ಅರ್ಜುನ ಮೆದುವಾಗಿ ಯುದ್ಧಮಾಡುವುದನ್ನು ತಪ್ಪಿಸಲು ಕೃಷ್ಣ ಚಕ್ರ ಹಿಡಿದು ಜ್ಞಾನ ನೀಡಿದ್ದಂತೆ, ಭೀಮು ಕರ್ಣನ ಮೇಲೆ ಹಿರಿಮೆ ಸಾಧಿಸಲೆಂದು ಗದೆ ಹಿಡಿದು ತಿಳುವಳಿಕೆ ನೀಡಿದ. ಹೀಗೆ ಹರಿ ಮತ್ತು ವಾಯು ಇಬ್ಬರಿಂದಲೂ ವಿಶೇಷ ತಿಳುವಳಿಕೆ ಪಡೆಯುವ ಯೋಗ ಅರ್ಜುನನದಾಗಿತ್ತು, ಅದೇ ಅವನ ಯಶಸ್ಸಿಗೆ ಮುಖ್ಯ ಸಾಧನವೂ ಆಗಿತ್ತು.

೨) ಪ್ರತಿಯೊಬ್ಬ ಜೀವರೂ ತಮ್ಮ ಕರ್ಣಾದಿ ಇಂದ್ರಿಯಗಳ ಮೇಲೆ ಹತೋಟಿ ಸಾಧಿಸಲು ಹೀಗೆ ಹರಿವಾಯುಗಳ ಅನುಗ್ರಹವೇ ಮುಖ್ಯಸಾಧನ ಎಂಬ ತತ್ತ್ವವೂ ಇದರಿಂದ ಸೂಚಿತ ಎಂದು ತಿಳಿಯಬಹುದು.

೨) ಹಿಂದೊಮ್ಮೆ ಭೀಮು ಅರ್ಜುನನಿಗೆ 'ನಿನ್ನಿಂದಾಗದಿದ್ದಲ್ಲಿ ನಾನೇ ಕರ್ಣನನ್ನು ಕೊಂದುಬಿಡುವೆ' ಎಂದು ತಿಳಿಸಿದ್ದನ್ನು ಗಮನಿಸಬೇಕು.

ಅರ್ಜುನನ ಅದ್ಭುತ ಪರಾಕ್ರಮ

ಸಮೃದ್ಧವೀರ್ಯಃ ಸ ತದಾ ಧನಂಜಯಃ
ಸುಯೋಧನದ್ರೌಣಿಕೃಪಾನ್ ಸಭೋಜಾನ್ ।
ಸಾಕಂ ಚ ಬಾಣೈರ್ವಿರಥಾಂಶ್ಚಕಾರ
ವಿವ್ಯಾಧ ತಾನಪ್ಯರಿಹಾ ಸುಪುಂಖೈಃ ॥ ೧೬೮ ॥

ಅ: ಅರ್ಜುನ ಆಗ ವಿಶೇಷವಾಗಿ ಸಾಮರ್ಥ್ಯ ಹೆಚ್ಚಿಸಿಕೊಂಡವನಾಗಿ ದುರ್ಯೋಧನ, ಅಶ್ವತ್ಥಾಮ, ಕೃಪ, ಕೃತವರ್ಮರನ್ನು ಬಾಣಗಳಿಂದ ವಿರಥರನ್ನಾಗಿ ಮಾಡಿದ. ಶತ್ರುನಾಶಕನಾದ ಅವನು ಒಳ್ಳೆಯ ಗರಿಗಳನ್ನು ಹೊಂದಿದ್ದ ಬಾಣಗಳಿಂದ ಹೊಡೆದ.

ವಿ: ಶ್ರೀಕೃಷ್ಣ ಭೀಮುರಿಂದ ಸ್ಫೂರ್ತಿ ಪಡೆದ ಅರ್ಜುನ ತನ್ನ ಸಾಮರ್ಥ್ಯವನ್ನು ವಿಶೇಷವಾಗಿ ತೋರುತ್ತಾ ಅತ್ಯಂತ ವೇಗದಿಂದ ದುರ್ಯೋಧನಾದಿಗಳ ಮೇಲೆ ಜಯ ಸಾಧಿಸಿದ ಎಂದರ್ಥ.

ಅಶ್ವತ್ಥಾಮನಿಂದ ದುರ್ಯೋಧನನಿಗೆ ನೀತಿಬೋಧೆ

ತೇ ಕಿಂಚಿದ್ದೂರತಸ್ತಸ್ಥುಃ ಪಶ್ಯಂತೋ ಯುದ್ಧಮದ್ಭುತಮ್ ।
ಅಮಾನುಷಂ ತತ್ ಪಾರ್ಥಸ್ಯ ದೃಷ್ಟ್ವಾ ಕರ್ಮ ಗುರೋಃ ಸುತಃ ।
ಗೃಹೀತ್ವಾ ಪಾಣಿನಾ ಪಾಣಿಂ ದುರ್ಯೋಧನಮಭಾಷತ ॥ ೧೬೯ ॥

ಅ: ಅವರೆಲ್ಲ ಅದ್ಭುತವಾದ ಆ ಯುದ್ಧವನ್ನು ನೋಡುತ್ತಾ ಸ್ವಲ್ಪ ದೂರದಲ್ಲಿ ನಿಂತರು. ಅರ್ಜುನನ ಅತಿಮಾನುಷವಾದ ಆ ಕಾರ್ಯವನ್ನು ನೋಡಿ ಅಶ್ವತ್ಥಾಮ ತನ್ನ ಕೈಯಿಂದ ದುರ್ಯೋಧನನ ಕೈ ಹಿಡಿದುಕೊಂಡು ಅವನಿಗೆ ಹೇಳಿದ.

ದೃಷ್ಟಂ ಹಿ ಭೀಮಸ್ಯ ಬಲಂ ತ್ವಯಾऽದ್ಯ
ತಥೈವ ಪಾರ್ಥಸ್ಯ ಯಥಾ ಜಿತಾ ವಯಮ್ ।
ಅಲಂ ವಿರೋಧೇನ ಸಮೇತ್ಯ ಪಾಂಡವೈಃ
ಪ್ರಶಾಧಿ ರಾಜ್ಯಂ ಚ ಮಯಾ ಸಮೇತಃ ॥ ೧೭೦ ॥

ಅ: ''ನೀನೀಗ ಭೀಮನ ಬಲವನ್ನು ಹಾಗೆಯೇ ಅರ್ಜುನನ ಬಲವನ್ನು ನೋಡಿದೆ; ಅವರಿಂದ ನಾವೆಲ್ಲಾ ಹೇಗೆ ಸೋತೆವು ಎಂಬುದನ್ನು ನೋಡಿದೆ. ಇನ್ನು ಪಾಂಡವರೊಂದಿಗೆ ವಿರೋಧ ಸಾಕು. ಅವರೊಂದಿಗೆ ಜೊತೆಗೂಡಿ ರಾಜ್ಯವನ್ನು ಪಾಲಿಸು. ನಾನು ನಿನ್ನೊಂದಿಗಿರುವೆ.

ವಿ: ಈವರೆಗೂ ಅಶ್ವತ್ಥಾಮರ ಹೊರತು ಇತರರೆಲ್ಲ ದುರ್ಯೋಧನನಿಗೆ ಪಾಂಡವರೊಂದಿಗೆ ಸಂಧಿ ಮಾಡಿಕೊಳ್ಳುವ ಹಿತೋಕ್ತಿಯನ್ನು ನೀಡಿದ್ದರು. ಅವರೂ ಸಹ ಅದನ್ನು ನೀಡಿದ್ದು ಈಗಿನ ವಿಶೇಷ.

ಪಾಂಡವರು ಶಾಂತಿಪ್ರಿಯರು

ಧನಂಜಯಸ್ತಿಷ್ಠತಿ ವಾರಿತೋ ಮಯಾ
ಜನಾರ್ದನೋ ನೈವ ವಿರೋಧಮಿಚ್ಛತಿ ।
ವೃಕೋದರಸ್ತದ್ವಚನೇ ಸ್ಥಿತಃ ಸದಾ
ಯುಧಿಷ್ಠಿರಃ ಶಾಂತಮನಾಸ್ತಥಾ ಯಮೌ ॥ ೧೭೧ ॥

ಅ: ''ನಾನು ತಡೆದರೆ ಅರ್ಜುನ ಯುದ್ಧ ನಿಲ್ಲಿಸುವನು. ಕೃಷ್ಣನಂತೂ ಸರ್ವಥಾ ವಿರೋಧವನ್ನು ಬಯಸನು. ಭೀಮನು ಸದಾ ಕೃಷ್ಣನ ಮಾತಿನಂತೆ ನಡೆಯುವವನು. ಯುಧಿಷ್ಠಿರ ಶಾಂತ ಮನಸ್ಕ, ನಕುಲ, ಸಹದೇವರೂ ಅಂಥವರೇ''.

---

೧೬೯. ಅಥಾಬ್ರವೀತ್ ದ್ರೋಣಸುತಸ್ತವಾತ್ಮಜಂ ಕರಂ ಕರೇಣ ಪ್ರತಿಪೀಡ್ಯ ಸಾಂತ್ವಯನ್ ।
– ಭಾರತ (ಕರ್ಣ. ೮೮/೨೦)

ವಿಃ ೧) ಈ ಹಂತದಲ್ಲಿ ಸಂಧಾನ ಸಾಧ್ಯವೇ ಎಂಬ ಪ್ರಶ್ನೆಗೆ ಇಲ್ಲಿ ಉತ್ತರವಿದೆ. ಅರ್ಜುನ ತನಗೆ ತುಂಬಾ ಪ್ರಿಯ; ಇಲ್ಲಂತೂ ತನ್ನ ತಂದೆಯ ಶಿಷ್ಯ; ಸ್ವರೂಪದಲ್ಲಂತೂ ಇಂದ್ರನಾದ್ದರಿಂದ ತನ್ನದೇ ಶಿಷ್ಯ. ಹೀಗಿದ್ದರಿಂದ ಅಶ್ವತ್ಥಾಮರಿಗೆ ಅರ್ಜುನನ ಮೇಲೆ ಅಪಾರ ವಿಶ್ವಾಸ.

೨) ಕೃಷ್ಣನಂತೂ ನಿಷ್ಕಾರಣ ವೈರವನ್ನು ಸಾಧಿಸುವವನಲ್ಲ, ಅವನು ಸಮ. ಹಿಂದೆ ದುರ್ಯೋಧನನಿಗೆ ತಿಳಿಸಿಯೇ ಇರುವನು – 'ನೀನು ಪಾಂಡವರನ್ನು ದ್ವೇಷಿಸುತ್ತಿರುವುದರಿಂದ ನನಗೆ ನಿನ್ನ ಮೇಲೆ ಕೋಪ' ಎಂದು. ಅದನ್ನು ತೊರೆದಲ್ಲಿ ಅವನಿಗೆ ದ್ವೇಷವೇನೂ ಇರದು.

೩) ಭೀಮನ ಬಗ್ಗೆ ಬಂದ ಮಾತಂತೂ ಅಪೂರ್ವ; ಭೀಮನೆಂದೂ ಕೃಷ್ಣನ ಪರಮಭಕ್ತ; ಕೃಷ್ಣನ ನಿರ್ಣಯವೇ ಅವನ ನಿರ್ಣಯ.

೪) ಇನ್ನು ಧರ್ಮರಾಜ ಅವನು ಶಾಂತಿಪ್ರಿಯ. ನಕುಲ, ಸಹದೇವರೂ ಹಾಗೆಯೇ. ಈ ಶ್ಲೋಕ ಮಹಾಭಾರತದಲ್ಲಿ ಸಣ್ಣಪುಟ್ಟ ವ್ಯತ್ಯಾಸದೊಂದಿಗೆ ಇದೇ ರೀತಿ ಕಂಡುಬರುವುದನ್ನು ಗಮನಿಸಬೇಕು :

ಧನಂಜಯಃ ಶಾಮ್ಯತಿ ವಾರಿತೋ ಮಯಾ
ಜನಾರ್ದನೋ ನೈವ ವಿರೋಧಮಿಚ್ಛತಿ ।
ಯುಧಿಷ್ಠಿರೋ ಭೂತಹಿತೇ ರತಃ ಸದಾ
ವೃಕೋದರಸ್ತದ್ವಶಗಸ್ತಥಾ ಯಮೌ ॥ – ಭಾರತ (ಕರ್ಣ.೮೮/೨೨)

ಹಿತಾರ್ಥಮೇತತ್ ತವ ವಾಕ್ಯಮೀರಿತಂ
ಗೃಹಾಣ ಮೇ ನೈವ ಭಯಾದುದೀರಿತಮ್ ।
ಅಹಂ ಹ್ಯವಧ್ಯೋ ಮಮ ಚೈವ ಮಾತುಲೋ
ನ ಶಂಕಿತುಂ ಮೇ ವಚನಂ ತ್ವಮರ್ಹಸಿ ॥ ೧೭೨ ॥

ಅ: ನಾನು ನಿನ್ನ ಹಿತಕ್ಕೆಂದು ಈ ಮಾತು ಆಡಿದೆ, ಅರ್ಥಮಾಡಿಕೋ. ನಾನು ಭಯದಿಂದ ಇದನ್ನು ನುಡಿದದ್ದಲ್ಲ. ನಾನಂತೂ ಅವಧ್ಯ; ನನ್ನ ಸೋದರಮಾವನೂ ಹಾಗೆಯೇ. ನನ್ನ ಮಾತಿನಲ್ಲಿ ನೀನು ಸಂದೇಹಪಡಬೇಕಿಲ್ಲ.

ವಿಃ ೧) ಅಶ್ವತ್ಥಾಮ, ಕೃಪ ಇಬ್ಬರೂ ಸಪ್ತ ಚಿರಂಜೀವಿಗಳಲ್ಲಿ ಸೇರಿದ್ದರಿಂದ ಅವರು ಅವಧ್ಯರೆಂಬುದು ಸ್ಪಷ್ಟ :

---

೧೭೨. ''ಅಹಂ ತ್ವವಧ್ಯೋ ಮಮ ಚೈವ ಮಾತುಲಃ'' – ಭಾರತ (ಕರ್ಣ. ೮೮/೨೨)

ಅಶ್ವತ್ಥಾಮಾ ಬಲಿರ್ವ್ಯಾಸೋ ಹನೂಮಾಂಶ್ಚ ವಿಭೀಷಣಃ ।
ಕೃಪಃ ಪರಶುರಾಮಶ್ಚ ಸಪ್ತೈತೇ ಚಿರಜೀವಿನಃ ॥

೨) ಅವರಿಬ್ಬರೂ ಬಂಧುಗಳೇ. ಅವರ ಬೇರಾವ ಬಂಧುಗಳೂ ಅಲ್ಲಿಲ್ಲ. ಆದ್ದರಿಂದ ಅವರು ತನ್ನ ಸ್ವಾರ್ಥಕ್ಕೆಂದು ಆ ಮಾತು ಸರ್ವಥಾ ಆಡುತ್ತಿಲ್ಲ ಎಂಬುದು ಸ್ಪಷ್ಟ.

ದುರ್ಯೋಧನನ ನಿರಾಕರಣೆ

ಇತೀರಿತಃ ಪ್ರಾಹ ಸುಯೋಧನಸ್ತಂ
ದುಃಶಾಸನಸ್ಯಾದ್ಯ ಪಪೌ ಹಿ ಶೋಣಿತಮ್ ।
ಶಾರ್ದೂಲಚೇಷ್ಟಾಮಕರೋಚ್ಚ ಭೀಮೋ
ನ ಮೇ ಕಥಂಚಿತ್ ತದನೇನ ಸಂಧಿಃ ॥ ೧೭೩ ॥

ಅ: ಅಶ್ವತ್ಥಾಮ ಹೀಗೆನ್ನಲು ದುರ್ಯೋಧನ ತಿಳಿಸಿದ : 'ಭೀಮ ಈಗ ದುಶ್ಶಾಸನನ ರಕ್ತ ಕುಡಿದ; ಹುಲಿಯಂತೆ ವರ್ತಿಸಿದ; ಆದ್ದರಿಂದ ಇವನೊಂದಿಗೆ ನನಗೆ ಎಂದೂ, ಯಾವ ರೀತಿಯಲ್ಲೂ ಸಂಧಿ ಸಾಧ್ಯವಿಲ್ಲ'.

ವಿ: ೧) ಜೀವಾಧಮನಾದ ದುರ್ಯೋಧನ ಜೀವೋತ್ತಮನೊಂದಿಗೆ ಸಂಧಿ ಮಾಡಿಕೊಳ್ಳುವುದು ಕತ್ತಲೆ ಬೆಳಕಿನ ಸಮಾಗಮದಂತೆ ಸರ್ವಥಾ ಅಸಾಧ್ಯ. ಭೀಮನ ಕಾರ್ಯಗಳನ್ನು ವೈಯಕ್ತಿಕ ದ್ವೇಷದ ಕಾರ್ಯಗಳೆಂಬಂತೆ ಅವನು ನೋಡುತ್ತಿರುವುದರಲ್ಲೇ ಅವನ ಮೂಲ ದೋಷವಿದೆ ಎಂಬುದನ್ನು ಗಮನಿಸಬೇಕು.

೨) ದುರ್ಯೋಧನನ ಮನಃಪ್ರವೃತ್ತಿ ಮತ್ತೊಮ್ಮೆ ಪ್ರಕಾಶನವಾದದ್ದು ಮಾತ್ರ ಇಲ್ಲಿಯ ವಿಶೇಷ.

ಕರ್ಣಾರ್ಜುನರ ಮಹಾಯುದ್ಧ

ಇತ್ಯುಕ್ತೋ ದ್ರೌಣಿರಾಸೀತ್ ಸ ತೂಷ್ಣೀಂ ಕರ್ಣಧನಂಜಯೌ ।
ಮಹಾಸ್ತ್ರಶಸ್ತ್ರವರ್ಷೇಣ ಚಕ್ರತುಃ ಖಮನಂತರಮ್ ॥ ೧೭೪ ॥

ಅ: ದುರ್ಯೋಧನ ಹೀಗೆನ್ನಲು ಅಶ್ವತ್ಥಾಮ ಸುಮ್ಮನಾದ. ಕರ್ಣಾರ್ಜುನರು ಮಹಾ ಅಸ್ತ್ರಶಸ್ತ್ರಗಳ ಸುರಿಮಳೆಯಿಂದ ಆಕಾಶವನ್ನು ಎಡೆಯಿಲ್ಲದ್ದನ್ನಾಗಿ ಮಾಡಿದರು.

---

೧೭೩. ನಿಹತ್ಯ ದುಃಶಾಸನಮುಕ್ತವಾನ್ ವಚಃ ಪ್ರಸಹ್ಯ ಶಾರ್ದೂಲವದೇಷ ದುರ್ಮತಿಃ ।
ವೃಕೋದರಸ್ತದ್ಧೃದಯೇ ಮಮ ಸ್ಥಿತಂ ನ ತತ್ ಪರೋಕ್ಷಂ ಭವತಃ ಕುತಃ ಶಮಃ ॥ – (ಕರ್ಣ. ೮೮/೩೧)

ಆಗ್ನೇಯವಾರುಣ್ಯೈಂದ್ರಾದೀನ್ಯೇತಾನ್ಯನ್ಯೋನ್ಯಮೃತ್ಯವೇ ।
ಬ್ರಹ್ಮಾಸ್ತ್ರಮಪ್ಯುಭೌ ತತ್ರ ಪ್ರಯುಜ್ಯಾನದತಾಂ ರಣೇ ।
ಅನ್ಯೋನ್ಯಾಸ್ತ್ರಪ್ರತೀಘಾತಂ ಕೃತ್ವೋಭೌ ಚ ವಿರೇಜತುಃ ॥ ೧೭೫ ॥

ಅ: ಅವರಿಬ್ಬರು ಪರಸ್ಪರರನ್ನು ಕೊಲ್ಲಲೆಂದು ಆಗ್ನೇಯಾಸ್ತ್ರ, ವಾರುಣಾಸ್ತ್ರ, ಐಂದ್ರಾಸ್ತ್ರ ಮೊದಲಾದವುಗಳನ್ನು ಪ್ರಯೋಗಿಸಿದರು. ಕೊನೆಗೆ ಇಬ್ಬರೂ ಯುದ್ಧದಲ್ಲಿ ಬ್ರಹ್ಮಾಸ್ತ್ರವನ್ನೂ ಪ್ರಯೋಗಿಸಿ ಸಿಂಹನಾದ ಮಾಡಿದರು. ಇಬ್ಬರೂ ಪರಸ್ಪರರ ಅಸ್ತ್ರಗಳ ಪ್ರತೀಕಾರವನ್ನು ಮಾಡಿ ಮೆರೆಯತೊಡಗಿದರು.

ಗುರಿತಪ್ಪಿದ ಸರ್ಪಾಸ್ತ್ರ

ಕ್ರಮೇಣ ವೃದ್ಧೋರುಬಲೇನ ತತ್ರ
ಸುರೇಂದ್ರಪುತ್ರೇಣ ವಿರೋಚನಾತ್ಮಜಃ ।
ನಿರಾಕೃತೋ ನಾಗಮಯಂ ಶರೋತ್ತಮಂ
ಬ್ರಹ್ಮಾಸ್ತ್ರಯುಕ್ತಂ ವಿಸಸರ್ಜ ವಾಸವೌ ॥ ೧೭೬ ॥

ಅ: ಅರ್ಜುನನ ಬಲ ಕ್ರಮವಾಗಿ ಹೆಚ್ಚುತ್ತಾ ಹೋಯಿತು. ಅವನೊಂದಿಗೆ ಕಾದಲಾಗದ ಕರ್ಣ ಬ್ರಹ್ಮಾಸ್ತ್ರದಿಂದ ಕೂಡಿದ್ದ ನಾಗಮಯವಾದ ಉತ್ತಮ ಬಾಣವೊಂದನ್ನು ಅರ್ಜುನನ ಮೇಲೆ ಪ್ರಯೋಗಿಸಿದ.

ವಿ: ಹಾಗೆ ಕರ್ಣ ಆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಲೆಂದು ಅರ್ಜುನನ ಅಪಾಂಗದತ್ತ ಗುರಿ ಇಟ್ಟಿದ್ದಾಗ ಶಲ್ಯ ಅದನ್ನು ತಡೆದು ಅವನ ಎದೆಗೆ ಗುರಿಯಿಡಲು ತಿಳಿಸಿದ. ಕರ್ಣ ಅದನ್ನು ಒಪ್ಪದೇ ತಾನು ಒಮ್ಮೆ ಇಟ್ಟ ಗುರಿಯನ್ನು ಬದಲಾಯಿಸುವವನಲ್ಲ ಎಂದು ನುಡಿದು ಅದನ್ನು ಹಾಗೆಯೇ ಪ್ರಯೋಗಿಸಿದ ಎಂಬ ವಿವರ ಮಹಾಭಾರತದಲ್ಲಿದೆ (ಕರ್ಣಪರ್ವ ೯೦/೨೬):

---

೧೭೫. ಆಗ್ನೇಯಾಸ್ತ್ರಪ್ರತಿಘಾತಾರ್ಥಂ ವಾರುಣಮಿತ್ಯೇವಮನ್ಯೋನ್ಯಾಸ್ತ್ರೈಃ ಪ್ರತಿಘಾತಂ ಕೃತ್ವಾ ಉಭಾವಪಿ ವಿರೇಜತುಃ। – (ವ.)

೧೭೬. ನಾಗಮಯಂ ಸರ್ಪಾಧಿಷ್ಠಿತಂ ಶರೋತ್ತಮಂ ಬ್ರಹ್ಮಾಸ್ತ್ರಯುಕ್ತಂ ಬ್ರಹ್ಮಾಸ್ತ್ರೇಣಾಭಿಮಂತ್ರಿತಮ್ । – (ವ.)

೧೭೬. ದಶಶತನಯನೋಽಹಂ ದೃಶ್ಯ ಬಾಣೇ ಪ್ರವಿಷ್ಟಂ ನಿಹತ ಇತಿ ಸುತೋ ಮೇ ಸ್ರಸ್ತಗಾತ್ರೋ ಬಭೂವ ।
ಜಲಜಕುಸುಮಯೋನಿಃ ಶ್ರೇಷ್ಠಭಾವೋ ಜಿತಾತ್ಮಾ ತ್ರಿದಶಪತಿಮವೋಚನ್ಮಾ ಮೃಥಿಷ್ಯಾ ಜಯೇ ಶ್ರೀಃ ॥
– (ಕರ್ಣ. ೯೦/೨೪)

ಅಥಾಬ್ರವೀತ್ ಕ್ರೋಧಸಂರಕ್ತನೇತ್ರೋ ಮದ್ರಾಧಿಪಂ ಸೂತಪುತ್ರಸ್ತರಸ್ವೀ ।
ನ ಸಂಧತ್ತೇ ದ್ವಿಃ ಶರಂ ಶಲ್ಯ ಕರ್ಣೋ ನ ಮಾದೃಶಾ ಜಿಹ್ಮಯುದ್ಧಾ ಭವಂತು ॥

ಆ ಬ್ರಹ್ಮಾಸ್ತ್ರದೊಂದಿಗೆ ಕೂಡಿದ್ದ ಬಾಣದಲ್ಲಿ ಸೇರಿದ್ದ ನಾಗ ಖಾಂಡವವನದಹನದಲ್ಲಿ ತನ್ನ ಬಾಲ ಕಳೆದುಕೊಂಡಿದ್ದ ಅಶ್ವಸೇನ ಎಂಬುದನ್ನು ಗಮನಿಸಬೇಕು (೨೦/೨೪೦). ಅವನು ಈ ಪ್ರಸಂಗಕ್ಕಾಗಿ ಅನೇಕ ವರ್ಷಗಳಿಂದ ಕರ್ಣನ ಬತ್ತಳಿಕೆಯಲ್ಲಿ ಸೇರಿ ಹೊಂಚುತ್ತಿದ್ದ.

ಶ್ರೀಕೃಷ್ಣನಿಂದ ಅರ್ಜುನನ ರಕ್ಷಣೆ

ತಂ ವಾಸುದೇವೋ ರಥಮಾನಮಯ್ಯ
ಮೋಘಂ ಚಕಾರಾರ್ಜುನತಃ ಕಿರೀಟಮ್ ।
ಚೂರ್ಣೀಕೃತಂ ತೇನ ಸುರೇಂದ್ರಸೂನೋ-
ರ್ದಿವಂ ಯಯೌ ಬಾಣಗತಶ್ಚ ನಾಗಃ ॥ ೧೭೭ ॥

ಅ: ಕೃಷ್ಣ ರಥವನ್ನು ಕೆಳಕ್ಕೆ ಒತ್ತಿ ಆ ಅಸ್ತ್ರವನ್ನು ವ್ಯರ್ಥಗೊಳಿಸಿದ. ಅದು ಇಂದ್ರಪುತ್ರನಾದ ಅರ್ಜುನನ ದಿವ್ಯವಾದ ಕಿರೀಟವನ್ನು ಪುಡಿಗೈದಿತು. ಬಾಣದೊಳಗಿದ್ದ ನಾಗ ಮರಳಿ ಕರ್ಣನತ್ತ ಸಾಗಿತು.

ಏ: ಅರ್ಜುನನ ಆ ದಿವ್ಯಕಿರೀಟ ಇಂದ್ರ ನಿವಾತಕವಚರ ವಧಕ್ಕೆಂದು ತೆರಳಲು ಸನ್ನದ್ಧನಾದಾಗ ತೊಡಿಸಿದ್ದ ಕಿರೀಟ (೨೨/೩೧೭).

ನಮಿತೇ ವಾಸುದೇವೇನ ರಥೇ ಪಂಚಾಂಗುಲಂ ಭುವಿ ।
ಅಪಾಂಗದೇಶಮುದ್ದಿಶ್ಯ ಮುಕ್ತೇ ನಾಗೇ ಕಿರೀಟಿನಃ ॥ ೧೭೮ ॥

ಭಂಕ್ತ್ವಾ ಕಿರೀಟಂ ವಿಯತಿ ಗಚ್ಛತಿ ಪ್ರಭುಣೋದಿತಃ ।
ಬಾಣೈಸ್ತಕ್ಷಕಪುತ್ರಂ ತಂ ವಾಸವಿಃ ಪೂರ್ವವೈರಿಣಮ್ ॥ ೧೭೯ ॥

---

೧೭೭. ...ರ್ದಿವ್ಯಂ ಯಯೌ (ಪಾಠಾಂತರ); ದಿವ್ಯಂ ಕಿರೀಟಮ್ (ವೇ.)

೧೭೭. ತಂ ಪ್ರೇಕ್ಷ್ಯ ದೀಪ್ತಂ ಯುಧಿ ಮಾಧವಸ್ತು ತ್ವರಾನ್ವಿತಂ ಸತ್ವರಯೈವ ಲೀಲಯಾ ।
ಪದಾ ವಿನಿಷ್ಪಿಷ್ಯ ರಥೋತ್ತಮಂ ಸ ಪ್ರಾವೇಶಯತ್ ಪೃಥಿವೀಂ ಕಿಂಚಿದೇವ ॥ – (ಕರ್ಣ. ೮೦/೨೯)

೧೭೮. ಪಂಚಾಗುಲಂ ಪಂಚಾಂಗುಲಪ್ರದೇಶಂ ಮರ್ಯಾದೀಕೃತ್ಯ ನಮಿತ ಇತ್ಯರ್ಥಃ । – (ಸ.)

ಹತ್ವಾ ನಿಪಾತಯಾಮಾಸ ಭೂಮೌ ಕರ್ಣಸ್ಯ ಪಶ್ಯತಃ ।
ಬ್ರಹ್ಮಾಸ್ತ್ರಸ್ಯಾತಿವೇಗಿತ್ವಂ ಪ್ರಾಪ್ತಂ ಕರ್ಣೇನ ಭಾರ್ಗವಾತ್ ॥ ೧೮೦ ॥

ಅ: ಶ್ರೀಕೃಷ್ಣನಿಂದ ಅರ್ಜುನನ ರಥ ಭೂಮಿಯಲ್ಲಿ ಐದು ಅಂಗುಲದಷ್ಟು ಒತ್ತಲ್ಪಟ್ಟಾಗ ಅವನ ಅಪಾಂಗ ಪ್ರದೇಶದತ್ತ ಪ್ರಯೋಗಿಸಲ್ಪಟ್ಟಿದ್ದ ಆ ನಾಗ ಅರ್ಜುನನ ಕಿರೀಟವನ್ನು ಪುಡಿಮಾಡಿ ಗಗನದಲ್ಲಿ ತಿರಳುತ್ತಿದ್ದಾಗ ಪ್ರಭುವಾದ ಕೃಷ್ಣನಿಂದ ಹೇಳಲ್ಪಟ್ಟ ಅರ್ಜುನ ಪೂರ್ವವೈರಿಯಾದ ಆ ತಕ್ಷಕಪುತ್ರನನ್ನು ಬಾಣಗಳಿಂದ ಕೊಂದು ಕರ್ಣ ನೋಡುತ್ತಿದ್ದಂತೆಯೇ ಭೂಮಿಗೆ ಕೆಡವಿದ. ಪರಶುರಾಮನಿಂದ ಕರ್ಣ ಬ್ರಹ್ಮಾಸ್ತ್ರವನ್ನು ಅತ್ಯಂತವೇಗದಿಂದ ಪ್ರಯೋಗಿಸುವುದನ್ನು ತಿಳಿದಿದ್ದ.

ವಿ: ೧) ಕೃಷ್ಣ ಹಾಗೆ ಭೂಮಿಯಲ್ಲಿ ರಥವನ್ನು ಒತ್ತಿದ್ದರಿಂದ ಆ ಅಸ್ತ್ರದಿಂದ ಅರ್ಜುನನ ಕಿರೀಟ ಪುಡಿಯಾಗಿ ಅವನು ಸುರಕ್ಷಿತನಾಗಿ ಉಳಿದ. ಆ ಕ್ಷಣದಲ್ಲಿ ಇಂದ್ರನಿಗೂ ಅರ್ಜುನ ಹತನಾದನೆಂಬ ಆತಂಕ ಉಂಟಾಗಿತ್ತಂತೆ. ಆಗ ಬ್ರಹ್ಮ ಅವನಿಗೆ 'ಕೃಷ್ಣ ರಕ್ಷಿತನಾದ ಅರ್ಜುನನಿಗೆ ಯಾವ ಕೆಡುಕೂ ಆಗದು' ಎಂದು ಸಮಾಧಾನ ಮಾಡಿದ ವಿವರ ಮಹಾಭಾರತದಲ್ಲಿದೆ (ಕರ್ಣಪರ್ವ ೯೦/೨೪) :

ದಶಶತನಯನೋಽಹಂ ದೃಶ್ಯ ಬಾಣೇ ಪ್ರವಿಷ್ಟಂ ನಿಹತ ಇತಿ ಸುತೋ ಮೇ ಸ್ರಸ್ತಗಾತ್ರೋ ಬಭೂವ ।
ಜಲಜಕುಸುಮಯೋನಿಃ ಶ್ರೇಷ್ಠಭಾವೋ ಜಿತಾತ್ಮಾ ತ್ರಿದಶಪತಿಮವೋಚನ್ಮಾ ವ್ಯಥಿಷ್ಠಾ ಜಯೇ ಶ್ರೀಃ ॥

ಬ್ರಹ್ಮವಚನದಿಂದ ಅವನಿಗೆ ಸಮಾಧಾನವಾಯಿತು. ಕರ್ಣನ ಬಳಿಗೆ ಮರಳಿದ ಅಶ್ವಸೇನ ಶಲ್ಯ ಹೇಳಿದಂತೆ ನೀನು ನನ್ನನ್ನು ಅರ್ಜುನನ ಎದೆಗೆ ಗುರಿಯಿಟ್ಟು ಪ್ರಯೋಗಿಸಬೇಕಿತ್ತು, ಈಗ ಮತ್ತೊಮ್ಮೆ ಪ್ರಯೋಗಿಸು, ನಾನು ಅರ್ಜುನನನ್ನು ಕೊಲ್ಲುವೆ ಎಂದು ಕೇಳಿಕೊಂಡ (೮/೯೦/೪೫):

ಮುಕ್ತಾಸ್ತ್ವಯಾಽಹಂ ತ್ವಮಮೀಕ್ಷ್ಯ ಕರ್ಣ ಶಿರೋ ಹೃತಂ ಯನ್ನ ಮಯಾರ್ಜುನಸ್ಯ ।
ಸಮೀಕ್ಷ್ಯ ಮಾಂ ಮುಂಚ ರಣೇ ತ್ವಮಾಶು ಹಂತಾಸ್ಮಿ ಶತ್ರುಂ ತವ ಚಾತ್ಮನಶ್ಚ ॥

---

೧೮೦. ನನು ಬ್ರಹ್ಮಾಸ್ತ್ರಸ್ಯ ಪ್ರತಿಬ್ರಹ್ಮಾಸ್ತ್ರಂ ಪ್ರಯುಜ್ಯ ಫಲ್ಗುನೇನ ಕುತಃ ಶಾಂತಿರ್ನ ಕೃತೇತ್ಯತ ಆಹ ಬ್ರಹ್ಮಾಸ್ತ್ರಸ್ಯಾತಿವೇಗಿತ್ವಮಿತಿ। – (ವಾ.)

೧೮೦. ಬ್ರಹ್ಮಾಸ್ತ್ರಸ್ಯಾತಿವೇಗಿತ್ವೇನ ತದಾನೀಂ ತತ್ಖಂಡನಾವರಾಭಾವೇನ ಪಶ್ಚಾತ್ ಖಂಡಿತವಾನಿತಿ ಭಾವ ಇತಿ । ವೇದಾಂಗತೀರ್ಥೀಯೇ । ನನು ಬ್ರಹ್ಮಾಸ್ತ್ರಸ್ಯ ಪ್ರತಿಬ್ರಹ್ಮಾಸ್ತ್ರೇಣ ಪಾರ್ಥೇನ ಶಮಿತುಂ ಶಕ್ಯತ್ವಾದತಃ ಕಿಮರ್ಥಂ ನ ಶಮಿತಮಿತ ಇತ್ಯತ ಆಹ – ಬ್ರಹ್ಮಾಸ್ತ್ರಸ್ಯೇತಿ ಲಘ್ವನಂತಭಟ್ಟೀಯೇ । – (ತಾ.)

೧೮೦. ಭೂಮೌ ಕರ್ಣಸಮೀಪಸ್ಥಭೂಮೌ ನಿಪಾತಯಾಮಾಸೇತ್ಯರ್ಥಃ। – (ಸ.)

೧೮೦. ತತಃ ಸ ಜಿಷ್ಣುಃ ಪರಿವೃತ್ಯ ರೋಷಾಚ್ಚಿಚ್ಛೇದ ಷಡ್ಭಿರ್ನಿಶಿತೈಃ ಸುಘೋರೈಃ ।
ನಾಗಂ ವಿಯತ್ತಿರ್ಯಗಿವೋತ್ಪತಂತಂ ಸ ಚ್ಛಿನ್ನಗಾತ್ರೋ ನಿಪಪಾತ ಭೂಮೌ ॥ – (ಕರ್ಣ. ೯೦/೫೪)

ಆದರೆ, ಕರ್ಣ ಕುಂತಿಗೆ ''ತೊಟ್ಟ ಬಾಣವನ್ನು ಮರಳಿ ತೊಡೆನು'' ಎಂದು ವಚನವಿತ್ತಿದ್ದ–ರಿಂದ ತೊಡಲಾಗದೇ ಮರುಗಿದನೆಂದು ಪಂಪಭಾರತ, ಕುಮಾರವ್ಯಾಸಭಾರತಗಳಲ್ಲಿದೆ :

ಮಾತೆಗಿತ್ತೆನು ಭಾಷೆಯನು ನಿ- । ನ್ನಾತಗಳೊಳೈವರೊಳಗಾರಿದಿ-
ರಾತಡೆಯು ತಲೆಗಾದು ಬಿಡುವೆನು ಕೊಲುವುದಿಲ್ಲೆಂದು ।
ಮಾತುಗಳು ಕವಲಾದ ಬಳಿಕ- । ನ್ನೇತಕೀ ತನುವಿದನು ಪಾರ್ಥನ
ಖ್ಯಾತಿಗೊಪ್ಪಿಸಿ ಕಳೆವೆನೆಂದನು ತನ್ನ ಮನದೊಳಗೆ ॥ – ಕುಮಾರವ್ಯಾಸಭಾರತ(ಕರ್ಣ.೫/೪೧)

ಆದರೆ, ಹಿಂದೆ ಹೇಳಿದಂತೆ ಕುಂತಿ ಅಂಥ ವಚನವನ್ನು ಕೇಳಿರಲೂ ಇಲ್ಲ, ಕರ್ಣ ಅಂತಹ ವಚನವನ್ನು ಕೊಟ್ಟಿರಲೂ ಇಲ್ಲವಾದ್ದರಿಂದ ಆ ಕಾರಣ ಸರಿಯಲ್ಲ.

೨) ಮಹಾಭಾರತ ಇಲ್ಲಿ ತಿಳಿಸಿರುವುದು ಹೀಗೆ : ಕರ್ಣ ಆಗ ನುಡಿದ 'ನಾನು ಮತ್ತೊಬ್ಬರ ಸಹಾಯವನ್ನು ಪಡೆದು ಶತ್ರುವನ್ನು ಗೆಲ್ಲಬಯಸುವವನಲ್ಲ. ನಾನು ಒಂದೇ ಅಸ್ತ್ರವನ್ನು ಎರಡು ಬಾರಿ ಪ್ರಯೋಗಿಸುವವನೂ ಅಲ್ಲ' :

ನ ನಾಗ ಕರ್ಣೋಽದ್ಯ ರಣೇ ಪರಸ್ಯ ಬಲಂ ಸಮಾಸ್ಥಾಯ ಜಯಂ ಬುಭೂಷೇತ್ ।
ನ ಸಂದಧ್ಯಾಂ ದ್ವಿಃ ಶರಂ ಚೈವ ನಾಗ ಯದ್ಕರ್ಜುನಾನಾಂ ಶತಮೇವ ಹನ್ಯಾಮ್ ॥
ತಮಾಹ ಕರ್ಣಃ ಪುನರೇವ ನಾಗಂ ತದಾಽಽಜಿಮಧ್ಯೇ ರವಿಸೂನುಸತ್ತಮಃ ॥
– (ಕರ್ಣ. ೯೦/೪೭,೪೮)

ಇದು ಕರ್ಣನ ವ್ಯಕ್ತಿತ್ವವನ್ನು ಅಪಾರವಾಗಿ ಹೆಚ್ಚಿಸುವ ಧೀರೋದಾತ್ತ ಮಾತು. ಆಗ ಹತಾಶನಾದ ಅಶ್ವಸೇನ ಬಬ್ರುವಾಹನನ ಬತ್ತಳಿಕೆಯನ್ನು ಸೇರಿ ಮುಂದೆ ಅಶ್ವಮೇಧ ಸಂದರ್ಭದಲ್ಲಿ ನಡೆಯುವ ಅರ್ಜುನ ಬಬ್ರುವಾಹನ ಯುದ್ಧದಲ್ಲಿ ಅರ್ಜುನನನ್ನು ಕೊಲ್ಲಲು ಹೊಂಚತೊಡಗಿತು ಎಂದು ಕೆಲವರು ಹೇಳುವುದುಂಟು. ಇದೂ ಸಹ ಭಾರತಕ್ಕೆ ಅನುಗುಣವಲ್ಲದ ನಿರೂಪಣೆ.

೩) ಆಗ ನಡೆದದ್ದು ವಾಸ್ತವವಾಗಿ ಹೀಗೆ – ಆ ಅಶ್ವಸೇನ ತಾನೇ ಅರ್ಜುನನನ್ನು ಕೊಲ್ಲಲೆಂದು ಅವನೆಡೆಗೆ ನುಗ್ಗುವುದು, ಕೃಷ್ಣ ಅದನ್ನು ತೋರಿಸಿ ಅರ್ಜುನನಿಗೆ ಆಗಲೇ ಕೊಲ್ಲಲು ತಿಳಿಸಿದ. ಅರ್ಜುನ ಅದರಂತೆ ಅದನ್ನು ಕೊಂದುಹಾಕಿದ :

ತತಃ ಸ ಜಿಷ್ಣುಃ ಪರಿವೃತ್ಯ ರೋಷಾಚ್ಚಿಚ್ಛೇದ ಷಡ್ಭಿರ್ನಿಶಿತೈಃ ಸುಧಾರೈಃ ।
ನಾಗಂ ವಿಯತ್ತಿರ್ಯಗಿವೋತ್ಪತಂತಂ ಸ ಚ್ಛಿನ್ನಗಾತ್ರೋ ನಿಪಪಾತ ಭೂಮೌ ॥
– ಭಾರತ (ಕರ್ಣ. ೯೦/೫೪)

೪) ಇನ್ನು ಕರ್ಣನ ಬ್ರಹ್ಮಾಸ್ತ್ರಕ್ಕೆ ಪ್ರತಿಯಾಗಿ ಅರ್ಜುನ ಆಗಲೇ ಒಮ್ಮೆ ಬ್ರಹ್ಮಾಸ್ತ್ರ ಪ್ರಯೋಗಿಸಿದ್ದ ಎಂಬ ವಿವರ ೧೮೧ನೇ ಶ್ಲೋಕದಲ್ಲಿ ಬಂದಿದೆ. ಆದರೆ ಈಗ ಕರ್ಣ ಬ್ರಹ್ಮಾಸ್ತ್ರವನ್ನು ಪ್ರಯೋಗಿಸುವಾಗ ಪರಶುರಾಮರಿಂದ ಪಡೆದಿದ್ದ ವಿಶೇಷ ಕೌಶಲದಿಂದ ಅದನ್ನು ಅತ್ಯಂತ ವೇಗ–ವಾಗಿ ಪ್ರಯೋಗಿಸಿದ್ದ. ಅದರಿಂದಾಗಿ ಅರ್ಜುನನಿಗೆ ಅದು ಬ್ರಹ್ಮಾಸ್ತ್ರ ಎಂದು ಅರಿವಾಗುವ

ಮುನ್ನವೇ ಅದು ಅವನ ಕಿರೀಟವನ್ನು ಹಾರಿಸಿಯಾಗಿತ್ತು. ಆದರೆ, ಅಂತಹ ಬ್ರಹ್ಮಾಸ್ತ್ರದ ಅತಿವೇಗ–ವನ್ನು ಮುಂಚೆಯೇ ಗುರುತಿಸಿ ರಥವನ್ನು ನೆಲಕ್ಕೆ ಒತ್ತಿ ಅರ್ಜುನನನ್ನು ಸಂರಕ್ಷಿಸಿದ್ದು ಶ್ರೀಕೃಷ್ಣ.

೫) ಪರಶುರಾಮನಿಂದ ಲಬ್ಧವಾಗಿದ್ದ ಬ್ರಹ್ಮಾಸ್ತ್ರದ ವೇಗವನ್ನು ಹಾಗೆ ಗುರುತಿಸಿದ ಶ್ರೀಕೃಷ್ಣನ್ನಸ್ಮತಃ ಪರಶುರಾಮನೇ ಆದ ಪರಬ್ರಹ್ಮ ಎಂಬುದು ಇದರಿಂದ ದೃಢಪಡುವುದು.

೬) ಕೃಷ್ಣ ಅರ್ಜುನ ತನ್ನನ್ನು ಅರಿಸಿಕೊಂಡಿದ್ದಕ್ಕೆ ಅವನನ್ನು ಹೇಗೆ ಪ್ರತಿ ಸಂದರ್ಭದಲ್ಲೂ ಪರಿಪೂರ್ಣ ರಕ್ಷಣೆಯಿತ್ತು ಪಾಲಿಸಿದ ಎಂಬುದನ್ನು ಗಮನಿಸಬೇಕು – **'ನಂಬಿ ಕೆಟ್ಟವರಿಲ್ಲವೋ ರಂಗಯ್ಯನ...'**, **'...ಯೋಗಕ್ಷೇಮಂ ವಹಾಮ್ಯಹಮ್'**.

೭) ಕರ್ಣ ಹೀಗೆ ಎರಡು ಬಾರಿ ಬ್ರಹ್ಮಾಸ್ತ್ರ ಪ್ರಯೋಗಿಸಿದ ವಿವರ ನಿರ್ಣಯದಲ್ಲಿ ಸ್ಪಷ್ಟವಾಗಿ ಬಂದಿರುವುದನ್ನು ಗಮನಿಸಬೇಕು(ಶ್ಲೋ. ೧೮೧, ೧೮೨). ಲಕ್ಷಾಲಂಕಾರದಲ್ಲಿ ಕರ್ಣನಿಗೆ ಬ್ರಹ್ಮಾಸ್ತ್ರ ಉಪದೇಶವಾಗಿರಲಿಲ್ಲ ಎಂಬಂತೆ ನಿರೂಪಿತವಾಗಿದ್ದು ಅದಕ್ಕೆ ಅದರಿಂದ ಅವನು ಪೂರ್ಣಸಿದ್ಧಿ ಗಳಿಸಲು ಸಮರ್ಥನಾಗಲಿಲ್ಲ ಎಂದಷ್ಟೇ ಅರ್ಥಮಾಡಿಕೊಂಡು ಸಮನ್ವಯ ಮಾಡಿಕೊಳ್ಳಬೇಕು:

> **ದ್ರೋಣಾದ್ವಾ ಪರಶುರಾಮಾದ್ವಾ ಬ್ರಹ್ಮಕ್ಷತ್ರಯೋರುಭಯೋರಪಿ ಯೋಗ್ಯಂ ಬ್ರಹ್ಮಾಸ್ತ್ರಂ ಲಭೇತೈವ । ಬ್ರಹ್ಮಾಸ್ತ್ರಲಾಭೇ ಚ ಕರ್ಣಸ್ಯ ನ ಕುತಶ್ಚಿಚ್ಛಸ್ತ್ರಘಾತಃ ಸ್ಯಾತ್, ಪ್ರತ್ಯುತ ಸ್ವಶತ್ರುಮೇವ ತೇನ ಹನ್ಯಾತ್ ॥** – ಲಕ್ಷಾಲಂಕಾರ(ಶಾಂತಿ. ಅಧ್ಯಾಯ ೨)

೮) ಮಹಾಭಾರತದಲ್ಲೂ ಕರ್ಣ ಪರಶುರಾಮರಿಂದ ಬ್ರಹ್ಮಾಸ್ತ್ರ ಅಧ್ಯಯನ ಮಾಡಿದ್ದ ವಿವರ ಬಂದಿದೆ; ಅದರಂತೆ ಈ ಸಮಯದಲ್ಲಿ ಅದನ್ನು ಪ್ರಯೋಗಿಸಿದ ವಿವರವೂ ಬಂದಿದೆ :

> **ತಸ್ಮೈ ಸ ವಿಧಿವತ್ ಕೃತ್ಸ್ನಂ ಬ್ರಹ್ಮಾಸ್ತ್ರಂ ಸನ್ನಿವರ್ತನಮ್ ।**
> **ಪ್ರೋವಾಚಾಖಿಲಮವ್ಯಗ್ರಂ ತಪಸ್ವೀ ತತ್ ತಪಸ್ವಿನೇ ॥** – ಭಾರತ (ಶಾಂತಿ. ೩/೨)
>
> **ತತ್ ಸಮೀಕ್ಷ್ಯ ತತಃ ಕರ್ಣೋ ಬ್ರಹ್ಮಾಸ್ತ್ರೇಣ ಧನಂಜಯಮ್ ।**
> **ಅಭ್ಯವರ್ಷತ್ ಪುನರ್ಯತ್ನಮಕರೋದ್ರಥಸರ್ಜನೇ॥** –ಭಾರತ(ಕರ್ಣ. ೯೧/೨೨೦)

ಕರ್ಣನಿಗೆ ಅಸ್ತ್ರಗಳ ವಿಸ್ಮೃತಿ

ಪುನಶ್ಚ ಪಾರ್ಥೇನ ಮಹಾಸ್ತ್ರಯುದ್ಧಂ
ಪ್ರಕುರ್ವತಃ ಸೂರ್ಯಸುತಸ್ಯ ಚಕ್ರಮ್ ।
ರಥಸ್ಯ ಭೂಮಿರ್ಗ್ರಸತಿ ಸ್ಮ ಶಾಪಾ-
ದಸ್ತ್ರಾಣಿ ದಿವ್ಯಾನಿ ಚ ವಿಸ್ಮೃತಿಂ ಯಯುಃ ॥ ೧೮೧ ॥

ಆ: ಮತ್ತೆ ಅರ್ಜುನನೊಂದಿಗೆ ಕರ್ಣ ಮಹಾಸ್ತ್ರಯುದ್ಧವನ್ನು ಮಾಡತೊಡಗಿದಾಗ ಅವನ ರಥದ ಚಕ್ರವನ್ನು ಭೂಮಿ ನುಂಗತೊಡಗಿತು. ಆಗಲೇ ಪರಶುರಾಮರ ಶಾಪದಿಂದ ಅವನಿಗೆ ದಿವ್ಯಾಸ್ತ್ರಗಳೂ ಸ್ಮರಣೆಗೆ ಬಾರದಾದವು.

ಎ: ಕರ್ಣನಿಗೆ ಬ್ರಾಹ್ಮಣನೊಬ್ಬನಿಂದ ಯುದ್ಧಕಾಲದಲ್ಲಿ ಅವನ ರಥದ ಚಕ್ರ ಭೂಮಿಯಲ್ಲಿ ಹೂತುಹೋಗುವಂತೆ ಶಾಪ ಬಂದಿದ್ದ ವಿವರ ಮಹಾಭಾರತದಲ್ಲಿದೆ :

ಯೇನ ವಿಸ್ಪರ್ಧಸೇ ನಿತ್ಯಂ ಯದರ್ಥಂ ಘಟಸೇಽನಿಶಮ್ ।
ಯುಧ್ಯತಸ್ತೇನ ತೇ ಪಾಪ ಭೂಮಿಶ್ಚಕ್ರಂ ಗ್ರಸಿಷ್ಯತಿ ॥ – ಭಾರತ (ಶಾಂತಿ. ೨/೨೪)

ಒಮ್ಮೆ ಬ್ರಾಹ್ಮಣನೊಬ್ಬನ ಹೋಮಧೇನುವಿನ ಕರುವನ್ನು ಕರ್ಣ ಅರಿಯದೇ ಕೊಂದಿದ್ದ. ಆಗ ಆ ಬ್ರಾಹ್ಮಣ ಹಾಗೆ ಶಾಪ ನೀಡಿದ್ದ. ತಾನು ಬ್ರಾಹ್ಮಣನೆಂದು ಸುಳ್ಳು ಹೇಳಿಕೊಂಡಿದ್ದ ಕಾರಣದಿಂದ ಅವನಿಗೆ ಅಂತ್ಯಕಾಲದಲ್ಲಿ ದಿವ್ಯಾಸ್ತ್ರಗಳು ಸ್ಮರಣೆಗೆ ಬಾರದಿರಲೆಂದು ಪರಶುರಾಮ ಶಾಪ ನೀಡಿದ್ದು ಈಗಾಗಲೇ ಬಂದಿದೆ (೧೫/೫೮). ಹಾಗೆ ಭೂಮಿಯೊಳಗೆ ಹೂತುಹೋದದ್ದು ಅವನ ರಥದ ಎಡಚಕ್ರ.

ಭೂಮಿ ನುಂಗಿದ ರಥಚಕ್ರ

ಉದ್ಧರ್ತುಕಾಮೋ ರಥಚಕ್ರಮೇವ
ಪಾರ್ಥಂ ಯಯಾಚೇಽವಸರಂ ಪ್ರದಾತುಮ್ ।
ನೇತ್ಯಾಹ ಕೃಷ್ಣೋಽಂಜಲಿಕಂ ಸುಘೋರಂ
ತ್ರಿನೇತ್ರದತ್ತಂ ಜಗೃಹೇ ಚ ಪಾರ್ಥಃ ॥ ೧೮೨ ॥

---

೧೮೧. ಯಸ್ಮಾತ್ತ್ವಯಾ ಪ್ರಮತ್ತೇನ ಹೋಮಧೇನ್ವಾಹತಃ ಸುತಃ। ಶ್ರಭ್ರೇತೇಧತತಾಂ ಚಕ್ರಮಿತಿ ಮಾಂ ಬ್ರಾಹ್ಮಣೋಽಬ್ರವೀದಿತಿ ಶಾಪಾತ್। – (ಜ.)

೧೮೧. ಘೂರ್ಣೇ ರಥೇ ಬ್ರಾಹ್ಮಣಸ್ಯಾಭಿಶಾಪಾದ್ ರಾಮಾದುಪಾತ್ತೇ ತ್ವವಿಭಾತಿ ಚಾಸ್ತ್ರೇ ।
ಛಿನ್ನೇ ಶರೇ ಸರ್ಪಮುಖೇ ಚ ಘೋರೇ ಪಾರ್ಥೇನ ತಸ್ಮಿನ್ ವಿಷಸಾದ ಕರ್ಣಃ । – (ಕರ್ಣ. ೯೦/೮೪)

೧೮೨. ಭೋ ಭೋಃ ಪಾರ್ಥ ಮಹೇಷ್ವಾಸ ಮುಹೂರ್ತಂ ಪರಿಪಾಲಯ ।
ಯಾವಚ್ಚಕ್ರಮಿದಂ ಗ್ರಸ್ತಮುದ್ಧರಾಮಿ ಮಹೀತಲಾತ್ ॥
ಸಖ್ಯಂ ಚಕ್ರಂ ಮಹೀಗ್ರಸ್ತಂ ದೃಷ್ಟ್ವಾ ದೈವಾದಿದಂ ಮಮ ॥ – (ಕರ್ಣ. ೯೦/೧೦೯)

೧೮೨. ತತೋಽರ್ಜುನಃ ಪ್ರಾಂಜಲಿಕಂ ಮಹಾತ್ಮಾ.....– ಇತಿ – (ಕರ್ಣ. ೯೧/೩೩)

ಅ: ರಥಚಕ್ರವನ್ನು ಎತ್ತಲು ಬಯಸಿದ ಕರ್ಣ ಅದಕ್ಕೆ ಅವಕಾಶ ನೀಡಲು ಅರ್ಜುನನನ್ನು ಬೇಡಿಕೊಂಡ. ಕೃಷ್ಣ 'ಆಗದು' ಎಂದ. ಅರ್ಜುನ ಶಿವ ನೀಡಿದ್ದ ಅತ್ಯಂತ ಭಯಂಕರವಾದ ಅಂಜಲಿಕಾಸ್ತ್ರವನ್ನು ಕೈಗೆತ್ತಿಕೊಂಡ.

ಎ: ೧) ಕರ್ಣ 'ಅರ್ಜುನನನ್ನು ನೆಲದಲ್ಲಿ ನಿಂತವನೊಂದಿಗೆ ರಥದಲ್ಲಿ ಕುಳಿತವನು ಯುದ್ಧ ಮಾಡುವುದು ಧರ್ಮವಲ್ಲ, ಸ್ವಲ್ಪ ಅವಕಾಶ ನೀಡು' ಎಂದು ಕೇಳಿಕೊಂಡಾಗ, ಕೃಷ್ಣ 'ಹಾಗಿದ್ದಲ್ಲಿ ದ್ರೌಪದಿಯನ್ನು ಸಭೆಗೆ ಎಳೆದು ತಂದಾಗ, ಅವಮಾನಿಸಿದಾಗ, ಒಂಟಿಯಾಗಿದ್ದ ಅಭಿಮನ್ಯುವನ್ನು ನೀವೆಲ್ಲಾ ಸೇರಿ ಮೋಸದಿಂದ ಕೊಂದಾಗ ಧರ್ಮ ಎಲ್ಲಿತ್ತು?' ಎಂದು ಪ್ರತಿಯಾಗಿ ಪ್ರಶ್ನಿಸಿದ :

ತಮಬ್ರವೀದ್ವಾಸುದೇವೋ ರಥಸ್ಥೋ ರಾಧೇಯ ದಿಷ್ಟ್ಯಾ ಸ್ಮರಸೀಹ ಧರ್ಮಮ್ ।
ಪ್ರಾಯೇಣ ನೀಚಾ ವ್ಯಸನೇಷು ಮಗ್ನಾ ನಿಂದಂತಿ ದೈವಂ ಕುಕೃತಂ ನ ತು ಸ್ವಮ್ ॥
ಯದ್ದ್ರೌಪದೀಮೇಕವಸ್ತ್ರಾ ಸಭಾಯಾಮಾನಾಯಯೇಸ್ತ್ವಂ ಚ ಸುಯೋಧನಶ್ಚ ।
ದುಃಶಾಸನಃ ಶಕುನಿಃ ಸೌಬಲಶ್ಚ ನ ತೇ ಕರ್ಣ ಪ್ರತ್ಯಭಾತ್ತತ್ರ ಧರ್ಮಃ ॥
ಯದಾ ಸಭಾಯಾಂ ರಾಜಾನಮನಕ್ಷಜ್ಞಂ ಯುಧಿಷ್ಠಿರಮ್ ।
ಅಜೈಷೀಚ್ಛಕುನಿರ್ಜ್ಞಾನಾತ್ ಕ್ವ ತೇ ಧರ್ಮಸ್ತದಾ ಗತಃ ॥
ವನವಾಸೇ ವ್ಯತೀತೇ ಚ ಕರ್ಣ ವರ್ಷೇ ತ್ರಯೋದಶೇ ।
ನ ಪ್ರಯಚ್ಛಸಿ ಯದ್ರಾಜ್ಯಂ ಕ್ವ ತೇ ಧರ್ಮಸ್ತದಾ ಗತಃ ॥
ಯದ್ಭೀಮಸೇನಂ ಸರ್ಪೈಶ್ಚ ವಿಷಯುಕ್ತೈಶ್ಚ ಭೋಜನೈಃ ।
ಆಚರತ್ ತ್ವನ್ಮತೇ ರಾಜಾ ಕ್ವ ತೇ ಧರ್ಮಸ್ತದಾ ಗತಃ ॥
ಯದ್ವಾರಣಾವತೇ ಪಾರ್ಥಾನ್ ಸುಪ್ತಾನ್ ಜತುಗೃಹೇ ತದಾ ।
ಆದೀಪಯಸ್ತ್ವಂ ರಾಧೇಯ ಕ್ವ ತೇ ಧರ್ಮಸ್ತದಾ ಗತಃ ॥
ಯದಾ ರಜಸ್ವಲಾಂ ಕೃಷ್ಣಾಂ ದುಃಶಾಸನವಶೇ ಸ್ಥಿತಾಮ್ ।
ಸಭಾಯಾಂ ಪ್ರಾಹಸಃ ಕರ್ಣ ಕ್ವ ತೇ ಧರ್ಮಸ್ತದಾ ಗತಃ ॥
ಯದನಾರ್ಯೈಃ ಪುರಾ ಕೃಷ್ಣಾಂ ಕ್ಲಿಶ್ಯಮಾನಾಮನಾಗಸಮ್ ।
ಉಪಪ್ರೇಕ್ಷಸಿ ರಾಧೇಯ ಕ್ವ ತೇ ಧರ್ಮಸ್ತದಾ ಗತಃ ॥
ವಿನಷ್ಟಾಃ ಪಾಂಡವಾಃ ಕೃಷ್ಣೇ ಶಾಶ್ವತಂ ನರಕಂ ಗತಾಃ ।
ಪತಿಮನ್ಯಂ ವೃಣೀಷ್ವೇತಿ ವದಂಸ್ತ್ವಂ ಗಜಗಾಮಿನೀಮ್ ॥
ಉಪಪ್ರೇಕ್ಷಸಿ ರಾಧೇಯ ಕ್ವ ತೇ ಧರ್ಮಸ್ತದಾ ಗತಃ ॥
ರಾಜ್ಯಲುಬ್ಧಃ ಪುನಃ ಕರ್ಣ ಸಮಾವ್ಯಥಸಿ ಪಾಂಡವಾನ್ ।
ಯದಾ ಶಕುನಿಮಾಶ್ರಿತ್ಯ ಕ್ವ ತೇ ಧರ್ಮಸ್ತದಾ ಗತಃ ॥
ಯದಾಭಿಮನ್ಯುಂ ಬಹವೋ ಯುದ್ಧೇ ಜಘ್ನುರ್ಮಹಾರಥಾಃ ।
ಪರಿವಾರ್ಯ ರಣೇ ಬಾಲಂ ಕ್ವ ತೇ ಧರ್ಮಸ್ತದಾ ಗತಃ ॥
ಯದ್ಯೇಷ ಧರ್ಮಸ್ತತ್ರ ನ ವಿದ್ಯತೇ ಹಿ ಕಿಂ ಸರ್ವಥಾ ತಾಲುವಿಶೋಷಣೇನ ।

ಅದ್ಯೇಹ ಧರ್ಮ್ಯಾಣಿ ವಿಧತ್ಸ್ವ ಸೂತ ತಥಾऽಪಿ ಜೀವನ್ನ ವಿಮೋಕ್ಷ್ಯಸೇ ಹಿ ॥
ನಲೋ ಹ್ಯಕ್ಷೈರ್ನಿರ್ಜಿತಃ ಪುಷ್ಕರೇಣ ಪುನರ್ಯಶೋ ರಾಜ್ಯಮವಾಪ ವೀರ್ಯಾತ್ ।
ಪ್ರಾಪ್ತಾಸ್ತಥಾ ಪಾಂಡವಾ ಬಾಹುವೀರ್ಯಾತ್ ಸರ್ವೈಃ ಸಮೇತಾಃ ಪರಿವೃತ್ತಲೋಭಾಃ ॥
ನಿಹತ್ಯ ಶತ್ರೂನ್ ಸಮರೇ ಪ್ರವೃದ್ಧಾನ್ ಸಸೋಮಕಾ ರಾಜ್ಯಮವಾಪ್ನುಯುಸ್ತೇ ।
ತಥಾ ಗತಾ ಧಾರ್ತರಾಷ್ಟ್ರಾ ವಿನಾಶಂ ಧರ್ಮಾಭಿಗುಪ್ತೈಃ ಸತತಂ ನೃಸಿಂಹೈಃ ॥

– ಭಾರತ (ಕರ್ಣ. ೯೧/೧-೧೪)

೨) ಕೃಷ್ಣನ ಮಾತಿಗೆ ಉತ್ತರಿಸಲಾಗದೆ ಕರ್ಣ ನಾಚಿಕೆಯಿಂದ ತಲೆ ತಗ್ಗಿಸಿದ ಎಂಬ ವಿವರವೂ ಮಹಾಭಾರತದಲ್ಲಿದೆ :

ಏವಮುಕ್ತಸ್ತದಾ ಕರ್ಣೋ ವಾಸುದೇವೇನ ಭಾರತ ।
ಲಜ್ಜಯಾವನತೋ ಭೂತ್ವಾ ನೋತ್ತರಂ ಕಿಂಚಿದುಕ್ತವಾನ್ ॥ – ಭಾರತ(೮/೯೧/೧೫)

೩) ಕೃಷ್ಣ ಆ ಸಮಯದಲ್ಲಿ ಬ್ರಾಹ್ಮಣ ವೇಷದಿಂದ ಬಂದು ಕರ್ಣನ ಕುಂಡಲಗಳನ್ನು ಕೇಳಿದ್ದು, ಅದನ್ನು ಧಾರೆಯೆರೆಯಲೆಂದು ತನ್ನೆದೆಯೊಳಗೆ ಅಡಗಿದ್ದ ಅಮೃತಕಲಶವನ್ನು ಕರ್ಣ ಹೊರತೆಗೆದದ್ದು ಕುಮಾರವ್ಯಾಸ ಭಾರತದಲ್ಲಿ ನಿರೂಪಿತವಾಗಿದೆ. ಭಾಸನ ಕರ್ಣಭಾರ ನಾಟಕದಲ್ಲೂ ಕರ್ಣ ಕವಚ ಕುಂಡಲಗಳನ್ನು ವಿಪ್ರರೂಪದ ಇಂದ್ರನಿಗೆ ಧಾರೆಯೆರೆದದ್ದು ಈ ಸಂದರ್ಭದಲ್ಲಿ ಎಂಬ ಉಲ್ಲೇಖವಿದೆ. ಆದರೆ, ಅವೆಲ್ಲಾ ಮಹಾಭಾರತಕ್ಕೆ ವಿರುದ್ಧವಾದ ನಿರೂಪಣೆಗಳಾದ್ದರಿಂದ ಅಗ್ರಾಹ್ಯ. ಅವು ಕೇವಲ ಆಯಾ ಕವಿಗಳ ಕಲ್ಪನಾ ವಿಲಾಸಗಳು ಮಾತ್ರ.

೪) ಆ ಸಮಯದಲ್ಲಿ ಸಾರಥಿಯಾಗಿದ್ದ ಶಲ್ಯ ರಥದ ಚಕ್ರವನ್ನು ತಾನೇಕೆ ಮೇಲೆತ್ತಲಿಲ್ಲ ಎಂಬುದು ಮತ್ತೊಂದು ಪ್ರಶ್ನೆ, ಅದಕ್ಕೆ ಕುಮಾರವ್ಯಾಸಭಾರತದಂತೆ ಉತ್ತರ ಹೀಗಿದೆ – ಶಲ್ಯ ಕರ್ಣನ ಸಾರಥ್ಯವನ್ನು ವಹಿಸುವಾಗ ದುರ್ಯೋಧನನಿಗೆ ನಾನು ಕರ್ಣನಿಗೆ ನೀಡುವ ಸಲಹೆಯನ್ನು ಅವನು ಮಾನ್ಯಮಾಡದಿದ್ದಲ್ಲಿ ಅವನ ಸಾರಥ್ಯವನ್ನು ತೊರೆದು ಹೊರಟುಬಿಡುವೆ ಎಂದು ನಿಬಂಧನೆ ಹಾಕಿದ್ದನಂತೆ :

ಒಂದೆ ಗಡ ಹರಿಯ ಪೇಟ್ಟೊಂ ।
ದಂದದೆ ನರನೆಸಗುವಂತೆ ಕರ್ಣನುಮೆನ್ನೆಂ ॥
ದೊಂದೋಜೆಯೊಳೆಸಗದೊಡಾಂ ।
ಸ್ಯಂದನದಿಂದಿಳಿದು ಪೋಪೆನೆಸಗೆಂ ತೇರಂ ॥ ...

ಅಗಳಂಗರಾಜಂಗೆ ಶಲ್ಯಂ ಕಿನಿಸಿ ಮುಳಿಸಿನೊಳೆ ಕಣ್ಣಾಣದಿಂತಪ್ಪೇಕಗ್ರಾಹಿಗಮೊ-
ರಂಟಂಗಂ ರಥಮನೆಸಗೆನೆಂದು ವರೂಥದಿಂದಿಳಿದು ಪೋಗೆ ।

– ಪಂಪಭಾರತ (೧೨/೧೦೧, ೨೦೬)

ಮರುಳಲಾ ಮಾದ್ರೇಶ ಮರಳಿದ
ಶರವ ತೊಡುವೆನೆ ಸೈರಿಸೆನೆ ಕಾ-
ತರಿಸಿ ವಾಘೆಯ ಬಿಸುಟು ಕಿಡಿಕಿಡಿವೋಗಿ ಪಾತಿಯಲಿ ।
ಅರಸನೊಲಿದಂತಾಗಲೆನ್ನದು
ಮರುಳುತನ ಕುಲಹೀನನಲಿ ಗುಣ
ವರಸಲೇಕೆಂದೆನುತ ಧುಮ್ಮಿಕ್ಕಿದನು ಧಾರುಣಿಗೆ ।

– ಕುಮಾರವ್ಯಾಸಭಾರತ(ಕರ್ಣ.೫/೪೨)

ಮರಳಿ ಬಂದ ಅಶ್ವಸೇನನನ್ನು ಮತ್ತೊಮ್ಮೆ ಪ್ರಯೋಗಿಸಲು ಶಲ್ಯ ಸೂಚಿಸಿದಾಗ ಕರ್ಣ ಅದಕ್ಕೆ ಒಪ್ಪದೇ ಹೋಗಲು ಶಲ್ಯ ಕುಪಿತನಾಗಿ ಸಾರಥ್ಯವನ್ನು ತೊರೆದು ಹೋದ; ಅದರಿಂದಾಗಿ ಅವನು ಅಲ್ಲಿರಲೇ ಇಲ್ಲವಾದ್ದರಿಂದ ಅವನು ಅದನ್ನು ಮೇಲೆತ್ತುವ ಪ್ರಸಂಗ ಬರಲಿಲ್ಲ ಎಂದು.

ತೊಡು ತೊಡಿನ್ನೊಮ್ಮೆನ್ನನಕಟಾ
ಕೆಡಿಸಿದೆಯಲಾ ರಾಜಕಾರ್ಯವ
ನುಡಿದು ಹೇಳನೆ ನಿನ್ನ ಸಾರಥಿ ಲಕ್ಷ್ಯಭೇದನವ ।
ಅಡಗಲಿನ್ನೀರೇಳು ಭುವನದೊ-
ಳಡಗಿ ತಿಂಬೆನು ನರನನೆಂದವ-
ಗಡಿಸಿ ಕರ್ಣನ ಬೆಸನ ಬೇಡಿತು ಮತ್ತೆ ಫಣಿಬಾಣ ॥

– ಕುಮಾರವ್ಯಾಸಭಾರತ (ಕರ್ಣ. ೨೫/೩೩)

೫) ಇದೂ ಸರಿಯಲ್ಲ, ಮಹಾಭಾರತದಲ್ಲಿ ಶಲ್ಯ ಅಂತಹ ನಿಬಂಧನೆ ಹಾಕಿದ ಯಾವ ಉಲ್ಲೇಖವೂ ಇಲ್ಲ, ಎಂದರೆ ಶಲ್ಯ ಸಾರಥ್ಯವನ್ನು ತೊರೆದು ಹೋದವನಲ್ಲ, ಹಾಗೆ ತೊರೆದು ಹೋಗುವುದು ಸರ್ವಥಾ ಧರ್ಮವೂ ಆಗದು.

೬) ಹಾಗಿದ್ದರೆ, ಶಲ್ಯ ರಥಚಕ್ರವನ್ನು ತಾನೇಕೆ ಮೇಲೆತ್ತಲಿಲ್ಲ ಎಂಬುದಕ್ಕೆ ಉತ್ತರ ಹೀಗಿದೆ– ಶಲ್ಯ ಸಾರಥಿಯಾಗಿ ಕೂತಿದ್ದರೂ ಅವನು ಕೆಳಗಿಳಿದು ಅದನ್ನು ಎತ್ತುವಂತಿರಲಿಲ್ಲ, ಅದು ರಥಿಯ ಕಾರ್ಯವೇ ಹೊರತು ಸಾರಥಿಯ ಕಾರ್ಯವಲ್ಲ, ಅಲ್ಲದೇ, ರಥಿಯಾದವನು ಕೆಳಗಿಳಿದು ಅದನ್ನು ಎತ್ತಲು ಪ್ರಯತ್ನಿಸುವಾಗ ಸಾರಥಿಯಾದವನು ಕುದುರೆಗಳನ್ನು ಜೋರಾಗಿ ಓಡಿಸುವ ಕಾರ್ಯ ಮಾಡಿದರೆ ಎತ್ತುವ ಕಾರ್ಯ ಸುಲಭವಾಗಿ ಆಗುವುದು.

೭) ಈಗಲೂ ವಾಹನಗಳ ಚಕ್ರಗಳು ಮಣ್ಣಿನಲ್ಲಿ ಹೂತಾಗ ವಾಹನ ಚಾಲಕ ಕೆಳಗಿಳಿದು ಎತ್ತುವುದಿಲ್ಲ, ವಾಹನದಲ್ಲಿ ಕೂತವನು ಎಂತ ದೊಡ್ಡ ಅಧಿಕಾರಿಯಾದರೂ ಎತ್ತಲು ಪ್ರಯತ್ನಿಸುವನು; ಅಥವಾ ಇತರರು ಆ ಕಾರ್ಯ ಮಾಡುವರು. ಆಗ ಚಾಲಕ ವಾಹನವನ್ನು ಮುನ್ನಡೆಸುವ ಪ್ರಯತ್ನದಲ್ಲಿ ಯಶಸ್ವಿಯಾಗುವ ಅವಕಾಶ ಲಭಿಸುವುದು.

೮) ಆದ್ದರಿಂದ ಶ್ರೀಮನ್ಮಧ್ವಾಚಾರ್ಯರು ನಿರ್ಣಯಿಸಿರುವಂತೆ ಇರುವ ನಿರೂಪಣೆಯೇ ಮಹಾಭಾರತಕ್ಕೆ ಅತ್ಯಂತ ಅನುಗುಣವಾದುದು ಎಂಬುದನ್ನು ಗಮನಿಸಬೇಕು.

ಅರ್ಜುನನಿಂದ ಕರ್ಣವಧೆ

ಸತ್ಯೇನ ಧರ್ಮೇಣ ಚ ಸನ್ನಿಯೋಜ್ಯ
ಮುಮೋಚ ಕರ್ಣಸ್ಯ ವಧಾಯ ಬಾಣಮ್ ।
ಚಿಚ್ಛೇದ ತೇನೈವ ಚ ತಸ್ಯ ಶೀರ್ಷಂ
ಸಂಧಿತ್ಸತೋ ಬಾಣವರಂ ಸುಘೋರಮ್ ॥ ೧೮೩ ॥

ಅ: ಅರ್ಜುನ ಸತ್ಯದೊಂದಿಗೂ, ಧರ್ಮದೊಂದಿಗೂ ಆ ಅಂಜಲಿಕಾಸ್ತ್ರವನ್ನು ಜೊತೆಗೂಡಿಸಿ ಅದನ್ನು ಕರ್ಣನ ವಧೆಗೆಂದು ಬಿಟ್ಟ. ಉತ್ತಮ ಬಾಣವೊಂದನ್ನು ಹೂಡಬಯಸಿದ್ದ ಕರ್ಣನ ತಲೆಯನ್ನು ಅದರಿಂದಲೇ ಕತ್ತರಿಸಿ ಹಾಕಿದ.

ವಿ: ೧) ಅರ್ಜುನ ತನ್ನ ಸತ್ಯ, ಧರ್ಮಗಳ ಫಲವನ್ನೂ ಸಹ ಅಂಜಲಿಕಾಸ್ತ್ರದೊಂದಿಗೆ ಸಂಯೋಜಿಸಿ ಪ್ರಯೋಗಿಸಿ ಕರ್ಣನ ತಲೆಯನ್ನು ತರಿದ :

ಅಪರಾಹ್ಣೇऽಪರಾಹ್ಣೇऽಸ್ಯ ಸೂತಪುತ್ರಸ್ಯ ಮಾರಿಷ ।
ಛಿನ್ನಮಂಜಲಿಕೇನಾಜೌ ಸೋತ್ಸೇಧಮಪತಚ್ಛಿರಃ ॥ – ಭಾರತ (ಕರ್ಣ. ೯೧/೬೪)

ಇದರಿಂದ ಸತ್ಯ, ಧರ್ಮಗಳ ಸಿದ್ಧಿಯಿಲ್ಲದವರಿಗೆ ಅಂತಹ ಅಮೂಲ್ಯವಾದ ಅಸ್ತ್ರಗಳು ಸಿದ್ಧಿಸಲಾರವು ಎಂಬ ಮತ್ತೊಂದು ಪ್ರಮೇಯವೂ ನಿರೂಪಿತ ಎಂದು ತಿಳಿಯಬಹುದು.

೨) ಕರ್ಣ ರಥದ ಕೆಳಗಿದ್ದೇ ಆಗ ಅರ್ಜುನನ ಮೇಲೆ ಬಾಣ ಪ್ರಯೋಗಿಸುವ ಸಿದ್ಧತೆಯಲ್ಲಿದ್ದ, ಆಗಲೇ ಅವನ ತಲೆ ಹಾರಿತು.

೩) ಇಲ್ಲಿ ಮತ್ತೊಂದು ಅತ್ಯಂತ ಸೂಕ್ಷ್ಮವಾದ ವಿಚಾರವೂ ಗಮನಾರ್ಹ. ಕರ್ಣನಿಗೆ ಪರಶುರಾಮರು ನೀಡಿದ್ದ ರಥ ಅಮೂಲ್ಯವಾದ ದಿವ್ಯರಥ. ಅದರಲ್ಲಿ ಕೂತವನಿಗೆ ಸೋಲಾಗಲೀ, ಸಾವಾಗಲೀ ಒದಗದು. ಅದರಿಂದಾಗಿ ಕರ್ಣ ರಥದ ಕೆಳಗಿದ್ದಾಗಲೇ ಸಾಯುವಂತಾಯಿತು ಎಂಬುದನ್ನು ಗಮನಿಸಬೇಕು.

---

೧೮೩. ಕಂ ಛೇತ್ತುಮಿತಿ ಭಾವಃ। – (ಜ.)

೧೮೩. ತಪೋऽಸ್ತಿ ತಪ್ತಂ ಗುರವಶ್ಚತೋಷಿತಾ ಮಯಾ ಯದಿಷ್ಟಂ ಸುಹೃದಾಂ ಶ್ರುತಂ ತಥಾ ।
ಅನೇನ ಸತ್ಯೇನ ನಿಹಂತ್ವಯಂ ಶರಃ ಸುಸಂಹಿತಃ ಕರ್ಣಮರಿಂ ಮಮೋರ್ಜಿತಮ್ ॥
– ಭಾರತ (ಕರ್ಣ. ೯೧/೪೬)

೪) ರಥದಲ್ಲಿ ಇರುವವರೆಗೂ ಅವನು ಅವಧ್ಯ ಎಂಬ ವಿವರ ಈಗಾಗಲೇ ಬಂದಿದೆ (೨೬/೧೪೬). ಆದ್ದರಿಂದ ಇದು ಮೋಸದ ಪ್ರಸಂಗವಾಗಿರದೆ, ಪರಶುರಾಮರು ನೀಡಿದ ವರವನ್ನು ಗೌರವದಿಂದ ಪಾಲಿಸುವುದು ಮಾತ್ರವೇ ಆಗಿತ್ತು ಎಂಬ ವಿಶೇಷಾಂಶ ತಿಳಿಯುವುದು.

ಅಪರಾಹ್ಣೇऽಪರಾಹ್ಣಸ್ಯ ಸೂರ್ಯಜಸ್ಯೇಂದ್ರಸೂನುನಾ ।
ಛಿನ್ನಮಂಜಲಿಕೇನಾಜೌ ಸೋತ್ಸೇಧಮಪತಚ್ಛಿರಃ ॥ ೧೮೪ ॥

ಅ: ಎರಡನೆಯ ದಿನದ ಅಪರಾಹ್ಣ ಕಾಲದಲ್ಲಿ ಯುದ್ಧದಲ್ಲಿ ಇಂದ್ರಪುತ್ರನಾದ ಅರ್ಜುನ ಸೂರ್ಯಪುತ್ರನಾದ ಕರ್ಣನ ತಲೆಯನ್ನು ಕತ್ತರಿಸಿದ. ಅದು ವೇಗದಿಂದ ಮೇಲಕ್ಕೆ ಚಿಮ್ಮಿ ಕೆಳಕ್ಕೆ ಬಿತ್ತು.

ವಿ: ೧) ಮಹಾಭಾರತದಲ್ಲಿ ಈ ಶ್ಲೋಕ ಯಥಾವತ್ತಾಗಿಯೇ ಬಂದಿದೆ :

ಅಪರಾಹ್ಣೇऽಪರಾಹ್ಣೋऽಸ್ಯ ಸೂತಪುತ್ರಸ್ಯ ಮಾರಿಷ ।
ಛಿನ್ನಮಂಜಲಿಕೇನಾಜೌ ಸೋತ್ಸೇಧಮಪತಚ್ಛಿರಃ ॥ – ಭಾರತ (ಕರ್ಣ. ೯೧/೬೪)

ಇಲ್ಲಿ ಅಪರಾಹ್ಣ ಎಂಬುದಕ್ಕೆ ಅಪರಾಹ್ಣವಯಸ್ಸಿನ – ಎಂದರೆ ಅಪರವಯಸ್ಸಿನ ವೃದ್ಧಾಪ್ಯದ ವಯಸ್ಸಿನ ಕರ್ಣನ ಎಂಬ ಅರ್ಥ ವಾದಿರಾಜೀಯದಲ್ಲಿದೆ.

೨) ಕರ್ಣನು ಸೇನಾಪತ್ಯ ವಹಿಸಿದ್ದು ಎರಡು ದಿನಗಳು ಮಾತ್ರ. ಆದ್ದರಿಂದ ಅಪರಾಹ್ಣ ಎಂಬ ಪದಕ್ಕೆ ಅವನು ಸೇನಾಪತ್ಯವಹಿಸಿದ ಎರಡನೆಯ ದಿನ ಎಂಬ ಅರ್ಥ ಜನಾರ್ದನೀಯದಲ್ಲಿದೆ.

೩) ಅಪರಾಹ್ಣ ಕಾಲ ಎಂದರೆ ಹಗಲಿನ ಐದು ಭಾಗಗಳಲ್ಲಿ ನಾಲ್ಕನೆಯ ಭಾಗ ಎಂದರ್ಥ.

೪) ಕರ್ಣ ಚಕ್ರವನ್ನು ಎತ್ತಲೆಂದು ತನ್ನ ಗಾಢಪ್ರಯತ್ನವನ್ನು ಮಾಡುವಾಗ ಅವನ ತಲೆ ಹಾರಿದ್ದರಿಂದ ಅದು ಮೇಲಕ್ಕೆ ಚಿಮ್ಮಿ ಕೆಳಕ್ಕೆ ಬಿದ್ದಿತು ಎಂಬ ಅರ್ಥ ವಾದಿರಾಜೀಯದಲ್ಲಿದೆ.

---

೧೮೪. ಸೋತ್ಸೇಧಂ ಸೋತ್ಪ್ಲವನಂ ಸಶರೀರಮಿತಿ ವಾ । – (ವೇ.)

೧೮೪. ಅಪರಾಹ್ಣೇऽಪರಾಹ್ಣಸ್ಯ ಇತ್ಯತ್ರ ಅಪರಾಹ್ಣಸ್ಯ= ಅಪರವಯಸ್ಕಸ್ಯ ವೃದ್ಧಸ್ಯೇತ್ಯರ್ಥಃ। ಸೋತ್ಸೇಧಂ ಉತ್ಸೇಧಃ= ಉತ್ಕ್ಷೇಪಣಂ ತೇನ ಸಹಿತಂ ಸೋತ್ಸೇಧಮ್। ಶರವೇಗೇನ ಕಿಂಚಿದೂರ್ಧ್ವಂ ಗತ್ವಾऽಪತದಿತ್ಯರ್ಥಃ – (ವಾ.)

೧೮೪. ಉತ್ಸೇಧಃಕಾಯ ಉನ್ನತಿರಿತ್ಯಮರಃ। – (ಜ.)

೧೮೪. ಏಕತಃ ಶಿರಃ ಏಕತಶ್ಚೋತ್ಸೇಧೋऽಪತದಿತ್ಯರ್ಥಃ । – (ವ.)

೧೮೪. ದೇಹಾಚ್ಚ ಕರ್ಣಸ್ಯ ನಿಪಾತಿತಸ್ಯ ತೇಜಃ ಸೂರ್ಯಂ ಖಂ ವಿತತ್ಯಾವಿವೇಶ ॥ – ಇತಿ (ಕರ್ಣ. ೯೧/೫೫)

೫) ರಾಮಾಯಣದಲ್ಲಿ ಈ ಕರ್ಣ ಸುಗ್ರೀವನಾಗಿಯೂ, ಅರ್ಜುನ ವಾಲಿಯಾಗಿಯೂ ಇದ್ದವರು. ಆಗ ಸುಗ್ರೀವ ಶ್ರೀರಾಮನನ್ನು ಪ್ರಾರ್ಥಿಸಿ ವಾಲಿಯನ್ನು ಕೊಲ್ಲಲು ಕೇಳಿಕೊಳ್ಳುವನು. ಶ್ರೀರಾಮ ಆಗ ವಾಲಿಯ ಕಣ್ಣಿಗೆ ಕಾಣದಂತೆ ಮರೆಯಲ್ಲಿದ್ದೇ ಕೊಂದ ಎಂದರ ಈಗಾಗಲೇ ಬಂದಿದೆ (೬/೧೮). ಈಗ ಆ ಶ್ರೀರಾಮನೇ ಆದ ಶ್ರೀಕೃಷ್ಣ ವಾಲಿಯಾಗಿದ್ದ ಅರ್ಜುನನಿಗೆ ಸುಗ್ರೀವನಾಗಿದ್ದ ಕರ್ಣನನ್ನು ಅವನ ರಥದಿಂದ ಕೆಳಗಿದ್ದಾಗ ಕೊಲ್ಲಿಸುವ ಮೂಲಕ ಅದರ ಸೇಡನ್ನು ತೀರಿಸಿಕೊಂಡ ಸಂತೃಪ್ತಿಯನ್ನು ಅರ್ಜುನನಿಗೆ ನೀಡಿದ ಎಂದು ತಿಳಿಯಬಹುದು.

೬) ಅಣ್ಣನಾಗಿದ್ದ ವಾಲಿಯನ್ನು ಹಾಗೆ ಕೊಲ್ಲಿಸಿದ ಅಪರಾಧದಿಂದಾಗಿ ಕರ್ಣನಿಗೆ ಹೀಗೆ ದುರಂತವನ್ನು ಕಾಣುವ ಪರಿಸ್ಥಿತಿ ಒದಗಿತು ಎಂಬುದು ಅದರ ಆಂತರ್ಯ.

೭) ಕರ್ಣನ ತಲೆ ಹಾಗೆ ಕತ್ತರಿಸಲ್ಪಟ್ಟಾಗ ಅವನ ದೇಹದೊಳಗಿಂದ ದಿವ್ಯಜ್ಯೋತಿಯೊಂದು ಗಗನಕ್ಕೆ ನೆಗೆದು ಸೂರ್ಯಮಂಡಲದಲ್ಲಿ ಲೀನವಾಯಿತು ಎಂಬ ಮಾತು ಮಹಾಭಾರತದಲ್ಲಿದೆ :

ದೇಹಾಚ್ಚ ಕರ್ಣಸ್ಯ ನಿಪಾತಿತಸ್ಯ ತೇಜಃ ಸೂರ್ಯಂ ಖಂ ವಿತತ್ಯಾವಿವೇಶ ।
ತದದ್ಭುತಂ ಸರ್ವಮನುಷ್ಯಯೋಧಾಃ ಸಂದೃಷ್ಟವಂತೋ ನಿಹತೇ ಸ್ಮ ಕರ್ಣೇ ॥
– ಭಾರತ (ಕರ್ಣ. ೯೧/೫೫, ೫೬)

ಸೂರ್ಯಾವತಾರನಾದ ಕರ್ಣ ತನ್ನ ಮೂಲರೂಪಕ್ಕೆ ತೆರಳಿದ ಸಂಕೇತ ಅದು ಎಂದು ತಿಳಿಯಬಹುದು.

ತಸ್ಮಿನ್ ಹತೇ ದೀನಮುಖಃ ಸುಯೋಧನೋ
ಯಯೌ ಸಮಾಹೃತ್ಯ ಬಲಂ ಸಶಲ್ಯಃ ।
ಯುಧಿಷ್ಠಿರಃ ಕರ್ಣವಧಂ ನಿಶಮ್ಯ
ತದಾ ಸಮಾಗತ್ಯ ದದರ್ಶ ತತ್ತನುಮ್ ॥ ೧೮೫ ॥

---

೧೮೫. ತತ್ಸತ್ಯಮಿತಿ ನಿಶ್ಚಯ ಇತ್ಯತ್ರ ಸತಾಮಿದಂ ಸತ್ಯಮಿತಿ ವ್ಯುತ್ಪತ್ತ್ಯಾ ಸತ್ಯಮಿತ್ಯರ್ಥಃ । – (ವಾ.)

೧೮೫. ವರ್ತಮಾನೇ ಮಹಾಯುದ್ಧೇ ತವ ಕರ್ಣಸ್ಯ ಚೋಭಯೋಃ ।
ದ್ರಷ್ಟುಮಾಯೋಧನಂ ಪೂರ್ವಮಾಗತೋ ಧರ್ಮನಂದನಃ ।
ಭೃಶಂ ತು ಗಾಢವಿದ್ಧತ್ವಾನ್ನಾಶಕತ್ ಸ್ಥಾತುಮಾಹವೇ ।
ತತಃ ಸ ಶಿಬಿರಂ ಗತ್ವಾ ಸ್ಥಿತವಾನ್ ಪುರುಷರ್ಷಭಃ ॥ – ಭಾರತ (ಕರ್ಣ. ೯೬/೬,೭)

ತತಃ ಪುನಃ ಸಮಾಜಗ್ಮುರಭೀತಾಃ ಕುರುಪಾಂಡವಾಃ ।
ಭೀಮಸೇನಮುಖಾಃ ಪಾರ್ಥಾಃ ಸೂತಪುತ್ರಮುಖಾ ವಯಮ್ ॥ – ಭಾರತ (ಕರ್ಣ. ೪೮/೬೭)

ಅ: ಕರ್ಣ ಹತನಾಗಲು ದುರ್ಯೋಧನ ಮಂಕುಮುಖದವನಾಗಿ ಸೇನೆಯನ್ನು ಹಿಂತೆಗೆದುಕೊಂಡು ಶಲ್ಯನೊಂದಿಗೆ ತೆರಳಿದ. ಧರ್ಮರಾಜ ಕರ್ಣವಧೆಯನ್ನು ಕೇಳಿ ಅಲ್ಲಿಗೆ ಧಾವಿಸಿ ಬಂದು ಅವನ ದೇಹವನ್ನು ನೋಡಿದ.

ವಿ: ೧) ಕರ್ಣನ ಸಾವಿಗಾಗಿ ಕಾತರಿಸುತ್ತಿದ್ದ ಧರ್ಮರಾಜ ಕರ್ಣ ಸತ್ತ ಸುದ್ದಿ ಕೇಳಿದ ತಕ್ಷಣ ಸಂಭ್ರಮದಿಂದ ಅಲ್ಲಿಗೆ ಬಂದು ಅವನ ದೇಹವನ್ನು ನೋಡಿ ಆನಂದಿಸಿದ :

ಸಂಛಿನ್ನಭಿನ್ನಕವಚಂ ಬಾಣೈಶ್ಚ ವಿದಲೀಕೃತಮ್ ।
ಸಪುತ್ರಂ ನಿಹತಂ ದೃಷ್ಟ್ವಾ ಕರ್ಣಂ ರಾಜಾ ಯುಧಿಷ್ಠಿರಃ ॥
ಸಂಜಾತಪ್ರತ್ಯಯೋऽತೀವ ವೀಕ್ಷ್ಯ ಚೈವಂ ಪುನಃ ಪುನಃ ।
ಪ್ರಶಶಂಸ ನರವ್ಯಾಘ್ರಾವುಭೌ ಮಾಧವಪಾಂಡವೌ ॥ – (ಕರ್ಣ. ೯೬/೩೯,೪೦)

ತನ್ನನ್ನು ನೋಯಿಸಿದ ಕರ್ಣನ ಸಾವು ಅವನಿಗೆ ಎಷ್ಟು ಪ್ರಿಯವಾಗಿತ್ತು ಎಂಬುದಕ್ಕೆ ಇದು ನಿದರ್ಶನ.

೨) ಆದರೆ, ಇದೇ ಧರ್ಮರಾಜ ಆ ಕರ್ಣನನ್ನು ಕೊಂದದ್ದಕ್ಕಾಗಿ ಅಷ್ಟೇ ಅಪಾರವಾಗಿ ಶೋಕಿಸುವ ಪ್ರಸಂಗ ಮುಂದೆ ಬರುವುದು ಎಂತಹ ವಿಪರ್ಯಾಸ! (೨೮/೨೩೧) ಕರ್ಣನು ಸತ್ತ ಮೇಲೆ ಮತ್ತೆ ಯುದ್ಧ ಮುಂದುವರಿದು ಆಗ ಭೀಮಸೇನ ಇಪ್ಪತ್ತೈದು ಸಾವಿರ ಕೌರವ ಸೈನಿಕರನ್ನು ಕೊಲ್ಲುವ ಅಪೂರ್ವ ವಿವರ ಮಹಾಭಾರತದಲ್ಲಿದೆ :

ನ ತಾನ್ ರಥಸ್ಥೋ ಭೂಮಿಷ್ಠಾನ್ ಧರ್ಮಾಪೇಕ್ಷೀ ವೃಕೋದರಃ ।
ಯೋಧಯಾಮಾಸ ಕೌಂತೇಯೋ ಭುಜವೀರ್ಯವ್ಯಪಾಶ್ರಯಃ ॥
ಶ್ಯೇನವದ್ ವಿಚರನ್ ಭೀಮೋ ಗದಾಹಸ್ತೋ ಮಹಾಬಲಃ ।
ಪಂಚವಿಂಶತಿಸಾಹಸ್ರಾಂಸ್ತಾವಕಾನ್ ಸಮಪೋಥಯತ್ ॥

– ಭಾರತ (ಕರ್ಣ. ೯೨/೨೪, ೨೮)

---

೧೮೬. ದೀಪಿಕಾಭಿಃ ಕೃತೋದ್ಯೋತಂ ಪಶ್ಯತೇ ವೈ ವೃಷಂ ತದಾ ।
ಸಂಛಿನ್ನಭಿನ್ನಕವಚಂ ಬಾಣೈಶ್ಚ ವಿದಲೀಕೃತಮ್ ॥
ಸಪುತ್ರಂ ನಿಹತಂ ದೃಷ್ಟ್ವಾ ಕರ್ಣಂ ರಾಜಾ ಯುಧಿಷ್ಠಿರಃ ।
ಸಂಜಾತಪ್ರತ್ಯಯೋऽತೀವ ವೀಕ್ಷ್ಯ ಚೈವಂ ಪುನಃ ಪುನಃ ॥
ಪ್ರಶಶಂಸ ನರವ್ಯಾಘ್ರಾವುಭೌ ಮಾಧವಪಾಂಡವೌ ॥
ಅದ್ಯ ರಾಜಾऽಸ್ಮಿ ಗೋವಿಂದ ಪೃಥಿವ್ಯಾಂ ಭ್ರಾತೃಭಿಃ ಸಹ ।
ತ್ವಯಾ ನಾಥೇನ ವೀರೇಣ ವಿದುಷಾ ಪರಿಪಾಲಿತಃ । – ಭಾರತ (ಕರ್ಣ. ೯೬/೩೯-೪೧)

ಕರ್ಣನ ಸಾವಿಗಾಗಿ ಜ್ಞಾನಿಗಳೆಲ್ಲ ಪರಿತಪಿಸಿ ಎಂತಹ ದಾನಶೂರ, ಧರ್ಮಿಷ್ಠ ವ್ಯಕ್ತಿಯಾಗಿದ ಎಂದು ಶೋಕಿಸಿದ ವಿವರವೂ ಅಲ್ಲಿದೆ.

ಪಾಂಡವರ ಹರ್ಷ

ಶಶಂಸ ಕೃಷ್ಣಂ ಚ ಧನಂಜಯಂ ಚ
ಭೀಮಂ ಚ ಯೇಽನ್ಯೇ ಚ ಯುಧಿ ಪ್ರವೀರಾಃ ।
ಗತ್ವಾ ಚ ತೇ ಶಿಬಿರಂ ಮೋದಮಾನಾ
ಊಷುಃ ಸಕೃಷ್ಣಾಸ್ತದನುವ್ರತಾಸ್ತದಾ ॥ ೧೮೬ ॥

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮಹಾಭಾರತತಾತ್ಪರ್ಯನಿರ್ಣಯೇ ಕರ್ಣವಧೋ ನಾಮ ಸಪ್ತವಿಂಶೋಽಧ್ಯಾಯಃ ॥ ೨೭ ॥

ಅ: ಧರ್ಮರಾಜ ಕೃಷ್ಣನನ್ನು, ಅರ್ಜುನನನ್ನು, ಭೀಮನನ್ನು ಬಹಳವಾಗಿ ಕೊಂಡಾಡಿದ. ಮಹಾಯುದ್ಧಕೋವಿದರಾದ ಇತರ ವೀರರೂ ಹೊಗಳಿದರು. ಅವರು ಕೃಷ್ಣನೊಂದಿಗೆ ಶಿಬಿರಕ್ಕೆ ತೆರಳಿ ಅವನಿಗೆ ಸದಾ ಅನುವ್ರತರಾಗಿದ್ದು ಆನಂದದಿಂದ ನೆಲೆಸಿದರು.

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಪ್ರಣೀತ ಮಹಾಭಾರತತಾತ್ಪರ್ಯನಿರ್ಣಯದಲ್ಲಿ
'ಕರ್ಣವಧ' ಎಂಬ ಇಪ್ಪತ್ತೇಳನೆಯ ಅಧ್ಯಾಯ ಮುಗಿಯಿತು ॥ ೨೭ ॥

॥ ಶ್ರೀಕೃಷ್ಣಾರ್ಪಣಮಸ್ತು ॥

★★★★★

---

೧೮೬. ಜೀವಿತೇ ಚೈವ ರಾಜ್ಯೇ ಚ ಹತೇ ರಾಧಾತ್ಮಜೇ ರಣೇ ।
ತ್ವತ್ಪ್ರಸಾದಾತ್ ವಯಂ ಚೈವ ಕೃತಾರ್ಥಾಃ ಪುರುಷರ್ಷಭ ॥
ಸ್ವಪ್ಸ್ಯಾಮೋಽದ್ಯ ಸುಖಂ ರಾತ್ರೌ ತ್ವತ್ಪ್ರಸಾದಾನ್ಮಹಾಭುಜ ॥ – ಭಾರತ (ಕರ್ಣ. ೯೬/೪೫)

ಅಧ್ಯಾಯ - ೨೮

(ಪಾಂಡವರಾಜ್ಯಪ್ರಾಪ್ತಿಃ)

(ಶಲ್ಯಸೇನಾಪತ್ಯ, ಶಲ್ಯವಧೆ, ಶಕುನಿ ಮೊದಲಾದವರ ವಧೆ, ದುರ್ಯೋಧನನ ಪಲಾಯನ, ಭೀಮನಿಂದ ದುರ್ಯೋಧನನ ಊರುಭಂಗ, ಅಶ್ವತ್ಥಾಮರಿಂದ ಉಪಪಾಂಡವರ ವಧೆ, ಭೀಮನಿಂದ ಅಶ್ವತ್ಥಾಮಪರಾಭವ, ಬ್ರಹ್ಮಶಿರೋಸ್ತ್ರ-ಪ್ರಸಂಗ, ಕೃಷ್ಣನಿಂದ ಪರೀಕ್ಷಿದ್ರಾಜನ ರಕ್ಷಣೆ, ಪಾಂಡವರ ಪುರಪ್ರವೇಶ)

ಹದಿನೆಂಟನೆಯ ದಿನದ ಯುದ್ಧ - ಸೇನಾಪತಿಯಾಗಿ ಶಲ್ಯ

ಪ್ರಭಾತಾಯಾಂ ತು ಶರ್ವರ್ಯಾಂ ಗುರುಪುತ್ರಾನುಮೋದಿತಃ ।
ಶಲ್ಯಂ ಸೇನಾಪತಿಂ ಕೃತ್ವಾ ಯೋದ್ಧುಂ ದುರ್ಯೋಧನೋಽಭ್ಯಯಾತ್ ॥ ೧ ॥

ಅ: ರಾತ್ರಿ ಕಳೆದು ಬೆಳಗಾದ ಮೇಲೆ ಅಶ್ವತ್ಥಾಮರ ಅನುಮತಿ ಪಡೆದು ದುರ್ಯೋಧನ ಶಲ್ಯನನ್ನು ಸೇನಾಪತಿಯನ್ನಾಗಿ ಮಾಡಿ ಯುದ್ಧ ಮಾಡಲು ತೆರಳಿದ.

ಯುದ್ಧಾರಂಭ

ತಮಭ್ಯಯುಃ ಪಾಂಡವಾಶ್ಚ ಹೃಷ್ಟಾ ಯುದ್ಧಾಯ ದಂಸಿತಾಃ ।
ತತ್ರಾಸೀತ್ ಸುಮಹದ್ಯುದ್ಧಂ ಪಾಂಡವಾನಾಂ ಪರೈಃ ಸಹ ॥ ೨ ॥

ಅ: ಪಾಂಡವರೆಲ್ಲ ಹರ್ಷದಿಂದ ಸನ್ನದ್ಧರಾಗಿ ಅವನ ಮೇಲೆ ಯುದ್ಧಕ್ಕೆ ತೆರಳಿದರು. ಆಗ ಪಾಂಡವರಿಗೆ ಕೌರವರೊಂದಿಗೆ ದೊಡ್ಡ ಮಹಾಯುದ್ಧ ನಡೆಯಿತು.

ಭೀಮಾದಿ ಕ್ರಮದಲ್ಲಿ ಪಾಂಡವರು

ಅಗ್ರೇ ಭೀಮಃ ಪಾಂಡವಾನಾಂ ಮಧ್ಯೇ ರಾಜಾ ಯುಧಿಷ್ಠಿರಃ ।
ಪೃಷ್ಠೇ ಗಾಂಡೀವಧನ್ವಾಽಽಸೀದ್ವಾಸುದೇವಾಭಿರಕ್ಷಿತಃ ॥ ೩ ॥

---

೧. ಅಯಂ ಕುಲೇನ ರೂಪೇಣ ತೇಜಸಾ ಯಶಸಾ ಶ್ರಿಯಾ ।
ಸರ್ವೈರ್ಗುಣೈಃ ಸಮುದಿತಃ ಶಲ್ಯೋ ನೋಽಸ್ತು ಚಮೂಪತಿಃ ।
ಭಾಗಿನೇಯಾನ್ ನಿಜಾಂಸ್ಕೃತ್ವಾ ಕೃತಜ್ಞೋಽಸ್ಮಾನುಪಾಗತಃ ॥ (ದ್ರೌಣಿವಚನ) – ಭಾರತ (ಶಲ್ಯ. ೬/೧೯)

ಚಕ್ರರಕ್ಷೌ ಯಮೌ ರಾಜ್ಞೋ ಧೃಷ್ಟದ್ಯುಮ್ನಶ್ಚ ಸಾತ್ಯಕಿಃ ।
ನೃಪಸ್ಯ ಪಾರ್ಶ್ವಯೋರಾಸ್ತಾಮಗ್ರೇಽನ್ಯೇಷಾಂ ಗುರೋಃ ಸುತಃ ॥ ೪ ॥

ಅಶ್ವತ್ಥಾಮಾದಿ ಕ್ರಮದಲ್ಲಿ ಕೌರವರು

ಮಧ್ಯೇ ಶಲ್ಯಃ ಪೃಷ್ಠತೋಽಭೂದ್ಭ್ರಾತೃಭಿಶ್ಚ ಸುಯೋಧನಃ ।
ಚಕ್ರರಕ್ಷೌ ತು ಶಲ್ಯಸ್ಯ ಶಕುನಿಸ್ತತ್ಸುತಸ್ತಥಾ ।
ಕೃಪಶ್ಚ ಕೃತವರ್ಮಾ ಚ ಪಾರ್ಶ್ವಯೋಃ ಸಮವಸ್ಥಿತೌ ॥ ೫ ॥

ಅ: ಪಾಂಡವರ ಸೇನೆಯ ಮುಂಭಾಗದಲ್ಲಿ ಭೀಮಸೇನ, ನಡುವೆ ರಾಜನಾದ ಯುಧಿಷ್ಠಿರ, ಹಿಂಭಾಗದಲ್ಲಿ ಕೃಷ್ಣರಕ್ಷಿತನಾದ ಗಾಂಡೀವಧನುಸ್ಸನ್ನು ಹಿಡಿದ ಅರ್ಜುನ ಇದ್ದರು. ಧರ್ಮರಾಜನ ಚಕ್ರರಕ್ಷಕರಾಗಿ ನಕುಲ, ಸಹದೇವರು, ಎರಡು ಪಕ್ಕಗಳಲ್ಲಿ ಧೃಷ್ಟದ್ಯುಮ್ನ ಮತ್ತು ಸಾತ್ಯಕಿ ಇದ್ದರು. ಕೌರವರ ಮುಂಭಾಗದಲ್ಲಿ ಗುರುಪುತ್ರನಾದ ಅಶ್ವತ್ಥಾಮ, ನಡುವೆ ಶಲ್ಯ, ಹಿಂಭಾಗದಲ್ಲಿ ತಮ್ಮಂದಿರೊಂದಿಗೆ ದುರ್ಯೋಧನ ಇದ್ದರು. ಶಲ್ಯನಿಗೆ ಚಕ್ರರಕ್ಷಕರಾಗಿ ಶಕುನಿ ಮತ್ತು ಅವನ ಮಗ ಉಲೂಕ, ಅವನ ಎರಡೂ ಪಾರ್ಶ್ವಗಳಲ್ಲಿ ಕೃಪ ಮತ್ತು ಕೃತವರ್ಮ ನೆಲೆಸಿದ್ದರು.

ವಿ: ೧) ಪಾಂಡವರು ಧರ್ಮದ ಸಂಕೇತ, ಅವರ ಮುಂಭಾಗದಲ್ಲಿ ಭೀಮಸೇನ ಇದ್ದುದು ಧರ್ಮಿಷ್ಠರು ಜ್ಞಾನಕ್ಕೆ ಅಗ್ರಸ್ಥಾನ ನೀಡಿ ಅಧರ್ಮದೊಂದಿಗೆ ಹೋರಾಡುವುದಕ್ಕೆ ಸಂಕೇತ. ಧರ್ಮರಾಜ ಧರ್ಮದ ಪ್ರತಿನಿಧಿ, ಕೃಷ್ಣರಕ್ಷಿತನಾದ ಅರ್ಜುನ ಹರಿಸರ್ವೋತ್ತಮತ್ವದ ಪರಿಜ್ಞಾನ–ದೊಂದಿಗೆ ಮಾಡುವ ಶಾಸ್ತ್ರ ಶ್ರವಣಾದಿಗಳಿಗೆ ಸಂಕೇತ. ನಕುಲ, ಸಹದೇವರು ಶೀಲ ವಿನಯಗಳ ಸಂಕೇತ, ಧೃಷ್ಟದ್ಯುಮ್ನ ಅಗ್ನಿಯ ಸಂಕೇತ, ಸಾತ್ಯಕಿ ಹರಿಭಕ್ತನ ಸಂಕೇತ. ಇದು ಪಾಂಡವರಂತಹ ಸಜ್ಜನರು ಸಂಸಾರ ಕುರುಕ್ಷೇತ್ರದಲ್ಲಿ ಬದುಕುವ ಪರಿ.

೨) ಇದರಂತೆ ಕೌರವರ ಮುಂಭಾಗದಲ್ಲಿ ಅಶ್ವತ್ಥಾಮ, ಕೌರವರು ಅಧರ್ಮದ ಸಂಕೇತ, ಅಶ್ವತ್ಥಾಮ ಶಿವಾದಿ ಅನ್ಯದೇವತೆಗಳ ಸಂಕೇತ. ಶಲ್ಯ ಎಂದರೆ ಒಂದು ಆಯುಧವಿಶೇಷ. ಅವನು, ಇಲ್ಲಿ ದುರ್ಯೋಧನನ ಪಕ್ಷದವನಾಗಿ ಧರ್ಮಕ್ಕೆ ಒದಗುವ ಆಪತ್ತಿನ ಸಂಕೇತ. ದುರ್ಯೋಧನ ಮತ್ತು ಅವನ ತಮ್ಮಂದಿರು ಸಕಲ ಪಾಪಗಳ ಪ್ರತೀಕ. ಶಕುನಿ ಮತ್ತು ಅವನ ಮಗ ನಾಸ್ತಿಕ್ಯ ಮತ್ತು ಹರಿದ್ವೇಷದ ಸಂಕೇತ. ಕೃಪ, ಕೃತವರ್ಮರು ಯೋಗ್ಯರಾಗಿದ್ದು ಅಯೋಗ್ಯರಿಗೆ ನೆರವು ನೀಡುವ ಅಧರ್ಮಪೋಷಕರ ಸಂಕೇತ. ಇದು ದುಷ್ಟರು ಸಂಸಾರಕುರುಕ್ಷೇತ್ರದಲ್ಲಿ ಬದುಕುವ ಪರಿ.

೩) ಹೀಗೆ ಮಹಾಭಾರತದ ವಿವರಗಳನ್ನು ನೇರವಾಗಿ ಅಧ್ಯಾತ್ಮ ಪ್ರತಿಪಾದಕವಾಗುವಂತೆ ಸಂಗ್ರಹಿಸಿರುವುದು ಶ್ರೀಮನ್ಮಧ್ವಾಚಾರ್ಯರ ಅತ್ಯಂತ ಅಪೂರ್ವವಾದ ಅನುಪಮ ಹಿರಿಮೆ.

ಭೀಮಾಶ್ವತ್ಥಾಮರ ಘೋರ ಯುದ್ಧ

ತತ್ರಾಭವನ್ಮಹದ್ಯುದ್ಧಂ ಭೀಮಸ್ಯ ದ್ರೌಣಿನಾ ಸಹ ।
ರಾಜ್ಞಃ ಶಲ್ಯೇನ ಚ ತಥಾ ಘೋರರೂಪಂ ಭಯಾನಕಮ್ ॥ ೬ ॥

ಅ: ಆಗ ಭೀಮನಿಗೆ ಅಶ್ವತ್ಥಾಮರೊಂದಿಗೆ ಮಹತ್ತರವಾದ ಯುದ್ಧ ನಡೆಯಿತು. ಧರ್ಮರಾಜನಿಗೂ, ಶಲ್ಯನಿಗೂ ಹಾಗೆಯೇ ಭಯಾನಕವಾದ ಘೋರ ಯುದ್ಧ ನಡೆಯಿತು.

ವಿ: ಭೀಮ ಪಾಂಡವರ ಮುಂಭಾಗದಲ್ಲಿದ್ದಂತೆ, ಅಶ್ವತ್ಥಾಮ ಕೌರವರ ಮುಂಭಾಗದಲ್ಲಿ– ದ್ದುದರಿಂದ ಅವರಿಬ್ಬರ ಮಧ್ಯೆ ನೇರ ಯುದ್ಧ ನಡೆಯಿತು ಎಂದಾಗುವುದು. ಅದರಂತೆ ಮಧ್ಯದಲ್ಲಿದ್ದ ಶಲ್ಯ ಮತ್ತು ಧರ್ಮರಾಜನಿಗೂ ಸಹ.

ಅಶ್ವತ್ಥಾಮರ ಪರಾಜಯ

ತತ್ರ ನಾತಿಪ್ರಯತ್ನೇನ ದ್ರೌಣಿರ್ಭೀಮೇನ ಸಾಯಕೈಃ ।
ವಿರಥೀಕೃತಸ್ತಥಾ ಧರ್ಮಸೂನುಃ ಶಲ್ಯೇನ ತತ್ಕ್ಷಣಾತ್ ॥ ೭ ॥

ಅ: ಆಗ ಹೆಚ್ಚು ಪ್ರಯತ್ನವಿಲ್ಲದೇ ಭೀಮಸೇನ ಬಾಣಗಳಿಂದ ಅನಾಯಾಸದಿಂದ ಅಶ್ವತ್ಥಾಮನನ್ನು ವಿರಥನನ್ನಾಗಿಸಿದ; ಅದರಂತೆ ಧರ್ಮರಾಜನನ್ನು ಶಲ್ಯ ವಿರಥನನ್ನಾಗಿಸಿದ.

ವಿ: ಭೀಮ ವಾಯು; ಶಲ್ಯನಲ್ಲಿ ವಾಯುವಿನ ಆವೇಶ; ಎಂದರೆ ಎರಡು ಕಡೆಗೂ ವಾಯುವಿಗೇ ಜಯ ಎಂದಾಯಿತು.

ಶಲ್ಯ ಅರ್ಜುನರ ಯುದ್ಧ

ಆಸಸಾದ ತದಾ ಶಲ್ಯಂ ಕಪಿಪ್ರವರಕೇತನಃ ।
ತಯೋರಾಸೀನ್ಮಹದ್ಯುದ್ಧಮದ್ಭುತಂ ರೋಮಹರ್ಷಣಮ್ ॥ ೮ ॥

ಅ: ಆಗ ಕಪಿಧ್ವಜನಾದ ಅರ್ಜುನ ಶಲ್ಯನನ್ನು ಎದುರಿಸಿದ; ಅವರಿಬ್ಬರಿಗೆ ಅದ್ಭುತವೂ, ರೋಮಹರ್ಷಕವೂ ಆದ ಮಹಾಯುದ್ಧ ನಡೆಯಿತು.

ಭೀಮನಿಂದ ಅಶ್ವತ್ಥಾಮಾದಿಗಳ ಪುನಃ ಪರಾಭವ

ರಥಮನ್ಯಂ ಸಮಾಸ್ಥಾಯ ದ್ರೌಣಿರ್ಭೀಮಂ ಸಮಭ್ಯಯಾತ್ ।
ದುರ್ಯೋಧನಶ್ಚ ಭೀಮಸ್ಯ ಶರೈರಾವಾರಯದ್ದಿಶಃ ॥ ೯ ॥

ತಾವುಭೌ ಶರವರ್ಷೇಣ ವಾರಯಾಮಾಸ ಮಾರುತಿಃ ।
ತಾಭ್ಯಾಂ ತಸ್ಯಾಭವದ್ಯುದ್ಧಂ ಸುಘೋರಮತಿಮಾನುಷಮ್ ॥ ೧೦ ॥

ಅ: ಮತ್ತೊಂದು ರಥವನ್ನೇರಿ ಅಶ್ವತ್ಥಾಮ ಭೀಮನ ಮೇಲೆ ಸಾಗಿದ. ದುರ್ಯೋಧನನೂ ಬಾಣಗಳಿಂದ ಭೀಮನ ಎಲ್ಲ ದಿಕ್ಕುಗಳನ್ನು ಮುಚ್ಚಿಹಾಕಿದ. ಭೀಮಸೇನ ಅವರಿಬ್ಬರನ್ನೂ ಬಾಣಗಳ ಮಳೆಯಿಂದ ತಡೆದು ನಿಲ್ಲಿಸಿದ. ಅವರಿಬ್ಬರಿಗೂ ಭೀಮನೊಂದಿಗೆ ಅತ್ಯಂತ ಘೋರವಾದ ಅತಿಮಾನುಷ ಯುದ್ಧ ನಡೆಯಿತು.

ಉಳಿದ ಕೌರವರೊಂದಿಗೆ ದ್ರೌಪದೀಪುತ್ರರು ಮೊದಲಾದವರ ಯುದ್ಧ

ದುರ್ಯೋಧನಸ್ಯಾವರಜಾನ್ ದ್ರೌಪದೇಯಾ ಯುಯುತ್ಸುನಾ ।
ಶಿಖಿಂಡ್ಯಾದ್ಯೈರ್ಮಾತುಲೈಶ್ಚ ಸಹ ಸರ್ವಾನ್ ನ್ಯವಾರಯನ್ ॥ ೧೧ ॥

ಅ: ದುರ್ಯೋಧನನ ತಮ್ಮಂದಿರನ್ನೆಲ್ಲ ದ್ರೌಪದೀಪುತ್ರರು ಯುಯುತ್ಸುವಿನೊಂದಿಗೂ, ಶಿಖಂಡಿ ಮುಂತಾದ ಸೋದರ ಮಾವಂದಿರೊಂದಿಗೂ ಕೂಡಿ ಎದುರಿಸಿದರು.

ಸಹದೇವ ಶಕುನಿ ಮೊದಲಾದವರ ಯುದ್ಧ

ಸಹದೇವಸ್ತು ಶಕುನಿಮುಲೂಕಂ ನಕುಲಸ್ತಥಾ ।
ಧೃಷ್ಟದ್ಯುಮ್ನಶ್ಚ ಹಾರ್ದಿಕ್ಯಂ ಸಾತ್ಯಕಿಃ ಕೃಪಮೇವ ಚ ॥ ೧೨ ॥

ಅ: ಸಹದೇವನು ಶಕುನಿಯನ್ನು, ಹಾಗೆಯೇ ನಕುಲನು ಶಕುನಿಯ ಮಗನಾದ ಉಲೂಕನನ್ನು, ಧೃಷ್ಟದ್ಯುಮ್ನ ಕೃತವರ್ಮನನ್ನು, ಸಾತ್ಯಕಿಯು ಕೃಪನನ್ನು ಎದುರಿಸಿದರು.

ತೇಷಾಂ ತದಭವದ್ಯುದ್ಧಂ ಚಿತ್ರಂ ಲಘು ಚ ಸುಷ್ಠು ಚ ।
ಶಲ್ಯಸ್ತು ಶರಸಂಘಾತೈಃ ಪಾರ್ಥಸ್ಯಾವಾರಯದ್ದಿಶಃ ॥ ೧೩ ॥

ಅ: ಅವರಿಗೆ ವಿಚಿತ್ರವಾದ ಒಳ್ಳೆಯ ಕಿರುಯುದ್ಧ ನಡೆಯಿತು. ಶಲ್ಯ ಬಾಣವೃಂದಗಳಿಂದ ಅರ್ಜುನನ ಸುತ್ತಲಿನ ಎಲ್ಲ ದಿಕ್ಕುಗಳನ್ನೂ ಮುಚ್ಚಿಹಾಕಿದ.

---

೧೧. ಯುಯುತ್ಸುನೇತ್ಯತ್ರ ಕೌರವದಲಾದಾಗತೇನ ಪಾಂಡವದಲಂ ಪ್ರವಿಷ್ಟೇನ ಧೃತರಾಷ್ಟ್ರವೈಶ್ಯಾಪುತ್ರೇಣ ಯುಯುತ್ಸುನೇತ್ಯರ್ಥಃ ॥ – (ವಾ.)

ಶಲ್ಯಾರ್ಜುನರ ಯುದ್ಧ

ಸೋಽಪಿ ವಿವ್ಯಾಧ ವಿಶಿಖೈಃ ಶಲ್ಯಮಾಹವಶೋಭಿನಮ್ ।
ತಯೋಸ್ತು ಸಮಮೇವಾಸೀಚ್ಚಿರಂ ದೇವಾಸುರೋಪಮಮ್ ॥ ೧೪ ॥

ಅ: ಅರ್ಜುನನು ಯುದ್ಧದಲ್ಲಿ ಮೆರೆಯುತ್ತಿದ್ದ ಶಲ್ಯನನ್ನು ಬಾಣಗಳಿಂದ ಹೊಡೆಯತೊಡ-ಗಿದ. ಅವರಿಬ್ಬರಿಗೂ ದೇವಾಸುರ ಸಂಗ್ರಾಮದಂತಹ ಯುದ್ಧ ಬಹುಕಾಲ ಸಮನಾಗಿಯೇ ನಡೆಯಿತು.

ಶಲ್ಯನಿಂದ ಅರ್ಜುನನ ಮೂರ್ಛೆ

ತತಃ ಶರಂ ವಜ್ರನಿಭಂ ಮದ್ರರಾಜಃ ಸಮಾದದೇ ।
ತೇನ ವಿವ್ಯಾಧ ಬೀಭತ್ಸುಂ ಹೃದಯೇ ಸ ಮುಮೋಹ ಚ ॥ ೧೫ ॥

ಅ: ಬಳಿಕ ಶಲ್ಯ ವಜ್ರದಂತಹ ಬಾಣವೊಂದನ್ನು ಕೈಗೆತ್ತಿಕೊಂಡ. ಅದರಿಂದ ಅರ್ಜುನನನ್ನು ವಕ್ಷಸ್ಥಳದಲ್ಲಿ ಹೊಡೆದ; ಅರ್ಜುನ ಮೂರ್ಛಿತನಾದ.

ಅರ್ಜುನನಿಂದ ಶಲ್ಯ ಧನುರ್ಭಂಗ

ಉಪಲಭ್ಯ ಪುನಃ ಸಂಜ್ಞಾಂ ವಾಸವಿಃ ಶತ್ರುತಾಪನಃ ।
ಚಿಚ್ಛೇದ ಕಾರ್ಮುಕಂ ಸಂಖ್ಯೇ ಮದ್ರರಾಜಸ್ಯ ಧೀಮತಃ ॥ ೧೬ ॥

ಅ: ಮತ್ತೆ ಎಚ್ಚರ ಹೊಂದಿ ಶತ್ರುತಾಪಕನಾದ ಅರ್ಜುನ ಯುದ್ಧದಲ್ಲಿ ಧೀಮಂತನಾದ ಶಲ್ಯನ ಬಿಲ್ಲನ್ನು ಕತ್ತರಿಸಿದ.

ಮುಂದುವರೆದ ಶಲ್ಯಾರ್ಜುನರ ಯುದ್ಧ

ಸೋಽನ್ಯತ್ ಕಾರ್ಮುಕಮಾದಾಯ ಮುಮೋಚಾಸ್ತ್ರಾಣಿ ಫಲ್ಗುನೇ ।
ಸೌರಂ ಯಾಮ್ಯಂ ಚ ಪಾರ್ಜನ್ಯಂ ತಾನ್ಯೈಂದ್ರೇಣ ಜಘಾನ ಸಃ ॥ ೧೭ ॥

ಅ: ಶಲ್ಯ ಮತ್ತೊಂದು ಬಿಲ್ಲನ್ನು ಕೈಗೆತ್ತಿಕೊಂಡು ಅರ್ಜುನನ ಮೇಲೆ ಅಸ್ತ್ರಗಳನ್ನು ಬಿಡ-ತೊಡಗಿದ. ಸೂರ್ಯಾಸ್ತ್ರ, ಯಮಾಸ್ತ್ರ, ಪರ್ಜನ್ಯಾಸ್ತ್ರಗಳನ್ನು ಅವನು ಪ್ರಯೋಗಿಸಿದಾಗ ಅರ್ಜುನ ಅವುಗಳನ್ನು ಇಂದ್ರಾಸ್ತ್ರದಿಂದ ಉಪಶಮನಗೊಳಿಸಿದ.

ಶಲ್ಯನಿಂದ ಗದಾಪ್ರಯೋಗ

ಪುನರ್ಮಕೃಂತತ್ ತಚ್ಚಾಪಮಿಂದ್ರಸೂನುರಮರ್ಷಿತಃ ।
ಶಲ್ಯೋ ಗದಾಂ ಸಮಾದಾಯ ಚಿಕ್ಷೇಪಾರ್ಜುನವಕ್ಷಸಿ ॥ ೧೮ ॥

ಅ: ಅರ್ಜುನ ಕೋಪಗೊಂಡವನಾಗಿ ಶಲ್ಯನ ಬಿಲ್ಲನ್ನು ಮತ್ತೊಮ್ಮೆ ಕತ್ತರಿಸಿದ. ಆಗ ಶಲ್ಯ ಗದೆಯನ್ನು ತೆಗೆದುಕೊಂಡು ಅರ್ಜುನನ ಎದೆಗೆ ಎಸೆದ.

ಮತ್ತೊಮ್ಮೆ ಅರ್ಜುನನ ಮೂರ್ಛೆ - ಶಲ್ಯನ ಪರಾಭವ

ತದಾ ಮುಮೋಹ ಬೀಭತ್ಸುಸ್ತತ ಉಚ್ಚುಕ್ರುಶುಃ ಪರೇ ।
ಪ್ರಾಪ್ಯ ಸಂಜ್ಞಾಂ ಪುನಃ ಪಾರ್ಥಃ ಶಲ್ಯಂ ವಿವ್ಯಾಧ ವಕ್ಷಸಿ ।
ಸ ವಿಹ್ವಲಿತಸರ್ವಾಂಗಃ ಶಿಶ್ರಯೇ ಧ್ವಜಮುತ್ತಮಮ್ ॥ ೧೯ ॥

ಅ: ಆಗ ಅರ್ಜುನ ಮೂರ್ಛಿತನಾದ. ಶತ್ರುಗಳು ಸಂತೋಷದಿಂದ ಕೂಗಿದರು. ಅರ್ಜುನ ಮರಳಿ ಎಚ್ಚೆತ್ತು ಶಲ್ಯನನ್ನು ಎದೆಯ ಮೇಲೆ ಹೊಡೆದ. ಅವನು ಇಡೀ ದೇಹ ಬಳಲಿದವನಾಗಿ ಉತ್ತಮವಾದ ಧ್ವಜಕ್ಕೆ ಒರಗಿದ.

ವಿ: ೧) ಅರ್ಜುನನನ್ನು ಹೀಗೆ ಸತತವಾಗಿ ಎರಡು ಬಾರಿ ಮೂರ್ಛೆಗೊಳಿಸಿದ ಅನುಪಮ–ವಾದ ಸಾಧನೆ ಶಲ್ಯನದಾಯಿತು. ಶಲ್ಯ ಅಂತಹ ಕಾರ್ಯ ಮಾಡಲು ಅವನೊಳಗಿದ್ದ ವಾಯುವಿನ ಆವೇಶ ಕಾರಣ ಎಂದು ತಿಳಿಯಬೇಕು. ಸಹಜವಾಗಿಯೇ ಅದರಿಂದ ದುರ್ಯೋಧನನ ಕಡೆಯವರಿಗೆ ಹರ್ಷ ಉಕ್ಕಿತು. ಆದರೆ ಅದೆಲ್ಲಾ ತಾತ್ಕಾಲಿಕ ಎಂದು ಮುಂದೆ ತಿಳಿಯಿತು.

ಪುನಃ ಅರ್ಜುನನಿಗೆ ಆಘಾತ

ಸಮಾಶ್ವಸ್ತಃ ಪುನರ್ಬಾಣಂ ಯಮದಂಡನಿಭಂ ರಣೇ ।
ಮುಮೋಚ ಪಾರ್ಥಸ್ಯ ಸ ಚ ನಿರ್ಬಿಭೇದ ಸ್ತನಾಂತರಮ್।
ತೇನ ವಿಹ್ವಲಿತಃ ಪಾರ್ಥೋ ಧ್ವಜಯಷ್ಟಿಂ ಸಮಾಶ್ರಿತಃ ॥ ೨೦ ॥

ಅ: ಶಲ್ಯ ಸುಧಾರಿಸಿಕೊಂಡು ಯಮದಂಡದಂತಹ ಬಾಣವೊಂದನ್ನು ಯುದ್ಧದಲ್ಲಿ ಅರ್ಜುನನಿಗೆ ಪ್ರಯೋಗಿಸಿದ. ಅದು ಅವನ ಎದೆಯನ್ನು ಸೀಳಿತು. ಅದರಿಂದ ಬಳಲಿದ ಅರ್ಜುನ ಧ್ವಜಸ್ತಂಭಕ್ಕೆ ಒರಗಿಕೊಂಡ.

ಅರ್ಜುನನಿಂದ ಶಲ್ಯನ ಪರಾಭವ

ಸಮಾಶ್ವಸ್ತಃ ಪ್ರಚಿಚ್ಛೇದ ಮದ್ರರಾಜಸ್ಯ ಕಾರ್ಮುಕಮ್ ।
ಛತ್ರಂ ಧ್ವಜಂ ಚ ತರಸಾ ಸಾರಥಿಂ ಚ ನ್ಯಪಾತಯತ್ ॥ ೨೧ ॥

ಅ: ಅರ್ಜುನ ಸುಧಾರಿಸಿಕೊಂಡು ಶಲ್ಯರಾಜನ ಬಿಲ್ಲನ್ನು ತುಂಡುಮಾಡಿದ. ಅವನ ಛತ್ರ-ವನ್ನು, ಧ್ವಜವನ್ನು, ಸಾರಥಿಯನ್ನು ವೇಗದಿಂದ ಹೊಡೆದು ಬೀಳಿಸಿದ.

ಯುಧಿಷ್ಠಿರನಿಂದ ಶಲ್ಯನ ಅಶ್ವಗಳ ಸಂಹಾರ

ತದಾಽನ್ಯಂ ರಥಮಾಸ್ಥಾಯ ಧರ್ಮರಾಜಃ ಶರೋತ್ತಮೈಃ ।
ಚತುರ್ಭಿಶ್ಚತುರೋ ವಾಹಾನ್ ಶಲ್ಯಸ್ಯ ನಿಜಘಾನ ಹ ॥ ೨೨ ॥

ಶಲ್ಯನಿಂದ ವಿರಥನಾದ ಯುಧಿಷ್ಠಿರ

ಶಲ್ಯೋಽನ್ಯಂ ರಥಮಾಸ್ಥಾಯ ಸರ್ವಾನ್ ತಾನ್ ಶರವೃಷ್ಟಿಭಿಃ ।
ಛಾದಯಾಮಾಸ ರಾಜಾನಂ ವಿರಥಂ ಚ ಚಕಾರ ಹ ॥ ೨೩ ॥

ಅ: ಆಗ ಮತ್ತೊಂದು ರಥವನ್ನೇರಿ ಧರ್ಮರಾಜ ಉತ್ತಮವಾದ ನಾಲ್ಕು ಬಾಣಗಳಿಂದ ಶಲ್ಯನ ನಾಲ್ಕು ಕುದುರೆಗಳನ್ನು ಕೊಂದುಹಾಕಿದ. ಶಲ್ಯ ಬೇರೊಂದು ರಥವನ್ನೇರಿ ಅವರೆಲ್ಲರನ್ನೂ ಶರವೃಷ್ಟಿಗಳಿಂದ ಮುಚ್ಚಿಹಾಕಿದ. ಧರ್ಮರಾಜನನ್ನು ವಿರಥನನ್ನಾಗಿ ಮಾಡಿದ.

ಶಲ್ಯನಿಂದ ಸಾತ್ಯಕಿ ಮೊದಲಾದವರ ಪರಾಭವ

ನಿಹತ್ಯಾಶ್ವಾನ್ ಸಾತ್ಯಕೇಶ್ಚ ಧೃಷ್ಟದ್ಯುಮ್ನಸ್ಯ ಚಾಭಿಭೂಃ ।
ಚಾಪೇ ಛಿತ್ವಾ ಚ ಯಮಯೋರ್ದಧ್ಮೌ ಶಂಖಂ ಮಹಾಸ್ವನಮ್ ॥ ೨೪ ॥

ಅ: ಶತ್ರುಗಳನ್ನು ಗೆಲ್ಲಬಲ್ಲ ಶಲ್ಯ ಸಾತ್ಯಕಿ ಮತ್ತು ಧೃಷ್ಟದ್ಯುಮ್ನನ ಕುದುರೆಗಳನ್ನು ಕೊಂದು ನಕುಲ ಸಹದೇವರ ಬಿಲ್ಲುಗಳನ್ನು ಕತ್ತರಿಸಿ ಮಹಾಧ್ವನಿಗೈಯ್ಯುವ ಶಂಖವನ್ನು ಊದಿದ.

ವಿ: ಅಂತ್ಯಕಾಲ ಸಮೀಪಿಸಿದಂತೆ ಶಲ್ಯನ ಪರಾಕ್ರಮ ಅವನಲ್ಲಿದ್ದ ವಾಯುದೇವರ ಆವೇಶ–ದಿಂದಾಗಿ ಅಸಾಧಾರಣವಾಗಿ ವಿಜೃಂಭಿಸಿದ್ದರ ಸಂಕೇತ ಈ ಅಪೂರ್ವಯುದ್ಧ. ಅದರಿಂದಾಗಿ ಅವನು ಧೃಷ್ಟದ್ಯುಮ್ನಾದಿಗಳನ್ನೆಲ್ಲ ಹಾಗೆ ಸೋಲಿಸಲು ಸಾಧ್ಯವಾಯಿತು ಎಂದು ತಿಳಿಯಬೇಕು.

ಭೀಮನಿಂದ ಶಲ್ಯನ ಪರಾಜಯ

ತತಸ್ತು ಶಲ್ಯಂ ಸಮುದೀರ್ಯಮಾಣಂ
ದೃಷ್ಟ್ವಾ ರಣೇ ಭೀಮಸೇನಸ್ತರಸ್ವೀ ।
ನ್ಯವಾರಯದ್ಬಾಣವರೈರನೇಕೈ-
ಶ್ಚಕಾರ ಚೈನಂ ವಿರಥಂ ಕ್ಷಣೇನ ॥ ೨೫ ॥

ಅ: ಬಳಿಕ ಯುದ್ಧದಲ್ಲಿ ಬಲ ಹೆಚ್ಚಿಸಿಕೊಳ್ಳುತ್ತಿದ್ದ ಶಲ್ಯನನ್ನು ಕಂಡು ವೇಗಶಾಲಿಯಾದ ಭೀಮಸೇನ ಯುದ್ಧದಲ್ಲಿ ಅನೇಕ ಉತ್ತಮ ಬಾಣಗಳಿಂದ ತಡೆದ. ಅವನನ್ನು ಕ್ಷಣದಲ್ಲೇ ವಿರಥನನ್ನಾಗಿಸಿದ.

ಆಸ್ಥಾಯ ಚಾನ್ಯಂ ರಥಮಾಪತಂತಂ
ಪುನಶ್ಚ ಶಲ್ಯಂ ಭೃಶಮೇವ ಮರ್ಮಸು ।
ನಿರ್ಭಿದ್ಯ ಬಾಣೈರ್ವಿರಥಂ ಚಕಾರ
ಪುನಸ್ತೃತೀಯಂ ರಥಮಾರುರೋಜ ॥ ೨೬ ॥

ಅ: ಬೇರೊಂದು ರಥವನ್ನು ಏರಿ ಮತ್ತೆ ಧಾವಿಸಿ ಬಂದ ಶಲ್ಯನನ್ನು ಪುನಃ ಮರ್ಮಸ್ಥಾನದಲ್ಲಿ ಗಾಢವಾಗಿ ಬಾಣಗಳಿಂದ ಹೊಡೆದು ವಿರಥನನ್ನಾಗಿಸಿದ. ಶಲ್ಯ ಮೂರನೆಯ ರಥವನ್ನೇರಲು ಅದನ್ನೂ ಪುಡಿಮಾಡಿದ.

ಎ: ವಾಯುದೇವರ ಆವೇಶದಿಂದ ಕೂಡಿದ್ದ ಶಲ್ಯನ ಪರಾಕ್ರಮ ಹಾಗಿದ್ದರೆ, ಸ್ವತಃ ವಾಯುದೇವರ ಅವತಾರವೇ ಆದ ಭೀಮಸೇನ ಅಂತಹ ಶಲ್ಯನನ್ನು ಅನಾಯಾಸವಾಗಿ ಪುನಃ ಪುನಃ ಸೋಲಿಸಿದ ರೀತಿ ಇಷ್ಟು ಅದ್ಭುತವಾಗಿತ್ತು.

---

೨೫. ದುರ್ಯೋಧನಾದಿಭಸ್ತ್ವಮೇವ ಶೂರಸ್ತ್ವತ್ಸಮಾನಃ ಶೂರಃ ಕೋಽಪಿ ನಾಸ್ತೀತ್ಯಾದಿಸ್ತುತಿವಾಕ್ಯೈಃ ಸಮುದೀರ್ಯಮಾಣಂ ಶಲ್ಯಂ ದೃಷ್ಟ್ವೇತ್ಯರ್ಥಃ ॥ – (ಸ.)

೨೬. ತೈಃ ಸಾಯಕೈರ್ಮೋಹಿತಂ ವೀಕ್ಷ್ಯ ಶಲ್ಯಂ ಭೀಮಃ ಶರೈರಸ್ಯ ಚಕರ್ತ ವರ್ಮ ।
ಸ ಭೀಮಸೇನೇನ ನಿಕೃತ್ತವರ್ಮಾ ಮದ್ರಾಧಿಪಶ್ಚರ್ಮ ಸಹಸ್ರತಾರಮ್ ॥
ಅಥಾಸ್ಯ ಚರ್ಮಾಪ್ರತಿಮಂ ನ್ಯಕೃಂತತ್ ಭೀಮೋ ಮಹಾತ್ಮಾನವಭಃ ಪೃಷತ್ಕೈಃ ।
ಖಡ್ಗಂ ಚ ಭಲ್ಲೈರ್ನಿಚಕರ್ತ ಮುಷ್ಟೌನದನ್ ಪ್ರಹೃಷ್ಟವ ಸೈನ್ಯಮಧ್ಯೇ ॥
ತತ್ ಕರ್ಮ ಭೀಮಸ್ಯ ಸಮೀಕ್ಷ್ಯ ಹೃಷ್ಟಾಸ್ತೇ ಪಾಂಡವಾನಾಂ ಪ್ರವರಾ ರಥೌಘಾಃ ॥
– ಇತ್ಯಾದಿ ಭಾರತ (ಶಲ್ಯ. ೧೭/೨೯,೩೨)

ಆತ್ತಾನ್ಯಾತ್ತಾನ್ಯಾಯುಧಾನ್ಯಸ್ಯ ಭೀಮಃ
ಸರ್ವಾಣಿ ಚಚ್ಛೇದ ಬಿಭೇದ ಚಾಸ್ಯ ।
ಮರ್ಮಾಣಿ ಬಾಣೈರ್ನಿತರಾಂ ಪುನಶ್ಚ
ಸ ಮುಷ್ಟಿಮುದ್ಯಮ್ಯ ಜಗಾಮ ಧರ್ಮಜಮ್ ॥ ೨೭ ॥

ಅ: ಶಲ್ಯ ತೆಗೆದುಕೊಂಡ ಆಯುಧಗಳನ್ನೆಲ್ಲಾ ಭೀಮಸೇನ ಕತ್ತರಿಸಿದ, ಮತ್ತು ಅವನನ್ನು ಮರ್ಮಸ್ಥಾನಗಳಲ್ಲಿ ಬಾಣಗಳಿಂದ ಬಹಳವಾಗಿ ನೋಯಿಸಿದ. ಆಗ ಶಲ್ಯರಾಜ ಮುಷ್ಟಿಯನ್ನೆತ್ತಿಕೊಂಡು ಧರ್ಮರಾಜನ ಮೇಲೆ ಹೊರಟ.

ವಿ: ೧) ಮೂರು ಬಾರಿ ಶಲ್ಯನ ರಥಗಳನ್ನು ನಾಶ ಮಾಡಿದ್ದು ಭೀಮನ ಹಿರಿಮೆ.

೨) ಭೀಮನಿಂದ ಹಾಗೆ ಬಗೆಬಗೆಯಲ್ಲಿ ಪೆಟ್ಟುತಿಂದ ಶಲ್ಯ ತುಂಬಾ ನಿರ್ವಿಣ್ಣನಾಗಿದ್ದ. ಅವನ ಬದುಕಿನ ಕೊನೆ ಸಮೀಪಿಸತೊಡಗಿತ್ತು ಎಂಬ ಮಾತು ಮುಂದೆ ಬಂದಿದೆ.

ಯುಧಿಷ್ಠಿರನಿಂದ ಶಲ್ಯನ ಮೇಲೆ ಶಕ್ತ್ಯಾಯುಧ ಪ್ರಯೋಗ

ತಂ ಭೀಮಭಿನ್ನಮರ್ಮಾಣಂ ವಿವರ್ಮಾಣಂ ನಿರಾಯುಧಮ್ ।
ಶ್ವಾಸಮಾತ್ರಾವಶಿಷ್ಟಂ ಚ ಮರಣಾಯೈವ ಕೇವಲಮ್ ॥ ೨೮ ॥

ಆತ್ಮಾನಮಭಿಗಚ್ಛಂತಂ ದೃಷ್ಟ್ವಾನ್ಯಂ ರಥಮಾಸ್ಥಿತಃ ।
ಹಂತುಕಾಮೋ ರಣೇ ವೀರಮಮೋಘಾಂ ಶಕ್ತಿಮಾದದೇ ॥ ೨೯ ॥

ಅ: ಭೀಮನಿಂದ ಮರ್ಮಸ್ಥಾನಗಳಲ್ಲಿ ಪೆಟ್ಟುತಿಂದಿದ್ದ, ಕವಚವಿಲ್ಲದಾಗಿದ್ದ, ನಿರಾಯುಧನಾಗಿದ್ದ, ಉಸಿರು ಮಾತ್ರ ಉಳಿದುಕೊಂಡಿದ್ದ, ಕೇವಲ ಸಾಯಲೆಂದೇ ತನ್ನ ಮೇಲೆ ನುಗ್ಗಿ ಬರುತ್ತಿದ್ದ ವೀರನಾದ ಶಲ್ಯನನ್ನು ಕಂಡು ಬೇರೊಂದು ರಥವನ್ನೇರಿದ ಧರ್ಮರಾಜ ಅವನನ್ನು ಯುದ್ಧದಲ್ಲಿ ಕೊಲ್ಲಲೆಂದು ಅಮೋಘವಾದ ಶಕ್ತ್ಯಾಯುಧವನ್ನು ತೆಗೆದುಕೊಂಡ.

ವಿ: ಶ್ರೀಕೃಷ್ಣ ಶಲ್ಯನನ್ನು ನೀನೇ ಕೊಲ್ಲಬೇಕೆಂದು ಧರ್ಮರಾಜನಿಗೆ ತಿಳಿಸಿದ್ದರಿಂದ ಧರ್ಮರಾಜ ಶಲ್ಯನನ್ನು ಕೊಲ್ಲಲು ಹಾಗೆ ಸನ್ನದ್ಧನಾದ. ಅವನಿಗೆ ಆ ಕಾರ್ಯ ಸಾಧ್ಯವಾಗಲೆಂದೇ ಭೀಮಸೇನ ಶಲ್ಯನಿಗೆ ಅಷ್ಟು ಬಲವಾಗಿ ಪೆಟ್ಟುಗಳನ್ನು ಹಾಕಿದ್ದ. ಇಲ್ಲವಾದಲ್ಲಿ ವಾಯುವಿನ ಆವೇಶವಿದ್ದ ಅವನನ್ನು ಕೊಲ್ಲಲು ಧರ್ಮರಾಜನಿಗೆ ಸಾಧ್ಯವಾಗುತ್ತಿರಲಿಲ್ಲ ಎಂದು ತಿಳಿಯಬೇಕು.

ಯುಧಿಷ್ಠಿರನಿಂದ ಶಲ್ಯನ ವಧೆ

ದಿವ್ಯಾಸ್ತ್ರೈರಪಿ ಸಂಯೋಜ್ಯ ತಾಂ ತದಾ ಧರ್ಮನಂದನಃ ।
ಸತ್ಯಧರ್ಮಫಲೈಶ್ಚೈವ ಚಿಕ್ಷೇಪಾಸ್ಯ ಹೃದಿ ತ್ವರನ್ ॥ ೩೦ ॥

ಸ ಭಿನ್ನಹೃದಯೋ ಭೂಮೌ ಪಪಾತಾಭಿಮುಖೋ ನೃಪಮ್ ।
ಸತ್ಯಧರ್ಮರತಃ ಶಲ್ಯ ಇಂದ್ರಸ್ಯಾತಿಥಿತಾಮಗಾತ್ ॥ ೩೧ ॥

ಅ: ಆ ಶಕ್ತಿಯನ್ನು ದಿವ್ಯಾಸ್ತ್ರಗಳೊಂದಿಗೂ, ಸತ್ಯ ಧರ್ಮಗಳ ಫಲಗಳೊಂದಿಗೂ ಜೊತೆ-ಗೂಡಿಸಿ ಧರ್ಮರಾಜ ವೇಗದಿಂದ ಶಲ್ಯನ ಎದೆಗೆ ಪ್ರಯೋಗಿಸಿದ. ಶಲ್ಯ ಎದೆ ಸೀಳಿದವನಾಗಿ ಧರ್ಮರಾಜನ ಎದುರು ಭೂಮಿಯ ಮೇಲೆ ಸತ್ತುಬಿದ್ದ. ಸತ್ಯಧರ್ಮಗಳಲ್ಲಿ ನಿರತನಾಗಿದ್ದ ಶಲ್ಯ ಇಂದ್ರನಿಗೆ ಅತಿಥಿಯಾದ.

ವಿ: ೧) ಅರ್ಜುನ ಕರ್ಣವಧೆಗಾಗಿ ಸತ್ಯ, ಧರ್ಮಗಳನ್ನು ಅಂಜಲೀಕಾಸ್ತ್ರದೊಂದಿಗೆ ಜೊತೆ-ಗೂಡಿಸಿದ್ದಂತೆ(೨೭/೧೮೩) ಧರ್ಮರಾಜ ಸತ್ಯ, ಧರ್ಮಗಳನ್ವಯ ಶಕ್ತ್ಯಾಯುಧದೊಂದಿಗೆ ಜೊತೆಗೂಡಿಸಿದ ಎಂದರ್ಥ (ಶಲ್ಯಪರ್ವ ೧೭/೪೭).

ಆ ಶಕ್ತ್ಯಾಯುಧ ಶಿವನಿಗಾಗಿ ವಿಶ್ವಕರ್ಮ ಮಾಡಿ ಕೊಟ್ಟದ್ದು ಧರ್ಮರಾಜ ಅದರಿಂದ ಶಲ್ಯನನ್ನು ಸಂಹರಿಸಿದ :

ಘಂಟಾಪತಾಕಾಮಣಿವಜ್ರಭಾಜಂ ವೈದೂರ್ಯಚಿತ್ರಾಂ ತಪನೀಯದಂಡಾಮ್ ।
ತ್ವಷ್ಟಾ ಪ್ರಯತ್ನಾನ್ನಿಯಮೇನ ಕ್ಲೃಪ್ತಾಂ ಬ್ರಹ್ಮದ್ವಿಷಾಮಂತಕರೀಮಮೋಘಾಮ್ ॥
– ಭಾರತ (ಶಲ್ಯ. ೧೭/೪೬)

೨) ಇಂದ್ರನ ಅತಿಥಿಯಾದ ಎಂದರೆ ವೀರಸ್ವರ್ಗ ಪಡೆದ ಎಂದರ್ಥ. ಸತ್ಯಧರ್ಮರತರು ಹೇಗೆಯೇ ಸತ್ತರೂ, ಅವರಿಗೆ ಉತ್ತಮಗತಿ ಖಚಿತ ಎಂಬ ತತ್ತ್ವವೂ ಇದರಿಂದ ಸೂಚಿತ.

ಅರ್ಜುನನಿಂದ ಸಂಶಪ್ತಕರವಧೆ

ಮದ್ರರಾಜೇ ಹತೇ ವೀರೇ ಸುಶರ್ಮಾಽರ್ಜುನಮಭ್ಯಯಾತ್ ।
ಸಂಶಪ್ತಕಾವಶಿಷ್ಟೈಸ್ತಮನಯನ್ಮೃತ್ಯವೇಽರ್ಜುನಃ ॥ ೩೨ ॥

---

೩೦. ಕ್ರಿಯಾರೂಪಧರ್ಮಜನ್ಯಾದೃಷ್ಟಾನಾಂ ಶಕ್ತ್ಯಾ ಸಂಯೋಜನಂ ನಾಮ ಕ್ರಿಯಾರೂಪಧರ್ಮಜನ್ಯಾದೃಷ್ಟ-ಸಹಕೃತಶಕ್ತ್ಯಾಶಲ್ಯೋ ಹತೋ ಭವತ್ವಿತಿ ಭಗವತ್ಪಾರ್ಥನಮ್ ॥ – (ಸ.)

೩೧. ಮಧ್ಯಾಹ್ನೇ ಮೃತಃ ಶಲ್ಯಃ ಸ್ವರ್ಗಂ ಪ್ರಾಪೇತ್ಯರ್ಥಃ। – (ಜ.)

ಅ: ವೀರನಾದ ಮದ್ರರಾಜ ಶಲ್ಯ ಹತನಾಗಲು ಅಳಿದುಳಿದ ಸಂಶಪ್ತಕರೊಂದಿಗೆ ಸುಶರ್ಮ ಅರ್ಜುನನ ಮೇಲೆ ಹೊರಟನು. ಅರ್ಜುನ ಅವನನ್ನು ಕೊಂದುಹಾಕಿದ.

ವಿ: ಸುಶರ್ಮನೊಂದಿಗೆ ಅವನ ಅಳಿದುಳಿದ ಸೈನ್ಯವನ್ನೂ ಸಹ ಅರ್ಜುನ ಆಗಲೇ ಸಂಹರಿಸಿದ ಎಂದರ್ಥ.

ಭೀಮನಿಂದ ಉಳಿದ ಕೌರವರವಧೆ

ದುರ್ಯೋಧನಸ್ಯಾವರಜಾನವಶಿಷ್ಟಾನ್ ವೃಕೋದರಃ ।
ಸರ್ವಾನ್ ಜಘಾನ ಸೇನಾಂ ಚ ನಿಃಶೇಷಾಮಕರೋದ್ರಣೇ ॥ ೩೩ ॥

ಅ: ಭೀಮಸೇನ ದುರ್ಯೋಧನನ ಅಳಿದುಳಿದ ತಮ್ಮಂದಿರನ್ನೆಲ್ಲಾ ಸಂಹರಿಸಿದ. ಅವನ ಸೇನೆಯನ್ನು ಸಂಪೂರ್ಣವಾಗಿ ಯುದ್ಧದಲ್ಲಿ ಸಂಹರಿಸಿದ.

ವಿ: ಅಂದು ಭೀಮನ ಬಾಣಗಳಿಗೆ ಹದಿಮೂರು ಜನ ಕೌರವರು ಬಲಿಯಾದರು ಎಂದು ಮಹಾಭಾರತದಲ್ಲಿದೆ (ಶಲ್ಯ. ೨೬/೪–೬) : ದುರ್ಮರ್ಷಣ, ಶ್ರುತಾಂತ, ಜೈತ್ರ, ಭೂರಿಬಲ, ರವಿ, ಜಯತ್ಸೇನ, ಸುಜಾತ, ದುರ್ವಿಷಹ, ಅರಿಹಾ, ದುರ್ವಿಮೋಚನ, ದುಷ್ಪ್ರಧರ್ಷ, ಶ್ರುತರ್ವಾ ಮತ್ತು ಮಹಾಬಾಹು. ಭೀಮು ಅವರನ್ನೆಲ್ಲ ಕೊಂದಿದ್ದು ಬಾಣ ಮೊದಲಾದ ವಿವಿಧಾಯುಧಗಳಿಂದ.

ಸಹದೇವನಿಂದ ಶಕುನಿ ಉಲೂಕರವಧೆ

ಉಲೂಕಂ ಸಹದೇವೋಽಥ ಶಕುನಿಂ ಚಾತಿಪಾಪಿನಮ್ ।
ಜಘಾನ ದ್ರೌಣಿಹಾರ್ದಿಕ್ಯಕೃಪಾನ್ ಭೀಮಾರ್ಜುನೌ ತತಃ ॥ ೩೪ ॥

---

೩೩. ಭೀಮಸೇನಸ್ತು ಕೌಂತೇಯೋ ಹತ್ವಾ ಯುದ್ಧೇ ಸುತಾಂಸ್ತವ ।
ಮೇನೇ ಕೃತಾರ್ಥಮಾತ್ಮಾನಂ ಸಫಲಂ ಜನ್ಮ ಚ ಪ್ರಭೋ ॥ – ಭಾರತ (ಶಲ್ಯ. ೨೬/೩೯)

ತಂ ತಥಾ ಯುಧ್ಯಮಾನಂ ಚ ವಿನಿಘ್ನಂತಂ ಚ ತಾವಕಾನ್ ॥
ಈಕ್ಷಿತುಂ ನೋತ್ಸಹಂತೇ ಸ್ಮ ತವ ಸೈನ್ಯಾ ನರಾಧಿಪ ॥ – ಭಾರತ (ಶಲ್ಯ. ೨೬/೪೦)

೩೪. ಏಕವಿಂಶತಿಸಾಹಸ್ರಾನ್ ಪದಾತೀನ್ ಸಮಪೋಥಯತ್ ।
ಹತ್ವಾ ತತ್ ಪುರುಷಾನೀಕಂ ಭೀಮಃ ಸತ್ಯಪರಾಕ್ರಮಃ ॥ – ಭಾರತ (ಶಲ್ಯ. ೧೯/೫೦)

೩೪. ಭೀಷ್ಮಪರ್ವಣಿ ಯಥಾ ಪಾರ್ಥಪುತ್ರ ಇರಾವಾನ್ ಶಕುನೇಃ ಷಟ್‌ಪುತ್ರಾನ್ ಜಘಾನ ತಥಾ ನಕುಲೋಽಪಿ ನಕುಲಃ ಪ್ರತಿಜಜ್ಞೇಽಥಶಾಕುನೇಯವಧಂ ಪ್ರತೀತಿ ದ್ಯೂತಸಮಯೇ ಪ್ರತಿಶ್ರುತ್ಯಾತ್ಮಕಂಚನ ಪುತ್ರಂ ಜಘಾನೇತಿ ದ್ರಷ್ಟವ್ಯಮ್। – (ಜ.)

ಅಶ್ವತ್ಥಾಮಾದಿಗಳ ಪಲಾಯನ

ಬಹುಶೋ ವಿರಥೀಕೃತ್ಯ ಪೀಡಯಿತ್ವಾ ಪುನಃ ಪುನಃ ।
ದ್ರಾವಯಾಮಾಸತುಸ್ತೇ ತು ಭೀಷಿತಾ ವಿವಿಶುರ್ವನಮ್ ॥ ೩೫ ॥

ಅ: ಬಳಿಕ ಉಲೂಕನನ್ನು, ಅತ್ಯಂತ ಪಾಪಿಯಾದ ಶಕುನಿಯನ್ನು ಸಹದೇವ ಸಂಹರಿಸಿದ. ಭೀಮಾರ್ಜುನರು ಅಶ್ವತ್ಥಾಮ, ಕೃತವರ್ಮ, ಕೃಪರನ್ನು ವಿರಥರನ್ನಾಗಿ ಮಾಡಿ ಮತ್ತೆ ಮತ್ತೆ ಪೀಡಿಸಿ ಓಡಿಸಿದರು. ತುಂಬಾ ಭಯಗೊಂಡ ಅವರು ಕಾಡನ್ನು ಹೊಕ್ಕರು.

ವಿ: ಇಲ್ಲಿ ಉಲೂಕನನ್ನು ಕೊಲ್ಲುವುದಾಗಿ ಪ್ರತಿಜ್ಞೆ ಮಾಡಿದ್ದು ನಕುಲನಾದರೂ ಸಂಹರಿಸಿದ್ದು ಸಹದೇವ ಎಂಬುದು ವಿಶೇಷ. ಅದಕ್ಕೆ ಕಾರಣವನ್ನು ಈಗಾಗಲೇ ತಿಳಿಸಿದೆ (೨೧/೩೬೦). ಹಾಗೆ ಕಾಡಿಗೆ ತೆರಳಿದ ಅವರ ವಿವರ ಮುಂದೆ ಬರುವುದು (೨೮/೧೧೮).

ವ್ಯಾಸರಿಂದ ಸಂಜಯನ ರಕ್ಷಣೆ

ಶೈನೇಯೇನ ಗೃಹೀತೋಽಥ ಸಂಜಯೋಽನಂತಶಕ್ತಿನಾ ।
ವ್ಯಾಸೇನ ಮೋಚಿತೋಽಥೈಕಃ ಪಾರ್ಥಾನ್ ದುರ್ಯೋಧನೋಽಭ್ಯಯಾತ್ ॥ ೩೬ ॥

ಅ: ಸಾತ್ಯಕಿಯ ಕೈಗೆ ಸೆರೆಸಿಕ್ಕಿದ್ದ ಸಂಜಯನನ್ನು ಅನಂತಶಕ್ತಿಯುಳ್ಳ ವೇದವ್ಯಾಸರು ಬಿಡುಗಡೆ ಮಾಡಿಸಿದರು. ಬಳಿಕ ದುರ್ಯೋಧನ ಏಕಾಂಗಿಯಾಗಿ ಪಾಂಡವರನ್ನು ಎದುರಿಸಿದ.

---

೩೪. ಉಲೂಕಸ್ಯ ಮಹಾರಾಜ ಭಲ್ಲೇವನಾಪಹರಚ್ಛಿರಃ ।
ಸ ಜಗಾಮ ರಥಾದ್ಭೂಮಿಂ ಸಹದೇವೇನ ಪಾತಿತಃ ॥ (ಶಲ್ಯ. ೨೮/೩೩)

ಶರೇಣ ಕಾರ್ತಸ್ವರಭೂಷಿತೇನ ದಿವಾಕರಾಭೇಣ ಸುಸಂಹಿತೇನ ।
ಹತೋತ್ತಮಾಂಗೋ ಯುಧಿ ಪಾಂಡವೇನ ಪಪಾತ ಭೂಮೌ ಸುಬಲಸ್ಯ ಪುತ್ರಃ ॥ (ಶಲ್ಯ. ೨೮/೬೨)

೩೬. ಗೃಹೀತೋಽಥ ಸಂಜಯ ಇತಿ ವದತಾ ಚರಮದಿನೇ ಯುದ್ಧದರ್ಶನಾರ್ಥಂ ಯುದ್ಧರಂಗೇ ಆಗತ ಇತಿ ಸೂಚಿತಮ್ ॥ – (ವಾ.)

೩೬. ಸಂಜಯಃ ದುರ್ಯೋಧನಪ್ರವೃತ್ತಿಂ ಜ್ಞಾತುಂ ಧೃತರಾಷ್ಟ್ರೇಣ ಪ್ರೇಷಿತಃ ಶೈನೇಯಗೃಹೀತ ಇತಿ ವ್ಯಾಖ್ಯೇಯಮ್। ತಸ್ಯ ಯುದ್ಧೇ ಸದಾ ಸತ್ವಾದನ್ಯಥಾ ಕ್ಷತಾದ್ಭಾವರಪ್ರದಾನಮನರ್ಥಕಂಸ್ಯಾತ್। ಉಕ್ತಂ ಚ ಭಾರತೇ ಸೇನಾಪತಿಮರಣಾನಂತರಂ ಯುದ್ಧಾತ್ಪುರಾ ಗಮನಾದಿ ತದಾಹ। ನೈನಂ ಶಸ್ತ್ರಾಣಿ ಭೇತ್ಸ್ಯಂತಿ ನೈವಂ ವಾऽऽವಿಶತೇ ಶ್ರಮಃ। ಗಾವಲ್ಗಣೇರಯಂ ಜೀವನ್ ಯುದ್ಧಾದಸ್ಮಾದ್ವಿಮೋಕ್ಷ್ಯತಿ ಇತಿ। ತಥಾ – 'ಅಥಗಾವಲ್ಗಣಿರ್ಧೀಮಾನ್ ಸಮರಾದೇತ್ಯಸಂಜಯಃ' ಇತಿ ಭೀಷ್ಮಪರ್ವಣಿ। ದ್ರೋಣೇಪಿ – 'ಸಮರಾತ್ಸಂಜಯಂ ಪ್ರಾಪ್ತಂ ನಿನ್ಯೇ ನಾಗಾಹ್ವಯಂ ಪುರಮ್' ಇತಿ। ಕರ್ಣಪರ್ವಣಿ – 'ಹತೇ ಕರ್ಣೇ ಮಹಾರಾಜ ನಿಶಿ ಗಾವಲ್ಗಣಿಸ್ತದಾ। ದೀನೋ ಯಯೌ ನಾಗಪುರಮಶ್ವೈರ್ವಾತಸಮೈರ್ಜವೇ'(೮/೨/೧) ಇತ್ಯಾದೀನಿ। - (ಜ.)

ವಿ: ವೇದವ್ಯಾಸರು ಸಾತ್ಯಕಿಯ ಕೈಯಿಂದ ಸಂಜಯನನ್ನು ತಕ್ಷಣವೇ ಅಲ್ಲಿಗೆ ಆಗಮಿಸಿ ಬಿಡಿಸಿದ್ದು ಅವರು ಸರ್ವಜ್ಞನಾದ ನಾರಾಯಣ ಎನ್ನುವುದಕ್ಕೆ ಮತ್ತೊಂದು ನಿದರ್ಶನ.

ದುರ್ಯೋಧನನ ಪರಾಕ್ರಮ - ಭೀಮನಿಂದ ದುರ್ಯೋಧನನ ಪರಾಭವ

ತೇಷಾಮಭೂತ್ ತಸ್ಯ ಚ ಘೋರರೂಪಂ
ಯುದ್ಧಂ ಸ ಬಾಣೈರ್ಬಹುಶೋಽರ್ಜುನಂ ಚ ।
ಚಕಾರ ಮೂರ್ಛಾಭಿಗತಂ ಯುಧಿಷ್ಠಿರಂ
ಯಮಾವಯತ್ಸಾದ್ವಿರಥಾಂಶ್ಚಕಾರ ॥ ೩೭ ॥

ಅ: ಪಾಂಡವರಿಗೂ, ದುರ್ಯೋಧನನಿಗೂ ಘೋರರೂಪವಾದ ಯುದ್ಧ ನಡೆಯಿತು. ದುರ್ಯೋಧನ ಬಾಣಗಳಿಂದ ಅರ್ಜುನನನ್ನು ಅನೇಕಸಲ ಮೂರ್ಛಿತನನ್ನಾಗಿಸಿದ. ಧರ್ಮರಾಜ, ನಕುಲ, ಸಹದೇವರನ್ನು ವಿರಥರನ್ನಾಗಿ ಮಾಡಿದ.

ವಿ: ಕಲಿಯ ಪರಾಕ್ರಮದ ಮುಂದೆ ಅರ್ಜುನಾದಿಗಳು ನಿಲ್ಲಲಾರರು ಎನ್ನುವುದಕ್ಕೆ ಇದು ಸಾಕ್ಷಿ.

ತಂ ಭೀಮಸೇನೋ ವಿರಥಂ ಚಕಾರ
ಗಜಂ ಸಮಾರುಹ್ಯ ಪುನಃ ಸಮಭ್ಯಯಾತ್ ।
ಪುನಶ್ಚ ಶೈನೇಯಶಿಖಂಡಿಪಾರ್ಷತಾನ್
ಯಮೌ ನೃಪಂ ಚ ವ್ಯದಧಾನ್ನಿರಾಯುಧಾನ್ ॥ ೩೮ ॥

ಅ: ಆಗ ಭೀಮಸೇನ ದುರ್ಯೋಧನನನ್ನು ವಿರಥನನ್ನಾಗಿಸಿದ. ದುರ್ಯೋಧನ ಆನೆಯನ್ನೇರಿ ಮರಳಿ ಯುದ್ಧಕ್ಕೆ ಬಂದ. ಪುನಃ ಸಾತ್ಯಕಿ, ಶಿಖಂಡಿ, ಧೃಷ್ಟದ್ಯುಮ್ನ, ನಕುಲ, ಸಹದೇವ ಯುಧಿಷ್ಠಿರರನ್ನು ನಿರಾಯುಧರನ್ನಾಗಿ ಮಾಡಿದ.

---

೩೬. ತಮಾಗಮ್ಯ ಮಹಾಪ್ರಾಜ್ಞಃ ಕೃಷ್ಣದ್ವೈಪಾಯನೋಽಬ್ರವೀತ್ ।
ಮುಚ್ಯತಾಂ ಸಂಜಯೋ ಜೀವನ್ನ ಹಂತವ್ಯಃ ಕಥಂಚನ ॥
ದ್ವೈಪಾಯನವಚಃ ಶ್ರುತ್ವಾ ಶಿನೇರ್ನಪ್ತಾ ಕೃತಾಂಜಲಿಃ ।
ತತೋ ಮಾಮಬ್ರವೀನ್ಮುಕ್ತ್ವಾ ಸ್ವಸ್ತಿ ಸಂಜಯ ಸಾಧಯ ॥ – ಭಾರತ (ಶಲ್ಯ. ೨೯/೩೯,೪೦)

೩೭. ದೃಷ್ಟಿಶ್ಚಾತೀಂದಿಯಾ ರಾಜನ್ ದೂರಾಚ್ಛ್ರವಣಮೇವ ಚ ।
ಪರಚಿತ್ತಸ್ಯ ವಿಜ್ಞಾನಮತೀತಾನಾಗತಸ್ಯ ಚ ।
ವ್ಯುತ್ಥಿತೋತ್ಪತ್ತಿವಿಜ್ಞಾನಮಾಕಾಶೇ ಚ ಗತಿಃ ಶುಭಾ ।
ಅಸ್ತ್ರೈರಸಂಗೋ ಯುದ್ಧೇಷು ವರದಾನಾನ್ಮಹಾತ್ಮನಃ । (ಸಂಜಯನ ವಚನ) – ಭಾರತ (ಭೀಷ್ಮ. ೧೫/೮,೯)

ಗಜೇ ಚ ಭೀಮೇನ ಶರೈರ್ನಿಪಾತಿತೇ
ಸಮಾರುಹದ್ವಾಜಿವರಂ ಸುನಿರ್ಭಯಃ ।
ಸ ತೇನ ಚ ಪ್ರಾಸಕರೋ ರಣೇಽರಿಹಾ
ಚಚಾರ ಶೈನೇಯಮತಾಡಯಚ್ಚ ॥ ೩೯ ॥

ಅ: ಭೀಮ ಅವನ ಆನೆಯನ್ನು ಕೊಂದುಹಾಕಲು ದುರ್ಯೋಧನ ಅಂಜದೇ ಶ್ರೇಷ್ಠವಾದ ಕುದುರೆಯನ್ನೇರಿ ಮತ್ತೆ ಯುದ್ಧಕ್ಕೆ ಬಂದ. ಶತ್ರುನಾಶಕನಾದ ಅವನು ಕೈಯಲ್ಲಿ ಪ್ರಾಸವೊಂದನ್ನು ಹಿಡಿದು ಯುದ್ಧದಲ್ಲಿ ಸಂಚರಿಸುತ್ತಾ ಸಾತ್ಯಕಿಯನ್ನು ಹೊಡೆದ.

ಭೀಮನಿಂದ ದುರ್ಯೋಧನನ ಅಶ್ವದ ಸಂಹಾರ

ಮುಮೋಹ ತೇನಾಭಿಹತಃ ಸ ಸಾತ್ಯಕಿ-
ರ್ಯಮಾವಪಿ ಪ್ರಾಸನಿಪೀಡಿತೌ ರಥೇ ।
ನಿಷೀದತುರ್ಧರ್ಮಸುತಂ ಪ್ರಯಾಂತಂ
ಸಮೀಕ್ಷ್ಯ ಭೀಮೋಽಸ್ಯ ಜಘಾನ ವಾಜಿನಮ್ ॥ ೪೦ ॥

ಅ: ದುರ್ಯೋಧನನಿಂದ ಹೊಡೆಯಲ್ಪಟ್ಟ ಸಾತ್ಯಕಿ ಮೂರ್ಛಿತನಾದ. ನಕುಲ, ಸಹದೇವರೂ ಸಹ ಅವನ ಪ್ರಾಸದಿಂದ ಪೀಡಿತರಾಗಿ ರಥದಲ್ಲೇ ಕುಳಿತರು. ಅವನು ಧರ್ಮರಾಜನ ಬಳಿಗೆ ಧಾವಿಸುತ್ತಿದ್ದುದನ್ನು ನೋಡಿ ಭೀಮಸೇನ ಅವನ ಕುದುರೆಯನ್ನೂ ಕೊಂದುಹಾಕಿದ.

ವಿ: ಹೀಗೆ ರಥ, ಆನೆ, ಕುದುರೆ ಮೂರರ ಮೇಲೆ ಬಂದಾಗಲೂ ಅಪಾರ ಪರಾಕ್ರಮ ತೋರಿದ ದುರ್ಯೋಧನನನ್ನು ಅವನ ರಥ, ಆನೆ, ಕುದುರೆಗಳನ್ನು ಸಂಹರಿಸುವ ಮೂಲಕ ಹೊಡೆದೋಡಿಸಿದ ಹಿರಿಮೆ ಭೀಮಸೇನನದು ಮಾತ್ರ ಎಂಬುದನ್ನು ಗಮನಿಸಬೇಕು. ಕಲಿಯನ್ನು ಗೆಲ್ಲುವ ಸಾಮರ್ಥ್ಯ ವಾಯುದೇವರದು ಮಾತ್ರ ಎನ್ನುವುದಕ್ಕೆ ಇದು ನಿದರ್ಶನ.

ಪರಾಜಯಗೊಂಡ ದುರ್ಯೋಧನ ದ್ವೈಪಾಯನ ಸರೋವರದಲ್ಲಿ

ಪ್ರಾಸೇ ನಿಕೃತ್ತೇ ಚ ವೃಕೋದರೇಣ
ವಿವಾಹನಃ ಸೋಽಪಯಯೌ ಸುಯೋಧನಃ ।
ಆದಾಯ ಗುರ್ವೀಂ ಚ ಗದಾಂ ಪ್ರಯಾತೋ
ದ್ವೈಪಾಯನಸ್ಯೋರುಸರೋ ವಿವೇಶ ॥ ೪೧ ॥

ಅ: ಭೀಮನು ದುರ್ಯೋಧನನ ಆ ಪ್ರಾಸವೆಂಬ ಆಯುಧವನ್ನು ತುಂಡು ಮಾಡಿದಾಗ ವಾಹನವೂ ಇಲ್ಲದಾಗಿದ್ದ ದುರ್ಯೋಧನ ಅಲ್ಲಿಂದ ದೊಡ್ಡ ಗದೆಯನ್ನು ಹಿಡಿದುಕೊಂಡು ಹೊರಟುಬಿಟ್ಟ, ಹಾಗೆ ಹೊರಟವನು ದ್ವೈಪಾಯನವೆಂಬ ಮಹಾಸರೋವರವನ್ನು ಹೊಕ್ಕ.

ಎ: ೧) ಭೀಮನಿಂದ ದುರ್ಯೋಧನನ ಪ್ರಾಸಾಯುಧವೂ ತುಂಡಾಯಿತು. ಮುಂದೆ ದುರ್ಯೋಧನನಿಗೆ ಏರಲು ರಥ, ಆನೆ, ಕುದುರೆ ಮೊದಲಾದ ಯಾವುದೂ ಇಲ್ಲದಂತಾಗಿತ್ತು, ಹನ್ನೊಂದು ಅಕ್ಷೋಹಿಣೀಪತಿ ಎಂದು ಕರೆಸಿಕೊಳ್ಳುತ್ತಿದ್ದ ಅವನು ಹೀಗೆ ಸರ್ವಾತ್ಮನಾ ನಿರ್ಗತಿಕನಾದದ್ದು ಹರಿ ವಾಯುಗಳ ದ್ರೋಹಿಗಳು ಸಂಪೂರ್ಣ ನಾಶಹೊಂದುವುದಕ್ಕೆ ಸೂಚಕ.

೨) ಹಾಗೆ ತೆರಳಿದ ದುರ್ಯೋಧನ ಭಾರದ ಗದೆಯನ್ನು ಹಿಡಿದು ದ್ವೈಪಾಯನ ಸರೋವರವನ್ನು ಹೊಕ್ಕ. ದ್ವೈಪಾಯನ ಸರೋವರವೆಂದರೆ ವೇದವ್ಯಾಸತೀರ್ಥ, ವೇದವ್ಯಾಸರ ಗ್ರಂಥಗಳು ಎಂದರ್ಥ. ಕಲಿ ಅವುಗಳಲ್ಲಿ ಸೇರಿಕೊಳ್ಳುವುದು ಎಂದರೆ ಪ್ರಕ್ಷೇಪಾದಿಗಳ ಮೂಲಕ ಅವುಗಳನ್ನು ಕಲುಷಿತಗೊಳಿಸುವುದು ಎಂದರ್ಥ, ಕಲಿಯುಗದಲ್ಲಿ ಕಲಿ ಹೀಗೆ ಶಾಸ್ತ್ರಗ್ರಂಥಗಳಲ್ಲಿ ಅಡಗಿರುವುದರಿಂದ ಗ್ರಂಥಗಳನ್ನು ಶುದ್ಧರೂಪದಲ್ಲಿ ಕಾಪಾಡಿಕೊಳ್ಳದಿದ್ದರೆ ಅವುಗಳಿಂದಲೂ ಯಥಾರ್ಥಜ್ಞಾನ ಹುಟ್ಟದಾಗುವುದು ಎಂದು ತಿಳಿಯಬೇಕು. ಅವನ್ನು ಯಥಾರ್ಥವಾಗಿ ಕಾಪಾಡಿ–ಕೊಳ್ಳುವುದು ಎಂದರೆ ಸರ್ವಮೂಲ ಗ್ರಂಥಗಳೊಂದಿಗೆ ಅನ್ವಯಿಸಿ ಓದಿಕೊಳ್ಳುವುದು ಎಂದರ್ಥ.

೩) ಪಂಪಭಾರತ ದಲ್ಲಿ ದುರ್ಯೋಧನ ಅಡಗಿದ್ದು ವೈಶಂಪಾಯನಸರೋವರದಲ್ಲಿ ಎಂದಿದೆ :

> ...ಕುರುಕ್ಷೇತ್ರದುತ್ತರ ದಿಗ್ಭಾಗದ **ವೈಶಂಪಾಯನಸರೋವರದೊಳ್** ಮುಟ್ಟಿಗಿ....
>
> – ಪಂಪಭಾರತ (೧೩/೭೦)

ಆದರೆ, ಮಹಾಭಾರತದಲ್ಲಿ ಬಂದಿರುವಂತೆ ಅದು ದ್ವೈಪಾಯನಸರೋವರವೇ ಹೊರತು ವೈಶಂಪಾಯನ ಸರೋವರವಲ್ಲ. ಕುಮಾರವ್ಯಾಸಭಾರತದಲ್ಲೂ ದ್ವೈಪಾಯನಸರೋವರ ಎಂದೇ ಇರುವುದು ಗಮನಾರ್ಹ :

> ರಾಯದಳ ಸೆಲೆ ಸವೆಯೆ ಸಮರದ । ನಾಯಕರು ನೆರೆ ಮುರಿಯದಲಾ **ದ್ವೈಪಾಯನಸರೋವರವ** ಹೊಕ್ಕನು ಕೌರವರ ರಾಯ ।
>
> – ಕುಮಾರವ್ಯಾಸಭಾರತ (ಗದಾಪರ್ವ. ಸಂಧಿ ೩)

---

೪೧. ದ್ವೈಪಾಯನಂ ಹ್ರದಂ ಘೋರಂ ಯತ್ರ ದುರ್ಯೋಧನೋऽಭವತ್ ।
ಶೀತಾಮಲಜಲಂ ಹೃದ್ಯಂ ದ್ವಿತೀಯಮಿವ ಸಾಗರಮ್ ॥ – ಭಾರತ (ಶಲ್ಯ. ೩೦/೫೪)

ಭೀಮಸೇನ ಸಮೋ ನಾಸ್ತಿ

ಏವಮಕ್ಷೌಹಿಣೀಷಟ್ಕಂ ಭೀಮೇನ ನಿಹತಂ ರಣೇ ।
ಪಂಚ ಪಾರ್ಥೇನ ನಿಹತಾ ಅರ್ಧಂ ಕಾಲಿಂಗಕಾನ್ಯತೇ ॥ ೪೨ ॥

ಅ: ಹೀಗೆ ಭೀಮಸೇನನಿಂದ ಯುದ್ಧದಲ್ಲಿ ಕೌರವರ ಆರು ಅಕ್ಷೋಹಿಣೀ ಸೇನೆ ಹತವಾಯಿತು. ಕಾಳಿಂಗರ ಅರ್ಧ ಅಕ್ಷೋಹಿಣೀ ಸೇನೆಯನ್ನು ಹೊರತು ಅರ್ಧಭಾಗ ಅರ್ಜುನನಿಂದ ಹತವಾಯಿತು.

---

೪೨. ಅರ್ಧಂ ಕಾಲಿಂಗಕಾನ್ಯತ ಇತ್ಯತ್ರ ಅಕ್ಷೋಹಿಣೀಸಂಖ್ಯಾಕಾನ್ ಕಾಲಿಂಗಕಾನ್ = ಕಲಿಂಗವಿಷಯಾಧಿಪತೀನ್ ಯತೇ ಏಕಾದಶಾಕ್ಷೋಹಿಣೀಭ್ಯಃ ಅರ್ಧಂ ಭೀಮೇನ ನಿಹತಮ್। ಅರ್ಧಮರ್ಜುನೇನ ನಿಹತಮಿತಿ ಗ್ರಂಥಾಂತರೋಕ್ತೇರಯಮಭಿಪ್ರಾಯಃ। ಕಾಲಿಂಗಕೈಃ ಸಹ ತು ಭೀಮೇನ ಅಕ್ಷೋಹಿಣೀಷಟ್ಕಂ ನಿಹತಮ್। ಅರ್ಜುನೇನ ಪಂಚಕಂ ನಿಹತಮಿತಿ ವಿವೇಕೋ ಜ್ಞೇಯಃ ॥ – (ವಾ.)

೪೨. ನನು ಏಕಾದಶಾಕ್ಷೌಹಿಣೀಸಂಖ್ಯಂಕೌರವಸೈನ್ಯಂ ಅರ್ಧಂ ಭೀಮೇನ ಅರ್ಧಂ ಪಾರ್ಥೇನೇತಿ ಗ್ರಂಥಾಂತರೋಕ್ತಿಃ ಕಥಂಘಟತೇ ಇತ್ಯತ ಆಹ। ಅರ್ಧಮಿತಿ। ಕಾಲಿಂಗಕಾನ್ ಭೀಮಹತಾಕ್ಷೌಹಿಣೀಸಂಖ್ಯಾಕಾನ್ ಕಾಲಿಂಗಕಾನ್ಯತೇ ಅರ್ಧಂ ಭೀಮೇನ ನಿಹತಮ್। ಪಾರ್ಥೇನಾರ್ಧಂ ನಿಹತಮಿತಿ ಗ್ರಂಥಾತರೋಕ್ತೇರಭಿಪ್ರಾಯಃ। – (ಜ.)

೪೨. ನನು ಪಾರ್ಥೇನ ಕೌರವಸೇನಾರ್ಧಂ ಹತಮಿತಿ ಭಾರತೇऽಸ್ತಿ । ತತ್ಕಥಂ ಪಂಚೇತ್ಯುಕ್ತಿಃ? ಕಥಂ ಚಾಕ್ಷೋಹಿಣೀ ಷಟ್ಕಂ ಭೀಮೇನೇತ್ಯುಕ್ತಿಶ್ಚೇತ್ಯತೋ ಭಾರತವಾಕ್ಯಸ್ಯ ತಾತ್ಪರ್ಯಮಾಹ ಅರ್ಧಮಿತಿ । – (ವ.)

೪೨. ಅಕ್ಷೋಹಿಣೀಸೇನೆಯ ವಿವರಗಳು:

ಏಕೋ ರಥೋ ಗಜಶ್ಚೈಕೋ ನರಾಃ ಪಂಚ ಪದಾತಯಃ ।
ತ್ರಯಶ್ಚ ತುರಗಾಸ್ತಜ್ಞೈಃ ಪತ್ತಿರಿತ್ಯಭಿಧೀಯತೇ ।
ಪತ್ತಿಂ ತು ತ್ರಿಗುಣಾಮೇತಾಮಾಹುಃ ಸೇನಾಮುಖಂ ಬುಧಾಃ ॥
ತ್ರೀಣಿ ಸೇನಾಮುಖಾನ್ಯೇಕೋ ಗುಲ್ಮ ಇತ್ಯಭಿಧೀಯತೇ ।
ತ್ರಯೋ ಗುಲ್ಮಾ ಗಣೋ ನಾಮ ವಾಹಿನೀ ತು ಗಣಾಸ್ತ್ರಯಃ ॥
ಸೈತಾಸ್ತಿಸ್ರಸ್ತು ವಾಹಿನ್ಯಃ ಪೃತನೇತಿ ವಿಚಕ್ಷಣೈಃ ।
ಚಮೂಸ್ತು ಪೃತನಾಸ್ತಿಸ್ರಸ್ತಿಸ್ರಶ್ಚಮ್ವಸ್ತ್ರಯೋ ಅನೀಕಿನೀ ॥
ಅನೀಕಿನೀಂ ದಶಗುಣಾಂ ಪ್ರಾಹುರಕ್ಷೌಹಿಣೀಂ ಬುಧಾಃ ॥
ಅಕ್ಷೌಹಿಣ್ಯಃ ಪ್ರಸಂಖ್ಯಾತಾ ರಥಾನಾಂ ದ್ವಿಜಸತ್ತಮಾಃ ।
ಸಂಖ್ಯಾ ಗಣಿತತತ್ತ್ವಜ್ಞೈಃ ಸಹಸ್ರಾಣ್ಯೇಕವಿಂಶತಿಃ ॥
ಶತಾನ್ಯುಪರಿ ಚೈವಾಷ್ಟೌ ತಥಾ ಭೂಯಶ್ಚ ಸಪ್ತತಿಃ ।
ಗಜಾನಾಂ ಚ ಪರೀಮಾಣಮೇತದೇವ ವಿನಿರ್ದಿಶೇತ್ ॥
ಜ್ಞೇಯಂ ಶತಸಹಸ್ರಂ ತು ಸಹಸ್ರಾಣಿ ನವೈವ ತು ।
ನರಾಣಾಮಪಿ ಪಂಚಾಶಚ್ಶತಾನಿ ತ್ರೀಣಿ ಚಾನಘಾಃ ॥
ಪಂಚಷಷ್ಟಿಸಹಸ್ರಾಣಿ ತಥಾऽಶ್ವಾನಾಂ ಶತಾನಿ ಚ ।
ದಶೋತ್ತರಾಣಿ ಷಟ್ ಪ್ರಾಹುರ್ಯಥಾವದಿಹ ಸಂಖ್ಯಯಾ ॥
ಏತಾಮಕ್ಷೌಹಿಣೀಂ ಪ್ರಾಹುಃ ಸಂಖ್ಯಾತತ್ತ್ವವಿದೋ ಜನಾಃ ॥ – ಭಾರತ (ಆದಿ.೨/೧೯-೨೭)

ಎ: ಕೆಲವೆಡೆ ಕೌರವಸೇನೆಯ ಅರ್ಧಭಾಗವನ್ನು ಅರ್ಜುನ ಸಂಹರಿಸಿದ ಎಂಬುದಕ್ಕೆ ಈ ವಿವರಣೆ.

ಕೌರವ ಮಹಾವೀರ ಅಶ್ವತ್ಥಾಮ

ಏಕಾದಶಾಕ್ಷೌಹಿಣೀಭ್ಯಃ ಶಿಷ್ಟಮನ್ಯೈರ್ನಿಸೂದಿತಮ್ ।
ಅಕ್ಷೌಹಿಣೀಚತುಷ್ಕಂ ಚ ಪಾರ್ಥಾನಾಂ ದ್ರೌಣಿನಾ ಹತಮ್ ॥ ೪೩ ॥

ಅ: ಹನ್ನೊಂದು ಅಕ್ಷೋಹಿಣಿಗಳಲ್ಲಿ ಉಳಿದದ್ದು ಉಳಿದವರಿಂದ ನಾಶವಾಯಿತು. ಪಾಂಡವರ ನಾಲ್ಕು ಅಕ್ಷೋಹಿಣೀ ಅಶ್ವತ್ಥಾಮರಿಂದ ಹತವಾಯಿತು.

ಅನ್ಯೈರನ್ಯಾಃ ಸಮಸ್ತೈಶ್ಚ ದ್ರೋಣಕರ್ಣಮಹಾವ್ರತಾಃ ।
ದುರ್ಯೋಧನೋ ಭೌಮಸೂನುಃ ಪ್ರಾಯಃ ಸೇನಾಹನಃ ಕ್ರಮಾತ್ ॥ ೪೪ ॥

ಅ: ಉಳಿದೆಲ್ಲರಿಂದ ಪಾಂಡವಸೇನೆಯ ಉಳಿದ ಭಾಗ ಹತವಾಯಿತು. ದ್ರೋಣ, ಕರ್ಣ, ಮಹಾವ್ರತ ಭೀಷ್ಮ, ದುರ್ಯೋಧನ, ಭಗದತ್ತ ಇವರು ಕ್ರಮವಾಗಿ ಹೆಚ್ಚು ಸೇನೆಯನ್ನು ಕೊಂದವರು.

ವಿ: ಕೌರವರಲ್ಲಿ ಅತಿಹೆಚ್ಚು ಸೈನಿಕರನ್ನು ಸಂಹರಿಸಿದ್ದು ಅಶ್ವತ್ಥಾಮ, ಬಳಿಕ ದ್ರೋಣ, ಕರ್ಣ ಭೀಷ್ಮಾದಿಗಳು ಎಂದರ್ಥ. ಇವರು ಕ್ರಮವಾಗಿ ಶಿವ, ಬೃಹಸ್ಪತಿ, ಸೂರ್ಯ ಹಾಗೂ ವಸುಗಳ ಅವತಾರ; ಇದು ತಾರತಮ್ಯಕ್ಕನುಗುಣವಾಗಿಯೇ ಇದೆ.

ದ್ವೈಪಾಯನ ಸರೋವರದಲ್ಲಿ ದುರ್ಯೋಧನನ ಜಲಸ್ತಂಭ

ಜಯಂ ಲಬ್ಧ್ವಾನದತ್ಸ್ವೈಃ ಪಾಂಡವೇಷು ಮಹಾತ್ಮಸು ।
ದುರ್ಯೋಧನೋ ಜಲಸ್ತಂಭಂ ಕೃತ್ವಾ ಮಂತ್ರಾನ್ ಜಜಾಪ ಹ ॥ ೪೫ ॥

---

೪೩. ಭೀಮಾರ್ಜುನಾಭ್ಯಾಂ ಹನ್ಯಮಾನಾಸ್ತೇವೈಕಾದಶಾಕ್ಷೋಹಿಣೀಷು ಶಿಷ್ಟಂ= ಪೂರ್ವಮನುಶಿಷ್ಟಮ್। ಏತಾಭ್ಯಾಂ ತದರ್ಥಮೇವಾವಶೇಷಿತಂ ಯತ್ ಕಿಂಚಿತ್ = ಸೈನ್ಯಂ ತತ್ ಅನ್ಯೈಃ ಅಭಿಮನ್ಯುಪ್ರಭೃತಿಭಃ ನಿಷೂದಿತಮ್। ಅಲ್ಪತ್ವಾ-ತ್ತಸ್ಯ ನ ಪೃಥಗುಕ್ತಿರಿತಿ ಭಾವಃ ॥ – (ವಾ.)

೪೪. ದ್ರೋಣೇನ ಯಾವತ್ಸೈನ್ಯಂ ಹತಂ ತಸ್ಮಾತ್ಕರ್ಣೇನಾಲ್ಪಂ ಹತಮ್। ಕರ್ಣಾಪೇಕ್ಷಯಾ ಭೀಷ್ಮೇಣಾಲ್ಪಂ ಹತಮಿತ್ಯಯಂ ಕ್ರಮಃ ಪ್ರಾಯಃಶಬ್ದಸ್ಯಾರ್ಥಃ। – (ಜ.)

ಅ: ಮಹಾತ್ಮರಾದ ಪಾಂಡವರು ಜಯವನ್ನು ಪಡೆದು ಜೋರಾಗಿ ಸಿಂಹನಾದ ಮಾಡುತ್ತಿದ್ದಾಗ ದುರ್ಯೋಧನ ಜಲಸ್ತಂಭನವನ್ನು ಮಾಡಿ ಮಂತ್ರಗಳನ್ನು ಜಪಿಸತೊಡಗಿದ.

ಮಂತ್ರಾ ದುರ್ವಾಸಸಾ ದತ್ತಾ ಮೃತಸಂಜೀವನಪ್ರದಾಃ ।
ಜಲೇ ಸ್ಥಿತ್ವಾ ಜಪನ್ ಸಪ್ತದಿನೈಃ ಸರ್ವಾನ್ ಮೃತಾನಪಿ ।
ಉದ್ಧರೇದ್ಧಾರ್ತರಾಷ್ಟ್ರೋಽಯಂ ಸ್ಮರವಧ್ಯಾಶ್ಚ ತೇ ಪುನಃ ॥ ೪೬ ॥

ಅ: ದುರ್ವಾಸರಿಂದ ಉಪದಿಷ್ಟವಾದ ಆ ಮಂತ್ರಗಳು ಸತ್ತವರಿಗೆ ಮರಳಿ ಪ್ರಾಣ ನೀಡುವಂತಹವು. ದುರ್ಯೋಧನ ನೀರಲ್ಲಿದ್ದು ಏಳು ದಿನಗಳ ಕಾಲ ಮಂತ್ರಗಳನ್ನು ಜಪಿಸಿದರೆ, ಸತ್ತವರೆಲ್ಲ ಮರಳಿ ಬದುಕುವರು. ಮತ್ತು ಮುಂದೆ ಅವಧ್ಯರೂ ಆಗುವರು.

ವಿ: ಆ ಮಂತ್ರಗಳ ಸಂಖ್ಯೆ ಮೂರು ಸಾವಿರ ಎಂಬ ವಿವರ ಈಗಾಗಲೇ ಬಂದಿದೆ(೧೯/೧೬). ಪಂಪಭಾರತ, ರನ್ನನ ಗದಾಯುದ್ಧ ಮೊದಲಾದ ಕೃತಿಗಳಲ್ಲಿ ದುರ್ಯೋಧನನಿಗೆ ಆ ಮಂತ್ರೋಪದೇಶ ನೀಡಿದ್ದು ಶರಮಂಚದಲ್ಲಿ ಮಲಗಿದ್ದ ಭೀಷ್ಮರು ಎಂದಿದೆ. ಭಾರತಕ್ಕೆ ವಿರುದ್ಧವಾದ್ದರಿಂದ ಅವೆಲ್ಲಾ ಕೇವಲ ಕಲ್ಪನೆಗಳಷ್ಟೇ.

...ಪಿತಾಮಹನ ಕರ್ಣೋಪಾಂತಮಂ ಸಾರ್ದು ... ಜಳಮಂತ್ರೋಪದೇಶಮಂ ಕೆಯ್ಕೊಂಡು...
– ಪಂಪಭಾರತ (ಆಶ್ವಾಸ ೧೩, ೬೩-೭೧)

ಪಾಂಡವರಿಂದ ದುರ್ಯೋಧನನ ಅನ್ವೇಷಣೆ

ಇತಿ ವಿದ್ಯಾಬಲಂ ತಸ್ಯ ಜ್ಞಾತ್ವಾ ಪಾಂಡುಸುತಾಸ್ತತಃ ।
ಅನ್ವೇಷಂತಃ ಶುಶ್ರುವುಶ್ಚ ವ್ಯಾಧೇಭ್ಯಸ್ತಂ ಜಲೇ ಸ್ಥಿತಮ್ ॥ ೪೭ ॥

ಅ: ದುರ್ಯೋಧನನಿಗೆ ಹೀಗೆ ಮಂತ್ರಬಲವಿದ್ದುದನ್ನು ತಿಳಿದು ಪಾಂಡವರು ಅವನನ್ನು ಅನ್ವೇಷಿಸುತ್ತಾ ಬೆಸ್ತರಿಂದ ಅವನು ಆ ಸರೋವರದಲ್ಲಿ ಅಡಗಿದ್ದುದನ್ನು ತಿಳಿದರು.

ಪಾಂಡವರನ್ನು ಕಂಡು ಅಶ್ವತ್ಥಾಮಾದಿಗಳ ಪಲಾಯನ

ಆಗಚ್ಛಂಶ್ಚ ತತಸ್ತತ್ರ ಪುರಸ್ಕೃತ್ಯ ಜನಾರ್ದನಮ್ ।
ತದಾ ಜಲಾತ್ ಸಮುನ್ಮಜ್ಯ ತ್ರಿಭಿರ್ದ್ಯೂನಿಪುರಃಸರೈಃ ।
ಮಂತ್ರಯಂತಂ ಸ್ಮ ದದೃಶುಃ ತಾಂದೃಷ್ಟ್ವಾ ತೇ ಪ್ರದುದ್ರುವುಃ ॥ ೪೮ ॥

ಅ: ಅವರು ಆ ಸರೋವರದತ್ತ ಕೃಷ್ಣನನ್ನು ಮುಂದಿಟ್ಟುಕೊಂಡು ತೆರಳಿದರು. ಆಗ ದುರ್ಯೋಧನ ನೀರಿನಿಂದ ಮೇಲೆದ್ದು ಅಶ್ವತ್ಥಾಮ, ಕೃಪ ಮತ್ತು ಕೃತವರ್ಮರೊಂದಿಗೆ ಮಂತ್ರಾಲೋಚನೆ ಮಾಡುತ್ತಿದ್ದುದನ್ನು ಕಂಡರು. ಇವರನ್ನು ಕಾಣುತ್ತಲೇ ಅವರು ಪಲಾಯನ ಮಾಡಿದರು.

ವಿ: ೧) ಭೀಮನಿಗೆ ಬೇಕಾದವರಾಗಿದ್ದ ಬೆಸ್ತರು ನೀರು ಕುಡಿಯಲೆಂದು ಆ ಸರೋವರದ ಬಳಿಗೆ ಬಂದಾಗ ದುರ್ಯೋಧನ ಆ ಮೂವರೊಂದಿಗೆ ಮಾತನಾಡುತ್ತಿದ್ದುದನ್ನು ಕಂಡು ಅದನ್ನು ಭೀಮಾದಿ ಪಾಂಡವರಿಗೆ ತಿಳಿಸಿದರು ಎಂಬ ವಿವರ ಮಹಾಭಾರತದಲ್ಲಿದೆ (ಶಲ್ಯ. ೩೦/೨೩–೪೩) :

ತೇ ತು ಪಾಂಡವಮಾಸಾದ್ಯ ಭೀಮಸೇನಂ ಮಹಾಬಲಮ್ ।
ತಸ್ಮೈ ತತ್ ಸರ್ವಮಾಚಖ್ಯುರ್ಯದ್ವೃತ್ತಂ ಯಚ್ಚ ವೈ ಶ್ರುತಮ್॥ (ಶಲ್ಯ.೩೦/೪೧)

೨) ಅಶ್ವತ್ಥಾಮಾದಿಗಳು ದುರ್ಯೋಧನನನ್ನು ತಮ್ಮ ಜೊತೆ ಸೇರಿ ಯುದ್ಧ ಮಾಡಲು ಕರೆದಾಗ, ಅವನು ಮರುದಿನದಿಂದ ಹಾಗೆ ಮಾಡುವುದಾಗಿ ತಿಳಿಸಿದ. ಮುಖ್ಯವಾಗಿ ಅವನಿಗೆ ಆ ಮಂತ್ರ ಜಪವನ್ನು ಪೂರೈಸಿ ಎಲ್ಲರನ್ನೂ ಬದುಕಿಸಿಕೊಳ್ಳುವುದು ಬೇಕಿತ್ತು

ಯುಧಿಷ್ಠಿರನಿಂದ ದುರ್ಯೋಧನನಿಗೆ ಯುದ್ಧಕ್ಕೆ ಆಹ್ವಾನ

ದುರ್ಯೋಧನೋಽವಿಶತ್ ತೋಯಂ ದೃಷ್ಟ್ವಾ ತಂ ಕೇಶವಾಜ್ಞಯಾ ।
ಯುಧಿಷ್ಠಿರಃ ಸಪರುಷೈರ್ವಾಕ್ಯೈರೇನಮಥಾಹ್ವಯತ್ ॥ ೪೯ ॥

ಅ: ದುರ್ಯೋಧನ ಸರೋವರದೊಳಗೆ ಹೊಕ್ಕ. ಅವನನ್ನು ಕಂಡು ಕೃಷ್ಣನ ಅಪ್ಪಣೆಯಂತೆ ಧರ್ಮರಾಜ ಅತ್ಯಂತ ಕಟುವಾದ ಮಾತುಗಳಿಂದ ಅವನನ್ನು ಕರೆದ.

ವಿ: ೧) ದುರ್ಯೋಧನ ನೀರಲ್ಲಿ ಮುಳುಗಿದ್ದಾಗ ಕೃಷ್ಣನ ಆದೇಶದಂತೆ ಧರ್ಮರಾಜ ಅವನನ್ನು ತಮ್ಮೊಂದಿಗೆ ಯುದ್ಧ ಮಾಡಲು ಕರೆದ. ಆದರೆ, ದುರ್ಯೋಧನ ತನಗೆ ವೈರಾಗ್ಯ

---

೪೬. ತ್ರಿಂಶಚ್ಛತಂ ಪರಮಕಾಃ ಸುರದುರ್ಲಭಾಶ್ಚ ದುರ್ವಾಸಸೋ ಹಿ ಮನವೋಽದ್ಯ ಮಯಾ ಗೃಹೀತಾಃ ।
ಅನ್ಯತ್ರ ತೇ ಪ್ರವಿಹಿತಾ ನ ಹಿ ವೀರ್ಯವಂತಃ ಸ್ಮುರ್ಭೀಮ ಇತ್ಯಹಮಮೂನ್ನ ಹಿ ಯೋಜಯಾಮಿ ॥
ತೇ ವೀರ್ಯದಾ ವಿಜಯದಾ ಅಪಿ ವಾರಿವಹ್ನಿಸ್ತಂಭಾದಿದಾಃ ಸಕಲದೇವನಿಕಾಯರೋಧಾಃ ।

೪೮. ದ್ರೌಣಿಪುರಃಸರೈಃ ದ್ರೌಣಿಃ ಪುರಃಸರೋ ಯೇಷಾಮಿತಿ ತದ್ಗುಣಸಂವಿಜ್ಞಾನೋ ಬಹುವ್ರೀಹಿಃ। ಅವಯವೇನ ವಿಗ್ರಹಃ ಸಮುದಾಯಃ ಸಮಾಸಾರ್ಥ ಇತಿ ಮಹಾಭಾಷ್ಯೋಕ್ತೇರರ್ಥತೃತೀಯದ್ರೌಣ ಇತಿವತ್। – (ಜ.)

೪೮. ತ್ವರಿತಾಃ ಕ್ಷತ್ರಿಯಾ ರಾಜನ್ ಜಗ್ಮುರ್ದ್ವೈಪಾಯನಂ ಹ್ರದಮ್ । – (ಶಲ್ಯ. ೩೦/೪೭)

ಮೂಡಿರುವುದಾಗಿಯೂ, ರಾಜ್ಯ ಮೊದಲಾದವುಗಳಲ್ಲಿನ ಆಸೆಯನ್ನು ತೊರೆದಿರುವುದಾಗಿಯೂ, ಪಾಂಡವರು ರಾಜ್ಯವನ್ನು ಸ್ವೀಕರಿಸಿ ಆಳಬಹುದೆಂದೂ ನೀರಲ್ಲಿದ್ದೇ ಉತ್ತರಿಸಿದ. ಹಾಗೆ ಹೇಳುವ ಮೂಲಕ ತನಗೆ ಏಳು ದಿನಗಳ ಅವಧಿ ಸಿಕ್ಕಲ್ಲಿ ಸತ್ತವರನ್ನೆಲ್ಲ ಬದುಕಿಸಿ ಮರಳಿ ಯುದ್ಧ ಹೂಡುವುದು ಅವನ ತಂತ್ರವಾಗಿತ್ತು.

೨) ಆದರೆ, ಕೃಷ್ಣನ ಆದೇಶದಂತೆ ಧರ್ಮರಾಜ ಅದಕ್ಕೆ ಒಪ್ಪದೇ ಕರೆಯತೊಡಗಿದ. ನಿನ್ನನ್ನು ನಂಬಿದ ಭೀಷ್ಮಾದಿ ಹಿರಿಯರನ್ನೆಲ್ಲ ಕೊಲ್ಲಿಸಿರುವ ನೀನು ಹೀಗೆ ಹೇಡಿಯಾಗಿ ಜೀವದಾಸೆ–ಯಿಂದ ತಲೆ ತಪ್ಪಿಸಿಕೊಳ್ಳುವುದು ತರವಲ್ಲ. ಕುರುಕುಲಕ್ಕೆ ಕಳಂಕ ತರುವ ಹೀನಕಾರ್ಯವನ್ನು ಮಾಡಬೇಡ. ಯುದ್ಧಕ್ಕೆ ಬಾ ಎಂದು ಪುನಃ ಪುನಃ ಕರೆಯತೊಡಗಿದ ಎಂದರ್ಥ.

ಸುಯೋಧನ ಕಿಮರ್ಥೋಽಯಮಾರಂಭೋಽಪ್ಸು ಕೃತಸ್ತ್ವಯಾ ।...
ಸ ತೇ ದರ್ಪೋ ನರಶ್ರೇಷ್ಠ ಸ ಚ ಮಾನಃ ಕ್ವ ತೇ ಗತಃ ॥...
ಉತ್ತಿಷ್ಠ ರಾಜನ್ ಯುಧ್ಯಸ್ವ ಕ್ಷತ್ರಿಯೋಽಸಿ ಕುಲೋದ್ಭವಃ ।
ಕೌರವೇಯೋ ವಿಶೇಷೇಣ ಕುಲಂ ಜನ್ಮ ಚ ಸಂಸ್ಮರ ॥
ಸ ಕಥಂ ಕೌರವೇ ವಂಶೇ ಪ್ರಶಂಸನ್ ಜನ್ಮ ಚಾತ್ಮನಃ ।(ಇತ್ಯಾದಿ) –(೯/೩೧/೧೭-೩೬)

ದುರ್ಯೋಧನನ ಶಾಠ್ಯದ ಉತ್ತರ

ಅಮರ್ಷಿತೋಽಸೌ ಧೃತರಾಷ್ಟ್ರಪುತ್ರಃ
ಶ್ವಸಂಸ್ತದಾ ದಂಡಹತೋ ಯಥಾಽಹಿಃ ।
ಉವಾಚ ಶಾಠ್ಯಾತ್ ತಪಸೇ ವನಾಯ
ಯಾಯಾಂ ಭವಾಂಛಾಸತು ಸರ್ವಪೃಥ್ವೀಮ್ ॥ ೫೦ ॥

ಅ: ಆಗ ದುರ್ಯೋಧನ ಕೆರಳಿದವನಾಗಿ ದಂಡದಿಂದ ಹೊಡೆಯಲ್ಪಟ್ಟ ಸರ್ಪದಂತೆ ಬುಸುಗುಟ್ಟುತ್ತಾ ಕಪಟದಿಂದ ಮತ್ತೆ ನುಡಿದ ''ನಾನು ತಪಸ್ಸಿಗೆಂದು ವನಕ್ಕೆ ತೆರಳುವೆ; ನೀವು ಇಡೀ ಭೂಮಿಯನ್ನು ಆಳಬಹುದು''.

ವಿ: ವೀರಕ್ಷತ್ರಿಯರು ಮಡಿದಾದ ಮೇಲೆ ವಿಧವಾಸ್ತ್ರೀಯಂತೆ ಕಾಣುವ ಭೂಮಿ ತನಗೆ ಬೇಕಿಲ್ಲ ಎಂದು ದುರ್ಯೋಧನ ನುಡಿದ :

---

೫೦. ಉವಾಚ ಶಾಠ್ಯಾದಿತ್ಯತ್ರ ಶಾಠ್ಯಾತ್ = ಕಲಹಾತ್ ॥ –(ವಾ.)

೫೦. ಅಹಂ ವನಂ ಗಮಿಷ್ಯಾಮಿ ಹ್ಯಜಿನೈಃ ಪ್ರತಿವಾಸಿತಃ ।
ಏಷಾ ತೇ ಪೃಥಿವೀ ರಾಜನ್ ಭುಂಕ್ಷ್ವೈನಾಂ ವಿಗತಜ್ವರಃ ॥ –ಇತ್ಯಾದಿ ಭಾರತ(ಶಲ್ಯ.೩೧/೪೪-೫೩)

ಕ್ಷೀಣರತ್ನಾಂ ಚ ಪೃಥಿವೀಂ ಹತಕ್ಷತ್ರಿಯಪುಂಗವಾಮ್ ।
ನ ಹ್ಯುತ್ಸಹಾಮ್ಯಹಂ ಭೋಕ್ತುಂ ವಿಧವಾಮಿವ ಯೋಷಿತಮ್ ॥
– ಭಾರತ (ಶಲ್ಯ. ೩೧/೪೫)

ಧರ್ಮರಾಜನ ಆಗ್ರಹದ ಆಹ್ವಾನ

ತಮಾಹ ಧರ್ಮಜೋ ರಾಜಾ ಯಸ್ತ್ವಂ ಕೃಷ್ಣೇ ಸಮಾಗತೇ ।
ಸೂಚ್ಯಗ್ರವೇಧಿತಾಂ ಪೃಥಿವೀಂ ದಾತುಂ ನೈಚ್ಛಃ ಕಥಂ ಪುನಃ ॥ ೫೧ ॥

ಘಾತಯಿತ್ವಾ ಸರ್ವಪೃಥ್ವೀಂ ಭೀಷ್ಮದ್ರೋಣಮುಖಾನಪಿ ।
ದಾತುಮಿಚ್ಛಸಿ ಸರ್ವಾಂ ಚ ಪೃಥ್ವೀಂ ನಾದ್ಯ ವಯಂ ಪುನಃ ॥ ೫೨ ॥

ಅಹತ್ವಾ ಪ್ರತಿಗೃಹ್ಣೀಮ ಏಹಿ ಯುದ್ಧೇ ಸ್ಥಿರೋ ಭವ ।
ನ ಕುರೂಣಾಂ ಕುಲೇ ಜಾತಸ್ತ್ವಂ ಹಿ ಭೀತೋ ಹ್ಯಪೋಽವಿಶಃ ॥ ೫೩ ॥

ಅ: ಆಗ ಧರ್ಮರಾಜ ಅವನಿಗೆ ತಿಳಿಸಿದ 'ನೀನು ಕೃಷ್ಣ ಬಂದಿದ್ದಾಗ ಸೂಜಿಯ ಮೊನೆಯಿಂದ ಊರುವಷ್ಟು ಭೂಮಿಯನ್ನೂ ಕೊಡಲು ಒಪ್ಪದಿದ್ದವನು; ಅಂಥವನು ಈಗ ಭೀಷ್ಮ, ದ್ರೋಣ ಮೊದಲಾದವರನ್ನೂ, ಸಕಲರಾಜರನ್ನೂ ಕೊಲ್ಲಿಸಿ ಇಡೀ ಭೂಮಿಯನ್ನು ಕೊಡಬಯಸುತ್ತಿರುವೆಯಲ್ಲ. ಆದರೆ, ನಾವು ನಿನ್ನನ್ನು ಕೊಲ್ಲದೇ ಅದನ್ನು ಸ್ವೀಕರಿಸಲಾರೆವು, ಬಾ

---

೫೧. ಸೂಚ್ಯಗ್ರವೇಧ್ಯಾಂ ಪೃಥಿವೀಮಿತ್ಯತ್ರ ಸೂಚ್ಯಗ್ರೇಣ ವೇಧಯೋಗ್ಯಾಂ ಸೂಚ್ಯಗ್ರೇ ಯಾವದ್ಭೂಮಿರ್ಲಗ್ನಾ ಭವತಿ ತಾವತೀಮಪೀತಿ ಭಾವಃ ॥ – (ವಾ.)

೫೨. ಸೂಚ್ಯಗ್ರೇಣಾಪಿ ಯದ್ ಭೂಮೇರಪಿ ಭಿದ್ಯೇತ ಭಾರತ ।
ತನ್ಮಾತ್ರಮಪಿ ತನ್ನಹ್ಯಂ ನ ದದಾತಿ ಪುರಾ ಭವಾನ್ ॥
ಸ ಕಥಂ ಪೃಥಿವೀಮೇತಾಂ ಪ್ರದದಾಸಿ ವಿಶಾಂಪತೇ ॥
ಅಧರ್ಮೇಣ ನ ಗೃಹ್ಣೀಯಾಂ ತ್ವಯಾ ದತ್ತಾಂ ಮಹೀಮಿಮಾಮ್ ।
ನ ಹಿ ಧರ್ಮಃ ಸ್ಮೃತೋ ರಾಜನ್ ಕ್ಷತ್ರಿಯಸ್ಯ ಪ್ರತಿಗ್ರಹಃ ॥
ತ್ವಯಾ ದತ್ತಾಂ ನ ಚೇಚ್ಛೇಯಂ ಪೃಥಿವೀಮಖಿಲಾಮಹಮ್ ।
ತ್ವಾಂ ತು ಯುದ್ಧೇ ವಿನಿರ್ಜಿತ್ಯ ಭೋಕ್ತಾಽಸ್ಮಿ ವಸುಧಾಮಿಮಾಮ್ ॥ (ಇತ್ಯಾದಿ)
– ಭಾರತ (ಶಲ್ಯ. ೩೧/೫೫-೭೩)

೫೩. ತ್ವಂ ಕುರೂಣಾಂ ಕುಲೇ ನ ಜಾತ ಇತ್ಯುತ್ಪ್ರೇಕ್ಷಾ । – (ವ.)

ಯುದ್ಧದಲ್ಲಿ ಸ್ಥಿರನಾಗು. ಕುರುಗಳ ವಂಶದಲ್ಲಿ ಜನಿಸಿದ ನೀನು ಹೀಗೆ ಅಂಜಿ ನೀರೊಳಗೆ ಹೊಕ್ಕಿರುವುದು ತರವಲ್ಲ'.

ವಿ: ೧) ಯುದ್ಧದಲ್ಲಿ ಸೋತಾಗಿರುವ ನಿನಗೆ ಹಾಗೆ ಭೂಮಿಯನ್ನು ದಾನ ನೀಡುವ ಅರ್ಹತೆ ಇಲ್ಲ, ಕ್ಷತ್ರಿಯರಾದ ನಾವು ಅದನ್ನು ದಾನವಾಗಿ ಪಡೆಯುವವರೂ ಅಲ್ಲ, ಜೀವನವಿಡೀ ನಮ್ಮ ಮೇಲೆ ದ್ವೇಷ ಸಾಧಿಸಿದ ನಿನ್ನನ್ನು ನಾವು ಸಂಹರಿಸದೆ ರಾಜ್ಯ ಸ್ವೀಕರಿಸುವವರಲ್ಲ ಎಂದು ಧರ್ಮರಾಜ ನುಡಿದ :

ಯದಿ ವಾಪಿ ಸಮರ್ಥಃ ಸ್ಯಾಸ್ತ್ವಂ ದಾನಾಯ ಸುಯೋಧನ ।
ನಾಹಮಿಚ್ಛೇಯಮವನಿಂ ತ್ವಯಾ ದತ್ತಾಂ ಪ್ರಶಾಸಿತುಮ್ ॥
ಅಧರ್ಮೇಣ ನ ಗೃಹ್ಣೀಯಾಂ ತ್ವಯಾ ದತ್ತಾಂ ಮಹೀಮಿಮಾಮ್ ।
ನ ಹಿ ಧರ್ಮಃ ಸ್ಮೃತೋ ರಾಜನ್ ಕ್ಷತ್ರಿಯಸ್ಯ ಪ್ರತಿಗ್ರಹಃ ॥ –(ಶಲ್ಯ. ೩೧/೫೬, ೫೭)

೨) ಧರ್ಮರಾಜ ಹೀಗೆಲ್ಲ ನುಡಿದರೂ ದುರ್ಯೋಧನ ಮೇಲೇಳದಿದ್ದಾಗ ಕೃಷ್ಣನ ಮಾತಿನಂತೆ ಭೀಮಸೇನ ಉಗ್ರವಾದ ಮಾತುಗಳಿಂದ ಕರೆಯತೊಡಗಿದನೆಂದೂ, ಆಗ ದುರ್ಯೋಧನ ಮೇಲೆದ್ದು ಬಂದನೆಂದೂ ಪಂಪ, ರನ್ನ, ಕುಮಾರವ್ಯಾಸರು ಬರೆದಿರುವರು. ಇದೂ ಸಹ ಮಹಾಭಾರತಕ್ಕೆ ಅನುಗುಣವಾದ ನಿರೂಪಣೆಯಲ್ಲ.

ಮೇಲೆದ್ದು ಬಂದ ದುರ್ಯೋಧನ

ಇತ್ಯಾದಿರೂಕ್ಷವಚನಂ ಶ್ರುತ್ವಾ ದುರ್ಯೋಧನೋ ರುಷಾ ।
ಜಲಸ್ತಂಭಾತ್ ಸಮುತ್ತಸ್ಥೌ ಶ್ವಸನ್ನಾಶೀವಿಷೋ ಯಥಾ ॥ ೫೪ ॥

ಅ: ಇವೇ ಮೊದಲಾದ ಕಟು ನುಡಿಗಳನ್ನು ಕೇಳಿ ದುರ್ಯೋಧನ ಕೋಪದಿಂದ ಸರ್ಪ-ದಂತೆ ಬುಸುಗುಟ್ಟುತ್ತಾ ಜಲಸ್ತಂಭನವನ್ನು ತೊರೆದು ಮೇಲೆದ್ದು ಬಂದ.

ವಿ: ಆಗ ಮಂತ್ರ ಮರೆತದ್ದರಿಂದ ಬೇರೆ ದಾರಿಯಿಲ್ಲದೇ ದುರ್ಯೋಧನ ಮೇಲೆದ್ದು ಬಂದ ಎಂಬ ಕುಮಾರವ್ಯಾಸಭಾರತದ ನಿರೂಪಣೆಯೂ ಮೂಲಕ್ಕೆ ಅನುಗುಣವಾದುದಲ್ಲ:

ಮರೆದುದುದಕಸ್ತಂಭ ಸಲಿಲದ
ಹೊರಗೆ ಬೊಬ್ಬುಳಿಕೆಗಳ ತೆರೆ ನೊರೆ
ದುರುಗಿದವು ಘುಳಿಘುಳಿಸಿ ಜಲಬುದ್ಬುದದ ಚೂಣಿಯಲಿ ।
ದುರುದುರಿಪ ಬಿಸುಸುಯ್ಲ ಸೆಕೆಯಲಿ
ಮರುಗಿ ಕುದಿದುದು ನೀರು ಭೀಮನ
ಬಿರುನುಡಿಯ ಬೇಳಂಬದಲಿ ಬೆಂಡಾದನಾ ಭೂಪ ॥ – ಕುಮಾರವ್ಯಾಸಭಾರತ (ಗದಾ ೫/೩೨)

ದುರ್ಯೋಧನನಿಂದ ತನ್ನ ಸ್ಥಿತಿಯ ನಿರೂಪಣೆ

ಉವಾಚ ಚೈಕ ಏವಾಹಮಕಿರೀಟೋ ವಿವರ್ಮಕಃ ।
ಭವಂತೋ ಬಹವೋ ವರ್ಮಶಿರಸ್ತ್ರಾಣಯುತಾ ಅಪಿ ॥ ೫೫ ॥

ಅ: ದುರ್ಯೋಧನ ನುಡಿದ 'ನಾನು ಏಕಾಕಿ, ಕಿರೀಟ ಇಲ್ಲದವನು, ಕವಚವಿಲ್ಲದವನು. ನೀವು ಅನೇಕರು, ಕವಚ, ಶಿರಸ್ತ್ರಾಣಗಳಿಂದ ಕೂಡಿದವರು.'.

ವಿ: ೧) ಏಕಾಂಗಿಯೂ, ನಿರಾಯುಧನೂ ಆದ ತಾನು ಅಷ್ಟು ಜನರೊಂದಿಗೆ ಹೋರಾಡುವುದು ನ್ಯಾಯಸಮ್ಮತವಾದುದಲ್ಲ ಎಂದು ಅವನ ಭಾವ. ಆದರೆ ಏಕಾಂಗಿಯಾಗಿದ್ದ ಅಭಿಮನ್ಯುವನ್ನು ಅವರೆಲ್ಲ ಸೇರಿ ಕೊಂದುಹಾಕಿದ್ದನ್ನು ತಿಳಿದವರಿಗೆ ದುರ್ಯೋಧನ ಈಗ ಪ್ರಾಣಭಯದಿಂದಾಗಿ ಹಾಗೆ ಹೇಳುತ್ತಿರುವುದು ಸ್ಪಷ್ಟಪಡುವುದು.

೨) ದುರ್ಯೋಧನನ ಈ ಮಾತಿನಲ್ಲಿ ಅವನಿಗೆ ಕಿರೀಟ, ಕವಚ, ಪರಿವಾರ ಮೊದಲಾದ ಯಾವುದೂ ಇಲ್ಲದಿರುವುದನ್ನು ಒಪ್ಪಿಕೊಳ್ಳುತ್ತಿರುವನು. ಕೃಷ್ಣ ಅಂದೇ 'ನನ್ನ ಮಾತನ್ನು ಕೇಳದಿದ್ದಲ್ಲಿ ನೀನು ಸರ್ವಸ್ವವನ್ನೂ ಕಳೆದುಕೊಂಡು ಹಾಳಾಗುವಿ' ಎಂದು ತಿಳಿಸಿದ್ದ. ನಡೆದದ್ದೂ ಹಾಗೆಯೇ. ಶ್ರೀಹರಿಯ ಆದೇಶವನ್ನು ಪಾಲಿಸದವರ ಗತಿ ಅತ್ಯಂತ ಶೋಚನೀಯವಾಗುವುದು ಎನ್ನಲು ದುರ್ಯೋಧನ ಅತ್ಯುತ್ತಮ ನಿದರ್ಶನ.

ಯದ್ಯೇವಮಪಿ ಮೇ ಯುದ್ಧಂ ಭವದ್ಭಿರ್ಮನ್ಯಸೇ ಸಮಮ್ ।
ಸರ್ವೈರೇಕೇನ ವಾ ಯುದ್ಧಂ ಕರಿಷ್ಯೇ ನ ಚ ಭೀರ್ಮಮ ॥ ೫೬ ॥

---

೫೬. ಯೂಯಂ ಸಸುಹೃದಃ ಪಾರ್ಥಾಃ ಸರ್ವೇ ಸರಥವಾಹನಾಃ ।
ಆತ್ತಶಸ್ತ್ರೈ ರಥೋಪೇತೈರ್ಬಹುಭಿಃ ಪರಿವಾರಿತಃ ॥
ಕಥಮೇಕಃ ಪದಾತಿಃ ಸನ್ನಶಸ್ತ್ರೋ ಯೋದ್ಧುಮುತ್ಸಹೇ ।
ಏಕೈಕೇನ ತು ಮಾಂ ಯೂಯಂ ಯೋಧಯಧ್ವಂ ಯುಧಿಷ್ಠಿರ ॥
ನ ಹ್ಯೇಕೋ ಬಹುಭಿರ್ವೀರೈರ್ನ್ಯಾಯ್ಯೋ ಯೋಧಯಿತುಂ ಯುಧಿ ॥
ವಿಶೇಷತೋ ವಿಕವಚಃ ಶ್ರಾಂತಶ್ಚಾಪತ್ಸಮಾಹಿತಃ ॥
ಭೃಶಂ ವಿಕ್ಷತಗಾತ್ರಶ್ಚ ಶ್ರಾಂತವಾಹನಸೈನಿಕಃ ।
ನ ಮೇ ತ್ವತ್ತೋ ಭಯಂ ರಾಜನ್ ನ ಚ ಪಾರ್ಥಾದ್ ವೃಕೋದರಾತ್ ।
ಫಾಲ್ಗುನಾದ್ ವಾಸುದೇವಾದ್ ವಾ ಪಂಚಾಲೇಭ್ಯೋಽಥವಾ ಪುನಃ ॥
ಯಮಾಭ್ಯಾಂ ಯುಯುಧಾನಾದ್ ವಾ ಯೇ ಚಾನ್ಯೇ ತವ ಸೈನಿಕಾಃ ।
ಏಕಃ ಸರ್ವಾನಹಂ ಕ್ರುದ್ಧೋ ವಾರಯಿಷ್ಯೇ ಯುಧಿ ಸ್ಥಿತಃ ॥

(ಇತ್ಯಾದಿ ದುರ್ಯೋಧನನ ವಚನ) – ಭಾರತ (ಶಲ್ಯ. ೩೨/೧೦-೨೨)

ಅ: ಹೀಗಿದ್ದರೂ ನನ್ನೊಡನೆ ಕಾದುವುದು ಸರಿಯೆಂದು ಭಾವಿಸುವೆಯಾದಲ್ಲಿ ನಾನು ನಿಮ್ಮೆಲ್ಲರೊಡನಾಗಲೀ, ಅಥವಾ ಒಬ್ಬನೊಡನಾಗಲೀ ಯುದ್ಧ ಮಾಡುವೆ. ನನಗೇನೂ ಭಯವಿಲ್ಲ.

ವಿ: ದುರ್ಯೋಧನನ ಈ ಮಾತುಗಳಲ್ಲಿ ವೀರೋಚಿತವಾದ ಯಾವ ಅಂಶವೂ ಇಲ್ಲ. ಅವನು ಹತಾಶನಾಗಿ ಹಾಗೆ ನುಡಿಯುವ ಮೂಲಕ ಎಲ್ಲರ ಮೇಲೆ ಹೋರಾಡುವುದಕ್ಕಿಂತ ಒಬ್ಬನ ಮೇಲೆ ಹೋರಾಡುವ ಅವಕಾಶವನ್ನು ಕೊಡಿ ಎಂದು ಪರ್ಯಾಯವಾಗಿ ಕೇಳಿಕೊಂಡ ಎಂಬುದು ಸ್ಪಷ್ಟ. ತನಗೇನೂ ಭಯವಿಲ್ಲ ಎಂದು ಭಯದಿಂದಲೇ ಹೇಳುತ್ತಿರುವುದೂ ಗಮನಾರ್ಹ.

ಕವಚಾದಿಗಳನ್ನು ನೀಡಲು ಯುಧಿಷ್ಠಿರನ ಆಶ್ವಾಸನೆ

ಇತ್ಯುಕ್ತ ಆಹ ಧರ್ಮಾತ್ಮಾ ವರ್ಮಾದ್ಯಂ ಚ ದದಾಮಿ ತೇ ।
ವೃಣೀಷ್ವ ಪ್ರತಿವೀರಂ ಚ ಪಂಚಾನಾಂ ಯಂ ತ್ವಮಿಚ್ಛಸಿ ॥ ೫೭ ॥

ಅ: ದುರ್ಯೋಧನ ಹೀಗೆನ್ನಲು ಧರ್ಮಾತ್ಮನಾದ ಧರ್ಮರಾಜ ತಿಳಿಸಿದ 'ನಿನಗೀಗ ಕವಚ ಮೊದಲಾದವುಗಳನ್ನು ನೀಡುವೆವು. ನಮ್ಮ ಐವರಲ್ಲಿ ನೀನು ಯಾರೊಂದಿಗೆ ಯುದ್ಧ ಮಾಡಲು ಬಯಸುವೆಯೋ ಅವನನ್ನು ಆರಿಸಿಕೋ'.

ವಿ: ''ಅನೇಕರು ಒಬ್ಬನೊಂದಿಗೆ ಹೋರಾಡುವುದು ಅಧರ್ಮವೆಂದು ನಿನಗೆ ಈಗ ತಿಳಿಯಿತೇ? ಅಭಿಮನ್ಯುವಧೆಯ ಕಾಲದಲ್ಲಿ ನಿನಗೆ ಈ ಧರ್ಮಜ್ಞಾನ ಎಲ್ಲಿ ಹೋಗಿತ್ತು?''. '....ಸರ್ವೋ ವಿವ್ಯಶತೇ ಜಂತುಃ ಕೃಚ್ಛ್ರಸ್ಥೋ ಧರ್ಮದರ್ಶನಂ' (ಶಲ್ಯ ೩೨–೫೯). ಆದರೂ, ನಾವು ಧರ್ಮ ತಪ್ಪುವವರಲ್ಲ, ನಮ್ಮಲ್ಲಿ ನೀನು ಬಯಸುವ ಒಬ್ಬನೊಂದಿಗೆ ಹೋರಾಡಬಹುದು ಎಂದು ಧರ್ಮರಾಜ ನುಡಿದ.

ಯಾರಾದರೂ ಒಬ್ಬನನ್ನು ಆರಿಸಿಕೋ!

ಹತ್ವೈಕಂ ತ್ವಂ ಭುಂಕ್ಷ್ವ ರಾಜ್ಯಮನ್ಯೇ ಯಾಮ ವಯಂ ವನಮ್ ।
ಹತೇ ವಾ ತ್ವಯಿ ತೇನೈವ ಭುಂಜೇಮಶ್ಚಾಖಿಲಾಂ ಭುವಮ್ ।
ಆಧತ್ಸ್ವ ಚಾಯುಧಂ ಯೇನ ಜೇತುಮಿಚ್ಛಸಿ ಶಾತ್ರವಾನ್ ॥ ೫೮ ॥

ಅ: ಒಬ್ಬನನ್ನು ನೀನು ಕೊಂದೆಯಾದಲ್ಲಿ ರಾಜ್ಯವನ್ನು ನೀನೇ ಆಳು, ಉಳಿದ ನಾವೆಲ್ಲಾ ಕಾಡಿಗೆ ತೆರಳುವೆವು. ಅವನಿಂದ ನೀನೇ ಸತ್ತರೆ ಭೂಮಿಯನ್ನೆಲ್ಲ ನಾವು ಪಾಲಿಸುವೆವು. ನೀನು ಶತ್ರುಗಳನ್ನು ಯಾವ ಆಯುಧದಿಂದ ಗೆಲ್ಲಬಯಸುವಿಯೋ ಆ ಆಯುಧವನ್ನೇ ತೆಗೆದುಕೋ.

ಎಃ ಧರ್ಮರಾಜ ಹೀಗೆ ನುಡಿಯುವಾಗ ದುರ್ಯೋಧನ ಭೀಮನ ಹೊರತು ತಮ್ಮಲ್ಲಿ ಉಳಿದ ನಾಲ್ವರಲ್ಲಿ ಒಬ್ಬರನ್ನು ಗದಾಯುದ್ಧಕ್ಕೆ ಆಹ್ವಾನಿಸಿದರೆ ಪರಿಣಾಮ ಏನಾದೀತೆಂಬುದನ್ನು ಸ್ವಲ್ಪವೂ ಯೋಚಿಸಿಲ್ಲ ಎಂಬುದನ್ನು ಗಮನಿಸಬೇಕು. ಅದೂ ಒಬ್ಬನ ಮೇಲೆ ಯುದ್ಧ ಮಾಡಿ ಗೆದ್ದರೆ ಸಕಲ ರಾಜ್ಯ ನೀಡುವ ಆಶ್ವಾಸನೆ ಬೇರೆ; ಎಂದರೆ ಉಳಿದ ನಾಲ್ವರೂ ಅವನ ಮೇಲೆ ಯುದ್ಧ ಮಾಡದೇ ಕಾಡಿಗೆ ತೆರಳಿಬಿಡುವವರು. ಅತ್ಯುತ್ಸಾಹದ ಭರದಲ್ಲಿ ಧರ್ಮರಾಜ ಹೀಗೆ ಆಡುತ್ತಿರುವುದು ಸ್ಪಷ್ಟ. ಕೃಷ್ಣನ ಸಲಹೆಯನ್ನು ಕೇಳದೇ ತಾನಾಗಿಯೇ ಇಂತಹ ಮಾತುಗಳನ್ನು ನುಡಿದ. ಒಂದು ರೀತಿಯಲ್ಲಿ ಇದು ಒಂದು ರೀತಿಯಲ್ಲಿ ಇನ್ನೊಂದು ಜೂಜಾಟವೇ ಆಯಿತು.

ದುರ್ಯೋಧನನಿಂದ ಭೀಮನ ಆಯ್ಕೆ

ಇತ್ಯುಕ್ತ ಊಚೇ ನ ಹಿ ದುರ್ಬಲೈರಹಂ
ಯೋತ್ಸ್ಯೇ ಚತುರ್ಭಿರ್ಭವದರ್ಜುನಾದಿಭಿಃ ।
ಭೀಮೇನ ಯೋತ್ಸ್ಯೇ ಗದಯಾ ಸದಾ ಹಿ ಮೇ
ಪ್ರಿಯಾ ಗದಾ ನಾನ್ಯದಥಾಯುಧಂ ಸ್ಪೃಶೇ ॥ ೫೯ ॥

ಅಃ ಧರ್ಮರಾಜ ಹೀಗೆನ್ನಲು ದುರ್ಯೋಧನ ನುಡಿದ 'ದುರ್ಬಲರಾದ ನೀನು, ಅರ್ಜುನ ಮೊದಲಾದ ನಾಲ್ವರೊಂದಿಗೆ ನಾನು ಯುದ್ಧ ಮಾಡೆನು. ನಾನು ಭೀಮನೊಂದಿಗೆ ಗದೆ-ಯೊಂದಿಗೆ ಹೋರಾಡುವೆ. ನನಗೆ ಸದಾ ಗದೆಯೇ ಪ್ರಿಯವಾದ ಆಯುಧ, ಬೇರೊಂದು ಆಯುಧವನ್ನು ನಾನು ಮುಟ್ಟಲಾರೆ'.

ಎಃ ದುರ್ಯೋಧನನ ಭೀಮನ ಆಯ್ಕೆಯ ಈ ಪ್ರಸಂಗ ಜರಾಸಂಧನ ಪ್ರಸಂಗದಂತೆಯೇ ಇದೆ ಎಂಬುದನ್ನು ಗಮನಿಸಬೇಕು. ಜರಾಸಂಧ ಅರ್ಜುನನನ್ನು ಆರಿಸಿಕೊಂಡಲ್ಲಿ ತನ್ನ ಕೀರ್ತಿಗೆ ಕಳಂಕ,

---

೫೮. ಹತೇ ವಾ ತ್ವಯಿ ತೇನೈವೇತ್ಯತ್ರ ತ್ವಯಾ ಯೋ ವೃತಃ ತೇನೈವ ತ್ವಯಿ ಹತೇ ಸತೀತಿ ಸಂಬಂಧಃ ॥ – (ವಾ.)

೫೮. ದಿಷ್ಟ್ಯಾ ತ್ವಮಪಿ ಜಾನೀಷೇ ಕ್ಷತ್ರಧರ್ಮಂ ಸುಯೋಧನ ।
ಏಕ ಏಕೇನ ಸಂಗಮ್ಯ ಯತ್ ತೇ ಸಮ್ಮತಮಾಯುಧಮ್ ।
ತತ್ ತ್ವಮಾದಾಯ ಯುಧ್ಯಸ್ವ ಪ್ರೇಕ್ಷಕಾಸ್ತೇ ವಯಂ ಸ್ಥಿತಾಃ ॥
ಸ್ವಯಮಿಷ್ಟಂ ಚ ತೇ ಕಾಮಂ ವೀರ ಭೂಯೋ ದದಾಮ್ಯಹಮ್ ।
ಹತ್ವೈಕಂ ಭವತೋ ರಾಜ್ಯಂ ಹತೋ ವಾ ಸ್ವರ್ಗಮಾಪ್ನುಹಿ ॥ - ಭಾರತ (ಶಲ್ಯ. ೩೨/೨೩-೨೬)

೫೮. ಪಂಚಾನಾಂ ಪಾಂಡವೇಯಾನಾಂ ಯೇನ ತ್ವಂ ಯೋದ್ಧುಮಿಚ್ಛಸಿ ।
ತಂ ಹತ್ವಾ ವೈ ಭವಾನ್ ರಾಜಾ ಹತೋ ವಾ ಸ್ವರ್ಗಮಾಪ್ನುಹಿ ॥ - ಭಾರತ (ಶಲ್ಯ. ೩೨/೬೨)

೫೯. ಗೃಹ್ಣಾತು ಚ ಗದಾಂ ಯೋ ವೈ ಯೋತ್ಸ್ಯತೇಽದ್ಯ ಮಯಾ ಸಹ ॥ - ಭಾರತ (ಶಲ್ಯ. ೩೨/೬೧)

ಗೆದ್ದರೂ ಪ್ರಯೋಜನವಿಲ್ಲ. ಆಗಲೂ ಕೃಷ್ಣ ಭೀಮರು ತನ್ನನ್ನು ಕೊಲ್ಲುವುದು ನಿಶ್ಚಿತ. ಭೀಮನೊಂದಿಗೆ ಕಾದಿದಲ್ಲಿ ಅಕಸ್ಮಾತ್ ಗೆಲ್ಲುವ ಆಸೆ. ಸತ್ತರೂ ಮಹಾಬಲಿಷ್ಠನಿಂದ ಸತ್ತ ಕೀರ್ತಿ ಎಂದು ಅವನು ಯೋಚಿಸಿದ್ದಂತೆ ದುರ್ಯೋಧನನೂ ಯೋಚಿಸಿದ. ಜೊತೆಗೆ ಭೀಮನನ್ನು ಕೊಲ್ಲಲೆಂದು ಅವನು ಉಕ್ಕಿನ ಭೀಮನ ವಿಗ್ರಹವೊಂದನ್ನು ಮಾಡಿಸಿಕೊಂಡು ಅದರ ಮೇಲೆ ಅನೇಕ ದಿವಸಗಳಿಂದ ಕಾದಾಡುವ ಅಭ್ಯಾಸವನ್ನೂ ಮಾಡಿಕೊಂಡಿದ್ದ ವಿವರ ಭಾರತದಲ್ಲಿದೆ :

ನ ಸಮರ್ಥಾನಹಂ ಮನ್ಯೇ ಗದಾಹಸ್ತಸ್ಯ ಸಂಯುಗೇ ।
ಏತೇನ ಹಿ ಕೃತಾ ಯೋಗ್ಯಾ ವರ್ಷಾಣೀಹ ತ್ರಯೋದಶ ॥
ಆಯಸೇ ಪುರುಷೇ ರಾಜನ್ ಭೀಮಸೇನಜಿಘಾಂಸಯಾ ।
ಕಥಂ ನಾಮ ಭವೇತ್ ಕಾರ್ಯಮಸ್ಮಾಭಿರ್ಭರತರ್ಷಭ ॥

– ಭಾರತ (ಶಲ್ಯ. ೩೩/೪, ೫)

ಅದೂ ಸಹ ಭೀಮನನ್ನು ಆರಿಸಿಕೊಳ್ಳಲು ಕಾರಣವಾಯಿತು ಎಂದು ತಿಳಿಯಬಹುದು. ಹೊರತು ಆಡಿದ ಮಾತುಗಳು ಸರ್ವಥಾ ವೀರೋದಾತ್ತವಾಗಿರಲಿಲ್ಲ ಎಂಬುದನ್ನು ಗಮನಿಸಬೇಕು.

ದುರ್ಯೋಧನನ ಮೇಲೆ ನುಗ್ಗಿದ ಭೀಮ

ಶ್ರುತ್ವಾಽಸ್ಯ ವಾಕ್ಯಂ ರಭಸೋ ವೃಕೋದರೋ
ಗದಾಂ ತದಾಽಧ್ಯರ್ಧಭರಾಧಿಕಾಂ ಮುದಾ ।
ರಾಜ್ಞೋ ಗದಾಯಾಃ ಪರಿಗೃಹ್ಯ ವೀರಃ
ಸಮುತ್ಥಿತೋ ಯುದ್ಧಮನಾಃ ಸಮುನ್ನದನ್ ॥ ೬೦ ॥

ಅ: ದುರ್ಯೋಧನನ ಮಾತನ್ನು ಕೇಳಿ ವೀರನಾದ ಭೀಮಸೇನ ದುರ್ಯೋಧನನ ಗದೆಗಿಂತ ಒಂದುವರೆ ಪಟ್ಟು ಹೆಚ್ಚು ಭಾರವಾಗಿದ್ದ ತನ್ನ ಗದೆಯನ್ನು ಕೈಗೆತ್ತಿಕೊಂಡು ಯುದ್ಧಮಾಡುವ ಮನಸ್ಸಿನಿಂದ ಸಿಂಹನಾದ ಮಾಡುತ್ತಾ ಮೇಲೆದ್ದ.

ಶ್ರೀಕೃಷ್ಣ ತಿಳಿಸಿದ ಭೀಮನ ಮಹಿಮೆ

ಅಥಾಹ ನಾರಾಯಣ ಆದಿದೇವೋ
ಯುಧಿಷ್ಠಿರಂ ಕಷ್ಟಮಿದಂ ಕೃತಂ ತ್ವಯಾ ।
ನ ಹ್ಯೇಷ ರಾಜಾ ಗದಯಾ ರಣೇ ಚರನ್
ಶಕ್ಯೋ ವಿಜೇತುಂ ನಿಖಿಲೈಃ ಸುರಾಸುರೈಃ ॥ ೬೧ ॥

ಸ ನಿಶ್ಚಯಾದ್ದಶ್ಚತುರೋ ನಿಹನ್ಯಾತ್
ಸಹಾರ್ಜುನಾನ್ ಭೀಮಸೇನಃ ಕಥಂಚಿತ್ ।
ಹಂತೈನಮಾಜೌ ನ ಹಿ ಭೀಮತುಲ್ಯೋ
ಬಲೇ ಕ್ವಚಿದ್ಧಾರ್ತರಾಷ್ಟ್ರಃ ಕೃತೀ ಚ ॥ ೬೨ ॥

ಅ: ಆಗ ಆದಿದೇವ ನಾರಾಯಣನಾದ ಶ್ರೀಕೃಷ್ಣ ಧರ್ಮರಾಜನಿಗೆ ಹೇಳಿದ 'ನೀನು ಕೆಟ್ಟದ್ದು ಮಾಡಿದ್ದೆ. ಈ ರಾಜನಾದ ದುರ್ಯೋಧನ ಗದೆ ಹಿಡಿದು ಯುದ್ಧಕ್ಕೆ ನಿಂತನೆಂದರೆ ಸಕಲ ಸುರಾಸುರರಿಂದಲೂ ಗೆಲ್ಲಲು ಅಸಾಧ್ಯವಾದವನು. ಅವನು ಖಚಿತವಾಗಿಯೂ ಅರ್ಜುನ-ಸಮೇತವಾಗಿ ನಿಮ್ಮಲ್ಲಿ ನಾಲ್ವರನ್ನೂ ಕೊಲ್ಲಬಲ್ಲವನು. ಭೀಮಸೇನ ಹೇಗೋ ಇವನನ್ನು ಯುದ್ಧದಲ್ಲಿ ಕೊಲ್ಲಬಲ್ಲ. ಬಲದಲ್ಲಿ ಭೀಮನಿಗೆ ಸಮನಾದವನು ಇಲ್ಲ. ಆದರೆ, ದುರ್ಯೋಧನ ಬಲಿಷ್ಠನಾಗಿರುವಂತೆ ಪ್ರಯತ್ನಶೀಲನೂ ಆಗಿರುವನು'.

ವಿ: ಕೃಷ್ಣ ಈ ಮಾತುಗಳಲ್ಲಿ ಧರ್ಮರಾಜ ಮಾಡಿದ ತಪ್ಪನ್ನು ಎತ್ತಿ ತೋರಿಸಿರುವನು. ದುರ್ಯೋಧನನೇನಾದರೂ ಅರ್ಜುನಾದಿ ಇತರ ನಾಲ್ವರನ್ನು ಆರಿಸಿಕೊಂಡಿದ್ದಲ್ಲಿ ನಿಶ್ಚಿತವಾಗಿಯೂ ಗೆಲ್ಲುತ್ತಿದ್ದ. ಭೀಮನ ಹೊರತು ಸುರಾಸುರರಲ್ಲಿ ಬೇರಾರೂ ಅವನನ್ನು ಎದುರುಸಿ ಗೆಲ್ಲಲಾರರು ಎಂದರ್ಥ.

---

೬೦. ಮುದಾऽಧ್ಯರ್ಧಭರಾದಿಕಾಂತದಾ – (ಪಾಠಾಂತರ)

೬೦. ಅಧ್ಯರ್ಧೇನ ಗುಣೇನೇಯಂ ಗದಾ ಗುರುತರೀ ಮಮ ।
ಸಾಮರಾನಪಿ ಲೋಕಾಂಸ್ತ್ರೀನ್ ನಾನಾಶಸ್ತ್ರಧರಾನ್ ಯುಧಿ ॥
ಯೋಧಯೇಯಂ ರಣೇ ಕೃಷ್ಣ ಕಿಮುತಾದ್ಯ ಸುಯೋಧನಮ್ ॥ – ಭಾರತ (ಶಲ್ಯ. ೧೯೨೧)

೬೧. ಯುಧಿಷ್ಠಿರಸ್ಯ ಸಂಕ್ರುದ್ಧೋ ವಾಸುದೇವೋऽಬ್ರವೀದಿದಮ್ ।
ಯದಿ ನಾಮ ಹ್ಯಯಂ ಯುದ್ಧೇ ವರಯೇತ್ ತ್ವಾಂ ಯುಧಿಷ್ಠಿರ ।
ಅರ್ಜುನಂ ನಕುಲಂ ಚೈವ ಸಹದೇವಮಥಾಪಿ ವಾ ।
ಕಿಮಿದಂ ಸಾಹಸಂ ರಾಜಂಸ್ತ್ವಯಾ ವ್ಯಾಹೃತಮೀದೃಶಮ್ ।
ಏಕಮೇವ ನಿಹತ್ಯಾಜೌ ಭವ ರಾಜಾ ಕುರುಷ್ವಿತಿ ॥ – ಭಾರತ (ಶಲ್ಯ. ೩೩/೧-೩)

ನಾನ್ಯಮಸ್ಯಾನುಪಶ್ಯಾಮಿ ಪ್ರತಿಯೋದ್ಧಾರಮಾಹವೇ ।
ಋತೇ ವೃಕೋದರಾತ್ ಪಾರ್ಥಾತ್ ಸ ಚ ನಾತಿಕೃತಶ್ರಮಃ ॥
ತದಿದಂ ದ್ಯೂತಮಾರಬ್ಧಂ ಪುನರೇವ ಯಥಾ ಪುರಾ ।
ಬಲೀ ಭೀಮಃ ಸಮರ್ಥಶ್ಚ ಕೃತೀ ರಾಜಾ ಸುಯೋಧನಃ ॥
ನೂನಂ ನ ರಾಜ್ಯಭಾಗೇಷಾ ಪಾಂಡೋಃ ಕುಂತ್ಯಾಶ್ಚ ಸಂತತಿಃ ॥
ಅತ್ಯಂತವನವಾಸಾಯ ಸೃಷ್ಟಾ ಭೈಕ್ಷ್ಯಾ ಯ ವಾ ಪುನಃ ॥ – ಭಾರತ (ಶಲ್ಯ. ೩೩/೬-೧೬)

ಊರೂ ಭೀಮೇನ ಭೇತ್ತವ್ಯೌ ಪ್ರತಿಜ್ಞಾಂ ರಕ್ಷತಾ ರಿಪೋಃ ।
ನಾಭೇರಧಸ್ತಾದ್ಗದಾಯುದ್ಧೇ ಜನಾ ಆಹುರ್ಗದಾಮೃಧೇ ॥ ೬೩ ॥

ಅಧರ್ಮ ಇತಿ ತತ್ಕೃಷ್ಣೋ ಲೋಕನಿಂದಾನಿವೃತ್ತಯೇ ।
ಆಪದ್ಧರ್ಮಂ ದರ್ಶಯಿತುಂ ಕಿಂಚಿದ್ವ್ಯಾಜೇನ ಸಂಯುತಃ ॥ ೬೪ ॥

ಭೀಮೋ ಹನ್ಯಾದ್ಧಾರ್ತರಾಷ್ಟ್ರಮಿತ್ಯೂಚೇ ಯದ್ಯಪಿ ಸ್ಫುಟಮ್ ।
ಅವ್ಯಾಜೇನಾಪಿ ಶಕ್ತೋಽಸೌ ಬಲಂ ನಿಃಸೀಮಮಾಹ ಚ ॥ ೬೫ ॥

---

೬೩. ಊರೂ ಭೀಮೇನ ಭೇತ್ತವ್ಯಾವಿತ್ಯತ್ರ ಪ್ರತಿಜ್ಞಾಂ ರಕ್ಷತಾ = ತವೋರೂ ಭೇತ್ಸ್ಯ ಇತಿ ಪ್ರತಿಜ್ಞಾಂ ರಕ್ಷತಾ। ಭೀಮೇನ ರಿಪೋಃ = ದುರ್ಯೋಧನಸ್ಯ ಊರೂ ಭೇತ್ತವ್ಯೌ। ಜನಾಃ ನಾಭೇರಧಸ್ತಾದ್ಗದನಂ ಗದಾಮೃಧೇ = ಗದಾಯುದ್ಧೇ ಅಧರ್ಮ ಇತ್ಯಾಹುಃ। ತತ್ = ಉಕ್ತರೀತ್ಯಾ ಉಭಯಥಾऽಪ್ಯನುಪಪತ್ತೇಃ ಪ್ರಾಪ್ತತ್ವಾತ್ ಕೃಷ್ಣಃ ಲೋಕನಿಂದಾನಿವೃತ್ತಯೇ = ಭೀಮೋऽನುಚಿತಂ ಕೃತವಾನಿತಿ ಲೋಕನಿಂದಾನಿವೃತ್ತಯೇ, ಆಪದ್ಧರ್ಮಂ ದರ್ಶಯಿತುಂ = ಪ್ರತಿಜ್ಞಾತಸ್ಯಾಕರಣೇऽಪಿ ನೃಪಸ್ಯಾಧರ್ಮಃ। ಗದಾಯುದ್ಧಧರ್ಮಾತಿಕ್ರಮಣೇऽಪ್ಯಧರ್ಮ ಇತ್ಯುಭಯಥಾऽಪಿ ಧರ್ಮಾತಿಕ್ರಮರೂಪಾಪದಿ ಪ್ರಾಪ್ತಾಯಾಂ ಯೋ ಧರ್ಮಃ = ಅಲ್ಪಧರ್ಮಂ ಸೋಢ್ವಾऽಪಿ ಮಹಾನ್ ಧರ್ಮ ಏವ ಪರಿರಕ್ಷಣೀಯ ಇತಿ ಧರ್ಮಃ। ತಂ ದರ್ಶಯಿತುಮಿತ್ಯರ್ಥಃ। ಯಥಾ ವ್ಯಾಘ್ರೇಣ ಗೋವಧೇ ಕ್ರಿಯಮಾಣೇ ಶಕ್ತಸ್ಯ ಕ್ಷತ್ರಿಯಸ್ಯ ತದುಪೇಕ್ಷಾಯಾಮಪ್ಯಧರ್ಮಃ। ''ನ ಹಿಂಸ್ಯಾತ್'' ಇತಿ ಶ್ರುತೇಃ ವ್ಯಾಘ್ರವಧೋऽಪ್ಯಧರ್ಮಃ। ಏವಮುಭಯಥಾऽಪಿ ಅಧರ್ಮೇ ಪ್ರಾಪ್ತೇ ಸತಿ ''ಮೋದೇತ ಸಾಧುರಪಿ ವೃಶ್ಚಿಕಸರ್ಪಹತ್ಯಾ'' ಇತಿ ವಚನೇನ ದುಷ್ಟವಧರೂಪತ್ವಾದಲ್ಪೀಯಾಂಸಂವ್ಯಾಘ್ರವಧರೂಪಮಧರ್ಮಂ ಸೋಢ್ವಾऽಪಿ ವ್ಯಾಘ್ರಂ ಹತ್ವಾ ಕ್ರತ್ವಂಗದುಗ್ಧದೋಗ್ಧ್ರೀಗೋರಕ್ಷಣರೂಪಧರ್ಮ ಏವ ಕ್ಷತ್ರಿಯೇಣ ರಕ್ಷಣೀಯಃ। ತಥಾ ದುಷ್ಟದುರ್ಯೋಧನವಧಾಯ ಗದಾಯುದ್ಧಧರ್ಮಾತಿಕ್ರಮರೂಪಮಲ್ಪಮಧರ್ಮಂ ಸೋಢ್ವಾऽಪಿ ''ಸತ್ಯಂ ವದೇ'' ದಿತಿ ಶ್ರುತಿವಿಹಿತಸತ್ಯತ್ಯಾಗ- ರೂಪಃ ಸ್ವಪ್ರತಿಜ್ಞೋಲ್ಲಂಘನಾಖ್ಯೋ ಮಹಾನಧರ್ಮ ಏವ ಪರಿಹರಣೀಯಃ। ಕಥಮನ್ಯಥಾ ಸ್ವೋಕ್ತಸತ್ಯಪರಿರಕ್ಷಣಾಯ ತ್ರಯೋದಶವರ್ಷಪರ್ಯಂತಂ ರಾಜ್ಯತ್ಯಾಗೋ ಧರ್ಮರಾಜಸ್ಯೇತಿ ಹೇತೋಃ ಕಿಂಚಿದ್ವ್ಯಾಜೇನ = ಅಲ್ಪಧರ್ಮಾತಿಕ್ರಮಾಖ್ಯೇನಾಲ್ಪೇನ ವ್ಯಾಜೇನ ಅಲ್ಪಧರ್ಮಪ್ರತಿಪಾದಕ-ಸತ್ಯವಾಕ್ಯತ್ಯಾಗರೂಪತ್ವಾತ್ ವ್ಯಾಜವತ್ ವರ್ತಮಾನೇನ ಈಷದಧರ್ಮಮಣೇತ್ಯರ್ಥಃ। ತೇನ ಸಂಯುತೋ ಭೀಮಃ ಧಾರ್ತರಾಷ್ಟ್ರಂ ಹನ್ಯಾದಿತ್ಯೂಚೇ। ಯದ್ಯಪ್ಯಸೌ ಭೀಮಃ ಸ್ಫುಟಂ= ಅವ್ಯಾಜೇನ ನಾಭೇರುಪರಿ ತಾಡನೇ ಶಕ್ತಃ= ಹನನೇ ಶಕ್ತಃ। ತಥಾऽಪಿ ಪ್ರಬಲಪ್ರತಿಜ್ಞಾರಕ್ಷಣಾಖ್ಯಧರ್ಮಪರಿಪಾಲನಾಯ ಊರೂ ಭೀಮೇನ ಭೇತ್ತವ್ಯಾವಿತಿ ಪೂರ್ವೇಣಾನ್ವಯಃ ॥ – (ವಾ.)

೬೩. ಬ್ರೂಇಸೋ ವ್ಯಕ್ತವಾಗರ್ಥಕತ್ವಾದ್ವ್ಯಕ್ತಪ್ರಶಂಸಾರೂಪಮವದದಿತ್ಯರ್ಥಃ। – (ಜ.)

೬೫. ಅಶಕ್ತಿಃ ಕುತೋ ನೇತ್ಯತ ಆಹ ಬಲಮಿತಿ। ದುರ್ಯೋಧನಾದಪ್ಯಧಿಕಬಲಂ ಜರಾಸಂಧಮಮರ್ಮಣಿ ಭೇತ್ತುಃ ಬಹ್ವಕ್ಷೌಹಿಣೀವಿಕ್ಷೋಭಣಸಮರ್ಥಸ್ಯ ಭೀಮಸ್ಯ ನಿಸ್ಸೀಮಂ ಬಲಂ ಆಹ ಚ= ಕೃಷ್ಣ ಏವ ಉಕ್ತವಾನ್। ಅತೋ ನಾಶಕ್ತತ್ವಾದೇವಂ ಚಕ್ರೇ ಇತಿ ಭಾವಃ ॥ – (ವಾ.)

ಅ: ಪ್ರತಿಜ್ಞೆಯನ್ನು ಪಾಲಿಸಲೆಂದು ಭೀಮಸೇನ ಈ ಶತ್ರುವಾದ ದುರ್ಯೋಧನನ ತೊಡೆಗಳನ್ನು ಮುರಿಯಲೇಬೇಕಿದೆ. ಆದರೆ, ಗದಾಯುದ್ಧದಲ್ಲಿ ನಾಭಿಯ ಕೆಳಗೆ ಹೊಡೆಯುವುದನ್ನು ತಿಳಿದವರು ಅಧರ್ಮ ಎನ್ನುವರು ಎಂಬ ಕಾರಣದಿಂದಾಗಿ ಕೃಷ್ಣ ಲೋಕನಿಂದೆಯನ್ನು ಪರಿಹರಿಸಲೆಂದು, ಆಪದ್ಧರ್ಮವನ್ನು ತಿಳಿಸಲೆಂದು ಯಾವುದೋ ನೆಪದಿಂದ ಭೀಮ ದುರ್ಯೋಧನನನ್ನು ಕೊಲ್ಲುವನು ಎಂದ. ಆದರೆ, ಭೀಮಸೇನ ಅತ್ಯಂತ ಖಚಿತವಾಗಿ ಯಾವುದೇ ನೆಪವೂ ಇಲ್ಲದೇ ದುರ್ಯೋಧನನನ್ನು ಕೊಲ್ಲಬಲ್ಲ ಎಂದು ತಿಳಿಸಲು ಭೀಮನ ಬಲವನ್ನು ನಿಸ್ಸೀಮ ಎಂದೇ ಹೇಳಿದ.

ಎ : ೧) ಮಹಾಭಾರತದಲ್ಲಿ ಕೃಷ್ಣನ ಮಾತು ಹೀಗಿದೆ (ಶಲ್ಯಪರ್ವ ೫೮/೪):

'ಭೀಮಸೇನಸ್ತು ಧರ್ಮೇಣ ಯುದ್ಧ್ಯಮಾನೋ ನ ಜೇಷ್ಯತಿ ।
ಅನ್ಯಾಯೇನ ತು ಯುದ್ಧ್ಯನ್ ವೈ ಹನ್ಯಾದೇವ ಸುಯೋಧನಮ್ ॥

ಮೇಲ್ನೋಟಕ್ಕೆ ಈ ಮಾತಿನ ಅರ್ಥ ನ್ಯಾಯವಾಗಿ ಯುದ್ಧ ಮಾಡಿದಲ್ಲಿ ಭೀಮನಿಗೆ ದುರ್ಯೋಧನನನ್ನು ಗೆಲ್ಲಲು ಸಾಧ್ಯವಾಗದು; ಅನ್ಯಾಯದಿಂದಲೇ ಕೊಲ್ಲಬೇಕಾಗುವುದು ಎಂದಾಗುವುದು. ವಸ್ತುಸ್ಥಿತಿ ಹಾಗಲ್ಲ, ಭೀಮಸೇನ ದುರ್ಯೋಧನನನ್ನು ಧರ್ಮದಿಂದ ಕೊಲ್ಲುವ ವಿಚಾರವನ್ನು ಮಾಡಿಯೇ ಇಲ್ಲ, ಪರಮ ಪಾಪಿಯಾದ ಅವನನ್ನು ಧರ್ಮದಿಂದ ಕೊಲ್ಲುವುದನ್ನು ಶಾಸ್ತ್ರ ಒಪ್ಪುವುದೂ ಇಲ್ಲ, ಆದ್ದರಿಂದ ಅಧರ್ಮಿಷ್ಠನಾದ ದುರ್ಯೋಧನನನ್ನು ಭೀಮಸೇನ ಅಧರ್ಮದಿಂದಲೇ ಕೊಲ್ಲುವನು, ಧರ್ಮ ಯುದ್ಧ ಮಾಡುತ್ತಾ ಅಲ್ಲ ಎಂದು ಅದರ ಭಾವ.

೨) ಭೀಮಸೇನ ಗದೆಯಿಂದ ತೊಡೆ ಮುರಿದು ಕೊಲ್ಲುವುದಾಗಿ ಪ್ರತಿಜ್ಞೆ ಮಾಡಿರುವುದರ ಹಿನ್ನೆಲೆ ಅದೇ ಆಗಿದೆ. ಕೃಷ್ಣ ತಿಳಿಸುತ್ತಿರುವುದೂ ಇದನ್ನೇ ಹೊರತು ಧರ್ಮದಿಂದ ಯುದ್ಧ ಮಾಡಿದಲ್ಲಿ ಭೀಮಸೇನನಿಗೆ ದುರ್ಯೋಧನನನ್ನು ಗೆಲ್ಲಲಾಗುವುದಿಲ್ಲ ಎಂಬ ಅರ್ಥದಲ್ಲಿ ಸರ್ವಥಾ ಅಲ್ಲ.

೩) ಅದರಂತೆ ಭೀಮ ಬಲಿಷ್ಠ, ದುರ್ಯೋಧನ ಹೆಚ್ಚು ಪ್ರಯತ್ನಶೀಲ ಎಂಬ ಮಾತಿನ ಅರ್ಥವೂ ಹೀಗೆಯೇ ಎಂದು ತಿಳಿಯಬೇಕು. ಭೀಮ ಸ್ವಭಾವತಃ ಬಲಿಷ್ಠನಾದ್ದರಿಂದ ಪ್ರಯತ್ನ ಅಗತ್ಯವಿಲ್ಲ, ದುರ್ಯೋಧನ ಹೆಚ್ಚು ಪ್ರಯತ್ನಶೀಲನೇ ಹೊರತು ಇವನಷ್ಟು ಬಲಿಷ್ಠನಲ್ಲ, ಮೇಲ್ನೋಟಕ್ಕೆ ಪ್ರಯತ್ನಶೀಲನೇ ಮಿಗಿಲು ಎಂದು ಲೋಕದ ನ್ಯಾಯ. ಆದರೆ, ಭೀಮನ ಬಲ ಅತ್ಯಂತ ಉನ್ನತವಾದ್ದರಿಂದ ಯಾವ ಪ್ರಯತ್ನವೂ ಅವನನ್ನು ಸೋಲಿಸಲು ಅಶಕ್ಯ ಎಂದು ಭಾವ. ಕೃಷ್ಣ ಈ ಮಾತುಗಳನ್ನು ಮುಂಚಿತವಾಗಿಯೇ ತಿಳಿಸುವ ಮೂಲಕ ಭೀಮಸೇನ ಅಧರ್ಮ ಮಾಡಿದ ಎಂದು ಶಂಕಿಸುವ ಜನಕ್ಕೆ ಉತ್ತರವನ್ನು ನೀಡಿದ ಎಂದು ತಿಳಿಯಬೇಕು.

ಆಹ ಶಿಕ್ಷಾಮಪ್ಯನೂನಾಂ ಯತ್ನಂ ದುರ್ಯೋಧನೇಽಧಿಕಮ್ ।
ನ ಹಿ ಭೀಮೋಽತಿಪ್ರಯತ್ನಂ ಕುರ್ಯಾದಿತಿ ಗುಣೋ ಹ್ಯಯಮ್ ॥ ೬೬ ॥

ಅ: ಭೀಮನಲ್ಲಿ ಗದಾವಿದ್ಯೆಯ ಅಭ್ಯಾಸವೂ ಪೂರ್ಣವಾಗಿಯೇ ಇದೆ. ದುರ್ಯೋಧನನಲ್ಲಿ ಪ್ರಯತ್ನ ಅಧಿಕವಾಗಿದೆ. ಭೀಮನು ತುಂಬಾ ಸಮರ್ಥನಾದ್ದರಿಂದ ಹೆಚ್ಚು ಪ್ರಯತ್ನ ಮಾಡುವುದಿಲ್ಲ ಎಂಬುದು ಗುಣವೇ ಹೊರತು ದೋಷವಲ್ಲ.

ವಿ: ಭೀಮ ಹೆಚ್ಚು ಪ್ರಯತ್ನಶೀಲನಲ್ಲ ಎಂಬುದು ಮಹಾಭಾರತ ವಾಕ್ಯದ ಮೇಲ್ನೋಟದ ಅರ್ಥ. ಆದರೆ, ಭೀಮ ಸರ್ವಸಮರ್ಥನಾದ್ದರಿಂದ ಹೆಚ್ಚು ಪ್ರಯತ್ನ ಮಾಡುವ ಅವಶ್ಯಕತೆಯೇ ಅವನಿಗಿಲ್ಲ ಎಂಬುದು ಅಂತರಾರ್ಥ. ದುರ್ಯೋಧನ ಹೆಚ್ಚು ಪ್ರಯತ್ನ ಮಾಡುತ್ತಿರುವುದು ನಿಜವಾದರೂ ಅವನಿಗೆ ಭೀಮನ ಮೇಲೆ ಜಯ ಸಾಧಿಸುವುದು ಅಸಾಧ್ಯ ಎಂಬುದು ಮಥಿತಾರ್ಥ.

ಪ್ರತಿಜ್ಞಾಪಾಲನಂ ಧರ್ಮೋ ದುಷ್ಟೇಷು ತು ವಿಶೇಷತಃ ।
ಇತಿ ಧರ್ಮರಹಸ್ಯಂ ತು ವಿತ್ತಃ ಕೃಷ್ಣವೃಕೋದರೌ ॥ ೬೭ ॥

ನಾನ್ಯಸ್ತತೋ ಲೋಕನಿಂದಾಂ ವ್ಯಪನೇತುಮುಭಾವಪಿ ।
ಅನಾಪದ್ಯಾಪದಿವ ಚ ದರ್ಶಯೇತಾಂ ಜನಸ್ಯ ತು ॥ ೬೮ ॥

ಅ: ಪ್ರತಿಜ್ಞಾಪಾಲನೆ ಧರ್ಮ, ಅದರಲ್ಲಿಯೂ ದುಷ್ಟರಲ್ಲಿ ಪ್ರತಿಜ್ಞಾಪಾಲನೆ ವಿಶೇಷವಾದ ಧರ್ಮ ಎಂಬ ಧರ್ಮರಹಸ್ಯವನ್ನು ಕೃಷ್ಣ ಭೀಮರು ಬಲ್ಲರು, ಇತರರಲ್ಲ. ಆದ್ದರಿಂದ ಲೋಕನಿಂದೆಯನ್ನು ಪರಿಹರಿಸಲೆಂದು ಅವರಿಬ್ಬರೂ ಆಪತ್ತು ಇಲ್ಲದಿದ್ದಾಗಲೂ ಆಪತ್ತು ಇರುವಂತೆ ಜನರಿಗೆ ತೋರಿಕೊಳ್ಳುವರು.

---

೬೬. ತರ್ಹಿ ಧಾರ್ತರಾಷ್ಟ್ರಃ ಕೃತೀ ಚೇತಿ ಕೃಷ್ಣೇನೈವೋಕ್ತತ್ವಾತ್ ಭೀಮಸೇನಸ್ಯ ಶಿಕ್ಷಾಕೌಶಲಂ ನಾಸ್ತೀತಿ ದೋಷಃ ಪ್ರಾಪ್ನುಯಾದಿತ್ಯತಃ ಕೃಷ್ಣವಾಕ್ಯಾಭಿಪ್ರಾಯಮಾಹ ಆಹ ಶಿಕ್ಷಾಮಪೀತಿ। ಅನೂನಾಂ ಶಿಕ್ಷಾಮಪ್ಯಾಹ। ದುರ್ಯೋಧನಗುರೋಃ ರಾಮಾತ್ ಗದಾಪಾಣೇಃ ಸ್ವಸ್ಮಾಚ್ಚ ಯಸ್ಯ ಭೀಮಸ್ಯ ಗದಾಭ್ಯಾಸಃ ತಸ್ಯ ಗದಾಭ್ಯಾಸಕೌಶಲಾಭಾವಂ ಕೃಷ್ಣ ಏವ ಕಥಂ ಬ್ರೂಯಾದಿತಿ ಭಾವಃ। ಅತ ಏವ ಅನೂನಾಮಿತಿ ಶಿಕ್ಷಾಯಾಃ ವಿಶೇಷಣಮ್। ಅತಃ ಧಾರ್ತರಾಷ್ಟ್ರಃ ಕೃತೀ ಕುಶಲಃ ನ ಭೀಮ ಇತಿ ತದ್ವಾಕ್ಯಸ್ಯಾಭಿಪ್ರಾಯೋ ನೇತಿ ಭಾವಃ। ತರ್ಹಿ ಕೋಽರ್ಥಃ ಕೃತಿಪದಸ್ಯೇತ್ಯತ ಆಹ ಯತ್ನಮಿತಿ। 'ಕೃತೀ ಪ್ರಯತ್ನೇ' ಇತಿ ಧಾತೋಃ ಯತ್ನಂ = ದುರ್ಯೋಧನೇ ಅಧಿಕಯತ್ನಂ ಚಾಹ= ಕೃತಿಪದೇನ ಪ್ರಾಹ। ನ ತು ಕೌಶಲಮ್। ತರ್ಹಿ ಯತ್ನಾಭಾವ ಏವ ಭೀಮಸ್ಯ ದೋಷಃ ಸ್ಯಾದಿತ್ಯತ ಆಹ ನಹೀತಿ। ಅತಿಪ್ರಯತ್ನಂ= ಅಲ್ಪೇ ಕಾರ್ಯೇ ಮಹಾಪ್ರಯತ್ನಂ ನ ಕುರ್ಯಾದಿತಿ ಅಯಂ ಸ್ವಭಾವಃ ಭೀಮಸ್ಯ ಗುಣೋ ಹಿ। ಹಿ ಶಬ್ದೇನ ಪ್ರಬಲಃ ಸಿಂಹಃ ದುರ್ಬಲಮೂಷಿಕವಧಾಯ ಸ್ವಕಠೋರನಖರೈಃ ನ ಪ್ರಯತತ ಇತಿ ಪ್ರಸಿದ್ಧಿಂ ಸೂಚಯತಿ ॥ –(ವಾ.)

ಭೀಮನಿಂದ ಊರುಭಂಗ ಪ್ರತಿಜ್ಞೆ

ತತೋ ಭೀಮಃ ಸರ್ವಲೋಕಸ್ಯ ಧರ್ಮಂ
ಪ್ರಕಾಶಯನ್ ವಾಕ್ಯಮಿದಂ ಜಗಾದ ।
ಊರೂ ತವಾಹಂ ಹಿ ಯಥಾ ಪ್ರತಿಜ್ಞಾ
ಭೇತ್ಸ್ಯಾಮಿ ನೈವಾತ್ರ ವಿಚಾರಣೀಯಮ್ ॥ ೬೯ ॥

ಅ: ಬಳಿಕ ಭೀಮ ಸರ್ವಲೋಕಕ್ಕೂ ಧರ್ಮವನ್ನು ತಿಳಿಸಿಕೊಡಲೆಂದು ಈ ಮಾತನ್ನು ನುಡಿದ : 'ನಾನು ನಿನ್ನ ಎರಡು ತೊಡೆಗಳನ್ನೂ ಪ್ರತಿಜ್ಞೆ ಮಾಡಿರುವಂತೆ ಮುರಿದು ಹಾಕುವೆ; ಈ ಬಗ್ಗೆ ಸಂಶಯವೇ ಬೇಡ'.

ವಿ: ಭೀಮು ಹೀಗೆ ತಿಳಿಸಿಯೇ ಯುದ್ಧವನ್ನು ಪ್ರಾರಂಭಿಸುತ್ತಿರುವುದರಿಂದ ಮುಂದೆ ಬೇರೆ ಮಾರ್ಗ ಕಾಣದೇ ತೊಡೆಗೆ ಹೊಡೆದು ಕೊಂದನೆಂದು ಜನ ಆರೋಪಿಸಲು ಸರ್ವಥಾ ಸಾಧ್ಯ–ವಾಗದು ಎಂದರ್ಥ.

ಭೀಮ ದುರ್ಯೋಧನರ ಗದಾಯುದ್ಧ

ಇತ್ಯುಕ್ತವಂತಂ ಪ್ರಸಸಾರ ಚಾಜೌ
ದುರ್ಯೋಧನಸ್ತತ್ರ ಬಭೂವ ಯುದ್ಧಮ್ ।
ಭೀಮಸ್ತದಾऽಗ್ರ್ಯಪ್ರಕೃತಿಂ ವಿಧಿತ್ಸು-
ರ್ಮಂದಃ ಸ ಆಜೌ ವ್ಯಚರಜ್ಜನಾರ್ದೇ ॥ ೭೦ ॥

---

೬೬. ಅತಿಪ್ರಯತ್ನಾಭಾವೋऽಪಿ ಭೀಮಸ್ಯ ನ ದುರ್ಬಲತ್ವಾಪಾದಕಃ ಕಿಂತು ಗುಣಾಪಾದಕ ಏವ। ಪ್ರತ್ಯುತ ದುರ್ಯೋಧನಸ್ಯಾಧಿಕಪ್ರಯತ್ನೋ ದುರ್ಬಲತ್ವಾಪಾದಕ ಇತ್ಯಾಹ। – (ಜ.)

೬೭. ನನು ಶಕ್ತಶ್ಚೇತ್ ಕುತೋ ವ್ಯಾಜೇನ ಹನನಮಿತ್ಯತಃ ಕೃಷ್ಣಭೀಮಯೋರಭಸಂಧಿಮುದ್ಭಾವಯತಿ ಗ್ರಂಥಕಾರಃ ಪ್ರತಿಜ್ಞಾಪಾಲನಮಿತಿ ॥ – (ವಾ.)

೬೮. ಅನಾಪದಿ= ಉಕ್ತವಿಧಯಾ ವಿಚಾರ್ಯಮಾಣೇ ಆಪದಭಾವೇऽಪಿ ಆಪದಿವ ಆಪಾತತಃ ಆಪದಿವೇತ್ಯರ್ಥಃ। ದರ್ಶಯೇತಾಂ= ಕಿಂಚಿದ್ವ್ಯಾ ಕ್ಯಜೇನ ಸಂಯುತಃ ಹನ್ಯಾದಿತಿ ದರ್ಶಯೇತಾಮ್। ಕೃಷ್ಣವಾಕ್ಯಂ ಭೀಮಸ್ಯಾಭಮತಮಿತಿ ಸೂಚನಾಯ ದರ್ಶಯೇತಾಮಿತ್ಯುಕ್ತಮ್। ಯದ್ವಾ ಏಕಃ ವಚಸಾ ದರ್ಶಿತವಾನ್ ಅಪರಃ ಕರ್ಮಣಾ ದರ್ಶಯಿಷ್ಯತೀತಿ ಭಾವೇನ ದರ್ಶಯೇತಾಮಿತ್ಯುಕ್ತಮ್ ॥ – (ವಾ.)

೬೮. ನನೂಕ್ತಧರ್ಮದ್ವಯೇ ಪ್ರತಿಜ್ಞಾಪಾಲನಸ್ಯ ಬಲವತ್ತ್ವಾತ್ ಅತುಲ್ಯಬಲತಯಾ ವಿರೋಧ ಏವ ನಾಸ್ತೀತ್ಯಾಶಂಕ್ಯಾಹ । ಅನಾಪದೀತಿ । ಧರ್ಮದ್ವಯರೂಪಾಪದಭಾವೇऽಪಿ ಲೋಕನಿಂದಾಮಪನೇತುಂ ಲೋಕಪ್ರಸಿದ್ಧಾऽಪದಿವೇತಿ ಜನಸ್ಯ ದರ್ಶಯೇತಾಮ್। – (ಜ.)

ಅ: ಭೀಮ ಹೀಗೆ ಹೇಳಲು ದುರ್ಯೋಧನ ಅವನ ಮೇಲೆ ಯುದ್ಧಕ್ಕೆ ತೊಡಗಿದ. ಆಗ ಯುದ್ಧ ನಡೆಯತೊಡಗಿತು. ಭೀಮ ಜನರಿಗಾಗಿ ಮಹಾತ್ಮರ ಸ್ವಭಾವವನ್ನು ತೋರಬಯಸಿ-ದವನಾಗಿ ಮೊದಲಿಗೆ ಯುದ್ಧದಲ್ಲಿ ಮೃದುವಾಗಿ ಹೋರಾಡಿದ.

ಏ: ಯುದ್ಧ ಮೊದಲಾದವುಗಳಲ್ಲಿ ದೊಡ್ಡ ಜನರು ಆರಂಭದಲ್ಲೇ ಹೆಚ್ಚು ವೇಗವನ್ನು ತೋರದೇ ಮೊದಲಿಗೆ ಹಂಸದಂತೆ ಮಂದಗತಿಯಲ್ಲಿ ಪ್ರಾರಂಭಿಸಿ ಮುಂದೆ ದೊಡ್ಡ ಪ್ರಮಾಣದಲ್ಲಿ ಹೋರಾಡುವರು. ಆರಂಭದಲ್ಲೇ ಹೆಚ್ಚು ವೇಗವನ್ನು ತೋರುವುದು ವಿವೇಕದ ಲಕ್ಷಣವಲ್ಲ ಎಂದು ಲೋಕನೀತಿ. ಅದನ್ನು ತೋರಿಸಿಕೊಡಲೆಂದು ಭೀಮ ಮೊದಲಿಗೆ ಮಂದಗತಿಯಲ್ಲಿ ಯುದ್ಧ ಮಾಡಿದ ಎಂದರ್ಥ.

ಬಲರಾಮನ ಆಗಮನ

ದರ್ಶಯಂತೌ ಗದಾಮಾರ್ಗಂ ಚಿತ್ರಂ ತೌ ಪ್ರವಿಚೇರತುಃ ।
ಬಲಭದ್ರೋಽಪ್ಯಾಜಗಾಮ ತದಾ ತೌ ಪ್ರತಿವಾರಿತುಮ್ ॥ ೭೧ ॥

ಅ: ಅವರಿಬ್ಬರು ಗದಾಯುದ್ಧದ ಬಗೆಗಳನ್ನು ತೋರುತ್ತಾ ಆಶ್ಚರ್ಯಹುಟ್ಟಿಸುವಂತೆ ಕಾದ-ತೊಡಗಿದರು, ಆ ವೇಳೆಗೆ ಬಲರಾಮ ಅಲ್ಲಿಗೆ ಆಗಮಿಸಿದ. ಅವರನ್ನು ತಡೆಯಲು ಪ್ರಯತ್ನಿಸಿದ.

---

೭೦. ಮಂದಃ ಅಗ್ರ್ಯಃ ಆಜೌ ವ್ಯಚರತ್ । – (ವೇ.)

೭೦. ತದಾऽಗ್ರ್ಯಪ್ರಕೃತಿಮಿತ್ಯತ್ರ ಅಗ್ರ್ಯಪ್ರಕೃತಿಂ= ಮಹತಾಂ ಸ್ವಭಾವಮಿತ್ಯರ್ಥಃ। ಮಹಾಂತೋ ಹಿ ಹಂಸವಚ್ಛನೈಃ ಶನೈಃ ಕಾರ್ಯಂ ಕುರ್ವಂತಿ। ನೀಚಾಸ್ತು ಕಾಕವದಾದೌ ಕಿಂಚಿತ್ಕಾಲಪರ್ಯಂತಂ ತ್ವರಯಾ ಕಾರ್ಯಂ ಕುರ್ವಂತೀತಿ ಭಾವಃ। ಜನಾರ್ಥೇ= ಜನಶಿಕ್ಷಣಾರ್ಥಮ್ ॥ – (ವಾ.)

೭೦. ಪ್ರಥಮತೋ ಮಂದಮೇವ ಪ್ರವರ್ತವ್ಯಮಿತಿ ಶಿಷ್ಟಜನಸ್ವಭಾವದರ್ಶನಾರ್ಥಂ ಶನೈರೇವ ಗದಾಂ ವಿಚಚಾರೇತಿ ॥ – (ವ.)

೭೦. ತದಾ ಜನಾರ್ಥೇ ಸಜ್ಜನೋದ್ಧಾರಾರ್ಥಂ ಅಗ್ರ್ಯಪ್ರಕೃತಿಂ ಉತ್ತಮಾನಾಂ ಸ್ವಭಾವಂ ಉತ್ತಮಾ ಹಿ ಕಾರ್ಯಾರಂಭಸಮಯೇ ಅಲ್ಪಪ್ರಯತ್ನಂ ಕುರ್ವಂತಿ ಅನಂತರಂ ಕ್ರಮೇಣ ಮಹಾಪ್ರಯತ್ನಂ ಕೃತ್ವಾऽऽರಬ್ಧಕಾರ್ಯ-ನಿರ್ವಾಹಂ ಕುರ್ವಂತಿ ಏವಂ ಭೂತಂ ಉತ್ತಮಾನಾಂ ಸ್ವಭಾವಂ ವಿಧಿತ್ಸುಃ ಪ್ರದರ್ಶಯಿತುಮಿಚ್ಛುಃ । ಧಾತೂನಾಮನೇಕಾರ್ಥತ್ವಾತ್ । ಭೀಮಃ ಆಜೌ ಯುದ್ಧೇ ಮಂದಃ ಮಂದಪ್ರಯತ್ನಃ ಸನ್ ವ್ಯಚರದಿತಿ ॥ – (ಸ.)

೭೦. ಉತ್ತಮಾ ಹಿ ಆರಂಭಕಾಲೇ ಅಲ್ಪಮೇವ ಕೃತ್ವೋತ್ತರೋತ್ತರಂ ಬಹುತರಂ ಕುರ್ವಂತೀತಿ ಭಾವಃ। ಮಂದಸ್ಥಿರಃ ಆಜೌ ವ್ಯಚರತ್ ಮಂದಸ್ಥಿರಃ ಆಜೌ ವ್ಯಚರತ್। ಆದೌ ಶನೈರಯುಧ್ಯದಿತಿ ಭಾವಃ। – (ಜ.)

೭೧. ತತಸ್ತಾಲಧ್ವಜೋ ರಾಮಸ್ತಯೋರ್ಯುದ್ಧ ಉಪಸ್ಥಿತೇ ।
ಶ್ರುತ್ವಾ ತಚ್ಛಿಷ್ಯಯೋ ರಾಜನ್ನಾಜಗಾಮ ಹಲಾಯುಧಃ ॥ - ಭಾರತ (ಶಲ್ಯ. ೩೪/೨)

ಎ: ಕುರುಪಾಂಡವರ ಯುದ್ಧದ ಸಮಯದಲ್ಲಿ ಈ ಮೊದಲೇ ತಿಳಿಸಿದಂತೆ ಬಲರಾಮ ತೀರ್ಥಯಾತ್ರೆಯನ್ನು ಕೈಕೊಂಡಿದ್ದ. ಹಾಗೆ ತೀರ್ಥಗಳನ್ನು ಸಂಚರಿಸುತ್ತಿದ್ದಾಗ ಭೀಮದುರ್ಯೋ-ಧನರ ಯುದ್ಧ ನಡೆದಿರುವ ವಾರ್ತೆಯನ್ನು ನಾರದರಿಂದ ಕೇಳಿ ಅದನ್ನು ನಿಲ್ಲಿಸಬೇಕೆಂದು ಬಲರಾಮ ಅಲ್ಲಿಗೆ ಆಗಮಿಸಿದ. ಮಹಾಭಾರತದ ಈ ಪ್ರಸಂಗದಲ್ಲಿ ಬಲರಾಮನ ತೀರ್ಥಯಾತ್ರೆಯ ವಿವರಗಳೂ ಸಹ ನಿರೂಪಿತವಾಗಿರುವುದು ವಿಶೇಷ.

ಮುಂದುವರೆದ ಭೀಮ ದುರ್ಯೋಧನರ ಯುದ್ಧ

ವಾರಿತಾವಪಿ ತೇನೋಭೌ ನೈವ ಯುದ್ಧಮಮುಂಚತಾಮ್ ।
ತತೋ ದದರ್ಶ ತದ್ಯುದ್ಧಂ ಮಾನಿತಃ ಕೃಷ್ಣಪೂರ್ವಕೈಃ ॥ ೭೨ ॥

ಅ: ಬಲರಾಮ ತಡೆದರೂ ಭೀಮ ದುರ್ಯೋಧನರು ಯುದ್ಧವನ್ನು ತೊರೆಯಲಿಲ್ಲ. ಬಳಿಕ ಕೃಷ್ಣ ಮೊದಲಾದವರಿಂದ ಆದೃತನಾಗಿ ಬಲರಾಮ ಆ ಯುದ್ಧವನ್ನು ನೋಡತೊಡಗಿದ.

ವಿ: ೧) ಭೀಮ, ದುರ್ಯೋಧನರ ಯುದ್ಧವನ್ನು ತಡೆಯಲು ಬಲರಾಮ ಪ್ರಯತ್ನಿಸಲು, ಅವರಿಬ್ಬರು ಗದಾಯುದ್ಧದಲ್ಲಿ ತನ್ನ ಶಿಷ್ಯರು ಎಂಬ ಭಾವನೆ ಕಾರಣವಾಗಿತ್ತು. ಭೀಮ ಬಲರಾಮ-ನಲ್ಲಿ ಲೋಕಶಿಕ್ಷಣಕ್ಕೆಂದು ಅಧ್ಯಯನ ಮಾಡಿದಂತೆ ನಡೆದುಕೊಂಡಿದ್ದ. ದುರ್ಯೋಧನ ನಾಲ್ಕು ವರ್ಷಗಳಷ್ಟು ದೀರ್ಘಕಾಲ ಬಲರಾಮನಲ್ಲಿ ಗದಾಯುದ್ಧವನ್ನು ಓದಿಯೇ ಇದ್ದ. ಆದರೆ, ಅವರಿಬ್ಬರೂ ಬಲರಾಮನ ಮಾತನ್ನು ಕೇಳಲಿಲ್ಲ.

೨) ನಿಜವಾದ ಅರ್ಥದಲ್ಲಿ ಬಲರಾಮ ಗುರುವಾಗಿದ್ದಿಲ್ಲವಾದ್ದರಿಂದ ಭೀಮನಿಗೆ ಬಲರಾಮನ ಮಾತನ್ನು ಕೇಳದಿದ್ದದ್ದು ದೋಷವಾಗಲಿಲ್ಲ. ನಿಜವಾದ ಗುರುಗಳು ಹೇಳಿದರೂ ಸಹ ಧರ್ಮ ವಿರುದ್ಧವಾದ ಮಾತನ್ನು ಕೇಳಬೇಕಿಲ್ಲ ಎಂಬುದೇ ಭಾಗವತದ ವಾಕ್ಯ :

ಗುರೂಕ್ತಮಪಿ ನ ಗ್ರಾಹ್ಯಂ ಯದನರ್ಥೇಽನರ್ಥಕಲ್ಪನಮ್।–ಭಾಗವತ(೭/೬/೨)

೩) ಆದರೆ, ಬಲರಾಮ ದುರ್ಯೋಧನನಿಗೆ ನಿಜವಾಗಿಯೂ ಗುರುವೆ. ಜೊತೆಗೆ ಹೇಳಿದ್ದು ಬೇರೆ ಅತ್ಯಂತ ಧಾರ್ಮಿಕವಾದ ಹಿತನುಡಿಯನ್ನು. ಆದರೂ ದುರ್ಯೋಧನ ಕೇಳಲಿಲ್ಲ ಎಂಬುದು ಅವನ ಗುರುದ್ರೋಹಕ್ಕೆ ಕಾರಣವಾಯಿತು. ಹೀಗೆ ದ್ರೋಹಗಳ ಪರಂಪರೆಯನ್ನೇ ಹೊಂದಿದ್ದು ದುರ್ಯೋಧನನ ಮಹಾತಾಮಸ ಪ್ರವೃತ್ತಿಗೆ ನಿದರ್ಶನ.

---

೭೨. ತಂ ದೃಷ್ಟ್ವಾ ಪರಮಪ್ರೀತಾಃ ಪಾಂಡವಾಃ ಸಹ ಕೇಶವಾಃ ।
ಉಪಗಮ್ಯೋಪಸಂಗೃಹ್ಯ ವಿಧಿವತ್ ಪ್ರತ್ಯಪೂಜಯನ್ ॥ - ಭಾರತ (ಶಲ್ಯ. ೩೪/೩)

ಭೀಮನಿಂದ ದುರ್ಯೋಧನನ ಊರುಭಂಗ

ತೌ ಶಿಕ್ಷಾಬಲಸಂಯುಕ್ತೌ ಮಂಡಲಾನಿ ವಿಚೇರತುಃ ।
ತತೋ ಭೀಮಂ ವಂಚಯಿತುಂ ಧಾರ್ತರಾಷ್ಟ್ರಃ ಶಿರಃ ಕ್ಷಿತೌ ।
ನ್ಯಧಾದುಚ್ಛ್ರಿತಸಕ್ಥೀಕಸ್ತದಾ ಕೃಷ್ಣಾಭ್ಯನುಜ್ಞಯಾ ॥ ೭೩ ॥

ಪೃಷ್ಠಮೂಲೇಽಹನದ್ಭೀಮೋ ಭಿನ್ನಸಕ್ಥಿಶ್ಚ ಸೋಽಪತತ್ ।
ಪ್ರತಿಜ್ಞಾಪಾಲನಾರ್ಥಾಯ ನಾಭೇರ್ಯೋಽಪರ್ಯಧಃ ತದಾ ॥ ೭೪ ॥

ಅ: ಏದ್ಯೆ ಮತ್ತು ಬಲಗಳಿಂದ ಕೂಡಿದ್ದ ಭೀಮ ದುರ್ಯೋಧನರಿಬ್ಬರೂ ಗದಾಯುದ್ಧದ ವರಸೆಗಳನ್ನು ತೋರುತ್ತಾ ಕಾದಾಡಿದರು, ಆಗ ಭೀಮನನ್ನು ಮೋಸಗೊಳಿಸಲೆಂದು ದುರ್ಯೋಧನ ತಲೆಯನ್ನು ಭೂಮಿಯತ್ತ ಮಾಡಿ ತೊಡೆಗಳನ್ನು ಮೇಲೆ ಮಾಡಿದ. ಆಗ ಕೃಷ್ಣನ ಅನುಮತಿಯಿಂದ ಭೀಮಸೇನ ಅವನ ಬೆನ್ನಿನ ಬುಡಕ್ಕೆ ಹೊಡೆದ, ನಾಭಿಯಿಂದ ಮೇಲೂ ಅಲ್ಲ ಕೆಳಗೂ ಅಲ್ಲ. ದುರ್ಯೋಧನ ತೊಡೆ ಮುರಿದು ಕೆಳಕ್ಕೆ ಬಿದ್ದ.

---

೭೩. ಭೀಮಂ ವಂಚಯಿತುಂ ಶಿರಸೋಽಧಃ ಕೃತತ್ವಾತ್ ತಸ್ಯ ನಾಭೇರಧೋಹನನೇ ಭೀಮಸ್ಯ ನ ದೋಷ ಇತಿ ಭಾವಃ। – (ವ.)

೭೪. ನಾಭೇರ್ಯೋಽಪರ್ಯಧಸ್ತದೇತ್ಯತ್ರ ನಾಭೇರುಪರ್ಯಪಿ ನ। ಅಧೋಽಪಿ ನೇತಿ ಮರ್ಯಾದಾಂ ಯಶಶ್ಚಾಭಿರಕ್ಷಿತುಂ ಮಧ್ಯೇ = ನಾಭಿಮಧ್ಯೇ ನಿಜಘ್ನೇ। ನ ತ್ವಧಸ್ತಾತ್। ಸಕ್ಥ್ನೋಽಪ್ಯೂರೋರ್ಮೂಲತ್ವಾತ್ ನಾಭಿಸಮಾನತ್ವಾಚ್ಚ ಸಕ್ಥಿನಿ ತಾಡನೇ ಸತಿ ಅಧರ್ಮೋ ನಾಭವತ್। ಪ್ರತಿಜ್ಞಾ ಚ ರಕ್ಷಿತೇತಿ ಭಾವಃ ॥ – (ವಾ.)

೭೪. ಉಚ್ಛ್ರಿತಸಕ್ಥೀಕಃ ಸಕ್ಥೀಶಬ್ದೇನ ಊರ್ವೋಃ ಕಟಿಪ್ರದೇಶಸ್ಯಸಂಧಿಃ ಸಕ್ಥ್ಯೈವಸಕ್ಥೀಕಮ್। ಉಚ್ಛ್ರಿತಂ ಊರ್ಧ್ವಂ ಕೃತಂ ಸಕ್ಥೀಕಂ ಯಸ್ಯ ಸ ತಥಾ – (ಜ.)

೭೪. ಇಯೇಷೋತ್ಪತಿತುಂ ರಾಜಂಶ್ಚಲಯಿಷ್ಯನ್ ವೃಕೋದರಮ್ ।
ಅಬುದ್ಧ್ಯದ್ಭೀಮಸೇನಸ್ತು ರಾಜ್ಞಸ್ತಸ್ಯ ಚಿಕೀರ್ಷಿತಮ್ ॥
ಅಥಾಸ್ಯ ಸಮಭಿದ್ರುತ್ಯ ಸಮುತ್ಕ್ಷಿಪ್ಯ ಚ ಸಿಂಹವತ್ ।
ಸೃತ್ಯಾ ವಂಚಯತೋ ರಾಜನ್ ಪುನರೇವೋತ್ಪತಿಷ್ಯತಃ ।
ಊರುಭ್ಯಾಂ ಪ್ರಾಹಿಣೋದ್ ರಾಜನ್ ಗದಾಂ ವೇಗೇನ ಪಾಂಡವಃ ॥
ಸಾ ವಜ್ರನಿಷ್ಪೇಷಸಮಾ ಪ್ರಹಿತಾ ಭೀಮಕರ್ಮಣಾ ।
ಊರೂ ದುರ್ಯೋಧನಸ್ಯಾಥ ಬಭಂಜ ಪ್ರಿಯದರ್ಶನೌ ॥
ಸ ಪಪಾತ ನರವ್ಯಾಘ್ರೋ ವಸುಧಾಮನುನಾದಯನ್ ॥
ಭಗ್ನೋರುರ್ಭೀಮಸೇನೇನ ಪುತ್ರಸ್ತವ ಮಹೀಪತೇ ॥ - ಭಾರತ (ಶಲ್ಯ. ೫೮/೪೪-೪೮)

ಏಃ ೧) ಒಮ್ಮೆ ಭೀಮನಿಗೆ ದುರ್ಯೋಧನ ಬಲವಾಗಿ ಹೊಡೆದಾಗ ಭೀಮನಿಗೆ ಮೂರ್ಛೆ ಉಂಟಾಯಿತೆಂದು, ದುರ್ಯೋಧನ ಆಗ ಮೂರ್ಛಿತನನ್ನು ಹೊಡೆಯುವುದು ಅಧರ್ಮವೆಂದು ಬಗೆದು ಭೀಮನನ್ನು ಹೊಡೆಯದೇ ಗದೆಯನ್ನು ಬೀಸಿ ಗಾಳಿ ಬೀಸುವಂತೆ ತೂಗಿದಂತೆ, ಅವನ ರೀತಿಯನ್ನು ಅಮರಗಣ ಕೊಂಡಾಡಿದಂತೆ ಕುಮಾರವ್ಯಾಸಭಾರತದಲ್ಲಿದೆ (ಗದಾ. ೭/೩೭–೩೯):

ತೂಗಿದವನಿಪತಿ ಗದೆಯ – (ಗದಾ. ೭/೩೭)

ಕೊಂಡಾಡಿತಮರಗಣ – (ಗದಾ. ೭/೩೮)

ಸುರಕುಲ ವರಳ ಮಳೆಗರೆದುದು ಕಣಾ ಕುರುಪತಿಯ ಸಿರಿಮುಡಿಗೆ – ಗದಾ.೭/೩೯)

ಅದು ಸಹ ಕೇವಲ ಕವಿಕಲ್ಪನೆ. ಮುಖ್ಯಪ್ರಾಣನಾದ ಭೀಮನಿಗೆ ಮೂರ್ಛೆ ಸರ್ವಥಾ ಬಾರದು. ಪ್ರಳಯಕಾಲದಲ್ಲೂ ನಿದ್ರಿಸದ ವಾಯುವಿಗೆ ಬೇರಾವ ಕಾಲದಲ್ಲೂ ನಿದ್ರಾವಸ್ಥೆ ಇಲ್ಲದಿರುವಾಗ ಮೂರ್ಛಾವಸ್ಥೆ ಎಂತು ಬಂದೀತು? ದ್ರೌಪದಿಯ ವಸ್ತ್ರಾಪಹರಣಕ್ಕೆಳಸಿದಂತಹ, ದ್ಯೂತದಂತಹ ಪರಮವಂಚನೆಯಲ್ಲಿ ತೊಡಗಿದಂತಹ, ಅಭಿಮನ್ಯುವಿನಂತಹ ಕಿರಿಯನನ್ನು ಅತ್ಯಂತಕಪಟದಿಂದ ಸಂಹರಿಸಿದಂತಹ ಮಹಾಪಾಪಿಯಾದ ದುರ್ಯೋಧನನಲ್ಲಿ ಅಂತಹ ಸಾತ್ತ್ವಿಕಪ್ರವೃತ್ತಿ ಸರ್ವಥಾ ಕಾಣಲಾಗದು ಸಹ. ಅಂಥವನು ಅಂತಹ ವಿಷಮ ಸನ್ನಿವೇಶದಲ್ಲೂ ಧರ್ಮಪ್ರಜ್ಞೆ ಮೆರೆದನೆಂದು ಹೇಳುವುದು ಅವನ ಸ್ವಭಾವಕ್ಕೆ ಸ್ವಲ್ಪವೂ ಒಪ್ಪುವಂತಹುದು ಅಲ್ಲ. ಅವನು ಭೀಮನನ್ನು ಗಾಳಿ ಹಾಕಿ ಅನುಕೂಲ ಮಾಡಿಕೊಡುವುದಂತೂ ಅತ್ಯಂತ ಅಸಂಭಾವಿತವಾದ ವಿಚಾರ. ನಿಷ್ಕಾರಣವಾಗಿ ದುರ್ಯೋಧನನ ಪಾತ್ರವನ್ನು ಉದಾತ್ತೀಕರಿಸಲೆಂದು ಕವಿ ಮಾಡಿಕೊಂಡಿರುವ ಕಲ್ಪನೆಯೆನ್ನದೇ ವಿಧಿಯಿಲ್ಲ. ಮಹಾಭಾರತದಲ್ಲಿ ಭೀಮ ಮೂರ್ಛೆ ಬಂದಂತೆ ನಟಿಸಿದ ಎಂಬ ಮಾತಿದೆ (ಶಲ್ಯ. ೫೮/೩೯); ಅದು ಯುಕ್ತವಾದುದೇ. ದುರ್ಯೋಧನನಲ್ಲಿ ವಾಯುವಿನ ಆವೇಶವಿದ್ದುದರಿಂದ ಅದಕ್ಕೆ ಬೆಲೆ ಕೊಡಲೆಂದು ಹಾಗೆ ನಟಿಸಿದ್ದು ಎಂದು ತಿಳಿಯಬೇಕು.

೨) ದೇವಾಸುರರೂ ಗಮನಿಸುತ್ತಿದ್ದ ಆ ಯುದ್ಧದಲ್ಲಿ ಕೊನೆಗೊಮ್ಮೆ ಭೀಮ ತನ್ನನ್ನು ಹೊಡೆಯುವುದು ನಿಶ್ಚಿತ ಎಂದು ತಿಳಿದ ದುರ್ಯೋಧನ ಉಪಾಯವೊಂದನ್ನು ಯೋಜಿಸಿದ; ಭೀಮನು ತನ್ನ ತೊಡೆಗೆ ಹೊಡೆಯಲೆಂದು ಗದೆ ಬೀಸುವನು, ಅದು ನಡೆದರೆ ಅವನ ಪ್ರತಿಜ್ಞೆ ಈಡೇರುವುದು. ಹಾಗಾಗದಿರಲಿ ಎಂದು ಭೀಮನನ್ನು ವಂಚಿಸಲೆಂದು ದುರ್ಯೋಧನ ಕೂಡಲೇ ತಲೆಯನ್ನು ಕೆಳಗೆ ಮಾಡಿ, ತೊಡೆಗಳನ್ನು ಮೇಲೆ ಮಾಡಿದ. ಆಗ ಭೀಮಸೇನನ ಪೆಟ್ಟು ತನ್ನ ಉದರಕ್ಕೆ ಬಿದ್ದು ತಾನು ಮಡಿದರೂ ಭೀಮನ ಪ್ರತಿಜ್ಞೆ ಈಡೇರದ್ದರಿಂದ ವಚನಭ್ರಷ್ಟನಾಗಿ ಅಪಕೀರ್ತಿಗೆ ಗುರಿಯಾಗುವನು ಎಂಬ ದುರಾಲೋಚನೆ ಅವನದಾಗಿತ್ತು. ಆದರೆ, ಪೂರ್ಣಪ್ರಜ್ಞನಾದ ಭೀಮ ಅದನ್ನು ಅರಿತವನೇ ಆಗಿದ್ದ. ಆದ್ದರಿಂದ ಕೃಷ್ಣನ ಅನುಮತಿಯಿಂದ ತನ್ನ

ಪೆಟ್ಟಿನ ಗತಿಯನ್ನೂ ಸಹ ಬದಲಿಸಿ ಅವನ ತೊಡೆಗಳಿಗೇ ಪೆಟ್ಟು ಬೀಳುವಂತೆ ಸರಿಯಾಗಿಯೇ ಹೊಡೆದು ತನ್ನ ಪ್ರತಿಜ್ಞೆಯನ್ನು ನೆರವೇರಿಸಿದ.

೩) ಭೀಮು ದುರ್ಯೋಧನನನ್ನು ಕೊಲ್ಲುವ ಉಪಾಯ ತಿಳಿಯದೇ ಚಿಂತೆ–ಗೊಳಗಾಗಿದ್ದಾಗ, ಕೃಷ್ಣ ತನ್ನ ತೊಡೆಗಳನ್ನು ತಟ್ಟಿಕೊಂಡು ಅವನನ್ನು ಕೊಲ್ಲುವ ಉಪಾಯವನ್ನು ತಿಳಿಸಿಕೊಟ್ಟನು ಎಂದೂ ಕೆಲವು ಪ್ರತಿಗಳಲ್ಲುಂಟು; ಅರ್ಜುನನ ಮೂಲಕ ಹಾಗೆ ಮಾಡಿಸಿದ ಎಂಬ ಮಾತೂ ಇದೆ(ಶಲ್ಯ. ೫೮/೨೧). ಅದಕ್ಕೆ ತೊಡೆಗೆ ಹೊಡೆದು ಕೊಲ್ಲುವುದು ಮೇಲ್ನೋಟಕ್ಕೆ ಅಧರ್ಮವೇ ಆದರೂ, ಅದು ಪ್ರತಿಜ್ಞಾಪಾಲನೆಗಾಗಿ ಅಗತ್ಯವಾದ್ದರಿಂದ ಅದಕ್ಕೆ ತನ್ನ ಅನುಮತಿ–ಯಿದೆ ಎಂದು ಕೃಷ್ಣ ಸೂಚಿಸಲೆಂದು ಹಾಗೆ ತೊಡೆ ತಟ್ಟಿಕೊಂಡದ್ದೇ ಹೊರತು ಭೀಮನಿಗೆ ವಧೋಪಾಯವನ್ನು ತಿಳಿಸಲೆಂದಲ್ಲ ಎಂದು ತಿಳಿಯಬೇಕು.

೪) ಭೀಮಸೇನ ದುರ್ಯೋಧನನೊಂದಿಗೆ ಯುದ್ಧ ಪ್ರಾರಂಭಿಸುವ ಮುನ್ನವೇ ಸ್ಪಷ್ಟವಾಗಿ ತೊಡೆಗಳಿಗೇ ಹೊಡೆದು ಪ್ರತಿಜ್ಞೆಯನ್ನು ನೆರವೇರಿಸುವುದಾಗಿ ಘೋಷಿಸಿರುವಾಗ ಅವನಿಗೆ ಆ ಉಪಾಯ ತಿಳಿದಿರಲಿಲ್ಲವೆಂಬುದು ವಿವೇಕವೆನ್ನಿಸದು.

೫) ಕೆಲವರು ಗಾಂಧಾರಿಯ ಕರಸ್ಪರ್ಶದಿಂದ ದುರ್ಯೋಧನನ ದೇಹವೆಲ್ಲ ವಜ್ರಸದೃಶ–ವಾಗಿದ್ದರಿಂದ ಭೀಮಸೇನ ಎಲ್ಲಿ ಪೆಟ್ಟು ಹಾಕಿದರೂ ಅವನಿಗೆ ಯಾವುದೇ ನೋವು ಆಗುತ್ತಿರಲಿಲ್ಲ. ಆದರೆ, ದುರ್ಯೋಧನನ ತೊಡೆಗಳು ಮಾತ್ರ ಗಾಂಧಾರಿಯ ಸ್ಪರ್ಶವಾಗಿರದಿದ್ದರಿಂದ ವಜ್ರವಾಗಿರಲಿಲ್ಲ ಎಂಬುದನ್ನು ತಿಳಿದಿದ್ದ ಕೃಷ್ಣ ಭೀಮನಿಗೆ ಅದನ್ನು ತಿಳಿಸಿದ ಎಂದು ಹೇಳುವುದುಂಟು. ಇದೂ ಸಹ ಮಹಾಭಾರತದ ಪರಿಜ್ಞಾನವಿಲ್ಲದವರ ಕಲ್ಪನೆಯಷ್ಟೇ. ಮಹಾಭಾರತ ಸ್ಪಷ್ಟವಾಗಿ ಹೇಳಿರುವಂತೆ ದುರ್ಯೋಧನನ ದೇಹ ವಜ್ರಸದೃಶವಾಗಿದ್ದು ಗಾಂಧಾರಿಯ ಸ್ಪರ್ಶದಿಂದಲ್ಲ, ಅವನು ಹುಟ್ಟುವಾಗಲೇ ಪಾರ್ವತೀಪರಮೇಶ್ವರರ ವಿಶೇಷ ವರದಿಂದಾಗಿ ತೊಡೆಗಳ ಸಮೇತ ವಜ್ರಕಾಯನಾಗಿಯೇ ಹುಟ್ಟಿದ್ದ ಎಂಬ ಮಾತು ಈಗಾಗಲೇ ಬಂದಿದೆ (೧೨/೪೧). ಆದರೆ, ಭೀಮಸೇನನ ಗದೆಯ ಪೆಟ್ಟಿಗೆ ವಜ್ರಕಾಯವಾಗಿದ್ದ ಅವನ ತೊಡೆಗಳೂ ಸಹ ಮುರಿದದ್ದರಲ್ಲಿ ಆಶ್ಚರ್ಯವೇನಿಲ್ಲ ಎಂದು ತಿಳಿಯಬೇಕು.

೬) ಮಹಾಭಾರತದಲ್ಲಿ ಮುಖ್ಯಘಟ್ಟಗಳ ಬಗ್ಗೆಯೇ ಹೀಗೆ ಕಲ್ಪನಾವಿಲಾಸಗಳನ್ನು ಜನ ಹಬ್ಬಿಸಿರುವುದು ಮುಖ್ಯ ಪಾತ್ರಗಳ ಬಗ್ಗೆ ತಪ್ಪು ಕಲ್ಪನೆ ಜನಗಳಲ್ಲಿ ಉಂಟಾಗಲು ಕಾರಣವಾಗಿದೆ.

ಗದಾಯುದ್ಧಸ್ಯ ಮರ್ಯಾದಾಂ ಯಶಶ್ಚಾಪ್ಯಭಿರಕ್ಷಿತುಮ್ ।
ನಾಧಸ್ತಾನ್ಮಧ್ಯ ಏವಾಸೌ ನಿಜಘ್ನೇ ತಂ ವೃಕೋದರಃ ।
ಏವಂ ಪ್ರತಿಜ್ಞಾಯುಗ್ಮಾರ್ಥಂ ಭಗ್ನಂ ಸಕ್ಥಿಯುಗಂ ರಣೇ ॥ ೭೫ ॥

ಅ: ಗದಾಯುದ್ಧದ ನಿಯಮವನ್ನು, ಯಶಸ್ಸನ್ನು ಕಾಪಾಡಲೆಂದು ಭೀಮಸೇನ ನಾಭಿಯ ಕೆಳಗೆ ಹೊಡೆಯದೆ ಮಧ್ಯದಲ್ಲಿಯೇ ಹೊಡೆದ. ಎರಡು ಪ್ರತಿಜ್ಞೆಗಳನ್ನು ಪಾಲಿಸಲೆಂದು ಎರಡು ತೊಡೆಗಳನ್ನೂ ಯುದ್ಧದಲ್ಲಿ ಮುರಿದ.

ವಿ: ಭೀಮಸೇನ ತೊಡೆ ಮುರಿಯುವುದಾಗಿ ಪ್ರತಿಜ್ಞೆ ಮಾಡಿದ್ದಂತೆ, ತೊಡೆಗಳನ್ನು ಮುರಿದೇ ಹಾಕಿದ. ಆದರೆ ಹಾಗೆ ಮಾಡುವಾಗ ಗದಾಯುದ್ಧದ ನಿಯಮವನ್ನು ಉಲ್ಲಂಘನೆ ಮಾಡಲಿಲ್ಲ ಎಂಬುದು ವಿಶೇಷ. ಹಾಗೆ ಗದೆಯಿಂದ ಹೊಡೆಯುವಾಗ ಭೀಮಸೇನ ಪೆಟ್ಟು ಹಾಕಿದ್ದು ನಾಭಿಯ ಮಧ್ಯಕ್ಕೇ. ಅದು ಗದಾಯುದ್ಧಕ್ಕೆ ವಿರುದ್ಧವಾದುದೇನಲ್ಲ. ಹಾಗೆ ಹಾಕಿದ ಪೆಟ್ಟು ತೊಡೆಗಳನ್ನು ಮುರಿಯುವಂತಾದದ್ದು ಆತನ ಅಸಾಮಾನ್ಯವಾದ ಕೌಶಲದ ಫಲ. ಭೀಮನ ಎರಡು ಪ್ರತಿಜ್ಞೆಗಳು ಎಂದರೆ ಎರಡೂ ತೊಡೆಗಳನ್ನು ಮುರಿಯುವ ಪ್ರತಿಜ್ಞೆ ಎಂದರ್ಥ. ಒಂದು ತೊಡೆಯನ್ನು ಮುರಿಯುವ ಪ್ರತಿಜ್ಞೆ ದುರ್ಯೋಧನ ದ್ರೌಪದಿಗೆ ತನ್ನ ತೊಡೆಯನ್ನು ತೋರಿಸಿದಾಗ (೨೧/೩೪೫)ಮತ್ತೊಂದನ್ನು ಮುರಿಯುವ ಪ್ರತಿಜ್ಞೆ ಸಭೆಯಿಂದ ಭೀಮ ಹೊರ ಹೊರಡುತ್ತಿದ್ದಾಗ ದುರ್ಯೋಧನ ಅಣಕ ಮಾಡಿ ನಕ್ಕಾಗ (೨೧/೩೯೭, ೩೯೮).

ಭೀಮನಿಂದ ದುರ್ಯೋಧನನ ಶಿರೋಮರ್ದನ - ಋಷಭಸೂಕ್ತದರ್ಶನ

ಕೃಷ್ಣಂ ದ್ಯೂತೇ ನಿಧೇಹೀತಿ ಯದವಾದೀತ್ ಸುಯೋಧನಃ ।
ತತ್ಪ್ರತಿಜ್ಞಾನುಸಾರೇಣ ಭೀಮೋ ಮೂರ್ಧಾನಮಕ್ರಮೀತ್ ।
ಋಷಭಂ ಮಾ ಸಮಾನಾನಾಮಿತಿ ಸೂಕ್ತಂ ದದರ್ಶ ಚ ॥ ೭೬ ॥

---

೭೫. ಏವಂ ಪ್ರತಿಜ್ಞಾಯುಗ್ಮಾರ್ಥಮಿತ್ಯತ್ರ "ತವೋರುಮೇನಂ ಗದಯೋರುವೇಗಯಾ ವಿಭೇತ್ಸ್ಯೇ" ಇತ್ಯೇಕಾ ಪ್ರತಿಜ್ಞಾ। ಏನಂ ಊರು = ದ್ರೌಪದ್ಯೈ ಪ್ರದರ್ಶಿತಂ ದಕ್ಷಿಣೋರುಮಿತ್ಯರ್ಥಃ। "ಊರುಂ ತವಾನ್ಯಂ ಚ ರಣೇ ವಿಭೇತ್ಸ್ಯೇ" ಇತ್ಯನ್ಯಾ ಪ್ರತಿಜ್ಞಾ। ಏವಂ ಪ್ರತಿಜ್ಞಾಯುಗ್ಮಾರ್ಥಂ= ಪ್ರತಿಜ್ಞಾದ್ವಯರಕ್ಷಣಾರ್ಥಮ್। ಅತ ಏವ ಸಕ್ಥಿಯುಗ್ಮಮಿತ್ಯುಕ್ತಮ್ ॥ - (ವಾ.)

೭೫. ಸಕ್ಥಿಯುಗಂ ಊರುದ್ವಯಂ ಪೃಷ್ಠಭಾಗಭೂತಮ್ - (ವ.)

೭೫. ಭಿನ್ನಸಕ್ಥಿಯುಗಂ ಮೂರ್ಧವಿಶೇಷಣಮೇತತ್। ಶರೀರಾಖ್ಯೈಕಾವಯವಿನಂ ಪ್ರತಿಸಕ್ಥ್ನೋ- ಮೂರ್ಧ್ನಶ್ಚಾವಯವತ್ವಾತ್ । ಶರೀರದ್ವಾರಾ ಮೂರ್ಧ್ನೋಽಪಿ ಸಕ್ಥಿಸಂಬಂಧೋಽಸ್ತ್ಯೇವ। ಏವಂ ಭಗ್ನಂ ಸಕ್ಥಿಯುಗಂ ಯಸ್ಯ ಮೂರ್ಧ್ನಃ ಸ ತಥಾ। ತಂ ಮೂರ್ಧಾನಂ ಭೀಮಃ ಅಕ್ರಮೀತ್। .... ಯದ್ವಾ ಭಗ್ನಸಕ್ಥಿಯುಗಂ ದುರ್ಯೋಧನಂ ಮೂರ್ಧಾನಂ ಸಪ್ತಮ್ಯರ್ಥೇ ದ್ವಿತೀಯಾ। ಮೂರ್ಧ್ನಿ ಅಕ್ರಮೀತ್ ಪಾದಪ್ರಹಾರಂ ದದಾವಿತಿ। - (ಜ.)

೭೫. ತಂ ಭಗ್ನಸಕ್ಥಿಂ ರಾಜೇಂದ್ರ ಕೃಚ್ಛ್ರಪ್ರಾಣಮಚೇತಸಮ್ - ಭಾರತ (ಸೌಪ್ತಿಕ. ೯/೩)

ಅ: ಕೃಷ್ಣನನ್ನು ದ್ಯೂತದಲ್ಲಿ ಪಣವಾಗಿಡು ಎಂದು ದುರ್ಯೋಧನ ಹೇಳಿದ್ದ. ಆಗ ಪ್ರತಿಜ್ಞೆ ಮಾಡಿದ್ದಂತೆ ಭೀಮಸೇನ ಅವನ ತಲೆಯನ್ನು ತುಳಿಯತೊಡಗಿದ. **'ಋಷಭಂ ಮಾ ಸಮಾನಾನಾಂ'** ಎಂಬ ಸೂಕ್ತವನ್ನು ದರ್ಶನ ಮಾಡಿದ.

ಏ: ೧) ಪಾಂಡವರನ್ನು ಗೇಲಿ ಮಾಡುತ್ತಾ ದುರ್ಯೋಧನ 'ನಿಮಗೆ ಪಣಕ್ಕಿಡಲು ಬೇರೇನೂ ಉಳಿದಿಲ್ಲ, ನಿಮ್ಮ ಪರಮಾತ್ಮನಾದ ಕೃಷ್ಣನು ಇರುವನಲ್ಲ, ಅವನನ್ನು ಇಟ್ಟುಬಿಡಿ' ಎಂದಾಗ ಕೂಡಲೇ ಭೀಮ ಶಪಥ ತೊಟ್ಟಿದ್ದ. ಇಂತಹ ದೈವದ್ರೋಹದ ಮಾತನ್ನಾಡಿದ ನಿನ್ನ ತಲೆಯನ್ನು ಕಾಲಿನಿಂದ ತುಳಿದು ಹಾಕುವೆ ಎಂದು(೨೧/೩೪೬). ಅದನ್ನೀಗ ಪೂರೈಸಿದ ಎಂದರ್ಥ. ಭೀಮ ಹಾಗೆ

---

೭೬. **'ಋಷಭಂ ಮಾ ಸಮಾನಾನಾಂ ಸಪತ್ನಾನಾಂ ವಿಷಾಸಹಿಮ್।**
ಹಂತಾರಂ ಶತ್ರೂಣಾಂ ಕೃಧಿ ವಿರಾಜಂ ಗೋಪತಿಂ ಗವಾಮ್ ॥
ಅಹಮಿಂದ್ರ ಸಪತ್ನಹೇಂದ್ರ ಇವಾರಿಷ್ಟೋ ಅಕ್ಷತಃ।
ಅಧಃ ಸಪತ್ನಾ ಮೇ ಪದೋರಿಮೇ ಸರ್ವೇ ಅಭಿಷ್ಟಿತಾಃ ॥
ಅತ್ರೈವ ವೋಽಪಿ ನಹ್ಯಾಮ್ಯುಭೇ ಆರ್ಷ್ಣೀ ಇವ ಜ್ಯಾ।
ವಾಚಸ್ಪತೇ ನಿ ಷೇಧೇಮಾನ್ಯಥಾ ಮದಧರಂ ವದಾನ್ ॥
ಅಭಿಭೂರಹಮಾಗಮಂ ವಿಶ್ವಕರ್ಮೇಣ ಧಾಮ್ನಾ।
ಆ ವಶ್ಚಿತ್ತಮಾ ವೋ ವ್ರತಮಾವೋಽಹಂ ಸಮಿತಿಂ ದದೇ ॥
ಯೋಗಕ್ಷೇಮಂ ವ ಆದಾಯಾಹಂ ಭೂಯಾಸಮುತ್ತಮ ಆ ವೋ ಮೂರ್ಧಾನಮಕ್ರಮೀಮ್।
ಅಧಸ್ಪದಾನ್ವಉದ್ವದತ ಮಂಡೂಕಾ ಇವೋದಕಾನ್ಮಂಡೂಕಾ ಉದಕಾದಿವ ॥' ಇತಿ।

– ಋಷಭಸೂಕ್ತಮ್ (ಋ.೧೦/೧೭೬)

ಭೀಮದೃಷ್ಟಸೂಕ್ತಸ್ಯ ತತ್ಕೃಪಯಾ ಯಥಾಶಕ್ಯರ್ಥ ಉಚ್ಯತೇ। ಸಮಾನಾನಾಂ ಸಪತ್ನಾನಾಂ ಮಧ್ಯೇ ವಿಷಾಸಹಿಂ ವಿಶೇಷೇಣ ಸಹನಶೀಲಂ ಜ್ಯೇಷ್ಠಕನಿಷ್ಠಯೋರ್ಧೃತರಾಷ್ಟ್ರಪಾಂಡ್ವೋಃ ಪುತ್ರತ್ವೇನಾರ್ಧರಾಜ್ಯಾರ್ಹತ್ವಾತ್ ಸಮಾನಾನಾಮಿತ್ಯುಕ್ತಮ್। ಅತ ಏವ ಶತ್ರೂಣಾಮಿತ್ಯನುಕ್ತ್ವಾ ಸಪತ್ನಾನಾಮಿತ್ಯುಕ್ತಮ್। ಸಮಾನೌ ಪತ್ನ್ಯೌ ಕುಂತೀಗಂಧಾರ್ಯೌ ಯೇಷಾಂ ತೇ ತಥೋಕ್ತಾಃ ಸಪತ್ನಾಃ। ಲೌಕಿಕಸಂಬಂಧಮಭಿಪ್ರೇತ್ಯೇತ್ಥಮುಕ್ತಮ್। ವಸ್ತುತೋಽಸ್ಮಾಕಂ ಸುರತ್ವೇನ ತೇಷಾಮಸುರತ್ವೇನ ಸಹಜೋ ವಿರೋಧ ಇತಿ ಸೂಚನಾಯ ಶತ್ರೂಣಾಮಿತಿ ವಕ್ಷ್ಯತಿ। ಸಭಾಯಾಂ ದ್ರೌಪದೀಕಚಗ್ರಹಣಾದಿಮಹಾಪರಾಧೇ ಕೃತೇಽಪಿ ಹರಿಸಂಕಲ್ಪಮನುಸೃತ್ಯ ತತ್ಕಾಲೇ ಸೋಢ್ವಾ ಸ್ಥಿತತ್ವಾದ್ವಿಷಾಸಹಿಮಿತ್ಯುಕ್ತಮ್। ಮಮ ಸಹನಮಪಿ ವಿದ್ವಿಷಾಂ ವಿಷೋಪಮಮಿತಿ ಸೂಚನಾಯ ಸಂಹಿತಾಯಾಂ ಸಕಾರಸ್ಯ ಷಕಾರಃ। ಅತ ಏವ ಹಂತಾರಮಿತಿ ವಕ್ಷ್ಯತಿ। ಋಷಭಂ = ಶ್ರೇಷ್ಠಮ್ ಮಾ = ಮಾಮ್। ಪ್ರಾಗುಕ್ತಂ ಸಹನಮಶಕ್ತ್ಯಾನೇತಿ ಸೂಚನಾಯ ಋಷಭಮಿತ್ಯುಕ್ತಮ್। ಶತ್ರೂಣಾಂ ಹಂತಾರಂ ಕೃಧಿ = ಕುರು। ವಿರಾಜಂ =''ರಾಜ ದೀಪ್ತಾ'' ವಿತಿ ಧಾತೋಃ ವಿಶೇಷೇಣ ಪ್ರಕಾಶಮಾನಂ ಕುರು। ಗವಾಂ ವಿದ್ಯಾನಾಂ ಮಧ್ಯೇ ಗೋಪತಿಂ ವಿ। ವಿ''ಪೀಠೇ ರತ್ನೋಪಕ್ಲೃಪ್ತೇ ರುಚಿರರುಚಿಮಣಿಜ್ಯೋತಿಷಾ ಸನ್ನಿಷಣ್ಣಂ ಬ್ರಹ್ಮಾಣಂ ಭಾವಿನಂ ತ್ವಾಂ ಜ್ವಲತಿ ನಿಜಪದೇ ವೈದಿಕಾ'' ಇತಿ। ಇಂದ್ರ ಇವ''ರೀಂಕ್ ಕ್ಷಯ'' ಇತಿ ಧಾತೋಃ ಅರಿಷ್ಟಃ ನಾಶರಹಿತಃ ಅಕ್ಷತಃ ಕ್ಷತರಹಿತಃ ಸನ್ ಸಪತ್ನಹಾ ಸಪತ್ನಾನಾಂ ಹಂತಾ ಅಸ್ಮಿ। ಇಮೇ ಸರ್ವೇ ಸಪತ್ನಾ ಮೇ ಪದೋರಧಃ ಅಭಿಷ್ಟಿತಾಃ= ಅಭಿತಃ ಸ್ಥಿತಾಃ ಭವಂತು।

ದುರ್ಯೋಧನನ ತಲೆಯನ್ನು ತುಳಿಯುತ್ತಾ ಋಗ್ವೇದದ ಋಷಭಸೂಕ್ತವನ್ನು ಸಂದರ್ಶಿಸಿದ ಎಂದರ್ಥ; ವಾದಿರಾಜೀಯದಲ್ಲಿ ಈ ಸೂಕ್ತದ ಅಪೂರ್ವವ್ಯಾಖ್ಯಾನ ಉಂಟು.

ಏತದ್ವಾಕ್ಯಂ ಸ್ವವಿಷಯಮಿತಿ ದರ್ಶನಾಯೈವ ದುರ್ಯೋಧನಶಿರಸಿ ಪುನಃ ಪುನಃ ಪದಾಭ್ಯಾಂ ನನರ್ತ। ಏವಂ ಚ ಮೂರ್ಧೇ ಪದೇತಿ ಪದಂ ಜಾತ್ಯೈಕವಚನಮಿತಿ ಶ್ಲೇಯಮ್। ಅತ್ರೈವ= ಮಮ ಪದೋರಧಸ್ತಾದೇವ ಜ್ಯಾ= ಮೌರ್ವ್ಯಾ ಉಭೇ ಆರ್ತ್ನೀ ಆರತಂ ಸಂತತಂ ಜ್ಯಾ ನೀಯೇತೇ ಇತಿ ಆರ್ತ್ನೀ= ಧನುಷ್ಕೋಟೀ ಇವ ವೋऽಪಿ ಪರಸೇನಾಸ್ಥಾನಿವ ಮಮ ಸೇನಾಸ್ಥಾನಪಿ ಉಭಯಸಮುಚ್ಚಯಾರ್ಥಮಪಿಪದಮ್। ರಣರಂಗಮಧ್ಯಸ್ಥಿತೇ ತೇ ಉಭಯಸೇನೇ ವೀಕ್ಷ್ಯೈವ ಕಥನಾತ್ ವ ಇತ್ಯುಕ್ತಮ್। ನಹ್ಯಾಮಿ ''ಣಹ ಬಂಧನ'' ಇತಿ ಧಾತೋಃ ಬಧ್ನಾಮಿ ಬದ್ಧವದಿತಸ್ತತಶ್ಚಲಿತುಮಪಿ ನ ಮುಂಚಾಮೀತಿ ಸೂಚನಾಯ ನಹ್ಯಾಮೀತ್ಯುಕ್ತಮ್। ಏಕೇನೈಕದೈವೋಭಯಕಟಕ-ಬಂಧನಸ್ಯಾಸಂಭಾವನಾಪರಿಹಾರಾಯ ಜ್ಯಾನಿದರ್ಶನಮದರ್ಶಿ। ಹೇ ವಾಚಸ್ಪತೇ= ಸಕಲವಿ ಸರ್ವಾನ್ ಮತ್ತಃ ಅಧರಂ ಅಧಸ್ಥಾದೇವ ವದಾನ್ ವಕ್ತೄನ್ ನಿಷೇಧ ಸಾಧಯ। ''ರಾಧಸಾಧ ಸಂಸಿದ್ಧೌ'' ಇತಿ ಧಾತುಃ। ಭೀಮರೂಪೇ ಭಾವಿನಿ ಮಮ ಮಧ್ವರೂಪೇ ಚ ಪ್ರತಿವಕ್ತಾ ಕೋऽಪಿ ಯಥಾ ನ ಭೂಯಾತ್ ತಥಾ ಸಾಧಯೇತಿ ಭಾವಃ। ಅಹಂ ವಿಶ್ವಕರ್ಮಣಾ= ಸಕಲಜಗತ್ಕರ್ತ್ರಾ। ವಿಶ್ವಸ್ಯ ಕರ್ಮ= ಸಕಲಜಗತ್ಸೃಷ್ಟಿಸಂಹಾರಾದಿಕರ್ಮ ಯಸ್ಮಾತ್ ಸಃ ವಿಶ್ವಕರ್ಮೇತಿ ವಿಗ್ರಹಃ। ಧಾಮ್ನಾ= ಸಕಲಜಗದ್ಧಾರಕೇಣ ಚ ನಾರಾಯಣೇನ। ಅಭಿಭೂಃ= ಅಭಿಭಾವಯತಿ ಪರಾನ್ ಪರಾಭಾವಯತೀತ್ಯಭಿಭೂಸ್ಸನ್। ಇಹ ಆಗಮಂ= ನಾರಾಯಣಾಜ್ಞಯಾ ಸರ್ವವಿಜಯೀ ಸನ್ ಅಹಮಿಹಾಗಮಮ್। ತದಪ್ಯುಕ್ತಂ ಪೂರ್ವಚಾರ್ಯೈಃ ''ಆಜ್ಞಾಮನ್ಯೈರಧಾರ್ಯಾಮ್'' ಇತಿ। ''ಭೂಮಾವಾಗತ್ಯ ಭೂಮನ್'' ಇತಿ। ''ದುರ್ಭಾಷ್ಯಂ ವ್ಯಸ್ಯ ದಸ್ಯೋಃ'' ಇತಿ ಚ। ಅ= ಸಮಂತಾತ್ ವಃ ಚಿತ್ತಂ ಅ= ಸಮಂತಾತ್ ಸಂ= ಸಮೀಚೀನಾಂ ಚ ಇತಿ=''ಇಣ್ ಗತೌ'' ಇತಿ ಧಾತೋಃ ಜ್ಞಾನಂ ಜ್ಞಾನಫಲಭೂತಾಂ ಸದ್ಗತಿಂ ಚ ಅಹಮೇವ ಆದದೇ = ಬಲಾದಪಹೃತ್ಯ ಮಮ ವಶಮಕರವಮಿತ್ಯರ್ಥಃ। ಏತತ್ತು ''ತೇಷಾಂ ಪುಣ್ಯಾನಿ ವಿದ್ಯಾಶ್ಚ'' ಇತ್ಯಾದಿನಾ ಭೀಮವಾಕ್ಯಾನುವಾದವ್ಯಾಜೇನ ಗ್ರಂಥಕಾರೇಣೈವೋಕ್ತಮ್। ಯೋಗಕ್ಷೇಮಂ ಕಾಮ್ಯತಪ್ಅದಿನಾ ಲಬ್ಧಂ ವಃ ಯೋಗಕ್ಷೇಮಂ ಆದಾಯ ಮತ್ಕೃತಪುಣ್ಯವಶಾತ್ ಭವದ್ಭ್ಯಃ ಅಪಹೃತಪುಣ್ಯವಶಾಚ್ಚ ಉತ್ತಮಃ ಭೂಯಾಸಮ್। ಅ= ಸಮಂತಾತ್ ರಣರಂಗೇ ಪತಿತಾನಾಂ ವಃ ಮೂರ್ಧಾನಂ ಅಕ್ರಮೀಂ= ಅಕ್ರಮಂ 'ಕ್ರಮುಪಾದವಿಕ್ಷೇಪ' ಇತಿ ಧಾತೋಃ ಪದ್ಭ್ಯಾಮಾಕ್ರಮ್ಯ ಅತಿಷ್ಠಮ್। ಯೂಯಂ ಸರ್ವೇ ಉಕ್ತವಿಧಯಾ ಮೂರ್ಧಾನಮಾಕ್ರಮ್ಯ ಸ್ಥಿತಸ್ಯ ಮಮ ಪದಾತ್ ಪಾದಾತ್ ಅಧಸ್ತಾತ್ ಉದ್ವದತ= ಉಚ್ಚೈರಾಕ್ರೋಶಂ ಕುರುತ। 'ವದ ವ್ಯಕ್ತಾಯಾಂ ವಾಚಿ' ಇತಿ ಧಾತುಃ। ತತ್ರ ದೃಷ್ಟಾಂತಮಾಹ। ಉದಕಾತ್ ಅಧಃ ಪಂಕೇ ಮಂಡೂಕಾ ಇವ। ದ್ವಿರ್ಬದ್ಧಂ ಸುಬದ್ಧಂ ಭವತೀತಿ ನ್ಯಾಯೇನ ಏವಂ ಸ್ಥಿರಪರಿಹಾರ್ಯೇತಿ ಸೂಚನಾಯ ತಮೇವ ದೃಷ್ಟಾಂತಂ ಪುನರಾಹ। ಏತಚ್ಚೋಕ್ತಂ ಪೂರ್ವಾಚಾರ್ಯೈಃ ''ಆಕ್ರೋಶಂತೋ ನಿರಾಶಾ'' ಇತ್ಯಾದಿನಾ। ಶ್ರುತ್ಯರ್ಥಸ್ಯ ಭೀಮಚರಿತ್ರಸ್ಯ ಚೇಷದಪಿ ವೈಲಕ್ಷಣ್ಯಾಭಾವಾತ್ ಅನನ್ಯವಿಷಯೈವೇಯಂ ಶ್ರುತಿರಿತಿ ಯುಕ್ತಮುತ್ಪಶ್ಯಾಮಃ॥ – (ವಾ.)

೭೬. ವಾಮೇನ ಪಾದೇನ ಶಿರಃ ಪ್ರಮೃದ್ಯ ದುರ್ಯೋಧನಂ ನೈಕೃತಿಕೇತ್ಯವೋಚತ್ ॥ – ಭಾರತ (ಶಲ್ಯ. ೫೯/೧೩)

೭೬. 'ಸತಾಂ ಸುಖವಿವೃದ್ಧ್ಯರ್ಥಮಸತಾಂ ಪೀಡನಂ ಹರೇಃ।
ಯಾವಚ್ಚಾಸುರದುಃಖಂ ಸ್ಯಾತ್ ತಾವದ್ದೇವಸುಖಂ ಭವೇತ್ ।
ತತ್ರಾಪಿ ತಾರತಮ್ಯೇನ ಬ್ರಹ್ಮಣೋऽಭ್ಯಧಿಕಂ ಸುಖಮ್।
ಯಾವತ್ ಕ್ಷೀಣಂ ತಮಸ್ತಾವತ್ ಪ್ರಕಾಶಸ್ಯ ತು ವರ್ಧನಮ್ ।
ಸರ್ವಸ್ಮಾಚ್ಚ ಕಲೇಃ ಪೀಡಾ ಬ್ರಹ್ಮಣೋऽಭ್ಯಧಿಕಂ ಸುಖಮ್ ।
ತಸ್ಮಾತ್ ಸತಾಂ ರಕ್ಷಣಾಯ ಸರ್ವಕರ್ಮ ಹರೇಃ ಸ್ಮೃತಮ್'ಇತಿ ಬ್ರಹ್ಮತರ್ಕೇ ॥ – ಭಾ. ತಾ.(೧೦/೪/೨೨)

೨) ಭೀಮಸೇನ ದುಃಶಾಸನನ ವಧೆಯ ಕಾಲಕ್ಕೆ ಮನ್ಯುಸೂಕ್ತ ದ್ರಷ್ಟಾರನೆನ್ನಿಸಿದರೆ, ದುರ್ಯೋಧನನ ವಧೆಯ ಕಾಲಕ್ಕೆ ಋಷಭಸೂಕ್ತದ ದ್ರಷ್ಟಾರ ಎನ್ನಿಸಿದ ಎಂಬುದು ಗಮನಾರ್ಹ. ಹೀಗೆ ಮಂತ್ರದ್ರಷ್ಟಾರನಾಗಿಯೂ ಸಹ ಭೀಮಸೇನ ಮಾನ್ಯನಾಗಿರುವುದು ಗಮನಾರ್ಹ.

೩) ಸ್ವತಃ ಭಗವಂತನಾದ ಕೃಷ್ಣನನ್ನು ಪಣಕ್ಕಿಡು ಎಂಬುದು ವಿಚಾರಹೀನತೆಯ ಸಂಕೇತ. ಜಿಜ್ಞಾಸ್ಯಬ್ರಹ್ಮನಾದ ಶ್ರೀಕೃಷ್ಣನನ್ನು ಹಾಗೆ ಅವಹೇಳನೆ ಮಾಡಿದವನ ತಲೆಯನ್ನು ತುಳಿಯುವುದು ಅವನ ವಿಚಾರ ಹೀನತೆಯನ್ನು ಸಾರುವುದರ ಸಂಕೇತ. ಭೀಮು ಹಾಗೆ ದುರ್ಯೋಧನನ ತಲೆಯನ್ನು ತುಳಿಯುವ ಮೂಲಕ ಆ ತತ್ತ್ವವನ್ನು ಸಾರಿದ ಎಂದು ತಿಳಿಯಬೇಕು.

೪) ಭೀಮದೃಷ್ಟವಾದ ಈ ಋಷಭಸೂಕ್ತದಿಂದ ಧಾತ್ರೀಹವನಕಾರ್ಯದಲ್ಲಿ ಹೋಮ ಪಂಚರಾತ್ರದಲ್ಲಿ ವಿಹಿತವಾಗಿದೆ. ಅದು ಭಗವದ್ದ್ವೇಷಿಗಳನ್ನು ಜ್ಞಾನಶೂನ್ಯರನ್ನಾಗಿ ಮಾಡಿ ಅಧೋಗತಿಗೆ ಕಳುಹಿಸುವುದರ ಸಂಕೇತ :

ಋಷಭಂ ಮೇತಿ ಸೂಕ್ತಸ್ಯ ಭೀಮಸೇನಸ್ತು ಕುಂತಿಜಃ ।
ಋಷಿರ್ನಾರಾಯಣೋ ದೇವೋऽನುಷ್ಟುಪ್ ಛಂದಸ್ತಥಾ ಮತಃ ॥
– ಪಂಚರಾತ್ರಾಗಮ (ಕ್ರಿಯಾಪಾದ ಬ್ರಹ್ಮಹಂಸಸಂವಾದ ಉತ್ಸವಕಾಂಡ)

ತೇಷಾಂ ಪುಣ್ಯಾನಿ ವಿದ್ಯಾಶ್ಚ ಸಮಾದಾಯೈವ ಸರ್ವಶಃ ।
ತಾಂಶ್ಚಕಾರ ತಮೋಗಂತ್ಯಂಸ್ತಸ್ಯ ಮೂರ್ಧ್ನಿ ಪದಾऽऽಕ್ರಮತ್ ॥ ೭೭ ॥

ಅ: ಭೀಮ ಅವನ ತಲೆಯನ್ನು ಹಾಗೆ ತುಳಿಯುವ ಮೂಲಕ ಅವರ ಪುಣ್ಯಗಳನ್ನು, ವಿದ್ಯೆಗಳನ್ನು ಸಂಪೂರ್ಣವಾಗಿ ಕಿತ್ತುಕೊಂಡು ಅವರೆಲ್ಲಾ ತಮಸ್ಸಿಗೆ ತೆರಳುವಂತೆ ಮಾಡಿದ.

ಸ್ಮಾರಯಾಮಾಸ ಕರ್ಮಾಣಿ ಯಾನಿ ತಸ್ಯ ಕೃತಾನಿ ಚ ।
ಕೃಷ್ಣಬಂಧೇ ಕೃತೋ ಮಂತ್ರ ಇತಿ ಮೂರ್ಧ್ನಿ ಪದಾऽಹನತ್ ॥ ೭೮ ॥

ಅ: ದುರ್ಯೋಧನ ಮಾಡಿದ ದುಷ್ಕಾರ್ಯಗಳನ್ನೆಲ್ಲ ಭೀಮಸೇನ ಅವನಿಗೆ ನೆನಪಿಸಿದ. ಕೃಷ್ಣನನ್ನು ಕಟ್ಟಿಹಾಕಲು ಮಂತ್ರಾಲೋಚನೆ ಮಾಡಿದ್ದೆ ಎನ್ನುತ್ತಾ ಅವನ ತಲೆಯನ್ನು ಪಾದದಿಂದ ಮತ್ತೊಮ್ಮೆ ತುಳಿದ.

ವಿ: ಒಮ್ಮೆ ತುಳಿದದ್ದು ಕೃಷ್ಣನನ್ನು ಪಣಕ್ಕಿಡು ಎಂದು ದುರ್ಯೋಧನ ತಿಳಿಸಿದ್ದಕ್ಕಾಗಿ, (೨೧/೩೪) ಮತ್ತೊಮ್ಮೆ ತಲೆ ತುಳಿದದ್ದು ಕೃಷ್ಣನನ್ನು ಕಟ್ಟಿಹಾಕಲು ಅವನು ಪ್ರಯತ್ನಿಸಿದ್ದಕ್ಕಾಗಿ(೨೪/೭೦). ಹೀಗೆ ಎರಡು ಸಲ ಭೀಮಸೇನ ದುರ್ಯೋಧನನ ತಲೆಯನ್ನು ತುಳಿದ. ದೈವದ್ರೋಹ ಜ್ಞಾನದ ಸರ್ವನಾಶಕ್ಕೆ ಸಂಕೇತ ಎಂಬುದು ಅದರ ಭಾವ.

ಬಲರಾಮನಿಗೆ ಅಂಜದ ಬಲಭೀಮ

ಪುನಃ ಪುನಶ್ಚ ತದ್ವೀಕ್ಷ್ಯ ಚುಕ್ರೋಧ ಮುಸಲಾಯುಧಃ ।
ಚುಕ್ರೋಶ ನೈವ ಧರ್ಮೋಽಯಮಿತ್ಯಸಾವೂರ್ಧ್ವಬಾಹುಕಃ ॥ ೭೯ ॥

ಅ: ಭೀಮ ಪುನಃ ಪುನಃ ಹಾಗೆ ಮಾಡಿದ್ದನ್ನು ನೋಡಿ ಬಲರಾಮ ಸಿಟ್ಟಿಗೆದ್ದ. ಎರಡೂ ಕೈಗಳನ್ನು ಮೇಲಕ್ಕೆತ್ತಿ ಅದು ಧರ್ಮವಲ್ಲ ಎಂದು ಕೂಗಿಕೊಂಡ.

ವಿ: ಭೀಮನ ಆ ಕಾರ್ಯವನ್ನು ನೋಡಿ ಸಂತೋಷಿಸಬೇಕಿದ್ದ ಬಲರಾಮ ವಿರೋಧಿಸಿದ್ದು ಅವನೊಳಗೆ ಅಸುರಾವೇಶದಿಂದ ಉಂಟಾಗಿದ್ದ ಸ್ನೇಹದ ಫಲ (೨೮/೧೧೦) ಎಂದು ತಿಳಿಯಬೇಕು. ಧರ್ಮ ಎಂದು ಸಾರುವ ಬದಲು ಅಧರ್ಮ ಎಂದು ಸಾರಿದ್ದು ಎಂತಹ ವಿಪರ್ಯಾಸ! ಧರ್ಮಾಚರಣೆಯನ್ನು ಸ್ವತಃ ಮಾಡುವುದಿರಲಿ, ಭೀಮನಂತಹ ವ್ಯಕ್ತಿ ಅದನ್ನು ಮಾಡಿದಾಗಲೂ ಸಹ ಸರಿಯಾಗಿ ಅರ್ಥ ಮಾಡಿಕೊಳ್ಳಲೂ ಬಲರಾಮನಿಗೆ ಆಗ ಸಾಧ್ಯವಾಗಲಿಲ್ಲ ಎಂಬುದು ಇತರ ದೇವತೆಗಳ ಪರಿಜ್ಞಾನದ ಇತಿಮಿತಿಗಳನ್ನು ಸಾರುವ ಅಪೂರ್ವ ಭಾಗ.

ಪುನಃ ಕ್ರೋಧಾಭಿತಾಮ್ರಾಕ್ಷ ಆದಾಯ ಮುಸಲಂ ಹಲಮ್ ।
ಅಭಿದುದ್ರಾವ ಭೀಮಂ ತಂ ನ ಚಚಾಲ ವೃಕೋದರಃ ॥ ೮೦ ॥

ಅ: ಮತ್ತೆ ಕೋಪದಿಂದ ಕಣ್ಣು ಕೆಂಪಾಗಿಸಿಕೊಂಡು ಬಲರಾಮ ಮುಸಲವನ್ನು, ಹಲವನ್ನು ತೆಗೆದುಕೊಂಡು ಭೀಮನ ಮೇಲೆ ನುಗ್ಗಿದ. ಭೀಮ ಅಲುಗಲಿಲ್ಲ.

ವಿ: ೧) ಬಲರಾಮ ಹಾಗೆ ಭೀಮನ ಕಾರ್ಯವನ್ನು ಅಧರ್ಮ ಎಂದು ನುಡಿದದ್ದು ಮಾತ್ರವಲ್ಲದೇ ಭೀಮನನ್ನು ಎದುರಿಸಲೆಂದು ಆಕ್ರಮಣಕ್ಕೇ ತೆರಳಿದ್ದು ಮತ್ತೊಂದು ವಿಪರ್ಯಾಸ. ಶ್ರೀರಾಮ ರಾವಣನನ್ನು ಕೊಂದು ಹಾಕಿದಾಗ ಶಿವ ಅದನ್ನು ವಿರೋಧಿಸಿ ರಾಮನೊಂದಿಗೆ ಯುದ್ಧಕ್ಕೆ ಸಿದ್ಧನಾದ ಪ್ರಸಂಗವನ್ನು ಇದು ಜ್ಞಾಪಿಸುತ್ತದೆ. ಅಲ್ಲಿ ಶ್ರೀರಾಮನನ್ನು ವಿರೋಧಿಸಿದ್ದು ಶಿವನಾದರೆ, ಇಲ್ಲಿ ಭೀಮನನ್ನು ವಿರೋಧಿಸಿದ್ದು ಶೇಷಾವತಾರನಾದ ಬಲರಾಮ. ಶ್ರೀರಾಮ ಭೀಮರು ಹರಿವಾಯುಗಳಾದರೆ, ಎದುರಿಸಿದ ಶಿವ ಶೇಷರು ಪರಸ್ಪರ ಸಮರಾಗಿ ಋಜುಗಳ ಕಕ್ಷೆಯ

---

೭೯. ಶಿರಸ್ಯಭಿಹತಂ ದೃಷ್ಟ್ವಾ ಭೀಮಸೇನೇನ ತೇ ಸುತಮ್ ।
ರಾಮಃ ಪ್ರಹರತಾಂ ಶ್ರೇಷ್ಠಶ್ಚುಕ್ರೋಧ ಬಲವದ್ಬಲೀ ॥ - ಭಾರತ (ಶಲ್ಯ. ೬೦/೯)

೮೦. ತತೋ ಲಾಂಗಲಮುದ್ಯಮ್ಯ ಭೀಮಮಭ್ಯದ್ರವದ್ ಬಲೀ ॥ - ಭಾರತ (ಶಲ್ಯ. ೬೦/೯)

೮೦. ನ ವಿವ್ಯಥೇ ಮಹಾರಾಜ ದೃಷ್ಟ್ವಾ ಹಲಧರಂ ಬಲೀ । - ಭಾರತ (ಶಲ್ಯ. ೬೦/೧೧)

ಅನಂತರದ ಮೊದಲ ಕಕ್ಷೆಗೆ ಸೇರಿದ ದೇವತೆಗಳು. ಇವು ಅವರು ಭಾಗವತ ಧರ್ಮವನ್ನು ತಪ್ಪಿದ್ದಕ್ಕೆ ನಿದರ್ಶನ ಎಂದು ತಿಳಿಯಬೇಕು. ಅಲ್ಲಿ ಶಿವ ಎದುರಿಸಿದ್ದು ಸರ್ವೋತ್ತಮನಾದ ರಾಮನನ್ನಾದರೆ, ಇಲ್ಲಿ ಬಲರಾಮ ಎದುರಿಸಿದ್ದು ಜೀವೋತ್ತಮನಾದ ಭೀಮನನ್ನು ಎಂಬುದು ವಿಶೇಷ.

೨) ಹಾಗೆ ಬಲರಾಮ ಆಯುಧಪಾಣಿಯಾಗಿ ಭೀಮನ ಮೇಲೆ ನುಗ್ಗಿದರೂ ಭೀಮ ಸ್ವಲ್ಪವೂ ವಿಚಲಿತನಾಗದೇ ಹಾಗೆಯೇ ನಿಂತದ್ದು ಒಂದು ಅಪೂರ್ವವಾದ ಸನ್ನಿವೇಶ. ಭೀಮ ಹಾಗೆ ಮಾಡುವ ಮೂಲಕ ತಾನು ಬಲರಾಮನನ್ನು ಎದುರಿಸಲು ಸಿದ್ಧ ಎಂದು ಸಾರಿದಂತಾಯಿತು. ಬಲರಾಮನ ಬಲಕ್ಕಿಂತ ಭೀಮನ ಬಲ ದೊಡ್ಡದು ಎಂಬ ಮಾತು ಈಗಾಗಲೇ ಬಂದಿದೆ(೨/೧೬೫):

ಭೀಮಶ್ಚ ಬಲಭದ್ರಶ್ಚ ಮದ್ರರಾಜಶ್ಚ ವೀರ್ಯವಾನ್ ।
ಚತುರ್ಥಃ ಕೀಚಕಸ್ತೇಷಾಂ ಪಂಚಮಂ ನಾನುಶುಶ್ರುಮಃ ॥

ಬಲಿಷ್ಠರಲ್ಲಿ ಪ್ರಥಮನಾದ ಭೀಮ ಕೀಚಕನನ್ನು ಕೊಂದ, ಶಲ್ಯನನ್ನು ಸಾಮಿನ ಅಂಚಿಗೆ ತಳ್ಳಿದ, ಬಲರಾಮನನ್ನು ಧೈರ್ಯದಿಂದ ಎದುರಿಸಿದ. ಹೀಗೆ ಮಾಡುವ ಮೂಲಕ ತಾನು ನಿಜವಾದ ಅರ್ಥದಲ್ಲಿ ಬಲಿಷ್ಠರಲ್ಲಿ ಸರ್ವಶ್ರೇಷ್ಠ ಎಂಬುದನ್ನು ನಿರೂಪಿಸಿದ ಎಂದು ತಿಳಿಯಬೇಕು.

೩) ಭೀಮ ಬಲರಾಮನನ್ನು ಹಾಗೆ ಎದುರಿಸಲು ಬಲರಾಮನಲ್ಲಿ ಆಗ ಶುಕ್ಲಕೇಶ ಆವೇಶ ಇದ್ದಿರಲಿಲ್ಲ ಎಂಬುದಕ್ಕೂ ಗಮನಿಸಿ. ಬದಲಾಗಿ ಅಸುರಾವೇಶವದ ಕಾರಣದಿಂದಾಗಿ ಸ್ನೇಹವೇ ಉಂಟಾಗಿದ್ದಿತು ಎಂಬ ಮಾತು ಮುಂದೆ ಬಂದಿದೆ (ಶ್ಲೋ. ೧೧೦).

ಭೀಮನದು ಅಧರ್ಮವಲ್ಲ

ಅಭಯೇ ಸಂಸ್ಥಿತೇ ಭೀಮೇ ರಾಮಂ ಜಗ್ರಾಹ ಕೇಶವಃ ।
ಆಹ ಧರ್ಮೇಣ ನಿಹತೋ ಭೀಮೇನಾಯಂ ಸುಯೋಧನಃ ॥ ೮೧ ॥

---

೮೧. ತಮುತ್ಪತಂತಂ ಜಗ್ರಾಹ ಕೇಶವೋ ವಿನಯಾನ್ವಿತಃ ॥
ಬಾಹುಭ್ಯಾಂ ಪೀನವೃತ್ತಾಭ್ಯಾಂ ಪ್ರಯತ್ನಾದ್ ಬಲವದ್ಬಲೀ ॥ - ಭಾರತ (ಶಲ್ಯ. ೬೦/೧೧)

೮೧. ಪ್ರತಿಜ್ಞಾಪಾಲನಂ ಧರ್ಮಃ ಕ್ಷತ್ರಿಯಸ್ಯೇಹ ವೇದ್ಮ್ಯಹಮ್ ।
ಸುಯೋಧನಸ್ಯ ಗದಯಾ ಭಂಕ್ತಾಽಸ್ಮ್ಯೂರೂ ಮಹಾಹವೇ ॥
ಇತಿ ಪೂರ್ವಂ ಪ್ರತಿಜ್ಞಾತಂ ಭೀಮೇನ ಹಿ ಸಭಾತಲೇ ।
ಮೈತ್ರೇಯೇಣಾಭಿಶಪ್ತಶ್ಚ ಪೂರ್ವಮೇವ ಮಹರ್ಷಿಣಾ ॥
ಊರೂ ತೇ ಭೇತ್ಸ್ಯತೇ ಭೀಮೋ ಗದಯೇತಿ ಪರಂತಪ ।
ಅತೋ ದೋಷಂ ನ ಪಶ್ಯಾಮಿ ಮಾ ಕ್ರುದ್ಧ್ಯಸ್ವ ಪ್ರಲಂಬಹನ್ ।
ಗತಃ ಪುರುಷಶಾರ್ದೂಲೋ ಹತ್ವಾ ನೈಕೃತಿಕಂ ರಣೇ ।
ಅಧರ್ಮೋ ವಿದ್ಯತೇ ನಾತ್ರ ಯದ್ಭೀಮೋ ಹತವಾನ್ ರಿಪುಮ್ ॥ - ಭಾರತ (ಶಲ್ಯ. ೬೦/೧೬-೧೯)

ಅ: ಭೀಮನು ನಿರ್ಭೀತಿಯಿಂದ ನಿಲ್ಲಲು ಕೃಷ್ಣ ಬಲರಾಮನನ್ನು ಹಿಡಿದು ನಿಲ್ಲಿಸಿದ - 'ಭೀಮನಿಂದ ಈ ದುರ್ಯೋಧನ ಧರ್ಮದಿಂದಲೇ ಹತನಾಗಿರುವನು' ಎಂದು ತಿಳಿಸಿದ.

ವಿ: ಶ್ರೀಕೃಷ್ಣನ ಮಾತು ಭೀಮನ ಧರ್ಮಸಮೃದ್ಧಿಗೆ ಅಪೂರ್ವ ನಿರ್ಣಯ. ಕೃಷ್ಣ ಆಗ ಭೀಮನಿಗೆ ವಿವೇಕ ಹೇಳದೇ ಬಲರಾಮನಿಗೆ ಹೇಳುವ ಮೂಲಕ ತಪ್ಪು ಮಾಡುತ್ತಿರುವುದು ಬಲರಾಮನೇ ಹೊರತು ಭೀಮನಲ್ಲ ಎಂದು ಸ್ಪಷ್ಟಪಡಿಸಿದ. ಧರ್ಮಸಂಸ್ಥಾಪನೆಗೆಂದು ಅವತರಿಸಿದ ಭಗವಂತನೇ ಆದ ಕೃಷ್ಣ ಭೀಮನ ಕಾರ್ಯ ಧಾರ್ಮಿಕವಾದದ್ದು ಎಂದು ಘೋಷಣೆ ಮಾಡಿದ ವಿವರ ಮಹಾಭಾರತದಲ್ಲಿ ಬಂದಿದೆ. ಭವಿಷ್ಯೋತ್ತರಪುರಾಣದ ವೇಂಕಟೇಶಮಾಹಾತ್ಮ್ಯದಲ್ಲಿ ಶೇಷ ಹೀಗೆ ವಾಯುದೇವರನ್ನು ವಿರೋಧಿಸಿದ ಪ್ರಸಂಗ ಬಂದಿದ್ದು ಅಲ್ಲಿಯೂ ಶೇಷನೇ ಪರಾಭವಗೊಳ್ಳುವುದು ಗಮನಾರ್ಹ.

ನ ಮಂಡಲೇऽಭಿಸಾರೇ ವಾ ನಾಪಸಾರೇ ಚ ನಾಭಿತಃ ।
ಅಧೋ ಹನ್ಯಾದ್ವಂಚಯಂತಂ ಅಧೋ ಹತ್ವಾ ನ ದುಷ್ಯತಿ ॥ ೮೨ ॥

ಅ: ಮಂಡಲಾಕಾರವಾಗಿ ಕಾದುವಾಗ, ಎದುರಿಸಿ ಬಂದಾಗ, ದೂರ ಸರಿಯುವಾಗ ನಾಭಿಯಿಂದ ಕೆಳಗೆ ಹೊಡೆಯಬಾರದು. ಆದರೆ, ವಂಚನೆ ಮಾಡುವವನನ್ನು ಹೊಡೆದಾಗ ದೋಷವಾಗುವುದಿಲ್ಲ.

ಕೃತಾ ಪ್ರತಿಜ್ಞಾ ಚ ವೃಕೋದರೇಣ
ಭೇತ್ಸ್ಯೇ ತವೋರೂ ಇತಿ ಯುಕ್ತಿಪೂರ್ವಕಮ್ ।
ಸಂಶ್ರಾವಯಾನೇನ ತದೇಷ ಧರ್ಮತೋ
ಜಘಾನ ದುರ್ಯೋಧನಮಗ್ರ್ಯಕರ್ಮಾ ॥ ೮೩ ॥

ಅ: ಭೀಮಸೇನ ನಿನ್ನ ತೊಡೆಗಳನ್ನು ಮುರಿಯುವೆ ಎಂದು ಜನರಿಗೆಲ್ಲ ಧರ್ಮದ ವಿವರವನ್ನು ತಿಳಿಸಿಕೊಡಲೆಂದು ಸಕಾರಣವಾಗಿಯೇ ಪ್ರತಿಜ್ಞೆ ಮಾಡಿರುವನು. ಆದ್ದರಿಂದ

---

೮೨. ಪ್ರಕಾರಾಂತರೇಣಾಪಿ ಭೀಮಸ್ಯಾಧರ್ಮೋ ನಾಸ್ತೀತ್ಯಾಹ। ನ ಮಂಡಲೇತಿ ॥ – (ವಾ.)

೮೩. ಪ್ರತಿಜ್ಞಾಂ ಭೀಮಸೇನಸ್ಯ ತ್ರಯೋದಶಸಮಾರ್ಜಿತಾಮ್ ।
ಕಿಮರ್ಥಂ ನಾಭಿಜಾನಾತಿ ಯುಧ್ಯಮಾನೋऽಪಿ ವಿಶ್ರುತಾಮ್ ॥
ಊರ್ಧ್ವಮುತ್ಕ್ಷಿಪ್ಯ ವೇಗೇನ ಜಿಘಾಂಸಂತಂ ವೃಕೋದರಃ ।
ಬಭಂಜ ಗದಯಾ ಚೋರೂ ನ ಸ್ಥಾನೇ ಚ ಮಂಡಲೇ ॥
- ಇತ್ಯಾದಿ ಬಲಭದ್ರಂ ಪ್ರತಿ ಶ್ರೀಕೃಷ್ಣವಚನ ಭಾರತ (ಶಲ್ಯ. ೬೦/೧೬-೧೯, ೨೪,೨೬)

ಉತ್ತಮ ಧರ್ಮಶೀಲನಾದ ಈ ಭೀಮಸೇನ ದುರ್ಯೋಧನನನ್ನು ಧರ್ಮದಿಂದಲೇ ಕೊಂದಿರುವನು.

ವಿ: ಭೀಮಸೇನ ತೊಡೆ ಮುರಿಯುವೆ ಎಂದು ಪ್ರತಿಜ್ಞೆ ಮಾಡಿರುವನು. ಹಾಗೆ ಪ್ರತಿಜ್ಞೆ ಮಾಡಿದ್ದೂ ಸಹ ದುರ್ಯೋಧನ ಪರಸ್ತ್ರೀಯಾದ ದ್ರೌಪದಿಗೆ ತನ್ನ ತೊಡೆಯನ್ನು ತೋರಿಸಿದ್ದರಿಂದ. ಹಾಗೆ ಪರಸ್ತ್ರೀಗೆ ತೊಡೆ ತೋರುವವನ ತೊಡೆಯನ್ನು ಮುರಿಯುವುದು ಸೂಕ್ತವೇ ಆಗಿದೆ. ಭೀಮು ಹೀಗೆ ಸಕಾರಣವಾಗಿಯೇ ಅಂತಹ ಪ್ರತಿಜ್ಞೆಯನ್ನು ಮಾಡಿ ಅದನ್ನು ಸ್ಪಷ್ಟವಾಗಿ ತಿಳಿಸಿಯೇ ದುರ್ಯೋಧನನನ್ನು ಕೊಂದು ಶ್ರೇಷ್ಠ ಧರ್ಮವನ್ನೇ ಆಚರಿಸಿರುವನು. ಜೊತೆಗೆ ಮೈತ್ರೇಯರ ಶಾಪವೂ ಹಾಗೆಯೇ ಇತ್ತು. ಆದ್ದರಿಂದ ಭೀಮನ ಕಾರ್ಯದ ಬಗ್ಗೆ ಶಂಕಿಸುವುದು ತರವಲ್ಲ ಎಂದು ಶ್ರೀಕೃಷ್ಣ ವಿವರವಾಗಿ ತಿಳಿಸಿದ ಎಂದರ್ಥ.

ದ್ವಾರಕೆಗೆ ನಡೆದ ಬಲರಾಮ

ವಾಸುದೇವವಚಃ ಶ್ರುತ್ವಾ ಧರ್ಮಚ್ಛಲಮಿತಿ ಬ್ರುವನ್ ।
ರೌಹಿಣೇಯೋ ಜಗಾಮಾಶು ಸ್ವಪುರೀಮೇವ ಸಾನುಗಃ ॥ ೮೪ ॥

ಅ: ಶ್ರೀಕೃಷ್ಣನ ಮಾತನ್ನು ಕೇಳಿ ಬಲರಾಮ ಅದು ಧರ್ಮದ ವಂಚನೆ (ಕಪಟಧರ್ಮ) ಎನ್ನುತ್ತಾ ತನ್ನ ಅನುಯಾಯಿಗಳೊಂದಿಗೆ ತನ್ನ ಪಟ್ಟಣಕ್ಕೆ ತೆರಳಿದ.

ವಿ: ಶ್ರೀಕೃಷ್ಣ ಅಷ್ಟು ಸ್ಪಷ್ಟ ತಿಳಿಸಿದಾಗಲೂ ಬಲರಾಮ ಅದನ್ನು ಅಧರ್ಮವೆಂದು ಕರೆದದ್ದು ಅವನೊಳಗೆ ಅಸುರಾವೇಶದಿಂದಾಗಿ ದುರ್ಯೋಧನನ ಬಗ್ಗೆ ಸ್ನೇಹ ಉಂಟಾಗಿತ್ತು ಎಂದು ತಿಳಿಯಬೇಕು (ಶ್ಲೋ. ೧೧೦). ಕೃಷ್ಣ ಕೌರವರು ಅಭಿಮನ್ಯುವನ್ನು ಮೋಸದಿಂದ ಕೊಂದ ವಿವರವನ್ನು ತಿಳಿಸಿದಾಗಲೂ ಬಲರಾಮ ಅರ್ಥಮಾಡಿಕೊಳ್ಳದೇ ಇದ್ದುದು ಆಶ್ಚರ್ಯ.

---

೮೩. ಯುಕ್ತಿಪೂರ್ವಂ ಸಂಶ್ರಾವಯಾನೇನೇತ್ಯತ್ರ ಪರಸ್ತ್ರಿಯಂ ಪ್ರತ್ಯೂರುಪ್ರದರ್ಶನೇ ಊರುಭೇದಃ ಕರ್ತವ್ಯ ಇತಿ ಸಂಶ್ರಾವಯಾನೇನ= ಧರ್ಮಂ ಸಂಶ್ರಾವಯತೇತ್ಯರ್ಥಃ ॥ – (ವಾ.)

೮೩. ತತೋ ಮಧ್ಯೇ ನರೇಂದ್ರಾಣಾಮೂರ್ಧ್ವಬಾಹುರ್ಹಲಾಯುಧಃ ।
ಕುರ್ವನ್ನಾರ್ತಸ್ವರಂ ಘೋರಂ ಧಿಗ್ ಧಿಗ್ ಭೀಮೇತ್ಯುವಾಚ ಹ ॥ - ಭಾರತ (ಶಲ್ಯ. ೬೦/೪)

೮೩. ಇತ್ಯುಕ್ತೋ ವಾಸುದೇವೇನ ಭೀಮಪ್ರಿಯಹಿತೈಷಿಣಾ ।
ಅನ್ವಮೋದತ ತತ್ಸರ್ವಂ ಯದ್ ಭೀಮೇನ ಕೃತಂ ಯುಧಿ ॥ - ಭಾರತ (ಶಲ್ಯ. ೬೦/೪೦)

೮೪. ಧರ್ಮಚ್ಛಲಂ ಧರ್ಮಾಭಾಸಃ । – (ಜ.)

ಯುಧಿಷ್ಠಿರನ ಧರ್ಮಜಿಜ್ಞಾಸೆ

ತಸ್ಮಿನ್ ಗತೇ ವಾಸುದೇವಂ ಸಮಪೃಚ್ಛದ್ಯುಧಿಷ್ಠಿರಃ ।
ಧರ್ಮೋಽಯಮಥವಾಽಧರ್ಮ ಇತಿ ತಂ ಪ್ರಾಹ ಕೇಶವಃ ॥ ೮೫ ॥

ಅ: ಬಲರಾಮ ತೆರಳಿದ ಮೇಲೆ ಧರ್ಮರಾಜ ಕೃಷ್ಣನನ್ನು ಕೇಳಿದ 'ಇದೇನು ಧರ್ಮವೋ ಅಥವಾ ಅಧರ್ಮವೋ'. ಅವನಿಗೆ ಕೃಷ್ಣ ತಿಳಿಸಿದ :

ವಿ: ಶ್ರೀಕೃಷ್ಣ ಅಷ್ಟು ಸ್ಪಷ್ಟವಾಗಿ ಬಲರಾಮನಿಗೆ ಭೀಮ ಮಾಡಿದ್ದು ಧರ್ಮ ಎಂದು ತಿಳಿಸಿದಾಗಲೂ ಧರ್ಮರಾಜ ಕೃಷ್ಣನನ್ನು ಹಾಗೆ ಪ್ರಶ್ನಿಸಿದ್ದು ಆತನ ನಿಷ್ಕಾರಣವಾದ ಸಂಶಯಪ್ರಜ್ಞೆಗೆ ದ್ಯೋತಕ. ಅಂತಹ ಸಂಶಯವನ್ನು ಶಾಸ್ತ್ರ ಮೆಚ್ಚುವುದಿಲ್ಲ, ಅದು ಅಯೋಗ್ಯರಿಗೆ ಅನರ್ಥಕರ; ಧರ್ಮರಾಜನಂತಹ ಜ್ಞಾನಿಗಳಿಗೆ ಪುಣ್ಯಹ್ರಾಸಕರ.

ಶ್ರೀಕೃಷ್ಣನಿರೂಪಿಸಿದ ಧರ್ಮಸೂಕ್ಷ್ಮ

ನ ಸಾಕ್ಷಾದ್ಧರ್ಮತೋ ವಧ್ಯಾ ಯೇ ತು ಪಾಪತಮಾ ನರಾಃ ।
ದೇವೈರ್ಹಿ ವಂಚಯಿತ್ವೈವ ಹತಾಃ ಪೂರ್ವಂ ಸುರಾರಯಃ ॥ ೮೬ ॥

ಅ: ಅತ್ಯಂತ ಪಾಪಿಗಳಾದ ಜನರನ್ನು ಮುಖ್ಯ ಧರ್ಮದಿಂದ ಕೊಲ್ಲಬಾರದು, ದೇವತೆಗಳು ಹಿಂದೆ ತಮ್ಮ ಶತ್ರುಗಳಾದ ಅಸುರರನ್ನು ವಂಚಿಸಿಯೇ ಕೊಂದರು.

ವಿ: ಭೀಮ ಮಾಡಿದ ಕಾರ್ಯ ಶಾಸ್ತ್ರಸಮ್ಮತ ಎಂಬುದನ್ನು ಶ್ರೀಕೃಷ್ಣ ದೇವಾಸುರರ ನಿದರ್ಶನವನ್ನಿತ್ತು ತಿಳಿಸಿದ. ದೇವತೆಗಳು ಅಸುರರನ್ನು ಸಂಹರಿಸಿದ್ದು ಮುಖ್ಯ ಧರ್ಮದಿಂದಲ್ಲ ಎಂಬುದು ಅದರ ಅರ್ಥ.

ಅತೋಽಯಮಪ್ಯಧರ್ಮೇಣ ಹತೋ ನಾತ್ರಾಸ್ತಿ ದೂಷಣಮ್ ।
ಭೀಷ್ಮದ್ರೋಣೌ ಚ ಕರ್ಣಶ್ಚ ಯದೈವೋಪಾಧಿನಾ ಹತಾಃ ।
ಕೋ ನು ದುರ್ಯೋಧನೇ ಪಾಪೇ ಹತೇ ದೋಷಃ ಕಥಂಚನ ॥ ೮೭ ॥

---

೮೫. ಮಂಡಲೇಮಂಡಲವತ್ಪರಿಭ್ರಮಣೇ ನಾಭಿತಃನಾಭೇಃ ಸಕಾಶಾತ್ ಅಧೋ ನ ಹಸ್ಯಾತ್ ಅಭಸಾರೇ ವಾ ಅಭಿಮುಖೇನ ಆಗಮನೇ ಅಧೋಹನನಂ ಭೀಮಸ್ಯ ದೋಷೋ ನೈವೇತಿ ಭಾವಃ। – (ಜ.)

೮೬. ರೀತ್ಯಂತರೇಣಾಪ್ಯಧರ್ಮೋ ನಾಸ್ತೀತ್ಯಾಹ। ನ ಸಾಕ್ಷಾದಿತಿ ॥ – (ವಾ.)

ಅ: ಆದ್ದರಿಂದ ಪಾಪಿಯಾದ ದುರ್ಯೋಧನನೂ ಸಹ ಅಧರ್ಮದಿಂದಲೇ ಹತನಾಗಿರುವನು, ಇದರಲ್ಲಿ ದೋಷವೇನೂ ಇಲ್ಲ. ಭೀಷ್ಮ, ದ್ರೋಣ, ಕರ್ಣರು ವಂಚನೆಯಿಂದಲೇ ಹತರಾಗಿರುವಾಗ ಪಾಪಿಯಾದ ದುರ್ಯೋಧನ ಹೀಗೆ ಸತ್ತಲ್ಲಿ ದೋಷ ಏನು?

ಎ: ದುರ್ಯೋಧನನಂತೆ ಭೀಷ್ಮ, ದ್ರೋಣ, ಕರ್ಣರೂ ಸಹ ಮುಖ್ಯಧರ್ಮದಿಂದ ಹತರಾಗಿಲ್ಲ ಎಂದು ಕೃಷ್ಣ ತಿಳಿಸಿರುವುದು ಗಮನಾರ್ಹ. ಇದರಿಂದ ಮಹಾಪಾಪಿಗಳು ಮಾತ್ರವಲ್ಲದೇ ಮಹಾಪಾಪಿಗಳಿಗೆ ನೆರವಾಗುವವರನ್ನೂ ಸಹ ಮುಖ್ಯಧರ್ಮದಿಂದ ವಧಿಸಬಾರದು ಎಂಬ ವಿಶೇಷಾಂಶ ಇದರಿಂದ ತಿಳಿಯುವುದು: **'ನಾರಾಯಣದ್ವಿಷ್ತದನುಬಂಧಿನಿಗ್ರಹಃ ಕ್ಷತ್ರಿಯಾಣಾಂ ಪರಮೋ ಧರ್ಮಃ'.**

ಪ್ರತಿಜ್ಞಾಪಾಲನಾಯಾಪಿ ಬಿಭೇದೋರೂ ವೃಕೋದರಃ ।
ಧರ್ಮತಶ್ಚ ಪ್ರತಿಜ್ಞೇಯಂ ಕೃತಾ ತೇನಾನುರೂಪತಃ ।
ಲೋಕತೋಽಪಿ ನ ಧರ್ಮಸ್ಯ ಹಾನಿರತ್ರ ಕಥಂಚನ ॥ ೮೮ ॥

ಅ: ಭೀಮಸೇನ ಪ್ರತಿಜ್ಞಾಪಾಲನೆಗಾಗಿಯೂ ಸಹ ತೊಡೆಗಳನ್ನು ಮುರಿದಿರುವನು. ಭೀಮಸೇನ ಆ ಪ್ರತಿಜ್ಞೆಯನ್ನು ಮಾಡಿದ್ದೂ ಸಹ ಧರ್ಮಕ್ಕನುಗುಣವಾಗಿಯೇ. ಆದ್ದರಿಂದ ಲೋಕದೃಷ್ಟಿಯಲ್ಲೂ ಇಲ್ಲಿ ಯಾವ ರೀತಿಯಲ್ಲೂ ಧರ್ಮದ ಚ್ಯುತಿ ಅಲ್ಲ.

ಎ: ಕೃಷ್ಣ ಭೀಮಸೇನ ಮಾಡಿದ ಪ್ರತಿಜ್ಞೆಯಂತೆ ಅದನ್ನು ನೆರವೇರಿಸಿದ್ದು ವಿಹಿತವೇ ಆದುದು ಎಂದು ತಿಳಿಸುವನು. ದುರ್ಯೋಧನ ಧರ್ಮವಿರುದ್ಧವಾಗಿ ನಡೆದದ್ದರಿಂದ ಅಂತಹ ಪ್ರತಿಜ್ಞೆ ಮಾಡುವುದು ಅನಿವಾರ್ಯವಾಗಿತ್ತು, ಮಾಡಿದ ಪ್ರತಿಜ್ಞೆಯನ್ನು ನಡೆಸುವುದೂ ಅನಿವಾರ್ಯವೇ. ಹೀಗೆ ಭೀಮಸೇನ ಮಾಡಿದ ಕಾರ್ಯ ಧರ್ಮಕ್ಕೆ ಅನುಗುಣವಾದುದು ಎಂದು ಕೃಷ್ಣ ತಿಳಿಸಿದ.

ಯೇ ಭೀಮಸ್ಯಾಪ್ರಭಾವಜ್ಞಾ ಆಪದ್ಧರ್ಮಂ ಚ ಮನ್ವತೇ ।
ಅವಧ್ಯತ್ವೇ ಶಿವವರಾದ್ಗದಾಶಿಕ್ಷಾಬಲಾದಪಿ ।
ಜರಾಸಂಧೋಪಮೋ ಯಸ್ಮಾದ್ದಾರ್ತರಾಷ್ಟ್ರಃ ಸುವಿಶ್ರುತಃ ॥ ೮೯ ॥

ಅ: ಭೀಮನ ಹಿರಿಮೆ ತಿಳಿಯದ ಜನ ಇದನ್ನು ಆಪದ್ಧರ್ಮ ಎಂದು ತಿಳಿಯುವರು. ಶಿವನ ವರದಿಂದಾಗಿ ಅವಧ್ಯನಾಗಿರುವಲ್ಲಿಯೂ, ಗದಾವಿದ್ಯೆ ಮತ್ತು ಬಲಗಳಿಂದಾಗಿಯೂ ದುರ್ಯೋಧನ ಜರಾಸಂಧನಂಥವನು ಎಂದು ಬಹಳ ಪ್ರಸಿದ್ಧನಾಗಿರುವನು.

ವಿ: ಸಾಮಾನ್ಯಜನ ದುರ್ಯೋಧನ ಜರಾಸಂಧನಂತೆ ಅತ್ಯಂತ ಬಲಾಢ್ಯನಾದ್ದರಿಂದ ಭೀಮ ಹಾಗೆ ಉಪಾಯದಿಂದ ಕೊಂದ ಎಂದು ತಿಳಿಯುವರು. ಜರಾಸಂಧನನ್ನು ಕೊಂದದ್ದು ಅಧರ್ಮ-ವಲ್ಲವಾಗಿರುವಾಗ ಅಂತಹ ದುರ್ಯೋಧನನನ್ನು ಕೊಂದಿದ್ದು ಅಧರ್ಮ ಹೇಗಾದೀತು ಎಂಬ ಭಾವ ಇಲ್ಲಿದೆ. ಭೀಮಸೇನ ಜರಾಸಂಧನನ್ನು ಹೇಗೋ ಹಾಗೆ ದುರ್ಯೋಧನನನ್ನೂ ಅನಾಯಾಸವಾಗಿ ಸಂಹರಿಸಿದ್ದು ಇದರಿಂದ ಸೂಚಿತ.

ತಸ್ಮಾತ್ ಸ ಧರ್ಮ ಏವಾಯಂ ಭೀಮಚೀರ್ಣ ಇತಿ ಬ್ರುವನ್ ।
ಅಪಿ ಸಂಶಯಿನಂ ಚಕ್ರೇ ಧರ್ಮರಾಜಂ ಜಗತ್ಪತಿಃ ॥ ೯೦ ॥

ಅ: ಆದ್ದರಿಂದ ಭೀಮ ಮಾಡಿದ್ದು ಧರ್ಮವೇ ಆಗಿದೆ ಎಂದು ಕೃಷ್ಣ ಸ್ಪಷ್ಟವಾಗಿ ತಿಳಿಸಿದ. ಆದರೂ, ಧರ್ಮರಾಜನನ್ನು ಜಗದೊಡೆಯನಾದ ಕೃಷ್ಣ ಗೊಂದಲದಲ್ಲಿಯೇ ಕೆಡವಿದ.

ವಿ: ಕೃಷ್ಣ ನೇರವಾಗಿ ಧರ್ಮರಾಜನಿಗೆ ಭೀಮಸೇನ ಮಾಡಿದ್ದು ಧರ್ಮವೆಂದು ತಿಳಿಸದೇ ಬಳಸುದಾರಿಯಲ್ಲಿ ತಿಳಿಸುವ ಮೂಲಕ ಧರ್ಮರಾಜನ ಮನಸ್ಸಿನಲ್ಲಿ ಸಂಶಯಹುಟ್ಟುವಂತೆ ಮಾಡಿದ. ಜೊತೆಗೆ ಭೀಷ್ಮ, ದ್ರೋಣ, ಕರ್ಣರ ವಧೆಯೂ ಮುಖ್ಯಧರ್ಮದಿಂದ ನಡೆದಿಲ್ಲ ಎಂದೂ ತಿಳಿಸಿದ. ಹಾಗೆ ಮಾಡಲು ಕಾರಣವನ್ನು ಮುಂದಿನ ಶ್ಲೋಕದಲ್ಲಿ ತಿಳಿಸುವರು.

ಭೂಭಾರಕ್ಷತಿಜೋ ಧರ್ಮೋ ಮಚ್ಛುಶ್ರೂಷಾತ್ಮಕಸ್ತು ಯಃ ।
ಭೀಮಸ್ಯೈವ ಭವೇತ್ ಸಮ್ಯಗಿತಿ ಬುದ್ಧ್ಯಾ ಪರಃ ಪ್ರಭುಃ ॥ ೯೧ ॥

ಅ: ತನ್ನ ಸೇವಾರೂಪವಾದ ಭೂಭಾರಹರಣರೂಪವಾದ ಪುಣ್ಯ ಭೀಮನಿಗೇ ಪೂರ್ಣ-ವಾಗಿ ಲಭಿಸಬೇಕೆಂದು, ಸರ್ವೋತ್ತಮನಾದ ಶ್ರೀಕೃಷ್ಣ ಹಾಗೆ ಮಾಡಿದ.

---

೮೯. ಯೇ ಭೀಮಸ್ಯ ಅಪ್ರಭಾವಜ್ಞಾ ಇತಿ ವದತಾ ಭಗವತಾ ಪ್ರಾಕ್ ಕಿಂಚಿದ್ವ್ಯಾಕ್ಷೇಪೇಣ ಸಂಯುತಃ ಇತಿ ಸ್ವವಚನಂ ಲೋಕಾನಾಮಾಪದ್ಧರ್ಮಂ ದರ್ಶಯಿತುಮೇವೋಕ್ತಮ್। ನ ತು ಭೀಮೇ ಕಿಂಚಿದ್ಬ್ಯಾಜಸದ್ಭಾವಾ-ಭಿಪ್ರಾಯೇಣೇತಿ ಸ್ಪಷ್ಟೀಕೃತಮ್। ಜರಾಸಂಧೋಪಮ ಇತಿ ವದತಾ ವಿಪ್ರಚ್ಛದ್ಮನಾ ಗತ್ವಾ ಜರಾಸಂಧೇ ಹತೇ ಸತಿ ಅಧರ್ಮಶಂಕಾಮಕುರ್ವನ್ ತ್ವಂ ಕುತ ಇದಾನೀಂ ಶಂಕಸೇ ಇತಿ ಸೂಚಿತಮ್। ಭಸ್ಮನಾ ತ್ರಿಪುಂಡ್ರಧಾರಣಾದಿಕಂ ಅಕುರ್ವನ್ನಪ್ಯಯಂ ಕಲಿರೂಪತ್ವಾತ್ತ್ವಭಾವೇನ ಜರಾಸಂಧಾದಪ್ಯಧಮಾಧಮಃ। ಅತೋಽಪ್ಯತ್ರಾಧರ್ಮಶಂಕಾ ನ ಕಾರ್ಯೇತಿ ಸೂಚನಾಯ ಚ ಶಿವವರಾದವಧ್ಯತ್ವೇ ಇತ್ಯಾದಿಕಮುಕ್ತಮ್ ॥ –(ವಾ.)

೯೦. ಭೀಮಚೀರ್ಣಃ ಭೀಮಕೃತಃ। –(ಜ.)

ವಿ: ಒಂದು ಕಾರ್ಯವನ್ನು ಮಾಡುವ ಮುನ್ನ ಸಂಶಯಪಡುವುದಾಗಲೀ, ಅದು ಪೂರೈಸಿದ ಅನಂತರ ಪಶ್ಚಾತ್ತಾಪಪಡುವುದಾಗಲೀ ಆ ಪುಣ್ಯಕಾರ್ಯದ ಪೂರ್ಣಫಲಪ್ರಾಪ್ತಿಗೆ ಕಾರಣ–ವಾಗದು. ಧರ್ಮರಾಜ ಹೀಗೆ ಸಂಶಯಪಡುವ ಮೂಲಕ ದುರ್ಯೋಧನಾದಿಗಳ ಸಂಹಾರದ ಪೂರ್ಣಫಲಕ್ಕೆ ಪಾತ್ರನಾಗದಂತೆ ಆಗಬೇಕು. ಭೀಮಸೇನ ಮಾತ್ರವೇ ಪೂರ್ಣ ಪುಣ್ಯಭಾಗಿ–ಯಾಗಬೇಕು. ಬಲರಾಮ ಅಧರ್ಮವೆಂದಾಗಲೂ ಭೀಮ ತನ್ನ ಕಾರ್ಯ ಸರಿಯೆಂದು ವಿಚಲಿತನಾಗದೇ ಇರುವ ಮೂಲಕ ತೋರಿಸಿದ; ಎಂಬುದು ಕೃಷ್ಣನ ಉದ್ದೇಶವಾಗಿತ್ತು ಎಂದರ್ಥ. ಅದರಂತೆ ಬಲರಾಮಾದಿಗಳಿಗೂ ಪೂರ್ಣಪುಣ್ಯ ಬರದಂತೆ ಕೃಷ್ಣ ಮಾಡಿದ ಎಂದರ್ಥ.

ಸ್ವೇನೈವ ಬಲಭದ್ರಾಯ ಜನಾಯ ಚ ಪುನಃ ಪುನಃ ।
ಶ್ರುತ್ವಾಽಪ್ಯುಕ್ತಂ ನ ತತ್ಯಾಜ ಸಂಶಯಂ ಧರ್ಮಜೋ ಯತಃ ॥ ೯೨ ॥

ಅ: ಶ್ರೀಕೃಷ್ಣ ತಾನೇ ಬಲರಾಮನಿಗೂ ಜನಗಳಿಗೂ ಪುನಃ ಪುನಃ ಅದನ್ನು ಧರ್ಮವೆಂದೇ ತಿಳಿಸಿದರೂ ಸಹ ಧರ್ಮರಾಜ ಸಂಶಯವನ್ನು ತೊರೆಯಲಿಲ್ಲವಾದ್ದರಿಂದ ಅವನಿಗೆ ಪೂರ್ಣ ಪುಣ್ಯ ಲಭಿಸಲಿಲ್ಲ.

ತತೋಽಪ್ಯಸಂಶಯಂ ಕೃಷ್ಣೋ ನ ಚಕಾರ ಯುಧಿಷ್ಠಿರಮ್ ।
ಮುಖ್ಯಂ ಧರ್ಮಂ ಹಿ ಭಗವಾನ್ ಬಲಾಯಾಹ ಜನಾಯ ಚ ॥ ೯೩ ॥

ಅ: ಆದರೂ ಕೃಷ್ಣ ಧರ್ಮರಾಜನನ್ನು ಸಂಶಯರಹಿತನನ್ನಾಗಿ ಮಾಡಲಿಲ್ಲ. ಮುಖ್ಯ-ಧರ್ಮವನ್ನು ಅವನು ಬಲರಾಮನಿಗೂ, ಜನಗಳಿಗೂ ತಿಳಿಸಿದ.

ಧರ್ಮೇಣೈವ ಹತೋ ರಾಜಾ ಧಾರ್ತರಾಷ್ಟ್ರಃ ಸುಯೋಧನಃ ।
ಇತಿ ಯದ್ವಕ್ಷ್ಯತಿ ಪುನರ್ನಿಶ್ಚಯಾರ್ಥೇಽರ್ಜುನಾಯ ಚ ॥ ೯೪ ॥

ಅ: ಧೃತರಾಷ್ಟ್ರಪುತ್ರನಾದ ದುರ್ಯೋಧನ ಧರ್ಮದಿಂದಲೇ ಹತನಾದ ಎಂಬುದಾಗಿ ಕೃಷ್ಣ ಮುಂದೆ ಅರ್ಜುನನಿಗೆ ನಿಶ್ಚಯವಾಗಲೆಂದು ತಿಳಿಸುವನೂ ಸಹ.

ವಿ: ಧರ್ಮರಾಜ ಕೃಷ್ಣನು ಬಲರಾಮನಿಗೂ, ಜನರಿಗೂ ಸ್ಪಷ್ಟವಾಗಿ ಭೀಮ ಮಾಡಿದ್ದು ಧರ್ಮವೆಂದು ಪ್ರತಿಪಾದಿಸಿದ್ದರಿಂದ ಅದು ಧರ್ಮವೆಂದು ನಿಶ್ಚಯಹೊಂದಬೇಕಿತ್ತು ಹಾಗೆ ಹೊಂದದೇ ಹೋದದ್ದು ಅವನು ಪೂರ್ಣಪುಣ್ಯಕ್ಕೆ ಭಾಗಿಯಾಗುವ ಅರ್ಹತೆಯನ್ನು ಹೊಂದದೇ ಇದ್ದದ್ದಕ್ಕೆ ಕಾರಣ ಎಂದು ಭಾವ.

ದುರ್ಯೋಧನ ಮಾಡಿದ ಕೃಷ್ಣನಿಂದೆ

ಪುನಃ ಪುನರ್ಧರ್ಮತ ಏವ ಭೀಮೋ
ಜಘಾನ ರಾಜಾನಮಿತಿ ಬ್ರುವಂತಮ್ ।
ಜಗಾದ ಕೃಷ್ಣಂ ಸ್ಫುರಿತಾಧರೋಷ್ಠಃ
ಕ್ರೋಧಾತ್ ಸುಪಾಪೋ ಧೃತರಾಷ್ಟ್ರಸೂನುಃ ॥ ೯೫ ॥

ಅ: ಶ್ರೀಕೃಷ್ಣ ಮತ್ತೆ ಮತ್ತೆ ಭೀಮ ದುರ್ಯೋಧನನನ್ನು ಧರ್ಮದಿಂದಲೇ ವಧಿಸಿದ ಎಂದು ಹೇಳಿದಾಗ ಮಹಾಪಾಪಿಯಾದ ದುರ್ಯೋಧನ ಕೋಪದಿಂದ ತುಟಿ ಅದರುತ್ತಾ ಕೃಷ್ಣನನ್ನು ನಿಂದಿಸಿದ.

ದುರ್ಯೋಧನ ಮಹಾಪಾಪಿ ಎಂದು ನಿರೂಪಿಸಿದ ಶ್ರೀಕೃಷ್ಣ

ತ್ವಯ್ಯೇವ ಪಾಪೇ ನಿಹಿತಾ ಹಿ ಪಾರ್ಥಾಃ
ಪಾಪಾಧಿಕಸ್ತ್ವಂ ಹಿ ಸದೈಕ ಏವ ।
ಇತ್ಯೂಚಿವಾಂಸಂ ಪ್ರಜಗಾದ ಕೃಷ್ಣೋ
ನ ತ್ವತ್ಸಮಃ ಪಾಪತಮಃ ಕದಾಚಿತ್ ॥ ೯೬ ॥

ಅ: ''ಪಾಂಡವರು ಪಾಪದಲ್ಲಿ ತೊಡಗಿದ್ದು ನಿನ್ನಿಂದಲೇ, ಆದ್ದರಿಂದ ಮಹಾಪಾಪಿ-ಯಾದವನು ಸದಾ ನೀನೊಬ್ಬನೇ'' ಹೀಗೆ ದುರ್ಯೋಧನ ನುಡಿಯಲು ಕೃಷ್ಣ ತಿಳಿಸಿದ : 'ನಿನಗೆ ಸಮನಾದ ಮಹಾಪಾಪಿ ಎಂದೂ ಇಲ್ಲ'.

ವಿ: ೧) ದುರ್ಯೋಧನ ಪಾಂಡವರು ಮಾಡಿದ್ದು ಪಾಪವೆಂದು, ಅವರು ಹಾಗೆ ಮಾಡಲು ಕೃಷ್ಣನ ಬೋಧನೆಯೇ ಕಾರಣವೆಂದು ಆಕ್ಷೇಪಿಸಿದ; ಕೃಷ್ಣನೇ ಪರಮಪಾಪಿ ಎಂಬುದು ದುರ್ಯೋಧನನ ಒಟ್ಟು ಭಾವ. ಹೀಗೆ ಪ್ರತಿಹಂತದಲ್ಲೂ ಶ್ರೀಹರಿಯನ್ನು ದೂಷಿಸುವುದು,

---

೯೫. ದಿಷ್ಟ್ಯಾ ಹತೋಽಯಂ ಪಾಪಾತ್ಮಾ ಸಾಮಾತ್ಯಜ್ಞಾತಿಬಾಂಧವಃ ।
ಇತಿ ಶ್ರುತ್ವಾ ತ್ವಧಿಕ್ಷೇಪಂ ಕೃಷ್ಣಾದ್ದುರ್ಯೋಧನೋ ನೃಪಃ ॥
ಪ್ರಾಣಾಂತಕರಿಣೀಂ ಘೋರಾಂ ವೇದನಾಮಪ್ಯಚಿಂತಯನ್ ।
ದುರ್ಯೋಧನೋ ವಾಸುದೇವಂ ವಾಗ್ಭಿರುಗ್ರಾಭಿರಾರ್ದಯತ್ ॥ - ಭಾರತ (ಶಲ್ಯ. ೬೧/೨೩,೨೬-೩೮)

ದ್ವೇಷಿಸುವುದು ತಾಮಸ ಪ್ರವೃತ್ತಿಯ ಜನರ ಪ್ರಧಾನ ಲಕ್ಷಣ. ಕೃಷ್ಣ ಅದಕ್ಕೆ ಪ್ರತಿಯಾಗಿ ದುರ್ಯೋಧನನೇ ಪರಮಪಾಪಿಯೆಂದು ಸಮರ್ಥಿಸಿದ.

೨) 'ಎಂದೂ ನಿನ್ನಂತಹ ಮಹಾಪಾಪಿ ಇಲ್ಲ' ಎಂಬುದರಿಂದ ದುರ್ಯೋಧನ ಮಹಾಪಾಪಿ ಎಂಬುದು ಸ್ಫುಟಪಡುವುದು.

ಭೀಷ್ಮಾದಿಹತ್ಯಾಽಪಿ ಚ ತವೈವ ಪಾಪಂ
ಯದನ್ವಯುಸ್ತ್ವಾಮತಿಪಾಪನಿಶ್ಚಯಮ್ ।
ಪಾಪಂ ಚ ಪಾಪಾನುಗತಂ ಚ ಹತ್ವಾ
ಕಥಂಚನಾಪ್ಯಸ್ತಿ ನ ಚೈವ ಪಾಪಮ್ ॥ ೯೭ ॥

ಅ: ಭೀಷ್ಮಾದಿಗಳು ಪಾಪನಿಶ್ಚಯನಾದ ನಿನ್ನನ್ನು ಅನುಸರಿಸಿದ್ದರಿಂದ ಅವರನ್ನು ವಧಿಸಿದ ಪಾಪವೂ ಸಹ ನಿನಗೇ ಸೇರುವುದು. ಪಾಪಿಯನ್ನಾಗಲೀ, ಪಾಪಿಗಳ ಅನುಯಾಯಿ-ಗಳನ್ನಾಗಲೀ ಕೊಂದರೆ ಯಾವ ರೀತಿಯಲ್ಲೂ ಪಾಪ ಒದಗದು.

ವಿ: ಕೃಷ್ಣನು ಸ್ಫುಟವಾಗಿ ತಿಳಿಸಿರುವ ಧರ್ಮನಿರ್ಣಯವಿದು. ಪಾಪಿಗಳ ವಧೆಯಂತೆ ಪಾಪಿಗಳ ಅನುಯಾಯಿಗಳ ವಧೆಯೂ ಪರಮ ಧರ್ಮವೇ. ಅದರಿಂದಾಗಿಯೇ ಭೀಷ್ಮಾದಿಗಳ ವಧೆಯೂ ಸಹ ಪಾಂಡವರ ಪಾಲಿಗೆ ಧರ್ಮವಾದರೆ, ಪಾಪದ ಪಾಲು ಮಾತ್ರ ದುರ್ಯೋಧನನದೇ ಎಂದರ್ಥ.

ನ ಪಾಂಡವೇಷ್ವಸ್ತಿ ತತೋ ಹಿ ಕಿಂಚಿ-
ತ್ಪಾಪಂ ಪ್ರಯತ್ನಾಚ್ಚ ನಿಸರ್ಗತೋಽಪಿ ।
ಗುಣಾಧಿಕಾಸ್ತೇ ಮದುಪಾಶ್ರಯಾಶ್ಚ
ಕೋ ನಾಮ ತೇಷ್ವಣ್ವಪಿ ಪಾಪಮಾಹ ॥ ೯೮ ॥

ಅ: ಸ್ವಭಾವದಲ್ಲಾಗಲಿ, ಪ್ರಯತ್ನದಲ್ಲಾಗಲಿ ಪಾಂಡವರಲ್ಲಿ ಪಾಪವು ಸ್ವಲ್ಪವೂ ಸಹ ಇಲ್ಲ; ಅವರು ಗುಣಗಳಲ್ಲಿ ಶ್ರೇಷ್ಠರು; ನನ್ನನ್ನು ನಂಬಿದವರು; ಯಾರು ತಾನೇ ಅವರಲ್ಲಿ ಅಣುವಿನಷ್ಟಾದರೂ ಪಾಪವನ್ನು ಆರೋಪಿಸಿಯಾರು.

---

೯೭. ಲೋಭೇನಾತಿಬಲೇನ ತ್ವಂ ತೃಷ್ಣಯಾ ಚ ವಶೀಕೃತಃ ।
ಕೃತಮಾನಸ್ಯ ಕಾರ್ಯಾಣಿ ವಿಪಾಕಸ್ತಸ್ಯ ಭುಜ್ಯತಾಮ್ ॥ ಇತ್ಯಾದಿ ಶ್ರೀಕೃಷ್ಣವಚನ (ಶಲ್ಯ. ೬೧/೩೯-೪೯)

ನಿಸರ್ಗತಃ ಪಾಪತಮಸ್ತ್ವಮನ್ಯಾನ್
ಧರ್ಮಸ್ಥಿತಾನ್ ಪಾಪಪಥೇ ನಿಧಾಯ ।
ಸ್ವಯಂ ಚ ಪಾಪೇ ನಿರತಃ ಸದೈವ
ಪಾಪಾತ್ ಸುಪಾಪಾಂ ಗತಿಮೇವ ಯಾಸಿ ॥ ೯೯ ॥

ಅ: ಧರ್ಮದಲ್ಲಿ ನಿರತರಾದ ಇತರರನ್ನೂ ಪಾಪಮಾರ್ಗಕ್ಕೆ ತೊಡಗಿಸಿ ಸ್ವತಃ ಪಾಪದಲ್ಲೇ ನಿರತನಾದ ನೀನು ಸ್ವಭಾವತಃ ಪರಮ ಪಾಪಿಯಾದವನಾದ್ದರಿಂದ ಪಾಪಿಗಳಿಗೆ ದೊರಕುವ ಕೆಟ್ಟಗತಿಗಿಂತ ಅತ್ಯಂತ ಹೆಚ್ಚಿನ ಪಾಪಗತಿಯನ್ನು ಹೊಂದುವಿ.

ಏ: ಪಾಪ ಮಾಡುವಂತೆ ಪಾಪಕಾರ್ಯಕ್ಕೆ ತೊಡಗಿಸುವುದೂ ಮಹಾಪಾಪವೇ ಆಗಿದೆ. ದುರ್ಯೋಧನ ಸ್ವತಃ ಪಾಪ ಮಾಡಿದ್ದನಲ್ಲದೇ ಭೀಷ್ಮಾದಿಗಳನ್ನೂ ಸಹ ಪಾಂಡವವಿರೋಧ–ದಂತಹ ಪಾಪಕಾರ್ಯದಲ್ಲಿ ತೊಡಗಿಸಿದಂತಹ ಮಹಾಪಾತಕಿಯೂ ಆದವನು. ಆದ್ದರಿಂದ ಅವನಿಗೆ ಅತ್ಯಂತ ಹೆಚ್ಚಿನ ದುರ್ಗತಿ ಆಗುವುದು ಎಂದರ್ಥ. ಅಂತಹ ದುರ್ಗತಿ ಎಂದರೆ ಅಂಧಂತಮಸ್ಸೇ ಆಗಿದೆ.

ದುರ್ಯೋಧನನ ದುರ್ಬುದ್ಧಿ

ಇತಿ ಬ್ರುವಂತಂ ಪುನರಾಹ ಕೃಷ್ಣಂ
ದುರ್ಯೋಧನಃ ಪಾಪಕೃತಾಂ ಪ್ರಧಾನಃ ।
ಸ್ವಂತೋತ್ತಮೋ ನಾಮ ಕ ಏವ ಮತ್ತಃ
ಕೋ ನಾಮ ದೋಷೋಽಸ್ತಿ ಮಯಾ ಕೃತೋಽತ್ರ ॥ ೧೦೦ ॥

---

೧೦೦. ಸ್ವಂತೋತ್ತಮೋ ನಾಮ ಕ ಇತ್ಯತ್ರ ಶೋಭನಃ ಅಂತೋ ನಾಶೋ ಯೇಷಾಂ ತೇ ಸ್ವಂತಾಃ। ತೇಷೂತ್ತಮಾಃ ಸ್ವಂತೋತ್ತಮಾ ಇತ್ಯರ್ಥಃ। ಧರ್ಮೇಣ ಯುದ್ಧೇ ಮೃತತ್ವಾತ್ ಶೋಭನಮರಣವತಾಂ ಪುಂಸಾಮಹಮೇವೋತ್ತಮಃ। ಮಯಿ ಚೇತ್ಪಾಪಮಸ್ತಿ ತರ್ಹಿ ವೀರಸ್ವರ್ಗೋಚಿತಂ ಮರಣಂ ಕಥಂ ಸ್ಯಾದಿತಿ ದುರ್ಭಾವಃ ॥ – (ವಾ.)

೧೦೦. ಸ್ವಂತೋತ್ತಮಃ ಶೋಭನಶ್ಚಾಸೌ ಅಂತಶ್ಚೇತಿ ಸಮೀಚೀನಾಂತಃಕರಣಂ ತೇನ ಉತ್ತಮಃ ಶುದ್ಧಾಂತಃಕರಣೇನ ಉತ್ತಮ ಇತ್ಯರ್ಥಃ। ಶೋಭನಃ ಅಂತೋಮರಣಂ ಯೇಷಾಂ ತೇ ತಥಾ । – (ಜ.)

೧೦೦. ಸ್ವಂತೋತ್ತಮಃ ಸುಶೋಭನಃ ಅಂತೋ ಮರಣಂ ಯೇಷಾಂ ತೇ ಸ್ವಂತಾಸ್ತೇಷೂತ್ತಮೋಽಹಮೇವ ಮತ್ತೋಽನ್ಯಃ ಸ್ವಂತೋತ್ತಮಃ ಕಃ । ನ ಕೋಽಪೀತ್ಯೇತನ್ನಾಮ ಪ್ರಸಿದ್ಧಂ ... ॥ – (ಸ.)

೧೦೦. ದೇವಾರ್ಹಾ ಮಾನುಷಾ ಭೋಗಾಃ ಪ್ರಾಪ್ತಾ ಅಸುಲಭಾ ನೃಪೈಃ ॥
ಐಶ್ವರ್ಯಂ ಚೋತ್ತಮಂ ಪ್ರಾಪ್ತಂ ಕೋ ನು ಸ್ವಂತತರೋ ಮಯಾ ॥
ಸಸುಹೃತ್ ಸ್ವಾನುಗಶ್ಚೈವ ಸ್ವರ್ಗಂ ಗಂತಾಽಹಮಚ್ಯುತ ॥
ಯೂಯಂ ನಿಹತಸಂಕಲ್ಪಾಃ ಶೋಚಂತೋ ವರ್ತಯಿಷ್ಯಥ । – ಭಾರತ (ಶಲ್ಯ. ೬೧/೫೨-೫೩)

ಅ: ಹೀಗೆ ನುಡಿದ ಕೃಷ್ಣನಿಗೆ ಪಾಪಿಷ್ಠರಲ್ಲಿ ಪ್ರಧಾನನಾದ ದುರ್ಯೋಧನ ಹೇಳಿದ : 'ನನ್ನಂತಹ ಸುಖಾಂತವನ್ನು ಕಂಡ ಉತ್ತಮ ಬೇರಾವನಿರುವನು? ನಾನು ಮಾಡಿದ್ದರಲ್ಲಿ ಪಾಪವೆಂಬುದು ಯಾವುದಿದೆ?'

ವಿ: ಯುದ್ಧರಂಗದಲ್ಲಿ ಸಾಯುವ ಮೂಲಕ ತಾನು ಉತ್ತಮ ಮರಣವನ್ನು ಕಂಡಿರುವುದರಿಂದ ತನಗೆ ವೀರಸ್ವರ್ಗದಂತಹ ಸದ್ಗತಿಯೇ ಲಭಿಸುವುದು, ಎಂದೂ ದುರ್ಗತಿಯಾಗದು ಎಂಬುದು ದುರ್ಯೋಧನನ ವಿಚಾರ. ಆದರೆ, ಹಾಗೆ ರಣದಲ್ಲಿ ಮಡಿದವರಿಗೆ ಸದ್ಗತಿಯಾಗುವುದು ಅವರು ಧರ್ಮಪಾಲನೆಗಾಗಿ ಹೋರಾಡಿದಾಗ ಮಾತ್ರ ಎಂಬ ಪರಿಜ್ಞಾನ ಅವನಿಗಿಲ್ಲ ಎಂಬುದು ಸ್ಪಷ್ಟ. ಯುದ್ಧದಲ್ಲಿ ಮಡಿಯುವ ಉಭಯ ಪಕ್ಷದವರಿಗೂ ಸದ್ಗತಿ ಎಂದು ಶಾಸ್ತ್ರಗಳು ತಿಳಿಸಿಲ್ಲ. ಸತ್ಕಾರ್ಯಕ್ಕಾಗಿ ಹೋರಾಡುವವರಿಗೆ ಮಾತ್ರವೇ ವೀರಸ್ವರ್ಗ ಎಂಬುದು ಶಾಸ್ತ್ರಗಳ ನಿರ್ಣಯ.

ನೈನೋ ರಾಜ್ಞಃ ಪ್ರಜಾಭರ್ತುಃ ಧರ್ಮೋ ಯುದ್ಧೇ ವಧೋ ದ್ವಿಷಾಮ್।
ಇತಿ ಮೇ ನ ತು ಬೋಧಾಯ ಕಲ್ಪತೇ ಶಾಶ್ವತಂ ವಚಃ ॥ – ಭಾಗವತ (೧/೯/೫)

'ಯಃ ಪದಾತಿಂ ಹಂತಿ ಸ ಭವತಿ ಜಾತುರ್ಮಾಸ್ಯಯಾಜೀ ಯಃ ಸಾದಿನಂ ಸೋಽಗ್ನಿಷ್ಟೋ-
ಮಸ್ಯ ಯೋ ಹಂತಿ ಗಜರಥೌ ಸೋಽಶ್ವಮೇಧರಾಜಸೂಯಾಭ್ಯಾಮ್' ಇತ್ಯಾದಿ ಶಾಶ್ವತಂ
ವಚಃ ॥ –ಭಾ.ತಾ.

ಇಷ್ಟಂ ಚ ಯಜ್ಞೈಶ್ಚರಿತಂ ಚ ಪೂರ್ತೈಃ
ಪದಂ ರಿಪೂಣಾಂ ನಿಹಿತಂ ಹಿ ಮೂರ್ಧ್ನಿ ।
ಮೃತ್ಯುಶ್ಚ ಸಂಗ್ರಾಮಶಿರಸ್ಯವಾಪ್ತೋ
ರಣೋನ್ಮುಖೇನೈವ ಮಯಾ ಕಿಮನ್ಯತ್ ॥ ೧೦೧ ॥

ಅ: ನಾನು ಯಜ್ಞಗಳನ್ನು ಮಾಡಿದೆ, ಕೆರೆ ಬಾವಿಗಳನ್ನೂ ಕಟ್ಟಿಸಿದೆ, ಯುದ್ಧದಲ್ಲಿ ಶತ್ರುಗಳ ತಲೆಯನ್ನು ಮೆಟ್ಟಿದೆ. ರಣರಂಗದಲ್ಲಿ ಹೋರಾಡುತ್ತಿದ್ದಂತೆಯೇ ಸಾವನ್ನು ಕಂಡೆ. ಅದಕ್ಕಿಂತ ಬೇರೆ ಏನಿದೆ?

ವಿ: ದುರ್ಯೋಧನನ ಈ ಮಾತುಗಳಲ್ಲಿ ಗೀತೆಯ ಹದಿನಾರನೇ ಅಧ್ಯಾಯದಲ್ಲಿ ಬಂದಿರುವ ಆಸುರೀಸಂಪತ್ತಿನ ಲಕ್ಷಣಗಳೆಲ್ಲಾ ಗಮನಿಸಬಹುದು (೧೬/೭–೧೮).

---

೧೦೧. ಅಧೀತಂ ವಿಧಿವದ್ದತ್ತಂ ಭೂಃ ಪ್ರಶಸ್ತಾ ಸಸಾಗರಾ ।
ಮೂರ್ಧ್ನಿ ಸ್ಥಿತಮಮಿತ್ರಾಣಾಂ ಕೋ ನು ಸ್ವಸ್ತತರೋ ಮಯಾ ॥
ಯದಿಷ್ಟಂ ಕ್ಷತ್ರಬಂಧೂನಾಂ ಸ್ವಧರ್ಮಮನುಪಶ್ಯತಾಮ್ ।
ತದಿದಂ ನಿಧನಂ ಪ್ರಾಪ್ತಂ ಕೋ ನು ಸ್ವಸ್ತತರೋ ಮಯಾ ॥ – ಭಾರತ (ಶಲ್ಯ. ೬/೫೦,೫೧)

ಇಷ್ಟಾ ಭೋಗಾ ಮಯಾ ಭುಕ್ತಾಃ ಪ್ರಾಪ್ತಾ ಚ ಪರಮಾ ಗತಿಃ ।
ದುಃಖಿನೋ ದುಃಖಮಾಪ್ಸ್ಯಂತಿ ಪಾರ್ಥಾಸ್ತೇ ಕೂಟಯೋಧಿನಃ ॥ ೧೦೨ ॥

ಅ: ಇಷ್ಟವಾದ ಭೋಗಗಳನ್ನು ನಾನು ಅನುಭವಿಸಿದೆ. ಮುಂದೆ ಉತ್ತಮ ಗತಿಯನ್ನೂ ಪಡೆಯುವೆ. ಈವರೆಗೂ ದುಃಖ ಅನುಭವಿಸಿ ಕಪಟಯುದ್ಧ ಮಾಡಿದ ಪಾಂಡವರು ಮುಂದೆಯೂ ದುಃಖವನ್ನೇ ಪಡೆಯುವರು.

ಚಂದ್ರಸೂರ್ಯನಿಭೈಃ ಶೂರೈರ್ಧಾರ್ಮಿಕೈಃ ಸದ್ಭಿರುಜ್ಝಿತಾ ।
ಕೇವಲಾ ರತ್ನಹೀನೇಯಂ ಪಾಂಡವೈರ್ಭುಜ್ಯತಾಂ ಮಹೀ ॥ ೧೦೩ ॥

ಅ: ಈ ಭೂಮಿಯಲ್ಲಿ ಈಗ ಚಂದ್ರ ಸೂರ್ಯರಂತಿದ್ದಂತಹ ಶೂರರೂ, ಧಾರ್ಮಿಕರೂ ಆದ ಸಜ್ಜನರು ಇಲ್ಲವಾಗಿರುವರು. ರತ್ನಗಳೂ ಉಳಿದಿಲ್ಲ. ಇಂತಹ ಕೇವಲ ಭೂಮಿಯನ್ನು ಪಾಂಡವರು ಅನುಭವಿಸಿಕೊಳ್ಳಲಿ.

ದುರ್ಯೋಧನನ ಮೇಲೆ ಪುಷ್ಪವೃಷ್ಟಿ

ಇತ್ಯುಕ್ತವತ್ಯೇವ ನೃಪೇ ಸುರೇಶೈಃ
ಪ್ರಸೂನವೃಷ್ಟಿರ್ವಿಹಿತಾ ಪಪಾತ ।
ತಾಮೇವ ಬುದ್ಧಿಂ ಧೃತರಾಷ್ಟ್ರಸೂನೋಃ
ಕೃತ್ವಾ ದೃಢಾಂ ಪಾತಯಿತುಂ ತಮೋಽಂಧೇ ॥ ೧೦೪ ॥

ಅ: ಹೀಗೆ ದುರ್ಯೋಧನ ಹೇಳುತ್ತಿದ್ದಂತೆಯೇ ದೇವಶ್ರೇಷ್ಠರು ಮಾಡಿದ ಪುಷ್ಪವೃಷ್ಟಿ ಬಿದ್ದಿತು. ದುರ್ಯೋಧನನಿಗೆ ಅದೇ ಕೆಟ್ಟಬುದ್ಧಿಯನ್ನು ಮತ್ತಷ್ಟು ದೃಢವಾಗಿಸಿ ಅವನನ್ನು ತಮಸ್ಸಿನಲ್ಲಿ ಬೀಳಿಸಲೆಂದು ಅವರು ಹಾಗೆ ಮಾಡಿದ್ದರು.

ಎ: ೧) ದುರ್ಯೋಧನನ ಮೇಲೆ ಪುಷ್ಪವೃಷ್ಟಿಯಾದ ವಿವರ ಮಹಾಭಾರತದಲ್ಲಿದೆ. ಮೇಲ್ನೋಟಕ್ಕೆ ಅದು ದುರ್ಯೋಧನನ ಮಾತುಗಳಿಗೆ ಸಮ್ಮತಿಯಂತಿದ್ದು ಅವನು ಮಹಾಧರ್ಮಿಷ್ಠ ಎಂಬ ಭ್ರಮೆಗೆ ಕಾರಣವಾಗುವುದು. ಅದರಿಂದ ಆಚಾರ್ಯರು ಅದರ ಬಗ್ಗೆ ನಿರ್ಣಯವಿತ್ತಿರುವರು. ಪುಣ್ಯಕಾರ್ಯ ಅತ್ಯಂತ ಶ್ರದ್ಧೆ ಹಾಗೂ ಪರಿಪೂರ್ಣ ನಿಶ್ಚಯಗಳಿಂದ ಮಾಡಿದಾಗ ಮಾತ್ರ

---

೧೦೩. ಕ್ಷೀಣರತ್ನಾಂ ಚ ಪೃಥಿವೀಂ ಹತಕ್ಷತ್ರಿಯಪುಂಗವಾಮ್ ।
ನ ಹ್ಯುತ್ಸಹಾಮ್ಯಹಂ ಭೋಕ್ತುಂ ವಿಧವಾಮಿವ ಯೋಷಿತಾಮ್ ॥ -ಭಾರತ (ಶಲ್ಯ. ೩೧/೪೫)

ಪೂರ್ಣಫಲಕ್ಕೆ ಕಾರಣವಾಗುವಂತೆ ಪಾಪ ಕಾರ್ಯ ಸಹ ಅಂತಹುದೇ ದೃಢನಿಶ್ಚಯದಿಂದ ಮಾಡಿದಾಗ ಪೂರ್ಣ ಪಾಪಫಲಕ್ಕೂ ಕಾರಣವಾಗುವುದು. ಸಂದೇಹಿಸಿದಾಗ ಪುಣ್ಯಫಲ ಕಡಿಮೆಯಾಗುವಂತೆ ಪಾಪಫಲವೂ ಪಶ್ಚಾತ್ತಾಪಪಟ್ಟಾಗ ಕಡಿಮೆಯಾಗುವುದು(ಮನುಸ್ಮೃತಿ). ಧರ್ಮರಾಜನಿಗೆ ಸಂಶಯದಿಂದಾಗಿ ಪುಣ್ಯಫಲ ಕಡಿಮೆಯಾದ ವಿವರ ಹಿಂದೆ ಬಂದಿದೆ. ಅಜಾಮಿಳಾದಿಗಳಿಗೆ ಅಂತ್ಯಕಾಲದಲ್ಲಿ ಪಶ್ಚಾತ್ತಾಪದ ಹರಿನಾಮಸ್ಮರಣೆಯಿಂದಾಗಿ ಸದ್ಗತಿ ಲಭಿಸಿದ ವಿವರ ಸುಪ್ರಸಿದ್ಧ. ಆದರೆ, ದುರ್ಯೋಧನನು ಅಂಥವನಲ್ಲ, ಅವನು ಸ್ವಭಾವತಃ ಪರಮ ಪಾಪಿ. ಅವನಿಗೆ ಒದಗಬೇಕಾದದ್ದು ಪರಮ ದುರ್ಗತಿಯೇ. ಅಂತ್ಯಕಾಲದಲ್ಲೂ ಕೃಷ್ಣನನ್ನು ಅತ್ಯಂತ ಹೇಯವಾದ ರೀತಿಯಲ್ಲಿ ಕಾಣುವ ಮೂಲಕ ಅವನು ಮಹಾತಾಮಸ ಎಂಬುದು ಸಿದ್ಧವಾಗಿದೆ. ದೇವತೆಗಳು ಅವನ ಆ ತಾಮಸ ಮತಿಯನ್ನೇ ಗಟ್ಟಿಗೊಳಿಸಲೆಂದು ಆ ರೀತಿ ಪುಷ್ಪವೃಷ್ಟಿಮಾಡಿ ಅವನಿಗೆ ಪೂರ್ಣಪಾಪ ಫಲ ದೊರೆಯುವಂತೆ ಮಾಡಿದರು ಎಂದರ್ಥ.

೨) ಇದರಿಂದ ಪುಷ್ಪವೃಷ್ಟಿ ಮೊದಲಾದವುಗಳೆಲ್ಲ ಯೋಗ್ಯತೆಯ ನಿರ್ಣಾಯಕವಾದ ಉಚಿತ ಆಧಾರಗಳಾಗಿರದೇ ಪರಿಪೂರ್ಣವಾದ ಜ್ಞಾನ ದಾರ್ಢ್ಯಾದಿಗಳೇ ಮುಖ್ಯವಾಗಿ

---

೧೦೪. ಭಗವನ್ನಿಂದಾಂ ಕುರ್ವತಿ ಮ್ರಿಯಮಾಣೇ ದುರ್ಯೋಧನೇ ಪುಷ್ಪವೃಷ್ಟಿರಭೂದಿತಿ ಪೌರಾಣಿಕೀ ಪ್ರಥಾ ಅಸ್ತಿ। ಅಸ್ಯಾಸ್ತಾತ್ಪರ್ಯಮಾಹ ಇತ್ಯುಕ್ತವತ್ಯೇವ ನೃಪ ಇತಿ। ಕಥಮನ್ಯಥಾ ''ಭಗವನ್ನಿಂದಯಾ ವೇನೋ ದ್ವಿಜೈಸ್ತಮಸಿ ಪಾತಿತಃ'' ''ನಿಂದಾಂ ಭಗವತಃ ಶ್ರುಣ್ವನ್ ಯಾತ್ಯಧಸ್ಸುಕೃತಾಚ್ಚ್ಯುತಃ'' ಇತ್ಯಾದಿಸ್ಮೃತಿವಿರುದ್ಧಾಂ ಭೂಭಾರಭೂತಸ್ಯ ಸಕಲ-ಸುರಾಣಾಮಾದಿವೈರಿಣಃ ಸಾಕ್ಷಾದ್ಭಗವಂತಂ ಬಹುಧಾ ನಿಂದತೋ ದುರ್ಯೋಧನಸ್ಯ ಶಿರಸಿ ದುರ್ಯೋಧನಾದಿ ದುರ್ಜನಹನನಾಯೈವ ಕೃತಾವತಾರಾಃ ಅದ್ಯಾಪಿ ದುರ್ಯೋಧನಪರಾಭವಮರ್ಥಯಮಾನಾಃ ಪಾಂಡವಪಕ್ಷಪಾತೇನ ದುರ್ಯೋಧನಪಕ್ಷಪಾತಿನೋ ದೈತ್ಯಾನ್ ಪ್ರತಿ ಕಲಹಂ ಕುರ್ವಾಣಾಃ ಪರಮವೈಷ್ಣವಾ ದೇವಾಃ ಸ್ಮೃತಿಯುಕ್ತಿವಿರುದ್ಧಾಂ ಪುಷ್ಪವೃಷ್ಟಿಂ ಚ ಕುರ್ಯುಃ। ಕಥಂ ಚ ಶೈವಮತಪ್ರವರ್ತಕೇಷು ವಿಷ್ಣುವೈಷ್ಣವದ್ವೇಷಿಣಾಮಗ್ರೇಸರೇಷು ಶಿಶುಪಾಲಜರಾಸಂಧಕಂಸದುಶ್ಶಾಸನಾದಿಷು ಮ್ರಿಯಮಾಣೇಷು ಸತ್ಸು ಕದಾಚಿತ್ಕ್ವಚಿದಪ್ಯಕೃತಾಂ ಪುಷ್ಪವೃಷ್ಟಿಂ ತತ್ಸಮಾನಯೋಗಕ್ಷೇಮೇ ದುರ್ಯೋಧನೇ ಚ ಕುರ್ಯುಃ। ತಸ್ಮಾತ್ಸರ್ವಜ್ಞಶಿಖಾಮಣಿನಾ ಯೌಕ್ತಿಕಾಗ್ರೇಸರೇಣ ತಾತ್ಪರ್ಯಕಾರೇಣೋಕ್ತಮೇವ ತಾತ್ಪರ್ಯಂ ಯುಕ್ತಮಿತ್ಯರ್ಥಃ। ಪಾತಯಿತುಂ ತಮೋಽಂಧ ಇತ್ಯತ್ರ ತಮಸಾ ಅಂಧಯತಿ ಲೋಕಾನಿತಿ ತಮೋಽಂಧಂ ಅಂಧಂತಮ ಇತ್ಯರ್ಥಃ॥ – (ವಾ.)

೧೦೪. ಅಸ್ಯ ವಾಕ್ಯಸ್ಯ ನಿಧನೇ ಕುರುರಾಜಸ್ಯ ಧೀಮತಃ।
ಅಪತತ್ ಸುಮಹದ್ವರ್ಷಂ ಪುಷ್ಪಾಣಾಂ ಪುಣ್ಯಗಂಧಿನಾಮ್ ॥ - ಭಾರತ (ಶಲ್ಯ. ೬೧/೫೪)

೧೦೪. ದುರ್ಯೋಧನೇ ಕೃಷ್ಣಂ ನಿಂದತಿ ಸತಿ ದೇವೈಃ ಕೃತಂ ಪುಷ್ಪವರ್ಷಾಧಿಕಂ ಪುನರಪಿ ತಸ್ಯ ಕೃಷ್ಣದ್ವೇಷಾತಿಶಯಂ ದೃಢೀಕರ್ತುಮೇವ । ನ ತು ದುರ್ಯೋಧನೇ ಪ್ರೀತ್ಯಾ । ತಥಾ ಸತೀಂದ್ರಕೃತ ಶೋಣಿತಪಾಂಸು ವರ್ಷಾದೇರ್ವಿರೋಧಾತ್ । ಭೂಭಾರಭೂತದುರ್ಯೋಧನಹರಣಾಯ ಶ್ವೇತದ್ವೀಪಂ ಗತ್ವಾ ಕೃಷ್ಣಾವತಾರಾಯ ಕೃತಪ್ರಯತ್ನಾನಾಂ ದುರ್ಯೋಧನೇ ಮಹಾದ್ವೇಷವತಾಂ ದೇವಾನಾಂ ಪುನಸ್ತಸ್ಮಿನ್ನೇವ ಪ್ರೀತೇರಸಂಭಾವಿತತ್ವಾಚ್ಚ ।
- ಲಕ್ಷಾಲಂಕಾರ

ನಿರ್ಣಾಯಕವಾದ ಸದ್ಗುಣಗಳು ಎಂಬ ಪ್ರಮೇಯ ನಿರೂಪಿತವಾಗಿದೆ – **'ವಿಷ್ಣುಭಕ್ತಿರ್ಹಿ ಸರ್ವೇಷಾಂ ಸದ್ಗುಣಾನಾಂ ಸ್ವಲಕ್ಷಣಮ್'.**

೩) ಶ್ರೀಮನ್ಮಧ್ವಾಚಾರ್ಯರು ಐತರೇಯ ಶ್ರುತಿಯ ಅರ್ಥವನ್ನು ಹೇಳುತ್ತಿದ್ದಾಗ ಅವರ ಮೇಲೆ ಪುಷ್ಪವೃಷ್ಟಿಯಾದ ವಿವರ ಸುಮಧ್ವವಿಜಯದಲ್ಲಿದೆ. ಅದು ಅವರ ಜೀವೋತ್ತಮತ್ವಕ್ಕೆ ಗಮಕವಾದ ನಿದರ್ಶನ :

ಇತಿ ನಿಗದಿತವಂತಸ್ತತ್ರ ವೃಂದಾರಕೇಂದ್ರಾ
ಗುರುವಿಜಯಮಹಂ ತಂ ಲಾಲಯಂತೋ ಮಹಾಂತಮ್ ।
ವವೃಷುರಖಿಲದೃಶ್ಯಂ ಪುಷ್ಪವಾರಂ ಸುಗಂಧಂ
ಹರಿದಯಿತವರಿಷ್ಠೇ ಶ್ರೀಮದಾನಂದತೀರ್ಥೇ ॥ – ಸುಮಧ್ವವಿಜಯ (೧೬/೫೮)

ಪುಷ್ಪವೃಷ್ಟಿಯಿಂದ ಫಲನಿರ್ಣಯ ಆಗದು

ಸಂಭಾವಯತ ಆತ್ಮಾನಂ ವಾಸುದೇವಂ ವಿನಿಂದತಃ ।
ತತ್ಪರಾಂಶ್ಚ ಕಥಂ ನ ಸ್ಯಾತ್ ತಮೋಽಂತೇ ಚ ವಿಶೇಷತಃ ॥ ೧೦೫ ॥

ಅ: ತನ್ನನ್ನು ಹೊಗಳಿಕೊಳ್ಳುತ್ತಾ ವಾಸುದೇವನನ್ನು, ಅವನ ಭಕ್ತರನ್ನು ನಿಂದಿಸುತ್ತಾ ಇರುವವನಿಗೆ ಕೊನೆಯಲ್ಲಿ ವಿಶೇಷವಾದ ತಮಸ್ಸು ಹೇಗೆ ತಾನೇ ಆಗದು?

ವಿ: ಆತ್ಮಪ್ರಶಂಸೆ, ವಿಷ್ಣುದ್ವೇಷ, ವಿಷ್ಣುಭಕ್ತದ್ವೇಷ – ಈ ಮೂರೂ ಸಹ ಪ್ರಮುಖ ತಮಃಸಾಧನಗಳು ಎಂದರ್ಥ.

ದುರ್ಯೋಧನನಿಗೆ ತಮಸ್ಸೇ ಗತಿ

ಯದ್ಯೈಕೈಕಮಲಂ ತತ್ರ ದುಃಖಾಧಿಕ್ಯಂ ಸಮುಚ್ಚಯಾತ್ ।
ಇತಿ ತತ್ಕಾರಯಿತ್ವೇಶ ಆಹ ಮೋಘಂ ತವಾಖಿಲಮ್ ॥ ೧೦೬ ॥

---

೧೦೫. 'ಅಂತರ್ಭಕ್ತಾ ಬಹಿರ್ವೈರಾ ಹಿರಣ್ಯಾದ್ಯಾ ಹರೇರ್ಮತಾಃ ।
ತತ್ರ ಭಕ್ತ್ಯಾಭವನ್ ಪೂತಾ ದ್ವೇಷ ಆವೇಶಕಾನ್ ಗತಃ ।
ಬ್ರಹ್ಮಜಾ ಅಸುರಾ ಯೇ ತು ವಿಷ್ಣೋಃ ಪಾರ್ಷದಾನ್ ಗತಾಃ ।
ಬಲ್ಯಾದೀಂಶ್ಚ ಹರೇರ್ದ್ವೇಷಂ ತತಃ ಕೃತ್ವಾ ತಮೋಗತಾಃ' ಇತಿ ಚ ॥ – ಭಾ.ತಾ. (೩/೧೭/೩೧)

೧೦೬. ಏಕೈಕಮಲಮಿತ್ಯತ್ರ ತತ್ರ= ಅಂಧಂತಮಃ ಪ್ರಾಪ್ತೌ ವಿಷ್ಣುನಿಂದಾವೈಷ್ಣವನಿಂದಾऽऽತ್ಮಪ್ರಶಂಸೇತ್ಯಾದಿ-ಪಾಪೇಷು ಏಕೈಕಮಲಂ ತದಾ ಸಮುಚ್ಚಯಾತ್ ದುಃಖಾಧಿಕ್ಯಂ ಕಿಮು ವಕ್ತವ್ಯಮಿತಿ ಯೋಜನಾ ॥ – (ವಾ.)

ಅ: ಇವುಗಳಲ್ಲಿ ಒಂದೊಂದೂ ಹೆಚ್ಚಿನ ದುಃಖಕ್ಕೆ ಕಾರಣವಾಗಿರುವಾಗ ಎಲ್ಲ ಒಟ್ಟು ಸೇರಿರುವಾಗ ಹೇಳುವುದೇನು ಎಂದು ತಿಳಿಸಲೆಂದು ಕೃಷ್ಣ ಅದನ್ನು ಹಾಗೆ ಮಾಡಿಸಿ. ನುಡಿದ - 'ನೀನು ಮಾಡಿದ್ದೆಲ್ಲ ವ್ಯರ್ಥ'.

ವಿ: ದುರ್ಯೋಧನ ಈ ಮೂರನ್ನೂ ಸಮಗ್ರವಾಗಿ ಮಾಡಿದ ಮಹಾಪಾಪಿ ಎಂದರ್ಥ. ಕೃಷ್ಣನೇ ದೇವತೆಗಳಿಗೆ ಹೇಳಿ ಪುಷ್ಪವೃಷ್ಟಿಯನ್ನು ಮಾಡಿಸಿದ್ದುದಾಗಿತ್ತು ಎಂಬ ವಿಶೇಷವೂ ಇಲ್ಲಿದೆ.

ನೃಶಂಸಸ್ಯ ಕೃತಘ್ನಸ್ಯ ಗುಣವದ್ದ್ವೇಷಿಣಃ ಸದಾ ।
ಯದಿ ಧರ್ಮಫಲಂ ಧ್ವಾಂತಂ ಸೂರ್ಯವತ್ ಸ್ಯಾತ್ ಪ್ರಕಾಶಕಮ್ ॥ ೧೦೭ ॥

ಅ: ಕ್ರೂರಿಗೆ, ಕೃತಘ್ನನಿಗೆ, ಗುಣವಂತರನ್ನು ಸದಾ ದ್ವೇಷಿಸುವವನಿಗೆ ಪುಣ್ಯಫಲ ದೊರೆಯುವುದಿದ್ದರೆ ಕತ್ತಲೆ ಸೂರ್ಯನಂತೆ ಬೆಳಗುವುದು ಎನ್ನಬೇಕಾಗುವುದು.

ವಿ: ದುರ್ಯೋಧನನಂತಹ ಮಹಾತಾಮಸಿಗೆ ಸದ್ಗತಿ ದೊರೆಯುವುದೆಂದು ಹೇಳುವುದು ಕತ್ತಲೆ ಸೂರ್ಯನಂತೆ ಪ್ರಕಾಶಮಯವಾದುದು ಎಂಬಷ್ಟೇ ಅವಿವೇಕ ಎಂದು ಭಾವ.

ವದನ್ ಪುನಃ ಪುನರಿದಂ ಧರ್ಮತೋ ಹತ ಇತ್ಯಪಿ ।
ಖ್ಯಾಪಯಾಮಾಸ ಭಗವಾನ್ ಜನೇ ನಿಜಜನೇಷ್ಟದಃ ॥ ೧೦೮ ॥

ಅ: ಭಕ್ತಜನರಿಗೆ ಇಷ್ಟಾರ್ಥ ನೀಡುವ ಕೃಷ್ಣ ಪುನಃ ಪುನಃ ಹೀಗೆ ಹೇಳುತ್ತಾ ಭೀಮಸೇನನಿಂದ ದುರ್ಯೋಧನ ಧರ್ಮದಿಂದಲೇ ಹತನಾದ ಎಂಬುದನ್ನು ಭಕ್ತಜನರಿಗೆ ಸಾರಿದ.

ಪ್ರಖ್ಯಾಪಿತೇ ವಾಸುದೇವೇನ ಧರ್ಮೇ
ಸತಾಂ ಸರ್ವೇಷಾಂ ಹೃದ್ಯಮಾಸೀತ್ ಸಮಸ್ತಮ್ ।
ಹತಂ ಚ ಧರ್ಮೇಣ ನೃಪಂ ವ್ಯಜಾನನ್
ಪಾಪೋಽಯಮಿತ್ಯೇವ ವಿನಿಶ್ಚಿತಾರ್ಥಾಃ ॥ ೧೦೯ ॥

---

೧೦೬. ಸರ್ವಂ ಮೋಘಂ ಶುಭಂ ತಸ್ಯ ಯೋಽವಜಾನಾತಿ ಕೇಶವಮ್ ।
ಅಧರಂ ಯಾತಿ ಚ ತಮಃ ಪ್ರಾದುರ್ಭಾವಗತೋಽಪ್ಯತಃ ।
ಜ್ಞೇಯಃ ಕೇವಲಚಿದ್ದೇಹೋ ನಿರ್ದೋಷಃ ಪೂರ್ಣಸದ್ಗುಣಃ' ಇತಿ ಭವಿಷ್ಯತ್ಪರ್ವಣಿ ॥
- ಗೀತಾತಾತ್ಪರ್ಯೇ (೯/೧೧)

೧೦೭. ಯದಿ ಧರ್ಮಫಲಂ ಧ್ವಾಂತಮಿತ್ಯತ್ರ ಈದೃಶಸ್ಯಾಪಿ ತವ ಯದಿ ಧರ್ಮಫಲಂ ಸ್ಯಾತ್ ತರ್ಹಿ ಧ್ವಾಂತಮಪಿ ಸೂರ್ಯವತ್ಪ್ರಕಾಶಕಂ ಸ್ಯಾದಿತಿ ಯೋಜನಾ ॥ – (ವಾ.)

ಅ: ಶ್ರೀಕೃಷ್ಣನಿಂದ ಹಾಗೆ ಧರ್ಮದ ಸ್ವರೂಪವು ನಿರೂಪಿತವಾದಾಗ ಸಕಲ ಸಜ್ಜನರಿಗೆಲ್ಲ ಸಕಲವೂ ಮನಸ್ಸಿಗೆ ಹಿಡಿಯಿತು; ಅವರೆಲ್ಲ ಪಾಪಿಯಾದ ದುರ್ಯೋಧನ ಧರ್ಮದಿಂದಲೇ ಹತನಾದ ಎಂದು ಖಚಿತವಾಗಿ ತಿಳಿದುಕೊಂಡರು.

ನೀಗದ ಧರ್ಮರಾಜನ ಸಂಶಯ

ಯುಧಿಷ್ಠಿರೋಽಪಾಯದರ್ಶೀ ಸದೈವ
ಸಸಂಶಯೋಽಭೂತ್ ಸುಮನೋಽಭವೃಷ್ಟ್ಯಾ ।
ಸ್ನೇಹಾದ್ದ್ರೌಣಿಃ ಸಂಜಯೋ ರೌಹಿಣೇಯೋ
ದುರ್ಯೋಧನಾತ್ ಪಾಪಮಿತ್ಯೇವ ಚೋಚುಃ ॥ ೧೧೦ ॥

ಅ: ಧರ್ಮರಾಜ ಸದಾ ಪಾಪಭೀರುವಾದವನು. ಪುಷ್ಪವೃಷ್ಟಿಯಿಂದಾಗಿ ಸಂಶಯ-ಕ್ಕೊಳಗಾದ. ದುರ್ಯೋಧನನ ಮೇಲಿನ ಸ್ನೇಹದಿಂದಾಗಿ ಅಶ್ವತ್ಥಾಮ, ಸಂಜಯ ಮತ್ತು ಬಲರಾಮ ದುರ್ಯೋಧನ ವಧೆಯನ್ನು ಅಧರ್ಮವೆಂದು ಹೇಳಿದರು.

ವಿ: ೧) ಇಲ್ಲಿ ಅಪಾಪದರ್ಶಿಯೆಂಬುದಾಗಿಯೂ ಪದಚ್ಛೇದ ಮಾಡಬಹುದು, ಆಗ ಧರ್ಮರಾಜ ದುರ್ಯೋಧನನಲ್ಲಿಯೂ ತಪ್ಪನ್ನು ಕಾಣದವನು ಎಂದರ್ಥವಾಗುವುದು. ಅಜಾತಶತ್ರು ಎಂಬ ಅರ್ಥದಲ್ಲಿ ಈ ಪದ ಬಂದಿದೆ ಎಂದು ತಿಳಿಯಬಹುದು.

೨) ಬಲರಾಮ, ಅಶ್ವತ್ಥಾಮ, ಸಂಜಯ ಮೂವರು ಪರಮ ಸಾತ್ವಿಕರೇ ಆದರೂ ದುರ್ಯೋಧನನ ಮೇಲಿನ ಸ್ನೇಹದಿಂದಾಗಿ ಭೀಮ ಮಾಡಿದ ಅವನ ವಧೆಯನ್ನು ಅಧರ್ಮವೆಂದು ಹೇಳಿದರು. ವಾಸ್ತವಿಕವಾಗಿ ಅದು ಧರ್ಮವೆಂಬುದು ಅವರಿಗೂ ತಿಳಿದ ವಿಷಯವೇ ಆಗಿತ್ತು ಎಂದರ್ಥ.

ಪಾಂಡವರ ಜಯಘೋಷ

ತತಃ ಕೃಷ್ಣಃ ಪಾಂಡುಪಾಂಚಾಲಕೈಸ್ತೈರ್ಭೃಶಂ
ನದದ್ಭಿರ್ಹರ್ಷಿತೈಃ ಸಮೇತಃ ।
ಯಯೌ ವಿರಿಂಚೇಶಸುರೇಂದ್ರಮುಖ್ಯೈಃ
ಸಂಪೂಜಿತಸ್ತೈಶ್ಚ ರಣಾಂಕಣಾತ್ ಸ್ವಯನ್ ॥ ೧೧೧ ॥

ಅ: ಬಳಿಕ ಕೃಷ್ಣ ಬಹಳವಾಗಿ ಆನಂದಿತರಾಗಿ ಜಯಘೋಷದಲ್ಲಿ ತೊಡಗಿದ್ದ ಪಾಂಡವರು ಮತ್ತು ಪಾಂಚಾಲರೊಂದಿಗೆ ಕೂಡಿ ಬ್ರಹ್ಮ, ಶಿವ, ದೇವೆಂದ್ರ ಮೊದಲಾದವರಿಂದ ಬಹಳವಾಗಿ ಪೂಜಿತನಾಗಿ ಮುಗುಳ್ನಗುತ್ತಾ ಯುದ್ಧರಂಗದಿಂದ ಹೊರಟ.

ಕೃಷ್ಣ ಯುಯುತ್ಸುಗಳಿಂದ ಧೃತರಾಷ್ಟ್ರ ಗಾಂಧಾರಿಯರ ಸಾಂತ್ವನ

ತತಃ ಶ್ರುತ್ವಾ ಸಂಜಯಾದ್ದುಃಖಿತಪ್ತಂ
ಸಂಬೋಧಯಿಷ್ಯನ್ ಪಿತರಂ ಯುಯುತ್ಸುಃ ।
ಕೃಷ್ಣಸ್ಯ ರಾಜ್ಞಶ್ಚ ಮತೇನ ಯಾತೋ
ಜಗಾಮ ಚಾನ್ವೇವ ಜನಾರ್ದನಶ್ಚ ॥ ೧೧೨ ॥

ಅ: ಬಳಿಕ ಸಂಜಯನಿಂದ ವಿಷಯ ತಿಳಿದು ದುಃಖತಪ್ತನಾದ ಧೃತರಾಷ್ಟ್ರನನ್ನು ಸಂತೈಸಲು ಕೃಷ್ಣ ಮತ್ತು ಯುಧಿಷ್ಠಿರನ ಆದೇಶದಂತೆ ಯುಯುತ್ಸು ಅವರ ಬಳಿ ತೆರಳಿದ. ಅವನ ಹಿಂದೆ ಶ್ರೀಕೃಷ್ಣನೂ ನಡೆದ.

ವಿ: ೧) ತನ್ನ ಮಕ್ಕಳೆಲ್ಲರ ಸಾವನ್ನು ಕೇಳಿ ಧೃತರಾಷ್ಟ್ರ ಗಾಂಧಾರಿಯರು ತುಂಬಾ ದುಃಖಿತರಾಗಿ ತನ್ನ ಮೇಲೆ ಕೋಪಗೊಳ್ಳುವರೆಂಬ ಅಂಜಿಕೆಯಿಂದ ಧರ್ಮರಾಜ ಆತಂಕಪಡುವುದನ್ನು ಕಂಡು ಅವರಿಬ್ಬರನ್ನು ಸಮಾಧಾನಪಡಿಸಲೆಂದು ಕೃಷ್ಣ ಯುಯುತ್ಸುವನ್ನು ಹಸ್ತಿನಾಪುರಕ್ಕೆ ಕಳುಹಿಸಿದ ಎಂದರ್ಥ.

೨) ಧರ್ಮರಾಜನಿಗೆ ಒಂದೆಡೆ ಅವರ ಮಕ್ಕಳನ್ನೆಲ್ಲ ಕೊಂದದ್ದರಿಂದಾಗಿ ಅವರಿಗೆ ಮುಖ ತೋರಿಸಲು ನಾಚಿಕೆ. ಮತ್ತೊಂದೆಡೆ ಅವರು ದುಃಖದಿಂದಾಗಿ ಕೆರಳಿ ಕೋಪಗೊಂಡಾರೆಂಬ ಅಂಜಿಕೆ ಉಂಟಾಗಿದ್ದವು ಎಂದರ್ಥ.

ಧರ್ಮ್ಯಯುಕ್ತೈಶ್ಚ ತತ್ತ್ವಾರ್ಥೈರ್ಲೋಕವೃತ್ತಾನುದರ್ಶಕೈಃ ।
ವಾಕ್ಯೈ ರಾಜಾನಮಾಶ್ವಾಸ್ಯ ಪ್ರಾಯಾತ್ ಪಾರ್ಥಾನ್ ಪುನರ್ಹರಿಃ ॥ ೧೧೩ ॥

ಅ: ಕೃಷ್ಣ ಧರ್ಮಶಾಸ್ತ್ರಕ್ಕೆ ಅನುಗುಣವಾದಂತಹ ತತ್ವಾರ್ಥಯುಕ್ತವಾದಂತಹ ಲೋಕ-ನಡತೆಯ ವಿವರಣೆಗಳಿಂದ ಕೂಡಿದ ಮಾತುಗಳಿಂದ ಧೃತರಾಷ್ಟ್ರನನ್ನು ಸಮಾಧಾನಪಡಿಸಿ ಪುನಃ ಪಾಂಡವರ ಬಳಿಗೆ ತೆರಳಿದ.

ಎಃ ೧) ಧೃತರಾಷ್ಟ್ರ ಗಾಂಧಾರಿಯರ ಬಳಿಗೆ ಸಮಾಧಾನ ಮಾಡಲೆಂದು ಹೊರಟ ಕೃಷ್ಣ ಅವರು ದುಃಖದಿಂದ ಅಳುತ್ತಿದ್ದುದನ್ನು ನೋಡಿ ಅವರನ್ನು ಸಮಾಧಾನಪಡಿಸಲೆಂದು ತಾನು ಅವರಿಗಿಂತ ಜೋರಾಗಿ ಅತ್ತನು ಎಂಬ ಸ್ವಾರಸ್ಯಕರ ಉಲ್ಲೇಖ ಮಹಾಭಾರತದಲ್ಲಿದೆ :

ತತಸ್ತು ಯಾದವಶ್ರೇಷ್ಠೋ ಧೃತರಾಷ್ಟ್ರಮಧೋಕ್ಷಜಃ ।
ಪಾಣಿಮಾಲಂಬ್ಯ ರಾಜೇಂದ್ರ ಸುಸ್ವರಂ ಪ್ರರುರೋದ ಹ ॥ – (ಶಲ್ಯ.೬೩/೩೭,೩೮)

೨) ಅದಕ್ಕೆ ಕಾರಣ ಕೇಳಿದಾಗ ಕೃಷ್ಣ 'ನೀವು ಅವರು ಸತ್ತದ್ದಕ್ಕೆ ಅಳುತ್ತಿದ್ದರೆ, ಅಂತಹ ಪಾಪಿಗಳ ಸಾವಿಗಳುತ್ತಿರುವ ನಿಮ್ಮನ್ನು ಕಂಡು ಅಳುತ್ತಿರುವೆ' ಎಂದು ನುಡಿದ. ಆಗ ಅವರಿಗೆ ಸಮಾಧಾನವಾಯಿತು. ಆ ವೇಳೆಗೆ ಕೃಷ್ಣ ಅಶ್ವತ್ಥಾಮ ದುರ್ಯೋಧನ ಪ್ರೀತಿಗಾಗಿ ಉಪ–ಪಾಂಡವರನ್ನು ಕೊಲ್ಲಲು ಯೋಜಿಸಿದ್ದನ್ನು ಗಮನಿಸಿ ಅಲ್ಲಿಂದ ಕೂಡಲೇ ತೆರಳಿದ.

ಸಮಾಶ್ವಾಸ್ಯ ಚ ಗಾಂಧಾರೀಂ ಧೃತರಾಷ್ಟ್ರಂ ಚ ಮಾಧವಃ ।
ದ್ರೌಣಿಸಂಕಲ್ಪಿತಂ ಭಾವಮವಬುದ್ಧ್ಯ ಕೇಶವಃ ॥ – ಭಾರತ (ಶಲ್ಯ. ೬೩/೭೦,೭೧)

ಕೌರವರ ಶಿಬಿರಕ್ಕೆ ಪಾಂಡವರು

ಕಾಲಾನುಸಾರತೋ ದೇವಾಂಶ್ಚೋಪಸಂಹರ್ತುಮಚ್ಯುತಃ ।
ಯಯೌ ಸಪಾರ್ಥಶೈನೇಯಃ ಕುರೂಣಾಂ ಶಿಬಿರಂ ನಿಶ ॥ ೧೧೪ ॥

ಅಃ ಕಾಲಾನುಸಾರವಾಗಿ ದೇವಾವತಾರರಾಗಿದ್ದ ಪಾಂಡವಪಕ್ಷದವರನ್ನೂ ಸಹ ಸಂಹರಿಸ-ಲೆಂದು ಶ್ರೀಕೃಷ್ಣನು ಪಾಂಡವರು ಮತ್ತು ಸಾತ್ಯಕಿಯೊಂದಿಗೆ ಕೌರವರ ಶಿಬಿರಕ್ಕೆ ತೆರಳಿದ.

ಎಃ ೧) ಶ್ರೀಕೃಷ್ಣ ಹಾಗೆ ತೆರಳಿದವನೇ ಪಾಂಡವರನ್ನು ಕೌರವರ ಶಿಬಿರಕ್ಕೆ ಕರೆದೊಯ್ದ. ಹಾಗೆ ಕರೆದೊಯ್ಯಲು ಕಾರಣವನ್ನು ಇಲ್ಲಿ ತಿಳಿಸಿರುವರು.

೨) ಅಶ್ವತ್ಥಾಮ ಪಾಂಡವರ ಶಿಬಿರವನ್ನು ಪ್ರವೇಶಿಸಿ ಅಲ್ಲಿದ್ದವರನ್ನೆಲ್ಲ ಕೊಲ್ಲುವ ಯೋಜನೆ ಮಾಡಿರುವನು. ಭೀಮಾದಿ ಪಾಂಡವರು ಅಲ್ಲಿದ್ದರೆ ಅಶ್ವತ್ಥಾಮನಿಗೆ ಆ ಕಾರ್ಯ ಸಾಧ್ಯ–ವಾಗುವುದಿಲ್ಲ. ಆದರೆ, ಅವರೆಲ್ಲ ಅಶ್ವತ್ಥಾಮನಿಂದ ಹತರಾಗಲೇಬೇಕು, ಆ ಮೂಲಕ ಅವತಾರ ಕಾರ್ಯ ಪೂರೈಸಿರುವ ಅವರೆಲ್ಲ ತಮ್ಮ ಲೋಕಗಳಿಗೆ ಹಿಂದಿರುಗಬೇಕು. ಅದರಿಂದ ಪಾಂಡವರು ಆ ಶಿಬಿರದಲ್ಲಿ ಇರದಂತೆ ಮಾಡಬೇಕು ಎಂದು ಸಂಕಲ್ಪಿಸಿದ ಕೃಷ್ಣ ಅವರನ್ನು ಕೌರವರ ಶಿಬಿರಕ್ಕೆ ಸಾತ್ಯಕಿಯೊಂದಿಗೆ ಕರೆದೊಯ್ದ.

---

೧೧೪. ಅಶ್ವತ್ಥಾಮ್ನೇ ಅವಕಾಶಂ ದಾತುಮಿತಿ ಭಾವಃ । – (ವ.)

೩) ಕೆಲವರು ಕೃಷ್ಣ ಪಾಂಡವರನ್ನು ಉಳಿಸಲೆಂದು ಕೌರವರ ಶಿಬಿರಕ್ಕೆ ಕರೆದೊಯ್ದ ಎಂದು ಹೇಳುವುದುಂಟು. ಅದು ಸರ್ವಥಾ ಸರಿಯಲ್ಲ, ಅಶ್ವತ್ಥಾಮರಿಗಿಂತ ಬಹಳ ಮಿಗಿಲಾದ ಭೀಮಸೇನ ಶಿಬಿರದಲ್ಲಿದ್ದಿದ್ದರೆ ಅಶ್ವತ್ಥಾಮ ಸರ್ವಥಾ ಭೀಮನಿಂದ ಸೋಲುತ್ತಿದ್ದ ಎಂಬ ಮುಖ್ಯ ಪ್ರಮೇಯ ಮಹಾಭಾರತದುದ್ದಕ್ಕೂ ವಿಶೇಷವಾಗಿ ಯುದ್ಧಪರ್ವಗಳಲ್ಲೂ ಸ್ಫುಟಪಟ್ಟಿರುವ ವಿಚಾರ. ಆದ್ದರಿಂದ ಹಾಗೆ ವಾದಿಸುವುದು ಯುಕ್ತವಲ್ಲ.

೪) ಅದರೊಂದಿಗೆ ಸ್ವತಃ ಶ್ರೀಕೃಷ್ಣನೂ ಅವರೊಂದಿಗೆ ಶಿಬಿರದಲ್ಲಿರುವಾಗ ಅಶ್ವತ್ಥಾಮ ಅಲ್ಲಿ ಏನು ತಾನೇ ಮಾಡಲು ಸಾಧ್ಯ. ಭೂಭಾರಹರಣಕ್ಕಾಗಿ ಅವತರಿಸಿದ ಕೃಷ್ಣ ದುಷ್ಟರಾದ ಕೌರವರನ್ನು ಮಾತ್ರವಲ್ಲದೇ ಶಿಷ್ಟರಾದ ಪಾಂಡವರ ಕಡೆಯವರನ್ನೂ ಸಹ ಅವರ ಅವತಾರ ಕಾರ್ಯದ ಅನಂತರ ಸಂಹರಿಸಿದ್ದು ಅತ್ಯಂತ ಸೂಕ್ತವೂ ಆದುದು.

೫) ಕೌರವರ ಶಿಬಿರಕ್ಕೆ ತೆರಳಿದ ಕೃಷ್ಣ ತಾನು ಎಂದಿನಂತೆ ರಥದಿಂದ ಮೊದಲು ಕೆಳಕ್ಕಿಳಿಯದೇ ಅರ್ಜುನನಿಗೆ ಕೆಳಕ್ಕಿಳಿಯಲು ಹೇಳಿದ, ಅದರಿಂದ ವಿಸ್ಮಯಗೊಂಡ ಅರ್ಜುನ ಇಂದೇಕೆ ಈ ಬದಲಾವಣೆ ಎಂದು ಕೇಳಿದ. ಕೃಷ್ಣ ಅದು ನಿನಗೆ ಮುಂದೆ ತಿಳಿಯುವುದು ಎಂದು ಅವನನ್ನು ಇಳಿಯಲು ತಿಳಿಸಿದ. ಅರ್ಜುನ ಹಾಗೆ ಇಳಿದ ಮೇಲೆ ಕೃಷ್ಣ ತಾನೂ ಸಹ ರಥದಿಂದ ಕೆಳಕ್ಕಿಳಿದ. ಕೃಷ್ಣ ಹಾಗೆ ಕೆಳಕ್ಕಿಳಿಯುತ್ತಿದ್ದಂತೆಯೇ ರಥದ ಧ್ವಜದಲ್ಲಿ ಕುಳಿತ ಹನುಮಂತ ಗಗನಕ್ಕೆ ನೆಗೆದು ಮರೆಯಾದ. ಕೂಡಲೇ ಕುದುರೆಗಳ ಸಮೇತವಾಗಿ ರಥ ಉರಿದು ಬೂದಿಯಾಯಿತು :

ಅಥ ಪಶ್ಚಾತ್ ತತಃ ಕೃಷ್ಣೋ ರಶ್ಮೀನುತ್ಸೃಜ್ಯ ವಾಜಿನಾಮ್ ।
ಅವಾರೋಹತ ಮೇಧಾವೀ ರಥಾದ್ ಗಾಂಡೀವಧನ್ವನಃ ॥
ಅಥಾವತೀರ್ಣೇ ಭೂತಾನಾಮೀಶ್ವರೇ ಸುಮಹಾತ್ಮನಿ ।
ಕಪಿರಂತರ್ದಧೇ ದಿವ್ಯೋ ಧ್ವಜೋ ಗಾಂಡೀವಧನ್ವನಃ ॥
ಸ ದಗ್ಧೋ ದ್ರೋಣಕರ್ಣಾಭ್ಯಾಂ ದಿವ್ಯೈರಸ್ತ್ರೈರ್ಮಹಾರಥಃ ॥

– ಭಾರತ (ಶಲ್ಯ. ೬೨/೧೧,೧೨)

ಚಕಿತನಾದ ಅರ್ಜುನನಿಗೆ ಕೃಷ್ಣ ತಿಳಿಸಿದ – 'ಭೀಷ್ಮಾದಿಗಳು ಪ್ರಯೋಗಿಸಿದ ಮಂತ್ರಾಸ್ತ್ರಗಳೆಲ್ಲ ತನ್ನದೇ ಆದ ಪರಶುರಾಮ ರೂಪದ ದಿವ್ಯಾಸ್ತ್ರಗಳು, ಅವೆಲ್ಲ ಅಮೋಘ. ಅವುಗಳಿಂದಾಗಿ ನಿನ್ನ ರಥ ಎಂದೋ ಭಸ್ಮವಾಗಬೇಕಿತ್ತು ಆದರೂ ತಾನು ಆ ವರೆಗೂ ಯುದ್ಧ ಮುಗಿಯುವವರೆಗೂ ಸಂರಕ್ಷಿಸುವ ಉದ್ದೇಶದಿಂದ ಹಾಗೆ ಸುಡದೇ ತಡೆದಿದ್ದ. ಇನ್ನು ಯುದ್ಧ ಪೂರೈಸಿದ್ದರಿಂದ ಅಮೋಘವಾದ ಅಸ್ತ್ರಗಳ ಕಾರ್ಯ ನಡೆಯಲಿ ಎಂದು ಹಾಗೆ ಸುಡಲು ಅನುಮತಿಯಿತ್ತ, ಮೊದಲು ತಾನಿಳಿದಿದ್ದಲ್ಲಿ ಅರ್ಜುನ ಆ ಅಸ್ತ್ರಗಳಿಗೆ ಆಹುತಿಯಾಗದೇ ಇರಲು ಅಶಕ್ಯವಾಗುತ್ತಿತ್ತು, ಅದಕ್ಕೆಂದೇ ಅವನನ್ನು ಮೊದಲು ಇಳಿಸಿದ್ದು. ವಿಷಯ ತಿಳಿದ ಅರ್ಜುನ ಕೃಷ್ಣನ

ಸರ್ವತೋಮುಖರಕ್ಷಣೆಯ ಹಿರಿಮೆಯನ್ನು ಅರ್ಥಮಾಡಿಕೊಂಡು ಮತ್ತೊಮ್ಮೆ ವಿಶೇಷಭಕ್ತಿಯಿಂದ ಅವನಿಗೆ ಶರಣಾದ. ಈ ಪ್ರಸಂಗ ಮಹಾಭಾರತದಲ್ಲಿ ವಿವರವಾಗಿ ಉಕ್ತವಾಗಿದೆ (ಶಲ್ಯಪರ್ವ ೬೨/೧೨, ೧೩) :

ಅಥಾವತೀರ್ಣೇ ಭೂತಾನಾಮೀಶ್ವರೇ ಸುಮಹಾತ್ಮನಿ ।
ಕಪಿರಂತರ್ದಧೇ ದಿವ್ಯೋ ಧ್ವಜೋ ಗಾಂಡೀವಧನ್ವನಃ ॥
ಸ ದಗ್ಧೋ ದ್ರೋಣಕರ್ಣಾಭ್ಯಾಂ ದಿವ್ಯೈರಸ್ತ್ರೈರ್ಮಹಾರಥಃ ॥

೬) ಶ್ರೀಮದಾಚಾರ್ಯರು ಈ ಕಥೆಯನ್ನು ಇಲ್ಲಿ ಸಂಗ್ರಹಿಸದಿದ್ದರೂ ಶ್ರೀಮದ್ಭಾಗವತತಾತ್ಪರ್ಯನಿರ್ಣಯದಲ್ಲಿ ತಿಳಿಸಿರುವರು :

ತದ್ರಥಹಯಾನಾಂ ದಾಹೋಕ್ತೇಃ । – ಭಾ.ತಾ. (೧/೧೪/೨೧)

ಹೇಳಿದ್ದನ್ನು ಮತ್ತೊಮ್ಮೆ ಹೇಳದಿರುವುದು ಅವರ ವೈಶಿಷ್ಟ್ಯವಾದ್ದರಿಂದ ಇಲ್ಲಿ ಪ್ರತ್ಯೇಕ ತಿಳಿಸಿಲ್ಲ ಎಂದು ತಿಳಿಯಬೇಕು.

೭) ಈ ಪ್ರಸಂಗ ಎಂದಿನಂತೆ ಅಧ್ಯಾತ್ಮಮಯವೇ. ರಥವೆಂದರೆ ದೇಹ, ಅರ್ಜುನ ಒಬ್ಬ ಸಾಧಕ, ಸಾಧಕನ ದೇಹವಿರುವುದು ಕೃಷ್ಣ ಹನುಮಂತರು ಬಿಟ್ಟುಹೋಗುವವರೆಗೆ ಮಾತ್ರ. ಹರಿವಾಯುಗಳು ತೆರಳುತ್ತಲೇ ದೇಹ ಅಳಿಯುವುದು. ಸತ್ತುಹೋದ ಎಂಬ ಮಾತಿನ ಅರ್ಥ ಅದೇಯಾಗಿದೆ ಅಲ್ಲವೇ. ಸತ್ ಎಂದರೆ ಹರಿ ಹಾಗೂ ಪ್ರಾಣ. ಅವರಿಬ್ಬರೂ ಹೋದರು ಎಂದರೆ ಜೀವನೂ ಹೊರಟನೆಂದೇ ಅರ್ಥ.

ನರಿ ನಾಯಿಗಳ ಬಾಯಿಗೆ ದುರ್ಯೋಧನ

ತದೈವ ಹಾರ್ದಿಕ್ಯಕೃಪಾನ್ವಿತೋಽಯಾತ್
ಸುಯೋಧನಂ ದ್ರೌಣಿರಮುಂ ಶಯಾನಮ್ ।
ಪ್ರಭಗ್ನಸಕ್ಥಂ ಶ್ವಸೃಗಾಲಭೂತೈಃ
ಸಂಭಕ್ಷ್ಯಮಾಣಂ ದದೃಶೇ ಶ್ವಸಂತಮ್ ॥ ೧೧೫ ॥

---

೧೧೫. ವೃತಂ ಭೂತಗಣೈರ್ಘೋರೈಃ ಕ್ರವ್ಯಾದೈಶ್ಚ ಸಮಂತತಃ ।
ಯಥಾ ಧನಂ ಲಿಪ್ಸಮಾನೈರ್ಬ್ರಹ್ಮೈರ್ನ್ಯಪತಿಸತ್ತಮಮ್ ॥ – ಭಾರತ (ಶಲ್ಯ. ೬೫/೮)

ವೃತಂ ಸಮಂತಾದ್ ಬಹುಭಿಃ ಶ್ವಾಪದೈರ್ಘೋರದರ್ಶನೈಃ ।
ಶಾಲಾವೃಕಗಣೈಶ್ಚೈವ ಭಕ್ಷಯಿಷ್ಯದ್ಭಿರಂತಿಕಾತ್ ॥
ನಿವಾರಯಂತಂ ಕೃಚ್ಛ್ರಾತ್ ಶ್ವಾಪದಾಂಶ್ಚ ಚಿಖಾದಿಷೂನ್ । – ಭಾರತ (ಸೌಪ್ತಿಕ. ೯/೪,೫)

ಅ: ಆಗಲೇ ಕೃತವರ್ಮ ಕೃಪರೊಂದಿಗೆ ಅಶ್ವತ್ಥಾಮ ತೊಡೆ ಮುರಿದುಕೊಂಡು ಬಿದ್ದಿದ್ದ ದುರ್ಯೋಧನನ ಬಳಿಗೆ ತೆರಳಿದ. ಅವನನ್ನು ಆಗಲೇ ನಾಯಿಗಳು, ನರಿಗಳು, ಪಿಶಾಚಿಗಳು ತಿನ್ನತೊಡಗಿದ್ದವು. ಅವನೂ ಏದುಸಿರು ಬಿಡತೊಡಗಿದ್ದ.

ವಿ: ಆ ಮೂವರು ದುರ್ಯೋಧನನ ಬಳಿಗೆ ತೆರಳುವ ವೇಳೆಗೆ ತೊಡೆ ಮುರಿದು ಬಿದ್ದ ಅವನು ಬದುಕಿರುವಂತೆಯೇ ನರಿನಾಯಿಗಳು ತಿನ್ನತೊಡಗಿದ್ದವು ಎಂಬ ಉಲ್ಲೇಖವನ್ನು ಗಮನಿಸಬೇಕು. ದುರಹಂಕಾರದಿಂದ ತನಗೆ ಸಮನಿಲ್ಲ ಎಂದು ಮೆರೆದಿದ್ದ ಅವನ ಸ್ಥಿತಿ ದುರಹಂಕಾರಿಗಳಿಗೆಲ್ಲ ಒದಗುವ ದುರಂತಕ್ಕೆ ಸೂಚಕ ಎಂದು ತಿಳಿಯಬೇಕು. ಅವನು ಏದುಸಿರು ಬಿಡತೊಡಗಿದ್ದು ಅಂತ್ಯಕಾಲಕ್ಕೆ ಸೂಚನೆಯೂ ಆಗಿತ್ತು.

ಸ ದುಃಖಶೋಕಾಭಿಹತೋ ವಿನಿಂದ್ಯ
ಪಾರ್ಥಾನ್ ಮಯಾ ಭೂಪ ಕಿಮತ್ರ ಕಾರ್ಯಮ್ ।
ಇತ್ಯಾಹ ನಿಷ್ಪಾಂಡವತಾಂ ಕುರುಷ್ವೇ-
ತ್ಯಮುಂ ವ್ಯಧಾತ್ ಪಾಂಸ್ವಭಿಷೇಕಿಣಂ ನೃಪಃ ॥ ೧೧೬ ॥

ಅ: ದುಃಖ ಶೋಕಗಳೊಂದಿಗೆ ತಪ್ತನಾಗಿದ್ದ ಅಶ್ವತ್ಥಾಮ ಪಾಂಡವರನ್ನು ತೆಗಳಿ 'ರಾಜನೇ! ನಾನು ಏನು ಮಾಡಬೇಕು?' ಎಂದು ಕೇಳಿದ. ದುರ್ಯೋಧನ 'ಪಾಂಡವರು ಇಲ್ಲದಂತೆ ಮಾಡು' ಎಂದು ನುಡಿದು ಅವನಿಗೆ ಧೂಳಿನಿಂದಲೇ ಅಭಿಷೇಕ ಮಾಡಿದ.

ವಿ: ೧) ದುಃಖವೆಂದರೆ ತತ್ಕಾಲದ ನೋವು, ಶೋಕವೆಂದರೆ ಅದರ ನೆನಪಿನಿಂದ ಉಂಟಾಗುವ ದೀರ್ಘಕಾಲದ ವ್ಯಥೆ. ದುಃಖ ಕ್ಷಣಿಕ, ಶೋಕ ದೀರ್ಘಕಾಲಿಕ. ಮೇಲ್ನೋಟಕ್ಕೆ ಅವೆರಡೂ ಸಮಾನ ಪದಗಳೇ ಆದರೂ ಅವುಗಳಲ್ಲಿ ಈ ಬಗೆಯ ಅರ್ಥವ್ಯತ್ಯಾಸ ಶಾಸ್ತ್ರಗಳಲ್ಲಿ ನಿರೂಪಿತವಾಗಿದೆ.

---

೧೧೬. ಜಲೇನಾಭಿಷಿಕ್ತ ಇತ್ಯುಚ್ಯತೇऽತಃ ಕಥಂ ನಿರ್ಣಯ ಇತಿ ಚೇದುಚ್ಯತೇ । ಅತ್ರ ಪಾಂಸುಶಬ್ದೋ ಜಲಪರಃ । ಕಾರ್ಯಕಾರಣಯೋರೇಕಶಬ್ದವ್ಯವಹೃತಿರ್ಭವೇದಿತಿ ಷಷ್ಠತಾತ್ಪರ್ಯೋಕ್ತೇಃ । ಯದ್ವಾ ಕಲ್ಪಭೇದೇನೈವೇಯಮುಕ್ತಿಃ । ಬಹುಕಲ್ಪಾನುಸಾರೇಣ ಮಯೇಯಂ ಸತ್ಕಥೋದಿತಾ । ನೈಕಗ್ರಂಥಾಶ್ರಯಾತ್ ತಸ್ಮಾನ್ನಾಶಂಕ್ಯಾತ್ರ ವಿರುದ್ಧತಾ । ಇತ್ಯಾದೇ- ರುಕ್ತ್ವಾದಮುಂ ವ್ಯಧಾದಾಶ್ವಭಿಷೇಕಿಣಂ ನೃಪ ಇತಿ ಪಾಠೋ ಮೂಲಾನುಗುಣ ಏವೇತ್ಯರ್ಥಃ ॥ – (ರಾ.)

೧೧೬. ಅನುಜ್ಞಾಂ ತು ಮಹಾರಾಜ ಭವಾನ್ ಮೇ ದಾತುಮರ್ಹತಿ ॥

– (ದ್ರೌಣವಚನ) ಭಾರತ (ಶಲ್ಯ.೬೫/೩೭)

೨) ದುರ್ಯೋಧನಪ್ರೀತಿಗೆಂದು ಅಶ್ವತ್ಥಾಮ ತನ್ನ ಮುಂದಿನ ಕರ್ತವ್ಯವನ್ನು ಕೇಳಿದಾಗ ಅವನು ಹೇಳಿದ್ದು ಮತ್ತೊಂದು ಮಹಾಪಾತಕಕ್ಕೆ ಕಾರಣವಾಗುವಂತಹ ಮಾತು. ಭೂಮಿಯಲ್ಲಿ ಪಾಂಡವರ ಸಂತತಿ ಉಳಿಯದಂತೆ ಮಾಡುವುದು. ಧರ್ಮಾದಿ ಪಾಂಡವರ ಸಂತತಿ ಹಾಗೆ ಅಳಿಯುವುದು ಸಕಲ ಧರ್ಮಗಳ ವಿನಾಶಕ್ಕೆ ಸಂಕೇತ; ಕಲಿಯ ಧ್ಯೇಯವೇ ಅದು.

೩) ಕಲಿಯುಗದಲ್ಲಿ ನಡೆಯುವುದೂ ಅಂತಹುದೇ. ಅಶ್ವತ್ಥಾಮ ಕೃಪ, ಕೃತವರ್ಮರೊಂದಿಗೆ ಹಾಗೆ ಬಂದು ದುರ್ಯೋಧನನ ಅಂತಹ ಶೋಚನೀಯವಾದ ಪರಿಸ್ಥಿತಿಯನ್ನು ಕಂಡು ತಾನು ಅದಕ್ಕೆ ಕಾರಣರಾದ ಪಾಂಡವರನ್ನು ನಿಂದಿಸಿ ಅವನಿಗಾಗಿ ಏನು ಮಾಡಬೇಕೆಂದು ಕೇಳಿದಾಗ ದುರ್ಯೋಧನ ಹೇಳಿದ್ದು ಹಾಗೆ. ಅವನು ನೀಡಿದ್ದ ಹಾಲಿನ ಪ್ರಭಾವ ಹಾಗೆ ಅವರು ದುರ್ಯೋಧನನ ಪಕ್ಷವನ್ನು ವಹಿಸುವಂತೆ ಮಾಡಿತ್ತು. ದುರ್ಜನರ ಸಹವಾಸ ಎಷ್ಟು ಅಪಾಯಕರ ಎನ್ನಲು ಇದು ಅತ್ಯುತ್ತಮ ನಿದರ್ಶನ : **'ತವೋದ್ವಾರಂ ಯೋಷಿತಾಂ ಸಂಗಿಸಂಗಮ್'**.

೪) ದುರ್ಯೋಧನ ಅವರಿಗೆ ಮಣ್ಣಿನ ಅಭಿಷೇಕ ಮಾಡುವ ಮೂಲಕ ತನ್ನನ್ನು ನಂಬಿದವರ ತಲೆಯ ಮೇಲೆ ಕಲಿ ಮಣ್ಣು ಹಾಕುವುದು ನಿಶ್ಚಯ ಎಂದು ಸೂಚಿಸಿದಂತಾಯಿತು ಎಂದು ತಿಳಿಯಬಹುದು.

ಉಚ್ಛಿದ್ಯ ಸಂತತಿಂ ಪಾಂಡೋಃ ಕೃತ್ವಾ ಸ್ವಕ್ಷೇತ್ರಸಂತತಿಮ್ ।
ತಯಾ ಭೂರಕ್ಷಣಹೃದಾ ಸೋಽಭಿಷಿಕ್ತಸ್ತಥೇತ್ಯಗಾತ್ ॥ ೧೧೭ ॥

ಅ: ಪಾಂಡುವಿನ ಸಂತತಿಯನ್ನು ನಾಶಪಡಿಸಿ ತನ್ನ ಹೆಂಡತಿಯಲ್ಲಿ ಸಂತತಿಯನ್ನು ಹುಟ್ಟಿಸಿ ಅದರಿಂದ ಭೂಮಿಯನ್ನು ಪಾಲಿಸಬೇಕೆಂಬ ಭಾವನೆಯಿಂದ ದುರ್ಯೋಧನ ಅಶ್ವತ್ಥಾಮನಿಗೆ ಹಾಗೆ ಅಭಿಷೇಕ ಮಾಡಿದ. ಅಶ್ವತ್ಥಾಮ ಹಾಗೆಯೇ ಆಗಲಿ ಎಂದು ಹೇಳಿ ತೆರಳಿದ.

ವಿ: ೧) ದುರ್ಯೋಧನ ಹಾಗೆ ಬಾಯಿಬಿಟ್ಟು ಹೇಳಿದಂತೆ ಮಹಾಭಾರತದಲ್ಲಿ ಕಾಣುವುದಿಲ್ಲ; ಆದರೆ, ಅವನ ಮನಸ್ಸಿನಲ್ಲಿ ಆ ಭಾವನೆಯಿತ್ತು ಎಂದು 'ಹೃದಾ' ಎಂಬ ಮಾತಿನಿಂದ ತಿಳಿಸಿರುವರು ಎಂದು ತಿಳಿಯಬೇಕು. ಅಶ್ವತ್ಥಾಮರು ಮನೋನಿಯಾಮಕನಾದ ಶಿವನ ಅವತಾರವಾದ್ದರಿಂದ ಅವನ ಮನಸ್ಸಿನೊಳಗಿನ ದುರ್ಭಾವನೆಯನ್ನು ತಿಳಿದು ಆಗಲಿ ಎಂದು ಸಮ್ಮತಿಸಿ ತೆರಳಿದ್ದರು ಎಂದು ತಿಳಿಯಬೇಕು. ಹಾಗೆಯೇ ಆಗಲಿ ಎನ್ನುವ ಮೂಲಕ ಅಶ್ವತ್ಥಾಮರು ಎಂತಹ ಅಪಾಯಕ್ಕೆ ಗುರಿಯಾದರು ಎಂಬ ವಿಷಯ ಮುಂದೆ ತಿಳಿಯುವುದು (೨೮/೧೬೭).

---

೧೧೭. ತೇನ ಹೃದಾ ವಾಂಛಯಾ । – (ಜ.)

೨) ದುರ್ಯೋಧನ ಹಾಗೆ ಅಶ್ವತ್ಥಾಮರಿಗೆ ಅಭಿಷೇಕ ಮಾಡಿದ್ದು ಅವನು ಶಿವನನ್ನೇ ನಂಬಿದ್ದಕ್ಕೆ ಸಂಕೇತ. ಅಂತ್ಯಕಾಲದಲ್ಲೂ ವಿಷ್ಣುವಿನತ್ತ ಮನಸ್ಸು ಹಾಕದೇ ಶಿವಾದಿ ಅನ್ಯದೇವತೆ–ಗಳನ್ನೇ ಸರ್ವೋತ್ತಮತ್ವೇನ ಚಿಂತಿಸುವುದು ಅವೈಷ್ಣವಪ್ರವೃತ್ತಿ ಎಂದು ಇದರಿಂದ ತಿಳಿಯುವುದು.

ಅಶ್ವತ್ಥಾಮಾದಿಗಳ ವನಪ್ರವೇಶ

ಸ ಕೃಷ್ಣಭೀಮಪಾರ್ಥಾನಾಂ ಭಯಾದೇವ ಪುನರ್ವನಮ್ ।
ಕೃಪಸಾತ್ವತಸಂಯುಕ್ತೋ ವಿವೇಶ ಗಹನಂ ರಥೀ ॥ ೧೧೮ ॥

ಅ: ಅಶ್ವತ್ಥಾಮನು ಶ್ರೀಕೃಷ್ಣ, ಭೀಮ, ಅರ್ಜುನರ ಭಯದಿಂದಾಗಿಯೇ ಮತ್ತೆ ಕೃಪ, ಕೃತವರ್ಮರೊಂದಿಗೆ ರಥದಲ್ಲಿ ಕುಳಿತು ದಟ್ಟವಾದ ಕಾಡನ್ನು ಹೊಕ್ಕ.

ವಿ: ದುರ್ಯೋಧನನಿಗೆ ಹಾಗೆ ಮಾಡುವುದಾಗಿ ವಚನ ನೀಡಿದ್ದರೂ ಕೃಷ್ಣ ಭೀಮ ಹಾಗೂ ಅರ್ಜುನರ ಭಯದಿಂದ ಅದು ಅಷ್ಟು ಸುಲಭವಾಗಿ ಆಗುವ ಕಾರ್ಯವಲ್ಲ ಎಂದು ಚಿಂತಿಸುತ್ತಾ ಕಾಡನ್ನು ಪ್ರವೇಶಿಸಿದ ಎಂದರ್ಥ.

ಅಶ್ವತ್ಥಾಮ ಕಂಡ ವಧೋಪಾಯ

ತಸ್ಯ ಚಿಂತಯತೋ ದ್ರೋಣವಧಂ ದುರ್ಯೋಧನಸ್ಯ ಚ ।
ನಾಗಾನ್ನಿದ್ರಾ ನಿಶೀಥೇ ಚ ಧ್ವಾಕ್ಷಾನ್ ನ್ಯಗ್ರೋಧವಾಸಿನಃ ॥ ೧೧೯ ॥

ಹತಾನ್ ಸುಬಹುಸಾಹಸ್ರಾನೇಕೇನಾತಿಬಲೇನ ತು ।
ಕೌಶಿಕೇನ ನಿರೀಕ್ಷ್ಯೈವ ಪ್ರಾಹ ತೌ ಕೃಪಸಾತ್ವತೌ ॥ ೧೨೦ ॥

ಅ: ದ್ರೋಣ ವಧೆಯನ್ನು, ದುರ್ಯೋಧನ ವಧೆಯನ್ನು ಚಿಂತಿಸುತ್ತಿದ್ದ ಅಶ್ವತ್ಥಾಮನಿಗೆ ನಿದ್ರೆ ಬರಲಿಲ್ಲ. ಆಗ ಅವರು ಮಲಗಿದ್ದ ಆಲದ ಮರದಲ್ಲಿ ನೆಲೆಸಿದ್ದ ಅನೇಕ ಸಾವಿರ ಕಾಗೆಗಳನ್ನು

---

೧೧೯. ಕ್ರೋಧಾಮರ್ಷವಶಂ ಪ್ರಾಪ್ತೋ ದ್ರೋಣಪುತ್ರಸ್ತು ಭಾರತ ।
ನ ವೈ ಸ್ಮ ಸ ಜಗಾಮಾಥ ನಿದ್ರಾಂ ಸರ್ವ ಇವ ಶ್ವಸನ್ ॥ - ಭಾರತ (ಸೌಪ್ತಿಕ. ೧/೩೩)

ಉಪದೇಶಃ ಕೃತೋಽನೇನ ಪಕ್ಷಿಣಾ ಮಮ ಸಂಯುಗೇ ।
ಶತ್ರೂಣಾಂ ಕ್ಷಪಣೇ ಯುಕ್ತಃ ಪ್ರಾಪ್ತಃ ಕಾಲಶ್ಚ ಮೇ ಮತಃ ॥ - ಭಾರತ (ಸೌಪ್ತಿಕ. ೧/೪೫)

ಅತ್ಯಂತ ಬಲಿಷ್ಠವಾದ ಒಂದು ಗೂಬೆ ಕೊಂದುಹಾಕುವುದನ್ನು ಕಂಡ ಕೂಡಲೆ ಕೃಪ, ಕೃತವರ್ಮರಿಗೆ ನುಡಿದ.

ವಿ: ೧) ಅವರು ಮೂವರೂ ಕಾಡಿನಲ್ಲಿ ಆಲದ ಮರವೊಂದರ ಬುಡದಲ್ಲಿ ಮಲಗಿದ್ದಾಗ ಯುದ್ಧದ ಆಯಾಸದಿಂದ ಬಳಲಿದ್ದ ಕೃಪ, ಕೃತವರ್ಮರಿಗೆ ಗಾಢ ನಿದ್ರೆ ಆವರಿಸಿತ್ತು, ಆದರೆ, ದ್ರೋಣ, ದುರ್ಯೋಧನರ ಹತ್ಯೆಯಿಂದ ನೊಂದಿದ್ದ ಅಶ್ವತ್ಥಾಮ ಆ ಚಿಂತೆಯಲ್ಲೇ ಮಲಗಿದ್ದರಿಂದ ನಿದ್ರೆ ಬಾರದೇ ಎಚ್ಚರದಿಂದಲೇ ಇದ್ದ. ಆಗ ಅವರು ಮಲಗಿದ್ದ ಆಲದ ಮರದಲ್ಲಿ ನೆಲೆಸಿದ್ದ ಸಾವಿರಾರು ಕಾಗೆಗಳನ್ನು ಅಲ್ಲಿಗೆ ಆಗಮಿಸಿದ ಗೂಬೆಯೊಂದು ಕೊಂದು ಹಾಕಿದ್ದನ್ನು ಗಮನಿಸಿದ. ಅದರಿಂದ ತಾನು ಆ ಗೂಬೆಯಂತೆ ಒಂಟಿಯಾಗಿಯೇ ತೆರಳಿ ಗಾಢನಿದ್ರೆಯಲ್ಲಿರುವ ಪಾಂಡವರ ಕಡೆಯವರನ್ನು ಕೊಂದು ಹಾಕುವೆನು ಎಂಬ ಪ್ರೇರಣೆಯನ್ನು ಪಡೆದ ಎಂದು ಭಾವ.

೨) ಅನುವ್ಯಾಖ್ಯಾನದಲ್ಲಿ ಶ್ರೀಮದಾಚಾರ್ಯರು ಇದನ್ನು ಸಂಗ್ರಹಿಸುತ್ತಾ ಹೀಗೆಂದಿರುವರು:

ಯಥಾ ದ್ರೌಣೇರುಲೂಕೇನ ಕೃತಮಪ್ಯಾಸ ಬೋಧಕಮ್ ॥

– ಅನುವ್ಯಾಖ್ಯಾನ (೨/೧/೧೫)

ನಿದರ್ಶನೇನ ಹ್ಯೇನೇನ ಪ್ರೇರಿತಃ ಪರಮಾತ್ಮನಾ ।
ಯಾಮಿ ಪಾಂಡುಸುತಾನ್ ಹಂತುಮಿತ್ಯುಕ್ತ್ವಾऽऽರುರುಹೇ ರಥಮ್ ॥ ೧೨೧ ॥

ಅ: 'ಈ ನಿದರ್ಶನದಿಂದ ನಾನು ಪರಮಾತ್ಮನಿಂದ ಪ್ರೇರಿತನಾಗಿರುವೆ, ಪಾಂಡವರನ್ನು ಕೊಲ್ಲಲು ಹೊರಟೆ' ಎಂದು ನುಡಿದು ರಥವನ್ನೇರಿದ.

ವಿ: ೧) ಕೃಪ, ಕೃತವರ್ಮರನ್ನು ಎಬ್ಬಿಸಿ ಆ ಗೂಬೆಯಿಂದ ತಾನು ಪಡೆದ ಸ್ಫೂರ್ತಿಯನ್ನು ತಿಳಿಸಿ ಪಾಂಡವರನ್ನು ಕೊಲ್ಲಲು ಅದೇ ಉಪಾಯವೆಂದು ತಿಳಿಸಿದಾಗ, ಅವರು ಅದು ಯೋಗ್ಯವಾದ ಮಾರ್ಗವಲ್ಲ ಎಂದು ಪರಿಪರಿಯಾಗಿ ಹೇಳಿದರೂ ಕೇಳದೇ ಅಶ್ವತ್ಥಾಮ ರಥವೇರಿ ಏಕಾಂಗಿಯಾಗಿಯೇ ತೆರಳಿದ. ಅವರಿಬ್ಬರು ಬೇಡವೆನ್ನುತ್ತಲೇ ಅವನನ್ನು ಹಿಂಬಾಲಿಸಿ ಓಡತೊಡಗಿದರು. ಭೀಮಾರ್ಜುನರ ಭಯಕ್ಕೆ ಅಂಜಿದ್ದರೂ ಅಶ್ವತ್ಥಾಮ ಅವರೆಲ್ಲ ನಿದ್ರೆಯಲ್ಲಿ ಇರುವುದರಿಂದ ಕೊಲ್ಲುವುದು ಸಾಧ್ಯವೆಂಬ ಭಾವನೆಯಿಂದ ಹಾಗೆ ತೆರಳಿದ.

---

೧೨೧. ಇತ್ಯುಕ್ತ್ವಾ ರಥಮಾಸ್ಥಾಯ ಪ್ರಾಯಾದಭಿಮುಖಃ ಪರಾನ್ ।
ತಮನ್ವಗಾತ್ ಕೃಪೋ ರಾಜನ್ ಕೃತವರ್ಮಾ ಚ ಸಾತ್ವತಃ ॥ - ಭಾರತ (ಸೌಪ್ತಿಕ. ೫/೩೮)

೨) ಆದರೆ, ಪ್ರಳಯ ಕಾಲದಲ್ಲೂ ನಿದ್ರಿಸದ ಮುಖ್ಯಪ್ರಾಣನ ಅವತಾರನಾದ ಭೀಮು ಆಗ ಅಲ್ಲಿದ್ದರೆ ಸರ್ವಥಾ ನಿದ್ರಿಸುತ್ತಿರಲಿಲ್ಲ ಎಂಬ ಸೂಕ್ಷ್ಮವನ್ನು ಅವರು ಗಮನಿಸದಾದರು. ದುರ್ಯೋಧನನಂತಹ ದುಷ್ಟರ ಸಹವಾಸ ಅವರ ಎಚಾರಶ್ರೀಮಂತಿಕೆಯನ್ನು ನಾಶ ಮಾಡಿತ್ತು ಎಂದು ತಿಳಿಯಬೇಕು. ಕೃಷ್ಣ ಇದನ್ನೆಲ್ಲ ಮುಂಚಿತವಾಗಿಯೇ ತಿಳಿದು ಪಾಂಡವರನ್ನು ಕೌರವರ ಶಿಬಿರಕ್ಕೆ ಕರೆದೊಯ್ದಿದ್ದ ಎವರ ಈಗಾಗಲೇ ಬಂದಿದೆ. ಇದು ಅವನ ಸರ್ವಜ್ಞತ್ವಕ್ಕೂ, ಸತ್ಯಸಂಕಲ್ಪತ್ವಕ್ಕೂ ದ್ಯೋತಕ.

ಶಿಬಿರದ ದ್ವಾರದಲ್ಲಿ ಕಂಡ ಭೂತಪತಿ

ನಿವಾರಿತೋಽಪಿ ತಾಭ್ಯಾಂ ಸ ಪ್ರಾದ್ರವಚ್ಛಿಬರಂ ಪ್ರತಿ ।
ಅನುಜಗ್ಮತುಸ್ತಾವಪಿ ತಂ ಶಿಬಿರದ್ವಾರಿ ಚೈಕ್ಷತ ॥ ೧೨೨ ॥

ಉಗ್ರರೂಪಧರಂ ರುದ್ರಂ ಸ್ವಕೀಯಾಂ ತನುಮೇವ ಸಃ ।
ಪರೀತಂ ವಾಸುದೇವೇನ ಬಹುಕೋಟಿಸ್ವರೂಪಿಣಾ ।
ದೃಷ್ಟ್ವೈವ ವಾಸುದೇವಂ ತಮತ್ರಸದ್ಗೌತಮೀಸುತಃ ॥ ೧೨೩ ॥

ಅ: ಅವರಿಬ್ಬರೂ ತಡೆದರೂ ಕೇಳದೇ ಪಾಂಡವರ ಶಿಬಿರಕ್ಕೆ ಹೊರಟ. ಕೃಪ, ಕೃತವರ್ಮರು ಅವನನ್ನು ಹಿಂಬಾಲಿಸಿ ನಡೆದರು. ಅಶ್ವತ್ಥಾಮ ಶಿಬಿರದ ದ್ವಾರದಲ್ಲಿ ತನ್ನ ಸ್ವರೂಪವೇ ಆದ ಉಗ್ರರೂಪಧಾರಿಯಾದ ಶಿವನನ್ನು ಕಂಡ. ಅವನನ್ನು ಶ್ರೀಕೃಷ್ಣ ಬಹುಕೋಟಿ ರೂಪಗಳಿಂದ ಸುತ್ತುವರೆದಿದ್ದ. ಶ್ರೀಕೃಷ್ಣನನ್ನು ಅಲ್ಲಿ ಕಾಣುತ್ತಲೇ ಅಶ್ವತ್ಥಾಮ ಭಯದಿಂದ ತಲ್ಲಣಿಸಿದ.

---

೧೨೩. ತತ್ರ ಭೂತಂ ಮಹಾಕಾಯಂ ಚಂಡಾರ್ಕಸದೃಶದ್ಯುತಿಮ್ ।
ಸೋಽಪಶ್ಯದ್ ದ್ವಾರಮಾಶ್ರಿತ್ಯ ತಿಷ್ಠಂತಂ ಲೋಮಹರ್ಷಣಮ್ ।
ನೈವ ತಸ್ಯ ವಪುಃ ಶಕ್ಯಂ ಪ್ರವಕ್ತುಂ ವೇಷ ಏವ ಚ ।
ಸರ್ವಥಾ ತು ತದಾಲಕ್ಷ್ಯ ಸ್ಫುಟೀಯುರಪಿ ಪರ್ವತಾಃ ।
(ಎಂಬುದು ಆ ರೂಪದ ವರ್ಣನೆ)– ಭಾರತ (ಸೌಪ್ತಿಕ. ೬/೩-೭)

೧೨೩. ತಥಾ ತೇಜೋಮರೀಚಿಭ್ಯಃ ಶಂಖಚಕ್ರಗದಾಧರಾಃ ।
ಪ್ರಾದುರಾಸನ್ ಹೃಷೀಕೇಶಾಃ ಶತಶೋಽಥ ಸಹಸ್ರಶಃ ॥ - ಭಾರತ (ಸೌಪ್ತಿಕ. ೬/೯)

೧೨೩. ಆತ್ಮನಸ್ತನುಮಿತ್ಯುಕ್ತ್ಯಾ ರುದ್ರಸ್ಯ ದ್ರಾಣೇಶ್ಚಕರ್ತೃತ್ವೋಕ್ತ್ಯಾ ಪೂಜ್ಯಪೂಜಕಭಾವಾಯೋಗಾತ್ ಅಶ್ವತ್ಥಾಮಕೃತಾ-ತ್ಮೋಪಹಾರಾದಿಕಂ ರುದ್ರಾಂತರ್ಗತ ಶ್ರೀಮಹಾವಿಷ್ಣುವಿಷಯಮಿತಿ ಜ್ಞೇಯಮ್ । ಅತ ಏವಾತ್ಮ ಸ್ಥಾಯೈವ ವಿಷ್ಣವೇ ಇತಿ ಪ್ರಾಚಾಂ ವಾಚಃ । ಗುಹಾಶಯಾಯೈವ ನ ದೇಹಮಾನಿನ ಇತಿ ಶ್ರೀ ಭಾಗವತೇ ರುದ್ರೋಕ್ತಿಶ್ಚ ।
- ಲಕ್ಷಾಲಂಕಾರ

ವಿ: ಅಶ್ವತ್ಥಾಮ ಶಿಬಿರವನ್ನು ಪ್ರವೇಶಿಸಲೆಂದು ತೆರಳಿದಾಗ ಅದರ ಮಹಾದ್ವಾರದಲ್ಲಿ ಕಂಡದ್ದು ಆ ಶಿಬಿರ ರಕ್ಷಕನಾಗಿದ್ದ ಶಿವ ಹಾಗೂ ಅವನಿಗೆ ರಕ್ಷಕನಾಗಿದ್ದ ಶ್ರೀಕೃಷ್ಣ ಎಂದರ್ಥ.

ಶಿವಾಶ್ವತ್ಥಾಮರ ಯುದ್ಧ

ವಾಸುದೇವಾಜ್ಞಯೈವಾತ್ರ ಸ್ವಾತ್ಮನಾऽಪಿ ಸದಾಶಿವಃ ।
ಅಯುಧ್ಯದಗ್ರಸಚ್ಚಾಶು ದ್ರೌಣೇಃ ಸರ್ವಾಯುಧಾನ್ಯಪಿ ॥ ೧೨೪ ॥

ಅ: ಶಿವನು ಶ್ರೀಕೃಷ್ಣನ ಆಜ್ಞೆಯಿಂದಲೇ ಅಲ್ಲಿ ತನ್ನದೇ ರೂಪವಾದ ಅಶ್ವತ್ಥಾಮನೊಂದಿಗೆ ಯುದ್ಧಮಾಡಿದ. ಬೇಗನೇ ಅಶ್ವತ್ಥಾಮನ ಸಕಲ ಆಯುಧಗಳನ್ನೂ ನುಂಗಿಹಾಕಿದನು.

ವಿ: ಶಿವ–ಅಶ್ವತ್ಥಾಮರು ಒಬ್ಬರೇ ಆದರೂ ಅವರಲ್ಲಿ ಪರಸ್ಪರ ಯುದ್ಧ ನಡೆಯಿತು. ಶ್ರೀಕೃಷ್ಣನ ಸಂಕಲ್ಪ ಅಂತಹುದು. ಅಶ್ವತ್ಥಾಮ ಪ್ರಯೋಗಿಸಿದ ಆಯುಧಗಳನ್ನೆಲ್ಲ ಶಿವ ನುಂಗಿದ ಎಂಬುದರ ಮೂಲಕ ಅವತಾರ ರೂಪನಾದ ಅಶ್ವತ್ಥಾಮನಿಗಿಂತ ಮೂಲರೂಪವಾದ ಶಿವ ಅತ್ಯಂತ ಬಲಿಷ್ಠ ಎಂಬ ತತ್ವ ಪ್ರತಿಪಾದಿತ. ಇತರ ದೇವತೆಗಳಲ್ಲಿ ಈ ಬಗೆಯ ಶಕ್ತಿವ್ಯತ್ಯಾಸವಾಗುವುದು ಸಹಜ ಎಂಬ ಮಾತು ಈಗಾಗಲೇ ಬಂದಿದೆ (೨೨/೨೮೪, ೨೮೫).

ಅಶ್ವತ್ಥಾಮ ಮಾಡಿದ ಮಾನಸಯಜ್ಞ

ಅಚಿಂತ್ಯಾ ಹರಿಶಕ್ತಿರ್ಯದ್ದೃಶ್ಯಂತೇ ತೃಹನೋऽಪಿ ಹಿ ।
ಅತಸ್ತಯಾ ಪ್ರೇರಿತೇನ ಸ್ವಾತ್ಮನೈವಾಖಿಲೇಷ್ವಪಿ ॥ ೧೨೫ ॥

ಆಯುಧೇಷು ನಿಗೀರ್ಣೇಷು ದ್ರೌಣೇರ್ಯಜ್ಞಂ ತು ಮಾನಸಮ್ ।
ಚಕ್ರೇऽऽತ್ಮಾನಂ ಪಶುಂ ಕೃತ್ವಾ ಸ್ವಾತ್ಮಸ್ಥಾಯೈವ ವಿಷ್ಣವೇ ॥ ೧೨೬ ॥

---

೧೨೪. ತದದ್ಭುತಮಾಲೋಕ್ಯ ಭೂತಂ ಲೋಕಭಯಂಕರಮ್ ।
ದ್ರೌಣಿರವ್ಯಥಿತೋ ದಿವ್ಯೈರಸ್ತ್ರವರ್ಷೈರವಾಕಿರತ್ ॥
ದ್ರೌಣಿಮುಕ್ತಾಂಧರಾಂಸ್ತಾಂಸ್ತು ತದ್ಭೂತಂ ಮಹದಗ್ರಸತ್ ॥
ಉದಧೇರಿವ ವಾರ್ಯೌಘಾನ್ ಪಾವಕೋ ವಡವಾಮುಖಃ ॥ - ಭಾರತ (ಸೌಪ್ತಿಕೇ. ೬/೧೦,೧೧)

೧೨೫. ದೃಶ್ಯಂತೇ ತೃಹನೋऽಪಿ ಹೀತ್ಯತ್ರ ಸ್ವಾವತಾರಾಶ್ವತ್ಥಾಮ್ನೋ ಹನನೇಚ್ಛಾಯಾಃ ಮೂಲರೂಪೇ ರುದ್ರ ಏವ ದೃಶ್ಯಮಾನತ್ವಾತ್ ಆತೃಹನ ಇತ್ಯುಕ್ತಮ್। ಯದ್ಯಸ್ಮಾತ್ ಆತೃಹನೋऽಪಿ ದೃಶ್ಯಂತೇ ತಸ್ಮಾದ್ಧರೇಃ ಶಕ್ತರಚಿಂತ್ಯೇತಿ ಯೋಜನಾ। ಮನ್ಯತ್ಯಯಾಂತಾತ್ ''ತನು ಛಿಸ್ತಾರ'' ಇತಿ ಧಾತೋಃ ಧಾತ್ವರ್ಥವ್ಯಂಜಕೋಪಸರ್ಗಾಭಾವೇऽಪಿ ವಿಸ್ತೃತಃ ಪರಮಾತ್ಮಾ ತೃನ್‌ಪದೇನೋಚ್ಯತೇ। ಪರಮಾತ್ಮನಾಮಧಾರಕತ್ವಾತ್ ಜೀವೋऽಪಿ ತೇನ ಪದೇನೋಚ್ಯತೇ। ತೃಹನ ಏವ ಆತೃಹನ ಇತಿ ಭಾವಃ। ಅತಃ ಸುಷ್ಠೂಕ್ತಂ ದೃಶ್ಯಂತೇ ತೃಹನ ಇತಿ ॥ – (ವಾ.)

ಅ: ಹರಿಶಕ್ತಿ ಅಚಿಂತ್ಯವಾದುದು; ಆತ್ಮಹತ್ಯೆ ಮಾಡಿಕೊಳ್ಳುವವರೂ ಕಾಣುವರಲ್ಲವೆ; ಆದ್ದರಿಂದ ಅಂತಹ ಹರಿಶಕ್ತಿಯಿಂದ ಪ್ರೇರಿತನಾಗಿ ಶಿವ ತನ್ನ ಸ್ವರೂಪನೇ ಆದ ಅಶ್ವತ್ಥಾಮನ ಸಕಲ ಆಯುಧಗಳನ್ನೂ ನುಂಗಿಹಾಕಿದಾಗ ಅಶ್ವತ್ಥಾಮ ಮಾನಸ ಯಜ್ಞವೊಂದನ್ನು ತನ್ನೊಳಗಿನ ವಿಷ್ಣುವಿಗೆ ತನ್ನನ್ನೇ ಬಲಿಪಶುವೆಂದು ಚಿಂತಿಸಿ ನಡೆಸಿದ.

ವಿ: ೧) ಶಿವ–ಅಶ್ವತ್ಥಾಮರ ಆ ಯುದ್ಧ ಒಬ್ಬ ವ್ಯಕ್ತಿಯ ಭಿನ್ನ ರೂಪಗಳ ನಡುವಿನ ಯುದ್ಧ. ರಾಮ–ಪರಶುರಾಮಾದಿಗಳ ಯುದ್ಧದಂತೆ ನಡೆದ ಮೋಹಕ ಯುದ್ಧವಲ್ಲ; ಹರಿಶಕ್ತಿಯಿಂದ ಆತ್ಮಹತ್ಯೆ ಮಾಡಿಕೊಳ್ಳುವ ಜನರೇ ಲೋಕದಲ್ಲಿ ಕಾಣುವಾಗ ಅವರು ಹಾಗೆ ಕಾದಾಡಿದ್ದರಲ್ಲಿ ಅಚ್ಚರಿಯೇನಿಲ್ಲ. ಹರಿಶಕ್ತಿಯ ಹಿರಿಮೆ ಅಂತಹುದು ಎಂದರ್ಥ. ಬಳಿಕ ಅಶ್ವತ್ಥಾಮ ಮಾನಸಯಜ್ಞವೊಂದನ್ನು ಅಂತರ್ಯಾಮಿಯಾದ ವಿಷ್ಣುವಿಗೋಸ್ಕರ ಮಾಡಿ ಅದರಲ್ಲಿ ತನ್ನನ್ನೇ ಪಶುವೆಂಬುದಾಗಿ ಅನುಸಂಧಾನ ಮಾಡಿದ.

೨) ಪುರುಷಸೂಕ್ತದಲ್ಲೂ ಬ್ರಹ್ಮದೇವರು ಮಾನಸಯಜ್ಞವನ್ನು ಮಾಡಿ ಶಿವನನ್ನು ಪಶುವನ್ನಾಗಿ ವಿಷ್ಣುವಿಗೆ ಸಮರ್ಪಿಸಿದ ವಿವರ ಬಂದಿದೆ.

---

೧೨೬. ಆತ್ಮಾನಂ ಪಶುಂ ಕೃತ್ವೇತ್ಯತ್ರ ಮಮ ಮರಣಕಾಲೇ ಅಯಂ ಮದ್ದೇಹಃ ವಿಷ್ಣವೇ ಸ್ವಾಹೇತಿ ಮಯಾ ದತ್ತೇ ತದಾ ತವ ಭಕ್ಷಣಾರ್ಹ ಇತಿ ಸಸ್ಮಾರ ಅಯಮೇವ ಮಾನಸೋ ಯಜ್ಞ ಇತಿ ಭಾವಃ। ಉಪಲಕ್ಷಣಂ ಚೈತತ್। ಶಿಬಿರಾಂತಃ ಪ್ರವಿಶ್ಯ ಯೇ ಮಯಾ ಹನಿಷ್ಯಂತೇ ತೇ ಸರ್ವೇ ಪಶವಃ। ತೇಷಾಂ ನಿಖಿಲಾ ದೇಹಾ ಅಪಿ ವಿಷ್ಣವೇ ಸ್ವಾಹೇತಿ ಮಯಾ ದತ್ತೇ ಇದಾನೀಮೇವ ತವ ಭಕ್ಷಾ ಭವಂತಿ। ಅತಸ್ತ್ವದ್ಯಜ್ಞವಿಘ್ನಂ ತ್ವಮೇವ ನ ಕುರ್ವಿತಿ ಚ ನ್ಯಾಯಸಾಮ್ಯಾತ್ ಸ್ಮೃತವಾನಿತ್ಯೂಹ್ಯತೇ। ಯಜ್ಞತುಷ್ಟೇನ= ಉಕ್ತವಿಧಯಾ ದ್ವಿವಿಧಯಜ್ಞತುಷ್ಟೇನ ॥ – (ವಾ.)

೧೨೭. ಮಾನಸಂ ಧ್ಯಾನಾತ್ಕಂಯಶಂಚಕ್ರೇ । – (ಜ.)

೧೨೮. ಅಪಶ್ಯತ್ಕೃತಮಾಕಾಶಮನಾಕಾಶಂ ಜನಾರ್ದನೈಃ ।
ತದದ್ಭುತತಮಂ ದೃಷ್ಟ್ವಾ ದ್ರೋಣಪುತ್ರೋ ನಿರಾಯುಧಃ ॥
ಅಬ್ರವೀದತಿಸಂತಪ್ತಃ..... ॥ - ಭಾರತ (ಸೌಪ್ತಿಕ. ೬/೧೮,೧೯)

೧೨೯. ಸ್ವಯಮೇವಾತ್ಮನಾ ऽऽತ್ಮಾನಮುಪಹಾರಮುಪಾಹರತ್ ।
ಧನೂಂಷಿ ಸಮಿಧಸ್ತತ್ರ ಪವಿತ್ರಾಣಿ ಸಿತಾಃ ಶರಾಃ ॥
ಹವಿರಾತ್ಮವತಶ್ಚಾತ್ಮಾ ತಸ್ಮಿನ್ ಭಾರತ ಕರ್ಮಣಿ ।
ತತಃ ಸೌಮ್ಯೇನ ಮಂತ್ರೇಣ ದ್ರೋಣಪುತ್ರಃ ಪ್ರತಾಪವಾನ್ ॥
ಉಪಹಾರಂ ಮಹಾಮನ್ಯುರಥಾತ್ಮಾನಮುಪಾಹರತ್ ।
ತಂ ರುದ್ರಂ ರುದ್ರಕರ್ಮಾಣಂ ರೌದ್ರೈಃ ಕರ್ಮಭಿರಚ್ಯುತಮ್ ॥ – ಭಾರತ (ಸೌಪ್ತಿಕ. ೭/೫೨-೫೫)

೧೩೦. 'ಅಚ್ಯುತಃ ಪ್ರಥಿತಃ ಪ್ರಾಣಃ' – ವಿಷ್ಣುಸಹಸ್ರನಾಮ

೩) ಆತ್ಮಹತ್ಯೆಯ ಪ್ರಸಂಗಗಳು ಶ್ರೀಹರಿಯ ಅಚಿಂತ್ಯಶಕ್ತಿಗೆ ದ್ಯೋತಕ ಎಂಬುದು ಇದರಿಂದ ಸೂಚಿತ.

೪) ಮಹಾಭಾರತದಲ್ಲಿ ಬಂದಿರುವ **'ಆತ್ಮಾನಂ'** ಎಂಬ **'ಆತ್ಮ'**ಶಬ್ದಕ್ಕೆ ಪರಮಾತ್ಮನಿಗೆ ಎಂದೇ ಅರ್ಥಮಾಡಿಕೊಳ್ಳಬೇಕು. ಅಲ್ಲಿಯೇ ಮುಂದೆ **'ಅಚ್ಯುತಂ'** ಎಂದೇ ಉಲ್ಲೇಖವಿರುವುದು ಇದಕ್ಕೆ ಗಮಕ :

ತಂ ರುದ್ರಂ ರುದ್ರಕರ್ಮಾಣಂ ರೌದ್ರೈಃ ಕರ್ಮಭಿರಚ್ಯುತಮ್ ॥

– ಭಾರತ (ಸೌಪ್ತಿಕ. ೭/೫೨-೫೫)

ಶಿವನಿಂದ ಆಯುಧಪ್ರದಾನ

ಯಜ್ಞತುಷ್ಟೇನ ಹರಿಣಾ ಪ್ರೇರಿತಃ ಶಂಕರಃ ಸ್ವಯಮ್ ।
ಆತ್ಮನೇ ದ್ರೋಣಪುತ್ರಾಯ ದದೌ ಸರ್ವಾಯುಧಾನಿ ಚ ॥ ೧೨೭ ॥

ಅ: ಯಜ್ಞದಿಂದ ಸಂತುಷ್ಟನಾದ ಶ್ರೀಹರಿಯಿಂದ ಪ್ರೇರಿತನಾದ ಶಿವ ಸ್ವತಃ ತನ್ನ ರೂಪವೇ ಆದ ಅಶ್ವತ್ಥಾಮನಿಗೆ ಸಕಲ ಆಯುಧಗಳನ್ನೂ ಹಿಂದಿರುಗಿಸಿದ.

ವಿ: ಪಾಂಡವರ ಅಳಿದುಳಿದ ಸೈನ್ಯವನ್ನು ಸಂಹರಿಸುವ ಮೂಲಕ ಭೂಭಾರಹರಣ ಸಂಕಲ್ಪ–ವನ್ನು ಪೂರೈಸಲೆಂದು ಶ್ರೀಕೃಷ್ಣ ಶಿವನಿಗೆ ಹಾಗೆ ಪ್ರೇರೇಪಣೆ ಮಾಡಿ ಆಯುಧಗಳನ್ನು ಕೊಡಿಸಿದ ಎಂದರ್ಥ.

ಉವಾಚ ಚಾಹಮಾದಿಷ್ಟೋ ವಿಷ್ಣುನಾ ಪ್ರಭವಿಷ್ಣುನಾ ।
ಅರಕ್ಷಂ ಪಾರ್ಥಶಿಬಿರಮಿಯಂತಂ ಕಾಲಮೇವ ತು ॥ ೧೨೮ ॥

ತದಿಚ್ಛಯೈವ ನಿರ್ದಿಷ್ಟೋ ದಾಸ್ಯೇ ಮಾರ್ಗಂ ತವಾದ್ಯ ಚ ।
ಆಯುಧಾನಿ ಚ ಸರ್ವಾಣಿ ಹಂತುಂ ಸರ್ವಾನಿಮಾನ್ ಜನಾನ್ ॥ ೧೨೯ ॥

---

೧೨೮. ಯಥಾವದಹಮಾರಾದ್ಧಃ ಕೃಷ್ಣೇನಾಕ್ಲಿಷ್ಟಕರ್ಮಣಾ ।
ತಸ್ಮಾದಿಷ್ಟತಮಃ ಕೃಷ್ಣಾದನ್ಯೋ ಮಮ ನ ವಿದ್ಯತೇ ॥
ಕುರ್ವತಾ ತಾತ ಸಮ್ಮಾನಂ ತ್ವಾಂ ಚ ಜಿಜ್ಞಾಸತಾ ಮಯಾ ।
ಪಂಚಾಲಾಃ ಸಹಸಾ ಗುಪ್ತಾ ಮಾಯಾಶ್ಚ ಬಹುಶಃ ಕೃತಾಃ ।
ಕೃತಸ್ತ್ವೈವ ಸಮ್ಮಾನಃ ಪಂಚಾಲಾನ್ ರಕ್ಷತಾ ಮಯಾ ॥
ಅಭಿಭೂತಾಸ್ತು ಕಾಲೇನ ನೈಷಾಮದ್ಯಾಸ್ತಿ ಜೀವಿತಮ್ ॥ - (ಸೌಪ್ತಿಕ. ೭/೬೩-೬೫)

ಅ: ನಾನು ಸರ್ವಸಮರ್ಥನಾದ ವಿಷ್ಣುವಿನಿಂದ ಆಜ್ಞಪ್ತನಾಗಿ ಈ ಸಮಯದವರೆಗೆ ಪಾಂಡವಶಿಬಿರವನ್ನು ರಕ್ಷಿಸಿದೆ. ಅವನ ಇಚ್ಛೆಯಿಂದಲೇ ಪ್ರೇರಿತನಾಗಿ ನಾನು ನಿನಗೆ ಈಗ ದಾರಿ ನೀಡುವೆ. ಅದರಂತೆ ಇಲ್ಲಿಯ ಜನಗಳನ್ನೆಲ್ಲ ಕೊಲ್ಲಲು ಆಯುಧಗಳನ್ನೂ ಸಹ ನೀಡುವೆ.

ಇತ್ಯುದೀರ್ಯ ಪ್ರದಾಯಾಶು ಸರ್ವಾ ಹೇತೀರ್ವೃಷಧ್ವಜಃ ।
ತತ್ರೈವಾಂತರ್ದಧೇ ಸೋಽಪಿ ಪ್ರೋವಾಚ ಕೃಪಸಾತ್ವತೌ ॥ ೧೩೦ ॥

ಅ: ಹೀಗೆ ಹೇಳಿ ವೃಷಭಧ್ವಜನಾದ ಶಿವ ಸಕಲ ಆಯುಧಗಳನ್ನೂ ಅಶ್ವತ್ಥಾಮನಿಗೆ ನೀಡಿ ಅಲ್ಲಿಯೇ ಅದೃಶ್ಯನಾದ. ಅಶ್ವತ್ಥಾಮನು ಕೃಪ, ಕೃತವರ್ಮರಿಗೆ ತಿಳಿಸಿದ:

ವಿ: ಅಶ್ವತ್ಥಾಮನು ಆ ಕಾರ್ಯ ಪೂರೈಸುವ ವೇಳೆಗೆ ಕೃಪ, ಕೃತವರ್ಮರು ಸಹ ಅಲ್ಲಿಗೆ ಧಾವಿಸಿದರು. ರಥದಿಂದ ಮುಂಚಿತವಾಗಿಯೇ ಬಂದಿದ್ದ ಅಶ್ವತ್ಥಾಮ ಆ ವೇಳೆಗೆ ಆಗಮಿಸಿದ ಕೃಪ, ಕೃತವರ್ಮರಿಗೆ ಹೀಗೆ ತಿಳಿಸಿದ ಎಂದರ್ಥ.

ಅಶ್ವತ್ಥಾಮನಿಂದ ಶಿಬಿರಪ್ರವೇಶ

ಯೇ ನಿರ್ಯಾಸ್ಯಂತಿ ಶಿಬಿರಾಜ್ಜಹಿ ತಂ ತಾಂಶ್ಚ ಸರ್ವಶಃ ।
ಇತ್ಯುಕ್ತ್ವಾಪ್ರವಿವೇಶಾಂತರ್ಧನ್ವೀ ಖಡ್ಗೀ ಕೃತಾಂತವತ್ ॥ ೧೩೧ ॥

ಅ: ''ಶಿಬಿರದಿಂದ ಯಾರು ಹೊರ ಹೊರಡುವರೋ ಅವರನ್ನೆಲ್ಲ ನೀವಿಬ್ಬರು ಕೊಂದುಹಾಕಿರಿ''. ಹೀಗೆಂದು ಹೇಳಿ ಧನುರ್ಧಾರಿಯಾಗಿ, ಖಡ್ಗ ಹಿಡಿದು ಯಮನಂತೆ ಅಶ್ವತ್ಥಾಮ ಶಿಬಿರದೊಳಗೆ ನುಗ್ಗಿದ.

ವಿ: ಯಮನಿಗೂ ಯಮನಾದ ಶಿವನ ಅವತಾರವಾದ ಅಶ್ವತ್ಥಾಮನನ್ನು ಯಮನಿಗೆ ಹೋಲಿಸಿರುವುದು ನೀಚದೃಷ್ಟ್ಯಾಂತ ಎಂದು ತಿಳಿಯಬೇಕು (ಭಾ.ತಾ. ೧/೧೧/೧೯).

---

೧೩೦. ಏವಮುಕ್ತ್ವಾ ಮಹಾತ್ಮಾನಂ ಭಗವಾನಾತ್ಮನಸ್ತನುಮ್ ।
ಆವಿವೇಶ ದದೌ ಚಾಸ್ಮೈ ವಿಮಲಂ ಖಡ್ಗಮುತ್ತಮಮ್ ॥ – ಭಾರತ ಸೌಪ್ತಿಕ. ೭/೬೬)

೧೩೧. ಅಹಂ ಪ್ರವೇಕ್ಷ್ಯೇ ಶಿಬಿರಂ ಚರಿಷ್ಯಾಮಿ ಚ ಕಾಲವತ್ ।
ಯಥಾ ನ ಕಶ್ಚಿದಪಿ ವಾ ಜೀವನ್ ಮುಚ್ಯೇತ ಮಾನವಃ ॥
ತಥಾ ಭವದ್ಭ್ಯಾಂ ಕಾರ್ಯಂ ಸ್ಯಾದಿತಿ ಮೇ ನಿಶ್ಚಿತಾ ಮತಿಃ ।
ಇತ್ಯುಕ್ತ್ವಾ ಪ್ರಾವಿಶದ್ ದ್ರೌಣಿಃ ಪಾರ್ಥಾನಾಂ ಶಿಬಿರಂ ಮಹತ್ ॥ – ಭಾರತ (ಸೌಪ್ತಿಕ.೮/೮,೯)

ಅಶ್ವತ್ಥಾಮನಿಂದ ಧೃಷ್ಟದ್ಯುಮ್ನನ ಸಂಹಾರ

ಪಾರಾವತಾಶ್ವಂ ಸ ತದಾ ಶಯಾನ-
ಮುಪೇತ್ಯ ಪದ್ಭ್ಯಾಂ ಸಮತಾಡಯಚ್ಚ।
ವಕ್ಷಸ್ಯಸಾವವದದ್ವಿತನಿದ್ರೋ
ಜಾನೇ ಭವಂತಂ ಹಿ ಗುರೋಸ್ತನೂಜಮ್ ॥ ೧೩೨ ॥

ಅ: ಶಿಬಿರದೊಳಗೆ ನುಗ್ಗಿದ ಅಶ್ವತ್ಥಾಮ ಮಲಗಿದ್ದ ಧೃಷ್ಟದ್ಯುಮ್ನನ ಬಳಿಗೆ ತೆರಳಿ ಎರಡೂ ಕಾಲುಗಳಿಂದ ಜೋರಾಗಿ ಅವನ ಎದೆಗೆ ಒದ್ದ. ನಿದ್ರೆಯಿಂದೆಚ್ಚೆತ್ತ ಧೃಷ್ಟದ್ಯುಮ್ನ ಕೇಳಿಕೊಂಡ - ನೀನು ಗುರುಪುತ್ರನಾದ ಅಶ್ವತ್ಥಾಮ ಎಂದು ಬಲ್ಲೆ!

ವಿ: ೧) ಧೃಷ್ಟದ್ಯುಮ್ನನ ಕುದುರೆಗಳು ಪಾರಿವಾಳದ ಮೈಬಣ್ಣವನ್ನು ಹೊಂದಿದ್ದರಿಂದ ಅವನಿಗೆ ಪಾರಾವತಾಶ್ವ ಎಂದು ವಿಶೇಷವಾದ ಹೆಸರಿತ್ತು

೨) ತನ್ನ ತಂದೆಯನ್ನು ಕೊಂದವನು ಎಂಬ ವಿಶೇಷ ಕಾರಣದಿಂದ ಅಶ್ವತ್ಥಾಮ ಆ ಶಿಬಿರದಲ್ಲಿ ಮೊದಲು ಸಂಹರಿಸಹೊರಟಿದ್ದು ಧೃಷ್ಟದ್ಯುಮ್ನನನ್ನೇ ಎಂದು ತಿಳಿಯಬೇಕು.

ಸಮುತ್ಥಿತಂ ಮಾಂ ಜಹಿ ಶಸ್ತ್ರಪಾಣಿಂ
ಶಸ್ತ್ರೇಣ ವೀರೋಽಸಿ ಸ ವೀರಧರ್ಮಃ।
ಲೋಕಾಶ್ಚ ಮೇ ಸಂತ್ವಥ ಶಸ್ತ್ರಪೂತಾ
ಇತಿ ಬ್ರುವಾಣಂ ಸ ರುಷಾ ಜಗಾದ ॥ ೧೩೩ ॥

ಅ: ''ನೀನು ವೀರನಾಗಿರುವಿ; ನಾನು ಎದ್ದು ಶಸ್ತ್ರ ಹಿಡಿದ ಮೇಲೆ ನನ್ನನ್ನು ಶಸ್ತ್ರದಿಂದ ಕೊಲ್ಲು, ಅದೇ ವೀರರಿಗೆ ಧರ್ಮ. ಅದರಿಂದಾಗಿ ನನಗೂ ಸಹ ಶಸ್ತ್ರಪೂತವಾದ

---

೧೩೨. ಪಾರಾವತಾಶ್ವಂ ಸ ತದೇತ್ಯತ್ರ ಪಾರಾವತಪಕ್ಷಿವತ್ ಚಿತ್ರವರ್ಣಾಃ ಅಶ್ವಾಃ ಯಸ್ಯ ಸಃ। ಪಾರಾವತಾಶ್ವಃ = ಧೃಷ್ಟದ್ಯುಮ್ನಃ ತಮ್ ॥ – (ವಾ.)

೧೩೩. ಶಸ್ತ್ರಪೂತಾಃ ಶಸ್ತ್ರೇಣ ಶಸ್ತ್ರಯುದ್ಧಮರಣೇನ ಪೂತಾ ಜನಾ ಯೇಷು ಲೋಕೇಷು ತೇ ಶಸ್ತ್ರಪೂತಾಃ ಶಸ್ತ್ರಪೂತಜನಪ್ರಾಪ್ಯಾ ಇತಿ ಯಾವತ್ ಲೋಕಾ ಇತ್ಯರ್ಥಃ। – (ಸ.)

೧೩೩. ಆಚಾರ್ಯಪುತ್ರ ಶಸ್ತ್ರೇಣ ಜಹಿ ಮಾಂ ಮಾ ಚಿರಂ ಕೃಥಾಃ।
ತ್ವತ್ಕೃತೇ ಸುಕೃತಾನ್ ಲೋಕಾನ್ ಗಚ್ಛೇಯಂ ದ್ವಿಪದಾಂ ವರ ॥ - ಭಾರತ (ಸೌಪ್ತಿಕ. ೮/೨೦)

ಪುಣ್ಯಲೋಕಗಳು ದೊರೆಯುವವು ಎಂದು ಧೃಷ್ಟದ್ಯುಮ್ನ ಕೇಳಿಕೊಳ್ಳಲು ಅಶ್ವತ್ಥಾಮ ಕೋಪದಿಂದ ನುಡಿದ.

ವಿ: ೧) ಧೃಷ್ಟದ್ಯುಮ್ನನಿಗೆ ಇನ್ನು ಸಾವು ಅನಿವಾರ್ಯ ಎಂಬುದು ಮನವರಿಕೆಯಾಯಿತು. ಆದರೂ ಶಸ್ತ್ರಹೀನನಾಗಿ ಸತ್ತರೆ ಕೊಲೆ ಎನ್ನಿಸಿ ದುರ್ಮರಣ ಎನ್ನಿಸುವುದರಿಂದ ತಾನು ಶಸ್ತ್ರ ಕೈಗೆತ್ತಿಕೊಂಡು ಯುದ್ಧಕ್ಕೆ ಸಿದ್ಧನಾದ ಮೇಲೆ ಕೊಲ್ಲಲು ಅಶ್ವತ್ಥಾಮರನ್ನು ಕೇಳಿಕೊಂಡ ಎಂದು ತಿಳಿಯಬೇಕು.

೨) ಶಸ್ತ್ರ ಹಿಡಿಯದಿದ್ದಾಗ ಸಾಯುವುದು ಕ್ಷತ್ರಿಯನಿಗೆ ದುರ್ಮರಣವಾದರೆ, ಶಾಸ್ತ್ರ ಹಿಡಿಯದಿದ್ದಾಗ ಸಾಯುವುದು ಬ್ರಾಹ್ಮಣನ ಪಾಲಿಗೆ ದುರ್ಮರಣ ಎಂಬ ಸೂಚನೆ ಇಲ್ಲಿದೆ ಎಂದು ತಿಳಿಯಬಹುದು. ಆದ್ದರಿಂದಲೇ ಶಾಸ್ತ್ರಾಭ್ಯಾಸವಿಲ್ಲದೇ ಒಂದು ಕ್ಷಣವೂ ಸಹ ಇರಕೂಡದು ಎಂದು ಶ್ರೀಮದಾಚಾರ್ಯರು ಆದೇಶ ನೀಡಿರುವರು ಎಂದು ತಿಳಿಯಬೇಕು : **'ಶ್ರವಣಾದಿ ವಿನಾ ನೈವ ಕ್ಷಣಂ ತಿಷ್ಠೇದಪಿ ಕ್ವಚಿತ್'**.

ನ ಸಂತಿ ಹಿ ಬ್ರಹ್ಮಹಣಾಂ ಸುಲೋಕಾ
ವಿಶೇಷತಶ್ಚೈವ ಗುರುದ್ರುಹಾಂ ಪುನಃ ।
ನ ಧರ್ಮಯುದ್ಧೇನ ವಧಾರ್ಹಕಾಶ್ಚ
ಯೇ ತ್ವದ್ವಿಧಾಃ ಪಾಪತಮಾಃ ಸುಪಾಪ ॥ ೧೩೪ ॥

ಅ: ಮಹಾಪಾಪಿಯೇ, ಬ್ರಹ್ಮಹತ್ಯೆ ಮಾಡುವವರಿಗೆ, ವಿಶೇಷವಾಗಿ ಗುರುಗಳ ದ್ರೋಹ ಮಾಡುವವರಿಗೆ ಪುಣ್ಯಲೋಕಗಳು ಸರ್ವಥಾ ಲಭಿಸವು; ನಿನ್ನಂತಹ ಮಹಾಪಾತಕಿಗಳನ್ನು ಧರ್ಮಯುದ್ಧದಲ್ಲಿ ಕೊಲ್ಲುವುದು ತರವೂ ಅಲ್ಲ.

ವಿ: ೧) ಬ್ರಹ್ಮಹತ್ಯೆ, ಗುರುದ್ರೋಹಗಳು ಸರ್ವಥಾ ಪುಣ್ಯಲೋಕಕ್ಕೆ ಸಾಧನವಲ್ಲ, ಎಂದರೆ ಅಂತಹ ಪಾಪಗಳನ್ನು ಮಾಡಿದವರು ಹೇಗೆ ಸತ್ತರೂ ತೆರಳುವುದು ದುರ್ಗತಿಗೇ ಹೊರತು ಸದ್ಗತಿಗಲ್ಲ. ಇದರಿಂದ ದುರ್ಯೋಧನಾದಿಗಳು ಶಸ್ತ್ರ ಹಿಡಿದಿದ್ದಾಗ ಸತ್ತಿದ್ದರೂ ಸಹ ತೆರಳಿದ್ದುದು ದುರ್ಗತಿಗೇ ಹೊರತು ಸದ್ಗತಿಗಲ್ಲ ಎಂಬ ವಿಶೇಷಾಂಶ ಸೂಚಿತವಾಗುವುದು.

೨) ಪಾಪಿಗಳನ್ನು ಧರ್ಮಯುದ್ಧದಲ್ಲಿ ಕೊಲ್ಲುವುದು ತರವಲ್ಲ ಎಂದು ಹೇಳುವ ಮೂಲಕ ಅಶ್ವತ್ಥಾಮ ದುರ್ಯೋಧನನನ್ನು ಭೀಮ ಕೊಂದಿದ್ದು ತಪ್ಪಲ್ಲ ಎಂದು ಒಪ್ಪಿಕೊಂಡಂತಾಯಿತು

---

೧೩೪. ಆಚಾರ್ಯಘಾತಿನಾಂ ಲೋಕಾ ನ ಸಂತಿ ಕುಲಪಾಂಸನ ।
ತಸ್ಮಾಚ್ಛಸ್ತ್ರೇಣ ನಿಧನಂ ನ ತ್ವಮರ್ಹಸಿ ದುರ್ಮತೇ ॥ – (ದ್ರೌಣವಚನ) ಭಾರತ(ಸೌಪ್ತಿಕ. ೮/೨೧)

ಎಂಬುದನ್ನು ಗಮನಿಸಬೇಕು. ಅದು ಹಾಗೆ ತಿಳಿದಿದ್ದರೂ ಅವರು ಅಧರ್ಮ ಎಂದು ಕರೆದದ್ದು ಕೇವಲ ದುರ್ಯೋಧನನ ಮೇಲಿನ ಸ್ನೇಹದಿಂದಲೇ ಹೊರತು ಬೇರೆ ಕಾರಣದಿಂದಲ್ಲ(ಶ್ಲೋ. ೧೧೦).

ಅವಶ್ಯಭಾವಿನಂ ಮೃತ್ಯುಂ ಧೃಷ್ಟದ್ಯುಮ್ನೋ ವಿಚಿಂತ್ಯ ತಮ್ ।
ತೂಷ್ಣೀಂ ಬಭೂವ ಸ್ವಪ್ನೇಽಪಿ ನಿತ್ಯಂ ಪಶ್ಯತಿ ತಾಂ ಮೃತಿಮ್ ॥ ೧೩೫ ॥

ಅ: ತನಗಿನ್ನು ಮೃತ್ಯು ಒದಗುವುದು ಅನಿವಾರ್ಯ ಎಂದು ಬಗೆದು ಸುಮ್ಮನಾದ. ಸ್ವಪ್ನದಲ್ಲೂ ಅಂತಹ ಮೃತಿಯನ್ನು ಅವನು ಪ್ರತಿನಿತ್ಯ ಕಾಣುತ್ತಿದ್ದ.

ವಿ: ಧೃಷ್ಟದ್ಯುಮ್ನನಿಗೆ ಅಂತಹ ದುರ್ಮರಣದ ಮುನ್ಸೂಚನೆ ಸ್ವಪ್ನದಿಂದ ದೊರಕಿತ್ತು ಎಂದರ್ಥ. ಇದರಿಂದ ಸ್ವಪ್ನಗಳಿಗೆ ಸೂಚಕತ್ವ ಇರುವುದು ಪ್ರಾಮಾಣಿಕ ಎಂದಾಗುವುದು. (**'ಸೂಚಕಶ್ಚ ಹಿ ಶ್ರುತೇರಾಚಕ್ಷತೇ ಚ ತದ್ವಿದಃ'** – ಬ್ರಹ್ಮಸೂತ್ರ ೩/೨/೪).

ಧೃಷ್ಟದ್ಯುಮ್ನ ಕಾಣುತ್ತಿದ್ದ ದುಃಸ್ವಪ್ನ

ದ್ರೌಣಿಂ ಚ ಕಾಳರಾತ್ರಿಂ ಚ ದ್ರೋಣಪಾತಾದನಂತರಮ್ ।
ವಿಶಸಂತಂ ಕೃಷಂತೀಂ ಚ ಸ್ವಪ್ನೇಽಪಶ್ಯದ್ಧಿ ಪಾರ್ಷತಃ ॥ ೧೩೬ ॥

---

೧೩೬. **ಕೃಷಂತಂ** .... – (ತಾ. ಪಾಠ)

೧೩೬. ವಿಶಸಂತಂ ಮಾರಯಂತಂ ಕಾಲರಾತ್ರಿಂ ಮಹಾಕಾಲೀಂ ಮೃತ್ಯುದೇವತಾಮಿತ್ಯರ್ಥಃ। – (ಜ.)

೧೩೬. ಕಾಳೀಂ ರಕ್ತಾಸ್ಯನಯನಾಂ ರಕ್ತಮಾಲ್ಯಾನುಲೇಪನಾಮ್ ।
ರಕ್ತಾಂಬರಧರಾಮೇಕಾಂ ಪಾಶಹಸ್ತಾಂ ಕುಟುಂಬಿನೀಮ್ ॥
ದದೃಶುಃ ಕಾಳರಾತ್ರಿಂ ತೇ ಗಾಯಮಾನಾಮವಸ್ಥಿತಾಮ್ ।
ನರಾಶ್ವಕುಂಜರಾನ್ ಪಾಶೈರ್ಬದ್ಧ್ವಾ ಘೋರೈಃ ಪ್ರತಸ್ಥುಷೀಮ್ ॥
ವಹಂತೀಂ ವಿವಿಧಾನ್ ಪ್ರೇತಾನ್ ಪಾಶಬದ್ಧಾನ್ ವಿಮೂರ್ಧಜಾನ್ ॥
ತಥೈವ ಚ ಸದಾ ರಾಜನ್ ನ್ಯಸ್ತಶಸ್ತ್ರಾನ್ ಮಹಾರಥಾನ್ ।
ದದೃಶುರ್ಯೋಧಮುಖ್ಯಾಸ್ತೇ ಘ್ನಂತಂ ದ್ರೌಣಿಂ ಚ ಸರ್ವದಾ ।
ಯತಃ ಪ್ರಭೃತಿ ಸಂಗ್ರಾಮಃ ಕುರುಪಾಂಡವಸೇನಯೋಃ ।
ತತಃ ಪ್ರಭೃತಿ ತಾಂ ಕನ್ಯಾಮಪಶ್ಯನ್ ದ್ರೌಣಿಮೇವ ಚ । – ಭಾರತ (ಸೌಪ್ತಿಕ. ೮/೭೦-೭೩)

ತದನುಸೃತ್ಯ ತೇ ವೀರಾ ದರ್ಶನಂ ಪೂರ್ವಕಾಲಿಕಮ್ ।
ಇದಂ ತದಿತ್ಯಮನ್ಯಂತ ದೈವೇನೋಪನಿಪೀಡಿತಾಃ ॥ – ಚ ತತ್ರೈವ (೮/೭೫)

ಅ: ಅಶ್ವತ್ಥಾಮನನ್ನೂ, ತನ್ನೆಡೆಗೆ ಸೆಳೆಯುತ್ತಿದ್ದ ಕರಾಳವಾದ ರಾತ್ರಿಯನ್ನೂ, ದ್ರೋಣ-ವಧೆಯ ಅನಂತರ ಧೃಷ್ಟದ್ಯುಮ್ನ ಕಾಣುತ್ತಲಿದ್ದ.

ವಿ: ಆ ಕಾಳರಾತ್ರಿ ಅಂದಿನ ಅಮಾವಾಸ್ಯೆಯ ಮಧ್ಯರಾತ್ರಿಗೆ ಸಂಕೇತವಾಗಿತ್ತು ಎಂಬುದು ವಿಶೇಷ. ಮಹಾಭಾರತದಲ್ಲಿ ಧೃಷ್ಟದ್ಯುಮ್ನನಂತೆ ಹಾಗೂ ಇತರ ಪ್ರಧಾನ ಪಾಂಡವಯೋಧರು ಅದೇ ಬಗೆಯ ಸ್ವಪ್ನವನ್ನು ಕಾಣುತ್ತಿದ್ದ ವಿವರ ಬಂದಿದೆ.

ದದೃಶುರ್ಯೋಧಮುಖ್ಯಾಸ್ತೇ ಘ್ನಂತಂ ದ್ರೌಣಿಂ ಚ ಸರ್ವದಾ ।
ಯತಃ ಪ್ರಭೃತಿ ಸಂಗ್ರಾಮಃ ಕುರುಪಾಂಡವಸೇನಯೋಃ ।
ತತಃ ಪ್ರಭೃತಿ ತಾಂ ಕನ್ಯಾಮಪಶ್ಯನ್ ದ್ರೌಣಿಮೇವ ಚ ।

– ಭಾರತ (ಸೌಪ್ತಿಕ. ೮/೭೦-೭೩)

ಹದಿನೈದನೇ ದಿನದ ರಾತ್ರಿಯಿಂದ ಆ ಸ್ವಪ್ನ ಅವರಿಗೆ ಕಾಣತೊಡಗಿತ್ತು ಎಂದಾಗುವುದು. ದ್ರೋಣರು ಸತ್ತದ್ದು ಹದಿನೈದನೇ ಯುದ್ಧದ ಸಂಜೆಯವೇಳೆಗಲ್ಲವೇ.

ಮೂಲರೂಪಕ್ಕೆ ತೆರಳಿದ ಧೃಷ್ಟದ್ಯುಮ್ನ

ಸಮಾಕ್ಷಿಪತ್ ದ್ರೌಣಸುತೋಽಸ್ಯ ಕಂಠೇ
ನಿಬಧ್ಯ ಮೌರ್ವೀಂ ಧನುಷೋಽಪ್ಯರಸ್ಥಃ ।
ಮಮಂಥ ಕೃಚ್ಛ್ರೇಣ ವಿಹಾಯ ದೇಹಂ
ಯಯೌ ನಿಜಸ್ಥಾನಮಸೌ ಚ ವಹ್ನಿಃ ॥ ೧೩೭ ॥

ಅ: ದ್ರೋಣಪುತ್ರನಾದ ಅಶ್ವತ್ಥಾಮ ಧೃಷ್ಟದ್ಯುಮ್ನನ ಎದೆಯ ಮೇಲೆ ಕುಳಿತು ಅವನ ಕೊರಳಿಗೆ ಬಿಲ್ಲಿನ ಹಗ್ಗವನ್ನು ಬಿಗಿದು ಸೆಳೆಯತೊಡಗಿದ. ಧೃಷ್ಟದ್ಯುಮ್ನ ಕಷ್ಟದಿಂದ ದೇಹ ತೊರೆದು ತನ್ನ ಲೋಕಕ್ಕೆ ತೆರಳಿದ. ಅವನು ಅಗ್ನಿಯ ಅವತಾರನಲ್ಲವೇ.

ವಿ: ಅಶ್ವತ್ಥಾಮ ಹೇಳಿದಂತೆ ಧೃಷ್ಟದ್ಯುಮ್ನನಿಗೆ ದುರ್ಗತಿಯೇನೂ ಆಗದೇ ಸದ್ಗತಿಯೇ ಆಯಿತೆಂಬುದನ್ನು ಇಲ್ಲಿ ಸ್ಪಷ್ಟಪಡಿಸಿರುವರು. ಅದಕ್ಕೆ ಕಾರಣ ಧೃಷ್ಟದ್ಯುಮ್ನ ದ್ರೋಣರ ತಲೆ ಕತ್ತರಿಸಿದ್ದು ಅವರು ಸತ್ತ ಮೇಲೆಯೇ ಹೊರತು, ಬದುಕಿದ್ದಾಗಲಲ್ಲ (೨೬/೨೮೬, ೨೮೭). ಇನ್ನು ಅಶರೀರವಾಣಿಯ ವಚನದಂತೆ ಅವನ ಅವತಾರವಾಗಿದ್ದುದೂ ಆ ಕಾರ್ಯಕ್ಕೋಸ್ಕರ ಎಂಬುದು ಮತ್ತೊಂದು ಕಾರಣ. ಪಾಂಡವ ಪಕ್ಷದಲ್ಲಿ ಇದ್ದು ಕೃಷ್ಣ ಭೀಮರ ಅನುಗ್ರಹವನ್ನು ಹೊಂದಿದ್ದುದು ಮುಖ್ಯಕಾರಣ. ದುರ್ಮರಣದಿಂದ ದುರ್ಗತಿಯೆಂಬುದು ಜ್ಞಾನಿಗಳಿಗೆ ಅನ್ವಯಿಸುವ ವಿಷಯವಲ್ಲ ಎಂಬ ಪ್ರಮೇಯವೂ ಇದರಿಂದ ಸೂಚಿತ.

ಶಿಖಂಡಿ ಮೊದಲಾದವರ ಸಂಹಾರ

ತತಃ ಶಿಖಂಡಿನಂ ಹತ್ವಾ ಯುಧಾಮನ್ಯೂತ್ತಮೌಜಸೌ ।
ಜನಮೇಜಯಂ ಚ ಪಾಂಚಾಲೀಸುತಾನಭಿಯಯೌ ಜ್ವಲನ್ ॥ ೧೩೮ ॥

ಅ: ಬಳಿಕ ಶಿಖಂಡಿಯನ್ನು ಕೊಂದು ಯುಧಾಮನ್ಯು, ಉತ್ತಮೌಜಸ್, ಜನಮೇಜಯ-ರನ್ನು ಕೊಂದು, ದ್ರೌಪದಿಯ ಮಕ್ಕಳತ್ತ ಕುದಿಯುತ್ತಾ ತೆರಳಿದ.

ವಿ: ೧) 'ಪಾಂಚಾಲರಲ್ಲಿ ದೌಹಿತ್ರರನ್ನೂ ಸಹ ಉಳಿಸಕೂಡದು' (೨೬/೨೦೮) ಎಂದು ದ್ರೋಣರು ತಿಳಿಸಿದ್ದರಿಂದ ಅವರನ್ನು ಕೊಲ್ಲಲೆಂದು ಅಶ್ವತ್ಥಾಮ ಹಾಗೆ ತೆರಳಿದ ಎಂದರ್ಥ; ಮತ್ತು ಉಪಪಾಂಡವರನ್ನು, ಶಿಖಂಡಿ ಮೊದಲಾದವರನ್ನು ಕೊಂದಿದ್ದು ಅದರಿಂದಾಗಿಯೇ ಎಂದು ತಿಳಿಯಬೇಕು.

೨) ಇಲ್ಲಿ ಶಿಖಂಡಿಯು ಮೃತನಾಗುತ್ತಿದ್ದಂತೆಯೇ ತುಂಬುರುವಿಗೆ ತನ್ನ ಪುರುಷದೇಹ ಮರಳಿ ಲಭಿಸಿತು ಎಂದು ತಿಳಿಯಬೇಕು (೧೧/೧೧೮).

೩) ಈ ಜನಮೇಜಯ ದ್ರುಪದ ಪುತ್ರ. ಮುಂದೆ ಮಹಾಭಾರತ ಕೇಳುವ ಜನಮೇಜಯ ಪರೀಕ್ಷಿದ್ರಾಜನ ಪುತ್ರ ಎಂಬ ವಿಶೇಷವನ್ನು ಗಮನಿಸಬೇಕು.

ಉಪಪಾಂಡವರ ಸಂಹಾರ - ಶರ್ವತ್ರಾತನಾದ ಭೀಮಪುತ್ರ

ತೈರುತ್ಥಿತೈರಸ್ಯಮಾನಃ ಶರೈಃ ಖಡ್ಗೇನ ಜಘ್ನಿವಾನ್ ।
ಸರ್ವಾನ್ ಸವ್ಯಾಪಸವ್ಯೇನ ತಥಾಽನ್ಯಾನ್ ಪಾಂಡವಾತ್ಮಜಾನ್ ॥ ೧೩೯ ॥

ಋತ ಏಕಂ ಭೈಮಸೇನಿಂ ಕಾಶಿರಾಜಾತ್ಮಜಾತ್ಮಜಮ್ ।
ತಂ ತದಾಽಂತರ್ಹಿತಃ ಶರ್ವಃ ಕೈಲಾಸಮನಯತ್ ಕ್ಷಣಾತ್ ॥ ೧೪೦ ॥

---

೧೩೮. ಶಿಖಂಡಿನಂ ಸಮಾಸಾದ್ಯ ದ್ವಿಧಾ ಚಿಚ್ಛೇದ ಸೋಽಸಿನಾ । – ಭಾರತ (ಸೌಪ್ತಿಕ. ೮/೬೫)

೧೩೮. ದ್ರುಪದಸ್ಯ ಚ ಪುತ್ರಾಣಾಂ ಪೌತ್ರಾಣಾಂ ಸುಹೃದಾಮಪಿ ।
ನ್ಯಕೃಂತದಸಿನಾ ದ್ರೌಣಿರಸಿಮಾರ್ಗವಿಶಾರದಃ ॥ – ಭಾರತ (ಸೌಪ್ತಿಕ. ೮/೬೮)

೧೩೯. ಸವ್ಯಾಪಸವ್ಯೇನ ಸವ್ಯಾಪಸವ್ಯತಾಡನೇನ ಜಘ್ನಿವಾನ್ । – (ಜ.)

೧೩೯. ದ್ರೌಪದೇಯಾನಭಿದ್ರುತ್ಯ ಖಡ್ಗೇನ ವ್ಯಧಮದ್ಬಲೀ ॥ (ಇತ್ಯಾದಿ) – ಭಾರತ (ಸೌಪ್ತಿಕ. ೮/೫೩-೬೨)

ಸ ಶರ್ವತ್ರಾತನಾಮಾऽऽಸೀದತಸತ್ತ್ವೈವ ಸೋऽವಸತ್ ।
ಪುರಾऽರ್ಥಿತಃ ಸ್ವದೌಹಿತ್ರಸ್ಯಾಮರತ್ವಾಯ ಶಂಕರಃ ।
ಕಾಶಿರಾಜೇನ ತೇನಾಸೌ ಜುಗೋಪೈನಂ ಕೃಪಾಯುತಃ ॥ ೧೪೧ ॥

ಅ: ಅವರೆಲ್ಲ ಮೇಲೆದ್ದು ಬಾಣಗಳಿಂದ ಹೊಡೆಯತೊಡಗಿದರು. ಅಶ್ವತ್ಥಾಮ ಅವರನ್ನೆಲ್ಲ ಖಡ್ಗದಿಂದ ಸವ್ಯ, ಅಪಸವ್ಯ ಕ್ರಮದಲ್ಲಿ ಸಂಹರಿಸಿದ. ಅದರಂತೆಯೇ ಶರ್ವತ್ರಾತ ಎಂಬ ಕಾಶಿರಾಜನ ಮೊಮ್ಮಗನಾದ ಭೀಮಪುತ್ರನೊಬ್ಬನನ್ನು ಬಿಟ್ಟು ಉಳಿದೆಲ್ಲ ಪಾಂಡವಪುತ್ರರನ್ನೂ ಕೊಂದುಹಾಕಿದ. ಆ ಶರ್ವತ್ರಾತನನ್ನು ಅದೃಶ್ಯನಾದ ಶಿವ ಆ ಕ್ಷಣದಲ್ಲೇ ಕೈಲಾಸಕ್ಕೆ ಕರೆದೊಯ್ದ. ಅದರಿಂದಾಗಿ ಅವನು ಶರ್ವತ್ರಾತ ಎಂಬ ಹೆಸರಿನವನಾದ. ಅನಂತರವೂ ಅವನು ಅಲ್ಲಿಯೇ ನೆಲೆಸಿದ. ಹಿಂದೆ ಕಾಶಿರಾಜ ತನ್ನ ಮಗಳ ಮಗ ಅಮರನಾಗಬೇಕೆಂದು ಬೇಡಿದ್ದರಿಂದ ಶಿವ ಅವನನ್ನು ಕೃಪೆಯಿಂದ ಪಾಲಿಸಿದ.

ವಿ: ಅಶ್ವತ್ಥಾಮ ಸಂಹರಿಸಿದ ಪಾಂಡುಪುತ್ರರಲ್ಲಿ ಶರ್ವತ್ರಾತನ ಹೊರತು ಇತರರೆಲ್ಲ ಸೇರಿದ್ದರು. ಶರ್ವತ್ರಾತ ಮೇಲೆ ಹೇಳಿದ ವಿಶೇಷ ಕಾರಣದಿಂದ ಬದುಕುಳಿದ. ಅವನು ಕೈಲಾಸದಲ್ಲೇ ನೆಲೆಸಿದ್ದ ಅವನು ಮುಂದೆ ಅಶ್ವತ್ಥಾಮ ಬ್ರಹ್ಮಶಿರೋಸ್ತ್ರವನ್ನು ಪ್ರಯೋಗಿಸಿದಾಗಲೂ ಸಾಯುವ ಪ್ರಸಂಗ ಬರಲಿಲ್ಲ ಎಂಬ ವಿಶೇಷಾಂಶ ಮುಂದೆ ಬಂದಿದೆ (ಶ್ಲೋ. ೧೪೩).

ವಾಸುದೇವಮತಂ ಜ್ಞಾತ್ವಾ ಸಾಮ್ರಾಜ್ಯಾಯ ಪರೀಕ್ಷಿತಃ ।
ವಾರಯಾಮಾಸ ಭೂಲೋಕಂ ನೈವ ಯಾಹೀತ್ಯಮುಂ ಶಿವಃ ॥ ೧೪೨ ॥

ಅ: ಪರೀಕ್ಷಿತನಿಗೆ ಸಾಮ್ರಾಜ್ಯ ನೀಡಬೇಕೆಂಬ ಕೃಷ್ಣನ ಸಂಕಲ್ಪವನ್ನು ಅರಿತು ಶಿವ ಅವನನ್ನು ಭೂಲೋಕಕ್ಕೆ ತೆರಳಬೇಡವೆಂದು ತಡೆದ.

ವಿ: ಶರ್ವತ್ರಾತನನ್ನು ಶಿವ ಆಗ ಅಲ್ಲಿಯೇ ಉಳಿಸಿಕೊಳ್ಳಲು ಪರೀಕ್ಷಿದ್ರಾಜನಿಗೆ ರಾಜ್ಯ ನೀಡಬೇಕೆಂಬ ಕೃಷ್ಣನ ಸಂಕಲ್ಪ ಕಾರಣವಾಗಿತ್ತು. ಶರ್ವತ್ರಾತ ಭೂಮಿಗೆ ಬಂದರೆ, ಸಹಜವಾಗಿ ಅವನಿಗೇ ಪಾಂಡವರ ರಾಜ್ಯ ಲಭಿಸಬೇಕಿತ್ತು.

ಸಾಮಾನ್ಯತೋऽಪಾಂಡವಾಯ ದ್ರೌಣಿನಾऽಪ್ಯಭಿಸಂಹಿತಮ್ ।
ತದ್ರೂಪೇಣೈವ ರುದ್ರೇಣ ವಿನೈನಮಿತಿ ಚಿಂತಿತಮ್ ॥ ೧೪೩ ॥

ಅ: ಸಾಮಾನ್ಯತಃ ಪಾಂಡವರ ಸಂತತಿ ನಾಶಕ್ಕೆಂದು ಅಶ್ವತ್ಥಾಮರಿಂದ ಸಂಕಲ್ಪಿತವಾಗಿದ್ದ ಬ್ರಹ್ಮಶಿರೋಸ್ತ್ರವನ್ನು ಅವನ ಸ್ವರೂಪವೇ ಆಗಿದ್ದ ಶಿವ ಶರ್ವತ್ರಾತನನ್ನು ಬಿಟ್ಟು ಎಂದು ಸಂಕಲ್ಪಿಸಿದ.

ವಿ: ತಾನೇ ನೀಡಿದ ವರವನ್ನು ಸತ್ಯವಾಡಲೆಂದು ಶಿವ ಹೀಗೆ ಚಿಂತಿಸಿದ ಎಂದರ್ಥ.

ಚೇಕಿತಾನಾದಿಗಳ ಸಂಹಾರ

ಅಸ್ತ್ರಂ ಬ್ರಹ್ಮಶಿರಶ್ಚೈನಂ ನ ಜಘಾನೈಕತಸ್ತಯೋಃ ।
ಚೇಕಿತಾನಾದಿಕಾಂಶ್ಚೈವ ಜಘಾನಾನ್ಯಾನ್ ಸ ಸರ್ವಶಃ ॥ ೧೪೪ ॥

ಅ: ಶಿವಅಶ್ವತ್ಥಾಮರಿಬ್ಬರೂ ಒಬ್ಬರೇ ಆದ್ದರಿಂದ ಬ್ರಹ್ಮಶಿರೋಽಸ್ತ್ರವೂ ಸಹ ಶರ್ವತ್ರಾತನನ್ನು ಕೊಲ್ಲಲಿಲ್ಲ. ಚೇಕಿತಾನ ಮೊದಲಾದ ಇತರರನ್ನೆಲ್ಲ ಅಶ್ವತ್ಥಾಮ ಸಂಹರಿಸಿದ.

ಶಿಬಿರದ ದಹನ

ಸ ಚೇದಿಪಾಂಚಾಲಕರೂಶಕಾಶೀ-
ನನ್ಯಾಂಶ್ಚ ಸರ್ವಾನ್ ವಿನಿಹತ್ಯ ವೀರಃ ।
ಶಿಶೂನ್ ಸ್ತ್ರಿಯಶ್ಚೈವ ನಿಹಂತುಮುಗ್ರಃ
ಪ್ರಾಜ್ವಾಲಯತ್ ತಚ್ಛಿಬಿರಂ ಸಮಂತಾತ್ ॥ ೧೪೫ ॥

ಅ: ವೀರನಾದ ಅಶ್ವತ್ಥಾಮ ಚೇದಿ, ಪಾಂಚಾಲ, ಕರೂಶ, ಕಾಶಿದೇಶದ ಎಲ್ಲರನ್ನೂ ಸಹ ಕೊಂದ. ಉಗ್ರನಾದ ಅವನು ಶಿಶುಗಳನ್ನು, ಸ್ತ್ರೀಯರನ್ನು ಕೊಲ್ಲಲೆಂದು ಆ ಶಿಬಿರಕ್ಕೆ ಎಲ್ಲೆಡೆಗಳಿಂದಲೂ ಬೆಂಕಿ ಇಟ್ಟ.

ವಿ: ೧) ಹೀಗೆ ಪ್ರಧಾನರನ್ನೆಲ್ಲ ಸಂಹರಿಸಿದ ಅಶ್ವತ್ಥಾಮ ಹೆಂಗಸರು, ಮಕ್ಕಳನ್ನೂ ಸಹ ಕೊಲ್ಲಲೆಂದು ಶಿಬಿರಕ್ಕೇ ಬೆಂಕಿಯಿಟ್ಟ ಎಂದರ್ಥ.

೨) ಅಶ್ವತ್ಥಾಮನಿಗೆ ಆ ಕಾರ್ಯ ಸಾಧ್ಯವಾದದ್ದು ಕೃಷ್ಣ ಹಾಗೂ ಪಾಂಡವರು ಅಲ್ಲಿ ಇಲ್ಲದಿದ್ದ ಕಾರಣದಿಂದಾಗಿ ಮಾತ್ರ ಎಂಬ ವಿಶೇಷಾಂಶ ಭಾರತದಲ್ಲಿದೆ :

ತೇಷಾಂ ನೂನಂ ಭಯಾನ್ನಾಸೌ ಕೃತವಾನ್ ಕುರುನಂದನ ।
ಅಸಾನ್ನಿಧ್ಯಾದ್ಧಿ ಪಾರ್ಥಾನಾಂ ಕೇಶವಸ್ಯ ಚ ಧೀಮತಃ ॥
ಸಾತ್ಯಕೇಶ್ಚಾಪಿ ಕರ್ಮೇದಂ ದ್ರೋಣಪುತ್ರೇಣ ಸಾಧಿತಮ್ ।
ಕೋ ಹಿ ತೇಷಾಂ ಸಮಕ್ಷಂ ತಾನ್ ಹನ್ಯಾದಪಿ ಮರುತ್ಪತಿಃ ॥ –(೧೦/೮/೧೫೪,೧೫೫)

---

೧೪೪. ಅಸ್ತ್ರಂ ಬ್ರಹ್ಮಶಿರಶ್ಚೈನಮಿತ್ಯತ್ರ ಅಸ್ತ್ರಂ= ಅಪಾಂಡವತ್ವಾಯ ಪ್ರಯೋಕ್ಷ್ಯಮಾಣಂ ದ್ರೌಣೇರ್ಬ್ರಹ್ಮಾಸ್ತ್ರಂ ಏನಂ= ಶರ್ವತ್ರಾತಮ್ ॥ –(ವಾ.)

೩) ಹನುಮಂತ ಶ್ರೀರಾಮಪ್ರೀತಿಗೆಂದು ಲಂಕೆಗೇ ಬೆಂಕಿಯಿಟ್ಟರೆ, ಅಶ್ವತ್ಥಾಮ ದುರ್ಯೋಧನ ಪ್ರೀತಿಗೆಂದು ಪಾಂಡವ ಶಿಬಿರಕ್ಕೆ ಬೆಂಕಿಯಿಟ್ಟದ್ದು ಎಂತಹ ವಿಪರ್ಯಾಸ! ವಾಯು ಶಿವನಿಗಿಂತ ಉತ್ತಮ ಎನ್ನಲು ಇದು ಮತ್ತೊಂದು ನಿದರ್ಶನ.

ಶಿಬಿರದ ಹೊರಗೆ ಕೃಪ ಕೃತವರ್ಮರಿಂದ ನರಮೇಧ

ಜಿಜೀವಿಷೂಂಸ್ತತ್ರ ಪಲಾಯಮಾನಾನ್
ದ್ವಾರಿ ಸ್ಥಿತೌ ಗೌತಮಃ ಸಾತ್ವತಶ್ಚ।
ನಿಜಘ್ನತುಃ ಸರ್ವಶಃ ಪಾರ್ಷತಸ್ಯ
ಸೂತಸ್ತ್ವೇಕಃ ಶೇಷಿತೋ ದೈವಯೋಗಾತ್ ॥ ೧೪೬ ॥

ಅ: ಜೀವಿಸುವ ಬಯಕೆಯಿಂದ ಹೊರಕ್ಕೆ ಓಡತೊಡಗಿದ್ದ ಜನರನ್ನೆಲ್ಲ ಶಿಬಿರದ ಬಾಗಿಲಲ್ಲಿ ನಿಂತಿದ್ದ ಕೃಪ, ಕೃತವರ್ಮರು ಕೊಂದುಹಾಕಿದರು. ದೈವಯೋಗದಿಂದ ಧೃಷ್ಟದ್ಯುಮ್ನನ ಸಾರಥಿ-ಯೊಬ್ಬ ಮಾತ್ರ ಉಳಿದುಕೊಂಡ.

ಎ: ಶಿಬಿರದಲ್ಲಿದ್ದ ಅಸಂಖ್ಯ ಜನರಲ್ಲಿ ಬದುಕುಳಿದದ್ದು ಶರ್ವತ್ರಾತನಂತೆ ಧೃಷ್ಟದ್ಯುಮ್ನನ ಸಾರಥಿಯೊಬ್ಬನು ಮಾತ್ರ.

ಸೂತನು ಉಳಿದ ಬಗೆ

ಖಡ್ಗೇನ ಪ್ರಹೃತಂ ದೃಷ್ಟ್ವಾ ಹಾರ್ದಿಕ್ಯೇನ ಪಪಾತ ಹ।
ಭೂಮೌ ಪ್ರಾಗೇವ ಸಂಸ್ಪರ್ಶಾನ್ನ ಜ್ಞಾತಸ್ತಮಸಾऽಮುನಾ ॥ ೧೪೭ ॥

ಅ: ಕೃತವರ್ಮ ಖಡ್ಗದಿಂದ ಜೋರಾಗಿ ಹೊಡೆದದ್ದನ್ನು ಕಂಡು ಅವನು ಅದು ತನಗೆ ತಾಕುವ ಮುನ್ನವೇ ಭೂಮಿಯ ಮೇಲೆ ಬಿದ್ದ. ಕತ್ತಲೆಯಿಂದಾಗಿ ಅದು ಅವನಿಗೆ ತಿಳಿಯಲಿಲ್ಲ.

ದ್ರೌಪದಿಯ ಮುಂದೆ ದುರಂತದ ನಿವೇದನೆ

ಅನ್ಯಾಸಕ್ತೇ ಸಮುತ್ಥಾಯ ಪ್ರಾದ್ರವದ್ಯತ್ರ ಪಾರ್ಷತೀ।
ತಸ್ಯಾ ಅಕಥಯತ್ ಸರ್ವಂ ಸಾ ಭೀಮಾಯಾಹ ದುಃಖಿತಾ।
ಪ್ರಾದ್ರವದ್ರಥಮಾರುಹ್ಯ ಸ ಧನ್ವೀ ಗೌತಮೀಸುತಮ್ ॥ ೧೪೮ ॥

ಅ: ಕೃತವರ್ಮ ಬೇರೆಯವರನ್ನು ಕೊಲ್ಲುವ ಕಾರ್ಯದಲ್ಲಿ ತೊಡಗಿದಾಗ ಅವನು ದ್ರೌಪದಿ ಇದ್ದಲ್ಲಿಗೆ ಓಡಿದ, ದ್ರೌಪದಿಗೆ ಅಲ್ಲಿ ನಡೆದದ್ದನ್ನೆಲ್ಲ ತಿಳಿಸಿದ. ದುಃಖಿತಳಾದ ದ್ರೌಪದಿ ಭೀಮನಿಗೆ ತಿಳಿಸಿದಳು. ಭೀಮ ರಥವನ್ನೇರಿ ಧನುರ್ಧಾರಿಯಾಗಿ ಅಶ್ವತ್ಥಾಮನನ್ನು ಬೆನ್ನಟ್ಟಿದ.

ವಿ: ಇಲ್ಲಿ ದ್ರೌಪದಿಯು ದುಃಖಿಸಿದ್ದು ಲೋಕದೃಷ್ಟಿಯಿಂದ ಎಂದು ತಿಳಿಯಬೇಕು, ಅಥವಾ ಅವರೊಳಗಿದ್ದ ಶಚಿ ಮೊದಲಾದವರು ದುಃಖಿಸಿದರು ಎಂದೂ ತಿಳಿಯಬಹುದು. ಸಾಕ್ಷಾತ್ ಭಾರತಿಯೇ ಆದ ದ್ರೌಪದಿಗೆ ದುಃಖಲೇಶವೂ ಸಹ ಸರ್ವಥಾ ಇಲ್ಲ ಎಂಬ ವಿವರ ಆಗಲೇ ಬಂದಿದೆ. (೧೮/೧೦೧; ೩೦/೧೨೭, ೧೨೮)

ದುರ್ಯೋಧನನ ಬಳಿಗೆ ಅಶ್ವತ್ಥಾಮ

ತದಂತರೇ ದ್ರೌಣಿರಪಿ ಪ್ರಯಾತಃ
ಕೃಷ್ಣಾಸುತಾನಾಂ ಮುದಿತಃ ಶಿರಾಂಸಿ ।
ಆದಾಯ ಹಾರ್ದಿಕ್ಯಕೃಪಾನುಯಾತೋ
ದುರ್ಯೋಧನಂ ಸನ್ನಿಕೃಷ್ಟಪ್ರಯಾಣಮ್ ॥ ೧೪೯ ॥

ಅ: ಈ ಮಧ್ಯೆ ಅಶ್ವತ್ಥಾಮ ದ್ರೌಪದಿಯ ಮಕ್ಕಳ ತಲೆಗಳನ್ನು ತೆಗೆದುಕೊಂಡು, ಕೃಪ, ಕೃತವರ್ಮರೊಂದಿಗೆ ಆಗಲೇ ಸಾವಿನ ಅಂಚಿನಲ್ಲಿದ್ದ ದುರ್ಯೋಧನನ ಬಳಿಗೆ ಸಂತೋಷ-ದಿಂದ ತೆರಳಿದ್ದ.

---

೧೪೬. ತಾಂಸ್ತು ನಿಘ್ನತಿತಾಂಸ್ತಸ್ತಾನ್ ಶಿಬಿರಾಜ್ಞೇವಿತೈಷಿಣಃ ।
ಕೃತವರ್ಮಾ ಕೃಪಶ್ಚೈವ ದ್ವಾರದೇಶೇ ನಿಜಘ್ನತುಃ ॥ – ಭಾರತ (ಸೌಪ್ತಿಕ. ೮/೧೦೬)

೧೪೭. ಖಡ್ಗೇನ ಪ್ರಹೃತಮಿತ್ಯತ್ರ ಪ್ರಹೃತಂ= ಪ್ರಹರಣಂ ಭಾವೇ ಕ್ತಃ ॥ – (ವಾ.)

೧೪೮. ಉಪಪ್ಲವ್ಯಂ ಪ್ರತಿ ಪ್ರಾದ್ರವದಿತ್ಯರ್ಥಃ । – (ವ.)

೧೪೯. ಅಹಮೇಕೋऽವಶಿಷ್ಟಸ್ತು ತಸ್ಮಾತ್ಸ್ವೈನ್ಯಾನ್ಮಹಾಮತೇ ।
ಮುಕ್ತಃ ಕಥಂಚಿತ್ ಧರ್ಮಾತ್ಮನ್ ವ್ಯಗ್ರಾಚ್ಚ ಕೃತವರ್ಮಣಃ ॥ (ಸೂತನ ವಚನ) – ಭಾರತ (ಸೌಪ್ತಿಕ.೧೦/೬)

೧೫೦. - ಇತ್ಯುಕ್ತ್ವಾ ಪಾಂಡವಂ ಕೃಷ್ಣಾ ರಾಜಾನಂ ಚಾರುದರ್ಶನಾ ।
ಭೀಮಸೇನಮಥಾಗಮ್ಯ ಪರಮಂ ವಾಕ್ಯಮಬ್ರವೀತ್ ॥
ನ ಹಿ ತೇ ವಿಕ್ರಮೇ ತುಲ್ಯಃ ಪುಮಾನಸ್ತೀಹ ಕಶ್ಚನ ।
ಶ್ರುತಂ ಚ ಸರ್ವಲೋಕೇಷು ಪರಮವ್ಯಸನೇ ಯಥಾ । (ಇತ್ಯಾದಿ) – ಭಾರತ (ಸೌಪ್ತಿಕ. ೧೧/೨೧/೨೭)

ಏಃ ಕೃಷ್ಣಾಸುತಾನಾಂ ಮುದಿತಃ ಶಿರಾಂಸಿ ಎಂಬ ವಾಕ್ಯ ಭಾಗವತಪುರಾಣದ್ದು:

ಭರ್ತುಃ ಪ್ರಿಯಂ ದ್ರೌಣಿರಿತಿ ಸ್ಮ ಪಶ್ಯನ್ ಕೃಷ್ಣಾಸುತಾನಾಂ ಸ್ವಪತಾಂ ಶಿರಾಂಸಿ ।
ಅಪಾಹರದ್ವಿಪ್ರಿಯಮೇವ ತಸ್ಯ ದುಗುಪ್ಸಿತಂ ಕರ್ಮ ವಿಗರ್ಹಯಂತಿ ॥

– ಭಾಗವತ (೧/೭/೧೪)

ದುರ್ಯೋಧನನ ಮರಣ

ದೃಷ್ಟ್ವಾ ತದುಕ್ತಂ ಚ ನಿಶಮ್ಯ ಪಾಪ-
ಸ್ತುಷ್ಟೋಽತ್ಯಜತ್ ಸಾಧ್ವಿತಿ ದೇಹಮಾಶು ।
ಭೀಮಾರ್ಜುನಾಭ್ಯಾಮಥ ಕೇಶವಾಚ್ಚ
ಭೀತಾಃ ಪೃಥಕ್ ದ್ರೌಣಿಮುಖಾಃ ಪ್ರಯಾತಾಃ ॥ ೧೫೦ ॥

ಅಃ ಪಾಪಿಯಾದ ದುರ್ಯೋಧನ ಉಪಪಾಂಡವರ ತಲೆಗಳನ್ನು ನೋಡಿ, ಅಶ್ವತ್ಥಾಮ ಹೇಳಿದ್ದನ್ನು ಕೇಳಿ ಭಲೇ ಎಂದು ಸಂತೋಷಿಸಿ ಕೂಡಲೇ ದೇಹವನ್ನು ತೊರೆದ. ಭೀಮಾರ್ಜುನರಿಗೂ, ಕೃಷ್ಣನಿಗೂ ಅಂಜಿ ಅಶ್ವತ್ಥಾಮ ಮೊದಲಾದವರು ಬೇರೆ ಬೇರೆಯಾಗಿ ತೆರಳಿದರು.

ಏಃ ೧) ದುರ್ಯೋಧನ ದ್ರೌಪದೀ ಪುತ್ರರ ತಲೆಗಳನ್ನು ನೋಡಿ ಆನಂದಿಸಿದ. ಒಂದೆಡೆ ಶಿಶುಹತ್ಯೆ, ಮತ್ತೊಂದೆಡೆ ಬಂಧುಹತ್ಯೆ. ಮುಖ್ಯವಾಗಿ ರಾಜ್ಯದ ಉತ್ತರಾಧಿಕಾರಿಗಳ ಹತ್ಯೆ, ಸಾತ್ವಿಕರ ಹತ್ಯೆಗಳನ್ನು ಕಂಡು ಸಂತೋಷಿಸಿದ ಅವನು ಮಹಾತಾಮಸ ಎಂಬುದು ಇದರಿಂದ ದೃಢಪಡುವುದು. ಭಗವದ್ಗೀತೆಯಲ್ಲಿ ಹೇಳಿರುವಂತೆ ಇಂತಹ ಜನರೆಲ್ಲ ಲೋಕಕ್ಷಯಕಾರಕರು. ತಾವು ಅಳಿಯುವಾಗಲೂ ಲೋಕವನ್ನು ಅಳಿಸುವ ಮಹಾಪಾತಕಿಗಳು.

---

೧೫೦. ಆಚಾರ್ಯಂ ಪೂಜಯಿತ್ವಾ ಚ ಕೇತುಂ ಸರ್ವಧನುಷ್ಮತಾಮ್ ।
ಹತಂ ಮಯಾದ್ಯ ಶಂಸೇಥಾ ಧೃಷ್ಟದ್ಯುಮ್ನಂ ನರಾಧಿಪ ।
ಪರಿಷ್ವಜೇಥಾ ರಾಜಾನಂ ಬಾಹ್ಲೀಕಂ ಸುಮಹಾರಥಮ್ ।
ಸೈಂಧವಂ ಸೋಮದತ್ತಂ ಚ ಭೂರಿಶ್ರವಸಮೇವ ಚ ।
ತಥಾ ಪೂರ್ವಗತಾನನ್ಯಾನ್ ಸ್ವರ್ಗೇ ಪಾರ್ಥಿವಸತ್ತಮಾನ್ ॥
ಅಸ್ಮದ್ವಾಕ್ಯಾತ್ ಪರಿಷ್ವಜ್ಯ ಸಂಪೃಚ್ಛೇಸ್ತ್ವಮನಾಮಯಮ್ ॥
– (ದುರ್ಯೋಧನನನ್ನುಕುರಿತು ದ್ರೌಣಿವಚನ) ಭಾರತ (ಸೌಪ್ತಿಕ. ೯/೪೩-೪೫)

೧೫೦. ದುರ್ಯೋಧನಸ್ತು ತಾಂ ವಾಚಂ ನಿಶಮ್ಯ ಮನಸಃ ಪ್ರಿಯಾಮ್ ।
ಪ್ರಾಣಾನುಪಾಸೃಜದ್ ವೀರಃ ಸುಹೃದಾಂ ದುಃಖಮುತ್ಸೃಜನ್ ॥ – ಭಾರತ (ಸೌಪ್ತಿಕ. ೯/೫೩,೫೭)

೨) ತೊಡೆ ಮುರಿದು ಬಿದ್ದ ದುರ್ಯೋಧನ ಪ್ರಾಣ ತೊರೆಯುವ ಮುನ್ನ ಮಾಡಿಸಿದ ಘೋರವಾದ ಪಾಪಕಾರ್ಯವಿದು. ದುಷ್ಟರು ಕೈಕಾಲು ಮುರಿದು ಬದುಕಿದ್ದಾಗಲೂ ತಮ್ಮ ಸ್ವಭಾವಕ್ಕೆ ಅನುಗುಣವಾದ ಪಾಪಕಾರ್ಯಗಳನ್ನೇ ಮತ್ತೊಬ್ಬರಿಂದಲೂ ಮಾಡಿಸುವ ಕೆಟ್ಟ ಚಿಂತನೆಯವರು ಎಂಬುದಕ್ಕೆ ಇದೊಂದು ದೊಡ್ಡ ನಿದರ್ಶನ. ಪಾಂಡವರ ವಂಶವನ್ನು ನಿರ್ವಂಶ ಮಾಡಬೇಕು ಎಂಬ ತನ್ನ ಅಪೇಕ್ಷೆಯನ್ನು ಪೂರೈಸಿದ ಅಶ್ವತ್ಥಾಮನನ್ನು ಬಹಳವಾಗಿ ಕೊಂಡಾಡಿ ದುರ್ಯೋಧನ ಸತ್ತುಹೋದ.

೩) ದುರ್ಯೋಧನ ಸಾಯುವ ಮುನ್ನ ತನ್ನ ಬೆರಳುಗಳನ್ನು ಒಂದು ಎರಡು ಮೂರು ಎಂಬುದಾಗಿ ಎಣಿಸುತ್ತಾ ಮಲಗಿದ್ದನಂತೆ. ಆಗ ಕೃಷ್ಣ ಅಲ್ಲಿಗೆ ಬಂದು ಕಾರಣ ಕೇಳಲು ದುರ್ಯೋಧನ ಹೇಳಿದನಂತೆ – ನಾನು ಮೂರು ತಪ್ಪುಗಳನ್ನು ಮಾಡದಿದ್ದಲ್ಲಿ ಗೆಲ್ಲುತ್ತಿದ್ದೆ ಎಂದು. ಅವು ಯಾವುವು ಎಂದು ಕೇಳಲು ಅವನು ತಿಳಿಸಿದ – 'ಮೊದಲನೆಯದು ಚಿರಂಜೀವಿಯಾದ ಅಶ್ವತ್ಥಾಮನನ್ನೇ ಸೇನಾಪತಿಯನ್ನಾಗಿ ಮಾಡಬೇಕಿತ್ತು, ಎರಡನೆಯದು ತನ್ನ ತಾಯಿ ಗಾಂಧಾರಿಯ ಬಳಿಗೆ ಸಂಕೋಚ ಪಡದೇ ದಿಗಂಬರನಾಗಿಯೇ ತೆರಳಬೇಕಿತ್ತು, ಮೂರನೆಯದು ಸರೋವರದಲ್ಲಿ ಮಂತ್ರಜಪವನ್ನು ಏಳು ದಿವಸಗಳ ಕಾಲ ಪೂರೈಸಬೇಕಿತ್ತು,' ಆಗ ಕೃಷ್ಣ ಹೇಳಿದನಂತೆ 'ನೀನು ಹಾಗೆ ಮಾಡಿದಲ್ಲಿ ನಾನು ಧರ್ಮರಾಜನನ್ನು ಆನೆಯ ಮೇಲೆ ಏರಿಸುತ್ತಿದ್ದೆ, ನಕುಲನನ್ನು ಕುದುರೆಯ ಮೇಲೆ ಕೂಡಿಸುತ್ತಿದ್ದೆ, ನಾನೇ ಚಕ್ರವನ್ನು ಹಿಡಿಯುತ್ತಿದ್ದೆ.' ಅದನ್ನು ಕೇಳಿ ನಿರಾಶನಾದ ದುರ್ಯೋಧನ ಸತ್ತುಹೋದ. ಇದು ಕುಮಾರವ್ಯಾಸ ಭಾರತದ ಕೆಲವು ಪ್ರತಿಗಳಲ್ಲಿ ಬಂದಿರುವ ನಿರೂಪಣೆ.

೪) ಇದು ಸಹ ಮಹಾಭಾರತದ ಯಾವ ಪ್ರತಿಗಳಲ್ಲೂ ಕಾಣದ ಕೇವಲ ಕವಿಕಲ್ಪನೆಯಷ್ಟೇ. ಇದರಲ್ಲಿ ಅಶ್ವತ್ಥಾಮರನ್ನು ಸೇನಾಧಿಪತಿಯನ್ನಾಗಿ ಮಾಡಿದ್ದಲ್ಲಿ ಅವರಿಂದ ಈಗ ನಡೆದ ಕಾರ್ಯವಷ್ಟೇ ನಡೆಯುತ್ತಿತ್ತೇ ಹೊರತು ಅದಕ್ಕಿಂತ ಮಿಗಿಲಾದುದ್ದೇನೂ ಅಲ್ಲ, ಸೇನಾಧಿಪತಿಗಳಾಗದಿದ್ದರೂ ಭೀಷ್ಮ, ದ್ರೋಣ, ಕರ್ಣಾದಿಗಳ ಸಾವು ತಪ್ಪಬೇಕಿರಲಿಲ್ಲ, ಅವನ ದೇಹ ಹುಟ್ಟುತ್ತಲೇ ವಜ್ರಕಾಯವಾದ್ದರಿಂದ ಅವನು ಗಾಂಧಾರಿ ಸ್ಪರ್ಶದಿಂದ ವಜ್ರಕಾಯನಾದದ್ದು ಕೇವಲ ಕಲ್ಪನೆ ಎಂಬ ಮಾತನ್ನು ಈಗಾಗಲೇ ಹೇಳಿಯಾಗಿದೆ. ಕೊನೆಯದಾಗಿ ಅವನು ಮಂತ್ರಜಪವನ್ನು ಪೂರೈಸಿದ್ದರೂ ಭೀಮಸೇನನಂತಹ ಮುಖ್ಯಪ್ರಾಣನ ಎದುರು ಪ್ರಾಣ ಉಳಿಸಿಕೊಳ್ಳಲು ಸಮರ್ಥ– ನಾಗುತ್ತಿರಲೇ ಇಲ್ಲ, ಹೀಗೆ ಇವೆಲ್ಲವೂ ಕೇವಲ ನಿರರ್ಥಕ ಕಲ್ಪನೆಗಳೇ ಹೊರತು ಬೇರೆ ಏನೂ ಅಲ್ಲ, ಆದರೂ ಮೂಲದಲ್ಲಿರದ ಇಂತಹ ವಿವರಗಳು ವಿಶೇಷವಾಗಿ ಪ್ರಚಾರ ಪಡೆದುಕೊಂಡದ್ದು ಮಾತ್ರ ನಿಜಕ್ಕೂ ಅಚ್ಚರಿ.

ಭೀಮನ ಭಯದಿಂದ ಅಶ್ವತ್ಥಾಮನ ಪಲಾಯನ

ತತ್ಕೈಕಲಂ ದ್ರೋಣಸುತಂ ರಥೇನ
ಯಾಂತಂ ರಥೀ ಮಾರುತಿರನ್ವಧಾವತ್ ।
ತಮಾದ್ರವಂತಂ ಪ್ರಸಮೀಕ್ಷ್ಯ ಭೀತಃ
ಪರಾದ್ರವದ್ದ್ರೌಣಿರತಿದ್ರುತಾಶ್ವೈಃ ॥ ೧೫೧ ॥

ಅ: ಆಗ ಅಶ್ವತ್ಥಾಮ ಏಕಾಂಗಿಯಾಗಿ ರಥದ ಮೂಲಕ ಹೊರಟಾಗ ಭೀಮ ಅವನನ್ನು ರಥದಿಂದಲೇ ಬೆನ್ನಟ್ಟಿದ. ಭೀಮ ತನ್ನನ್ನು ಅಟ್ಟಿಸಿಕೊಂಡು ಬರುತ್ತಿದ್ದುದನ್ನು ನೋಡಿ ಭೀತನಾದ ಅಶ್ವತ್ಥಾಮ ಕುದುರೆಗಳನ್ನು ಜೋರಾಗಿ ಓಡಿಸಿಕೊಂಡು ಪಲಾಯನ ಮಾಡಿದ.

ವಿ: ನಕುಲನನ್ನು ಸಾರಥಿಯನ್ನಾಗಿ ಮಾಡಿಕೊಂಡ ಹೊರಟ ಭೀಮಸೇನ ಮುಂಚೆಯೇ ಹೊರಟ ಅಶ್ವತ್ಥಾಮನನ್ನು ಹಿಂಬಾಲಿಸಿ ಹಿಡಿಯುವಲ್ಲಿ ಸಫಲನಾದದ್ದು ಅಶ್ವತ್ಥಾಮನ ವೇಗಕ್ಕಿಂತ ಭೀಮನ ವೇಗ ಅಗಾಧ ಎಂಬುದಕ್ಕೆ ದ್ಯೋತಕ. ಅಶ್ವತ್ಥಾಮನು ಶಿವನ ಅವತಾರ; ಶಿವ ಮನೋನಿಯಾಮಕ. ಭೀಮ ವಾಯುವಿನ ಅವತಾರ, ಆದ್ದರಿಂದ ಮನೋವೇಗಕ್ಕಿಂತ ವಾಯುವೇಗ ಮಿಗಿಲು ಎಂದಾಗುವುದು.

ಅಶ್ವತ್ಥಾಮನಿಂದ ಬ್ರಹ್ಮಶಿರೋಸ್ತ್ರಪ್ರಯೋಗ

ಆದ್ರವಂತಂ ಪುನರ್ದೃಷ್ಟ್ವಾ ಭೀಮಂ ದ್ರೋಣಾತ್ಮಜೋ ರುಷಾ ।
ಆವೃತ್ಯ ಯುಧ್ಯನ್ ವಿಜಿತೋಽಸ್ತ್ರಂ ಬ್ರಹ್ಮಶಿರ ಆದದೇ ॥ ೧೫೨ ॥

ಅ: ಭೀಮ ಆಗಲೂ ಬೆನ್ನಟ್ಟಿ ಬಂದುದನ್ನು ನೋಡಿ ಅಶ್ವತ್ಥಾಮ ಕೋಪದಿಂದ ಹಿಂದಿರುಗಿ ಯುದ್ಧಕ್ಕೆ ತೊಡಗಿ ಪರಾಜಿತನಾದ. ಬ್ರಹ್ಮಶಿರೋಸ್ತ್ರವನ್ನು ಪ್ರಯೋಗಿಸಿದ.

ವಿ: ವೇಗದಲ್ಲಿ ಮಾತ್ರವಲ್ಲದೇ ಯುದ್ಧದಲ್ಲೂ ಮತ್ತೊಮ್ಮೆ ಅಶ್ವತ್ಥಾಮ ಭೀಮನಿಗೆ ಸೋತ. ಹೀಗೆ ಪ್ರತಿ ಬಾರಿಯೂ ಭೀಮನಿಗೆ ಅಶ್ವತ್ಥಾಮ ಸೋತಿದ್ದು ಪುನಃ ವಾಯು ಜೀವೋತ್ತಮತ್ವಕ್ಕೆ ದ್ಯೋತಕ.

ಏತಸ್ಮಿನ್ನಂತರೇ ಕೃಷ್ಣೋ ಧರ್ಮಜೇನಾರ್ಜುನೇನ ಚ ।
ತತ್ರಾಗಮತ್ ತದಸ್ತ್ರಂ ಚ ಭೀಮಂ ಚಾವ್ಯರ್ಥತಾಂ ನಯನ್ ॥ ೧೫೩ ॥

---

೧೫೧. 'ನಕುಲಂ ಸಾರಥಿಂ ಕೃತ್ವಾ' – ಭಾರತ (ಸೌಪ್ತಿಕ. ೧೧/೨೯)

೧೫೨. ಅಸ್ತ್ರಂ ಬ್ರಹ್ಮಶಿರೋ ಮೇನೇ ಆತ್ಮತ್ರಾಣಂ ದ್ವಿಜಾತ್ಮಜಃ ।
ಅಥೋಪಸ್ಪೃಶ್ಯ ಸಲಿಲಂ ಸಂದಧೇ ತತ್ಸಮಾಹಿತಃ ॥ – ಭಾಗವತ (೧/೭/೧೯)

ಬ್ರಹ್ಮಶಿರೋಽಸ್ತ್ರದ ಮಂತ್ರ ಹಾಗೂ ದೇವತೆ

ಅವಧ್ಯೋ ಭೀಮಸೇನಸ್ತದಸ್ತ್ರಂ ಚಾಮೋಘಮೇವ ತತ್ ।
ವಿಷ್ಣುನೈವೋಭಯಂ ಯಸ್ಮಾತ್ ಕೃತಂ ಭೀಮೋಽಸ್ತ್ರಮೇವ ತತ್ ॥ ೧೫೪ ॥

ಅ: ಈ ಮಧ್ಯದಲ್ಲಿ ಕೃಷ್ಣ ಆ ಅಸ್ತ್ರವನ್ನೂ ಭೀಮನನ್ನೂ ಅಮೋಘವೆಂದು ತೋರಿಸುವ ಸಲುವಾಗಿ ಧರ್ಮರಾಜನೊಂದಿಗೂ ಅರ್ಜುನನೊಂದಿಗೂ ಅಲ್ಲಿಗೆ ಆಗಮಿಸಿದ. ಭೀಮಸೇನ ಅವಧ್ಯ, ಆ ಅಸ್ತ್ರವೂ ಅಮೋಘವಾದುದೇ - ಎರಡನ್ನೂ ಹಾಗೆಂದು ವಿಷ್ಣುವೇ ಸಂಕಲ್ಪಿಸಿರುವನು. ಭೀಮನಂತೂ ಆ ಅಸ್ತ್ರವೇ ಆಗಿರುವನು.

ವಿ: ಭೀಮನು ಅಸ್ತ್ರವೇ ಆಗಿರುವನು ಎಂದರೆ ಆ ಅಸ್ತ್ರಕ್ಕೆ ಅಭಿಮಾನಿಯಾಗಿರುವನು ಎಂದರ್ಥ. ಆ ಅಸ್ತ್ರಕ್ಕೆ ಮುಖ್ಯಾಭಿಮಾನಿ ಬ್ರಹ್ಮದೇವರೇ (೨೮/೧೫೮) ಆದರೂ ಭೀಮಸೇನ ಭಾವಿ ಬ್ರಹ್ಮನಾದ್ದರಿಂದ ಅವನೂ ಆ ಅಸ್ತ್ರಕ್ಕೆ ಅಭಿಮಾನಿ ಎಂದರ್ಥ.

ಗಾಯತ್ರೀ ತತ್ರ ಮಂತ್ರೋ ಯದ್ಬ್ರಹ್ಮಾ ತದ್ಧ್ಯಾನದೇವತಾ ।
ಧ್ಯೇಯೋ ನಾರಾಯಣೋ ದೇವೋ ಜಗತ್ಸವಿತಾ ಸ್ವಯಮ್ ॥ ೧೫೫ ॥

ಅ: ಆ ಅಸ್ತ್ರಕ್ಕೆ ಗಾಯತ್ರಿಯೇ ಮಂತ್ರ, ಬ್ರಹ್ಮನೇ ಧ್ಯಾನ ಮಾಡುವ ದೇವತೆ, ಜಗತ್ಸೃಷ್ಟಿ ಕರ್ತನಾದ ನಾರಾಯಣನೇ ಸ್ವತಃ ಅದಕ್ಕೆ ಧ್ಯೇಯದೇವತೆ.

ವಿ: ಬ್ರಹ್ಮ ಧ್ಯಾನದೇವತೆ ಎಂದರೆ ಅಭಿಮಾನಿ ದೇವತೆ ಎಂದರ್ಥ. ಜಗತ್ಸೃಷ್ಟಿಕರ್ತನಾದವನು ನಾರಾಯಣ ಎಂಬುದು ಗಾಯತ್ರೀಮಂತ್ರದ 'ಸವಿತುಃ' ಶಬ್ದದ ಅರ್ಥ. ಗಾಯತ್ರೀಮಂತ್ರದಲ್ಲಿ ಸವಿತುಃ ಶಬ್ದಕ್ಕೆ ಸೂರ್ಯ ಎಂದು ಅರ್ಥವಲ್ಲದೇ ಜಗತ್ಸೃಷ್ಟಿಕರ್ತ ಎಂದು ಅರ್ಥ ಎಂದು ತಿಳಿಸಲು ಹಾಗೆ ಅರ್ಥ ನೀಡಿರುವರು ಎಂದು ತಿಳಿಯಬೇಕು.

ಅಶ್ವತ್ಥಾಮ ಮಾಡಿದ್ದ ಆಯುಧಯಾಚನೆ

ಊಚೇ ಚ ಪಾರ್ಥಯೋಃ ಕೃಷ್ಣೋ ಯತ್ಕೃತಂ ದ್ರೌಣಿನಾ ಪುರಾ ।
ಸ್ವಾಯುಧಾನಾಂ ಯಾಚನಂ ಚಾಪ್ಯಶಕ್ತೇನ ತದುದ್ಧೃತೌ ॥ ೧೫೬ ॥

---

೧೫೪. ಭೀಮೋಽಸ್ತ್ರಮೇವ ತದಿತ್ಯತ್ರ ಯದ್ಯಸ್ಮಾತ್ ತತ್ರ ಬ್ರಹ್ಮಾಸ್ತ್ರೇ ಗಾಯತ್ರೀ ಮಂತ್ರಃ। ಬ್ರಹ್ಮಾ ತದ್ಧ್ಯಾನದೇವತಾ ಧ್ಯಾನಂ ಕುರ್ವತೀ ದೇವತಾ। ಋಷಿಃ ಮಂತ್ರಸಾಧಕತ್ವಾತ್ ಮಂತ್ರಾಭಿಮಾನಿನೀ ಚೇತಿ ಯಾವತ್। ತತ್ ತಸ್ಮಾತ್ ಕಾರಣಾತ್ ಭೀಮ ಏವಾಸ್ತ್ರಮಿತಿ ಯೋಜನಾ ॥ – (ವಾ.)

ಪೃಷ್ಟೇನೋಕ್ತಂ ತ್ವಯಾ ಹೀನಾಂ ಕೃತ್ವಾ ದುರ್ಯೋಧನಾಯ ಗಾಮ್ ।
ದಾತುಂ ತ್ವದಾಯುಧಂ ಮೇಽದ್ಯೇತ್ಯೇವಮುಕ್ತೇ ತ್ವನೋದಿತಮ್ ।
ಮೈವಂ ಕಾರ್ಷೀಃ ಪುನರಿತಿ ಧ್ಯಾಯತಾಽಬ್ದೇಸ್ತಟೇ ಸ್ವಮು ॥ ೧೫೭ ॥

ಅ: ಕೃಷ್ಣ ಹಿಂದೆ ಅಶ್ವತ್ಥಾಮ ಏನು ಮಾಡಿದ್ದನೆಂದು ಧರ್ಮರಾಜ-ಅರ್ಜುನರಿಗೆ ತಿಳಿಸಿದ. ತಾನು ಸಮುದ್ರತೀರದಲ್ಲಿ ಕುಳಿತು ತನ್ನನ್ನೇ ಧ್ಯಾನಿಸುತ್ತಿದ್ದಾಗ ಅಶ್ವತ್ಥಾಮ ತನ್ನ ಆಯುಧಗಳನ್ನು ಕೇಳಿದ್ದು, ಅದನ್ನು ಎತ್ತಲು ಶಕ್ತನಾಗದಿದ್ದದ್ದು, ನಾನು 'ಏತಕ್ಕೆ' ಎಂದು ಕೇಳಿದಾಗ 'ಭೂಮಿಯಲ್ಲಿ ನೀನಿಲ್ಲದಂತೆ ಮಾಡಿ ದುರ್ಯೋಧನನಿಗೆ ರಾಜ್ಯ ನೀಡಲೆಂದು ನಿನ್ನ ಆಯುಧವನ್ನು ಬೇಡಿದೆ' ಎನ್ನಲು ನಾನು ಅವನಿಗೆ 'ಮತ್ತೊಮ್ಮೆ ಹೀಗೆ ಮಾಡಬೇಡ' ಎಂದು ತಿಳಿಸಿದ್ದು, ಎಲ್ಲವನ್ನೂ ಹೇಳಿದ.

---

೧೫೬. ತದುದ್ಭ್ರುತೌ= ತೇಷಾಂ ಕೃಷ್ಣಾಯುಧಾನಾಮುದ್ಭ್ರುತಾವಪ್ಯಶಕ್ತೇನ ದ್ರೌಣಿನಾ ಸ್ವಾಯುಧಾನಾಂ= ಸ್ವಸ್ಯ ಕೃಷ್ಣಸ್ಯಾಯುಧಾನಾಂ ಯತ್ ಯಾಚನಂ ಕೃತಂ ತಚ್ಚ ಪೃಷ್ಟೇನ= ಕಿಮರ್ಥಂ ಮದಾಯುಧಮಿತಿ ಪೃಷ್ಟೇನ। ಅಬ್ಧೇಸ್ತಟೇ ಸ್ವಮು= ಸ್ವಂ ಉ= ಏವ ಧ್ಯಾಯತಾ ದ್ರೌಣಿನಾ ಗಾಂ ಭೂಮಿಂ ತ್ವಯಾ ಹೀನಾಂ ಕೃತ್ವಾ ದುರ್ಯೋಧನಾಯ ದಾತುಂ ತ್ವದಾಯುಧಂ ದೇಹೀತಿ ಯದುಕ್ತಂ ತಚ್ಚ ಏವಮುಕ್ತೇ ಸತಿ ತದಾತ್ಮನಾ ಕೃಷ್ಣೇನ ಏವಂ ಮಾ ಕಾರ್ಷೀರಿತಿ ಯದುದಿತಂ ತಚ್ಚ ಪಾರ್ಥಯೋರೂಚೇ। ಮದಭಾವಾಯ ಮದಾಯುಧಪ್ರಾರ್ಥನಂ ಕುರ್ವನ್ ದ್ರೌಣಿರಯಮವಿವೇಕೀತಿ ಭಾವಃ ॥ – (ವಾ.)

೧೫೬. ಸ ಸುನಾಭಂ ಸಹಸ್ರಾರಂ ವಜ್ರನಾಭಮಯಸ್ಮಯಮ್ ।
ವವ್ರೇ ಚಕ್ರಂ ಮಹಾಭಾಗೋ ಮತ್ತಃ ಸ್ಪರ್ಧನ್ ಮಯಾ ಸಹ ॥ – ಭಾರತ (ಸೌಪ್ತಿಕ. ೧೨/೨೦)

೧೫೬. ಜಗ್ರಾಹೋತ್ಪತ್ಯ ಸಹಸಾ ಚಕ್ರಂ ಸವ್ಯೇನ ಪಾಣಿನಾ ।
ನ ಚೈನಮಶಕತ್ ಸ್ಥಾನಾತ್ ಸಂಚಾಲಯಿತುಮಪ್ಯುತ ॥
ಅಥೈನಂ ದಕ್ಷಿಣೇನಾಪಿ ಗೃಹೀತುಮುಪಚಕ್ರಮೇ ।
ಸರ್ವಯತ್ನಬಲೇನಾಪಿ ಗೃಹ್ಣನ್ನೇವಮಿದಂ ತತಃ ।
ತತಃ ಸರ್ವಬಲೇನಾಪಿ ಯದೈನಂ ನ ಶಶಾಕ ಹ ॥
ಉದ್ಯಂತುಂ ವಾ ಚಾಲಯಿತುಂ ದ್ರೌಣಿಃ ಪರಮದುರ್ಮನಾಃ ।
ಕೃತ್ವಾ ಯತ್ನಂ ಪರಿಶ್ರಾಂತಃ ಸನ್ನವರ್ತತ ಭಾರತ ॥ – ಭಾರತ (ಸೌಪ್ತಿಕೇ. ೧೨/೨೦-೨೪)

೧೫೭. ಸ್ವಂ ಉ ಇತಿ ಭಿನ್ನಂ ಪದಮ್। ಉ ಈಶಂ ಸ್ವಂ ಸ್ವರೂಪಂ ಧ್ಯಾಯತಾ। ಉತಾಪೇಕ್ಷಯಮೀಶೇ ಚೇತಿ ಯಾದವಃ। ಸ್ವಂ ಉ ಸ್ವಸ್ವರೂಪಮೇವೇತಿ ವಾತ್ಮನಾ ಆತ್ಮನಾ ಮಯೇತ್ಯರ್ಥಃ। ....ಏವಮುಕ್ತೋ ಮಯಾ ದ್ರೌಣಿಃ ಮಾಮಿದಂ ಪ್ರತ್ಯುವಾಚ ಹ। ಪ್ರಯುಜ್ಯ ಭವತಃ ಪೂಜಾಂ ಯೋತ್ಸ್ಯೇ ಕೃಷ್ಣತ್ವಯಾ ಸಹೇತಿ ಐಷೀಕಪರ್ವಣಿ । – (ಜ.)

೧೫೭. ಪ್ರಯುಜ್ಯ ಭವತೇ ಪೂಜಾಂ ಯೋತ್ಸ್ಯೇ ಕೃಷ್ಣತ್ವಯಾ ಸಹ ।
ಪ್ರಾರ್ಥಿತಂ ಮೇ ಮಯಾ ಚಕ್ರಂ ದೇವದಾನವಪೂಜಿತಮ್ ॥
ಅಜೇಯಃ ಸ್ಯಾಮಿತಿ ವಿಭೋ ಸತ್ಯಮೇತದ್ ಬ್ರವೀಮಿ ತೇ ॥
(ದ್ರೌಣಿವಚನ)– ಭಾರತ (ಸೌಪ್ತಿಕ. ೧೨/೩೬,೩೭)

ಎಃ ೧) ಕೃಷ್ಣನೊಮ್ಮೆ ದ್ವಾರಕೆಯ ಸಮುದ್ರತೀರದಲ್ಲಿ ತನ್ನನ್ನೇ ತಾನು ಧ್ಯಾನ ಮಾಡುತ್ತಾ ಕುಳಿತಿದ್ದಾಗ ಅಶ್ವತ್ಥಾಮ ಅವನ ಬಳಿಗೆ ತೆರಳಿ ಕೇಳಿಕೊಂಡಿದ್ದ; ಕೃಷ್ಣ ಬೇಡಿದ್ದನ್ನು ಕೊಡುವುದಾಗಿ ಆಶ್ವಾಸನೆಯಿತ್ತಾಗ ಕೃಷ್ಣನ ಚಕ್ರವನ್ನೇ ನೀಡಲು ಬೇಡಿಕೊಂಡ. ಕೃಷ್ಣ ಆಗಲಿ ಎಂದು ನುಡಿದು ತನ್ನ ಚಕ್ರವನ್ನು ತೆಗೆದುಕೊ ಎಂದು ಹೇಳಿದಾಗ ಅದನ್ನು ಎತ್ತಲೂ ಸಹ ಅಶ್ವತ್ಥಾಮ ಎಷ್ಟು ಪ್ರಯತ್ನಿಸಿದರೂ ಸಮರ್ಥನಾಗಲಿಲ್ಲ. ಆಗ ಮುಖ ತಗ್ಗಿಸಿದ ಅವನನ್ನು ಸರ್ವಜ್ಞನಾದ ಕೃಷ್ಣ ಹಾಗೆ ಆಯುಧವನ್ನು ಕೇಳಲು ಕಾರಣವನ್ನು ಕೇಳಿದಾಗ ಅಶ್ವತ್ಥಾಮ ನುಡಿದಿದ್ದ – ಅವಧ್ಯನಾದ ನಿನ್ನ ಮೇಲೆ ನಿನ್ನ ಆಯುಧವಾದ ಚಕ್ರವನ್ನೇ ಪ್ರಯೋಗಿಸಿ ನಿನ್ನನ್ನು ಕೊಂದು ಭೂಮಿಯನ್ನೆಲ್ಲ ದುರ್ಯೋಧನನಿಗೆ ಕೊಡಲು ಬಯಸಿದ್ದೆ ಎಂದ; ಆಗ ಕೃಷ್ಣ – ನನ್ನ ಆಯುಧವನ್ನೇ ಎತ್ತಲಾಗದ ನೀನು ಅದನ್ನು ನನ್ನ ಮೇಲೆ ಎಂತು ಪ್ರಯೋಗಿಸುವೆ ಎಂದು ತಿಳುವಳಿಕೆ ಹೇಳಿ ಇನ್ನೊಮ್ಮೆ ಹಾಗೆ ಮಾಡದಿರಲು ತಿಳಿಸಿದ್ದ ಎಂಬ ವಿವರ ಮಹಾಭಾರತದಲ್ಲಿ ಬಂದಿದೆ.

೨) ಅದನ್ನೆಲ್ಲ ಇಲ್ಲಿ ಶ್ರೀಮದಾಚಾರ್ಯರು ಎರಡೇ ಶ್ಲೋಕಗಳಲ್ಲಿ ಸಂಗ್ರಹಿಸಿರುವುದು ಅಪೂರ್ವ. ಕೃಷ್ಣನ ಆಯುಧವಾದ ಚಕ್ರಕ್ಕೆ ದುರ್ಗಾದೇವಿ ಅಭಿಮಾನಿ ದೇವತೆ, ಅದನ್ನು ಶಿವಾವತಾರನಾದ ಅಶ್ವತ್ಥಾಮ ಎತ್ತಲು ಅಸಮರ್ಥನಾದದ್ದು ಕೃಷ್ಣನಿಗಿಂತ ಮಾತ್ರವಲ್ಲದೇ ಮಹಾಲಕ್ಷ್ಮಿಗಿಂತಲೂ ತುಂಬಾ ಕಡಿಮೆ ಎಂಬುದಕ್ಕೆ ದ್ಯೋತಕ. ಅದರಂತೆ ಶಿವಧನುಸ್ಸಾದ ಪಿನಾಕಕ್ಕಿಂತ ವಿಷ್ಣುಧನುಸ್ಸಾದ ಶಾರ್ಙ್ಗ ಕೋಟಿಪಟ್ಟು ಮಿಗಿಲಾದುದು ಎಂಬ ವಿವರ ಹಿಂದೆ ಬಂದಿದೆ. ಶಿವನ ಧನುಸ್ಸನ್ನು ಶ್ರೀರಾಮ ಹಾಗೂ ಶ್ರೀಕೃಷ್ಣರೂಪಗಳಿಂದ ಶ್ರೀಹರಿ ಭಗ್ನಗೊಳಿಸಿರುವನು, ಆದರೆ, ಶಿವನಿಗೆ ವಿಷ್ಣುವಿನ ಆಯುಧವನ್ನು ಎತ್ತಲೂ ಸಹ ಆಗಲಿಲ್ಲ ಎಂಬುದು ಆತನ ಹೆಚ್ಚಿನ ಅಶಕ್ತಿಗೆ ದ್ಯೋತಕ. ಶ್ರೀಪಾದರಾಜರ ಕೃತಿಯೊಂದರಲ್ಲೂ ಇದರ ಉಲ್ಲೇಖ ಬಂದಿದೆ. ಅಂಬರೀಷಪ್ರಸಂಗದಲ್ಲೂ ದುರ್ವಾಸರೂಪದ ಶಿವ ವಿಷ್ಣುಚಕ್ರವನ್ನು ಎದುರಿಸಲಾಗದ್ದು ಸಹ ಇಂತಹುದೇ ಪ್ರಸಂಗ ಎಂಬುದನ್ನು ಗಮನಿಸಬೇಕು.

ಅರ್ಜುನನಿಂದಲೂ ಬ್ರಹ್ಮಶಿರೋಸ್ತ್ರಪ್ರಯೋಗ

ತದಸ್ತ್ರಂ ಪ್ರಜ್ವಲದ್ಭೃಷ್ಟ್ವಾ ಪಾಂಡವತ್ವವಿಧಿತ್ಸಯಾ ।
ಧರಾಯಾಂ ದ್ರೌಣಿನಾ ಮುಕ್ತಂ ಕೃಷ್ಣೇನ ಪ್ರೇರಿತೋಽರ್ಜುನಃ ॥ ೧೫೮ ॥

---

೧೫೮. ಭ್ರಾತೄಣಾಮಾತ್ಮನಶ್ಚೈವ ಪರಿತ್ರಾಣಾಯ ಭಾರತ ।
ವಿಸೃಜೈತತ್ ತ್ವಮಪ್ಯಾಜಾವಸ್ತ್ರಮಸ್ತ್ರನಿವಾರಣಮ್ ॥
ಕೇಶವೇನೈವಮುಕ್ತೋಽಥ.... ॥ (ಇತ್ಯಾದಿ) – ಭಾರತ (ಸೌಪ್ತಿಕ. ೧೪/೩)

ಸ್ವಸ್ತ್ಯಸ್ತು ದ್ರೋಣಪುತ್ರಾಯ ಭೂತೇಭ್ಯೋ ಮಹ್ಯಮೇವ ಚ ।
ಇತಿ ಬ್ರುವಂಸ್ತದೇವಾಸ್ತ್ರಮಸ್ತ್ರಶಾಂತ್ಯೈ ವ್ಯಸರ್ಜಯತ್ ॥ ೧೫೯ ॥

ಅ: ಭೂಮಿಯಲ್ಲಿ ಪಾಂಡವ ಸಂತತಿಯನ್ನು ಇಲ್ಲದಂತೆ ಆಗಿಸುವ ಉದ್ದೇಶದಿಂದ ಅಶ್ವತ್ಥಾಮ ಪ್ರಯೋಗಿಸಿದ ಆ ಬ್ರಹ್ಮಶಿರೋಸ್ತ್ರ ಪ್ರಜ್ವಲಿಸುತ್ತಾ ಬರುತ್ತಿದ್ದುದನ್ನು ಕಂಡು ಕೃಷ್ಣನಿಂದ ಪ್ರೇರಿತನಾದ ಅರ್ಜುನ ದ್ರೋಣಪುತ್ರನಿಗೂ, ಎಲ್ಲ ಪ್ರಾಣಿಗಳಿಗೂ ತನಗೂ ಕ್ಷೇಮವಾಗಲಿ ಎಂದು ನುಡಿಯುತ್ತಾ ಬ್ರಹ್ಮಶಿರೋಸ್ತ್ರವನ್ನೇ ಆ ಅಸ್ತ್ರದ ಉಪಶಾಂತಿಗಾಗಿ ಪ್ರಯೋಗಿಸಿದ.

ವಿ: ಬ್ರಹ್ಮಶಿರೋಸ್ತ್ರಕ್ಕೆ ಮತ್ತೊಂದು ಪ್ರತ್ಯಸ್ತ್ರವಿಲ್ಲದ್ದನ್ನು ತಿಳಿದು ಕೃಷ್ಣನ ಆದೇಶದಂತೆ ಅರ್ಜುನ ತಾನೂ ಬ್ರಹ್ಮಶಿರೋಸ್ತ್ರವನ್ನೇ ಅದಕ್ಕೆ ಪ್ರತಿಯಾಗಿ ಪ್ರಯೋಗಿಸಿದ ಎಂದರ್ಥ.

ಶುತ್ವಾ ಭಗವತಾ ಪ್ರೋಕ್ತಂ ಫಲ್ಗುನಃ ಪರವೀರಹಾ ।
ಸ್ಪೃಷ್ಟ್ವಾऽऽಪಸ್ತಂ ಪರಿಕ್ರಮ್ಯ ಬ್ರಾಹ್ಮಂ ಬ್ರಾಹ್ಮಾಯ ಸಂದಧೇ ॥

– ಭಾಗವತ (೧/೭/೨೯)

ಅನಸ್ತ್ರಜ್ಞೇಷು ಮುಕ್ತಂ ತದ್ಧನ್ಯಾದಸ್ತ್ರಮುಚಂ ಯತಃ ।
ಗುರುಭಕ್ತ್ಯಾ ತತೋ ದ್ರೌಣೇಃ ಸ್ವಸ್ತ್ಯಸ್ತ್ವಿತ್ಯಾಹ ವಾಸವಿಃ ॥ ೧೬೦ ॥

ಅ: ಅಸ್ತ್ರಪರಿಜ್ಞಾನವಿಲ್ಲದವರ ಮೇಲೆ ಪ್ರಯೋಗಿಸಿದಾಗ ಆ ಬ್ರಹ್ಮಶಿರೋಸ್ತ್ರವು ಪ್ರಯೋಗ ಮಾಡಿದವನನ್ನೇ ಕೊಲ್ಲುವುದು. ಆದ್ದರಿಂದ ಅರ್ಜುನ ಗುರುಭಕ್ತಿಯಿಂದ ಅಶ್ವತ್ಥಾಮನಿಗೆ ಕ್ಷೇಮವಾಗಲಿ ಎಂದು ನುಡಿದ.

ವಿ: ೧) ಅರ್ಜುನ ತಾನು ಪ್ರತ್ಯಸ್ತ್ರ ಪ್ರಯೋಗಿಸುವಾಗ ಅಶ್ವತ್ಥಾಮನಿಗೆ ಕ್ಷೇಮವಾಗಲಿ ಎಂದಿದ್ದಕ್ಕೆ ಇಲ್ಲಿ ಕಾರಣವನ್ನು ತಿಳಿಸಿರುವರು. ಪಾಂಡವರಲ್ಲಿ ಅರ್ಜುನನ ಹೊರತು ಧರ್ಮರಾಜಾದಿ ಇತರ ಮೂವರು ಬ್ರಹ್ಮಶಿರೋಸ್ತ್ರವನ್ನು ಬಲ್ಲವರಲ್ಲ, ಹಾಗೆ ತಿಳಿಯದೇ ಇದ್ದವರ ಮೇಲೆ ಆ ಅಸ್ತ್ರವನ್ನು ಪ್ರಯೋಗಿಸಿದರೆ ಅದು ಅಸ್ತ್ರ ಬಿಟ್ಟವನನ್ನೂ ಸಹ ಕೊಲ್ಲುವಂತಹ ವಿಶೇಷ ಅಸ್ತ್ರ. ಅದರಿಂದಾಗಿ ಅಶ್ವತ್ಥಾಮ ತಾನು ಬಿಟ್ಟ ಅಸ್ತ್ರಕ್ಕೆ ತಾನೇ ಬಲಿಯಾಗುವ ಅಪಾಯವಿದೆ, ಅದನ್ನು ಗಮನಿಸದೇ ಅವನು ಅಸ್ತ್ರ ಪ್ರಯೋಗಿಸಿದ್ದ. ಅರ್ಜುನ ಹಾಗಾಗದಿರಲಿ ಎಂದು ತಾನು ಅವನ

---

೧೫೯. ಪೂರ್ವಮಾಚಾರ್ಯಪುತ್ರಾಯ ತತೋऽನಂತರಮಾತ್ಮನೇ ।
ಭ್ರಾತೃಭ್ಯಶ್ಚೈವ ಸರ್ವೇಭ್ಯಃ ಸ್ವಸ್ತೀತ್ಯುಕ್ತ್ವಾ ಪರಂತಪಃ ॥ – ಭಾರತ (ಸೌಪ್ತಿಕ. ೧೪/೫

ಕ್ಷೇಮಚಿಂತನೆ ಮಾಡುತ್ತಾ ಪ್ರತ್ಯಸ್ತ್ರವನ್ನು ಬಿಟ್ಟ. ಅರ್ಜುನನಿಗೆ ವಿಶೇಷ ಗುರುಭಕ್ತಿಯಿದ್ದುದರಿಂದ ಗುರುಪುತ್ರನ ಕ್ಷೇಮವನ್ನು ಹಾಗೆ ಬಯಸಿದ ಎಂದರ್ಥ.

೨) ಭೀಮನಂತೂ ಸ್ವತಃ ಅಸ್ತ್ರಾಭಿಮಾನಿ ದೇವತೆಯೇ ಆಗಿದ್ದವನು. ಹಾಗೆ ಸಂಬಂಧಿಸಿದ ದೇವತೆಯನ್ನೇ ಎದುರಿಸುವುದೂ ಸಹ ಆ ಅಸ್ತ್ರಕ್ಕೆ ದ್ರೋಹ ಬಗೆದಂತೆ ಎಂಬ ಸೂಚನೆಯೂ ಇಲ್ಲಿದೆ.

ಅಸ್ತ್ರಗಳ ಮಧ್ಯೆ ಪರಬ್ರಹ್ಮ ವೇದವ್ಯಾಸರು

ತದಸ್ತ್ರಯೋಸ್ತು ಸಂಯೋಗೇ ಭೂತಾನಾಂ ಸಂಹೃತಿರ್ಭವೇತ್ ।
ಭೂತಾನಾಂ ಸ್ವಸ್ತಿರಪ್ಯತ್ರ ಕಾಂಕ್ಷಿತಾ ಕರುಣಾತ್ಮನಾ ॥ ೧೬೧ ॥

ಅ: ಆಗ ಎರಡು ಆ ಬ್ರಹ್ಮಶಿರೋಸ್ತ್ರಗಳು ಒಂದನ್ನೊಂದು ಕೂಡಿದಾಗ ಪ್ರಾಣಿಗಳ ಸಂಹಾರವೂ ಆಗುವುದು. ಅದರಿಂದಾಗಿ ಕರುಣಾಳುವಾದ ಅರ್ಜುನ ಪ್ರಾಣಿಗಳಿಗೂ ಕ್ಷೇಮವಾಗಲಿ ಎಂದು ಹಾರೈಸಿದ.

ವಿ: ತಾನು ಬಿಟ್ಟ ಬ್ರಹ್ಮಾಸ್ತ್ರ ಅದರೊಂದಿಗೆ ಕೂಡಿದಾಗ ಪ್ರಾಣಿಸಂಕುಲ ಅಳಿಯುವ ಅಪಾಯವಿದ್ದುದರಿಂದ ಅರ್ಜುನ ಅವುಗಳಿಗೂ ಕ್ಷೇಮವಾಗಲಿ ಎಂದು ನುಡಿದ. ಇದು 'ಭೂತೇಭ್ಯಃ' ಎಂದು ಹೇಳಿದ್ದಕ್ಕೆ ಕಾರಣ. ಇನ್ನು ಆ ಅಸ್ತ್ರದ ಗುರಿಯಲ್ಲಿ ತಾನೂ ಸೇರಿದ್ದರಿಂದ ಅದರ ಪರಿಹಾರಕ್ಕೆಂದು ತನಗೂ ಕ್ಷೇಮವಾಗಲಿ ಎಂದು ಹಾರೈಸಿದ್ದು ಸ್ಪಷ್ಟ.

ತಥಾऽಪ್ಯಸ್ತ್ರದ್ವಯಂ ಯುಕ್ತಂ ಭೂತಾನಾಂ ನಾಶಕೃದ್ಧ್ರುವಮ್ ।
ತಸ್ಮಾನ್ನಿವಾರಯನ್ ಯೋಗಂ ತಯೋರ್ಮಧ್ಯೇऽಭವತ್ ಕ್ಷಣಾತ್ ॥ ೧೬೨ ॥

ಅ: ಆದರೂ ಆ ಎರಡು ಅಸ್ತ್ರಗಳು ಜೊತೆಗೂಡಿದರೆ ಪ್ರಾಣಿಗಳ ನಾಶವಾಗುವುದು ನಿಶ್ಚಿತ. ಆದ್ದರಿಂದ ಅವೆರಡು ಜೊತೆ ಸೇರುವುದನ್ನು ತಡೆಯಲೆಂದು ಶ್ರೀವೇದವ್ಯಾಸರು ಅವುಗಳ ಮಧ್ಯದಲ್ಲಿ ಆ ಕ್ಷಣದಲ್ಲಿ ಬಂದು ನಿಂತರು.

---

೧೬೨. ಭೀಮವ್ಯತಿರಿಕ್ತಾನಾಂ ಚತುರ್ಣಾಂ ಪಾಂಡವಾನಾಂ ಯೋದ್ಧೃತ್ವಾತ್ ಭೀಮಸ್ಯಾಸ್ತ್ರಾಭಿಮಾನಿತ್ವೇನ ಅಸ್ತ್ರಘಾತಾಯೋಗಾಚ್ಚ ಅವಿಷಯೇ ಪ್ರಯುಕ್ತಮಿದಮಸ್ತ್ರಂ ದ್ರೌಣಿಮೇವ ಹನ್ಯಾದಿತಿ ಶಂಕಯಾ ಕೃಪಾಲುರರ್ಜುನಃ ಪ್ರಾಕ್ ಸ್ವಸ್ತ್ಯಸ್ತು ದ್ರೋಣಪುತ್ರಾಯೇತ್ಯುಕ್ತವಾನಿತಿ ಜ್ಞೇಯಮ್। ಏತದೇವ ವಿವೇಚಯತಿ ಅನಸ್ತ್ರಜ್ಞೇಷ್ವಿತಿ। ಏತದುಪಲಕ್ಷಣಮ್। ಅಸ್ತ್ರಾಭಿಮಾನಿನೀತ್ಯಪಿ ದ್ರಷ್ಟವ್ಯಮ್। ತಥಾಪಿ= ಭೂತಾನಾಮಭಯಂ ಸ್ವಿತಿ ಅರ್ಜುನೇನ ಪ್ರಾರ್ಥಿತತ್ವೇऽಪಿ ॥ –(ವಾ.)

ಏಃ ೧) ಅರ್ಜುನ ಹೀಗೆ ಪ್ರಾಣಿಗಳ ಕ್ಷೇಮ ಹಾರೈಸಿದ್ದರೂ ಆ ಅಸ್ತ್ರಗಳ ಸಂಯೋಗ ಸಮಸ್ತ ಪ್ರಾಣಿಸಂಕುಲಕ್ಕೆ ಮೃತ್ಯುವಾಗುತ್ತಿದ್ದದ್ದರಲ್ಲಿ ಸಂಶಯವಿರಲಿಲ್ಲ. ಅದರಿಂದಾಗಿ ಪರಮ ಕರುಣಾಳುವಾದ ವೇದವ್ಯಾಸರು ಆ ಎರಡು ಅಸ್ತ್ರಗಳು ಒಂದುಗೂಡದಿರಲೆಂದು ಅವುಗಳ ಮಧ್ಯೆ ತಾವೇ ಆ ಕ್ಷಣದಲ್ಲಿ ನಿಂತರು.

೨) ಬ್ರಹ್ಮಶಿರೋಸ್ತ್ರಗಳಂತಹ ಎರಡು ಅತ್ಯುತ್ತಮ ಅಸ್ತ್ರಗಳ ಮಧ್ಯೆ ನಿರ್ಭೀತರಾಗಿ ನಿಲ್ಲುವ ಮೂಲಕ ವೇದವ್ಯಾಸರು ತಾವು ಸ್ವತಃ ಆ ಅಸ್ತ್ರಗಳ ಪ್ರತಿಪಾದ್ಯ ದೇವತೆಯಾದ ಸಾಕ್ಷಾತ್ ಪರಬ್ರಹ್ಮನಾದ ಶ್ರೀಹರಿ ಎಂಬುದನ್ನು ಸಹ ಜಗತ್ತಿಗೆ ಸಾರಿದರು ಎಂದೂ ತಿಳಿಯಬೇಕು.

ನಿಃಸೀಮಶಕ್ತಿಃ ಪರಮಃ ಕೃಷ್ಣಃ ಸತ್ಯವತೀಸುತಃ ।
ಸಂಸ್ಥಾಪ್ಯಾಸ್ತ್ರದ್ವಯಂ ದೂರೇ ತಾವಾಹ ಪುರುಷೋತ್ತಮಃ ॥ ೧೬೩ ॥

ಅಃ ಅಪರಿಮಿತ ಶಕ್ತಿಯುಳ್ಳ ಸರ್ವೋತ್ತಮನಾದ ಪುರುಷೋತ್ತಮನಾದ ಶ್ರೀಹರಿಯಾದ ವೇದವ್ಯಾಸರು ಆ ಎರಡು ಅಸ್ತ್ರಗಳನ್ನು ದೂರದಲ್ಲೇ ನಿಲ್ಲಿಸಿ ಅವರಿಬ್ಬರಿಗೂ ತಿಳಿಸಿದರು.

ಏಃ ಇದರಿಂದ ಶ್ರೀವೇದವ್ಯಾಸರು ಕಶ್ಚನ ಋಷಿಯಾಗಿರದೇ ಸರ್ವೋತ್ತಮನಾದ ಶ್ರೀಹರಿಯೇ ಆಗಿರುವರು ಎಂಬುದು ಸಹ ಸ್ಫುಟಪಡುವುದು ಎಂದರ್ಥ.

ಅಸ್ತ್ರೋಪಸಂಹಾರಕ್ಕೆ ವ್ಯಾಸರ ಆದೇಶ

ಸಂತಿ ಹ್ಯಸ್ತ್ರವಿದಃ ಪೂರ್ವಂ ಪ್ರಾಯಶ್ಚೈತನ್ನ ತೈಃ ಕೃತಮ್ ।
ಲೋಕೋಪದ್ರವಕೃತ್ ಕರ್ಮ ಸಂತಃ ಕುರ್ಯುಃ ಕಥಂ ಕ್ವಚಿತ್ ॥ ೧೬೪ ॥

ಅಃ ಈ ಬ್ರಹ್ಮಶಿರೋಸ್ತ್ರವನ್ನು ಬಲ್ಲವರು ಹಿಂದೆಯೂ ಇದ್ದೇ ಇದ್ದರು. ಆದರೆ ಅವರಾರೂ ಇದನ್ನು ಮಾಡಿರಲಿಲ್ಲ. ಲೋಕಕ್ಕೆ ಉಪದ್ರವ ಉಂಟುಮಾಡುವ ಕಾರ್ಯವನ್ನು ಸಜ್ಜನರು ಎಲ್ಲಾದರೂ ಹೇಗೆ ಮಾಡಿಯಾರು?

ಏಃ ಬ್ರಹ್ಮಶಿರೋಸ್ತ್ರವನ್ನು ಹೀಗೆ ಹಿಂದೆ ಯಾರೂ ಪ್ರಯೋಗಿಸಿರಲಿಲ್ಲ ಎಂದರ್ಥ. ಅದಕ್ಕೆ ಕಾರಣ ಅದರಿಂದ ಲೋಕನಾಶವಾಗುವುದು ಎಂಬ ಎಚ್ಚರವೇ ಕಾರಣ ಎಂದರ್ಥ. ಸಜ್ಜನರು ಅಸ್ತ್ರಗಳನ್ನು ಜನರ ಶಾಂತಿಗೆ ಪ್ರಯೋಗಿಸುವರೇ ಹೊರತು ವಿನಾಶಕ್ಕಾಗಿ ಅಲ್ಲ ಎಂಬ ವಿಶೇಷಾಂಶ

---

೧೬೪. ನಾನಾಶಸ್ತ್ರವಿದಃ ಪೂರ್ವೇ ಯೇಽಪ್ಯತೀತಾ ಮಹಾರಥಾಃ ।
ನೈತದಸ್ತ್ರಂ ಮನುಷ್ಯೇಷು ತೈಃ ಪ್ರಮುಕ್ತಂ ಕಥಂಚನ ॥
ಕಿಮಿದಂ ಸಾಹಸಂ ವೀರೌ ಕೃತವಂತೌ ಮಹಾತ್ಯಯಮ್ ॥ – ಭಾರತ (ಸೌಪ್ತಿಕ. ೧೪/೧೬)

ಇದರಿಂದ ಸೂಚಿತ. ರಾಜ–ಮಹಾರಾಜರು ಅಸ್ತ್ರಗಳನ್ನು ಹೊಂದಿರುವುದು ವಿಹಿತವಾದರೂ, ಅವುಗಳನ್ನು ಶಾಂತಿಸಾಧನೆಗಿಂತ ಭಿನ್ನವಾದ ಉದ್ದೇಶಕ್ಕೆ ಬಳಸುವುದು ನಿಷಿದ್ಧವೆಂದರ್ಥ. ಶಾಂತಿಗಾಗಿ ಅಣ್ವಸ್ತ್ರ ಎಂಬ ಕಲ್ಪನೆಯೂ ಇದರಂತೆಯೇ: **'ಕ್ಷತ್ರಿಯೈರ್ಧಾರ್ಯತೇ ಚಾಪೋ ನಾರ್ತಶಬ್ದೋ ಭವೇದಿತಿ'** – ವಾ.ರಾ. ೧/೯/೩).

ಇತ್ಯುಕ್ತೇ ಫಲ್ಗುನಃ ಪ್ರಾಹ ಮಯಾ ಮುಕ್ತಂ ಮಹಾಪದಿ ।
ಶಾಂತ್ಯರ್ಥಮೇವ ಚ ವಿಭೋ ಕ್ಷಂತವ್ಯಂ ಭವತಾ ತತಃ ॥ ೧೬೫ ॥

ಅ: ಶ್ರೀವೇದವ್ಯಾಸರು ಹೀಗೆನ್ನಲು ಅರ್ಜುನ ನುಡಿದ: 'ಪ್ರಭುವೇ, ನಾನು ದೊಡ್ಡ ಆಪತ್ತಿನಲ್ಲಿ ಅದರ ಉಪಶಾಂತಿಗಾಗಿ ಆ ಅಸ್ತ್ರವನ್ನು ಪ್ರಯೋಗಿಸಿದೆ; ತಾವು ನನ್ನನ್ನು ಮನ್ನಿಸಬೇಕು'.

ವಿ: ಅರ್ಜುನ ಶ್ರೀವ್ಯಾಸರು ತಿಳಿಸಿದಂತೆ ಆ ಅಸ್ತ್ರವನ್ನು ಪ್ರಯೋಗಿಸಿದ್ದು ಶಾಂತಿಗೆಂದೇ ಎಂದು ವಿಜ್ಞಾಪಿಸಿಕೊಂಡ. ಅವನು ಮಾಡಿದ್ದು ಸಹ ಹಾಗೆಯೇ ಎಂಬ ಮಾತು ಹಿಂದೆಯೇ ಬಂದಿದೆ.

ಅರ್ಜುನನಿಂದ ಅಸ್ತ್ರೋಪಸಂಹಾರ

ದ್ರೌಣಿರಪ್ಯೇವಮೇವಾಹ ತೌ ವೇದಪತಿರಬ್ರವೀತ್ ।
ನಿವರ್ತ್ಯತಾಮಸ್ತ್ರಮಿತಿ ಶಕ್ರಸೂನುಸ್ತಥಾऽಕರೋತ್ ।
ನಿವರ್ತನಾಪ್ರಭುಂ ದ್ರೌಣಿಂ ವಾಸುದೇವೋऽಭ್ಯಭಾಷತ ॥ ೧೬೬ ॥

ಅ: ಅಶ್ವತ್ಥಾಮನೂ ಸಹ ಹಾಗೆಯೇ ಹೇಳಿದ. ಆಗ ವೇದವ್ಯಾಸರು ಇಬ್ಬರಿಗೂ ಹೇಳಿದರು - ಅಸ್ತ್ರಗಳನ್ನು ನೀವು ಹಿಂತೆಗೆದುಕೊಳ್ಳಿರಿ. ಅರ್ಜುನ ಕೂಡಲೇ ಹಾಗೆ ಮಾಡಿದ. ಆದರೆ, ಆ ಅಸ್ತ್ರವನ್ನು ಹಿಂತೆಗೆದುಕೊಳ್ಳಲು ಅಶ್ವತ್ಥಾಮ ಶಕ್ತನಾಗಲಿಲ್ಲ. ಆಗ ಶ್ರೀಕೃಷ್ಣ ಹೇಳತೊಡಗಿದ.

---

೧೬೫. ಪ್ರಯುಕ್ತಮಸ್ತ್ರಮಸ್ತ್ರೇಣ ಶಾಮ್ಯತಾಮಿತಿ ವೈ ಮಯಾ ॥ – ಭಾರತ (ಸೌಪ್ತಿಕ. ೧೫/೨)

೧೬೬. ಅಶಕ್ತಃ ಪ್ರತಿಸಂಹಾರೇ ಪರಮಾಸ್ತ್ರಸ್ಯ ಸಂಯುಗೇ ।
ದ್ರೌಣಿರ್ದೀನಮನಾ ರಾಜನ್ ದ್ವೈಪಾಯನಮಭಾಷತ ॥ – ಭಾರತ (ಸೌಪ್ತಿಕ. ೧೫/೧೩)

೧೬೬. ಇತ್ಯುಕ್ತ್ವಾ ಸಂಜಹಾರಾಸ್ತ್ರಂ ಪುನರೇವ ಧನಂಜಯಃ । – ಭಾರತ (ಸೌಪ್ತಿಕ. ೧೫/೫)

೧೬೬. ನ ಚ ಶಕ್ತೋऽಸ್ಮಿ ಭಗವನ್ ಸಂಹರ್ತುಂ ಪುನರುದ್ಯತಮ್ ।
ಏತದಸ್ತ್ರಮ್ ..... ॥ –(ದ್ರೌಣವಚನ) – ಭಾರತ (ಸೌಪ್ತಿಕ. ೧೫/೩೨)

ವಿ: ಅಶ್ವತ್ಥಾಮ ತಾನು ಭೀಮನ ಭಯದಿಂದಾಗಿ ಆ ಅಸ್ತ್ರವನ್ನು ಪ್ರಯೋಗಿಸುವುದು ಅನಿವಾರ್ಯವಾಯಿತು ಎಂದು ತಿಳಿಸಿದ ವಿವರ ಮಹಾಭಾರತದಲ್ಲಿದೆ (ಸೌಪ್ತಿಕ. ೧೫/೬).

ಉತ್ತಮವ್ಯಸನಾರ್ತೇನ ಪ್ರಾಣತ್ರಾಣಮಭೀಪ್ಸುನಾ ।
ಮಯೈತದಸ್ತ್ರಮುತ್ಸೃಷ್ಟಂ ಭೀಮಸೇನಭಯಾನ್ಮನೇ ॥

ಅರ್ಜುನನ ಬ್ರಹ್ಮಚರ್ಯ-ಅಶ್ವತ್ಥಾಮರ ಅಬ್ರಹ್ಮಚರ್ಯ

ಕ್ಷತ್ರತೇಜಾ ಬ್ರಹ್ಮಚಾರೀ ಕೌಮಾರಾದಪಿ ಪಾಂಡವಃ ।
ನಿವರ್ತನೇ ತತಃ ಶಕ್ತೋ ನಾಯಂ ದ್ರೋಣಾತ್ಮಜೋಽಪಿ ಸನ್ ॥ ೧೬೭ ॥

ಅಬ್ರಹ್ಮಚರ್ಯಾದಿತ್ಯುಕ್ತೇ ವ್ಯಾಸೋ ದ್ರೌಣಿಮಭಾಷತ ।
ನಿವರ್ತನಾಸಮರ್ಥಸ್ತ್ವಂ ದೇಹಿ ನೈಸರ್ಗಿಕಂ ಮಣಿಮ್ ॥ ೧೬೮ ॥

ಅ: ಅರ್ಜುನ ಬಾಲ್ಯದಿಂದಲೂ ಕ್ಷಾತ್ರತೇಜಸ್ಸನ್ನು ಹೊಂದಿದ ಬ್ರಹ್ಮಚಾರಿ, ಆದ್ದರಿಂದ ಆ ಅಸ್ತ್ರವನ್ನು ಹಿಂತೆಗೆದುಕೊಳ್ಳಲು ಅವನು ಸಮರ್ಥನಾದ. ಆದರೆ, ಅಶ್ವತ್ಥಾಮ ದ್ರೋಣಪುತ್ರ-ನಾದರೂ ಬ್ರಹ್ಮಚರ್ಯಹೀನನಾದ್ದರಿಂದ ಸಮರ್ಥನಾಗಲಿಲ್ಲ. ಆಗ ವೇದವ್ಯಾಸರು ಅಶ್ವತ್ಥಾಮನಿಗೆ ತಿಳಿಸಿದರು: 'ಅಸ್ತ್ರ ಹಿಂತೆಗೆದುಕೊಳ್ಳಲಾಗದ ನೀನು ನಿನ್ನಲ್ಲಿ ಸ್ವಾಭಾವಿಕವಾಗಿ ಬಂದಿರುವ ಮಣಿಯನ್ನು ನೀಡು'.

ವಿ: ೧) ಅರ್ಜುನ ಕ್ಷತ್ರಿಯ, ಅಶ್ವತ್ಥಾಮ ಬ್ರಾಹ್ಮಣ. ಆದರೆ ಕ್ಷತ್ರಿಯನಾಗಿದ್ದೂ ಅರ್ಜುನ ಬ್ರಹ್ಮಚರ್ಯ ಪಾಲಿಸಿದವನು. ಬ್ರಾಹ್ಮಣನಾಗಿದ್ದೂ ಅಶ್ವತ್ಥಾಮ ಬ್ರಹ್ಮಚರ್ಯ ಪಾಲಿಸದಿದ್ದವನು.

---

೧೬೭. ದುರ್ಯೋಧನಪತ್ನ್ಯಾಂ ಸಂತತಿಂ ಜನಯಾಮೀತಿ ದ್ರೌಣಿನಾ ಕಥಿತತ್ವೇನ ವಾಗ್ದೋಷಾತ್ ಬ್ರಹ್ಮಚರ್ಯ-ನಾಶೋಽಭೂದಿತಿ ಭಾವೇನೋಕ್ತಂ ಅಬ್ರಹ್ಮಚರ್ಯಾದಿತಿ ॥ – (ವಾ.)

೧೬೮. ದ್ರೌಣೇರಬ್ರಹ್ಮಚರ್ಯಂ ಚ ದುರ್ಯೋಧನಕ್ಷೇತ್ರೇ ಅಪತ್ಯೋತ್ಪತ್ತೇಃ ಸ್ವಿಕೃತತ್ವೇನ ಚ ಬ್ರಹ್ಮಚರ್ಯ-ಗಲಿತತ್ವಾದಿತಿ ಭಾವಃ ॥ – (ವ.)

೧೬೮. ಬ್ರಹ್ಮಚರ್ಯಾಭಾವಾತ್ ದುರ್ಯೋಧನಕ್ಷೇತ್ರೇ ಸಂತಾನೋತ್ಪಾದನೇ ಪ್ರತಿಜ್ಞಾತತ್ವಾದಿತಿ ಭಾವಃ। ನಿವರ್ತನೇ ನ ಶಕ್ತ ಇತ್ಯರ್ಥಃ। – (ಜ.)

೧೬೮. ನ ಶಕ್ಯಮಾವರ್ತಯಿತುಂ ಬ್ರಹ್ಮಚಾರಿವ್ರತಾದೃತೇ। (ಇತ್ಯಾದಿ) – ಭಾರತ (ಸೌಪ್ತಿಕ. ೧೫/೬-೧೦)

ಸತ್ಯವ್ರತಧರಃ ಶೂರೋ ಬ್ರಹ್ಮಚಾರೀ ಚ ಪಾಂಡವಃ ।
ಗುರುವರ್ತೀ ಚ ತೇನಾಸ್ತ್ರಂ ಸಂಜಹಾರಾರ್ಜುನಃ ಪುನಃ ॥ – ಭಾರತ (ಸೌಪ್ತಿಕ. ೧೫/೧೦)

ಅದರಿಂದಾಗಿಯೇ ಕ್ಷತ್ರಿಯನಾದ ಅರ್ಜುನನಿಗೆ ಅಸ್ತ್ರೋಪಸಂಹಾರ ಸಾಧ್ಯವಾದಂತೆ ಬ್ರಾಹ್ಮಣನಾದ ಅಶ್ವತ್ಥಾಮನಿಗೆ ಸಾಧ್ಯವಾಗಲಿಲ್ಲ. ಬ್ರಹ್ಮಚರ್ಯವಿಲ್ಲದವರಿಗೆ ಬ್ರಹ್ಮಶಿರೋಸ್ತ್ರದಂತಹ ಅಸ್ತ್ರಸಿದ್ಧಿ ಅಸಾಧ್ಯ ಎಂದರ್ಥ.

೨) ಅರ್ಜುನ ಬ್ರಹ್ಮಚರ್ಯವನ್ನು ಬಾಲ್ಯದಿಂದಲೂ ಪಾಲಿಸಿದವನು. ಅವನು ಶಚೀ (ದ್ರೌಪದೀ), ಸುಭದ್ರೆ ಹಾಗೂ ಚಿತ್ರಾಂಗದೆ ಎಂಬ ಮೂವರು ಪತ್ನಿಯರನ್ನು ಹೊಂದಿದ್ದರೂ, ಉಲೂಪಿಯಲ್ಲಿ ಗರ್ಭಾಧಾನ ಮಾಡಿ ಇರಾವಂತನೆಂಬ ಪುತ್ರನನ್ನು ಪಡೆದಿದ್ದರೂ ಬ್ರಹ್ಮಚರ್ಯಕ್ಕೆ ಲೋಪ ತಂದುಕೊಂಡಿರಲಿಲ್ಲ. ಗೃಹಸ್ಥನಾಗಿದ್ದರೂ ವಿಹಿತ ರೀತಿಯಲ್ಲಿ ಆಶ್ರಮಧರ್ಮ ಪಾಲಿಸಿದರೆ ಬ್ರಹ್ಮಚಾರಿಯೆನ್ನಿಸುವನು ಎಂಬ ಮಾತು ಮನುಸ್ಮೃತಿಯಲ್ಲಿದೆ:

ನಿಂದ್ಯಾಸ್ವಷ್ಟಾಸು ಚಾನ್ಯಾಸು ಸ್ತ್ರಿಯೋ ರಾತ್ರಿಷು ವರ್ಜಯನ್ ।
ಬ್ರಹ್ಮಚಾರ್ಯೇವ ಭವತಿ ಯತ್ರ ತತ್ರಾಶ್ರಮೇ ವಸನ್ ॥ – ಮನುಸ್ಮೃತಿ(೩/೫೦)

ಅರ್ಜುನ ಹಾಗೆ ಧರ್ಮಿಷ್ಠನಾಗಿಯೇ ಬದುಕಿದ್ದರಿಂದ ಬ್ರಹ್ಮಚಾರಿಯೇ ಎನಿಸಿದ್ದ. ಅಶ್ವತ್ಥಾಮ ಮದುವೆಯಾಗದೇ ಇದ್ದ ಶುದ್ಧ ಬ್ರಹ್ಮಚಾರಿಯೇ ಆದರೂ ದುರ್ಯೋಧನ ತನ್ನ ಹೆಂಡತಿಯಲ್ಲಿ ಸಂತತಿಯನ್ನು ಹುಟ್ಟಿಸಲು ಕೇಳಿದ್ದಕ್ಕೆ ಸಮ್ಮತಿಸಿದ್ದರಿಂದ ಬ್ರಹ್ಮಚರ್ಯ ಕಳೆದುಕೊಂಡಿದ್ದ. ಅದರಿಂದ ಅವನಿಗೆ ಅಸ್ತ್ರೋಪಸಂಹಾರ ಅಶಕ್ಯವಾಯಿತು ಎಂದರ್ಥ. **'ಕ್ಷತ್ರತೇಜಾ...'** ಎಂಬ ಇದರ ಪೂರ್ವಾರ್ಧ ಮಹಾಭಾರತದ್ದು (ಉದ್ಯೋಗ. ೫೮/೧).

೩) ಅಶ್ವತ್ಥಾಮರ ಬ್ರಹ್ಮಚರ್ಯಲೋಪಕ್ಕೆ ಇದು ಒಂದು ಕಾರಣವಾದರೆ, ಮತ್ತೊಂದು ಕಾರಣ ಭಾವೀಬ್ರಹ್ಮನಾದ ಭೀಮನನ್ನು ವಿರೋಧಿಸಿದ್ದು. ಪರಬ್ರಹ್ಮನಾದ ಕೃಷ್ಣನ ಮಾತನ್ನು ಪಾಲಿಸದ್ದು ಇನ್ನೂ ಮಿಗಿಲಾದ ಅರ್ಥದಲ್ಲಿ ಬ್ರಹ್ಮಚರ್ಯಹಾನಿಗೆ ಕಾರಣವಾಯಿತು. ಅವರ ಇಂತಹ ಬ್ರಹ್ಮಚರ್ಯಹಾನಿಯನ್ನು ಗಮನಿಸಿಯೇ ಕೃಷ್ಣ ಅಂದೇ **'ಅಶ್ವತ್ಥಾಮಾ ಹತಃ'** ಎಂದು ತಿಳಿಸಿದ್ದ ಎಂದು ತಿಳಿಯಬಹುದು (೨೬/೮೦).

೪) ಅಶ್ವತ್ಥಾಮರ ಬ್ರಹ್ಮಚರ್ಯದ ಬಗ್ಗೆ ಹೀಗೆ ನಿರ್ಣಯ ನೀಡುವ ಕೃಷ್ಣ ಸ್ವತಃ ಹದಿನಾರು ಸಾವಿರದ ನೂರೆಂಟು ಪತ್ನಿಯರನ್ನು ಹೊಂದಿದ್ದವನು. ಅಸಂಖ್ಯಗೋಪಿಕಾಸ್ತ್ರೀಯರೊಂದಿಗೆ ವಿಹರಿಸಿದ್ದವನು. ಆದರೂ ಅವನಿಗೆ ಬ್ರಹ್ಮಚರ್ಯ ಲೋಪವಾಗಿರಲಿಲ್ಲ ಎನ್ನಲು ಅವನ ಈ ಉಚಿತವಾದ ಮಾತುಗಳೇ ಕಾರಣ. ಅದಕ್ಕೇ ಅವನನ್ನು **'ಅನಾದಿಬ್ರಹ್ಮಚಾರೀ'** ಎಂದು ಕೃಷ್ಣಾಷ್ಟೋತ್ತರಶತನಾಮಸ್ತೋತ್ರ ಬಣ್ಣಿಸಿದೆ.

೫) ಇನ್ನು ವೇದವ್ಯಾಸರ ವಿಚಾರ – ಬ್ರಹ್ಮಶಿರೋಸ್ತ್ರಗಳ ಸಿದ್ಧಿಗೆ ಬ್ರಹ್ಮಚರ್ಯ ಪಾಲನೆ ಮೂಲ ಅರ್ಹತೆಯಾದರೆ ಆ ಪ್ರಜ್ವಲಿಸುವ ಎರಡು ಅಸ್ತ್ರಗಳ ಮಧ್ಯೆ ನಿಲ್ಲುವ ಮಹಾ–ಮಹಿಮೆಯನ್ನು ತೋರಿಸುವವರಿಗೆ ಎಂತಹ ಬ್ರಹ್ಮಚರ್ಯ ಇದ್ದಿರಬೇಕು ಎಂಬುದನ್ನು

ಅರ್ಥಮಾಡಿಕೊಳ್ಳಬಹುದು. ಆದ್ದರಿಂದ, ಕೃಷ್ಣನಂತೆ ವೇದವ್ಯಾಸರೂ ಸಾಕ್ಷಾತ್ ಪರಬ್ರಹ್ಮ ಎಂದೇ ಸಿದ್ಧವಾಗುವುದು.

೬) ಕೆಲವರು ತಿಳಿದಿರುವಂತೆ ವೇದವ್ಯಾಸರು ಗಿಳಿ ರೂಪದಲ್ಲಿ ಬಂದ ಘೃತಾಚಿಯನ್ನು ಕಾಮಿಸಿದ ಕಾಮುಕರಾಗಿದ್ದರೆ ಅವರಿಗೆ ಇಂತಹ ಸಾಮರ್ಥ್ಯ ಅಶಕ್ಯವಾಗುತ್ತಿತ್ತು ಎಂಬುದನ್ನೂ ಗಮನಿಸಬೇಕು. ಹೀಗೆ ಈ ಪ್ರಸಂಗ ವೇದವ್ಯಾಸರ ನಾರಾಯಣತ್ವವನ್ನು ನಿರೂಪಿಸುವ ಅತ್ಯಪೂರ್ವ ಪ್ರಸಂಗವಾಗಿದೆ ಎಂಬುದನ್ನು ತಿಳಿಯಬೇಕು.

ಭೀಮನಿಗೆ ಶಿರೋಮಣಿಯ ಸಮರ್ಪಣೆ

ಜಿತಃ ಪ್ರಾಗೇವ ಭೀಮೇನ ಭೀಮಾಯೈವ ಮಹಾಪ್ರಭಮ್ ।
ಅಪಿ ಕೇವಲಯಾ ವಾಚಾ ಪಾರ್ಥೇಭ್ಯೋಽಸ್ತ್ರಂ ನಿವರ್ತಯ ॥ ೧೬೯ ॥

ಅ: ಭೀಮನಿಂದ ಮೊದಲೇ ಸೋತಿರುವುದರಿಂದ ಭೀಮನಿಗೇ ಆ ಮಹಾಕಾಂತಿಯ ಮಣಿಯನ್ನು ನೀಡು ಮತ್ತು ಕೇವಲ ಮಾತಿನಿಂದಾದರೂ ಪಾಂಡವರಿಂದ ಆ ಅಸ್ತ್ರವನ್ನು ಹಿಂತೆಗೆದುಕೋ.

ಎ: ಭೀಮನಿಗೆ ಮೊದಲು ಸೋತಿರುವುದರಿಂದ ಎಂಬ ವ್ಯಾಸರ ಮಾತು ಅಶ್ವತ್ಥಾಮರ ಪರಾಭವವನ್ನು ಭೀಮನಿಂದಲೇ ಎಂದು ಖಚಿತಪಡಿಸುವುದು. ಅದರೊಂದಿಗೆ ಪೂರ್ಣವಾಗಿ ಅಸ್ತ್ರವನ್ನು ಉಪಸಂಹರಿಸುವ ಸಾಮರ್ಥ್ಯ ಇಲ್ಲವಾದರೂ ಮಾತಿನಿಂದಾದರೂ ಅದನ್ನು ಹಿಂದಕ್ಕೆ ಪಡೆ ಎಂದು ಆದೇಶ ನೀಡುವರು.

ಇತ್ಯುಕ್ತೋ ಮೂರ್ಧಜಂ ರತ್ನಂ ಜರಾಮರಣನಾಶನಮ್ ।
ಕ್ಷುತ್ತೃಟ್‌ಶ್ರಮಾಪಹಂ ದಿವ್ಯಂ ಗಂಧಧ್ವಾಂತಹರಂ ಶುಭಮ್ ॥ ೧೭೦ ॥

---

೧೭೦. ಮಣಿಂ ಚೈವ ಪ್ರಯಚ್ಛಾದ್ಯ ಯಸ್ತೇ ಶಿರಸಿ ತಿಷ್ಠತಿ ।
ಏತದಾದಾಯ ತೇ ಪ್ರಾಣಾನ್ ಪ್ರತಿದಾಸ್ಯಂತಿ ಪಾಂಡವಾಃ ॥ – ಭಾರತ (ಸೌಪ್ತಿಕ. ೧೫/೨೭)

೧೭೦. ಯಮಾಬಧ್ಯ ಭಯಂ ನಾಸ್ತಿ ಶಸ್ತ್ರವ್ಯಾಧಿಕ್ಷುಧಾಶ್ರಯಮ್ ।
ದೇವೇಭ್ಯೋ ದಾನವೇಭ್ಯೋ ವಾ ನಾಗೇಭ್ಯೋ ವಾ ಕಥಂಚನ ॥
ನ ಚ ರಕ್ಷೋಗಣಭಯಂ ನ ತಸ್ಕರಭಯಂ ತಥಾ ।
ಏವಂ ವೀರ್ಯೋ ಮಣಿರಯಮ್ ..... ॥ (ದ್ರೌಣವಚನ)– ಭಾರತ (ಸೌಪ್ತಿಕ. ೧೫/೨೯,೩೦)

ಉತ್ಕೃತ್ಯ ಭೀಮಾಯ ದದೌ ಮುಕ್ತಾಃ ಪಂಚೈವ ಪಾಂಡವಾಃ ।
ಅಸ್ತ್ರಾದಿತಿ ತತೋ ವೇದಭರ್ತಾ ವಾಸವಿಮಬ್ರವೀತ್ ॥ ೧೭೧ ॥

ಅ: ವ್ಯಾಸರು ಹೀಗೆನ್ನಲು ಅಶ್ವತ್ಥಾಮ ಮುಪ್ಪು ಸಾವುಗಳನ್ನು ಪರಿಹರಿಸುವ, ಹಸಿವು ಬಾಯಾರಿಕೆ, ಬಳಲಿಕೆಗಳನ್ನು ಇಲ್ಲವಾಗಿಸುವ, ದಿವ್ಯಪರಿಮಳೋಪೇತವಾದ, ಕತ್ತಲೆ ಕಳೆಯುವ, ಮಂಗಳಕರವಾದ ತಮ್ಮ ತಲೆಯ ಮೇಲಿನ ಆ ಮಣಿಯನ್ನು ಕಿತ್ತು ಭೀಮನಿಗೆ ನೀಡಿದರು. ಅಸ್ತ್ರದಿಂದ ಐವರು ಪಾಂಡವರಷ್ಟೇ ಬಿಡುಗಡೆ ಹೊಂದಲಿ ಎಂದರು. ಆಗ ವೇದಪತಿಯಾದ ವೇದವ್ಯಾಸರು ಅರ್ಜುನನಿಗೆ ಹೇಳಿದರು.

ವಿ: ೧) ಅಶ್ವತ್ಥಾಮರ ತಲೆಯ ಮೇಲಿದ್ದ ದಿವ್ಯಮಣಿಯ ಮಹಿಮೆ ಇಲ್ಲಿ ನಿರೂಪಿತವಾಗಿದೆ. ಅದನ್ನು ಹೊಂದಿದವರಿಗೆ ಮುಪ್ಪು, ಸಾವು ಮೊದಲಾದ ವಿಕಾರಗಳಾಗಲೀ, ಕತ್ತಲೆ ಮೊದಲಾದವುಗಳ ತಡೆಯಾಗಲೀ ಉಂಟಾಗುತ್ತಿರಲಿಲ್ಲ. ಕರ್ಣ ಕವಚಕುಂಡಲಗಳನ್ನು ದೇಹದಿಂದ ಕತ್ತರಿಸಿ ನೀಡಿದಂತೆ ಅಶ್ವತ್ಥಾಮ ಸಹ ತನ್ನ ಹುಟ್ಟಿನಿಂದ ತಲೆಯಲ್ಲಿ ಸೇರಿಕೊಂಡೇ ಬಂದಿದ್ದ ಆ ಅಪೂರ್ವ ಮಣಿಯನ್ನು ಕತ್ತರಿಸಿಯೇ ನೀಡಿದ ಎಂಬುದು ಮತ್ತೊಂದು ವಿಶೇಷಾಂಶ.

೨) ವೇದವ್ಯಾಸರು ಮಾತಿನಿಂದಲಾದರೂ ಅಸ್ತ್ರವನ್ನು ಪೂರ್ಣವಾಗಿ ಉಪಸಂಹರಿಸಲು ಹೇಳಿದ್ದರೆ, ಅಶ್ವತ್ಥಾಮ ಐವರು ಪಾಂಡವರನ್ನು ಮಾತ್ರ ಅಸ್ತ್ರವು ಬಿಡಲಿ ಎಂದ. ಎಂದರೆ ಪಾಂಡವರ ಸಂತತಿ ಅದಕ್ಕೆ ಬಲಿಯಾಗಲಿ ಎಂದೇ ಅರ್ಥ. ಅದು ದುರ್ಯೋಧನನಿಗೆ ನೀಡಿದ್ದ ವಚನವನ್ನು ಪಾಲಿಸಲೆಂದು ಹಿಡಿದ ಹಠ ಎಂದು ತಿಳಿಯಬೇಕು.

ಅರ್ಜುನನಿಂದ ಅಶ್ವತ್ಥಾಮರ ಅಸ್ತ್ರದ ಉಪಸಂಹಾರ

ತಾತ ಮುಕ್ತಂ ದ್ರೌಣಿನಾऽಪಿ ತ್ವಮೇವಾಸ್ತ್ರಂ ನಿವರ್ತಯ ।
ಇತ್ಯುಕ್ತಸ್ತಂ ಪ್ರಣಮ್ಯಾಶು ಸಂಜಹಾರಾರ್ಜುನೋऽಪಿ ತತ್ ॥ ೧೭೨ ॥

ಅ: ಅರ್ಜುನ ಅಶ್ವತ್ಥಾಮ ಬಿಟ್ಟ ಅಸ್ತ್ರವನ್ನೂ ನೀನೇ ಉಪಸಂಹರಿಸಿಬಿಡು. ಅವರು ಹೀಗೆನ್ನಲು ಅರ್ಜುನ ಅವರಿಗೆ ವಂದಿಸಿ ಆ ಅಸ್ತ್ರವನ್ನೂ ಸಹ ತಾನೇ ಉಪಸಂಹರಿಸಿದ.

ವಿ: ಅರ್ಜುನನಿಗೆ ಆ ಸಾಮರ್ಥ್ಯ ಬರಲು ಅವನಿಗಿದ್ದ ವಿಶೇಷ ಕೃಷ್ಣಾನುಗ್ರಹದೊಂದಿಗೆ ವ್ಯಾಸರೂಪದ ಶ್ರೀಹರಿಯ ಆದೇಶವೂ ಕಾರಣವಾಯಿತು ಎಂದು ತಿಳಿಯಬೇಕು.

---

೧೭೨. ತಸ್ಮಾತ್ ಸಂಹರ ದಿವ್ಯಂ ತ್ವಮಸ್ತ್ರಮೇತನ್ಮಹಾಭುಜ ॥ – ಭಾರತ (ಸೌಪ್ತಿಕ. ೧೫/೨೫)

ಅಶ್ವತ್ಥಾಮನ ಕೃಷ್ಣವಿರೋಧ

ಯಾದವೇಶೋಽಥ ಗೌತಮ್ಯಾಃ ಸುತಮಾಹೈಕಸಂತತೇಃ ।
ವಾಚಾ ನಿವಾರಯಾಸ್ತ್ರಂ ತೇ ಇತ್ಯುಕ್ತೋ ದ್ರೌಣಿರಬ್ರವೀತ್ ॥ ೧೭೩ ॥

ಅ: ಯಾದವರ ಒಡೆಯನಾದ ಶ್ರೀಕೃಷ್ಣ ಆಗ ಅಶ್ವತ್ಥಾಮನಿಗೆ ಹೇಳಿದ: ''ಮಾತಿನಿಂದ ಪಾಂಡವರ ಒಂದು ಸಂತತಿಯಿಂದಲಾದರೂ ನಿನ್ನ ಅಸ್ತ್ರವನ್ನು ಉಪಸಂಹರಿಸು.'' ಶ್ರೀಕೃಷ್ಣ ಹೀಗೆನ್ನಲು ಅಶ್ವತ್ಥಾಮ ನುಡಿದ.

ವಿ: ಪಾಂಡವರ ಉಳಿದ ಸಂತತಿ ಬೇಕಾದರೆ ನಾಶವಾಗಲಿ, ಒಂದು ಸಂತತಿಯನ್ನು ಮಾತ್ರ ಉಳಿಸು ಎಂಬುದು ಕೃಷ್ಣನ ಹಿತೋಕ್ತಿ ಎಂದರ್ಥ.

ಪಕ್ಷಪಾತಾದಿಚ್ಛಸಿ ತ್ವಂ ಭಾಗಿನೇಯಸ್ಯ ಸಂತತಿಮ್ ।
ತತ್ಕೈವ ಪಾತಯಾಮ್ಯಸ್ತ್ರಮುತ್ತರಾಗರ್ಭಕೃಂತನೇ ॥ ೧೭೪ ॥

ಅ: ನೀನು ಪಕ್ಷಪಾತದಿಂದ ನಿನ್ನ ಸೋದರಳಿಯನ ಸಂತತಿಯನ್ನು ಉಳಿಸಬಯಸುತ್ತಿರುವಿ. ನಾನು ಆ ಉತ್ತರೆಯ ಗರ್ಭದ ನಾಶಕ್ಕೆಂದೇ ಅಸ್ತ್ರವನ್ನು ಬೀಳಿಸುವೆ.

ವಿ: ೧) ಕೃಷ್ಣ ಹೇಳಿದ ಉತ್ತರೆಯ ಗರ್ಭ ಅಭಿಮನ್ಯುವಿನದು, ಅಭಿಮನ್ಯು ಸುಭದ್ರೆಯ ಮಗ; ಸುಭದ್ರೆ ಕೃಷ್ಣನ ತಂಗಿ. ಅದಕ್ಕೆಂದು ಅದನ್ನು ಉಳಿಸಲು ಕೃಷ್ಣನ ಸನ್ನಾಹ. ಅದು ಅವನ ಪಕ್ಷಪಾತ ಎಂಬುದು ಅಶ್ವತ್ಥಾಮನ ಆರೋಪ. ಸಕಲ ದೋಷದೂರನಾದ ಶ್ರೀಹರಿಯಾದ ಕೃಷ್ಣನಿಗೆ ಪಕ್ಷಪಾತಾದಿದೋಷಗಳು ಸರ್ವಥಾ ಇಲ್ಲ ಎಂಬುದು ಬ್ರಹ್ಮಸೂತ್ರಗಳ ನಿರ್ಣಯ (**'ವೈಷಮ್ಯ-ನೈರ್ಘೃಣ್ಯೇ ನ ಸಾಪೇಕ್ಷತ್ವಾತ್ ತಥಾ ಹಿ ದರ್ಶಯತಿ'** – ಬ್ರಹ್ಮಸೂತ್ರ ೨/೧/೩೫). ಅಶ್ವತ್ಥಾಮನ ಆರೋಪ ಸೂತ್ರವಿರುದ್ಧ, ಸಕಲಶಾಸ್ತ್ರವಿರುದ್ಧ.

೨) ನಿಜಕ್ಕೂ ಪಕ್ಷಪಾತವಿರುವುದು ಅಶ್ವತ್ಥಾಮನಿಗೆ ಹೊರತು ಕೃಷ್ಣನಿಗಲ್ಲ. ತಮ್ಮ ದೋಷವನ್ನು ಕೃಷ್ಣನಲ್ಲಿ ಕಂಡದ್ದು ಅವರ ಬುದ್ಧಿದೋಷ. ನಿಜವಾದ ಅರ್ಥದಲ್ಲಿ ಅವರ ಬ್ರಹ್ಮಚರ್ಯಲೋಪ ಈ ಪ್ರಸಂಗದಲ್ಲಿದೆ ಎಂಬುದನ್ನು ಗಮನಿಸಬೇಕು. ಇದು **'ಪತ್ಯುರಸಾಮಂಜಸ್ಯಾತ್'** ಎಂಬ ಬ್ರಹ್ಮಸೂತ್ರಕ್ಕೂ ನಿದರ್ಶನ.

ವಾಸುದೇವಃ ಪುನಃ ಪ್ರಾಹ ಯದಿ ಹಂತವ್ಯ ಏವ ತೇ ।
ಗರ್ಭಸ್ಥಾಽಪಿ ನೈವಾಸ್ತ್ರಂ ಪಾತಯಾಸ್ಮಿನ್ ಕಥಂಚನ ॥ ೧೭೫ ॥

---

೧೭೩. ಏತದಸ್ತ್ರಮತಶ್ಚೈವ ಗರ್ಭೇಷು ವಿಸೃಜಾಮ್ಯಹಮ್ । – ಭಾರತ (ಸೌಪ್ತಿಕ. ೧೫/೩೩)

ಅ: ಶ್ರೀಕೃಷ್ಣ ಮತ್ತೆ ನುಡಿದ - ನೀನು ಆ ಗರ್ಭವನ್ನು ಕೊಲ್ಲಲೇ ಬೇಕೆಂದಿದ್ದಲ್ಲಿ ಅಸ್ತ್ರವನ್ನು ಸರ್ವಥಾ ಅದರ ಮೇಲೆ ಪ್ರಯೋಗಿಸಬೇಡ.

ಅಭಿಮನ್ಯೋರ್ಮೃತಸ್ಯೈವ ದೇಹೇ ಪಾತಯ ಮಾನದ ।
ಏವಂ ತ್ವದಸ್ತ್ರನಿಹತಂ ಗರ್ಭಮುಜ್ಜೀವಯಾಮ್ಯಹಮ್ ॥ ೧೭೬ ॥

ಅ: ಸ್ವಾಭಿಮಾನಿಯಾದ ಅಶ್ವತ್ಥಾಮನೇ! ಮೃತವಾದ ಅಭಿಮನ್ಯುವಿನ ದೇಹದಲ್ಲಿ ಅದನ್ನು ಬೀಳಿಸು. ನಿನ್ನ ಅಸ್ತ್ರದಿಂದ ಹತವಾಗುವ ಗರ್ಭವನ್ನು ನಾನು ಮತ್ತೆ ಬದುಕಿಸುವೆ.

ವಿ: 'ಉತ್ತರೆಯ ಗರ್ಭವನ್ನು ಕೊಲ್ಲಲೇಬೇಕೆಂಬ ನಿನ್ನ ಸಂಕಲ್ಪ ಸರ್ವಥಾ ಈಡೇರದು. ಬೇಕಿದ್ದಲ್ಲಿ ಅದನ್ನು ಅಭಿಮನ್ಯುವಿನ ದೇಹದ ಮೇಲೆ ಬೀಳಿಸು; ಅದನ್ನೂ ನಾನು ಬದುಕಿಸುವೆ' ಎಂದು ತಿಳಿಸುವ ಮೂಲಕ ಕೃಷ್ಣ ಆ ಅಸ್ತ್ರದ ದೇವತೆ ತಾನು ಎಂಬುದನ್ನು ಸ್ಫುಟಪಡಿಸಿರುವನು ಎಂದು ತಿಳಿಯಬೇಕು.

---

೧೭೫. ನೈತದೇವಂ ಯಥಾऽऽತ್ಥಂ ತ್ವಂ ಪಕ್ಷಪಾತೇನ ಕೇಶವ ।
ವಚನಂ ಪುಂಡರೀಕಾಕ್ಷ ನ ಚ ಮದ್ವಾಕ್ಯಮನ್ಯಥಾ ॥
ಪತಿಷ್ಯತಿ ತದಸ್ತ್ರಂ ಹಿ ಗರ್ಭೇ ತಸ್ಯಾ ಮಯೋದ್ಯತಮ್ ।
ವಿರಾಟಡಾಹಿತುಃ ಕೃಷ್ಣಯಂ ತ್ವಂ ರಕ್ಷಿತುಮಿಚ್ಛಸಿ ॥ – ಭಾರತ (ಸೌಪ್ತಿಕ. ೧೬/೬,೭)

೧೭೬. ಯದಿ ಮಚ್ಛಕ್ತಿಪರೀಕ್ಷಣಾಯೇತಿ ಮನ್ಯಸೇ ತರ್ಹ್ಯಭಿಮನ್ಯೋರ್ಮೃತಸ್ಯ ದೇಹೇ ಪಾತಯ । ತಮಪ್ಯುಜ್ಜೀವಯಿಷ್ಯಾಮಿ ಇತ್ಯಾಶಯೇನಾಹ ಅಭಿಮನ್ಯೋರಿತಿ । – (ವ.)

೧೭೬. ಮಾನದ ಅಸ್ತ್ರಜ್ಞ ಮಾನದ । ಏವಂ ಏವಮಪಿ ಮಯಾ ಸಮಾಧಾನೇऽಪಿ ತ್ವದಸ್ತ್ರನಿಹತಂ ಗರ್ಭಮುಜ್ಜೀವಯಾಮ್ಯಹಮಿತ್ಯರ್ಥಃ । ಟೀಕಾಸು ತು ಯದ್ಯಯಂ ಹಂತವ್ಯ ಏವೇತಿ ನಿಶ್ಚಯಸ್ತಥಾಪಿ ಗರ್ಭೇ ನ ಪಾತಯ ತ್ವಯಾ ತತ್ರಾಸ್ತ್ರಪಾತನೇ ಮಯಾ ತನ್ನಿಷೇಧೇ ತ್ವದಸ್ತ್ರಸ್ಯ ಮೋಘತ್ವಂ ಸ್ಯಾತ್ । ಯದಿ ಮಚ್ಛಕ್ತಿಃ ಪರೀಕ್ಷಣೀಯೇತಿ ಮನ್ಯಸೇ ತರ್ಹಿ ಮೃತಾಭಿಮನ್ಯುದೇಹೇऽಸ್ತ್ರಂ ಪಾತಯ । ತಮಪ್ಯುಜ್ಜೀವಯಿಷ್ಯಾಮೀತಿ ಭಾವೇನಾಹಾಭಿಮನ್ಯೋರಿತಿ। – (ತಾ.)

೧೭೬. ಗರ್ಭೇ ತ್ವದಸ್ತ್ರಪಾತನಂ ಏವಮೇವ, ಮೃತದೇಹೇऽಸ್ತ್ರಪಾತನವತ್ ವ್ಯರ್ಥಮೇವೇತಿ ಭಾವಃ । – (ಜ.)

೧೭೬. ಯದ್ಯಪಿ ತ್ವಯಾ ಗರ್ಭೋ ಹಂತವ್ಯತಯೋದ್ದಿಷ್ಟಃ। ತಥಾಪಿ ಗರ್ಭೇ ತ್ವಂ ನ ಪಾತಯ। ತರ್ಹಿ ಉತ್ತರಾಗರ್ಭೇ ಪಾತಯಾಮೀತಿ ಪ್ರತಿಜ್ಞಾಹಾನಿರಿತ್ಯತ ಆಹ ಅಭಿಮನ್ಯೋರಿತಿ। ಆತ್ಮಾ ವೈ ಪುತ್ರನಾಮಾಸೀತಿ ಶ್ರುತೇಃ ಪಿತೃದೇಹೇ ಪಾತಿತಂ ಪುತ್ರದೇಹ ಏವ ಪಾತಿತಂ ಭವೇದಿತಿ ಭಾವಃ। - (ತಾ.)

೧೭೬. ಯದ್ವಾ ಗರ್ಭಸ್ಯ ಹಂತವ್ಯತ್ವೇऽಪಿ ಗರ್ಭೇ ತ್ವಂ ನ ಪಾತಯ। ಕಿಂತು ಗರ್ಭಮುದ್ದಿಶ್ಯಾಭಿಮನ್ಯು ದೇಹೇ ಪಾತಯ। ಅಸ್ತ್ರಪಾತಸ್ಯಾಮೋಘತ್ವಾತ್ ಅಭಿಮನ್ಯುದೇಹೇ ಭಸ್ಮೀಭೂತೇ ಅಸ್ತ್ರಸ್ಯ ಸರ್ವಥಾ ನ ವೈಯರ್ಥ್ಯಂ। ಗರ್ಭೇ ಪಾತೇ ತು ವ್ಯರ್ಥಮೇವ ಸ್ಯಾದಿತಿ ಭಾವಃ। - (ತಾ.)

ಪರೀಕ್ಷಿತನನ್ನು ಉಳಿಸಲು ಕೃಷ್ಣನ ಸಂಕಲ್ಪ

ಪಾತಯೇ ಗರ್ಭ ಏವಾಹಮಿತ್ಯುಚೇ ಗೌತಮೀಸುತಃ ।
ಅಥಾಹ ವಾಸುದೇವಸ್ತಮೀಷತ್ಕ್ರುದ್ಧ ಇವ ಪ್ರಭುಃ ॥ ೧೭೭ ॥

ಅ: ಆಗಲೂ ಅಶ್ವತ್ಥಾಮ ಗರ್ಭದ ಮೇಲೆಯೇ ಅಸ್ತ್ರವನ್ನು ಬೀಳಿಸುವೆ ಎಂದ. ಆಗ ಸರ್ವಸಮರ್ಥನಾದ ಶ್ರೀಕೃಷ್ಣ ಸ್ವಲ್ಪ ಕೆರಳಿದವನಂತೆ ಅವನಿಗೆ ತಿಳಿಸಿದ.

ವಿ: ೧) ಕೃಷ್ಣ ಅಷ್ಟು ಹೇಳಿದ್ದು ಅಶ್ವತ್ಥಾಮನ ಮೇಲಿನ ಕರುಣೆಯಿಂದಲೇ ಹೊರತು ತನ್ನ ಅಸಾಮರ್ಥ್ಯದಿಂದಲ್ಲ. ಆದರೆ, ಅಶ್ವತ್ಥಾಮ ಅದನ್ನು ತಿಳಿಯದೇ ತನ್ನ ಸಾಮರ್ಥ್ಯ ತೋರಲೆಂದು ಅಸ್ತ್ರವನ್ನು ಅಲ್ಲೇ ಬೀಳಿಸುವೆನೆಂದು ಹಠ ಹಿಡಿದ

೨) ಕೃಷ್ಣ ಕೋಪಗೊಂಡವನಂತೆ ನುಡಿದ. ಕೋಪತಾಪಗಳು ಅಸಾಮರ್ಥ್ಯದ ಲಕ್ಷಣ. 'ಶೇಷಂ ಕೋಪೇನ ಪೂರಯೇತ್' ಎಂದೇ ನ್ಯಾಯ. ಕೃಷ್ಣ ಸರ್ವಸಮರ್ಥ. ಅವನಿಗೆ ಕೋಪ–ತಾಪಗಳ ಪ್ರಸಕ್ತಿಯೇ ಇಲ್ಲ. ಆದರೂ ಹಾಗೆ ಮಾಡಿದ್ದು ಅಶ್ವತ್ಥಾಮನ ಆ ಕಾರ್ಯ ತನಗೆ ಅಪ್ರಿಯವೆಂದು ಲೋಕಕ್ಕೆ ತಿಳಿಸಲೆಂದೇ ಹೊರತು ನಿಜವಾದ ಕೋಪದಿಂದಲ್ಲ ಎಂದು ಭಾವ ಎಂಬುದನ್ನು ತಿಳಿಸಲು '**ಪ್ರಭುಃ**' ಎಂಬ ಪದವನ್ನು ಉಪಯೋಗಿಸಿರುವರು.

ಅಶ್ವತ್ಥಾಮನಿಗೆ ಕೃಷ್ಣ ನೀಡಿದ ಶಾಪ

ದುರ್ಮತೇ ಪಶ್ಯ ಮೇ ವೀರ್ಯಂ ಯತ್ ತೇ ಶಕ್ಯಂ ಕುರುಷ್ವ ತತ್ ।
ಉಜ್ಜೀವಯಾಮ್ಯಹಂ ಗರ್ಭಂ ಯತತಃ ಶಕ್ತಿತೋಽಪಿ ತೇ ॥ ೧೭೮ ॥

---

೧೭೭. ಚಿದಾನಂದಾತ್ಮಕಾಸ್ತಸ್ಯ ಗುಣಾಃ ಸರ್ವಗುಣಾತ್ಮಕಾಃ ।
ಸರ್ವದಾऽತಃ ಸರ್ವವೈಲಕ್ಷಣ್ಯಮೇಷಾಂ ಪ್ರಕೀರ್ತಿತಮ್ ।
ಕ್ರೋಧಃ ಕ್ಷಮಾತ್ಮಕೋ ಯಸ್ಯ ಚಿದಾನಂದಾತ್ಮಕಸ್ತಥಾ ।
ಅನ್ಯಕ್ರೋಧಸಮಃ ಕ್ರೋಧಸ್ತಸ್ಯ ವಿಷ್ಣೋಃ ಕಥಂ ಭವೇತ್ ।
ಏವಂ ಸರ್ವಗುಣಾಸ್ತಸ್ಯ ಸರ್ವೇಭ್ಯೋऽಪಿ ವಿಲಕ್ಷಣಾಃ । – ಬೃಹದಾರಣ್ಯಕೋಪನಿಷದ್ಭಾಷ್ಯ

೧೭೮. ಅಮೋಘಃ ಪರಮಾಸ್ತ್ರಸ್ಯ ಪಾತಸ್ತಸ್ಯ ಭವಿಷ್ಯತಿ ।
ಸ ತು ಗರ್ಭೋ ಮೃತೋ ಜಾತೋ ದೀರ್ಘಮಾಯುರವಾಪ್ಸ್ಯತಿ ॥ (ಸೌಪ್ತಿಕ. ೧೬/೮)

ಅಹಂ ತಂ ಜೀವಯಿಷ್ಯಾಮಿ ದಗ್ಧಂ ಶಸ್ತ್ರಾಗ್ನಿತೇಜಸಾ ।
ಪಶ್ಯ ಮೇ ತಪಸೋ ವೀರ್ಯಂ ಸತ್ಯಸ್ಯ ಚ ನರಾಧಮ ॥ (ಸೌಪ್ತಿಕ. ೧೬/೧೬)

ಅ: ಎಲೋ ದುರ್ಬುದ್ಧಿಯವನೇ, ನನ್ನ ಸಾಮರ್ಥ್ಯವನ್ನು ನೋಡು. ನಿನ್ನಿಂದೇನಾಗುವುದೋ ಅದನ್ನು ಮಾಡಿಕೋ. ನೀನು ನಿನ್ನ ಶಕ್ತಿಯನ್ನೆಲ್ಲ ಪ್ರಯೋಗಿಸಿ ಪ್ರಯತ್ನಿಸಿದರೂ ನಾನು ಆ ಗರ್ಭವನ್ನು ತಿರುಗಿ ಬದುಕಿಸುವೆ.

ವಿ: ೧) ಶ್ರೀಕೃಷ್ಣ ತನ್ನ ಮನೋಭಾವವನ್ನು ಪ್ರಕಟಿಸುತ್ತಾ ತಿಳಿಸಿದ ಉಚಿತವಾದ ಮಾತಿದು. ಅವನು ಸರ್ವಸಾಮರ್ಥ್ಯವನ್ನು ಪ್ರಯೋಗಿಸಿದರೂ ತಾನು ಅದನ್ನು ಉಚಿತವಾಗಿ ಬದುಕಿಸುವ ಹಠ ಹಿಡಿಯುವ ಮೂಲಕ ಕೃಷ್ಣ ತನ್ನ ಸರ್ವೋತ್ತಮತ್ವವನ್ನು ಸಾರಿದ ಎಂದು ತಿಳಿಯಬೇಕು.

೨) ಶಿವ ಭಾಗವತಧರ್ಮವನ್ನು ತಪ್ಪಿದ ಅನೇಕ ಪ್ರಸಂಗಗಳಲ್ಲಿ ಇದೂ ಒಂದು ಎಂದು ತಿಳಿಯಬೇಕು. ಹರನಾದ ಅಶ್ವತ್ಥಾಮನ ಹಠ ಉತ್ತರೆಯ ಗರ್ಭವನ್ನು ಕೊಲ್ಲುವುದು, ಹರಿಯಾದ ಕೃಷ್ಣನ ಹಠ ಅದನ್ನು ಉಳಿಸುವುದು. ಮುಂದೆ ಗೆದ್ದದ್ದು ಕೃಷ್ಣನ ಸಂಕಲ್ಪ ಎಂಬುದು ಸುಪ್ರಸಿದ್ಧ. ಹರಿಚಿತ್ತ ಸತ್ಯ ಹರಿಚಿತ್ತ ನರಚಿತ್ತಕ್ಕೆ ಬಂದದ್ದು ಲವಲೇಶ ನಡೆಯದು ಎಂಬ ದಾಸವಾಣಿಗೆ ಇದು ಮತ್ತೊಂದು ನಿದರ್ಶನ. ಹರ.ಭಾವಿನರನೇ ಅಲ್ಲವೇ.

ಸಂತತಿರ್ವರ್ಷಸಾಹಸ್ರಂ ಪಾಂಡವಾನಾಂ ಭವೇದ್ಭುವಿ ।
ಮತ್ಪಾಲಿತಾಂ ನ ಕಶ್ಚಿತ್ ತಾಂ ತಾವದ್ಧಂತುಂ ಕ್ಷಮಃ ಕ್ವಚಿತ್ ॥ ೧೭೯ ॥

ಅ: ಪಾಂಡವರ ಸಂತತಿ ಭೂಮಿಯಲ್ಲಿ ಸಾವಿರ ವರ್ಷಗಳ ಕಾಲ ಇದ್ದೇ ಇರುವುದು, ನಾನು ರಕ್ಷಿಸುವ ಅದನ್ನು ನಾಶ ಮಾಡಲು ಯಾವನೂ ಎಲ್ಲೂ ಸಮರ್ಥನಾಗಲಾರ.

ವಿ: ಅಶ್ವತ್ಥಾಮನ ಹಠಕ್ಕೆ ಪ್ರತಿಯಾಗಿ ಶ್ರೀಕೃಷ್ಣ ತನ್ನ ಸಂಕಲ್ಪವನ್ನು ತಿಳಿಸಿದ ರೀತಿಯಿದು. ತಾನು ಉತ್ತರೆಯ ಗರ್ಭವನ್ನು ಮಾತ್ರ ಉಳಿಸದೇ ಅದರ ಸಂತತಿಯೂ ಉಳಿಯುವಂತೆ ಮಾಡಿ ಒಟ್ಟಾಗಿ ಪಾಂಡವ ಸಂತತಿ ಮುಂದೆ ಒಂದು ಸಾವಿರ ವರ್ಷಗಳ ಕಾಲ ಭೂಮಿಯನ್ನು ಪಾಲಿಸುವಂತೆ ಮಾಡುವೆ ಎಂದ. ಅದನ್ನು ತಪ್ಪಿಸಲು ಯಾರಿಗೂ ಸರ್ವಥಾ ಅಶಕ್ಯ ಎಂಬ ಮೂಲಕ ತನ್ನ ಸರ್ವ ಸಾಮರ್ಥ್ಯವನ್ನು ಸ್ಪಷ್ಟಪಡಿಸಿದ.

ಜಾನಾಮಿ ತೇ ಮತಿಂ ದುಷ್ಟಾಂ ಜಿಘಾಂಸೋಃ ಪಾರ್ಥಸಂತತಿಮ್ ।
ಚಿಕೀರ್ಷೋರ್ಧಾರ್ತರಾಷ್ಟ್ರಸ್ಯ ತಂತುಂ ಭೂಯಃ ಸುದುಷ್ಕರಮ್ ॥ ೧೮೦ ॥

ಅ: ಪಾಂಡವ ಸಂತತಿಯನ್ನು ಕೊಲ್ಲಬಯಸುವ, ದುರ್ಯೋಧನನ ಸಂತತಿಯನ್ನು ಮತ್ತೆ ಬೆಳೆಸುವ ನಿನ್ನ ದುರ್ಬುದ್ಧಿನನಗೆ ತಿಳಿದಿದೆ. ಅದೆಂದೂ ನಡೆಯದು.

ವಿ: ಕೃಷ್ಣ ತನ್ನ ಸರ್ವಜ್ಞತ್ವವನ್ನೂ, ಸರ್ವಶಕ್ತತ್ವವನ್ನೂ ನಿರೂಪಿಸಿದ ಪ್ರಸಂಗ ಇದು.

ಮದಾಜ್ಞಯಾ ಸಾ ವಿಫಲಾ ಭವಿತ್ರೀ
ವಾಂಛಾ ಮುಮುಕ್ಷಾವಿಮುಖಸ್ಯ ವಿಷ್ಣೋಃ ।
ಯಥೈವ ತೇನೈವ ನರಾಧಿರೂಢೋ
ಗಮ್ಯಸ್ತವ ಸ್ಯಾನ್ನ ಚ ಭೂಮಿಭಾಗಃ ॥ ೧೮೧ ॥

ಅ: ಹರಿಗೆ ವಿಮುಖನಾದವನ ಮೋಕ್ಷಾಭಿಲಾಷೆ ವಿಫಲವಾಗುವಂತೆ ನಿನ್ನ ಈ ಸಂಕಲ್ಪವೂ ವ್ಯರ್ಥವಾಗುವುದು. ಅದರಿಂದ ನೀನು ನರನ ಮೇಲೆ ಕುಳಿತು ಓಡಾಡುವಿ, ನಿನಗೆ ಭೂಪ್ರದೇಶ ಗಮ್ಯವಾಗದಿರಲಿ.

ವಿ: ೧) ನರಾಧಿರೂಢ ಎಂಬುದಕ್ಕೆ ಸ್ವತಂತ್ರವಾಗಿ ನಡೆಯಲಾಗದೇ ಮನುಷ್ಯರು ಹೊತ್ತು ನಡೆಯುವಂತಾಗಲಿ ಎಂಬ ಅರ್ಥವೂ ವಿವಕ್ಷಿತ.

೨) ಭೂಪ್ರದೇಶ ಗಮ್ಯವಾಗದಿರಲಿ ಎಂದರೆ ಮನುಷ್ಯರು ವಾಸವಾಡುವ ಸ್ಥಳದಲ್ಲಿ ವಾಸವಾಡಲು ಸಾಧ್ಯವಾಗದಿರಲಿ ಎಂದರ್ಥ. ನಿನಗೆ ಭೂಮಿಯ ಭಾಗ ದೊರಕದು ಎಂಬುವುದಕ್ಕೆ ದುರ್ಯೋಧನನ ಸಂತತಿಗೆ ರಾಜ್ಯ ಕೊಡುವ ನಿನ್ನಾಸೆ ಪೂರೈಸದು ಎಂಬ ಅರ್ಥವನ್ನೂ ತಿಳಿಯಬಹುದು.

ದುರ್ಗಂಧಯುಕ್ತೋ ವ್ರಣಸಂಚಿತಾಂಗಃ
ಸದಾ ಚರಃ ಸ್ಯಾ ವಿಪಿನೇಷು ಮಂದ ।
ಯಾವದ್ಭುವಿ ಸ್ಯಾದಿಹ ಪಾರ್ಥತಂತು-
ರ್ವ್ಯಾಸೋಽಪಿ ತಂ ಪ್ರಾಹ ತಥೇತಿ ದೇವಃ ॥ ೧೮೨ ॥

ಅ: ಮಂದಮತಿಯೇ, ಪಾಂಡವ ಸಂತತಿ ಇರುವವರೆಗೆ ದುರ್ಗಂಧದಿಂದ ಕೂಡಿ, ಮೈಯಲ್ಲಿ ಹುಣ್ಣು ತುಂಬಿದವನಾಗಿ ಕಾಡುಗಳಲ್ಲಿ ಸದಾ ಓಡಾಡಿಕೊಂಡಿರು. ವ್ಯಾಸರೂ ಸಹ ಅಶ್ವತ್ಥಾಮನಿಗೆ ಕೃಷ್ಣ ಹೇಳಿದಂತೆಯೇ ಆಗಲಿ ಎಂದರು.

---

೧೮೧. ಮುಮುಕ್ಷಾವಿಮುಖಸ್ಯ ವಿಷ್ಣೋರಿತ್ಯತ್ರ ವಿಷ್ಣೋರಾಜ್ಞಾಯಾಮಪಿ ಮುಮುಕ್ಷಾರಹಿತಸ್ಯ= ಅಸ್ತ್ರಮೋಚನೇ-ಚ್ಛಾರಹಿತಸ್ಯ ಅಸ್ತ್ರಂ ಮುಂಚಾಮೀತ್ಯಾಗ್ರಹವತ ಇತ್ಯರ್ಥಃ। ಯಥೈವೇತ್ಯಸ್ಯ ಯಥಾ ವಾ ಇಚ್ಛಾ ವಿಫಲೈವ ಭವಿತ್ರೀ ತಥಾ ತೇನ ಮದಾಜ್ಞೋಲ್ಲಂಘನನಿಮಿತ್ತೇನ ತ್ವಂ ನರಾರೂಢ ಏವ ಭವಿಷ್ಯಸಿ ಇತಿ ಯೋಗ್ಯಸುಪ್ತಿಂಕೋರಧ್ಯಾಹಾರೇಣ ಯೋಜನಾ। ಸಹಸ್ರಂ ಜನಾಃ ಯತ್ರ ತಿಷ್ಠಂತಿ ತತ್ರ ಕೋಲಾಹಲರೂಪೇಣ ನಾದಂ ಕುರ್ವನ್ ದ್ರೌಣಿಃ ತೇಷಾಂ ಶಿರಾಂಸ್ಯಾರೂಢಸ್ತಿಷ್ಠತೀತಿ ಪೌರಾಣಿಕೀ ಕಥಾ। ಅತೋ ನರಾಧಿರೂಢ ಇತ್ಯುಕ್ತಮ್ ॥ –(ವಾ.)

ಏಃ ಪಾಂಡವ ಸಂತತಿ ಸಾವಿರ ವರ್ಷವಿರುವುದು ಎಂದು ಹೇಳಿದ್ದರಿಂದ ಅಶ್ವತ್ಥಾಮನಿಗೆ ಈ ಕೃಷ್ಣಶಾಪ ಅನ್ವಯಿಸುವುದು ಒಂದು ಸಾವಿರ ವರ್ಷಗಳವರೆಗೆ ಮಾತ್ರ ಎಂದಾಗುವುದು. ಕೃಷ್ಣನೀಡಿದ ಶಾಪವನ್ನು ವೇದವ್ಯಾಸರೂ ಒಪ್ಪಿದರು ಎಂದರ್ಥ.

ಅಶ್ವತ್ಥಾಮರ ಪ್ರಾರ್ಥನೆ

ರೂಪದ್ವಯೇನಾಪಿ ಹರೇಸ್ತಥೋಕ್ತೇ
ಜಗಾದ ಕಾಲೀತನಯಂ ಸ ಕೃಷ್ಣಮ್ ।
ತ್ವಯಾ ಸಹ ಸ್ಯಾನ್ಮಮ ಸಂಗಮೋ ವಿಭೋ
ಯಥೇಪ್ಸಿತಃ ಸ್ಯಾನ್ನ ಚ ಮೇಽತ್ರ ವಿಘ್ನಃ ॥ ೧೮೩ ॥

ಅಃ ಶ್ರೀಹರಿಯು ಎರಡು ರೂಪಗಳಿಂದಲೂ ಹಾಗೆ ಹೇಳಿದಾಗ ಅಶ್ವತ್ಥಾಮ ವೇದ-ವ್ಯಾಸರಿಗೆ ವಿಜ್ಞಾಪಿಸಿಕೊಂಡ : 'ಪ್ರಭುವೇ, ನಾನು ಬಯಸಿದಾಗಲೆಲ್ಲ ನನಗೆ ನಿನ್ನ ಸಮಾಗಮ ಲಭಿಸಲಿ. ಅದಕ್ಕೆ ನನಗೆ ವಿಘ್ನ ಒದಗದಿರಲಿ'.

ಏಃ ಸಾವಿರ ವರ್ಷಗಳು ಕಳೆದ ಬಳಿಕ ಬಯಸಿದಾಗಲೆಲ್ಲ ಅಶ್ವತ್ಥಾಮರಿಗೆ ವ್ಯಾಸರ ಸಮಾಗಮವಾಗಬೇಕು ಎಂಬುದು ಅವರ ಬಯಕೆ.

---

೧೮೨. ವಿಪಿನೇಷ್ವಿತ್ಯತ್ರ ವಿಪಿನೇಷು ಶಾಖಾಮೃಗವತ್ ವಿಪಿನಸ್ಥತರುಷ್ವೇವ ಚರಸ್ಯಾಸ್ಯ ಇತ್ಯರ್ಥಃ ॥ – (ವಾ.)

೧೮೨. ತಸ್ಮಾತ್ ತ್ವಮಸ್ಯ ಪಾಪಸ್ಯ ಕರ್ಮಣಃ ಫಲಮಾಪ್ನುಹಿ ।
ತ್ರೀಣಿ ವರ್ಷಸಹಸ್ರಾಣಿ ಚರಿಷ್ಯಸಿ ಮಹೀಮಿಮಾಮ್ ॥
ಅಪ್ರಾಪ್ನುವನ್ ಕ್ವಚಿತ್ ಕಾಂಚಿತ್ ಸಂವಿದಂ ಜಾತು ಕೇನಚಿತ್ ।
ನಿರ್ಜನಾನಸಹಾಯಸ್ತಂ ದೇಶಾನ್ ಪ್ರವಿಚರಿಷ್ಯಸಿ ॥
ಭವಿತ್ರೀ ನ ಹಿ ತೇ ಕ್ಷುದ್ರ ಜನಮಧ್ಯೇಷು ಸಂಸ್ಥಿತಿಃ ।
ಪೂಯಶೋಣಿತಗಂಧೀ ಚ ದುರ್ಗಕಾಂತಾರಸಂಶ್ರಯಃ ॥
ವಿಚರಿಷ್ಯಸಿ ಪಾಪಾತ್ಮನ್ ಸರ್ವವ್ಯಾಧಿಸಮನ್ವಿತಃ ॥
(ಇತ್ಯಾದಿ ಶ್ರೀಕೃಷ್ಣನ ವಚನ) – ಭಾರತ (ಸೌಪ್ತಿಕ. ೧೬/೧೦-೧೩)

೧೮೨. ತಸ್ಮಾದ್ ತದ್ ದೇವಕೀಪುತ್ರ ಉಕ್ತವಾನುತ್ತಮಂ ವಚಃ ।
ಅಸಂಶಯಂ ತೇ ತದ್ಭಾವಿ ಕ್ಷತ್ರಧರ್ಮಸ್ತ್ವಯಾऽऽಶ್ರಿತಃ ॥ (ವ್ಯಾಸರ ವಚನ) – ಭಾರತ(ಸೌಪ್ತಿಕ.೧೬/೧೮)

೧೮೩. ತ್ವಯಾ ಸಹ ಸ್ಯಾನ್ಮಮ ಸಂಗಮ ಇತ್ಯತ್ರ ಕೃಷ್ಣಶಾಪಸ್ಯಾಪರಿಹಾರ್ಯತ್ವಾತ್ ಸಹಸ್ರಾಬ್ದಾನಂತರಂ ತ್ವಯಾ ಸಹ ಸಂಗಮಃ ಸ್ಯಾದಿತ್ಯರ್ಥಃ ॥ – (ವಾ.)

೧೮೩. ಸಹೈವ ಭವತಾ ಬ್ರಹ್ಮನ್ ಸ್ಥಾಸ್ಯಾಮಿ ಪುರುಷೇಷ್ವಿಹ ।
ಸತ್ಯವಾಗಸ್ತು ಭಗವಾನಯಂ ಚ ಪುರುಷೋತ್ತಮಃ ॥ – ಭಾರತ (ಸೌಪ್ತಿಕ. ೧೬/೧೯)

ಅಶ್ವತ್ಥಾಮ ಕಂಡಿದ್ದ ಸ್ವಪ್ನ

ಇತ್ಯುಕ್ತ ಓಮಿತಿ ಪ್ರಾಹ ಭಗವಾನ್ ಬಾದರಾಯಣಃ ।
ತಂ ಪ್ರಣಮ್ಯ ಯಯೌ ಸೋಽಪಿ ಸ್ವಪ್ನದೃಷ್ಟಮನುಸ್ಮರನ್ ॥ ೧೮೪ ॥

ಅ: ಅಶ್ವತ್ಥಾಮ ಹೀಗೆ ಬೇಡಿಕೊಳ್ಳಲು ಭಗವಾನ್ ವೇದವ್ಯಾಸರು ಆಗಲಿ ಎಂದರು. ಅಶ್ವತ್ಥಾಮ ಅವರಿಗೆ ವಂದಿಸಿ ಸ್ವಪ್ನದಲ್ಲಿ ಕಂಡದ್ದನ್ನು ನೆನೆಯುತ್ತಾ ತೆರಳಿದ.

ವಿ: ತನ್ನ ತಪ್ಪಿನ ಅರಿವಾದ ಅಶ್ವತ್ಥಾಮ ಹಾಗೆ ವೇದವ್ಯಾಸರ ಅನುಗ್ರಹವನ್ನು ಸಂಪಾದಿಸಿ ತೆರಳಿದ. ಹಾಗೆ ತೆರಳುವಾಗ ತನಗೆ ಆ ವರೆಗೆ ಕನಸಿನಲ್ಲಿ ಕಾಣುತ್ತಿದ್ದ ವಿವರಗಳು ಸ್ಮರಣೆಗೆ ಬಂದು ಅವು ನಡೆದವು ಎಂಬ ಅರಿವು ಮೂಡಿತು ಎಂದರ್ಥ. ಶ್ರೀಹರಿಯ ಅಪಾರ ಕರುಣೆಗೂ ಈ ಪ್ರಸಂಗ ನಿದರ್ಶನ.

ಸ್ವಪ್ನೇ ಹಿ ದ್ರೌಪದೇಯಾನಾಂ ವಧೋ ದೃಷ್ಟೋ ತ್ಮನಾ ನಿಶಿ ।
ಅರ್ಜುನೇನ ಪ್ರತಿಜ್ಞಾತಂ ದ್ರೌಪದ್ಯೈ ಸ್ವವಧಂ ಪ್ರತಿ ॥ ೧೮೫ ॥

ನಿಬಧ್ಯಾನಯನಂ ಚೈವ ತೇನೈವ ಶಿಬಿರಂ ಪ್ರತಿ ।
ಮುಂಚೇತಿ ದ್ರೌಪದೀವಾಕ್ಯಂ ನೇತಿ ಭೀಮವಚಸ್ತಥಾ ॥ ೧೮೬ ॥

ಕೃಷ್ಣವಾಕ್ಯಾನ್ಮಣಿಂ ಹೃತ್ವಾ ದೇಶಾನ್ನಿರ್ಯಾತನಂ ತಥಾ ।
ಇತ್ಯಾದಿಸ್ವಪ್ನದೃಷ್ಟಂ ಯತ್ ಪ್ರಾಯಃ ಸತ್ಯಮಭೂದಿತಿ
ಚಿಂತಯನ್ ಪ್ರಯಯೌ ದೇವಂ ದ್ರೌಣಿಃ ಶಸ್ತ್ರಭೃತಾಂ ವರಃ ॥ ೧೮೭ ॥

ಅ: ಅಶ್ವತ್ಥಾಮ ಸ್ವಪ್ನದಲ್ಲಿ ತನ್ನಿಂದ ರಾತ್ರಿಯಲ್ಲಿ ದ್ರೌಪದೀಪುತ್ರರ ವಧೆ, ಅದರಂತೆ ಅರ್ಜುನನಿಂದ ದ್ರೌಪದಿಗೆ ತನ್ನನ್ನು ಕೊಲ್ಲುವುದಾಗಿ ಪ್ರತಿಜ್ಞೆ, ಅವನನ್ನು ಸೆರೆಹಿಡಿದು ಶಿಬಿರಕ್ಕೆ

---

೧೮೪. ..... ಸ್ವಪ್ನದೃಷ್ಟಂ ತತ್ ಪ್ರಾಯಃ ಸತ್ಯಮಭೂದಿತಿ । ಅತ್ರ ಸತ್ಯಾಂಶಃ ಸ್ವಲ್ಪಃ ಮಿಥ್ಯಾಂಶೋ ಭೂಯಾನ್ । ತಥಾ ಹಿ ಸ್ವಪ್ನೇ ದ್ರೌಪದೇಯಾನಾಂ ಯೋ ವಧೋ ದೃಷ್ಟಃ ಸ ಸತ್ಯಃ । ತಥಾ ಕೇನಚಿದನುಯಾತಂ ಸ್ವಾತ್ಮಾನಂ ಪ್ರತಿಕೃತಂ ತತ್ಸತ್ಯಮ್ । ತಸ್ಮಿನ್ನನುಯಾನೇ ಅರ್ಜುನಕರ್ತೃಕತ್ವಂ ಮಿಥ್ಯಾ । ವಸ್ತುತಸ್ತಸ್ಯ ಭೀಮಕರ್ತೃಕತ್ವಾತ್ । .... ಏತತ್ಸರ್ವಂ ಸ್ವಪ್ನದೃಷ್ಟಂ ಮೃಷೈವ । – (ಚ.)

೧೮೫. **ಪಾರ್ಥಾನುಯಾತಮಾತ್ಮಾನಂ ದ್ರೌಣಿಃ ಸ್ವಪ್ನೇ ದದರ್ಶ ಹ ।**
ಬಂಧನಂ ಚಾತ್ಮನಸ್ತಸ್ಯ ದ್ರೌಪದ್ಯಾ ಚೈವ ಮೋಕ್ಷಣಮ್ ॥ – ಸ್ಕಂದಪುರಾಣ ।
ತಸ್ಮಾನ್ನೈಷೀಕವಿರೋಧಃ ॥ – ಭಾಗವತತಾತ್ಪರ್ಯನಿರ್ಣಯ

ಒಯ್ಯುವುದು, ಬಿಡು ಎಂಬ ದ್ರೌಪದಿಯ ವಚನ, ಆಗದು ಎಂಬ ಭೀಮನ ಮಾತು, ಕೃಷ್ಣನ ಮಾತಿನಂತೆ ಮಣಿಯನ್ನು ಕಿತ್ತುಕೊಂಡು ದೇಶಭ್ರಷ್ಟನನ್ನಾಗಿಸುವುದು - ಇದೇ ಮೊದಲಾದ ಸ್ವಪ್ನದಲ್ಲಿ ಕಂಡಿದ್ದೆಲ್ಲ ಪ್ರಾಯಃ ಸತ್ಯವೇ ಆಯಿತು ಎಂದು ನೆನೆಯುತ್ತಾ ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ಅಶ್ವತ್ಥಾಮ ಕಾಡನ್ನು ಹೊಕ್ಕನು.

ವಿ: ಅಶ್ವತ್ಥಾಮ ಹೀಗೆ ಕನಸಿನಲ್ಲಿ ಕಂಡದ್ದರ ವಿವರಗಳು ಭಾಗವತಪುರಾಣದಲ್ಲಿವೆ (ಸ್ಕಂಧ ೧, ಅಧ್ಯಾಯ ೭). ಅದು ಕನಸು ಎಂಬ ಸ್ಪಷ್ಟೀಕರಣ ಸ್ಕಂದ ಪುರಾಣದಲ್ಲಿದೆ. ಸ್ಕಂದ ಪುರಾಣದ ವಚನವನ್ನು ಉಲ್ಲೇಖಿಸಿ ಮಹಾಭಾರತ, ಭಾಗವತಗಳ ವಿರೋಧವನ್ನು ಅತ್ಯಂತ ಸಮಂಜಸವಾಗಿ ಪರಿಹರಿಸಿದ ಹಿರಿಮೆ ಶ್ರೀಮನ್ಮಧ್ವಾಚಾರ್ಯರದು. ಪುರಾಣ ಪ್ರಪಂಚದ ಮರ್ಮವನ್ನು ಹೀಗೆ ಉದ್ಘಾಟಿಸಿದ ವಿಕಮಾತ್ರ ಭಾಷ್ಯಕಾರರು ಎಂಬುದು ಅವರ ಪ್ರಶಸ್ತಿ

ಅಶ್ವತ್ಥಾಮರ ಭಾವಿಸಾಧನೆ

ಸ ಕೃಷ್ಣೋಕ್ತಮಪಿ ಪ್ರಾಪ್ಯ ಬಾದರಾಯಣಶಿಷ್ಯತಾಮ್
ಪ್ರಾಪ್ಯೋತ್ತರದ್ವಾಪರೇ ಚ ವೇದಾನ್ ಸಂವಿಭಜಿಷ್ಯತಿ ॥ ೧೮೮ ॥

ಅ: ಅಶ್ವತ್ಥಾಮ ಕೃಷ್ಣ ಹೇಳಿದ್ದನ್ನೆಲ್ಲ ಅನುಭವಿಸಿ ಬಳಿಕ ವೇದವ್ಯಾಸರ ಶಿಷ್ಯತ್ವವನ್ನು ಹೊಂದಿ ಮುಂದಿನ ದ್ವಾಪರದಲ್ಲಿ ವೇದಗಳನ್ನು ವಿಭಾಗ ಮಾಡುವನು.

ವಿ: ೧) ಮುಂದಿನ ದ್ವಾಪರ ಯುಗದಲ್ಲಿ ಸಾಕ್ಷಾತ್ ವೇದವ್ಯಾಸರ ಕೃತಿಗಳನ್ನು ಉಪಜೀವಿಸಿ ಅಶ್ವತ್ಥಾಮರೇ ವೇದವಿಭಾಗಾದಿ ಕಾರ್ಯಗಳನ್ನು ಯಥೋಚಿತವಾಗಿ ಮಾಡುವರು ಎಂದರ್ಥ.

೨) ಮುಂದಿನ ದ್ವಾಪರದಲ್ಲಿ ಅಶ್ವತ್ಥಾಮರು ವ್ಯಾಸರು ಆ ಕಾರ್ಯವನ್ನು ಮಾಡುವ ಉಲ್ಲೇಖ ವಿಷ್ಣುಪುರಾಣದಲ್ಲೂ ಬಂದಿದೆ.

ಭವಿಷ್ಯೇ ದ್ವಾಪರೇ ಚಾಪಿ ದ್ರೌಣಿರ್ವ್ಯಾಸೋ ಭವಿಷ್ಯತಿ ॥

– ವಿಷ್ಣುಪುರಾಣ (೩/೩/೨೧)

---

೧೮೭. ಚಿಂತಯನ್ ಪ್ರಯಯೌ ದಾವಮಿತ್ಯತ್ರ ''ವನವಹ್ನೀ ದವೋ ದಾವೌ'' ಇತ್ಯನುಶಾಸನಾತ್ ದಾವಂ ವನಮಿತ್ಯರ್ಥಃ। ಸ ಕೃಷ್ಣೋಕ್ತಮಪಿ ಪ್ರಾಪ್ಯೇತ್ಯತ್ರ ಕೃಷ್ಣೋಕ್ತಂ ಶಾಪಫಲಂ ಪ್ರಾಪ್ಯ = ಸಹಸ್ರವರ್ಷಪರ್ಯಂತಂ ಪ್ರಾಪ್ಯ ಪುನಃ ಬಾದರಾಯಣಶಿಷ್ಯತಾಂ ಪ್ರಾಪ್ಯೇತಿ ಸಂಬಂಧಃ ॥ – (ವಾ.)

೧೮೮. ಪ್ರದಾಯಾಥ ಮಣಿಂ ದ್ರೌಣಿಃ ಪಾಂಡವಾನಾಂ ಮಹಾತ್ಮನಾಮ್ ।
ಜಗಾಮ ವಿಮನಾಸ್ತೇಷಾಂ ಸರ್ವೇಷಾಂ ಪಶ್ಯತಾಂ ವನಮ್ ॥ – ಭಾರತ (ಸೌಪ್ತಿಕ. ೧೬/೨೦)

ತತಃ ಸಪ್ತರ್ಷಿಭೂತ್ವಾ ಪಾರಾಶರ್ಯಪ್ರಸಾದತಃ ।
ಏಕೀಭಾವಂ ಸ್ವರೂಪೇಣ ಯಾಸ್ಯತ್ಯಚ್ಯುತನಿಷ್ಠಯಾ ॥ ೧೮೯ ॥

ಅ: ಬಳಿಕ ಸಪ್ತರ್ಷಿಗಳಲ್ಲಿ ಒಬ್ಬನಾಗಿ ವೇದವ್ಯಾಸರ ಅನುಗ್ರಹದಿಂದ ಕೃಷ್ಣನಿಷ್ಠೆಯ ಬಲದಿಂದಾಗಿ ತನ್ನ ಮೂಲರೂಪದೊಂದಿಗೆ ಐಕ್ಯ ಹೊಂದುವನು.

ವಿ: ಹೀಗೆ ದೀರ್ಘಕಾಲ ಭೂಮಿಯಲ್ಲಿ ಜೀವಿಸಿರುವುದರಿಂದ ಚಿರಂಜೀವಿ ಎಂಬ ಹೆಸರು ಅವರಿಗೆ ಬಂದಿತ್ತು. ಅಶ್ವತ್ಥಾಮ ತನ್ನ ತಂದೆಯಂತೆ ಶ್ರೇಷ್ಠ ಆಚಾರ್ಯಪುರುಷನಾಗಿದ್ದ ಎಂಬ ಮಾತು ಮಹಾಭಾರತದಲ್ಲಿದೆ.

ಪಾಂಡವಾಚಾರ್ಯನಾಗಿ ಕೃಪ - ದ್ವಾರಕೆಗೆ ಕೃತವರ್ಮ

ಕೃಪೋಽಥ ಪಾಂಡವಾನ್ ಪ್ರಾಪ್ಯ ಗೌರವಾತ್ ಪೂಜಿತಶ್ಚ ತೈಃ ।
ಅಭೂದಾಚಾರ್ಯ ಏವಾಸೌ ರಾಜ್ಞಾಂ ತತ್ತಂತುಭಾವಿನಾಮ್ ॥ ೧೯೦ ॥

ಅ: ಬಳಿಕ ಕೃಪ ಪಾಂಡವರ ಬಳಿಗೆ ಹೋಗಿ ಅವರಿಂದ ಗುರುಭಾವನೆಯಿಂದ ಪೂಜಿತನಾಗಿ ಅವರ ಸಂತತಿಯಲ್ಲಿ ಜನಿಸಿದ ರಾಜರಿಗೆ ಆಚಾರ್ಯನಾದ.

ವಿ: ದ್ರೋಣರಿಗಿಂತ ಮುಂಚೆ ಅಸ್ತ್ರವಿದ್ಯಾಗುರುವಾಗಿದ್ದ ಕೃಪ ಪಾಂಡವರ ಈ ರಾಜ್ಯಭಾರ ಸಮಯದಲ್ಲಿ ಅವರ ಬಳಿಗೆ ಆಗಮಿಸಿ ಮುಂದೆ ಸಾವಿರ ವರ್ಷಗಳ ಕಾಲ ರಾಜ್ಯವಾಳಿದ ಅವರ ಸಂತತಿಗೂ ಆಚಾರ್ಯನಾಗಿ ಪೂಜಿತನಾದ ಎಂದರ್ಥ :

ಜಗಾಮ ಹಾಸ್ತಿನಪುರಂ ಕೃಪಃ ಶಾರದ್ವತಸ್ತದಾ ।
ಸ್ವಮೇವ ರಾಷ್ಟ್ರಂ ಹಾರ್ದಿಕ್ಯೋ ದ್ರೌಣಿರ್ವ್ಯಾಸಾಶ್ರಮಂ ಯಯೌ॥
–ಭಾರತ (ಸ್ತ್ರೀ. ೧೧/೨೧)

ಬಾದರಾಯಣಶಿಷ್ಯತ್ವಂ ಪುನಃ ಪ್ರಾಪ್ಯ ಭಜನ್ನಮುಮ್ ।
ಸಾಕಂ ಸ್ವಭಾಗಿನೇಯೇನ ಭಾವ್ಯೇಕೋ ಮುನಿಸಪ್ತಕೇ ।
ಕೃತವರ್ಮಾ ದ್ವಾರವತೀಂ ಯಯೌ ಕೃಷ್ಣಾನುಮೋದಿತಃ ॥ ೧೯೧ ॥

---

೧೮೯. ಸಪ್ತರ್ಷಿಸಂಜ್ಞಾ ಶಬ್ದೋ ಯ ಏಕಃ ಕಶ್ಚನ ಸಪ್ತರ್ಷಿರಿತ್ಯರ್ಥಃ । – (ಜ.)

ಅ: ಬಳಿಕ ವೇದವ್ಯಾಸರ ಶಿಷ್ಯತ್ವವನ್ನು ಪುನಃ ಹೊಂದಿ ಅವರನ್ನು ಸೇವಿಸುತ್ತಾ ತನ್ನ ಸೋದರಳಿಯನೊಂದಿಗೆ ಸಪ್ತರ್ಷಿಗಳಲ್ಲಿ ಒಬ್ಬನಾಗುವನು. ಕೃತವರ್ಮ ಕೃಷ್ಣನ ಅನುಮತಿಯಿಂದ ದ್ವಾರಕೆಗೆ ತೆರಳಿದ.

ವಿ: ಪಾಂಡವ ಸಂತತಿಯ ಸಾವಿರ ವರ್ಷಗಳ ಆಳ್ವಿಕೆಯ ಅನಂತರ ಕೃಪ ವೇದವ್ಯಾಸರ ಶಿಷ್ಯತ್ವ ವಹಿಸುವನು. ಆ ವೇಳೆಗೆ ಶಾಪ ಕಳೆದು ಅವರ ಸೋದರಳಿಯ ಅಶ್ವತ್ಥಾಮನೂ ಅವರ ಜೊತೆ ವ್ಯಾಸಶಿಷ್ಯತ್ವ ವಹಿಸುವನು. ಅವರಿಬ್ಬರೂ ಮುಂದೆ ಜೊತೆಯಾಗಿಯೇ ಸಪ್ತರ್ಷಿಗಳಲ್ಲಿ ಸೇರುವರು. ಹೀಗೆ ಇಬ್ಬರ ಚಿರಂಜೀವಿತ್ವವೂ ಸಾರ್ಥಕವಾದುದು.

ಧರ್ಮರಾಜನ ಮುಡಿಯೇರಿದ ಮಣಿ

ಕೃಷ್ಣಾಯೈ ತಂ ಮಣಿಂ ದತ್ವಾ ಭೀಮಸ್ತಾಂ ಪರ್ಯಸಾಂತ್ವಯತ್ ।
ವಿಕೋಪಾ ಭೀಮವಾಕ್ಯೇನ ರಾಜ್ಞೇ ಸಾ ಚ ಮಣಿಂ ದದೌ ॥ ೧೯೨ ॥

ಅ: ಭೀಮಸೇನ ಅಶ್ವತ್ಥಾಮ ನೀಡಿದ ಆ ಮಣಿಯನ್ನು ದ್ರೌಪದಿಗೆ ನೀಡಿ ಬಹಳವಾಗಿ ಸಾಂತ್ವನಪಡಿಸಿದ. ಭೀಮನ ಮಾತಿನಿಂದ ಕೋಪ ತೊರೆದ ದ್ರೌಪದಿ ಆ ಮಣಿಯನ್ನು ಧರ್ಮರಾಜನಿಗಿತ್ತಳು.

ವಿ: ೧) ಭೀಮು ಮಣಿಯನ್ನು ದ್ರೌಪದಿಗೆ ನೀಡಿದರೆ, ದ್ರೌಪದಿ ಅದನ್ನು ಧರ್ಮರಾಜನಿಗೆ ನೀಡಿದಳು. ಹಾಗೆ ನೀಡುವ ಮೂಲಕ ಆ ಮಣಿ ತಮ್ಮಿಬ್ಬರಿಗೂ ಅನಗತ್ಯ ಎಂಬುದನ್ನು ಸೂಚಿಸಿದರು ಎಂದು ತಿಳಿಯಬೇಕು. ಸ್ವತಃ ಜೀವಮಣಿಗಳಾದ ಅವರಿಬ್ಬರಿಗೆ ಇಂತಹ ಬೇರಾವ ಮಣಿಗಳ ಅವಶ್ಯಕತೆಯೂ ಇರಲಿಲ್ಲ ಎಂಬುದು ಸ್ವರಸವೂ ಆದುದು.

---

೧೯೦. ಆಚಿನೋತಿ ಚ ಶಾಸ್ತ್ರಾರ್ಥಾನಾಚಾರಾನ್ ಗ್ರಾಹಯತ್ಯುತ । ಸ್ವಯಮಾಚರತೇ ಯಸ್ತು ತಮಾಚಾರ್ಯಂ ಪ್ರಚಕ್ಷತ ಇತ್ಯುಕ್ತಲಕ್ಷಣವಾನಾಚಾರ್ಯೋಽಭೂತ್ । – (ಜ.)

೧೯೦. ಜಗಾಮ ಹಾಸ್ತಿನಪುರಂ ಕೃಪಃ ಶಾರದ್ವತಸ್ತದಾ ॥ – ಭಾರತ (ಸ್ತ್ರೀ. ೧೧/೨೧)

೧೯೧. ಸ್ವಮೇವ ರಾಷ್ಟ್ರಂ ಹಾರ್ದಿಕ್ಯೋ..... – ಭಾರತ (ಸ್ತ್ರೀ.೧೧/೨೧)

೧೯೨. ತನ್ಮಣಿಮಿತಿ ಕೃಷ್ಣಾಪ್ತಃ । – (ಜ.)

೧೯೨. ತತೋ ರಾಜ್ಞಾऽಭ್ಯನುಜ್ಞಾತೋ ಭೀಮಸೇನೋ ಮಹಾಬಲಃ ।
ಪ್ರದದೌ ತಂ ಮಣಿಂ ದಿವ್ಯಂ ವಚನಂ ಚೇದಮಬ್ರವೀತ್ ॥ (ಇತ್ಯಾದಿ) – ಭಾರತ(ಸೌಪ್ತಿಕ. ೧೬/೨೬-೩೩)

೨) ಕೃಷ್ಣ ಸತ್ಯಭಾಮೆಯರು ಶ್ಯಮಂತಕಮಣಿಯನ್ನು ತಾವಿರಿಸಿಕೊಳ್ಳದೇ ಅಕ್ರೂರನಿಗೆ ನೀಡಿದ ಪ್ರಸಂಗವನ್ನು ಇದು ಹೋಲುವುದನ್ನು ಗಮನಿಸಬೇಕು.

ರಾಜಾರ್ಹೇ ಹಿ ಮಣೌ ದತ್ತೇ ಮಹ್ಯಂ ಭೀಮೇನ ಲೌಕಿಕಾಃ ।
ಸ್ತ್ರೀಪಕ್ಷಪಾತಂ ರಾಜಾ ಚ ಶಂಕೇಯುರ್ಮಾರುತೇರಿತಿ ॥ ೧೯೩ ॥

ಮಣಿಂ ರಾಜ್ಞೇ ದದೌ ಕೃಷ್ಣಾ ಭರ್ತೃಪ್ರಿಯಹಿತೇ ರತಾ ।
ಸೋಽಪ್ಯಾಬಧ್ಯ ಮಣಿಂ ಮೂರ್ಧ್ನಿ ರೇಜೇ ರಾಜಾ ಗವಾಮಿವ ॥ ೧೯೪ ॥

ಅ: ರಾಜಯೋಗ್ಯವಾದ ಆ ಮಣಿಯನ್ನು ಭೀಮ ತನಗೆ ನೀಡಿದರೆ ಸಾಮಾನ್ಯ ಜನರೂ, ಧರ್ಮರಾಜನೂ ಅವನಿಗೆ ಸ್ತ್ರೀಪಕ್ಷಪಾತವನ್ನು ಶಂಕಿಸಬಹುದೆಂದು ದ್ರೌಪದಿ ಆ ಮಣಿಯನ್ನು ಧರ್ಮರಾಜನಿಗೇ ನೀಡಿದಳು. ಅವಳು ಸದಾ ಪತಿಗೆ ಪ್ರಿಯವನ್ನೂ ಹಿತವನ್ನೂ ಮಾಡುವುದ-ರಲ್ಲೇ ತೊಡಗಿದವಳು. ಧರ್ಮರಾಜ ಆ ಮಣಿಯನ್ನು ಶಿರಸ್ಸಿನಲ್ಲಿ ಧರಿಸಿ ಸೂರ್ಯನಂತೆ ಕಂಗೊಳಿಸಿದ.

ವಿ: ೧) ದ್ರೌಪದಿ ಹಾಗೆ ಮಾಡುವ ಮೂಲಕ ಭೀಮನ ಕೀರ್ತಿವೃದ್ಧಿಗೆ ಕಾರಣಳಾದಳು ಎಂದರ್ಥ. ಹಾಗೆ ಗಂಡನಿಗೆ ಹಿತವೂ ಪ್ರಿಯವೂ ಆದಂತೆ ನಡೆದುಕೊಳ್ಳುವುದೇ ಪರಮ ಪಾತಿವ್ರತ್ಯದ ಮುಖ್ಯಲಕ್ಷಣ ಎಂದು ಸೂಚಿಸಿದರು ಎಂದೂ ತಿಳಿಯಬಹುದು (೨೩/೧೦).

೨) ಕೃಷ್ಣ ಶಂಖಚೂಡನನ್ನು ಕೊಂದು ಅವನಲ್ಲಿದ್ದ ಮಣಿಯನ್ನು ಅಣ್ಣನಾದ ಬಲರಾಮನಿಗೆ ನೀಡಿದಂತೆ, ಅಶ್ವತ್ಥಾಮನಿಂದ ತೆಗೆದುಕೊಂಡಿದ್ದ ಮಣಿಯನ್ನು ಕೊನೆಗೆ ಹೀಗೆ ಅಣ್ಣನಾದ ಧರ್ಮರಾಜನಿಗೆ ತಲುಪಿಸುವ ಮೂಲಕ ಭೀಮ ಕೃಷ್ಣನ ಆದರ್ಶವನ್ನೇ ಪಾಲಿಸಿದ. ಮುಖ್ಯಪ್ರಾಣನಾದ ತಾನು ಶ್ರೀಹರಿಯ ಮುಖ್ಯಪ್ರತಿಬಿಂಬ ಎಂಬುದನ್ನೂ ಹೀಗೆ ನಿರೂಪಿಸಿದ ಎಂದೂ ತಿಳಿಯಬಹುದು.

---

೧೯೩. ಲೌಕಿಕಾಃ ಭಾರ್ಯಾದಿಲೋಕಸಂಬಂಧಿನಃ ಭಾರ್ಯಾದಿಲೋಕಪಕ್ಷಪಾತಿನ ಇತಿ ಯಾವತ್ ॥ – (ಸ.)

೧೯೪. ರಾಜಾ ಗವಾಮಿವೇತ್ಯತ್ರ ಗವಾಂ = ರಶ್ಮೀನಾಂ ರಾಜೇವ= ಸೂರ್ಯ ಇವ ॥ – (ವಾ.)

೧೯೪. ರಾಜೇವ ಸೂರ್ಯ ಇವ । – (ಜ.)

೧೯೪. ತತೋ ದಿವ್ಯಂ ಮಣಿವರಂ ಶಿರಸಾ ಧಾರಯನ್ ಪ್ರಭುಃ ।
ಶುಶುಭೇ ಸ ತದಾ ರಾಜಾ ಸಚಂದ್ರ ಇವ ಪರ್ವತಃ ॥ – ಭಾರತ (ಸೌಪ್ತಿಕ. ೧೬/೩೬)

ಪಾಂಡವರ ಪುರಪ್ರವೇಶ

ವೇದೇಶ್ವರೇಣಾಪಿ ಯದೂತ್ತಮೇನ
ಕೃಷ್ಣೇನ ಯುಕ್ತಾಸ್ತತ ಆಶು ಪಾರ್ಥಾಃ ।
ಯಯುಃ ಸಭಾರ್ಯಾ ನಿಜರಾಜಧಾನೀಂ
ಹತ್ವೈವ ಸಂತೋಽಂತರರೀನ್ ಸ್ವರಾಜ್ಯಮ್ ॥ ೧೯೫ ॥

ಅ: ವೇದವ್ಯಾಸರಿಂದಲೂ, ಕೃಷ್ಣನಿಂದಲೂ ಕೂಡಿದ ಪಾಂಡವರು ಸಪತ್ನೀಕರಾಗಿ, ಸಜ್ಜನರು ಅಂತಃಶತ್ರುಗಳನ್ನು ಗೆದ್ದು ಹೇಗೋ ಹಾಗೆ ತಮ್ಮ ರಾಜಧಾನಿಯನ್ನು ಪ್ರವೇಶಿಸಿದರು.

ಪುಡಿಯಾದ ಭೀಮ ವಿಗ್ರಹ

ಯುಧಿಷ್ಠಿರಸ್ಯಾನು ವಿಚಿತ್ರವೀರ್ಯ-
ಸುತಸ್ಯ ಪಾದಾವಭಿವಂದಮಾನಮ್ ।
ಆಕೃಷ್ಯ ಭೀಮಂ ಪರಮೇಶ್ವರೋಽಯೋ-
ಮಯಾಕೃತಿಂ ಧಾತ್ ಪುರತೋ ನೃಪಸ್ಯ ॥ ೧೯೬ ॥

ಅ: ಧರ್ಮರಾಜನ ಬಳಿಕ ಭೀಮ ಧೃತರಾಷ್ಟ್ರನ ಪಾದಗಳಿಗೆ ವಂದಿಸಹೊರಟಾಗ ಪರಮೇಶ್ವರನಾದ ಕೃಷ್ಣ ಭೀಮನನ್ನು ಹಿಂದಕ್ಕೆ ಸೆಳೆದು, ಅವನ ಸ್ಥಾನದಲ್ಲಿ ಉಕ್ಕಿನ ಆಕೃತಿಯನ್ನು ಧೃತರಾಷ್ಟ್ರನ ಮುಂದೆ ನಿಲ್ಲಿಸಿದ.

ಧೃತರಾಷ್ಟ್ರನ ಕಪಟಶೋಕ

ಭೀಮಾಕೃತಿಂ ತಾಂ ಸ ಸುಯೋಧನೇನ
ಕಾರಾಪಿತಾಮಭ್ಯಸನೇ ಗದಾಯಾಃ ।
ಆಶ್ಲಿಷ್ಯ ಚೂರ್ಣೀಕೃತವಾನಸೃಗ್ವಮನ್
ಹಾ ತಾತ ಭೀಮೇತಿ ವದನ್ ಪಪಾತ ॥ ೧೯೭ ॥

---

೧೯೫. ಅಂತರರೀನ್ ಸ್ವರಾಜ್ಯಮಿತ್ಯತ್ರ ಸಂತಃ ಅಂತರರೀನ್ ಕಾಮಾದೀನ್ ಹತ್ವಾ ಸ್ವರಾಜ್ಯಂ ಸ್ವತಂತ್ರ-ಪರಮಾತ್ಮನೋ ರಾಜ್ಯಂ ಮೋಕ್ಷಮಿವ ॥ – (ವಾ.)

೧೯೬. ತಸ್ಯ ಸಂಕಲ್ಪಮಾಜ್ಞಾಯ ಭೀಮಂ ಪ್ರತ್ಯಶುಭಂ ಹರಿಃ ।
ಭೀಮಮಾಕ್ಷಿಪ್ಯ ಪಾಣಿಭ್ಯಾಂ ಪ್ರದದೌ ಭೀಮಮಾಯಸಮ್ ॥ – ಭಾರತ (ಸ್ತ್ರೀಪರ್ವ ೧೨/೧೫)

ಅ: ಆ ಭೀಮನ ಆಕೃತಿ ದುರ್ಯೋಧನ ಗದಾಭ್ಯಾಸಕ್ಕಾಗಿ ಮಾಡಿಸಿಕೊಂಡಿದ್ದು. ಅದನ್ನು ಆಲಿಂಗಿಸಿ, ಧೃತರಾಷ್ಟ್ರ ಪುಡಿ ಮಾಡಿದ. ರಕ್ತಕಾರುತ್ತಾ ''ಹಾ ಮಗು! ಭೀಮ!'' ಎಂದು ಕೂಗುತ್ತಾ ಬಿದ್ದುಬಿಟ್ಟ.

ವಿ: ೧) ತನ್ನ ಮಕ್ಕಳನ್ನೆಲ್ಲ ಕೊಂದಿರುವನೆಂಬ ಕೋಪದಿಂದ ಧೃತರಾಷ್ಟ್ರ, ಭೀಮನೆಂದೇ ತಿಳಿದು ಆ ಭೀಮಾಕೃತಿಯನ್ನು ಗಟ್ಟಿಯಾಗಿ ಆಲಿಂಗಿಸಿಕೊಂಡುಬಿಟ್ಟ. ಆದರೆ ಅದು ಕಬ್ಬಿಣದ ಪ್ರತಿಮೆಯಾದ್ದರಿಂದ ಪುಡಿಯಾಗಿಹೋಯಿತು. ಆ ಕಬ್ಬಿಣದ ಪ್ರತಿಮೆ ಭೀಮನನ್ನು ಕೊಲ್ಲಲು ಸಾಧ್ಯವಾಗಲೆಂದು ದುರ್ಯೋಧನ ಅಭ್ಯಾಸಕ್ಕೆಂದು ಮಾಡಿಸಿಕೊಂಡಿದ್ದ ಪ್ರತಿಮೆ :

೨) ಕಬ್ಬಿಣದ ಪ್ರತಿಮೆಯನ್ನು ಹಾಗೆ ಪುಡಿಮಾಡಲು ಸಾಧ್ಯವಾಗಲು ಅವನೊಳಗಿದ್ದ ವಾಯುದೇವರ ಆವೇಶವೇ ಕಾರಣವಾಗಿತ್ತು ಎಂದು ತಿಳಿಯಬೇಕು (೧೧/೧೨೯). ಅದು ನಿಜವಾದ ಭೀಮನೇ ಎಂದು ಭ್ರಮಿಸಿದ ಧೃತರಾಷ್ಟ್ರ, ಭೀಮ ಸತ್ತನೆಂದು ತಿಳಿದು, ಹಾಗೆ ಕೂಗುತ್ತಾ ಬಿದ್ದ ಎಂದರ್ಥ. ಅವನು ಆಲಿಂಗನ ಮಾಡಿಕೊಂಡ ರಭಸದಿಂದಾಗಿ ಅವನ ಬಾಯಿಂದ ರಕ್ತಸುರಿದು, ಕೆಳಗೆ ಬಿದ್ದ ಎಂದರ್ಥ.

೩) ಸಮಸ್ತದೈತ್ಯವೃಂದ ಮುಖ್ಯಪ್ರಾಣನ ಮೇಲೆ ನುಗ್ಗಿದಾಗ, ಅವನಿಗೆ ಏನೂ ಆಗದೆ, ಆ ದೈತ್ಯವೃಂದವೇ ಬಂಡೆಯ ಮೇಲೆ ಬಿದ್ದ ಮಣ್ಣಿನ ಹೆಂಟೆಯಂತೆ ಪುಡಿಯಾಯಿತು ಎಂಬ ವಿವರ

---

೧೯೭. ಕಾರಾಪಿತಾಮಿತ್ಯತ್ರಾಕಾರಯಕಾರಲಕ್ಷಣಾಧಿಕವರ್ಣದ್ವಯಪ್ರಯೋಗಃ ಭೀಮಾಕೃತಿಕಾರಯಿತೃತ್ವಕಾರಣೇ-ಭೂತೋ ದುರ್ಯೋಧನನಿಷ್ಠೋ ಭೀಮದ್ವೇಷಃ ಲಾಕ್ಷಾಗೃಹಾದಿಕಾರಯಿತೃತ್ವಕಾರಣೇಭೂತದ್ವೇಷಾಪೇಕ್ಷ-ಯಾऽಧಿಕಃ । ಅತ ಏವ ದುರ್ಯೋಧನನಿಷ್ಠಲಾಕ್ಷಾಗೃಹಾದಿಕಾರಯಿತೃತ್ವಾಪೇಕ್ಷಯಾ ದುರ್ಯೋಧನನಿಷ್ಠಂ ಭೀಮಾಕೃತಿಕಾರಯಿತೃಮಧಿಕಮಿತಿ ಜ್ಞಾಪನಾರ್ಥಃ । ಏತೇನ ಸುಯೋಧನೇನ ಕಾರಿತಾಮಿತಿ ವಕ್ತವ್ಯಂ ಕಾರಾಪಿತಾಮಿ-ತ್ಯಾಕಾರಯಕಾರಲಕ್ಷಣಾಧಿಕವರ್ಣದ್ವಯಪ್ರಯೋಗೋ ವ್ಯರ್ಥ ಇತಿ ದೂಷಣಂ ಪರಿಹೃತಮ್ । ಅಧಿಕ್ಯೇऽಧಿಕಮಿತಿ ವಚನಾನುಸಾರೇಣ ದುರ್ಯೋಧನನಿಷ್ಠಲಾಕ್ಷಾಗೃಹಾದಿಕಾರಯಿತೃತ್ವಾಪೇಕ್ಷಯಾ ದುರ್ಯೋಧನನಿಷ್ಠಂ ಭೀಮಾಕೃತಿ-ಕಾರಯಿತೃತ್ವಮಧಿಕಮಿತಿ ಜ್ಞಾಪನಾರ್ಥಮಾಕಾರಯಕಾರಲಕ್ಷಣಾಧಿಕವರ್ಣದ್ವಯಂ ಪ್ರಯುಕ್ತಮಿತ್ಯುಪಗಮಾತ್ ॥ – (ಸ.)

೧೯೭. ನಾಗಾಯುತಬಲಪ್ರಾಣಃ ಸ ರಾಜಾ ಭೀಮಮಾಯಸಮ್ ।
ಭಂಕ್ತ್ವಾ ವಿಮಥಿತೋರಸ್ಕಃ ಸುಸ್ರಾವ ರುಧಿರಂ ಮುಖಾತ್ ।
ತತಃ ಪಪಾತ ಮೇದಿನ್ಯಾಂ ತಥೈವ ರುಧಿರೋಕ್ಷಿತಃ ॥
ಹಾ ಹಾ ಭೀಮೇತಿ ಚುಕ್ರೋಶ ನೃಪಃ ಶೋಕಸಮನ್ವಿತಃ ॥ – ಭಾರತ (ಸ್ತ್ರೀ. ೧೨/೧೭,೧೮,೨೧)

ಆಯಸೇ ಪುರುಷೇ ರಾಜನ್ ಭೀಮಸೇನಜಿಘಾಂಸಯಾ ।
ಕಥಂ ನಾಮ ಭವೇತ್ ಕಾರ್ಯಮಸ್ಮಾಭಿರ್ಭರತರ್ಷಭ ॥ – ಭಾರತ (ಶಲ್ಯ. ೩೩/೫)

ಛಾಂದೋಗ್ಯೋಪನಿಷತ್ತಿನಲ್ಲಿ ಬಂದಿದೆ. ಎಂದರೆ ಮುಖ್ಯಪ್ರಾಣ 'ಆಖಣಾಶ್ಮಸಮ'. ಅಂತಹ ಮುಖ್ಯಪ್ರಾಣನನ್ನು ಧೃತರಾಷ್ಟ್ರ ಏನು ಮಾಡಬಲ್ಲ ಎಂದು ತಿಳಿಯಬೇಕು.

೪) ಸಮುದ್ರಮಥನಕಾಲದಲ್ಲಿ ಧನ್ವಂತರಿರೂಪದ ಶ್ರೀಹರಿ ತನ್ನ ಕೈಯಲ್ಲಿದ್ದ ಅಮೃತಕಲಶವನ್ನು ಕಿತ್ತಿಕೊಳ್ಳಲು ಅಸುರರಿಗೆ ಅವಕಾಶ ನೀಡಿದ ಪ್ರಸಂಗವೂ ಇಂತಹುದೇ ಎಂಬುದನ್ನು ಗಮನಿಸಬೇಕು :

'ಸತ್ಯಚ್ಯುತಾನ್ ಕಾರಯತಾ ವಧಾಯ' (೧೦/೨೨)

೫) 'ಕಾರಿತಾಂ' ಎಂಬುದರ ಬದಲಾಗಿ 'ಕಾರಾಪಿತಾಂ' ಎಂದು ಆಕಾರ ಮತ್ತು ಪಕಾರ ಎಂಬ ಎರಡು ಅಕ್ಷರಗಳನ್ನು ಹೆಚ್ಚಾಗಿ ಪ್ರಯೋಗಿಸಿರುವುದು ದುರ್ಯೋಧನನಿಗೆ ಭೀಮನ ಮೇಲಿದ್ದ ಕೋಪಾಧಿಕ್ಯವನ್ನು ಸೂಚಿಸಲೆಂದು ಎಂಬ ವಿಶೇಷಾಂಶ ಸತ್ಯಾಭಿನವೀಯದಲ್ಲಿದೆ.

ಭೀಮನನ್ನು ಕೊಲ್ಲುವುದು ಸರ್ವಥಾ ಅಶಕ್ಯ

ತಮಾಹ ಕೃಷ್ಣೋ ನ ಹತೋಽದ್ಯ ಭೀಮೋ
ನ ಚ ತ್ವಯಾಽನ್ಯೈರಪಿ ಶಕ್ಯತೇಽಸೌ ।
ಹಂತುಂ ಸ್ವಬುದ್ಧಿಃ ಪ್ರಥಿತಾ ತ್ವಯಾಽದ್ಯ
ಪಾಪಾ ಹಿ ತೇ ಬುದ್ಧಿರದ್ಯಾಪಿ ರಾಜನ್ ॥ ೧೯೮ ॥

ಅ: ಕೃಷ್ಣ ಅವನಿಗೆ ತಿಳಿಸಿದ : ''ಈಗ ಭೀಮ ಸತ್ತಿಲ್ಲ. ನಿನ್ನಿಂದಾಗಲೀ, ಬೇರೆ ಯಾರಿಂದಲಾದರಾಗಲೀ ಭೀಮನನ್ನು ಕೊಲ್ಲುವುದು ಶಕ್ಯವಲ್ಲ. ನಿನ್ನ ಬುದ್ಧಿ ಏನೆಂದು ತಿಳಿಯಿತು. ರಾಜನೆ! ನಿನ್ನ ಬುದ್ಧಿ ಈಗಲೂ ಕೆಟ್ಟದಾಗಿಯೇ ಇದೆಯಲ್ಲ?''.

ವಿ: ಕೃಷ್ಣ ತಿಳಿಸಿದ ಈ ಮಾತು ತುಂಬಾ ಅಪೂರ್ವವಾದುದು. ಭೀಮನನ್ನು ಸಂಹರಿಸಲು ಧೃತರಾಷ್ಟ್ರಾದಿ ಯಾರಿಗೂ ಸಾಧ್ಯವಲ್ಲ. ಧೃತರಾಷ್ಟ್ರ ಪುಡಿಮಾಡಿದ್ದು ಕಬ್ಬಿಣದ ಪ್ರತಿಮೆಯನ್ನು. ಆದರೆ ಭೀಮನದು ವಜ್ರಕಾಯವೆಂಬುದು ಅವನು ಹುಟ್ಟಿದ ಕೆಲವೇ ದಿನಗಳಲ್ಲಿ ಶತಶೃಂಗ ಪರ್ವತವನ್ನು ಪುಡಿಮಾಡಿದಾಗಲೇ ಸ್ಪಷ್ಟವಾಗಿದೆ. ಎಂದರೆ ಧೃತರಾಷ್ಟ್ರನ ಆಲಿಂಗನದಿಂದ ಭೀಮನಿಗೆ ಸರ್ವಥಾ ಅಪಾಯವಿಲ್ಲ. ನಿಜವಾದ ಭೀಮನನ್ನು ಆಲಿಂಗಿಸಿದಾಗ, ಅವನಿಗೆ ಏನೂ ಆಗದೇ ಇರುತ್ತಿದ್ದುದರಿಂದ ಜನರಿಗೆ ಧೃತರಾಷ್ಟ್ರನ ದುರ್ಬುದ್ಧಿ ತಿಳಿಯುತ್ತಿರಲಿಲ್ಲ. ಉಕ್ಕಿನ ಪ್ರತಿಮೆಯನ್ನು ಪುಡಿಮಾಡುವಷ್ಟು ಜೋರಾಗಿ ಧೃತರಾಷ್ಟ್ರ ಆಲಿಂಗನ ಮಾಡಿಕೊಳ್ಳುವ ಮೂಲಕ ತನ್ನ ಕೆಟ್ಟ ಬುದ್ಧಿಯನ್ನು ಇನ್ನೂ ಬಿಟ್ಟಿಲ್ಲ ಎಂದು ಜನ ತಿಳಿಯಲೆಂದೇ ಕೃಷ್ಣ ಹಾಗೆ ಮಾಡಿದ್ದ ಎಂಬ

ವಿವರ ಮುಂದೆ ಬಂದಿದೆ (ಶ್ಲೋ. ೨೦೧). ಕುಮಾರವ್ಯಾಸ ಮೊದಲಾದವರು ಭೀಮನನ್ನು ಕಾಪಾಡಲೆಂದು ಕೃಷ್ಣ ಹಾಗೆ ಮಾಡಿದ ಎಂದು ಬರೆದಿರುವುದು ಮೂಲಭಾರತಕ್ಕೆ ಅನುಗುಣ-ವಾದುದಲ್ಲ (ಗದಾಪರ್ವ, ಸಂಧಿ ೧೧, ಪದ್ಯ ೩೯-೪೧).

ಮೂಲಭಾರತದಲ್ಲಿ ಸ್ಪಷ್ಟವಾಗಿ ಕೃಷ್ಣ ಧೃತರಾಷ್ಟ್ರನಿಗೆ ''ನಿನ್ನಿಂದ ಭೀಮನನ್ನು ಕೊಲ್ಲಲು ಅಸಾಧ್ಯ'' ಎಂದೇ ತಿಳಿಸಿರುವನು :

ನ ತ್ವೇತತ್ ತೇ ಕ್ಷಮಂ ರಾಜನ್ ಹನ್ಯಾತ್ತ್ವಂ ಯದ್ವೃಕೋದರಮ್ ॥

– ಭಾರತ (ಸ್ತ್ರೀ. ೧೨/೨೯)

ಶ್ರೀಕೃಷ್ಣನ ಹಿತೋಕ್ತಿ

ಸ್ವಬುದ್ಧಿದೋಷಾದತಿಪಾಪಶೀಲ-
ಪುತ್ರಾಖ್ಯಪಾಪಾನಿ ವಿವರ್ಧಯಿತ್ವಾ।
ನೀತೋ ವಶಂ ತೈಃ ಫಲಮದ್ಯ ಭುಂಜನ್
ನ ಕ್ರೋಧಿತುಂ ಚಾರ್ಹಸಿ ಭೀಮಸೇನೇ ॥ ೧೯೯ ॥

ಅ: ನಿನ್ನ ಬುದ್ಧಿದೋಷದಿಂದ ಅತ್ಯಂತಪಾಪಸ್ವಭಾವದ ನಿನ್ನ ಪುತ್ರರೆನ್ನಿಸಿಕೊಂಡವರ ಪಾಪಗಳನ್ನು ಪೋಷಿಸಿ, ಅವರಿಗೆ ವಶನಾದೆ. ಅದರ ಫಲವನ್ನು ನೀನೀಗ ಅನುಭವಿಸುತ್ತಿರುವಿ. ಭೀಮನಲ್ಲಿ ಕೋಪಗೊಳ್ಳುವುದು ತರವಲ್ಲ.

ವಿ: ''ನಿನ್ನ ಮಕ್ಕಳು ಸತ್ತದ್ದು ಅವರ ಪಾಪದ ಫಲ. ಅವರ ಪಾಪಕರ್ಮಗಳಿಗೆ ಉತ್ತೇಜನ ನೀಡಿದ್ದು ನಿನ್ನ ತಪ್ಪು. ಇದನ್ನು ತಿಳಿಯದೆ ಭೀಮನ ಮೇಲೆ ಕೋಪಗೊಳ್ಳುವುದು ಸ್ವಲ್ಪವೂ ಸರಿಯಲ್ಲ'' ಎಂದು ತಿಳುವಳಿಕೆ ನೀಡಿದ ಎಂದರ್ಥ.

ಶಾಂತನಾದ ಧೃತರಾಷ್ಟ್ರ

ಇತ್ಯುಕ್ತೇ ಶಾಂತಬುದ್ಧ್ಯೈವ ರಾಜ್ಞಾऽऽಹೂತೋ ವೃಕೋದರಃ।
ಅಭ್ಯವಂದತ ತತ್ಪಾದಾವನುಜಾದ್ಯಾಶ್ಚ ತಸ್ಯ ಯೇ ॥ ೨೦೦ ॥

ಅ: ಶ್ರೀಕೃಷ್ಣ ಹೀಗೆ ತಿಳಿಸಿದಾಗ, ಧೃತರಾಷ್ಟ್ರ ಶಾಂತಬುದ್ಧಿಯಿಂದಲೇ ಭೀಮನನ್ನು ಕರೆದ. ಭೀಮ ಅವನ ಪಾದಗಳಿಗೆ ವಂದಿಸಿದ. ಅವನ ತಮ್ಮಂದಿರು ಮೊದಲಾದವರೂ ಸಹ ಅವನಿಗೆ ವಂದಿಸಿದರು.

ವಿಃ ಕೃಷ್ಣನ ಹಿತೋಕ್ತಿಯಿಂದ ಧೃತರಾಷ್ಟ್ರನ ದ್ವೇಷಭಾವ ಪರಿಹಾರವಾಯಿತು ಎಂದರ್ಥ. ಇಲ್ಲಿ ಭೀಮು ಧೃತರಾಷ್ಟ್ರನಿಗೆ ನಮಸ್ಕಾರ ಮಾಡಿದನು ಎಂದರೆ ಧೃತರಾಷ್ಟ್ರನೊಳಗಿನ ಶ್ರೀಹರಿಗೆ ವಂದಿಸಿದನೆಂದೇ ಅರ್ಥ. ಆ ವಿವರ ಈಗಾಗಲೇ ಬಂದಿದೆ (೧೮/೧೪, ೧೫). ಇದರಂತೆ ಭೀಮು ಲಕ್ಷ್ಮೀನಾರಾಯಣರ ಹೊರತು ಇತರರಿಗೆ ವಂದಿಸಿದ ಪ್ರಸಂಗಗಳನ್ನೆಲ್ಲ ತಿಳಿದುಕೊಳ್ಳಬೇಕು.

ವಜ್ರಾಚ್ಚ ದೃಢದೇಹತ್ವಾದವಿಕಾರೇ ವೃಕೋದರೇ ।
ನ ದೋಷೋ ವಿವೃತೋಽಸ್ಯ ಸ್ಯಾದಿತಿ ಕೃಷ್ಣೇನ ವಂಚಿತಃ ॥ ೨೦೧ ॥

ಅ: ಭೀಮ ವಜ್ರಕ್ಕಿಂತಲೂ ಗಟ್ಟಿಯಾದ ದೇಹದವನು. ಅವನನ್ನು ಆಲಿಂಗಿಸಿಕೊಂಡಿದ್ದರೆ, ಅವನಿಗೆ ಯಾವ ವಿಕಾರವೂ ಆಗುತ್ತಿರಲಿಲ್ಲವಾದ್ದರಿಂದ ಧೃತರಾಷ್ಟ್ರನ ದೋಷ ಪ್ರಕಟವಾಗುತ್ತಿರಲಿಲ್ಲ. ಅದರಿಂದಾಗಿ ಕೃಷ್ಣ ಹೀಗೆ ಅವನನ್ನು ಮೋಸಗೊಳಿಸಿದ.

ವಿಃ ಶ್ರೀಕೃಷ್ಣ ಮೋಸಗೊಳಿಸಿದ್ದು ಎಂದರೆ ನಿಜವಾದ ಭೀಮನ ಬದಲು ಆ ಭೀಮಾಕೃತಿಯನ್ನು ಇಟ್ಟಿದ್ದು ಎಂದರ್ಥ. ಅದು ಧೃತರಾಷ್ಟ್ರನ ಹಿತಕ್ಕಾಗಿ ಮಾಡಿದ ಕಾರ್ಯವಾದ್ದರಿಂದ ದೋಷರೂಪ ವಂಚನೆಯಲ್ಲ ಎಂದು ತಿಳಿಯಬೇಕು.

ಕುನಖಿನಾದ ಧರ್ಮರಾಜ

ಸರ್ವಾನಾಶ್ಲಿಷ್ಯ ಚ ಪ್ರೇಮ್ಣಾ ಯುಯೋಜ ನೃಪ ಆಶಿಷಃ ।
ಕುಲನಾಶಕರಃ ಪಾಪಃ ಶಾಪಯೋಗ್ಯಸ್ತವ ಹ್ಯಹಮ್ ॥ ೨೦೨ ॥

ಇತ್ಯುಕ್ತ್ವೈವ ಪ್ರಣಮತೋ ಗಾಂಧಾರೀ ಸುಪದಾಂಗುಲೀಃ ।
ದದರ್ಶ ಧರ್ಮರಾಜಸ್ಯ ಪಟಾಂತೇನ ಪ್ರಕೋಪಿತಾ ।
ತಸ್ಯಾಃ ಕ್ರೋಧಾಗ್ನಿನಿರ್ದಗ್ಧನಖಿಃ ಸ ಕುನಖೋಽಭವತ್ ॥ ೨೦೩ ॥

---

೨೦೨. ತತಃ ಸ ಭೀಮಂ ಚ ಧನಂಜಯಂ ಚ ಮಾದ್ರ್ಯಾಶ್ಚ ಪುತ್ರೌ ಪುರುಷಪ್ರವೀರೌ ।
ಪಸ್ಪರ್ಶ ಗಾತ್ರೈಃ ಪ್ರರುದನ್ ಸುಗಾತ್ರಾನಾಶ್ವಾಸ್ಯ ಕಲ್ಯಾಣಮುವಾಚ ಚೈತಾನ್ ॥ – ಭಾರತ (ಸ್ತ್ರೀ.೧೩/೧೭)

೨೦೨. ಪುತ್ರಹಂತಾ ನೃಶಂಸೋಽಹಂ ತವ ದೇವಿ ಯುಧಿಷ್ಠಿರಃ ।
ಶಾಪಾರ್ಹಃ ಪೃಥಿವೀನಾಶೇ ಹೇತುಭೂತಃ ಶಪಸ್ವ ಮಾಮ್ ॥
(ಇತ್ಯಾದಿ ಯುಧಿಷ್ಠಿರನ ವಚನ) – ಭಾರತ (ಸ್ತ್ರೀ. ೧೫/೨೫/೨೭)

ಅ: ಧೃತರಾಷ್ಟ್ರ ಪ್ರೀತಿಯಿಂದ ಎಲ್ಲರನ್ನೂ ಆಲಿಂಗಿಸಿಕೊಂಡು, ಆಶೀರ್ವದಿಸಿದ. ''ನಾನು ಕುಲಕ್ಕೆ ನಾಶ ಉಂಟುಮಾಡಿದ ಪಾಪಿ, ನಿನ್ನ ಶಾಪಕ್ಕೆ ಅರ್ಹ'' ಎಂದು ಧರ್ಮರಾಜ ಗಾಂಧಾರಿಗೆ ವಂದಿಸಿದಾಗ, ಅವಳು ಕೋಪಗೊಂಡವಳಾಗಿ ಕಣ್ಣಿಗೆ ಕಟ್ಟಿದ್ದ ಬಟ್ಟೆಯ ತುದಿಯಿಂದ ಧರ್ಮರಾಜನ ಪಾದದ ಸುಂದರವಾದ ಬೆರಳುಗಳನ್ನು ನೋಡಿದಳು. ಅವಳ ಕೋಪದ ಬೆಂಕಿಯಿಂದಾಗಿ ಧರ್ಮರಾಜನ ಉಗುರುಗಳು ಸುಟ್ಟುಹೋಗಿ, ಅವನು ಕಪ್ಪು ಉಗುರಿನವನಾದ.

ಎ: ಧೃತರಾಷ್ಟ್ರ ಅಷ್ಟು ಕೋಪದಿಂದ ಆಲಿಂಗಿಸಿಕೊಂಡರೂ, ಭೀಮನಿಗೆ ಯಾವ ವಿಕಾರವೂ ಆಗುತ್ತಿರಲಿಲ್ಲ. ಆದರೆ ಗಾಂಧಾರಿ ಕೋಪದ ಕಣ್ಣಿಂದ ನೋಡಿದಾಗ, ಧರ್ಮರಾಜನ ಉಗುರುಗಳು ಸುಟ್ಟುಹೋದವು. ಇದರಿಂದ ಧರ್ಮರಾಜನ ದೇಹ ಭೀಮನ ದೇಹದಂತೆ ವಜ್ರದೇಹವಲ್ಲ ಎಂಬುದು ಸ್ಪಷ್ಟಪಡುವುದು.

ಭೀಮನಿಂದ ಗಾಂಧಾರಿಯ ಸಾಂತ್ವನ

ವಂದಮಾನಂ ಪುನರ್ಭೀಮಮಾಹ ಸಾ ಕ್ರೋಧವಿಹ್ವಲಾ ।
ಅಧರ್ಮತಃ ಕಥಂ ಭೀಮ ಸುತಂ ಮೇ ತ್ವಂ ನಿಜಘ್ನಿವಾನ್ ॥ ೨೦೪ ॥

ಅ: ತನಗೆ ನಮಸ್ಕರಿಸಬಂದ ಭೀಮನಿಗೆ ಗಾಂಧಾರಿ ಕ್ರೋಧದಿಂದ ನೊಂದವಳಾಗಿ ಕೇಳಿದಳು: ''ಭೀಮ! ನೀನು ಹೇಗೆ ನನ್ನ ಮಗನನ್ನು ಅಧರ್ಮದಿಂದ ಕೊಂದೆ?''

ಇತ್ಯುಕ್ತೇऽಸ್ಯಾಃ ಶಮಯಿತುಂ ಕ್ರೋಧಮಗ್ರೇ ವೃಕೋದರಃ ।
ಪ್ರಾಹ ನ ಪ್ರಾಣಸಂದೇಹೇ ಪಾಪಂ ಸ್ಯಾತ್ ಪಾಪಿನೋ ವಧೇ ॥ ೨೦೫ ॥

ಅ: ಅವಳು ಹೀಗೆ ಕೇಳಲು, ಮೊದಲಿಗೆ ಅವಳ ಕೋಪವನ್ನು ಶಮನಗೊಳಿಸಲೆಂದು ಭೀಮಸೇನ ಹೇಳಿದ : ''ಪ್ರಾಣಾಪತ್ತು ಒದಗಿದಾಗ ಪಾಪಿಯನ್ನು ಅಧರ್ಮದಿಂದ ಕೊಂದರೂ ಪಾಪ ಒದಗದು''.

೨೦೩.. ಪಟಾಂತೇನೈವ ಪಟೀನಾಚ್ಛಾದಿತನೇತ್ರಾಂತಭಾಗೇನೈವ ದದರ್ಶೇತಿ ॥ – (ಸ.)

೨೦೩.. ಅಂಗುಲ್ಯಗ್ರಾಣಿ ದದೃಶೇ ದೇವೀ ಪಟ್ಟಾಂತರೇಣ ಸಾ ।
ತತಃ ಸ ಕುನಖೀಭೂತೋ ದರ್ಶನೀಯನಖೋ ನೃಪಃ ॥ - ಸ್ತ್ರೀ. ೧೫/೩೦

೨೦೫. ಏತೇನೈವ ಭೀಮಸ್ಯ ಪ್ರಾಣಸಂದೇಹಾಭಾವಾತ್ ಪ್ರಾಣಸಂದೇಹ ಇತಿ ಪ್ರಾಣಸಂದೇಹಕಥನಮನುಪಪನ್ನಮಿತಿ ದೂಷಣಂ ಪರಾಸ್ತಮ್ । ಪ್ರಾಣಶಬ್ದೇನ ಪ್ರಾಣತ್ಯಾಗಂ ಗೃಹೀತ್ವಾ ಸಂದೇಹಶಬ್ದೇನ ಪ್ರಸಕ್ತಿಂ ಗೃಹಿತ್ವಾ ಪ್ರಾಣಸಂದೇಹ ಇತ್ಯಸ್ಯ ಪ್ರಾಣತ್ಯಾಗಪ್ರಸಕ್ತಾವಿತ್ಯರ್ಥಸ್ಯೋಕ್ತತ್ವಾತ್ ॥ – (ಸ.)

ಏಃ ೧) ಮೇಲ್ನೋಟಕ್ಕೆ ತನಗೆ ಪ್ರಾಣಾಪಾಯ ಒದಗುವ ಸಂಭವವಿದ್ದರಿಂದ ಹಾಗೆ ಅಧರ್ಮದಿಂದ ಕೊಲ್ಲಬೇಕಾಯಿತು ಎಂದು ಭೀಮಸೇನ ನುಡಿದಂತೆ ಕಾಣುವುದು. ಆದರೆ ಸ್ವತಃ ಮುಖ್ಯಪ್ರಾಣನಾದ ಅವನಿಗೆ ಪ್ರಾಣಾಪಾಯ ಎಲ್ಲಿಯದು? ಆದರೂ ಹಾಗೆ ನುಡಿದದ್ದು ಅವಳ ಹೆಚ್ಚಿನ ಕೋಪವನ್ನು ತಗ್ಗಿಸಲೆಂದು ಮಾತ್ರ. ಹೀಗೆ ಹೇಳುವಾಗ ದುರ್ಯೋಧನ ಪಾಪಿ ಎಂಬುದನ್ನು ತಿಳಿಸುವುದನ್ನು ಬಿಟ್ಟಿಲ್ಲ ಎಂಬುದು ಗಮನಾರ್ಹ ಅಂಶ.

೨) ಪಾಪಿಗಳನ್ನು ಅಧರ್ಮದಿಂದ ಕೊಲ್ಲುವುದು ತಪ್ಪಲ್ಲ ಎಂದು ಮುಂದೆ ಬಂದಿದೆ(ಶ್ಲೋ. ೨೧೪).

ಇತ್ಯುಕ್ತ್ವಾ ತಾಂ ಪುನಃ ಪ್ರಾಹ ಪ್ರತಿಜ್ಞಾಹಾನಿಮಂತರಾ ।
ನ ಮೇಽಸ್ತಿ ಪ್ರಾಣಸಂದೇಹ ಇತಿ ಜಾನನ್ ವೃಕೋದರಃ ॥ ೨೦೬ ॥

ಯಥಾಪ್ರತಿಜ್ಞಂ ಭ್ರಾತೃವ್ಯಾನ್ ರಣೇ ಮಮ ನಿಜಘ್ನುಷಃ ।
ಕ್ವಾಧರ್ಮಃ ಕ್ಷತ್ರಜಾತೇಸ್ತು ತದ್ಧಾನೌ ಜೀವನಂ ನ ಹಿ ॥ ೨೦೭ ॥

ಅಃ ಅವಳಿಗೆ ಹೀಗೆ ತಿಳಿಸಿ, ಪ್ರತಿಜ್ಞಾಹಾನಿಯ ಹೊರತು ಬೇರೊಂದು ಬಗೆಯ ಪ್ರಾಣಾಪಾಯ ತನಗಿಲ್ಲವೆಂದು ಬಲ್ಲ ಭೀಮಸೇನ ಪುನಃ ನುಡಿದ. ''ಪ್ರತಿಜ್ಞೆಯಂತೆ ಸೋದರರನ್ನು ಯುದ್ಧದಲ್ಲಿ ಕೊಂದಿರುವ ಕ್ಷತ್ರಿಯನಾದ ನನಗೆ ಅಧರ್ಮವೆಲ್ಲಿಯದು? ಪ್ರತಿಜ್ಞೆಗೆ ಭಂಗ ಒದಗಿದಲ್ಲಿ ಬದುಕು ಇಲ್ಲವಷ್ಟೆ!''

---

೨೦೫. ತಚ್ಛ್ರುತ್ವಾ ವಚನಂ ತಸ್ಯ ಭೀಮಸೇನೋಽಥ ಭೀತವತ್ ।
ಗಾಂಧಾರೀಂ ಪ್ರತ್ಯುವಾಚೇದಂ ವಚಃ ಸಾನುನಯಂ ತದಾ ॥
ಅಧರ್ಮೋ ಯದಿ ವಾ ಧರ್ಮಸ್ತಾತ್ ತತ್ರ ಮಯಾ ಕೃತಃ ।
ಆತ್ಮಾನಂ ತ್ರಾತುಕಾಮೇನ ತನ್ಮೇ ತ್ವಂ ಕ್ಷಂತುಮರ್ಹಸಿ ॥ – ಭಾರತ (ಸ್ತ್ರೀ. ೧೩/೧೨)

೨೦೭. ಅಧರ್ಮೇಣ ಜಿತಃ ಪೂರ್ವಂ ತೇನ ಚಾಪಿ ಯುಧಿಷ್ಠಿರಃ ।
ನಿಕೃತಾಶ್ಚಸದೈವ ಸ್ಮ ತತೋ ವಿಷಮಮಾಚರಮ್ ॥ – ಭಾರತ (ಸ್ತ್ರೀ. ೧೫/೪)

ದ್ರೌಪದ್ಯಾ ಯತ್ ಸಭಾಮಧ್ಯೇ ಸವ್ಯಮೂರುಮದರ್ಶಯತ್ ।
ತದೈವ ವಧ್ಯಃ ಸೋಽಸ್ಮಾಕಂ ದುರಾಚಾರಶ್ಚತೇ ಸುತಃ ॥
(ಇತ್ಯಾದಿ ಭೀಮವಚನ) – ಭಾರತ (ಸ್ತ್ರೀ. ೧೫/೪,೯)

ಅಧರ್ಮದಿಂದಲೇ ಪಾಪಿಗಳ ವಧೆ

ಪಾಪಾ ನ ಶುದ್ಧಧರ್ಮೇಣ ಹಂತವ್ಯಾ ಇತಿ ಚ ಶ್ರುತಿಃ ।
ಅನ್ಯವತ್ ಪಾಪಹನನಂ ಪಾಪಾಯೇತ್ಯಾಹ ಹಿ ಶ್ರುತಿಃ ।
ಅತೋಽಸುರಾನ್ ನೈಕೃತಿಕಾನ್ ನಿಕೃತ್ಯಾ ಘ್ನಂತಿ ದೇವತಾಃ ॥ ೨೦೮ ॥

ಅ: ಪಾಪಿಗಳನ್ನು ಶುದ್ಧಧರ್ಮದಿಂದ ವಧಿಸಕೂಡದು ಎಂದು ಶ್ರುತಿ ಹೇಳಿದೆ. ಪುಣ್ಯವಂತರಂತೆ ಪಾಪಿಗಳನ್ನು ಧರ್ಮದಿಂದ ಕೊಲ್ಲುವುದು ಪಾಪಕರವೆಂದೂ ಶ್ರುತಿ ಹೇಳಿದೆ. ಆದ್ದರಿಂದ ದೇವತೆಗಳು ವಂಚಕರಾದ ಅಸುರರನ್ನು ವಂಚನೆಯಿಂದಲೇ ಕೊಲ್ಲುವರು.

ವಿ: ಇಂದಿಗೂ ಅಪರಾಧಿಗಳನ್ನು ಹಿಡಿಯುವಾಗ ರಾಜಭಟರು ಕಪಟೋಪಾಯವನ್ನು ಮಾಡುವುದು ಸಹ ಅಧರ್ಮವೆನ್ನಿಸುವುದಿಲ್ಲ ಎಂಬುದನ್ನು ಗಮನಿಸಬೇಕು.

'ನಿಕೃತ್ಯಾ ನಿಕೃತಿಂ ಹನ್ಯಾನ್ನಿಕೃತ್ಯಾ ನೈವ ಧಾರ್ಮಿಕಾನ್' ।
ಇತಿ ಶ್ರುತಿರ್ಹಿ ಪರಮಾ ಪಠ್ಯತೇ ಪೈಂಗಿಭಿಃ ಸದಾ ॥ ೨೦೯ ॥

ಅ: 'ವಂಚನೆಯನ್ನು ಪ್ರತಿವಂಚನೆಯಿಂದಲೇ ಸದೆಬಡಿಯಬೇಕು; ಧಾರ್ಮಿಕರನ್ನು ಮಾತ್ರ ವಂಚನೆಯಿಂದ ವಧಿಸಬಾರದು'' ಎಂದು ಉತ್ತಮವಾದ ಶ್ರುತಿಯನ್ನು ಪೈಂಗಿಶಾಖೆಯವರು ಪಠಿಸುವರು.

ಭೀಮ ರಕ್ತಪಾನ ಮಾಡಿಲ್ಲ

ಇತ್ಯುಕ್ತಾ ತಂ ಪುನಃ ಪ್ರಾಹ ಕಥಂ ತೇ ನರಶೋಣಿತಮ್ ।
ಪೀತಂ ನರೇಣೈವ ಸತಾ ನ ಪೀತಮಿತಿ ಸೋಽಬ್ರವೀತ್ ॥ ೨೧೦ ॥

ಅ: ಭೀಮ ಹೀಗೆ ತಿಳಿಸಲು, ಗಾಂಧಾರಿ ಮತ್ತೆ ಕೇಳಿದಳು : ''ಮನುಷ್ಯನೇ ಆದ ನೀನು ಮನುಷ್ಯರಕ್ತವನ್ನು ಹೇಗೆ ಕುಡಿದೆ?'' ಭೀಮ ತಿಳಿಸಿದ : ''ನಾನು ಕುಡಿಯಲಿಲ್ಲ''.

ದಂತಾಂತರಂ ನ ಮೇ ಪ್ರಾಪ ಶೋಣಿತಂ ತತ್ ಸುತಸ್ಯ ತೇ ।
ಪ್ರತಿಜ್ಞಾಪಾಲನಾಯಾಪಿ ಪ್ರತಿಕರ್ತುಂ ಚ ತತ್ಕೃತಮ್ ॥ ೨೧೧ ॥

ಅ: ''ನಿನ್ನ ಮಗನ ರಕ್ತ ನನ್ನ ಹಲ್ಲೊಳಗೂ ಹೋಗಲಿಲ್ಲ. ಪ್ರತಿಜ್ಞಾಪಾಲನೆಗೆಂದು ಸೇಡಿಗೆಂದು ಅವನಿಗೆ ನಾನು ಹಾಗೆ ಮಾಡಿದೆ.

ಏಃ ರಕ್ತವನ್ನು ಬಾಯಲ್ಲಿ ಹಾಕಿಕೊಂಡರೂ, ಅದನ್ನು ಕುಡಿಯಲಿಲ್ಲ ಎಂದರ್ಥ. ಅದು ಪ್ರತಿಜ್ಞಾಪಾಲನೆಗಾಗಿ ಮಾಡಿದ ಶಿಕ್ಷೆ ಎಂದರ್ಥ.

ಭೀಷಣಾಯ ಚ ಶತ್ರೂಣಾಂ ಪೀತವಚ್ಚ ಪ್ರದರ್ಶಿತಮ್ ।
ವೇದದೃಷ್ಟಶ್ಚ ಧರ್ಮೋ೭ಯಮಿತಿ ಪಾಪಜನಂ ಪ್ರತಿ ॥ ೨೧೨ ॥

ಆ: ಶತ್ರುಗಳನ್ನು ಭಯಪಡಿಸಲೆಂದೂ ಸಹ ಕುಡಿದಂತೆ ಮಾಡಿದೆ. ಪಾಪಿಜನರ ಬಗ್ಗೆ ಹೀಗೆ ನಡೆಯುವುದು ವೇದ ತಿಳಿಸಿರುವ ಧರ್ಮ''.

ಏಃ ಪರಸ್ತ್ರೀಯರನ್ನು ಕೆಣಕುವುದು ಮೊದಲಾದ ಪಾಪಕಾರ್ಯಗಳನ್ನು ಮಾಡುವವರಿಗೆ ಇಂತಹ ಉಗ್ರಶಿಕ್ಷೆಗಳನ್ನು ನೀಡುವುದೆ ವೇದಗಳ ಘೋಷ ಎಂದರ್ಥ. ವೇದಗಳಲ್ಲಿ ಅಂತಹ ದೊಡ್ಡ ಅಪರಾಧಗಳಿಗೆ ಉಗ್ರಶಿಕ್ಷೆಗಳೇ ವಿಹಿತವಾಗಿರುವುದು ಕಂಡಿದೆ ಎಂದು ವಾದಿರಾಜೀಯದಲ್ಲಿದೆ.

ಸರ್ವ ಕೌರವರೂ ಅಪರಾಧಿಗಳೇ

ಇತ್ಯುಕ್ತೋವಾಚ ನೈವಾಂಧದ್ವಯಸ್ಯಾಸ್ಯ ವೃಕೋದರ ।
ಘ್ನತಾ ಪುತ್ರಶತಂ ಯಷ್ಟಿಮಾತ್ರಂ ಚೋರ್ವರಿತಂ ತ್ವಯಾ ॥ ೨೧೩ ॥

---

೨೧೧. ಪ್ರತಿಜ್ಞಾಪಾಲನಾಯಾಪಿ ಪ್ರತಿಕರ್ತುಮಿತ್ಯತ್ರ ಪ್ರತಿಜ್ಞಾಪಾಲನಾಯ = ರಕ್ತಂ ಪಾಸ್ಯಾಮೀತಿ ಪ್ರತಿಜ್ಞಾ-ಪಾಲನಾಯ ಪ್ರತಿಕರ್ತುಂ = ದುಶ್ಶಾಸನೇನ ಕೃತಪತಿವ್ರತಾಕೇಶಾಕರ್ಷಣವಸ್ತ್ರಾಪಹಾರಾದಿಮಹಾಪಾಪಸ್ಯ ಪ್ರತ್ಯಪಕಾರಂ ಕರ್ತುಂ ಮಹಾಪಾಪಸ್ಯ ಮಹಾಶಿಕ್ಷಾ ಕರ್ತವ್ಯಾ ಅನ್ಯಥಾ ದೋಷ ಇತಿ ಭಾವಃ ॥ – (ವಾ.)

೨೧೧. ರುಧಿರಂ ನ ವ್ಯತಿಕ್ರಾಮದ್ ದಂತೋಷ್ಠಂ ಮೇ೭ಂಬ ಮಾ ಶುಚಃ ।
ವೈವಸ್ವತಸ್ತು ತದ್ ವೇದ ಹಸ್ತೌ ಮೇ ರುಧಿರೋಕ್ಷಿತೌ ॥
ಕ್ಷತ್ರಧರ್ಮಾಚ್ಚ್ಯುತೋ ರಾಜ್ಞಿ ಭವೇಯಂ ಶಾಶ್ವತೀಃ ಸಮಾಃ ।
ಪ್ರತಿಜ್ಞಾಂ ತಾಮನಿಸ್ತೀರ್ಯ ತತಸ್ತ್ವ್ ಕೃತವಾನಹಮ್ ॥ - ಭಾರತ (ಸ್ತ್ರೀ. ೧೫/೧೬,೧೯)

೨೧೨. ಪೀತವಚ್ಚ ಪ್ರದರ್ಶಿತಮಿತ್ಯತ್ರ ಪೀತವತ್ = ಪೀತಮಿವ ಪ್ರದರ್ಶಿತಂ ರಕ್ತಂ ಪೀತಮಿವ ಪ್ರದರ್ಶಿತಮ್। ನ ತು ಪೀತಮಿತ್ಯರ್ಥಃ। ವೇದದೃಷ್ಟಶ್ಚ ಧರ್ಮೋ೭ಯಮಿತಿ ವದತಾ ''ಅಧ್ಯಯನೇ ಜಿಹ್ವಾಚ್ಛೇದಃ''''ಅರ್ಥಾವಧಾರಣೇ ಹೃದಯವಿದಾರಣ'' ಮಿತ್ಯಾದಿಶ್ರುತಿಂ ಸ್ಮಾರಯತಿ ॥ – (ವಾ.)

೨೧೨. ಭ್ರಾತೄಣಾಂ ಸಂಪ್ರಹೃಷ್ಟಾನಾಂ ತ್ರಾಸಃ ಸಂಜನಿತೋ ಮಯಾ ॥ - (ಸ್ತ್ರೀ. ೧೫/೧೭)

೨೧೨. ತೇನ ಹಿ ಸ್ವಾಮಿನಾ ವೃಕೋದರೇಣ ದುಃಶಾಸನಸ್ಯ ರುಧಿರಂ ಪಾತುಂ ಪ್ರತಿಜ್ಞಾತಮ್ ।
ತಚ್ಚಾಸ್ಮಾಭೀ ರಾಕ್ಷಸೈರನುಪ್ರವಿಶ್ಯ ಪಾತವ್ಯಮ್ ।
(ರಾಕ್ಷಸಿಯನ್ನು ಕುರಿತು ರಾಕ್ಷಸವಚನ – ಭಟ್ಟವಾರಾಯಣನ ವೇಣೀಸಂಹಾರ)

ಅ: ಭೀಮಸೇನ ಹಾಗೆನ್ನಲು ಗಾಂಧಾರಿ ಕೇಳಿದಳು : ''ನೂರು ಮಕ್ಕಳನ್ನೂ ಕೊಂದ ನೀನು ಈ ಕುರುಡುದಂಪತಿಗಳಿಗೆ ಒಂದು ಊರುಗೋಲನ್ನಾದರೂ ಉಳಿಸಲಿಲ್ಲವಲ್ಲ!''.

ಏ ''ನನ್ನ ನೂರು ಪುತ್ರರನ್ನೂ ಏಕೆ ಕೊಂದೆ? ಕುರುಡರಾದ ನಮಗೆ ಊರುಗೋಲಿ–ನಂತಿರಲು ಒಬ್ಬನನ್ನಾದರೂ ಉಳಿಸಬಹುದಿತ್ತಲ್ಲ?'' ಎಂಬುದು ಅವಳ ಭಾವ.

ತಾಮಾಹ ಭೀಮಃ ಪಾಪಿಷ್ಠಾ ವಧಯೋಗ್ಯಾಪರಾಧಿನಃ ।
ಸರ್ವೇ ಹತಾ ಇತಿ ಪುನಃ ಸಾऽऽಹ ಯೇನಾಕೃತಸ್ತವ ॥ ೨೧೪ ॥

ಅಪರಾಧಃ ಸ ಏಕೋऽಪಿ ಕಿಂ ನಾಸ್ತೀತ್ಯವದತ್ ಸ ತಾಮ್ ।
ಸರ್ವೈಃ ಸಮೇತೈಃ ಕೃಷ್ಣಸ್ಯ ಬಂಧನಾಯ ವಿನಿಶ್ಚಿತಮ್ ॥ ೨೧೫ ॥

ಅ: ಭೀಮ ಗಾಂಧಾರಿಗೆ ತಿಳಿಸಿದ : ''ಅವರೆಲ್ಲ ಪಾಪಿಷ್ಠರು. ವಧೆಗೆ ಯೋಗ್ಯವಾದ ಅಪರಾಧವೆಸಗಿದ್ದವರು. ಆದ್ದರಿಂದ ಎಲ್ಲರನ್ನೂ ಕೊಂದೆ''. ಆಗ ಗಾಂಧಾರಿ ಮತ್ತೆ ಕೇಳಿದಳು : ''ನಿನಗೆ ಅಪರಾಧ ಗೈಯದವ ಒಬ್ಬನೂ ಇರಲಿಲ್ಲವೇ?''. ಭೀಮ ಅವಳಿಗೆ ತಿಳಿಸಿದ : ''ಅವರೆಲ್ಲರೂ ಸೇರಿ ಕೃಷ್ಣನನ್ನು ಕಟ್ಟಿಹಾಕಲು ಯೋಜಿಸಿದ್ದರು''.

ಅನ್ಯಾನಿ ಚ ಸುಪಾಪಾನಿ ಕೃತಾನ್ಯತ್ರ ಪುರಾऽಪಿ ಚ ।
ವಾಸುದೇವಂ ಸಭಾಸಂಸ್ಥಂ ಬ್ರುವಾಣಂ ಧರ್ಮಸಂಹಿತಮ್ ॥ ೨೧೬ ॥

ಪುನಃ ಪುನರವಜ್ಞಾಯ ಯಾಂತಂ ದುರ್ಯೋಧನಂ ಬಹಿಃ ।
ಸರ್ವೇऽನ್ವಗಚ್ಛನ್ನಿತ್ಯಾದೀನ್ಯಭಿಪ್ರೇತ್ಯ ವೃಕೋದರಃ ॥ ೨೧೭ ॥

ಅ: ಅವರು ಹಿಂದೆಯೂ ಇತರ ಮಹಾಪಾಪಗಳನ್ನು ಮಾಡಿದ್ದವರೇ. ಸಭೆಯಲ್ಲಿದ್ದ ಕೃಷ್ಣ ಧರ್ಮಸಂಹಿತೆಯನ್ನು ತಿಳಿಸುತ್ತಿದ್ದಾಗ, ಮತ್ತೆ ಮತ್ತೆ ತಿರಸ್ಕರಿಸಿ, ಹೊರನಡೆದ ದುರ್ಯೋಧನ–ನನ್ನು ಅವರೆಲ್ಲ ಹಿಂಬಾಲಿಸಿ ನಡೆದಿದ್ದರು''. ಇವೇ ಮೊದಲಾದವುಗಳನ್ನು ಮನಸ್ಸಿನಲ್ಲಿಟ್ಟು–ಕೊಂಡು ಭೀಮ ತಿಳಿಸಿದ.

ಏ: ಅದರಂತೆ ಪಾಂಡವರು ವನವಾಸಕ್ಕೆ ತೆರಳಿದಾಗ, ದುಃಶಾಸನ ಅವರ ಸುತ್ತ 'ಗೌಃ ಗೌಃ' ಎಂದು ಕೂಗಿದಾಗ, ಅದನ್ನು ಅನುಮೋದಿಸಿ, ಅವರೆಲ್ಲ ಜೋರಾಗಿ ನಕ್ಕಿದ್ದ ಅಪರಾಧವನ್ನು ಇಲ್ಲಿ ಗ್ರಹಿಸಬೇಕು. ಭೀಮ ಆಗಲೇ ಅವರನ್ನೆಲ್ಲ ಕೊಲ್ಲುವುದಾಗಿ ಶಪಥಗೈದಿದ್ದ (೨೧/೩೯, ೩೯).

ನೈಕೋಽಪ್ಯನಪರಾಧೀ ಮೇ ಸ್ವಯಂ ತಾನನುಶಿಕ್ಷಿತುಮ್ ।
ಅಸಮರ್ಥಾ ಮಯಿ ಕ್ರೋಧಂ ಕಿಂ ಕರೋಷಿ ನಿರರ್ಥಕಮ್ ॥ ೨೧೮ ॥

ಅ: ''ನನಗೆ ಅಪರಾಧವೆಸಗದಿದ್ದವನು ಒಬ್ಬನೂ ಇರಲಿಲ್ಲ. ನೀನು ಸ್ವತಃ ಅವರಿಗೆ ತಿಳಿಹೇಳಲು ಅಶಕ್ತಳಾಗಿದ್ದು ನನ್ನಲ್ಲೇಕೆ ನಿರರ್ಥಕವಾಗಿ ಕೋಪಗೊಳ್ಳುವಿ?''.

ವಿ: 'ಒಬ್ಬನನ್ನೂ ಏಕೆ ಉಳಿಸಲಿಲ್ಲ' ಎಂದು ನನ್ನನ್ನು ಕೇಳುವ ನಿನ್ನನ್ನು 'ಒಬ್ಬನನ್ನಾದರೂ ಉಳಿದುಕೊಳ್ಳುವ ರೀತಿಯಲ್ಲಿ ನೀನೇಕೆ ಬೆಳೆಸಲಿಲ್ಲ' ಎಂದು ನಾನು ಕೇಳುವೆ ಎಂಬುದು ಭೀಮನ ಭಾವ.

ಶಾಂತಳಾದ ಗಾಂಧಾರಿ

ಇತ್ಯುಕ್ತಾ ಸಾಽಭವತ್ ತೂಷ್ಣೀಂ ಕ್ರಮಾತ್ ಸರ್ವೈಶ್ಚ ಪಾಂಡವೈಃ ।
ವಂದಿತಾ ವ್ಯಾಸವಾಕ್ಯಾಚ್ಚ ಕಿಂಚಿಚ್ಛಾಂತಾ ಚ ಸಾಽಭವತ್ ॥ ೨೧೯ ॥

ಅ: ಭೀಮ ಹೀಗೆ ಕೇಳಲು, ಗಾಂಧಾರಿ ಸುಮ್ಮನಾದಳು. ಮುಂದೆ ಇತರ ಎಲ್ಲ ಪಾಂಡವರಿಂದ ವಂದಿತಳಾದ ಅವಳು ವೇದವ್ಯಾಸರ ಮಾತಿನಿಂದ ಸ್ವಲ್ಪ ಶಾಂತಳೂ ಆದಳು.

ರಣಭೂಮಿಯಲ್ಲಿ ಸ್ತ್ರೀಜನರು

ತಸ್ಯಾ ಯಾಶ್ಚ ಸ್ನುಷಾಃ ಸರ್ವಾಸ್ತಾಭಿಃ ಸಹ ಪುರಸ್ಕೃತಾಮ್ ।
ಕೃತ್ವಾ ತಂ ಧೃತರಾಷ್ಟ್ರಂ ಚ ವಿದುರಾದೀಂಶ್ಚ ಸರ್ವಶಃ ॥ ೨೨೦ ॥

ಪಾಂಡವಾಃ ಪ್ರಧನಸ್ಥಾನಂ ಸಭಾರ್ಯಾಃ ಪೃಥಯಾ ಸಹ ।
ಕೃಷ್ಣಾಭ್ಯಾಂ ಚ ಯಯುಸ್ತತ್ರ ಗಾಂಧಾರ್ಯಾಸ್ತಪಸೋ ಬಲಮ್ ॥ ೨೨೧ ॥

---

೨೧೮. ನ ಮಾಮರ್ಹಸಿ ಗಾಂಧಾರಿ ದೋಷೇಣ ಪರಿಶಂಕಿತುಮ್ ।
ಅನಿಗೃಹ್ಯ ಪುರಾ ಪುತ್ರಾನಸ್ಮಾಸ್ವನಪಕಾರಿಷು ।
ಅಧುನಾ ಕಿಂ ನು ದೋಷೇಣ ಪರಿಶಂಕಿತುಮರ್ಹಸಿ ॥ – ಭಾರತ (ಸ್ತ್ರೀ. ೧೫/೨೦)

೨೧೯. ವ್ಯಾಸವಾಕ್ಯಾನಿ ತು 'ಅಧರ್ಮಂ ಜಹಿ ಧರ್ಮಜ್ಞೇ ಯತೋ ಧರ್ಮಸ್ತತೋ ಜಯಃ' ಇತ್ಯಾದೀನಿ – ಭಾರತ (ಸ್ತ್ರೀ. ೧೪/೭/೧೩)

೨೨೧. ಪ್ರಧನಸ್ಥಾನಂ ರಣಭೂಮಿಮ್ । – (ಜ.)

ವೇದವ್ಯಾಸರಿಂದ ಗಾಂಧಾರಿಗೆ ದಿವ್ಯದೃಷ್ಟಿಪ್ರದಾನ

ಜಾನನ್ ಪಾಂಡವರಕ್ಷಾರ್ಥಂ ಚಿಕೀರ್ಷುಸ್ತತ್ತಪೋವ್ಯಯಮ್ ।
ವೇದೇಶ್ವರೋ ದದೌ ದಿವ್ಯಂ ಚಕ್ಷುಃ ಸತ್ಯವತೀಸುತಃ ॥ ೨೨೨ ॥

ಅ: ತನ್ನ ಸೊಸೆಯಂದಿರನ್ನೆಲ್ಲ ಮುಂದಿರಿಸಿಕೊಂಡಿದ್ದ ಗಾಂಧಾರಿಯನ್ನು, ಧೃತರಾಷ್ಟ್ರ ಮತ್ತು ವಿದುರಾದಿಗಳನ್ನೆಲ್ಲ ಮುಂದೆ ಮಾಡಿಕೊಂಡು ಪಾಂಡವರು ಸಪತ್ನೀಕರಾಗಿ, ವೇದವ್ಯಾಸ-ಕೃಷ್ಣರೊಂದಿಗೆ ಕೂಡಿಕೊಂಡು ಕುಂತಿಯೊಂದಿಗೆ ಯುದ್ಧಭೂಮಿಗೆ ತೆರಳಿದರು. ಆಗ ವೇದವ್ಯಾಸರು ಪಾಂಡವರ ರಕ್ಷಣೆಗೆಂದು ಅವಳ ತಪಸ್ಸಿನ ವ್ಯಯ ಮಾಡಿಸಲು ಅವಳಿಗೆ ದಿವ್ಯದೃಷ್ಟಿಯನ್ನು ನೀಡಿದರು.

ವಿ: ಗಾಂಧಾರಿ ಪಾಂಡವರ ಬಗ್ಗೆ ಇನ್ನೂ ಪೂರ್ಣ ಶಾಂತಳಾಗಿರಲಿಲ್ಲ. ಅವಳಲ್ಲಿ ತಪಸ್ಸು ಅಧಿಕವಾಗಿಯೇ ಇತ್ತು. ಆ ತಪಸ್ಸು ಹ್ರಾಸಗೊಳ್ಳದಿದ್ದಲ್ಲಿ ಧರ್ಮರಾಜಾದಿಪಾಂಡವರಿಗೆ ಅಪಾಯ ತಪ್ಪಿದ್ದಲ್ಲ. ಆದ್ದರಿಂದ ಅವಳು ತನ್ನ ಮಕ್ಕಳ ಛಿನ್ನಭಿನ್ನವಾದ ಶವಗಳನ್ನು ಕಂಡು ಕೋಪಗೊಂಡು ಶಾಪ ನೀಡುವ ಮೂಲಕ ತನ್ನ ತಪಃಶಕ್ತಿಯನ್ನು ಕಳೆದುಕೊಳ್ಳಲಿ ಎಂದು ವೇದವ್ಯಾಸರು ಅವಳಿಗೆ ದಿವ್ಯದೃಷ್ಟಿ ನೀಡಿದರು ಎಂದರ್ಥ. ಅದರಿಂದ ಅವಳು ಕಣ್ಣಿಗೆ ಬಟ್ಟೆ ಕಟ್ಟಿಕೊಂಡಿದ್ದರೂ, ರಣರಂಗದ ಭಯಾನಕವಾದ ದೃಶ್ಯ ಸ್ಫುಟವಾಗಿ ಕಾಣುವಂತಾಯಿತು ಎಂದರ್ಥ.

ಶ್ರೀಕೃಷ್ಣನಿಗೆ ಗಾಂಧಾರಿಯ ಶಾಪ

ತೇನ ದೃಷ್ಟ್ವಾಪ್ಯೇತದೇಹಾನ್ ಸರ್ವಾಂಸ್ತತ್ರ ಸಮಾಕುಲಾ ।
ಶಶಾಪ ಯಾದವೇಶಾನಂ ತ್ವಯಾऽಸ್ಮತ್ಕುಲನಾಶನಮ್ ।
ಯತ್ ಕೃತಂ ತತ್ ತವ ಕುಲಂ ಗಚ್ಛತ್ವನ್ಯೋನ್ಯತಃ ಕ್ಷಯಮ್ ॥ ೨೨೩ ॥

---

೨೨೨. ದದೌ ದಿವ್ಯಂ ಚಕ್ಷುರಿತ್ಯತ್ರ ಪಟ್ಟಬಂಧೇನ ಬದ್ಧದೃಷ್ಟಿತ್ವಾತ್ ಶ್ವಸೃಗಾಲಗೃಧ್ರಾದಿಭಿಃ ಭಕ್ಷಿತದೇಹಾನಾಂ ವಿವಿಚ್ಯ ದರ್ಶನಾಯೋಗಾತ್ ಬಹುವಿಸ್ತೀರ್ಣಕುರುಕ್ಷೇತ್ರೇ ತತ್ರ ತತ್ರ ಸ್ಥಿತಾನಾಂ ಶವಾನಾಂ ದಿವ್ಯದೃಷ್ಟ್ಯದಾನೇ ದರ್ಶನಾಯೋಗಾಚ್ಚ ದಿವ್ಯದೃಷ್ಟಿದಾನಮ್। ವಿವಿಚ್ಯ ದರ್ಶನಾಭಾವೇ ಚ ಬಹುಕ್ಲೇಶೋऽಪಿ ನ ಸ್ಯಾತ್। ತೇನ ಚ ಶಾಪಂ ನ ದದ್ಯಾತ್। ಅತೋ ವಿವಿಚ್ಯ ದರ್ಶನೇನ ಕೋಪಜನನಾಯ ದಿವ್ಯದೃಷ್ಟಿದಾನಮಿತಿ ಭಾವಃ ॥ – (ವಾ.)

೨೨೨. ಭರ್ತ್ಯಸಮಾನಧರ್ಮತ್ವಾರ್ಥಂ ಭೌತಿಕಚಕ್ಷೋರ್ಬಂಧತ್ವಾದಭೌತಿಕಾಂ ದಿವ್ಯಾಂ ದೃಷ್ಟಿಂ ದದಾವಿತಿ ಭಾವಃ॥ – (ವ.)

೨೨೨. ವರದಾನೇನ ಕೃಷ್ಣಸ್ಯ ಮಹರ್ಷೇಃ ಪುಣ್ಯಕರ್ಮಣಃ। ದಿವ್ಯಜ್ಞಾನಬಲೋಪೇತಾ – (ಸ್ತ್ರೀ. ೧೬/೩)

ಅ: ಅಲ್ಲಿ ಗಾಂಧಾರಿ ದಿವ್ಯದೃಷ್ಟಿಯಿಂದ ರಣರಂಗದಲ್ಲಿ ಬಿದ್ದಿದ್ದ ಶವಗಳನ್ನು ಕಂಡು ದುಃಖಿತಳಾಗಿ ಕೃಷ್ಣನಿಗೆ ಶಾಪವಿತ್ತಳು : ''ನೀನು ನಮ್ಮ ಕುಲವನ್ನು ಪರಸ್ಪರ ನಾಶಗೊಳಿಸಿರುವುದರಿಂದ ನಿನ್ನ ಕುಲವೂ ಪರಸ್ಪರರಿಂದ ನಾಶವಾಗಲಿ''.

ಎ: ಗಾಂಧಾರಿ ಕೃಷ್ಣನಂತಹ ಸರ್ವೋತ್ತಮನಿಗೇ ಶಾಪ ನೀಡಿದ ವಿಚಿತ್ರಪ್ರಸಂಗವಿದು :

ಪತಿಶುಶ್ರೂಷಯಾ ಯನ್ಮೇ ತಪಃ ಕಿಂಚಿದುಪಾರ್ಜಿತಮ್ ।
ತೇನ ತ್ವಾಂ ದುರವಾಪೇನ ಶಪ್ಸ್ಯೇ ಚಕ್ರಗದಾಧರ ॥
ಯಸ್ಮಾತ್ ಪರಸ್ಪರಂ ಘ್ನಂತೋ ಜ್ಞಾತಯಃ ಕುರುಪಾಂಡವಾಃ ।
ಉಪೇಕ್ಷಿತಾಸ್ತೇ ಗೋವಿಂದ ತಸ್ಮಾಜ್ಜ್ಞಾತೀನ್ ವಧಿಷ್ಯಸಿ ॥

– ಭಾರತ(ಸ್ತ್ರೀ. ೨೫/೪೨/೪೬)

ಶ್ರೀಕೃಷ್ಣನ ಸಂಕಲ್ಪವೇ ಆಗಿದ್ದ ಶಾಪ

ಇತ್ಯುಕ್ತೋ ಭಗವಾನ್ ಕೃಷ್ಣಃ ಸ್ವಚಿಕೀರ್ಷಿತಮೇವ ತತ್ ।
ಅಸ್ತ್ವೇವಮಿತ್ಯಾಹ ವಿಭುರೀಶ್ವರೋಽಪ್ಯನ್ಯಥಾ ಕೃತೌ ॥ ೨೨೪ ॥

ತೇನ ತಸ್ಯಾಸ್ತಪೋ ನಷ್ಟಂ ಹೀನಾ ಸಾಽತೋ ಹಿ ಭರ್ತೃತಃ ।
ನಾಶಯೇದ್ಧಿ ಸದಾ ವಿಷ್ಣುಃ ಸ್ವಯೋಗ್ಯಾದಧಿಕಾನ್ ಗುಣಾನ್ ॥ ೨೨೫ ॥

---

೨೨೪. ತಚ್ಛ್ರುತ್ವಾ ವಚನಂ ಘೋರಂ ವಾಸುದೇವೋ ಮಹಾಮನಾಃ ।
ಉವಾಚ ದೇವೀಂ ಗಾಂಧಾರೀಮೀಷದುತ್ಸ್ಮಯನ್ನಿವ ॥
ಜಾನೇಽಹಮೇತದಪ್ಯೇವಂ ಚೀರ್ಣೇ ಚರಸಿ ಕ್ಷತ್ರಿಯೇ ।
ದೈವಾದೇವ ವಿನಶ್ಯಂತಿ ವೃಷ್ಣಯೋ ನಾತ್ರ ಸಂಶಯಃ ॥
ಸಂಹರ್ತಾ ವೃಷ್ಣಿಚಕ್ರಸ್ಯ ನಾನ್ಯೋ ಯದ್ವಿದ್ಧತೇ ಶುಭೇ ॥
ಅವಧ್ಯಾಸ್ತೇ ನರೈರನ್ಯೈರಪಿ ವಾ ದೇವದಾನವೈಃ ॥
ಪರಸ್ಪರಕೃತಂ ನಾಶಮತಃ ಪ್ರಾಪ್ಸ್ಯಂತಿ ಯಾದವಾಃ ॥ – ಭಾರತ (ಸ್ತ್ರೀ. ೨೫/೪೭/೪೯)

೨೨೫. ಹೀನಾ ಸಾಽತೋ ಹಿ ಭರ್ತೃತ ಇತ್ಯತ್ರ ಅತಃ ಶಾಪದಾನೇನ ತಪಸೋ ನಷ್ಟತ್ವಾತ್ ಭರ್ತೃತಃ ಹೀನಾ = ತಪಸಾನ್ಯೂನಾ ಜಾತಾ ಅಭವತ್। ಸ್ವಭಾವಾಂಧಸ್ಯ ಭರ್ತುಃ ಸಹಧರ್ಮಚರಣಾಯ ಪಟ್ಟಬಂಧೇನ ನಯನಯೋರಂಧತಾಂ ಸಂಪಾದ್ಯ ಪರಪುರುಷನಿರೀಕ್ಷಣಾದೀನಾಮಪಿ ತ್ಯಕ್ತತ್ವಾತ್ ಪ್ರಾಕ್ ಪತ್ಯುರಪ್ಯಧಿಕಂ ಪುಣ್ಯಮಾಸೀತ್ ತದಧುನಾ ನಷ್ಟಮಿತಿ ಭಾವಃ ॥ – (ವಾ.)

೨೨೫. ಸ್ವಯೋಗ್ಯಾದಧಿಕಾನಿತ್ಯತ್ರ ಭಾವಪ್ರಧಾನೋ ನಿರ್ದೇಶಃ। ಸ್ವಯೋಗ್ಯತಾಯಾ ಅಧಿಕಾನಿತ್ಯರ್ಥಃ॥ – (ವಾ.)

ಅ: ಅವಳು ಹೀಗೆನ್ನಲು ಅದನ್ನು ತಪ್ಪಿಸಲು ಅತ್ಯಂತ ಸಮರ್ಥನಾಗಿದ್ದರೂ, ಭಗವಂತನಾದ ಕೃಷ್ಣ ''ಅದು ತನ್ನದೇ ಸಂಕಲ್ಪ; ಹಾಗೆಯೇ ಆಗಲಿ'' ಎಂದ. ಅದರಿಂದಾಗಿ ಅವಳ ತಪಸ್ಸು ನಾಶವಾಯಿತು. ಅವಳು ಗಂಡನಾದ ಧೃತರಾಷ್ಟ್ರನಿಗಿಂತ ಕಡಿಮೆ ಎನ್ನಿಸಿದಳು. ಶ್ರೀಹರಿ ಅವರ ಯೋಗ್ಯತೆಗೆ ಮೀರಿದ ಪುಣ್ಯವನ್ನು ನಾಶಪಡಿಸುವವನಲ್ಲವೆ!

ಎ: ೧) ಗಾಂಧಾರಿಗೆ ಪಾತಿವ್ರತ್ಯ ಮೊದಲಾದ ವಿಶೇಷಕಾರಣಗಳಿಂದಾಗಿ ಅಧಿಕಪುಣ್ಯ ಲಭಿಸಿತ್ತು, ಅದರಿಂದಾಗಿ ಅವಳು ತನ್ನ ಗಂಡನಾದ ಧೃತರಾಷ್ಟ್ರನಿಗಿಂತಲೂ ಮಿಗಿಲೆನ್ನಿಸಿದ್ದಳು. ನಿಯತ ಪತಿಪತ್ನಿಯರಲ್ಲಿ ಪತ್ನಿಯು ಪತಿಗಿಂತ ಕಡಿಮೆಯಾಗಿರಬೇಕೆಂಬುದು ನಿಯಮ. ಅದಕ್ಕನುಗುಣವಾಗಿ ಧೃತರಾಷ್ಟ್ರನ ನಿಯತಪತ್ನಿಯಾಗಿದ್ದ ಅವಳು ಧೃತರಾಷ್ಟ್ರನಿಗಿಂತ ಕಡಿಮೆ. ಎನ್ನಿಸಬೇಕು ಎಂಬುದೂ ಸಹ ಕೃಷ್ಣನ ಸಂಕಲ್ಪವಾಗಿತ್ತು.

೨) ಹಾಗೆ ಅಧಿಕಪುಣ್ಯವನ್ನು ಹ್ರಾಸ ಮಾಡಿಸುವುದು ಶ್ರೀಹರಿಯ ಸಂಕಲ್ಪವೂ ಆಗಿದೆ (**'ವಿಧವಾನದ್ವಿಡಿತ್ಯೇವ ಹರೇರ್ನಾಮ ಹಿ ವೈದಿಕಮ್'**).

೩) ಇದರೊಂದಿಗೆ ಪಾಂಡವರ ರಕ್ಷಣೆಯೊಂದಿಗೆ ಗಾಂಧಾರಿಯ ರಕ್ಷಣೆಯೂ ಕೃಷ್ಣನ ಸಂಕಲ್ಪವಾಗಿತ್ತೆಂದು ತಿಳಿಯಬಹುದು.

ದ್ರೌಪದಿ ಕಂಡ ಕೌರವ ಪತ್ನಿಯರು

ತತ ಆಶ್ಲಿಷ್ಯ ಭರ್ತೄ್ಣಾಂ ದೇಹಾನ್ ಪ್ರರುದತೀಃ ಸ್ತ್ರಿಯಃ ।
ಸರ್ವಾ ದುರ್ಯೋಧನಾದೀನಾಂ ದರ್ಶಯಾಮಾಸ ಕೇಶವಃ ।
ಕೃಷ್ಣಾಯೈ ಸಾ ಚ ತಂ ದೇವಮಸ್ತುವತ್ ಪೂರ್ಣಸದ್ಗುಣಮ್ ॥ ೨೨೬ ॥

ಅ: ಬಳಿಕ ತಮ್ಮ ಗಂಡಂದಿರ ಶವಗಳನ್ನು ಆಲಿಂಗಿಸಿಕೊಂಡು ಬಹಳವಾಗಿ ಗೋಳಿಡುತ್ತಿದ್ದ ದುರ್ಯೋಧನಾದಿಗಳ ಪತ್ನಿಯರನ್ನು ಶ್ರೀಕೃಷ್ಣ ದ್ರೌಪದಿಗೆ ತೋರಿಸಿದ. ದ್ರೌಪದಿ ಪೂರ್ಣ-ಷಡ್ಗುಣನಾದ ಶ್ರೀಕೃಷ್ಣನನ್ನು ಕೊಂಡಾಡಿದಳು.

ಎ: ವನಪರ್ವದಲ್ಲಿ ದ್ರೌಪದಿಗೆ ವಚನ ನೀಡಿದ್ದಂತೆ (೨೨/೨೮) ಶ್ರೀಕೃಷ್ಣ ದುರ್ಯೋ-ಧನಾದಿಗಳನ್ನು ಭೀಮನಿಂದ ಸಂಹರಿಸಿ, ಕೌರವಸ್ತ್ರೀಯರು ತಮ್ಮ ಗಂಡಂದಿರ ಶವಗಳನ್ನು ಆಲಿಂಗಿಸಿ ಗೋಳಾಡುವ ದೃಶ್ಯವನ್ನು ತೋರಿಸಿದ ಎಂದರ್ಥ.

---

೨೨೬. ಕೃಷ್ಣಾಯೈ ದರ್ಶಯಾಮಾಸ ಮಯೋಕ್ತಂ ಸತ್ಯಂ ಕೃತಮಿತಿ ಸೂಚಯಿತುಮಿತಿ ಭಾವಃ ॥ –(ವ.)

ಯುದ್ಧಮೃತರ ಅಂತ್ಯಕ್ರಿಯೆ

ತತೋ ದೇಹಾನ್ ಪ್ರಸಿದ್ಧಾನಾಂ ಪಾರ್ಥಾಃ ಸಮದಹನ್ ಸತಾಮ್ ।
ಅನ್ಯೇಷಾಂ ಧೃತರಾಷ್ಟ್ರಾದೀನ್ ಪುರಸ್ಕೃತ್ಯೈವ ಕಾಂಶ್ಚನ ।
ಸೂತೈಃ ಪಂಚಭಿರೇವ ಸ್ವೈಃ ಸರಸ್ವತ್ಯಾಂ ಪ್ರಚಿಕ್ಷಿಪುಃ ॥ ೨೨೭ ॥

ಅ: ಅನಂತರ ಪಾಂಡವರು ಪ್ರಸಿದ್ಧರಾದ ಸಜ್ಜನರ ಶವಗಳನ್ನು ಸ್ವತಃ ತಾವೇ ದಹನ ಮಾಡಿದರು. ಇತರರ ಶವಗಳನ್ನು ಧೃತರಾಷ್ಟ್ರ ಮೊದಲಾದವರನ್ನು ಮುಂದೆ ಮಾಡಿಕೊಂಡು ಸುಡಿಸಿದರು. ಕೆಲವು ದೇಹಗಳನ್ನು ತಮ್ಮ ಐವರು ಸೂತರ ಮೂಲಕ ಸರಸ್ವತೀನದಿಯಲ್ಲಿ ಬಿಸಾಡಿಸಿದರು.

ವಿ: ರಣರಂಗದಲ್ಲಿ ಮೃತರಾಗಿದ್ದ ಅಸಂಖ್ಯಜನರಲ್ಲಿ ದ್ರೋಣಾದಿಸಜ್ಜನರ ದೇಹಗಳನ್ನು ಸ್ವತಃ ತಾವೇ ದಹನ ಮಾಡಿದರೆ, ಪ್ರಸಿದ್ಧರಾಗಿದ್ದ ದುಷ್ಟರ ದೇಹಗಳನ್ನು ಧೃತರಾಷ್ಟ್ರಾದಿಗಳ ಮೂಲಕ ಮಾಡಿಸಿದರು. ಎಲ್ಲರನ್ನೂ ದಹನ ಮಾಡುವುದು ಅಶಕ್ಯವಾದ್ದರಿಂದ ಅನೇಕರ ದೇಹಗಳನ್ನು ತಮ್ಮ ಐವರು ಸೂತರ ಮೂಲಕ ಬಿಸಾಡಿಸಿದರು.

ಸ್ನೇಹಾನ್ನೃಪೋ ಯಮೌ ಚ ಸ್ವಾನ್ ನಾಜೌ ತಸ್ಮಿನ್ ನ್ಯಯೋಜಯನ್ ।
ಶವಾಃ ಪ್ರಾಯೋ ಬಹುತ್ವೇನ ತತ್ರ ತತ್ರೈವ ಸಂಸ್ಥಿತಾಃ ॥ ೨೨೮ ॥

---

೨೨೭. ಚಿತಾಃ ಕೃತ್ವಾ ಪ್ರಯತ್ನೇನ ಯಥಾ ಮುಖ್ಯಾನ್ ನರಾಧಿಪಾನ್ ।
ದಾಹಯಾಮಾಸುರವ್ಯಗ್ರಾಃ ಶಾಸ್ತ್ರದೃಷ್ಟೇನ ಕರ್ಮಣಾ ॥

೨೨೭. ಯೇ ಚಾಪ್ಯನಾಥಾಸ್ತತ್ರಾಸನ್ ನಾನಾದೇಶಸಮಾಗತಾಃ ।
ತಾಂಶ್ಚ ಸರ್ವಾನ್ ಸಮಾನಾಯ್ಯ ರಾಶೀನ್ ಕೃತ್ವಾ ಸಹಸ್ರಶಃ ।
ಚಿತ್ವಾ ದಾರುಭಿರವ್ಯಗ್ರೈಃ ಪ್ರಭೂತೈಃ ಸ್ನೇಹಪಾಚಿತೈಃ ।
ದಾಹಯಾಮಾಸ ತಾನ್ ಸರ್ವಾನ್ ವಿದುರೋ ರಾಜಶಾಸನಾತ್ ॥ – ಭಾರತ (ಸ್ತ್ರೀ. ೨೬/೩೦)

೨೨೮. ಸ್ನೇಹಾನ್ನೃಪೋ ಯಮೌ ಚೇತ್ಯತ್ರ ಪಾರ್ಥಾಃ ಪಂಚಭಿಃ ಸ್ವೈಃ ಸೂತೈಃ ಅನ್ಯೇಷಾಮಸತಾಂ ದುರ್ಯೋಧನಾದೀನಾಂ ಕಾಂಶ್ಚನ ದೇಹಾನ್ ಸರಸ್ವತ್ಯಾಂ ಪ್ರತಿಚಿಕ್ಷಿಪುರಿತಿ ಸಾಮಾನ್ಯೇನೋಕ್ತಮ್। ತತ್ರಾಚ್ಛಿನ್ನಧರ್ಮಸ್ಯ ಭೀಮಸ್ಯ ಇಂದ್ರಾವತಾರಸ್ಯ ಅರ್ಜುನಸ್ಯ ಚ ಅಸತಾಂ ಸಂಸ್ಕಾರೇ ವಿಶಿಷ್ಯ ಮನೋ ನಾಭೂದಿತಿ ಸೂಚನಾಯ ಅಪವಾದಮಾಹ ಸ್ನೇಹಾನ್ನೃಪ ಇತಿ। ನೃಪೋ ಧರ್ಮರಾಜಃ ಯಮೌ ಚ ತಸ್ಮಿನ್ ಆಜೌ ಮೃತಾನಾಂ ಶವನಿರಸನಾಯ ಸ್ವಾನ್ ಪಂಚ ಸೂತಾನ್ ನ್ಯಯೋಜಯದಿತಿ ಯೋಜನಾ। ಭೀಮಾರ್ಜುನೌ ತೂಷ್ಣೀಮೇವ ಸ್ಥಿತೌ। ಅತ ಏವ ಧೃತರಾಷ್ಟ್ರಾದೀನ್ ಪುರಸ್ಕೃತ್ಯೇತ್ಯುಕ್ತಮ್। ಉಪಚಾರೋಽಪಿ ತತ್ಕ್ರಿಯಾಯೇತಿ ಭಾವಃ ॥ – (ವಾ.)

ಅ: ಸ್ನೇಹದಿಂದಾಗಿ ಧರ್ಮರಾಜ ಮತ್ತು ನಕುಲಸಹದೇವರು ತಮ್ಮ ಸೂತರನ್ನು ಯುದ್ಧದಲ್ಲಿ ತೊಡಗಿಸಿರಲಿಲ್ಲ. ಶವಗಳು ಅಸಂಖ್ಯವಾಗಿದ್ದರಿಂದ ಪ್ರಾಯಃ ಇದ್ದಲ್ಲೇ ಉಳಿದವು.

ವಿ: ಪಾಂಡವರ ಐವರ ಸೂತರಲ್ಲಿ ಕೃಷ್ಣ ಅರ್ಜುನನ ಸಾರಥ್ಯವಹಿಸಿದ್ದರಿಂದ ಅರ್ಜುನನ ಸಾರಥಿಯಾದ ಪೂರು ಎಂಬವನು ಯುದ್ಧದಲ್ಲಿ ಪಾಲ್ಗೊಂಡಿರಲಿಲ್ಲ. ಭೀಮನ ಸಾರಥಿ ವಿಶೋಕ ಯುದ್ಧದಲ್ಲಿ ಪಾಲ್ಗೊಂಡಿದ್ದರೂ, ಭೀಮನ ರಕ್ಷಣೆಯಿಂದಾಗಿ ಬದುಕುಳಿದಿದ್ದ. ಧರ್ಮರಾಜ ನಕುಲಸಹದೇವರು ತಮ್ಮ ಸೂತರನ್ನು ಯುದ್ಧದಲ್ಲಿ ತೊಡಗಿಸಿರಲಿಲ್ಲ. ಹೀಗೆ ಪಾಂಡವರ ಐವರು ಸೂತರೂ ಉಳಿದುಕೊಂಡಿದ್ದರು ಎಂದು ಅರ್ಥ. ಆದ್ದರಿಂದ ಅವರಿಂದ ಆ ರೀತಿಯಾಗಿ ಶವಗಳನ್ನು ಸರಸ್ವತೀನದಿಯಲ್ಲಿ ಬಿಸಾಡಿಸಿದರು ಎಂದಾಗುವುದು.

ಗಂಗೆಯಲ್ಲಿ ಜಲತರ್ಪಣ

ತತೋ ದದತ್ಸು ಪಾನೀಯಂ ಗಂಗಾಯಾಂ ಸ್ವಜನಸ್ಯ ತು ।
ಪೃಥಾ ಕರ್ಣಾಯ ದತ್ತೇತಿ ಪಾರ್ಥಾನಾಹಾಗ್ರಜಂ ಚ ತಮ್ ॥ ೨೨೯ ॥

ಅ: ಬಳಿಕ ಪಾಂಡವರು ಬಂಧುಜನರಿಗೆ ಗಂಗೆಯಲ್ಲಿ ತರ್ಪಣ ನೀಡುತ್ತಿದ್ದಾಗ, ಕರ್ಣ ಪಾಂಡವರ ಅಣ್ಣನೆಂದು ತಿಳಿಸಿ, ''ಅವನಿಗೂ ತರ್ಪಣ ನೀಡಿರಿ'' ಎಂದಳು.

ಧರ್ಮರಾಜ ನೀಡಿದ ಶಾಪ

ತತೋ ಹಾಹೇತಿ ವಿಲಪನ್ ರಾಜಾ ಪರಮದುಃಖಿತಃ ।
ಶಶಾಪ ಸರ್ವನಾರೀಣಾಂ ಗುಹ್ಯಂ ಹೃದಿ ನ ತಿಷ್ಠತು ॥ ೨೩೦ ॥

ಅ: ಬಳಿಕ ಧರ್ಮರಾಜ ಪರಮದುಃಖಿತನಾಗಿ ''ಅಯ್ಯೋ ಅಯ್ಯೋ'' ಎಂಬುದಾಗಿ ಗೋಳಿಡುತ್ತಾ, ''ಸಕಲಸ್ತ್ರೀಯರಿಗೂ ಮನಸ್ಸಿನಲ್ಲಿ ಗುಟ್ಟು ನಿಲ್ಲದಿರಲಿ'' ಎಂದು ಶಾಪವಿತ್ತ.

---

೨೨೮. ನನು ಸೂತಾಃ ಕ್ಷತ್ತಾದಿವಿಶಿಷ್ಟಶವಪ್ರಕ್ಷೇಪಣರೂಪನೀಚಕರ್ಮಣಿ ಕಥಂ ಪ್ರವೃತ್ತಾ ಇತ್ಯತ ಆಹ – ನೃಪ ಇತಿ । ನೃಪೋ ಯಮೌ ಚೇತ್ಯೇತೇ ಸ್ವಾನಾಂ ಚ ಸೂತಾನಾಜೌ ಮೃತಾನಾಂ ಕೇಷಾಂಚಿತ್ ಪ್ರಸಿದ್ಧಾ ಸಜ್ಜನದೇಹಾನಾಂ ತೇಷಾಮ್ । ಪ್ರಕ್ಷೇಪರೂಪಕರ್ಮಣಿ ನ್ಯಯೋಜಯನ್ನಿತಿ ॥ – (ಸ.)

೨೨೮. ಕೇಚಿತ್ ತು ಪ್ರವಾಹಕೋ ನೀತಾ ಇತಿ ಪ್ರಾಯ ಇತ್ಯುಕ್ತಮ್ । ಯದ್ವಾ ಶವಾಃ ಪ್ರಾಯೋ ಯತ್ರ ಯತ್ರ ಪತಿತಾಃ ತತ್ರೈವ ಸ್ಥಿತಾಃ ಬಹಿತ್ವೇನ ಸರಸ್ವತೀಪ್ರಕ್ಷೇಪಸ್ಯಾಶಕ್ಯತ್ವಾದಿತ್ಯರ್ಥಃ । – (ತಾ.)

ವಿ: ಕುಂತಿ ಒಬ್ಬಳಿಗೆ ಶಪಿಸುವ ಬದಲು ಸಕಲಸ್ತ್ರೀಯರಿಗೂ ಧರ್ಮರಾಜ ಶಾಪವಿತ್ತಿದ್ದು 'ಏಕಃ ಪಾಪಾನಿ ಕುರುತೇ ಫಲಂ ಭುಂಕ್ತೇ ಮಹಾಜನಃ' ಎಂಬ ಮಾತಿಗೆ ನಿದರ್ಶನ :

ಅತೋ ಮನಸಿ ಯದ್ ಗುಹ್ಯಂ ಸ್ತ್ರೀಣಾಂ ತನ್ನ ಭವಿಷ್ಯತಿ ॥

– ಭಾರತ (ಸ್ತ್ರೀ. ೨೭/೨೯)

ಕರ್ಣವಧೆಗಾಗಿ ಯುಧಿಷ್ಠಿರನ ಸಂತಾಪ

ಹಾ ಮಾತಸ್ತವ ಧೃತ್ಯೈವ ವಯಂ ಸರ್ವೇ ಭೃಶಂ ಹತಾಃ ।
ಜ್ಯೇಷ್ಠಂ ಪಿತೃಸಮಂ ಹತ್ವಾ ಪ್ರತಿಪತ್ಸ್ಯಾಮ ಕಾಂ ಗತಿಮ್ ॥ ೨೩೧ ॥

ಅ: ''ಅಯ್ಯೋ ಅಮ್ಮಾ! ನಿನ್ನ ಧೃತಿಯಿಂದಾಗಿಯೇ ನಾವೆಲ್ಲ ಹಾಳಾದೆವು. ಪಿತೃಸಮಾನನಾದ ಅಣ್ಣನನ್ನು ಕೊಂದು ನಾವು ಯಾವ ಗತಿಯನ್ನು ಹೊಂದೇವು?''.

ವಿ: ಕುಂತಿಯ ಧೈರ್ಯ ಮಹಾಭಾರತದ ಮುಖ್ಯಸಂದೇಶಗಳಲ್ಲೊಂದು ಎಂಬ ಮಾತೂ ಮಹಾಭಾರತದಲ್ಲಿದೆ : **'ಧೃತಿಂ ಕುಂತ್ಯಾಃ'** (ಆದಿಪರ್ವ ೧/೧೦೦); ಆ ಮಾತಿಗೆ ಈ ಪ್ರಸಂಗ ವಿವರಣೆಯಂತಿರುವುದು ಗಮನಾರ್ಹ..

ಶ್ರೀಕೃಷ್ಣನಾರದರಿಂದ ಕರ್ಣನ ಗುಣಕಥನ

ಏವಂ ವದಂತಂ ಕೌಂತೇಯಂ ವಾಸುದೇವಃ ಸನಾರದಃ ।
ಶಮಯಾಮಾಸ ಸದ್ವಾಕ್ಯೈರ್ಗುಣಾನ್ ಕರ್ಣಸ್ಯ ಚಾಬ್ರವೀತ್ ॥ ೨೩೨ ॥

ಅ: ಹೀಗೆ ಹೇಳುತ್ತಿದ್ದ ಧರ್ಮರಾಜನನ್ನು ಕೃಷ್ಣನೂ, ನಾರದರೂ ಉತ್ತಮಮಾತುಗಳಿಂದ ಸಮಾಧಾನಪಡಿಸಿದರು. ಕರ್ಣನ ಗುಣಗಳನ್ನು ತಿಳಿಸಿದರು.

---

೨೩೨. ಗುಣಾನ್ ಕರ್ಣಸ್ಯ ಚಾಬ್ರವೀದಿತ್ಯತ್ರ ಕರ್ಣಸ್ಯ ಗುಣಾನ್ ''ಜ್ಯೇಷ್ಠೋ ಭೂತ್ವಾ ತ್ವಂ ರಾಜ್ಯಂ ಪಾಲಯ ತವ ಶಾಸನೇ ಪಾಂಡವಾನ್ ಸ್ಥಾಪಯಾಮಿ'' ಇತ್ಯುಕ್ತೇऽಪಿ, ''ರಾಜ್ಯಂ ನ ಕರೋಮಿ । ದುರ್ಯೋಧನಾಯ ಪ್ರಾಣಾನೇವ ತ್ಯಜಾಮಿ'' ಇತ್ಯಾದಿಗುಣಾನ್ ॥ – (ವಾ.)

೨೩೨. ಕರ್ಣಸ್ಯ ಗುಣಾಂಶ್ಚಅವೈಷ್ಣವೇಷು ಪ್ರೀತಿಕರಣಾದಿರೂಪಾನ್ ದುರ್ಗುಣಾನ್ । – (ಜ.)

೨೩೨. ಗುಣಾನ್ ಕರ್ಣಸ್ಯೇತಿ ಗುಣವದ್ಧನನೇ ನಾಧರ್ಮಶಂಕಾರ್ಥಂ ದುರ್ಯೋಧನಸಹಕಾರಿತ್ವೇऽಪಿ ಗುಣೋತ್ತಮ ಇತಿ ಸೂಚಯಿತುಂ ವಾ ಗುಣಾನಾಹೇತಿ ಭಾವಃ । ವರದರಾಜೀಯೇ ತು ವಿಪರೀತಲಕ್ಷಣಯಾ ದುರ್ಗುಣಾನವದದ್ದುಃಖಶಾಂತ್ಯರ್ಥಮಿತ್ಯುಕ್ತಮ್ । – (ತಾ.)

ಎ: ೧) ಇಲ್ಲಿ ಗುಣಗಳು ಎಂದರೆ ದುರ್ಗುಣಗಳು, ದೋಷಗಳು ಎಂದೂ ಅರ್ಥ. ಕರ್ಣನಿಗೆ ಸ್ವತಃ ತಾನೇ ಆಹ್ವಾನವಿತ್ತರೂ, ಅವನು ನಿಮ್ಮ ಪಕ್ಷಕ್ಕೆ ಬರಲು ಒಪ್ಪಲಿಲ್ಲ ಎಂದು ತಿಳಿಸಿ ಸಂತೈಸಿದನು ಎಂದರ್ಥ.

೨) ಪರಶುರಾಮರ ಶಾಪ, *ಬ್ರಾಹ್ಮಣನ ಶಾಪ, ಇಂದ್ರಾದಿದೇವತೆಗಳ ಮಾಯೆ, ಭೀಷ್ಮರಿಗೆ ಅವನು ಮಾಡಿದ ಅವಮಾನ, ಶಲ್ಯನಿಂದಾದ ತೇಜೋವಧೆ, ಶ್ರೀಕೃಷ್ಣನ ಅಪ್ರೀತಿ

---

* ಸ ಕದಾಚಿತ್ ಸಮುದ್ರಾಂತೇ ವಿಚರನ್ನಾಶ್ರಮಾಂತಿಕೇ ।
ಏಕಃ ಖಡ್ಗಧನುಷ್ಪಾಣಿಃ ಪರಿಚಕ್ರಾಮ ಸೂರ್ಯಜಃ ॥
ಸೋಽಗ್ನಿಹೋತ್ರಪ್ರಸಕ್ತಸ್ಯ ಕಸ್ಯಚಿದ್ ಬ್ರಹ್ಮವಾದಿನಃ ।
ಜಘಾನಾಜ್ಞಾನತಃ ಪಾರ್ಥ ಹೋಮಧೇನುಂ ಯದೃಚ್ಛಯಾ ॥
ತದಜ್ಞಾನಕೃತಂ ಮತ್ವಾ ಬ್ರಾಹ್ಮಣಾಯ ನ್ಯವೇದಯತ್ ।
ಕರ್ಣಃ ಪ್ರಸಾದಯಂಶ್ಚೈನಮಿದಮಿತ್ಯಬ್ರವೀದ್ವಚಃ ॥
ಅಬುದ್ಧಿಪೂರ್ವಂ ಭಗವನ್ ಧೇನುರೇಷಾ ಹತಾ ತವ ।
ಮಯಾ ತತ್ರ ಪ್ರಸಾದಂ ಚ ಕುರುಷ್ವೇತಿ ಪುನಃ ಪುನಃ ॥
ತಂ ಸ ವಿಪ್ರೋಽಬ್ರವೀತ್ ಕ್ರುದ್ಧೋ ವಾಚಾ ನಿರ್ಭರ್ತ್ಸಯನ್ನಿವ ।
ದುರಾಚಾರ ವಧಾರ್ಹಸ್ತ್ವಂ ಫಲಂ ಪ್ರಾಪ್ನುಹಿ ದುರ್ಮತೇ ॥
ಯೇನ ವಿಸ್ಪರ್ಧಸೇ ನಿತ್ಯಂ ಯದರ್ಥಂ ಘಟಸೇಽನಿಶಮ್ ।
ಯುಧ್ಯತಸ್ತೇನ ತೇ ಪಾಪ ಭೂಮಿಶ್ಚಕ್ರಂ ಗ್ರಸಿಷ್ಯತಿ ॥
ತತಶ್ಚಕ್ರೇ ಮಹೀಗ್ರಸ್ತೇ ಮೂರ್ಧಾನಂ ತೇ ವಿಚೇತಸಃ ।
ಪಾತಯಿಷ್ಯತಿ ವಿಕ್ರಮ್ಯ ಶತ್ರುರ್ಗಚ್ಛ ನರಾಧಮ ॥
ಯಥೇಯಂ ಗೌರ್ಹತಾ ಮೂಢ ಪ್ರಮತ್ತೇನ ತ್ವಯಾ ಮಮ ।
ಪ್ರಮತ್ತಸ್ಯ ತಥಾಽರಾತಿಃ ಶಿರಸ್ತೇ ಪಾತಯಿಷ್ಯತಿ ॥
ಶಪ್ತಃ ಪ್ರಸಾದಯಾಮಾಸ ಕರ್ಣಸ್ತಂ ದ್ವಿಜಸತ್ತಮಮ್ ।
ಗೋಭರ್ಧನೈಶ್ಚ ರತ್ನೈಶ್ಚ ಸ ಚೈನಂ ಪುನರಬ್ರವೀತ್ ॥
ನ ಹಿ ಮೇಽವ್ಯಾಹೃತಂ ಕುರ್ಯಾತ್ ಸರ್ವಲೋಕೋಽಪಿ ಕೇವಲಮ್ ।
ಗಚ್ಛ ವಾ ತಿಷ್ಠ ವಾ ಯದ್ವಾ ಕಾರ್ಯಂ ತೇ ತತ್ ಸಮಾಚರ ॥
ಇತ್ಯುಕ್ತೋ ಬ್ರಾಹ್ಮಣೇನಾಥ ಕರ್ಣೋ ದೈನ್ಯಾದಧೋಮುಖಃ ।
ರಾಮಮಭ್ಯಗಮದ್ಭೀತಸ್ತದೇವ ಮನಸಾ ಸ್ಮರನ್ ॥ – ಭಾರತ (ಶಾಂತಿ. ೨/೧೯-೨೯)

ಬ್ರಾಹ್ಮಣಸ್ಯಾಭಿಶಾಪೇನ ರಾಮಸ್ಯ ಚ ಮಹಾತ್ಮನಃ ।
ಕುಂತ್ಯಾಶ್ಚ ವರದಾನೇನ ಮಾಯಯಾ ಚ ಶತಕ್ರತೋಃ ॥
ಭೀಷ್ಮಾವಮಾನಾತ್ ಸಂಖ್ಯಾಯಾಂ ರಥಸ್ಯಾರ್ಧಾನುಕೀರ್ತನಾತ್ ।
ಶಲ್ಯಾತ್ ತೇಜೋವಧಾಚ್ಚಾಪಿ ವಾಸುದೇವನಯೇನ ಚ ॥
ರುದ್ರಸ್ಯ ದೇವರಾಜಸ್ಯ ಯಮಸ್ಯ ವರುಣಸ್ಯ ಚ ।...
ಹತೋ ವೈಕರ್ತನಃ ಕರ್ಣೋ ದಿವಾಕರಸಮದ್ಯುತಿಃ ॥
ಏವಂ ಶಪ್ತಸ್ತವ ಭ್ರಾತಾ ಬಹುಭಿಶ್ಚಾಪಿ ವಂಚಿತಃ ।
ನ ಶೋಚ್ಯಃ ಪುರುಷವ್ಯಾಘ್ರ ಯುದ್ಧೇನ ನಿಧನಂ ಗತಃ ॥ – ಭಾರತ (ಶಾಂತಿ. ೫/೧೧-೧೩, ೧೪,೧೫)

ಮೊದಲಾದ ಅನೇಕಕಾರಣಗಳಿಂದಾಗಿ ಕರ್ಣ ಹತನಾದ ಎಂಬುದನ್ನು ತಿಳಿಸಿ, ಯುಧಿಷ್ಠಿರನನ್ನು ಸಮಾಧಾನಪಡಿಸಿದರು ಎಂಬ ವಿವರ ಮಹಾಭಾರತದಲ್ಲಿದೆ.

ರಾಜನಾಗಿ ಯುಧಿಷ್ಠಿರ

ತತಸ್ತೇ ಪ್ರೇತಕಾರ್ಯಾಣಿ ಚಕ್ರುಃ ಸರ್ವೇಽಪಿ ಸರ್ವಶಃ ।
ಸರ್ವೇಷಾಮಾಧಿರಾಜ್ಯೇ ಚ ಸ್ಥಿತೋಽಭೂತ್ ಪಾಂಡವಾಗ್ರಜಃ ॥ ೨೩೩ ॥

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮಹಾಭಾರತತಾತ್ಪರ್ಯನಿರ್ಣಯೇ ಪಾಂಡವರಾಜ್ಯಪ್ರಾಪ್ತಿರ್ನಾಮ
ಅಷ್ಟಾವಿಂಶೋಽಧ್ಯಾಯಃ ॥ ೨೮ ॥

ಅ: ಅನಂತರ ಅವರೆಲ್ಲರೂ ಉತ್ತರಕ್ರಿಯೆಗಳನ್ನು ಮಾಡಿದರು. ಪಾಂಡವರಲ್ಲಿ ಹಿರಿಯನಾದ ಧರ್ಮರಾಜ ಚಕ್ರವರ್ತಿಪದವಿಯನ್ನು ಪಡೆದ.

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಪ್ರಣೀತ ಮಹಾಭಾರತತಾತ್ಪರ್ಯನಿರ್ಣಯದಲ್ಲಿ
'ಪಾಂಡವರಾಜ್ಯಪ್ರಾಪ್ತಿ' ಎಂಬ ಇಪ್ಪತ್ತೆಂಟನೆಯ ಅಧ್ಯಾಯ ಮುಗಿಯಿತು ॥ ೨೮ ॥

॥ ಶ್ರೀಕೃಷ್ಣಾರ್ಪಣಮಸ್ತು ॥

★★★★★

ಅಧ್ಯಾಯ - ೨೯

(ಧರ್ಮರಾಜಸಂದೇಹನಿವೃತ್ತಿಕಥನಮ್)

(ಧರ್ಮರಾಜನಿಗೆ ಪಟ್ಟಾಭಿಷೇಕ, ಚಾರ್ವಾಕಸಂಹಾರ, ಧರ್ಮರಾಜನ ವಿಷಾದ, ಭೀಷ್ಮೋಪದೇಶ, ಭಾಗವತಧರ್ಮವಿವೇಕ, ವರ್ಣಾಶ್ರಮಧರ್ಮಗಳು, ಸ್ತ್ರೀಧರ್ಮಗಳು, ತಮಃಸಾಧನಗಳು, ಪುರುಷಾರ್ಥವಿವೇಕ, ಕಾಮದ ಹಿರಿಮೆ)

ಭೀಮ ಯುಧಿಷ್ಠಿರರಿಗೆ ರಾಜ್ಯಾಭಿಷೇಕ

ಯದೈವ ಕೃಷ್ಣೌ ಸಕಲಾಧಿರಾಜ್ಯೇ
ಯುಧಿಷ್ಠಿರಂ ಯೌವರಾಜ್ಯೇ ಚ ಭೀಮಮ್ ।
ವಿಪ್ರೈರ್ಯುಕ್ತಾವಭಿಷಿಚ್ಯಾಶಿಷಶ್ಚ
ಯುಕ್ತಾ ದತ್ವಾ ಹರ್ಷಯಾಮಾಸತುಸ್ತೌ ॥ ೧ ॥

ಅ: ವಾಸಿಷ್ಠಕೃಷ್ಣ ಮತ್ತು ಯಾದವಕೃಷ್ಣರಾದ ಶ್ರೀಕೃಷ್ಣ ವ್ಯಾಸರು ಚಕ್ರಾಧಿಪತ್ಯದಲ್ಲಿ ಧರ್ಮರಾಜನನ್ನು, ಯೌವರಾಜ್ಯದಲ್ಲಿ ಭೀಮಸೇನನನ್ನು ವಿಪ್ರರೊಂದಿಗೆ ಕೂಡಿದವರಾಗಿ ಪಟ್ಟಾಭಿಷೇಕ ಮಾಡಿದರು. ಆಶೀರ್ವಚನಗಳನ್ನಿತ್ತು ಆನಂದಪಡಿಸಿದರು.

ತ್ರಿದಂಡಿಯಾಗಿ ಚಾರ್ವಾಕ

ತದೈವ ಚಾರ್ವಾಕ ಇತಿ ಪ್ರಸಿದ್ಧಂ
ರಕ್ಷಸ್ತ್ರಿದಂಡೀ ಯತಿರೇವ ಭೂತ್ವಾ।
ಯುಧಿಷ್ಠಿರಂ ಗರ್ಹಯಾಮಾಸ ವಿಪ್ರಾ-
ಸ್ತ್ವಾಂ ಗರ್ಹಯಂತೀತಿ ಸುಪಾಪಶೀಲಃ ॥ ೨ ॥

ಅ: ಆಗಲೇ ಚಾರ್ವಾಕ ಎಂಬ ಅತ್ಯಂತ ಪಾಪಸ್ವಭಾವದ ರಾಕ್ಷಸ ತ್ರಿದಂಡಿ ಸನ್ಯಾಸಿಯಾಗಿ ಧರ್ಮರಾಜನನ್ನು 'ವಿಪ್ರರು ನಿನ್ನನ್ನು ತೆಗಳುತ್ತಿರುವರು' ಎಂದು ನಿಂದಿಸಿದ.

---

೨. ಇಮೇ ಪ್ರಾಹುರ್ದ್ವಿಜಾಃ ಸರ್ವೇ ಸಮಾರೋಪ್ಯ ವಚೋ ಮಯಿ।
ಧಿಗ್ ಭವಂತಂ ಕುನೃಪತಿಂ ಜ್ಞಾತಿಘಾತಿನಮಸ್ತುವೈ।
ಕಿಂ ತೇನ ಸ್ಯಾದ್ಧಿ ಕೌಂತೇಯ ಕೃತ್ವೇಮಂ ಜ್ಞಾತಿಸಂಕ್ಷಯಮ್।
ಘಾತಯಿತ್ವಾ ಗುರೂಂಶ್ಚೈವ ಮೃತಂ ಶ್ರೇಯೋ ನ ಜೀವಿತಮ್ ॥

– ಭಾರತ (ಶಾಂತಿಪರ್ವ. ೩೮/೨೬,೨೭)

ವಿಪ್ರರಿಂದ ಚಾರ್ವಾಕ ಸಂಹಾರ

ಶ್ರುತ್ವೈವ ತದ್ದುಃಖಿತಮಾಶು ಧರ್ಮಜಂ
ದೃಷ್ಟ್ವಾ ವಿಪ್ರಾಃ ಶೇಷುರಮುಂ ಭೃಶಾರ್ತಾಃ ।
ಅಗರ್ಹಿತಂ ನಿತ್ಯಮಸ್ಮಾಭಿರೇನಂ
ಯತೋಽವೋಚೋ ಗರ್ಹಿತಮದ್ಯ ಪಾಪ ।
ಭಸ್ಮೀಭವಾಶ್ವೇವ ತತಸ್ತ್ವತೀರಿತೇ
ಕ್ಷಣಾದಭೂತ್ ಪಾಪತಮಃ ಸ ಭಸ್ಮಸಾತ್ ॥ ೩ ॥

ಅ: ಅದನ್ನು ಕೇಳುತ್ತಲೇ ಧರ್ಮರಾಜ ಕೂಡಲೇ ದುಃಖಿತನಾದದ್ದನ್ನು ಕಂಡು ವಿಪ್ರರು ತುಂಬಾ ನೊಂದವರಾಗಿ ನಾವು ಇವನನ್ನು ತೆಗಳದಿದ್ದರೂ ತೆಗಳುತ್ತಿರುವೆವೆಂದು ಹೇಳುತ್ತಿರುವುದರಿಂದ ಕೂಡಲೇ ಸುಟ್ಟು ಬೂದಿಯಾಗು ಎಂದು ಆ ರಾಕ್ಷಸನನ್ನು ಶಪಿಸಿದರು. ಅವರು ಹೀಗೆನ್ನುತ್ತಲೇ ಆ ಕ್ಷಣದಲ್ಲೇ ಆ ಮಹಾಪಾಪಿ ಸುಟ್ಟು ಬೂದಿಯಾದ.

ಕೃಷ್ಣ ತಿಳಿಸಿದ ಚಾರ್ವಾಕನ ಪೂರ್ವೇತಿಹಾಸ

ಭಸ್ಮೀಕೃತೇಽಸ್ಮಿನ್ ಯತಿವೇಷಧಾರಿಣಿ
ಯುಧಿಷ್ಠಿರಂ ದುಃಖಿತಂ ವೃಷ್ಣಿಸಿಂಹಃ ।
ಪ್ರೋವಾಚ ನಾಯಂ ಯತಿರುಗ್ರಕರ್ಮಾ
ಸುಯೋಧನಸ್ಯೈವ ಸಖಾ ಸುಪಾಪಃ ॥ ೪ ॥

ರಕ್ಷೋಽಧಮೋಽಯಂ ನಿಹತೋಽದ್ಯ
ವಿಪ್ರೈಸ್ತನ್ಮಾ ಶುಚಃ ಕೃತಕಾರ್ಯೋಽಸಿ ರಾಜನ್ ।
ಇತೀರಿತಃ ಶಾಂತಮನಾಃ ಸ ವಿಪ್ರಾನ್
ಸಂತರ್ಪಯಾಮಾಸ ಧನೈಶ್ಚ ಭಕ್ಷ್ಯೈ ॥ ೫ ॥

---

೩. ತತಸ್ತೇ ಬ್ರಾಹ್ಮಣಾಃ ಸರ್ವೇ ಹುಂಕಾರೈಃ ಕ್ರೋಧಮೂರ್ಛಿತಾಃ ।
ನಿರ್ಭರ್ತ್ಸಯಂತಃ ಶುಚಯೋ ನಿಜಘ್ನುಃ ಪಾಪರಾಕ್ಷಸಮ್ ॥
ಸ ಪಪಾತ ವಿನಿರ್ದಗ್ಧಸ್ತೇಜಸಾ ಬ್ರಹ್ಮವಾದಿನಾಮ್ ॥ – ಭಾರತ (ಶಾಂತಿ. ೩೮/೩೫)

ಅ: ಸನ್ಯಾಸಿ ವೇಷದ ಅವನು ಹಾಗೆ ಬೂದಿಯಾಗುತ್ತಲೇ ದುಃಖಿತನಾದ ಧರ್ಮರಾಜನಿಗೆ ವೃಷ್ಣಿಶ್ರೇಷ್ಠನಾದ ಕೃಷ್ಣ ತಿಳಿಸಿದ : 'ಇವನು ಯತಿಯಲ್ಲ, ಕ್ರೂರಕರ್ಮಿಯಾದ ಇವನು ಮಹಾ-ಪಾಪಿ; ದುರ್ಯೋಧನನಿಗೆ ಮಿತ್ರನಾದ ರಾಕ್ಷಸಾಧಮ. ಈಗ ಮುನಿಗಳಿಂದ ಹತನಾದ. ಆದ್ದರಿಂದ ನೀನು ಶೋಕಿಸಬೇಡ. ನೀನು ಮಾಡಬೇಕಾದದ್ದನ್ನೇ ಮಾಡಿರುವಿ'. ಶ್ರೀಕೃಷ್ಣ ಹೀಗೆನ್ನಲು ಧರ್ಮರಾಜ ನೆಮ್ಮದಿಹೊಂದಿ ಭಕ್ತಿಯಿಂದ ಬ್ರಾಹ್ಮಣರನ್ನು ಧನಗಳಿಂದ ಸಂತೋಷಪಡಿಸಿದ.

ಎ: ೧) ಆ ರಾಕ್ಷಸನ ಹೆಸರು ಚಾರ್ವಾಕ. ಆ ಚಾರ್ವಾಕನ ವಿವರವನ್ನು ಸಂಜಯನಿಗೆ ದುರ್ಯೋಧನನೇ ತಿಳಿಸಿದ ವಿವರ ಮಹಾಭಾರತದಲ್ಲಿದೆ :

---

೫. ಪುರಾ ಕೃತಯುಗೇ ರಾಜಂಶ್ಚಾರ್ವಾಕೋ ನಾಮ ರಾಕ್ಷಸಃ ।
ತಪಸ್ತೇಪೇ ಮಹಾಬಾಹೋ ಬದರ್ಯಾಂ ಬಹುವಾರ್ಷಿಕಮ್ ॥
ವರೇಣ ಛಂದ್ಯಮಾನಶ್ಚ ಬ್ರಹ್ಮಣಾ ಚ ಪುನಃ ಪುನಃ ॥
ಅಭಯಂ ಸರ್ವಭೂತೇಭ್ಯೋ ವರಯಾಮಾಸ ಭಾರತ ॥
ದ್ವಿಜಾವಮಾನಾದನ್ಯತ್ರ ಪ್ರಾದಾದ್ವರಮನುತ್ತಮಮ್ ।
ಅಭಯಂ ಸರ್ವಭೂತೇಭ್ಯೋ ದದೌ ತಸ್ಮೈ ಜಗತ್ಪತಿಃ ॥
ಸ ತು ಲಬ್ಧವರಃ ಪಾಪೋ ದೇವಾನಮಿತವಿಕ್ರಮಃ ।
ತತೋ ದೇವಾಃ ಸಮೇತಾಶ್ಚ ಬ್ರಹ್ಮಾಣಮಿದಮಬ್ರುವನ್ ।
ತಾನುವಾಚ ತತೋ ದೇವೋ ವಿಹಿತಸ್ತತ್ರ ವೈ ಮಯಾ ।
ಯಥಾಽಸ್ಯ ಭವಿತಾ ಮೃತ್ಯುರಚಿರೇಣೇತಿ ಭಾರತ ॥
ರಾಜಾ ದುರ್ಯೋಧನೋ ನಾಮ ಸಖಾಽಸ್ಯ ಭವಿತಾ ನೃಷು ।
ತಸ್ಯ ಸ್ನೇಹಾನುಬದ್ಧೋಽಸೌ ಬ್ರಾಹ್ಮಣಾನವಮಂಸ್ಯತೇ ॥
ತತ್ತೈವಂ ರುಷಿತಾ ವಿಪ್ರಾ ವಿಪ್ರಕಾರಪ್ರಧರ್ಷಿತಾಃ ।
ಧಕ್ಷ್ಯಂತಿ ವಾಗ್ಬಲಾಃ ಪಾಪಂ ತತೋ ನಾಶಂ ಗಮಿಷ್ಯತಿ ॥
ಸ ಏಷ ನಿಹತಃ ಶೇತೇ ಬ್ರಹ್ಮದಂಡೇನ ರಾಕ್ಷಸಃ ।
ಚಾರ್ವಾಕೋ ನೃಪತಿಶ್ರೇಷ್ಠ ಮಾ ಶುಚೋ ಭರತರ್ಷಭ ॥
- ಶ್ರೀಕೃಷ್ಣವಚನ ಭಾರತ (ಶಾಂತಿ. ೩೯/೩-೧೧)

೫. ಯದಿ ಜಾನಾತಿ ಚಾರ್ವಾಕಃ ಪರಿವ್ರಾಡ್ ವಾಗ್ವಿಶಾರದಃ ।
ಕರಿಷ್ಯತಿ ಮಹಾಭಾಗೋ ಧ್ರುವಂ ಚಾಪಚಿತಿಂ ಮಮ ॥
- ದುರ್ಯೋಧನನ ವಚನ ಭಾರತ (ಶಾಂತಿ. ೬೪/೩೮)

೫. ಯತಃ ಕೃತಕಾರ್ಯೋಽಸಿ । ತ್ವದೀಯಂ ಕಾರ್ಯಂ ದುಷ್ಪ್ರಹರ್ಷಣರೂಪಂ ವಿಪ್ರೈರೇವ ಸಂಪಾದಿತತ್ವಾದಿತಿ ಭಾವಃ । - (ವ.)

ಯದಿ ಜಾನಾತಿ ಚಾರ್ವಾಕಃ ಪರಿವ್ರಾಡ್ ವಾಗ್ವಿಶಾರದಃ ।
ಕರಿಷ್ಯತಿ ಮಹಾಭಾಗೋ ಧ್ರುವಂ ಚಾಪಚಿತಿಂ ಮಮ ॥–ಭಾರತ(೯/೬೪/೩೮, ೩೯)

೨) ಕೃತಯುಗದ ಆ ರಾಕ್ಷಸ ಬದರಿಯಲ್ಲಿ ತೀವ್ರತಪಸ್ಸು ಮಾಡಿ ಬ್ರಹ್ಮನಿಂದ ಅವಧ್ಯತ್ವ ವರವನ್ನು ಪಡೆದಿದ್ದ. 'ಬ್ರಾಹ್ಮಣಾವಮಾನದ ಹೊರತು ನಿನಗೆ ಸಾವಿಲ್ಲ' ಎಂದು ಹೇಳಿ ಬ್ರಹ್ಮ ವರ ನೀಡಿದ್ದ:

ಪುರಾ ಕೃತಯುಗೇ ರಾಜಂಶ್ಚಾರ್ವಾಕೋ ನಾಮ ರಾಕ್ಷಸಃ ।
ತಪಸ್ತೇಪೇ ಮಹಾಬಾಹೋ ಬದರ್ಯಾಂ ಬಹುವಾರ್ಷಿಕಮ್ ॥...
ದ್ವಿಜಾವಮಾನಾದನ್ಯತ್ರ ಪ್ರಾದಾದ್ವರಮನುತ್ತಮಮ್ ।
ಅಭಯಂ ಸರ್ವಭೂತೇಭ್ಯೋ ದದೌ ತಸ್ಮೈ ಜಗತ್ಪತಿಃ ॥
– ಭಾರತ (ಶಾಂತಿ. ೩೯/೩, ೫)

ಅವನು ಹೀಗೆ ಧರ್ಮರಾಜನನ್ನು ಬ್ರಾಹ್ಮಣರು ನಿಂದಿಸುತ್ತಿರುವರು ಎಂದು ಸುಳ್ಳು ಹೇಳಿದ್ದರಿಂದ ಅದು ಬ್ರಾಹ್ಮಣ ನಿಂದೆಯೇ ಆಯಿತು. ಅದರಿಂದಾಗಿ ಅವನು ಹತನಾದ.

೩) ದುರ್ಯೋಧನ ಕಲಿ; ಚಾರ್ವಾಕ ಅವನ ಸ್ನೇಹಿತ. ಚಾರ್ವಾಕ ನಾಸ್ತಿಕ್ಯದ ಸಂಕೇತ, ಕಲಿಯುಗದಲ್ಲಿ ನಾಸ್ತಿಕರೇ ಹೆಚ್ಚು ಕಲಿಗೆ ಅಧರ್ಮಪ್ರಸಾರಕ್ಕೆ, ಧರ್ಮವಿರೋಧಕ್ಕೆ ಸಹಕಾರಿ–ಗಳಾಗಿರುವರು ಎಂಬ ಸೂಚನೆ ಇದರಲ್ಲಿದೆ.

೪) ನಾಸ್ತಿಕರು ಸನ್ಯಾಸಿರೂಪದಿಂದ ಕಲಿಯುಗದಲ್ಲಿ ಅಧರ್ಮಪ್ರಸಾರ ಮಾಡುವರು ಎಂದು ಇದರಿಂದ ತಿಳಿಯುವುದು.

ಧರ್ಮರಾಜನ ಆಳ್ವಿಕೆ

ಅಸಾಂತ್ವಯಚ್ಚ ಬಾಂಧವಾನ್ ಸ ಪೌರಸಂಶ್ರಿತಾದಿಕಾನ್ ।
ದದೌ ಯಥೇಷ್ಟತೋ ಧನಂ ರರಕ್ಷ ಚಾನು ಪುತ್ರವತ್ ॥ ೬ ॥

ಅ: ಧರ್ಮರಾಜ ಬಂಧುಗಳನ್ನು, ಪೌರರನ್ನು, ಆಶ್ರಿತರು ಮೊದಲಾದವರನ್ನು ಸಮಾಧಾನಪಡಿಸಿದ. ಯಥೇಚ್ಛವಾಗಿ ಧನ ನೀಡಿದ; ಮಕ್ಕಳಂತೆ ಪಾಲಿಸಿದ.

ಯುಧಿಷ್ಠಿರನ ವೈರಾಗ್ಯ

ಸ ಭೀಷ್ಮದ್ರೋಣಕರ್ಣಾನಾಂ ವಧಾದ್ದುರ್ಯೋಧನಸ್ಯ ಚ ।
ಪಾಪಾಶಂಕೀ ತಪ್ಯಮಾನೋ ರಾಜ್ಯತ್ಯಾಗೇ ಮನೋ ದಧೇ ॥ ೭ ॥

ಅ: ಧರ್ಮರಾಜ ಭೀಷ್ಮ, ದ್ರೋಣ, ಕರ್ಣರ ಮತ್ತು ದುರ್ಯೋಧನರ ವಧೆಯಿಂದಾಗಿ ತನಗೆ ಪಾಪ ಒದಗಿದೆಯೆಂದು ಪರಿತಪಿಸುತ್ತಾ ರಾಜ್ಯತ್ಯಾಗ ಮಾಡಲು ಮನಸ್ಸು ಮಾಡಿದ.

ವಿ: ಹಿರಿಯರೆಂಬ ಕಾರಣದಿಂದ ಭೀಷ್ಮ, ದ್ರೋಣ, ಕರ್ಣರ ವಧೆಗಾಗಿ ಪರಿತಪಿಸಿದ ಧರ್ಮರಾಜ ಅಧರ್ಮದಿಂದ ದುರ್ಯೋಧನ ಹತನಾದ ಎಂಬ ಕಾರಣದಿಂದ ಅವನ ವಧೆಯ ಬಗ್ಗೆಯೂ ಪರಿತಪಿಸಿದ. ಭೀಷ್ಮಾದಿಗಳೂ ಅಧರ್ಮದಿಂದ ಹತರಾದರು ಎಂಬ ಶಂಕೆಯೂ ಅವನಿಗೆ ಹುಟ್ಟಿತ್ತು(೨೮/೮೭).

ಸೋಽನುಜ್ಞೈಃ ಕೃಷ್ಣಯಾ ವಿಪ್ರೈರಪ್ಯುಕ್ತೋ ಧರ್ಮಶಾಸನಮ್ ।
ಭೀಮಂ ಸಂಪ್ರಾರ್ಥಯಿತ್ವೈವ ನ ವೇತ್ತೀತ್ಯಾಹ ಫಲ್ಗುನಮ್ ॥ ೮ ॥

ಅ: ತಮ್ಮಂದಿರು, ದ್ರೌಪದಿ, ವಿಪ್ರರು ಧರ್ಮೋಪದೇಶವನ್ನು ಮಾಡಿದಾಗ ಸಹ ಧರ್ಮರಾಜ ಭೀಮನನ್ನು ತನಗೆ ಉಪದೇಶ ನೀಡದಿರಲು ಕೇಳಿಕೊಂಡ. ಅರ್ಜುನನಿಗೆ ''ನಿನಗೆ ತಿಳಿಯದು'' ಎಂದ.

ವಿ: ಭೀಮನ ಧರ್ಮಪರಿಣತಿಯನ್ನು ಸ್ವತಃ ಅನೇಕ ಪ್ರಸಂಗಗಳಲ್ಲಿ ತಿಳಿದಿದ್ದ ಧರ್ಮರಾಜ ಭೀಮನಿಗೆ ಪ್ರತಿಯಾಗಿ ಮಾತನಾಡಲಾಗದೇ ಕೇವಲ ಉಪದೇಶ ಮಾಡಬೇಡವೆಂದು ಬೇಡಿದ. ಅರ್ಜುನನನ್ನು ಮಾತ್ರ ಧರ್ಮ ತಿಳಿಯದವನೆಂದೇ ಜರಿದ.

ತಸ್ಮಿನ್ ಕ್ರುದ್ಧೇ ನೃಪಂ ಪ್ರಾಹುರ್ವಿಪ್ರಾಸ್ತ್ವತ್ತೋಽಪಿ ಧರ್ಮವಿತ್ ।
ಶಕ್ರೋಽರ್ಜುನ ಇತಿ ಶ್ರುತ್ವಾಽಪ್ಯೇತದ್ಧರ್ಮೇ ಸಸಂಶಯಮ್ ॥ ೯ ॥

ಅ: ಅರ್ಜುನ ಕೋಪಗೊಂಡಾಗ ವಿಪ್ರರು ಧರ್ಮರಾಜನಿಗೆ ತಿಳಿಹೇಳಿದರು : 'ಅರ್ಜುನ ನಿನಗಿಂತಲೂ ಹೆಚ್ಚಾಗಿ ಧರ್ಮತತ್ತ್ವ ಬಲ್ಲವನು; ಅವನು ಇಂದ್ರಾವತಾರ'. ಅದನ್ನು ಕೇಳಿಯೂ ಧರ್ಮರಾಜ ಧರ್ಮದ ಬಗ್ಗೆ ಸಂದೇಹವನ್ನು ಬಿಡಲಿಲ್ಲ.

---

೭. ಸ ರಾಜಾ ಪಾಪಮಾಶಂಕತೇಽಸೌ ಪಾಪಾಶಂಕೀ ಸ್ವಸ್ಯಪಾಪಮಭೂದಿತಿ ಶಂಕಮಾನಃ ಸನ್ । – (ಜ.)

೮. ಭೀಮಂ ಸಂಪ್ರಾರ್ಥಯಿತ್ವೈವೇತ್ಯತ್ರ ರಾಜಾ ಭವೇತಿ ಸಂಪ್ರಾರ್ಥಯಿತ್ವಾ ॥ – (ವಾ.)

೮. ತ್ವಂ ತು ಕೇವಲಮಸ್ಪಷ್ಟೋ ವೀರವ್ರತಸಮನ್ವಿತಃ ।
ಶಾಸ್ತ್ರಾರ್ಥಂ ತತ್ತ್ವತೋ ಗಂತುಂ ನ ಸಮರ್ಥಃ ಕಥಂಚನ ॥ – ಭಾರತ (ಶಾಂತಿ. ೧೯/೩)

೯. ಬೀಭತ್ಸೋರ್ವಚನಂ ಸೌಮ್ಯ ಸತ್ಯಮೇದದ್ ಯುಧಿಷ್ಠಿರ ।
ಶಾಸ್ತ್ರದೃಷ್ಟಃ ಪರೋ ಧರ್ಮಃ ಸ್ಥಿತೋ ಗಾರ್ಹಸ್ಥ್ಯಮಾಶ್ರಿತಃ ॥ – ಭಾರತ (ಶಾಂತಿ ೨೩/೨)

ಯಾರ ಉಪದೇಶಕ್ಕೂ ಮಣಿಯದ ಯುಧಿಷ್ಠಿರ

ಮತ್ಸ್ನೇಹಾದೇವ ಸರ್ವೇಽಪಿ ಧರ್ಮೋಽಯಮಿತಿ ವಾದಿನಃ ।
ಇತ್ಯೇವಂ ಶಂಕಮಾನಂ ತಮೂಚತುರ್ವಿಪ್ರಯಾದವೌ ॥ ೧೦॥

ಕೃಷ್ಣೋ ಧರ್ಮೋಽಯಮಿತ್ಯೇವ ಶಾಸ್ತ್ರಯುಕ್ತ್ಯಾ ಪುನಃ ಪುನಃ ।
ನಾತಿನಿಶ್ಚಿತಬುದ್ಧಿಂ ತಂ ತದಾಽಪಿ ಪುರುಷೋತ್ತಮೌ ॥ ೧೧ ॥

ಭೀಷ್ಮರ ಬಳಿಗೆ ತೆರಳಲು ವ್ಯಾಸ ಕೃಷ್ಣರ ಆದೇಶ

ಹತಪಕ್ಷಗತತ್ವೇನ ತಚ್ಛಂಕಾಯಾ ಅಗೋಚರಃ ।
ಯತೋ ಭೀಷ್ಮಸ್ತತೋ ಯಾಹಿ ತಮಿತ್ಯೂಚತುರವ್ಯಯೌ ॥ ೧೨ ॥

ಅ: ನನ್ನ ಮೇಲಿನ ಪ್ರೀತಿಯಿಂದಾಗಿಯೇ ಎಲ್ಲರೂ ಧರ್ಮವೆಂದು ಹೇಳುತ್ತಿರುವರು ಎಂದು ಸಂದೇಹಿಸಿದ ಅವನಿಗೆ ಕೃಷ್ಣ ವೇದವ್ಯಾಸರು 'ಅದು ಧರ್ಮವೇ ಆಗಿದೆ' ಎಂದು ಶಾಸ್ತ್ರದಿಂದಲೂ, ಯುಕ್ತಿಯಿಂದಲೂ ಮತ್ತೆ ಮತ್ತೆ ತಿಳಿಸಿದರು. ಆಗಲೂ ಅಷ್ಟಾಗಿ ಧರ್ಮನಿಶ್ಚಯ ಹೊಂದದ ಅವನಿಗೆ ಪುರುಷೋತ್ತಮರೂ, ಅವ್ಯಯರೂ ಆದ ಅವರಿಬ್ಬರೂ ''ಶತ್ರುಪಕ್ಷದಲ್ಲಿ ಸೇರಿರುವುದರಿಂದ ಭೀಷ್ಮರು ನಿನ್ನ ಶಂಕೆಗೆ ಪಾತ್ರರಾಗಲಾರರು. ಆದ್ದರಿಂದ ಅವನ ಬಳಿ ತೆರಳು'' ಎಂದು ತಿಳಿಸಿದರು.

ವಿ: ೧) ದುರ್ಯೋಧನ ತಾನು ತಪ್ಪನ್ನೇ ಮಾಡುತ್ತಿದ್ದರೂ ಅದನ್ನು ಕೃಷ್ಣ, ವ್ಯಾಸರು, ಪರಶುರಾಮ, ಭೀಷ್ಮ, ದ್ರೋಣ, ವಿದುರ, ಋಷಿಮುನಿಗಳು, ತಂದೆ ತಾಯಿಗಳು ಮೊದಲಾಗಿ ಸಕಲರೂ ಹೇಳಿದರೂ ಅವರೆಲ್ಲ ಪಾಂಡವರ ಮೇಲಿನ ಪಕ್ಷಪಾತದಿಂದಾಗಿ ಹಾಗೆ ತನ್ನಲ್ಲಿ ದೋಷಾರೋಪಣೆ ಮಾಡುತ್ತಿರುವರು ಎಂದು ಭಾವಿಸುತ್ತಿದ್ದ.

೨) ಧರ್ಮರಾಜ ಅದಕ್ಕೆ ವಿರುದ್ಧವಾಗಿ ತಾನು ಸರಿಯಾಗಿಯೇ ನಡೆದಿದ್ದರೂ ಅದನ್ನು ಕೃಷ್ಣ ವ್ಯಾಸರು ಮೊದಲಾಗಿ ಎಲ್ಲರೂ ಬಗೆಬಗೆಯಾಗಿ ಸಮರ್ಥಿಸಿದರೂ ಅವರೆಲ್ಲ ಹಾಗೆ ದೋಷವಲ್ಲ ಎನ್ನುತ್ತಿರುವುದು ಸ್ನೇಹದ ಕಾರಣದಿಂದಾಗಿ ಎಂದು ಆರೋಪಿಸಿದ.

೩) ಎಂದರೆ ತಪ್ಪು ಮಾಡಿದ ದುರ್ಯೋಧನನಿಗೆ ಅದೇ ಸರಿ ಎಂಬ ನಿಶ್ಚಯವಾದರೆ, ಸರಿ ಮಾಡಿದ ಧರ್ಮರಾಜನಿಗೆ ಅದು ತಪ್ಪು ಎಂಬ ಭ್ರಾಂತಿ. ಇದರಿಂದ ದುರ್ಯೋಧನ ಪುಣ್ಯಭೀರುವಾದರೆ, ಧರ್ಮರಾಜ ಪಾಪಭೀರು ಎಂಬುದು ಸ್ಥಿರಪಡುವುದು. ಇಬ್ಬರೂ ತಪ್ಪು ಮಾಡಿದವರೇ ಎಂಬುದನ್ನು ಗಮನಿಸಬೇಕು. ದುರ್ಯೋಧನನ ದ್ರೋಹ ಅವನ ಪಾಪವೃದ್ಧಿಗೆ ಕಾರಣವಾದರೆ, ಧರ್ಮರಾಜನ ತಪ್ಪು ಅವನ ಪುಣ್ಯಹ್ರಾಸಕ್ಕೆ ಕಾರಣವಾಯಿತು.

೪) ಅರ್ಜುನ ಯುದ್ಧಕ್ಕಿಂತ ಮುಂಚೆ ಅದನ್ನು ಅಧರ್ಮವೆಂದು ಬಗೆದು ತೊರೆಯಲು ಹೊರಟವನು. ಧರ್ಮರಾಜ ಯುದ್ಧದ ಯೋಚನೆಯನ್ನೇ ಮೊದಲು ಹೊಂದದಿದ್ದರೂ ಭೀಮು, ದ್ರೌಪದಿಯರ ಉಪದೇಶದಿಂದ ಅದಕ್ಕೆ ಸಿದ್ಧನಾಗಿ ಯುದ್ಧಮಾಡಿದ. ಆದರೆ, ಈಗ ಅದು ಅಧರ್ಮ ಎಂಬ ಭಾವನೆಯಿಂದ ಕೊರಗತೊಡಗಿದ.

೫) ಭೀಮು ಮಾತ್ರ ಸರ್ವದಾ ಆ ಧರ್ಮಯುದ್ಧವನ್ನು ಖಚಿತವಾಗಿ ಧರ್ಮವೆಂದೇ ತಿಳಿದು ಹರಿಪ್ರೀತಿಗಾಗಿ ಆಚರಿಸಿದ. ಇದರಿಂದ ಅತ್ಯುತ್ತಮ ಪುಣ್ಯಭಾಗಿ ಭೀಮಸೇನ ಎಂದು, ಬಳಿಕ ಮೊದಲು ಮಾತ್ರ ಕೊರಗಿದ ಅರ್ಜುನ ಎಂದು, ಅನಂತರದ ಸ್ಥಾನ ಹೀಗೆ ಗೊಂದಲಕ್ಕೊಳಗಾದ ಧರ್ಮರಾಜನದು ಎಂದು ತಿಳಿಯಬೇಕು. ನಕುಲ, ಸಹದೇವರದು ಅನಂತರದ ಸ್ಥಾನ.

೬) ಭೀಮನ ಅನಂತರದ ಸ್ಥಾನ ನಿಶ್ಚಿತವಾಗಿಯೂ ದ್ರೌಪದಿಯದೇ. ಪುಣ್ಯ, ಪಾಪ ಎರಡೂ ಸಹ ಅವುಗಳನ್ನು ಮಾಡಿದ ಅನಂತರ ಪರಿತಪಿಸಿದರೆ ಕ್ಷಯಿಸುವವು ಎಂಬುದು ಶಾಸ್ತ್ರವಚನ. ಧರ್ಮಾಚರಣೆ ಮಾಡಿಯೂ ಧರ್ಮರಾಜ ವಿನಾಕಾರಣವಾಗಿ ಪರಿತಪಿಸಿ ಪುಣ್ಯಹಾನಿಗೊಳಗಾದರೆ, ದುರ್ಯೋಧನ ಅಧರ್ಮಾಚರಣೆ ಮಾಡಿಯೂ ಅದಕ್ಕಾಗಿ ಸ್ವಲ್ಪವೂ ಪರಿತಪಿಸದೆ ಹೆಚ್ಚಿನ ಪಾಪಕ್ಕೇ ಗುರಿಯಾದ. ಹೀಗೆ ಧರ್ಮರಾಜ ದುರ್ಯೋಧನರಲ್ಲಿನ ವ್ಯಕ್ತಿತ್ವದ ಅಪಾರವ್ಯತ್ಯಾಸವನ್ನು ಗಮನಿಸಬೇಕು.

ಭೀಷ್ಮರ ಬಳಿಗೆ ಧರ್ಮಾದಿಗಳು

ಸ ತಾಭ್ಯಾಂ ಭ್ರಾತೃಭಿಶ್ಚೈವ ಮುನಿಭಿಶ್ಚ ಸಮನ್ವಿತಃ ।
ಭೀಷ್ಮಂ ಯಯೌ ಲಜ್ಜಿತೇಽಸ್ಮಿಂಸ್ತಂ ಭೀಷ್ಮಾಯಾಹ ಕೇಶವಃ ॥ ೧೩ ॥

ಅ: ಧರ್ಮರಾಜ ಕೃಷ್ಣ, ವೇದವ್ಯಾಸರೊಂದಿಗೂ, ಸಹೋದರರೊಂದಿಗೂ ಮುನಿಗಳೊಂದಿಗೂ ಕೂಡಿಕೊಂಡು ಭೀಷ್ಮರ ಬಳಿಗೆ ತೆರಳಿದ; ಧರ್ಮರಾಜ ಲಜ್ಜಿಪಟ್ಟಾಗ ಕೃಷ್ಣ ಭೀಷ್ಮರಿಗೆ ಹೇಳಿದ.

ವಿ: ೧) ಕೃಷ್ಣ, ವ್ಯಾಸರ ಸಲಹೆ ಧರ್ಮರಾಜನಿಗೆ ಒಪ್ಪಿತವಾದರೂ ಅಲ್ಲಿಗೆ ಹೋಗಲು ಸಂಕೋಚದಿಂದ ಹಿಂತೆಗೆದ. ಆಗ ಕೃಷ್ಣ ಜೊತೆಯಲ್ಲಿ ತಾನೂ ಬರುವುದಾಗಿ ತಿಳಿಸಿದಾಗ ಹೊರಟು ನಿಂತ. ಭೀಷ್ಮರ ಬಳಿಗೆ ತೆರಳಿದ ಮೇಲೂ ಅವರನ್ನು ಆ ಬಗ್ಗೆ ಹೇಗೆ ಕೇಳುವುದೆಂದು ಲಜ್ಜೆಯಿಂದ

---

೧೩. ಲಜ್ಜಯಾ ಪರಯೋಪೇತೋ ಧರ್ಮರಾಜೋ ಯುಧಿಷ್ಠಿರಃ ।
ಅಭಿಶಾಪಭಯಾದ್ಭೀತೋ ಭವಂತಂ ನೋಪಸರ್ಪತಿ ॥ - ಇತಿ ಭಾರತ (ಶಾಂತಿ. ೫೫/೧೧)

ನಿಂತ. ಆಗ ಕೃಷ್ಣನೇ ಧರ್ಮರಾಜನ ಪರವಾಗಿ ಭೀಷ್ಮರಿಗೆ ಅವನ ಸಂಶಯವನ್ನು ತಿಳಿಸಿದ ಎಂದರ್ಥ.

೨) ಭೀಷ್ಮರ ಬಳಿಗೆ ಕೃಷ್ಣ ತೆರಳಿದಾಗ ಅವರು ಮಾಡಿದ ಅಪೂರ್ವವಾದ ಕೃಷ್ಣಸ್ತುತಿ ಭೀಷ್ಮಸ್ತವರಾಜ ಎಂದು ಪ್ರಸಿದ್ಧವಾಗಿದೆ.

೩) ಆಗ ಭೀಷ್ಮರೂ ಸಹ ತಿಳಿಸಲು ಸಂಕೋಚಪಟ್ಟರು. ಯುದ್ಧದಲ್ಲಿ ಶರಮಂಚದ ಮೇಲೆ ಬಿದ್ದು ಆಗಿರುವ ನೋವು, ಹಸಿವು ಬಾಯಾರಿಕೆಗಳ ಪೀಡೆ, ಧರ್ಮಪರಿಜ್ಞಾನದ ಕೊರತೆ ಮೊದಲಾದ ಕಾರಣಗಳನ್ನು ಮುಂದಿಟ್ಟು, ಭೀಷ್ಮರು ಪಾಂಡವರಿಗೆ ಉಪದೇಶ ಮಾಡುವ ಸಾಮರ್ಥ್ಯ ತಮ್ಮದಲ್ಲ ಎಂದು ಕೃಷ್ಣನಿಗೆ ಅರಿಕೆ ಮಾಡಿದರು. ಆಗ ಕೃಷ್ಣ ಅವರಿಗೆ ಯಾವುದೇ ನೋವಾಗಲೀ, ಹಸಿವು ಬಾಯಾರಿಕೆಗಳ ಪೀಡೆಯಾಗಲೀ ಆಗದಿರಲು ವರ ನೀಡಿದ. ಅದರಂತೆ ಧರ್ಮರಾಜ ಕೇಳುವ ಸಕಲ ಪ್ರಶ್ನೆಗಳಿಗೂ ಉತ್ತರ ಹೇಳುವ ಸಾಮರ್ಥ್ಯ ಬರಲಿ ಎಂದು ಅನುಗ್ರಹಿಸಿದ. ಯುಧಿಷ್ಠಿರನಿಗೆ ಕೇಳಲು ಸಂಕೋಚ; ಭೀಷ್ಮರಿಗೆ ಹೇಳಲು ಸಂಕೋಚ.

ಕಥಂ ತ್ವಯಿ ಸ್ಥಿತೇ ಕೃಷ್ಣೇ ಶಾಶ್ವತೇ ಲೋಕಕರ್ತರಿ ।
ಪ್ರಬ್ರೂಯಾನ್ಮದ್ವಿಧಃ ಕಶ್ಚಿದ್ಗುರೌ ಶಿಷ್ಯ ಇವ ಸ್ಥಿತೇ ॥ – (ಶಾಂತಿ. ೫೨/೧೩)

ಲಜ್ಜಯಾ ಪರಯೋಪೇತೋ ಧರ್ಮರಾಜೋ ಯುಧಿಷ್ಠಿರಃ ।
ಅಭಿಶಾಪಭಯಾದ್ಭೀತೋ ಭವಂತಂ ನೋಪಸರ್ಪತಿ ॥ – (ಶಾಂತಿ ೫೫/೧೧)

ಭೀಷ್ಮರಿಂದ ಸಕಲ ಧರ್ಮೋಪದೇಶ

ಪೃಚ್ಛೇತ್ಯುಕ್ತಃ ಸ ಭೀಷ್ಮೇಣ ಪಪ್ರಚ್ಛಾಖಿಲಮಂಜಸಾ ।
ತತ್ರೋವಾಚಾಖಿಲಾನ್ ಧರ್ಮಾನ್ ಕೃಷ್ಣೋ ಭೀಷ್ಮಶರೀರಗಃ ॥ ೧೪ ॥

ಅ: ಭೀಷ್ಮರು ಕೇಳು ಎನ್ನಲು ಧರ್ಮರಾಜ ಎಲ್ಲವನ್ನೂ ಸಹ ಚೆನ್ನಾಗಿ ಕೇಳಿದ. ಆಗ ಕೃಷ್ಣನೇ ಭೀಷ್ಮರ ಒಳಗೆ ನಿಂತು ಎಲ್ಲ ಧರ್ಮಗಳನ್ನೂ ಸಹ ಉಪದೇಶಿಸಿದ.

ಭೀಷ್ಮರಿಗೆ ಕೃಷ್ಣ ನೀಡಿದ ವರ

ಭೀಷ್ಮೋ ಹ್ಯಾಹ ಹರಿಂ ಪಾರ್ಥಾ ಬೋಧನೀಯಾಸ್ತ್ವಯೈವ ಹಿ ।
ಕಾ ಶಕ್ತಿರ್ಮಮ ದೇವೇಶ ಪಾರ್ಥಾನ್ ಬೋಧಯಿತುಂ ಪ್ರಭೋ ॥ ೧೫ ॥

---

೧೪. 'ಯಮೋ ಮಾನವೀ ಚಂದ್ರಸೂರ್ಯೌ' ಇತಿ ಯಮಸ್ಯೋತ್ತಮದೇವತಾತ್ವಾತ್ ಭೀಷ್ಮಸ್ಯ ದ್ಯುನಾಮಕವಸು-ರೂಪತ್ವೇನ ಶತಗಣಸ್ಥತಯಾ ಽತಿನೀಚತ್ವಾತ್ ಕಥಂ ಗುರುತ್ವಮಿತ್ಯತ ಉಕ್ತಂ ಕೃಷ್ಣೋ ಭೀಷ್ಮಶರೀರಗ ಇತಿ ॥ –(ವಾ.)

ಅ: ಆಗ ಭೀಷ್ಮರು ಶ್ರೀಕೃಷ್ಣನನ್ನು ಕೇಳಿಕೊಂಡರು: 'ಪ್ರಭೋ, ಪಾಂಡವರಿಗೆ ನೀನೇ ಧರ್ಮಬೋಧನೆ ಮಾಡಬೇಕು. ಪಾಂಡವರಿಗೆ ಬೋಧಿಸಲು ನನಗಾವ ಶಕ್ತಿ!'.

ವಿ: ಭೀಷ್ಮರು ದ್ಯುನಾಮಕ ವಸುವಿನ ಅವತಾರ, ಪಾಂಡವರು ವಾಯು ಮೊದಲಾದ ಶ್ರೇಷ್ಠ ದೇವತೆಗಳ ಅವತಾರ. ಗೊಂದಲಕ್ಕೊಳಗಾಗಿದ್ದ ಧರ್ಮರಾಜನಂತೂ ವಸುವಿಗಿಂತ ತುಂಬಾ ಮಿಗಿಲಾದ ದೇವತೆಯಾದ ಯಮಧರ್ಮನ ಅಪರಾವತಾರ. ಆದ್ದರಿಂದ ಭೀಷ್ಮರು ಪಾಂಡವರಿಗೆ ಧರ್ಮಬೋಧನೆ ಮಾಡುವ ಶಕ್ತಿತನಗೆಲ್ಲಿಯದು ಎಂದು ಹೇಳಿದರು ಎಂದರ್ಥ.

ಇತ್ಯುಕ್ತೋ ಭಗವಾನಾಹ ತ್ವತ್ಕೀರ್ತ್ಯೈ ತ್ವಯಿ ಸಂಸ್ಥಿತಃ।
ಪ್ರವಕ್ಷ್ಯಾಮ್ಯಖಿಲಾನ್ ಧರ್ಮಾನ್ ಸೂಕ್ಷ್ಮಂ ತತ್ತ್ವಮಪೀತಿ ಹ ॥ ೧೬ ॥

ಅ: ಆಗ ಕೃಷ್ಣನುಡಿದ 'ನಿನ್ನ ಕೀರ್ತಿಗಾಗಿ ನಿನ್ನೊಳಗೆ ನಾನೇ ಇದ್ದು ಎಲ್ಲ ಧರ್ಮಗಳನ್ನೂ, ಸೂಕ್ಷ್ಮತತ್ವವನ್ನೂ ಸಹ ತಿಳಿಸುವೆ'.

ವಿ: ೧) ಭೀಷ್ಮರು ಕೃಷ್ಣನನ್ನು ಕೇಳಿಕೊಂಡರು – ಪಾಂಡವರಂತಹ ಶ್ರೇಷ್ಠ ಜ್ಞಾನಿಗಳಿಗೆ ಹೇಳುವ ಸಾಮರ್ಥ್ಯ ತಮ್ಮದಲ್ಲ. ಆಗ ಕೃಷ್ಣ ಅವರಿಗೆ ಆಶ್ವಾಸನೆಯಿತ್ತು ಅವರೊಳಗೆ ತಾನೇ ನಿಂತು ಧರ್ಮರಾಜನ ಪ್ರಶ್ನೆಗೆ ಉತ್ತರ ನೀಡಿ ಅವನ ಎಲ್ಲ ಸಂಶಯಗಳನ್ನು ಪರಿಹರಿಸುವುದಾಗಿ ತಿಳಿಸಿದ.

೨) ಆಗ ಭೀಷ್ಮರು ಕೇಳಿಕೊಂಡರು – 'ನನಗೆ ಹೀಗೆ ಜ್ಞಾನದೊಂದಿಗೆ, ಅದನ್ನು ತಿಳಿಸುವ ಸಾಮರ್ಥ್ಯ ಮೊದಲಾದವುಗಳನ್ನೆಲ್ಲಾ ಹೀಗೆ ಅನುಗ್ರಹಿಸಿ ನನ್ನಿಂದ ಹೇಳಿಸಬೇಕೆಂಬ ಹಟ ಏತಕ್ಕೆ?. ನೀನೇ ನೇರವಾಗಿ ಇವರಿಗೆ ತಿಳಿಸಬಹುದಲ್ಲ'. ಕೃಷ್ಣ ಉತ್ತರಿಸಿದ – 'ನಾನು ಹೇಳಬಲ್ಲೆ ಎಂಬುದು ಜಗತ್ತಿಗೆ ತಿಳಿದಾಗಿದೆ; ಈಗ ನಾನು ಇನ್ನೊಬ್ಬರಿಂದ ಹೇಳಿಸಲೂ ಬಲ್ಲೆ ಎಂಬುದು ತಿಳಿಯುವಂತಾಗಬೇಕು. ಅದರಿಂದ ನಿಮ್ಮೊಳಗೆ ನಾನೇ ಇದ್ದು ಎಲ್ಲವನ್ನೂ ತಿಳಿಸುವೆ'.

೩) ಭೀಷ್ಮರು ಪರಶುರಾಮ ರೂಪದ ಶ್ರೀಹರಿಯ ಬಳಿಯಲ್ಲಿ ನಾನ್ನೂರ ಇಪ್ಪತ್ತೈದು ವರ್ಷಗಳಷ್ಟು ದೀರ್ಘಕಾಲ ಅಧ್ಯಯನ ಮಾಡಿದವರು(೧೧/೪೭, ೫೪). ಆದರಿಂದಾಗಿ ಜ್ಞಾನನಿಧಿ

---

೧೬. ಗೃಹಾಣಾತ್ರ ವರಂ ಭೀಷ್ಮ ಮತ್ಪ್ರಸಾದಕೃತಂ ಪ್ರಭೋ।
ನ ತೇ ಗ್ಲಾನಿರ್ನ ತೇ ಮೂರ್ಛಾ ನ ದಾಹೋ ನ ಚ ತೇ ರುಜಾ ॥
ಪ್ರಭವಿಷ್ಯಂತಿ ಗಾಂಗೇಯ ಕ್ಷುತ್ಪಿಪಾಸೇ ನ ಚಾಪ್ಯುತ।
ಜ್ಞಾನಾನಿ ಚ ಸಮಗ್ರಾಣಿ ಪ್ರತಿಭಾಸ್ಯಂತಿ ತೇಽನಘ ॥
ಭೀಷ್ಮ ದ್ರಕ್ಷ್ಯಸಿ ತತ್ತ್ವೇನ ಜಲೇ ಮೀನ ಇವಾಮಲೇ ॥ – ಶಾಂತಿ. ೧೫/೨೧)

ಎನ್ನಿಸಿದವರು. ಅಂಥವರ ಜ್ಞಾನದ ಪ್ರಯೋಜನ ಜಗತ್ತಿಗೆ ಲಭಿಸಬೇಕೆಂಬುದು ಕೃಷ್ಣನ ಆಶಯವಾಗಿತ್ತು. ಮೇಲ್ನೋಟಕ್ಕೆ ಅದು ಭೀಷ್ಮೋಪದೇಶವಾದರೂ, ನಿಜಕ್ಕೂ ಅದು ಅವರೊಳಗೆ ಪ್ರವೇಶಿಸಿ ಅನುಗ್ರಹಿಸಿದ ಕೃಷ್ಣನ ಉಪದೇಶ.

೪) ಅವರು ತಿಳಿಸಿದ ವಿಷಯಗಳು ಸಹ ಅವರ ಸ್ವಂತದ್ದಾಗಿರದೇ ಪರಶುರಾಮ ರೂಪಿ ಶ್ರೀಹರಿಯಿಂದ ಕೇಳಿ ತಿಳಿದದ್ದೇ. ಹೀಗೆ ಭೀಷ್ಮೋಪದೇಶಕ್ಕೆ ವಿಶಿಷ್ಟವಾದ ಮಾನ್ಯತೆ.

೫) ಗರ್ಭದಲ್ಲಿ ಇದ್ದ ಪ್ರಹ್ಲಾದನಿಗೆ ಶ್ರೀಹರಿ ನಾರದರಂತಹ ದೇವರ್ಷಿಗಳ ಮೂಲಕ ತತ್ತ್ವೋಪದೇಶ ಮಾಡಿಸಿ ತನ್ನನ್ನು ನಂಬಿದ ಭಕ್ತನಿಗೆ ತಾನು ಜ್ಞಾನ ಕೊಡುವ ಪರಿಯನ್ನು ತಿಳಿಸಿದ. ಶರಮಂಚದ ಮೇಲೆ ಒರಗಿದ ಭೀಷ್ಮರ ಮೂಲಕ ಶಾಂತಿಪರ್ವ, ಅನುಶಾಸನಪರ್ವಗಳಂತಹ ಅತ್ಯಂತ ಶಾಸ್ತ್ರಾರ್ಥಗರ್ಭಿತ ಪರ್ವಗಳನ್ನು ಧರ್ಮರಾಜನಿಗೆ ಉಪದೇಶ ಮಾಡಿಸುವ ಮೂಲಕ ಯೋಗ್ಯನಾಗಿದ್ದಲ್ಲಿ ಎಂತಹ ದುಸ್ಥಿತಿಯಲ್ಲಿದ್ದರೂ ಅವನಿಂದ ಪಾಠ ಪ್ರವಚನ ಮಾಡಿಸುವ ಅನುಗ್ರಹವನ್ನು ಖಚಿತವಾಗಿ ಮಾಡುವುದಾಗಿ ಲೋಕಕ್ಕೆ ಸಾರಿದ. ಶ್ರೀಹರಿಯು ಸಂಕಲ್ಪಿಸಿದರೆ ಯಾವುದು ತಾನೇ ಅಸಾಧ್ಯ ಎಂಬುದು ಇದರ ಸಂದೇಶ.

ರಾಜನ ಭಾಗವತಧರ್ಮ

ರಾಜ್ಞಃ ಪ್ರಥಮತೋ ಧರ್ಮೋ ಭಗವದ್ಧರ್ಮಪಾಲನಮ್ ।
ತದರ್ಥಂ ಕಂಟಕೋದ್ಧಾರೋ ಧರ್ಮಾ ಭಾಗವತಾ ಅಪಿ ॥ ೧೭ ॥

ಅ: ಭಾಗವತಧರ್ಮವನ್ನು ಪಾಲಿಸುವುದು ರಾಜನಿಗೆ ವಿಹಿತವಾದ ಮುಖ್ಯಧರ್ಮ. ಅದಕ್ಕೆಂದು ದುಷ್ಟಸಂಹಾರವೂ ಧರ್ಮವೇ. ಭಗವಂತನಿಗೆ ಪ್ರಿಯವಾದ ಇತರ ಶಾಸ್ತ್ರೋಕ್ತ ಧರ್ಮಗಳೂ ವಿಹಿತ.

ವಿ: ವಿಪ್ರನಿಗೆ ಭಾಗವತ ಧರ್ಮದ ಉಪದೇಶ ಮುಖ್ಯಧರ್ಮವಾದರೆ, ರಾಜನಿಗೆ ಭಾಗವತ ಧರ್ಮದ ಪರಿಪಾಲನೆ ಮುಖ್ಯಧರ್ಮ ಎಂದರ್ಥ.

ಭಾಗವತಧರ್ಮಗಳ ಸಂಗ್ರಹ

ಮನೋವಾಕ್ಕರ್ಮಭಿರ್ವಿಷ್ಣೋರಚ್ಛಿದ್ರತ್ವೇನ ಚಾರ್ಚನಮ್ ।
ಪೂರ್ಣಾಶೇಷಗುಣೋ ವಿಷ್ಣುಃ ಸ್ವತಂತ್ರಶ್ಚೈಕ ಏವ ತು ॥ ೧೮ ॥

---

೧೭. ಪ್ರಥಮತಃ ಮುಖ್ಯೋ ಧರ್ಮ ಇತ್ಯಾವರ್ತ್ಯ ಯೋಜ್ಯಮ್ । - (ಜ.)

ತದ್ವಶಂ ಸರ್ವಮನ್ಯಚ್ಚ ಸರ್ವದೇತಿ ವಿನಿಶ್ಚಯಃ ।
ದೇವತಾಕ್ರಮವಿಜ್ಞಾನಮಪೂಜಾऽನ್ಯಸ್ಯ ವೈ ಹರೇಃ ॥ ೧೯ ॥

ಪೂಜಾ ಭಾಗವತತ್ವೇನ ದೇವಾದೀನಾಂ ಚ ಸರ್ವಶಃ ।
ವೃಥಾ ಕರ್ಮಾಕೃತಿಃ ಕ್ವಾಪಿ ನಿರಾಶೀಸ್ತ್ವಂ ಸದೈವ ಚ ॥ ೨೦ ॥

ವಿಷ್ಣೋರ್ಭಾಗವತಾನಾಂ ಚ ಪ್ರತೀಪಸ್ಯಾಕೃತಿಃ ಸದಾ ।
ಪರಸ್ಪರವಿರೋಧೇ ತು ವಿಶಿಷ್ಟಸ್ಯಾನುಕೂಲತಾ ॥ ೨೧ ॥

ಪ್ರಿಯಂ ವಿಷ್ಣೋಸ್ತದೀಯಾನಾಮಪಿ ಸರ್ವಂ ಸಮಾಚರೇತ್ ।
ಧರ್ಮಮಪ್ಯಪ್ರಿಯಂ ತೇಷಾಂ ನೈವ ಕಿಂಚಿತ್ ಸಮಾಚರೇತ್ ॥ ೨೨ ॥

ಸಾಮ್ಯೇ ವಿರೋಧೇ ಚ ಬಹೂನನುವರ್ತೇತ ವೈಷ್ಣವಾನ್ ।
ಏತೇ ಸಾಧಾರಣಾ ಧರ್ಮಾ ಜ್ಞೇಯಾ ಭಾಗವತಾ ಇತಿ ॥ ೨೩ ॥

ಅ: ಮನಸ್ಸು, ಮಾತು ಮತ್ತು ಕೃತಿಗಳಿಂದ ಶ್ರೀಹರಿಯನ್ನು ನಿರಂತರ ಪೂಜಿಸುವುದು, ವಿಷ್ಣುವು ಪರಿಪೂರ್ಣವಾದ ಸಕಲ ಗುಣಗಳನ್ನೂ ಉಳ್ಳವನು, ಅವನೊಬ್ಬನೇ ಸ್ವತಂತ್ರ,

---

೧೯. 'ದೇವರ್ಷಿವರ್ಯಃ ಪುರುಷಾಂತರಾರ್ಚನಾತ್ । - ಭಾಗವತ (೬/೮/೧೭)

ವಿಷ್ಣೋರಪರಿವಾರತ್ವದ್ಯಪ್ಯಾ ದೇವಾಂತರಾರ್ಚನಾತ್ ।
ಮಹಿದಾಸೋ ದೇವಋಷಿಃ ಪಾತು ಮಾಂ ವಿಷ್ಣುರವ್ಯಯಃ ।
ತದನರ್ಪಿತಕರ್ಮಭ್ಯಸ್ತದಸ್ಮರಣತಸ್ತಥಾ ॥ - ಇತಿ ಚ । - ಭಾ. ತಾ. (೬/೮/೧೭)

೧೯. ದೇವಾನಾಂ ರಮಾದೀನಾಂ ಕ್ರಮಸ್ಯ ತಾರತಮ್ಯಸ್ಯ ವಿಜ್ಞಾನಂ ಧರ್ಮ ಇತಿ ಸರ್ವತ್ರ ಸಂಬಧ್ಯತೇ । - (ಜ.)

೨೦. ಕ್ವಾಪಿ ನಿರಾಶೀಸ್ತ್ವಂ ಸದೈವ ತ್ವಿತ್ಯತ್ರ ನಿರಾಶೀಸ್ತ್ವಂ ನಿರಾಶಿಷೋ ಭಾವಃ ನಿರಾಶೀಸ್ತ್ವಮ್ ॥ – (ವಾ.)

೨೦. 'ರಮಾಬ್ರಹ್ಮಾದಯಸ್ತಸ್ಯ ಪರಿವಾರತಯೈವ ತು' - ಸದಾಚಾರಸ್ಮೃತಿ ।

ಪರಿವಾರತಯಾ ಗ್ರಾಹ್ಯಾ ಅಪಿ ಹೇಯಾಃ ಪ್ರಧಾನತಃ ।' -ಅನುವ್ಯಾಖ್ಯಾನ

೨೧. ಭಕ್ತಿದೋಷೋ ಹ್ಯಸೌ ಯನ್ನ ತದ್ಭಕ್ತೇಷ್ವಪಿ ಭಕ್ತಿಮಾನ್ ॥ - ಅನುವ್ಯಾಖ್ಯಾನ

೨೩. ದ್ವೈಧೇ ಬಹೂನಾಂ ವಚನಮಿತಿ ಹಿ ನ್ಯಾಯಃ । - ಭಾರತ

ಉಳಿದೆಲ್ಲಾ ಅವನಿಗೆ ಸದಾ ಅಧೀನ ಎಂದು ನಿರ್ಣಯಿಸಿಕೊಳ್ಳುವುದು, ದೇವತಾ ತಾರತಮ್ಯಕ್ರಮದ ಪರಿಜ್ಞಾನ, ಶ್ರೀಹರಿಯ ಹೊರತು ಇತರರ ಪೂಜೆಯನ್ನು ಸರ್ವೋತ್ತಮ-ತ್ವೇನ ಮಾಡದಿರುವುದು, ದೇವತೆಗಳು ಮೊದಲಾದವರನ್ನು ವಿಷ್ಣುಭಕ್ತರೆಂದು ಪೂಜಿಸುವುದು, ವ್ಯರ್ಥ ಕರ್ಮಗಳನ್ನು ಎಲ್ಲಿಯೂ ಮಾಡದಿರುವುದು, ಸದಾ ಕರ್ಮಫಲದ ಆಸೆಯನ್ನು ತೊರೆದಿರುವುದು, ಹರಿಗೂ, ಹರಿಭಕ್ತರಿಗೂ ಎಂದೂ ವಿರೋಧ ಮಾಡದಿರುವುದು, ಹರಿಭಕ್ತರಲ್ಲಿ ಪರಸ್ಪರ ವಿರೋಧ ಉಂಟಾದಾಗ ಶ್ರೇಷ್ಠರಾದವರಿಗೆ ಅನುಕೂಲವಾಗಿ ನಡೆದುಕೊಳ್ಳುವುದು, ವಿಷ್ಣುವಿಗೂ, ಅವನ ಭಕ್ತರಿಗೂ ಪ್ರಿಯವಾದ ಸರ್ವವನ್ನೂ ಚೆನ್ನಾಗಿ ತಪ್ಪದೇ ಆಚರಿಸುವುದು, ಅವರಿಗೆ ಅಪ್ರಿಯವಾದ ಕಾರ್ಯ ಧರ್ಮವೇ ಆಗಿದ್ದರೂ ಸರ್ವಥಾ ಆಚರಿಸದಿರುವುದು, ಎರಡು ಪಕ್ಷಗಳಲ್ಲಿ ಸಮನಾದ ವಿರೋಧವಿದ್ದಾಗ ಬಹು ವೈಷ್ಣವರನ್ನು ಅನುಸರಿಸುವುದು – ಇವೆಲ್ಲಾ ಸರ್ವರಿಗೂ ಸಮಾನವಾದ ಭಾಗವತ ಧರ್ಮಗಳು ಎಂದು ತಿಳಿಯಬೇಕು.

ವಿಪ್ರಧರ್ಮ

ತತ್ತ್ವವಿಜ್ಞಾಪನಂ ಧರ್ಮೋ ವಿಪ್ರಸ್ಯ ತು ವಿಶೇಷತಃ ।
ಶಾರೀರದಂಡಸಂತ್ಯಾಗಃ ಪುತ್ರಭಾರ್ಯಾದಿಕಾನೃತೇ ।
ತತ್ರಾಪಿ ನಾಂಗಹಾನಿಃ ಸ್ಯಾದ್ವೇದನಾ ವಾ ಚಿರಂ ನ ತು ॥ ೨೪ ॥

ಅ: ಬ್ರಾಹ್ಮಣನಿಗೆ ತತ್ತ್ವೋಪದೇಶ ವಿಶೇಷವಾದ ಧರ್ಮ. ಹೆಂಡತಿ ಮಕ್ಕಳನ್ನು ಹೊರತು ಇತರರ ಮೇಲೆ ಶರೀರ ದಂಡನೆಯನ್ನು ಮಾಡದಿರುವುದು ಧರ್ಮ. ಅವರಿಗೆ ಶರೀರದಂಡ ಮಾಡುವಾಗಲೂ ಅಂಗಹಾನಿಯಾಗಕೂಡದು. ಅಥವಾ ಬಹುಕಾಲದ ನೋವು ಉಂಟಾಗಬಾರದು.

ಕ್ಷತ್ರಿಯಾದಿಗಳ ಧರ್ಮ

ನ ಚಾರ್ಥದಂಡಃ ಕರ್ತವ್ಯೋ ವಿಪ್ರವೈಶ್ಯಾದಿಭಿಃ ಕ್ವಚಿತ್ ।
ಶಾರೀರದಂಡವಿಷಯೇ ವೈಶ್ಯಾದೀನಾಂ ಚ ವಿಪ್ರವತ್ ॥ ೨೫ ॥

---

೨೪. ಶಾರೀರದಂಡಸಂತ್ಯಾಗ ಇತ್ಯತ್ರ ಶಾರೀರದಂಡಸಂತ್ಯಾಗಃ= ಪರೇಷಾಂ ಶಾರೀರದಂಡಸಂತ್ಯಾಗಃ ॥ – (ವಾ.)

೨೪. 'ವಿಪ್ರಸ್ಯ ಜಪೋಪದೇಶೌ'। – (೨೨/೮೯)

ಅ: ಬ್ರಾಹ್ಮಣರು, ವೈಶ್ಯರು ಮೊದಲಾದವರು ಆರ್ಥಿಕ ದಂಡನೆಯನ್ನು ವಿಧಿಸಬಾರದು. ಶರೀರದಂಡನೆಯ ವಿಷಯದಲ್ಲಿ ವೈಶ್ಯರು ಮೊದಲಾದವರಿಗೆ ಬ್ರಾಹ್ಮಣರಿಗಿರುವ ನಿಯಮವೇ.

ಯಥಾಲಬ್ಧೇನ ವರ್ತೇತ ಭಿಕ್ಷಯಾ ವಾ ದ್ವಿಜೋತ್ತಮಃ ।
ಶಿಷ್ಯಯಾಜ್ಯೋಪಲಬ್ಧೈರ್ವಾ ಕ್ಷತ್ರಧರ್ಮೇಣ ವಾऽऽಪದಿ ।
ಮಹಾಪದಿ ವಿಶಾಂ ಧರ್ಮ್ಯಃ ಕ್ಷತ್ರಿಯಃ ಸುರವಿಪ್ರಯೋಃ ॥ ೨೬ ॥

ಅನ್ಯತ್ರ ಸರ್ವವಿತ್ತೇನ ವರ್ತೇತೈತಾಂಶ್ಚ ಪಾಲಯನ್ ।
ವಿರೋಧಿನಃ ಕ್ಷತ್ರಿಯಾಚ್ಚ ಪ್ರಸಹ್ಯೈವ ಹರೇದ್ಧನಮ್ ॥ ೨೭ ॥

ಅ: ವಿಪ್ರೋತ್ತಮನಾದವನು ಪ್ರಯತ್ನವಿಲ್ಲದೇ ತಾನಾಗಿ ದೊರೆಯುವ ದ್ರವ್ಯದಿಂದಾಗಲೀ, ಭಿಕ್ಷೆಯಿಂದಾಗಲೀ, ಶಿಷ್ಯರು ಬೇಡಿ ತಂದ ಪದಾರ್ಥದಿಂದಾಗಲೀ ಬದುಕಬೇಕು. ಆಪತ್ತಿನಲ್ಲಿ

---

೨೫. ಅಂಗಾದ್ಯಹಾನಿಕೃದ್ದಂಡಃ ಶಿಷ್ಯೇಷು ಬ್ರಾಹ್ಮಣಾದಿಭಃ ।
ಕಾರ್ಯೋ ದೇಹೇऽಪಿ ಶಿಷ್ಯಸ್ಯ ಸ್ವಾಮಿನಾ ಸ್ವೇನ ವಾऽರ್ಪಿತಃ ।
ಪುತ್ರಾನುಜಾದಯಃ ಸರ್ವೇ ಶಿಷ್ಯಾ ಏವ ನಿಸರ್ಗತಃ ।
ಗುರವಶ್ಚೈವ ಮಿತ್ರಾಣಿ ಸಖಿಸಬ್ರಹ್ಮಚಾರಿಣಃ ।
ಸಂಬಧಿನಶ್ಚ ಸರ್ವೇऽಪಿ ತತ್ತದ್ಯೋಗ್ಯತಯಾऽಖಿಲೈಃ ।
ಶಿಕ್ಷಣೀಯೇಷು ಭಾವೇಷು ಶಿಕ್ಷಣೀಯಾಃ ಪ್ರಯತ್ನತಃ ।
ಉನ್ಮಾದೇ ಬಂಧನಾದ್ಯೈರ್ವಾ ತಾಡನಂ ನ ಗುರೋಃ ಕ್ವಚಿತ್ ।
ಪಾಪಂ ಚರಂತಸ್ತ್ವನ್ಯೇऽಪಿ ಸರ್ವೇ ದೃಷ್ಟಿಪಥಂಗತಾಃ ॥
ಶಕ್ತಿತೋ ವಾರಣೀಯಾಃ ಸ್ಯುರ್ದೇಶಕಾಲಾನುಸರತಃ ।
ತದುತ್ತಮವಿರೋದ್ಧಾರಃ ಸಂತ್ಯಾಜ್ಯಾ ಗುರವೋऽಪಿ ತು ॥
ಯಥಾಶಕ್ತ್ಯನುಶಾಸ್ಯೈವ ಕಾಲತೋऽಪಿ ನ ಚೇಚ್ಛುಭಾಃ ॥
ವಿಷ್ಣೋಃ ಪರಮಭಕ್ತಸ್ತು ನ ತ್ಯಾಜ್ಯಃ ಶಾಸ್ಯ ಏವ ಚ ।
ಶಿಕ್ಷಯಂಶ್ಚ ಗುರೂನ್ ಶಿಷ್ಯೋ ಗುರುವನ್ನೈವ ಶಿಕ್ಷಯೇತ್ ॥
ಮಹಾಂತೋ ನಾನುಶಾಸ್ಯಾಶ್ಚ ವಿರುದ್ಧಾಚರಿತಾ ಅಪಿ ।
ಯದಿ ಚ ಸ್ವೋತ್ತಮಾನಾಂ ತೇ ವಿರೋಧಂ ನೈವ ಕುರ್ವತೇ ॥ – ಗೀತಾತಾತ್ಪರ್ಯನಿರ್ಣಯ (೧೮/೪೩)

೨೫. ಪ್ರಸಹ್ಯ ವಿತ್ತಾಹರಣಂ ಶಾರೀರೋ ದಂಡ ಏವ ಚ ।
ಅಶಿಷ್ಯಾಣಾಂ ಶಾಸನಂ ಚ ತಥೈವಾರ್ಥವಿನಾಶನಮ್ ।
ಏಷ ಈಶ್ವರಭಾವಃ ಸ್ಯಾನ್ನ ಕಾರ್ಯಃ ಕ್ಷತ್ರಿಯೇತರೈಃ ॥
ಸರ್ವೇ ವಿಧರ್ಮಿಣಃ ಶಾಸ್ಯಾಃ ಕ್ಷತ್ರಿಯೈರ್ಯತ್ನತಃ ಸದಾ । – ಗೀತಾತಾತ್ಪರ್ಯನಿರ್ಣಯ (೧೮/೪೩)

೨೬. 'ತೇನ ತ್ಯಕ್ತೇನ ಭುಂಜೀಥಾಃ' - ಈಶಾವಾಸ್ಯ
ತದ್ದತ್ತೇನೈವ ಭುಂಜೀಥಾ ಅತೋ ನಾऽನ್ಯಂ ಪ್ರಯಾಚಯೇತ್ ॥ - ಈಶಾವಾಸ್ಯಭಾಷ್ಯ

ಕ್ಷತ್ರಿಯಧರ್ಮದಿಂದಲೂ ಮಹಾಪತ್ತಿನಲ್ಲಿ ವೈಶ್ಯಧರ್ಮದಿಂದಲೂ ಬದುಕಬಹುದು. ಕ್ಷತ್ರಿಯನು ದೇವತೆಗಳ, ಬ್ರಾಹ್ಮಣರ ಹೊರತು ಇತರ ಎಲ್ಲರ ದ್ರವ್ಯದಿಂದ ಅವರನ್ನು ಪಾಲಿಸುತ್ತಾ ಜೀವಿಸಬೇಕು. ವಿರೋಧಿಗಳಾದ ಕ್ಷತ್ರಿಯರಿಂದ ಬಲಾತ್ಕಾರದಿಂದ ಧನವನ್ನು ತೆಗೆದುಕೊಳ್ಳಬಹುದು.

ಸಾಮಾದಿಕ್ರಮತೋ ಧರ್ಮಾನ್ ವರ್ತಯೇದ್ದಂಡತೋಽಂತತಃ ।
ಅಪಲಾಯೀ ಸದಾ ಯುದ್ಧೇ ಸತಾಂ ಕಾರ್ಯಮೃತೇ ಭವೇತ್ ॥ ೨೮ ॥

ಅ: ಸಾಮ ದಾನಾದಿ ಕ್ರಮದಿಂದಲೇ ಧರ್ಮಗಳನ್ನು ಸಂರಕ್ಷಿಸಬೇಕು. ಕೊನೆಯಲ್ಲಿ ದಂಡದಿಂದಲೂ ಸಾಧಿಸಬಹುದು; ಸಜ್ಜನರ ಕಾರ್ಯಕ್ಕೆ ಹೊರತು ಯುದ್ಧದಲ್ಲಿ ಎಂದೂ ಪಲಾಯನ ಮಾಡಕೂಡದು.

---

೨೬. 'ಆಪತ್ಸು ವಿಪ್ರಃ ಕ್ಷಾತ್ರಂ ತು ವಿಶಾಂ ವಾ ಧರ್ಮಮಾಚರೇತ್ ।
ಕ್ಷಾತ್ರಾಸಿದ್ಧ್ಯೈನ ಶೂದ್ರಸ್ತು ವಿಪ್ರಕ್ಷತ್ರಿಯಯೋಃ ಕ್ವಚಿತ್ ।
ಕ್ಷತ್ರಿಯೋ ಬ್ರಾಹ್ಮಮಾಪತ್ಸು ತದಾಪತ್ಸು ವಿಶಾಮಪಿ ।
ಕ್ಷತ್ರಿಯೋ ವಿಪ್ರಧರ್ಮೋಽಪಿ ನೈವ ಭೈಕ್ಷಪ್ರತಿಗ್ರಹೀ ।
ವೈಶ್ಯ ಆಪತ್ಸು ಶೌದ್ರಂ ತು ಧರ್ಮಮೇಕಂ ನಚಾಪರಮ್ ।
ಶೂದ್ರ ಆಪತ್ಸು ವಿದ್ಧರ್ಮಾ ತದಾಪತ್ಸು ಚ ಕಾರುಕಃ ।
ಶೂದ್ರಸ್ತು ವೈಶ್ಯಧರ್ಮಾ ಽಪಿ ನೈವ ವೇದಾಕ್ಷರೋ ಭವೇತ್ ॥
ಅತ್ಯಾಪದಿ ಕ್ಷತ್ರಿಯೋಽಪಿ ಪಾದಶುಶ್ರೂಷಣಂ ವಿನಾ ।
ಶೌದ್ರಧರ್ಮಂ ಚರನ್ ವಿಪ್ರಕ್ಷತ್ರಿಯೇಷು ನ ದುಷ್ಯತಿ ।
ಯೇಷು ಕರ್ಮಸು ಯಾಚ್ಯಃ ಸ್ಯಾತ್ ಸ್ವಾಮಿನಾಽಪಿ ನ ಯಾಚಿತಾ ।
ಶೌದ್ರಾಣ್ಯಪಿ ಸ್ವಧರ್ಮತ್ವೇ ಕ್ಷತ್ರಿಯಸ್ಯಾಪದೋ ಯದಿ ।
ಆತ್ಮನಶ್ಚೇದ್ ಬಲಾಧಿಕ್ಯಂ ಸಾನುಬಂಧಾದಪಿ ಪ್ರಭೋಃ ।
ಧರ್ಮಾರ್ಥಂ ಸೇವತೋಽರ್ಥಾರ್ಥಂ ವಿಪ್ರಧರ್ಮಾಧಿಕಾದ್ವರಃ ।
ಪ್ರಭುಣಾ ಯಾಚ್ಯವೃತ್ತಿಸ್ತು ವಿಶೇಷೇಣಾಪಿ ಧರ್ಮಭಾಕ್ ।
ಬಾಹ್ವೋರ್ಬಲಾಧಿಕೋ ಯಃ ಸ್ಯಾತ್ ಕ್ಷತ್ರಿಯೋ ವಿದ್ಯಯಾ ಽಧಿಕಃ ।
ವಿಪ್ರೋ ಭಾಗವತೌ ಚೈತೌ ಸೇಶಾ ಲೋಕಾಸ್ತಯೋರಿಮೇ' ॥ (ವ್ಯಾಸಸ್ಮೃತಿ) – ಗೀ.ತಾ.(೧೮/೪೪-೪೮)

೨೭. ಅನ್ಯತ್ರ ಸರ್ವವಿತ್ತೇನೇತ್ಯತ್ರ ಅನ್ಯತ್ರ= ಸುರವಿಪ್ರಯೋರನ್ಯತ್ರ ॥ – (ವಾ.)

೨೮. ಶೌರ್ಯಂ ತೇಜೋ ಧೃತಿರ್ದಾಕ್ಷ್ಯಂ ಯುದ್ಧೇ ಚಾಪ್ಯಪಲಾಯನಮ್ ।
ದಾನಮೀಶ್ವರಭಾವಶ್ಚ ಕ್ಷಾತ್ರಂ ಕರ್ಮ ಸ್ವಭಾವಜಮ್ ॥ – ಗೀತಾ (೧೮/೪೩)

ಎ: ದುಷ್ಟರಾಜರಿಗೆ ಪ್ರತಿಕೂಲವಾಗುವ ಪ್ರಸಂಗದಲ್ಲೂ ಸಹ ಯುದ್ಧದಿಂದ ಹಿಮ್ಮೆಟ್ಟಬಹುದು, ಆದರೆ ಧರ್ಮಯುದ್ಧದಿಂದ ಮಾತ್ರ ಸರ್ವಥಾ ಹಿಮ್ಮೆಟ್ಟಬಾರದು ಎಂದರ್ಥ.

ವೈಶ್ಯ ಶೂದ್ರರ ಧರ್ಮ

ಕೃಷಿವಾಣಿಜ್ಯಗೋರಕ್ಷಾಕುಸೀದಂ ವೈಶ್ಯಜೀವನಮ್ ।
ಪರಿಚರ್ಯೈವ ಶೂದ್ರಸ್ಯ ವೃತ್ತಿರನ್ಯೇ ಸ್ವಪೂರ್ವವತ್ ॥ ೨೯ ॥

ಅ: ವ್ಯವಸಾಯ, ವ್ಯಾಪಾರ, ಗೋಸಂರಕ್ಷಣೆ, ಬಡ್ಡಿ ವ್ಯವಹಾರ ವೈಶ್ಯರ ವೃತ್ತಿಗಳು. ಶೂದ್ರನಿಗೆ ತ್ರೈವರ್ಣಿಕರ ಸೇವೆಯೇ ಮುಖ್ಯ ಕರ್ತವ್ಯ. ಇತರರು ತಮ್ಮ ಹಿಂದಿನವರು ನಡೆದಂತೆ ನಡೆಯಬೇಕು.

---

೨೮. ಅಗ್ರೇ ಹಿ ಮಾರ್ದವಮನುಪ್ರಥಯನ್ ಸ ಧರ್ಮಮ್ ..... । - (೮/೨)

೨೮. ಶೌರ್ಯಂ ತೇಜೋ ಧೃತಿರ್ದಾಕ್ಷ್ಯಂ ಯುದ್ಧೇ ಚಾಪ್ಯಪಲಾಯನಮ್ ।
ದಾನಮೀಶ್ವರಭಾವಶ್ಚ ಕ್ಷಾತ್ರಂ ಕರ್ಮ ಸ್ವಭಾವಜಮ್ ॥ - ಗೀತಾ (೧೮/೪೩)

೨೮ ಯುದ್ಧೇ ಸದಾ ಅಪಲಾಯೀ ಭವೇತ್ ಕ್ವಚಿತ್ ಕದಾಚಿತ್ ಯುದ್ಧೇಽಪಿ ಪಲಾಯೀ ಭವೇತ್ । ಕದಾಚಿದಿತ್ಯುಕ್ತಂ ವಿವೃಣೋತಿ – ಅಸತಾಮಿತಿ । ಯದಾ ಅಪಲಾಯೀ ಭವೇದಿತ್ಯನೇನಾಸತಾಂ ಕಾರ್ಯಂ ಭವತಿ ತದಾ ಽಸತಾಂ ಕಾರ್ಯಮೃತೇ ಪರಿತ್ಯಜ್ಯ ಪಲಾಯೀ ಭವೇದಿತಿ । – (ಸ.)

ಅಪಲಾಯನೇನ ಸಂಪದಾ ಸಜ್ಜನಾನಾಂ ಕಾರ್ಯಂ ಭವತಿ ತದಾ ಸಜ್ಜನಕಾರ್ಯಾರ್ಥಮಪಲಾಯೀ ಭವೇತ್। ಅಪಲಾಯನೇನ ಯದಾ ದುರ್ಜನಾನಾಂ ಕಾರ್ಯಂ ಸಂಭವತಿ ತದಾ ದುರ್ಜನಕಾರ್ಯನಾಶಾರ್ಥಂ ಪಲಾಯೀ ಭವೇದಿತಿ ವಕ್ತುಮಸತಾಂ ಕಾರ್ಯಮೃತೇ ಕ್ವಚಿದಿತ್ಯೇತತ್ ಪ್ರವೃತ್ತಮಿತ್ಯುಪಗಮಾತ್ ॥ – (ಸ.)

೨೯. ಕುಸೀದಂ ವೈಶ್ಯಜೀವನಮಿತ್ಯತ್ರ, ''ಕುಸೀದಂ ವೈಶ್ಯಜೀವಿಕಾ'' ಇತ್ಯನುಶಾಸನಾತ್ ವೃದ್ಧ್ಯರ್ಥಂ ಧನಂ ದತ್ವಾ ವೃದ್ಧ್ಯಾ ಲಬ್ಧಧನೇನ ಜೀವನಂ ಕುಸೀದಮಿತಿ ಜ್ಞೇಯಮ್। ಅನ್ಯೇ ಸ್ವಪೂರ್ವವದಿತ್ಯತ್ರ ಅನ್ಯೇ = ವರ್ಣಬಾಹ್ಯಾಃ ಕುಂಭಕಾರಕಾರ್ಮಾದಯಃ ॥ – (ವಾ.)

೨೯. ಕೃಷಿಗೋರಕ್ಷವಾಣಿಜ್ಯಂ ವೈಶ್ಯಕರ್ಮ ಸ್ವಭಾವಜಮ್ ।
ಪರಿಚರ್ಯಾತ್ಮಕಂ ಕರ್ಮ ಶೂದ್ರಸ್ಯಾಪಿ ಸ್ವಭಾವಜಮ್ ॥ - ಗೀತಾ (೧೮/೪೪)

೨೯. ಕುಸೀದಂ ಧನಿಕೇನ ಕಲಾವೃದ್ಧ್ಯಾ ದೀಯಮಾಣ ದ್ರವ್ಯಮ್ । - (ಜ.)

೨೯. ಕುಸೀದಂ ಕಲಾವೃದ್ಧ್ಯಾ ವಿತ್ತವೃದ್ಧ್ಯಾಪಾದನಮಿತಿ ವೃತ್ತಿವಿಶಿಷ್ಟವೈಶ್ಯಾನಾಂ ಜೀವನಂ ಜೀವನೋಪಾಯಃ ॥ – (ವ.)

ಹರಿಭಕ್ತಿಯೇ ಮುಖ್ಯ ಪೂಜಾರ್ಹತೆ

ವರ್ತೇಯುರ್ಬ್ರಾಹ್ಮಣಾದ್ಯಾಶ್ಚ ಕ್ರಮಾತ್ ಪೂಜ್ಯಾ ಹರಿಪ್ರಿಯಾಃ ।
ಹರಿಭಕ್ತಾವನುಚ್ಚಸ್ತು ವರ್ಣೋ೨ಚ್ಚೋ ನಾತಿಪೂಜ್ಯತೇ ॥ ೩೦ ॥

ಅ: ಹರಿಭಕ್ತರಾದ ಬ್ರಾಹ್ಮಣರು ಮೊದಲಾದವರು ವರ್ಣಕ್ರಮದಲ್ಲಿ ಪೂಜ್ಯರು. ಹರಿಭಕ್ತಿಯಲ್ಲಿ ಉತ್ತಮನಾಗಿಲ್ಲದವನು ವರ್ಣದಿಂದ ಶ್ರೇಷ್ಠನಾದರೂ, ಹೆಚ್ಚಿನ ಆದರಕ್ಕೆ ಪಾತ್ರನಾಗಲಾರ.

ವಿ: ಹರಿಭಕ್ತರನ್ನು ಬ್ರಾಹ್ಮಣಾದಿ ವರ್ಣಕ್ರಮದಿಂದ ಆದರಿಸಬೇಕು. ಆದರೆ, ಕೇವಲ ವರ್ಣದಲ್ಲಿ ಮೇಲಿನವನಾಗಿದ್ದು ಭಕ್ತಿ ಮೊದಲಾದ ಗುಣಗಳಲ್ಲಿ ಕೀಳಾಗಿದ್ದರೆ, ಅವನಿಗೆ ವಿಶೇಷ ಆದರ ಸಲ್ಲಿಸಕೂಡದು.

ಹರಿಭಕ್ತನಾದ ವರ್ಣಹೀನನೂ ಪೂಜ್ಯ

ವಿನಾ ಪ್ರಣಾಮಂ ಪೂಜ್ಯಸ್ತು ವರ್ಣಹೀನೋ ಹರಿಪ್ರಿಯಃ ।
ಆದರಸ್ತತ್ರ ಕರ್ತವ್ಯೋ ಯತ್ರ ಭಕ್ತಿರ್ಹರೇರ್ವರಾ ॥ ೩೧ ॥

---

೩೦. 'ಸ್ವಾಭಾವಿಕೋ ಬ್ರಾಹ್ಮಣಾದಿಃ ಶಮಾದ್ಯೈರೇವ ಭದ್ಯತೇ ।
ಯೋನಿಭೇದಕೃತೋ ಭೇದೋ ಜ್ಞೇಯ ಔಪಾಧಿಕಸ್ತ್ವಯಮ್ ।
ವಿಷ್ಣುಭಕ್ತಿಶ್ಚಾನುಗತಾ ಸರ್ವವರ್ಣೇಷು ವಿಶ್ರುತಿಮ್ ।
ಆರಭ್ಯ ಹೀಯತೇ೨ಥಾಪಿ ಭೇದಃ ಸ್ವಾಭಾವಿಕಸ್ತತಃ' ಇತಿ ನಾರದೀಯೇ। - ಗೀತಾತಾತ್ಪರ್ಯ (೪/೧೩)

'ಕ್ಷತ್ರಿಯೋನಬ್ರಹ್ಮಗುಣೋ ವೈಶ್ಯಃ ಕೃಷ್ಯಾದಿಜೀವನಃ ।
ತತ ಊನಃ ಶಮಾದ್ಯೈರ್ಯಃ ಶುಶ್ರೂಷುಃ ಶೂದ್ರ ಉಚ್ಯತೇ ।
ಅಧಿಕಾಶ್ಚೇದ್ ಗುಣಾಃ ಶೂದ್ರೇ ಬ್ರಾಹ್ಮಣಾದಿಃ ಸ ಉಚ್ಯತೇ ।
ಬ್ರಾಹ್ಮಣೋ೨ಪ್ಯಲ್ಪಗುಣಕಃ ಶೂದ್ರ ಏವೇತಿ ಕೀರ್ತಿತಃ ।
ನರೋ೨ಪಿ ಯೋ ದೇವಗುಣೋ ಜ್ಞೇಯೋ ದೇವೋ ನೃತಾಂ ಗತಃ' ಇತಿ ।
– ಗೀತಾತಾತ್ಪರ್ಯ (೧೮/೪೪-೪೮)

೩೦. ತಥಾ ಚ ಬ್ರಾಹ್ಮಣತ್ವಾದೇರನ್ವಯವ್ಯತಿರೇಕಾಭ್ಯಾಂ ಅಪ್ರಯೋಜಕತ್ವಾತ್ ಪೂಜಾರ್ಹತ್ವೇ ವಿಷ್ಣುಭಕ್ತಿರೇವ ಪ್ರಯೋಜಕೇತಿ ಭಾವಃ ॥ – (ವ.)

೩೦. ಹರಿಭಕ್ತಿಸ್ತು ಹರಿಭಕ್ತಿಕಾರ್ಯೇಣಾನುಮಾಯೇತಿ । – (ಸ.)

೩೧. 'ಶೂದ್ರಸ್ಯಾಪಿ ಹರೇರ್ದೀಕ್ಷಾಂ ಪ್ರವಿಷ್ಟಸ್ಯ ತು ವಿಪ್ರವತ್ ।
ಆಭಕ್ಷ್ಯಾದಿಕೃತೋ ದೋಷಃ ಸ ಹಿ ಶೂದ್ರೇ ಹಿ ಮುಖ್ಯತಃ' ಇತಿ ವಿಷ್ಣುತಂತ್ರೇ ॥
– ಭಾಗವತತಾತ್ಪರ್ಯನಿರ್ಣಯ ೧೧/೨೧/೧೭)

ಅ: ವರ್ಣದಲ್ಲಿ ಕಡಿಮೆಯಾದವನು, ಹರಿಭಕ್ತನಾಗಿದ್ದಲ್ಲಿ ಅವನನ್ನು ಪ್ರಣಾಮವನ್ನು ಹೊರತು ಬೇರೆ ಬಗೆಗಳಿಂದ ಪೂಜಿಸಲೇಬೇಕು. ಎಲ್ಲಿ ಉತ್ತಮವಾದ ಹರಿಭಕ್ತಿಯಿರುವುದೋ ಅಲ್ಲಿ ಆದರವನ್ನು ಮಾಡಲೇಬೇಕು.

ವಿ: ೧) ವರ್ಣ ವ್ಯವಸ್ಥೆಯ ಬಗ್ಗೆ ಮತ್ತೊಂದು ಮುಖದ ವಿವೇಚನೆ ಇಲ್ಲಿದೆ. ಬ್ರಾಹ್ಮಣಾದಿ ವರ್ಣಗಳ ಮೇಲು ಕೀಳುಗಳೇನಿದ್ದರೂ ಹೊರಗಿನ ರೀತಿಯಲ್ಲಿ ಮಾತ್ರ. ಆದರೆ, ಮುಖ್ಯವಾಗಿ ಪರಿಗಣನೆಗೆ ಅರ್ಹವಾದುದು ಹರಿಭಕ್ತಿ ಮೊದಲಾದ ಸದ್ಗುಣಗಳೇ ಹೊರತು ಕೇವಲ ವರ್ಣವಲ್ಲ ಎಂದರ್ಥ.

೨) ವರ್ಣದಲ್ಲಿ ಕೀಳಾಗಿದ್ದರೂ ಗುಣದಲ್ಲಿ ಮಿಗಿಲಾಗಿದ್ದರೆ ಅವರಿಗೆ ವಿಶೇಷವಾದ ಗೌರವ ಸಲ್ಲಲೇಬೇಕು ಎಂಬುದು ಶಾಸ್ತ್ರಗಳ ನಿರ್ಣಯ. ಒಟ್ಟಾಗಿ ಹರಿಭಕ್ತನಾದವನಿಗೆ ಸರ್ವಥಾ ಅನಾದರವಾಗದಂತೆ ವರ್ತಿಸಬೇಕು ಎಂಬುದು ಶಾಸ್ತ್ರಗಳ ಹೃದಯ.

ಉಪದೇಶದ ಅರ್ಹತೆ

ಜ್ಞಾಪನಂ ಕ್ಷತ್ರಿಯಾಣಾಂ ಚ ಧರ್ಮೋ ವಿಪ್ರಾಭ್ಯನುಜ್ಞಯಾ ।
ತದಭಾವೇ ತು ವೈಶ್ಯಾನಾಂ ಶೂದ್ರಸ್ಯ ಪರಮಾಪದಿ ॥ ೩೨ ॥

ಅ: ಜ್ಞಾನಿಯಾದ ಬ್ರಾಹ್ಮಣ ದೊರೆಯದಿದ್ದಾಗ ಬ್ರಾಹ್ಮಣನ ಅನುಮತಿಯನ್ನು ಪಡೆದು ಕ್ಷತ್ರಿಯರೂ ಜ್ಞಾನೋಪದೇಶ ಮಾಡಬಹುದು. ಕ್ಷತ್ರಿಯರೂ ಇಲ್ಲವಾದಾಗ ವೈಶ್ಯರು, ಅವರೂ ಇಲ್ಲದ ಪರಮಾಪತ್ತಿನ ಪ್ರಸಂಗದಲ್ಲಿ ಶೂದ್ರರೂ ಉಪದೇಶ ನೀಡಬಹುದು.

ವಿ: ೧) ಪಾಂಡುರಾಜನಿಗೆ ಭೀಷ್ಮರು ತಾವೇ ಅಸ್ತ್ರೋಪದೇಶ ಮಾಡಿದ್ದರು, ಆದರೆ ಕೃಪಾಚಾರ್ಯರು ಲಭಿಸಿದ್ದರಿಂದ ಕೌರವ, ಪಾಂಡವರಿಗೆ ತಾನು ಮಾಡದೇ ಅವರ ಮೂಲಕ ಮಾಡಿಸಿದರು. ಬಳಿಕ ದ್ರೋಣರು ಬಂದಾಗಲೂ ಅವರಿಂದಲೇ ಮಾಡಿಸಿದರು ಎಂಬುದನ್ನು ಗಮನಿಸಬೇಕು.

೨) ಅದರಂತೆ ಧೃತರಾಷ್ಟ್ರ ಬ್ರಹ್ಮಜ್ಞಾನದ ಬಗ್ಗೆ ಪ್ರಶ್ನೆ ಮಾಡಿದಾಗ, ವಿದುರ ತಾನು ತಿಳಿದವನಾಗಿದ್ದರೂ ಅದನ್ನು ಉಪದೇಶ ಮಾಡದೇ ತನ್ನ ಗುರುಗಳಾದ ಸನತ್ಸುಜಾತರನ್ನು ಸ್ಮರಿಸಿ ಅವರಿಂದಲೇ ಉಪದೇಶ ಮಾಡಿಸಿದ (೨೪/೩೮, ೩೯) ಎಂಬ ಪ್ರಸಂಗಗಳನ್ನು ಗಮನಿಸಬೇಕು.

---

೩೨. ಸ್ವಪುತ್ರಾದೀನಾಮಿತಿ ಶೇಷಃ । ನತಸ್ವೋತ್ತಮವರ್ಣಾನಾಮಿತಿ ಭಾವಃ । (ಜ.)

೩) ಅದರಂತೆ ಬ್ರಾಹ್ಮಣನಾದ ಕೌಶಿಕನಿಗೆ ಧರ್ಮವ್ಯಾಧನು (ವನಪರ್ವ) ಜಾಜಲಿ ಮುನಿಗೆ ವೈಶ್ಯನಾದ ತುಲಾಧಾರನೂ (ಶಾಂತಿಪರ್ವ) ಉಪದೇಶ ಮಾಡಿದ ಪ್ರಸಂಗಗಳನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ವರ್ಣಾವರನಿಗೆ ಉಪದೇಶದ ಪ್ರಸಕ್ತಿ ಬರದು

ವರ್ಣೇಷ್ವಜ್ಞೇಷ್ವವರ್ಣಸ್ತು ನ ಜ್ಞಾನೀ ಸ್ಯಾತ್ ಕಥಂಚನ ।
ಇತಿ ಶ್ರುತೇರವರ್ಣಸ್ಯ ಜ್ಞಾಪನಪ್ರಾಪ್ತಿರೇವ ನ ॥ ೩೩ ॥

ಅ: ನಾಲ್ಕುವರ್ಣದವರೂ ಜ್ಞಾನಶೂನ್ಯರಾದಾಗ ವರ್ಣಬಾಹ್ಯನು ಸರ್ವಥಾ ಜ್ಞಾನಿಯಾಗಲು ಅಸಾಧ್ಯ ಎಂದು ಶ್ರುತಿಯಿರುವುದರಿಂದ ವರ್ಣಬಾಹ್ಯನಿಗೆ ಉಪದೇಶಕನಾಗುವ ಪ್ರಸಕ್ತಿಯೇ ಇಲ್ಲ.

ಸ್ತ್ರೀ ಪುರುಷರ ವಿಶೇಷ ಧರ್ಮಗಳು

ಜ್ಞೇಯಂ ಸರ್ವಂ ತ್ರಿವರ್ಣಸ್ಥೈಃ ಸ್ತ್ರೀಭಿರ್ವೇದಾನ್ ವಿನಾऽಖಿಲಮ್ ।
ಸ್ವೀಯಪುನ್ನಿಯತಿಃ ಸ್ತ್ರೀಣಾಂ ಸ್ವದಾರನಿಯತಿರ್ನೃಣಾಮ್ ॥ ೩೪ ॥

ಧರ್ಮೋ ಗುಣೋತ್ತಮಾನಾಂ ತು ಸ್ಮೃತ್ಯೈವಾಂಧಂ ತಮೋ ವ್ರಜೇತ್ ।
ಗುಣಸರ್ವಸ್ವಹಾನಿಃ ಸ್ಯಾದುತ್ತರೋತ್ತರತೋऽತ್ರ ಚ ।
ಅಧೋऽಧೋऽಧಿಕದೋಷಃ ಸ್ಯಾತ್ ಸ್ತ್ರೀಣಾಮನ್ಯತ್ರ ಮಧ್ಯತಃ ॥ ೩೫ ॥

ಅ: ತ್ರೈವರ್ಣಿಕ ಸ್ತ್ರೀಯರು ವೇದಗಳ ಹೊರತು ಉಳಿದೆಲ್ಲ ವಿದ್ಯೆಗಳನ್ನೂ ತಿಳಿಯಲೇಬೇಕು. ಸ್ತ್ರೀಯರು ತಮ್ಮ ಪುರುಷರಿಗೆ ನಿಷ್ಠರಾಗಿರುವುದು, ಪುರುಷರು ತಮ್ಮ ಪತ್ನಿಗೆ ನಿಷ್ಠರಾಗಿರುವುದು

---

೩೪. ಸ್ತ್ರೀಶೂದ್ರಬ್ರಹ್ಮಬಂಧೂನಾಂ ತಂತ್ರಜ್ಞಾನೇऽಧಿಕಾರಿತಾ । - ಬ್ರಹ್ಮಸೂತ್ರಭಾಷ್ಯ (೧/೧/೧)

೩೫. ಗುಣೋತ್ತಮಾನಾಂ ತು ಸ್ಮೃತ್ಯೈವೇತ್ಯತ್ರ ಗುಣೋತ್ತಮಾಃ ಯೇ ಪುಂಸಃ ತೇಷಾಂ ಸ್ತ್ರೀಸ್ಮೃತ್ಯಾ= ಭೋಗ್ಯತ್ವ-ಸ್ಮೃತ್ಯೈವ। ತದಯೋಗ್ಯಪುರುಷಃ ಅಂಧಂತಮೋ ವ್ರಜೇದಿತಿ ಷಷ್ಠ್ಯಂತಸ್ತ್ರೀವದಾವೃತ್ತ್ಯಾ ಯೋಜನಾ। ಮಾನುಷೇಷು ಕ್ವಚಿತ್ ಸ್ತ್ರೀಣಾಂ ಹರಿಭಕ್ತ್ಯಾದಿಗುಣಾಧಿಕ್ಯದರ್ಶನಾತ್ ಗುಣಾಧಿಕಾನಾಂ ಪುಂಸಾಂ ಯಾಃ ಸ್ತ್ರಿಯಃ ತಾಸಾಮಿತಿ ವ್ಯಧಿಕರಣಷಷ್ಠೀ। ಉತ್ತರೋತ್ತರತಃ = ಉತ್ತಮೋತ್ತಮೇಷು ಅತ್ರ ಚ = ಪುರುಷೇಷು ಸ್ಮೃತ್ಯಾ= ಅಧಮಸ್ತ್ರೀಣಾಂ ಭೋಗ್ಯತ್ವಸ್ಮೃತ್ಯಾ ಪುಣ್ಯಹಾನಿಃ ಸ್ಯಾತ್। ನ ತು ಮಹಾದೋಷಃ ॥ - (ವಾ.)

ಕರ್ತವ್ಯ. ಗುಣದಲ್ಲಿ ತನಗಿಂತ ಉತ್ತಮರಾದವರ ಸ್ತ್ರೀಯರನ್ನು ಸೇರುವ ಆಲೋಚನೆಯೂ ಸಹ ತಮಸ್ಸಿಗೆ ಸಾಧನ. ಹೆಚ್ಚು ಹೆಚ್ಚು ಉತ್ತಮರಾದ ಪುರುಷರ ಸ್ತ್ರೀಯರನ್ನು ಬಯಸುವುದು ಸಕಲ

---

೩೫. ಅಧೋಽಧಃ = ಅಧೋಽಧೋ ವಿದ್ಯಮಾನಾನಾಂ ಪುಂಸಾಂ ಸ್ತ್ರೀಣಾಂ ಸ್ವೋತ್ತಮಾನಾಂ ಯಾ ಸ್ತ್ರಿಯಃ ತಾಸಾಂ ಸ್ಪೃತ್ಯಾ ಭೋಗ್ಯತ್ವಸ್ಪೃತ್ಯಾ ಅಧಿಕದೋಷಃ ಸ್ಯಾತ್ । ಮಧ್ಯತೋಽನ್ಯತ್ರ= ಸಮಾತ್ಪುರುಷಾದನ್ಯತ್ರ ಮಧ್ಯತ ಇತ್ಯುಪಲಕ್ಷಣಮ್। ಉತ್ತಮಾದನ್ಯತ್ರೇತಿ ಚ ಗ್ರಾಹ್ಯಮ್। ಇದಾನೀಂ ಕ್ವಚಿತ್ ಸ್ತ್ರೀಭಿದಜ್ಞೇಯಮಿತ್ಯತಸ್ತದ್ವಿಭಾಗಮಾಹ ದೇವಾ ಇತಿ। ಕೃಷ್ಣಾ = ದೇವಪ್ಯಾದೀನಾಂ ಸ್ತ್ರೀಭಿಃ । ಅಖಿಲಾ ವೇದಾ ಜ್ಞೇಯಾ ಇತಿ ವಕ್ಷ್ಯಮಾಣಜ್ಞೇಯಪದಸ್ಯ ಯಥಾಯೋಗ್ಯಮಾವೃತ್ತ್ಯಾ ಯೋಜನಾ। ಕೃಷ್ಣಾದ್ಯಾಭಿರಿವೇತ್ಯತ್ರ ಆದ್ಯಪದೇನ ಶಬ್ಯಾದ್ಯಾಃ ಗೃಹ್ಯಂತೇ ॥ –(ವಾ.)

೩೫. ಪರದಾರದೃಶಿಃ ಪ್ರೋಕ್ತಾಕ್ಷುದ್ರಪಾತಕಸಂಜ್ಞಿತಾ ।
ಉಪಪಾತಕಂ ತದ್ಗತಿಶ್ಚ ವರ್ಣಬಾಹ್ಯೇಷು ಪಾತಕಮ್ ।
ಮಹಾಪಾತಕಸಂಜ್ಞಂ ತು ಪಿತ್ರಾದೇರ್ದಾರಧರ್ಷಣಮ್ ।
ದಾರದೃಷ್ಟಿಃ ಸ್ವೋತ್ತಮಾನಾಂ ಮಾನುಷಾಣಾಂ ಸ್ವಭಾವತಃ ।
ಸುಮಹಾಪಾತಕಂ ಪ್ರೋಕ್ತಂ ತದ್ಗತಿಃ ಸುಮಹತ್ತರಃ ।
ಋಷಿದಾರೇಷು ಮನಸೋ ಗತಿರೇವ ತತೋಽಧಿಕಾ ।
ದೇವದಾರಾಭಿಕಾಮಾನಾಂ ಸಂಗಿಸಂಗಸ್ತತೋಽಧಿಕಃ ।
ಕಿಮು ವಿಷ್ಣೋಸ್ತತೋ ಯೋಷಿತ್ಸಂಗಸ್ಯ ವ್ಯತ್ಯಯಸ್ಥಿತೇಃ ।
ನ ಸಮಂ ಪಾತಕಂ ಕ್ವಾಪಿ ನ ಹಿ ಸ್ವಸ್ತ್ರ್ಯಭಿಕಾಮತಃ ।
ಅವಜ್ಞಾತಾ ಮಾಧವಾದೇಸ್ತಸ್ಮಾತ್ ತಂ ದೂರತಸ್ತ್ಯಜೇತ್ ।
ಮಾನುಷೇಷು ತು ದುಃಖಿತ್ವಂ ಕ್ಷುದ್ರಪಾಪಫಲಂ ಸ್ಮೃತಮ್ ।
ಪಾಪಾತ್ ತು ವರ್ಣಬಾಹ್ಯತ್ವಂ ತಿರ್ಯಗ್ಯೋನಿಗತಿಸ್ತಥಾ ।
ಸಹಸ್ರವರ್ಷನರಕಂ ಕ್ಷುದ್ರಪಾತಕಜಂ ಫಲಮ್ ।
ಉಪಪಾತಕತಶ್ಚಾಪಿ ನರಕಂ ಯುಗಮಾತ್ರಕಮ್ ।
ಚತುರ್ಯುಗಾವಸಾನಂ ತು ಪಾತಕಸ್ಯ ಫಲಂ ಸ್ಮೃತಮ್ ।
ಮಹಾಪಾತಕಜನ್ಮಂ ಚ ಕಲ್ಪಾವಧಿ ಸಮೀರಿತಮ್ ।
ಸುಮಹಾಪಾತಕಾಚ್ಚಾಪಿ ಯಾವದ್ಬ್ರಹ್ಮಲಯೋ ಭವೇತ್ ।
ತತ್ಪರಾಣಾಂ ಪಾತಕಾನಾಂ ಫಲಮಂಧಂತಮಃ ಸ್ಮೃತಮ್ ।
ಅಧೋಽಧೋ ದುಃಖಬಹುಲಂ ವಿಷ್ಣುದಾರಾಭಿಮರ್ಶನಾತ್ ।
ವಧಾದಪಿ ಹಿ ದಾರಸ್ಯ ಧರ್ಷಣಂ ಕೋಪಕಾರಣಮ್ ।
ತಸ್ಮಾದ್ದೇವ್ಯಃ ಸದಾ ವಂದ್ಯಾ ಅಗ್ನಿವನ್ನಾಭಿಕಾಮತಃ' ॥ (ಧರ್ಮತತ್ತ್ವ) –ಭಾ.ತಾ.(೧೧/೧೪/೩೦)

ಚಂದ್ರಸುಗ್ರೀವಯೋಶ್ಚೈವ ಸ್ವೋಚ್ಚದಾರಪರಿಗ್ರಹಾತ್ ।
ಪ್ರಾಪ್ತಹಾನಿರಭೂನ್ನೈವ ಕ್ಲಪ್ತಹಾನಿಃ ಕಥಂಚನ ॥ –ಅನುವ್ಯಾಖ್ಯಾನ (೩/೪/೧೪)

ಮಹತಾಂ ವನಿತಾಕಾಮಃ ಪತತ್ಯಂಧೇ ತಮಸ್ಯಲಮ್ ।
ಅನ್ಯತ್ರ ನಿರಯಂ ಯಾತಿ ದುಃಖವಾನ್ ಸ್ಯಾದ್ ವಿಪರ್ಯಯೇ ॥
(ಧರ್ಮಸಂಹಿತಾ) – ಭಾ.ತಾ.(೧೧/೮/೭)

ಗುಣಗಳ ವಿನಾಶಕ್ಕೆ ಕಾರಣ. ಸ್ತ್ರೀಯರಿಗೆ ತಮ್ಮ ಪತಿಗಳಿಗಿಂತ ಕಡಿಮೆಯವರಾದ ಪುರುಷರ ಸಂಪರ್ಕ ಕ್ರಮವಾಗಿ ಹೆಚ್ಚಿನ ದೋಷಕ್ಕೆ ಕಾರಣ. ಇತರರನ್ನು ಬಯಸಿದಾಗಲೂ ದೋಷವೇ.

ವಿ: ಸ್ತ್ರೀಯರಿಗೆ ನಿಯತಪತಿಗಳ ಹೊರತು ಇತರರ ಸಂಗದ ಅನರ್ಥದ ವಿವರ ಹನ್ನೆರಡನೆಯ ಅಧ್ಯಾಯದಲ್ಲಿ ಬಂದಿದೆ(೧೨/೨೪).

ವೇದಾ ಅಪ್ಯುತ್ತಮಸ್ತ್ರೀಭಿಃ ಕೃಷ್ಣಾದ್ಯಾಭಿರಿವಾಖಿಲಾಃ ।
ದೇವ್ಯೋ ಮುನಿಸ್ತ್ರಿಯಶ್ಚೈವ ನರಾದಿಕುಲಜಾ ಅಪಿ ॥ ೩೬ ॥

---

೩೫. ತಮೋಯೋಗ್ಯಃ ಪುಮಾನೇವೇತಿ ಶೇಷಃ । ಅನ್ಯಥಾ ನಹುಷಾದಿಷು ವ್ಯಭಿಚಾರಃ । - (ಜ.)

೩೫. ತಥಾ ಚ ಶೂದ್ರಸ್ತ್ರೀಸಂಭೋಗಾದ್ಯಾವತಾಂ ಗುಣಾನಾಂ ಹಾನಿಃ ತತೋಽಪ್ಯಧಿಕಃ ವೈಶ್ಯಸ್ತ್ರೀಸಂಭೋಗಾದ್ಗುಣಹಾನಿಃ । ತತೋಽಪ್ಯಧಿಕಾ ಕ್ಷತ್ರಿಯಾಯಾಃ ತತೋಽಪಿ ವಿಪ್ರಾಯಾಶ್ಚ । - (ಜ.)

೩೫. ಯದ್ವಾ ಉತ್ತರೋತ್ತರ ಇತಿ । ಉಚ್ಚೋಚ್ಚವರ್ಣಸ್ತ್ರೀಸಂಭೋಗ ಇತ್ಯರ್ಥಃ । – (ವ.)

೩೫. ಅಧೋಽಧ ಇತಿ । ಮಧ್ಯತಃ ಸ್ವಭರ್ತುರನೀಚಾದನುತ್ತಮಾತ್ ಸಮಾನಾದಿತ್ಯರ್ಥಃ । ... ತತ್ರಾಪಿ ಅಧೋಽಧಃ ಜಾತ್ಯಾ ಗುಣೈರ್ವಾ ನೀಚಪುರುಷಕಾಮನಾಯಾಂ ಅಧಿಕೋ ದೋಷಃ ಸ್ಯಾದಿತ್ಯರ್ಥಃ । – (ವ.)

೩೬. ಉತ್ತಮಸ್ತ್ರಿಯಃ ಕಾ ಇತ್ಯತ ಆಹ ದೇವ್ಯ ಇತಿ ಅವೈದಿಕಂ= ವೇದವ್ಯತಿರಿಕ್ತಪುರಾಣಾದಿಕಮ್ ॥ – (ವಾ.)

೩೬. ವರಂ ಸಮಾಶ್ರಿತಾ ಪತಿಂ ವ್ರಜೇತ ಯಾ ತತೋಽಧಮಮ್ ।
ನ ಕಾಚಿದಸ್ತಿ ನಿಷ್ಕೃತಿರ್ನ ಭರ್ತೃಲೋಕಮೃಚ್ಛತಿ ॥ - ಇತಿ ಹ್ಯುಕ್ತಮ್ (೧೨/೨೪)

ಸುರಸ್ತ್ರಿಯೋಽತಿಕಾರಣೈರ್ಯದನ್ಯಥಾ ಸ್ಥಿತಾಸ್ತದಾ ।
ದುರನ್ವಯಾಃ ಸುದುಃಸಹಾ ವಿಪತ್ತತೋ ಭವಿಷ್ಯತಿ ॥ - ಇತಿ ಚ (೧೨/೨೯)

೩೬. ಸ್ತ್ರೀಶೂದ್ರಬ್ರಹ್ಮಬಂಧೂನಾಂ ತಂತ್ರಜ್ಞಾನೇಽಧಿಕಾರಿತಾ ।
ಏಕದೇಶೇ ಪರೋಕ್ತೇ ತು ನ ಚ ಗ್ರಂಥಪುರಃಸರೇ ॥
ತ್ರೈವರ್ಣಿಕಾನಾಂ ವೇದೋಕ್ತೇ ಸಮ್ಯಗ್ ಭಕ್ತಿಮತಾಂ ಹರೌ ॥
ಆಹುರಪ್ಯುತ್ತಮಸ್ತ್ರೀಣಾಮಧಿಕಾರಂ ತು ವೈದಿಕೇ ।
ಯಥೋರ್ವಶೀ ಯಮೀ ಚೈವ ಶಚ್ಯಾದ್ಯಾಶ್ಚತಥಾಽಪರಾಃ ॥
(ವ್ಯೋಮಸಂಹಿತಾ) – ಬ್ರಹ್ಮಸೂತ್ರಭಾಷ್ಯ(೧/೧/೧)

೩೬. ಸ್ತ್ರೀಭಿರಿತ್ಯುಪಲಕ್ಷಣಂ 'ಸ್ತ್ರೀಶೂದ್ರಬ್ರಹ್ಮಬಂಧುಭಿಃ' ಇತಿ ವೇದಾನ್ ವಿನಾ ಅಖಿಲಮಿತ್ಯೋಕ್ತಂ ಜ್ಞೇಯಮ್ ॥ – (ವ.)

ಉತ್ತಮಾ ಇತಿ ವಿಜ್ಞೇಯಾಃ ಸಚ್ಛೂದ್ರೈರಪ್ಯವೈದಿಕಮ್ ।
ಜ್ಞೇಯಮನ್ಯೈರ್ಹರೇರ್ನಾಮ ನಿಜಕರ್ತವ್ಯಮೇವ ಚ ॥ ೩೭ ॥

ಅ: ಉತ್ತಮಸ್ತ್ರೀಯರು ದ್ರೌಪದಿ ಮೊದಲಾದವರಂತೆ ಸಕಲವೇದಗಳನ್ನು ಸಹ ಅಧ್ಯಯನ ಮಾಡಬೇಕು. ದೇವತಾಸ್ತ್ರೀಯರು, ಋಷಿಪತ್ನಿಯರು, ಮನುಷ್ಯಾದಿ ಯೋನಿಯಲ್ಲಿ ಅವತರಿಸಿದ್ದರೂ ಉತ್ತಮರೆಂದೇ ತಿಳಿಯಬೇಕು. ಉತ್ತಮ ಶೂದ್ರರೂ ಸಹ ವೇದಗಳ ಹೊರತು ಇತರ ಗ್ರಂಥಗಳನ್ನು ಕೇಳಿ ತಿಳಿಯಬೇಕು. ಇತರರಿಗೆಲ್ಲ ಹರಿನಾಮ ತಮ್ಮ ಕರ್ತವ್ಯವೇ ಆಗಿದೆ.

ವಿ: ೧) ಸ್ತ್ರೀಯರ ವೇದಾಧಿಕಾರ ವೈದಿಕ ಮತಾಚಾರ್ಯರೊಬ್ಬರ ವಿಶಿಷ್ಟ ನಿಲುವು ಎಂಬುದು ಇಲ್ಲಿಯ ವಿಶೇಷ. ಸಾಮಾನ್ಯವಾಗಿ ಸ್ತ್ರೀಯರಿಗೆ ಸರ್ವಥಾ ಅಧಿಕಾರವಿಲ್ಲ ಎಂದು ನಿರೂಪಿಸಿದವರೇ ಹೆಚ್ಚು, ಆದರೆ, ಶ್ರೀಮನ್ಮಧ್ವಾಚಾರ್ಯರು ಉತ್ತಮ ಸ್ತ್ರೀಯರಿಗೆ ವೇದಾಧಿಕಾರವೂ ಸಹ ಉಂಟು ಎಂದು ನಿರೂಪಿಸಿರುವರು.

೨) ದ್ರೌಪದಿ ಬ್ರಹ್ಮವಾದಿನಿಯಾಗಿದ್ದಳು ಎಂಬುದಾಗಿ ಮಹಾಭಾರತದಲ್ಲಿರುವುದು ಗಮನಾರ್ಹ – **'ಪತಿವ್ರತಾ ಮಹಾಭಾಗಾ ಸತತಂ ಬ್ರಹ್ಮವಾದಿನೀ । ದ್ರೌಪದೀ...'** (೪/೧/೩).

೩) ವೇದೋಪನಿಷತ್ತುಗಳಲ್ಲೂ ಯಮೀ, ಗಾರ್ಗಿ, ಮೈತ್ರೇಯಿ ಮೊದಲಾದ ಬ್ರಹ್ಮವಾದಿನಿಯರ ಉಲ್ಲೇಖ ಕಂಡುಬರುವುದನ್ನು ಗಮನಿಸಬೇಕು. ದೇವತಾಸ್ತ್ರೀಯರು, ಮುನಿ–ಸ್ತ್ರೀಯರು ವೇದಾಧಿಕಾರಿಗಳು ಎಂಬುದು ಮತ್ತೊಂದು ವಿಶೇಷ.

೪) ಶೂದ್ರರೂ ಸಹ ತತ್ತ್ವಜ್ಞಾನ ಸಂಪಾದನೆಯನ್ನು ಮಾಡಲೇಬೇಕು. ಆದರೆ ಅವರು ವೇದಾಧ್ಯಯನವನ್ನು ಮಾಡಿ ಜ್ಞಾನ ಸಂಪಾದಿಸಬೇಕಿಲ್ಲ, ಮಹಾಭಾರತ ಪುರಾಣಗಳನ್ನು ಕೇಳಿ ಜ್ಞಾನ ಪಡೆಯಬೇಕು. ಅಂತೂ ಜ್ಞಾನವಿಲ್ಲದೇ ಯಾರಿಗೂ ಉದ್ಧಾರವಿಲ್ಲವಾದ್ದರಿಂದ ಪ್ರತಿಯೊಬ್ಬರಿಗೂ ಜ್ಞಾನ ಕಡ್ಡಾಯವಾದುದು ಎಂಬುದು ಶಾಸ್ತ್ರವಿಧಿ.

೫) ಇಲ್ಲಿ ಅವೈದಿಕ ಎಂದರೆ ವೇದದ ಹೊರತು ಇತರ ಎಂದರ್ಥ; ವೇದವಿರುದ್ಧವಾದ ಎಂದರ್ಥವಲ್ಲ.

---

೩೬. ಆದಿಶಬ್ದೇನ ವಾನರಾದಯೋ ವಿವಕ್ಷಿತಾಃ । ಅತ ಏವ ವಾಲಿಸ್ತ್ರೀ ತಾರಾ ಜಾಂಬವತ್ಯಾದ್ಯಾ ಅಪಿ ಉತ್ತಮಾ ಏವೇತಿ ಜ್ಞೇಯಾಃ । ಭಾರತೀಶಚ್ಯಾದಿಭಿರ್ವೇದಾ ಜ್ಞಾತವ್ಯಾ ಇತಿ ವಕ್ತವ್ಯೇ ನರಾದಿಕುಲಜಾನಾಂ ದೇವರ್ಷಿ-ಸ್ತ್ರೀಣಾಮುತ್ತಮತ್ವಂ ವಕ್ತುಂ ಕೃಷ್ಣಾದ್ಯಾಭಿರಿವೇತ್ಯುಕ್ತಮಿತಿ ಭಾವಃ । ಸಚ್ಛೂದ್ರೈರಪ್ಯವೈದಿಕಂ ವೇದಾತಿರಿಕ್ತಂ ವೇದಾರ್ಥಾನುವಾದಕಭಾರತಪಂಚರಾತ್ರೋಕ್ತಂ ಜ್ಞೇಯಮ್ । ಅನ್ಯೈರ್ವರ್ಣಬಾಹ್ಯೈರ್ಹರೇರ್ನಾಮ ನಿಜಕರ್ತವ್ಯಮೇವ ಸ್ವಕರ್ತವ್ಯಕರ್ಮೋಪಯುಕ್ತಮೇವ ಚ ಕರ್ತವ್ಯಮ್ ॥ - (ಜ.)

೩೭. ಅನ್ಯೈಃ = ವರ್ಣಬಾಹ್ಯೈಃ ॥ – (ವಾ.)

೩೭. ಅವೈದಿಕಂ ವೇದವ್ಯತಿರಿಕ್ತಮ್ । ಭಾರತಾದಿಪ್ರತಿಪಾದ್ಯಂ ಜ್ಞೇಯಮ್ ॥ – (ವ.)

ತಮಃಸಾಧನಗಳು

ಸರ್ವಥಾಽಂಧಂ ತಮೋ ಯಾತಿ ವರಂ ಸದೃಶಮೇವ ವಾ ।
ಯೋ ವಿಷ್ಣೋರ್ಮನ್ಯತೇ ಕಿಂಚಿದ್ಗುಣೈಃ ಕೈಶ್ಚಿದಪಿ ಕ್ವಚಿತ್ ॥ ೩೮ ॥

ಬ್ರಹ್ಮೇಶಾನಾದಿಕಮಪಿ ಭೇದಂ ಯೋ ವಾ ನ ಮನ್ಯತೇ ।
ಭೇದದೃಕ್ ತದ್ಗುಣಾದೌ ಚ ಪ್ರಾದುರ್ಭಾವಗತೇಽಪಿ ಯಃ ॥ ೩೯ ॥

ಪ್ರಾಕೃತಂ ದೇಹಮಥವಾ ದುಃಖಾಜ್ಞಾನಶ್ರಮಾದಿಕಮ್ ।
ಮನ್ಯತೇ ತಾರತಮ್ಯಂ ವಾ ತದ್ಭಕ್ತೇಷ್ವನ್ಯಥೈವ ಯಃ ॥ ೪೦ ॥

ಅ: ವಿಷ್ಣುವಿಗಿಂತ ಮಿಗಿಲಾದವನಾಗಲೀ, ಅವನಂಥವನಾಗಲೀ ಇರುವನು ಎಂದು ತಿಳಿದವನು ಅಂಧಂತಮಸ್ಸಿಗೆ ತೆರಳುವುದು ನಿಶ್ಚಿತ. ಬ್ರಹ್ಮ, ರುದ್ರಾದಿಗಳನ್ನು ಕೆಲವು ಗುಣಗಳಿಂದಾಗಿ ಸ್ವಲ್ಪವೇ ಸಮರೆಂದು ತಿಳಿದರೂ, ವಿಷ್ಣುವಿನೊಂದಿಗೆ ಅವರಿಗೆ ಭೇದವನ್ನು ತಿಳಿಯದಿದ್ದರೂ, ವಿಷ್ಣುವಿಗೆ ಅವನ ಗುಣಗಳು ಮೊದಲಾದವುಗಳೊಂದಿಗೆ ಭೇದವನ್ನು ತಿಳಿದರೂ, ವಿಷ್ಣುವಿನ ಅವತಾರಗಳಿಗೆ ಭೇದವನ್ನು ತಿಳಿದರೂ, ಅವತಾರಗಳಲ್ಲಿ ಪ್ರಾಕೃತ ದೇಹವನ್ನು ತಿಳಿದರೂ, ವಿಷ್ಣುವಿಗೆ ಅಜ್ಞಾನ, ದುಃಖ, ಬಳಲಿಕೆ ಮುಂತಾದವುಗಳನ್ನು ತಿಳಿದರೂ, ಅವನ ಭಕ್ತರಲ್ಲಿ ತಾರತಮ್ಯವನ್ನು ತಪ್ಪಾಗಿ ತಿಳಿದರೂ ತಮಸ್ಸು ನಿಶ್ಚಿತ.

ಮನೋವಾಕ್ತನುಭಿರ್ಯೋ ವಾ ತಸ್ಮಿಂಸ್ತದ್ಭಕ್ತ ಏವ ವಾ ।
ವಿರೋಧಕೃದ್ವಿಷ್ಣ್ವಧೀನಾದನ್ಯತ್ ಕಿಂಚಿದಪಿ ಸ್ಮರನ್ ॥ ೪೧ ॥

ಅ: ಮನಸ್ಸು ಮಾತು ಮತ್ತು ದೇಹಗಳಿಂದ ಯಾವನು ವಿಷ್ಣುವನ್ನಾಗಲೀ, ಅವನ ಭಕ್ತನನ್ನಾಗಲೀ ವಿರೋಧ ಮಾಡುವನೋ, ವಿಷ್ಣುವಿಗೆ ಅಧೀನವಲ್ಲ ಎಂದು ಏನನ್ನಾದರೂ ತಿಳಿಯುವನೋ ಅವನೂ ಸಹ ತಮಸ್ಸು ಹೊಂದುವನು.

---

೩೯. ಬ್ರಹ್ಮೇಶಾನಾದಿಕಂ ಕೈಶ್ಚಿದ್ಗುಣೈಃ ವಿಷ್ಣೋಃ ಸದೃಶಂ ಕಿಂಚಿದ್ವರಮೇವ ವಾ ಯೋ ಮನ್ಯತೇ ಸೋಽಪಿ ಸರ್ವಥಾ ಅಂಧಂತಮೋ ಯಾತೀತಿ ಪೂರ್ವೇಣಾನ್ವಯಃ। ಭೇದಂ= ಬ್ರಹ್ಮೇಶಾನಾದಿಭಃ ವಿಷ್ಣೋರ್ಭೇದಂ ನ ಮನ್ಯತೇ॥– (ವಾ.)

೪೦. ತಾರತಮ್ಯಂ ವೇತ್ಯತ್ರ ಪ್ರಾದುರ್ಭಾವಗತೇ ನಾರಾಯಣೇ ದುಃಖಾಜ್ಞಾನಶ್ರಮಾದಿಕಂ ತಾರತಮ್ಯಂ ವಾ ಯೋ ಮನ್ಯತೇ ತದ್ಭಕ್ತೇಷು ಅನ್ಯಥಾ= ತಾರತಮ್ಯಂ ವಿನಾ ಯೋ ಮನ್ಯತ ಇತಿ ಸಂಬಂಧಃ ॥ – (ವಾ.)

ಅನ್ಯಾಧೀನತ್ವವಿಜ್ಞಾನ್ಯ ಸರ್ವಪೂರ್ತ್ಯವಿದೇವ ಚ ।
ಭಕ್ತಿಹೀನಶ್ಚ ತೇ ಸರ್ವೇ ತಮೋಽಂಧಂ ಯಾಂತ್ಯಸಂಶಯಮ್ ॥ ೪೨ ॥

ಅ: ವಿಷ್ಣುವಿಗೆ ಇತರರ ಆಧೀನ್ಯವನ್ನಾಗಲೀ, ಸರ್ವಪರಿಪೂರ್ಣತ್ವವನ್ನು ತಿಳಿಯದವನಾಗಲೀ, ಭಕ್ತಿ ಇಲ್ಲದವನಾಗಲೀ, ತಮಸ್ಸನ್ನೇ ನಿಶ್ಚಯವಾಗಿ ಹೊಂದುವನು.

ಸಂದೇಹಶೀಲರಿಗೆ ನರಕಾದ್ಯನರ್ಥ

ತತ್ತ್ವೇ ಸಂಶಯಯುಕ್ತಾ ಯೇ ಸರ್ವೇ ತೇ ನಿರಯೋಪಗಾಃ ।
ದೋಷೇಭ್ಯಸ್ತೇ ಗುಣಾಧಿಕ್ಯೇ ನೈವ ಯಾಂತ್ಯಧಮಾಂ ಗತಿಮ್ ॥ ೪೩ ॥

ಅ: ತತ್ತ್ವದಲ್ಲಿ ಸಂದೇಹ ಹೊಂದಿದವರೆಲ್ಲ ಅಂತಹ ದೋಷಗಳಿಂದಾಗಿ ನರಕವನ್ನು ಹೊಂದುವರು. ಗುಣಗಳು ಹೆಚ್ಚಿದ್ದಾಗ ಅವರು ಅಂಧಂತಮಸ್ಸಿಗೆ ಹೋಗುವುದಿಲ್ಲ.

ವಿ: ಮಿಥ್ಯಾಜ್ಞಾನಿಗಳು ಅಂಧಂತಮಸ್ಸಿಗೆ ತೆರಳುವುದು ನಿಶ್ಚಿತ. ಆದರೆ, ಸಂಶಯಜ್ಞಾನವಿದ್ದವರಿಗೆ ಅಂಧಂತಮಸ್ಸಲ್ಲವಾದರೂ ನರಕಾದಿ ಅನರ್ಥಗಳು ಖಚಿತ ಎಂದರ್ಥ.

ಗುಣದೋಷಸಾಮ್ಯೇ ಮಾನುಷ್ಯಂ ಸರ್ವದೈವ ಪುನಃ ಪುನಃ ।
ಯಾವದ್ದೋಷಕ್ಷಯಶ್ಚೋರ್ಧ್ವಾ ಗತಿಃ ಕ್ರಮಶ ಏವ ತು ॥ ೪೪ ॥

ಅ: ಗುಣದೋಷಗಳು ಸಮನಾಗಿದ್ದರೆ ಮನುಷ್ಯಲೋಕದಲ್ಲೇ ಸದಾ ಮತ್ತೆ ಮತ್ತೆ ಜನಿಸುವರು. ದೋಷಗಳು ಕ್ಷಯವಾಗುವವರೆಗೂ ಹಾಗಿದ್ದು ಅನಂತರ ಕ್ರಮವಾಗಿ ಉತ್ತಮೋತ್ತಮ ಗತಿ ಪಡೆಯುವರು.

---

೪೨. 'ಕರ್ಮಣಾ ಮನಸಾ ವಾಚಾ ಯೋ ದ್ವಿಷ್ಯಾದ್ ವಿಷ್ಣುಮವ್ಯಯಮ್ ।
ಮಜ್ಜಂತಿ ಪಿತರಸ್ತಸ್ಯ ನರಕೇ ಶಾಶ್ವತೀಃ ಸಮಾಃ ।
ಯೋ ದ್ವಿಷ್ಯಾದ್ ವಿಬುಧಶ್ರೇಷ್ಠಂ ದೇವಂ ನಾರಾಯಣಂ ಹರಿಮ್ ।
ಕಥಂ ಸ ನ ಭವೇದ್ ದ್ವೇಷ್ಯ ಆಲೋಕಾಂತಸ್ಯ ಕಸ್ಯಚಿತ್' ಇತಿ । (ಮೋಕ್ಷಧರ್ಮ)
– ಭಾರತ (ಶಾಂತಿ. (೩೪೬/೬,೭);
ಇವು ಶ್ರೀಮದಾಚಾರ್ಯರಿಂದ ಗೀತಾಭಾಷ್ಯದಲ್ಲಿ (೯/೧೨) ಉದ್ಧೃತವೂ ಆಗಿವೆ.

೪೩. ಅಜ್ಞಶ್ಚಾಶ್ರದ್ದಧಾನಶ್ಚ ಸಂಶಯಾತ್ಮಾ ವಿನಶ್ಯತಿ । – ಗೀತಾ (೪/೪೦)

೪೪. ತಥಾ ತಥಾ ಕ್ರಮಶಃ ಭುವಃ ಸ್ವಃ ಮಹರಿತಿ ಕ್ರಮೇಣೋರ್ಧ್ವಗತಿಃ ॥ – (ಜ.)

ಮುಕ್ತಿಯ ಪ್ರಧಾನ ಅರ್ಹತೆ

ಸರ್ವದೋಷಕ್ಷಯೇ ಮುಕ್ತಿರಾತ್ಮಯೋಗ್ಯಾನುಸಾರತಃ ।
ಭಕ್ತಿಜ್ಞಾನೋನ್ನತಾವೇವ ಸ್ವರ್ಗಶ್ಚ ಶುಭಕರ್ಮಣಃ ।
ವಿಷ್ಣುವೈಷ್ಣವವಾಕ್ಯೇನ ಹಾನಿಃ ಪಾಪಸ್ಯ ಕರ್ಮಣಃ ॥ ೪೫ ॥

ಅ: ಸಕಲ ದೋಷಗಳೂ ಪರಿಹಾರವಾದಾಗ ತಮ್ಮ ಯೋಗ್ಯತೆಗೆ ಅನುಸಾರವಾಗಿ ಭಕ್ತಿ ಜ್ಞಾನಗಳು ಹೆಚ್ಚಿದಾಗ ಮುಕ್ತಿ ಪಡೆಯುವರು. ಸತ್ಕರ್ಮಗಳಿಂದ ಸ್ವರ್ಗ ಲಭಿಸುವುದು. ವಿಷ್ಣು ಹಾಗೂ ವೈಷ್ಣವರ ಮಾತುಗಳಿಂದ ಪಾಪಕರ್ಮಗಳು ಪರಿಹಾರವಾಗುವವು.

ವಿ: ಕೆಲವು ಕರ್ಮಗಳ ಸ್ವರೂಪದ ಬಗ್ಗೆ ಜಿಜ್ಞಾಸೆ ನಡೆದಾಗ ವಿಷ್ಣು ಅಥವಾ ವಿಷ್ಣುಭಕ್ತರ ಮಾತುಗಳೇ ಅವಕ್ಕೆ ಪರಿಹಾರ ಎಂದರ್ಥ.

ಪುರುಷಾರ್ಥ ತಾರತಮ್ಯ ಜಿಜ್ಞಾಸೆ

ಇತ್ಯಾದಿಧರ್ಮಸರ್ವಸ್ವಂ ಭೀಷ್ಮಸ್ಥೇನೈವ ವಿಷ್ಣುನಾ ।
ಪಾರ್ಥಾನಾಂ ಗದಿತಂ ತಚ್ಚ ಶ್ರುತ್ವಾ ಧರ್ಮಸುತೋಽನುಜಾನ್ ।
ಪಪ್ರಚ್ಛ ವಿದುರಂ ಚೈವ ಸಾರಂ ಧರ್ಮಾದಿಷು ತ್ರಿಷು ॥ ೪೬ ॥

ಅ: ಇದೇ ಮೊದಲಾದ ಸಕಲ ಧರ್ಮರಹಸ್ಯವನ್ನು ಭೀಷ್ಮರೊಳಗಿದ್ದು ವಿಷ್ಣು ಪಾಂಡವರಿಗೆ ತಿಳಿಸಿದ. ಅದನ್ನು ಕೇಳಿ ಧರ್ಮರಾಜನು ತಮ್ಮಂದಿರನ್ನು, ವಿದುರನನ್ನು ಧರ್ಮ, ಅರ್ಥ, ಕಾಮ ಎಂಬ ಮೂರು ಪುರುಷಾರ್ಥಗಳಲ್ಲಿ ಯಾವುದು ಮಿಗಿಲು ಎಂದು ಕೇಳಿದ.

---

೪೫. [೧]ಶುಭೇನ ಕರ್ಮಣಾ ಸ್ವರ್ಗಂ ನಿರಯಂ ಚ ವಿಕರ್ಮಣಾ ॥ – ಅಣುಭಾಷ್ಯ (೩/೧)

೪೫. ಭಕ್ತಿಜ್ಞಾನೋನ್ನತಾವೇವೇತ್ಯಸ್ಯ ಭಕ್ತಿಜ್ಞಾನೋನ್ನತಾವೇವ ಮುಕ್ತಿರಿತಿ ಪೂರ್ವೇಣಾನ್ವಯಃ ॥ – (ವಾ.)

೪೫. ವಿಷ್ಣುವೈಷ್ಣವೋಕ್ತವಿಧ್ಯನುಷ್ಠಾನೇನ ತ್ವಂ ಶುದ್ಧ ಇತಿ ವಾಕ್ಯೇನ ಚ । ಪಾಪಸ್ಯಕರ್ಮಣಃ ನಿಷಿದ್ಧಾಚರಣಸ್ಯ ಹಾನಿಃ ಪರಿಹಾರಶ್ಚ ಭವೇದಿತಿ ಶೇಷಃ ।

೪೬. ಧರ್ಮಸರ್ವಸ್ವಂ ಸರ್ವಧರ್ಮಸಾರಭೂತಂ ಪಾರ್ಥಾನಾಮರ್ಥೇ ಗದಿತಂ ಕೃಷ್ಣೋಕ್ತಮ್ । ನನು ಪಾರ್ಥಾನಾಂ ಗದಿತಮಿತ್ಯುಕ್ತಮಯುಕ್ತಂ ಪೃಚ್ಛೇತ್ಯುಕ್ತಃ ಸ ಭೀಷ್ಮೇಣೇತಿ ವಿರೋಧಾದಿತಿ ಚೇನ್ನ। ಸರ್ವೇಷಾಮಪಿ ಶ್ರೋತೃತ್ವಾತ್ । ಪ್ರಶ್ನವಾಕ್ಯಧರ್ಮಸ್ಯೈವೋಕ್ತಸ್ತು ತಸ್ಯೈವಾಧಿಕಸಂದೇಹಪೂರ್ವಕಪ್ರಶ್ನತತ್ತ್ವ- ಜ್ಞಾಪನಾರ್ಥಾ । ಭೀಮಾರ್ಜುನಯೋಃ ಸಂದೇಹಭಾವವತ್ವಾತ್ । ಅತ ಏವ ಪಾರ್ಥಾನಿತಿ ಬಹುವಚನಮ್। ತ್ರಯಾಣಾಮಪಿ ಶ್ರೋತೃತ್ವಾದವಿಶೇಷೇಽಪಿ ಧರ್ಮಸ್ಯೈವ ಸಂದೇಹಪೂರ್ವಕಪ್ರಶ್ನವತ್ತ್ವವಚನಂ ತು ಧರ್ಮಾಪೇಕ್ಷಯಾ ಭೀಮಾರ್ಜುನಯೋರ್ಮುಖ್ಯಾಧಿಕಾರಸೂಚನಾರ್ಥಂ ಕೃಷ್ಣವಕೃತ್ವಾದಿತಿ ಧ್ಯೇಯಮ್ ॥ - (ಜ.)

ವಿದುರ-ಅರ್ಜುನರ ವಿಚಾರ

ಆಹ ಕ್ಷತ್ತಾ ಧರ್ಮಮೇವ ಸಾರಮರ್ಥಂ ಚ ಮಧ್ಯಮಮ್ ।
ನೀಚಂ ಕಾಮಂ ನಿಷ್ಫಲತ್ವಾದರ್ಥಮೇವಾರ್ಜುನೋಽಬ್ರವೀತ್ ॥ ೪೭ ॥

ಅ: ವಿದುರ ಧರ್ಮವೇ ಶ್ರೇಷ್ಠ, ಅರ್ಥ ಮಧ್ಯಮ, ಕಾಮ ನಿಷ್ಫಲವಾದ್ದರಿಂದ ಅಧಮ ಎಂದ. ಅರ್ಜುನ ಅರ್ಥವನ್ನೇ ಶ್ರೇಷ್ಠವೆಂದು ನುಡಿದ.

ವಿ: ಯಮಧರ್ಮನ ಅವತಾರನಾದ ವಿದುರ ಧರ್ಮವನ್ನೇ ಶ್ರೇಷ್ಠವೆಂದು ಹೇಳಿದ್ದು ಸ್ವಾಭಾವಿಕವೇ ಆಗಿತ್ತು.

ಅರ್ಥವೇ ಶ್ರೇಷ್ಠ ಪುರುಷಾರ್ಥ ಎಂದ ಅರ್ಜುನ

ಸಾರಂ ಸ ದ್ವಿವಿಧೋ ಜ್ಞೇಯೋ ದೈವೋ ಮಾನುಷ ಏವ ಚ ।
ದೈವೋ ವಿದ್ಯಾ ಹಿರಣ್ಯಾದಿರ್ಮಾನುಷಃ ಪರಿಕೀರ್ತಿತಃ ॥ ೪೮ ॥

ಅ: ಅರ್ಥವು ದೈವ, ಮಾನುಷ ಎಂಬುದಾಗಿ ಎರಡು ಬಗೆ. ಜ್ಞಾನ ದೈವೀಸಂಪತ್ತು. ಧನ-ಕನಕಾದಿಗಳು ಮಾನುಷಸಂಪತ್ತು.

ಮಧ್ಯಮೋ ಧರ್ಮ ಏವಾತ್ರ ಸಾಧ್ಯಂ ಸಾಧನಮೇವ ಚ ।
ವಿದ್ಯಾಹ್ವಯೋಽರ್ಥೋ ಧರ್ಮಸ್ಯ ವಿದ್ಯಯೈವ ವಿಮುಚ್ಯತೇ ॥ ೪೯ ॥

---

೪೬. ಪುರುಷಸ್ವಭಾವವಿಹಿತಾನ್ ಯಥಾವರ್ಣಂ ಯಥಾಶ್ರಮಮ್ ।
ವೈರಾಗ್ಯರಾಗೋಪಾಧಿಭ್ಯಾಮಾಮ್ನಾತೋಭಯಲಕ್ಷಣಾನ್ ॥
ದಾನಧರ್ಮಾನ್ ರಾಜಧರ್ಮಾನ್ ಮೋಕ್ಷಧರ್ಮಾನ್ ವಿಭಾಗಶಃ ।
ಸ್ತ್ರೀಧರ್ಮಾನ್ ಭಗವದ್ಧರ್ಮಾನ್ ಸಮಾಸವ್ಯಾಸಯೋಗತಃ ।
ಧರ್ಮಾರ್ಥಕಾಮಮೋಕ್ಷಾಂಶ್ಚ ಸಹೋಪಾಯಾನ್ ಯಥಾ ಮುನೇ ॥
ನಾನಾಖ್ಯಾನೇತಿಹಾಸೇಷು ವರ್ಣಯಾಮಾಸ ತತ್ತ್ವವಿತ್ ॥ – ಭಾಗವತ (೧/೯/೨೬-೨೮)

೪೯. ವಿದ್ಯಾಹ್ವಯೋಽರ್ಥಃ ಧರ್ಮಸ್ಯ ಸಾಧನಂ ಸಾಧ್ಯಂ ಚ ಭವತಿ। ವಿದ್ಯಾಪೂರ್ವಕಂ ಯಜ್ಞಾದಿಕರ್ಮಕರಣೇ ಧರ್ಮಸ್ಯೋತ್ಪತ್ತ್ಯಾವಿದ್ಯಾ ಧರ್ಮಸಾಧನಮ್ । 'ಕರ್ಮಣಾ ಜ್ಞಾನಮಾತನೋತಿ', 'ತಪಸಾ ಬ್ರಹ್ಮ ವಿಜಿಜ್ಞಾಸಸ್ವ' ಇತಿ ಚ ಶ್ರುತೇಃ ತಪಆದಿಕರ್ಮಣಾ ಶುದ್ಧಾಂತಃ ಕರಣಸ್ಯೈವ ಜ್ಞಾನೋದಯಾತ್ ಏಯೋಽರ್ಥಃ ಧರ್ಮಸ್ಯ ಸಾಧ್ಯಂ ಫಲಮ್ ॥ – (ವಾ.)

ಅ: ಧರ್ಮ ಮಧ್ಯಮ, ಅದಕ್ಕೆ ವಿದ್ಯೆ ಎಂಬುದು ಸಾಧ್ಯವೂ, ಸಾಧನವೂ ಆದುದು. ವಿದ್ಯೆಯಿಂದಲೇ ಮುಕ್ತಿಯೂ ಲಭಿಸುವುದು.

ಮಾನುಷೋಽರ್ಥೋಽಪಿ ವಿದ್ಯಾಯಾಃ ಕಾರಣಂ ಸುಪ್ರಯೋಜಿತಃ ।
ತುಷ್ಟೋಽರ್ಥೇನ ಗುರುರ್ಯಸ್ಮಾತ್ ಕೈವಲ್ಯಂ ದಾತುಮಪ್ಯಲಮ್ ॥ ೫೦ ॥

ಅ: ಮಾನುಷ ಸಂಪತ್ತು ಸಹ ಸದ್ವಿನಿಯೋಗ ಮಾಡಿದಾಗ ವಿದ್ಯೆಗೆ ಸಾಧನವಾಗುವುದು, ಸಂಪತ್ತಿನಿಂದ ಸಂತುಷ್ಟನಾಗುವ ಗುರು ಮೋಕ್ಷವನ್ನು ಕೊಡಿಸಬಲ್ಲ.

ವಿ: ಮಾನುಷ ಸಂಪತ್ತನ್ನು ಗುರು ಹಿರಿಯರ ಸೇವೆಗೆ ವಿನಿಯೋಗಿಸಿದಾಗ ಅದು ಅವರ ತೃಪ್ತಿಗೆ ಕಾರಣವಾಗುವುದರಿಂದ ಅವರ ಅನುಗ್ರಹ ಲಭಿಸಿ ಮೋಕ್ಷಕ್ಕೆ ಕಾರಣವಾಗುವುದು ಎಂದರ್ಥ.

ಧರ್ಮಾರ್ಥತಾಂ ವಿನಾಽಪ್ಯರ್ಥೈಸ್ತುಷ್ಯೇಯುರ್ಗುರುದೇವತಾಃ ।
ಯದ್ಯನುದ್ದೇಶಿತೋ ಧರ್ಮೋಽಪ್ಯರ್ಥಮೇವಾನುಸಂವ್ರಜೇತ್ ॥ ೫೧ ॥

ಅ: ಧರ್ಮಕ್ಕೆಂದು ತಿಳಿಯದೆಯೂ ಸಂಪತ್ತನ್ನು ವಿನಿಯೋಗಿಸಿದಾಗಲೂ ಗುರುಗಳು, ದೇವತೆಗಳು ಸಂತುಷ್ಟರಾಗುವರು. ಫಲಾಪೇಕ್ಷೆ ಇಲ್ಲದೆ ಮಾಡುವ ಧರ್ಮವೂ ಸಹ ಅರ್ಥವನ್ನು ಅನುಸರಿಸಿಯೇ ಬರುವುದು.

---

೫೧. ನನು ಮಾನುಷಾರ್ಥಸ್ಯ ಧರ್ಮದ್ವಾರಾ ಗುರುಪ್ರೀತಿಜನಕತ್ವಾತ್ ಕಥಂ ಧರ್ಮಾತ್ ಶೈಷ್ಯಮಿತ್ಯತ ಆಹ ಧರ್ಮಾರ್ಥತಾಂ ವಿನೇತಿ। ಧರ್ಮಾರ್ಥತಾಂ ವಿನಾಽಪಿ ಅರ್ಥೈಃ ಗುರುದೇವತಾಸ್ತುಷ್ಯೇಯುಃ। ಯಥೇಷ್ಟದ್ರವ್ಯ-ದಾನೇನ ಗುರೂಣಾಂ ಪ್ರೀತಿದರ್ಶನಾತ್। ಮಮ ಕಾರ್ಯಕರಣೇ ಏತಾವದುಪಾಯನಂ ದಾಸ್ಯಾಮೀತಿ ಪ್ರಾರ್ಥನೇ ಹಯಗ್ರೀವಾದಿದೇವಾನಾಂ ಪ್ರೀತಿದರ್ಶನಾಚ್ಚೇತಿ ಭಾವಃ। ನನು ಗುರೂಣಾಂ ದ್ರವ್ಯದಾನೇ ಹರೇರ್ದ್ರವ್ಯದಾನೇ ಚ ಪಾತ್ರಸಾಮರ್ಥ್ಯಾತ್ ಈಷತ್ಪುಣ್ಯಮಪ್ಯಸ್ತಿ ವಿಲ್ವಿತ್ಯತ ಆಹ ಯದೀತಿ। ಯದಿ = ಯದ್ಯಪಿ ಅನುದ್ದೇಶಿತೋ ಧರ್ಮೋಽಪ್ಯಸ್ತಿ। ಸೋಽಪಿ ಮಹಿಷೀವಿಕ್ರಯಣಕಾಲೇ ರಜ್ಜೋರಪ್ಯಾನಯನವತ್ ಆಜಾಗಲಸ್ತನಾಯಮಾನಃ ಸನ್ ತೂಷ್ಣೀಮೇವಾಯಾತಿ। ನ ತ್ವರ್ಥಸ್ಯ ಫಲಮಿತಿ ಭಾವಃ ॥ – (ವಾ.)

೫೧. ನನು ನಿಷ್ಕಾಮಕರ್ಮಜಧರ್ಮಸ್ಯಾಪಿ ಜ್ಞಾನಸಾಧನತ್ವಾತ್ ಕಥಂ ಧರ್ಮಾನ್ನಾನುಷೋಽರ್ಥೋಽಧಿಕ ಇತ್ಯತ ಆಹ – ಯದೀತಿ । ಅನುದ್ದೇಶಿತಃ ಜ್ಞಾನಫಲೋದ್ದೇಶೇನಾಕೃತಕರ್ಮಜನಿತೋ ಧರ್ಮೋ ಯದ್ಯಪಿ ತಥಾಪಿ ಅರ್ಥಮನುಜ್ಞಾನಾರ್ಥಮನ್ವೇವ ಸಂವ್ರಜೇತ್ । ಯದ್ವಾ ಅನುದ್ದೇಶಿತಃ ಅನ್ನಾಚ್ಛಾದನಸ್ತ್ರೀಪುತ್ರಾದಿ- ಫಲೋದ್ದೇಶೇನಾಕೃತಕರ್ಮಜನಿತೋ ಧರ್ಮಃ ಅರ್ಥಮನ್ವೇವ ಸಂವ್ರಜೇತ್ । ಅನ್ನಾಚ್ಛಾದಿಕಮುತ್ಪಾದ್ಯೈವ ಅರ್ಥಾನುಕೂಲ್ಯೇ ವರ್ತತೇ ॥ - (ಜ.)

ಗುರುತಾऽರ್ಥಗತ್ಯೈವ ಸ್ಯಾತ್ ಕಾಮೋऽಧಸ್ತಾದ್ಧಿ ನಿಷ್ಫಲಃ ।
ಯಮಾವತ್ರ ವಿದಾಂ ಶ್ರೇಷ್ಠಾವರ್ಜುನೋಕ್ತಮನೂಚತುಃ ॥ ೫೨ ॥

ಅ: ಆದ್ದರಿಂದ ಹಿರಿಮೆ ಅರ್ಥದಲ್ಲೇ ಉಂಟು; ಕಾಮವು ನಿಷ್ಫಲವಾದ್ದರಿಂದ ಅಧಮ. ಉತ್ತಮಜ್ಞಾನಿಗಳಾದ ನಕುಲ, ಸಹದೇವರು ಸಹ ಅರ್ಜುನ ಹೇಳಿದ್ದನ್ನು ಅನುಮೋದಿಸಿದರು.

ಕಾಮವೇ ಪ್ರಧಾನ ಪುರುಷಾರ್ಥ ಎಂದ ಭೀಮ

ಅಥಾಹ ಭೀಮಃ ಪ್ರವರಃ ಸುತತ್ತ್ವ
ದೃಶಾಂ ಸಮಸ್ತಾನಭಿಭಾಷ್ಯ ಹರ್ಷಾತ್ ।
ಸ್ಮಯನ್ ನ ಕಾಮಾದತಿರಿಕ್ತಮಸ್ತಿ
ಕಿಂಚಿಚ್ಛುಭಂ ಕ್ವಾವರತಾಂ ಸ ಯಾಯಾತ್ ॥ ೫೩ ॥

ಅ: ಬಳಿಕ ಉತ್ತಮ ತತ್ತ್ವಜ್ಞಾನಿಗಳಲ್ಲಿ ತುಂಬಾ ಶ್ರೇಷ್ಠನಾದ ಭೀಮಸೇನ ಎಲ್ಲರನ್ನೂ ಸಂಬೋಧಿಸಿ ಸಂಭ್ರಮದಿಂದ ಮಂದಹಾಸ ಬೀರುತ್ತಾ ನುಡಿದ : 'ಕಾಮಕ್ಕಿಂತ ಬೇರೆಯಾದ ಉತ್ತಮ ಪುರುಷಾರ್ಥ ಮತ್ತೊಂದಿಲ್ಲ. ಅದು ಎಲ್ಲಿ ತಾನೇ ಕೀಳೆನ್ನಿಸುವುದು?'.

ವಿ: ಉಳಿದವರ ಉತ್ತರ ಒಂದು ಬಗೆಯಾಗಿದ್ದರೆ, ಭೀಮನ ಉತ್ತರ ಬೇರೆ ಬಗೆಯದೇ ಆಗಿತ್ತು. ಯಾರೂ ಊಹಿಸದ ಉತ್ತರವನ್ನು ಭೀಮಸೇನ ನೀಡಿದ; ಎಲ್ಲರೂ ಅಧಮವೆಂದೇ ಬಗೆದಿದ್ದ ಕಾಮವನ್ನು ಭೀಮಸೇನ ಮೂರರಲ್ಲೂ ಉತ್ತಮ ಪುರುಷಾರ್ಥವೆಂದು ತಿಳಿಸಿದ. ತಾನು ಹೇಳುವ ಉತ್ತರ ಅಪೂರ್ವ ಎಂಬ ಕಾರಣದಿಂದಲೇ ಹಾಗೆ ಸಂಭ್ರಮ, ಮಂದಹಾಸಗಳನ್ನು ವ್ಯಕ್ತಪಡಿಸಿದ ಎಂದು ತಿಳಿಯಬೇಕು.

---

೫೩. ನಾಕಾಮಃ ಕಾಮಯತ್ಯರ್ಥಂ ನಾಕಾಮೋ ಧರ್ಮಮಿಚ್ಛತಿ ।
ನಾಕಾಮಃ ಕಾಮಯಾನೋऽಸ್ತಿ ತಸ್ಮಾತ್ ಕಾಮೋ ವಿಶಿಷ್ಯತೇ ॥ – ಭಾರತ (ಶಾಂತಿ. ೧೬೭/೨೯)

ಕಾಮೋ ಹಿ ವಿವಿಧಾಕಾರಃ ಸರ್ವಂ ಕಾಮೇನ ಸಂತತಮ್ ।
ಕಾಮೋ ಧರ್ಮಾರ್ಥಯೋರ್ಯೋನಿಃ ಕಾಮಶ್ಚಾಥ ತದಾತ್ಮಕಃ ॥ – ಭಾರತ (ಶಾಂತಿ. ೧೬೭/೩೩-೩೬)

೫೩. ನಾಕಾಮಃ ಕಾಮಯತ್ಯರ್ಥಂ ನಾಕಾಮೋ ಧರ್ಮಮಿಚ್ಛತಿ ।
ನಾಕಾಮಃ ಕಾಮಯಾನೋऽಸ್ತಿ ತಸ್ಮಾತ್ ಕಾಮೋ ವಿಶಿಷ್ಯತೇ ॥ – ಭಾರತ(ಶಾಂತಿ.೧೬೭/೨೯)

ಕಾಮೋ ಹಿ ವಿವಿಧಾಕಾರಃ ಸರ್ವಂ ಕಾಮೇನ ಸಂತತಮ್ ।
ಕಾಮೋ ಧರ್ಮಾರ್ಥಯೋರ್ಯೋನಿಃ ಕಾಮಶ್ಚಾಥ ತದಾತ್ಮಕಃ ॥ – ಭಾರತ (ಶಾಂತಿ.೧೬೭/೩೩-೩೬)

ಕಾಮ ಶಬ್ದಾರ್ಥದ ವಿವೇಚನೆ

ಕಾಮ್ಯಂ ಹಿ ಕಾಮಾಭಿಧಮಾಹುರಾರ್ಯಾಃ
ಕಾಮ್ಯಾಃ ಪುಮರ್ಥಾಃ ಸಹ ಸಾಧನೈರ್ಯತ್ ।
ಅಕಾಮ್ಯತಾಂ ಯಾತ್ಯಪುಮರ್ಥ ಏವ
ಪುಮರ್ಥಿತತ್ವಾದ್ಧಿ ಪುಮರ್ಥ ಉಕ್ತಃ ॥ ೫೪ ॥

ಅ: ಇಷ್ಟವನ್ನು ಜ್ಞಾನಿಗಳು ಕಾಮ ಎನ್ನುವರು, ಪುರುಷಾರ್ಥಗಳು, ಅವುಗಳ ಸಾಧನೆಗಳು ಇಷ್ಟವಾಗಿರುವುದರಿಂದ ಕಾಮವು ಮಿಗಿಲಾದುದೇ ಆಗಿದೆ. ಇಷ್ಟವಲ್ಲದ್ದು ಪುರುಷಾರ್ಥವೆನ್ನಿಸದು. ಪುರುಷರಿಗೆ ಇಷ್ಟವಾದದ್ದರಿಂದಲೇ ಪುರುಷಾರ್ಥ ಎನ್ನಿಸಿರುವುದಲ್ಲವೆ!

ವಿ: ಕಾಮು ಎಂಬುವುದನ್ನು ಜನ ಸಾಮಾನ್ಯವಾಗಿ ಕ್ಷುದ್ರಕಾಮನೆ ಅರ್ಥದಲ್ಲಿ ತಿಳಿದಿರುವು–ದುಂಟು. ಭೀಮು ಪುರುಷಾರ್ಥದಲ್ಲಿ ಸೇರುವ ಕಾಮು ಸರ್ವಥಾ ಅಂತಹ ಕೀಳು ಕಾಮನೆಯಾಗಲು ಸಾಧ್ಯವಿಲ್ಲ ಎಂದು ತಿಳಿಸುತ್ತಾ ಕಾಮು ಶಬ್ದಕ್ಕೆ ಇಷ್ಟ ಹಾಗೂ ಇಚ್ಛೆ ಎಂಬ ಎರಡು ಅರ್ಥಗಳೂ ವಿವಕ್ಷಿತ. ಪುರುಷಾರ್ಥ ಎಂಬ ಪದದಲ್ಲಿಯೇ ಅವು ಅಪೇಕ್ಷಿತ ಎಂಬ ಅರ್ಥವನ್ನು ಒಳಗೊಂಡಿವೆ. ಹೀಗೆ ಪ್ರತಿಯೊಂದು ಪುರುಷಾರ್ಥದಲ್ಲೂ ಕಾಮು ಸೇರಿರುವುದರಿಂದ ಕಾಮು ಸರ್ವಥಾ ಅಧಮು–ವಾಗದು ಎಂದರ್ಥ.

---

೫೪. ಕಾಮ್ಯಂ ಹಿ ಕಾಮಾಭಿಧಮಾಹುರಾರ್ಯಾ ಇತ್ಯತ್ರ ಅನ್ಯಾಕಾಂಕ್ಷಾಮಾತ್ರಸ್ಯಾಪುರುಷಾರ್ಥತ್ವಾತ್ ಕಾಮ್ಯಂತ ಇತಿ ವ್ಯುತ್ಪತ್ತ್ಯಾ ಕಾಮ್ಯಾಃ ಪದಾರ್ಥಾ ಏವ ಕಾಮಾಃ ನ ತು ಕಾಮನಾವಿಷಯಾ ಇತಿ ಭಾವಃ ॥ – (ವಾ.)

೫೪. ಆರ್ಯಾಃ ಜ್ಞಾನವೃದ್ಧಾಃ ಕಾಮ್ಯಂ ಕಾಮ್ಯತೇ ತತ್ ಕಾಮ್ಯಮಿತಿ ವ್ಯುತ್ಪತ್ತ್ಯಾ ಕಾಮವಿಷಯಂ ಕಾಮಾಭಿಧಂ ಕಾಮಶಬ್ದವಾಚ್ಯಂ ಆಹುಃ ॥

೫೪. ನನು ಧರ್ಮಾದೀನಾಂ ಕಾಮ್ಯತ್ವಾತ್ ಕಾಮತ್ವಮುಕ್ತಂ । ತತ್ ಕಥಮಿತ್ಯತ ಆಹ – ಪುಮರ್ಥತ್ವಾದಿತಿ । ಪುಂಭಿರರ್ಥಿತತ್ವಾದ್ಧರ್ಮಾದಿಕಂ ತತ್ಸಾಧನಂ ಚ ಪುಮರ್ಥ ಇತ್ಯುಕ್ತಃ । ಹಿ ಯಸ್ಮಾತ್ ತಸ್ಮಾತ್ ಕಾಮ್ಯತ್ವಾತ್ ಪುಮರ್ಥಃ। ಕಾಮ ಇತಿ ವಾಕ್ಯಶೇಷಃ । ಅಪುಮರ್ಥಿತ್ವಾದ್ದುಃಖಂ ತತ್ಸಾಧನಂ ಚ ಅಕಾಮ ಇತಿ ವಾಕ್ಯಶೇಷಃ ॥ – (ಜ.)

೫೫. 'ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಂ', 'ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್' ಇತಿ ಶ್ರುತೇಃ ಕಾಮನಾಪೂರ್ವಕಂ ಸಾಧಿತಂ ಶ್ರವಣಮನನಾದಿ ಫಲದಾಯಕಮ್। ನತು ತಟಸ್ಥತಯಾ ಶ್ರುತಮಿತಿ ಭಾವೇನಾಹ ವಿಜ್ಞಾನಭಕ್ತ್ಯಾದಿಕಮಿತಿ। ಕಿಂ ಬಹುನಾ ॥ – (ವಾ.)

೫೫. .... ವಿಜ್ಞಾನಭಕ್ತ್ಯಾದಿಕಮಪಿ ಕಾಮಬಹಿಷ್ಕೃತಂ ಚೇತ್ ಅಕಾಮ್ಯಂ ಚೇತ್ ತರ್ಹಿ ಸಾಧನಂ ಧರ್ಮಾದಿ-ಸಾಧನಂ ಸ್ಯಾತ್ ತಸ್ಮಾದ್ವಿಜ್ಞಾನಭಕ್ತ್ಯಾದಿಕಮಪಿ ಕಾಮ್ಯತ್ವಾತ್ ಕಾಮ ಇತಿ ವಾಕ್ಯಶೇಷಃ । ಏತೇನ ಕಾಮ್ಯಾಃ ಪುಮರ್ಥಾಃ ಸಹಸಾಧನೈರಿತ್ಯುಕ್ತಮುಪಪಾದಿತಂ ಭವತಿ । – (ಜ.)

ವಿಜ್ಞಾನಭಕ್ತ್ಯಾದಿಕಮಪ್ಯತೀವ
ತತ್ಸಾಧನಂ ಕಾಮ್ಯಬಹಿಷ್ಕೃತಂ ಚೇತ್ ।
ನ ಸಾಧನಂ ಸ್ಯಾತ್ ಪರಮೋ ಹಿ ಮೋಕ್ಷೋ
ನ ಸಾಧ್ಯತಾಂ ಯಾತಿ ವಿನಾ ಹಿ ಕಾಮಾತ್ ॥ ೫೫ ॥

ಅ: ಜ್ಞಾನ, ಭಕ್ತಿ ಮೊದಲಾದವುಗಳೂ ಸಹ ಪುರುಷಾರ್ಥಗಳಿಗೆ ಸಾಧನವಾಗಿರುವವು. ಅವು ಇಷ್ಟದಿಂದ ಹೊರತಾದರೆ ಸಾಧನವೆನ್ನಿಸಲಾರದು. ಆದ್ದರಿಂದ ಶ್ರೇಷ್ಠವಾದ ಮೋಕ್ಷವೂ ಸಹ ಇಷ್ಟವಾಗದೇ ಹೋದಲ್ಲಿ ಸಾಧ್ಯವೆನ್ನಿಸಲಾರದು.

ವಿ: ೧) ಶ್ರವಣಾದಿಗಳು ಸಹ ಜ್ಞಾನಾದಿ ಕಾಮನೆಯಿಂದ ಆಚರಿಸಲ್ಪಟ್ಟಾಗ ಮಾತ್ರ ಮೋಕ್ಷ ಸಾಧನವೆನ್ನಿಸುವವೇ ಹೊರತು ಯಾಂತ್ರಿಕವಾಗಿ ಮಾಡಿದಾಗ ಅಲ್ಲ. ಅದರಂತೆಯೇ ಮೋಕ್ಷವೂ ಸಹ ಪುರುಷಾರ್ಥವೆನ್ನಿಸುವುದು ಅದನ್ನು ಬಯಸಿ ಸಾಧನೆ ಮಾಡಿದಾಗ ಮಾತ್ರ. ಹೀಗೆ ಜ್ಞಾನ, ಭಕ್ತ್ಯಾದಿ ಸಾಧನಗಳೇ ಆಗಲೀ, ಮೋಕ್ಷವೆಂಬ ಸಾಧ್ಯವೇ ಆಗಲೀ ಇಷ್ಟವಾದಾಗಲೇ ಪುರುಷಾರ್ಥವೆನ್ನಿಸುವವು. ಆದ್ದರಿಂದ ಕಾಮವೇ ಶ್ರೇಷ್ಠ ಪುರುಷಾರ್ಥ.

೨) 'ಜ್ಞಾತ್ವಾ ಹಿ ಇಷ್ಟಸಾಧನತಾಂ ಪ್ರವರ್ತತೇ ನಿವರ್ತತೇ ಚ ವಿಪರ್ಯಯೇಣ' ಎಂಬ ವಿಷ್ಣುತತ್ತ್ವವಿನಿರ್ಣಯದ ಮಾತಿನಲ್ಲಿ ಈ ಭಾವ ಅಡಗಿರುವುದು ಗಮನಾರ್ಹ.

ಶ್ರೀಹರಿಯೇ ಮುಖ್ಯಕಾಮ್ಯ

ಪರಾತ್ ಪರೋಽಪ್ಯಾದಿಪುಮಾನ್ ಹರಿಶ್ಚ
ಸ್ವಸ್ಯೇತರೇಷಾಮಪಿ ಕಾಮ್ಯ ಏವ ।
ಅಕಾಮಿತೋಽವಾಗ್ಗತಿಮೇವ ದದ್ಯಾತ್
ಕಾಮಃ ಪುಮರ್ಥೋಽಖಿಲ ಏವ ತೇನ ॥ ೫೬ ॥

---

೫೬. ಪುರುಷೈರರ್ಥ್ಯಮಾನೋ ಹಿ ಪುರುಷಾರ್ಥಃ। ಅರ್ಥನಾ ಚ ಕಾಮಃ। ಅತಃ ಕಾಮಂ ವಿನಾ ಪುರುಷಾರ್ಥ ಇತ್ಯೇತತ್ ವ್ಯಾಹತಮಿತಿ ಜ್ಞೇಯಮ್ ''ಸೋಽಕಾಮಯತ ಬಹು ಸ್ಯಾಂ ಪ್ರಜಾಯೇಯ'' ಇತಿ ಶ್ರುತೇಃ ''ವಿಸ್ಮಾಪನಂ ಸ್ವಸ್ಯ ಚ ಸೌಭಗರ್ದ್ಧೇಃ'' ಇತಿ ಭಾಗವತೋಕ್ತೇಶ್ಚ ಭಗವಾನ್ ಸ್ವಯಮಪಿ ಸ್ವೇನ ಕಾಮ್ಯ ಇತಿ ಭಾವೇನೋಕ್ತಂ ಸ್ವಸ್ಯೇತರೇಷಾಮಪಿ ಕಾಮ್ಯ ಏವೇತಿ। ಕಾಮಃ ಅಖಿಲಸಂಪೂರ್ಣಃ ಪುಮರ್ಥಃ ರಾಗಕಲುಷಮನೋ-ರೂಪೇಚ್ಛಾಯಾಃ ಅಪುರುಷಾರ್ಥತ್ವಾತ್ ॥ –(ವಾ.)

ಅ: ಪರಾತ್ಪರನೂ, ಆದಿಪುರುಷನೂ ಆದ ಶ್ರೀಹರಿಯೂ ಸಹ ತನಗೂ ಇತರರಿಗೂ ಇಷ್ಟನೇ ಆಗಿರುವನು. ಅವನು ಇಷ್ಟನಾಗದಿದ್ದಲ್ಲಿ ದುರ್ಗತಿಯನ್ನೇ ನೀಡುವನು, ಆದ್ದರಿಂದ ಅವನೂ ಕಾಮ ಎನ್ನಿಸುವನು. ಹೀಗೆ ಸಕಲ ಪುರುಷಾರ್ಥಗಳೂ ಕಾಮವೇ ಆಗಿರುವವು.

ಏ: ವಿಷ್ಣುಸಹಸ್ರನಾಮದಲ್ಲಿ ಕಾಮಃ ಕಾಮಪ್ರದಃ ಮೊದಲಾಗಿ ವಿಷ್ಣುವಿನ ಹೆಸರುಗಳಿರು-ವುದನ್ನು ಗಮನಿಸಬೇಕು.

ಇಚ್ಛೈವ ಕಾಮೋಽಸ್ತು ತಥಾಽಪಿ ನೈತಾ-
ಮೃತೇ ಹಿ ಚಿತ್ತ್ವಂ ಘಟಕುಡ್ಯವತ್ ಸ್ಯಾತ್ ।
ಸಾರಸ್ತತಃ ಸೈವ ಚಿದಾತ್ಮಕಾಽಪಿ
ಸಾ ಚೇತನಾ ಗೂಢತನುಃ ಸದೈವ ॥ ೫೭ ॥

ಅ: ಕಾಮಕ್ಕೆ ಇಚ್ಛೆಯೆಂಬ ಅರ್ಥವೇ ಆದರೂ ಅದಿಲ್ಲವಾದಲ್ಲಿ ಚೇತನನೂ ಸಹ ಗಡಿಗೆ, ಗೋಡೆಗಳಂತೆ ಜಡವೆನ್ನಿಸುವನು. ಆದ್ದರಿಂದ ಚೇತನಸ್ವರೂಪವಾದ ಆ ಕಾಮನೆ ಶ್ರೇಷ್ಠವೇ ಆಗಿದೆ. ಚೇತನ ರೂಪವಾದ ಅದು ಸದಾ ಗುಪ್ತರೂಪವಾಗಿಯೇ ಇರುವುದು.

---

೫೬. 'ಕಾಮಃ ಕಾಮಪ್ರದಃ ಪ್ರಭುಃ' – ವಿಷ್ಣುಸಹಸ್ರನಾಮ

ಧರ್ಮಾವಿರುದ್ಧೋ ಭೂತೇಷು ಕಾಮೋಽಸ್ಮಿ ಭರತರ್ಷಭ ॥ – ಗೀತಾ. (೭/೧೧)

ಧರ್ಮಾವಿರುದ್ಧಃ ಕಾಮೋಽಸಾವುಪಾಸ್ಯಃ ಕಾಮಮಿಚ್ಛತಾ । (ಗೀತಾಕಲ್ಪ) – ಗೀತಾಭಾಷ್ಯ (೭/೧೧)

೫೬. ಪ್ರಾಯೋ ಹಿ ಕಾಮಿತಾ ಅರ್ಥಾ ಧರ್ಮಂ ಹನ್ಯುರ್ಹರಿಃ ಪುನಃ ।
ನ ಧರ್ಮಹಾನಿಕೃಶ್ ಕಿಂತು ಕಾಮಿತೋ ಧರ್ಮವೃದ್ಧಿಕೃಶ್ ।
ಧರ್ಮಾವಿರುದ್ಧಕಾಮೋಽತೋ ವಿಷ್ಣುರ್ಭೂತೇಷು ಸಂಸ್ಥಿತಃ । – ಗೀತಾತಾತ್ಪರ್ಯ (೭/೧೧)

೫೭. ಚಿದಾತ್ಮಿಕಾ ಸೈವ ಇಚ್ಛೈವ ಸಾರ ಇತ್ಯುಕ್ತಮ್। ಚೇತನಾ ಚಿದ್ರೂಪಾ ಸಾ ಇಚ್ಛಾ। ಗೂಢತನುಃ = ಸಂಸಾರೇ ಗೂಢತನುಃ ॥ – (ವಾ.)

೫೭. ದ್ವಿತೀಯಂ ವಿಕಲ್ಪಮುಪಪಾದಯತಿ – ಇಚ್ಛೇತಿ । ಇಚ್ಛೈವ ಕಾಮಶಬ್ದವಾಚ್ಯಾಽಸ್ತು । ತಥಾಽಪಿ ಕಾಮ ಏವೋತ್ತಮ ಇತಿ ಶೇಷಃ । ಕಥಮಿತ್ಯತಸ್ತದುಪಪಾದಯತಿ – ನೇತ್ಯಾದಿನಾ । ... ಚಿದಾತ್ಮಕೇತಿ । ಸಾ ಇಚ್ಛಾ ಚಿದಾತ್ಮಕಾ ಚೇತನಸ್ವರೂಪಾ ಅಪಿ ಶಬ್ದಾದಚೇತನಸ್ವರೂಪ ಇತಿ ದ್ವಿವಿಧಾ ಜ್ಞಾತವ್ಯಾ । ಉಭಯೋಃ ಸ್ವರೂಪಮಾಹ ಸೇತಿ । ಚೇತನಾಚೇತನಸ್ವರೂಪಾ ಸಾ ಇಚ್ಛಾ ಸದೈವ ಅಮುಕ್ತೇಃ ಗೂಢತನುಃ ಅವಿದ್ಯಾವೃತಸ್ವರೂಪಾ ಮುಕ್ತಾವಾವಿರ್ಭೂತಾ । – (ಜ.)

ಕಾಮದಲ್ಲಿ ತಾರತಮ್ಯ

ನ ಪ್ರಶ್ನಯೋಗ್ಯಃ ಪೃಥಗೇಷ ಕಾಮ-
ಸ್ತೇನೈವ ರಾಜನ್ ಯದಿ ತಾರತಮ್ಯಮ್ ।
ಇಚ್ಛಸ್ಯಯಂ ತೇ ತ್ರಿವಿಧೋ ಹಿ ವೇದ್ಯೋ
ಧರ್ಮಾರ್ಥಯುಕ್ತಃ ಪರಮೋ ಮತೋಽತ್ರ ॥ ೫೮ ॥

ಏಕಾವಿರೋಧೀ ಯದಿ ಮಧ್ಯಮೋಽಸೌ
ದ್ವಯೋರ್ವಿರೋಧೀ ತು ಸ ಏವ ನೀಚಃ ।
ತಸ್ಮಾತ್ ಸ್ವಬುದ್ಧಿಪ್ರಮದಾಭಿರೇವ
ಕಾಮಂ ರಮೇಥಾ ಅನುರೂಪಕಾಮಃ ॥ ೫೯ ॥

---

೫೮. ಶಾಕೇಷು ಲವಣಮಿವ ಸರ್ವಪುರುಷಾರ್ಥೇಷು ಕಾಮಸ್ಯ ಮಿಶ್ರಿತತ್ವಾತ್ ಪೃಥಕ್ ಪ್ರಶ್ನಯೋಗ್ಯೋ ನೇತ್ಯಾಹ - ನ ಪ್ರಶ್ನಯೋಗ್ಯ ಇತಿ। ಯದಿ ತಾರತಮ್ಯಂ = ಕಾಮೇ ತಾರತಮ್ಯಂ ಇಚ್ಛಸಿ = ಜ್ಞಾತುಮಿಚ್ಛಸಿ ತರ್ಹ್ಯಯಂ = ಕಾಮಃ ಉತ್ತಮಾಧಮಮಧ್ಯಮಭೇದೇನ ತ್ರಿವಿಧೋ ವೇದ್ಯೋ ಹಿ। ಅತ್ರ ಧರ್ಮಸ್ಯ ದೈವಮಾನುಷರೂಪಾರ್ಥಸ್ಯ ಚಾವಿರೋಧೀ ಕಾಮಃ ವೈರಾಗ್ಯಪೂರ್ವಕಂ ವಿರಕ್ತೇಭ್ಯೋ ಗುರುಭ್ಯಃ ಶ್ರವಣಮನನನಿದಿಧ್ಯಾಸನಾದಿವಿಷಯಕಕಾಮಃ ಪರಮೋ ಮತಃ। ಧರ್ಮವಿರೋಧೀ ಅರ್ಥಸ್ಯ ಚ ವಿರೋಧೀ ವಿಶ್ವಜಿದ್ಯಾಗಾದಿರೂಪಕಾಮ್ಯಕರ್ಮವಿಷಯಕಕಾಮಃ। ಅರ್ಥಾವಿರೋಧೀ ಧರ್ಮಾವಿರೋಧೀ ವಾಣಿಜ್ಯಕರಣಾದಿವಿಷಯಕಕಾಮೋ ವಾ। ಸ ದ್ವಿವಿಧೋಽಪಿ ಮಧ್ಯಮಃ। ದ್ವಯೋರ್ವಿರೋಧೀ ಅಗಮ್ಯಾಗಮನವಿಷಯಕಕಾಮಃ ಸ ನೀಚ ಏವ। ತರ್ಹಿ ಸ್ರಕ್‌ಚಂದನವನಿತಾದಿಕಂ ಕಾಮ ಇತಿ ಲೋಕೇ ವದಂತಿ। ತಸ್ಯ ಕೋಽಭಿಪ್ರಾಯ ಇತ್ಯಾಶಂಕ್ಯಾರ್ಧಾಂಗೀಕಾರೇಣ ಪರಿಹರತಿ। ತಸ್ಮಾತ್ತ್ವಬುದ್ಧಿಪ್ರಮದಾಭಿರೇವೇತ್ಯಾದಿನಾ। ''ಮದೀ ಹರ್ಷ'' ಇತಿ ಧಾತೋಃ ಪ್ರಕೃಷ್ಟೋ ಮದೋ ಮೋಹ್ಯಾಖ್ಯಿಹರ್ಷೋ ಯಾಭ್ಯಸ್ತಾಃ ಪ್ರಮದಾಃ। ನತು ಪ್ರಕೃಷ್ಟಮದಕಾರಿಣೀ ಲೌಕಿಕವನಿತೇತಿ ಭಾವಃ। ಸುಬುದ್ಧಯಃ ಹರೇರ್ಗುಣಪೂರ್ಣತ್ವವಿಷಯಾ ಏಕಾ ಬುದ್ಧಿಃ ವೈರಾಗ್ಯಬುದ್ಧಿಃ ಉಪಾಸನಾಬುದ್ಧಿರಿತ್ಯಾದ್ಯಾಃ ಸುಬುದ್ಧಯ ಏವ ಪ್ರಮದಾಃ ತಾಭೀ ರಮೇಥಾಃ। ವನಿತಾಖ್ಯೋ ವಿಷಯೋಽಯಮೇವೇತಿ ಭಾವಃ। ಇದಂ ಚೋಪಲಕ್ಷಣಮ್। ಹರೌ ಸಮರ್ಪಿತಸ್ರಜಾ ಹರಿನಿರ್ಮಾಲ್ಯಗಂಧೇನ ಚ ಸದಾ ರಮೇಥಾ ಇತ್ಯಪಿ ಗ್ರಾಹ್ಯಮ್ ॥ – (ವಾ.)

೫೮. ಧರ್ಮಾರ್ಥಕಾಮಾಃ ಸಮಮೇವ ಸೇವ್ಯಾ ಯೋ ಹ್ಯೇಕಭಕ್ತಃ ಸ ನರೋ ಜಘನ್ಯಃ ॥
– ಭಾರತ(ಶಾಂತಿ. ೧೬೭/೪೦)

೫೮. ... । ಅತ್ರ ತ್ರಿವಿಧಕಾಮಮಧ್ಯೇ ಯಃ ಧರ್ಮಾರ್ಥಾಭ್ಯಾಂ ಯುಕ್ತಃ ಸ ಇಚ್ಛಾರೂಪ ಕಾಮಃ ಪರಮಃ ಉತ್ತಮಃ ಮತಃ ಯಥಾ ಏಕಾದಶ್ಯುಪವಾಸಃ ॥ – (ಜ.)

೫೯. ಸುಚಾರುವೇಷಾಭಿರಕ್ತಂ ಕೃತಾಭಿರ್ಮದೋತ್ಕಟಾಭಿಃ ಪ್ರಿಯದರ್ಶನಾಭಿಃ ।
ರಮಸ್ವ ಯೋಷಾಭಿರುವೇತ್ಯ ಕಾಮಂ ಕಾಮೋ ಹಿ ರಾಜನ್ ಪರಮೋ ಭವೇನ್ನಃ ॥ – (ಶಾಂತಿ. ೧೬೭/೩೮)

೫೯. ಉಕ್ತರೀತ್ಯಾಶೇಷಪುರುಷಾರ್ಥಸ್ಯಾಪಿ ಕಾಮತ್ವಾದಿತಿ ಭಾವಃ ॥ – (ವ.)

ಅ: ಆದ್ದರಿಂದ ಈ ಕಾಮವನ್ನು ಪ್ರತ್ಯೇಕವಾಗಿ ಪ್ರಶ್ನಿಸುವುದೇ ಅನುಚಿತ. ಆದ್ದರಿಂದ ರಾಜನೇ, ಈ ಕಾಮದಲ್ಲೂ ತಾರತಮ್ಯವನ್ನು ತಿಳಿಯಬಯಸುವೆಯಾದರೆ, ಅದು ಮೂರು ಬಗೆ ಎಂದು ತಿಳಿಯಬೇಕು. ಧರ್ಮ, ಅರ್ಥ ಎರಡರಿಂದಲೂ ಕೂಡಿದ್ದಾಗ ಅದು ಉತ್ತಮ ಎನ್ನಿಸುವುದು; ಒಂದಕ್ಕೆ ಮಾತ್ರ ಅನುಗುಣವಾಗಿದ್ದರೆ ಮಧ್ಯಮ; ಎರಡಕ್ಕೂ ಅನನುಗುಣವಾಗಿದ್ದಾಗ ಅಧಮ. ಆದ್ದರಿಂದ ತನ್ನ ಬುದ್ಧಿಯೆಂಬ ಸ್ತ್ರೀಯರೊಂದಿಗೆ ಅನುರೂಪ ಕಾಮನಾಗಿ ಸ್ವೇಚ್ಛೆಯಿಂದ ರಮಿಸಬೇಕು.

ರಾಜನ್ ನ ಕಾಮಾದಪರಂ ಶುಭಂ ಹಿ
ಪರೋ ಹಿ ಕಾಮೋ ಹರಿರೇವ ಯೇನ ।
ಪ್ರಾಜ್ಞಃ ಸುಹೃಚ್ಚಂದನಸಾರಲಿಪ್ತೋ
ವಿಚಿತ್ರಮಾಲ್ಯಾಭರಣೈರುಪೇತಃ ।
ಇದಂ ವಚೋ ವ್ಯಾಸಸಮಾಸಯುಕ್ತಂ
ಸಂಪ್ರೋಚ್ಯ ಭೀಮೋ ವಿರರಾಮ ವೀರಃ ॥ ೬೦ ॥

---

೫೯. ಯದಿ ಏಕಾ ವಿರೋಧೀ ಧರ್ಮಾರ್ಥಯೋರ್ಮಧ್ಯೇ ಏಕಸ್ಯ ವಿರೋಧೀ ಏಕಸ್ಯಾವಿರೋಧೀ ಚೇತ್ ತರ್ಹಿ ಸ ಮಧ್ಯಮಃ ಯಥಾ ದಾನಮ್ । ಅರ್ಥವಿರೋಧೀ ಧರ್ಮಾರ್ಥವಿರೋಧೀ ಚ ಯಥಾ ಚ ನಿಂದಿತಪ್ರಭುಸೇವನಂ ಧರ್ಮವಿರೋಧೀ ಅರ್ಥವಿರೋಧೀ ಯೋಽಸೌ ಕಾಮಃ ದ್ವಯೋರ್ಧರ್ಮಾರ್ಥಯೋರ್ವಿರೋಧೀ ತರ್ಹಿ ಸ ಏವ ಕಾಮೋ ನೀಚಃ ಯಥಾ ನಾಸ್ತಿಕಾಯ ದಾನಮ್ । ಉಪಸಂಹರತಿ ತಸ್ಮಾದಿತಿ । ತಸ್ಮಾತ್ ಪೂರ್ವೋಕ್ತಪ್ರಕಾರೇಣ ಕಾಮಸ್ಯೋತ್ತಮತ್ವಾತ್ ಸ್ವಬುದ್ಧಯ ಏವ ಪ್ರಮದಾಃ ತಾಭಿಃ ಅನುರೂಪಕಾಮಃ ಧರ್ಮಾದ್ಯನುರೂಪೇಚ್ಛಃ ಕಾಮಂ ಯಥೇಷ್ಟಂ ರಮೇಥಾಃ ರಮಸ್ವ ಗಿ - (ಜ.)

೫೯. ಸ್ತ್ರೀಸಂಗಾದಿರೂಪಕಾಮಸ್ಯ ನೀಚತ್ವಮಿತಿ ತೃತೀಯ ಪಕ್ಷೇ ಇಷ್ಟಾಪತ್ತಿಃ। ತಸ್ಯಾಪಿ ಧರ್ಮಾರ್ಥೋಭಯ ವಿರುದ್ಧತ್ವಾದಿತ್ಯಾಶಯಃ। ತರ್ಹಿ ಕಥಂ ಪ್ರಮದಾ ಸ್ವೀಕಾರವಿಧಿರಿತಿ ಚೇತ್ ತಸ್ಯ ಪುತ್ರಾರ್ಥತ್ವೇನ ಧರ್ಮ ವಿರುದ್ಧತ್ವಾಭಾವಾತ್। ಬುದ್ಧ್ಯಾಖ್ಯಾ ಪ್ರಮದಾ ಸ್ವೀಕಾರ ಪರತ್ವಂ ಚೇತ್ಯಪ್ಯೇತ್ಯಾಹ ತಸ್ಮಾದಿತಿ। - ಫಲಾರೀಯ

೬೦. ಯೇನ ಕಾರಣೇನ ಪ್ರಾಜ್ಞಃ ಸುಹೃತ್ = ಭಕ್ತೇಷು ಸ್ನೇಹವಾನ್ ಸೌಹಾರ್ದವಾನ್ ಚಂದನಸಾರಲಿಪ್ತಃ ಹರಿರೇವ ಕಾಮಃ। ತೇನ ಕಾರಣೇನ ಕಾಮಾದಪರಂ ಶುಭಂ ನ ಹಿ। ''ತ್ವಯೋಪಭುಕ್ತಸ್ರಗ್ಗಂಧವಾಸೋಽಲಂಕಾರಚರ್ಚಿತಾಃ। ಉಚ್ಛಿಷ್ಟಭೋಜಿನೋ ದಾಸಾಸ್ತವ ಮಾಯಾಂ ಜಯೇಮಹಿ'' ಇತಿ ವಚನಾತ್। ಮಾಯಾಜಯೋಪಾಯಾಃ ಹರಿನಿರ್ಮಾಲ್ಯಭೂತಸ್ರಕ್ಚಂದನಭೂಷಣಪಂಚಾಮೃತಾನ್ನಸ್ವೀಕಾರಾದ್ಯಾ ಏವ ಕಾಮಾಃ। ನ ತು ಮನೋವಿಕಾರದಾಯಕಾಃ ಅಸಮರ್ಪಿತಸ್ರಕ್ಚಂದನಭೂಷಣಾ = ವಿಸ್ತಾರಃ ಸಮಾಸಃ = ಸಂಕೋಚಃ। ಕಾಮಃ ಪುರುಷಾರ್ಥ ಇತಿ ಸಾಮಾನ್ಯೇನೋಕ್ತ್ವಾ ತಸ್ಯೈವ ಪ್ರಪಂಚನಾತ್ ವ್ಯಾಸಸಮಾಸಯುಕ್ತಮಿತ್ಯುಕ್ತಮ್ ॥ – (ವಾ.)

ಅ: ರಾಜನೇ, ಕಾಮಕ್ಕಿಂತ ಬೇರೆಯಾದ ಉತ್ತಮ ಪುರುಷಾರ್ಥ ಇಲ್ಲ. ಪ್ರಾಜ್ಞನೂ, ಸಖನೂ ಶ್ರೀಗಂಧದ ಸಾರದಿಂದ ಅನುಲಿಪ್ತನೂ, ವಿಚಿತ್ರವಾದ ಮಾಲೆ, ಆಭರಣಗಳಿಂದ ಕೂಡಿದವನೂ ಆದ ಸರ್ವೋತ್ತಮನಾದ ಶ್ರೀಹರಿಯೇ ಅತ್ಯುತ್ತಮವಾದ ಕಾಮನಾಗಿರುವನು. ಹೀಗೆ ಸಂಕ್ಷೇಪ ವಿಸ್ತಾರಗಳಿಂದ ಕೂಡಿದ ಮಾತನ್ನು ವೀರನಾದ ಭೀಮ ಚೆನ್ನಾಗಿ ತಿಳಿಸಿ ಸುಮ್ಮನಾದ.

ವಿ: ಈ ಶ್ಲೋಕ ಮಹಾಭಾರತದ ಶ್ಲೋಕವೇ ಆಗಿರುವುದನ್ನು ಗಮನಿಸಬೇಕು (ಶಾಂತಿಪರ್ವ, ೧೬೭/೪೧).

ಮೋಕ್ಷವೇ ಶ್ರೇಷ್ಠ ಪುರುಷಾರ್ಥ ಎಂದ ಯುಧಿಷ್ಠಿರ

ಪ್ರಶಸ್ಯ ಭೀಮಮನ್ಯಾಂಶ್ಚ ರಾಜಾ ಮೋಕ್ಷಮಥಾಸ್ತುವತ್ ।
ಸ್ವಯುಕ್ತೇರಪ್ರತೀಪತ್ವಾನ್ನಿರಾಚಕ್ರೇ ನ ಮಾರುತಿಃ ॥ ೬೧ ॥

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮಹಾಭಾರತತಾತ್ಪರ್ಯನಿರ್ಣಯೇ ಧರ್ಮರಾಜಸಂದೇಹನಿವೃತ್ತಿಕಥನಂ ನಾಮ ಏಕೋನತ್ರಿಂಶೋಽಧ್ಯಾಯಃ ॥ ೨೯ ॥

---

೬೦. ಪ್ರಾಜ್ಞಃ ಸುಹೃಚ್ಚಂದನಸಾರಲಿಪ್ತೋ ವಿಚಿತ್ರಮಾಲ್ಯಾಭರಣೈರುಪೇತಃ ।
ತತೋ ವಾಚಃ ಸಂಗ್ರಹವಿಸ್ತರೇಣ ಪ್ರೋಕ್ತ್ವಾಽಥ ವೀರಾನ್ ವಿರರಾಮ ಭೀಮಃ ॥ – (ಶಾಂತಿ. ೧೬೭/೪೧)

೬೦. ಸುಚಾರುವೇಷಾಭರಲಂಕೃತಾಭಿರ್ಮದೋತ್ಕಟಾಭಃ ಪ್ರಿಯದರ್ಶನಾಭಿಃ ।
ರಮಸ್ವ ಯೋಷಾಭಿರುಪೇತ್ಯ ಕಾಮಂ ಕಾಮೋ ಹಿ ರಾಜನ್ ಪರಮೋ ಭವೇನ್ನಃ ॥ – (ಶಾಂತಿ. ೧೬೭/೩೮)

'ಭುಂಜಾನೋಽಪಿ ಹಿ ಯಃ ಕಾಮಾನ್ಧರ್ಮಾದಾಂ ನ ತರೇತ್ಕ್ವಚಿತ್ ।
ಸಮುದ್ರವದ್ಧರ್ಮಮಯೀಂ ನಾಸೌ ಕಾಮೀ ಸ ಉಚ್ಯತೇ ।
ಕೇತಿ ಕುತ್ಸಿತವಾಚೀ ಸ್ಯಾತ್ಕುತ್ಸಿತಂ ಮಾನಮೇವ ತು ।
ಕಾಮೋ ಮೋಕ್ಷವಿರೋಧೀ ಸ್ಯಾನ್ನ ಸರ್ವೇಚ್ಛಾವಿರೋಧಿನೀ' ಇತಿ ಚ । – ಗೀತಾತಾತ್ಪರ್ಯ (೨/೪೦)

ನ ಚ ಸರ್ವೇಚ್ಛಾಭಾವೇ ಜೀವನಂ ಭವತಿ ।

'ಶಾಂತಿರ್ಮೋಕ್ಷೋ ಯತೋ ಹ್ಯತ್ರ ವಿಷ್ಣುನಿಷ್ಠಾ ಭವೇದ್ಧ್ರುವಾ' ಇತಿ ಚ ॥ – ಗೀತಾತಾತ್ಪರ್ಯ (೧/೭೦)

೬೦. 'ಪ್ರಾಜ್ಞಃ ಸುಹೃಚ್ಚಂದನಸಾರಲಿಪ್ತೋ ವಿಚಿತ್ರಮಾಲ್ಯಾಭರಣೈರುಪೇತಃ' ಇತ್ಯೇತದ್ವಿಶೇಷಣಂ ಹರಿ-ಭೀಮಯೋರುಭಯೋರಪಿ ದ್ರಷ್ಟವ್ಯಮ್ । – (ತಿ.)

೬೦. ... । ನ ಕಾಮಾದತಿರಿಕ್ತಮಸ್ತೀತ್ಯಾರಭ್ಯಾನುರೂಪಕಾಮಾ ಇತ್ಯಂತಂ ವಿಸ್ತರೋಕ್ತಿಃ । ರಾಜನ್ನ ಕಾಮಾದಪರಂ ಶುಭಂ ಹೀತ್ಯಾದಿಸಂಕ್ಷೇಪೋಕ್ತಿರಿತಿ ಭಾವಃ ॥ - (ಜ.)

೬೧. ಸ ಚಾಪಿ ತಾನ್ ಧರ್ಮಸುತೋ ಮಹಾಮನಾಸ್ತದಾ ಪ್ರತೀತಾನ್ ಪ್ರಶಶಂಸ ವೀರ್ಯವಾನ್ ॥
– ಭಾರತ (ಶಾಂತಿ. ೧೬೭/೫೧)

ಅ: ಧರ್ಮರಾಜನು ಭೀಮನನ್ನು ಮತ್ತು ಇತರರನ್ನು ಪ್ರಶಂಸಿಸಿ ಮೋಕ್ಷವನ್ನೇ ಶ್ರೇಷ್ಠ ಪುರುಷಾರ್ಥವೆಂದು ಕೊಂಡಾಡಿದ. ತನ್ನ ಮಾತಿಗೆ ಅದು ವಿರುದ್ಧವೇನೂ ಆಗಿರಲಿಲ್ಲವಾದ್ದರಿಂದ ಭೀಮಸೇನ ಅದನ್ನು ನಿರಾಕರಿಸಲಿಲ್ಲ.

ವಿ: ೧) ಹೀಗೆ ಮೂರು ಪುರುಷಾರ್ಥಗಳ ಬಗ್ಗೆ ಭೀಮಾದಿಗಳ ಅಭಿಪ್ರಾಯವನ್ನು ಕೇಳಿ ಅವರೆಲ್ಲ ತಮ್ಮ ತಮ್ಮ ಅಭಿಪ್ರಾಯಗಳನ್ನು ಸಯುಕ್ತಿಕವಾಗಿಯೇ ಮಂಡಿಸಿದ್ದನ್ನು ಧರ್ಮರಾಜ ಕೊಂಡಾಡಿದನು. ಭೀಮನನ್ನು ವಿಶೇಷವಾಗಿ ಪ್ರಶಂಸಿಸಿದನು.

೨) ಮಹಾಭಾರತದಲ್ಲಿ ಭೀಮು ನೀಡಿದ ವಿವರಣೆಯೇ ತುಂಬ ವಿಸ್ತಾರವಾಗಿ ಬಂದಿರುವು–ದನ್ನು ಗಮನಿಸಬೇಕು.

೩) ಕೊನೆಗೆ ಧರ್ಮರಾಜ ತನ್ನ ಅಭಿಪ್ರಾಯದಲ್ಲಿ ಮೋಕ್ಷವೇ ಶ್ರೇಷ್ಠ ಎಂದು ತಿಳಿಸಿದ. ಧರ್ಮರಾಜ ಧರ್ಮ, ಅರ್ಥ, ಕಾಮ ಎಂಬ ಮೂರು ಪುರುಷಾರ್ಥಗಳಲ್ಲಿ ಯಾವುದು ಶ್ರೇಷ್ಠ ಎಂದು ಮಾತ್ರವೇ ತಿಳಿಸಲು ಕೇಳಿದ್ದರಿಂದ ಅವರು ಹಾಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು. ಮೋಕ್ಷ ಶ್ರೇಷ್ಠವೆಂಬುದು ಯಾರಿಗೂ ಅಸಮ್ಮತವಾದ ವಿಚಾರವಾಗಿರಲಿಲ್ಲ. ಭೀಮನು ತಾನು ಕಾಮವನ್ನು ಶ್ರೇಷ್ಠವೆಂದು ವಿವೇಚಿಸಿದ್ದಕ್ಕೆ ಧರ್ಮರಾಜನ ಮಾತು ಪ್ರತಿಕೂಲವಾಗಿರದ್ದರಿಂದ ಅದನ್ನು ನಿರಾಕರಿಸಲು ತೊಡಗಲಿಲ್ಲ ಎಂದರ್ಥ.

೪) ಇದು ಭೀಮನ ಮತ್ತೊಂದು ಶ್ರೇಷ್ಠವಾದ ಗುಣ. ವಾದಕ್ಕಾಗಿ ವಾದ ಎಂಬ ವಿಚಾರ ಅನೇಕರದ್ದು, ಆದರೆ ತತ್ತ್ವನಿರ್ಣಯಕ್ಕಾಗಿ ವಾದ ಎಂಬುದು ಭೀಮನ ವಿಚಾರ. ಆದ್ದರಿಂದ ತಾತ್ತ್ವಿಕವಾಗಿ ಇಬ್ಬರ ಮಾತಿನಲ್ಲೂ ವಿರೋಧವಿಲ್ಲದಿರುವುದರಿಂದ ಅದನ್ನು ನಿರಾಕರಿಸುವುದು ಅನುಚಿತ ಎಂದು ಭೀಮು ಸುಮ್ಮನಾದ ಎಂದರ್ಥ. ನ ಹಿ ನಾಮ್ನಿ ವಿಪ್ರತಿಪತ್ತಿಃ ಎಂಬ ಮಾತು ಇದೇ ಅರ್ಥವನ್ನು ತಿಳಿಸುವುದು. ವಿಷಯ ಒಂದೇ ಆದಾಗ ನಿರೂಪಣಾ ಪ್ರಭೇದ ಬೇರೆಯಾದಾಗ ಆ ಬಗ್ಗೆ ವಾಕ್ಯಾರ್ಥವೇಕೆ ಎಂಬುದು ಭೀಮನ ಸಂದೇಶ ಎಂದು ತಿಳಿಯಬೇಕು.

೫) ಭೀಷ್ಮರು ಧರ್ಮರಾಜನಿಗೆ ನೀಡಿದ ಉಪದೇಶ ಮಹಾಭಾರತದ ಹದಿನೆಂಟು ಪರ್ವಗಳಲ್ಲಿ ಶಾಂತಿಪರ್ವ, ಅನುಶಾಸನಪರ್ವ ಎಂಬ ಎರಡು ಪರ್ವಗಳಲ್ಲಿ ಸಂಕಲಿತವಾಗಿದೆ. ಅವೆರಡರಲ್ಲಿನ ಒಟ್ಟು ಶ್ಲೋಕಗಳ ಸಂಖ್ಯೆ ಹದಿನೈದು ಸಾವಿರವನ್ನೂ ಮೀರುವುದು. ಎಂದರೆ ಮಹಾಭಾರತದಲ್ಲಿ ಸಿಂಹಪಾಲು ಭೀಷ್ಮೋಪದೇಶಕ್ಕೆ ಮೀಸಲಾಗಿದೆ ಎಂದಾಗುವುದು. ಮೇಲ್ನೋಟಕ್ಕೆ ಅವು ಭೀಷ್ಮರ ಮಾತುಗಳಾದರೂ ಒಳಗಿದ್ದು ನುಡಿದದ್ದು ಸಾಕ್ಷಾತ್ ಕೃಷ್ಣನೇ ಆಗಿದ್ದರಿಂದ ಶ್ರೀಕೃಷ್ಣನ ಉಪದೇಶವೇ ಆಗಿದೆ. ಅದರಿಂದಾಗಿಯೇ ಅದಕ್ಕೆ ಅಷ್ಟು ಮಹತ್ತ್ವ.

೬) ರಾಜಧರ್ಮ, ಆಪದ್ಧರ್ಮ, ಮೋಕ್ಷಧರ್ಮ ಮತ್ತು ದಾನಧರ್ಮಪರ್ವ ಎಂಬ ನಾಲ್ಕು ಉಪಪರ್ವಗಳಲ್ಲಿ ಈ ಉಪದೇಶದ ಭಾಗ ನಿರೂಪಿತವಾಗಿದೆ. ಅದರಲ್ಲಿ ಮೋಕ್ಷಧರ್ಮ-ಪರ್ವದಲ್ಲಿನ ಅನೇಕ ವಾಕ್ಯಗಳನ್ನು ಶ್ರೀಮದಾಚಾರ್ಯರು ತಮ್ಮ ಸರ್ವಮೂಲ ಗ್ರಂಥಗಳಲ್ಲಿ ಉಲ್ಲೇಖಿಸಿರುವರು. ಇದರಿಂದ ತಾತ್ತ್ವಿಕ ಶ್ರೀಮಂತಿಕೆಯಿಂದಾಗಿಯೂ ಈ ಭಾಗ ಮಾನ್ಯ ಎಂದಾಗುವುದು.

೭) ದಾನಧರ್ಮಪರ್ವದಲ್ಲಿ ಬಂದಿರುವ ವಿಷ್ಣುಸಹಸ್ರನಾಮಸ್ತೋತ್ರವಂತೂ 'ಸ್ತೋತ್ರ-ರಾಜ' ಎಂದೇ ಪ್ರಸಿದ್ಧವಾದ ಮಹೋನ್ನತವಾದ ಸ್ತೋತ್ರಕೃತಿ. ಉದ್ದಕ್ಕೂ ಧರ್ಮರಾಜ ಬಗೆಬಗೆಯ ಪ್ರಶ್ನೆಗಳನ್ನು ಕೇಳುತ್ತಲೇ ಹೋದ; ಅದಕ್ಕೆಲ್ಲ ಭೀಷ್ಮರು ಸಮರ್ಪಕವಾದ ಉತ್ತರಗಳನ್ನು ನೀಡಿದರು. ಅನೇಕ ಪ್ರಸಂಗಗಳಲ್ಲಿ ಅಂತಹ ಉತ್ತರಗಳೆಲ್ಲ ಅಪೂರ್ವ ಉಪಾಖ್ಯಾನಗಳ ರೂಪದಲ್ಲಿ ಬಂದಿರುವುದು ಮತ್ತೊಂದು ವಿಶೇಷ.

೮) ಆಗ ಕೃಷ್ಣನೊಂದಿಗೆ ಪಾಂಡವರು ಮಾತ್ರವಲ್ಲದೇ ನಾರದಾದಿ ಋಷಿ ಮುನಿಗಳೂ ಸಹ ಅಲ್ಲಿ ಉಪಸ್ಥಿತರಿದ್ದು ಅದನ್ನು ಆಲಿಸುತ್ತಿದ್ದ ವಿವರ ಮಹಾಭಾರತದಲ್ಲಿದೆ. ಹೀಗೆ ತಿಂಗಳುಗಟ್ಟಲೆ ನಡೆದ ಸಂವಾದ ಅದು.

೯) ಅತ್ಯಂತ ವಿಸ್ತೃತವಾದ ಅಲ್ಲಿಯ ಸಂದೇಶದ ಸಾರಸರ್ವಸ್ವವನ್ನೂ ಶ್ರೀಮಧ್ವಾ-ಚಾರ್ಯರು ಹೀಗೆ ಅತ್ಯಂತ ಅಡಕವಾಗಿ ನಿರೂಪಿಸಿರುವುದು ಜಿಜ್ಞಾಸುವೃಂದಕ್ಕೆ ಅವರು ಮಾಡಿರುವ ಮತ್ತೊಂದು ಮಹೋಪಕಾರ.

೧೦) ಕೊನೆಯಲ್ಲಿ ಸಂಗೃಹೀತವಾಗಿರುವ ಪುರುಷಾರ್ಥ ಮೀಮಾಂಸೆ, ಪುರುಷಾರ್ಥಗಳ ಚಿಂತನೆಯ ಬಗ್ಗೆ ನೀಡುವ ಒಳನೋಟ ತುಂಬಾ ಅಪೂರ್ವವಾದುದು. ಭೀಮ ನೀಡಿದ ಉತ್ತರವಂತೂ ತಾತ್ತ್ವಿಕ ಪ್ರಪಂಚದಲ್ಲಿಯೇ ಅನುಪಮ. ಅಲ್ಲಿ ಬಂದಿರುವ ವಿವರಣೆಗಳೂ ಸಹ ಅತ್ಯಂತ ಹೃದ್ಯವಾಗಿದ್ದು ತತ್ತ್ವಜಿಜ್ಞಾಸೆಯನ್ನು ಶುಷ್ಕ ಎಂದು ಭಾವಿಸುವವರಿಗೆ ಅದೆಷ್ಟು ಸರಸ ಎಂಬ ಹೊಸ ಪರಿಕಲ್ಪನೆಯನ್ನು ನೀಡುವವು.

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಪ್ರಣೀತ ಮಹಾಭಾರತತಾತ್ಪರ್ಯನಿರ್ಣಯದಲ್ಲಿ 'ಧರ್ಮರಾಜಸಂದೇಹನಿವೃತ್ತಿಕಥನ'ವೆಂಬ ಇಪ್ಪತ್ತೊಂಭತ್ತನೆಯ ಅಧ್ಯಾಯ ಮುಗಿಯಿತು ॥ ೨೯ ॥

॥ ಶ್ರೀಕೃಷ್ಣಾರ್ಪಣಮಸ್ತು ॥

★★★★★

ಅಧ್ಯಾಯ - ೩೦

(ಪಾಂಡವಾಶ್ವಮೇಧಕಥನಮ್)

(ಪಾಂಡವರಾಜ್ಯಭಾರ, ಕಲಿನಿಗ್ರಹ, ಅನುಗೀತಾ, ಉದಂಕವೃತ್ತಾಂತ,
ಪರೀಕ್ಷಿತನ ಜನನ, ಅಶ್ವಮೇಧಯಾಗ, ಬಭ್ರುವಾಹನಪ್ರಸಂಗ,
ಲಕ್ಷಣಶಾಸ್ತ್ರದ ಹಿರಿಮೆ, ಯಾಗವೈಭವ, ಮುಂಗುಸಿಯ ಪ್ರಸಂಗ)

ವಸುವಾಗಿ ತೆರಳಿದ ಭೀಷ್ಮ - ಅಶ್ವಮೇಧಯಾಗಕ್ಕೆ ವ್ಯಾಸರ ಆದೇಶ

ಅಥ ಕೃಷ್ಣಮನುಸ್ಮೃತ್ಯ ಭೀಷ್ಮೇ ಸ್ವಾಂ ವಸುತಾಂ ಗತೇ ।
ಕೃತ್ವಾ ಕಾರ್ಯಾಣಿ ಸರ್ವಾಣಿ ಗಂಗಾಮಾಶ್ವಾಸ್ಯ ದುಃಖಿತಾಮ್ ॥ ೧ ॥

ಆಶ್ವಾಸಿತಶ್ಚ ಕೃಷ್ಣಾಭ್ಯಾಂ ಧರ್ಮಜೋ ದುಃಖಿತಃ ಪುನಃ ।
ಪರಾಶರಸುತೇನೋಕ್ತಃ ಕೃಷ್ಣೇನಾನಂತರಾಧಸಾ ॥ ೨ ॥

ಅ: ಬಳಿಕ ಭೀಷ್ಮರು ಕೃಷ್ಣನನ್ನು ಸ್ಮರಿಸಿ, ತಮ್ಮ ವಸುರೂಪವನ್ನು ಸೇರಲು, ಅವರಿಗೆ ಎಲ್ಲ ಉತ್ತರಕ್ರಿಯೆಗಳನ್ನು ಮಾಡಿ, ದುಃಖಿತಳಾಗಿದ್ದ ಗಂಗೆಯನ್ನು ಕೃಷ್ಣವೇದವ್ಯಾಸರು ಸಾಂತ್ವನ-ಪಡಿಸಿದರು; ಧರ್ಮರಾಜನನ್ನೂ ಸಾಂತ್ವನಪಡಿಸಿದರು. ಅವನು ಮರಳಿ ದುಃಖಿತನಾದ. ಆಗ **ಅನಂತರಾಧಸ್** ಎನ್ನಿಸಿದ ಶ್ರೀವೇದವ್ಯಾಸರು ತಿಳಿಸಿದರು.

ವಿ: ೧) ಹಾಗೆ ಕೃಷ್ಣನ ಆದೇಶದಂತೆ ಧರ್ಮೋಪದೇಶವನ್ನು ಮಾಡಿದ ಭೀಷ್ಮರು ಕೃಷ್ಣನ ಅನುಮತಿಯನ್ನು ಪಡೆದು, ಅವನನ್ನೇ ಧ್ಯಾನಿಸಿ, ತಮ್ಮ ಮೂಲರೂಪವಾದ ದ್ಯುನಾಮಕ ವಸುರೂಪವನ್ನು ಸೇರಿದರು. ಕೃಷ್ಣನಿಗೆ ಅಗ್ರಪೂಜೆ ಮಾಡಿಸಿದ್ದರ ಫಲವೆಂಬಂತೆ ಅಂತ್ಯಕಾಲದಲ್ಲಿ ಕೃಷ್ಣನನ್ನೇ ನೋಡುತ್ತಾ ಅವನನ್ನು ಸ್ಮರಿಸಿ ದೇಹ ತೊರೆಯುವ ಸುಯೋಗ ಅವರಿಗೆ ಲಭಿಸಿತ್ತು.

---

೧. ಗಂಗಾಮಾಶ್ವಾಸ್ಯ ದುಃಖಿತಾಮಿತ್ಯತ್ರ ದುಃಖಿತಾಂ= ಸ್ವಪುತ್ರಭೀಷ್ಮವಧೇನ ದುಃಖಿತಾಮಿತ್ಯರ್ಥಃ ॥ – (ವಾ.)

೧. ಮಹೋಲ್ಕೇವ ಚ ಭೀಷ್ಮಸ್ಯ ಮೂರ್ಧದೇಶಾದ್ ಜನಾಧಿಪ ।
ನಿಃಸೃತ್ಯಾಕಾಶಮಾವಿಶ್ಯ ಕ್ಷಣೇನಾಂತರಧೀಯತ ॥ – ಭಾರತ (ಅನುಶಾಸನಪರ್ವ ೧೬೯/೮)

೧. ಭೀಷ್ಮಾದೀನಾಂ ತು ತತ್‌ಕ್ಷಣ ಯುಕ್ತಭಾವಃ ।.... ತಚ್ಚೋಕ್ತಮ್ –
ಜ್ಞಾನಿನಾಂ ಕರ್ಮಯುಕ್ತಾನಾಂ ಕಾಯತ್ಯಾಗಕ್ಷಣೋ ಯದಾ ।
ವಿಷ್ಣುಮಾಯಾ ತದಾ ತೇಷಾಂ ಮನೋ ಬಾಹ್ಯಂ ಕರೋತಿ ಹಿ ॥ – ಗೀತಾಭಾಷ್ಯ(೨/೭೨)

೨. ..... ಅಪರಿಮಿತಾಭೀಷ್ಟಸಿದ್ಧಿಮತಾ ಪರಾಶರಸುತೇನ ವ್ಯಾಸೇನೋಕ್ತೋऽಭೂದಿತಿ ಶೇಷಃ । ಇತಿ ಶೇಷಪೂರಣೇನ ಅನುಶಾಸನಾಶ್ವಮೇಧಕಪರ್ವಾನುಕೂಲೇನಾನ್ವಯಃ ॥ – (ಜ.)

೨) ಅಂತ್ಯಕಾಲದಲ್ಲಿ ಅವರು ಕೃಷ್ಣನನ್ನು ಧ್ಯಾನಿಸುತ್ತಾ ದೇಹ ಬಿಡದೆ, ಧ್ಯಾನಿಸಿದ ನಂತರ ದೇಹ ಬಿಟ್ಟರು. ಅಂತ್ಯಕಾಲದಲ್ಲಿ ಹರಿಯನ್ನೇ ಧ್ಯಾನಿಸುತ್ತಾ ದೇಹ ತೊರೆದಾಗ ಮಾತ್ರ ಮೋಕ್ಷ ಎಂದು ಭಗವದ್ಗೀತೆಯಲ್ಲಿದೆ. ಭೀಷ್ಮರು ದೇಹ ಬಿಡುವ ಕ್ಷಣದಲ್ಲಿ ಭಗವದ್ಧ್ಯಾನ ತಪ್ಪಿ, ತಮ್ಮ ಮೂಲರೂಪವನ್ನೇ ಸೇರಿಬಿಟ್ಟರು ಎಂದರ್ಥ.

೩) ಪ್ರಾರಬ್ಧಕರ್ಮ ಇನ್ನೂ ಉಳಿದಿದ್ದಲ್ಲಿ ಭಗವದಿಚ್ಛೆಯಿಂದ ಹಾಗೆ ಅಂತ್ಯಕಾಲದಲ್ಲಿ ಭಗವದ್ವಿಸ್ಮೃತಿಯಾಗುವುದು ಎಂಬ ವಿಶೇಷಾಂಶ ಗೀತಾಭಾಷ್ಯದಲ್ಲಿದೆ (೨/೭೨): ಅದರಿಂದಾಗಿ ಭೀಷ್ಮರಿಗೆ ಆಗಲೇ ಮುಕ್ತಿಯಾಗಲಿಲ್ಲ: **'ಭೀಷ್ಮಾದೀನಾಂ ತು ತತ್‌ಕ್ಷಣೇ ಯುಕ್ತ್ಯಭಾವಃ'** (ಗೀ.ಭಾ. ೨/೭೨). **'ಭೀಷ್ಮಮುಕ್ತಿಪ್ರದಾಯಕಃ'** ಎಂಬ ಕೃಷ್ಣಾಷ್ಟೋತ್ತರಶತನಾಮಸ್ತೋತ್ರದ ಮಾತಿಗೆ ಕೃಷ್ಣ ಮುಂದೆ ಕ್ರಮವಾಗಿ ಮುಕ್ತಿನೀಡಿದ ಎಂದೇ ಅರ್ಥ.

೪) ಗಂಗೆ ಅಂತಹ ತನ್ನ ಪುತ್ರ ಶಿಖಂಡಿಯ ಬಾಣದಿಂದ ಮೃತನಾದನಲ್ಲ ಎಂದು ದುಃಖಿಸಿದಳು. ಕೃಷ್ಣ ''ಅವರು ಮೃತರಾಗಿದ್ದು ಶಿಖಂಡಿಯಿಂದಲ್ಲ; ಅರ್ಜುನನಿಂದ'' ಎಂದು ತಿಳಿಸಿದಾಗ, ಅವಳಿಗೆ ನೆಮ್ಮದಿಯಾಯಿತು :

ಆಶ್ವಾಸಯಾಮಾಸ ತದಾ ಗಂಗಾಂ ದಾಮೋದರೋ ವಿಭುಃ ।
ಸಮಾಶ್ವಸಿಹಿ ಭದ್ರೇ ತ್ವಂ ಮಾ ಶುಚಃ ಶುಭದರ್ಶನೇ ॥
ಗತಃ ಸ ಪರಮಂ ಲೋಕಂ ತವ ಪುತ್ರೋ ನ ಸಂಶಯಃ ।...
ಸ ಏಷ ಕ್ಷಾತ್ರಧರ್ಮೇಣ ಅಯುಧ್ಯತ ರಣಾಜಿರೇ ॥
ಧನಂಜಯೇನ ನಿಹತೋ ನೈಷ ದೇವಿ ಶಿಖಂಡಿನಾ ॥

– ಭಾರತ (ಅನುಶಾಸನ. ೧೬೮/೩೦-೩೩)

೫) ಅದರಂತೆ ಅಂತಹ ಪುಣ್ಯಪುರುಷನಿಗೆ ಸಂತತಿ ಇಲ್ಲದ್ದರಿಂದಾಗಿ ತರ್ಪಣಾದಿಗಳು ತಪ್ಪುವುದಲ್ಲ ಎಂಬ ಅವಳ ಕೊರಗಿಗೆ ಕೃಷ್ಣ ಅವರಿಗೆ ಸಂತತಿ ಇಲ್ಲದಿದ್ದರೂ, ಪ್ರತಿ ಭೀಷ್ಮಾಷ್ಟಮಿ–ಯಂದು ಜೀವತ್ಪಿತೃಕರ ಸಮೇತ ಎಲ್ಲರೂ ತರ್ಪಣವನ್ನು ಕಡ್ಡಾಯವಾಗಿ ನೀಡುವ ವಿಧಿಯನ್ನು ಏರ್ಪಡಿಸಿ, ಸಮಾಧಾನ ಮಾಡಿದ :

ಜೀವತ್ಪಿತಾಽಪಿ ಕುರ್ವೀತ ತರ್ಪಣಂ ಯಮಭೀಷ್ಮಯೋಃ ॥ – (ಸ್ಮೃತಿ)

೬) ಅಷ್ಟೆಲ್ಲ ಉಪದೇಶವನ್ನು ಭೀಷ್ಮರಿಂದ ಕೇಳಿದರೂ, ಧರ್ಮರಾಜನಿಗೆ ನೆಮ್ಮದಿ ದೊರೆಯಲಿಲ್ಲ. ಆವರೆಗೆ ಹಿರಿಯರಾದ ಭೀಷ್ಮರನ್ನು ಕೊಂದಿದ್ದಕ್ಕಾಗಿ ದುಃಖಿಸುತ್ತಿದ್ದರೆ, ಅವರ ಉಪದೇಶವನ್ನು ಕೇಳಿದ ಮೇಲೆ ಅಂತಹ ಮಹಾಜ್ಞಾನಿಗಳನ್ನು ಕೊಲ್ಲಿಸಿದೆವಲ್ಲ ಎಂದು ಮತ್ತೊಂದು ರೀತಿಯಲ್ಲಿ ದುಃಖಿಸತೊಡಗಿದ.

೭) ಅದರಿಂದಾಗಿಯೇ ಭೀಷ್ಮರಿಗೆ ತರ್ಪಣ ನೀಡಿದ ಮೇಲೆ ದುಃಖಾತಿರೇಕದಿಂದ ಹಾಗೆಯೇ ಪ್ರಜ್ಞೆ ತಪ್ಪಿ ಬೀಳುವ ಸ್ಥಿತಿಯಲ್ಲಿದ್ದಾಗ ಭೀಮು ಅವನಿಗೆ ಆಸರೆಯಿತ್ತ ಎಂಬ ವಿಶೇಷಾಂಶ ಮಹಾಭಾರತದಲ್ಲಿದೆ*. ಭೀಷ್ಮೋಪದೇಶಕ್ಕಿಂತ ಭೀಮನ ಆಸರೆ ಅವನಿಗೆ ವಿಶೇಷರಕ್ಷಣೆ ವಹಿಸಿತು. ಭೀಮಾವತಾರವಾದದ್ದೇ ಧರ್ಮರಕ್ಷಣೆಗಾಗಿ ಅಲ್ಲವೆ!(೧೨/೫೦).

ಅಪಾಪೇ ಪಾಪಶಂಕಿತ್ವಾದಶ್ವಮೇಧೈರ್ಯಜಾಚ್ಯುತಮ್ ।
ಕುರು ರಾಜ್ಯಂ ಚ ಧರ್ಮೇಣ ಪಾಲಯಾಪಾಲಕಾಃ ಪ್ರಜಾಃ ॥ ೩ ॥

ಅ: ''ಧರ್ಮವನ್ನೂ ಅಧರ್ಮವೆಂದು ಶಂಕಿಸುತ್ತಿರುವುದರಿಂದ ಅಶ್ವಮೇಧಗಳಿಂದ ಶ್ರೀಹರಿಯನ್ನು ಆರಾಧಿಸು. ಧರ್ಮದಿಂದ ರಾಜ್ಯವಾಳು; ಅನಾಥರಾದ ಪ್ರಜೆಗಳನ್ನು ಪಾಲಿಸು''.

ವಿ: ವೇದವ್ಯಾಸರು ಧರ್ಮರಾಜನಿಗೆ ಆಗ ಅಶ್ವಮೇಧಯಾಗದಿಂದ ಹರಿಯನ್ನು ಆರಾಧಿಸಿ, ಆ ಪಾಪಶಂಕೆಯನ್ನು ತೊರೆ ಎಂದು ಆದೇಶಿಸಿದರು. ಕ್ಷತ್ರಿಯನಿಗೆ ಧರ್ಮದಿಂದ ರಾಜ್ಯ ಪಾಲಿಸುವುದು, ಅನಾಥರಾದ ಪ್ರಜೆಗಳನ್ನು ಸಂರಕ್ಷಿಸುವುದು ಮುಖ್ಯಧರ್ಮವೇ ಹೊರತು, ರಾಜ್ಯತ್ಯಾಗಾದಿಗಳಲ್ಲ ಎಂದೂ ಉಪದೇಶಿಸಿದರು.

ಧರ್ಮರಾಜನ ವಿಚಿತ್ರ ರಾಜ್ಯಭಾರ

ಇತ್ಯುಕ್ತಃ ಸ ತಥಾ ಚಕ್ರೇ ತ್ಯಕ್ತ್ವಾ ಭೋಗಾಂಶ್ಚ ಕೃತ್ಸ್ನಶಃ ।
ಗೋವ್ರತಾದಿವ್ರತೈರ್ಯುಕ್ತಃ ಪಾಲಯಾಮಾಸ ಮೇದಿನೀಮ್ ॥ ೪ ॥

---

* ತಂ ಸೀದಮಾನಂ ಜಗ್ರಾಹ ಭೀಮಃ ಕೃಷ್ಣೇನ ಚೋದಿತಃ ॥ - ಭಾರತ (ಆಶ್ವಮೇಧಿಕ ೧/೪)

೩. ಅಪಾಲಕಾಃ ಪ್ರಜಾ ಇತ್ಯತ್ರ ಅಪಾಲಕಾಃ= ಪಾಲಕರಹಿತಾಃ ॥ – (ವಾ.)

೩. ಯಜಸ್ವ ವಿವಿಧೈರ್ಯಜ್ಞೈರ್ಬಹುಭಃ ಸ್ವಾಪ್ತದಕ್ಷಿಣೈಃ ॥ –ಭಾರತ (ಆಶ್ವಮೇಧಿಕ. ೨/೩)

ತಪೋಭಃ ಕ್ರತುಭಶ್ಚೈವ ದಾನೇನ ಚ ಯುಧಿಷ್ಠಿರ ।
ತರಂತಿ ನಿತ್ಯಂ ಪುರುಷಾ ಯೇ ಸ್ಮ ಪಾಪಾನಿ ಕುರ್ವತೇ ।
ಯಜ್ಞೇನ ತಪಸಾ ಚೈವ ದಾನೇನ ಚ ನರಾಧಿಪ ।
ಪೂಯಂತೇ ನರಶಾರ್ದೂಲ ನರಾ ದುಷ್ಕೃತಕಾರಿಣಃ ॥
ಯಜಸ್ವ ವಾಜಿಮೇಧೇನ ವಿಧಿವದ್ ದಕ್ಷಿಣಾವತಾ ।
ಶ್ರಣು ತತ್ರ ಯಥಾ ಪಾಪಮಪಕೃಷ್ಯೇತ ಭಾರತ ॥ - ಭಾರತ (ಆಶ್ವಮೇಧಿಕ. ೩/೩-೫,೯)

ಅ: ವೇದವ್ಯಾಸರು ಹೀಗೆ ಹೇಳಲು, ಧರ್ಮರಾಜ ಹಾಗೆಯೇ ಮಾಡಿದ. ಭೋಗಗಳನ್ನೆಲ್ಲ ಸಂಪೂರ್ಣ ತೊರೆದು, ಗೋವ್ರತ ಮೊದಲಾದ ವ್ರತಗಳಿಂದ ಯುಕ್ತನಾಗಿ ಭೂಮಿಯನ್ನು ಪಾಲಿಸಿದ.

ವಿ: ೧) ಗೋವ್ರತ ಎಂದರೆ ಗೋವುಗಳಂತೆ ಎಲ್ಲೆಂದರಲ್ಲಿ ಮಲಗುವುದು, ಎಲ್ಲಾದರೂ ನೆಲೆಸುವುದು ಎಂಬ ವೈರಾಗ್ಯದ ಜೀವನ ಎಂದೂ, ಗೋಮೂತ್ರದಿಂದ ಸ್ನಾನ, ಗೋಕ್ಷೀರಾದಿಗಳ ಆಹಾರ, ಗೋವುಗಳನ್ನು ವಿಶೇಷವಾಗಿ ಸಂರಕ್ಷಿಸುವುದು ಮೊದಲಾದವು ಎಂದೂ, ಚಾಂದ್ರಾಯಣಾದಿವ್ರತಗಳು ಎಂದೂ, ಗೋಕ್ಷೀರವನ್ನಷ್ಟೇ ಸೇವಿಸಿ ಬದುಕುವುದು ಎಂದೂ ಅನೇಕ ಬಗೆಯ ವಿವರಣೆಗಳು ವ್ಯಾಖ್ಯಾನಗಳಲ್ಲಿ ಬಂದಿವೆ.

೨) 'ಆದಿ'ಶಬ್ದದಿಂದ ವಿಷ್ಣುಪಂಚಕಾದಿಗಳು ಗ್ರಾಹ್ಯ ಎಂದು ವಾದಿರಾಜೀಯದಲ್ಲಿದೆ.

ದದೌ ದೇಯಾನಿ ಮುಖ್ಯಾನಿ ಯಥಾಕಾಮಮಖಂಡಿತಮ್ ।
ನೈವಾರ್ಥೀ ವಿಮುಖಃ ಕಶ್ಚಿದಭೂದ್ಯೋಗ್ಯಃ ಕದಾಚನ ॥ ೫ ॥

ಅ: ಮುಖ್ಯ ದಾನಗಳನ್ನು ಧರ್ಮರಾಜ ಯಥೇಚ್ಛವಾಗಿ ನಿರಂತರ ಮಾಡಿದ. ಬೇಡಿ ಬಂದ ಯಾವ ಯೋಗ್ಯನೂ ಸಹ ತಾನು ಬಯಸಿದ್ದನ್ನು ಪಡೆಯದೆ ಎಂದೂ ಹಿಂದಿರುಗಲಿಲ್ಲ.

ವಿ: ಮುಖ್ಯದಾನಗಳು ಎಂದರೆ ಮಹಾದಾನಗಳಾದ ತುಲಾಪುರುಷಾದಿದಾನ ಎಂದರ್ಥ. ಬೇಡಿದ ಪ್ರತಿಯೊಬ್ಬರಿಗೂ ಅವರು ಬೇಡಿದ್ದನ್ನು ನೀಡದೆ ಕಳುಹಿಸುತ್ತಿರಲಿಲ್ಲ ಎಂಬುದು ಇಲ್ಲಿಯ ಮತ್ತೊಂದು ವಿಶೇಷ.

ಪ್ರಷ್ಟಾ ಚ ದಾತಾಽಖಿಲರಾಜನಮ್ಯೋ
ಯಷ್ಟಾ ಚ ಧರ್ಮಾತ್ಮಜ ಏವ ತತ್ರ ।
ಬಭೂವ ಪಾಂಡೋರ್ಗೃಹಮಾವಸಂಶ್ಚ
ರಾಜಾಧಿರಾಜೋ ವನಿತಾನಿವೃತ್ತಃ ॥ ೬ ॥

---

೪. ಗೋವ್ರತಾದಿವ್ರತೈರ್ಯುಕ್ತ ಇತ್ಯತ್ರ ಗೋಮೂತ್ರಸ್ಥಿತಧಾನ್ಯಕೃತಾನ್ನಭೋಜನಾದಿಲಕ್ಷಣಂ ವ್ರತಂ ಗೋವ್ರತಂ ಆದಿಪದೇನ ವಿಷ್ಣುಪಂಚಕಾದಿಕಂ ಗೃಹ್ಯತೇ। ತೈಃ ವ್ರತೈಃ ॥ – (ವಾ.)

೪. ಗೋವ್ರತಂ ಗೋಃ ಭಕ್ಷಾರ್ಥಂ ಧಾನ್ಯಂ ದತ್ವಾ ತನ್ನಿರ್ಗತಧಾನ್ಯೇನ ಶರೀರನಿರ್ವಾಹರೂಪಂ ವ್ರತಂ ಗೋವ್ರತಂ ತದಾದಿವ್ರತೈಃ ಮೇದಿನೀಂ ಪೃಥ್ವೀಮ್ ॥ - (ಜ.)

೫. ತುಲಾಪುರುಷಾದಿಮಹಾದಾನಾನಿ ದದೌ । - (ಜ.)

ಅ: ಧರ್ಮರಾಜ ಎಲ್ಲರನ್ನೂ ಕೇಳುವವನಾಗಿಯೂ, ನೀಡುವವನಾಗಿಯೂ, ಸಕಲ ರಾಜರುಗಳಿಂದ ವಂದ್ಯನಾಗಿಯೂ, ಯಾಗಗಳನ್ನು ಮಾಡುವವನಾಗಿಯೂ ಅಲ್ಲಿ ನೆಲೆಸಿದ. ಪಾಂಡುರಾಜನ ಮನೆಯಲ್ಲಿ ವಾಸಿಸತೊಡಗಿದ ರಾಜಾಧಿರಾಜನಾದ ಅವನು ಸ್ತ್ರೀಭೋಗವನ್ನೂ ತೊರೆದ.

ವಿ: ೧) ಇಲ್ಲಿ 'ಪ್ರಷ್ಟಾ' (ಕೇಳುವವನು) ಎಂದರೆ ಪ್ರಜೆಗಳನ್ನು ಕುಶಲಪ್ರಶ್ನೆ ಮಾಡುವವನು ಎಂದೂ, ಹಿಂದೆ (೨೦/೧) ಹೇಳಿದಂತೆ ವಿದ್ವತ್ಸಭೆಗಳಲ್ಲಿ ಪ್ರಾಶ್ನಿಕಕಾರ್ಯವನ್ನು ಮಾಡುವವನೆಂದೂ, ವಿಧ್ಯುಕ್ತವಾದ ಕರ್ಮಗಳನ್ನು ಮಾಡದಿರುವವರನ್ನು 'ಏಕೆ ಮಾಡಲಿಲ್ಲ?' ಎಂದು ಅಧಿಕಾರವಾಣಿಯಿಂದ ಪ್ರಶ್ನೆ ಮಾಡುವವನು ಎಂದೂ, ಹಿರಿಯರಾದ ಋಷಿಮುನಿಗಳು ಬಂದಾಗ ಅವರಲ್ಲಿ ಧರ್ಮವಿಷಯಕವಾದ ಪ್ರಶ್ನೆಗಳನ್ನು ಕೇಳಿ ತಿಳಿಯುವವನು ಎಂದೂ ಅನೇಕಬಗೆಯ ಅರ್ಥ.

೨) ಧರ್ಮರಾಜ ಸ್ತ್ರೀಭೋಗವನ್ನು ತೊರೆದ ಎಂಬುದು ಅವನ ಅತ್ಯಂತ ವಿಶೇಷವಾದ ವೈರಾಗ್ಯಕ್ಕೆ ಸೂಚಕ. ದ್ರೌಪದೀಸಂಗವನ್ನೂ ವನವಾಸದ ಆರಂಭದ ಕಾಲದಲ್ಲೇ ತೊರೆದಿದ್ದ ಅವನು (೨೨/೫೯), ದೇವಕಿ ಮೊದಲಾದ ಇತರ ಪತ್ನಿಯರ ಸಂಪರ್ಕವನ್ನೂ ಯುದ್ಧಾನಂತರದಲ್ಲಿ ತೊರೆದ ಎಂದರ್ಥ.

ಭೀಮಸೇನನ ಅಪೂರ್ವ ಭೋಗವೈಭವ

ಭೀಮಸ್ತು ದೌರ್ಯೋಧನಮೇವ ಸದ್ಮ
ಪ್ರಪೇದಿವಾನೂರ್ಜಿತವೀರ್ಯಲಬ್ಧಮ್ ।
ಕೃಷ್ಣಾಸಹಾಯಃ ಸುರರಾಜಯೋಗ್ಯಾ-
ನಭುಂಕ್ತ ಭೋಗಾನ್ ಯುವರಾಜ ಏವ ॥ ೭ ॥

ಅ: ಭೀಮನಾದರೋ ತನ್ನ ಮಹಾಪರಾಕ್ರಮದಿಂದ ಪಡೆದ ದುರ್ಯೋಧನನ ಮನೆಯನ್ನೇ ವಾಸಸ್ಥಾನವನ್ನಾಗಿ ಹೊಂದಿದ. ಯುವರಾಜನಾಗಿದ್ದು ದೇವರಾಜನಾದ ಇಂದ್ರನಿಗೆ ಯೋಗ್ಯವಾದ ಭೋಗಗಳನ್ನು ದ್ರೌಪದಿಯೊಂದಿಗೆ ಅನುಭವಿಸಿದ.

---

೬. ನಿಃಸ್ಪೃಹಃ ಸರ್ವಕಾಮೇಭ್ಯಃ ಕೃಷ್ಣಪಾದಾಬ್ಜಸೇವಯಾ - ಭಾಗವತ (೧/೧೨/೪)

೭. ತತೋ ದುರ್ಯೋಧನಗೃಹಂ ಪ್ರಾಸಾದೈರುಪಶೋಭಿತಮ್ । ..... ವೃಕೋದರಃ..... ।
ಪ್ರತಿಪೇದೇ ಮಹಾಬಾಹುರ್ಮಂದಿರಂ ಮಘವಾನಿವ ॥ - ಭಾರತ (ಶಾಂತಿ. ೪೪/೬,೭)

ಏಃ ೧) ಭೀಮನಿಗೆ ತಾನು ಮಾಡಿದ್ದು ಶುದ್ಧಧರ್ಮವೆಂಬ ಪೂರ್ಣಪರಿಜ್ಞಾನವಿದ್ದದ್ದರಿಂದಲೇ ವ್ಯರ್ಥವೈರಾಗ್ಯವನ್ನು ಹೊಂದದೆ, ಯುವರಾಜನಿಗೆ ವಿಹಿತವಾದ ಸಕಲಭೋಗಗಳನ್ನೂ ಭೋಗಿಸಿದ ಎಂದರ್ಥ. ಆ ಮೂಲಕ ದೇಶಕಾಲೋಚಿತವಾಗಿ ಆಶ್ರಮಧರ್ಮಗಳನ್ನು ಪಾಲಿಸುತ್ತಾ ವಿಹಿತ–ಭೋಗಗಳನ್ನು ಭೋಗಿಸುವುದರಲ್ಲಿ ಧರ್ಮಲೋಪ ಸರ್ವಥಾ ಉಂಟಾಗದು ಎಂದು ಲೋಕಶಿಕ್ಷಣವನ್ನೂ ಮಾಡಿದ ಎಂದು ತಿಳಿಯಬೇಕು :

ಅನಿಷಿದ್ಧಸುಖತ್ವಾಗೀ ಪಶುರೇವ ನ ಸಂಶಯಃ ॥ – (ಸ್ಮೃತಿ)

೨) ಭೀಮಸೇನ ದುರ್ಯೋಧನನ ಮನೆಯಲ್ಲಿ ವಾಸಿಸಿದ್ದು ಮತ್ತೊಂದು ವಿಶೇಷ. ವಾಸ್ತವಿಕವಾಗಿ ಅದು ದುರ್ಯೋಧನ ವಾಸಿಸಿದ್ದ ಮನೆಯೇ ಹೊರತು, ದುರ್ಯೋಧನನ ಮನೆಯಲ್ಲ. ರಾಜನಿಗೆ ನ್ಯಾಯಪ್ರಾಪ್ತವಾದ ಅರಮನೆಯಲ್ಲಿ ಅವನು ವಾಸಿಸಿದ್ದ ಮಾತ್ರ.

೩) ಮತ್ತೊಬ್ಬರು ವಾಸಿಸಿದ ಮನೆಯಲ್ಲಿ ಪವಮಾನಹೋಮಾದಿಗಳ ಮೂಲಕ ಶುದ್ಧಿ ಮಾಡಿಕೊಂಡು ವಾಸಿಸಬಹುದು ಎಂಬ ಧರ್ಮಸೂಕ್ಷ್ಮವೂ ಇದರಿಂದ ಪ್ರತಿಪಾದಿತ ಎಂದು ತಿಳಿಯಬಹುದು.

ಭೀಮನಪ್ಪೇ ದ್ರೌಪದೀಪತಿ

ಕೃಷ್ಣಾ ಚ ಪಾರ್ಥಾಂಶ್ಚತುರೋ ವಿಹಾಯ
ಸುವ್ಯಕ್ತಸಾರಸ್ವತಶುದ್ಧಭಾವಾ ।
ರರಾಜ ರಾಜಾವರಜೇನ ನಿತ್ಯ-
ಮನನ್ಯಯೋಗೇನ ಶಿಖೇವ ವಹ್ನೇಃ ॥ ೮ ॥

---

೮. ಸುವ್ಯಕ್ತಸಾರಸ್ವತಶುದ್ಧಭಾವೇತ್ಯತ್ರ ಸರಸ್ವತೀ = ಭಾರತೀ ತತ್ಸಂಬಂಧೀ ಸಾರಸ್ವತಃ। ಸುವ್ಯಕ್ತಃ ಸಾರಸ್ವತಃ ಶುದ್ಧಭಾವೋ ಯಸ್ಯಾಃ ಸಾ ತಥೋಕ್ತಾ। ಕೇವಲಂ ಭಾರತೀಸನ್ನಿಧಾನವತೀತ್ಯರ್ಥಃ। ''ಬ್ರಾಹ್ಮೀ ತು ಭಾರತೀ ಭಾಷಾ ಗೀರ್ವಾಗ್ವಾಣೀ ಸರಸ್ವತೀ'' ಇತ್ಯಮರಃ। ಅನನ್ಯಯೋಗೇನ ನ ವಿದ್ಯತೇ ಅನ್ಯಸ್ತ್ರೀಯೋಗೋ ಯಸ್ಯ ಸಃ ತಥೋಕ್ತಃ। ತೇನ। ರಾಜಾವರಜೇನ = ಭೀಮೇನ ॥ – (ವಾ.)

೮. ಸರಸ್ವತೀ ಸ್ವಭಾವಸದೃಶಸ್ವಭಕ್ತ್ಯೇತ್ಯರ್ಥಃ। – (ವ.)

೮. ಸುವ್ಯಕ್ತಸಾರಸ್ವತೇತಿ। ಭಾರತ್ಯಪಿ ಸರಸ್ವತೀತ್ಯುಕ್ತಮ್ । ಅಷ್ಟಾದಶೇ ಅನ್ಯಾಸಾಂ ಸರ್ವಥಾ ಸುಪ್ತೇರಿತಿ ಭಾವಃ। ಅನನ್ಯಯೋಗೇನೇತ್ಯುಕ್ತಮ್ । – (ತಾ.)

ಅ: ದ್ರೌಪದಿ ತನ್ನಲ್ಲಿ ಆಗ ಭಾರತಿಸ್ವರೂಪವೇ ಪೂರ್ಣವಾಗಿ ಅಭಿವ್ಯಕ್ತವಾದ್ದರಿಂದ ಇತರ ನಾಲ್ವರು ಪಾಂಡವರನ್ನು ಬಿಟ್ಟು, ಭೀಮನೊಡನೆಯೇ ಸದಾ ನೆಲೆಸಿ, ಅಗ್ನಿಯ ಜ್ವಾಲೆಯಂತೆ ಅನ್ಯರ ಸಂಪರ್ಕವಿಲ್ಲದೆ ಶೋಭಿಸಿದಳು.

ವಿ: ೧) ದ್ರೌಪದೀದೇಹದಲ್ಲಿ ಆ ವೇಳಗೆ ಶಚೀ ಶ್ಯಾಮಲಾ ಮೊದಲಾದವರ ಆವೇಶ ಸಂಪೂರ್ಣವಾಗಿ ಮರೆಯಾಗಿ, ಕೇವಲ ಭಾರತಿಯ ಸನ್ನಿಧಾನ ಪೂರ್ಣವ್ಯಕ್ತವಾದ್ದರಿಂದ ದ್ರೌಪದಿ ಕೇವಲ ಭೀಮಪತ್ನಿಯಾಗಿಯೇ ಉಳಿದಳು ಎಂದರ್ಥ.

೨) ನಕುಲಸಹದೇವರ ಸಂಪರ್ಕ ರಾಜಸೂಯಯಾಗಕ್ಕಿಂತ ಮುಂಚಿತವಾಗಿಯೇ ದೂರ–ವಾಗಿತ್ತು ಎಂಬ ಅಂಶ ಈಗಾಗಲೇ ಬಂದಿದೆ (೨೧/೧೭೦). ಇದರಿಂದ ಇತರದೇವತಾಸ್ತ್ರೀಯರ ಆವೇಶವೂ ಸಹ ಅವರ ಯೋಗ್ಯತೆಗೆ ಅನುಗುಣವಾಗಿ ಕ್ರಮವಾಗಿ ಕಡಿಮೆಯಾಯಿತು ಎಂದಾಗುವುದು.

೩) ಅಗ್ನಿಯೊಂದಿಗೆ ಜ್ವಾಲೆ ಹೇಗೋ, ಹಾಗೆ ದ್ರೌಪದಿ ಭೀಮನೊಂದಿಗೆ ಶೋಭಿಸಿದಳು ಎಂಬ ಮಾತು ವಾಲ್ಮೀಕಿರಾಮಾಯಣದಲ್ಲಿ 'ಅನನ್ಯಾ ಹಿ ಮಯಾ ಸೀತಾ ಭಾಸ್ಕರೇಣ ಪ್ರಭಾ ಯಥಾ' ಎಂದು ಬಂದಿರುವಂತೆ, ಸೀತೆ ರಾಮನೊಂದಿಗೆ ಸೂರ್ಯನೊಂದಿಗೆ ಪ್ರಭೆ ಹೇಗೋ ಹಾಗೆ ಜೊತೆಯಿದ್ದಳು ಎಂಬ ಮಾತನ್ನು ಹೋಲುವುದು ಗಮನಾರ್ಹ.

೪) ಇದರಿಂದ ಲಕ್ಷ್ಮೀನಾರಾಯಣರ ವಿಶಿಷ್ಟದಾಂಪತ್ಯದಂತೆ ವಾಯುಭಾರತಿಯರ ದಾಂಪತ್ಯವೂ ಅತ್ಯಂತವಿಶಿಷ್ಟ ಎಂದು ಸಿದ್ಧವಾಗುವುದು.

---

೯. ಗತಭಾವಿಕಾಲೇ = ಅತೀತಾನಾಗತಕಾಲೇ ವಿಷಯೇ। ವಿಜ್ಞಾನಯುಜಾ= ವಿಶಿಷ್ಟಂ ಜ್ಞಾನಂ ಯುನಕ್ತೀತಿ ವಿಜ್ಞಾನಯುಕ್ ತೇನ ಭೀಮೇನ ಅತೀತಾನಾಗತಸಕಲಪದಾರ್ಥವಿಷಯಕಜ್ಞಾನಿನೇತ್ಯರ್ಥಃ। ಸಂವಾದತಃ = ತ್ವಂ ಭೀಮೇನೈವ ರಮಸ್ವ ಮಾऽಸ್ಮಾಭಿರಿತಿ ಸಂವಾದಾತ್ ಸಮೀಚೀನವಚನಾತ್ ಕಾರಣಾತ್ ಭೀಮಾದನ್ಯಪಾರ್ಥ್ಯೈರಪಿ ಪ್ರೀತ್ಯೈವ ಪರಿಹೃತಾ। ಅಪಿಪದೇನ ಸ್ವಯಂ ಚ ತಾನ್ ಪರಿಹೃತವತೀತಿ ಸಮುಚ್ಚಿನೋತಿ। ಗತವನವಾಸಕಾಲೇ ಭಾವಿರಾಜ್ಯಕಾಲೇ ಚ ಪರಿಹೃತೇತಿ ವಾ। ಜ್ಞಾನಾಧಿಕಸ್ಯ ವಾಯೋಃ ಭಾರ್ಯಾಯಾಃ ದೇಹೋ ನಾಸ್ಮಾಕಂ ಸ್ಪರ್ಶಯೋಗ್ಯಾ ಇತಿ ಪರಿಹೃತೇತಿ ಭಾವಃ॥ –(ವಾ.)

೯. ಕಿಮನ್ಯೈರ್ಬಲತಃ ಪರಿಹೃತಾ ನೇತ್ಯಾಹ – ಸಂವಾದತ ಇತಿ । ಸೋऽಪಿ ನ ಭಯಾತ್ ಪ್ರಾಪ್ತ ಇತ್ಯಾಹ – ವಿಜ್ಞಾನಯುಜಾ ಪ್ರೀತ್ಯೇತಿ । ಕಂ ನಾಗಪುರೇ ಧರ್ಮಜಸ್ಯಾಭಿಷೇಕಸಮಯೇऽನ್ಯೈಃ ಪರಿಹೃತಾ ನೇತ್ಯಾಹ – ಗತವಿಭಾಗಕಾಲ ಇತಿ । ಅಭಿಷೇಕಾತ್ ಪೂರ್ವಕಾಲೇ ತ್ಯಕ್ತಾ ತತಃ ಪರಂ ಪುನರ್ನಗೃಹ್ಣಂತೀತಿ ಭಾವೇನ ಭಾವಿಕಾಲ ಇತ್ಯುಕ್ತಮ್ । ತತಃ ಪರಂ ಧರ್ಮರಾಜೋ ವಿಷಣ್ಣಃ ಸ್ವಕೃತೇನ ಹ । ಭ್ರಾತೃಭಾರ್ಯಾಪದೇ ಕೃಷ್ಣಾಂ ಸ್ಥಾಪಯಾಮಾಸ ಸರ್ವದೇತಿ । ವನೇ ಪ್ರಥಮವಾರೇ ಕೃಷ್ಣಸ್ಯಾಗಮನಾನಂತರಂ ಧರ್ಮರಾಜೇನ ತ್ಯಾಗಸ್ಯೋಕ್ತತ್ವಾತ್ । ತತಃ ಕೃಷ್ಣಾಯಾಮಗ್ರಜಭ್ರಾತೃಭಾರ್ಯಾವೃತ್ತಿಂ ಹಿ ತೌ ಚಕ್ರತುರ್ಮಾದ್ರಿಪುತ್ರಾವಿತಿ ಯಮಾಭ್ಯಾಂ ಜರಾಸಂಧಶಲ್ಯ-ಸುತಯೋ ವಿವಾಹಾನಂತರಂ ತ್ಯಾಗೋಕ್ತೇಃ ಅರ್ಜುನೇನೇಂದ್ರಕೀಲಪರ್ವತಂ ಪ್ರತಿತಪಸೇ ಗಮನಾನಂತರಂ ತ್ಯಾಗಸ್ಯ ಸಂಪ್ರದಾಯಪ್ರಾಪ್ತತ್ವಾಚ್ಚೇತಿ ಜ್ಞೇಯಮ್ । ಯದ್ವಾ ಗತಭಾವಿಕಾಲೇ ಅತೀತೈಷ್ಯತ್ಕಾಲೇ ವರ್ತಮಾನಕಾಲೇ ಚ ಸ್ವೀಯಂ ಪತಿಮೇವ ರೇಮ ಇತ್ಯರ್ಥಃ। –(ತಾ.)

ಪ್ರೀತ್ಯೈವ ವಿಜ್ಞಾನಯುಜಾಽನ್ಯಪಾರ್ಥೈಃ
ಸಂವಾದತಃ ಪರಿಹೃತಾ ಗತಭಾವಿಕಾಲೇ ।
ಅಪಿ ಸ್ವಕೀಯಂ ಪತಿಮೇವ ಭೀಮ-
ಮವಾಪ್ಯ ಸಾ ಪರ್ಯಚರನ್ಮುದೈವ ॥ ೯ ॥

ಅ: ಇತರ ಪಾಂಡವರು ಮಹಾಜ್ಞಾನಿಯಾದ ಭೀಮನೊಂದಿಗೆ ಪ್ರೀತಿಯಿಂದಲೇ ಪರಸ್ಪರ ಸಮ್ಮತಿಯಿಂದ ಭೀಮನಿಗೇ ದ್ರೌಪದಿಯನ್ನು ಒಪ್ಪಿಸಿದರು. ಹಿಂದುಮುಂದಿನ ಸಕಲ ಕಾಲಗಳಲ್ಲೂ ತನ್ನ ಪತಿಯೇ ಆದ ಭೀಮನನ್ನು ಹೊಂದಿ, ದ್ರೌಪದಿ ಆನಂದದಿಂದಲೇ ಅವನನ್ನು ಸೇವಿಸಿದಳು.

ವಿ: ಉಳಿದವರ ಸಂಪರ್ಕ ಇತರದೇವತಾಸ್ತ್ರೀಯರ ಆವೇಶದಿಂದಾಗಿ ಔಪಾಧಿಕವಾಗಿತ್ತು; ಭೀಮದ್ರೌಪದಿಯರ ದಾಂಪತ್ಯ ಮಾತ್ರ ಸ್ವಾಭಾವಿಕವಾದುದು :

ಏಷಾ ಹಿ ಸಾ ಶುದ್ಧತನುಃ ಪ್ರಜಾತಾ ಶಚ್ಯಾದಿಯೋಗಾಪಗತಾಽಗ್ರ್ಯದೇಹಾ ।
ಯೂಯಂ ಚ ಸರ್ವೇ ಮರುತೋ ವಿಶೇಷ ಸಂಯೋಗಹೀನಾಃ ಸ್ವಶರೀರಸಂಸ್ಥಾಃ ॥
– (೩೨/೧೧೬)

ಎರಡು ರೂಪದ ಭಾರತೀ

ರರಾಜ ರಾಜಾವರಜಸ್ತಯಾ ಸ
ದ್ವಿರೂಪಯಾ ಸೋಮಕಕಾಶಿಜಾತಯಾ ।
ಶ್ರಿಯಾ ಭುವಾ ಚೈವ ಯಥಾಽಬ್ಜನಾಭೋ
ನಿಹತ್ಯ ಸರ್ವಾನ್ ದಿತಿಜಾನ್ ಮಹಾಬ್ಧೌ ॥ ೧೦ ॥

ಅ: ಯುವರಾಜನಾದ ಭೀಮ, ದ್ರೌಪದಿ ಮತ್ತು ಕಾಳಿ ಎಂಬ ಎರಡು ರೂಪದ ಭಾರತಿಯೊಂದಿಗೆ, ಕ್ಷೀರಸಾಗರದಲ್ಲಿ ಸರ್ವದೈತ್ಯರನ್ನೂ ಸದೆಬಡೆದ ಪದ್ಮನಾಭನಾದ ಶ್ರೀಹರಿ ಶ್ರೀದೇವಿಭೂದೇವಿಯರೊಂದಿಗೆ ಶೋಭಿಸುವಂತೆ ಶೋಭಿಸಿದ.

ವಿ: ಲಕ್ಷ್ಮೀನಾರಾಯಣರು ವಾಯುಭಾರತಿಯರಿಗಿಂತ ಅನಂತಪಟ್ಟು ಮಿಗಿಲಾದವರಾದ್ದರಿಂದ ಇದನ್ನೂ ಸಹ ಅಧಿಕದೃಷ್ಟಾಂತ ಎಂದು ಭಾವಿಸಬೇಕು; ಶ್ರೀಕೃಷ್ಣ ರುಗ್ಮಿಣೀಸತ್ಯಭಾಮೆಯರೊಂದಿಗೆ ವಿಹರಿಸಿದಂತೆ ಎಂದೂ ಅರ್ಥಮಾಡಿಕೊಳ್ಳಬಹುದು; ಅವರಿಬ್ಬರೂ ಶ್ರೀಭೂರೂಪಗಳೇ ಅಲ್ಲವೆ!

ದೇವಿ ಎಂಬ ಮತ್ತೊಬ್ಬ ಭೀಮಪತ್ನಿ

ಸರ್ವೋತ್ತುಂಗೋ ನಾಮತಃ ಪ್ರಾಣವಾಯೋ-
ರಂಶೋ ನಿಶಾಯಾಂ ಗುರುಪುತ್ರಸೂದಿತಃ ।
ಮಾತಾಽಸ್ಯ ದೇವೀತಿ ಚ ರೌಹಿಣೇಯೀ
ಭೀಮಪ್ರಿಯಾಽಽಸೀದ್ಯಾ ಪುರಾಽಸ್ಯೈವ ರಾಕಾ ॥ ೧೧ ॥

ಅ: ಸರ್ವೋತ್ತುಂಗ ಎಂಬ ಆಹಂಕಾರಿಕಪ್ರಾಣನ ಅವತಾರನಾದ ಭೀಮಪುತ್ರ ಅಶ್ವತ್ಥಾಮನಿಂದ ರಾತ್ರಿಯಲ್ಲಿ ಹತನಾದ; ಅವನ ತಾಯಿ ದೇವಿ ಎಂಬವಳು; ಅವಳು ವಸುದೇವಪತ್ನಿಯಾದ ರೋಹಿಣಿಯ ಪುತ್ರಿ; ಅವಳು ಹಿಂದೆ ಹುಣ್ಣಿಮೆಗೆ ಅಭಿಮಾನಿ-ದೇವತೆಯಾದ ರಾಕಾ; ಅವಳೂ ಭೀಮನ ಪತ್ನಿಯೇ ಆಗಿದ್ದಳು.

ವಿ: ಇವಳೂ ಸಹ ಸುಭದ್ರೆಯಂತೆ ಕೃಷ್ಣನ ತಂಗಿ ಎಂದರ್ಥ. ಸುಭದ್ರೆ ಅರ್ಜುನಪತ್ನಿಯಾದರೆ, ದೇವಿ ಭೀಮಪತ್ನಿಯಾದಳು; ಅರ್ಜುನನಂತೆ ಭೀಮನೂ ಸಹ ಕೃಷ್ಣನಿಗೆ ಮೈದುನ ಎಂಬ ವಿಶೇಷಾಂಶ ಇದರಿಂದ ತಿಳಿಯುವುದು.

ಭೀಮನ ಇತರ ಇಪ್ಪತ್ತು ಪತ್ನಿಯರು

ಅನ್ಯಾಶ್ಚಾಸುರ್ವಾಸುದೇವ್ಯೋ ದಿಶೋ ಯಾ
ಆಪಃ ಪೂರ್ವಂ ವಿಂಶತಿರಗ್ರ್ಯರೂಪಾಃ ।
ತಾಭಿರ್ಯುತೋ ದೈವತೈರಪ್ಯಲಭ್ಯಾ-
ನಭುಂಕ್ತ ಭೋಗಾನ್ ವಿಬುಧಾನುಗಾರ್ಚಿತಃ ॥ ೧೨ ॥

ಅ: ಉತ್ತಮರೂಪವತಿಯರಾದ ಇತರ ಇಪ್ಪತ್ತು ವಸುದೇವಪುತ್ರಿಯರು ಸಹ ಭೀಮಸೇನನಿಗೆ ಪತ್ನಿಯರಾಗಿದ್ದರು. ಅವರು ಹಿಂದೆ ದಿಗಭಿಮಾನಿದೇವತೆಗಳೂ, ಅಬಭಿಮಾನಿ

---

೧೦. ಅಧಿಕದೃಷ್ಟಾಂತಃ। 'ರಾಮೋ ದಾಶರಥಿರ್ಯಥಾ।' (ಭಾಗವತ ೧/೧೧/೧೯) ಇತಿವತ್ ।
ಊರ್ಣನಾಭ್ಯಾದಿಕೋ ವಿಷ್ಣೋರ್ವಿಷ್ಣುರ್ವಿಷ್ಣೋಸ್ತಥೈವ ಚ ।
ವಿಷ್ಣುರ್ಜೀವಸ್ಯ ದೃಷ್ಟಾಂತಾ ಊನಸಾಮ್ಯಾಧಿಕಾಃ ಕ್ರಮಾತ್ ॥ (ಬ್ರಾಹ್ಮೇ) – ಭಾ. ತಾ. (೧/೧೧/೧೯)

೧೧. ಸರ್ವೋತ್ತುಂಗೋ ನಾಮತಃ ಪ್ರಾಣವಾಯೋರಿತ್ಯತ್ರ ಪ್ರಾಣವಾಯೋಃ = ಮುಖ್ಯಪ್ರಾಣಸ್ಯ ಕುಮಾರ-ಭೂತಾಹಂಕಾರಿಕಪ್ರಾಣವಾಯೋಃ ನಾಮತಃ ಸರ್ವೋತ್ತುಂಗೋ ಯಃ ಅಂಶಃ ಸಃ ರೋಹಿಣ್ಯಾಃ ಪುತ್ರ್ಯಾಃ= ಭೀಮಭಾರ್ಯಾಯಾಂ ಜಾತಃ ಸನ್ ನಿಶಾಯಾಂ ಗುರುಪುತ್ರಸೂದಿತೋಽಭೂತ್। ರೌಹಿಣೇಯೀ ದೇವೀತಿ ನಾಮವತೀ ಅಸ್ಯ ಮಾತಾ ಚ ಭೀಮಪ್ರಿಯಾಽಽಸೀತ್। ರಾಕಾ = ಪೌರ್ಣಮಾಸ್ಯಭಿಮಾನಿನೀ ಯಾ ಪುರಾ ಅಸ್ಯೈವ ವಾಯೋರೇವ ಭಾರ್ಯಾ ॥ – (ವಾ.)

ದೇವತೆಗಳೂ ಆಗಿದ್ದವರು. ಅವರಿಂದ ಕೂಡಿ ಭೀಮಸೇನ ದೇವತೆಗಳಿಗೂ ಅಲಭ್ಯವಾದ ಭೋಗಗಳನ್ನು, ದೇವತೆಗಳಿಂದಲೂ ಗಂಧರ್ವರಿಂದಲೂ ಸೇವಿತನಾಗಿ ಭೋಗಿಸಿದ.

ಏಃ ೧) ಭೀಮನಿಗೆ ಹೀಗೆ ದ್ರೌಪದಿ, ಕಾಳೀ ಮತ್ತು ದೇವಿ ಎಂಬ ಮೂವರು ಮಾತ್ರವಲ್ಲದೆ, ಇತರ ಇಪ್ಪತ್ತು ಪತ್ನಿಯರಿದ್ದರು ಎಂದಾಗುವುದು. ಇವರೊಂದಿಗೆ ಎಲ್ಲರಿಗಿಂತ ಮುಂಚಿತವಾಗಿ ವಿವಾಹವಾಗಿದ್ದ ಹಿಡಿಂಬಿಯನ್ನೂ ಸೇರಿಸಿದರೆ ಭೀಮಪತ್ನಿಯರ ಒಟ್ಟು ಸಂಖ್ಯೆ ಇಪ್ಪತ್ತನಾಲ್ಕು ಎಂದಾಗುವುದು. ಒಂದರ್ಥದಲ್ಲಿ ಇದು ಭೀಮ ಚತುರ್ವಿಂಶತಿ ತತ್ತ್ವಾಭಿಮಾನಿದೇವತೆಗಳಿಗೆ ಗುರುವಾದ ವಾಯು ಎಂಬುದಕ್ಕೆ ಗಮಕ ಎಂದು ಭಾವಿಸಬಹುದು. ಇಷ್ಟು ಪತ್ನಿಯರಿದ್ದರೂ ಭಾರತಿ ಮಾತ್ರವೇ ಮುಖ್ಯಪತ್ನಿ ಎಂಬುದನ್ನು ಸೂಚಿಸಲು 'ಮಾರುತನ ನಿಜಪತ್ನಿ' (ಹರಿಕಥಾಮೃತಸಾರ) ಎಂದು ಅವರನ್ನು ಕರೆದಿರುವರು.

೨) ಇತರಸ್ತ್ರೀಯರಲ್ಲಿ ಭಾರತಿಯ ಆವೇಶವಿದ್ದದ್ದರಿಂದ ಅವರು ಭೀಮಪತ್ನಿಯರಾಗಿರುವರು. ಕೃಷ್ಣ ಬಹುಪತ್ನೀಕನಾಗಿದ್ದಂತೆ, ಭೀಮನೂ ಬಹುಪತ್ನೀಕನಾಗಿದ್ದುದು, ಅವನು ಶ್ರೀಹರಿಯ ಸಾಕ್ಷಾತ್ ಪ್ರತಿಬಿಂಬ ಎಂಬುದಕ್ಕೂ ಸೂಚಕ. ಅರ್ಜುನನೂ ಇತರ ಪತ್ನಿಯರನ್ನು ಹೊಂದಿದ್ದ. ಆದರೆ ಅವರಲ್ಲಿ ಚಿತ್ರಾಂಗದೆ ಸಾಕ್ಷಾತ್ ಶಚಿಯೇ. ಸುಭದ್ರೆಯಲ್ಲಿ ಶಚಿಯ ಆವೇಶವಿದ್ದ ಉಲ್ಲೇಖವಿಲ್ಲ ಎಂಬುದನ್ನು ಗಮನಿಸಬೇಕು.

೩) ಹೀಗೆ ಶ್ರೀಹರಿಗೆ ಸಾಕ್ಷಾತ್ ಮಹಾಲಕ್ಷ್ಮಿಯ ಹೊರತು ಇತರರ ಸಂಪರ್ಕವಿಲ್ಲದಿರುವಂತೆ, ವಾಯುದೇವರಿಗೂ ಭಾರತಿಯ ಹೊರತು ಇತರರ ಸಂಪರ್ಕವಿಲ್ಲ ಎಂಬುದು ವಿಶೇಷ.

ಭೀಮಸೇನನ ಧರ್ಮರಕ್ಷಣ ವೈಖರಿ

ರರಕ್ಷ ಧರ್ಮಾನಖಿಲಾನ್ ಹರೇಃ ಸ
ನಿಧಾಯ ವಿಪ್ರಾನನುಶಾಸ್ಯ ಯುಕ್ತಾನ್ ।
ಸದ್ವೈಷ್ಣವಾನ್ ವಿದುಷಃ ಪಂಚ ಪಂಚ
ಸವೇತನಾನ್ ಗ್ರಾಮಮನು ಸ್ವಕೀಯಾನ್ ॥ ೧೩ ॥

---

೧೨. ಪೂರ್ವಂ ಯಾಃ ದಿಶಃ = ದಿಗಭಿಮಾನಿನ್ಯಃ ಆಪಃ = ಆಬಭಿಮಾನಿನ್ಯಶ್ಚ ಅಗ್ರ್ಯರೂಪಾಃ ವಿಂಶತಿ ದೇವ್ಯಶ್ಚಾಸನ್। ತಾಃ ವಾಸುದೇವ್ಯಃ = ವಸುದೇವಪುತ್ರ್ಯಃ ಸತ್ಯಃ ಭೀಮಸ್ಯ ಭಾರ್ಯಾಃ ಆಸುಃ। ತಾಭಿಃ ರೌಹಿಣೇಯೀದೇವ್ಯಾ ಚ ಯುತ ಇತಿ ಸಂಬಂಧಃ। ಯುತ ಇತಿ ವದತಾ ರಮಣಂ ತು ದ್ರೌಪದ್ಯೈವ। ತಾಶ್ಚ ಭೀಮಪರಿಚರ್ಯಾಮೇವ ಕೃತ್ವಾ ತಿಷ್ಠಂತೀತಿ ಸೂಚಿತಮ್। ಅತ ಏವ ದ್ವಿರೂಪಯಾ ಸೋಮಕಕಾಶಿಜಾತಯಾ ರರಾಜೇತ್ಯುಕ್ತಮ್ ॥ – (ವಾ.)

೧೩. ಟೀಕಾಸು । 'ಕೂಲಂಕಷಾ ನಿರ್ಝರಿಣೀ ರೋಧೋವಕ್ತ್ರಾ ಸರಸ್ವತೀ' ಇತ್ಯಭಿಧಾನಮಾಶ್ರಿತ್ಯ ನದೀಭಃ ಸಹವರ್ತಮಾನಾ ಇತ್ಯರ್ಥ ಉಕ್ತಃ। – (ತಾ.)

ಅ: ಭೀಮಸೇನ ಪ್ರತಿಗ್ರಾಮದಲ್ಲೂ ಸದ್ವೈಷ್ಣವರೂ, ತನ್ನವರೂ, ಯುಕ್ತಚತುರರೂ ಆದ ಐದೈದು ಜನ ವಿದ್ವಾಂಸರಾದ ಬ್ರಾಹ್ಮಣರುಗಳನ್ನು ವೇತನ ನೀಡಿ ನೇಮಿಸಿ, ಸಕಲ ವೈಷ್ಣವಧರ್ಮಗಳನ್ನೂ ಉಪದೇಶಮಾಡಿಸುತ್ತಾ ಸಕಲಧರ್ಮಗಳನ್ನೂ ಸಂರಕ್ಷಿಸಿದ.

ವಿ: ೧) ಭೀಮನ ಈ ವ್ಯವಸ್ಥೆ ಧರ್ಮಸಂರಕ್ಷಣೆಯ ಬಗ್ಗೆ ಹೊಸ ಬೆಳಕನ್ನು ನೀಡುವುದು. ವೈಷ್ಣವರಾದ ವಿದ್ವಾಂಸರುಗಳನ್ನು ಸಿದ್ಧಪಡಿಸಿ, ಅವರನ್ನು ಪ್ರತಿಯೊಂದು ಊರಿನಲ್ಲೂ ಸಹ ಧರ್ಮೋಪದೇಶ ಮಾಡಿಸುವ ಮೂಲಕ ವಿಕಾದಶ್ಯಾದಿವೈಷ್ಣವಧರ್ಮಗಳನ್ನು ಸಂರಕ್ಷಿಸಿದ. ಅವರಿಗೆ ಜೀವನೋಪಾಯಕ್ಕೆಂದು ಸೂಕ್ತವೇತನವನ್ನೂ ನೀಡುತ್ತಿದ್ದ ಎಂಬ ಇಲ್ಲಿಯ ವಿವರ ಗಮನಾರ್ಹ. ಅದರಿಂದಾಗಿ ಅವರು ನಿಶ್ಚಿಂತೆಯಿಂದ ಧರ್ಮೋಪದೇಶ ಮಾಡಲು ಸಾಧ್ಯವಾಗುತ್ತಿತ್ತು ಎಂದಾಗುವುದು. ಬ್ರಾಹ್ಮಣರು ಹಾಗೆ ವೇತನ ಪಡೆದು ಧರ್ಮೋಪದೇಶ ಮಾಡುವುದು ದೋಷವಲ್ಲ ಎಂಬ ವಿವರ ಗೀತಾತಾತ್ಪರ್ಯದಲ್ಲಿ ಬಂದಿದೆ :

ಅಧ್ಯಾಪನಂ ಚ ಶುಶ್ರೂಷಾ ಜೀವನಾರ್ಥಮೃತೇ ಸತಾಮ್ ।
ವಿಪ್ರಾದಿಷು ಕ್ರಮಾಜ್ಜ್ಞೇಯಾಃ ಶೂದ್ರಸ್ಯಾಧ್ಯಾಪನಂ ವಿನಾ ॥–ಗೀ.ತಾ.(೧೮/೪೪)

ದಧಾರ ದಂಡಂ ತದವರ್ತಿಷು ಸ್ವಯಂ
ಜಗ್ರಾಹ ಚಾನ್ವೇವ ಮುದಾऽಥ ತದ್ಗತಾನ್ ।
ತದ್ವೃತ್ತಮನ್ಯೈರಪಿ ವಿಪ್ರವರ್ಯೈಃ
ಸಂಶೋಧಯನ್ ಸರ್ವಮಸೌ ಯಥಾ ವ್ಯಧಾತ್ ॥ ೧೪ ॥

---

೧೩. ರರಕ್ಷ ಧರ್ಮಾನಖಿಲಾನಿತ್ಯತ್ರ ಗ್ರಾಮಂ ಗ್ರಾಮಮನು ಸ್ವಕೀಯಾನ್ ಸವೇತನಾನ್ ಸದ್ವೈಷ್ಣವಾನ್ ಯುಕ್ತಾನ್= ಯುಕ್ತಿಮತಃ ವಿದುಷಃ ಪಂಚ ಪಂಚ ವಿಪ್ರಾನ್ ಅನುಶಾಸ್ಯ = ಧರ್ಮಪರಿಪಾಲನಂ ಕುರುಧ್ವಮಿತ್ಯನುಶಾಸನಂ ಕೃತ್ವಾ ನಿಧಾಯ ಹರೇಃ ಅಖಿಲಾನ್ ಧರ್ಮಾನ್= ವಿಕಾದಶ್ಯುಪವಾಸಾದಿಧರ್ಮಾನ್ ರರಕ್ಷೇತಿ ಯೋಜನಾ ॥ –(ವಾ.)

೧೩. 'ರರಕ್ಷ ಧರ್ಮಾನಖಿಲಾನ್ ಹರೇಃ ಸ ನಿಧಾಯ ವಿಪ್ರಾನನುಶಾಸ್ಯ ಯುಕ್ತಾನ್ । ಸದ್ವೈಷ್ಣವಾನ್ ವಿದುಷಃ ಪಂಚ ಪಂಚ ಸವೇತನಾನ್ ಗ್ರಾಮಮನು ಸ್ವಕೀಯಾನ್' ಇತ್ಯಸ್ಮಿನ್ ಶ್ಲೋಕೇ 'ಸವಿಧಾಯವಿಪ್ರಾನ್' ಇತ್ಯೇಕಂ ಪದಮ್। ಸ ಇತಿ ಪದಂ ಸದ್ವೈಷ್ಣವಾನಿತ್ಯತ್ರ ದ್ವಿತೀಯಂ ಏವಂ ದ್ವಯಂ ತತ್ಸೈಕೇನೈವ ಚರಿತಾರ್ಥತ್ವಾದೇಕಂ ವ್ಯರ್ಥಮಿತಿ ಚೇನ್ನ। ಸ ವೈಷ್ಣವಾನಿತ್ಯನೇನೈಕಸ್ಯಾನ್ವಯಾತ್ ನ ಚ ತಥಾತ್ವೇ ವಿಪ್ರಾಣಾಂ ವೈಷ್ಣವತ್ವಾಸಿದ್ಧಿರಿತಿ ವಾಚ್ಯಮ್ । ವಿದುಷ ಇತ್ಯನೇನ ವೈಷ್ಣವತ್ವಸಿದ್ಧೇಃ ನಹಿ ವೈಷ್ಣವಾತಿರಿಕ್ತಾನಾಂ ವಿದ್ವತ್ತ್ವಮಸ್ತಿ। ಸ ವೈಷ್ಣವಾನ್ ಇತಿ ಪಾಠಃ ಸುಗಮ ಏವ। 'ನಾವೈಷ್ಣವಃ ಕಶ್ಚಿದಭೂತ್ ಕುತಶ್ಚಿದಿತ್ಯುತ್ತರವಾಕ್ಯಾತ್ ತದ್ರಾಷ್ಟ್ರವಾಸಿನಾಂ ವೈಷ್ಣವತ್ವಸಿದ್ಧೇಃ ॥ –(ತಿ.)

ಅ: ಅನುಸರಿಸದಿದ್ದವರನ್ನು ಭೀಮ ಸ್ವತಃ ತಾನೇ ಶಿಕ್ಷಿಸುತ್ತಿದ್ದ. ಆ ಧರ್ಮದಲ್ಲಿ ನಿರತರಾದವರಿಗೆ ಸಂತೋಷದಿಂದ ರಕ್ಷಿಸುತ್ತಿದ್ದ. ಆ ಬ್ರಾಹ್ಮಣರ ರೀತಿನೀತಿಗಳನ್ನು ಅವರಿಗಿಂತ ಮಿಗಿಲಾದ ಬೇರೆ ಬ್ರಾಹ್ಮಣರುಗಳಿಂದ ಪರೀಕ್ಷೆ ಮಾಡಿಸುತ್ತಾ ಸಕಲಧರ್ಮಗಳನ್ನೂ ಯಥಾವತ್ತಾಗಿ ರಕ್ಷಿಸಿದ.

ವಿ: ೧) ಹಾಗೆ ನಿಯಮಿತರಾದ ವಿದ್ವಾಂಸರು ತಮ್ಮ ಕರ್ತವ್ಯ ನಿರ್ವಹಿಸುವುದನ್ನು ಪರೀಕ್ಷಿಸಲು ಭೀಮಸೇನ ಅವರಿಗಿಂತ ಮಿಗಿಲಾದ ಇತರ ಬ್ರಾಹ್ಮಣರುಗಳನ್ನು ಅಲ್ಲಿಗೆ ಕಳುಹಿಸಿ ಪರೀಕ್ಷೆ ಮಾಡಿಸುತ್ತಿದ್ದ. ಇದು ಧರ್ಮಪ್ರಸಾರದ ಬಗ್ಗೆ ವಹಿಸಬೇಕಾದ ಮತ್ತೊಂದು ಮುಂಜಾಗ್ರತೆ.

೨) ಹಾಗೆ ನಿಯಮಿತರಾದ ವಿದ್ವಾಂಸರು ಯಾವುದೇ ಅವ್ಯವಹಾರಕ್ಕೆ ತೊಡಗದಂತೆ ಧರ್ಮೋಪದೇಶದಲ್ಲಿ ಪಾವಿತ್ರ್ಯವನ್ನು ಉಳಿಸಿಕೊಳ್ಳುವಂತೆ ಭೀಮಸೇನ ಈ ಬಗೆಯ ಪರೀಕ್ಷೆಯ ವ್ಯವಸ್ಥೆಯನ್ನೂ ಸಹ ಏರ್ಪಡಿಸಿದ್ದ ಎಂದು ಅರ್ಥ. ಇದರಿಂದಾಗಿ ಧರ್ಮಾಚರಣೆ ಯಥಾವತ್ತಾಗಿ ನಡೆದಿತ್ತು.

ರಾಮರಾಜ್ಯದಂತಹ ಧರ್ಮರಾಜ್ಯ

ನಾವೈಷ್ಣವಃ ಕಶ್ಚಿದಭೂತ್ ಕುತಶ್ಚಿ-
ನ್ನೈವಾನ್ಯನಿಷ್ಠೋ ನ ಚ ಧರ್ಮಹಂತಾ ।
ನ ವಿಧ್ಯವರ್ತೀ ನ ಚ ದುಃಖಿತೋಽಭೂ-
ನ್ನಾಪೂರ್ಣವಿತ್ತಶ್ಚ ತದೀಯರಾಷ್ಟ್ರೇ ॥ ೧೫ ॥

ಅ: ಆ ಭೀಮನ ರಾಜ್ಯದಲ್ಲಿ ಯಾವನೂ ಯಾವ ಕಾರಣದಿಂದಲೂ ಅವೈಷ್ಣವನಾಗಿರಲಿಲ್ಲ. ಅನ್ಯ ದೇವತೆಯಲ್ಲಿ ಸರ್ವೋತ್ತಮತ್ವ ನಿಷ್ಠೆಯನ್ನು ಹೊಂದಿದವನಾಗಲೀ, ಧರ್ಮಭ್ರಷ್ಟನಾಗಲೀ ಇರಲಿಲ್ಲ, ಶಾಸ್ತ್ರವಿಧಿಯನ್ನು ಮೀರುವವನಿರಲಿಲ್ಲ, ದುಃಖಿತನಿರಲಿಲ್ಲ, ದರಿದ್ರನೂ ಇರಲಿಲ್ಲ.

---

೧೪. ಮುದೈವಾನುಜಗ್ರಾಹೇತಿ ಯೋಜನಾ। ಗ್ರಾಮೇ ಗ್ರಾಮೇ ನಿಯುಕ್ತಾಃ ಪಂಚಪಂಚ ವಿಪ್ರಾ ವಿತ್ತಗ್ರಹಣಾದಿನಾ ಔದಾಸೀನ್ಯಂ ಕುರ್ಯುರಿತಿ ಶಂಕಯಾ ಅನ್ಯೈರಪಿ ವಿಪ್ರವರ್ಯೈಸ್ತದ್ವೃತ್ತಂ = ಗ್ರಾಮಗ್ರಾಮಸ್ಥಜನವೃತ್ತಾಂತಂ ಸಂಶೋಧಯನ್ನಿತ್ಯುಕ್ತಮ್। ಯಥಾ = ಯಥಾವತ್ ವ್ಯಧಾತ್ ॥ – (ವಾ.)

೧೪. ಜಗ್ರಾಹ ಚಾನ್ವೇವ ಮುದಾऽಥ ತದ್ಗತಾನಿತ್ಯಸ್ಯ ಭೀಮೋ ಮುದಾ ಸಂತೋಷೇಣ ತದ್ಗಾನ್ ವಿಪ್ರಾನುಗಾನ್। ಅಥೈವವಿಪ್ರಾನುಗಾನಾಂ ಮಂಗಲಾರ್ಥಮೇವಾನುಜಗ್ರಾ ಚೇತಿ। – (ಸ.)

೧೫. ಅನ್ಯನಿಷ್ಠಃ ರಮಾದ್ಯನ್ಯದೇವತಾಸು ಸರ್ವೋತ್ತಮತ್ವೇನ ಭಕ್ತಿನಿಷ್ಠೋ ನೈವ ... । – (ಜ.)

ವಿ: ಭೀಮನ ರಾಜ್ಯದಲ್ಲಿ ಇತರ ದೇವತೆಗಳ ಆರಾಧಕರು ಇರಲಿಲ್ಲ ಎಂದರೆ ಸರ್ವೋತ್ತಮತ್ವೇನ ಅನ್ಯದೇವತೆಗಳ ಆರಾಧನೆಯನ್ನು ಮಾಡುವವರಿರಲಿಲ್ಲ. ತಾರತಮ್ಯ ಕ್ರಮದಲ್ಲಿಯೇ ವಿಷ್ಣುಪರಿವಾರವೆಂಬ ಭಾವನೆಯಿಂದಲೇ ಇತರ ದೇವತೆಗಳನ್ನು ಆರಾಧಿಸುತ್ತಿದ್ದರು ಎಂದರ್ಥ.

ವಾಸಿಷ್ಠವೃಷ್ಣಿಪ್ರವರೌ ಪ್ರಪಶ್ಯತಾಂ
ತಾಭ್ಯಾಂ ಚ ಭೀಮೇನ ಮುನೀಶ್ವರೈಶ್ಚ।
ಸಂಶಿಕ್ಷಿತಾನಾಂ ಪ್ರಥಮಾದ್ಯುಗಾಚ್ಚ
ಗುಣಾಧಿಕಃ ಕಲಿರಾಸೀತ್ ಪ್ರಜಾನಾಮ್ ॥ ೧೬ ॥

ಅ: ವೇದವ್ಯಾಸರನ್ನು, ಕೃಷ್ಣನನ್ನು ಸಂದರ್ಶಿಸುತ್ತಾ ಅವರಿಬ್ಬರಿಂದಲೂ ಭೀಮನಿಂದಲೂ ಮುನಿವರ್ಯರುಗಳಿಂದಲೂ ತತ್ತ್ವೋಪದೇಶ ಪಡೆಯುತ್ತಿದ್ದ ಪ್ರಜೆಗಳಿಗೆ ಕಲಿಯುಗ ಮೊದಲನೆಯದಾದ ಕೃತಯುಗಕ್ಕಿಂತ ಗುಣದಲ್ಲಿ ಮಿಗಿಲೆನ್ನಿಸಿತು.

ವಿ: ವ್ಯಾಸ ಕೃಷ್ಣರ ದರ್ಶನ, ಅವರ ಉಪದೇಶ ಶ್ರವಣ, ಭೀಮೋಪದೇಶ, ಋಷಿ ಮುನಿಗಳ ಉಪದೇಶ ಮೊದಲಾದ ಮಹಾಭಾಗ್ಯದಿಂದಾಗಿ ಆ ರಾಜ್ಯದ ಪ್ರಜೆಗಳಿಗೆ ಕಲಿಯುಗ ಕೃತಯುಗವನ್ನೂ ಮೀರಿಸುವಷ್ಟು ಪುಣ್ಯಕರವಾಗಿದ್ದಿತು ಎಂದರ್ಥ.

ಕೃತಯುಗಕ್ಕಿಂತ ಮಿಗಿಲಾದ ಕಲಿಯುಗ

ಶುಭಂ ಮಹತ್ ಸ್ವಲ್ಪಫಲಂ ಕೃತೇ ಹಿ
ವಿಪರ್ಯಯೇಣಾಶುಭಮೇಷ ದೋಷಃ।
ತದ್ದೀನಮಪ್ಯುಚ್ಚಶುಭಂ ಕೃತಾದ್ಯುಗಾ-
ಚ್ಚಕ್ರೇ ಕಲಿಂ ಮಾರುತಿರಚ್ಯುತಾಶ್ರಯಾತ್ ॥ ೧೭ ॥

---

೧೬. ವಾಸಿಷ್ಠವೃಷ್ಣಿಪ್ರವರೌ ಪ್ರಪಶ್ಯತಾಮಿತ್ಯತ್ರ ವ್ಯತ್ಯಯೋ ಬಹುಲಮಿತಿ ವಚನಾತ್ ಪ್ರಪಶ್ಯತಾಂ = ಪ್ರಪಶ್ಯಂತೀನಾಂ ಪ್ರಜಾನಾಮಿತ್ಯರ್ಥಃ। ನಿತ್ಯಸ್ತ್ರೀಲಿಂಗಪ್ರಜಾಶಬ್ದವಾಚ್ಯತ್ವೇಽಪಿ ಸ್ವರೂಪತಃ ಪುಂಸ್ತ್ವದ್ಯೋತನಂ ತತ್ಫಲಮ್। ಯದ್ವಾ ಸದಾ ಸ್ವಗೃಹ ಏವ ರತತ್ವಾತ್ ವಾಸಿಷ್ಠವೃಷ್ಣಿಪ್ರವರೌ ಪ್ರ = ಪ್ರಕರ್ಷೇಣ ಪಶ್ಯತಾಂ ಪಾಂಡವಾನಾಂ ಪ್ರಜಾನಾಮಿತಿ ವ್ಯಧಿಕರಣಷಷ್ಠೀ। ಅಥವಾ ಪ್ರಪಶ್ಯತಾಮಿತಿ ಲೋಟಿ ಪರಸ್ಮೈಪದೇ ದ್ವಿವಚನಮ್। ಏವಂ ಚ ವಾಸಿಷ್ಠವೃಷ್ಣಿಪ್ರವರೌ ಪ್ರಪಶ್ಯತಾಂ= ಅಸ್ಮಾಭಿಃ ಕ್ರಿಯಮಾಣಶಿಕ್ಷಾಕೌಶಲಂ ಪ್ರಪಶ್ಯತಾಂ ಪ್ರಕರ್ಷೇಣ ಪಶ್ಯತಾಮಿತಿ। ಗ್ರಾಮಂ ಗ್ರಾಮಂ ಗತ್ವಾ ಮುನೀಶ್ವರೈಃ ಸಂಶಿಕ್ಷಿತಾನಾಂ ಪ್ರಜಾನಾಮಿತಿ ಸಂಬಂಧಃ। ಕಲಿಃ= ಕಲಿಯುಗಃ ॥ – (ವಾ.)

ಅ: ಕೃತಯುಗದಲ್ಲಿ ಮಹತ್ತರ ಪುಣ್ಯಕಾರ್ಯಕ್ಕೂ ಸ್ವಲ್ಪವೇ ಫಲ, ಅದಕ್ಕೆ ವಿರುದ್ಧವಾಗಿ ಸ್ವಲ್ಪ ಪಾಪಕ್ಕೂ ಮಹತ್ತರವಾದ ದುಷ್ಫಲ; ಇದು ಅದರ ದೋಷ. ಆದರೆ, ಆ ದೋಷವಿಲ್ಲದೇ ತುಂಬಾ ಪುಣ್ಯಪ್ರದವಾಗಿರುವ ಮೂಲಕ ಕೃತಯುಗಕ್ಕಿಂತಲೂ ಹೆಚ್ಚು ಪುಣ್ಯಪ್ರದವನ್ನಾಗಿ ಭೀಮಸೇನ ಹರಿಯ ಅನುಗ್ರಹದಿಂದ ಮಾಡಿದ.

ವಿ: ೧) ದುರ್ಭಿಕ್ಷೆಯ ಕಾಲದ ಅನ್ನದಾನ ಸುಭಿಕ್ಷೆಯ ಕಾಲದ ಅನ್ನದಾನಕ್ಕಿಂತ ಶ್ರೇಷ್ಠ. ಆಗ ಸ್ವಲ್ಪ ಅನ್ನ ನೀಡುವುದೂ ಮಹಾಪುಣ್ಯಕರ. ಕಲಿಯುಗ ಜ್ಞಾನಾದಿಗುಣಗಳಿಗೆ ದೂರವಿರುವ ಯುಗ. ಅಂತಹ ಯುಗದಲ್ಲೂ ಸಹ ಪೂರ್ಣಪ್ರಮಾಣದಲ್ಲಿ ಧರ್ಮಾಚರಣೆಗೆ ಕೃಷ್ಣ ಭೀಮರ ಆಸರೆಯಿಂದಾಗಿ ಅವಕಾಶ ಲಭಿಸಿದ್ದರಿಂದ ಅವರಿಗೆ ಕೃತಯುಗಕ್ಕಿಂತಲೂ ಮಿಗಿಲಾದ ಸಾಧನೆಯನ್ನು ಮಾಡಲು ಕಲಿಯುಗದಲ್ಲಿ ಸಾಧ್ಯವಾಯಿತು ಎಂದರ್ಥ.

---

೧೭. ಶುಭಂ ಮಹತ್ಸ್ವಲ್ಪಫಲಮಿತ್ಯತ್ರ ಕೃತೇ ಯುಗೇ ಮಹಚ್ಛುಭಮಪಿ ಸ್ವಲ್ಪಫಲಂ ಭವತಿ। ಸರ್ವೇಷಾಂ ಶುಭಕಾರಿತ್ವಾತ್ ತನ್ಮಧ್ಯೇ ಏಕಸ್ಯ ಶುಭಕಾರಿತ್ವಂ ಅಪೂರ್ವಂ ಚ ನ। ಅತೋ ಯಥಾ ಸುಭಿಕ್ಷೇऽನ್ನದಾತುಃ ದುರ್ಭಿಕ್ಷೇऽನ್ನದಾತೃವತ್ ಮಹಾಫಲಂ ನಾಸ್ತಿ ತಥಾ ಕೃತಯುಗೇऽಪಿ ಶುಭಸ್ಯ ಫಲಾಧಿಕ್ಯಂ ನಾಸ್ತೀತಿ ಭಾವಃ। ಅಶುಭಂ ವಿಪರ್ಯಯೇಣ ಅಲ್ಪೇऽಶುಭೇ ಕೃತೇऽಪಿ ಬಹುಪಾಪಂ ಭವತಿ। ಅಶುಭಕರ್ತೃಣಾಂ ಕ್ವಾಪ್ಯಭಾವಕಾಲೇ ಏಕೋऽಶುಭಕರ್ತಾ ಮಹಾನಿಂದ್ಯೋ ಭವತೀತಿ ಭಾವಃ। ಏಷ ಕೃತಯುಗಸ್ಯ ದೋಷಃ। ತದ್ದೀನಂ= ತೇನ ದೋಷೇಣ ಹೀನಂ ಕಲಿಯುಗಮ್। ಉಚ್ಚಶುಭಮಪಿ ಉಚ್ಚಾನಿ ಶುಭಾನಿ ಗ್ರಾಮೇ ಯಸ್ಮಿನ್ ತತ್ ಉಚ್ಚಶುಭಂ ಚ। ಅಲ್ಪೇ ಪುಣ್ಯೇ ಕೃತೇऽಪಿ ಯುಗಸ್ವಭಾವಾತ್ ಕೃಷ್ಣಸಂದರ್ಶನಾದಿನಾ ಉಪೋದ್ಬಲಿತತ್ವಾಚ್ಚ ಮಹಾಫಲದಾಯಕಮ್। ಬಹ್ವಶುಭೇ ಕೃತೇऽಪಿ ಯುಗಸ್ವಭಾವಾತ್ ಕೃಷ್ಣಸಂದರ್ಶನಾದಿನಾ ಬಹುತರಪಾಪಾನಾಂ ಕ್ಷಣೇ ಕ್ಷಣೇ ನಾಶಾಚ್ಚ ಅಲ್ಪಫಲದಾಯಕಮಿತ್ಯರ್ಥಃ। ಸ್ವರಾಷ್ಟ್ರೇ ಭೀಮಶಿಕ್ಷಯಾ ಬಹುತರಪಾಪಕರಣಸ್ಯ ಅಸಂಭವೇऽಪಿ ಪರರಾಷ್ಟ್ರಾತ್ ಬಹುತರಪಾಪಂ ಕೃತ್ವಾऽऽಗತಾನಾಮಪಿ ಕ್ಷಣೇ ಕ್ಷಣೇ ಕೃಷ್ಣಸಂದರ್ಶನಾದಿನಾ ಪ್ರಾಯಶಃ ಕೃತಪ್ರಾಯಶ್ಚಿತ್ತತ್ವಾತ್ ಅಲ್ಪಫಲದಂ ಭವತೀತಿ ಭಾವಃ। ಅತ ಏವ ಆಚ್ಯುತಸಂಶ್ರಯಾದಿತ್ಯುಕ್ತಮ್। ಅತ್ಯಂತಂ ತೃಷಿತತಯಾ ಕಿಂಚಿಜ್ಜಲಂ ದೇಹೀತಿ ಪ್ರಾರ್ಥಯಮಾನಸ್ಯ ಬಹುಜಲದಾನೇ ಕೈಮುತ್ಯೇನ ತೃಟ್‌ಪರಿಹಾರವತ್ ಉಕ್ತವಿಧಯಾऽಲ್ಪಶುಭೇನಾಪಿ ಬಹುಫಲದಾತರಿ ಸ್ವರಾಷ್ಟ್ರೇ ಶುಭಾನ್ಯಪಿ ಬಹೂನಿ ಗ್ರಾಮೇ ಗ್ರಾಮೇ ಕಾರಯಾಮಾಸೇತಿ ಭಾವಃ। ಕಲಿಂ = ಕಲಿಯುಗಂ ಚಕ್ರೇ। ಈದೃಶಗುಣಭರಿತಂ ಚಕ್ರ ಇತಿ ಯೋಜನಾ। ಅಲ್ಪಪುಣ್ಯೇನಾಪಿ ಬಹುಫಲದಾಯಕೇ ಕಲಿಯುಗೇ ಸ್ವಸ್ಯಾಜ್ಞಾಶಕ್ತ್ಯಾ ಸದಾ ಸರ್ವತ್ರ ಪುಣ್ಯೈಕರತಾನೇವ ಸರ್ವಾನ್ ಜನಾನ್ ಚಕಾರ। ತಸ್ಮಾತ್ ಪಾಂಡವರಾಜ್ಯಸ್ಥನೃಣಾಂ ಭಾಗ್ಯಂ ಕಿಂ ವರ್ಣನೀಯಮಿತಿ ಹೃದಯಮ್ ॥ – (ವಾ.)

೧೭. ಕಲೇರ್ದೋಷನಿಧೇ ರಾಜನ್ನಸ್ತ್ಯೇಕೋ ಮಹಾನ್ ಗುಣಃ।
ಕೀರ್ತನಾದೇವ ಕೃಷ್ಣಸ್ಯ ಮುಕ್ತಸಂಗಃ ಪರಂ ವ್ರಜೇತ್ ॥ – ಭಾಗವತ (೧೨/೩/೫೧)

ಬ್ರಹ್ಮನಿಷ್ಠಾ ಬ್ರಹ್ಮರತಾ ಬ್ರಹ್ಮಜ್ಞಾನಸುತರ್ಪಿತಾಃ।
ಪಾಂಡವಾನಾಂ ಚ ಮುಕ್ತಾನಮಂತರಂ ಕಿಂಚಿದೇವ ಹಿ ॥ (ಭವಿಷ್ಯತ್ಪರ್ವ) – ಗೀ.ತಾ. (೩/೧೯)

೨) ಕೃಷ್ಣ ಭೀಮರ ನೇತೃತ್ವದಲ್ಲಿ ಕಲಿಯುಗ ಆಗ ಹಾಗೆ ಮಿಗಿಲೆನ್ನಿಸಿದರೆ, ಆ ಕೃಷ್ಣ ಭೀಮರೇ ಆದ ವ್ಯಾಸ–ಮಧ್ವರ ಕೃತಿಗಳಿಂದಾಗಿ ಕಲಿಯುಗ ಸಹ ಕೃತಯುಗಕ್ಕಿಂತ ಮಿಗಿಲೆನ್ನಿಸಿ ಮಾನ್ಯವಾಗಿದೆ ಎಂಬ ಪ್ರಮೇಯ ವಿಶೇಷವನ್ನು ಇಲ್ಲಿ ತಿಳಿಯಬಹುದು.

ಅರ್ಜುನನ ಜೀವನ ವೈಖರಿ

ಧನಂಜಯಃ ಪ್ರೋದ್ಯತದಂಡ ಆಸೀತ್
ಸದಾಽನ್ಯಚಕ್ರೇಷು ನಿಜಾಗ್ರಜೇರಿತಃ ।
ವಿಭೀಷಯಿತ್ವಾ ನೃಪತೀನ್ ಸರತ್ನಾನ್
ಪದೋರ್ನೃಪಸ್ಯಾಗ್ರಭುವೋ ನ್ಯಪಾತಯತ್ ॥ ೧೮ ॥

ಅ: ಅರ್ಜುನ ಪರರಾಷ್ಟ್ರಗಳ ಮೇಲೆ ಸದಾ ದಂಡಯಾತ್ರೆಯಲ್ಲಿ ತೊಡಗಿದ. ಅವನು ತನ್ನ ಅಣ್ಣಂದಿರ ಆದೇಶದಂತೆ ಪರರಾಷ್ಟ್ರಗಳ ರಾಜರುಗಳನ್ನು ಬೆದರಿಸಿ ರತ್ನಸಮೇತವಾಗಿ ಅವರನ್ನು ಧರ್ಮರಾಜನ ಪಾದಗಳ ಮೇಲೆ ಬೀಳಿಸಿದ.

ವಿ: ಅರ್ಜುನ ಆದಷ್ಟು ಯುದ್ಧಗಳನ್ನು ತಪ್ಪಿಸಿ ಧರ್ಮರಾಜನ ಆದೇಶದಂತೆ ಕೇವಲ ಬೆದರಿಸಿಯಷ್ಟೇ ಇತರ ರಾಜರುಗಳನ್ನು ವಶವರ್ತಿಗಳನ್ನಾಗಿ ಮಾಡುತ್ತಿದ್ದ ಎಂದರ್ಥ.

ಸದಾ ಕೃಷ್ಣನಿಂದ ತತ್ತ್ವಶ್ರವಣ ಮಾಡಿದ ಅರ್ಜುನ

ಸದೈವ ಕೃಷ್ಣಸ್ಯ ಮುಖಾರವಿಂದಾ-
ದ್ವಿನಿಃಸೃತಂ ತತ್ತ್ವವಿನಿರ್ಣಯಾಮೃತಮ್ ।
ಪಿಬನ್ ಸುತಾದ್ಯಾಧಿಮಸೌ ಕ್ರಮೇಣ
ತ್ಯಜಂಶ್ಚ ರೇಮೇಽವಿರತಾತಿಭೋಗಃ ॥ ೧೯ ॥

---

೧೮. ನೃಪಸ್ಯಾಗ್ರಭುವ ಇತ್ಯತ್ರ ಅಗ್ರೇ ಭವತೀತಿ ಅಗ್ರಭೂಃ ಅಗ್ರಜಃ। ತಸ್ಯ ನೃಪಸ್ಯ ಪದೋರ್ನ್ಯಪಾತಯತ್॥ –(ವಾ.)

೧೮. 'ಧನಂಜಯಃ ಪ್ರೋದ್ಯತದಂಡ ಆಸೀತ್ ಸದಾನ್ಯಚಕ್ರೇಷು ನಿಜಾಗ್ರಜೇರಿತಃ' ಇತ್ಯತ್ರ ನಿಜಾಗ್ರಜಃ ಸಾಕ್ಷಾದಗ್ರಜೋ ಭೀಮಸ್ತೇನೇರಿತ ಇತ್ಯರ್ಥಃ । ನಿಜಶಬ್ದೇನ ಭೀಮಗ್ರಹಣಾಭಾವೇ ಅಗ್ರಜ ಇತ್ಯನೇನೈವ ಪೂರ್ತೇಃ ನಿಜಶಬ್ದಸ್ಯ ವೈಯರ್ಥ್ಯಾಪಾತಾತ್ । 'ನಿಜಮಾತ್ಮೀಯನಿತ್ಯಯೋಃ' ಇತ್ಯಭಿಧಾನಮ್ । ಅತ ಏವ ಅಗ್ರೇ 'ವಿಭಿಷಯಿತ್ವಾ ನೃಪತೀನ್ ಸಪತ್ನಾನ್ಪದೋರ್ನ್ಯಪಸ್ಯಾಗ್ರಭುವೋ ನ್ಯಪಾತಯತ್' ಇತಿ ಅಗ್ರಭುವೋ ನೃಪಸ್ಯೇತಿ ಸಾಮಾನ್ಯೇನೋಕ್ತಮ್ ॥ –(ತಿ.)

ಅ: ಸದಾ ಕೃಷ್ಣನ ಮುಖಕಮಲದಿಂದ ಸುರಿಯುವ ತತ್ವವಿನಿರ್ಣಯವೆಂಬ ಅಮೃತವನ್ನು ಪಾನ ಮಾಡುತ್ತಾ ಅರ್ಜುನ ಕ್ರಮವಾಗಿ ಪುತ್ರಹಾನಿಶೋಕ ಮೊದಲಾದವುಗಳನ್ನು ತೊರೆದು ಅತಿಭೋಗಗಳಲ್ಲಿ ತೊಡಗದೇ ಆನಂದಿಸಿದ.

ವಿ: ಅನೇಕ ವರ್ಷಗಳ ಕಾಲ ಕೃಷ್ಣ ಪಾಂಡವರೊಂದಿಗೆ ನೆಲೆಸಿದ್ದರಿಂದ ಅರ್ಜುನನಿಗೆ ಅವನ ಉಪದೇಶ ವಿಶೇಷವನ್ನು ಶ್ರವಣ ಮಾಡುವ ಸುಯೋಗ ಲಭಿಸಿ ಅದರಿಂದಾಗಿ ಅಭಿಮನ್ಯು ಮೊದಲಾದವರ ನಿಧನದ ನೋವನ್ನು ಮರೆಯಲು ಸಾಧ್ಯವಾಯಿತು. ಅನಂತರವೂ ಅರ್ಜುನ ಅತಿಭೋಗಗಳನ್ನು ತೊರೆದು ಆನಂದದಿಂದ ಬಾಳಿದ ಎಂದರ್ಥ.

ದುಃಶಾಸನನ ಮನೆಯಲ್ಲಿ ಅರ್ಜುನನ ಸಂಸಾರ

ದುಃಶಾಸನಸ್ಯಾವಸಥಂ ಸುಭದ್ರಾ-
ಚಿತ್ರಾಂಗದಾಸಹಿತೋಽಧ್ಯಾವಸಂಶ್ಚ।
ಸಚಂದ್ರಿಕಾಕಾಂತಿರನೂನಬಿಂಬೋ
ನಭಸ್ಥಿತಶ್ಚಂದ್ರ ಇವಾತ್ಯರೋಚತ ॥ ೨೦ ॥

ಅ: ಅರ್ಜುನ ಸುಭದ್ರೆ, ಚಿತ್ರಾಂಗದೆಯರೊಂದಿಗೆ ದುಃಶಾಸನನ ಮನೆಯಲ್ಲಿ ನೆಲೆಸಿದ. ಚಂದ್ರಿಕಾ ಮತ್ತು ಕಾಂತಿಯೆಂಬ ಇಬ್ಬರು ಪತ್ನಿಯರೊಂದಿಗೆ ಗಗನದಲ್ಲಿನ ಚಂದ್ರನಂತೆ ಪೂರ್ಣ ಬಿಂಬನಾಗಿ ಬಹಳವಾಗಿ ಕಂಗೊಳಿಸಿದ.

ವಿ: ಸುಭದ್ರೆ, ಚಿತ್ರಾಂಗದೆಯರೊಂದಿಗೆ ನೆಲೆಸಿದ ಅರ್ಜುನ ಚಂದ್ರಿಕಾ ಕಾಂತಿಯರೊಂದಿಗೆ ಕೂಡಿದ ಚಂದ್ರನಂತೆ ಶೋಭಿಸಿದ ಎಂದರ್ಥ.

---

೨೦. ಸಚಂದ್ರಿಕಾಕಾಂತಿರಿತ್ಯತ್ರ ಸಚಂದ್ರಿಕಾಕಾಂತಿಃ = ಚಂದ್ರಿಕಾಖ್ಯಯಾ ಕಾಂತ್ಯಾಖ್ಯಯಾ ಚ ಭಾರ್ಯಯಾ ಸಹಿತ ಇತ್ಯರ್ಥಃ ॥ – (ವಾ.)

೨೦. ಚಿತ್ರಾಂಗದಾ ಅಶ್ವಮೇಧಯಾಗಸಮಯೇ ಪಾಂಡ್ಯವಿಷಯಾದರ್ಜುನಾಲಯಂ ಪ್ರತ್ಯಾಗತ್ಯ ಅತ್ರೈವ ಸ್ಥಿತಾ । ಅತ ಏವ ಚಿತ್ರಾಂಗದಾಸಹಿತ ಇತ್ಯುಕ್ತಮಿತಿ ಭಾವಃ । – (ಜ.)

೨೦. ಸಚಂದ್ರಿಕಾಕಾಂತಿರಿತ್ಯತ್ರ ಅರ್ಜುನವಿಶೇಷಣೇ ಸ ಇತಿ ಭಿನ್ನಂ ಪದಮ್ । ಚಂದ್ರವಿಶೇಷಣೇ ಏಕಂ ಪದಮ್। – (ಜ.)

೨೦. ಚಂದ್ರಿಕಾಯಾ ಕಾಂತ್ಯಾ ಚ ಸಹ ವರ್ತಮಾನೋ ನೂನಬಿಂಬಃ ಪೂರ್ಣಬಿಂಬಃ ನಭಸ್ಥಿತಚಂದ್ರ ಇವೇತಿ ॥ – (ವ.)

ನಕುಲ ಸಹದೇವರ ಕಾರ್ಯ

ಸಮಸ್ತಭೃತ್ಯಾಶ್ರಿತವೇತನಾನಾಂ
ಮಾದ್ರೇಯ ಆಸೀತ್ ಪ್ರಥಮಃ ಪ್ರದಾತಾ ।
ಸ ದುರ್ಮುಖಸ್ಯಾವಸಥೇಽವಸಚ್ಚ
ಸ ಮದ್ರರಾಜಾತ್ಮಜಯಾಽಗ್ರ್ಯವರ್ತೀ ॥ ೨೧ ॥

ಅ: ಸಮಸ್ತ ಭೃತ್ಯರಿಗೂ ಆಶ್ರಿತರಿಗೂ ವೇತನ ನೀಡುವವನಾಗಿ ನಕುಲನಿದ್ದ. ಅವನು ದುರ್ಮುಖನ ಮನೆಯಲ್ಲಿ ಶಲ್ಯನ ಮಗಳೊಂದಿಗೆ ಅಣ್ಣಂದಿರ ಆಜ್ಞಾಧಾರಕನಾಗಿ ನೆಲೆಸಿದ.

ಸಂಧಾನಭೇದಾನುಗತಪ್ರವೃತ್ತಿ-
ಸ್ತಿಷ್ಠಂಶ್ಚ ದುರ್ಮರ್ಷಣಶುಭ್ರಸದ್ಮನಿ ।
ನೃಪಾಂಗರಕ್ಷಃ ಪ್ರಗೃಹೀತಖಡ್ಗ-
ಸ್ತಸ್ಯಾನುಜೋ ಮಾಗಧಕನ್ಯಯಾಽಽಸೀತ್ ॥ ೨೨ ॥

ಅ: ಅವನ ತಮ್ಮನಾದ ಸಹದೇವ ಸಂಧಿ, ವಿಗ್ರಹ ಮೊದಲಾದವುಗಳಲ್ಲಿ ತೊಡಗಿದವನಾಗಿ ದುರ್ಮರ್ಷಣನ ಶುಭ್ರವಾದ ಮನೆಯಲ್ಲಿ ನೆಲೆಸಿದ. ಖಡ್ಗಪಾಣಿಯಾಗಿ ಅವನು ಧರ್ಮರಾಜನಿಗೆ ಅಂಗರಕ್ಷಕನಾಗಿ ಇದ್ದು ಜರಾಸಂಧಪುತ್ರಿಯೊಂದಿಗೆ ವಿಹರಿಸಿದ.

ವಿ: ಇಂದ್ರಪ್ರಸ್ಥದಲ್ಲಿ ರಾಜ್ಯಭಾರ ಮಾಡುತ್ತಿದ್ದಾಗಲೂ ಸಹದೇವ ಹೀಗೆ ಧರ್ಮರಾಜನಿಗೆ ಅಂಗರಕ್ಷಕನಾಗಿದ್ದ ವಿವರ ಈಗಾಗಲೇ ಬಂದಿದೆ (೨೦/೫).

ಸೇನಾಪತಿಯಾಗಿ ಕೃಪ - ಧೃತರಾಷ್ಟ್ರನ ಸೇವೆಗೆ ಯುಯುತ್ಸು ಮೊದಲಾದವರು

ಸೇನಾಪತಿಃ ಕೃಪ ಆಸೀದ್ಯುಯುತ್ಸುಃ
ಸಸಂಜಯೋ ವಿದುರಶ್ಚಾಂಬಿಕೇಯಮ್ ।
ಪಾರ್ಥೇರಿತಾಃ ಪರ್ಯಚರನ್ ಸ್ವಯಂ ಚ
ಸರ್ವೇ ಯಥಾ ದೈವತಮಾದರೇಣ ॥ ೨೩ ॥

---

೨೧. ಅಗ್ರ್ಯವರ್ತೀತ್ಯತ್ರ ಅಗ್ರ್ಯಃ= ಶ್ರೇಷ್ಠಃ। ತದನುವರ್ತೀ। ಅಗ್ರ್ಯಮಾರ್ಗೇ ವರ್ತತ ಇತಿ ವಾ ಅಗ್ರ್ಯವರ್ತೀ ॥ –(ವಾ.)

ಅ: ಕೃಪಾಚಾರ್ಯ ಪಾಂಡವರಿಗೆ ಸೇನಾಪತಿಯಾದ. ಯುಯುತ್ಸು, ಸಂಜಯ, ವಿದುರ ಮೂವರೂ ಪಾಂಡವರ ಆದೇಶದಂತೆ ಧೃತರಾಷ್ಟ್ರನನ್ನು ಸೇವಿಸಿದರು. ಅವರೊಂದಿಗೆ ಸ್ವತಃ ಪಾಂಡವರೂ ಸಹ ಅವನನ್ನು ದೇವತೆಯನ್ನು ಹೇಗೋ ಹಾಗೆ ಆದರದಿಂದ ಸೇವಿಸಿದರು.

ವಿ: ೧) ಪಾಂಡವರಿಗೆ ಇಂದ್ರಪ್ರಸ್ಥದಿಂದ ಯುದ್ಧ ಮುಕ್ತಾಯದ ವರೆಗೆ ಸೇನಾಧಿಪತಿ–ಯಾಗಿದ್ದವನು ಧೃಷ್ಟದ್ಯುಮ್ನ, ಅವನು ಅಶ್ವತ್ಥಾಮರಿಂದ ಹತನಾದ್ದರಿಂದ ಅವನ ಸ್ಥಾನದಲ್ಲಿ ಕೃಪಾಚಾರ್ಯರು ಸೇನಾಪತ್ಯವನ್ನು ವಹಿಸಿದರು ಎಂದರ್ಥ.

೨) ತಮಗೆ ಬಗೆಬಗೆಯಲ್ಲಿ ದ್ರೋಹ ಬಗೆದ ದುರ್ಯೋಧನಾದಿಗಳಿಗೆ ಸಹಕಾರಿಯಾಗಿದ್ದ ಧೃತರಾಷ್ಟ್ರನನ್ನೂ ಪಾಂಡವರು ಯಾವುದೇ ಸೇಡಿನ ಭಾವನೆಯಿಲ್ಲದೇ ಅತ್ಯಂತ ಆದರಭಾವ–ದಿಂದಲೇ ಕಂಡರು ಎಂಬುದು ಇಲ್ಲಿಯ ವಿಶೇಷ.

ಪಾಂಡವಕೀರ್ತಿನಾರಿ

ದ್ವಿರೂಪಕೃಷ್ಣಪ್ರಹಿತೇಷು ಪಾಂಡುಷು
ಕ್ಷಿತಿಂ ಪ್ರಶಾಸತ್ಸು ನ ಕಶ್ಚನಾತುರಃ ।
ನ ಚಾಕ್ರಮಾನ್ಮೃತ್ಯುರಭೂನ್ನ ನಾರ್ಯೋ
ವಿಭರ್ತೃಕಾ ನೋ ವಿಧುರಾ ನರಾಶ್ಚ ॥ ೨೪ ॥

ಅ: ವ್ಯಾಸ, ಕೃಷ್ಣರೆಂಬ ಎರಡು ರೂಪಗಳಿಂದ ಪಾಲಿತರಾದ ಪಾಂಡವರು ಭೂಮಿಯನ್ನು ಆಳುತ್ತಿದ್ದಾಗ ಒಬ್ಬನೂ ರೋಗಿಯಾಗಿರಲಿಲ್ಲ. ಅಕ್ರಮದಿಂದ ಮರಣಿಸುತ್ತಿರಲಿಲ್ಲ, ಸ್ತ್ರೀಯರು ವಿಧವೆಯರಾಗುತ್ತಿರಲಿಲ್ಲ, ಪುರುಷರು ವಿಧುರರಾಗುತ್ತಿರಲಿಲ್ಲ.

ವಿ: ೧) ಅಕ್ರಮ ಮೃತ್ಯುವೆಂದರೆ ವಿಪರ್ಯಯ ಮೃತಿ ಎಂದರ್ಥ. ರಾಮಾಯಣದಲ್ಲಿ ಬ್ರಾಹ್ಮಣನೊಬ್ಬ ತಾನು ಬದುಕಿರುವಾಗಲೇ ತನ್ನ ಮಗ ಸತ್ತದ್ದೇತಕೆ ಎಂದು ಶ್ರೀರಾಮನನ್ನು ಪ್ರಾರ್ಥಿಸಿದ ಪ್ರಸಂಗ ಇದಕ್ಕೆ ನಿದರ್ಶನ. ತಂದೆ ತಾಯಿಗಳೆದುರಿಗೆ ಮಕ್ಕಳು, ಹಿರಿಯರೆದುರಿಗೆ ಕಿರಿಯರು ಸಾಯುವುದು ಅಂತಹ ಮರಣ ಎಂದು ಅದಕ್ಕೆ ವಿವರಣೆ ಬಂದಿದೆ.

---

೨೩. ಸ್ವಯಂ ಚ ಸರ್ವ ಇತ್ಯತ್ರ ಸ್ವಯಂ ಸರ್ವೇ = ಭೀಮಾದ್ಯಾಶ್ಚ ಯಥಾದೈವತಂ= ದೈವತಂ ಯಥಾ ತಥಾ ಆದರೇಣ ಆಂಬಿಕೇಯಂ ಪರ್ಯಚರನ್ನಿತಿ ಯೋಜನಾ ॥ – (ವಾ.)

೨೪. ಅಕ್ರಮಾನ್ಮೃತ್ಯುಃ ವೃದ್ಧಾತ್ ಪೂರ್ವಂ ಬಾಲಮೃತಿಃ । - (ಜ.)

೨೪. ಪುರುಷಾಃ ವಿಧುರಾಃ ಮೃತಸ್ತ್ರೀಕಾಃ ನೋ ಆಸನ್ ॥ – (ವ.)

೨) ರೋಗಾದಿಗಳೆಲ್ಲ ಪಾಪದ ಫಲ, ಪಾಂಡವರ ರಾಜ್ಯದಲ್ಲಿ ಪಾಪಕಾರ್ಯಕ್ಕೆ ಅವಕಾಶವೇ ಇರಲಿಲ್ಲವಾದ್ದರಿಂದ ರೋಗಾದಿ ಉಪದ್ರವಗಳೂ ಇರಲಿಲ್ಲ ಎಂದರ್ಥ.

೩) ವಿಧುರನೂ ಇಲ್ಲ; ವಿಧವೆಯೂ ಇಲ್ಲ ಎಂಬ ಬಗ್ಗೆ ವಿವರಣೆ ಆಗಲೇ ಬಂದಿದೆ (೯/೧೦).

---

೨೪. ಅನ್ವಶಾಸದ್ ವೈ ಸ ಧರ್ಮಾತ್ಮಾ ಪೃಥಿವೀಂ ಭ್ರಾತೃಭಿಃ ಸಹ ॥
ಯಥಾ ಮನುರ್ಮಹಾರಾಜೋ ರಾಮೋ ದಾಶರಥಿರ್ಯಥಾ ।
ತಥಾ ಭರತಸಿಂಹೋऽಪಿ ಪಾಲಯಾಮಾಸ ಮೇದಿನೀಮ್ ॥
ನಾಧರ್ಮಮಭವತ್ ತತ್ರ ಸರ್ವೋ ಧರ್ಮರುಚಿರ್ಜನಃ ।
ಬಭೂವ ನರಶಾರ್ದೂಲ ಯಥಾ ಕೃತಯುಗೇ ತಥಾ ॥
ಕಲಿಮಾಸನ್ನಮಾವಿಷ್ಟಂ ನಿವಾಸ್ಯ ನೃಪನಂದನಃ ।
ಭ್ರಾತೃಭಿಃ ಸಹಿತೋ ಧೀಮಾನ್ ಬಭೌ ಧರ್ಮಬಲೋದ್ಧತಃ ॥
ವವರ್ಷ ಭಗವಾನ್ ದೇವಃ ಕಾಲೇ ದೇಶೇ ಯಥೇಪ್ಸಿತಮ್ ।
ನಿರಾಮಯಂ ಜಗದಭೂತ್ ಕ್ಷುತ್ತಿಪಾಸೇ ನ ಕಿಂಚನ ॥
ಆಧಿರ್ನಾಸ್ತಿ ಮನುಷ್ಯಾಣಾಂ ವ್ಯಸನೇ ನಾಭವನ್ಮತಿಃ ।
ಬ್ರಾಹ್ಮಣಪ್ರಮುಖಾ ವರ್ಣಾಸ್ತೇ ಸ್ವಧರ್ಮೋತ್ತರಾಃ ಶಿವಾಃ ॥
ಧರ್ಮಃ ಸತ್ಯಪ್ರಧಾನಶ್ಚ ಸತ್ಯಂ ಸದ್ವಿಷಯಾನ್ವಿತಮ್ ।
ಧರ್ಮಾಸನಸ್ಥಃ ಸದ್ಭಿಃ ಸ ಸ್ತ್ರೀಬಾಲಾತುರವೃದ್ಧಾನ್ ॥
ವರ್ಣಾಶ್ರಮಾನ್ ಪೂರ್ವಕೃತಾನ್ ಸಕಲಾನ್ ರಕ್ಷಣೋದ್ಯತಃ ।
ಅವೃತ್ತಿವೃತ್ತಿದಾನಾ ಆಮುಷ್ಮಿಕಂ ಭಯಂ ನಾಸ್ತಿ ಐಹಿಕಂ ಕೃತಮೇವ ತು ।
ಸ್ವರ್ಗಲೋಕೋಪಮೋ ಲೋಕಸ್ತದಾ ತಸ್ಮಿನ್ ಪ್ರಶಾಸತಿ ॥
ಬಭೂವ ಸುಖಮೇಕಾಗ್ರ್ಯಂ ತದ್ವಿಶಿಷ್ಟತರಂ ಪರಮ್ ॥
ನಾರ್ಯಃ ಪತಿವ್ರತಾಃ ಸರ್ವಾ ರೂಪವತ್ಯಃ ಸ್ವಲಂಕೃತಾಃ ।
ಯಥೋಕ್ತವೃತ್ತಾಸ್ತಾಃ ಸ್ವಗುಣೈರ್ಬಭೂವುಃ ಪ್ರೀತಿಹೇತವಃ ॥
ಪುಮಾಂಸಃ ಪುಣ್ಯಶೀಲಾಢ್ಯಾಃ ಸ್ವಂ ಸ್ವಂ ಧರ್ಮಮನುವ್ರತಾಃ ।
ಸುಖಿನಃ ಸೂಕ್ಷ್ಮಮಪ್ಯೇನೋ ನ ಕುರ್ವಂತಿ ಕದಾಚನ ॥
ಸರ್ವೇ ನರಾಶ್ಚ ನಾರ್ಯಶ್ಚ ಸತತಂ ಪ್ರಿಯವಾದಿನಃ ।
ಅಜಿಹ್ಮಮನಸಃ ಶುಕ್ಲಾಃ ಬಭೂವುಃ ಶ್ರಮವರ್ಜಿತಾಃ ॥
ಭೂಷಿತಾಃ ಕುಂಡಲೈರ್ಹಾರೈಃ ಕಟಕೈಃ ಕಟಿಸೂತ್ರಕೈಃ ।
ಸುವಾಸಸಃ ಸುಗಂಧಾಢ್ಯಾಃ ಪ್ರಾಯಶಃ ಪೃಥಿವೀತಲೇ ॥
ಸರ್ವೇ ಬ್ರಹ್ಮವಿದೋ ವಿಪ್ರಾಃ ಸರ್ವತ್ರ ಪರಿನಿಷ್ಠಿತಾಃ ।
ವಲೀಪಲಿತಹೀನಾಸ್ತು ಸುಖಿನೋ ದೀರ್ಘಜೀವಿನಃ ॥
ಇಚ್ಛಾ ನ ಜಾಯತೇऽನ್ಯತ್ರ ವರ್ಣೇಷು ಚ ನ ಸಂಕರಃ ।
ಮನುಷ್ಯಾಣಾಂ ಮಹಾರಾಜ ಮರ್ಯಾದಾಸು ವ್ಯವಸ್ಥಿತಃ ॥
ತಸ್ಮಿಂಧಾಸತಿ ರಾಜೇಂದ್ರೇ ಮೃಗವ್ಯಾಲಸರೀಸೃಪಾಃ ।
ಅನ್ಯೋನ್ಯಮಪಿ ಚಾನ್ಯೇಷು ನ ಬಾಧಂತೇ ಕದಾಚನ ॥
ಗಾವಃ ಸುಕ್ಷೀರಭೂಯಿಷ್ಠಾಃ ಸುವಾಲಧಿಮುಖೋದರಾಃ ।
ಅಪೀಡಿತಾಃ ಕರ್ಷಕಾದ್ಯೈರ್ಹೃತವ್ಯಾಧಿತವತ್ಸಕಾಃ ॥

ಅವಂಧ್ಯಕಾಲಾ ಮನುಜಾಃ ಪುರುಷಾರ್ಥೇಷು ಚ ಕ್ರಮಾತ್ ।
ವಿಷಯೇಷ್ವನಿಷಿದ್ಧೇಷು ವೇದಶಾಸ್ತ್ರೇಷು ಚ ಚೋದ್ಯತಾಃ ।
ಸುವೃತ್ತಾವೃಷಭಾಃ ಪುಷ್ಪಾಃ ಸುಸ್ವಭಾವಾಃ ಸುಖೋದಯಾಃ ।
ಅತೀವ ಮಧುರಃ ಶಬ್ದಃ ಸ್ಪರ್ಶಶ್ಚಾತಿಸುಖಂ ರಸಮ್ ।
ರೂಪಂ ದೃಷ್ಟಿಕ್ಷಮಂ ರಮ್ಯಂ ಮನೋಜ್ಞಂ ಗಂಧವದ್ ಬಭೌ ॥
ಧರ್ಮಾರ್ಥಕಾಮಸಂಯುಕ್ತಂ ಮೋಕ್ಷಾಭ್ಯುದಯಸಾಧನಮ್ ।
ಪ್ರಹ್ಲಾದಜನನಂ ಪುಣ್ಯಂ ಸಂಬಭೂವಾಥ ಮಾನುಷಮ್ ॥
ಸ್ಥಾವರಾ ಬಹುಪುಷ್ಪಾಢ್ಯಾಃ ಫಲಬ್ಯಾಯಾವಹಾಸ್ತಥಾ ।
ಸುಸ್ಪರ್ಶಾ ವಿಷಹೀನಾಶ್ಚ ಸುಪತ್ರತ್ವಕ್ಪಲೋಹಿಣಃ ॥
ಮನೋಽನುಗ್ಲಾಃ ಸರ್ವೇಷಾಂ ಚೇಷ್ಟಾ ಭೂಸ್ತಾಪವರ್ಜಿತಾ ।
ಯಥಾ ಬಭೂವ ರಾಜರ್ಷಿಸ್ತದ್ವೃತ್ತಮಭವದ್ಭುವಿ ॥
ಸರ್ವಲಕ್ಷಣಸಂಪನ್ನಾಃ ಪಾಂಡವಾ ಧರ್ಮಚಾರಿಣಃ ।
ಜ್ಯೇಷ್ಠಾನುವರ್ತಿನಃ ಸರ್ವೇ ಬಭೂವುಃ ಪ್ರಿಯದರ್ಶನಾಃ ॥
ಸಿಂಹೋರಸ್ಕಾ ಜಿತಕ್ರೋಧಾಸ್ತೇಜೋಬಲಸಮನ್ವಿತಾಃ ।
ಆಜಾನುಬಾಹವಃ ಸರ್ವೇ ದಾನಶೀಲಾ ಜಿತೇಂದ್ರಿಯಾಃ ॥
ತೇಷು ಶಾಸತ್ಸು ಧರಣೀಮೃತವಃ ಸ್ವಗುಣೈರ್ಬಭುಃ ।
ಸುಖೋದಯಾಯ ವರ್ತಂತೇ ಗ್ರಹಾಸ್ತಾರಾಗಣೈಃ ಸಹ ॥
ಮಹೀ ಸಸ್ಯಪ್ರಬಹುಲಾ ಸರ್ವರತ್ನಗುಣೋದಯಾ ।
ಕಾಮಧುಗ್ದೇನುವದ್ ಭೋಗಾನ್ ಫಲತಿ ಸ್ಮ ಸಹಸ್ರಧಾ ॥
ಮನ್ವಾದಿಭಿಃ ಕೃತಾಃ ಪೂರ್ವಂ ಮರ್ಯಾದಾ ಮಾನವೇಷು ಯಾಃ ।
ಅನತಿಕ್ರಮ್ಯ ತಾಃ ಸರ್ವಾಃ ಕುಲೇಷು ಸಮಯಾನಿ ಚ ।
ಅನ್ವಶಾಸಂತ ರಾಜಾನೋ ಧರ್ಮಪುತ್ರಪ್ರಿಯಂಕರಾಃ ॥
ಮಹಾಕುಲಾನಿ ಧರ್ಮಿಷ್ಠಾ ವರ್ಧಯಂತೋ ವಿಶೇಷತಃ ।
ಮನುಪ್ರಣೀತಯಾ ಕೃತ್ಸ್ನಾ ತೇಽನ್ವಶಾಸನ್ ಮಹೀಂ ಧರಾಮ್ ॥
ರಾಜವೃತ್ತಿರ್ಹಿ ಸಾ ಶಶ್ವದ್ ಧರ್ಮಿಷ್ಠಾಽಭೂನ್ಮಹೀತಲೇ ।
ಪ್ರಾಯೋ ಲೋಕಮತಿಸ್ತಾತ ರಾಜವೃತ್ತಾನುಗಾಮಿನೀ ॥
ಏವಂ ಭಾರತವರ್ಷಂ ಸ್ವಂ ರಾಜಾ ಸ್ವರ್ಗಂ ಸುರೇಂದ್ರವತ್ ।
ಶಶಾಸ ವಿಷ್ಣುನಾ ಸಾರ್ಧಂ ಗುಪ್ತೋ ಗಾಂಡೀವಧನ್ವನಾ ॥ – ಭಾರತ (ಆಶ್ವಮೇಧಿಕ. ೧೪/೧೭)

ನಿಶಮ್ಯ ಭೀಷ್ಮೋಕ್ತಮಥಾಚ್ಯುತೋಕ್ತಂ ಪ್ರವೃತ್ತವಿಜ್ಞಾನವಿಧೂತವಿಭ್ರಮಃ ।
ಶಶಾಸ ಗಾಮಿಂದ್ರ ಇವಾಜಿತಾಶ್ರಯಃ ಪರಿಧ್ಯುಪಾಂತಾಮನುಜಾನುವರ್ತಿತಃ ॥
ಕಾಮಂ ವವರ್ಷ ಪರ್ಜನ್ಯಃ ಸರ್ವಕಾಮದುಘಾ ಮಹೀ ।
ಸಿಷಿಚುಃ ಸ್ಮ ವ್ರಜಾವಾ ಗಾವಃ ಪಯಸೋಧಸ್ವತೀರ್ಮುದಾ ॥
ನದ್ಯಃ ಸಮುದ್ರಾ ಗಿರಯಃ ಸವನಸ್ಪತಿವೀರುಧಃ ।
ಫಲಂತ್ಯೋಷಧಯಃ ಸರ್ವಾಃ ಕಾಮಮನ್ವೃತು ತಸ್ಯ ವೈ ॥
ನಾಧಯೋ ವ್ಯಾಧಯಃ ಕ್ಲೇಶಾ ದೈವಭೂತಾತ್ಮಹೇತವಃ ॥
ಅಜಾತಶತ್ರಾವಭವನ್ ಜಂತೂನಾ ರಾ ಕರ್ಹಿಚಿತ್ ॥ - ಭಾಗವತ (೧/೧೦/೩-೬)

ಪಾಂಡವರ ರಾಜ್ಯದ ಅಪೂರ್ವತೆ

ಶಬ್ದಾದಯಶ್ಚಾಸುರತೀವ ಹೃದ್ಯಾ
ನಿಕಾಮವರ್ಷೀ ಚ ಸುರೇಶ್ವರೋಽಭೂತ್ ।
ಪ್ರಜಾ ಅನಾಸ್ಪೃಷ್ಟಸಮಸ್ತತಾಪಾ
ಅನನ್ಯಭಕ್ತ್ಯಾಽಚ್ಯುತಮರ್ಚಯಂತಿ ॥ ೨೫ ॥

ಅ: ಶಬ್ದ ಮೊದಲಾದ ವಿಷಯಗಳೂ ಸಹ ಅತ್ಯಂತ ಮನೋಹರವಾಗಿದ್ದವು, ಇಂದ್ರ ಯಥೇಚ್ಛ ಮಳೆಗರೆಯುತ್ತಿದ್ದ, ಪ್ರಜೆಗಳು ಯಾವುದೇ ತಾಪದ ಸೋಂಕಿಲ್ಲದೇ ಅನನ್ಯ ಭಕ್ತಿಯಿಂದ ಶ್ರೀಹರಿಯನ್ನು ಆರಾಧಿಸುತ್ತಿದ್ದರು.

ಪೃಥ್ವೀ ಚ ಗಾವಃ ಸಸರಸ್ವತೀಕಾ
ನಿಕಾಮದೋಹಾ ಅಭವನ್ ಸದೈವ ।
ಅಬ್ಧಾಬ್ಧಿನದ್ಯೋ ಗಿರಿವೃಕ್ಷಜಂಗಮಾಃ
ಸರ್ವೇಽಪಿ ರತ್ನಪ್ರಸವಾ ಬಭೂವುಃ ॥ ೨೬ ॥

ಅ: ಭೂಮಿ, ಗೋವುಗಳು, ವೇದಗಳು ಸದಾ ಯಥೇಚ್ಛವಾಗಿ ಫಲ ನೀಡುತ್ತಿದ್ದವು. ಮೋಡ, ಸಮುದ್ರ, ನದಿಗಳು, ಬೆಟ್ಟಗಳು, ಮರಗಳು, ಜಂಗಮಪ್ರಾಣಿಗಳು ಎಲ್ಲವೂ ರತ್ನಗಳನ್ನು ನೀಡುತ್ತಿದ್ದವು.

ವಿ: ೧) ಭೂಮಿಯಲ್ಲಿ ಬೆಳೆ, ಗೋವುಗಳಲ್ಲಿ ಹಾಲು, ವೇದಗಳಿಂದ ಯಜ್ಞ, ಯಾಗಾದಿಗಳು ಹೀಗೆ ಪಾಂಡವರ ರಾಜ್ಯ ಸಕಲಸಮೃದ್ಧಿಯಿಂದ ಕೂಡಿತ್ತು

೨) ಭೀಮರಕ್ಷಿತವಾದ ಧರ್ಮರಾಜ್ಯ ರಾಮರಾಜ್ಯದಂತೆ ಜಗತ್ತು ಕಂಡ ಅತ್ಯಂತ ಸುಖೀರಾಜ್ಯವಾಗಿತ್ತು ಎಂಬುದು ಇಲ್ಲಿಯ ಮುಖ್ಯಾಂಶ.

---

೨೬. ಸಸರಸ್ವತೀಕಾ ಇತ್ಯತ್ರ ಸರಸ್ವತೀ ವೇದಃ ತಯಾ ಸಹಿತಾಃ ಸಸರಸ್ವತೀಕಾಃ ಪೃಥ್ವಾ ಃ ದೋಹಃ ಯಥೇಷ್ಟಧನ-ಧಾನ್ಯಾದಿದಾನಂ ಗವಾಂ ದೋಹಸ್ತು ದೋಹಪಾತ್ರೇ ಕ್ಷೀರಪರಿಪೂರಣಮ್ । ವೇದೇ ತು ಸ್ವಸ್ಮಿನ್ಯಥೋಕ್ತಫಲದಾನಂ ದೋಹ ಇತ್ಯುಚ್ಯತೇ। ಸ್ವಾತೌ ಘನತೋಯಸ್ಯ ಮಣೀಭಾವಾತ್ ಅಬ್ಧಾಬ್ಧೀನಾಂ ರತ್ನಪ್ರಭವತ್ವಮ್। ಅಬ್ಧೇಃ ರತ್ನಾಕರತ್ವಂ ಪ್ರಸಿದ್ಧಮ್। ನದ್ಯಃ = ತಾಮ್ರಪರ್ಣ್ಯಾದಯಃ । ಗಿರೀಣಾಮಪಿ ಪಂಚರತ್ನಮಯತ್ವಾತ್ ರತ್ನಪ್ರಭವತ್ವಂ ಪ್ರಸಿದ್ಧಮ್। ವೃಕ್ಷಾಃ= ವೇಣ್ವಾದಯಃ। ಜಂಗಮಾಃ= ಗಜಾದಯಃ ॥ – (ವಾ.)

೩) ಮೋಡದಿಂದ ರತ್ನ ಬರುವುದು ಎಂದರೆ ಸ್ವಾತಿಮಳೆಯಿಂದ ತಾಮ್ರಪರ್ಣೀ ನದಿಯಲ್ಲಿ ಬಿದ್ದ ನೀರು ಮುತ್ತಾಗುತ್ತಿತ್ತು; ಸಮುದ್ರದಲ್ಲಿ ರತ್ನಗಳು ದೊರಕುತ್ತಿದ್ದವು; ಬೆಟ್ಟಗಳಲ್ಲಿ ಯಥೇಚ್ಛವಾಗಿ ಚಿನ್ನ ದೊರೆಯುತ್ತಿತ್ತು; ಹಾವುಗಳು ಮೊದಲಾದವುಗಳೂ ಸಹ ಮಾಣಿಕ್ಯವನ್ನು ನೀಡುತ್ತಿದ್ದವು. ಹೀಗೆ ರತ್ನಮಯವಾದ ವಾತಾವರಣ ಪಾಂಡವರಾಜ್ಯದಲ್ಲಿತ್ತು ಎಂದರ್ಥ.

ಕೃಷ್ಣಾಶ್ರಯಾತ್ ಸರ್ವಮಿದಂ ವಶೇ ತೇ
ವಿಧಾಯ ಸಮ್ಯಕ್ ಪರಿಪಾಲಯಂತಃ ।
ದಿವೀವ ದೇವಾ ಮುಮುದುಃ ಸದೈವ
ಮುನೀಂದ್ರಗಂಧರ್ವನೃಪಾದಿಭಿರ್ವೃತಾಃ ॥ ೨೭ ॥

ಅ: ಪಾಂಡವರು ಕೃಷ್ಣನ ಆಶ್ರಯದಿಂದಾಗಿ ಜಗತ್ತನ್ನೆಲ್ಲ ತಮ್ಮ ಅಧೀನದಲ್ಲಿರಿಸಿಕೊಂಡು ಚೆನ್ನಾಗಿ ರಾಜ್ಯಪಾಲನೆ ಮಾಡುತ್ತಾ ಮುನಿವರ್ಯರುಗಳು, ಗಂಧರ್ವರುಗಳು, ರಾಜರು ಮೊದಲಾದವರುಗಳೊಂದಿಗೆ ಕೂಡಿ ಸ್ವರ್ಗದಲ್ಲಿ ದೇವತೆಗಳಂತೆ ಸದಾ ನಲಿದರು.

ವಿ: ೧) ಶ್ರೀರಾಮನ ರಾಜ್ಯ ಜಗತ್ತು ಕಂಡ ಅದ್ವಿತೀಯ ರಾಜ್ಯವಾಗಿದ್ದಂತೆ ಆ ರಾಮನೇ ಆದ ಶ್ರೀಕೃಷ್ಣನ ನೇತೃತ್ವದಲ್ಲಿ ಭೀಮ ಪಾಲಿತವಾದ ಧರ್ಮರಾಜ್ಯ ರಾಮರಾಜ್ಯದಂತೆಯೇ ಅತ್ಯಂತ ವಿಶಿಷ್ಟವಾದಂತಹ ರಾಜ್ಯವಾಗಿತ್ತು ಎಂದರ್ಥ. ಹರಿ–ವಾಯುಗಳ ನೇತೃತ್ವದ ಬದುಕು ರಾಮರಾಜ್ಯ–ಧರ್ಮರಾಜ್ಯಗಳಂತೆ ಸಂಪೂರ್ಣ ಸುಖಮಯ ಎಂದು ತಿಳಿಯಬೇಕು.

೨) ವನವಾಸದಲ್ಲಿಯೂ ದೇವಲೋಕದಲ್ಲಿ ಇಂದ್ರನಂತೆ ಇದ್ದ ವಿವರ ಈಗಾಗಲೇ ಬಂದಿದೆ (೨೨/೮).

ಸಮುಜ್ಜ್ವಲಾ ಪಾಂಡವಕೀರ್ತಿನಾರೀ
ಪದಂ ನಿಧಾಯಾಸುರಪಕ್ಷಮೂರ್ಧಸು ।
ವರಾಭಯೇ ಚೈವ ಸತಾಂ ಕರಾಭ್ಯಾಂ
ಕೃಷ್ಣಪ್ರಸೂತಾ ಜಗದಂಡಮಾವೃಣೋತ್ ॥ ೨೮ ॥

---

೨೬. ಪಾಂಡವಾನಾಂ ರಾಷ್ಟ್ರೇ ಕೇವಲಂ ಲವಣಾಬ್ಧೇಃ ಸಕಾಶಾತ್ ತಾಮ್ರಪರ್ಣ್ಯಾಃ ಸಕಾಶಾದ್ರತ್ನೋತ್ಪತ್ತಿರಿತಿ ನ । ಕಿಂತು ಸರ್ವಸಮುದ್ರಾದಿಭ್ಯಃ ॥ –(ಜ.)

೨೬. ತಾಮ್ರಪರ್ಣೀ ಸರಿತ್ತೋಯಂ ಸೇವನೀಯಂ ಮುಮುಕ್ಷುಭಿಃ ।
ಮುಕ್ತೀಕರೋತಿ ಯತ್ರತ್ಯಾ ಶುಕ್ತಿಶ್ಚ ಪತಿತಂ ಜಲಮ್ ॥ –ತೀರ್ಥಪ್ರಬಂಧ(೪/೩೦)

ಅ: ವೇದವ್ಯಾಸರಿಂದ ಹುಟ್ಟಿದ ಉಜ್ವಲವಾದ ಪಾಂಡವ ಕೀರ್ತಿ ಎಂಬ ನಾರಿಯು ಅಸುರ ಪಕ್ಷದವರ ತಲೆಯ ಮೇಲೆ ಪಾದವನ್ನೂರಿ ವರದಹಸ್ತ, ಅಭಯಹಸ್ತಗಳನ್ನು ಸಜ್ಜನರ ತಲೆಯ ಮೇಲಿರಿಸಿ ಬ್ರಹ್ಮಾಂಡವನ್ನು ವ್ಯಾಪಿಸಿದಳು.

ವಿ: ೧) ಇಲ್ಲಿ ಪಾಂಡವ ನಾರಿಯೆಂದರೆ ಪಾಂಡವರ ಕೀರ್ತಿಯ ಜೊತೆಗೆ ದ್ರೌಪದಿ, ಮಹಾಭಾರತ ಗ್ರಂಥ ಎಂಬ ಅರ್ಥಗಳೂ ಏವಕ್ಷಿತ. ಪಾಂಡವರ ಕೀರ್ತಿ ಮೂರು ಲೋಕಗಳಲ್ಲೆಲ್ಲ ಹರಡಿ ಅದರಿಂದಾಗಿ ಅಸುರರು ಮಣಿದರು, ಸುರರು ನಲಿದರು ಎಂದರ್ಥ. ದ್ರೌಪದಿಯಿಂದಾಗಿ ದುರ್ಯೋಧನಾದಿಗಳು ನಾಶ ಹೊಂದಿದರು, ಸಜ್ಜನರು ಆನಂದಿತರಾದರು ಎಂದೂ ಭಾವ.

೨) ವೇದವ್ಯಾಸರು ರಚಿಸಿದ ಮಹಾಭಾರತವೂ ಸಹ ದುರ್ಜನರಿಗೆ ಖೇದಕರವೂ, ಸಜ್ಜನರಿಗೆ ಮೋದಕರವೂ ಆಯಿತು ಎಂಬುದೂ ಸೂಚಿತ.

ಭಾರತವೆಂಬ ಭಾರತಿ

ಪಾತಾಲಪಾದಾಂ ಪೃಥಿವೀನಿತಂಬಾ-
ಮಾಕಾಶಮಧ್ಯಾಂ ಕರಸಂತತಾಶಾಮ್ ।
ಗ್ರಹರ್ಕ್ಷತಾರಾಭರಣದ್ಯುವಕ್ಷಸಂ
ವಿರಿಂಚಲೋಕಸ್ಥಿತಸನ್ಮುಖಾಂಬುಜಾಮ್ ॥ ೨೯ ॥

---

೨೮. ಅಸುರಪಕ್ಷಶಿಕ್ಷಣೇ ಸತಿ ಕೀರ್ತೇರ್ಜಾತತ್ವಾದಸುರಪಕ್ಷಮೂರ್ಧಸು ಪದಂ ನಿಧಾಯೇತ್ಯುಕ್ತಮ್। ಪುಣ್ಯಾತ್ಮನಾಂ ಕೀರ್ತಿಶ್ರವಣಾದಿನಾ ಸಕಲಾಭೀಷ್ಟಪ್ರಾಪ್ತೇಃ ಸಕಲಭಯಪರಿಹಾರಾಚ್ಚ। ಕರಾಭ್ಯಾಂ ಸತಾಂ ವರಾಭಯೇ ದಧಾನೇತ್ಯುಕ್ತಮಿತಿ ಸಾಹಿತ್ಯರಸಃ। ವಸ್ತುಸ್ಥಿತ್ಯಾ ತು ಸತ್ಕೀರ್ತ್ಯಭಿಮಾನಿನ್ಯಃ ಲಕ್ಷ್ಮೀಸರಸ್ವತೀಭಾರತೀಪ್ರಭೃತಯೋ ದೇವ್ಯ ಏವ ಸಂತಿ। ತಾಶ್ಚ ''ಪದ್ಮದ್ವಯಾಭಯವರೋದ್ಯತಪದ್ಮಹಸ್ತಾಮ್'' ''ಸ್ವಭರ್ತುರಂಕಸ್ಥಿತಾಮಭಯಸದ್ವರಪದ್ಮ-ಹಸ್ತಾಮ್'' ''ಗೌರೀ ವರಾಭಯಕರಾ ಧ್ಯೇಯಾ ಪೀತಾಂಬರಾ ಚ ಸಾ'' ಇತ್ಯಾದಿನಾ ಅಭಯಸದ್ವರಹಸ್ತಾಶ್ಚ ಭವಂತೀತ್ಯಾಶಯೇನ ಕರಾಭ್ಯಾಂ ಸತಾಂ ವರಾಭಯೇ ಚೈವ ದಧಾನೇತ್ಯುಕ್ತಮ್। ಕೀರ್ತಿಪಕ್ಷೇ ತು ಕರಾವಿವ ಕರೌ ದುರ್ಜನಮದವಿಭೇದನೋತ್ಕಕೀರ್ತ್ಯಂಶಾಖ್ಯಿಕರಃ ಅಭಯದಾಯೀ। ಸ್ವಭಕ್ತಾನಾಂ ವಿಪ್ರಾದೀನಾಂ ಯಥೇಷ್ಟಾನ್ನಪಾನಧನರತ್ನಾದಿ ದಾನಪರಂಪರೋತ್ಕಕೀರ್ತ್ಯಂಶಾಖ್ಯಿಕರಃ ವರದಾಯೀತಿ ರೂಪಕಾಲಂಕಾರೇಣ ಯೋಜನೀಯಮ್। ಸರ್ವೇಷಾಮಪಿ ಕೀರ್ತಿಃ ಶ್ರೀಕೃಷ್ಣಾನುಗ್ರಹಾದೇವ ಭವತೀತಿ ಭಾವೇನ ಕೃಷ್ಣಪ್ರಸೂತೇತ್ಯುಕ್ತಮಿತಿ ಸಾಹಿತ್ಯರಸಃ। ವಸ್ತುಗತ್ಯಾ ''ಸ ಇದಂ ಸರ್ವಮಸೃಜತ'' ಇತಿ ಶ್ರುತೇಃ ಪರಾಧೀನವಿಶೇಷಾವಾಪ್ತ್ಯಾದೇಹೋತ್ಪತ್ತ್ಯಾ ವಾ ಶ್ರೀಪ್ರಭೃತೀನಾಂ ಸರ್ವಾಸಾಂ ದೇವೀನಾಂ ಕೃಷ್ಣೋತ್ಪನ್ನತ್ವಾತ್ ಕೃಷ್ಣಪ್ರಸೂತೇತ್ಯುಕ್ತಮ್ ॥ – (ವಾ.)

೨೮. ಸಮುಜ್ಜ್ವಲೇತಿ । ಅತ್ರ ಪಾಂಡವಕೀರ್ತೇಸ್ತತ್ಪತಿಪಾದಕಭಾರತಸ್ಯ ತದಭಿಮಾನಿಭಾರತ್ಯಾಶ್ಚ ಬ್ರಹ್ಮಾಂಡ-ವ್ಯಾಪಿತ್ವಮುಚ್ಯತೇ । ಉಕ್ತವಿಶೇಷಣಾನಿ ತ್ರಯೇಽಪಿ ಯಥಾಸಂಭವಂ ಯೋಜನೀಯಾನಿ ॥ – (ತಾ.)

೨೮. ಶತ್ರುಭಃ ಶಿರಸಿ ಪಾದಸ್ಥಾಪನೇ ಯಾದೃಶಂ ದುಃಖಂ ತಾದೃಶಂ ದುಃಖಮಸತಾಂ ಪಾಂಡವಕೀರ್ತಿನಾರ್ಯಾ ಜಾತಮಿತಿ ಜ್ಞಾಪಯಿತುಂ ಪಾಂಡವಕೀರ್ತಿನಾರೀ ಅಸುರಪಕ್ಷಮೂರ್ಧಸು ಪದಂ ವಿಧಾಯೇತ್ಯುಪಚಾ-ರೇಣೋಕ್ತಮ್। – (ಸ.)

ಅ: ಆ ಪಾಂಡವ ಕೀರ್ತಿನಾರಿಗೆ ಪಾತಾಲದಲ್ಲಿ ಪಾದಗಳು, ಪೃಥಿವಿಯಲ್ಲಿ ನಿತಂಬ, ಆಕಾಶದಲ್ಲಿ ಸೊಂಟ, ದಿಕ್ಕುಗಳೆಲ್ಲಾ ವ್ಯಾಪಿಸಿದ ಕೈಗಳು, ಗ್ರಹಗಳು, ನಕ್ಷತ್ರಗಳು, ತಾರೆಗಳು ಆಭರಣಗಳು, ದ್ಯುಲೋಕದಲ್ಲಿ ವಕ್ಷಸ್ಥಳ, ಬ್ರಹ್ಮಲೋಕದಲ್ಲಿ ಉತ್ತಮವಾದ ಮುಖಕಮಲ.

ವಿಕುಂಠನಾಥಾಭಯಹಸ್ತಮಾದರಾ-
ನ್ಮೂರ್ಧ್ನಾ ವಹಂತೀಂ ವರಭಾರತಾಖ್ಯಾಮ್ ।
ನಿಶಮ್ಯ ತಾಮೀಕ್ಷ್ಯ ಸಮಸ್ತಲೋಕಾಃ
ಪವಿತ್ರತಾ ವೇದಿಭವಾಮಿವಾನ್ಯಾಮ್ ॥ ೩೦ ॥

ಅ: ವೈಕುಂಠಪತಿಯಾದ ಶ್ರೀಹರಿಯ ಅಭಯಹಸ್ತವನ್ನು ತಲೆಯ ಮೇಲೆ ಆದರದಿಂದ ಧರಿಸಿರುವಳು. ಶ್ರೇಷ್ಠವಾದ ಭಾರತ ಎಂಬ ಹೆಸರು ಅವಳಿಗೆ. ಅದನ್ನು ಮತ್ತೊಬ್ಬ ದ್ರೌಪದಿಯನ್ನು ಹೇಗೋ ಹಾಗೆ ಕೇಳಿಯೂ, ನೋಡಿಯೂ ಸಮಸ್ತ ಜನರು ಪಾವನರಾದರು.

ವಿ: ಮಹಾಭಾರತದ ಮಹಿಮೆ ಪಾತಾಲದಿಂದ ಸತ್ಯಲೋಕದ ವರೆಗೆ ವ್ಯಾಪಿಸಿತು ಎಂದರ್ಥ. ಮಹಾವಿಷ್ಣುವಿನ ವಿರಾಡ್ರೂಪದಂತೆ ಮಹಾವಿಷ್ಣುವೇ ಆದ ಶ್ರೀವೇದವ್ಯಾಸರ ಜ್ಞಾನವ್ಯಾಪ್ತಿಯ ವಿಶ್ವರೂಪವನ್ನು ತೋರುವ ಅವರ ಕೃತಿ ಮಹಾಭಾರತವು ವಿಶ್ವವನ್ನೆಲ್ಲ ವ್ಯಾಪಿಸಿತು ಎಂದರ್ಥ.

ಭೀಮನಿಂದ ಕಲಿ ಬಲಿಗಳ ನಿಗ್ರಹ

ಪ್ರಪಾಲಯತ್ಸ್ವೇವ ಧರಾಂ ಸಕೃಷ್ಣೇ-
ಷ್ವದ್ಧೈವ ಪಾರ್ಥೇಷು ಕಲಿರ್ಬಲಿಶ್ಚ।
ಸುಪಾಪದೈತ್ಯೋ ಕ್ವಚ ರಾಷ್ಟ್ರವಿಪ್ಲವಂ
ಸಂಚಕ್ರತುಸ್ತಚ್ಛ್ರುತಮಾಶು ಪಾರ್ಥೈಃ ॥ ೩೧ ॥

---

೨೯. ಜಗದಂಡಮಾವೃಣೋತ್ ಇತ್ಯೇತದೇವ ಪ್ರಪಂಚಯತಿ ಪಾತಾಲಪಾದಾಮಿತ್ಯಾದಿನಾ ॥ -(ವಾ.)

೩೦. ವೇದಿಭವಾಮಿವಾನ್ಯಾಮಿತ್ಯನೇನ ದ್ರೌಪದೀರೂಪಾಯಾಃ ಸರಸ್ವತ್ಯಾ ವಿರಾಡ್‌ರೂಪಸ್ಯಪತಿನಾ ಸಹಾವಸ್ಥಾನೇ ಪಾತಾಲಪಾದತ್ವಾದಿಕಂ ಸೂಚಿತಮ್। ಅಂತರಿಕ್ಷಾದರ್ವಾಕ್ ಪೃಥಿವ್ಯಾ ಉಪರಿತನಾಕಾಶೇ ಕೀರ್ತಿಪ್ರಸ್ತೋತೃಣಾಂ ಬಹೂನಾಮಭಾವಾತ್। ನಾರ್ಯಾಶ್ಚ ಮಧ್ಯೇ ಕ್ಷಾಮತ್ವಾತ್ ಆಕಾಶಮಧ್ಯಮಿತ್ಯುಕ್ತಮ್ ॥ -(ವಾ.)

೩೧. ಕಲಿಃ ಬಲಿಶ್ಚ ಪ್ರಹ್ಲಾದಪೌತ್ರಂ ಬಲಿಮಾವಿಷ್ಯೋ ಯಃ ಬಲಿನಾಮಾ ದೈತ್ಯಃ ಸ ಬಲಿಶ್ಚ। ಅತ ಏವ ಸುಪಾಪ-ದೈತ್ಯಾವಿತ್ಯುಕ್ತಮ್ । ಪ್ರಹ್ಲಾದಪೌತ್ರಸ್ತು ಹರಿಭಕ್ತಃ। -(ಜ.)

ಅ: ಕೃಷ್ಣನೊಂದಿಗೆ ಪಾಂಡವರು ಭೂಮಿಯನ್ನು ಚೆನ್ನಾಗಿ ಪರಿಪಾಲಿಸುತ್ತಿದ್ದಾಗ ಕಲಿ ಮತ್ತು ಬಲಿ ಎಂಬ ಇಬ್ಬರು ಮಹಾಪಾಪಿಗಳಾದ ದೈತ್ಯರುಗಳು ಕೆಲವೆಡೆ ರಾಷ್ಟ್ರನಾಶವನ್ನು ಮಾಡತೊಡಗಿದರು. ಅದನ್ನು ಕೂಡಲೇ ಪಾಂಡವರು ಕೇಳಿದರು.

ವಿ: ಇಲ್ಲಿ ಕಲಿಯ ಜೊತೆಯಲ್ಲಿದ್ದ ಬಲಿ ಎಂಬವನು ವಾಮನರೂಪಿ ಭಗವಂತನಿಗೆ ಮೂರಡಿ ಭೂಮಿಯನ್ನು ಧಾರೆಯೆರೆದ ಸಾತ್ವಿಕ ಬಲಿಯಲ್ಲ. ಬಲಿ ಎಂಬ ಬೇರೊಬ್ಬ ರಾಕ್ಷಸ. ಅವನ ಆವೇಶ–ದಿಂದಾಗಿಯೇ ಈ ಸಾತ್ವಿಕಬಲಿ ದುಷ್ಕಾರ್ಯಗಳಲ್ಲಿ ಒಮ್ಮೊಮ್ಮೆ ತೊಡಗುತ್ತಿದ್ದ(೧೧/೨೧೧). ಅವರಿಬ್ಬರೂ ಸೇರಿ ಪಾಂಡವರ ಆಳ್ವಿಕೆಯಲ್ಲಿ ಕೆಲವೆಡೆ ದುಷ್ಕಾರ್ಯಗಳಿಗೆ ತೊಡಗಿದರು ಎಂದರ್ಥ.

ಭೀಮನ ಬಂಧನದಲ್ಲಿ ಕಲಿ

ನೃಪೇಣ ಕೃಷ್ಣೇನ ಚ ಸಾಧು ಚೋದಿತೋ
ಭೀಮಸ್ತದಾ ತೌ ಸಗಣೌ ವಿಜಿತ್ಯ ।
ಬಲಿಂ ಪ್ರವಿದ್ರಾವ್ಯ ಕಲಿಂ ನಿಬದ್ಧ್ಯ
ಸಮಾನಯತ್ ಕೃಷ್ಣನರೇಂದ್ರಯೋಃ ಪುರಃ ॥ ೩೨ ॥

ಅ: ಆಗ ಧರ್ಮರಾಜನಿಂದಲೂ, ಕೃಷ್ಣನಿಂದಲೂ ಪ್ರೇರಿತನಾಗಿ ಭೀಮಸೇನ ಅವರಿಬ್ಬರನ್ನೂ ಅವರ ಪರಿವಾರ ಸಮೇತವಾಗಿ ಸೋಲಿಸಿದ. ಬಲಿಯನ್ನು ಓಡಿಸಿ, ಕಲಿಯನ್ನು ಸೆರೆ ಹಿಡಿದು ಕೃಷ್ಣ, ಹಾಗೂ ಧರ್ಮರಾಜರ ಮುಂದೆ ನಿಲ್ಲಿಸಿದ.

ವಿ: ೧) ಕಲಿನಿಗ್ರಹಕ್ಕೆಂದು ಆಗ ಕೃಷ್ಣ ಯುಧಿಷ್ಠಿರರು ಭೀಮನನ್ನು ಕಳುಹಿಸಿಕೊಟ್ಟರೆಂದು ಅರ್ಥ. ಆ ಮೂಲಕ ಕಲಿನಿಗ್ರಹಕ್ಕೆ ವಾಯುದೇವರೇ ಸಮರ್ಥರು ಎಂಬ ತತ್ವವೂ ಸೂಚಿತ.

೨) ಅದರಿಂದಾಗಿ ಕಲಿಯುಗದಲ್ಲಿ ಮಿಥ್ಯಾಜ್ಞಾನ ನಿರಾಸಕ್ಕೆಂದು ವಾಯುದೇವರನ್ನೇ ಶ್ರೀಹರಿ ಕಳುಹಿಸಿದ ಎಂಬ ಮಾತಿನ ಮರ್ಮ ತಿಳಿಯುವುದು. ಭೀಮ ಕಲಿ ಮತ್ತು ಬಲಿಗಳಲ್ಲಿ ಅಪ್ರಧಾನನಾದ ಬಲಿಯನ್ನು ಓಡಿಸಿ ಕಲಿಯನ್ನು ಬಂಧಿಸಿ ತಂದ ಎಂದರ್ಥ.

ಧರ್ಮರಾಜನ ಪ್ರಶ್ನೆ

ಪಪ್ರಚ್ಛ ತಂ ಕೃಷ್ಣಪುರೋ ಯುಧಿಷ್ಠಿರ ಉದಾರಧೀಃ ।
ಕಲೇ ಕಿಮಿತಿ ಮೇ ರಾಷ್ಟ್ರಂ ವಿಪ್ಲಾವಯಸಿ ದುರ್ಮತೇ ॥ ೩೩ ॥

ಅ: ಕೃಷ್ಣನೆದುರು ಉದಾರಬುದ್ಧಿಯ ಧರ್ಮರಾಜ ಕಲಿಯನ್ನು ಕೇಳಿದ 'ಎಲೈ, ದುರ್ಬುದ್ಧಿಯವನೇ ಏತಕ್ಕಾಗಿ ನನ್ನ ರಾಷ್ಟ್ರವನ್ನು ಹಾಳುಮಾಡುತ್ತಿರುವಿ?'.

ವಿ: ಶ್ರೀಕೃಷ್ಣ ಎದುರು ಇರುವನೆಂಬ ಧೈರ್ಯದಿಂದ ಹಾಗೆ ಕೇಳಿದ ಎಂದು ಅರ್ಥ.

ಕಲಿ ನೀಡಿದ ವಿಚಿತ್ರ ಉತ್ತರ - ಕಲಿ ಧರ್ಮ ಕೆಡಿಸುವ ಪರಿ

ಇತ್ಯುಕ್ತ ಆಹ ಕಾಲೋಽಯಂ ದುರ್ಯೋಧನನಿಪಾತನಮ್ ।
ಆರಭ್ಯ ಮಮ ತತ್ರ ತ್ವಂ ಬಲಾದಾಕ್ರಮ್ಯ ತಿಷ್ಠಸಿ ॥ ೩೪ ॥

ಅ: ಧರ್ಮರಾಜ ಹೀಗೆ ಕೇಳಲು ಕಲಿ ಹೇಳಿದ 'ದುರ್ಯೋಧನ ಬಿದ್ದಾಗಿನಿಂದ ಆರಂಭಿಸಿ ಈ ಕಾಲ ನನ್ನದು. ನೀನು ಬಲಾತ್ಕಾರದಿಂದ ಆಕ್ರಮಿಸಿ ನಿಂತಿರುವಿ'.

ವಿ: ಧರ್ಮರಾಜನ ಪ್ರಶ್ನೆಗೆ ಕಲಿ ನೀಡುವ ಉತ್ತರ – 'ಇದು ಪಾಂಡವರ ಕಾಲವಲ್ಲ ತನ್ನದೇ ಕಾಲ' ಎಂದು. ದುರ್ಯೋಧನನು ಬಿದ್ದ ದಿನವೇ ಕಲಿಯುಗ ಪ್ರಾರಂಭವಾಯಿತು ಎಂಬ ಮಾತು ಈಗಾಗಲೇ ಬಂದಿದೆ.

ತತೋ ಮಯಾ ಕೃತೋ ರಾಷ್ಟ್ರವಿಪ್ಲವಸ್ತೇ ನರಾಧಿಪ ।
ತಮಾಹ ರಾಜಾ ರಾಜ್ಞಾಂ ಹಿ ಬಲಾದ್ರಾಜ್ಯಂ ಪ್ರವರ್ತತೇ ॥ ೩೫ ॥

ಅ: 'ರಾಜನೇ, ಅದರಿಂದಾಗಿ ನಾನು ನಿನ್ನ ರಾಷ್ಟ್ರವನ್ನು ಹಾಳು ಮಾಡುತ್ತಿರುವೆ'. ಆಗ ಧರ್ಮರಾಜ ಕೇಳಿದ 'ರಾಜರ ಬಲದಿಂದ ರಾಜ್ಯ ನಡೆಯುವುದು'.

ಅಪಿ ಕಾಲಭವಂ ರಾಷ್ಟ್ರಂ ತ್ವದೀಯಂ ಮಾದೃಶೈರ್ನೃಪೈಃ ।
ಹ್ರಿಯತೇ ಬಲವದ್ಭಿರ್ಹಿ ರಾಜ್ಯಾಶಾ ತೇ ಕೃತಸ್ತದಾ ॥ ೩೬ ॥

ಅ: ಕಾಲಕ್ರಮದಿಂದಾಗಿ ಈ ರಾಷ್ಟ್ರ ನಿನ್ನದಾಗಿದ್ದರೂ ನನ್ನಂತಹ ರಾಜರುಗಳಿಂದ ಬಲಾತ್ಕಾರದಿಂದ ಕಿತ್ತಿಕೊಳ್ಳಲ್ಪಡುವುದು. ಆದ್ದರಿಂದ ನಿನಗೆ ರಾಜ್ಯದ ಆಸೆ ಎಲ್ಲಿಯದು.

ರಾಜನೇ ಕಾಲಕ್ಕೆ ಕಾರಣ

ಕಾಲೋ ವಾ ಕಾರಣಂ ರಾಜ್ಞೋ ರಾಜಾ ವಾ ಕಾಲಕಾರಣಮ್ ।
ಇತಿ ತೇ ಸಂಶಯೋ ಮಾಭೂದ್ರಾಜಾ ಕಾಲಸ್ಯ ಕಾರಣಮ್ ॥ ೩೭ ॥

ಅ: ರಾಜನಿಗೆ ಕಾಲ ಕಾರಣವೋ, ಅಥವಾ ರಾಜ ಕಾಲಕ್ಕೆ ಕಾರಣನೋ ಎಂಬ ಸಂಶಯ ನಿನಗೆ ಬೇಡ. ರಾಜನೇ ಕಾಲಕ್ಕೆ ಕಾರಣ.

ವಿ: ೧) ಒಂದೆಡೆ ರಾಜ ಮತ್ತೊಂದೆಡೆ ಕಾಲ. ರಾಜನಿಗೆ ತಕ್ಕಂತೆ ಕಾಲವೋ ಅಥವಾ ಕಾಲಕ್ಕೆ ತಕ್ಕಂತೆ ರಾಜನೋ ಎಂಬುದು ಇಲ್ಲಿಯ ಪ್ರಶ್ನೆ. ಅದಕ್ಕೆ ಧರ್ಮರಾಜನ ಉತ್ತರ ಕಾಲ ಯಾವುದೇ ಇದ್ದರೂ ರಾಜ ಪ್ರಬಲನಾಗಿದ್ದಲ್ಲಿ ಅದನ್ನು ತನ್ನ ಸಾಮರ್ಥ್ಯಕ್ಕೆ ಅನುಗುಣವಾಗಿ ಪಾಲಿಸಬಲ್ಲ ಎಂದರ್ಥ. ಎಂತಹ ಕಲಿಕಾಲವೇ ಆದರೂ ಧರ್ಮ, ಜ್ಞಾನಾದಿಗಳ ಬಲವಿದ್ದಲ್ಲಿ ಆಗ ಅಧಾರ್ಮಿಕಪ್ರವೃತ್ತಿಗೆ ಬದಲಾಗಿ ಧಾರ್ಮಿಕ ಪ್ರವೃತ್ತಿಯೇ ಉಳಿಯುವುದು ಎಂದರ್ಥ.

೨) ಕಾಲದ ಮೇಲೆ ನೆಪ ಹಾಕಿ ಕರ್ಮ ಬಿಡುವವರಿಗೆ ಇಲ್ಲಿ ಅಪೂರ್ವವಾದ ಉಪದೇಶವಿರುವುದನ್ನು ಗಮನಿಸಬೇಕು. ನಾವು ಹರಿ–ವಾಯುಗಳ ಮೇಲೆ ಭಾರ ಹಾಕಿ ನಮ್ಮ ಪಾಲಿನ ಕರ್ತವ್ಯಗಳನ್ನು ಹರಿಪ್ರೀತಿಗಾಗಿ ಶ್ರದ್ಧೆಯಿಂದ ಆಚರಿಸತೊಡಗಿದರೆ ಅದಕ್ಕೆ ಕಲಿಬಾಧೆ ಸರ್ವಥಾ ಒದಗದು ಎಂದು ತಾತ್ಪರ್ಯ. ಇದು ಮಹಾಭಾರತದ ಶ್ಲೋಕವೇ ಆಗಿರುವುದು ವಿಶೇಷ (ಬಿ.ಒ.ಆರ್.ಐ. ಭಾರತ, ಶಾಂತಿಪರ್ವ ೭೦/೫).

೩) ಶ್ರೀಮಾದನೂರು ವಿಷ್ಣುತೀರ್ಥರ **ಭಾಗವತಧರ್ಮಸ್ತೋತ್ರ** ಎಂಬ ಕೃತಿ ಈ ಮಾತಿನ ವಿವರಣೆಯಂತಿದೆ.

ಭಾಗವತಧರ್ಮಸ್ತೋತ್ರಮ್

ಯತ ಏತ ಇಹೈವ ವಸಂತಿ ಸುಖಂ ಸುಖತೀರ್ಥಸುತೀರ್ಥಸುವೃದ್ಧಿಪರಾಃ ।
ನ ಹಿ ಕಾಲಬಲಂ ಹರಿಪಾದರಜೋಧುತಪಾಪಗಣೇಷು ಜನೇಷು ಸದಾ ॥ ೧ ॥

ಲಲನಾಲಯಬಾಲಸುಚೈಲಮುಖಂ ತುಲಯಂತಿ ಲವೇನ ನ ಚಾತ್ರ ಯತಃ ।
ನ ಹಿ ಕಾಲಬಲಂ ಹರಿಪಾದರಜೋಧುತಪಾಪಗಣೇಷು ಜನೇಷು ಸದಾ ॥ ೨ ॥

ಯದಿಹೈವ ಸುದುಸ್ತ್ಯಜಮಾನಮಿದಂ ಕುಣಪೇನ ಸಮಂ ಕಲಯಂತಿ ಕಲೌ ।
ನ ಹಿ ಕಾಲಬಲಂ ಹರಿಪಾದರಜೋಧುತಪಾಪಗಣೇಷು ಜನೇಷು ಸದಾ ॥ ೩ ॥

ಯದಲಂಮತಯಃ ಕಣಚೂರ್ಣಪಯಸ್ಪಣಮೂಲಪಲಾಶಫಲಾಂಬುಮುಖೈಃ ।
ನ ಹಿ ಕಾಲಬಲಂ ಹರಿಪಾದರಜೋಧುತಪಾಪಗಣೇಷು ಜನೇಷು ಸದಾ ॥ ೪ ॥

ಸ್ವಪರಾರ್ಪಿತದುರ್ವಚವಾಕ್ತತಯೋ ಯದಿಹೈವ ಭವಂತಿ ಸಮಾಃ ಕುಸುಮೈಃ ।
ನ ಹಿ ಕಾಲಬಲಂ ಹರಿಪಾದರಜೋಧುತಪಾಪಗಣೇಷು ಜನೇಷು ಸದಾ ॥ ೫ ॥

ವಿಧಿವಾಗ್ನಿನಿಷೇಧವಚೋಽಪಿ ಹೃದಾ ಸ್ವನಿವೇದ್ಯಮಿಹೈವ ನಿವೇದಯತಿ ।
ನ ಹಿ ಕಾಲಬಲಂ ಹರಿಪಾದರಜೋಧುತಪಾಪಗಣೇಷು ಜನೇಷು ಸದಾ ॥ ೬ ॥

ಅಪಿ ಕರ್ಕಶತರ್ಕಮುಖೈರಪಿ ಯದ್ಧರಿರೇವ ವಿಭಾತಿ ವಚೋಭಿರಿಹ ।
ನ ಹಿ ಕಾಲಬಲಂ ಹರಿಪಾದರಜೋಧುತಪಾಪಗಣೇಷು ಜನೇಷು ಸದಾ ॥ ೭ ॥

ಯದಮುತ್ರ ಯಮೋಽಪಿ ಸಮಃ ಸಖಿಭಿರ್ಭವತೀಶಪದಾನುಗಜಾತಯುತಃ ।
ನ ಹಿ ಕಾಲಬಲಂ ಹರಿಪಾದರಜೋಧುತಪಾಪಗಣೇಷು ಜನೇಷು ಸದಾ ॥ ೮ ॥

॥ ಇತಿ (ಮಾದನೂರು)ಶ್ರೀವಿಷ್ಣುತೀರ್ಥವಿರಚಿತಂ ಭಾಗವತಧರ್ಮಸ್ತೋತ್ರಮ್ ॥

ರಾಜರಲ್ಲಿ, ವಿಪ್ರರಲ್ಲಿ ಕಲಿಪ್ರವೇಶ

ತಮುವಾಚ ಕಲಿಃ ಕಾಲೇ ಮದೀಯೇ ತ್ವಾದೃಶಃ ಕುತಃ ।
ರಾಜಾನಂ ಪೂರ್ವಮಾವಿಶ್ಯ ವಿಪ್ರಾಂಶ್ಚ ಸ್ಯಾಮಹಂ ನೃಪ ॥ ೩೮ ॥

ಅ: ಕಲಿ ಧರ್ಮರಾಜನಿಗೆ ಹೇಳಿದ 'ರಾಜನೇ, ನನ್ನ ಕಾಲದಲ್ಲಿ ನಿನ್ನಂತಹ ರಾಜರೆಲ್ಲಿರುವರು? ಮೊದಲಿಗೆ ರಾಜರನ್ನು, ಬ್ರಾಹ್ಮಣರನ್ನು ಪ್ರವೇಶಿಸುವೆ.

ವಿ: ವಿಪ್ರರು ಕ್ಷತ್ರಿಯರು ಧರ್ಮರಕ್ಷಣೆಗೆ ಆವಶ್ಯಕವಾದ ಜ್ಞಾನಬಲ, ಬಾಹುಬಲಗಳಿಗೆ ಸಂಕೇತ. ಅವರಲ್ಲಿ ಪ್ರಧಾನವಾಗಿ ಆವೇಶಿಸುವ ಮೂಲಕ ಕಲಿ ಧರ್ಮಪ್ರಜ್ಞೆಯನ್ನು ನಾಶಪಡಿಸುವನು ಎಂದರ್ಥ.

ವಾಸುದೇವಸಹಾಯೇಷು ತೇಜೋ ಯುಷ್ಮಾಸು ಮೇ ನ ಹಿ ।
ಕ್ವ ರಾಜಾऽಸಾವೃತೇ ಯುಷ್ಮಾನ್ ಯೋ ಮಯಾ ನಾಭಿಭೂಯತೇ ॥ ೩೯ ॥

ಮದೀಯಕಾಲೇ ಭೂಪಾಲ ವಿಪ್ರವೇದವಿರೋಧಿನಿ ।
ಮದ್ದೃಷ್ಟಿಪಾತೇ ಕ್ವ ಗುಣಾಃ ಕ್ವ ವೇದಾಃ ಕ್ವ ಸುಯುಕ್ತಯಃ ॥ ೪೦ ॥

ಅ: ರಾಜನೇ, ಕೃಷ್ಣರಕ್ಷಿತರಾದ ನಿಮ್ಮಲ್ಲಿ ನನ್ನ ಸಾಮರ್ಥ್ಯ ನಡೆಯದು, ವಿಪ್ರರಿಗೂ, ವೇದಗಳಿಗೂ ವಿರೋಧಿಯಾದ ನನ್ನ ಕಾಲದಲ್ಲಿ ನಿಮ್ಮ ಹೊರತು ನನಗೆ ಸೋಲದ ರಾಜನೆಲ್ಲಿರುವನು. ನಾನು ಕಣ್ಣು ಹಾಕಿದ ಮೇಲೆ ಎಲ್ಲಿಯ ಗುಣಗಳು, ಎಲ್ಲಿಯ ವೇದಗಳು, ಎಲ್ಲಿಯ ಸುಯುಕ್ತಿಗಳು.

ವಿ: ೧) ಕಲಿಯ ಆಕ್ರಮಣದ ರೀತಿ ಇಲ್ಲಿ ಅತ್ಯಂತ ರೋಚಕವಾಗಿ ನಿರೂಪಿತವಾಗಿದೆ. ಕಲಿಗಾಲ ವೇದಗಳಿಗೂ ವಿಪ್ರರಿಗೂ ವಿರೋಧಿಯಾದ ಕಾಲ. ಕಲಿ ಮೊದಲು ಪ್ರವೇಶಿಸುವುದೇ ರಾಜರೊಳಗೆ, ಬಳಿಕ ವಿಪ್ರರೊಳಗೆ.

೨) ಕೇಳುವ ರಾಜ, ಹೇಳುವ ವಿಪ್ರರಲ್ಲೂ ಕಲಿ ಪ್ರವೇಶಿಸಿದ ಮೇಲೆ ಲೋಕ ಹೇಳುವವರೂ, ಕೇಳುವವರೂ ಇಲ್ಲದಂತಾಗುವುದು.

೩) ರಾಜರಲ್ಲಿ ಪ್ರವೇಶಿಸುವ ಮೂಲಕ ಕಲಿ ಅಧರ್ಮ ಕಾರ್ಯಕ್ಕೆ ದಂಡನೆ ನೀಡುವ ಬದಲು ಧರ್ಮಕಾರ್ಯಕ್ಕೇ ದಂಡ ನೀಡುವನು. ಅಧರ್ಮ ಕಾರ್ಯಕ್ಕೆ ಉತ್ತೇಜನ ನೀಡುವನು.

೪) ಅದರಂತೆ ವಿಪ್ರರಲ್ಲಿ ಪ್ರವೇಶಿಸುವ ಮೂಲಕ ಧರ್ಮಪ್ರಸಾರದ ಬದಲಿಗೆ ಅಧರ್ಮ ಪ್ರಸಾರವನ್ನೇ ಮಾಡಿಸುವನು. ಹೇಳುವ ಅವರೇ ಅಧರ್ಮಿಗಳಾಗುವಂತೆ ಮಾಡುವನು.

ಅಧರ್ಮ, ಅನ್ಯಾಯಗಳನ್ನು ವೈಭವೀಕರಿಸಿ ನೀತಿ ಧರ್ಮಗಳನ್ನೇ ಗೇಲಿ ಮಾಡಿಸುವನು. ಇದರಿಂದಾಗಿ ಜನ ಸಹಜವಾಗಿಯೇ ಧರ್ಮವನ್ನು ತೊರೆದು ಅಧರ್ಮದಲ್ಲಿಯೇ ತೊಡಗಿ–ಕೊಳ್ಳುವಂತೆ ಆಗುವುದು. ಧರ್ಮಪ್ರವೃತ್ತಿ ಸಂಪೂರ್ಣವಾಗಿ ಕುಂಠಿತವಾಗುವುದು, ಅಧರ್ಮ ಪ್ರವೃತ್ತಿ ಎಲ್ಲೆಡೆಯೂ ತಾಂಡವವಾಡುವುದು.

೫) ಕಲಿಯ ಬಾಧೆಗೆ ಉಪಾಯವನ್ನೂ ಸಹ ಕಲಿಯೇ ಹೇಳಿಕೊಂಡಿರುವುದು ಇಲ್ಲಿಯ ವಿಶೇಷ. ಕೃಷ್ಣರಕ್ಷಿತರಾದವರಲ್ಲಿ ಅವನ ಆಟ ಸಾಗದು. ಆದ್ದರಿಂದ ಯಾರು ಶಾಸ್ತ್ರೋಕ್ತ ರೀತಿಯಲ್ಲಿ ಹರಿಯ ಆರಾಧನೆ ಮಾಡತೊಡಗುವರೋ ಅವರಿಗೆ ಕಲಿ ಯಾವುದೇ ಬಾಧೆಯನ್ನು ನೀಡನು. ಅದರಿಂದಾಗಿ ಅವರಿಗೆ ಧರ್ಮಸಾಧನೆ ನಿರ್ವಿಘ್ನವಾಗಿ ಸಾಗುವುದು.

೬) ಹಾಗೆ ಕೃಷ್ಣರಕ್ಷಿತರಾಗಲು ಪಾಂಡವರಿಗೆ ಮಾತ್ರ ಸಾಧ್ಯ. ಪಾಂಡವರು ಧರ್ಮಾದಿಗಳ ಸಂಕೇತ. ಸ್ವಾಭಾವಿಕವಾಗಿಯೇ ಸಜ್ಜನರಾದವರಿಗೆ ಹರಿ ವಾಯುಗಳಲ್ಲಿ ಭಕ್ತಿ ಸರ್ವದಾ ಇರುವುದರಿಂದ ಅವರು ಕಲಿಪೀಡೆಯನ್ನು ಮೆಟ್ಟಿನಿಲ್ಲಲು ಸಮರ್ಥರಾಗುವರು ಎಂದು ತಾತ್ಪರ್ಯ.

೭) ಕಲಿಯಿಂದಾಗಿ ಗುಣಗಳಿಗೆ ಬದಲು ದೋಷಗಳಿಗೆ ಮನ್ನಣೆ, ವೇದಗಳಿಗೆ ಬದಲು ದುಶ್ಶಾಸ್ತ್ರಗಳಿಗೆ ಮನ್ನಣೆ, ಸುಯುಕ್ತಿಗಳಿಗೆ ಬದಲು ಕುಯುಕ್ತಿಗಳಿಗೆ ಮನ್ನಣೆ ಉಂಟಾಗುವದು.

ಧರ್ಮರಾಜನಿಂದ ಕಲಿಯ ಬಿಡುಗಡೆ

ಜಗಾದ ನೃಪತಿಃ ಸತ್ಯಂ ಕಲೇ ವಕ್ಷ್ಯನೃತೋಽಪಿ ಸನ್ ।
ಮೋಚಯೇ ತ್ವರ್ತವಚನಾದ್ಯದಾಽಸ್ಮತ್ಸಂತತೇಃ ಪರಮ್ ॥ ೪೧ ॥

ಧರ್ಮರಾಜನಿಗೆ ಕಲಿ ಒಪ್ಪಿಸಬೇಕಾದ ಕರ

ವಿಲುಂಪಸ್ಯಖಿಲಾನ್ ಧರ್ಮಾನ್ ಕರಂ ತತ್ರಾಪಿ ನೋಽರ್ಪಯ ।
ಸೀಮಾಧಿರ್ಬಹುವಾಕ್ಯಂ ಚ ತುಲಾಮಾನೇ ಚ ಮೇ ಕರಃ ॥ ೪೨ ॥

ಅ: ಧರ್ಮರಾಜ ತಿಳಿಸಿದ 'ಕಲಿಯೇ, ನೀನು ಅನೃತಸ್ವರೂಪನಾದರೂ ಸತ್ಯವನ್ನೇ ನುಡಿಯುತ್ತಿರುವಿ. ಹೀಗೆ ಸತ್ಯ ನುಡಿದದ್ದರಿಂದ ನಿನ್ನನ್ನು ಬಿಡುಗಡೆ ಮಾಡುವೆ, ನಮ್ಮ ಸಂತತಿಯ

---

೪೧. ವಕ್ಷ್ಯನೃತೋಽಪಿ ಸನ್ನಿತ್ಯತ್ರ ವಕ್ಷಿ= ವದಸಿ। ಋತವಚನಾತ್ = ಸತ್ಯವಚನಾತ್ ॥ – (ವಾ.)

೪೨. ಸೀಮಾಧಿರ್ಬಹುವಾಕ್ಯಂ ಚೇತ್ಯತ್ರ ಸೀಮಾ = ಗ್ರಾಮಭೂಮಿಃ। ತತ್ರ ಆ = ಸಮಂತಾತ್ ಚತುರ್ದಿಕ್ಷು ಧೀಯತೇ ಪೋಷ್ಯತೇ ವಾ ಅನಯೇತಿ ವ್ಯುತ್ಪತ್ತ್ಯಾ ಆಧಿಃ= ಮರ್ಯಾದಾಶಿಲಾ ॥ – (ವಾ.)

ಬಳಿಕ ನೀನು ಎಲ್ಲ ಧರ್ಮಗಳನ್ನೂ ನಾಶಪಡಿಸಬಹುದು. ಆದರೆ, ಆಗಲೂ ನಮಗೆ ನೀನು ಗ್ರಾಮದ ಗಡಿ, ಬಹುಜನರ ಸಾಕ್ಷಿ, ತೂಗುವುದು ಮತ್ತು ಅಳೆಯುವುದು - ಈ ನಾಲ್ಕನ್ನು ನೀನು ಕಪ್ಪವಾಗಿ ಕೊಡಬೇಕು'.

ಎ: ೧) ಕಲಿಯ ದುಷ್ಟಸ್ವರೂಪವನ್ನು ಕಲಿಯೇ ಹಾಗೆ ನಿರೂಪಿಸಿದಾಗ ಧರ್ಮರಾಜ ಅದಕ್ಕೆ ಮೆಚ್ಚಿ ''ನಿನ್ನ ದುಷ್ಟಸ್ವರೂಪವನ್ನು ನೀನೇ ಯಥಾರ್ಥವಾಗಿ ಹೊರಹಾಕಿರುವೆ. ಅದರಿಂದಾಗಿ ನಿನ್ನನ್ನು ಈಗ ಬಿಡುವೆ' ಎಂದು ನುಡಿದು, ತನ್ನ ಸಂತತಿಯಿರುವವರೆಗೆ ಎಂದರೆ ಸಾವಿರ ವರ್ಷಗಳ ವರೆಗೆ ಕಲಿಯು ತನ್ನ ರಾಜ್ಯದಲ್ಲಿ ಕಾಲಿಡಬಾರದು ಎಂದು ವಿಧಿಸುವನು.

೨) ಅನಂತರವೂ ಸಹ ಗಡಿ, ಬಹುಮತ, ತೂಗುವುದು, ಅಳೆಯುವುದು – ಈ ನಾಲ್ಕು ಸಹ ಎಂದಿನಂತೆ ನಡೆದು ಅದು ಧರ್ಮರಾಜನಿಗೆ ನೀಡುವ ಕಪ್ಪವಾಗಬೇಕು ಎಂದು ವಿಧಿಸುವನು.

೩) ಅದರಿಂದಾಗಿ ಇಂದಿಗೂ ಸಹ ಗಡಿ, ಬಹುಮತ, ತೂಗುವುದು, ಅಳೆಯುವುದು ಮೊದಲಾದವುಗಳಲ್ಲಿ ಸ್ವಲ್ಪ ಮಟ್ಟಿಗಿನ ಧರ್ಮ ಉಳಿಯಲು ಸಾಧ್ಯವಾಗಿದೆ ಎಂದಾಗುವುದು.

ಕೃಷ್ಣನಿಂದ ಕಲಿಯ ಶಾಸನ

ನೈವಾತಿಕ್ರಮಮೇತೇಷಾಂ ಕುರು ಸರ್ವಾತ್ಮನಾ ಕ್ವಚಿತ್ ।
ತಮಾಹ ಭಗವಾನ್ ಕೃಷ್ಣೋ ಯಾವತ್ ಪಾಂಡವಸಂತತಿಃ ॥ ೪೩ ॥

ತಾವನ್ನ ತೇ ಭವೇಚ್ಛಕ್ತಿಃ ಪ್ರವೃತ್ತಸ್ಯಾಪಿ ಭೂತಲೇ ।
ಪಾಂಡವೇಭ್ಯಃ ಪರಂ ಯಾವತ್ ಕ್ಷೇಮಕಃ ಕ್ರಮವರ್ಧಿತಾ ॥ ೪೪ ॥

---

೪೨. ಸೀಮಾಗ್ರಾಮಸ್ಸಕ್ಷೇತ್ರಮರ್ಯಾದಾ । ಅಧಿಃ ಋಣಪ್ರತಿನಿಧಿಃ । ಋಣದಾತುಃ ವಿಶ್ವಾಸಾರ್ಥಂ ತದ್ಧಸ್ತೇ ದತ್ತಂ ಯದ್ವಸು ತದಾಧಿರಿತ್ಯುಚ್ಯತೇ । ಬಹೂನಾಂ ವಾಕ್ಯಂ ತುಲಾ ಚ ಮಾನಂ ಚ ತುಲಾಮಾನೇ । ತುಲಾಗುಡಾದಿಕ್ರೀಯ-ವಸ್ತುಸ್ಥಾಪನಾರ್ಥಂ ಕೃತಾ ಪ್ರಸಿದ್ಧಾಮಾನಂ ಧಾನ್ಯಾದಿಪರಿಮಾಣಜ್ಞಾಪಕಂ ಪಾತ್ರವಿಶೇಷಃ ॥ – (ಜ.)

೪೨. ಸೀಮೇತಿ । ಸೀಮಾಗ್ರಾಮಕ್ಷೇತ್ರಾದಿಮರ್ಯಾದಾ ಅಧಿಕರಣೇ ಪ್ರತಿನಿಧಿಃ । – (ವ.)

೪೪. ಪಾಂಡವೇಭ್ಯಃ ಪರಂ ಕ್ಷೇಮಕಃ= ಕ್ಷೇಮಕಾಖ್ಯೋ ರಾಜಾ ಯಾವತ್ ತಾವತ್ಪಾಂಡವಸಂತತಿಃ ಕ್ರಮವರ್ಧಿತಾ= ಕ್ರಮೇಣ ವರ್ಧಿತಾ ವರ್ತತ ಇತಿ ಪೂರ್ವಪದಾವೃತ್ಯಾ ಯೋಜನಾ ॥ – (ವಾ.)

೪೪. ಕ್ರಮವರ್ಧಿತೇತಿ ಪದಂ ದೇಹಲೀದೀಪಿಕಾನ್ಯಾಯೇನ ಯೋಜ್ಯಮ್ ॥ – (ಜ.)

ಅ: ನೀನು ಇವುಗಳ ಉಲ್ಲಂಘನೆಯನ್ನು ಸರ್ವಥಾ ಎಲ್ಲೂ ಮಾಡಕೂಡದು''. ಧರ್ಮರಾಜ ಹೀಗೆನ್ನಲು ಕೃಷ್ಣ ತಿಳಿಸಿದ - ''ಪಾಂಡವರ ಸಂತತಿಯಿರುವವರೆಗೂ ನೀನು ಭೂಮಿಯಲ್ಲಿ ಪ್ರವೃತ್ತನಾದರೂ ಸಾಮರ್ಥ್ಯವಿರಲಾರದು, ಪಾಂಡವರ ನಂತರ ಕ್ಷೇಮಕನ-ವರೆಗೆ ನಿನ್ನ ಪ್ರವೃತ್ತಿಕ್ರಮವಾಗಿ ಹೆಚ್ಚುವುದು''.

ಕ್ಷೇಮಕಾತ್ ಪರತಃ ಪೂರ್ತಿಂ ಶಕ್ತಿಸ್ತೇ ಯಾಸ್ಯತಿ ಧ್ರುವಮ್ ।
ನ ದ್ರಷ್ಟವ್ಯಂ ಭೂತಲಂ ತೇ ಕುತ ಏವ ಸ್ಪೃಶೇರ್ಭುವಮ್ ॥ ೪೫ ॥

ಯಾವತ್ ಪಾರ್ಥಾ ಅಹಂ ಚಾತ್ರ ತತೋ ಭುವಿ ಪದಂ ಕುರು ।
ಇತ್ಯುಕ್ತೋ ವಾಸುದೇವೇನ ಮೋಚಿತೋ ಧರ್ಮಜೇನ ಚ ॥ ೪೬ ॥

ಅ: 'ಕ್ಷೇಮಕನ ಅನಂತರ ನಿನ್ನ ಶಕ್ತಿ ಪೂರ್ಣತೆಯನ್ನು ನಿಶ್ಚಿತವಾಗಿ ಪಡೆಯುವುದು. ಪಾಂಡವರು ಹಾಗೂ ನಾನು ಈ ಭೂಮಿಯ ಮೇಲೆ ಇರುವವರೆಗೂ ನೀನು ಭೂಮಿಯನ್ನು ನೋಡಲೂ ಕೂಡದು. ಇನ್ನು ಅದನ್ನು ಮುಟ್ಟುವುದು ಎಂತು. ಅನಂತರ ನೀನು ಭೂಮಿಯಲ್ಲಿ ಕಾಲಿಡಬಹುದು'. ಕೃಷ್ಣ ಹೀಗೆ ಹೇಳಿ ಕಲಿಯನ್ನು ಯುಧಿಷ್ಠಿರನಿಂದ ಬಿಡುಗಡೆ ಮಾಡಿಸಿದ.

ಸಮುದ್ರ ಗುಹೆಗೆ ಕಲಿ

ತಾನ್ ಪ್ರಣಮ್ಯ ಯಯೌ ಪಾರೇ ಸಮುದ್ರಸ್ಯಾಶ್ರಯದ್ಗುಹಾಮ್ ।
ಪಾರ್ಥಾಶ್ಚ ಕೃಷ್ಣಸಹಿತಾ ರಕ್ಷಂತಃ ಕ್ಷ್ಮಾಂ ಮುದಂ ಯಯುಃ ॥ ೪೭ ॥

ಅ: ಕಲಿ ಅವರಿಗೆ ನಮಸ್ಕರಿಸಿ ಸಮುದ್ರದ ಆಚೆಯ ಗುಹೆಯೊಂದನ್ನು ಹೊಕ್ಕ. ಪಾಂಡವರು ಕೃಷ್ಣನೊಡನೆ ಭೂಮಿಯನ್ನು ಪಾಲಿಸುತ್ತಾ ಆನಂದವನ್ನು ಹೊಂದಿದರು.

ವಿ: ೧) ಕೃಷ್ಣರಕ್ಷಿತರಾದ ಪಾಂಡವರು ಹೀಗೆ ಕಲಿಯನ್ನು ನಿಗ್ರಹಿಸಿ ತಮ್ಮ ರಾಜ್ಯವನ್ನು ಅತ್ಯಂತ ಧರ್ಮದಿಂದಲೇ ಪಾಲಿಸುತ್ತಾ ನಲಿದರು ಎಂದರ್ಥ.

೨) ಕೃಷ್ಣ ಕಲಿಯಿಂದ ನಮಸ್ಕೃತನಾದದ್ದು ಶ್ರೀಹರಿಯು 'ಅಮರಾಸುರಸಿದ್ಧವಂದ್ಯ' (ಭಾರತ ೧/೧/೧) ಎಂಬುದಕ್ಕೆ ಅತ್ಯುತ್ತಮ ನಿದರ್ಶನ.

---

೪೭. ಸಮುದ್ರಸ್ಯ ಪಾರೇ ಪರತೀರೇ ಪ್ಲಕ್ಷದ್ವೀಪ ಇತ್ಯರ್ಥಃ । - (ಜ.)

೪೭. ಕಲಿಮಾಸನ್ನಮಾವಿಷ್ಯಂ ನಿರ್ವಾಸ್ಯ ನೃಪನಂದನಃ ॥ – ಭಾರತ (ಆಶ್ವಮೇಧಿಕ. ೪/೧೮)

ಅನುಗೀತಾ ಪ್ರಸಂಗ

ಏವಂ ಪಾರ್ಥಾನ್ ಪ್ರತಿಷ್ಠಾಪ್ಯ ಶಕ್ರಪ್ರಸ್ಥೇ ತು ಸಾರ್ಜುನಃ ।
ಕ್ರೀಡನ್ ದಿವ್ಯಾಃ ಕಥಾಃ ಪ್ರಾಹ ಪುತ್ರಶೋಕಾಪನುತ್ತಯೇ ।
ಗೀತೋಕ್ತಂ ವಿಸ್ಮೃತಂ ಚಾಸ್ಮೈ ಪುನರ್ವಿಸ್ತರತೋಽವದತ್ ॥ ೪೮ ॥

ಅ: ಹೀಗೆ ಪಾಂಡವರನ್ನು ರಾಜ್ಯದಲ್ಲಿ ಸ್ಥಾಪಿಸಿ ಕೃಷ್ಣ ಅರ್ಜುನನೊಂದಿಗೆ ಇಂದ್ರಪ್ರಸ್ಥದಲ್ಲಿ ವಿಹರಿಸುತ್ತಾ ಅವನ ಪುತ್ರಶೋಕವನ್ನು ಕಳೆಯಲೆಂದು ದಿವ್ಯವಾದ ಕಥೆಗಳನ್ನು ಹೇಳಿದ. ಗೀತೆಯಲ್ಲಿ ಹೇಳಿದ್ದನ್ನು ಮರೆತಿದ್ದ ಅರ್ಜುನನಿಗೆ ಕೃಷ್ಣ ಪುನಃ ವಿಸ್ತಾರದಿಂದ ಉಪದೇಶಿಸಿದ.

ವಿ: ೧) ಹಸ್ತಿನಾವತಿಯಲ್ಲಿ ಪಾಂಡವರು ರಾಜ್ಯವಾಳುತ್ತಿದ್ದಾಗ ಕೃಷ್ಣ ಅರ್ಜುನನೊಂದಿಗೆ ಇಂದ್ರಪ್ರಸ್ಥಕ್ಕೆ ತೆರಳಿ ಅಲ್ಲಿ ಅವನಿಗೆ ಬಗೆಬಗೆಯ ಪುಣ್ಯಕಥೆಗಳನ್ನು ತಿಳಿಸಿ ಅವನ ಪುತ್ರಶೋಕವನ್ನು ಪರಿಹರಿಸಿದ ಎಂದರ್ಥ :

ವಾಸುದೇವಾನುಧ್ಯಾನಪರಿಬೃಂಹಿತರಂಹಸಾ ।
ಭಕ್ತ್ಯಾ ನಿರ್ಮಥಿತಾಶೇಷಕಷಾಯಧಿಷಣೋಽರ್ಜುನಃ ।
ಗೀತಂ ಭಗವತಾ ಜ್ಞಾನಂ ಯತ್ ತತ್ ಸಂಗ್ರಾಮಮೂರ್ಧನಿ ।
ಕಾಲಕರ್ಮತಮೋರುದ್ಧಂ ಪುನರಧ್ಯಗಮತ್ ಪ್ರಭುಃ ॥ – ಭಾಗವತ(೧/೧೫/೨೯,೩೦)

೨) ಕೃಷ್ಣ ತಾನಿನ್ನು ದ್ವಾರಕೆಗೆ ತೆರಳುವುದಾಗಿ ತಿಳಿಸಿದಾಗ ಅರ್ಜುನ ಕೃಷ್ಣನ ವಿರಹವನ್ನು ಸಹಿಸಲಾಗದೇ ಮತ್ತೊಮ್ಮೆ ಗೀತೋಪದೇಶವನ್ನು ಮಾಡಲು ಕೇಳಿಕೊಳ್ಳುವನು, ಆಗ ಯುದ್ಧದ ಗೊಂದಲದಲ್ಲಿದ್ದುದರಿಂದ ಕೇಳಿದ್ದೆಲ್ಲ ಪೂರ್ಣವಾಗಿ ನೆನಪಿನಲ್ಲಿಲ್ಲ ಎಂದು ತಿಳಿಸುವನು.

೩) ಕೃಷ್ಣ ಅದಕ್ಕೆ ಏನೋದದಿಂದ – 'ನಿನಗೆ ಅಂದು ಕೇಳಿದ್ದು ನೆನಪಿನಲ್ಲಿ ಇಲ್ಲವೆಂದಾದರೆ ನನಗೆ ಅಂದಿದ್ದ ಸ್ಫೂರ್ತಿಯೂ ಇಂದು ಇಲ್ಲವಾಗಿದೆ' ಎಂದ; ಕೃಷ್ಣನಿಗೆ ದೇಶ, ಕಾಲ ಮೊದಲಾದ ಯಾವುದೇ ಕಾರಣದಿಂದಲೂ ಮೇಲು ಕೀಳುಗಳಿಲ್ಲ. ಆದರೂ ಹಾಗೆ ತಿಳಿಸುವ ಮೂಲಕ ಅಂದಿನ ಪ್ರಸಂಗಾನುಕೂಲ್ಯ ಇಂದಿಲ್ಲವಾದ್ದರಿಂದ ಅದನ್ನೆಲ್ಲ ಇಂದು ಪುನಃ ಹೇಳಲಾರೆ ಎಂದಷ್ಟೇ ಅದರ ಅರ್ಥ.

---

೪೮. ವಿದಿತಂ ಮೇ ಮಹಾಬಾಹೋ ಸಂಗ್ರಾಮೇ ಸಮುಪಸ್ಥಿತೇ ।
ಮಾಹಾತ್ಮ್ಯಂ ದೇವಕೀಮಾತಸ್ತಚ್ಚತೇ ರೂಪಮೈಶ್ವರಮ್ ॥
ಯತ್ ತದ್ ಭಗವತಾ ಪ್ರೋಕ್ತಂ ಪುರಾ ಕೇಶವ ಸೌಹೃದಾತ್ ॥
ತತ್ ಸರ್ವಂ ವುರುಷವ್ಯಾಘ್ರ ನಷ್ಟಂ ಮೇ ಭ್ರಷ್ಟಚೇತಸಃ ॥
ಮಮ ಕೌತೂಹಲಂ ತ್ವಸ್ತಿತೇಷ್ವರ್ಥೇಷು ಪುನಃ ಪುನಃ ॥ (ಅರ್ಜುನ ಮಾಡಿದ ಶ್ರೀಕೃಷ್ಣಪ್ರಾರ್ಥನೆ)
– ಭಾರತ (ಆಶ್ವಮೇಧಿಕ. ೧೬/೫,೬)

೪) ಹಾಗೆ ಹೇಳಿದ ಕೃಷ್ಣ ಗೀತೆಯ ವಿವರಗಳನ್ನು ತಿಳಿಸಿದ. ಅದಕ್ಕೆ ಅನುಗೀತೆ ಎಂದು ಹೆಸರು. ಅನುಗೀತಾಪರ್ವ ಎಂಬ ಹೆಸರಿನಲ್ಲಿ ಇದು ಆಶ್ವಮೇಧಿಕಪರ್ವದಲ್ಲಿ ಮೂವತ್ತೇಳು ಅಧ್ಯಾಯಗಳಲ್ಲಿ ಒಟ್ಟು ಒಂದು ಸಾವಿರದ ನಲವತ್ತೊಂದು ಶ್ಲೋಕಗಳಲ್ಲಿ ಆ ಏಳುನೂರು ಶ್ಲೋಕಗಳ ಗೀತೆಯ ವಿವರ ನಿರೂಪಿತವಾಗಿದೆ.

೫) ಶ್ರೀಮನ್ಮಧ್ವಾಚಾರ್ಯರ ಭಾಷ್ಯಕ್ಕೆ ಅನುವ್ಯಾಖ್ಯಾನವಿದ್ದಂತೆ ಕೃಷ್ಣನ ಆ ಗೀತೆಗೆ ಅವನೇ ತಿಳಿಸಿದ ಈ ಅನುಗೀತೆ ಎಂದು ತಿಳಿಯಬೇಕು. ಮುಂದಿನ ಶ್ಲೋಕಗಳಲ್ಲಿ ಅದರ ಸಾರಸಂಗ್ರಹವನ್ನು ನೀಡಿರುವರು.

ಅನುಗೀತಾ ಸಾರ

ವಾಣೀ ಪ್ರಾಣೋ ವಾಸುದೇವ ಇತ್ಯೇತೈರಖಿಲಂ ತತಮ್ ।
ಸರ್ವೋತ್ತಮತ್ವಮೇತೇಷಾಂ ಸರ್ವಮೇತದ್ವಶೇ ಜಗತ್ ।
ಉತ್ತರೋತ್ತರಮೇತೇಽಪಿ ಗುಣೋಚ್ಚಾಸ್ತದ್ವಶೇ ಪರೇ ॥ ೪೯ ॥

ಅ: ಭಾರತಿ, ಮುಖ್ಯಪ್ರಾಣ, ನಾರಾಯಣ ಎಂಬವರಿಂದ ಸಕಲ ಜಗತ್ತು ವ್ಯಾಪ್ತವಾಗಿದೆ. ಸರ್ವೋತ್ತಮತ್ವ ಇರುವುದು ಈ ಮೂವರಿಗಷ್ಟೇ. ಇವರ ಅಧೀನದಲ್ಲೇ ಸಕಲ ಜಗತ್ತು ಇರುವುದು. ಇವರು ಉತ್ತರೋತ್ತರ ಹೆಚ್ಚು ಗುಣಶಾಲಿಗಳು. ಇತರರೆಲ್ಲ ಇವರ ಅಧೀನರು.

ವಿ: ಭಾರತಿಗಿಂತ ಮುಖ್ಯಪ್ರಾಣ, ಅವನಿಗಿಂತ ಶ್ರೀಹರಿ ಉತ್ತಮರು ಎಂದರ್ಥ. ಇತರರು ಎಂದರೆ ರುದ್ರಾದಿ ಸಕಲರು ಎಂದರ್ಥ. ಸರ್ವೋತ್ತಮತ್ವವೆಂದರೆ ಶ್ರೀಹರಿಗೆ ನಿರವಧಿಕ ಸರ್ವೋತ್ತಮತ್ವ, ಪ್ರಾಣನಿಗೆ ಸಕಲ ಜೀವೋತ್ತಮತ್ವ, ಭಾರತಿಗೆ ಸ್ತ್ರೀ ಜೀವರಲ್ಲಿ ಸರ್ವೋತ್ತಮತ್ವ ಎಂದರ್ಥ.

ಇತ್ಥಂ ಹರೇರ್ವಶೇ ಸರ್ವಂ ಗುಣಪೂರ್ಣಶ್ಚ ಸ ಪ್ರಭುಃ ।
ಏಕ ಏವ ನ ಚಾನ್ಯೋಽಸ್ತಿ ಪ್ರಾಣೋಚ್ಚಾತದಧೋ ರಮಾ ॥ ೫೦ ॥

ಅ: ಹೀಗೆ ಎಲ್ಲವೂ ಶ್ರೀಹರಿಗೆ ಅಧೀನ. ಸರ್ವಗುಣಪೂರ್ಣನಾದವನೂ ಸರ್ವ-ಸಮರ್ಥನಾದವನೂ ಅವನೊಬ್ಬನೇ ಹೊರತು ಬೇರಾರೂ ಅಲ್ಲ. ಮುಖ್ಯಪ್ರಾಣನಿಗಿಂತ ರಮಾದೇವಿ ಶ್ರೇಷ್ಠಳು; ನಾರಾಯಣನಿಗಿಂತ ಕಡಿಮೆಯಾದವಳು.

---

೪೯. ಸರ್ವೋತ್ತಮತ್ವಮೇತೇಷಾಮಿತ್ಯತ್ರ ವಿಷ್ಣೋಃ ನಿರವಧಿಕಸರ್ವೋತ್ತಮತ್ವಂ ''ಇಯದಾಮನನಾತ್'' ಇತಿ ಬ್ರಹ್ಮಸೂತ್ರೇ ಅಧಿಕಾರಿಣಾಂ ಪ್ರಾಣಾವಸಾನತ್ವೋಕ್ತೇಃ ಆಧಿಕಾರಿಕಮಂಡಲಸ್ಥಸಕಲಜೀವೋತ್ತಮತ್ವಂ ಪ್ರಾಣಸ್ಯ ವಾಣ್ಯಾಸ್ತು ಆಧಿಕಾರಿಕಮಂಡಲಸ್ಥದೇವೀಷು ಸರ್ವೋತ್ತಮತ್ವಮಿತಿ ವಿವೇಕಃ ॥ – (ವಾ.)

ಸ ಹುತಾಶ ಇತಿ ಪ್ರೋಕ್ತೋ ಹುತಮತ್ಯಖಿಲಂ ಯತಃ ।
ವಾಕ್ಪ್ರಾಣಮಧ್ಯಗೋ ನಿತ್ಯಂ ಧಾರಯತ್ಯಖಿಲಂ ಜಗತ್ ॥ ೫೧ ॥

ಅ: ಹೋಮಿಸಿದ್ದನ್ನೆಲ್ಲ ಸ್ವೀಕರಿಸುವುದರಿಂದ ಶ್ರೀಹರಿಗೆ ಹುತಾಶ ಎಂದು ಹೆಸರು. ಅವನು ಭಾರತೀಪ್ರಾಣರ ಅಂತರ್ಯಾಮಿಯಾಗಿದ್ದು ಅಖಿಲ ಜಗತ್ತನ್ನೂ ಸದಾ ಧರಿಸಿರುವನು.

ಜೀವ ತ್ರೈವಿಧ್ಯ

ಸ ಈಶೋ ಬ್ರಹ್ಮರುದ್ರಾದ್ಯಾ ಜೀವಾ ಏವ ಪ್ರಕೀರ್ತಿತಾಃ ।
ಏತಸ್ಯಾನಾದಿಸದ್ಭಕ್ತಾ ಮುಕ್ತಿಯೋಗ್ಯಾ ಹಿ ತೇ ಸ್ಮೃತಾಃ ॥ ೫೨ ॥

ಅ: ಅವನು ಈಶ್ವರ. ಬ್ರಹ್ಮ, ರುದ್ರ ಮೊದಲಾದವರೆಲ್ಲ ಜೀವರೆಂದೇ ಹೇಳಲ್ಪಟ್ಟವರು. ಅವನಿಗೆ ಅನಾದಿಕಾಲದಿಂದ ಉತ್ತಮ ಭಕ್ತರಾದವರೆಲ್ಲ ಮುಕ್ತಿಯೋಗ್ಯರೆನ್ನಿಸುವರು.

ಅನಾದಿದ್ವೇಷಿಣೋ ಯೇಽಸ್ಮಿಂಸ್ತಮೋಯೋಗ್ಯಾಃ ಸುಪಾಪಿನಃ ।
ಮಿಶ್ರಾ ಮಧ್ಯಾ ಇತಿ ಜ್ಞೇಯಾಃ ಸಂಸಾರಪರಿವರ್ತಿನಃ ॥ ೫೩ ॥

ಏವಂ ಜೀವಾಸ್ತ್ರಿಧಾ ಪ್ರೋಕ್ತಾ ಭವಂತ್ಯೇತೇ ನ ಚಾನ್ಯಥಾ ।
ತಾರತಮ್ಯಂ ಚ ವಿಜ್ಞೇಯಂ ಲಿಂಗೈರ್ದೈಹಿಕಮಾನಸೈಃ ॥ ೫೪ ॥

ಅ: ಶ್ರೀಹರಿಯ ಅನಾದಿ ದ್ವೇಷಿಗಳು ತಮೋಯೋಗ್ಯರು, ಅವರು ಮಹಾಪಾಪಿಗಳು. ಸಂಸಾರದಲ್ಲಿ ಸುತ್ತುತ್ತಿರುವ ಭಕ್ತಿದ್ವೇಷ ಮಿಶ್ರರು, ಮಧ್ಯಮರು ಎಂದು ತಿಳಿಯಬೇಕು. ಹೀಗೆ

---

೫೦. ಹರೇರ್ವಶೇ ಸರ್ವಂ ಜಗತ್ ಸ್ಥಿತಮಿತಿ ಶೇಷಃ । ಸ ಪ್ರಭುಃ ಸರ್ವಗುಣಪೂರ್ಣಶ್ಚ । –(ವೇ.)

೫೧. ಅಖಿಲಂ ತತಮಿತ್ಯತ್ರ ಅಖಿಲಂ ಜಗದಿತಿ ಜಗತ್ಪದಮಾಕೃಷ್ಯ ಯೋಜನೀಯಮ್। ತಥಾ ಚ ಜಾಯತೇ ಗರ್ಭತಿ ಚೇತಿ ವ್ಯುತ್ಪತ್ತ್ಯಾ ಉತ್ಪತ್ತಿನಾಶವನ್ಮಹತ್ತತ್ವಾಂತಂ ತತ್ತ್ವಮೇವ ಜಗತ್। ತತ್ರ ಚ ವಾಣೀಪ್ರಾಣಯೋಃ ವ್ಯಾಪ್ತಿರಸ್ತ್ಯೇವ। ಪ್ರಾಣೋಽಚ್ಚಾ ತದಧೋ ರಮಾ ಇತ್ಯತ್ರ ರಮಾ ಪ್ರಾಣಾದುಚ್ಚಾ ತದಧಃ = ತಸ್ಮಾತ್ ನಾರಾಯಣಾತ್ ಅಧಃ ವಿದ್ಯಮಾನಾ ॥ –(ವಾ.)

೫೨. ಸ ಹುತಾಶ ಇತ್ಯತ್ರ ಹುತಾಶಪದಂ ದೇವತಾವಾಚಕಸಕಲಪದೋಪಲಕ್ಷಣಮ್। ತೇನ ಅಗ್ನಿಸೂಕ್ತಾದಾವಪ್ಯಗ್ನ್ಯಾದೇರುತ್ತಮತ್ವಮುಚ್ಯತೇ। ಅತಃ ಕಥಂ ಹರೇರುತ್ತಮತ್ವಮಿತಿ ಶಂಕಾ ಚ ಪರಿಹೃತಾ। ಜಗತ್= ಸ್ತ್ರೀಪುರುಷಾತ್ಮಕಂ ಜಗತ್। ವಾಕ್ಪ್ರಾಣಮಧ್ಯಗೋ ಭೂತ್ವಾ ಧಾರಯತಿ ॥ –(ವಾ.)

ಜೀವರು ತ್ರಿವಿಧರೆನ್ನಿಸಿರುವರು. ಇದೆಂದೂ ವ್ಯತ್ಯಾಸ ಹೊಂದದು. ದೈಹಿಕ ಮತ್ತು ಮಾನಸಿಕ ಲಕ್ಷಣಗಳಿಂದ ಜೀವರ ತಾರತಮ್ಯವನ್ನು ಅರಿಯಬೇಕು.

ಏಃ ದ್ವಾತ್ರಿಂಶಲ್ಲಕ್ಷಣಗಳು ದೈಹಿಕಲಕ್ಷಣಗಳಾದರೆ, ವಿಷ್ಣುಭಕ್ತಿ ಮೊದಲಾದವುಗಳು ಮಾನಸಿಕಲಕ್ಷಣ ಎಂದು ತಿಳಿಯಬೇಕು (೧/೧೧೯; ೧೨/೧೩೩).

ದೈಹಿಕ ಮಾನಸಿಕ ಲಕ್ಷಣಗಳು

ವಿಷ್ಣೋರ್ಲಿಂಗಾನುಸಾರಿತ್ವಾತ್ ತಾರತಮ್ಯಾತ್ ತದೀಕ್ಷಣಮ್ ।
ವಿಷ್ಣೋಸ್ತದನುಗಾನಾಂ ಚ ಪ್ರೀತಿಕೃದ್ಧರ್ಮ ಈರಿತಃ ॥ ೫೫ ॥

ಅಧರ್ಮೋಽನ್ಯ ಇಯಂ ನಿಷ್ಠಾ ಪ್ರಲಾಪಃ ಕಿಂ ಕರಿಷ್ಯತಿ ।
ಏವಮಾದ್ಯನುಶಾಸ್ಯಾಜಃ ಪಾರ್ಥಂ ಪಾರ್ಥೈಃ ಸುಸತ್ಕೃತಃ ॥ ೫೬ ॥

ಅಃ ವಿಷ್ಣುವು ಈ ಲಕ್ಷಣಗಳಿಗೆ ಅನುಗುಣವಾಗಿ ಅನುಗ್ರಹಿಸುವುದರಿಂದ ಜೀವರನ್ನು ತಾರತಮ್ಯಕ್ರಮದಲ್ಲಿಯೇ ತಿಳಿಯಬೇಕು. ವಿಷ್ಣುವಿಗೂ ಅವನ ಭಕ್ತರಿಗೂ ಪ್ರಿಯವುಂಟು-

---

೫೪. ಲಿಂಗೈರ್ದೈಹಿಕಮಾನಸೈರಿತ್ಯತ್ರ ದೈಹಿಕಲಿಂಗಂ ನಾಮ ಯಾವನ್ಮಹತ್ತತ್ತ್ವಂ ತಾವದ್ಬ್ರಹ್ಮಣೋ ದೇಹಸ್ತಿಷ್ಠತಿ ತತೋಽರ್ವಾಕ್ ಯಾವದಹಂಕಾರತತ್ತ್ವಂ ತಾವದ್ರುದ್ರಶೇಷಗರುಡಾನಾಂ ದೇಹಾಸ್ತಿಷ್ಠಂತಿ। ತತೋಽರ್ವಾಕ್ ಯಾವನ್ಮನಸತ್ತ್ವಂ ತಾವದಿಂದ್ರಸ್ಕಂದಯೋಃ ದೇಹಸ್ತಿಷ್ಠತಿ। ಏವಂ ಚ ಪೂರ್ವಪೂರ್ವದೇಹಾಃ ಸ್ಥೂಲಾಃ ಸ್ಥೂಲಾಃ। ಉತ್ತರೋತ್ತರದೇವದೇಹಾಸ್ತು ಸೂಕ್ಷ್ಮಾಃ ಸೂಕ್ಷ್ಮಾಃ। ತತಶ್ಚ ದೈಹಿಕಂ = ದೇಹಸಂಬಂಧಿಪರಿಮಾಣಂ ದೇವಾನಾಂ ತಾರತಮ್ಯೇ ಲಿಂಗಮ್। ಬ್ರಹ್ಮಾ ಸಕಲವೇದೋಕ್ತಗುಣಾನ್ ಮನಸಾ ಜಾನಾತಿ। ರುದ್ರಾದ್ಯಾಸ್ತು ತತೋಽಪಿ ಕಿಂಚಿದೂನತಯಾ ಜಾನಂತಿ। ತಥಾಚ ಕ್ರಮಾದೂನತಯಾ ಸ್ಥಿತಮಾನಸಂ ಜ್ಞಾನಮಪಿ ದೇವಾನಾಂ ತಾರತಮ್ಯೇ ಲಿಂಗಮಿತಿ ಭಾವಃ ॥ – (ವಾ.)

೫೫. ದೈಹಿಕೇತಿ ದೇಹಸಂಬಂಧಿ ಶಂಖಚಕ್ರಾದಿಧಾರಣೈಃ, ಶ್ರೀವಿಷ್ಣುಮುದ್ದಿಶ್ಯ ಪ್ರದಕ್ಷಿಣನಮಸ್ಕಾರಾದ್ಯೈರ್ವಾ ಮಾನಸೈರ್ಜ್ಞಾನಾದ್ಯೈರ್ಲಿಂಗಲಕ್ಷಣೈಃ ತಾಮರತಮ್ಯಂ ಜ್ಞೇಯಂ। ಜೀವಾನಾಮಿತಿ ಶೇಷಃ। ಉಕ್ತಲಕ್ಷಣಾ ಉತ್ತಮಾಃ ತದ್ರಹಿತಾ ಅಧಮಾ ಇತಿ ವಿಜ್ಞೇಯಮಿತಿ ಭಾವಃ। - (ಜ.)

೫೫. ತದೀಕ್ಷಣಂ ತೇಷಾಂ ಈಕ್ಷಣಂ ಕಾರ್ಯಮ್ ॥ – (ವಾ.)

೫೬. ಇಯಂ ನಿಷ್ಠಾ ನಿರ್ಣಯಃ । ಪ್ರಲಾಪಃ ಮೃತಪುತ್ರಮುದ್ದಿಶ್ಯ ಕೃತಃ ಪ್ರಲಾಪಃ । ಕಿಂಕರಿಷ್ಯತಿ ನ ಕಿಮಪೀತ್ಯರ್ಥಃ। - (ಜ.)

೫೬. 'ಏವಮಾದ್ಯನುಶಾಸ್ಯಾಜಃ ಪಾರ್ಥಂ ಪಾರ್ಥೈಸ್ಸುಸತ್ಕೃತಃ' ಇತ್ಯತ್ರ ಏವಮಾದಿ ಏತದಾದಿ ಇತಿ ವದಂತಿ । ಏವಂ ಪೂರ್ವೋಕ್ತಪ್ರಕಾರೇಣ ಆದಿ ಪ್ರಧಾನಂ ಪ್ರಮೇಯಂ ಅನುಶಾಸ್ತೀತಿ ವಾರ್ಥಃ ॥ – (ತಿ.,ಮ.)

ಮಾಡುವುದೇ ಧರ್ಮವೆನ್ನಿಸುವದು. ಬೇರೆ ಎಲ್ಲವೂ ಅಧರ್ಮ, ಇದೇ ಶಾಸ್ತ್ರ ನಿರ್ಣಯ. ವ್ಯರ್ಥವಾಗಿ ಶೋಕಿಸಿದರೆ ಏನು ಫಲ - ಇದೇ ಮೊದಲಾದುದನ್ನು ಅರ್ಜುನನಿಗೆ ಉಪದೇಶಿಸಿ ಕೃಷ್ಣ ಪಾಂಡವರಿಂದ ಬಹಳ ಸತ್ಕೃತನಾದ.

ಏ: ಹೀಗೆ ತತ್ವಜ್ಞಾನವನ್ನು ತಿಳಿದು ಶ್ರೀಹರಿಯ ಸಂಕಲ್ಪಕ್ಕೆ ಅನುಗುಣವಾಗಿ ಬಾಳುವುದೇ ಜೀವನದ ಸಾರ್ಥಕ್ಯ. ಅದನ್ನು ಬಿಟ್ಟು ವಿನಾಕಾರಣ ಶೋಕಿಸುವುದರಿಂದ ಏನೂ ಫಲವಿಲ್ಲ. ಕೃಷ್ಣನ ಈ ಉಪದೇಶದಿಂದ ಅರ್ಜುನ ಪುತ್ರಶೋಕವನ್ನು ಪೂರ್ಣವಾಗಿ ಕಳೆದುಕೊಂಡು ನೆಮ್ಮದಿ ಹೊಂದಿದ.

ಸುಭದ್ರೆಯೊಂದಿಗೆ ದ್ವಾರಕೆಗೆ ಕೃಷ್ಣನ ಪ್ರಯಾಣ

ಕಥಂಚಿತ್ ತಾನವಸ್ಥಾಪ್ಯ ಸುದೂರಾನುಗತಾನ್ ಪ್ರಭುಃ ।
ಸುಭದ್ರಾಸಹಿತಃ ಪ್ರಾಯಾದ್ಯಾನೇನ ದ್ವಾರಕಾಂ ಪುರೀಮ್ ॥ ೫೭ ॥

ಅ: ತನ್ನನ್ನು ಬಹುದೂರದ ವರೆಗೆ ಹಿಂಬಾಲಿಸಿ ಬಂದ ಪಾಂಡವರನ್ನು ಕೃಷ್ಣ ಹೇಗೋ ಸಮಾಧಾನಪಡಿಸಿ ಸುಭದ್ರೆಯ ಸಮೇತನಾಗಿ ರಥದಿಂದ ದ್ವಾರಕಾಪುರಿಗೆ ತೆರಳಿದ.

ಸಮಾಧಿವಿರತೋದಂಕಪರಿಪೃಷ್ಟಃ ಪಥಿ ಪ್ರಭುಃ ।
ಹತಂ ದುರ್ಯೋಧನಂ ಪ್ರಾಹ ಸಭ್ರಾತೃಸುತಸೈನಿಕಮ್ ॥ ೫೮ ॥

ಅ: ದಾರಿಯಲ್ಲಿ ಸಮಾಧಿಯಿಂದ ಎಚ್ಚೆತ್ತಿದ್ದ ಉದಂಕಮುನಿ ಕೇಳಿದಾಗ ದುರ್ಯೋಧನ ತನ್ನ ಸೋದರರು, ಮಕ್ಕಳು, ಸೈನಿಕರೊಂದಿಗೆ ಹತನಾದ ಎಂಬುದಾಗಿ ಶ್ರೀಕೃಷ್ಣ ತಿಳಿಸಿದ.

ಏ: ಉದಂಕನಿಗೆ ಉತ್ತಂಕ* ಎಂದು ನಾಮಾಂತರ.

ದುರ್ಯೋಧನನ ವಧೆಯಿಂದಾಗಿ ಕೆರಳಿದ ಉದಂಕ

ತಂ ಶಿಷ್ಯವಧಕೋಪೇನ ಶಪ್ತುಮಾತ್ಮಾನಮುದ್ಯತಮ್ ।
ಕೇಶವೋಽಶಮಯದ್ವಾಕ್ಯೈರ್ವಿಶ್ವರೂಪಂ ಪ್ರದರ್ಶ್ಯ ಚ ॥ ೫೯ ॥

---

೫೮. ಪ್ರಭುಃ ಕೃಷ್ಣಃ ಸುದೂರಾನುಗತಾನ್ ತಾನ್ ಪಾಂಡವಾನವಸ್ಥಾಪ್ಯ ಕಥಂಚಿತ್ ತದ್ಗಮನಾನಂತರಂ ಸುಭದ್ರಾ-ಸಹಿತಃ ಸನ್ ಯಾನೇನ ದ್ವಾರಕಾಂ ಯಯಾವಿತಿ ॥ – (ಸ.)

* ದದರ್ಶಾಥ ಮುನಿಶ್ರೇಷ್ಠಮುತ್ತಂಕಮಮಿತೌಜಸಮ್ । (ಇತ್ಯಾದಿ) – ಭಾರತ (ಆಶ್ವಮೇಧಿಕ. ೫೩/೭)

ಅ: ಶಿಷ್ಯನಾದ ದುರ್ಯೋಧನನ ವಧೆಯಿಂದಾಗಿ ಕೋಪಗೊಂಡ ಉದಂಕ ತನ್ನನ್ನು ಶಪಿಸಲು ಉದ್ಯುಕ್ತನಾದಾಗ ಕೃಷ್ಣ ತನ್ನ ವಿಶ್ವರೂಪವನ್ನು ತೋರಿ, ಹಿತವಚನಗಳಿಂದ ಸಾಂತ್ವನಪಡಿಸಿದ.

ವಿ: ೧) ದುರ್ಯೋಧನ ಉದಂಕಮುನಿಯ ಶಿಷ್ಯತ್ವ ವಹಿಸಿದ್ದವನು. ಅದರಿಂದಾಗಿ ಅವರಿಗೆ ಅವನ ಮೇಲೆ ವ್ಯಾಮೋಹ. ಅವನು ಹತನಾದುದ್ದರಿಂದ ಕುಪಿತನಾದ ಮುನಿ ಕೃಷ್ಣನನ್ನೇ ಶಪಿಸಹೊರಟ. ಸರ್ವಶಕ್ತನಾಗಿಯೂ ದುರ್ಯೋಧನನ ವಧೆಯನ್ನು ತಡೆಯಲಿಲ್ಲವೆಂದು ಅವನಿಗೆ ಕೃಷ್ಣನ ಮೇಲೆ ಕೋಪ. ಗಾಂಧಾರಿಯು ಮಾಡಿದ ಆಪಾದನೆಯೂ ಇಂತಹುದೇ ಆಗಿತ್ತು:

ಉಪೇಕ್ಷಿತಾ ವಿನಶ್ಯಂತಸ್ತ್ವಯಾ ಕಸ್ಮಾಜ್ಜನಾರ್ದನ ।
ಶಕ್ತೇನ ಬಹುಭೃತ್ಯೇನ ವಿಪುಲೇ ತಿಷ್ಠತಾ ಬಲೇ ॥
ಉಭಯತ್ರ ಸಮರ್ಥೇನ ಶ್ರುತವಾಕ್ಯೇನ ಚೈವ ಹ – ಭಾರತ (ಸ್ತ್ರೀ. ೨೫/೪೦)

೨) ಆಗ ಕೃಷ್ಣ ಅರ್ಜುನನಿಗೆ ತೋರಿಸಿದ್ದಂತೆ ವಿಶ್ವರೂಪವನ್ನು ತೋರಿಸಿದ. ಕೃಷ್ಣ ವಿಶ್ವರೂಪ ತೋರಿಸಿದ ಅನೇಕ ಪ್ರಸಂಗಗಳಲ್ಲಿ ಇದೂ ಒಂದು. ಉದಂಕಮುನಿ ಅಸಂಪ್ರಜ್ಞಾತ ಸಮಾಧಿಯನ್ನು ಸಾಧಿಸಿದ ಸ್ಥಿತಪ್ರಜ್ಞನಾದರೂ ಬಾಹ್ಯವಿಷಯದಲ್ಲಿ ಹೀಗೆ ಮೋಹಗೊಂಡು ಕೃಷ್ಣನಿಗೆ ವಿರೋಧ ಮಾಡಿದ್ದು ಅಸುರಾವೇಶದ ಫಲ ಎಂದು ತಿಳಿಯಬೇಕು.

ಉದಂಕನಿಗೆ ವಿಶ್ವರೂಪದರ್ಶನ

ಮದ್ಭಕ್ತೋ ನಿತರಾಮೇಷ ಮದಾರಾಧನತತ್ಪರಃ ।
ಮಾಮವಜ್ಞಾಯ ನಿರಯಂ ಮಾऽನುತ್ಥಾನಂ ವ್ರಜೇದಿತಿ ॥ ೬೦ ॥

---

೫೯. ಧಾರ್ತರಾಷ್ಟ್ರಾಶ್ಚ ನಿಹತಾಃ ಸರ್ವೇ ಸಸುತಬಾಂಧವಾಃ ।
ಇತ್ಯುಕ್ತವಚನೇ ಕೃಷ್ಣೇ ಭೃಶಂ ಕ್ರೋಧಸಮನ್ವಿತಃ ॥
ಉತ್ತಂಕ ಇತ್ಯುವಾಚೈನಂ ರೋಷಾದುತ್ಫುಲ್ಲಲೋಚನಃ ।
ಯಸ್ಮಾಚ್ಛಕ್ತೇನ ತೇ ಕೃಷ್ಣ ನ ತ್ರಾತಾಃ ಕುರುಪುಂಗವಾಃ ।
ಸಂಬಂಧಿನಃ ಪ್ರಿಯಾಸ್ತಸ್ಮಾಚ್ಛಪ್ಸ್ಯೇऽಹಂ ತ್ವಾಮಸಂಶಯಮ್ ॥ – ಭಾರತ (ಆಶ್ವಮೇಧಿಕ. ೫೩/೧೯,೨೦)

೫೯. ತೇऽಧರ್ಮೇಣ ಸಂಯುಕ್ತಾಃ ಪರೀತಾ ಕಾಲಧರ್ಮಣಾ ।
ತತಃ ಸ ತಸ್ಯೈ ಪ್ರೀತಾತ್ಮಾ ದರ್ಶಯಾಮಾಸ ತದ್ವಪುಃ ।
ಶಾಶ್ವತಂ ವೈಷ್ಣವಂ ಧೀಮಾನ್ ದದೃಶೇ ಯದ್ ಧನಂಜಯಃ ॥
ಸ ದದರ್ಶ ಮಹಾತ್ಮಾನಂ ವಿಶ್ವರೂಪಂ ಮಹಾಭುಜಮ್ ।
ಸಹಸ್ರಸೂರ್ಯಪ್ರತಿಮಂ ದೀಪ್ತಿಮತ್ ಪಾವಕೋಪಮಮ್ ॥
ಸರ್ವಮಾಕಾಶಮಾವೃತ್ಯ ತಿಷ್ಠಂತಂ ಸರ್ವತೋಮುಖಮ್ ॥ – ಭಾರತ (ಆಶ್ವಮೇಧಿಕ. ೫೫/೪,೫)

ಕೃಪಯಾ ವಾಸುದೇವೇನ ಬೋಧಿತಃ ಶಾಂತಮಾನಸಃ ।
ಪಶ್ಚಾತ್ತಾಪಾಭಿತಪ್ತಾತ್ಮಾ ತಮೇವ ಶರಣಂ ಯಯೌ ॥ ೬೧ ॥

ಅ: ನನ್ನಲ್ಲಿ ಬಹಳ ಭಕ್ತನಾದ ಈತ ನನ್ನ ಆರಾಧನೆಯಲ್ಲೇ ತೊಡಗಿದವನು. ನನ್ನನ್ನು ಅವಮಾನಿಸಿ ಶಾಶ್ವತ ನರಕವನ್ನು ಹೊಂದದಿರಲಿ ಎಂದು ಕರುಣೆಯಿಂದ ಕೃಷ್ಣ ಅವನಿಗೆ ಉಪದೇಶಿಸಿದ. ಉದಂಕಮುನಿ ಶಾಂತಮನಸ್ಕನಾದ. ಪಶ್ಚಾತ್ತಾಪದಿಂದ ಪರಿತಪಿಸಿದ ಮನಸ್ಸಿನಿಂದ ಅವನು ಕೃಷ್ಣನನ್ನೇ ಶರಣುಹೊಕ್ಕ.

ಎ: ೧) ಉದಂಕ ಹಾಗೆ ಕೃಷ್ಣನನ್ನು ಶಪಿಸಿದ್ದಲ್ಲಿ ಸ್ವತಃ ಭಗವಂತನಾದ ಕೃಷ್ಣನಿಗೆ ಯಾವ ಹಾನಿಯೂ ಇರುತ್ತಿರಲಿಲ್ಲವಾದರೂ ಉದಂಕನಿಗೆ ಗಾಂಧಾರಿಗೆ ಆದಂತೆ (೨೮/೨೨೩) ಅಪಾರವಾದ ತಪಸ್ಸಿನ ಹಾನಿ ಉಂಟಾಗುತ್ತಿತ್ತು; ಅವನು ಗುರುಸೇವೆ ಮೊದಲಾದವುಗಳ ಮೂಲಕ ತುಂಬ ಪರಿಶ್ರಮದಿಂದ ಮಾಡಿದ ಉತ್ತಮ ತಪಸ್ಸು ಹಾಗೆ ಹಾಳಾಗಬಾರದೆಂದು ಕರುಣೆಯಿಂದ ಕೃಷ್ಣ ಅವನಿಗೆ ಜ್ಞಾನ ನೀಡಿ ಉದ್ಧರಿಸಿದ ಎಂದರ್ಥ.

೨) ಉದಂಕನಿಗೆ ಗಾಂಧಾರಿಗೆ ಆಗಿದ್ದಂತೆ ಅಧಿಕ ಪುಣ್ಯ ಒದಗಿರಲಿಲ್ಲ ಎಂದು ಇದರಿಂದ ತಿಳಿಯುವುದು. ಗಾಂಧಾರಿಯ ಮೇಲೂ ಕೃಷ್ಣನಿಗೆ ಕರುಣೆಯಿದ್ದರೂ, ಅವಳ ಅಧಿಕ ಪುಣ್ಯವನ್ನು ನಾಶಪಡಿಸಲೆಂದು ಕೃಷ್ಣ ಹಾಗೆ ಮಾಡಿದ್ದ.

---

೬೧. ನ ಚ ತೇ ತಪಸೋ ನಾಶಮಿಚ್ಛಾಮಿ ತಪತಾಂ ವರ ।
ತಪಸ್ತೇ ಸುಮಹದ್ದೀಪ್ತಂ ಗುರವಶ್ಚಾಪಿ ತೋಷಿತಾಃ ॥ – ಭಾರತ (ಆಶ್ವಮೇಧಿಕ. ೫೩/೨೫)

೬೧. 'ದೇವಾ ಏವ ತದನ್ಯೇಭ್ಯಃ ಈಶಾ ನಾಸ್ತ್ರ ಸಂಶಯಃ ।
ಅಶಕ್ತಾ ಅಪಿ ಶಕ್ತಾನಾಂ ಶಕ್ತಾಃ ಶಾಪಾದಿಷು ಸ್ಫುಟಮ್ ।
ತಥಾಪ್ಯಶಕ್ತೈರ್ವಿಹಿತಾಃ ಶಾಪಾದ್ಯಾಃ ಶಕ್ತಿಮತ್ಸು ವೈ ।
ಅತ್ಯಲ್ಪಾಶ್ಚಾಲ್ಪಕಾಲಾಶ್ಚ ನ ಸಮ್ಯಕ್ಪ್ರಭವಂತಿ ಚ ।
ಯತ್ನೇನಾಪೋಹಿತುಂ ಶಕ್ಯಾ ಉತ್ತಮೈಸ್ತು ನ ಸಂಶಯಃ ।
ಉತ್ತಮೇಷು ಕೃತಾಃ ಶಾಪಾಃ ಕರ್ತೃಣಾಂ ಜ್ಞಾನಪುಣ್ಯಯೋಃ ।
ನಿಃಶೇಷೇಣ ನಿಹಂತಾರಸ್ತದನುಗ್ರಹಮಂತರಾ ।
ಸದಾರಯೋರ್ಬಹ್ವಿಷ್ಣ್ವೋರ್ವರಶಾಪಾದಯೋಽಖಿಲಾಃ ।
ತದನ್ಯೇನ ಕೃತಾಃ ಸರ್ವೇ ನಿಷ್ಫಲಾ ಏವ ನಿಶ್ಚಯಾತ್ ।
ನ ಚಾಪ್ಯವಾಂತರಾಃ ಶಾಪಾ ಭವಂತ್ಯೇಷಾಂ ತು ಕುತ್ರಚಿತ್ ।
ವರಾ ವಿಷ್ಣೋಃ ಶ್ರಿಯಶ್ಚಸ್ಯುರ್ಬಹ್ವಣಶ್ಚ ಯಥಾಕ್ರಮಮ್ ।
ಉತ್ತಮೈರಧಮಾನಾಂ ತು ವರಾಃ ಶಾಪಾ ಯಥೋದಿತಮ್ ।
ಸಂಪೂರ್ಣಫಲದಾ ಏವ ನಾತ್ರ ಕಾರ್ಯಾ ವಿಚಾರಣಾ ॥ ಇತಿ ಸ್ಕಾಂದೇ ॥ – (ಭಾ. ತಾ. ೬/೧೭/೩೭)

ತಸ್ಮೈ ದೇವೋಽಭಯಂ ದತ್ತ್ವಾ ಪ್ರೇಷಯಿಷ್ಯೇಽಮೃತಂ ತವ ।
ದಾತುಂ ಶಕ್ರಮಿತಿ ಪ್ರೋಕ್ತ್ವಾ ಯಯೌ ದ್ವಾರಾವತೀಂ ಪ್ರಭುಃ ॥ ೬೨ ॥

ಅ: ದೇವನಾದ ಪ್ರಭು ಕೃಷ್ಣ ಅವನಿಗೆ ಅಭಯ ನೀಡಿ ''ನಿನಗೆ ಅಮೃತವನ್ನು ಕೊಡಲು ಇಂದ್ರನನ್ನು ಕಳುಹಿಸುವೆ'' ಎಂದು ನುಡಿದು ದ್ವಾರಕೆಗೆ ತೆರಳಿದ.

ವಿ: 'ಅಮೋಘವಾದ ವಿಶ್ವರೂಪದರ್ಶನವನ್ನು ಕಂಡ ನೀನು ವರವೊಂದನ್ನು ಕೇಳಿಕೋ' ಎಂದು ತಿಳಿಸಿದಾಗ ಉದಂಕ 'ಆ ಮರುಭೂಮಿಯಲ್ಲಿ ನೀರನ್ನು ಕೊಡು' ಎಂದು ಕೇಳಿದ. ಕೃಷ್ಣ ಅದಕ್ಕೆ ಅಮೃತವನ್ನೇ ಕೊಡಲು ಇಂದ್ರನನ್ನೇ ಕಳಿಸುವೆ ಎಂದ.

ಅಮೃತ ಕೊಡದೆ ವಂಚಿಸಿದ ಇಂದ್ರ

ಅಥಾದಿದೇಶ ದೇವೇಶಂ ವಾಸುದೇವೋಽಮೃತಂ ಮುನೇಃ ।
ದೇಹೀತಿ ವಂಚಯಿಷ್ಯಾಮೀತ್ಯಾಹ ಸೋಽಪಿ ಕ್ಷಮಾಪಯನ್ ॥ ೬೩ ॥

ಅ: ಬಳಿಕ ಕೃಷ್ಣ ''ಮುನಿಗೆ ಅಮೃತವನ್ನು ನೀಡು'' ಎಂದು ದೇವೇಂದ್ರನಿಗೆ ಅಪ್ಪಣೆ ಮಾಡಿದ. ಆಗ ಇಂದ್ರ ಕೃಷ್ಣನನ್ನು ಕ್ಷಮೆಯಾಚಿಸಿ ಮುನಿಯನ್ನು ವಂಚಿಸುವೆನು ಎಂದು ಕೇಳಿಕೊಂಡ.

ವಿ: ಕೃಷ್ಣ ದೇವೇಂದ್ರನಿಗೆ ಹಾಗೆ ಆಜ್ಞೆ ನೀಡುವ ಮೂಲಕ ತಾನು ಸಕಲ ದೇವತೆಗಳಿಗಿಂತಲೂ ಮಿಗಿಲಾದ ದೇವೇಶ ಎಂದು ಸಾರಿದ ಎಂದು ತಿಳಿಯಬೇಕು. ಹಾಗೆ ವಂಚಿಸುವುದಾಗಿ ಇಂದ್ರ ಕೇಳಿಕೊಳ್ಳಲು ಕಾರಣ ಮುಂದೆ ಬಂದಿದೆ (ಶ್ಲೋ. ೬೭).

ಓಮಿತ್ಯುಕ್ತ್ವೋ ಭಗವತಾ ತತ್ಸ್ನೇಹಾತ್ ಸ ಶಚೀಪತಿಃ ।
ಸುಜುಗುಪ್ಸಿತಮಾತಂಗವೇಷೋ ಭೂತ್ವಾ ಮುನಿಂ ಯಯೌ ॥ ೬೪ ॥

---

೬೩. ಉತ್ತಂಕಾಯಾಮೃತಂ ದೇಹಿ ತೋಯರೂಪಮಿತಿ ಪ್ರಭುಃ ।
ಸ ಮಾಮುವಾಚ ದೇವೇಂದ್ರೋ ನ ಮರ್ತ್ಯೋಽಮರ್ತ್ಯತಾಂ ವ್ರಜೇತ್ ॥ –ಭಾರತ(ಆಶ್ವ. ೫೫/೨೮)

೬೪. ಸುಜುಗುಪ್ಸಿತಮಾತಂಗವೇಷ ಇತ್ಯತ್ರ ಮಾತಂಗಃ = ಚಂಡಾಲಃ । ''ಚಂಡಾಲಪ್ಲವಮಾತಂಗದಿವಾಕೀರ್ತಿ-ಜನಂಗಮಾಃ'' ಇತ್ಯನುಶಾಸನಾತ್ ॥ –(ವಾ.)

ಅ: ಕೃಷ್ಣ ಇಂದ್ರನ ಮೇಲಿನ ಪ್ರೀತಿಯಿಂದ 'ಆಗಲಿ' ಎಂದ. ಆಗ ಇಂದ್ರ ಅತ್ಯಂತ ಅಸಹ್ಯಕರವಾದ ಚಂಡಾಲ ವೇಷವನ್ನು ಧರಿಸಿ ಉದಂಕ ಮುನಿಯ ಬಳಿಗೆ ತೆರಳಿದ.

ವಿ: ಇಂದ್ರ ಸ್ವೀಕರಿಸಿದ ಆ ಮಾತಂಗ ವೇಷದ ವಿವರ ಮಹಾಭಾರತದಲ್ಲಿ ಹೀಗಿದೆ :

ತತೋ ದಿಗ್ವಾಸಸಂ ಧೀಮಾನ್ ಮಾತಂಗಂ ಮಲಪಂಕಿತಮ್ ।
ಅಪಶ್ಯತ ಮರೌ ತಸ್ಮಿನ್ ಶ್ವಯೂಥಪರಿವಾರಿತಮ್ ॥
ಭೀಷಣಂ ಬದ್ಧನಿಸ್ತ್ರಿಂಶಂ ಬಾಣಕಾರ್ಮುಕಧಾರಿಣಮ್ ।
ತಸ್ಯಾಧಃ ಸ್ರೋತಸೋಽಪಶ್ಯದ್ ವಾರಿ ಭೂರಿ ದ್ವಿಜೋತ್ತಮಃ॥

– ಭಾರತ (ಆಶ್ವಮೇಧಿಕ.೫೫/೧೬,೧೭)

ಮೂತ್ರಸ್ರೋತಸಿ ಸೌಧಂ* ಚ ನಿಧಾಯ ಕಲಶಂ ವಶೀ ।
ಮೂತ್ರಯನ್ನಿವ ತಂ ಪ್ರಾಹ ವಾಸುದೇವಃ ಸುಧಾಮಿಮಾಮ್ ।
ಮಹರ್ಷೇ ಪ್ರೇಷಯಾಮಾಸ ತವಾರ್ಥೇ ತತ್ ಪಿಬೇತಿ ಚ ॥ ೬೫ ॥

ಅ: ಸಂಯಮಿಯಾದ ಇಂದ್ರ ಮೂತ್ರದ್ವಾರದಲ್ಲಿ ಅಮೃತಕಲಶವನ್ನು ಇರಿಸಿಕೊಂಡು ಮೂತ್ರ ಮಾಡುವವನಂತೆ ನಟಿಸುತ್ತಾ ಆ ಮುನಿಗೆ ತಿಳಿಸಿದ : 'ಮಹರ್ಷಿಯೇ! ಕೃಷ್ಣ ಈ ಅಮೃತವನ್ನು ನಿನಗಾಗಿ ಕಳಿಸಿಕೊಟ್ಟಿರುವನು; ಇದನ್ನು ಕುಡಿ'.

ವಿ: ಇಂದ್ರ ತಾನು ವಂಚನೆ ಮಾಡುವುದಾಗಿ ಹೇಳಿದ್ದು ಈ ರೀತಿಯಾಗಿ ಎಂದು ತಿಳಿಯುವುದು.

ಸ ಮೂತ್ರಮಿತಿ ಮತ್ವಾ ತಂ ಯಾಹೀತ್ಯೇವಾಹ ಭತ್ಸಯನ್ ।
ವಂಚಯಿತ್ವೈವ ತಂ ಶಕ್ರೋ ಯಯೌ ಪ್ರೀತಃ ಸ್ವಮಾಲಯಮ್ ॥ ೬೬ ॥

ಅ: ಉದಂಕ ಅದನ್ನು ಮೂತ್ರವೆಂದೇ ಬಗೆದು ''ತೊಲಗು'' ಎಂದೇ ಬೈಯ್ದು ಕಳಿಸಿದ. ಇಂದ್ರ ಹೀಗೆ ಅವನನ್ನು ವಂಚಿಸಿ ಸಂತೃಪ್ತನಾಗಿ ತನ್ನ ಲೋಕಕ್ಕೆ ತೆರಳಿದ.

---

* ಸೋಽಧಶ್ಚ (ಪಾಠಾಂತರ); ಅಧಃ ಅಧೋಭಾಗೇ ಮೂತ್ರಸ್ರೋತಸಿ। – (ವೇ.)

೬೫. ವಶೀ ಜಿತೇಂದ್ರಿಯಃ ಮೂತ್ರನಿರೋಧನೇ ಸಮರ್ಥ ಇತಿ ಭಾವಃ। – (ಜ.)

೬೫. ಸ್ಮರನ್ನೇವ ಚ ತಂ ಪ್ರಾಹ ಮಾತಂಗಃ ಪ್ರಹಸನ್ನಿವ।
ಏಹ್ಯುತ್ತಂಕ ಪ್ರತೀಚ್ಛಸ್ವ ಮತ್ತೋ ವಾರಿ ಭೃಗೂದ್ವಹ ॥
ಕೃಪಾ ಹಿ ಮೇ ಸುಮಹತೀ ತ್ವಾಂ ದೃಷ್ಟ್ವಾ ತೃಟ್‌ಸಮಾಶ್ರಿತಮ್। – ಭಾರತ (ಆಶ್ವಮೇಧಿಕ. ೫೫/೧೮)
ಪುನಃ ಪುನಶ್ಚ ಮಾತಂಗಃ ಪಿಬಸ್ವೇತಿ ತಮಬ್ರವೀತ್ ॥ – ಭಾರತ (ಆಶ್ವಮೇಧಿಕ. ೫೫/೨೦)

ವಿ: ಮಹಾಭಾರತದಲ್ಲಿ ಈ ವಿವರ ಹೀಗೆ ನಿರೂಪಿತವಾಗಿದೆ :

ನ ಚಾಪಿಬತ್ ಸ ಸಕ್ರೋಧಃ ಕ್ಷುಭಿತೇನಾಂತರಾತ್ಮನಾ ।
ಸ ತಥಾ ನಿಶ್ಚಯಾತ್ ತೇನ ಪ್ರತ್ಯಾಖ್ಯಾತೋ ಮಹಾತ್ಮನಾ ।
ಶಚ್ಯಾಃ ಸಹ ಮಹಾರಾಜ ತತ್ಕೈವಾಂತರಧೀಯತ ॥
ಉತ್ತಂಕಸ್ತು ತಥಾ ದೃಷ್ಟ್ವಾತತೋ ವ್ರೀಡಿತಮಾನಸಃ ।
ಮೇನೇ ಪ್ರಲಬ್ಧಮಾತ್ಮಾನಂ ಕೃಷ್ಣೇನಾಮಿತ್ರಘಾತಿನಾ ॥

– ಭಾರತ (ಆಶ್ವಮೇಧಿಕ. ೫೫/೨೧, ೨೨)

ಹಾಗೆ ಇಂದ್ರ ವಂಚಿಸಲು ಕಾರಣ

ಅಸಾಧಾರಣಮನ್ನಂ ಹಿ ದೇವಾನಾಮಮೃತಂ ಸದಾ ।
ಅನ್ಯಪೀತಿಸ್ತತಸ್ತಸ್ಯ ದೇವಾನಾಂ ಪರಮಾಪ್ರಿಯಾ ॥ ೬೭ ॥

ಅ: ಅಮೃತ ದೇವತೆಗಳಿಗೆ ಮೀಸಲಾದ ಅಸಾಧಾರಣವಾದ ಅನ್ನ. ಇತರರು ಅದನ್ನು ಕುಡಿಯುವುದು ದೇವತೆಗಳಿಗೆ ತುಂಬಾ ಅಪ್ರಿಯ.

ವಿ: ೧) ಅದರಿಂದ ದೇವತೆಗಳಿಗೆ 'ಅಮೃತಾಂಧಸಃ'* ಎಂದೇ ಹೆಸರು. 'ಅಸಾಧಾರಣ್ಯೇನ ವ್ಯಪದೇಶಾ ಭವಂತಿ' ಎಂಬ ನ್ಯಾಯದಿಂದ ಅಬ್ಭಕ್ಷರು, ವಾಯುಭಕ್ಷರು ಎಂಬಂತೆ ದೇವತೆಗಳಿಗೆ ಅದು ಅಸಾಧಾರಣವಾದ ಅನ್ನ ಎಂಬುದು ಸ್ಫುಟಪಡುವುದು. ಇತರರು ಅದನ್ನು ಪಾನ ಮಾಡುವುದಾದರೆ ಅದಕ್ಕೆ ಅಂತಹ ವೈಶಿಷ್ಟ್ಯ ಉಳಿಯದು.

---

೬೫. ಮೂತ್ರಸ್ರೋತಸಿ ಸೌಧಂ ಚ ನಿಧಾಯ ಕಲಶಂ ವಶೀ। ಮೂತ್ರಯನ್ನಿವೇತ್ಯತ್ರ ಸೌಧಂ = ಸುಧಾ-ಸಂಬಂಧಿಕಲಶಮ್। ಮೂತ್ರಸ್ರೋತಸಿ= ಮೂತ್ರಸ್ಯ ಸ್ರೋತಃ ಸ್ರವಣಂ ಯಸ್ಮಾತ್ಸಃ ಮೂತ್ರಸ್ರೋತಃ ಶಿಶ್ನಃ ತಸ್ಮಿನ್ ನಿಧಾಯ ಮೂತ್ರಯನ್ನಿವ ಸ್ಥಿತಃ। ವಶೀ = ವಶೀಕರಣಶಕ್ತಿಮಾನ್ ತಂ ಪ್ರಾಹೇತಿ ಯೋಜನಾ ವಶೀಕರಣಶಕ್ತಿಮತ್ತ್ವಾ-ನ್ಮೂತ್ರಂ ನಿರುಧ್ಯ ಮೂತ್ರದ್ವಾರೇ ಉದಕಾಂತರಂ ಸೃಷ್ಟ್ವಾ ತಸ್ಯ ಜುಗುಪ್ಸಾಜನನಾಯ ಮೂತ್ರಯನ್ನಿವಾದರ್ಶಯದಿತಿ ಭಾವಃ। ವಸ್ತುಗತ್ಯಾ ಮೂತ್ರಸ್ಪರ್ಶೇ ಸುಧಾಯಾ ಅಪಾವಿತ್ರ್ಯಪ್ರಸಂಗಾತ್ ಭಾರತೋಕ್ತಮೂತ್ರಪ್ರಸ್ರವಣಸ್ಯ ತಾತ್ಪರ್ಯಮೇತದಿತಿ ಜ್ಞೇಯಮ್ ॥ – (ವಾ.)

೬೭. ಅನ್ಯಪೀತಿಸ್ತತಸ್ತಸ್ಯೇತ್ಯತ್ರ ತತಃ= ಕಾರಣಾತ್ ತಸ್ಯ= ಅಮೃತಸ್ಯ ಅನ್ಯಪೀತಿಃ= ದೇವೇಭ್ಯೋಽನ್ಯೈಃ ಪಾನಮ್। ದೇವಾನಾಂ ಪರಮಾಪ್ರಿಯಾ = ಅತ್ಯಂತಮಪ್ರಿಯಾ। ಆತ್ಮದತ್ತಪ್ರಸಾದಾದಿತ್ಯತ್ರ ಆತ್ಮದತ್ತಪ್ರಸಾದಾತ್ = ಆತ್ಮನಾ ಸ್ವಭಾವೇನ ದತ್ತಮಮೃತಂ ಯಸ್ಮಾತ್ ಪ್ರಸಾದಾತ್ ಸ ತಥೋಕ್ತಃ। ಸ್ವಾಪರಾಧಾತ್= ಪವಿತ್ರೇಽಪಾವಿತ್ರ್ಯ-ಶಂಕಾಪರಾಧಾತ್ ॥ – (ವಾ.)

* ಆದಿತ್ಯಾ ಋಭವೋಽಸ್ವಪ್ನಾ ಅಮರ್ತ್ಯಾ ಅಮೃತಾಂಧಸಃ .... । – ಅಮರಕೋಶ (೧/೮)

೨) ವರಾಂಗಿಯೂ ಸಹ ತನ್ನ ಗೆಳತಿಯಾದ ಸುಬಿಂದಪತ್ನಿ ವರಾಂಗಿಗೆ ಅದಕ್ಕೆಂದೇ ಅಮೃತ ನೀಡುವ ಬದಲು ಅಮೃತದ ಗುಣಗಳನ್ನು ಹೊಂದಿದ್ದ ನಂದಿನೀ ಧೇನುವಿನ ಹಾಲು ಕುಡಿಯಲು ಅನುಕೂಲವಾಗುವಂತೆ ಆ ಧೇನುವನ್ನು ಕೊಡಲು ಯೋಜಿಸಿದ್ದ ವಿವರ ಹಿಂದೆ ಬಂದಿದೆ.

೩) ಗರುಡ ಸರ್ಪಗಳಿಗೆಂದು ನೀಡಲು ಒಯ್ದಿದ್ದ ಅಮೃತವನ್ನು ಇಂದ್ರ ಅವುಗಳಿಗೆ ದೊರೆಯದಂತೆ ಮಾಡಿದ ಇಂತಹ ಮತ್ತೊಂದು ಪ್ರಸಂಗ ಆದಿಪರ್ವದಲ್ಲಿ (ಅಧ್ಯಾಯ ೩೪ ಶ್ಲೋ. ೭–೨೧) ನಿರೂಪಿತವಾಗಿದೆ.

ಆತ್ಮದತ್ತಪ್ರಸಾದಾಚ್ಚ ಸ್ವಾಪರಾಧಾತ್ ಪ್ರಚಾಲಿತೇ ।
ಉದಂಕೇ ವಾಸುದೇವಸ್ತು ಯುಕ್ತಮಿತ್ಯೇವ ಮನ್ಯತೇ ॥ ೬೮ ॥

ಅ: ತಾನು ಮಾಡಿದ ಅನುಗ್ರಹವನ್ನು ಉದಂಕಮುನಿ ತನ್ನ ತಪ್ಪಿನಿಂದಾಗಿ ಕಳೆದು-ಕೊಂಡದ್ದರಿಂದ ಕೃಷ್ಣ ಅದನ್ನು ಯೋಗ್ಯವೆಂದೇ ಭಾವಿಸಿದ.

ವಿ: ೧) ಕೃಷ್ಣನ ಮಾತು ಆಗಮ, ಇಂದ್ರ ಮಾಡಿದ್ದು ಪ್ರತ್ಯಕ್ಷ. ಅತೀಂದ್ರಿಯ ವಿಷಯದಲ್ಲಿ ಪ್ರತ್ಯಕ್ಷಕ್ಕಿಂತ ಆಗಮವೇ ಪ್ರಬಲ ಎಂಬುದು ಶಾಸ್ತ್ರನಿರ್ಣಯ. ಅದರಂತೆ ಕೃಷ್ಣ ಕಳುಹಿಸಿ ಅಮೃತವನ್ನು ಸ್ವತಃ ದೇವೇಂದ್ರ ಕೃಷ್ಣ ಕಳಿಸಿದ್ದು ಎಂದು ತಿಳಿಸಿದಾಗಲೂ ಅದನ್ನು ಮೂರ್ತ್ರವೆಂದು ಶಂಕಿಸಿದ್ದು ಉದಂಕನ ಅಪರಾಧ. ಅದರಿಂದಾಗಿ ಅಮೃತ ಪಡೆಯುವ ಸುಯೋಗ ಅವನಿಗೆ ತಪ್ಪಿಹೋಯಿತು ಎಂದು ತಿಳಿಯಬೇಕು.

೨) ಕೇವಲ ಅತೀಂದ್ರಿಯ ವಿಚಾರಗಳಲ್ಲಿ ಆಗಮವೇ ಉಪಜೀವ್ಯಪ್ರಮಾಣವಾದ್ದರಿಂದ ಅದಕ್ಕನುಗುಣವಾಗಿ ಇತರ ಪ್ರಮಾಣಗಳನ್ನು ಅನ್ವಯಿಸಿಕೊಳ್ಳಬೇಕು ಎಂಬ ತತ್ವ ಇದರಿಂದ ಸ್ಫುಟಪಡುವುದು ಎಂದು ತಿಳಿಯಬಹುದು.

ಯಾದವರ ಸಭೆಯಲ್ಲಿ ಶ್ರೀಕೃಷ್ಣ

ಸ್ವಪುರೀಂ ಪ್ರಾಪ್ಯ ಯದುಭಿಃ ಪೂಜಿತಃ ಶೂರಸೂನವೇ ।
ವೃತ್ತಾಂತಂ ಕಥಯಾಮಾಸ ಕೇಶವೋ ಯದುಸಂಸದಿ ॥ ೬೯ ॥

---

೬೮. ಸ್ವವಾಕ್ಯಸ್ಯಾನೃತತ್ವಪ್ರಾಪ್ತೇಃ ವಾಸುದೇವಃ ಕಥಂ ಮನ್ಯತ ಇತಿ ಶಂಕಾಂ ''ತತ್ಕಾಮವರ್ಷಿಣೋ ಮೇಘಾನ್'' ಇತ್ಯತ್ರ ಪರಿಹರಿಷ್ಯತಿ ॥ – (ವಾ.)

೬೮. ಉಪಸ್ಥಿತಸ್ತ್ವಯಾ ಚಾಪಿ ಪ್ರತ್ಯಾಖ್ಯಾತೋಽಮೃತಂ ದದತ್ ।
ಚಾಂಡಾಲರೂಪೀ ಭಗವಾನ್ ಸುಮಹಾಂಸ್ತೇ ವ್ಯತಿಕ್ರಮಃ ॥ – ಭಾರತ (ಆಶ್ವಮೇಧಿಕ. ೫೫/೩೩, ೩೪)

ಅ: ಕೃಷ್ಣ ದ್ವಾರಕೆಯನ್ನು ತಲುಪಿ ಯಾದವರಿಂದ ಪೂಜಿತನಾದ, ವಸುದೇವನಿಗೆ ಕೃಷ್ಣ ಯಾದವರ ಸಭೆಯಲ್ಲಿ ಕುರುಕ್ಷೇತ್ರ ಸಮರದ ವಾರ್ತೆಯನ್ನು ತಿಳಿಸಿದ.

ವಧಮಂತರಿತಂ ಸೂನೋಃ ಸಾತ್ವತೇಶೇನ ಸಾತ್ವತೀ ।
ಪ್ರಣಮ್ಯ ಕಥಯೇತ್ಕೋಚೇ ತತ ಆಹ ಜನಾರ್ದನಃ ॥ ೭೦ ॥

ಅ: ಕೃಷ್ಣ ಹಾಗೆ ಯುದ್ಧ ವಾರ್ತೆ ತಿಳಿಸುವಾಗ ಅಭಿಮನ್ಯುವಿನ ವಧೆಯನ್ನು ಹೇಳದಿರಲು ಸುಭದ್ರೆ ಕೃಷ್ಣನಿಗೆ ನಮಸ್ಕರಿಸಿ ಅದನ್ನೂ ತಿಳಿಸಲು ಕೇಳಿಕೊಂಡಳು. ಕೃಷ್ಣ ಆಗ ಅದನ್ನು ತಿಳಿಸಿದ.

ವಿ: ಅಭಿಮನ್ಯುವಿನ ವಧೆಯ ವಾರ್ತೆ ಕೇಳಿ ವಸುದೇವಾದಿಗಳು ಆಘಾತಕ್ಕೊಳಗಾಗದಿರಲಿ ಎಂದು ಕೃಷ್ಣ ಲೋಕನೀತಿಗಾಗಿ ಹಾಗೆ ಮಾಡಿದ. ಸುಭದ್ರೆ ಕೇಳಿದಾಗ ತಿಳಿಸಿದ. ಆ ವೇಳೆಗೆ ವಸುದೇವಾದಿಗಳ ಮನಸ್ಸಿನಲ್ಲಿ ಆ ಬಗ್ಗೆ ಸೂಚನೆ ಸಿಕ್ಕಿ ಅವರಿಗೆ ಅದನ್ನು ತಡೆದುಕೊಳ್ಳುವ ಚೈತನ್ಯ ಉಂಟಾಗಿದ್ದಿತು ಎಂದು ತಿಳಿಯಬಹುದು.

ಅಭಿಮನ್ಯುವಿಗೆ ವಸುದೇವಾದಿಗಳಿಂದ ಶ್ರಾದ್ಧ ದಾನಾದಿಗಳು

ತತಃ ಸುದುಃಖಿತಾಃ ಶೂರಪುತ್ರಾದ್ಯಾ ಅಭಿಮನ್ಯವೇ ।
ಶ್ರಾದ್ಧದಾನಾನಿ ಬಹುಶಶ್ಚಕ್ರುಃ ಕೇಶವಸಂಯುತಾಃ ॥ ೭೧ ॥

ಅ: ಬಳಿಕ ವಸುದೇವ ಮೊದಲಾದವರೆಲ್ಲ ತುಂಬಾ ದುಃಖಿತರಾಗಿ ಶ್ರೀಕೃಷ್ಣನೊಂದಿಗೆ ಕೂಡಿ ಅಭಿಮನ್ಯುವಿಗಾಗಿ ಶ್ರಾದ್ಧ, ದಾನ ಮೊದಲಾದವುಗಳನ್ನು ಬಹಳವಾಗಿ ನಡೆಸಿದರು.

ವಿ: ಹಾಗೆ ಅವರು ಮಾಡಿಸಿದ ಬ್ರಾಹ್ಮಣ ಭೋಜನ ಅರವತ್ತುಲಕ್ಷ ಬ್ರಾಹ್ಮಣರದ್ದಾಗಿತ್ತು ಎಂಬ ಉಲ್ಲೇಖ ಭಾರತದಲ್ಲಿದೆ (ಆಶ್ವಮೇಧಿಕ. ೬೨/೩):

---

೭೦. ಸಾತ್ವತೇಶೇನ ಸಾತ್ವತೀತ್ಯತ್ರ ಸಾತ್ವತೀ = ಸುಭದ್ರಾ ಸಾತ್ವತೇಶೇನ = ಕೃಷ್ಣೇನ ಸೂನೋಃ = ಸ್ವಸೂನೋಃ ಅಭಿಮನ್ಯೋಃ ವಧಂ ಅಂತರಿತಂ = ಅಕಥಿತಂ ಪ್ರಣಮ್ಯ ಕಥಯೇತ್ಕೋಚೇ ॥ – (ವಾ.)

೭೦. ಅಭಿಮನ್ಯೋರ್ವಧಂ ವೀರಃ ಸೋಽತ್ಯಕ್ರಾಮನ್ಮಹಾಮತಿಃ ।
ಅಪ್ರಿಯಂ ವಸುದೇವಸ್ಯ ಮಾ ಭೂದಿತಿ ಮಹಾಮತಿಃ ॥ – ಭಾರತ (ಆಶ್ವಮೇಧಿಕ. ೬೧/೨)

೭೦. ಸುಭದ್ರಾ ತು ತಮುತ್ಸ್ಮಾಂತಮಾತ್ಮಜಸ್ಯ ವಧಂ ರಣೇ ।
ಆಚಕ್ಷ್ವ ಕೃಷ್ಣಸೌಭದ್ರವಧಮಿತ್ಯಪತದ್ ಭುವಿ ॥ – ಭಾರತ (ಆಶ್ವಮೇಧಿಕ. ೬೧/೪)

೭೧. ದೌಹಿತ್ರಸ್ತವ ವಾಷ್ಣೇ೯ಯ ದೌಃಶಾಸನಿವಶಂ ಗತಃ । (ವಸುದೇವನನ್ನು ಕುರಿತು ಶ್ರೀಕೃಷ್ಣನ ವಚನ)
– ಭಾರತ (ಆಶ್ವಮೇಧಿಕ. ೬೧/೨೧)

ಪಷ್ಟಿಂ ಶತಸಹಸ್ರಾಣಿ ಬ್ರಾಹ್ಮಣಾನಾಂ ಸಹೌಜಸಾಮ್ ।
ವಿಧಿವದ್ ಭೋಜಯಾಮಾಸ ಭೋಜ್ಯಂ ಸರ್ವಗುಣಾನ್ವಿತಮ್ ॥

ಇದರಿಂದ ಶ್ರಾದ್ಧ ದಾನಗಳು ಮೃತರಿಗೆ ಶಾಂತಿ ನೀಡುವ ಶ್ರೇಷ್ಠಸಾಧನಗಳು ಎಂಬ ತತ್ತ್ವವು ತಿಳಿಯುವುದು.

ಅಶ್ವಮೇಧಕ್ಕೆ ಯುಧಿಷ್ಠಿರನ ಚಿಂತೆ

ನಿವಸತ್ಯತ್ರ ವಿಶ್ವೇಶೇ ಧರ್ಮಪುತ್ರಃ ಕ್ರತೂತ್ತಮಮ್ ।
ಅಶ್ವಮೇಧಮನುಷ್ಠಾತುಂ ನಾವಿಂದದ್ವಿತ್ತಮಂಜಸಾ ॥ ೭೨ ॥

ಅ: ವಿಶ್ವೇಶನಾದ ಕೃಷ್ಣ ದ್ವಾರಕೆಯಲ್ಲಿ ನೆಲೆಸಿದ್ದಾಗ ಧರ್ಮರಾಜ ಶ್ರೇಷ್ಠ ಯಜ್ಞವಾದ ಅಶ್ವಮೇಧವನ್ನು ಮಾಡಲು ಅದಕ್ಕೆ ಅಗತ್ಯವಾದ ಧನವನ್ನು ಕಾಣದಾದ.

ವಿ: ಶ್ರೀವೇದವ್ಯಾಸರ ಆದೇಶದಂತೆ ಅಶ್ವಮೇಧ ಯಾಗವನ್ನು ಕೈಗೊಳ್ಳಲು ಬಯಸಿದ ಧರ್ಮರಾಜ ಬೊಕ್ಕಸದಲ್ಲಿ ಅದಕ್ಕೆ ಸಾಕಾಗುವಷ್ಟು ಧನ ಇಲ್ಲದ್ದನ್ನು ಕಂಡು ಚಿಂತಾಕ್ರಾಂತನಾದ ಎಂದರ್ಥ.

ಹತಶೇಷಾತ್ ಕ್ಷತ್ರಸಂಘಾತ್ ಕರಂ ನೈಚ್ಛದ್ದಯಾಪರಃ ।
ನ ಚ ಮಧ್ಯಮಕಲ್ಪೇನ ಯಷ್ಟುಂ ತಸ್ಯ ಮನೋಗತಮ್ ॥ ೭೩ ॥

ಅ: ಅಳಿದುಳಿದ ಕ್ಷತ್ರಿಯ ಸಮೂಹದಿಂದ ಕಪ್ಪ ಪಡೆಯಲು ದಯಾಲುವಾದ ಧರ್ಮರಾಜ ಇಚ್ಛಿಸಲಿಲ್ಲ. ಮಧ್ಯಮ ಕಲ್ಪದಿಂದ ಯಾಗ ಮಾಡಲು ಅವನ ಮನಸ್ಸು ಒಪ್ಪಲಿಲ್ಲ.

---

೭೩. ಇಮಂ ಜ್ಞಾತಿವಧಂ ಕೃತ್ವಾ ಸುಮಹಾಂತಂ ದ್ವಿಜೋತ್ತಮ ।
ದಾನಮಲ್ಪಂ ನ ಶಕ್ನೋಮಿ ದಾತುಂ ವಿತ್ತಂ ಚ ನಾಸ್ತಿ ಮೇ ॥
ನ ತು ಬಾಲಾನಿಮಾನ್ ದೀನಾನುತ್ಸಹೇ ವಸು ಯಾಚಿತುಮ್ ।
ತಥೈವಾರ್ದ್ರವ್ರಣಾನ್ ಕೃಚ್ಛ್ರೇ ವರ್ತಮಾನಾನ್ ನೃಪಾತ್ಮಜಾನ್ ॥ – ಭಾರತ (ಆಶ್ವಮೇಧಿಕ. ೩/೧೨,೧೩)

ಯಕ್ಷ್ಯಮಾಣೋऽಶ್ವಮೇಧೇನ ಜ್ಞಾತಿದ್ರೋಹಜಿಹಾಸಯಾ ।
ರಾಜಾऽಲಬ್ಧಧನೋ ದಧ್ಯಾವನ್ಯತ್ರ ಕರದಂಡಯೋಃ ॥ – ಭಾಗವತ (೧/೧೧/೩೨)

೭೩. ಪೃಥಿವೀ ದಕ್ಷಿಣಾ ಚಾತ್ರ ವಿಧಿಃ ಪ್ರಥಮಕಲ್ಪಿತಃ ।
ವಿದ್ವದ್ಭಿಃ ಪರಿದೃಷ್ಟೋऽಯಂ ಶಿಷ್ಟೋ ವಿಧಿವಿಪರ್ಯಯಃ ॥
ನ ಚ ಪ್ರತಿನಿಧಿಂ ಕರ್ತುಂ ಚಿಕೀರ್ಷಾಮಿ ತವೋಧನ ॥
ಅತ್ರ ಮೇ ಭಗವನ್ ಸಮ್ಯಕ್ ಸಾಚಿವ್ಯಂ ಕರ್ತುಮರ್ಹಸಿ ॥ – ಭಾರತ (ಆಶ್ವಮೇಧಿಕ. ೩/೧೮)

ವಿಃ ೧) ರಾಜರಿಗೆ ಹಣ ಹೊಂದಿಸಲು ಇರುವ ಸುಲಭವಾದ ಮಾರ್ಗ ಜನಗಳಿಂದ ಕರ ಪಡೆಯುವುದು. ಇತಿಹಾಸದುದ್ದಕ್ಕೂ ನಡೆದುಬಂದಿರುವುದು ಅದೇ. ಆದರೆ, ಧರ್ಮರಾಜ ಆಗಲೇ ಯುದ್ಧದಿಂದಾಗಿ ಸಾಕಷ್ಟು ಕಷ್ಟನಷ್ಟಗಳಿಗೆ ತುತ್ತಾಗಿದ್ದ ಕ್ಷತ್ರಿಯ ವರ್ಗದಿಂದ ಹಾಗೆ ಕರ ಪಡೆಯಲು ಇಷ್ಟಪಡಲಿಲ್ಲ. ಇದು ಧರ್ಮರಾಜನ ಅಪಾರವಾದ ಕಾರುಣ್ಯಕ್ಕೆ ಸೂಚಕ. ತನ್ನ ಹಿತಕ್ಕಾಗಿ ಮತ್ತೊಬ್ಬರ ಹಿತ ಬಲಿ ಕೊಡುವ ಪ್ರವೃತ್ತಿ ಸರ್ವಥಾ ಅವನದಾಗಿರಲಿಲ್ಲ.

೨) ಇನ್ನು ಇದ್ದ ಹಣದಲ್ಲಿಯೇ ಯಾಗ ಪೂರೈಸುವದು. ಅದು ಉತ್ತಮ ಕಲ್ಪದ ಸಾಧನೆ ಎನ್ನಿಸದೆ ಮಧ್ಯಮ ಕಲ್ಪದ ಸಾಧನೆಯಾಗುವುದು. ಹಾಗೆ ಮಾಡಲೂ ಅವನ ಮನಸ್ಸು ಒಪ್ಪಲಿಲ್ಲ.

೩) ಜನ ಸಾಮಾನ್ಯವಾಗಿ ಪುಣ್ಯ ಕಾರ್ಯಗಳನ್ನು ಮಧ್ಯಮ ಮಟ್ಟವಿರಲಿ ಅಧಮ ಮಟ್ಟದಲ್ಲೇ ಆಚರಿಸುವುದು ಲೋಕರೂಢಿ. ಆದರೆ ನಿರೀಕ್ಷಿತ ಫಲಪ್ರಾಪ್ತಿಗೆ ಪುಣ್ಯ ಕಾರ್ಯಗಳು ಉತ್ತಮ ಕಲ್ಪದಲ್ಲಿ ನಡೆಯಬೇಕೇ ಹೊರತು ಮಧ್ಯಮ ಅಧಮ ಕಲ್ಪಗಳಲ್ಲಿ ಅಲ್ಲ ಎಂಬ ಪ್ರಮೇಯವಿಶೇಷ ಇಲ್ಲಿ ನಿರೂಪಿತವಾಗಿದೆ. ಧರ್ಮಿಷ್ಠರಾದವರು ಸಾಮಾನ್ಯವಾಗಿ ಹೀಗೆ ಉತ್ತಮ ಕಲ್ಪದಲ್ಲಿಯೇ ಯಜ್ಞಕ್ಕೆ ತೊಡಗುವುದು ಕಂಡಿದೆ. ಅದರಿಂದಾಗಿಯೇ ಅವರಿಗೆ ಸತ್ಫಲಗಳು ಹಾಗೆ ದೊರೆಯುವವು ಎಂದು ತಿಳಿಯಬೇಕು.

೪) ಹಾಗೆ ಮಧ್ಯಮ ಕಲ್ಪದಿಂದ ಯಜ್ಞ ಮಾಡುವುದರಿಂದ ಗುರುಜನರ ವಧೆಯಂತಹ ಮಹಾಪಾಪ ಪರಿಹಾರವಾಗಲಾರದು ಎಂಬ ಆಲೋಚನೆಯೂ ಅವನದಾಗಿತ್ತು.

ವೇದವ್ಯಾಸರು ನೀಡಿದ ಅಕ್ಷಯ ಸಂಪತ್ತು

ವಿಜ್ಞಾಯ ನಿತ್ಯವಿಜ್ಞಾತನಿಖಿಲೋ ಬಾದರಾಯಣಃ ।
ಆವಿರ್ಭೂತೋ ಹಿಮವತಃ ಶೃಂಗಂ ಯತ್ರಾಭಿಸಂಗತಮ್ ॥ ೭೪ ॥

ಮೇರುಶೃಂಗೇಣ ಯತ್ರೈವ ವಿಷ್ಣುಃ ಸ್ವಾತ್ಮಾನಮವ್ಯಯಮ್ ।
ಲೋಕಸ್ಯ ಸಂಗ್ರಹಾಯೇಜೇ ಕರ್ಮಬಂಧೋಜ್ಝಿತೋಽಪಿ ಸನ್ ॥ ೭೫ ॥

---

೭೪. ಹಿಮವನ್ನೇರ್ವೋರಿತಿ । ದೂರಸ್ಥತ್ವೇಪಿ ತಚ್ಛೃಂಗವಿಶೇಷಯೋರ್ದೀರ್ಘಪ್ರಸಾರಿತಯೋಃ ಸಂಗತತ್ವಾದಿಯಮುಕ್ತಿರಿತಿ ಕೇಚಿತ್ । ಮೇರುಶೃಂಗನಾಮಕಂ ಪರ್ವತಾಂತರಮತ್ರೋಕ್ತಮಿತಿ ಅಪರೇ । ಮೇರುಶೃಂಗಸ್ಯ ಹಿಮವತ್ಯಾನೀಯ ನಿಕ್ಷಿಪ್ತತ್ವಾದಿತಿ ಭಾವ ಇತ್ಯನ್ಯೇ । – (ತಾ.)

೭೪. 'ಹಿಮವತಃ ಶೃಂಗಂ ಯತ್ರಾಸ್ತಿ ಸಂಗತಂ ಮೇರುಶೃಂಗೇಣ' ಇತಿ ಮೇರುಪರ್ವತಮಾಸಾದ್ಯ ಹಿಮವತ್ಯಾಶ್ಚ ಉತ್ತಮೇ ''ಕಾಂಚನಸ್ಯ ಮಹಾಪಾದಸ್ತತ್ರ ಕರ್ಮ ಚಕಾರ ಸಃ'' ಇತಿ ಅಶ್ವಮೇಧಪರ್ವಣಿ । – (ತಿ.)

ಶಂಕರಾದ್ಯಾಃ ಸುರಾ ಯತ್ರ ಮರುತ್ತಶ್ಚೇಜಿರೇ ಹರಿಮ್ ।
ದಾನವೋ ವೃಷಪರ್ವಾ ಚ ತತ್ರಾಸ್ತಿ ಧನಮಕ್ಷಯಮ್ ॥ ೭೬ ॥

ಅ: ಸದಾ ಸಕಲವನ್ನೂ ಪೂರ್ಣ ಬಲ್ಲ ವೇದವ್ಯಾಸರು ಅವನ ಚಿಂತೆಯನ್ನು ಅರಿತು ಅಲ್ಲಿ ಪ್ರತ್ಯಕ್ಷರಾದರು. ''ಹಿಮವತ್ಪರ್ವತದ ಶಿಖರ ಮೇರು ಶಿಖರದೊಂದಿಗೆ ಸೇರುವ ಸ್ಥಳದಲ್ಲಿ ಶ್ರೀಹರಿಯು ತಾನು ಕರ್ಮಬಂಧ ರಹಿತನಾಗಿದ್ದರೂ ಅವ್ಯಯನಾದ ತನ್ನನ್ನೇ ಕುರಿತು ಲೋಕಶಿಕ್ಷಣಕ್ಕೆಂದು ಯಜ್ಞದ ಮೂಲಕ ಆರಾಧಿಸಿದನು. ಶಿವ ಮೊದಲಾದ ದೇವತೆಗಳು, ಮರುತ್ತ ರಾಜನು ಮತ್ತು ವೃಷಪರ್ವನೆಂಬ ದಾನವನು ಅಲ್ಲಿ ಶ್ರೀಹರಿಯನ್ನು ಆರಾಧಿಸಿರುವರು. ಅಲ್ಲಿ ಅಕ್ಷಯವಾದ ಧನವಿದೆ.

ವಿ: ವೇದವ್ಯಾಸರು ಧರ್ಮರಾಜನ ಚಿಂತೆಯನ್ನು ಪರಿಹರಿಸಲು ಅಲ್ಲಿ ಕಾಣಿಸಿಕೊಂಡರು ಎಂದರ್ಥ. ಹೀಗೆ ಸಜ್ಜನರು ಧರ್ಮಕಾರ್ಯಗಳನ್ನು ಉತ್ತಮ ರೀತಿಯಲ್ಲಿ ನಡೆಸಲು ಪ್ರಯತ್ನಿಸಿದಾಗ ಶ್ರೀಹರಿ ಅದಕ್ಕೆ ದಾರಿ ತೋರುವನು ಎಂದು ತಿಳಿಯಬೇಕು :

ಪ್ರಾರಂಭಮಾತ್ರಮಿಚ್ಛಾ ವಾ ವಿಷ್ಣುಧರ್ಮೇ ನ ನಿಷ್ಫಲಾ । – ಗೀ.ತಾ. (೨/೪೦)

ತಚ್ಛಂಕರಶರೀರಸ್ಥಂ ಜಾಮದಗ್ನ್ಯಂ ಹರಿಂ ಪರಮ್ ।
ಇಷ್ಟ್ವೈವಾನುಜ್ಞಯಾ ತಸ್ಯ ಸ್ವೀಕೃತ್ಯ ಯಜ ತೇನ ಚ ।
ಇತ್ಯಾಹ ವ್ಯಾಸವಾಕ್ಯಾನು ಭೀಮೋಽಪ್ಯಾಹ ನೃಪೋತ್ತಮಮ್ ॥ ೭೭ ॥

ಅ: ಆದ್ದರಿಂದ ಶಂಕರನ ಅಂತರ್ಯಾಮಿಯಾದ ಪರಶುರಾಮರೂಪದ ಸರ್ವೋತ್ತಮನಾದ ಶ್ರೀಹರಿಯನ್ನು ಯಜ್ಞದಿಂದ ಆರಾಧಿಸಿ ಅವನ ಅನುಮತಿ ಪಡೆದು ಅಲ್ಲಿಯ ಧನವನ್ನು ತಂದು ಅದರಿಂದ ಯಜ್ಞಮಾಡು''. ಹೀಗೆ ವೇದವ್ಯಾಸರು ನುಡಿಯುತ್ತಲೇ ಭೀಮನೂ ಧರ್ಮರಾಜನಿಗೆ ತಿಳಿಸಿದ.

ಧನಸ್ಯ ದೇವತಾ ವಿಷ್ಣುರ್ಜಾಮದಗ್ನ್ಯೋಽಖಿಲೇಶ್ವರಃ ।
ಸ ಶಂಕರಶರೀರಸ್ಥೋ ಯಜ್ಞೋಚ್ಛಿಷ್ಟಧನಾಧಿಪಃ ॥ ೭೮ ॥

---

೭೬. ಕೋಶಶ್ಚಾಪಿ ವಿಶೀರ್ಣೋಽಯಂ ಪರಿಪೂರ್ಣೋ ಭವಿಷ್ಯತಿ ।
ವಿದ್ಯತೇ ದ್ರವಿಣಂ ಪಾರ್ಥ ಗಿರೌ ಹಿಮವತಿ ಸ್ಥಿತಮ್ ॥
ಉತ್ಸೃಷ್ಟಂ ಬ್ರಾಹ್ಮಣೈರ್ಯಜ್ಞೇ ಮರುತ್ತಸ್ಯ ಮಹಾತ್ಮನಃ ।
ತದಾನಯಸ್ವ ಕೌಂತೇಯ ಪರ್ಯಾಪ್ತಂ ತದ್ಧವಿಷ್ಯತಿ ॥ - ಭಾರತ (ಆಶ್ವಮೇಧಿಕ. ೩/೨೦,೨೧)

ಅ: ''ಸರ್ವೇಶ್ವರನಾದ ಪರಶುರಾಮ ರೂಪದ ಶ್ರೀಹರಿಯೇ ಧನಕ್ಕೆ ದೇವತೆ, ಅವನೇ ಶಿವನ ಶರೀರದಲ್ಲಿ ಅಂತರ್ಗತನಾಗಿ ಯಜ್ಞಶೇಷವಾದ ಧನಕ್ಕೆ ಅಧಿಪತಿಯಾಗಿರುವನು.

ವಿ: ೧) ಯಜ್ಞೋಚ್ಛಿಷ್ಟ ರುದ್ರಭಾಗ ಎಂದ ಮಾತು ಶ್ರೀಮದ್ಭಾಗವತದಲ್ಲಿ ಬಂದಿದೆ :

ಏಷ ತೇ ರುದ್ರಭಾಗೋಽಸ್ತು ಯದುಚ್ಛಿಷ್ಟೋಽಧ್ವರಸ್ಯ ವೈ । – (೪/೮/೫೩)

ಅಲ್ಲೂ ಸಹ ರುದ್ರದೇವರ ಅಂತರ್ಯಾಮಿಯಾಗಿದ್ದು ಆ ಧನಕ್ಕೆ ಅಧಿಪತಿಯಾಗಿದ್ದವನು ಸಾಕ್ಷಾತ್ ಪರಶುರಾಮ ರೂಪದ ಶ್ರೀಹರಿ.

೨) ಶಿವ ಧನುರ್ವಿದ್ಯೆಯನ್ನು ಪರಶುರಾಮ ರೂಪದಿಂದ ಅಧ್ಯಯನ ಮಾಡಿದ್ದರಿಂದ ಪರಶುರಾಮ ರೂಪವು ಶಿವಾಂತರ್ಯಾಮಿ ರೂಪ ಎಂಬುದು ಸಂಗತ – 'ಕ್ಷತ್ರಕುಲಾಂತಕ ಶಂಭುವರೇಣ್ಯ'(ದ್ವಾದಶಸ್ತೋತ್ರ ೬/೬).

ತೇನೈವ ವಿಷ್ಣುನಾ ದತ್ತಮರ್ಜುನಾಯಾಸ್ತ್ರಮುತ್ತಮಮ್ ।
ಕಾರ್ಯಾಣ್ಯನ್ಯಾನಿ ಚಾಸ್ಮಾಕಂ ಕೃತಾನ್ಯೇತೇನ ವಿಷ್ಣುನಾ ॥ ೭೯ ॥

ಅ: ಅರ್ಜುನನಿಗೆ ಉತ್ತಮವಾದ ಅಸ್ತ್ರವನ್ನು ನೀಡಿದ್ದು ಆ ವಿಷ್ಣುವೇ; ನಮ್ಮ ಇತರ ಕಾರ್ಯಗಳು ಸಹ ಈಡೇರುವುದು ಈ ವಿಷ್ಣುವಿನಿಂದಲೇ.

ಸ ಬ್ರಹ್ಮರುದ್ರಶಕ್ರಾದಿಪದದಾತಾಽಖಿಲೇಶ್ವರಃ ।
ಸ್ವತಂತ್ರಃ ಪರತಂತ್ರಾಂಸ್ತಾನಾವರ್ತಯತಿ ಚೇಚ್ಛಯಾ ॥ ೮೦ ॥

ಅ: ಆ ವಿಷ್ಣುವೇ ಬ್ರಹ್ಮ, ರುದ್ರ, ಇಂದ್ರ ಮೊದಲಾದ *ಪದವಿಗಳನ್ನು ನೀಡುವ ಅಖಿಲೇಶ್ವರ, ಸ್ವತಂತ್ರ. ಪರತಂತ್ರರನ್ನೆಲ್ಲ ತನ್ನ ಇಚ್ಛೆಯಂತೆ ಪ್ರವರ್ತನೆ ಮಾಡುವವನು.

---

೭೭. ತಚ್ಛಂಕರಶರೀರಸ್ಥಮಿತ್ಯತ್ರ ವಿದ್ಯಮಾನಸ್ಯ ತಚ್ಛಬ್ದಸ್ಯ ತದ್ಧನಂ ಸ್ವೀಕೃತ್ಯ ತೇನ= ಧನೇನ ಯಜೇತಿ ಸಂಬಂಧಃ ॥ – (ವಾ.)

೭೮. ಭೀಮಸೇನೋ ನೃಪಶ್ರೇಷ್ಠಂ ಪ್ರಾಂಜಲಿರ್ವಾಕ್ಯಮಬ್ರವೀತ್ ।
ರೋಚತೇ ಮೇ ಮಹಾಬಾಹೋ ಯದಿದಂ ಭಾಷಿತಂ ತ್ವಯಾ ॥
ವ್ಯಾಸಾಖ್ಯಾತಸ್ಯ ವಿತ್ತಸ್ಯ ಸಮುಪಾನಯನಂ ಪ್ರತಿ ॥ (ಇತ್ಯಾದಿ ಭೀಮವಚನ) –ಭಾರತ(ಆಶ್ವ.೬೩/೧೧/೧೫)

೮೦. ಆವರ್ತಯತಿ ಮುಕ್ತಿಪರ್ಯಂತಮಾವರ್ತಯತಿ ॥ – (ಜ.)

* ಭ್ರೂಭಂಗಂ ಪಾರಮೇಷ್ಠ್ಯಾದಿಪದದಾಯಿ ವಿಮುಕ್ತಿದಮ್ ॥ – ದ್ವಾದಶಸ್ತೋತ್ರ (೧/೧೧)

ಪ್ರಿಯೋಽಸ್ಮಾಕಂ ಪ್ರಿಯಾಸ್ತಸ್ಯ ಸರ್ವದೈವ ವಯಂ ನೃಪ ।
ಅತಸ್ತದಭ್ಯನುಜ್ಞಾತಧನೇನೈವ ಯಜಾಮಹೇ ॥ ೮೧ ॥

ಅ: ಅವನು ನಮಗೆ ಪ್ರಿಯ, ಅವನಿಗೆ ನಾವೂ ಸಹ ಸದಾ ಪ್ರಿಯರು. ರಾಜನೇ, ಅದರಿಂದ ಅವನ ಅನುಮತಿಯಿಂದ ದೊರೆಯುವ ಹಣದಿಂದಲೇ ನಾವು ಯಜ್ಞವನ್ನು ಮಾಡೋಣ.

ವಿ: ಮೇಲೆ ಹೇಳಿದಂತೆ ಯಜ್ಞ ಮಾಡಿದ ವಿಷ್ಣು ರುದ್ರಾದಿಗಳು, ಮರುತ್ತ ಮೊದಲಾದವರು ಯಜ್ಞ ಪೂರೈಸಿದ ಬಳಿಕ ಮಿಕ್ಕಿದ್ದ ಸಂಪತ್ತನ್ನು ಅಲ್ಲಿಯೇ ಬಿಟ್ಟುಹೋದರು. ಅದಕ್ಕೆ ''ಉಚ್ಛೇಷಣ ಭಾಗೋ ವೈ ರುದ್ರಃ'' – ರುದ್ರನೇ ಅಧಿದೇವತೆ. ಅವನ ಅಂತರ್ಯಾಮಿ ಪರಶುರಾಮ ರೂಪದ ಶ್ರೀಹರಿ. ಅವನೇ ಎಲ್ಲವನ್ನೂ ನಮಗೆ ಅನುಗ್ರಹಿಸಿರುವವನು. ಎಂದಮೇಲೆ ಅವನು ನೀಡುವ ಧನದಿಂದಲೇ ಯಜ್ಞವನ್ನು ಮಾಡೋಣ ಎಂಬುದು ಭೀಮನ ಆಶಯ.

ಸೋಽಯಂ ಪಿತಾಮಹೋಽಸ್ಮಾಕಂ ವ್ಯಾಸಸ್ತನ್ನಃ ಪ್ರದಾಸ್ಯತಿ ।
ಇತ್ಯುಕ್ತ್ವಾ ತಂ ಪುರಸ್ಕೃತ್ಯ ಕೃಷ್ಣದ್ವೈಪಾಯನಂ ಯಯುಃ ॥ ೮೨ ॥

ಅ: ಆ ಪರಶುರಾಮನೇ ನಮಗೆ ತಾತನಾಗಿರುವ ಶ್ರೀವೇದವ್ಯಾಸರು. ಅವರೇ ನಮಗೆ ಸಂಪತ್ತನ್ನು ನೀಡುವರು'' ಎಂದು ಹೇಳಿದ. ನಂತರ ಪಾಂಡವರು ವೇದವ್ಯಾಸರನ್ನು ಮುಂದೆ ಮಾಡಿಕೊಂಡು ತೆರಳಿದರು.

ವಿ: ಹೀಗೆ ಭೀಮ ಹೇಳಿದ ಮೇಲೆ ಧರ್ಮರಾಜ ಸಮ್ಮತಿಸಲು ಪಾಂಡವರೆಲ್ಲರು ವೇದವ್ಯಾಸರನ್ನು ಮುಂದೆ ಮಾಡಿಕೊಂಡು ಆ ಧನವಿದ್ದ ಸ್ಥಳಕ್ಕೆ ತೆರಳಿ, ಒಂದು ದಿನ ಉಪವಾಸವಿದ್ದು ಮಾರನೆಯ ದಿನ ರುದ್ರಾದಿಗಳನ್ನೆಲ್ಲ ಹೋಮಾಹುತಿಗಳನ್ನು ನೀಡಿ ಪೂಜಿಸಿ, ಆ ಧನವನ್ನು ಸ್ವೀಕರಿಸಲು ಅನುಮತಿ ಪಡೆದರು :

ಶ್ರುತ್ವಾ ತು ತೇಷಾಂ ದ್ವಿಜಸತ್ತಮಾನಾಂ ಕೃತೋಪವಾಸಾ ರಜನೀಂ ನರೇಂದ್ರಾಃ ।
ಊಷುಃ ಪ್ರತೀತಾಃ ಕುಶಸಂಸ್ತರೇಷು ಯಥಾಧ್ವರೇ ಪ್ರಜ್ವಲಿತಾ ಹುತಾಶಾಃ ॥

– ಭಾರತ (ಆಶ್ವಮೇಧಿಕ. ೬೪/೧೫)

---

೮೧. 'ಪಾರ್ಥಾ ಮೇ ಹ್ಯಧಿಕಂ ಪ್ರಿಯಾಃ', 'ಪ್ರಿಯಾ ಇತ್ಯೇವ ಕಥನಾತ್' – (೨೨/೩೬, ೩೭)

೮೧. 'ಮಾಪತೇ ಪ್ರೇಯಸಾಂ ಪ್ರಿಯ' (ಸನ್ಯಾಯವಿವೃತಿ), 'ನಮೋಽಸ್ತು ವಿಷ್ಣವೇ ತಸ್ಮೈ ಪ್ರೇಷ್ಠಾಯ ಪ್ರೇಯಸಾಂ ಚ ಮೇ' (ತಲವಕಾರಭಾಷ್ಯ), 'ಯಸ್ಯಾಹಮಾಪ್ತ ಆಪ್ತೇಭ್ಯೋ ಯೋ ಮ ಆಪ್ತತಮಃ ಸದಾ' (ಕಾಠಕಭಾಷ್ಯ), 'ಅಮಂದಾನಂದಸಾಂದ್ರಾಯ ಪ್ರೇಯಸೇ ವಿಷ್ಣವೇ ನಮಃ' (ತೈತ್ತಿರೀಯಭಾಷ್ಯ) – ಇತ್ಯಾದಿ

ಪಾಂಡವರು ಹೊತ್ತು ತಂದ ಸಂಪತ್ತು

ಧನಂ ಕೃಷ್ಣಃ ಸಮಾದಾಯ ಸಮಂತಾಚ್ಛತಯೋಜನಮ್ ।
ದದೌ ತೇಷಾಂ ತೇಽಪಿ ಚೋಹುರ್ಹಸ್ತ್ಯಶ್ವಾಶ್ವತರಾದಿಭಿಃ ॥ ೮೩ ॥

ಅ: ವೇದವ್ಯಾಸರು ಸುತ್ತಲೂ ನೂರು ಯೋಜನ ವ್ಯಾಪ್ತಿಯನ್ನು ಹೊಂದಿದ್ದ ಧನವನ್ನು ಅವರಿಗೆ ನೀಡಿದರು. ಪಾಂಡವರು ಅದನ್ನು ಆನೆ, ಕುದುರೆ, ಒಂಟೆ ಹಾಗೂ ಮನುಷ್ಯರಿಂದ ಹೊತ್ತರು.

ವಿ: ಹಾಗೆ ಆ ಧನವನ್ನು ಹೊತ್ತಿದ್ದು ಅರವತ್ತು ಸಾವಿರ ಒಂಟೆಗಳು, ಒಂದು ಲಕ್ಷದ ಇಪ್ಪತ್ತು ಸಾವಿರ ಕುದುರೆಗಳು, ಒಂದು ಲಕ್ಷ ಆನೆಗಳು ಮತ್ತು ಒಂದು ಲಕ್ಷ ಬಂಡಿಗಳು ಎಂದು ಮಹಾಭಾರತದಲ್ಲಿದೆ (ಆಶ್ವಮೇಧಿಕ. ೬೫/೧೮, ೧೯):

ಷಷ್ಟಿರುಷ್ಟ್ರಸಹಸ್ರಾಣಿ ಶತಾನಿ ದ್ವಿಗುಣಾ ಹಯಾಃ ।
ವಾರಣಾಶ್ಚ ಮಹಾರಾಜ ಸಹಸ್ರಶತಸಂಮಿತಾಃ ॥
ಶಕಟಾನಿ ರಥಾಶ್ಚೈವ ತಾವದೇವ ಕರೇಣವಃ ।
ಖರಾಣಾಂ ಪುರುಷಾಣಾಂ ಚ ಪರಿಸಂಖ್ಯಾ ನ ವಿದ್ಯತೇ ॥

ಅಸಂಖ್ಯ ಕತ್ತೆಗಳು, ಮನುಷ್ಯರೂ ಸಹ ಆ ಧನವನ್ನು ಹೊತ್ತರು ಎಂಬುದು ಮತ್ತೊಂದು ವಿಶೇಷ.

ಯುಧಿಷ್ಠಿರಮೃತೇ ಸರ್ವೇ ಭೀಮಸೇನಪುರೋಗಮಾಃ ।
ಯಜ್ಞಾರ್ಥಮೂಹಿರೇ ಭೂರಿಸ್ವರ್ಣಮುದ್ಯದ್ರವಿಪ್ರಭಮ್ ॥ ೮೪ ॥

ಅ: ಧರ್ಮರಾಜನನ್ನು ಹೊರತು ಭೀಮಸೇನ ಮೊದಲಾದವರೆಲ್ಲ ಉದಿಸುವ ರವಿಯಂತೆ ಹೊಳೆಯುವ ಅಪಾರ ಪ್ರಮಾಣದ ಚಿನ್ನವನ್ನು ಯಜ್ಞಕ್ಕೆಂದು ಹೊತ್ತರು.

---

೮೩. ಶ್ರುತ್ವೈವಂ ವದತಸ್ತಸ್ಯ ವಾಕ್ಯಂ ಭೀಮಸ್ಯ ಭಾರತ ।
ಪ್ರೀತೋ ಧರ್ಮಾತ್ಮಜೋ ರಾಜಾ ಬಭೂವಾತೀವ ಭಾರತ ॥
ಅರ್ಜುನಪ್ರಮುಖಾಶ್ಚಾಪಿ ತಥೇತ್ಯೇವಾಬ್ರುವನ್ ವಚಃ ॥ – ಭಾರತ (ಆಶ್ವಮೇಧಿಕ. ೬೩/೧೬)

೮೪. ಏತದ್ವಿತ್ತಂ ತದಭವತ್ ಯದುದ್ದಧ್ರೇ ಯುಧಿಷ್ಠಿರಃ ॥
ಷೋಡಶಾಷ್ಟೌ ಚತುರ್ವಿಂಶತ್ಸಹಸ್ರಂ ಭಾರಲಕ್ಷಣಮ್ ॥ – ಭಾರತ (ಆಶ್ವಮೇಧಿಕ. ೬೫/೨೦)

ವಿ: ೧) ಧರ್ಮರಾಜ ಮಹಾರಾಜನೆಂಬ ಕಾರಣದಿಂದ ಅವನಿಗೆ ಹೊರುವ ಕೆಲಸವನ್ನು ಒಪ್ಪಿಸಲಿಲ್ಲ. ಅವನು ಶ್ರೀವ್ಯಾಸರ ಅನುಮತಿ ಪಡೆದು ತನ್ನ ಪುರೋಹಿತನೊಂದಿಗೆ ಹಸ್ತಿನಾವತಿಗೆ ತೆರಳಿದ. (ಅಶ್ವಮೇಧಿಕ. ೬೫–೨೦)

೨) ರಾಜಸೂಯ ಯಾಗಕ್ಕೆಂದು ದಿಗ್ವಿಜಯ ಮಾಡಿ ಧನ ತಂದಿದ್ದರೆ, ಈ ಅಶ್ವಮೇಧಕ್ಕೆಂದು ಹೀಗೆ ಇಲ್ಲಿಂದ ಧನವನ್ನು ತಂದರು ಎಂಬ ವಿಶೇಷವನ್ನು ಗಮನಿಸಬೇಕು. ಯುದ್ಧದಲ್ಲಿ ಜಗತ್ತಿನ ಎಲ್ಲ ರಾಜರೂ ಪಾಲ್ಗೊಂಡು ನಷ್ಟ ಅನುಭವಿಸಿದ್ದರಿಂದ ಅವರನ್ನು ಜಯಿಸಿ ಧನ ತರುವ ಯೋಜನೆಯನ್ನು ಅವರು ಮಾಡಲಿಲ್ಲ ಎಂಬ ಅಂಶ ಈಗಾಗಲೇ ಬಂದಿದೆ.

ಉದಂಕಮೇಘಗಳು

ತದೈವ ವಾಸುದೇವೋಽಪಿ ಸಭಾರ್ಯಃ ಸಹ ಭದ್ರಯಾ ।
ಆಗಚ್ಛನ್ ಹಸ್ತಿನಪುರಂ ಪಥ್ಯುದಂಕೇನ ಪೂಜಿತಃ ॥ ೮೫ ॥

ಅ: ಆಗಲೇ ಶ್ರೀಕೃಷ್ಣ ಸಪತ್ನೀಕನಾಗಿ ಸುಭದ್ರೆಯೊಂದಿಗೆ ಹಸ್ತಿನಾಪುರಕ್ಕೆ ಆಗಮಿಸುತ್ತಾ ದಾರಿಯಲ್ಲಿ ಉದಂಕನಿಂದ ಪೂಜಿತನಾದ.

ತತ್ಕಾಮವರ್ಷಿಣೋ ಮೇಘಾಂಸ್ತಸ್ಯ ದತ್ತ್ವೋದಕಾರ್ಥಿನಃ ।
ಸಫಲಂ ಸ್ವವರಂ ಕೃತ್ವಾ ಜಗಾಮ ಗಜಸಾಹ್ವಯಮ್ ॥ ೮೬ ॥

ಅ: ನೀರನ್ನು ಬಯಸಿದ ಅವನಿಗೆ ಯಥೇಚ್ಛವಾಗಿ ಮಳೆ ನೀಡುವ ಮೋಡಗಳನ್ನು ಇತ್ತು ತನ್ನ ವರವನ್ನು ಸಫಲವನ್ನಾಗಿ ಮಾಡಿ ಶ್ರೀಕೃಷ್ಣ ಹಸ್ತಿನಾಪುರಕ್ಕೆ ನಡೆದ.

ವಿ: ಅಮೃತ ನೀಡುವೆನೆಂದು ಶ್ರೀಕೃಷ್ಣ ನೀಡಿದ್ದ ವರವನ್ನು ಉದಂಕ ತಾನಾಗಿ ವ್ಯರ್ಥ ಮಾಡಿಕೊಂಡಿದ್ದ ವಿವರ ಈಗಾಗಲೇ ಬಂದಿದೆ(೩೦/೬೬). ಆದರೂ ಕೃಷ್ಣ ಸತ್ಯವಚನನಾಗಿ ಅಮೃತ ತುಲ್ಯವಾದ ನೀರನ್ನು ನೀಡಿದ. ಮೇಘಗಳನ್ನು ಅವನಿಗೆ ನೀಡಿದ. ಆ ಮೋಡಗಳಿಗೆ ಉದಂಕಮೇಘಗಳೆಂದೇ ಹೆಸರಾಯಿತು.

---

೮೬. ಸಫಲಂ ಸ್ವವರಂ ಕೃತ್ವೇತ್ಯತ್ರ ಸಿಂಹಾವಲೋಕನನ್ಯಾಯೇನ ಕಿಂಚಿತ್ ಪ್ರಯೋಜನಮಾಹ ಗ್ರಂಥಕಾರಃ। ಉದಂಕಂ ಪ್ರತ್ಯಮೃತಂ ದಾಸ್ಯಾಮೀತಿ ಸ್ವದತ್ತವರಸ್ಯ ಸ್ವಾಚ್ಛಯಾ ಇಂದ್ರೇಣ ಮೋಘೀಕೃತತ್ವಾತ್ ವೃಷ್ಟ್ಯರ್ಥಿನಃ ತಸ್ಯ ವೃಷ್ಟಿದಾನೇನ ''ಪಯಃ ಕೀಲಾಲಮಮೃತಮ್'' ಇತ್ಯುಕ್ತ್ಯಾ ಜಲಸ್ಯಾಮೃತತ್ವೇನ ಚ ತಮೇವ ಸ್ವವರಂ= ಸ್ವದತ್ತವರಂ ಸಫಲಂ ಕೃತ್ವೇತ್ಯರ್ಥಃ। ಸತ್ಯವ್ರತಮಿತಿ ಹಿ ಭಗವತೋ ನಾಮೇತಿ ಭಾವಃ ॥ – (ವಾ.)

೮೬. ಉತ್ತಂಕಮೇಘಾ ಇತ್ಯುಕ್ತಾಃ ಖ್ಯಾತಿಂ ಯಾಸ್ಯಂತಿ ಚಾಪಿ ತೇ । – ಭಾರತ (ಆಶ್ವಮೇಧಿಕ. ೫೫/೩೭)

ಆಸನ್ನೇಷ್ವೇವ ಪಾರ್ಥೇಷು ವ್ಯಾಸೇ ಚ ಪುರುಷೋತ್ತಮೇ ।
ಪ್ರವಿವೇಶ ಪುರಂ ಕೃಷ್ಣಸ್ತದಾऽಸೂತೋತ್ತರಾ ಮೃತಮ್ ॥ ೮೭ ॥

ಅ: ಪುರುಷೋತ್ತಮನಾದ ಶ್ರೀವೇದವ್ಯಾಸರು, ಪಾಂಡವರು ಹಸ್ತಿನಾಪುರವನ್ನು ಸಮೀಪಿಸುತ್ತಿರುವಾಗಲೇ ಶ್ರೀಕೃಷ್ಣ ಹಸ್ತಿನಾಪುರವನ್ನು ಪ್ರವೇಶಿಸಿದ. ಆಗ ಉತ್ತರೆ ಮೃತ ಶಿಶುವನ್ನು ಹೆತ್ತಳು.

ಏ: ಆ ಶಿಶು ಹಾಗೆ ಸಾಯಲು ಅಶ್ವತ್ಥಾಮರು ಪ್ರಯೋಗಿಸಿದ್ದ ಬ್ರಹ್ಮಶಿರೋಸ್ತ್ರ ಕಾರಣ. ಗರ್ಭದಲ್ಲಿ ಮಗುವನ್ನು ಪಾಲಿಸಿದ ಕೃಷ್ಣ ಬ್ರಹ್ಮಶಿರೋಸ್ತ್ರವನ್ನು ಅಮೋಘವೆಂದು ತಿಳಿಸಲೆಂದು ಮಗು ಹುಟ್ಟುತ್ತಲೇ ಅದರಿಂದ ಸಾಯಲು ಅವಕಾಶವಿತ್ತ ಅದರಿಂದಾಗಿ ಆ ಮಗು ಸತ್ತಿತು ಎಂದರ್ಥ.

---

೮೬. ಮಯಾ ತ್ವದರ್ಥಮುಕ್ತೋ ವೈ ವಜ್ರಪಾಣಿಃ ಪುರಂದರಃ ।
ಉತ್ತಂಕಾಯಾಮೃತಂ ದೇಹಿ ತೋಯರೂಪಮಿತಿ ಪ್ರಭುಃ ॥
ಸ ಮಾಮುವಾಚ ದೇವೇಂದ್ರೋ ನ ಮರ್ತ್ಯೋऽಮರ್ತ್ಯತಾಂ ವ್ರಜೇತ್ ।
ಅನ್ಯಮಸ್ಮೈ ವರಂ ದೇಹೀತ್ಯಸಕೃದ್ ಭೃಗುನಂದನ ॥
ಅಮೃತಂ ದೇಯಮಿತ್ಯೇವ ಮಯೋಕ್ತಃ ಸ ಶಚೀಪತಿಃ ॥
ಸ ಮಾಂ ಪ್ರಸಾದ್ಯ ದೇವೇಂದ್ರಃ ಪುನರೇವೇದಬ್ರವೀತ್ ॥
ಯದಿ ದೇಯಮವಶ್ಯಂ ವೈ ಮಾತಂಗೋऽಹಂ ಮಹಾಮತೇ ।
ಭೂತ್ವಾऽಮೃತಂ ಪ್ರದಾಸ್ಯಾಮಿ ಭಾರ್ಗವಾಯ ಮಹಾತ್ಮನೇ ॥
ಯದ್ಯೇವಂ ಪ್ರತಿಗೃಹ್ಣಾತಿ ಭಾರ್ಗವೋऽಮೃತಮದ್ಯ ವೈ ।
ಪ್ರದಾತುಮೇಷ ಗಚ್ಛಾಮಿ ಭಾರ್ಗವಸ್ಯಾಮೃತಂ ವಿಭೋ ।
ಪ್ರತ್ಯಾಖ್ಯಾತಸ್ತ್ವಹಂ ತೇನ ದಾಸ್ಯಾಮಿ ನ ಕಥಂಚನ ॥
ಸ ತಥಾ ಸಮಯಂ ಕೃತ್ವಾ ತೇನ ರೂಪೇಣ ವಾಸವಃ ।
ಉಪಸ್ಥಿತಸ್ತ್ವಯಾ ಚಾಪಿ ಪ್ರತ್ಯಾಖ್ಯಾತೋऽಮೃತಂ ದದತ್ ।
ಚಾಂಡಾಲರೂಪೀ ಭಗವಾನ್ ಸುಮಹಾಂಸ್ತೇ ವ್ಯತಿಕ್ರಮಃ ॥ – ಭಾರತ (ಆಶ್ವಮೇಧಿಕ. ೫೫/೨೭-೩೩)

೮೬. ತೋಯೇಪ್ಸಾಂ ತವ ದುರ್ಧರ್ಷಾಂ ಕರಿಷ್ಯೇ ಸಫಲಾಮಹಮ್ ।
ಯೇಷ್ವಹಃಸು ಚ ತೇ ಬ್ರಹ್ಮನ್ ಸಲಿಲೇಪ್ಸಾ ಭವಿಷ್ಯತಿ ।
ತದಾ ಮರೌ ಭವಿಷ್ಯಂತಿ ಜಲಪೂರ್ಣಾಃ ಪಯೋಧರಾಃ ।
ರಸವಚ್ಚ ಪ್ರದಾಸ್ಯಂತಿ ತೋಯಂ ತೇ ಭೃಗುನಂದನ ॥
ಉತ್ತಂಕಮೇಘಾ ಇತ್ಯುಕ್ತಾಃ ಖ್ಯಾತಿಂ ಯಾಸ್ಯಂತಿ ಚಾಪಿ ತೇ ॥
ಇತ್ಯುಕ್ತಃ ಪ್ರೀತಿಮಾನ್ ವಿಪ್ರಃ ಕೃಷ್ಣೇನ ಸ ಬಭೂವ ಹ ।
ಅದ್ಯಾಪ್ಯುತ್ತಂಕಮೇಘಾಶ್ಚ ಮರೌ ವರ್ಷಂತಿ ಭಾರತ ॥ – ಭಾರತ (ಆಶ್ವಮೇಧಿಕ. ೫೫/೩೫-೩೭)

೮೭. ತದಾऽಸೂತೋತ್ತರಾ ಮೃತಮಿತ್ಯತ್ರ ಉತ್ತರಾ= ಉತ್ತರಾದೇವೀ ಮೃತಂ= ಪರೀಕ್ಷಿತಂ ಅಸೂತ ॥ – (ವಾ.)

ಪರೀಕ್ಷಿದ್ರಾಜ ಬದುಕಿದ

ದ್ರೌಣ್ಯಸ್ತ್ರಸೂದಿತಂ ಬಾಲಂ ದೃಷ್ಟ್ವಾ ಕುಂತ್ಯಾದಿಕಾಃ ಸ್ತ್ರಿಯಃ ।
ಶರಣ್ಯಂ ಶರಣಂ ಜಗ್ಮುರ್ವಾಸುದೇವಂ ಜಗತ್ಪತಿಮ್ ॥ ೮೮ ॥

ಅ: ಅಶ್ವತ್ಥಾಮರ ಅಸ್ತ್ರದಿಂದಾಗಿ ಸತ್ತಿದ್ದ ಶಿಶುವನ್ನು ಕಂಡು ಕುಂತಿ ಮೊದಲಾದ ಸ್ತ್ರೀಯರು ಸರ್ವರಕ್ಷಕನೂ ಜಗತ್ಪತಿಯೂ ಆದ ಶ್ರೀಕೃಷ್ಣನನ್ನು ಶರಣುಹೊಕ್ಕರು.

ಏ: ಆಗ ಕುಂತಿ ಆ ಶಿಶುವನ್ನು ಬದುಕಿಸುವುದು ಕೃಷ್ಣನಿಗೆ ಅನಾಯಾಸದ ಕಾರ್ಯ ಎಂಬುದನ್ನು ಬಿನ್ನಹ ಮಾಡಿಕೊಂಡ ಬಗೆ ಹೀಗಿದೆ (ಆಶ್ವಮೇಧಿಕ. ೬೭/೧೬, ೧೭):

ತ್ವಂ ಹಿ ಕೇಶವ ಧರ್ಮಾತ್ಮಾ ಸತ್ಯವಾನ್ ಸತ್ಯವಿಕ್ರಮಃ ।
ಸ ತಾಂ ವಾಚಮೃತಾಂ ಕರ್ತುಮರ್ಹಸಿ ತ್ವಮರಿಂದಮ ॥
ಇಚ್ಛನ್ನಪಿ ಹಿ ಲೋಕಾಂಸ್ತ್ರೀನ್ ಜೀವಯೇಥಾ ಮೃತಾನಿಮಾನ್ ।
ಕಿಂ ಪುನರ್ದಯಿತಂ ಜಾತಂ ಸ್ವಸ್ತ್ರಿಯಸ್ಯಾತ್ಮಜಂ ಮೃತಮ್ ॥

ಆ ಮೂಲಕ ಆ ಮಗುವಿನ ಉಳಿವು ಕೃಷ್ಣನ ಸರ್ವೋತ್ತಮತ್ವಕ್ಕೆ ಸಾಧಕ ಎಂಬ ತತ್ವ ಸೂಚಿತ.

ಪ್ರತ್ಯಕ್ಷಮಾತ್ಮನಾ ಗರ್ಭೇ ರಕ್ಷಿತಂ ಪ್ರಸವೇ ಹತಮ್ ।
ಪುನರುಜ್ಜೀವಯಾಮಾಸ ಕೇಶವಃ ಪಾರ್ಥತಂತವೇ ॥ ೮೯ ॥

ಅ: ಗರ್ಭದಲ್ಲಿ ಪ್ರತ್ಯಕ್ಷವಾಗಿ ತಾನೇ ಗರ್ಭವನ್ನು ರಕ್ಷಿಸಿದ್ದ, ಪ್ರಸವಕಾಲದಲ್ಲಿ ಹತವಾಗಿದ್ದ ಅದನ್ನು ಕೃಷ್ಣ ಪಾಂಡವರ ಸಂತತಿಗೆಂದು ಮರಳಿ ಬದುಕಿಸಿದ.

ಏ: ಆಗ ಆ ಅಸ್ತ್ರ ಬ್ರಹ್ಮನ ಬಳಿಗೆ ತೆರಳಿತು ಎಂದು ಭಾರತದಲ್ಲಿದೆ (ಆಶ್ವಮೇಧಿಕ.೭೦/೩) :

ತದಸ್ತ್ರಂ ಜ್ವಲಿತಂ ಚಾಪಿ ಪಿತಾಮಹಮಗಾತ್ ತದಾ ।
ತತಃ ಪ್ರಾಣಾನ್ ಪುನರ್ಲೇಭೇ ಪಿತಾ ತವ ನರೇಶ್ವರ ॥

---

೮೭. ಸ ತು ರಾಜಾ ಮಹಾರಾಜ ಬ್ರಹ್ಮಾಸ್ತ್ರೇಣಾವಪೀಡಿತಃ ।
ಶವೋ ಬಭೂವ ನಿಶ್ಚೇಷ್ಟೋ ಹರ್ಷಶೋಕವಿವರ್ಧನಃ ॥ – ಭಾರತ (ಆಶ್ವಮೇಧಿಕ. ೬೬/೯)

೮೮. ದ್ರೌಣ್ಯಸ್ತ್ರವಿಪ್ಲುಷ್ಟಮಿದಂ ಮದಂಗಂ ಸಂತಾನಬೀಜಂ ಕುರುಪಾಂಡವಾನಾಮ್ ।
ಜುಗೋಪ ಕುಕ್ಷಿಂಗತ ಆತ್ತಚಕ್ರೋ ಮಾತುಶ್ಚ ಮೇಯಃ ಶರಣಂ ಗತಾಯಾಃ ॥
(ಪರೀಕ್ಷಿದ್ರಾಜನ ವಚನ) – ಭಾಗವತ (೧೦/೧/೬)

ಕೃಷ್ಣ ಅದನ್ನು ಹಾಗೆ ಬದುಕಿಸಲು ಸಮರ್ಥ ಎಂಬುದನ್ನು ಸೂಚಿಸಲು 'ಕೇಶವಃ', ಬ್ರಹ್ಮರುದ್ರಪ್ರವರ್ತಕನಾದ ಕಾರಣದಿಂದ ಕೇಶವ ಎಂಬುದಾಗಿ ಕೃಷ್ಣನ ಉಲ್ಲೇಖ ಮಾಡಿರುವರು. ಶ್ರೀಕೃಷ್ಣ ಆ ಮಗುವಿನ ಶವವನ್ನು ಉತ್ತರೆಯ ಕೈಯಿಂದ ತೆಗೆದುಕೊಂಡು ಮರಳಿ ಬದುಕಿಸಿದ.

ಪಾಂಡವರ ಹಸ್ತಿನಾಪುರಪ್ರವೇಶ

ತದೈವ ವಿವಿಶುಃ ಪಾರ್ಥಾಃ ಸಕೃಷ್ಣಾಃ ಸಧನೋಚ್ಚಯಾಃ ।
ಸರ್ವೇ ಮುಮುದಿರೇ ದೃಷ್ಟ್ವಾ ಪೌತ್ರಂ ಕೇಶವರಕ್ಷಿತಮ್ ॥ ೯೦ ॥

ಅ: ಆಗಲೇ ವೇದವ್ಯಾಸರೊಂದಿಗೆ ಪಾಂಡವರು ಅಪಾರ ಧನರಾಶಿಯಿಂದ ಕೂಡಿದವರಾಗಿ ಪಟ್ಟಣವನ್ನು ಪ್ರವೇಶಿಸಿದರು. ಅವರು ತಮ್ಮ ಮೊಮ್ಮಗ ಕೃಷ್ಣನಿಂದ ರಕ್ಷಿತನಾದುದನ್ನು ಕಂಡು ಆನಂದಿತರಾದರು.

ವಿ: ಪಾಂಡವರು ಯಜ್ಞಕ್ಕೆಂದು ಹಾಗೆ ಸಿದ್ಧತೆ ನಡೆಸಿದ್ದರಿಂದ ಅವರಿಗೆ ಬಂದ ಆಪತ್ತು ಗಮನಕ್ಕೆ ಬರುವ ಮುನ್ನವೇ ಪರಿಹಾರವಾಗುವಂತೆ ಕೃಷ್ಣ ಅನುಗ್ರಹಿಸಿದ್ದ ಎಂದು ತಿಳಿಯಬೇಕು:

ಯಜ್ಞೋ ದಾನಂ ತಪಶ್ಚೈವ ಪಾವನಾನಿ ಮನೀಷಿಣಾಮ್ । – ಗೀತಾ (೧೮/೫)

ದದೌ ದಾನಾನಿ ಬಹುಶೋ ಧರ್ಮಪುತ್ರೋ ಯುಧಿಷ್ಠಿರಃ ।
ಪೌತ್ರಜನ್ಮನಿ ಹೃಷ್ಟಾತ್ಮಾ ವಾಸುದೇವಂ ನನಾಮ ಚ ॥ ೯೧ ॥

---

೮೯. ಉಪಸ್ಪೃಶ್ಯ ತತಃ ಕೃಷ್ಣೋ ಬ್ರಹ್ಮಾಸ್ತ್ರಂ ಪ್ರತ್ಯಸಂಹರತ್ ।
ನ ಬ್ರವೀಮ್ಯುತ್ತರೇ ಮಿಥ್ಯಾ ಸತ್ಯಮೇತದ್ ಭವಿಷ್ಯತಿ ।
ಏಷ ಸಂಜೀವಯಾಮ್ಯೇನಂ ಪಶ್ಯತಾಂ ಸರ್ವದೇಹಿನಾಮ್ ।
ನೋಕ್ತಪೂರ್ವಂ ಮಯಾ ಮಿಥ್ಯಾ ಸ್ವೈರೇಷ್ವಪಿ ಕದಾಚನ ॥
ನ ಚ ಯುದ್ಧಾತ್ ಪರಾವೃತ್ತಸ್ತಥಾ ಸಂಜೀವತಾಮಯಮ್ ।
ಯಥಾ ಮೇ ದಯಿತೋ ಧರ್ಮೋ ಬ್ರಾಹ್ಮಣಾಶ್ಚಾವಿಶೇಷತಃ ।
ಅಭಿಮನ್ಯೋಃ ಸುತೋ ಜಾತೋ ಮೃತೋ ಜೀವತ್ವಯಂ ತಥಾ ॥
ಯಥಾ ಸತ್ಯಂ ಚ ಧರ್ಮಶ್ಚ ಮಯಿ ನಿತ್ಯಂ ಪ್ರತಿಷ್ಠಿತೌ ।
ತಥಾ ಮೃತಃ ಶಿಶುರಯಂ ಜೀವತಾದಭಿಮನ್ಯುಜಃ ॥
ಯಥಾ ಕಂಸಶ್ಚ ಕೇಶೀ ಚ ಧರ್ಮೇಣ ನಿಹತೌ ಮಯಾ ।
ತೇನ ಸತ್ಯೇನ ಬಾಲೋಽಯಂ ಪುನಃ ಸಂಜೀವತಾಮಯಮ್ ॥
ಇತ್ಯುಕ್ತೋ ವಾಸುದೇವೇನ ಸ ಬಾಲೋ ಭರತರ್ಷಭ ।
ಶನೈಃ ಶನೈರ್ಮಹಾರಾಜ ಪ್ರಾಸ್ಪಂದತ ಸಚೇತನಃ ॥ - ಭಾರತ (ಆಶ್ವಮೇಧಿಕ. ೬೯/೧೮-೨೪)

ಅ: ಧರ್ಮತನಯನಾದ ಯುಧಿಷ್ಠಿರ ಮೊಮ್ಮಗನ ಜನನದಿಂದ ಹರ್ಷಿತನಾಗಿ ಬಹುಬಗೆಯ ದಾನಗಳನ್ನು ನೀಡಿದ. ಶ್ರೀಕೃಷ್ಣನನ್ನು ವಂದಿಸಿದ.

ವಿ: ಪುತ್ರೋತ್ಸವಾದಿ ಸಂದರ್ಭಗಳಲ್ಲೂ ದಾನ ವಿಹಿತ ಎಂದು ಇದರಿಂದ ತಿಳಿಯುವುದು.

ಕುಂತೀಕೃಷ್ಣಾಸುಭದ್ರಾಭಿರ್ವೈರಾಟ್ಯಾಽನ್ಯಾಭಿರೇವ ಚ ।
ಪಾಂಡವೈಃ ಪುರುಷೈಶ್ಚಾನ್ಯೈಃ ಸಂಸ್ತುತಃ ಪ್ರಣತೋ ಹರಿಃ ॥ ೯೨ ॥

ಅ: ಕುಂತಿ, ದ್ರೌಪದಿ, ಸುಭದ್ರೆಯರಿಂದಲೂ, ಉತ್ತರೆಯಿಂದಲೂ, ಇತರ ಸ್ತ್ರೀಯರಿಂದಲೂ, ಪಾಂಡವರಿಂದಲೂ, ಇತರ ಪುರುಷರಿಂದಲೂ ಕೃಷ್ಣ ಸಂಸ್ತುತನಾದ, ನಮಸ್ಕೃತನಾದ.

ಅಶ್ವಮೇಧದ ಆರಂಭ

ತತಃ ಕೃಷ್ಣಾಭ್ಯನುಜ್ಞಾತಾಃ ಪಾರಾಶರ್ಯಸದಸ್ಯಕಾಃ ।
ಆರೇಭಿರೇಽಶ್ವಮೇಧಂ ತೇ ಮುನಿಭಿರ್ಬ್ರಹ್ಮವಾದಿಭಿಃ ॥ ೯೩ ॥

ಅ: ಬಳಿಕ ಕೃಷ್ಣನಿಂದ ಅನುಮತಿ ಪಡೆದು ವೇದವ್ಯಾಸರನ್ನು ಸಭಾಧ್ಯಕ್ಷರನ್ನಾಗಿ ಮಾಡಿಕೊಂಡು ಪಾಂಡವರು ಬ್ರಹ್ಮವಾದಿಗಳಾದ ಮುನಿಗಳೊಂದಿಗೆ ಅಶ್ವಮೇಧವನ್ನು ಪ್ರಾರಂಭಿಸಿದರು.

---

೯೨. ಪರಿಕ್ಷೀಣೇ ಕುಲೇ ಯಸ್ಮಾಜ್ಜಾತೋಽಯಮಭಿಮನ್ಯುಜಃ ।
ಪರೀಕ್ಷಿದಿತಿ ನಾಮಾಸ್ಯ ಭವತ್ವಿತ್ಯಬ್ರವೀತ್ತದಾ ॥ – ಭಾರತ (ಆಶ್ವಮೇಧಿಕ. ೭೦/೧೧)

೯೩. ಸದಸ್ಯಗ್ರಣೀಃ ಸದಸ್ಯಃ। ಸದಸ್ಯ ಏವ ಸದಸ್ಯಕಃ। ಪಾರಾಶರ್ಯ ಏವ ಸದಸ್ಯಕೋ ಯೇಷಾಂ ತೇ ಪಾರಾಶರ್ಯಸದಸ್ಯಕಾಃ ॥ – (ವಾ.)

೯೩. ಸದಸ್ಯಃ ಮಂತ್ರಪೂರ್ವಕವಿಧಿವಕ್ತಾ... । – (ಜ.)

೯೩. ತತಸ್ತಾಮುದಿತಾಃ ಸರ್ವಾಃ ಪ್ರಶಶಂಸುರ್ಜನಾರ್ದನಮ್ ।
ಕುಂತೀ ದ್ರುಪದಪುತ್ರೀ ಚ ಸುಭದ್ರಾ ಚೋತ್ತರಾ ತಥಾ ।
ತತ್ರ ಮಲ್ಲಾನಟಾಶ್ಚೈವ ಗ್ರಂಥಿಕಾಃ ಸೌಖ್ಯಶಾಯಿಕಾಃ ।
ಸೂತಮಾಗಧಸಂಘಾಶ್ಚಾಪ್ಯಸ್ತುವಂಸ್ತಂ ಜನಾರ್ದನಮ್ ॥ – ಭಾರತ (ಆಶ್ವಮೇಧಿಕ. ೭೦/೫,೬)

೯೩. ಅಹಂ ಪೈಲೋಽಥ ಕೌಂತೇಯ ಯಾಜ್ಞವಲ್ಕ್ಯಸ್ತಥೈವ ಚ ।
ವಿಧಾನಂ ಯದ್ ಯಥಾಕಾಲಂ ತತ್ ಕರ್ತಾರೋ ನ ಸಂಶಯಃ ॥
ಚೈತ್ರ್ಯಾಂ ಹಿ ಪೌರ್ಣಮಾಸ್ಯಾಂ ತು ತವ ದೀಕ್ಷಾ ಭವಿಷ್ಯತಿ ॥ – ಭಾರತ (ಆಶ್ವಮೇಧಿಕ. ೭೨/೩)

ಸರ್ವಯಜ್ಞಾತ್ಮಕಂ ತೇಷಾಮಶ್ವಮೇಧಂ ಜಗತ್ಪತಿಃ ।
ಕಾರಯಾಮಾಸ ಭಗವಾನ್ ಕೃಷ್ಣದ್ವೈಪಾಯನಃ ಸ್ವಯಮ್ ॥ ೯೪ ॥

ಅ: ಭಗವಂತನೂ, ಜಗದೊಡೆಯನೂ ಆದ ಸ್ವಯಂ ಶ್ರೀವೇದವ್ಯಾಸರು ಸಕಲ ಯಜ್ಞಾತ್ಮಕವಾಗುವಂತೆ ಆ ಅಶ್ವಮೇಧಯಾಗವನ್ನು ಮಾಡಿಸಿದರು.

ವಿ: ಸರ್ವಯಜ್ಞಾತ್ಮಕವಾದದ್ದು ಪಾಂಡವರ ಅಶ್ವಮೇಧಯಾಗದ ಮತ್ತೊಂದು ಹಿರಿಮೆ ಎಂಬ ವಿಶೇಷಾಂಶ ಇಲ್ಲಿದೆ.

ಯಜ್ಞಸಾಧನೆಗಳನ್ನು ಪೂರೈಸಿದ ಭೀಮಸೇನ

ಸಾಧನಾನಿ ತು ಸರ್ವಾಣಿ ಶಾಲಾಂ ಚೈವ ಹಿರಣ್ಮಯೀಮ್ ।
ಪವಮಾನಸುತಶ್ಚಕ್ರೇ ಕೃಷ್ಣದ್ವೈಪಾಯನೇರಿತಃ ॥ ೯೫ ॥

ಅ: ಸಕಲ ಯಜ್ಞಸಾಧನಗಳನ್ನು, ಚಿನ್ನದ ಯಾಗಶಾಲೆಯನ್ನು ವೇದವ್ಯಾಸರ ಆದೇಶದಂತೆ ಭೀಮಸೇನ ಸಿದ್ಧಪಡಿಸಿದ.

ವಿ: ರಾಜಸೂಯಯಾಗದ ಸಂದರ್ಭದಲ್ಲೂ ಭೀಮಸೇನ ಹಾಗೆ ಯಾಗಸಿದ್ಧತೆ ಮಾಡಿದ್ದ ವಿವರ ಬಂದಿದೆ (೨೧/೨೦೮).

ಅಶ್ವಮೇಧದ ಕುದುರೆಯ ಹಿಂದೆ ಅರ್ಜುನ

ಅಥಾನುಮಂತ್ರಿತೋತ್ಸೃಷ್ಟಂ ಪುರೋಹಿತಪುರಸ್ಕೃತಮ್ ।
ತುರಂಗಂ ಕೃಷ್ಣಸಾರಂಗಮನುವವ್ರಾಜ ವಾಸವಿಃ ॥ ೯೬ ॥

---

೯೫. ಸ್ತಂಭಾತ್ ಕನಕಚಿತ್ರಾಂಶ್ಚತೋರಣಾನಿ ಬೃಹಂತಿ ಚ ।
ಯಜ್ಞಾಯತನದೇಶೇಷು ದತ್ವಾ ಶುದ್ಧಂ ಚ ಕಾನನಮ್ ॥ – ಭಾರತ (ಆಶ್ವಮೇಧಿಕ. ೮೫/೧೧-೧೪)

ಶೋಭಾರ್ಥಂ ಚಾಪರಾನ್ ಯೂಪಾನ್ ಕಾಂಚನಾನ್ ಭರತರ್ಷಭ ।
ಸ ಭೀಮಃ ಕಾರಯಾಮಾಸ ಧರ್ಮರಾಜಸ್ಯ ಶಾಸನಾತ್ ॥ – ಭಾರತ (ಆಶ್ವಮೇಧಿಕ. ೮೮/೨೯)

ತತೋ ಯಯೌ ಭೀಮಸೇನಃ ಪ್ರಾಜ್ಞೈಃ ಸ್ಥಪತಿಭಿಃ ಸಹ ।
ಬ್ರಾಹ್ಮಣಾನಗ್ರತಃ ಕೃತ್ವಾ ಕುಶಲಾನ್ ಯಜ್ಞಕರ್ಮಣಿ ॥
ತಂ ಸ ಶಾಲಚಯಂ ಶ್ರೀಮತ್ ಸಪ್ರತೋಲೀಸುಘಟ್ಟಿತಮ್ ।
ಮಾಪಯಾಮಾಸ ಕೌರವ್ಯೋ ಯಜ್ಞವಾಟಂ ಯಥಾವಿಧಿ ॥
ಪ್ರಾಸಾದಶತಸಂಬಾಧಂ ಮಣಿಪ್ರವರಕುಟ್ಟಿಮಮ್ ।
ಕಾರಯಾಮಾಸ ವಿಧಿವತ್ ಹೇಮರತ್ನಾವಭೂಷಿತಮ್ ॥ – ಭಾರತ (ಆಶ್ವಮೇಧಿಕ. ೮೫/೧೧,೧೩)

ಅ: ಬಳಿಕ ಪಾಂಡವರು ಕಪ್ಪು ಮತ್ತು ಚಿತ್ರವರ್ಣಗಳ ಕುದುರೆಯನ್ನು ಅಭಿಮಂತ್ರಿಸಿ ಬಿಟ್ಟರು. ಅರ್ಜುನ ಪುರೋಹಿತರಾದ ಧೌಮ್ಯರನ್ನು ಮುಂದಿರಿಸಿಕೊಂಡು ಆ ಅಶ್ವವನ್ನು ಹಿಂಬಾಲಿಸಿದ.

ವಿ: ೧) ಅಶ್ವಮೇಧದ ನಿಯಮದಂತೆ ಆ ಕುದುರೆ ಇಡೀ ಜಗತ್ತನ್ನು ಒಂದು ವರ್ಷದ ಅವಧಿಯಲ್ಲಿ ಸುತ್ತಿ ಮರಳಬೇಕು. ಅದನ್ನು ಕಟ್ಟಿಹಾಕಿದ ರಾಜರುಗಳನ್ನು ಗೆದ್ದು ಅವರಿಂದ ಕಪ್ಪ ಕಾಣಿಕೆಗಳನ್ನು ಸ್ವೀಕರಿಸಬೇಕು. ಇತರರು ತಾವಾಗಿಯೇ ನೀಡಿದ ಕಾಣಿಕೆಗಳನ್ನು ಪಡೆಯಬೇಕು. ಅದರಂತೆ ಅರ್ಜುನ ಅಶ್ವಪಾಲಕನಾಗಿ ತೆರಳಿದ ಎಂದರ್ಥ.

೨) ತಾನು ದಿವ್ಯವಾದ ಧನುಸ್ಸು ಹೊಂದಿದ್ದರಿಂದ ಹಾಗೆ ತೆರಳಬೇಕೆಂಬ ಉತ್ಸಾಹವನ್ನು ರಾಜಸೂಯ ಯಾಗದ ಕಾಲದಲ್ಲೇ ತೋರಿದ್ದ (೨೧/೧೮೦). ಅವನ ಬಯಕೆ ಈಗ ಈಡೇರಿತು. ಈಗ ಕೀಚಕನಂತಹ ಶಿವಾದಿ ವರದಿಂದ ಕೂಡಿದ್ದ ಮಹಾದೈತ್ಯರಾರೂ ಇಲ್ಲದ್ದರಿಂದ ಅವನಿಗೆ ಅದು ಸಾಧ್ಯವಾಗುವಂತಿತ್ತು ಎಂಬ ಕಾರಣದಿಂದ ಶ್ರೀವೇದವ್ಯಾಸರು ಅವನಿಗೆ ಸರ್ವದಿಕ್ಕುಗಳ ಜಯಕ್ಕೆ ಒಬ್ಬನನ್ನೇ ಕಳುಹಿಸಲು ಅನುಜ್ಞೆ ನೀಡಿದ್ದರು ಎಂದು ತಿಳಿಯಬೇಕು.

ಸ ಜಿತ್ವಾ ರುಂಧತಃ ಸರ್ವಾನ್ ನೃಪತೀಂಥಸ್ತತೇಜಸಾ ।
ಚಾರಯಾಮಾಸ ಸರ್ವೇಷು ರಾಷ್ಟ್ರೇಷ್ವವಿಜಿತೋಽರಿಭಿಃ ॥ ೯೭ ॥

ಅ: ಅರ್ಜುನನು ತಡೆದ ಸಕಲರಾಜರುಗಳನ್ನೂ ಶಸ್ತ್ರದ ಬಲದಿಂದ ಜಯಿಸಿ ಸಕಲ ರಾಷ್ಟ್ರಗಳಲ್ಲೂ ಶತ್ರುಗಳಿಗೆ ಅಜೇಯನಾಗಿ ಆ ಕುದುರೆಯನ್ನು ತಿರುಗಿಸಿದ.

ವಿ: ದಿವ್ಯಾಸ್ತ್ರಪಾರಂಗತನಾದ್ದರಿಂದ ಅರ್ಜುನನಿಗೆ ಅನಾಯಾಸದಿಂದ ಸಕಲರನ್ನು ಜಯಿಸಲು ಸುಲಭವಾಯಿತು ಎಂದರ್ಥ.

---

೯೬. ತುರಂಗಂ ಕೃಷ್ಣಸಾರಂಗಮಿತ್ಯತ್ರ ಕೃಷ್ಣಸಾರಂಗವದಂಗಂ ಯಸ್ಯ ಸ ತಥೋಕ್ತಸ್ತಮ್। ''ಶಕಂಧ್ವಾದಿಷು ಪರರೂಪಂ ವಾಚ್ಯ'' ಮಿತಿ ವಚನಾತ್ ಸಾರಾಂಗ ಏವ ಸಾರಂಗಃ ॥ – (ವಾ.)

೯೬. ಆದೌ ಅನುಮಂತ್ರಿತಃ ಪಶ್ಚಾದುತ್ಸೃಷ್ಟಃ ಅನುಮಂತ್ರಿತೋತ್ಸೃಷ್ಟಃ ... । - (ಜ.)

೯೬. ಶ್ವೇತಾಶ್ವಃ ಕೃಷ್ಣಸಾರಂ ತಂ ಸಸಾರಾಶ್ವಂ ಧನಂಜಯಃ ॥
ವಿಧಿವತ್ ಪೃಥಿವೀಪಾಲ ಧರ್ಮರಾಜಸ್ಯ ಶಾಸನಾತ್ ॥ - ಭಾರತ (ಆಶ್ವಮೇಧಿಕ. ೭೩/೭)

೯೬. 'ಯಜ್ಞೇಷ್ವಾಲಂಭನಂ ಪ್ರೋಕ್ತಂ ದೇವತೋದ್ದೇಶತಃ ಪಶೋಃ ।
ಹಿಂಸಾನಾಮ ತದನ್ಯತ್ರ ತಸ್ಮಾತ್ತಾಂ ನಾಚರೇದ್ಬುಧಃ ।
ಯತೋ ಯಜ್ಞೇ ಮೃತಾ ಊರ್ಧ್ವಂ ಯಾಂತಿ ದೈವೇ ಚ ಪೈತ್ರಕೇ ।
ಅತೋ ಲಾಭಾದಾಲಭನಂ ಸ್ವರ್ಗಸ್ಯ ನ ತು ಮಾರಣಮ್' ಇತಿ ಚ ॥ - ಭಾ.ತಾ. (೧೧/೫/೧೩)

ಒಬ್ಬರನ್ನೂ ಕೊಲ್ಲದ ಅರ್ಜುನ

ಯುಧಿಷ್ಠಿರಾಜ್ಞಯಾ ತೇನ ನ ಕಶ್ಚಿನ್ನಿಹತಸ್ತದಾ ।
ಆಹೂತಾಶ್ಚ ನೃಪಾಸ್ತೇನ ಯಜ್ಞಾರ್ಥಂ ಪ್ರೀಯತಾऽಖಿಲಾಃ ॥ ೯೮ ॥

ಅ: ಧರ್ಮರಾಜನ ಆದೇಶದಿಂದಾಗಿ ಅರ್ಜುನ ಆಗ ಯಾರನ್ನೂ ಸಂಹರಿಸಲಿಲ್ಲ. ಅವನು ಪ್ರೀತಿಯಿಂದ ಸಕಲ ರಾಜರುಗಳನ್ನೂ ಯಜ್ಞಕ್ಕೆಂದು ಆಹ್ವಾನಿಸಿದ.

ವಿ: ೧) ಬಂಧು ಹತ್ಯೆಯ ಪಾಪದ ಪರಿಹಾರಕ್ಕೆಂದು ಆ ಯಜ್ಞವನ್ನು ಕೈಗೊಂಡಿದ್ದರಿಂದ ಅದು ಅಹಿಂಸಾತ್ಮಕವಾದ ಯಜ್ಞವೇ ಆಗಬೇಕೆಂಬುದು ಧರ್ಮರಾಜನ ಅಪೇಕ್ಷೆಯಾಗಿತ್ತು ಅದರಿಂದಾಗಿ ಅರ್ಜುನ ಯಾರನ್ನೂ ಕೊಲ್ಲದೇ ಆ ದಿಗ್ವಿಜಯದ ಕಾರ್ಯವನ್ನು ಸಾಧಿಸಿದ ಎಂದರ್ಥ.

೨) ಇದರಿಂದಾಗಿ ಜೈಮಿನಿಭಾರತದ ಅನೇಕ ವಿವರಗಳು ಕಾಲ್ಪನಿಕ ಎಂದು ಸಿದ್ಧಪಡುವುದು.

೩) ಅದರಲ್ಲಿ ಸುಧನ್ವ, ಸುರಥ ಮೊದಲಾದ ಅನೇಕ ಮಹಾವೀರರುಗಳನ್ನು ಅರ್ಜುನ ಸಂಹರಿಸಿದ ವಿವರ ಬಂದಿದೆ. ಅದು ವ್ಯಾಸಶಿಷ್ಯರಾದ ಜೈಮಿನಿಗಳಿಂದ ರಚಿತ ಎಂಬ ಪ್ರತೀತಿ ಇದ್ದರೂ, ವ್ಯಾಸಭಾರತಕ್ಕೆ ವಿರುದ್ಧವಾದ್ದರಿಂದ ಯಥಾಶ್ರುತಾರ್ಥದಲ್ಲಿ ಅದು ಅನೇಕ ಕಡೆ ಅಗ್ರಾಹ್ಯ:

> **ರಾಜಾನಸ್ತೇ ನ ಹಂತವ್ಯಾ ಧನಂಜಯ ಕಥಂಚನ ।**
> **ಸರ್ವಮೇತನ್ಮರವ್ಯಾಖ್ಯ ಭವತ್ಕೇತಾವತಾ ಕೃತಮ್ ।**
> **ಯೋಧಾಶ್ಚಾಪಿ ನ ಹಂತವ್ಯಾ ಧನಂಜಯ ರಣೇ ತ್ವಯಾ ॥**–(ಅಶ್ವಮೇಧಿಕ.೭೬/೨೨)

೪) ಆದರೆ, ವಿಷ್ಣುಭಕ್ತಿ ಪ್ರಚೋದಕವಾದ ಅನೇಕ ವಿವರಗಳು ಅದರಲ್ಲಿದ್ದು ಅವನ್ನೆಲ್ಲ ಗ್ರಹಿಸಬಹುದು. ಅರ್ಜುನ ದಿಗ್ವಿಜಯ ಕಾರ್ಯದೊಂದಿಗೆ ರಾಜರುಗಳ ಆಹ್ವಾನ ಕಾರ್ಯವನ್ನೂ ಸಹ ಆಗಲೇ ಪೂರೈಸಿದ.

ಅರ್ಜುನ ಬಭ್ರುವಾಹನರ ಸಮಾಗಮ

ಮಣಲೂರಂ ಕ್ರಮಾತ್ ಪ್ರಾಪ್ತಸ್ತತ್ರೈನಂ ಬಭ್ರುವಾಹನಃ ।
ಅಭ್ಯಯಾದರ್ಘ್ಯಪಾದ್ಯಾದ್ಯೈರ್ಯುತಮಾಹ ವಿಜಯಃ ಸುತಮ್ ॥ ೯೯ ॥

---

೯೯. ಮಳಲೂರಂ ಮಳನೂರನಾಮ್ನೀಂ ಪಾಂಡ್ಯಾನಾಂ ರಾಜಧಾನೀಂ ... । - (ಜ.)

ಅ: ಕ್ರಮವಾಗಿ ಅರ್ಜುನ ಮಣಲೂರಿಗೆ ಬಂದಾಗ ಅಲ್ಲಿ ಬಭ್ರುವಾಹನ ಅರ್ಘ್ಯ-ಪಾದ್ಯಾದಿಗಳೊಂದಿಗೆ ಸ್ವಾಗತಿಸಿದ. ಅರ್ಜುನ ಮಗನಾದ ಅವನಿಗೆ ನುಡಿದ :

ವಿ: ಅರ್ಜುನನಿಗೆ ಅವನು ತನ್ನ ಮಗ ಎಂಬ ಪರಿಜ್ಞಾನವಿರಲಿಲ್ಲ ಎಂಬರ್ಥದ ವಿವರ ಜೈಮಿನಿ ಭಾರತದಲ್ಲಿದೆ, ಆದರೆ, ಮೂಲಭಾರತದಲ್ಲಿ ಅರ್ಜುನ ಅವನು ತನ್ನ ಮಗ ಎಂದು ಗುರುತಿಸಿಯೇ ಯುದ್ಧಕ್ಕೆ ಆಹ್ವಾನಿಸಿದ; ಅವನು ತನ್ನ ಮಗನಾದರೂ ಮತ್ತೊಂದು ದೇಶದ ರಾಜ. ಪುತ್ರಿಕಾಪುತ್ರ ಧರ್ಮದಿಂದ ಆ ದೇಶಕ್ಕೇ ಸೇರಿದವನು. ಅದರಿಂದಾಗಿಯೇ ಅವನು ಪಾಂಡವರ ಉತ್ತರಾಧಿಕಾರಿ ಎನ್ನಿಸಿರಲಿಲ್ಲ, ಯುದ್ಧಕ್ಕೂ ಆಗಮಿಸಿರಲಿಲ್ಲ. ಅವನು ಪುತ್ರನಂತೆ ಸ್ವಾಗತಿಸುವ ಬದಲು ಮತ್ತೊಬ್ಬ ರಾಜನಂತೆ ಯುದ್ಧ ಮಾಡುವುದನ್ನು ಅರ್ಜುನ ಅಪೇಕ್ಷಿಸಿದ. ಅದಕ್ಕೆ ಮುಖ್ಯಕಾರಣದ ವಿವರ ಮುಂದೆ ಬಂದಿದೆ.

ಯೋದ್ಧುಕಾಮೋಽರ್ಘ್ಯಮಾದಾಯ ತ್ವಯಾಽದ್ಯಾಭಿಗತೋ ಹ್ಯಹಮ್ ।
ನ ಪ್ರೀಯೇ ಪೌರುಷಂ ಧಿಕ್ ತೇ ಯನ್ಮೇಧ್ಯಾಶ್ವೋ ನ ವಾರಿತಃ ॥ ೧೦೦ ॥

ಅ: ''ಯುದ್ಧ ಬಯಸಿ ಬಂದಿರುವ ನನ್ನನ್ನು ನೀನು ಅರ್ಘ್ಯವನ್ನು ಹಿಡಿದು ಸ್ವಾಗತಿಸುತ್ತಿರುವಿ. ಇದು ನನಗೆ ಪ್ರಿಯವಲ್ಲ, ನನ್ನ ಯಜ್ಞದ ಕುದುರೆಯನ್ನು ನೀನು ತಡೆಯಲಿಲ್ಲ, ನಿನ್ನ ಪೌರುಷಕ್ಕೆ ಧಿಕ್ಕಾರ''.

ಅರ್ಜುನನೊಂದಿಗೆ ಯುದ್ಧ ಮಾಡಲು ಉಲೂಪಿಯ ಪ್ರಚೋದನೆ

ತದಾಽಪಿ ಪಿತೃಭಕ್ತ್ಯೈನಮಯುಧ್ಯಂತಮುಲೂಪಿಕಾ ।
ಪ್ರಾಹ ಯುಧ್ಯಸ್ವ ಯತ್ಪ್ರೀತ್ಯೈ ಗುರೋಃ ಕಾರ್ಯಮಸಂಶಯಮ್ ॥ ೧೦೧ ॥

ಅ: ಆಗಲೂ ಪಿತೃಭಕ್ತಿಯಿಂದ ಬಭ್ರುವಾಹನ ಯುದ್ಧಕ್ಕೆ ತೊಡಗದಿರಲು ಉಲೂಪಿ ಹೇಳಿದಳು: ''ತಂದೆಗೆ ಯಾವುದು ಪ್ರಿಯವೋ ಅದನ್ನೇ ಮಾಡಬೇಕು; ಇದರಲ್ಲಿ ಸಂಶಯವಿಲ್ಲ. ಆದ್ದರಿಂದ ಯುದ್ಧಮಾಡು.

---

೧೦೦. ಮಣಿಪೂರೇಶ್ವರಂ ತ್ವೇವಮುಪಯಾತಂ ಧನಂಜಯಃ ।
ನಾಭ್ಯನಂದತ್ ಸ ಮೇಧಾವೀ ಕ್ಷತ್ರಧರ್ಮಮನುಸ್ಮರನ್ ॥ – ಭಾರತ (ಆಶ್ವಮೇಧಿಕ. ೭೯/೨)

೧೦೧. ಯತ್ಪ್ರೀತ್ಯೈ ಗುರೋಃ ಕಾರ್ಯಮಿತ್ಯತ್ರ ಯತ್ಕರ್ಮ ಗುರೋಃ ಪ್ರೀತ್ಯೈ ಭವತಿ ತದಂಸಶಯಂ ಕಾರ್ಯಮ್॥ – (ವಾ.)

ವಿ: ಉಲೂಪಿ ನಾಗರಾಜನ ಪುತ್ರಿ, ಅವಳು ಹಿಂದೆ ಅರ್ಜುನನಿಂದ ಗರ್ಭಾಧಾನ ಹೊಂದಿ ಇರಾವಾನ್ ಎಂಬ ಮಗನನ್ನು ಪಡೆದಿದ್ದ ವಿವರ ಈಗಾಗಲೇ ಬಂದಿದೆ (೨೦/೧೫೬). ಅವಳು ಈಗ ಬಭ್ರುವಾಹನನಿಗೆ ಹೀಗೆ ಯುದ್ಧ ಮಾಡಲು ಹೇಳಿದ್ದಕ್ಕೆ ಕಾರಣ ಮುಂದೆ ಬರುವುದು. (೧೧೦–೧೧೪)

ಪ್ರೀಣನಾಯೈವ ಯುಧ್ಯಸ್ವ ಪಿತ್ರೇ ಸಂದರ್ಶಯನ್ ಬಲಮ್ ।
ಇತ್ಯುಕ್ತೋ ಯುಯುಧೇ ಪಿತ್ರಾ ಬಲಂ ಸರ್ವಂ ಪ್ರದರ್ಶಯನ್ ॥ ೧೦೨ ॥

ಅ: ನಿನ್ನ ತಂದೆಗೆ ನಿನ್ನ ಬಲವನ್ನು ತೋರಿಸುತ್ತಾ ಅವನನ್ನು ಪ್ರೀತಿಪಡಿಸಲೆಂದು ಯುದ್ಧ ಮಾಡು'' ಉಲೂಪಿ ಹೀಗೆನ್ನಲು ಬಭ್ರುವಾಹನ ತನ್ನ ಸರ್ವ ಸಾಮರ್ಥ್ಯವನ್ನು ತೋರುತ್ತಾ ಅರ್ಜುನನೊಂದಿಗೆ ಯುದ್ಧಕ್ಕೆ ತೊಡಗಿದ.

ವಿ: ತಂದೆಗೆ ತನ್ನ ಸಾಮರ್ಥ್ಯವನ್ನು ತೋರಿಸುವ ಉತ್ಸಾಹದಿಂದ ಬಭ್ರುವಾಹನ ಪೂರ್ಣಪ್ರಮಾಣದ ಯುದ್ಧವನ್ನೇ ಮಾಡಿದ ಎಂಬುದು ವಿಶೇಷ.

ಮಗನ ಬಾಣಕ್ಕೆ ಮೂರ್ಛಿತನಾದ ಅರ್ಜುನ

ಅರ್ಜುನಸ್ತು ಸುತಸ್ನೇಹಾನ್ನಂದಂ ಯೋಧಯತಿ ಸ್ಮಯನ್ ।
ಸ ತು ಸರ್ವಾಯುಧಕ್ಷೇಪೇಽಪ್ಯವಿಕಾರಂ ಧನಂಜಯಮ್ ॥ ೧೦೩ ॥

ದೃಷ್ಟ್ವಾ ಬಾಲ್ಯಾತ್ ಪರೀಕ್ಷಾಯೈ ಮಂತ್ರಪೂತಂ ಮಹಾಶರಮ್ ।
ಚಿಕ್ಷೇಪ ಪಿತ್ರೇ ದೈವೇನ ತೇನೈನಂ ಮೋಹ ಆವಿಶತ್ ॥ ೧೦೪ ॥

---

೧೦೧. ಉಲೂಪೀ ಪ್ರಾಹ ವಚನಂ ಧರ್ಮ್ಯಂ ಧರ್ಮವಿಶಾರದಮ್ ।
ಯುಧ್ಯಸ್ವೈನಂ ಕುರುಶ್ರೇಷ್ಠ ಪಿತರಂ ಯುದ್ಧದುರ್ಮದಮ್ ॥
ಏವಮೇಷ ಹಿ ತೇ ಪ್ರೀತೋ ಭವಿಷ್ಯತಿ ನ ಸಂಶಯಃ ॥
ಏವಂ ದುರ್ಮರ್ಷಿತೋ ರಾಜಾ ಸ ಮಾತ್ರಾ ಬಭ್ರುವಾಹನಃ ।
ಮನಶ್ಚಕ್ರೇ ಮಹಾತೇಜಾ ಯುದ್ಧಾಯ ಭರತರ್ಷಭ ॥ – ಭಾರತ (ಆಶ್ವಮೇಧಿಕ. ೭೯/೧೦,೧೨)

೧೦೨. ಸ ರಥಾದವತೀರ್ಯಾಥ ರಾಜಾ ಪರಮಕೋಪನಃ ।
ಪದಾತಿಃ ಪಿತರಂ ಕ್ರುದ್ಧೋ ಯೋಧಯಾಮಾಸ ಪಾಂಡವಮ್ ॥
ಸಂಪ್ರೀಯಮಾಣಃ ಪಾರ್ಥಾನಾಮೃಷಭಃ ಪುತ್ರವಿಕ್ರಮಾತ್ ।
ನಾತ್ಯರ್ಥಂ ಪೀಡಯಾಮಾಸ ಪುತ್ರಂ ವಜ್ರಧರಾತ್ಮಜಃ ॥ – ಭಾರತ (ಆಶ್ವಮೇಧಿಕ. ೭೯/೩೦,೩೧)

ಅ: ಅರ್ಜುನನಾದರೂ ಪುತ್ರಸ್ನೇಹದಿಂದಾಗಿ ನಸುನಗುತ್ತಾ ಮೆಲ್ಲಗೆ ಯುದ್ಧ ಮಾಡಿದ. ಬಭ್ರುವಾಹನ ತಾನು ಎಲ್ಲ ಆಯುಧಗಳನ್ನು ಎಸೆದಾಗಲೂ ಅರ್ಜುನ ಯಾವ ವಿಕಾರಕ್ಕೂ ಒಳಗಾಗದಿದ್ದುದನ್ನು ಕಂಡು ಹುಡುಗುತನದಿಂದ ಅರ್ಜುನನ ಸಾಮರ್ಥ್ಯವನ್ನು ಪರೀಕ್ಷಿಸಲೆಂದು ದೈವಪ್ರೇರಿತನಾಗಿ ಮಂತ್ರಪೂತವಾದ ಮಹಾಶರವೊಂದನ್ನು ಅವನ ಮೇಲೆ ಪ್ರಯೋಗಿಸಿದ. ಅರ್ಜುನ ಮೂರ್ಛೆಗೊಳಗಾದ.

ಏ: ಅರ್ಜುನ ಹಾಗೆ ಮೂರ್ಛೆ ಬೀಳಲು ಕಾರಣ ಮುಂದೆ ಬಂದಿದೆ. ಜೈಮಿನೀಯಾಶ್ವಮೇಧ–ದಲ್ಲಿ ಅರ್ಜುನನ ಶಿರಶ್ಛೇದನವನ್ನೇ ಬಭ್ರುವಾಹನ ಮಾಡಿದ ಎಂಬ ಉಲ್ಲೇಖವಿದೆ:

ತಾವದ್ಬಾಣೇನ ತೀವ್ರೇಣ ಶಿರೋ ಜ್ವಲಿತಕುಂಡಲಮ್ ।
ಛಿನ್ನಂ ಪಾರ್ಥಸ್ಯ ತರಸಾ ನಿಪಪಾತ ಧರಾತಲೇ ॥ –(ಅ.೩೮, ಶ್ಲೋ. ೬೧, ೬೨)

ಅತ್ಯಧಿಕ ಕುಂಡಲದ ತಲೆ ಚಿಗಿದು ... ಬಿದ್ದುದು ಕರ್ಣಸುತನ ಶಿರದೆಡೆಗೆ ಪೋಗಿ॥
– ಲಕ್ಷ್ಮೀಶನ ಜೈಮಿನಿಭಾರತ(೨೩/೪೭)

ಇದು ಮಹಾಭಾರತಕ್ಕೆ ವಿರುದ್ಧವಾದ್ದರಿಂದ ಅಗ್ರಾಹ್ಯ. ಅರ್ಜುನನೊಂದಿಗೆ ವೃಷಕೇತು ಎಂಬ ಕರ್ಣನ ಪುತ್ರನೊಬ್ಬನೂ ಯುದ್ಧಕ್ಕೆ ಬಂದಿದ್ದುದಾಗಿಯೂ, ಬಭ್ರುವಾಹನ ಅವನ ಶಿರಶ್ಛೇದನವನ್ನೂ ಮಾಡಿದ್ದಾಗಿಯೂ ಜೈಮಿನಿಭಾರತದಲ್ಲಿದೆ. ಅದೂ ಸಹ ಕೇವಲ ಕಲ್ಪನೆಯೆಂದಷ್ಟೇ ತಿಳಿಯಬೇಕು. ಕರ್ಣನಿಗೆ ವೃಷಕೇತು ಎಂಬ ಪುತ್ರನೊಬ್ಬನಿದ್ದ ಉಲ್ಲೇಖವೇ ಮಹಾಭಾರತದಲ್ಲಿಲ್ಲ.

ಚಿತ್ರಾಂಗದೆಯ ಪ್ರಾಯೋಪವೇಶ

ಮೂರ್ಛಿತಂ ತಂ ಗುರುಂ ದೃಷ್ಟ್ವಾ ತದ್ಭಕ್ತ್ಯಾ ಭೃಶದುಃಖಿತಃ ।
ಪ್ರಾಯೋಪವಿಷ್ಟಸ್ತನ್ಮಾತಾ ವಿಲಲಾಪಾತಿದುಃಖಿತಾ ॥ ೧೦೫ ॥

---

೧೦೪. ದೈವೇನ ತೇನೇತ್ಯತ್ರ ದೈವೇನ ಅಧರ್ಮೇಣ ಭೀಷ್ಮಾದಿಹನನಾಖ್ಯದೋಷಾತ್ ಅರ್ಜುನೋಽಪಿ ರಣೇ ಅತಿವೇದನಾಂ ಪ್ರಾಪ್ನೋತ್ವಿತಿ ಶಾಪರೂಪದೇವವಾಕ್ಯೋಪೋದ್ಬಲಿತೇನೇತ್ಯರ್ಥಃ ॥ – (ವಾ.)

೧೦೪. ತತಃ ಸ ಬಾಲ್ಯಾತ್ ಪಿತರಂ ವಿವ್ಯಾಧ ಹೃದಿ ಪತ್ರಿಣಾ ।
ನಿಶಿತೇನ ಸುಪುಂಖೇನ ಬಲವದ್ ಬಭ್ರುವಾಹನಃ ॥
ಸ ತೇನಾತಿಭೃಶಂ ವಿದ್ಧಃ ಪುತ್ರೇಣ ಕುರುನಂದನಃ ।
ಮಹೀಂ ಜಗಾಮ ಮೋಹಾರ್ತಸ್ತತೋ ರಾಜನ್ ಧನಂಜಯಃ ॥ – ಭಾರತ (ಆಶ್ವಮೇಧಿಕ. ೭೯/೩೩,೩೫)

೧೦೫. ಇತ್ಯೇವಮುಕ್ತ್ವಾ ನೃಪತೇ ಧನಂಜಯಸುತೋ ನೃಪಃ ।
ಉಪಸ್ಪೃಶ್ಯಾಭವತ್ ತೂಷ್ಣೀಂ ಪ್ರಾಯೋಪೇತೋ ಮಹಾಮತಿಃ ॥ – ಭಾರತ (ಆಶ್ವಮೇಧಿಕ. ೮೦/೪೦)

ಅ: ಅರ್ಜುನ ಮೂರ್ಛಿತನಾದದ್ದನ್ನು ಕಂಡು ಅವನ ಮೇಲಿನ ಭಕ್ತಿಯಿಂದಾಗಿ ಬಭ್ರುವಾಹನ ತುಂಬಾ ದುಃಖಿತನಾಗಿ ಪ್ರಾಯೋಪವೇಶಕ್ಕೆ ತೊಡಗಿದ. ಅವನ ತಾಯಿ ಚಿತ್ರಾಂಗದೆ ತುಂಬ ದುಃಖದಿಂದ ವಿಲಾಪ ಮಾಡತೊಡಗಿದಳು.

ಚಿತ್ರಾಂಗದೆ ಮಾಡಿದ ಉಲೂಪಿಯ ಧಿಕ್ಕಾರ

ವಿಜಗರ್ಹ ತದೋಲೂಪೀಂ ಧಿಗ್ಜಗತ್ತ್ರಯಪೂಜಿತಮ್ ।
ಅಜೀಘನೋ ಮೇ ಭರ್ತಾರಂ ಪುತ್ರೇಣೈವಾವಿಜಾನತಾ ॥ ೧೦೬ ॥

ಅ: ಚಿತ್ರಾಂಗದೆ ಆಗ ಉಲೂಪಿಯನ್ನು ತೆಗಳಿದಳು ''ನಿನಗೆ ಧಿಕ್ಕಾರ, ತ್ರಿಲೋಕವಂದಿತನಾದ ನನ್ನ ಪತಿಯನ್ನು ಏನೂ ತಿಳಿಯದ ಅವನ ಮಗನಿಂದಲೇ ಕೊಲ್ಲಿಸಿದೆ.

ಲೋಕವೀರಂ ಪತಿಂ ಹಿತ್ವಾ ನ ಮೇ ಕಾರ್ಯಂ ಸುತೇನ ಚ ।
ಪತಿಲೋಕಮಹಂ ಯಾಸ್ಯೇ ತೃಪ್ತಾ ಭವ ಕಲಿಪ್ರಿಯೇ ॥ ೧೦೭ ॥

ಅ: ಲೋಕವೀರನಾದ ಪತಿಯನ್ನು ಬಿಟ್ಟು ನಾನು ಮಾಡುವುದೇನೂ ಇಲ್ಲ, ಮಗನೊಂದಿಗೆ ಪತಿಲೋಕವನ್ನೇ ಸೇರುವೆ, ಕಲಹಪ್ರಿಯಳಾದ ನೀನು ತೃಪ್ತಳಾಗು.

ವಿ: ಇಲ್ಲಿ ಕಲಿ ಎಂದರೆ ಕಲಹ ಎಂದರ್ಥ; ತಂದೆ ಮಕ್ಕಳಲ್ಲಿ ಯುದ್ಧವೇರ್ಪಡಿಸಿ, ಅನರ್ಥಕ್ಕೆ ಕಾರಣಳಾದ್ದರಿಂದ ಅವಳನ್ನು 'ಕಲಿಪ್ರಿಯೇ' ಎಂದು ಕರೆದಿರುವಳು.

ಇತ್ಯುಕ್ತ್ವಾ ಮರಣಾಯೈವ ತಾಂ ವಿನಿಶ್ಚಿತಮಾನಸಾಮ್ ।
ಧರಾಯಾಂ ವಿಲುಠಂತೀಂ ಚ ದೃಷ್ಟ್ವಾ ಭುಜಗನಂದಿನೀ ॥ ೧೦೮ ॥

---

೧೦೬. ನನು ತ್ವಮಾರ್ಯೇ ಧರ್ಮಜ್ಞಾ ತ್ರೈಲೋಕ್ಯವಿದಿತಾ ಶುಭೇ ।
ಯದ್ ಘಾತಯಿತ್ವಾ ಪುತ್ರೇಣ ಭರ್ತಾರಂ ನಾನುಶೋಚಸಿ ।
(ಉಲೂಪಿಯನ್ನು ಕುರಿತು ಚಿತ್ರಾಂಗದೆಯ ವಚನ) – ಭಾರತ(ಆಶ್ವಮೇಧಿಕ.೮೦/೬)

೧೦೭. ತೃಪ್ತಾ ಭವ ಕಲಿಪ್ರಿಯೇ ಇತ್ಯತ್ರ ಕಲಿಃ = ಕಲಹಃ ಯುದ್ಧಮಿತ್ಯರ್ಥಃ । 'ಕಲಿಸಂಸ್ಫೋಟಸಂಯುಗಾಃ' ಇತ್ಯನುಶಾಸನಾತ್ ॥ – (ವಾ.)

೧೦೭. **ಪತಿಂ ಹತ್ವಾ** – (ಪಾಠಾಂತರ)

೧೦೮. ಇತ್ಯುಕ್ತ್ವಾ ಪನ್ನಗಸುತಾಂ ಸಪತ್ನೀ ಚೈತ್ರವಾಹನೀ ।
ತತಃ ಪ್ರಾಯಮುಪಾಸೀನಾ ತೂಷ್ಣೀಮಾಸೀಜ್ಜನಾಧಿಪ ॥ – ಭಾರತ (ಆಶ್ವಮೇಧಿಕ. ೮೦/೧೮)

ಪ್ರಜ್ಞೆ ಮರಳಿದ ಅರ್ಜುನ

ನಾಗಲೋಕಾತ್ ಸಮಾದಾಯ ವಿಶಲ್ಯಕರಣೀಂ ಕ್ಷಣಾತ್ ।
ಉತ್ಥಾಪಯಾಮಾಸ ಪತಿಂ ತ್ರಿಲೋಕಾಧಿರಥಂ ತಯಾ ॥ ೧೦೯ ॥

ಅ: ಹೀಗೆ ಹೇಳಿ ಸಾಯಲೆಂದೇ ಮನಸ್ಸಿನಲ್ಲಿ ನಿಶ್ಚಯಿಸಿ ಭೂಮಿಯ ಮೇಲೆ ಹೊರಳಾಡುತ್ತಿದ್ದ ಚಿತ್ರಾಂಗದೆಯನ್ನು ಕಂಡು ಉಲೂಪಿ ಕ್ಷಣಮಾತ್ರದಲ್ಲಿ ನಾಗಲೋಕದಿಂದ ವಿಶಲ್ಯಕರಣಿಯನ್ನು ತಂದು ಅದರಿಂದ ಮೂರು ಲೋಕದ ಅತಿರಥನಾದ ಅರ್ಜುನನನ್ನು ಎಬ್ಬಿಸಿದಳು.

ವಿ: ೧) ಮಹಾಭಾರತದಲ್ಲಿ ಉಲೂಪಿಯು ತಂದದ್ದು ಸಂಜೀವನಮಣಿ ಎಂಬ ಉಲ್ಲೇಖವಿದೆ. ಅದು ಸಂಜೀವನಕ್ಕೆ ಸಂಬಂಧಿಸಿದ ವಿಶಲ್ಯಕರಣಿ ಎಂಬ ವಿಶೇಷವಿವರ ಇದರಿಂದ ತಿಳಿಯುವುದು :

ಉಲೂಪೀ ಚಿಂತಯಾಮಾಸ ತದಾ ಸಂಜೀವನಂ ಮಣಿಮ್ ।
ಸ ಚೋಪಾತಿಷ್ಠತ ತದಾ ಪನ್ನಗಾನಾಂ ಪರಾಯಣಮ್ ॥ –(ಆಶ್ವಮೇಧಿಕ.೮೦/೪೨)

೨) ಈ ವಿಶಲ್ಯಕರಣಿಯ ಉಲ್ಲೇಖ ಎಂಟನೆಯ ಅಧ್ಯಾಯದಲ್ಲಿ ಬಂದಿದೆ (೮/೧೫೩).

೩) ರಾಮಾಯಣದಲ್ಲಿ ಹನುಮಂತ ಗಂಧಮಾದನದಿಂದ ತಂದ ಸಂಜೀವನದಲ್ಲಿ ಇದ್ದ ನಾಲ್ಕು ಮೂಲಿಕೆಗಳಲ್ಲಿ ಇದೂ ಒಂದು.

೪) ದೇಹಕ್ಕೆ ಚುಚ್ಚಿದ ಶಸ್ತ್ರಗಳನ್ನು ತಕ್ಷಣ ಹೊರತೆಗೆಯುವುದು ಇವುಗಳ ಹಿರಿಮೆ ಎಂಬುದು ಅದರ ಹೆಸರಿನಿಂದಲೇ ಸೂಚಿತ.

೫) ಜೈಮಿನಿಭಾರತದಲ್ಲಿ ಬಭ್ರುವಾಹನ ಪಾತಾಳಲೋಕಕ್ಕೆ ತೆರಳಿ, ಯುದ್ಧ ಮಾಡಿ, ಆ ಮಣಿಯನ್ನು ತಂದಂತೆ ವಿವರವಿದೆ. ಅದೂ ಸಹ ಕೇವಲ ಕಲ್ಪನೆಯಷ್ಟೇ.

ಅರ್ಜುನ ಪರಾಭವದ ದೈವಿಕ ಹಿನ್ನೆಲೆ

ಪ್ರಹಸ್ಯೋವಾಚ ಚ ತದಾ ಶ್ರುತಂ ವಾಕ್ಯಂ ಪುರಾ ಮಯಾ ।
ಸುರಲೋಕೇ ಸುರೈಃ ಪ್ರೋಕ್ತಂ ಭೀಷ್ಮಾದ್ಯಾ ನಾತಿಧರ್ಮತಃ ॥ ೧೧೦ ॥

ಯದ್ಧತಾಸ್ತೇನ ದೋಷೇಣ ಪಾರ್ಥಸ್ತೇನಾತಿವೇದನಾಮ್ ।
ರಣೇ ವ್ರಜೇದಿತಿ ನ ತತ್ ಪರತಃ ಸ್ಯಾದಿತಿ ಹ್ಯಹಮ್ ।
ವಚನಾದೇವ ದೇವಾನಾಂ ಯುದ್ಧ್ಯೇತ್ಯಾತ್ಮಜಮಬ್ರುವಮ್ ॥ ೧೧೧ ॥

ಅ: ಬಳಿಕ ನಕ್ಕು ಉಲೂಪಿ ತಿಳಿಸಿದಳು ''ಹಿಂದೆ ನಾನು ದೇವಲೋಕದಲ್ಲಿ ದೇವತೆಗಳು ನುಡಿದ ಮಾತನ್ನು ಕೇಳಿಸಿಕೊಂಡೆ ''ಭೀಷ್ಮ ಮೊದಲಾದವರು ಅರ್ಜುನನಿಂದ ಅತಿ ಧಾರ್ಮಿಕವಾದ ರೀತಿಯಲ್ಲಿ ಹತರಾಗಿಲ್ಲ. ಆ ದೋಷದಿಂದಾಗಿ ಅರ್ಜುನ ಯುದ್ಧದಲ್ಲಿ ತುಂಬಾ ನೋವನ್ನು ಹೊಂದುವಂತಾಗಬೇಕು''. ಅದು ಬೇರೊಬ್ಬರಿಂದ ಆಗದಿರಲಿ ಎಂದು ನಾನು ಆ ದೇವತೆಗಳ ಮಾತಿನಿಂದಲೇ ಬಭ್ರುವಾಹನನಿಗೆ ಯುದ್ಧ ಮಾಡು ಎಂದು ಹೇಳಿದೆ.

ಏ: ಅರ್ಜುನನು ಬೇರೊಬ್ಬರಿಂದ ಸೋತರೆ ಅವನ ಕೀರ್ತಿಗೆ ಕಳಂಕ ತಟ್ಟುವದು, ತನ್ನ ಮಗನಿಂದಲೇ ಸೋತರೆ ದೇವತೆಗಳ ಸಂಕಲ್ಪವೂ ನಡೆದು ಅರ್ಜುನನಿಗೆ ಕಳಂಕ ತಟ್ಟುವ ಬದಲು ಕೀರ್ತಿಯೇ ಹೆಚ್ಚುವುದು. **'ಪುತ್ರಾದಿಚ್ಛೇತ್ ಪರಾಜಯಂ'** ಎಂದು ತಿಳಿದು ಉಲೂಪಿ ಬಭ್ರುವಾಹನನನ್ನು ಹಾಗೆ ಯುದ್ಧಕ್ಕೆ ತೊಡಗಿಸಿದಳು.

---

೧೦೯. ತಸ್ಮಿನ್ ನ್ಯಸ್ತೇ ಮಣೌ ವೀರೋ ಜಿಷ್ಣುರುಜ್ಜೀವಿತಃ ಪ್ರಭುಃ।
ಚಿರಸುಪ್ತ ಇವೋತ್ತಸ್ಥೌ ಮೃಷ್ಟಲೋಹಿತಲೋಚನಃ॥ – ಭಾರತ (ಆಶ್ವಮೇಧಿಕ. ೮೦/೫೨)

೧೧೦. ತಥಾಚ ಭೀಷ್ಮಾದಿವಧಸ್ಯ ಪರಮಧರ್ಮತ್ವೇಽಪಿ ವಚನಾಪ್ರಯುಕ್ತಧರ್ಮನ್ಯೂನತಾಯಾಃ । ಸತ್ವಾನ್ನಾತಿ-ಧರ್ಮೇಣೇತ್ಯುಕ್ತಂ ಅತೋ ನ ದೋಷಃ। – (ತಾ.)

೧೧೦. ಭೀಷ್ಮಾದ್ಯಾ ನಾತಿಧರ್ಮತ ಇತಿ । ನನು ಕಥಮೇತತ್ । 'ವಿಷ್ಣುದ್ವಿಟ್ ತದನುಬಂಧಿನಿಗ್ರಹಃ ಪರಮೋ ಧರ್ಮಃ । ತದ್ವಿರುದ್ಧಃ ಸರ್ವೋಽಪ್ಯಧರ್ಮ' ಇತಿ ಗೀತಾತಾತ್ಪರ್ಯೇ । ವಿಷ್ಣುದ್ವಿಟ್ ತದನುಬಂಧಿನಾಂ ನಿಗ್ರಹಸ್ಯ ಪರಮಧರ್ಮತ್ವೇನೋಕ್ತತ್ವಾತ್ ಭೀಷ್ಮದ್ರೋಣಕರ್ಣಾನಾಂ ತದನುಬಂಧಿತ್ವೇನ ತದ್ಧನನಸ್ಯ ಪರಮಧರ್ಮತಯಾ ಭೀಷ್ಮಾದ್ಯಾ ನಾತಿಧರ್ಮತೋ ಹತಾ ಇತಿ ಕಥಮುಚ್ಯತೇ । ಸ್ವವಚನವಿರೋಧಾದಿತಿ ಚೇತ್ ಉಚ್ಯತೇ । ಯದ್ಯಪಿ ಭೀಷ್ಮಾದ್ಯಾಃ ಧರ್ಮತ ಏವ ಹತಾಃ ವಿಷ್ಣುದ್ವಿಡನುಬಂಧಿತ್ವಾತ್ । ತಥಾಪಿ ನ ಯುದ್ಧಧರ್ಮತೋ ಹತಾಃ ತದೀಯವಧಂ ತನ್ಮುಖಾದೇವ ಶ್ರುತ್ವಾ ಭೀಷ್ಮಹನನಸ್ಯ, ಭೂಮಿಗ್ರಸ್ತರಥಚಕ್ರೋದ್ಧಾರಾಯ ಅವಸರಮದತ್ವಾ ಕರ್ಣಹನನಸ್ಯ ಯುದ್ಧಧರ್ಮತ್ವಾಭಾವಾತ್ । ನ ಚ 'ನಿಕೃತ್ಯಾ ನಿಕೃತಿಂ ಹನ್ಯಾತ್' ಇತಿವಚನಾತ್ । ನಿಕೃತ್ಯಾ ಛದ್ಮನಾ ತದ್ಧನನಂ ಧರ್ಮ ಏವೇತಿ ಬೋದ್ಧವ್ಯಮ್ । ತೇಷಾಂ ವೈಷ್ಣವತ್ವೇನ ನಿಕೃತಿತ್ವಾಭಾವಾತ್ । ಯಥೋಕ್ತಮ್ - 'ವೈಷ್ಣವತ್ವಾಚ್ಚ ಕರ್ಣಸ್ಯ ತನ್ನ ಜಘಾನ ಭೀಮತಃ' ಇತಿ । ಅತ ಏವ ವಾಕ್ಯಶೇಷಃ – 'ನಿಕೃತ್ಯಾ ನೈವ ಧಾರ್ಮಿಕಾನ್' ಇತಿ । ತಥಾ ಚ ಭೀಷ್ಮಾದಿಹನನಂ ಧರ್ಮ ಏವ । ದುರ್ಯೋಧನಾದ್ಯನುಬಂಧಿತ್ವಾತ್ । ಹನನಂ ಚ ಯುದ್ಧಧರ್ಮೇಣ ಕೃತಮ್ । ಅತ ಏವ ತದಭಿಪ್ರಾಯೇಣೈವ 'ನಾತಿಧರ್ಮತಃ' ಇತಿ ಅತಿಶಬ್ದಪ್ರಯೋಗ ಇತಿ ಜ್ಞಾತವ್ಯಮ್॥ – (ಚ.)

೧೧೦. ನನು ಭೀಷ್ಮಾದಯೋಽರ್ಜುನೇನ ಧರ್ಮೇಣೈವ ಹತಾಃ । ಪಾಪಂ ಚ ಪಾಪಾನುಗತಂ ಚ ಹತ್ವಾ ಕಥಂಚನಾಪ್ಯಸ್ತಿ ನ ಚೈವ ಪಾಪಮಿತಿ ಭಗವದುಕ್ತೇಃ । ಅತೋ 'ಭೀಷ್ಮಾದ್ಯಾ ನಾತಿ ಧರ್ಮತೋ ಹತಾಃ' ಇತಿ ಸುರೈಃ ಕಥಮುಕ್ತಮಿತಿಚೇತ್ । ಉಚ್ಯತೇ । ಭೀಷ್ಮಾದಿಷು ಸ್ನೇಹವಶಾತ್ ತೈಸ್ತಥೋಕ್ತಮ್ । ತದ್ಯಥಾ ದುರ್ಯೋಧನ ಸ್ನೇಹಾತ್ ಬಲಭದ್ರದ್ರೌಣ್ಯಾದಿಭಿಃ ದುರ್ಯೋಧನೋಽಧರ್ಮೇಣ ಹತ ಇತ್ಯುಕ್ತಮಿತಿ । ಪ್ರಾರಬ್ಧ ಕರ್ಮಾನುಭವಾಭಿಪ್ರಾಯೇಣ ಭುಕ್ತ ದೋಷ ಫಲ ಇತ್ಯುಕ್ತಂ, ನ ತ್ವಯಂ ಪರಾಜಯೋ ಭೀಷ್ಮಾದಿವಧಜಪಾಪ-ನಿಮಿತ್ತತಃ । ಉಕ್ತರೀತ್ಯಾಭೀಷ್ಮಾದಿ ವಧಸ್ಯ ಪಾಪಸಾಧನಾಭಾವತ್ । ನಾರಾಯಣದ್ವಿಟ್ತದನುಬಂಧಿನಿಗ್ರಹೋ ನೃಣಾಂ ಪರಮೋ ಧರ್ಮ ಇತ್ಯುಕ್ತತ್ವಾತ್ । ಅಪರೋಕ್ಷಜ್ಞಾನಿನಾಂ ಸ್ವೋತ್ತಮ ದ್ರೋಹಂ ವಿನಾಽಪರೋಕ್ಷ ಜ್ಞಾನಾನಂತರ ಕೃತ ಪಾಪಲೇಪಾಭಾವಾಚ್ಚ। – ಪ್ರಮಾಣಸಂಗ್ರಹ

ದೇವಾನಾಮೇವ ಸಂಕಲ್ಪಾನ್ಮೂರ್ಛಿತಶ್ಚಾರ್ಜುನೋಽಭವತ್ ।
ಭುಕ್ತದೋಷಫಲಶ್ಚಾಯಂ ಪುನರ್ಭೋಕ್ಷ್ಯತಿ ನಾನ್ಯತಃ ॥ ೧೧೨ ॥

ಅ: ದೇವತೆಗಳ ಸಂಕಲ್ಪದಿಂದಾಗಿಯೇ ಅರ್ಜುನ ಹಾಗೆ ಮೂರ್ಛಿತನಾಗಿದ್ದ. ತನ್ನ ತಪ್ಪಿಗೆ ಫಲ ಅನುಭವಿಸಿದ್ದರಿಂದ ಅರ್ಜುನನಿಗೆ ಅದನ್ನು ಬೇರೆಯವರಿಂದ ಅನುಭವಿಸುವ ಪ್ರಸಂಗ ಒದಗದು.

ಅನ್ಯೇನ ಪಾತಿತಸ್ಯಾಸ್ಯ ಯಶೋ ನಶ್ಯೇತ್ ತ್ರಿಲೋಕಗಮ್ ।
ನಾರ್ಜುನಸ್ಯ ಯಶೋ ನಶ್ಯೇದಿತಿ ದೇವೈರಿದಂ ಕೃತಮ್ ॥ ೧೧೩ ॥

ಅ: ಬೇರೆಯವನಿಂದ ಅರ್ಜುನ ಯುದ್ಧದಲ್ಲಿ ಸೋತರೆ ಅವನ ಮೂರು ಲೋಕದಲ್ಲಿ ಹರಡಿದ್ದ ಕೀರ್ತಿ ಕಳಂಕಿತವಾಗುವುದು. ಅವನಿಗೆ ಹಾಗೆ ಕೀರ್ತಿ ನಾಶವಾಗದಿರಲೆಂದೇ ದೇವತೆಗಳು ಇದನ್ನು ಮಾಡಿದರು''.

ವಿ: ಭೀಷ್ಮಾದಿಗಳು ಅರ್ಜುನನಿಂದ ಧರ್ಮದಿಂದಲೇ ಹತವಾಗಿದ್ದರೂ, ವಸುದೇವತೆಗಳು ಭೀಷ್ಮಾದಿಗಳ ಮೇಲಿನ ಸ್ನೇಹದಿಂದ ಅದನ್ನು ಅಧರ್ಮವೆಂದು ಬಗೆದರು. ಅಶ್ವತ್ಥಾಮಾದಿಗಳು ಭೀಮ ಮಾಡಿದ ದುರ್ಯೋಧನ ವಧೆಯನ್ನು ಹೇಗೆ ತಿಳಿದಿದ್ದರೋ ಹಾಗೆ. ಅರ್ಜುನನಿಗೆ ಹಾಗಾದದ್ದೆಲ್ಲ ಅವನ ಪ್ರಾರಬ್ಧದ ಫಲ ಎಂಬ ವಿಶೇಷ ವಿವರಣೆ ಪ್ರಮಾಣಸಂಗ್ರಹದಲ್ಲಿದೆ.

---

೧೧೦. ಮಹಾಭಾರತಯುದ್ಧೇ ಯತ್ ತ್ವಯಾ ಶಾಂತನವೋ ನೃಪಃ ।
ಅಧರ್ಮೇಣ ಹತಃ ಪಾರ್ಥ ತಸ್ಯೈಷಾ ನಿಷ್ಕೃತಿಃ ಕೃತಾ ॥ ....
ತಸ್ಯ ಶಾಂತಿಮಕೃತ್ವಾ ತ್ವಂ ತ್ಯಜೇಥಾ ಯದಿ ಜೀವಿತಮ್ ।
ಕರ್ಮಣಾ ತೇನ ಪಾಪೇನ ಪತೇಥಾ ನಿರಯೇ ಧ್ರುವಮ್ ।
ಏಷಾ ತು ವಿಹಿತಾ ಶಾಂತಿಃ ಪುತ್ರಾದ್ ಯಾಂ ಪ್ರಾಪ್ತವಾನಸಿ ॥ ....
ಆಪ್ಲುತ್ಯ ದೇವಾ ವಸವಃ ಸಮೇತ್ಯ ಚ ಮಹಾನದೀಮ್ ।
ಇದಮೂಚುರ್ವಚೋ ಘೋರಂ ಭಾಗೀರಥ್ಯಾ ಮತೇ ತದಾ ॥ ....
ತದನೇನಾನುಷಂಗೇಣ ವಯಮದ್ಯ ಧನಂಜಯಮ್ ।
ಶಾಪೇನ ಯೋಜಯಾಮೇತಿ ತಥಾಽಸ್ತ್ವಿತಿ ಚ ಸಾಽಬ್ರವೀತ್ ॥ ....
ಪುತ್ರಸ್ತಸ್ಯ ಮಹಾಭಾಗ ಮಣಿಪೂರೇಶ್ವರೋ ಯುವಾ ।
ಸ ಏವಂ ರಣಮಧ್ಯಸ್ಥಃ ಶರೈಃ ಪಾತಯಿತಾ ಭುವಿ ॥
ಏವಂ ಕೃತೇ ಸ ನಾಗೇಂದ್ರ ಮುಕ್ತಶಾಪೋ ಭವಿಷ್ಯತಿ ॥
ತಚ್ಛ್ರುತ್ವಾ ತ್ವಂ ಮಯಾ ತಸ್ಮಾಚ್ಛಾಪಾದಸಿ ವಿಮೋಕ್ಷಿತಃ ॥ – ಭಾರತ(ಆಶ್ವಮೇಧಿಕ. ೮೧/೮-೧೯)

೧೧೧. ಯದ್ಧತಾಸ್ತೇನೇತ್ಯತ್ರ ಯತ್ ತೇನ ಪಾರ್ಥೇನ ಹತಾ ಇತಿ ಸಂಬಂಧಃ ॥ – (ವಾ.)

೧೧೨. ಪುತ್ರಾಚ್ಚ ಪುತ್ರಾದಪಿ ಪುನರ್ನ ಭೋಕ್ಷ್ಯತಿ ॥ – (ಸ.)

ಪ್ರಸನ್ನನಾದ ಅರ್ಜುನ

ಇತ್ಯುಕ್ತಃ ಪ್ರೀತಿಮಾಪೇದೇ ಪುತ್ರಭಾರ್ಯಾಯುತೋಽರ್ಜುನಃ ।
ಯಜ್ಞಾರ್ಥಂ ತಾವಥಾಹೂಯ ಪೂಜಿತಃ ಪ್ರಯಯೌ ತತಃ ॥ ೧೧೪ ॥

ಅ: ಉಲೂಪಿ ಹೀಗೆ ತಿಳಿಸಿದಾಗ ಅರ್ಜುನ ಹೆಂಡತಿ ಹಾಗೂ ಮಗನೊಂದಿಗೆ ಪ್ರೀತಿ ಹೊಂದಿದವನಾದ. ಅವರಿಬ್ಬರನ್ನು ಯಜ್ಞಕ್ಕೆ ಆಹ್ವಾನಿಸಿ ಅಲ್ಲಿಂದ ಮುಂದಕ್ಕೆ ತೆರಳಿದ.

ದ್ವಾರಕೆಯಲ್ಲಿ ಅರ್ಜುನ

ದ್ವಾರಕಾಯಾಃ ಸಮೀಪಸ್ಥಂ ಪ್ರದ್ಯುಮ್ನಾದ್ಯಾಃ ಸುತಾ ಹರೇಃ ।
ಪ್ರಸಹ್ಯಾಶ್ವಮಪಾಜಹ್ರುರಾಹ್ವಯಂತೋಽರ್ಜುನಂ ಮೃಧೇ ॥ ೧೧೫ ॥

ಅ: ದ್ವಾರಕೆಯ ಸಮೀಪದಲ್ಲಿ ಅರ್ಜುನ ಬಂದಾಗ ಪ್ರದ್ಯುಮ್ನ ಮೊದಲಾದ ಕೃಷ್ಣಪುತ್ರರು ಅರ್ಜುನನನ್ನು ಯುದ್ಧಕ್ಕೆ ಕರೆಯುತ್ತಾ ಬಲಾತ್ಕಾರವಾಗಿ ಕುದುರೆಯನ್ನು ಅಪಹರಿಸಿದರು.

ವಸುದೇವ ಕೊಡಿಸಿದ ಅಶ್ವಮೇಧದ ಕುದುರೆ

ಸುಭದ್ರಾಹರಣಂ ಮಾರ್ಷ್ಟಿಂ ನೀತೇಽಶ್ವೇ ತೈರ್ಧನಂಜಯಃ ।
ಗೌರವಾದ್ವಾಸುದೇವಸ್ಯ ಮಾತುಲಸ್ಯ ಚ ಕೇವಲಮ್ ॥ ೧೧೬ ॥

---

೧೧೪. ಚಿತ್ರಾಂಗದಾಯಾಃ ಶ್ರುತ್ವಾಸ್ಯಾಃ ಕೌರವ್ಯದುಹಿತುಸ್ತದಾ ।
ಯುಧಿಷ್ಠಿರಸ್ಯಾಶ್ವಮೇಧಃ ಪರಿಚೈತ್ರೀಂ ಭವಿಷ್ಯತಿ ॥
ತತ್ರಾಗಚ್ಛೇಃ ಸಹಾಮಾತ್ಯೋ ಮಾತೃಭ್ಯಾಂ ಸಹಿತೋ ನೃಪ ॥ – ಭಾರತ (ಆಶ್ವಮೇಧಿಕ. ೮೧/೨೩)

೧೧೫. ತತೋ ದ್ವಾರವತೀಂ ರಮ್ಯಾಂ ವೃಷ್ಣಿವೀರಾಭಿಪಾಲಿತಾಮ್ ।
ಆಸಸಾದ ಹಯಃ ಶ್ರೀಮಾನ್ ಕುರುರಾಜಸ್ಯ ಯಜ್ವನಃ ॥
ತಮುನ್ನಥ್ಯ ಹಯಶ್ರೇಷ್ಠಂ ಯಾದವಾನಾಂ ಕುಮಾರಕಾಃ ।
ಪ್ರಯಯುಸ್ತಾಂಸ್ತದಾ ರಾಜನ್ನುಗ್ರಸೇನೋ ನ್ಯವಾರಯತ್ ।
ತತಃ ಪುರಾದ್ ವಿನಿಷ್ಕ್ರಮ್ಯ ವೃಷ್ಣ್ಯಂಧಕಪತಿಸ್ತದಾ ।
ಸಹಿತೋ ವಸುದೇವೇನ ಮಾತುಲೇನ ಕಿರೀಟಿನಃ ॥
ತೌ ಸಮೇತ್ಯ ಕುರುಶ್ರೇಷ್ಠಂ ವಿಧಿವತ್ ಪ್ರೀತಿಪೂರ್ವಕಮ್ ।
ಪರಯಾ ಭಾರತಶ್ರೇಷ್ಠಂ ಪೂಜಯಾ ಸಮವಸ್ಥಿತೌ ।
ತತಸ್ತಾಭ್ಯಾಮನುಜ್ಞಾತೋ ಯಯೌ ಯೇನ ಹಯೋ ಗತಃ ॥ – ಭಾರತ (ಆಶ್ವಮೇಧಿಕ. ೮೩/೧೪-೧೭)

೧೧೬. ಮಾರ್ಷ್ಟಿಂ ಪ್ರತಿಕರ್ತುಂ ... । – (ವ.)

ಮಾತುಲಾಯಾಬ್ರವೀದಶ್ವಂ ಹೃತಂ ಪೌತ್ರೈರಬಂಧುವತ್ ।
ಸ ನಿರ್ಭರ್ತ್ಸ್ಯ ಕುಮಾರಾಂಸ್ತಾನ್ ಮೇಧ್ಯಮಶ್ವಮಮೋಚಯತ್ ॥ ೧೧೭ ॥

ಅ: ಸುಭದ್ರಾಹರಣದ ಸೇಡು ತೀರಿಸಿಕೊಳ್ಳಲು ಅವರು ಹಾಗೆ ಕುದುರೆಯನ್ನು ಒಯ್ಯಲು ಅರ್ಜುನ ಕೇವಲ ಕೃಷ್ಣನ ಹಾಗೂ ವಸುದೇವನ ಮೇಲಿನ ಗೌರವದಿಂದ ವಸುದೇವನಿಗೆ ''ನಿನ್ನ ಮೊಮ್ಮಕ್ಕಳು ಶತ್ರುಗಳಂತೆ ಕುದುರೆಯನ್ನು ಅಪಹರಿಸಿರುವರು'' ಎಂದು ತಿಳಿಸಿದ. ವಸುದೇವ ಕುಮಾರರನ್ನು ಬೈಯ್ದು ಯಜ್ಞದ ಕುದುರೆಯನ್ನು ಬಿಡುಗಡೆ ಮಾಡಿಸಿದ.

ವಿ: ೧) ಇಲ್ಲಿಯ ಅರ್ಜುನನ ವರ್ತನೆ ಅತ್ಯಂತ ಆದರ್ಶಪ್ರಾಯವಾದುದು. ಅವರು ಹಾಗೆ ಮಾಡಿದಾಗ ಕೆರಳಿ ಯುದ್ಧಕ್ಕೆ ತೊಡಗುವ ದುಡುಕುತನವನ್ನು ಮಾಡದೇ ವಸುದೇವನಿಗೆ ವಿಷಯ ತಿಳಿಸಿ ಸಮಸ್ಯೆಯನ್ನು ಪರಿಹರಿಸಲು ಕೇಳಿಕೊಂಡ. ವಸುದೇವನೂ ಸಹ ಹಾಗೆಯೇ ವಿಷಯವನ್ನು ಅರಿತು ಪ್ರದ್ಯುಮ್ನಾದಿಗಳಿಗೆ ತಿಳುವಳಿಕೆ ಹೇಳಿ ಕುದುರೆಯನ್ನು ಹಿಂದಕ್ಕೆ ಕೊಡಿಸಿದ.

೨) ಧೃತರಾಷ್ಟ್ರ ವಸುದೇವನಂತೆ ನಡೆದಿದ್ದರೆ ಅವನ ರೀತಿಯೇ ಬೇರೆಯಾಗುತ್ತಿತ್ತು. ಅದರ ಬದಲು ಪುತ್ರವ್ಯಾಮೋಹದಿಂದ ಪಾಂಡವರ ರಾಜ್ಯವನ್ನು ಅವರಿಗೆ ಕೊಡಿಸುವಲ್ಲಿ ವಿಫಲ–ನಾದ್ದರಿಂದ ಅವರನ್ನೆಲ್ಲ ತನ್ನೆದುರೇ ಕಳೆದುಕೊಳ್ಳುವ ದುರಂತಕ್ಕೆ ಗುರಿಯಾದ.

ಹಸ್ತಿನಾಪುರಕ್ಕೆ ಮರಳಿದ ಅರ್ಜುನ

ಮಾತುಲಂ ಸ ಪ್ರಣಮ್ಯಾಥ ಯಜ್ಞಾರ್ಥಂ ತಾನ್ ನಿಮಂತ್ರ್ಯ ಚ ।
ಗಚ್ಛನ್ ಗಜಾಹ್ವಯಂ ದೂತಮಗ್ರತೋಽಯಾಪಯನ್ನೃಪೇ ॥ ೧೧೮ ॥

ಅ: ಬಳಿಕ ಅರ್ಜುನ ಸೋದರ ಮಾವನಾದ ವಸುದೇವನಿಗೆ ನಮಸ್ಕರಿಸಿ, ಅವರನ್ನು ಯಜ್ಞಕ್ಕೆ ಆಹ್ವಾನಿಸಿ ಹಸ್ತಿನಾವತಿಗೆ ತೆರಳುತ್ತಾ ಮುಂಚಿತವಾಗಿ ದೂತನನ್ನು ಯುಧಿಷ್ಠಿರನ ಬಳಿಗೆ ಕಳಿಸಿದ.

ಯುಧಿಷ್ಠಿರನ ಸಾಮುದ್ರಿಕ ಜಿಜ್ಞಾಸೆ

ಸಕೃಷ್ಣಃ ಸಹಸೋದರ್ಯಃ ಶ್ರುತ್ವಾಽಸೌ ಪ್ರಾಪ್ತಮರ್ಜುನಮ್ ।
ಪ್ರೀತೋ ಬಾಷ್ಪಾಭಿಪೂರ್ಣಾಕ್ಷೋ ಭ್ರಾತೃಸ್ನೇಹಾದಭಾಷತ ॥ ೧೧೯ ॥

ಅ: ಶ್ರೀಕೃಷ್ಣನೊಂದಿಗೂ, ಸೋದರರೊಂದಿಗೂ ಸಮೇತನಾದ ಧರ್ಮರಾಜ ಅರ್ಜುನ ಮರಳಿ ಬಂದದ್ದನ್ನು ಕೇಳಿ ಆನಂದಿತನಾದ; ನೀರು ತುಂಬಿದ ಕಣ್ಣುಗಳುಳ್ಳವನಾಗಿ ಭ್ರಾತೃವಾತ್ಸಲ್ಯದಿಂದ ಕೃಷ್ಣನನ್ನು ಕೇಳಿದ.

ವಾಸುದೇವ ನ ಪಶ್ಯಾಮಿ ದುರ್ಲಕ್ಷಣಮಜಾರ್ಜುನೇ ।
ಕೇನ ದುರ್ಲಕ್ಷಣೇನಾಯಂ ಬಹುದುಃಖೀ ಪ್ರವಾಸಗಃ ॥ ೧೨೦ ॥

ಅ: 'ಅಜನಾದ ಕೃಷ್ಣ! ನಾನು ಅರ್ಜುನನಲ್ಲಿ ದುರ್ಲಕ್ಷಣವನ್ನೇನೂ ಕಾಣೆ, ಯಾವ ದುರ್ಲಕ್ಷಣದಿಂದಾಗಿ ಇವನು ಸದಾ ಸಂಚರಿಸುವಂತಾಗಿದ್ದು ಬಹಳ ಕ್ಲೇಶ ಪಡುತ್ತಿರುವನು'.

ವಿ: ೧) ಅರ್ಜುನನ ತೀರ್ಥಯಾತ್ರೆ (ಅ. ೨೦), ಕಿರಾತಾರ್ಜುನೀಯಪ್ರಸಂಗ(ಅ. ೨೦), ಐದು ವರ್ಷಗಳ ಇಂದ್ರಲೋಕವಾಸ (ಅ. ೨೨) ಮುಂತಾದ ಪ್ರಸಂಗಗಳು ಅವನು ಬಹಳವಾಗಿ ಸಂಚರಿಸತ್ತಿದ್ದುದಕ್ಕೆ ದ್ಯೋತಕ. ಸಧಾ ಪ್ರವಾಸ* ಒಂದು ರೀತಿಯ ದುಃಖವೇ; ಅಂತಹ ದುಃಖಕ್ಕೆ ದುರ್ಲಕ್ಷಣವೇ ಕಾರಣ. ಅಂತಹ ದುರ್ಲಕ್ಷಣ ಅರ್ಜುನನಲ್ಲಿ ತನಗೇನೂ ಕಾಣುತ್ತಿಲ್ಲ, ಆದರೆ ತಾನೇನೂ ಪೂರ್ಣ ತಿಳಿದವನಲ್ಲ ಎಂದು ಬಲ್ಲ ಧರ್ಮರಾಜ ಸರ್ವಜ್ಞನಾದ ಕೃಷ್ಣನನ್ನು ಆ ಬಗ್ಗೆ ತಿಳಿಸಲು ಕೇಳಿಕೊಳ್ಳುವನು.

೨) ದೇಹಲಕ್ಷಣಕ್ಕೂ ಜೀವನದ ಸುಖದುಃಖಗಳಿಗೂ ಇರುವ ಸಂಬಂಧದ ಬಗ್ಗೆ ಬೆಳಕು ಚೆಲ್ಲುವ ಅಪೂರ್ವ ಭಾಗವಿದು.

ಅರ್ಜುನನಲ್ಲಿದ್ದ ದುರ್ಲಕ್ಷಣಗಳು

ಪೃಷ್ಟಸ್ತಂ ಕೇಶವಃ ಪ್ರಾಹ ಭ್ರಾತಾ ತೇ ದೀರ್ಘಪಿಂಡಿಕಃ ।
ತೇನಾಯಂ ದುಃಖಬಹುಲ ಇತ್ಯುಕ್ತ್ವಾ ಪುನರೇವ ಚ ।
ವದಂತಮೇವ ಪಾಂಚಾಲೀ ಕಟಾಕ್ಷೇಣ ನ್ಯವಾರಯತ್ ॥ ೧೨೧ ॥

---

* ಸೂರ್ಯಃ ಪರ್ಯಟನಪ್ರಿಯಃ..... । – ರುಕ್ಮಿಣೀಶವಿಜಯ (೧೬/೪೦)

ಸದಾ ಸಂಚರಣಶೀಲ ಇತ್ಯರ್ಥಃ । – ರುಕ್ಮಿಣೀಶವಿಜಯವ್ಯಾಖ್ಯಾನ

ಅನೇನ ಸೂರ್ಯಚಂದ್ರವಾಯವಃ । ತೇ ಹಿ ಕ್ಷಣಮಾತ್ರಮೇಕತ್ರಾವಸ್ಥಾನರಹಿತಾ ಇತಿ ಪ್ರಸಿದ್ಧಮ್ ... ॥
– ಭಾಗವತಸಾರೋದ್ಧಾರ (೧೧/೧೭)

ಅ: ಅವನು ಹಾಗೆ ಕೇಳಲು ಕೃಷ್ಣ ತಿಳಿಸಿದ 'ನಿನ್ನ ಸೋದರನಾದ ಅರ್ಜುನ ಸ್ವಲ್ಪ ಉದ್ದ ದೇಹದವನು, ಅದರಿಂದಾಗಿಯೇ ಅವನು ಬಹಳ ದುಃಖ ಅನುಭವಿಸುತ್ತಿರುವನು, ಎಂದು ನುಡಿದು; ಮತ್ತೂ ಹೇಳಲು ತೊಡಗಿದ ಅವನನ್ನು ದ್ರೌಪದಿ ಕುಡಿಗಣ್ಣನೋಟದಿಂದ ತಡೆದಳು.

ಎ: ೧) ಪಿಂಡಿಕ ಎಂದರೆ ದೇಹ ಎಂದು, ಕಾಲಿನ ಹರಡಿಗಳು ಎಂದೂ ಅರ್ಥ. ಶಾಸ್ತ್ರವಿಹಿತ ಪ್ರಮಾಣಕ್ಕಿಂತ ಸ್ವಲ್ಪ ಹೆಚ್ಚು ಉದ್ದವಾಗಿದ್ದುದು ಅರ್ಜುನನ ದೇಹದ ದುರ್ಲಕ್ಷಣ. ಅದರಿಂದ

---

೧೨೦. ಕಿಂ ನಿಮಿತ್ತಂ ಸ ನಿತ್ಯಂ ಹಿ ಪಾರ್ಥಃ ಸುಖವಿವರ್ಜಿತಃ ।
ಅತೀವ ವಿಜಯೋ ಧೀಮನ್ನಿತಿ ಮೇ ದೂಯತೇ ಮನಃ ॥
ಕಿಂ ತು ತಸ್ಯ ಶರೀರೇऽಸ್ತಿ ಸರ್ವಲಕ್ಷಣಪೂಜಿತೇ ।
ಅನಿಷ್ಟಂ ಲಕ್ಷಣಂ ಕೃಷ್ಣ ಯೇನ ದುಃಖಾನ್ಯಾಪ್ನುತೇ ।
ನಹಿ ಪಶ್ಯಾಮಿ ಬೀಭತ್ಸೋರ್ನಿತ್ಯಂ ತನ್ಮೇ ವ್ಯಾಖ್ಯಾತುಮರ್ಹಸಿ ॥ - ಭಾರತ (ಆಶ್ವಮೇಧಿಕ. ೮೭/೩,೫,೬)

೧೨೧. ನ ಹ್ಯಸ್ಯ ನೃಪತೇ ಕಿಂಚಿತ್ ಸಂಶ್ಲಿಷ್ಟಮುಪಲಕ್ಷಯೇ ।
ಋತೇ ಪುರುಷಸಿಂಹಸ್ಯ ಪಿಂಡಿಕೇऽಸ್ಯಾಧಿಕೇ ಯತಃ ॥
ಸ ತಾಭ್ಯಾಂ ಪುರುಷವ್ಯಾಘ್ರೋ ನಿತ್ಯಮದ್ಭುಸು ವರ್ತತೇ ॥ - ಭಾರತ (ಆಶ್ವಮೇಧಿಕ. ೮೭/೮)

೧೨೧. ಕೃಷ್ಣಾತು ದ್ರೌಪದೀ ಕೃಷ್ಣಂ ತಿರ್ಯಕ್ ಸಾಸೂಯಮೈಕ್ಷತ ।
ಪ್ರತಿಜಗ್ರಾಹ ತಸ್ಯಾಸ್ತಂ ಪ್ರಣಯಂ ಚಾಪಿ ಕೇಶಿಹಾ ॥
- ಭಾರತ (ಆಶ್ವಮೇಧಿಕ. ೮೭/೧೧) - ಎಂಬ ಶ್ಲೋಕದ ಭಾವ ಇದು

೧೨೧. ಭ್ರಾತಾ ತೇ ದೀರ್ಘಪಿಂಡಕ ಇತ್ಯತ್ರ ''ಸಂಘಾತಗ್ರಾಸಯೋಃ ಪಿಂಡಿರ್ದ್ವಯೋಃ ಪುಂಸಿ ಕಲೇವರೇ'' ಇತ್ಯನುಶಾಸನಾತ್ ಪಿಂಡಿಃ= ದೇಹಃ ಸ್ವಾರ್ಥೇ ಕಪ್ರತ್ಯಯಃ। ಪಿಂಡಿರೇವ ಪಿಂಡಿಕಃ। ದೀರ್ಘಃ ಪಿಂಡಿಕೋ ಯಸ್ಯ ಸಃ ದೀರ್ಘಪಿಂಡಿಕಃ ದೀರ್ಘದೇಹ ಇತ್ಯರ್ಥಃ ॥ – (ವಾ.)

೧೨೧. ದೀರ್ಘಪಿಂಡಿಕೇ ಪಾರ್ಷ್ಣೀ ಯಸ್ಯ ಸ ತಥಾ । ತೇನ ದೀರ್ಘಪಾರ್ಷ್ಣೀಕತ್ವದುರ್ಲಕ್ಷಣೇನಾಯಂ ದುಃಖಬಹುಲೋ ಬಹುದುಃಖವಾನ್ ಜಾತಃ .... ॥ – (ವ.)

೧೨೧. ದೀರ್ಘೇ ಪಿಂಡಿಕೇ ಪಾರ್ಷ್ಣೀ ಯಸ್ಯ ಸ ತಥಾ ॥ – (ಜ.)

೧೨೧. ಪಿಂಡಿಕೇ ಗುಲ್ಫೌ । ಪದಂಘ್ರಿಶ್ಚರಣೋऽಸ್ತ್ರಿಯಾಂ ತದ್ಗ್ರಂಥೀ ಪಿಂಡಿಕೇ ಗುಲ್ಫೌ ಇತ್ಯಮರಃ ॥
– ಲಕ್ಷಾಲಂಕಾರ

೧೨೧. ದೀರ್ಘೇ ಪಿಂಡಿಕೇ ದೇಹಶಿರಸೀ ಯಸ್ಯ ಸಃ ತಥೋಕ್ತಃ ದೀರ್ಘದೇಹೋ ದೀರ್ಘಶಿರಸ್ಕಶ್ಚೇತ್ಯರ್ಥಃ । ಉದರಸ್ಯ ಕಿಂಚಿದಾಧಿಕ್ಯಮಿತಿ ಕಿಂಚಿದುದರಾಧಿಕ್ಯಸ್ಯ ದೇಹಶಿರೋದೈರ್ಘ್ಯಜ್ಞಾಪಕಸ್ಯ ವಕ್ಷ್ಯಮಾಣತ್ವಾಚ್ಚ । ಅನಂತ ಭಟ್ಟಾರಕಾಸ್ತು ದೀರ್ಘಪಿಂಡಿಕಃ ದೀರ್ಘಪಾರ್ಷ್ಣಿಕ ಇತಿ ವ್ಯಾಚಕ್ಷತೇ । ತಚ್ಚಿಂತ್ಯಂ ಉಕ್ತಮಾನವಿರೋಧಾತ್।
– ಪ್ರಮಾಣಸಂಗ್ರಹ

೧೨೧..... ಅಜ್ಞಾನಂ ಕೃಷ್ಣಸ್ಯ ಪ್ರತೀಯತೇ । ತನ್ನಿವಾರಣೇನ ದ್ರೌಪದ್ಯಾ ಕೃಷ್ಣಾಭಿಪ್ರಾಯಾಜ್ಞಾನೇನಾಚ್ಛಿನ್ನಭಕ್ತ್ವಂ ಪ್ರತೀಯತೇ । ತದನುಪಪನ್ನಮ್ । ಕೃಷ್ಣಸ್ಯ ಸರ್ವಜ್ಞತ್ವಾದ್ದ್ರೌಪದ್ಯಾಃ ಪರಶುಕ್ಲತ್ರ್ಯಾಯಾಂತರ್ಗತತ್ವಾತ್ ಕಥಮೇತದಿತ್ಯಾಶಂಕಾ 'ನರಲೋಕವಿಡಂಬಸ್ಯ ಜಾನನ್ ರಾಮಸ್ಯ ಹೃದ್ಗತಮ್ । ತಸ್ಯ ಚೇಷ್ಟಾನುಸಾರೇಣ ಕೃತ್ವಾ ಚೇಷ್ಟಾಶ್ಚ ಸಂವಿದಮ್'' ಇತ್ಯುಕ್ತನ್ಯಾಯೇನ ಲೋಕವಿಡಂಬನಂ ಕುರ್ವತಃ ಕೃಷ್ಣಸ್ಯಾಭಿಪ್ರಾಯಂ ಜಾನಂತ್ಯಾ ದ್ರೌಪದ್ಯಾ ಕೃತಮಿತಿ ಪರಿಹರಣೀಯಾ । – (ತಿ.)

ಅವನಿಗೆ ಪ್ರವಾಸ ಮಾಡುವ ಕ್ಲೇಶ ಒದಗುತ್ತಿತ್ತು ಎಂದರ್ಥ. ಶಾಸ್ತ್ರವಿಹಿತವಾದ ದೇಹದ ಸೂಕ್ತಪ್ರಮಾಣದ ವಿವರ ಈಗಾಗಲೇ ಬಂದಿದೆ (೧/೧೨೦, ೧೨೧). ಅರ್ಜುನನ ಆ ದೇಹದ ದೀರ್ಘತೆ ಅತ್ಯಂತ ಸೂಕ್ಷ್ಮವಾದ್ದರಿಂದ ಧರ್ಮರಾಜನಿಗೆ ಗೋಚರಿಸುತ್ತಿರಲಿಲ್ಲ. ಕೃಷ್ಣ ಸರ್ವಜ್ಞ–ನಾದ್ದರಿಂದ ಅವನಿಗೆ ತಿಳಿಯಿತು ಎಂದರ್ಥ.

೨) ಇದು ಒಂದು ಬಗೆಯಲ್ಲಿ ಶ್ರೀಹರಿಸರ್ವೋತ್ತಮತ್ವವನ್ನು ಸಾರುವ ಪ್ರಸಂಗವೂ ಆಗಿದೆ. ದ್ರೌಪದಿ ಹಾಗೆ ಕೃಷ್ಣನನ್ನು ತಡೆಯಲು ಕಾರಣವನ್ನು ಮುಂದಿನ ಶ್ಲೋಕಗಳಲ್ಲಿ ತಿಳಿಸಿರುವರು.

ಲಕ್ಷಣ ಶಾಸ್ತ್ರಕ್ಕೆ ವಿಶೇಷಾಧಿಕಾರಿಗಳು

ಸಮಸ್ತಲಕ್ಷಣಾಭಿಜ್ಞಾಃ ಕೃಷ್ಣಃ ಸತ್ಯಾ ವೃಕೋದರಃ ।
ಕೃಷ್ಣಾ ಚ ಪಂಚಮೋ ನಾಸ್ತಿ ವಿದ್ಯಾ ಶುದ್ಧೇಯಮಂಜಸಾ ॥ ೧೨೨ ॥

ಅ: ಸಕಲ ಸಾಮುದ್ರಿಕ ಲಕ್ಷಣಗಳನ್ನು ಪೂರ್ಣ ಬಲ್ಲವರು ಕೃಷ್ಣ, ಸತ್ಯಭಾಮೆ ಭೀಮಸೇನ ಹಾಗೂ ದ್ರೌಪದಿ – ಈ ನಾಲ್ವರು ಮಾತ್ರ, ಐದನೆಯವರಿಲ್ಲ. ಇದು ತುಂಬಾ ಶುದ್ಧವಾದ ವಿದ್ಯೆ.

ವಿ: ಸಾಮುದ್ರಿಕ ಶಾಸ್ತ್ರದ ಸಮಸ್ತ ಪರಿಜ್ಞಾನ ಶ್ರೀಹರಿ ಹಾಗೂ ಪರಶುಕ್ಲತ್ರ್ರಯರದು ಮಾತ್ರ ಎಂದರ್ಥ. ಸತ್ಯಭಾಮೆಯೆಂದರೆ ಮಹಾಲಕ್ಷ್ಮಿ ಅದರಿಂದ ರುಗ್ಮಿಣಿಯೂ ಗೃಹೀತ. ಇತರರಿಗೆ ಆ ವಿದ್ಯೆಯನ್ನು ಪೂರ್ಣ ಕಲಿಯುವ ಅರ್ಹತೆ ಇಲ್ಲ ಎಂಬುದು ಇದರಿಂದ ಸೂಚಿತ.

ಪ್ರಸಂಗಾತ್ ಪ್ರಾಪ್ತುಮಿಚ್ಛೇತ್ ತಾಂ ವಿದ್ಯಾಶೀಲೋ ಯುಧಿಷ್ಠಿರಃ ।
ಇತಿ ಲೋಭಾತ್ ತು ಪಾಂಚಾಲೀ ವಾಸುದೇವಂ ನ್ಯವಾರಯತ್ ॥ ೧೨೩ ॥

ಅ: ವಿದ್ಯಾಶೀಲನಾದ ಯುಧಿಷ್ಠಿರ ಆ ಪ್ರಸಂಗದಿಂದಾಗಿ ಅದನ್ನು ಪಡೆಯಲು ಬಯಸಿಯಾನು ಎಂಬ ಲೋಭದಿಂದ ದ್ರೌಪದಿ ಕೃಷ್ಣನನ್ನು ಹಾಗೆ ತಡೆದಳು.

ವಿ: ಇಲ್ಲಿ 'ವಿದ್ಯಾಶೀಲ' ಎಂಬ ಪದದಿಂದ ಯುಧಿಷ್ಠಿರನ ವಿದ್ಯಾಪ್ರಿಯತೆ ನಿರೂಪಿತವಾಗಿದೆ. ಅವನ ವಿದುರರೂಪದ ಅರ್ಥವೂ ಸಹ ಅದೇ ಆಗಿರುವುದು ವಿಶೇಷ – 'ವಿದ್ಯಾರತೇರ್ವಿದುರಃ'. ಇಲ್ಲಿ 'ಲೋಭ' ಎಂದರೆ ಅನರ್ಹನಾದವನಿಗೆ ವಿದ್ಯೆ ಲಭಿಸಕೂಡದು ಎಂಬ ದೀಕ್ಷೆ ಎಂದರ್ಥ.

ತದ್ಗೌರವಾದ್ವಾಸುದೇವೋ ನೋತ್ತರಂ ಪ್ರತ್ಯಭಾಷತ ।
ವಿಸ್ಮಾರಯಾಮಾಸ ಚ ತಂ ಪ್ರಬ್ರುವಾಣಃ ಕಥಾಂತರಮ್ ॥ ೧೨೪ ॥

ಅ: ಕೃಷ್ಣ ದ್ರೌಪದಿಯ ಮೇಲಿನ ಪ್ರೀತಿಯಿಂದಾಗಿ ಮುಂದುವರಿಸಲಿಲ್ಲ. ಬೇರೊಂದು ವಿಷಯವನ್ನು ತೆಗೆದು ಅದನ್ನು ಮರೆಸಿದ.

ವಿ: ಕೃಷ್ಣ ಸರ್ವಜ್ಞ ಎಂದು ಬಲ್ಲವಳಾಗಿದ್ದರೂ, ದ್ರೌಪದಿ ಹಾಗೆ ಸೂಚಿಸಿದ್ದು ತನ್ನ ಕರ್ತವ್ಯವನ್ನು ಪಾಲಿಸಲೆಂದು ಮಾತ್ರ. ದ್ರೌಪದಿಯ ಆ ದಿವ್ಯ ಪರಿಜ್ಞಾನ ಜಗತ್ತಿಗೆ ತಿಳಿಯಲೆಂದು ಕೃಷ್ಣ ಅವಳಿಗೆ ಅಂತಹ ಅವಕಾಶವನ್ನು ನೀಡಿದ ಎಂದು ತಿಳಿಯಬೇಕು.

ಅರ್ಜುನನ ಇತರ ದುರ್ಲಕ್ಷಣಗಳು

ಉದರಸ್ಯ ಕಿಂಚಿದಾಧಿಕ್ಯಂ ವೃಷಣಾಧಿಕ್ಯಮೇವ ಚ ।
ಸವ್ಯಬಾಹೋಸ್ತಥಾऽऽಧಿಕ್ಯಂ ದುರ್ಲಕ್ಷಣಮಥೋऽರ್ಜುನೇ ॥ ೧೨೫ ॥

ಅ: ಹೊಟ್ಟೆ ಸ್ವಲ್ಪ ದೊಡ್ಡದಾಗಿದ್ದುದು, ವೃಷಣವೂ ದೊಡ್ಡದಾಗಿದ್ದುದು, ಎಡತೋಳು ಹೆಚ್ಚು ಉದ್ದವಾಗಿದ್ದುದು ಅರ್ಜುನನ ಇತರ ದುರ್ಲಕ್ಷಣಗಳು.

ವಿ: ಈ ಮೂರು ದೋಷಗಳೂ ಸಹ ಅತ್ಯಂತ ಸೂಕ್ಷ್ಮದೃಷ್ಟಿಗೆ ಮಾತ್ರ ಗೋಚರವಾಗು–ವಂತಹ ದೋಷಗಳು. ಇವುಗಳನ್ನು ತಿಳಿಸುವ ಮೂಲಕ ಶ್ರೀಮದಾಚಾರ್ಯರು ಲಕ್ಷಣಶಾಸ್ತ್ರದ ಬಗ್ಗೆ ಹೊಸ ಬೆಳಕು ಚೆಲ್ಲಿರುವರು.

ದುರ್ಲಕ್ಷಣಗಳ ಫಲ

ನೈವೋಕ್ತಂ ವಾಸುದೇವೇನ ದೃಶ್ಯಮಾನಮಪಿ ಸ್ಫುಟಮ್ ।
ಜ್ಞಾನಾನಂದಹ್ರಾಸಕರಾ ಹ್ಯೇತೇ ದೋಷಾಃ ಸದಾತನಾಃ ॥ ೧೨೬ ॥

ಅ: ಅವೆಲ್ಲಾ ಸ್ಫುಟವಾಗಿ ಕಾಣುತ್ತಿದ್ದರೂ ಕೃಷ್ಣ ತಿಳಿಸಲಿಲ್ಲ, ಇವೆಲ್ಲ ಜ್ಞಾನ ಆನಂದಗಳಿಗೆ ಸದಾ ಹ್ರಾಸ ಉಂಟುಮಾಡುವ ದುರ್ಲಕ್ಷಣಗಳು.

ವಿ: ೧) **'ಸದಾತನಾಃ'** ಎಂಬುದರಿಂದ ಇವೆಲ್ಲ ಬಾಹ್ಯದೇಹಕ್ಕೆ ಮಾತ್ರವಲ್ಲದೇ ಸ್ವರೂಪದ ದೇಹಕ್ಕೂ ಅನ್ವಯಿಸುವಂತಹವು ಎಂದರ್ಥ. ಇದರಿಂದಾಗಿ ಅವರಿಗೆ ಅವರ ಉತ್ತಮರಿಗೆ

---

೧೨೬. ನ ಕೇವಲಮೇತೇ ಸ್ಥೂಲದೇಹೇ ದೋಷಾಃ। ಕಿಂತು ಸ್ವರೂಪೇऽಪಿ ಸದಾತನಾಃ ನಿತ್ಯಾಃ ಸಂತಿ। ತೇಷಾಂ ಕಿಂ ಫಲಮಿತ್ಯತ ಉಕ್ತಂ ಜ್ಞಾನೇತಿ। ನಿತ್ಯತ್ವಾನ್ಮುಕ್ತಾವಪಿ ಜ್ಞಾನಾನಂದಾಚ್ಛಾದಕಾ ಇತಿ ಭಾವಃ। – (ಜ., ಛ.)

ಸಮನಾದ ಜ್ಞಾನಾನಂದಾದಿಗಳು ಲಭಿಸದಂತೆ ಮಾಡುವವು ಎಂದರ್ಥ. ಸಂಸಾರದಲ್ಲಿ ದುಃಖಸೂಚಕವಾದರೂ ಮುಕ್ತಿಯಲ್ಲಿ ಸುಖಹ್ರಾಸ ಮಾತ್ರ ಕಾರಕ ಎಂದು ತಿಳಿಯಬೇಕು.

೨) ಇಲ್ಲಿ ಸ್ಫುಟವಾಗಿ ಕಾಣುವಂತಹುವು ಎಂದರೆ ಲಕ್ಷಣ ಶಾಸ್ತ್ರಜ್ಞರಿಗೆ ತಿಳಿಯುವಂತಹುವು ಎಂದರ್ಥ.

ಪರಶುಕ್ಲತ್ರಯರಿಗೆ ಸರ್ವಥಾ ದುಃಖವಿಲ್ಲ

ಸಮಸ್ತಜೀವರಾಶೌ ತು ದುರ್ಲಕ್ಷಣವಿವರ್ಜಿತೌ ।
ಪೂರ್ಣಚಿತ್ಸುಖಶಕ್ತ್ಯಾದೇರ್ಯೋಗ್ಯೌ ಕೃಷ್ಣಾ ಚ ಮಾರುತಿಃ ॥ ೧೨೭ ॥

ಅ: ಸಮಸ್ತ ಚೇತನ ರಾಶಿಯಲ್ಲಿ ಸಂಪೂರ್ಣದುರ್ಲಕ್ಷಣರಹಿತರಾಗಿದ್ದು ಪೂರ್ಣಜ್ಞಾನ, ಆನಂದ, ಶಕ್ತಿಮೊದಲಾದವುಗಳಿಗೆ ಯೋಗ್ಯರಾದವರು ದ್ರೌಪದಿ ಮತ್ತು ಭೀಮಸೇನ ಮಾತ್ರ.

ವಿ: ಪೂರ್ಣ ಸಾಮುದ್ರಿಕ ಲಕ್ಷಣಗಳನ್ನು ಹೊಂದಿರುವುದು ಎಂದರೆ ಪೂರ್ಣ ಜ್ಞಾನ, ಆನಂದಾದಿ ಸಕಲ ಗುಣಗಳನ್ನೂ ಹೊಂದಿರುವುದು ಎಂದರ್ಥ. ಸಕಲ ಜೀವ ರಾಶಿಗಳಲ್ಲೂ ಋಜುಗಳು ಮಾತ್ರ ಹಾಗೆ ಸರ್ವ ಸಲ್ಲಕ್ಷಣೋಪೇತರು. ಅಂತಹ ಸಲ್ಲಕ್ಷಣಗಳ ಸಂಖ್ಯೆ ಮೂವತ್ತೆರಡು ಎಂಬ ಮಾತು ಹಿಂದೆ ಬಂದಿದೆ(೧/೧೨೦; ೧೪/೧೦೨). ಅಂಥವರು ಪುರುಷರಲ್ಲಿ ಭೀಮ, ಸ್ತ್ರೀಯರಲ್ಲಿ ದ್ರೌಪದಿ ಮಾತ್ರ. ಅವತಾರತ್ರಯದಲ್ಲೂ ವಾಯುದೇವರು ದ್ವಾತ್ರಿಂಶಲ್ಲಕ್ಷಣೋಪೇತರಾಗಿದ್ದರು ಎಂಬುದು ವಿಶೇಷ.

ಅನಾದಿದುಃಖಹೀನತ್ವೇ ಸುಖಾಧಿಕ್ಯೇ ಚ ಲಕ್ಷಣಮ್ ।
ರುಗ್ಮಿಣೀಸತ್ಯಭಾಮಾದಿರೂಪಾಯಾಃ ಶ್ರಿಯ ಏವ ತು ॥ ೧೨೮ ॥

ಮುಖ್ಯಂ ತತೋಽಪಿ ಮುಖ್ಯಂ ತು ಸ್ವಾತಂತ್ರ್ಯಾದೇರಶೇಷತಃ ।
ಗುಣರಾಶೇಃ ಪರಂ ಲಿಂಗಂ ನಿತ್ಯಂ ವ್ಯಾಸಾದಿರೂಪಿಣಃ ।
ವಿಷ್ಣೋರೇವ ನ ಚಾನ್ಯಸ್ಯ ಸ ಹ್ಯೇಕಃ ಪೂರ್ಣಸದ್ಗುಣಃ ॥ ೧೨೯ ॥

ಅ: ಅನಾದಿ ಕಾಲದಿಂದ ದುಃಖರಹಿತರಾಗಿರುವುದಕ್ಕೂ, ಅಧಿಕ ಸುಖಿಗಳಾಗಿರುವುದಕ್ಕೂ ಲಕ್ಷಣಗಳು ಸೂಚಕ. ಅಂತಹ ಸಲ್ಲಕ್ಷಣಗಳು ಮಹಾಲಕ್ಷ್ಮಿಗೆ ವಾಯು, ಭಾರತಿಯರಿಗಿಂತಲೂ ಹೆಚ್ಚು ಸ್ಪಷ್ಟ. ಅದಕ್ಕಿಂತ ಮುಖ್ಯವಾಗಿ ಆ ಲಕ್ಷಣಗಳು ವ್ಯಾಸಾದಿ ರೂಪದ ಶ್ರೀಹರಿಗೆ ಹೊರತು ಬೇರಾರಿಗೂ ಇರುವುದಿಲ್ಲ. ಅವನೊಬ್ಬನೇ ಸಂಪೂರ್ಣ ಸದ್ಗುಣಗಳಿಂದ ಪೂರ್ಣನಾದವನು.

ಎ: ಸ್ವರೂಪದ ಲಕ್ಷಣಗಳೇ ಸಾಮಾನ್ಯವಾಗಿ ವಿಶೇಷ ಕಾರಣವಿದ್ದಲ್ಲಿ ಬಾಹ್ಯ ಶರೀರಕ್ಕೂ ಅನ್ವಯಿಸುವವು ಎಂದು ತಿಳಿಯಬೇಕು.

ಸಾಶ್ವೇऽರ್ಜುನೇ ಯಜ್ಞವಾಟಂ ಪ್ರವಿಷ್ಟೇऽಸ್ಯ ಸಹೋದರಾಃ ।
ಪೂಜಿತಾಃ ಪೂಜಯಾಮಾಸುರ್ಮುದಿತಾಃ ಸಹಕೇಶವಾಃ ॥ ೧೩೦ ॥

ಅ: ಅರ್ಜುನ ಯಜ್ಞಾಶ್ವದೊಂದಿಗೆ ಯಜ್ಞಶಾಲೆಯನ್ನು ಪ್ರವೇಶಿಸಿದಾಗ ಅವನ ಸಹೋದರರನ್ನು, ಕೃಷ್ಣನನ್ನು ಅವನು ಆದರಿಸಿದ; ಅವರೂ ಸಹ ಅರ್ಜುನನನ್ನು ಸತ್ಕರಿಸಿದರು.

ಪಾಂಡವರ ಅಪೂರ್ವ ಅಶ್ವಮೇಧ

ತತಃ ಸ ಯಜ್ಞೋ ಯದುವೀರರಕ್ಷಿತೋ
ವ್ಯಾಸೋಪದಿಷ್ಟೋ ಮುನಿಭಿಃ ಪ್ರವರ್ತಿತಃ ।
ಅಶೋಭತಾಲಂ ಸಕಲೈರ್ನೃಪೈಶ್ಚ
ಸಮಾಗತೈರ್ವಿಪ್ರವರೈಶ್ಚ ಜುಷ್ಟಃ ॥ ೧೩೧ ॥

ಅ: ಬಳಿಕ ಯದುಶ್ರೇಷ್ಠನಾದ ಕೃಷ್ಣನಿಂದ ರಕ್ಷಿತವಾಗಿ ವೇದವ್ಯಾಸರಿಂದ ಉಪದಿಷ್ಟವಾಗಿ, ಮುನಿಗಳಿಂದ ಪ್ರವರ್ತಿತವಾಗಿ ಆ ಯಜ್ಞ ವಿಶೇಷವಾಗಿ ಶೋಭಿಸಿತು. ಎಲ್ಲ ರಾಜರುಗಳೂ ವಿಪ್ರಶ್ರೇಷ್ಠರುಗಳು ಅಲ್ಲಿಗೆ ಆಗಮಿಸಿ ಅದರಲ್ಲಿ ಪಾಲ್ಗೊಂಡರು.

ಎ: ಕೃಷ್ಣ–ವ್ಯಾಸರಿಬ್ಬರೂ ಒಬ್ಬನೇ ವಿಷ್ಣುವಿನ ಎರಡು ರೂಪಗಳಾದರೂ, ಕೃಷ್ಣ ಬಲಕಾರ್ಯದ ರೂಪವಾದ್ದರಿಂದ ಅದರಿಂದ ರಕ್ಷಿತವೆಂದೂ, ವೇದವ್ಯಾಸರೂಪ ಜ್ಞಾನಕಾರ್ಯದ ರೂಪವಾದ್ದರಿಂದ (೨/೨೪) ಅದರಿಂದ ಉಪದಿಷ್ಟ ಎಂದೂ ವಿಶೇಷವಾಗಿ ತಿಳಿಸಿರುವರು ಎಂದು

---

೧೩೦. ಭೀಮಾದೀಂಶ್ಚಾಪಿ ಸಂಪೂಜ್ಯ ಪರ್ಯಷ್ವಜತ ಕೇಶವಮ್ ।
ತೈಃ ಸಮೇತ್ಯಾರ್ಚಿತಸ್ತಾಂಶ್ಚ ಪ್ರತ್ಯರ್ಚ್ಯಾಥ ಯಥಾವಿಧಿ ॥ – ಭಾರತ (ಆಶ್ವಮೇಧಿಕ. ೮೭/೨೫)

೧೩೧. ತಸ್ಮಿನ್ ಸದಸಿ ನಿತ್ಯಾಸ್ತು ವ್ಯಾಸಶಿಷ್ಯಾ ದ್ವಿಜರ್ಷಭಾಃ ।
ಸರ್ವಶಾಸ್ತ್ರಪ್ರಣೇತಾರಃ ಕುಶಲಾ ಯಜ್ಞಸಂಸ್ತರೇ ॥
ನಾರದಶ್ಚ ಬಭೂವಾತ್ರ ತುಂಬುರುಶ್ಚ ಮಹಾದ್ಯುತಿಃ ।
ವಿಶ್ವಾವಸುಶ್ಚಿತ್ರಸೇನಸ್ತಥಾऽನ್ಯೇ ಗೀತಕೋವಿದಾಃ ॥ – ಭಾರತ (ಆಶ್ವಮೇಧಿಕ. ೮೮/೩೮,೩೯)

ತಿಳಿಯಬೇಕು. ರಾಜರು, ಬ್ರಾಹ್ಮಣರು ಪಾಲ್ಗೊಂಡಿದ್ದರಿಂದ ಕ್ಷತ್ರಿಯ ತೇಜಸ್ಸು ಬ್ರಹ್ಮವರ್ಚಸ್ಸು ಎರಡೂ ಮಿಲಿತವಾದಂತೆ ಆಗಿ ವಿಶೇಷವಾದ ಶೋಭೆ ಆ ಯಜ್ಞಕ್ಕೆ ಲಭಿಸಿತು ಎಂದರ್ಥ.

ಸ ಕೃಷ್ಣಯುಗ್ಮೇನ ಚ ಭಾರ್ಗವೇಣ
ತ್ರಿಧಾ ವಿಭಕ್ತೇನ ಪರೇಣ ಪುಂಸಾ ।
ಅಧಿಷ್ಠಿತೋಽಶೋಭತ ವಿಶ್ವಮೇತ-
ದ್ವಿಶ್ವಾದಿರೂಪೇಣ ಯಥೈವ ತೇನ ॥ ೧೩೨ ॥

ಅ: ವಾಸಿಷ್ಠಕೃಷ್ಣ, ಯಾದವಕೃಷ್ಣ ಎಂಬ ಎರಡು ಕೃಷ್ಣ ರೂಪಗಳು ಮತ್ತು ಪರಶುರಾಮ ಎಂಬ ಮೂರು ರೂಪಗಳಿಂದ ಕೂಡಿದ್ದ ಪರಮಪುರುಷನಾದ ಶ್ರೀಹರಿಯಿಂದ ಅಧಿಷ್ಠಿತವಾದ ಆ ಯಜ್ಞ ವಿಶ್ವ, ತೈಜಸ ಮತ್ತು ಪ್ರಾಜ್ಞ ಎಂಬ ಆ ಶ್ರೀಹರಿಯ ಮೂರು ರೂಪಗಳಿಂದ ಈ ಜಗತ್ತು ಶೋಭಿಸುವಂತೆ ಶೋಭಿಸಿತು.

ವಿ: ೧) ಜಗತ್ತಿನ ಜಾಗೃತ್, ಸ್ವಪ್ನ ಮತ್ತು ಸುಷುಪ್ತಿ ಎಂಬ ಮೂರು ಅವಸ್ಥೆಗಳಲ್ಲಿ ಶ್ರೀಹರಿಯ ವಿಶ್ವ, ತೈಜಸ ಮತ್ತು ಪ್ರಾಜ್ಞ ಎಂಬ ಮೂರು ರೂಪಗಳು ಪಾಲ್ಗೊಳ್ಳುವಂತೆ ಕೃಷ್ಣ ವ್ಯಾಸ ಮತ್ತು ಪರಶುರಾಮ ಎಂಬ ಮೂರು ರೂಪಗಳು ಆ ಯಜ್ಞಕ್ರಿಯೆಯಲ್ಲಿ ಪಾಲ್ಗೊಂಡವು ಎಂದರ್ಥ.

ವಿ: ವಿಶ್ವಾದಿಮೂರು ರೂಪಗಳು ಅವಸ್ಥಾತ್ರಯಗಳನ್ನು ನಿಯಮನ ಮಾಡುವ ವಿವರ ಮಾಂಡೂಕೋಪನಿಷತ್ತಿನಲ್ಲಿ ಬಂದಿದೆ. ಆ ಬಗ್ಗೆ ವಿಶೇಷವಿವರಗಳು ಅದರ ಭಾಷ್ಯದಲ್ಲಿ ಬಂದಿವೆ.

ಪಾಂಡವರ ಯಜ್ಞದ ಅಪೂರ್ವತೆ

ಯಥಾ ವಿರಿಂಚಸ್ಯ ಪುರಾ ಸ ಯಜ್ಞೋ
ಯಥೈವ ಶಕ್ರಸ್ಯ ಶತಕ್ರತುತ್ವೇ ।
ತಥೈವ ಸೋಽಭೂದ್ವಿಭಿಶರ್ವಶಕ್ರ-
ಪೂರ್ವೈಃ ಸುರೈರಾವಿರಲಂಕೃತೋಽಧಿಕಮ್ ॥ ೧೩೩ ॥

---

೧೩೨. ವಿಶ್ವಮೇತದ್ವಿಶ್ವಾದಿರೂಪೇಣೇತ್ಯತ್ರ ವಿಶ್ವತೈಜಸಪ್ರಾಜ್ಞಾಖ್ಯರೂಪತ್ರಯವತಾ ಏತದ್ವಿಶ್ವಂ ಯಥಾ ಶೋಭತೇ ತಥಾಽಶೋಭತ। ತುರೀಯಸ್ಯ ಮೋಕ್ಷದಾಯಕತ್ವೇನ ಜಾಗ್ರತ್ಸ್ವಪ್ನಸುಷುಪ್ತ್ಯಾಖ್ಯವಿಶ್ವವ್ಯಾಪಾರಾಸಹಾಯತ್ವಾತ್ ಅಸಂಗ್ರಹಃ ॥ – (ವಾ.)

ಅ: ಹಿಂದೆ ಬ್ರಹ್ಮನ ಯಜ್ಞ ಹೇಗೋ, ಇಂದ್ರ ಶತಕ್ರತುವಾಗುವಾಗ ಮಾಡಿದ ಯಜ್ಞ ಹೇಗೋ ಹಾಗೆಯೇ ಆ ಪಾಂಡವರ ಯಜ್ಞ ಬ್ರಹ್ಮ, ಶಿವ, ಇಂದ್ರ ಮೊದಲಾದ ದೇವತೆಗಳಿಂದ ಅಲಂಕೃತಗೊಂಡು ವಿಶೇಷವಾಗಿ ಕಂಗೊಳಿಸಿತು.

ವಿ: ದೇವತಾಸನ್ನಿಧಾನ ಹೆಚ್ಚಿದಂತೆ ಯಜ್ಞದ ಹಿರಿಮೆ ಹೆಚ್ಚುವುದು ಎಂಬ ವಿಶೇಷಾಂಶ ಇದರಿಂದ ಸೂಚಿತ.

ನ ದೇವಗಂಧರ್ವಮುನಿಸ್ವಧರ್ಮ-
ಮರ್ತ್ಯಾದಿಕೇಷ್ವಾಸ ಸ ಯೋಽತ್ರ ನಾಸ ।
ಸ್ವಲಂಕೃತೈರ್ನಾಕಿಜನೈಃ ಸಕಾಂತೈ-
ರರೂಚನ್ನಾಕವದೇತದೋಕಃ ॥ ೧೩೪ ॥

ಅ: ದೇವತೆಗಳು, ಗಂಧರ್ವರು, ಮುನಿಗಳು ಮತ್ತು ಸ್ವಧರ್ಮನಿರತರಾದ ಮನುಷ್ಯರುಗಳಲ್ಲಿ ಆ ಯಜ್ಞದಲ್ಲಿ ಭಾಗವಹಿಸದಿದ್ದವರೇ ಇರಲಿಲ್ಲ. ಚೆನ್ನಾಗಿ ಅಲಂಕೃತರಾದ ಸಪತ್ನೀಕರಾದ ದೇವತೆಗಳಿಂದಾಗಿ ಆ ಸದನ ದೇವಲೋಕದಂತೆ ಕಂಗೊಳಿಸಿತು.

ಯಾಗಸಭೆಯಲ್ಲಿ ನಡೆದ ವಾದಕಥೆಗಳು

ತತ್ರೈವ ತತ್ತ್ವಾನಿ ಸಸಂಶಯಾನಿ
ನಿಃಸಂಶಯಾನ್ಯಾಸುರಲಂ ವಿವಾದೇ ।
ಪರಸ್ಪರೋತ್ಥೇ ಹರಿಣಾ ತ್ರಿರೂಪಿಣಾ
ಸಂಸ್ಥಾಪಿತಾನ್ಯಗ್ರ್ಯವಚೋಭಿರುಚ್ಚೈಃ ॥ ೧೩೫ ॥

---

೧೩೩. ಆವಿರಲಂಕೃತೋಽಧಿಕಮಿತ್ಯತ್ರ ಆವಿಃ= ಪ್ರತ್ಯಕ್ಷಂ ಯಥಾ ಭವತಿ ತಥಾ ಸ್ಥಿತೈರಲಂಕೃತ ಇತ್ಯರ್ಥಃ ॥ – (ವಾ.)

೧೩೩. ಯಥಾ ಶತಕ್ರತುತ್ವೇ ಶತಕ್ರತುತ್ವಸಂಪಾದನೇ .... ॥ – (ಸ.)

೧೩೪. ಯೋಽತ್ರ ನಾಸ ನಾಗತಃ ಸ ನಾಸಃ ನಾಭೂತ್ । – (ವೇ.)

೧೩೪. ಸ್ವಧರ್ಮಮರ್ತ್ಯಾದಿಕೇಷ್ವಿತ್ಯತ್ರ ಸ್ವಧರ್ಮನಿರತಮರ್ತ್ಯಾದಿಕೇಷ್ವಿತಿ ಮಧ್ಯಮಪದಲೋಪಿ ಸಮಾಸಃ। ಅತ್ರ= ಪಾಂಡವಾನಾಂ ಅಶ್ವಮೇಧೇ ಯಸ್ಸಂಭ್ರಮ ಆಸ ಸ ದೇವಗಂಧರ್ವಮುನಿಸ್ವಧರ್ಮಮರ್ತ್ಯಾದಿಕೇಷ್ವಪಿ ನಾಸೇತಿ ಯೋಜನಾ ॥ – (ವಾ.)

೧೩೪. ಆದಿಪದೇನ ವಿಭೀಷಣಾದಿಸದ್ರಾಕ್ಷಸಾದಿಕಾ ವಿವಕ್ಷಿತಾಃ । – (ಜ.)

೧೩೫. ಅಗ್ರ್ಯವಚೋಭಿಃ ಉಪನಿಷದ್ವಾಕ್ಯೈಃ । – (ಜ.)

ಅ: ಆ ಸಭೆಯಲ್ಲಿ ಪರಸ್ಪರ ತತ್ವವಿಚಾರ ನಡೆದು ಶ್ರೀಹರಿಯ ಮೂರು ರೂಪಗಳಿಂದ ಶ್ರೇಷ್ಠವಾದ ಉತ್ತಮ ವಚನಗಳಿಂದಾಗಿ ಸಂಶಯಕ್ಕೊಳಗಾಗಿದ್ದ ಪ್ರಮೇಯಗಳೆಲ್ಲವೂ ಸಂದೇಹಕ್ಕೆ ಎಡೆಯಿಲ್ಲದಂತೆ ನಿರ್ಣಯಗೊಂಡವು.

ವಿ: ೧) ರಾಜಸೂಯಯಾಗಕಾಲದಲ್ಲಿ ನಡೆದಿದ್ದಂತೆ ಇಲ್ಲಿಯೂ ಸಹ ತತ್ತ್ವನಿರ್ಣಾಯಕ ಕಥೆಗಳು ನಡೆದು ಸಾಮಾನ್ಯ ಜನತೆಗಿದ್ದ ತತ್ವವಿಷಯಕವಾದ ಸಂಶಯಗಳು ಸಾಕ್ಷಾತ್ ಶ್ರೀಹರಿಯೇ ಮೂರು ರೂಪಗಳಿಂದ ನಿರೂಪಿಸಿದಾಗ ಪರಿಹಾರಗೊಂಡವು ಎಂದರ್ಥ.

೨) ಯಜ್ಞ ಯಾಗಗಳಲ್ಲಿ ಇಂತಹ ಅಪೂರ್ವ ತತ್ವನಿರ್ಣಯವಾಗುವುದು ಎಂಬ ಕಾರಣದಿಂದಲೇ ಜನತೆ ಅದರಲ್ಲಿ ಹಾಗೆ ಪಾಲ್ಗೊಳ್ಳುವುದು ಎಂದು ತಿಳಿಯುವುದು.

ದೇವತೆಗಳೂ ಕೊಂಡಾಡಿದ ಅಶ್ವಮೇಧ

ಪ್ರಗೀತಗಂಧರ್ವವರಃ ಪ್ರನೃತ್ತ-
ಸದಪ್ಸರಾಃ ಸಂತತವಾದಿವಿಪ್ರಃ ।
ವಿವೇಚಯದ್ದೇವನೃಪೌಘ ಏಕೋ
ರರಾಜ ರಾಜಾऽಖಿಲಸತ್ಕೃತೂನಾಮ್ ॥ ೧೩೬ ॥

ಅ: ಆ ಶ್ರೇಷ್ಠವಾದ ಯಜ್ಞದಲ್ಲಿ ಗಂಧರ್ವಶ್ರೇಷ್ಠರುಗಳು ಉತ್ತಮವಾಗಿ ಹಾಡಿದರು. ಶ್ರೇಷ್ಠ ಅಪ್ಸರೆಯರು ಚೆನ್ನಾಗಿ ನರ್ತಿಸಿದರು. ವಿಪ್ರರುಗಳು ತತ್ವನಿರ್ಣಯದ ವಿಚಾರವನ್ನು ಸಂತತ ಮಾಡಿದರು. ದೇವತೆಗಳ ಹಾಗೂ ರಾಜರ ಗುಂಪುಗಳು ತಮ್ಮ ಹಿರಿಮೆಯನ್ನು ಪ್ರತ್ಯೇಕವಾಗಿ ಮೆರೆದವು. ಹೀಗೆ ಎಲ್ಲ ಉತ್ತಮಯಾಗಗಳಿಗೂ ಚಕ್ರವರ್ತಿಸ್ಥಾನೀಯವಾದ ಆ ಯಾಗ ನಡೆಯಿತು.

ವಿ: ೧) ಅಶ್ವಮೇಧವನ್ನು ಯಾಗಗಳ ರಾಜ ಎಂದು ಕರೆದಿರುವುದು ಗಮನಾರ್ಹ – **'ಅಶ್ವಮೇಧಃ ಕ್ರತುಶ್ರೇಷ್ಠಃ'**(೨/೧೫೬). ಯಜ್ಞರಾಜವಾದ ಅಶ್ವಮೇಧ ಅಂತಹ ಧರ್ಮರಾಜನೆಂಬ

---

೧೩೬. ಸ ಯಜ್ಞಃ ಶುಶುಭೇ ತಸ್ಯ ಸಾಕ್ಷಾದ್ ದೇವರ್ಷಿಸಂಕುಲಃ ।
ಗಂಧರ್ವಗಣಸಂಗೀತಃ ಪ್ರನೃತ್ತೋऽಪ್ಸರಸಾಂ ಗಣೈಃ ॥ – ಭಾರತ (ಆಶ್ವಮೇಧಿಕ. ೮೮/೩೬)

೧೩೬. ವಿವೇಚಯದ್ದೇವೇತ್ಯತ್ರ ವಿವೇಚಯಂತಃ= ವಯಂ ದೇವಾಃ ವಯಂ ರಾಜಾನ ಇತಿ ವಿವಿಚ್ಯ ಸ್ವಸ್ವರೂಪಂ ಪ್ರದರ್ಶಯಂತಃ ದೇವಾಃ ನೃಪೌಘಾಶ್ಚ ಯಸ್ಮಿನ್ ಸ ತಥೋಕ್ತಃ। ಹಾರಮಕುಟಕುಂಡಲಾಕಾರಾದಿನಾ ತತ್ರೋಪವಿಷ್ಟಾನಾಂ ದೇವಾನಾಂ ನೃಪಾಣಾಂ ಚ ಸಮಾನಾಕಾರತ್ವಾತ್ ವಯಂ ದೇವಾಃ ವಯಂ ಭೂಪಾ ಇತಿ ತದ್ವಾಕ್ಯೇನೈವ ವಿಭಾಗೋ ಜ್ಞಾತುಂ ಶಕ್ಯತೇ। ನಾನ್ಯಥಾ ಸರ್ವೇಷಾಂ ಚ ಸಮತಯಾ ಸರ್ವಾಲಂಕಾರಭರಿತತ್ವಾದಿತಿ ಭಾವಃ। ಯದ್ವಾ ವಿವೇಚಯನ್ = ಪರಸ್ಪರಂ ವಿಚಾರಂ ಕುರ್ವನ್ ದೇವನೃಪೌಘೋ ಯಸ್ಮಿನ್ ಸ ತಥೋಕ್ತಃ ॥ – (ವಾ.)

ಮಹಾರಾಜನ ನೇತೃತ್ವದಲ್ಲಿ ಭೀಮಾದಿಗಳು ಮಾಡಿದಾಗ ನಿಜವಾದ ಅರ್ಥದಲ್ಲಿ ಅತ್ಯಂತ ಮಿಗಿಲೆನ್ನಿಸಿದ ಯಾಗವಾಯಿತು ಎಂದರ್ಥ.

೨) ಹಾಡುವವರು ಗಂಧರ್ವರು, ನರ್ತಿಸುವವರು ಅಪ್ಸರೆಯರು, ಚರ್ಚಿಸುವವರು ಬ್ರಾಹ್ಮಣರು ಎಂದ ಮೇಲೆ ಆ ಯಜ್ಞದ ಹಿರಿಮೆ ವರ್ಣನಾತೀತ ಎಂದು ಭಾವ.

ಸಮಸ್ತದೇವ್ಯಃ ಸಹವಾಸುದೇವ್ಯಃ
ಸ್ವಲಂಕೃತಾಃ ಫುಲ್ಲಮುಖಾರವಿಂದಾಃ ।
ವಿಚೇರುರತ್ಯೈವ ಸಹಾಪ್ಸರೋಭಿ-
ರ್ನಿಷೇದುರಪ್ಯಚ್ಯುತಸತ್ಕಥಾರಮಾಃ ॥ ೧೩೭ ॥

ಅ: ಅರಳಿದ ಮುಖಕಮಲ ಹೊಂದಿದಂತಹ ಸಮಸ್ತ ದೇವತಾಸ್ತ್ರೀಯರು ಕೃಷ್ಣಪತ್ನಿಯರೊಂದಿಗೆ ಚೆನ್ನಾಗಿ ಅಲಂಕೃತರಾದವರಾಗಿ ಅಪ್ಸರೆಯರೊಂದಿಗೆ ಆ ಯಜ್ಞಶಾಲೆಯಲ್ಲಿ ಓಡಾಡಿದರು. ಶ್ರೀಹರಿಯ ಉತ್ತಮಕಥೆಗಳಲ್ಲಿ ನಲಿಯುತ್ತಾ ಪಾಲ್ಗೊಂಡರು.

ಅಶ್ವಮೇಧದ ವೈಭವ

ನ ವೈ ಮುಮುಕ್ಷುರ್ನ ಬುಭೂಷುರತ್ರ
ನ ವೈ ವಿವಿತ್ಸುಶ್ಚ ಕುತೋ ಬುಭುಕ್ಷುಃ ।
ಅಸತ್ಕಾಮಾ ಅಭವನ್ ಕುತಶ್ಚಿತ್
ಪ್ರದಾತರಿ ಪ್ರಾಜ್ಞವರೇऽನಿಲಾತ್ಮಜೇ ॥ ೧೩೮ ॥

ಅ: ಪ್ರಾಜ್ಞವರ್ಯನಾದ ಭೀಮಸೇನ ದಾನ ನೀಡಲು ನಿಂತಾಗ ಯಾರ ಬಯಕೆಗಳೂ ಸಹ ಈಡೇರದೆ ಉಳಿಯಲಿಲ್ಲ. ಅಲ್ಲಿ ಮೋಕ್ಷ ಬಯಸುವವನಾಗಲೀ, ಸಂಪತ್ತು ಬಯಸುವವನಾಗಲೀ, ತತ್ತ್ವಜಿಜ್ಞಾಸುವಾಗಲೀ, ಅನ್ನಾರ್ಥಿಯಾಗಲೀ ಇರಲೇ ಇಲ್ಲ.

ವಿ: ಮೇಲ್ನೋಟಕ್ಕೆ ಅಲ್ಲಿ ಮುಮುಕ್ಷುಗಳು, ಬುಭೂಷುಗಳು, ಜಿಜ್ಞಾಸುಗಳು, ಬುಭುಕ್ಷುಗಳು ಇರಲೇ ಇಲ್ಲ ಎಂದು ಇದರ ಅರ್ಥ. ಆದರೆ, ಅಲ್ಲಿ ಕೃಷ್ಣನ ದರ್ಶನದಿಂದಾಗಿ ಮುಕ್ತಿಯ ಸುಖವೇ ಲಭಿಸಿದ್ದರಿಂದ ಬೇರೊಂದು ಮುಕ್ತಿ ಬೇಕು ಎಂಬ ಬಯಕೆಯಾಗಲೀ, ಭೀಮ ಸಕಲ ಸಂಪತ್ತು ನೀಡಿದ್ದರಿಂದ ಬುಭೂಷುಗಳಾಗಲೀ, ತತ್ವವಿಚಾರಗಳೆಲ್ಲ ಸಂಶಯಾತೀತವಾಗಿ ನಿರ್ಣೀತವಾದ್ದರಿಂದ ಹೊಸದಾಗಿ ತಿಳಿಯಬಯಸುವ ಜಿಜ್ಞಾಸುವಾಗಲೀ, ಸದಾ ಅನ್ನಪಾನಗಳ ವ್ಯವಸ್ಥೆ ಇದ್ದುದರಿಂದ ಅನ್ನಕ್ಕಾಗಿ ಹಸಿದವನಾಗಲೀ ಅಲ್ಲಿ ಇರಲ್ಲೇ ಇಲ್ಲ ಎಂಬ ಪ್ರಶಂಸೆ ಬಂದಿರುವುದು ಗಮನಾರ್ಹ.

ದಿನೇ ದಿನೇ ತತ್ರ ಮಹಾನ್ನಪರ್ವತಾಃ
ಸಭಕ್ಷ್ಯಸಾರಾ ರಸವಂತ ಊರ್ಜಿತಾಃ ।
ನದ್ಯಃ ಪಯಃಸರ್ಪಿರಜಸ್ರಪೂರ್ಣಾಃ
ಸಮಾಕ್ಷಿಕಾದ್ಯಾ ಅಪಿ ಪಾಯಸಹ್ರದಾಃ ॥ ೧೩೯ ॥

ಹ್ರದಾ ಮಹಾಂತಸ್ತ್ರಿದಶಾದಿಯೋಗ್ಯಾಃ
ಸುಯೋಗಯುಕ್ತಾ ಹರಿಚಂದನಾದೇಃ ।
ತಥಾಽಂಜನಾಲಕ್ತಕಮುಖ್ಯಮಂಡನ-
ದ್ರವ್ಯಾಗ್ಯವಾಪ್ಯೋ ಮಣಿಕಾಂಚನೋದ್ಭವಾಃ ॥ ೧೪೦ ॥

---

೧೩೭. ಅಚ್ಯುತಸತ್ಕಥಾರಮಾ ಇತ್ಯತ್ರ ಅಚ್ಯುತಸತ್ಕಥಾಯಾಂ ಆ= ಸಮಂತಾತ್ ರಮಂತ ಇತಿ ಅಚ್ಯುತ-ಸತ್ಕಥಾರಮಾಃ ॥ – (ವಾ.)

೧೩೮. ಪ್ರಾಜ್ಞವರೇಽನಿಲಾತ್ಮಜೇ ಪ್ರದಾತರಿ ಸತಿ ತಸೇಃ ಸಾರ್ವವಿಭಕ್ತಿಕತ್ವಾತ್। ಕುತಶ್ಚಿತ್ = ಕೇಚಿದಪಿ ಅಸತ್ಕಾಮಾ ನಾಭವನ್। ತದೇವ ಸ್ಪಷ್ಟಮಾಹ ನ ವೈ ಮುಮುಕ್ಷುರಿತಿ। ಅತ್ರ = ಯಜ್ಞಸಭಾಯಾಂ ಮುಮುಕ್ಷುಃ = ಮೋಕ್ಷೇಚ್ಛುಃ ಅಸತ್ಕಾಮೋ ನಾಭವದ್ವೈ। ತ್ರಿಮೂರ್ತೇರ್ಭಗವತಃ ಪ್ರಸನ್ನಮುಖಿಸಾಕ್ಷಾತ್ಕಾರಾದೇವ ಮುಕ್ತೇಃ ಕರತಲಗತತ್ವಾದಿತಿ ಭಾವಃ। ಬುಭೂಷುಃ ಸಕಲೈಶ್ವರ್ಯಾದಿನಾ ಸಂಪನ್ನೋ ಭವಿತುಮಿಚ್ಛುರಪಿ ಅಸತ್ಕಾಮೋ ನಾಭವತ್। ಅಪೇಕ್ಷಿತಸರ್ವಸಂಪದಾಂ ಉದಾರಶಿರೋಮಣಿನಾ ಭೀಮೇನೈವ ಪ್ರದೀಯಮಾನತ್ವಾತ್ ವಿವಿತ್ಸುಃ= ಸಕಲತತ್ತ್ವಾನಿ ನಿರ್ಣೀಯ ವೇತ್ತುಮಿಚ್ಛುರಪಿ ಅಸತ್ಕಾಮೋ ನಾಭವತ್। ಸರ್ವಜ್ಞಸ್ಯ ತ್ರಿಮೂರ್ತೇಃ ನಾರಾಯಣಸ್ಯ ಶ್ರೀಮನ್ಮುಖಕಮಲಾದೇವ ಸಪ್ರಮಾಣಂ ಸಯುಕ್ತಿಕಂ ಸೋಲ್ಲಾಸಂ ಚ ಸಾಂಗವೇದೋಪನಿಷದಾಂ ತತ್ತ್ವಾರ್ಥಸ್ಯ ನಿರ್ಣೀತತ್ವಾದೇವೇತಿ ಭಾವಃ। ಅತ್ರ ಬುಭುಕ್ಷುರಸತ್ಕಾಮೋ ನಾಭವದಿತಿ ಕುತಃ = ಕಿಂ ವಕ್ತವ್ಯಮ್। ಷಡ್ರಸೋಪೇತಚತುರ್ವಿಧಾನ್ನಾನಾಂ ಸರ್ವತ್ರ ಸರ್ವದಾ ಸರ್ವೇಷಾಂ ದಾನಾದಿತಿ ಭಾವಃ ॥ – (ವಾ.)

೧೩೮. ನ ವೈ ಮೋಕ್ಷಸುಖಿಸ್ಯಾತ್ಸೈವ ಲಾಭಾದಿತಿ ಭಾವಃ । – (ವ.)

೧೩೮. ನ ತತ್ರ ಕೃಪಣಃ ಕಶ್ಚಿನ್ನ ದರಿದ್ರೋ ಬಭೂವ ಹ ।
ಕ್ಷುಧಿತೋ ದುಃಖಿತೋ ವಾಽಪಿ ಪ್ರಾಕೃತೋ ವಾಽಪಿ ಮಾನವಃ ॥
ಭೋಜನಂ ಭೋಜನಾರ್ಥಿಭ್ಯೋ ದಾಪಯಾಮಾಸ ಶತ್ರುಹಾ ।
ಭೀಮಸೇನೋ ಮಹಾತೇಜಾಃ ಸತತಂ ರಾಜಶಾಸನಾತ್ ॥
ನಾಷಡಂಗವಿದತ್ರಾಸೀತ್ ಸದಸ್ಯಸ್ತಸ್ಯ ಧೀಮತಃ ।
ನಾವ್ರತೋ ನಾನುಪಾಧ್ಯಾಯೋ ನ ಚ ವಾದಾವಿಚಕ್ಷಣಃ ॥
ಇಷ್ಟಕಾಃ ಕಾಂಚನೀಶ್ಚಾತ್ರ ಚಯನಾರ್ಥಂ ಕೃತಾ ಽಭವನ್ ।
ಶುಶುಭೇ ಚಯನಂ ತಚ್ಚ ದಕ್ಷಸ್ಯೇವ ಪ್ರಜಾಪತೇಃ ॥
ಚತುಶ್ಚಿತ್ಯಶ್ಚತಸ್ಯಾಸೀದಷ್ಟಾದಶಕರಾತ್ಮಕಃ ।
ಸ ರುಕ್ಮಪಕ್ಷೋ ನಿಚಿತಸ್ತ್ರಿಕೋಣೋ ಗರುಡಾಕೃತಿಃ ॥ (ಇತ್ಯಾದಿ) – ಭಾರತ (ಆಶ್ವಮೇಧಿಕ. ೮೮/೨೩,೨೬)

ಯಥೇಷ್ಟಪಾನಾಶನಭೋಗಶಿಷ್ಟಾಃ
ಸಹಸ್ರಶೋ ಮಾರುತಿನಾ ತು ಕಾರಿತಾಃ ।
ಗಂಧಾ ರಸಾದ್ಯಾಶ್ಚ ಸಮಸ್ತಭೋಗಾ
ದಿವೀವ ತತ್ರಾಸುರತೀವ ಹೃದ್ಯಾಃ ॥ ೧೪೧ ॥

ಅ: ಪ್ರತಿ ದಿನವೂ ಅಲ್ಲಿ ಅನ್ನದ ಮಹಾಪರ್ವತಗಳು, ಭಕ್ಷ್ಯಗಳ ಸಾರಗಳು, ರಸ ತುಂಬಿದ ದೊಡ್ಡ ನದಿಗಳು, ಹಾಲು, ಜೇನುಗಳಿಂದ ತುಂಬಿದ್ದ ಪಾಯಸದ ಮಡುಗಳು, ಉಂಟಾದವು.

---

೧೩೯. ಏವಂ ಬಭೂವ ಯಜ್ಞಃ ಸ ಧರ್ಮರಾಜಸ್ಯ ಧೀಮತಃ ।
ಬಹ್ವನ್ನಧನರತ್ನೌಘಃ ಸುರಾಮೈರೇಯಸಾಗರಃ ॥
ಸರ್ಪಿಃಪಂಕಾ ಹ್ರದಾ ಯತ್ರ ಬಭೂವುಶ್ಚಾನ್ನಪರ್ವತಾಃ ।
ರಸಾಲಾ ಕರ್ದಮಾ ನದ್ಯೋ ಬಭೂವುರ್ಭರತರ್ಷಭ ॥
ಭಕ್ಷ್ಯಾಪಾಂಡವರಾಗಾಣಾಂ ಕ್ರಿಯತಾಂ ಭುಜ್ಯತಾಂ ತಥಾ ।
ಪಶೂನಾಂ ವಧ್ಯತಾಂ ಚೈವ ನಾಂತಂ ದದೃಶಿರೇ ಜನಾಃ ॥
ಮತ್ತಪ್ರಮತ್ತಮುದಿತಂ ಸುಪ್ರೀತಯುವತೀಜನಮ್ ।
ಮೃದಂಗಶಂಖನಾದೈಶ್ಚ ಮನೋರಮಮಭೂತ್ ತದಾ ॥
ದೀಯತಾಂ ಭುಜ್ಯತಾಂ ಚೇಷ್ಟಂ ದಿವಾರಾತ್ರಮವಾರಿತಮ್ ।
ತಂ ಮಹೋತ್ಸವಸಂಕಾಶಂ ಹೃಷ್ಟಪುಷ್ಟಜನಾಕುಲಮ್ ॥ –ಇತ್ಯಾದಿ ಭಾರತ (ಆಶ್ವಮೇಧಿಕ. ೮೯/೩೯-೪೩)

೧೪೦. ಸುಯೋಗಯುಕ್ತಾ ಹರಿಚಂದನಾದೇರಿತ್ಯತ್ರ ಆದಿಪದೇನ ಕೃಷ್ಣಾಗರುರಕ್ತಚಂದನಾದೇಃ ಸಂಗ್ರಹಃ। ಸುಯೋಗಯುಕ್ತಾಃ= ಕುಂಕುಮಕಸ್ತೂರ್ಯಾದಿಶೋಭನಪರಿಮಳದ್ರವ್ಯಯೋಗಯುಕ್ತಾ ತ್ರಿದಶಾದಿಯೋಗ್ಯಾಃ ಹರಿಚಂದನಾದೇಶ್ಚ ಹ್ರದಾ ಅಭವನ್ನಿತಿ ಯೋಜನಾ ॥ –(ವಾ.)

೧೪೦. ಅಂಜನಂ ಕಜ್ಜಲಂ ಅಲಕ್ತಕಂ ಲಾಕ್ಷಾವಿಕಾರಃ ... । –(ಜ.)

೧೪೦. ...ತತ್ರಾಪ್ಯೇಕಸ್ಯ ತ್ರಿಗುಣದಕ್ಷಿಣಾಂ .... ಪ್ರತ್ಯೇಕಂ ತ್ರಿತ್ವಂ ಸಂಪಾದ್ಯ ಪಂಚದಶಸಂಖ್ಯಾಕಾಶ್ವಮೇಧತ್ವಂ ಸಂಪಾದಿತಮಿತಿ ಭಾವಃ ॥ –(ವ.)

೧೪೦. ಅವಿಲುಪ್ತಾಗಮಂ ಕೃತ್ಸ್ನಂ ವಿವಿಧೈರ್ಯಜ್ಞಿಯೈಃ ಕೃತಮ್ ।
ಯಥಾಗಮಂ ಯಥಾನ್ಯಾಯಂ ಕರ್ತವ್ಯಂ ಚ ತಥಾಕೃತಮ್ ॥
ಪೂಜಾರ್ಹಾಃ ಪೂಜಿತಾಶ್ಚಾತ್ರ ವಿಧಿವಚ್ಛಾಸ್ತ್ರದರ್ಶನಾತ್ ।
ಮಂತ್ರಾಹುತಿಹುತಶ್ಚಾಗ್ನಿರ್ದತ್ತಂ ದೇಯಮಮತ್ಸರಮ್ ॥
ತುಷ್ಟಾ ದ್ವಿಜಾತಯಶ್ಚಾತ್ರ ದಾನೈರ್ಬಹುವಿಧೈರಪಿ ॥
ಕ್ಷತ್ರಿಯಾಶ್ಚ ಸುಯುದ್ಧೇನ ಶ್ರಾದ್ಧೈಶ್ಚಾಪಿ ಪಿತಾಮಹಾಃ ।
ಪಾಲಕೇನ ವಿಶಸ್ತುಷ್ಟಾಃ ಕಾಮ್ಯೈಸ್ತುಷ್ಟಾ ವರಾಸ್ತ್ರಿಯಃ ।
ಅನುಕ್ರೋಶೈಸ್ತಥಾ ಶೂದ್ರಾ ದಾನಶೇಷೈಃ ಪೃಥಗ್ಜನಾಃ ॥
ಜ್ಞಾತಿಸಂಬಂಧಿನಸ್ತುಷ್ಟಾಃ ಶೌಚೇನ ಚ ನೃಪಸ್ಯ ನಃ ।
ದೇವಾ ಹವಿರ್ಭಃ ಪುಣ್ಯೈಶ್ಚ ರಕ್ಷಣೈಃ ಶರಣಾಗತಾಃ ॥ –ಭಾರತ ॥ (ಆಶ್ವಮೇಧಿಕ. ೯೦/೧೧-೧೫)

ದೇವತೆಗಳೇ ಮೊದಲಾದವರಿಗೆ ಯೋಗ್ಯವಾದ, ಮಹತ್ತರವಾದ ಶ್ರೀಗಂಧ ಮೊದಲಾದವುಗಳ ದೊಡ್ಡ ಮಡುಗಳು, ಅದರಂತೆ ಕಾಡಿಗೆ, ಅಲಕ್ತಕ ಮೊದಲಾದ ಅಲಂಕಾರ ದ್ರವ್ಯಗಳಿಂದ ತುಂಬಿದ್ದ, ರತ್ನ, ಚಿನ್ನಗಳ ಶ್ರೇಷ್ಠ ಬಾವಿಗಳು, ಇತರ ಯಥೇಚ್ಛವಾದ ಅನ್ನ, ಪಾನಯೋಗ್ಯವಾದ ಭೋಗವಸ್ತುಗಳಿಂದ ಕೂಡಿದ್ದವು. ಗಂಧ, ರಸ ಮೊದಲಾದ ಸಕಲ ಭೋಗವಸ್ತುಗಳೂ ಎಲ್ಲವೂ ಸಹಸ್ರಸಂಖ್ಯೆಯಲ್ಲಿ ಭೀಮಸೇನನಿಂದ ಏರ್ಪಡಿಸಲ್ಪಟ್ಟವುಗಳಾಗಿ ಅತ್ಯಂತ ಹೃದ್ಯವಾಗಿ ದೇವಲೋಕದಲ್ಲಿ ಹೇಗೋ ಹಾಗೆ ಅಲ್ಲಿ ತುಂಬಿದ್ದವು.

ನೈತಾದೃಶಃ ಕಶ್ಚನ ಭೂತಪೂರ್ವೋ
ಮಖೋ ವಿನಾ ರಾಮವಿರಿಂಚವಜ್ರಿಣಾಮ್ ।
ಮಖಾನಿತಿ ಪ್ರೋಚುರಶೇಷಲೋಕಾ
ದೃಷ್ಟ್ವಾ ಮಖಂ ತಂ ಪುರುಷೋತ್ತಮೇರಿತಮ್ ॥ ೧೪೨ ॥

ಅ: ಕೃಷ್ಣನಿಂದ ನಡೆಸಲ್ಪಟ್ಟಂತಹ ಅಂತಹ ಯಜ್ಞ ರಾಮ, ಬ್ರಹ್ಮ ಮತ್ತು ಇಂದ್ರರ ಯಜ್ಞಗಳನ್ನು ಹೊರತು ಮತ್ತೊಂದು ಯಾವುದೂ ಇಲ್ಲ ಎಂದು ಆ ಯಜ್ಞವನ್ನು ನೋಡಿದ ಸಕಲ ಜನರೂ ಸಹ ನುಡಿದರು.

ವಿ: ವಿಶ್ವದ ಇತಿಹಾಸದಲ್ಲಿ ಪಾಂಡವರ ಯಜ್ಞ ಹಿರಿಮೆಯಲ್ಲಿ ನಾಲ್ಕನೆಯದಾಯಿತು; ಇತರ ಯಾರಿಂದಲೂ ಅಂತಹ ಯಜ್ಞ ನಡೆದಿಲ್ಲ ಎಂದರ್ಥ.

ಹದಿನೈದು ವರ್ಷಗಳ ಯಜ್ಞ

ಸ ಏವಮದ್ಧಾ ಹರಿದೈವತಃ ಕ್ರತುಃ
ಪಂಚಾಶ್ವಮೇಧಾತ್ಮಕ ಉಚ್ಚಕಲ್ಪಃ ।
ದಿನೇ ದಿನೇ ಸ್ವರ್ದ್ಧಗುಣೋ ಬಭೂವ
ಮುದಾವಹೋ ವತ್ಸರಪಂಚಕತ್ರಯಮ್ ॥ ೧೪೩ ॥

---

೧೪೨. ನ ಕರಿಷ್ಯತಿ ತಲ್ಲೋಕೇ ಕಶ್ಚಿದನ್ಯೋ ನರಾಧಿಪಃ ।
ಯತ್ ಕೃತಂ ಕುರುರಾಜೇನ ಮರುತ್ತ್ಯಾನುಕುರ್ವತಾ ॥ – ಭಾರತ (ಆಶ್ವಮೇಧಿಕ. ೮೯/೨೦)

೧೪೩.. ವತ್ಸರಪಂಚಕತ್ರಯಮಿತ್ಯತ್ರ ದರ್ಶಪೂರ್ಣಮಾಸಪ್ರಯಾಜಾನುಯಾಜಾದಿಪೂರ್ವೋತ್ತರೇಷ್ಟಿಕರಣಾಯ ಏಕೈಕಸಾಂಗಾಶ್ವಮೇಧಸ್ಯ ವರ್ಷತ್ರಯಮಪೇಕ್ಷಿತಮ್। ಅತಃ ವತ್ಸರಪಂಚಕತ್ರಯಮಿತ್ಯುಕ್ತಮ್। ಪಂಚಪಾಂಡವಾನಾಂ ಏಕೈಕಾಶ್ವಮೇಧ ಇತಿ ಭಾವೇನ ಪಂಚಾಶ್ವಮೇಧಾತ್ಮಕ ಇತ್ಯುಕ್ತಮ್ ॥ – (ವಾ.)

ಅ: ಹೀಗೆ ಶ್ರೀಹರಿಯನ್ನೇ ದೇವತೆಯನ್ನಾಗಿ ಹೊಂದಿದ ಪಂಚಾಶ್ವಮೇಧಾತ್ಮಕವಾದ ಉತ್ತಮ ಕಲ್ಪದ ಆ ಯಜ್ಞ ಹದಿನೈದು ವರ್ಷಗಳ ವರೆಗೆ ದಿನೇದಿನೇ ಹೆಚ್ಚು ಗುಣಗಳಿಂದ ಕೂಡಿ ಆನಂದದಾಯಕವಾಗಿ ನಡೆಯಿತು.

ವಿ: ೧) ಒಂದು ಅಶ್ವಮೇಧ ಸಾಂಗೋಪಾಂಗವಾಗಿ ಪೂರೈಸಲು ಬೇಕಾಗುವ ಅವಧಿ ಮೂರು ವರ್ಷಗಳು. ಪಂಚ ಪಾಂಡವರು ಮಾಡಿದ ಆ ಪಂಚಾಶ್ವಮೇಧಾತ್ಮಕವಾದ ಯಜ್ಞ ಒಟ್ಟು ಹದಿನೈದು ವರ್ಷಗಳ ಕಾಲ ನಡೆಯಿತು.

೨) ಯಜ್ಞದ ವೈಭವ ದಿನ ಕಳೆದಂತೆ ಹೆಚ್ಚುತ್ತಾ ಹೋಯಿತೇ ಹೊರತು ಕಡಿಮೆಯೆನ್ನಿಸಲಿಲ್ಲ ಎಂಬುದು ಅದರ ಮತ್ತೊಂದು ವಿಶೇಷ.

ಪಾಂಡವರು ಮಾಡಿದ ಸರ್ವಸಮರ್ಪಣೆ

ಯಜ್ಞಾವಸಾನೇ ನಿಖಿಲಾಶ್ಚ ಪಾಂಡವಾಃ
ಕೃಷ್ಣಾ ಚ ಪೃಥ್ವೀಮಖಿಲಾಂ ಸವಿತ್ತಾಮ್ ।
ಮಾಂಗಲ್ಯಮಾತ್ರಂ ದಯಿತಾಶರೀರೇ
ನಿಧಾಯ ಸರ್ವಾಭರಣಾನಿ ಚೈವ ॥ ೧೪೪ ॥

ಸಮರ್ಪಯಾಮಾಸುರಜೇ ವರೇಣ್ಯೇ
ವ್ಯಾಸೇ ವಿಭಾಗಾಯ ಯಥೋಕ್ತಮೃತ್ವಿಜಾಮ್ ।
ಪ್ರಿಯೋ ವಿಭಾಗೋ ಯದಮುಷ್ಯ ವಿಷ್ಣೋ-
ರತೋ ವಿಭಾಗಾರ್ಥಮಿವಾರ್ಪಯಂಸ್ತೇ ॥ ೧೪೫ ॥

ಅ: ಯಜ್ಞದ ಕೊನೆಯಲ್ಲಿ ಸಕಲಪಾಂಡವರು ಹಾಗೂ ದ್ರೌಪದಿ ಕೋಶಸಮೇತವಾಗಿ ಸಮಸ್ತಪೃಥ್ವಿಯನ್ನೂ, ಪತ್ನಿಯರ ಮೈಮೇಲಿನ ಮಾಂಗಲ್ಯವನ್ನು ಮಾತ್ರ ಬಿಟ್ಟು ಸಕಲ ಆಭರಣಗಳನ್ನೂ ಸಹ ಋತ್ವಿಕ್‌ಗಳಿಗೆ ಶಾಸ್ತ್ರೋಕ್ತವಾದ ರೀತಿಯಾಗಿ ವಿಭಾಗ ಮಾಡಿ

---

೧೪೪. ಮಾಂಗಲ್ಯಮಾತ್ರಮಿತ್ಯಸ್ಯ ಮಂಗಲಾಪಾದಕಸೂತ್ರಮಾತ್ರಮಿತ್ಯರ್ಥಃ। – (ಸ.)

೧೪೪. ತತೋ ಯುಧಿಷ್ಠಿರಃ ಪ್ರಾದಾದ್ ಬ್ರಾಹ್ಮಣೇಭ್ಯೋ ಯಥಾವಿಧಿ।
ಕೋಟೀಃ ಸಹಸ್ರಂ ನಿಷ್ಕಾಣಾಂ ವ್ಯಾಸಾಯ ತು ವಸುಂಧರಾಮ್ ॥ – ಭಾರತ (ಆಶ್ವಮೇಧಿಕ. ೮೯/೮)

ಅಶ್ವಮೇಧೇ ಮಹಾಯಜ್ಞೇ ಪೃಥಿವೀ ದಕ್ಷಿಣಾ ಸ್ಮೃತಾ।
ಅರ್ಜುನೇನ ಜಿತಾ ಚೇಯಮೃತ್ವಿಗ್ಭ್ಯಃ ಪ್ರಾಪಿತಾ ಮಯಾ ॥
ವನಂ ಪ್ರವೇಕ್ಷ್ಯೇ ವಿಪ್ರಾಗ್ರ್ಯಾ ವಿಭಜಧ್ವಂ ಮಹೀಮಿಮಾಮ್ ॥ – ಭಾರತ (ಆಶ್ವಮೇಧಿಕ. ೮೯/೧೨)

ನೀಡಲೆಂದು ಅಜನೂ, ಭಜನೀಯನೂ ಆದ ವೇದವ್ಯಾಸರಿಗೆ ಒಪ್ಪಿಸಿದರು. ವ್ಯಾಸರೂಪದ ಶ್ರೀಹರಿಗೆ ವಿಭಾಗ ಮಾಡುವುದು ಪ್ರಿಯವಾದುದಲ್ಲವೇ. ಅದರಿಂದ ವಿಭಾಗ ಮಾಡಿ ನೀಡಲೆಂಬಂತೆ ಅವನಿಗೆ ಸಮರ್ಪಿಸಿದರು.

ವಿಃ ೧) ಪಾಂಡವರು ಮಾಡಿದ ದಾನ ಬಲಿದಾನವನ್ನು ಮೀರಿಸುವಂತಹ ಅತ್ಯಂತ ಅಪೂರ್ವವಾದಂತಹ ದಾನ. ಬಲಿ ಕೇಳಿದ ಬಳಿಕವಷ್ಟೆ ಕೊಟ್ಟವನು, ಆದರೆ ಪಾಂಡವರು ತಾವಾಗಿಯೇ ತಮ್ಮ ಪತ್ನಿಯರ ಮೈ ಮೇಲಿನ ಮಾಂಗಲ್ಯದ ಹೊರತು ಆಭರಣಗಳ ಸಮೇತವಾದ ಸಮಸ್ತ ಐಶ್ವರ್ಯವನ್ನು ಭೂಮಿಯ ಸಮೇತವಾಗಿ ಋತ್ವಿಕ್‌ಗಳಿಗೆ ದಾನ ನೀಡಲೆಂದು ವೇದವ್ಯಾಸರಿಗೆ ಒಪ್ಪಿಸಿದರು.

೨) ವೇದವ್ಯಾಸರು ವೇದವಿಭಾಗ ಮಾಡಿದವರು, ಅವರು ಮಾಡಿದ ವೇದವಿಭಾಗ ಅನನ್ಯವಾದುದು. ಅಂತಹ ವೇದವಿಭಾಗ ಮಾಡಿದ ಅವರೇ ಋತ್ವಿಕ್‌ಗಳಿಗೆ ದ್ರವ್ಯ ವಿಭಾಗವನ್ನೂ ಮಾಡಲಿ ಎಂಬುದು ಅವರ ಭಾವವಾಗಿತ್ತು

೩) ಇದರ ಹಿಂದೆ ಕೃಷ್ಣಾರ್ಪಣ ತತ್ವದ ಆಂತರ್ಯವೇ ಅಡಗಿದೆ. ಕೃಷ್ಣಾರ್ಪಣವೆಂದು ಶ್ರೀಹರಿಗೆ ಅರ್ಪಿಸುವುದು ಅವನು ಸಮಸ್ತರಿಗೂ ಅವರವರ ಪಾತ್ರಕ್ಕೆ ಅನುಗುಣವಾದ ಫಲವನ್ನು ನೀಡಲೆಂದರ್ಥ.

ಹೃದಾ ಸಮಸ್ತಂ ಹರಯೇಽರ್ಪಿತಂ ತೈಃ
ಸ ಹಿ ದ್ವಿಜಸ್ಥೋಽಪಿ ಸಮಸ್ತಕರ್ತಾ ।
ದೇಹೇಂದ್ರಿಯಪ್ರಾಣಮನಾಂಸಿ ಚೇತನೈಃ
ಸಹೈವ ತಸ್ಮಾ ಅತಿಸೃಜ್ಯ ನೇಮುಃ ॥ ೧೪೬ ॥

---

೧೪೫. ಪ್ರಿಯೋ ವಿಭಾಗೋ ಯದಮುಷ್ಯ ವಿಷ್ಣೋರಿತ್ಯತ್ರ ಅಮುಷ್ಯ = ಸಹಸ್ರಮಾಖ್ಯಾತ್ರೇ ದದ್ಯಾದಿತ್ಯಾದಿನಾ ಯಜ್ಞೇ ಋತ್ವಿಗಾದೀನಾಂ ದೀಯಮಾನದಕ್ಷಿಣಾವಿಭಾಗಾದಿಪ್ರತಿಪಾದಕವೇದವಿಭಾಗಕರ್ತುಃ ವೇದವ್ಯಾಸಸ್ಯ। ವಿಭಾಗಃ= ವೇದೋಕ್ತಪ್ರಕಾರೇಣ ದಕ್ಷಿಣಾದೀನಾಂ ವಿಭಾಗಃ ಯತ್ = ಯಸ್ಮಾತ್ಕಾರಣಾತ್ ಪ್ರಿಯಃ ಅತಸ್ತೇ ಪಾಂಡವಾಃ ವಿಭಾಗಾರ್ಥಂ ಅರ್ಪಯನ್ನಿವ। ಇವಶಬ್ದೇನ ಪಶ್ಯತಾಂ ವಿಭಾಗಾರ್ಥಮೇವಾರ್ಪಯನ್ನಿತ್ಯೇವ ಬುದ್ಧಿಂ ಜನಯಾಮಾಸುರಿತಿ ಸೂಚಿತಮ್ ॥ –(ವಾ.)

೧೪೫. ಯಥೋಕ್ತಂ ಭಾಗವತೇ– 'ಸರ್ವಸ್ಯ ತದ್ಭವತಿ ಮೂಲನಿಷೇಚನಂ ಯತ್' ಇತಿ । ಏತಚ್ಛಂಕಾಪರಿಹಾರಾಯ ಉತ್ತರಾರ್ಧಂ 'ಅತೋ ವಿಭಾಗಾರ್ಥಮಿವಾರ್ಪಯಂಸ್ತೇ' ಇತೀವಶಬ್ದಃ । ಅನ್ಯಥಾ ಸಮರ್ಪಯಾಮಾಸುಃ ಅರ್ಪಯನ್ನಿವೇತ್ಯನಯೋರ್ವ್ಯಾಹತಿಃ ಸ್ಯಾತ್ । 'ಹೃದಾ ಸಮಸ್ತಂ ಹರಯೇಽರ್ಪಿತಂ ತಂ' ಇತಿ ಚ । ಅಥವಾ ಽಸ್ಮಾಕಂ ಸರ್ವಸಮರ್ಪಣಸ್ವಾತಂತ್ರ್ಯಂ ನಾಸ್ತೀತಿ ಸೂಚನಾರ್ಥಂ ಇವಶಬ್ದಃ । ತದಪ್ಯುಕ್ತಂ ತ್ವದೀಯಮೇತನ್ನಿಖಿಲಂ ವಯಂ ಚ ನ ತ್ವಸ್ಮದೀಯಂ ಕ್ವಚ ಕಿಂಚನೇತ್ಯನೇನ ವಾಕ್ಯೇನ ॥ –(ತಿ.)

೧೪೫. ವಿವ್ಯಾಸ ವೇದಾನ್ ಯಸ್ಮಾತ್ ಸ ತಸ್ಮಾದ್ ವ್ಯಾಸ ಇತಿ ಸ್ಮೃತಃ । –ಭಾರತ (ಆದಿ. ೬೩/೮೮)

ಅ: ಹೀಗೆ ಹೃತ್ಪೂರ್ವಕವಾಗಿ ಎಲ್ಲವನ್ನೂ ಶ್ರೀಹರಿಗೆ ಅರ್ಪಿಸಿಲು ಅವನು ಸಕಲ ದ್ವಿಜರಲ್ಲಿದ್ದು ಸಮಸ್ತ ಕಾರ್ಯಗಳನ್ನು ಮಾಡಿಸುವವನು ಎಂಬುದೂ ಕಾರಣ. ದೇಹ, ಇಂದ್ರಿಯ, ಪ್ರಾಣ, ಮನಸ್ಸುಗಳನ್ನು ಚೇತನ ಸಮೇತವಾಗಿ ಅವನಿಗೆ ಒಪ್ಪಿಸಿ ನಮಸ್ಕರಿಸಿದರು.

ವಿ: ೧) ವಿಭಾಗ ಪ್ರಿಯವೆಂಬುದು ವೇದವ್ಯಾಸರಿಗೆ ಅರ್ಪಿಸಲು ಒಂದು ಕಾರಣವಾದರೆ, ಋತ್ವಿಕ್‌ಗಳು ಮೊದಲಾದವರಲ್ಲಿದ್ದು ಸಮಸ್ತ ಕಾರ್ಯಗಳನ್ನೂ ಮಾಡಿಸುವವನೂ ಅವನೇ ಎಂಬುದು ಮತ್ತೊಂದು ಕಾರಣ.

೨) ದ್ರವ್ಯವನ್ನು ಮಾತ್ರವಲ್ಲದೇ ದೇಹೇಂದ್ರಿಯಾದಿಗಳನ್ನೂ ಸಹ ಸಮರ್ಪಿಸಿದರು ಎಂಬುದು ಇಲ್ಲಿಯ ಮತ್ತೊಂದು ವಿಶೇಷ.

ತ್ವದೀಯಮೇತನ್ನಿಖಿಲಂ ವಯಂ ಚ
ನಾಸ್ಮದೀಯಂ ಕ್ವ ಚ ಕಿಂಚನೇಶ ।
ಸ್ವತಂತ್ರ ಏಕೋಽಸಿ ನ ಕಶ್ಚಿದನ್ಯಃ
ಸರ್ವತ್ರ ಪೂರ್ಣೋಽಸಿ ಸದೇತಿ ಹೃಷ್ಟಾಃ ॥ ೧೪೭ ॥

ಅ: ಈ ಸಕಲವೂ ನಿಮ್ಮದೇ, ನಾವೂ ಸಹ. ನಮ್ಮದೆಂಬುದು ಎಲ್ಲೂ ಎಷ್ಟೂ ಇಲ್ಲ. ಈಶನೇ ನೀನೊಬ್ಬನೇ ಸ್ವತಂತ್ರನಾದವನು, ಬೇರಾವನೂ ಅಲ್ಲ. ನೀನು ಸದಾ ಸರ್ವತ್ರಪೂರ್ಣ-ನಾದವನು ಎಂದು ಆನಂದದಿಂದ ನುಡಿದರು.

---

೧೪೬. ವಸ್ತುತಸ್ತು ತೈರ್ಹ್ಯದಾ ಹರಯ ಏವ ಸಮಸ್ತಮರ್ಪಿತಮ್। ತತ್ಕಥಮಿತ್ಯತ ಉಕ್ತಂ ಸ ಹೀತಿ। ದ್ವಿಜಸ್ಥೋಽಪಿ ಸಮಸ್ತಕರ್ತಾ ಸ ಏವ ಹಿ। ಅತಃ ಋತ್ವಿಕ್ಕರೇ ದಾನಮಪಿ ವಿಷ್ಣುಹಸ್ತ ಏವ ದಾನಂ ಸ್ಯಾತ್। ತಸ್ಮಾತ್ ಸಾಕ್ಷಾತ್ತ್ವಕರೇಣೈವ ಪ್ರತಿಗ್ರಹೀತರಿ ಹರೌ ಸತಿ ಕಿಮನ್ಯಕರೇ ದಾನೇನೇತಿ ಹರಾವೇವ ಸಮರ್ಪಯಾಮಾಸುರಿತಿ ಭಾವಃ। ಹಿಶಬ್ದೇನ "ಅರ್ಚಂತು ಪುತ್ರಕಾ ಉತ ಪುರಂ ನ ಧೃಷ್ಣ್ವರ್ಚತ" (ಋ. ೮/೬೯/೮) "ಗುಹಾಶಯಾಯೈವ ನ ದೇಹಮಾನಿನೇ" (ಭಾ. ೪/೩/೨೨) ಇತ್ಯಾದಿಶ್ರುತಿಸ್ಮೃತಿಪ್ರಸಿದ್ಧಿಂ ಸೂಚಯತಿ। ಯದ್ವಾ ಅರ್ಪಯನ್ನಿವೇತಿ ಇವಶಬ್ದಸಂಬಂಧಃ। ತಥಾ ಚ ಲೋಕದೃಷ್ಟ್ಯೈವೇದಮರ್ಪಣಮ್। ವಸ್ತುಗತ್ಯಾ ಸಮಸ್ತವಿತ್ತಸ್ಯ ತದೀಯತ್ವಾತ್ ಕಃ ಸಮರ್ಪಕ ಇತಿ ಭಾವಃ ॥–(ವಾ.)

೧೪೬. ನನ್ವನರ್ಥಸಾಧನಭೂತಂ ದತ್ತಾಪಹಾರಂ ಕೃತ್ವಾ ಋತ್ವಿಗ್ಭ್ಯಃ ದತ್ತಮಿತ್ಯತ ಆಹ - ಸ ಹೀತಿ। ದ್ವಿಜಸ್ಥಃ ಋತ್ವಿಕ್‌ಸ್ಥಃ ಸನ್ ಸಮಸ್ತಕರ್ತಾ ಋತ್ವಿಗ್ ಏಹಿತ ಸರ್ವಕರ್ಮಕರ್ತಾ ಸ ಏವ ಹಿ ಯಸ್ಮಾತ್ ತಸ್ಮಾತ್ ದತ್ತಾಪಹಾರ ದೋಷೋ ನಾಸ್ತೀತ್ಯರ್ಥಃ। –(ಜ.)

೧೪೭. ತೈಃ ಸಮಸ್ತಂ ಹರಯೇಽರ್ಪಿತಮಿತ್ಯನೇನ ಪ್ರತೀತಂ ವಿತ್ತಸ್ವಾತಂತ್ರ್ಯಂ ಪರಿಹರತಿ। ನ ತ್ವದೀಯಂ ಕ್ವ ಚ ಕಿಂಚನೇಶೇತಿ ಹೇ ಈಶ ಕ್ವ ಚ= ಕಾಲೇ ಕ್ವ ಚ= ದೇಶೇ ಚ ಕಿಂಚನಾಸ್ಮದೀಯಂ ತು = ವಿಶೇಷೇಣ ಸ್ವಾತಂತ್ರ್ಯೇಣ ನೇತ್ಯರ್ಥಃ। ತಟಾಕೋದಕೇನ ತಟಾಕೇ ತರ್ಪಣವತ್ ತವ ವಿತ್ತಮೇವ ತುಭ್ಯಂ ದತ್ತಮ್। ನ ತ್ವಜ್ಞಸ್ಯ ಮಹಾ-ಬಲೇರಿವಾಸ್ಮಾಕಂ ವಿತ್ತಸ್ವಾತಂತ್ರ್ಯಾಭಿಮಾನ ಇತಿ ಭಾವಃ ॥ –(ವಾ.)

ವಿ: ಯಾಗದಲ್ಲಿ ಪಾಲ್ಗೊಂಡ ಹೋತೃ ಮೊದಲಾದ ಹದಿನಾರು ಋತ್ವಿಕ್‌ಗಳಿಗೆ ದಕ್ಷಿಣೆ ಹಂಚುವುದರಲ್ಲೂ ವಿಶೇಷವುಂಟು. ಅದನ್ನೆಲ್ಲ ಬಲ್ಲ ಶ್ರೀವೇದವ್ಯಾಸರೇ ಆ ಕಾರ್ಯವನ್ನು ಮಾಡಲಿ ಎಂಬುದು ಪಾಂಡವರ ಭಾವವಾಗಿತ್ತು. ವೇದವಿಭಾಗ ಮಾಡಿದ ಅವರಿಗೆ ವೇದೋಕ್ತ ದಕ್ಷಿಣಾ ಕ್ರಮವೂ ಪ್ರಿಯವಾದುದು ಎಂದರ್ಥ. ಇದರಿಂದ ಯಜ್ಞಾದಿ ಸಮಾರಂಭಗಳಲ್ಲಿ ಪಾಲ್ಗೊಂಡ ಜನರಿಗೆ ದಕ್ಷಿಣೆ ನೀಡುವ ಕಾರ್ಯವನ್ನೂ ಸಹ ಚೆನ್ನಾಗಿ ತಿಳಿದ ಜ್ಞಾನಿಗಳಿಂದಲೇ ಮಾಡಿಸಬೇಕು ಎಂಬ ಮತ್ತೊಂದು ಧರ್ಮಸೂಕ್ಷ್ಮವೂ ಸ್ಫುಟಪಡುವುದು.

ತತೋ ವಿಭಕ್ತೇ ಮುನಯೋಽವದಂಸ್ತೇ
ಪ್ರತ್ಯರ್ಪಯಾಮೋ ವಯಮೇಷು ರಾಜ್ಯಮ್ ।
ಪೂರ್ಣಾ ಹಿರಣ್ಯೇನ ವಯಂ ಧರಾಯಾಃ
ಪ್ರಪಾಲನೇ ಯೋಗ್ಯತಮಾ ಇಮೇ ಹಿ ॥ ೧೪೮ ॥

ಅ: ಅದರಂತೆ ಶ್ರೀವೇದವ್ಯಾಸರು ದಕ್ಷಿಣೆಯನ್ನು ಹಂಚಿದಾಗ ಆ ಮುನಿಗಳು ನುಡಿದರು 'ನಾವು ರಾಜ್ಯವನ್ನು ಈ ಪಾಂಡವರಿಗೇ ಮರಳಿ ನೀಡುವೆವು. ನಮಗೆ ಈ ದ್ರವ್ಯ ಸಾಕು. ಭೂಮಿಯನ್ನು ಚೆನ್ನಾಗಿ ಪಾಲಿಸುವ ಕಾರ್ಯದಲ್ಲಿ ಇವರೇ ಅತ್ಯಂತ ಯೋಗ್ಯರು'.

ವಿ: ೧) ಧರ್ಮಜ್ಞಾನಿಗಳಾದ ಆ ಮುನಿಗಳು ದಕ್ಷಿಣಾ ರೂಪವಾಗಿ ದ್ರವ್ಯವನ್ನು ಮಾತ್ರ ತೆಗೆದುಕೊಂಡು ರಾಜ್ಯಭಾಗವನ್ನು ಮರಳಿ ಧರ್ಮರಾಜನಿಗೇ ಹಿಂದಿರುಗಿಸುವುದಾಗಿ ತಿಳಿಸಿದರು.

೨) ಇದರಿಂದ ಬ್ರಹ್ಮಜ್ಞಾನಿಗಳಾದ ಋಷಿ, ಮುನಿಗಳಿಗೆ ತಮಗೆ ವಿಹಿತವಲ್ಲದ ಕರ್ಮಗಳಲ್ಲಿ ಸ್ವಲ್ಪವೂ ಆಸಕ್ತಿಯಿರದು ಎಂಬ ಪ್ರಮೇಯ ಸ್ಫುಟಪಡುವುದು.

ಪಾರ್ಥಾಃ ಸಭಾರ್ಯಾಃ ದ್ವಿಜವಾಕ್ಯಮೇತ-
ನ್ನಿಶಮ್ಯ ಕೃಷ್ಣಾಯ ಪುನಃ ಪ್ರಣಮ್ಯ ।
ಊಚುಸ್ತಪೋ ನೋಽಸ್ತು ವನೇಽರ್ಪಯಿತ್ವಾ
ರಾಜ್ಯಂ ಮಖಾಂತೇ ತ್ವಯಿ ಧರ್ಮಲಬ್ಧಮ್ ॥ ೧೪೯ ॥

ಅ: ಮುನಿಗಳ ಆ ಮಾತನ್ನು ಕೇಳಿ ಪಾಂಡವರು ಸಪತ್ನೀಕರಾಗಿ ವೇದವ್ಯಾಸರಿಗೆ ಪುನಃ ನಮಸ್ಕರಿಸಿ ಕೇಳಿಕೊಂಡರು 'ನಾವು ಧರ್ಮದಿಂದ ಸಂಪಾದಿಸಿದ ಈ ರಾಜ್ಯವನ್ನು ಯಾಗದ ಕೊನೆಯಲ್ಲಿ ನಿಮಗೆ ಒಪ್ಪಿಸಿ ಕಾಡಿನಲ್ಲಿ ತಪಸ್ಸು ಮಾಡಲು ತೆರಳುವೆವು'.

ವಿ: ಮುನಿಗಳು ಹಿಂದಿರುಗಿಸಿದ ರಾಜ್ಯವನ್ನು ಸ್ವೀಕರಿಸಲು ಒಪ್ಪದೆ ಪಾಂಡವರು ತಮಗೆ ರಾಜ್ಯಕ್ಕಿಂತ ವನದಲ್ಲಿ ತಪಸ್ಸನ್ನು ಮಾಡುವುದೇ ಹೆಚ್ಚು ಪ್ರಿಯ ಎಂಬುದಾಗಿ ಬಿನ್ನಯಿಸಿದರು ಎಂದರ್ಥ.

ಇತೀರಿತಃ ಪ್ರಾಹ ಸ ಬಾದರಾಯಣೋ
ಮುನೀಶ್ವರೈರಪ್ಯನುಯಾಚಿತಃ ಪ್ರಭುಃ ।
ಹಿರಣ್ಮಮೇವ ಸ್ವಮಿದಂ ಮುನೀನಾಂ
ಮದಾಜ್ಞಯಾ ಭುಂಗ್ಧ್ವಮಶೇಷರಾಜ್ಯಮ್ ॥ ೧೫೦ ॥

ಅ: ಅವರು ಹೀಗೆನ್ನಲು ಮುನಿಗಳೂ ಸಹ ವೇದವ್ಯಾಸರನ್ನು ಪ್ರಾರ್ಥಿಸಲು ಪ್ರಭುವಾದ ವೇದವ್ಯಾಸರು ನುಡಿದರು 'ಮುನಿಗಳಿಗೆ ಈ ಸುವರ್ಣವೇ ಸಂಪತ್ತು ನನ್ನ ಆದೇಶದಂತೆ ನೀವು ಸಮಸ್ತ ರಾಜ್ಯವನ್ನು ಭೋಗಿಸಿರಿ'.

ವಿ: ೧) ಒಂದೆಡೆ ಪಾಂಡವರ ಪ್ರಾರ್ಥನೆ, ಮತ್ತೊಂದೆಡೆ ತಮಗೆ ರಾಜ್ಯ ಬೇಡ ಎಂಬ ಮುನಿಗಳ ಬೇಡಿಕೆ. ಅದಕ್ಕೆ ವ್ಯಾಸರು ನೀಡಿದ ಪರಿಹಾರ ಅದಾಗಿತ್ತು.

೨) ಶಾಸ್ತ್ರಸುವರ್ಣವೇ ತಪೋಧನರಾದ ಮುನಿಗಳಿಗೆ ಪ್ರಧಾನಧನ ಎಂದರ್ಥ.

ಸಮರ್ಪಿತಂ ಮೇ ಫಲವಚ್ಚ ತತ್ಸ್ಯಾತ್
ಪುನರ್ಗ್ರಹೋ ನೈವ ಚ ದೋಷಕಾರೀ ।
ಪಿತಾಮಹೋಽಹಂ ಭವತಾಂ ವಿಶೇಷತೋ
ಗುರುಃ ಪತಿಶ್ಚೈವ ತತೋ ಮದರ್ಹಥ ॥ ೧೫೧ ॥

---

೧೪೮. ವಸುಧಾ ಭವತಸ್ತ್ವೇಷಾ ಸನ್ಯಸ್ತಾ ರಾಜಸತ್ತಮ ।
ನಿಷ್ಕ್ರಯೋ ದೀಯತಾಂ ಮಹ್ಯಂ ಬ್ರಾಹ್ಮಣಾ ಹಿ ಧನಾರ್ಥಿನಃ ॥ - ಭಾರತ (ಆಶ್ವಮೇಧಿಕ. ೮೯/೧೦)

೧೪೯. ವನಂ ಪ್ರವೇಕ್ಷ್ಯೇ ವಿಪ್ರಾಗ್ರ್ಯಾ ವಿಭಜಧ್ವಂ ಮಹೀಮಿಮಾಮ್ ।
ಚತುರ್ಧಾ ಪೃಥಿವೀಂ ಕೃತ್ವಾ ಚಾತುರ್ಹೋತ್ರಪ್ರಮಾಣತಃ ।
ನಾಹಮಾದಾತುಮಿಚ್ಛಾಮಿ ಬ್ರಹ್ಮಸ್ವಂ ದ್ವಿಜಸತ್ತಮಾಃ ।
ಇದಂ ನಿತ್ಯಂ ಮನೋ ವಿಪ್ರಾ ಭ್ರಾತೄಣಾಂ ಚೈವ ಮೇ ಸದಾ ॥
ಇತ್ಯುಕ್ತವತಿ ತಸ್ಮಿಂಸ್ತು ಭ್ರಾತರೋ ದ್ರೌಪದೀ ಚ ಸಾ ।
ಏವಮೇತದಿತಿ ಪ್ರಾಹುಸ್ತದಭೂಲ್ಲೋಮಹರ್ಷಣಮ್ ॥
ತತೋಽಂತರಿಕ್ಷೇ ವಾಗಾಸೀತ್ ಸಾಧು ಸಾಧ್ವಿತಿ ಭಾರತ ॥ - ಭಾರತ (ಆಶ್ವಮೇಧಿಕ. ೧೨/೧೫)

ಅ: ನನಗೆ ಸಮರ್ಪಿತವಾದ ಅದು ನಿಮಗೆ ಫಲದಂತೆ ನೀಡಲ್ಪಡುವುದು. ಆದ್ದರಿಂದ ಅದನ್ನು ಮರಳಿ ಸ್ವೀಕರಿಸುವುದು ನಿಮಗೆ ದೋಷಕ್ಕೆ ಕಾರಣವಾಗದು. ನಾನು ನಿಮಗೆ ತಾತ, ವಿಶೇಷವಾಗಿ ಗುರು ಹಾಗೂ ಸ್ವಾಮಿ. ಆದ್ದರಿಂದ ನನ್ನಿಂದ ನೀವು ಅದನ್ನು ಪಡೆಯಲು ಅರ್ಹರು.

ಏ: ೧) ಸಮರ್ಪಣೆಯ ಕಾರ್ಯ ಪಾಂಡವರು ಮಾಡಿದ್ದರೆ, ಅದಕ್ಕೆ ಫಲ ನೀಡುವ ಕಾರ್ಯ ಶ್ರೀವೇದವ್ಯಾಸರು ಮಾಡುತ್ತಿರುವರು. ಆ ಮೂಲಕ ''ಫಲಮತ ಉಪಪತ್ತೇಃ'' ಎಂಬ ಸೂತ್ರೋಕ್ತ ರೀತಿಯಂತೆ ಸಮಸ್ತ ಕರ್ಮ ಫಲದಾತೃವಾದ ಶ್ರೀಹರಿಯೇ ತಾವು ಎಂಬುದನ್ನು ಸೂಚಿಸಿದರು. ಫಲ ರೂಪವಾಗಿ ನೀಡುತ್ತಿರುವುದರಿಂದ ಅದು ದತ್ತಾಪಹಾರದೋಷಕ್ಕೆ ಕಾರಣವಾಗದು ಎಂದರ್ಥ.

೨) ತಾವು ಹಾಗೆ ಫಲ ನೀಡುವುದು ಪಿತಾಮಹ, ಗುರು ಮತ್ತು ಸ್ವಾಮಿ ಎಂಬ ಮೂರು ಕಾರಣದಿಂದ.

೩) ದೊಡ್ಡವರಿಗೆ ಕಾಣಿಕೆ ನೀಡಿದಾಗ ಅವರು ನಾವು ನೀಡಿದ ಕಾಣಿಕೆಯಲ್ಲಿನ ಫಲವನ್ನು ನಮಗೇ ನೀಡಿ ಅನುಗ್ರಹಿಸುವ ಪದ್ಧತಿಗೆ ಶ್ರೀವೇದವ್ಯಾಸರ ಈ ಕಾರ್ಯ ಮೂಲವಾಯಿತೆಂದು ತಿಳಿಯಬಹುದು. ಅದು ದತ್ತಾಪಹರಣವಾಗದೇ ಫಲ ಎನ್ನಿಸುವುದು ಸರ್ವವಿದಿತ.

೪) ಹಾಗೆ ಫಲ ನೀಡುವ ಹಕ್ಕು ತಾತ, ಗುರು ಹಾಗೂ ಸ್ವಾಮಿಗೆ. ಮೂರೂ ಆಗಿರುವ ಶ್ರೀವ್ಯಾಸರಿಗೆ ಆ ಫಲ ನೀಡುವ ಅಧಿಕಾರ ಅತ್ಯಂತ ಸಮುಚಿತ ಎಂದೂ ಅರ್ಥ.

ಇತೀರಿತಾಸ್ತೇ ಪ್ರತಿಪದ್ಯ ರಾಜ್ಯಂ
ದದುರ್ಹಿರಣ್ಯಂ ನಿಖಿಲಂ ಚ ತಸ್ಮೈ ।
ವಿಭಜ್ಯ ವಿಪ್ರಾನ್ ಸ ನಿಜಂ ತು ಭಾಗ-
ಮದಾತ್ ಪೃಥಾಯೈ ನಿಖಿಲಂ ಪ್ರಸನ್ನಃ ॥ ೧೫೨ ॥

---

೧೫೦. ದ್ವೈಪಾಯನಸ್ತಥಾ ಕೃಷ್ಣಃ ಪುನರೇವ ಯುಧಿಷ್ಠಿರಮ್ ।
ಪ್ರೋವಾಚ ಮಧ್ಯೇ ವಿಪ್ರಾಣಾಮಿದಂ ಸಂಪೂಜಯನ್ ಮುನಿಃ ॥
ದತ್ತೈಷಾ ಭವತಾ ಮಹ್ಯಂ ತಾಂ ತೇ ಪ್ರತಿದದಾಮ್ಯಹಮ್ ।
ಹಿರಣ್ಯಂ ದೀಯತಾಮೇಭ್ಯೋ ಬ್ರಾಹ್ಮಣೇಭ್ಯೋ ಧರಾऽಸ್ತು ತೇ ॥ – ಭಾರತ (ಆಶ್ವಮೇಧಿಕ. ೮೯/೧೭)

೧೫೧. ಅಹಂ ಯತೋ ವಃ ಪಿತಾಮಹಃ ವಿಶೇಷತೋ ಗುರುಃ ಪತಿಶ್ಚ ಅತೋ ವಃ ಪಿತಾಮಹತ್ವಾತ್ ಗುರುತ್ವಾತ್ ಪತಿತ್ವಾಚ್ಚ ತಥಾ ''ಪ್ರಯಚ್ಛಂತಿ ತಥಾ ರಾಜ್ಯಂ ಪ್ರೀತಾ ನೃಣಾಂ ಪಿತಾಮಹಾಃ'' ಇತಿ ಪಿತಾಮಹಾತ್ ಪೌತ್ರಾಣಾಂ ರಾಜ್ಯಗ್ರಹಣಯೋಗ್ಯತಾಪ್ರತಿಪಾದಕಶ್ರುತೇಶ್ಚ ''ಗುರೋರ್ಧನಂ ಶಿಷ್ಯೋ ಗೃಹ್ಣೀಯಾತ್'' ಇತಿ ಗುರುಧನಸ್ಯ ಶಿಷ್ಯಾಣಾಂ ಗ್ರಹಣಯೋಗ್ಯತಾಪ್ರತಿಪಾದಕನ್ಯಾಯಾತ್। ''ಪತ್ಯುರ್ಧನಂ ಭೃತ್ಯೋ ಗೃಹ್ಣೀಯಾತ್'' ಇತಿ ನ್ಯಾಯಾಚ್ಚ। ಮತ್ = ಮತ್ತಃ ಅರ್ಹಥ= ರಾಜ್ಯಗ್ರಹಣಮರ್ಹಥ ॥ – (ವಾ.)

ಅ: ವೇದವ್ಯಾಸರು ಹೀಗೆನ್ನಲು ಪಾಂಡವರು ರಾಜ್ಯವನ್ನು ಸ್ವೀಕರಿಸಿ ಸಕಲ ಸುವರ್ಣವನ್ನೂ ಅವರಿಗೆ ಒಪ್ಪಿಸಿದರು. ಅವರು ಅದನ್ನು ವಿಪ್ರರಿಗೆ ಹಂಚಿದರು; ಮತ್ತು ತಮ್ಮ ಭಾಗವನ್ನೆಲ್ಲ ಪ್ರಸನ್ನರಾಗಿ ಕುಂತಿಗೆ ನೀಡಿದರು.

ವಿ: ೧) ಯಜ್ಞದಲ್ಲಿ ಪಾಲ್ಗೊಂಡ ವೇದವ್ಯಾಸರೇ ಸಕಲಕ್ಕೂ ಒಡೆಯರು. ಆದರೂ, ಲೋಕದೃಷ್ಟಿಯಲ್ಲಿ ತಮಗೆ ಸಲ್ಲಬೇಕಾದ ಪಾಲನ್ನು ಮಾತ್ರ ತೆಗೆದುಕೊಂಡಂತೆ ಮಾಡಿ ಅದನ್ನೂ ಸಹ ತಾವಿಟ್ಟುಕೊಳ್ಳದೆ ಸೊಸೆಯಾದ ಕುಂತಿಗೆ ಅನುಗ್ರಹಿಸಿದರು.

೨) ಇದರಿಂದ ಸೊಸೆಗೆ ಉಚಿತವಾದ ದ್ರವ್ಯಾದಿಗಳನ್ನು ನೀಡಿ ಸಂರಕ್ಷಿಸುವುದು ಮಾವನ ಕರ್ತವ್ಯ ಎಂಬ ಪ್ರಮೇಯವನ್ನೂ ಸೂಚಿಸಿದರು. ಕುಂತಿ ರಾಜಮಾತೆಯೇ ಆದರೂ ವಿಶೇಷವಾಗಿ ತಾನು ಬಯಸುವ ಪುಣ್ಯಕಾರ್ಯಗಳಿಗೆ ತನ್ನದೇ ಹಣ ಹೊಂದಿರುವುದು ಉಚಿತ ಎಂದು ವೇದವ್ಯಾಸರು ಹಾಗೆ ಮಾಡಿದರೆಂದು ತಿಳಿಯಬೇಕು. ಪ್ರತ್ಯೇಕಸ್ತ್ರೀಧನ ಪರಿಕಲ್ಪನೆ ಇಲ್ಲಿರುವುದು ಗಮನಾರ್ಹ.

ಸಭಾರ್ಯಕಾಣಾಂ ವರರತ್ನಭೂಷಣಾ-
ನ್ಯಶೇಷತಃ ಪುತ್ರಭುವಾಂ ಪ್ರದಾಯ ।
ಪೃಥಕ್ ಪೃಥಗ್ಯೋಗ್ಯವರಾಂಸ್ತಥೈಭ್ಯಃ
ಪ್ರಾದಾತ್ ಪ್ರಭುಸ್ತೇ ಮುದಿತಾಃ ಪ್ರಣೇಮುಃ ॥ ೧೫೩ ॥

ಅ: ಸಪತ್ನೀಕರಾದ ಪಾಂಡವರಿಗೆ ಪ್ರಭು ಶ್ರೀವೇದವ್ಯಾಸರು ಶ್ರೇಷ್ಠವಾದ ರತ್ನಾಭರಣಗಳನ್ನು ಸಮಗ್ರವಾಗಿ ನೀಡಿ ಅವರಿಗೆಲ್ಲ ಪ್ರತ್ಯೇಕ ಪ್ರತ್ಯೇಕವಾಗಿ ಯೋಗ್ಯವಾದ ವರಗಳನ್ನು ನೀಡಿದರು. ಪಾಂಡವರು ಆನಂದದಿಂದ ಅವರಿಗೆ ನಮಸ್ಕರಿಸಿದರು.

---

೧೫೨. ಶ್ವಶುರಾತ್ ಸ್ನುಷಾಯಾ ಅಪಿ ವಿತ್ತಗ್ರಹಣಯೋಗ್ಯತಾಯಾ ದರ್ಶನಾತ್। ''ನಿಜಂ ತು ಭಾಗಂ ನಿಖಿಲಂ ಪೃಥಾಯಾ ಅದಾತ್'' ಇತ್ಯುಕ್ತಮ್। ತುಶಬ್ದೇನ ಪತಿರಹಿತಾಯಾಸ್ತವ ವಿಪ್ರಪೂಜಾದಿಕಾರ್ಯವಿಶೇಷಾರ್ಥಂ ತ್ವಮಿದಂ ಗೃಹಾಣೇತಿ ಸೂಚಯತಿ ॥ – (ವಾ.)

೧೫೨. ಪ್ರತಿಗೃಹ್ಯ ಚ ತದ್ರನಂ ಕೃಷ್ಣದ್ವೈಪಾಯನೋ ಮುನಿಃ ।
ಋತ್ವಿಗ್ಭ್ಯಃ ಪ್ರದದೌ ವಿದ್ವಾಂಶ್ಚತುರ್ಧಾ ವ್ಯಭಜಂಶ್ಚತೇ ॥ – ಭಾರತ (ಆಶ್ವಮೇಧಿಕ. ೨೧/೨೬)

೧೫೨. ಸ್ವಮಂಶಂ ಭಗವಾನ್ ವ್ಯಾಸಃ ಕುಂತ್ಯೈ ಸಾಕ್ಷಾದ್ಧಿಮಾನತಃ ।
ಪ್ರದದೌ ತಸ್ಯ ಮಹತೋ ಹಿರಣ್ಯಸ್ಯ ಮಹಾದ್ಯುತೇಃ ।
ಶ್ವಶುರಾತ್ ಪ್ರೀತಿದಾಯಂ ತಂ ಪ್ರಾಪ್ಯ ಸಾ ಪ್ರೀತಮಾನಸಾ ।
ಚಕಾರ ಪುಣ್ಯಕಂ ತೇನ ಸುಮಹತ್ ಸಂಘಶಃ ಪೃಥಾ ॥ – ಭಾರತ (ಆಶ್ವಮೇಧಿಕ. ೮೯/೨೯)

ಬಹುಸುವರ್ಣಕವಾದ ಅಶ್ವಮೇಧ

ತದ್ಯಜ್ಞಪಂಚಕಮಜಸ್ರಗುಣಾಂ ಸ ಏಭ್ಯಃ
ಸದ್ದಕ್ಷಿಣಾಂ ಕ್ರತುಪತಿರ್ನಿಖಿಲಾಮವಾಪ್ಯ ।
ಚಕ್ರೇ ಽಶ್ವಮೇಧತ್ರಯಮೇಕಮೇಕಂ
ತೇಷಾಂ ಹರಿರ್ಬಹುಸುವರ್ಣಕನಾಮಧೇಯಮ್ ॥ ೧೫೪ ॥

ಅ: ಶ್ರೀವೇದವ್ಯಾಸರು ಉತ್ತಮ ದಕ್ಷಿಣೆಗಳಿಂದ ಕೂಡಿದ ಆ ಐದು ಯಜ್ಞಗಳನ್ನು ಅವರಿಗೆ ಉತ್ತಮ ದಕ್ಷಿಣೆಗಳಿಂದ ಕೂಡಿದ ಮೂರ್ಮಡಿ ಯಜ್ಞವನ್ನಾಗಿಸಿ ಆ ಮೂರು ಅಶ್ವಮೇಧಗಳಲ್ಲಿ ಒಂದೊಂದನ್ನೂ ಸಹ ಬಹುಸುವರ್ಣಕ ಎಂಬ ಯಜ್ಞವನ್ನಾಗಿ ಮಾಡಿದರು.

ವಿ: ೧) ಯಜ್ಞಕ್ಕೆ ನಿಯಮದಂತೆ ವಿಹಿತವಾದ ದಕ್ಷಿಣೆಯನ್ನು ಮಾತ್ರ ಕೊಡದೇ ಅದಕ್ಕಿಂತ ತುಂಬ ಹೆಚ್ಚಿನ ದಕ್ಷಿಣೆಯನ್ನು ನೀಡಿದ್ದರಿಂದ ಆ ಯಾಗಕ್ಕೆ **ಬಹುಸುವರ್ಣಕ** ಎಂಬ ಹೆಸರು ಉಂಟಾಯಿತು ಎಂದರ್ಥ.

೨) ಒಂದು ಸತ್ಕಾರ್ಯದಲ್ಲಿ ವಿಹಿತ ಪ್ರಮಾಣಕ್ಕಿಂತ ಹೆಚ್ಚಿನ ದಕ್ಷಿಣಾದಿಗಳನ್ನು ನೀಡಿದಲ್ಲಿ ಆ ಕಾರ್ಯ ಬಹುಶ್ರೇಷ್ಠ ಕಾರ್ಯವೆನ್ನಿಸುವುದು ಎಂಬುದು ತಾತ್ಪರ್ಯ. ಪಾಂಡವರ ಯಾಗ ಆ ಕಾರಣದಿಂದಲೂ ಸಹ ಒಂದೊಂದು ಮುಮ್ಮಡಿಯಾಯಿತು ಎಂಬುದು ಇಲ್ಲಿಯ ವಿಶೇಷ.

---

೧೫೪. ತ್ರಿವರ್ಷಾತ್ಕೈಕೈಕಾಶ್ವಮೇಧಸ್ಯ ಏಕೈಕಸ್ಮಿನ್ವರ್ಷೇ ಏಕೈಕಾಶ್ವೀನಾಹುತಿದಾನಾತ್ ಅಶ್ವಮೇಧತ್ರಾ ಕೃತ್ಕತ್ವಮಸ್ತೀತಿ ಭಾವೇನ ಅಶ್ವಮೇಧತ್ರಯಮೇಕಮೇಕಮಿತ್ಯುಕ್ತಮ್। ಅಶ್ವಮೇಧತ್ರಯಂ ಏಕಮೇಕಮಶ್ವಮೇಧಂ ಕೃತ್ವಾ ತೇಷಾಂ= ಪಾಂಡವಾನಾಂ ಚಕ್ರೇ = ಭಾಗಂ ಚಕ್ರ ಇತಿ ಯೋಜನಾ। ಪ್ರಾಧಾನ್ಯವಿವಕ್ಷಯಾ ಽಶ್ವಮೇಧಪಂಚಕತ್ವಂ ಅವಾಂತರ-ಭಾಗಪರ್ಯಾಲೋಚನಯೈಕೈಕಾಶ್ವಮೇಧಸ್ಯ ತ್ರ ಕೃಶ್ವಮೇಧತ್ವಮಪ್ಯಸ್ತಿ। ಅತೋ ಽಶ್ವಮೇಧಾನಾಂ ಪಂಚತ್ವಂ ಪಂಚದಶತ್ವಂ ಚ ವಿವಕ್ಷಾಭೇದೇನ ಘಟತ ಇತಿ ಭಾವಃ ॥ – (ವಾ.)

೧೫೪. ಅಹೀನೋ ನಾಮ ರಾಜೇಂದ್ರಂ ಕ್ರತುಸ್ತೇ ಽಯಂ ಚ ಕಲ್ಪತಾಮ್ ।
ಬಹುತ್ವಾತ್ ಕಾಂಚನಾಖ್ಯಸ್ಯ ಖ್ಯಾತೋ ಬಹುಸುವರ್ಣಕಃ ॥
ಏವಮತ್ರ ಮಹಾರಾಜ ದಕ್ಷಿಣಾಂ ತ್ರಿಗುಣಾಂ ಕುರು ।
ತ್ರಿತ್ವಂ ವ್ರಜತು ತೇ ರಾಜನ್ ಬ್ರಾಹ್ಮಣಾ ಹ್ಯತ್ರ ಕಾರಣಮ್ ॥
ತ್ರೀನಶ್ವಮೇಧಾನತ್ರ ತ್ವಂ ಸಂಪ್ರಾಪ್ಯ ಬಹುದಕ್ಷಿಣಾನ್ ।
ಜ್ಞಾತಿವಧ್ಯಾಕೃತಂ ಪಾಪಂ ಪ್ರಹಾಸ್ಯಸಿ ನರಾಧಿಪ ॥ (ಯುಧಿಷ್ಠಿರನನ್ನು ಕುರಿತು ಶ್ರೀವ್ಯಾಸರ ವಚನ)
– ಭಾರತ (ಆಶ್ವಮೇಧಿಕ. ೮೮/೧೩-೧೫)

ತೇನ ಸಂಭೃತಸಂಭಾರೋ ಧರ್ಮಪುತ್ರೋ ಯುಧಿಷ್ಠಿರಃ ।
ವಾಜಿಮೇಧೈಸ್ತ್ರಿಭೀ ರಾಜನ್ ಯಜ್ಞೇಶಮಯಜದ್ಧರಿಮ್ ॥ – ಭಾಗವತ (೧/೧೨/೩೪)

೩) ಹೀಗೆ ಹದಿನೈದು ವರ್ಷಗಳ ಕಾಲ ನಡೆದ ಐದು ಅಶ್ವಮೇಧ ಯಜ್ಞ ಒಟ್ಟು ಹದಿನೈದು ಅಶ್ವಮೇಧ ಯಾಗಗಳಿಗೆ ಸಮವಾಯಿತು ಎಂದು ಭಾವ.

ದೈತ್ಯ ಮುಂಗುಸಿಯ ಕಥೆ

ಸಕೃಷ್ಣೇಷ್ವಥ ಪಾರ್ಥೇಷು ಸುಸ್ನಾತಾವಭೃಥೇಷ್ವಲಮ್ ।
ಪಂಚೇಂದ್ರವದ್ವಿರಾಜತ್ಸು ಸ್ತೂಯಮಾನೇಷ್ವಪೀಶ್ವರೈಃ ॥ ೧೫೫ ॥

ಅ: ಪಾಂಡವರು ಕೃಷ್ಣಸಮೇತರಾಗಿ ಚೆನ್ನಾಗಿ ಅವಭೃಥಸ್ನಾನವನ್ನು ಪೂರೈಸಿ ಐವರು ಇಂದ್ರರಂತೆ ಕಂಗೊಳಿಸಿದರು. ದೇವತೆಗಳು ಅವರನ್ನು ಕೊಂಡಾಡಿದರು.

ವಿ: ೧) ಯಜ್ಞಪೂರ್ತಿಯ ವಿಧಿಯಾದ ಅವಭೃಥಸ್ನಾನವನ್ನು ಕೃಷ್ಣನೊಂದಿಗೇ ಪೂರೈಸಿದ್ದು ಪಾಂಡವರ ಮತ್ತೊಂದು ಹಿರಿಮೆಯಾಯಿತು. ಯಾಗ ಪೂರೈಸಿದ ಅವರು ಇಂದ್ರರಂತೆ ಕಂಗೊಳಿಸುತ್ತಿದ್ದರು ಎಂಬುದು ಇಲ್ಲಿಯ ವಿಶೇಷ ವರ್ಣನೆ.

೨) ಮೂಲತಃ ಆ ಐವರೂ ಇಂದ್ರರೇ ಆಗಿದ್ದವರು ಎಂಬ ವಿವರ ಈಗಾಗಲೇ ಬಂದಿದೆ. (೧೨/೧೩೪, ೧೩೫; ೧೪/೧೩೬; ೧೯/೧೫೪).

ಯಮನಿಗೆ ಆತಿಥ್ಯ ನೀಡಿದ ವಿಪ್ರಕುಟುಂಬ

ಸ್ತೂಯಮಾನೇ ಚ ತದ್ಯಜ್ಞೇ ಕ್ರೋಧೋ ನಕುಲತಾಂ ಗತಃ ।
ಕೃತ್ವೋಗ್ರಗರ್ಜನಂ ಯಜ್ಞಂ ತಾಂಶ್ಚ ಯಜ್ಞಕೃತೋಽಖಿಲಾನ್ ॥ ೧೫೬ ॥

ಗರ್ಹಯನ್ನೂಚಿವಾನಿತ್ಥಂ ಭಾರ್ಯಾಪುತ್ರಸ್ನುಷಾಯುತಃ ।
ಸಕ್ತುಪ್ರಸ್ಥಮದಾದ್ವಿಪ್ರ ಉಂಛವೃತ್ತಿಃ ಸುಭಕ್ತಿತಃ ॥ ೧೫೭ ॥

---

೧೫೬. ಕ್ರೋಧೋ ನಕುಲತಾಂ ಗತ ಇತ್ಯತ್ರ ಕ್ರೋಧಃ = ಕ್ರೋಧಾಭಿಮಾನೀ ದೈತ್ಯಃ ॥ – (ವಾ.)

೧೫೬. ನೀಲಾಕ್ಷಸ್ತತ್ರ ನಕುಲೋ ರುಕ್ಮಪಾರ್ಶ್ವಸ್ತಥಾऽನಘ ।
ವಜ್ರಾಶನಿಸಮಂ ನಾದಮಮುಂಚದ್ ವಸುಧಾಧಿಪ ॥
ಮಾನುಷಂ ವಚನಂ ಪ್ರಾಹ ಧೃಷ್ಟೋ ಬಲಶಯೋ ಮಹಾನ್ ।
ಸಕ್ತುಪ್ರಸ್ಥೇನ ವೋ ನಾಯಂ ಯಜ್ಞಸ್ತುಲ್ಯೋ ನರಾಧಿಪಾಃ ॥
ಊಂಛವೃತ್ತೇರ್ವದಾನ್ಯಸ್ಯ ಕುರುಕ್ಷೇತ್ರನಿವಾಸಿನಃ ॥ – ಭಾರತ (ಆಶ್ವಮೇಧಿಕ. ೯೦/೫-೭)

೧೫೭. ಪ್ರಸ್ಥಪರಿಮಿತಸಕ್ತುಮಿತ್ಯರ್ಥಃ । – (ಜ.)

ಧರ್ಮಾಯಾತಿಥಯೇ ತಸ್ಯ ಕಲಾಂ ನಾರ್ಹತಿ ಷೋಡಶೀಮ್ ।
ಯಜ್ಞೋಽಯಮಿತಿ ಹೇತುಂ ಚ ವಿಪ್ರೈಃ ಪೃಷ್ಟೇಽಭ್ಯಭಾಷತ ॥ ೧೫೮ ॥

ಅ: ಯಜ್ಞವು ಹಾಗೆ ಪ್ರಶಂಸಿಸಲ್ಪಡುತ್ತಿದ್ದಾಗ ಕ್ರೋಧಾಭಿಮಾನಿಯಾದ ಒಬ್ಬ ಅಸುರ ಮುಂಗುಸಿಯ ರೂಪವನ್ನು ತಳೆದು ಭಯಂಕರವಾಗಿ ಘರ್ಜಿಸಿ ಆ ಯಜ್ಞವನ್ನು, ಯಜ್ಞ ಮಾಡಿದ ಅವರೆಲ್ಲರನ್ನೂ ನಿಂದಿಸುತ್ತ ಹೀಗೆ ಹೇಳತೊಡಗಿದ ''ಹೆಂಡತಿ, ಮಗ ಹಾಗೂ ಸೊಸೆಯೊಂದಿಗೆ ಕೂಡಿದ ಒಬ್ಬ ವಿಪ್ರ ಉಂಛ ವೃತ್ತಿಯಲ್ಲಿ ಜೀವಿಸುತ್ತಾ ಅತ್ಯಂತ ಭಕ್ತಿಯಿಂದ ಸಕ್ತುಪ್ರಸ್ಥವನ್ನು ನೀಡಿದ. ಅತಿಥಿ ರೂಪದಲ್ಲಿ ಬಂದಿದ್ದ ಯಮನಿಗೆ ಅವನು ನೀಡಿದ, ಆ ಪುಣ್ಯಕ್ಕೆ ಈ ಯಜ್ಞ ಹದಿನಾರನೇ ಒಂದಂಶಕ್ಕೂ ಸಾಟಿಯಾಗದು ಎಂದು ನುಡಿದ. ಮುನಿಗಳು ಅದಕ್ಕೆ ಕಾರಣವನ್ನು ಕೇಳಲು ಹೇಳತೊಡಗಿದ.

ವಿ: ಕುರುಕ್ಷೇತ್ರದಲ್ಲಿ ನೆಲೆಸಿದ್ದ ಒಬ್ಬ ಬ್ರಾಹ್ಮಣನ ಕಥೆಯನ್ನು ಆ ಮುಂಗುಸಿ ರೂಪದ ಅಸುರ ಸಭೆಯಲ್ಲಿ ಹೇಳತೊಡಗಿದನು. ಬ್ರಾಹ್ಮಣನೊಬ್ಬ ಉಂಛ ವೃತ್ತಿಯಲ್ಲಿ ಬದುಕುತ್ತಾ ಒಮ್ಮೆ ಭೀಕರ ಬರಗಾಲದ ಸಮಯದಲ್ಲಿ ಅನೇಕ ದಿನಗಳವರೆಗೆ ಏನೂ ದೊರೆಯದವನಾಗಿದ್ದ. ಕೊನೆಗೆ ಒಬ್ಬರಿಗಾಗುವಷ್ಟು ಗಂಜಿ ಲಭಿಸಿತು. ಅದನ್ನೇ ಅವನು ನೈವೇದ್ಯ ವೈಶ್ವದೇವಗಳನ್ನು ಪೂರೈಸಿ ಹೆಂಡತಿ, ಮಗ ಹಾಗೂ ಸೊಸೆಗೆ ಹಂಚಿ ತಿನ್ನಲು ಕುಳಿತಾಗ ಒಬ್ಬ ಅತಿಥಿ ಆಗಮಿಸಿದ. ಅವನ ಭೋಜನಕ್ಕೆಂದು ಅವರು ಒಬ್ಬೊಬ್ಬರಾಗಿ ತಮ್ಮ ಪಾಲನ್ನು ನೀಡುತ್ತಾ ಹೋದರು ಎಂದರ್ಥ.

ಅತಿಥಿಯ ಪಾದೋದಕದ ಮಹಿಮೆ – ತಮಸ್ಸಿಗೆ ತೆರಳಿದ ಮುಂಗುಸಿ

ಅತಿಥೇಸ್ತಸ್ಯ ಪಾದೋದಕ್ಲಿನ್ನಪಾರ್ಶ್ವಃ ಹಿರಣ್ಮಯಃ ।
ಏಕೋ ಮಮಾಭೂದಪರಃ ಸರ್ವತೀರ್ಥಾದಿಕೇಷ್ವಪಿ ॥ ೧೫೯ ॥

ಮಜ್ಜತೋಽವಭೃಥೇಷ್ವದ್ಧಾ ಯಜ್ಞಾನಾಮತ್ರ ಚಾದರಾತ್ ।
ನಾಭೂದಿತ್ಯಥ ತತ್ತತ್ತ್ವವೇದಿಭಿರ್ಮುನಿಪುಂಗವೈಃ ॥ ೧೬೦ ॥

ಕೃಷ್ಣೇನ ಚ ತಮೋಽಂಧಂ ತಂ ಪ್ರಾಪಯದ್ಭಿಃ ಸ್ಮಿತೇ ಕೃತೇ ।
ಅದರ್ಶನಂ ಜಗಾಮಾಶು ತಮಃ ಪ್ರಾಪ ಚ ಕಾಲತಃ ।
ತದರ್ಥಮೇವ ಹೈರಣ್ಯಃ ಪಾರ್ಶ್ವಸ್ತಸ್ಯಾಭವತ್ ಪುರಾ ॥ ೧೬೧ ॥

ಅ: ಆ ಅತಿಥಿಯ ಪಾದೋದಕದಿಂದ ತೊಯ್ದ ನನ್ನ ಒಂದು ಪಕ್ಕ ಚಿನ್ನದ್ದಾಯಿತು, (೧೬೩) ಇನ್ನೊಂದು ಪಕ್ಕ ಸಕಲ ತೀರ್ಥಾದಿಗಳಲ್ಲಿ ಮಿಂದರೂ, ಯಜ್ಞಗಳ ಅವಭೃತಗಳಲ್ಲಿ ಆದರದಿಂದ ಸ್ನಾನ ಮಾಡಿದರೂ ಚಿನ್ನದ್ದಾಗಲಿಲ್ಲ. ಆಗ ಅದರ ತತ್ವವನ್ನು ತಿಳಿದಿದ್ದ ಮುನಿಶ್ರೇಷ್ಠರುಗಳು ಮತ್ತು ಕೃಷ್ಣ ಅವನನ್ನು ಅಂಧಂತಮಸ್ಸಿಗೆ ಕಳಿಸಲೆಂದು ನಕ್ಕರು. ಕೂಡಲೇ ಅವನು ಕಣ್ಮರೆಯಾದ. ಮುಂದೆ ಕ್ರಮವಾಗಿ ಅಂಧಂತಮಸ್ಸನ್ನು ಸೇರಿದ. ಅದಕ್ಕೆಂದೇ ಹಿಂದೆ ಅದರ ಒಂದು ಪಕ್ಕ ಚಿನ್ನದ್ದಾಗಿತ್ತು.

ಬಿ: ೧) ಅತಿಥಿಗೆ ಹಾಗೆ ನೀಡಿದ ಮೇಲೆ ಅವನು ತನ್ನ ರೂಪವನ್ನು ತೋರಿ ತಾನೇ ಯಮನೆಂದು ತಿಳಿಸಿ ಅವರ ಧರ್ಮಪ್ರಜ್ಞೆಯನ್ನು ಬಹುವಾಗಿ ಶ್ಲಾಘಿಸಿ ಅವರನ್ನೆಲ್ಲ ಸ್ವರ್ಗಕ್ಕೆ ಕಳಿಸಿದ.

ಇತ್ಯುಕ್ತವಾಕ್ಯೇ ಧರ್ಮೇ ತು ಯಾನಮಾರುಹ್ಯ ಸ ದ್ವಿಜಃ ।
ಸದಾರಃ ಸಸುತಶ್ಚೈವ ಸಸ್ನುಷಶ್ಚ ದಿವಂಗತಃ ॥ – ಭಾರತ (ಆಶ್ವ. ೯೦/೧೦೭, ೧೦೮)

೨) ಬಳಿಕ ಈ ಮುಂಗುಸಿ ಆ ಅತಿಥಿ ರೂಪದ ಯಮನ ಪಾದ ತೊಳೆದ ಜಲದಲ್ಲಿ ಹೊರಳಿದಾಗ ಆ ಪಕ್ಕ ಚಿನ್ನದ್ದಾಯಿತು.

---

೧೫೮. ತಸ್ಯ ಕಲಾಮಿತ್ಯತ್ರ ತಸ್ಯ = ಸಕೃತ್ಪ್ರಸ್ಥದಾನಸ್ಯ ॥ – (ವಾ.)

೧೬೦. ತತ್ತತ್ತ್ವವೇದಿಭಿರಿತ್ಯತ್ರ ತತ್ = ನಕುಲವಾಕ್ಯಮ್ ॥ – (ವಾ.)

೧೬೧. ತಮೋಽಂಧಂ ಪ್ರಾಪಯದ್ಧಿಃ ಸ್ಮೃತೇ ಕೃತೇ ಇತಿ ವದತಾ ಅತ್ರಾದೂಷಯಿತ್ವಾ ಮಂದಸ್ಮಿತಮಾತ್ರಕರಣಾತ್ ತೇಷಾಮಪೀದಮನುಮತಮೇವಾಸೀದಿತಿ ಬೋಧಯಿತ್ವಾ ತದ್ಭವಿ ಯಜ್ಞನಿಂದನಂ ದೃಢೀಕೃತ್ಯ ತಮಃ ಪ್ರಾಪಯಾಮಾಸುರಿತಿ ಭಾವಃ ॥ – (ವಾ.)

೧೬೧. ತದರ್ಥಂ= ತಸ್ಯ ಮಿಥ್ಯಾಜ್ಞಾನದೃಢೀಕರಣಾರ್ಥಮೇಕಃ ಪಾರ್ಶ್ವಃ ಹೈರಣ್ಯಃ= ಹಿರಣ್ಮಯಃ ಅಭವತ್= ತಾತ್ಕಾಲಿಕಸೃಷ್ಟಿಕುಶಲದೇವಾನಾಂ ಚೇಷ್ಟಯಾऽಭವತ್। ನತು ವಿಪ್ರಪಾದೋದಕಸತ್ತ್ವೇನ। ತಥಾಸತಿ ಅನ್ಯಸ್ಯಾಪಿ ಪಾರ್ಶ್ವಸ್ಯ ಸೌವರ್ಣತ್ವಂ ಸ್ಯಾದಿತ್ಯಾಶಯಾ ವಿಪ್ರಪಾದೋದಕೇ ಬಹುಶಃ ಪರಿವೇಷ್ಟನಂ ಕುರ್ವತಃ ತಸ್ಯಾನ್ಯೋऽಪಿ ಪಾರ್ಶ್ವಃ ಕುತೋ ಹೈರಣ್ಯೋ ನಾಭೂತ್। ಕುತೋ ವಾ ಪಾದಪ್ರಕ್ಷಾಲನೋದಕಕ್ಲಿನ್ನಾ ಭೂಮಿಃ ಹಿರಣ್ಮಯೀ ನಾಭೂತ್। ಕುತಶ್ಚಾತಿಥಿಭೂತಬ್ರಾಹ್ಮಣಪಾದೌ ಪ್ರಕ್ಷಾಲಯತಃ ಉಂಛವೃತ್ತೇರ್ಬ್ರಾಹ್ಮಣಸ್ಯ ಹಸ್ತೌ ಸೌವರ್ಣೌ ನಾಭೂತಾಮ್। ಕಿಂ ಬಹುನಾ। ಸಾಕ್ಷಾದ್ವಿಷ್ಣೋರ್ಬ್ರಹ್ಮಣಾ ಪ್ರಕ್ಷಾಲಿತಪಾದೋದಕಮತಿಸಮರ್ಥೇನ ಶಿವೇನ ಭಕ್ತ್ಯಾ ಶಿರಸಿ ಧೃತಂ ನ ಪೌರಟಮಕರೋತ್। ಕಿಂ ತು ಶಿವಃ ಶಿವೋऽಭೂದಿತಿ ಸ್ಮೃತೇಃ ತಂ ಶಿವಂ ನಿಷ್ಪಾಪಂ ಕೃತ್ವಾ ಪರಮಶೋಭನಮೇವಾಕರೋತ್। ತದಾ ಕಿಂ ವಾಚ್ಯಮನ್ಯಪಾದೋದಕಸ್ಯ ಸುವರ್ಣೀಕರಣಶಕ್ತಿರ್ನಾಸ್ತೀತಿ। ಅಪಿ ಚಾತಿಥಿಭೂತಬ್ರಾಹ್ಮಣಪಾದಪ್ರಕ್ಷಾಲನೋದಕಸ್ಯೈವ ಸುವರ್ಣಕರಣಶಕ್ತಿ ಪ್ರತಿವರ್ಷಂ ಶ್ರಾದ್ಧಕರ್ತೃಣಾಂ ದಾರಿದ್ರ್ಯವಿಚ್ಛೇದಪ್ರಸಂಗಶ್ಚ ಅತೋ ಯತ್ಕಿಂಚಿದೇತತ್ ॥ – (ವಾ.)

೧೬೧. ತಸ್ಯ ನಕುಲಸ್ಯ ತದರ್ಥಮೇವ ಪಾಂಡವನಿಂದಾನಿಮಿತ್ತಕತಮಃಪಾತಾರ್ಥಮೇವ । ಪ್ರವೃತ್ತಸ್ಯೇಶ್ವರಸ್ಯ ಸಾಮರ್ಥ್ಯೇನ ತಸ್ಯ ನಕುಲಸ್ಯ ಪಾರ್ಶ್ವಃ ಹೈರಣ್ಯೋऽಭವತ್ ಪುರಾ ಕಲೇತಿ ॥ – (ಸ.)

ದಿವ್ಯಪುಷ್ಪವಿಮರ್ದಾಚ್ಚ ಸಾಧೋರ್ದಾನಲವೈಶ್ಚ ತೈಃ ।
ವಿಪ್ರಸ್ಯ ತಪಸಾ ತಸ್ಯ ಶಿರೋ ಮೇ ಕಾಂಚನೀಕೃತಮ್ ॥ – ಭಾರತ (ಆಶ್ವ. ೯೦/೧೧೦)

ಅಚ್ಚರಿಪಟ್ಟ ಅದು ತನ್ನ ಇನ್ನೊಂದು ಪಕ್ಕವನ್ನು ಚಿನ್ನದ್ದಾಗಿ ಮಾಡಿಸಿಕೊಳ್ಳಬೇಕೆಂದು ಸಕಲ ಪುಣ್ಯಕ್ಷೇತ್ರಗಳಲ್ಲೂ, ಬಗೆಬಗೆಯ ಯಜ್ಞಗಳ ಅವಭೃಥಗಳಲ್ಲೂ ಮಿಂದಿತು. ಆದರೆ, ಆ ಇನ್ನೊಂದು ಪಕ್ಕ ಚಿನ್ನದ್ದಾಗಲೇ ಇಲ್ಲ. ಬಳಿಕ ಪಾಂಡವರ ಯಜ್ಞ ಬಹಳ ಶ್ರೇಷ್ಠವಾದುದೆಂದು ಹೇಳಿದ್ದನ್ನು ಕೇಳಿ ಅಲ್ಲಿಗೂ ಬಂದು ಮಿಂದಿತು. ಆಗಲೂ ಅದು ಚಿನ್ನದ್ದಾಗಲಿಲ್ಲ. ಅದರಿಂದ ಅದು ಆ ಯಜ್ಞ ಆ ಬ್ರಾಹ್ಮಣ ಕುಟುಂಬ ಮಾಡಿದ ತ್ಯಾಗಕ್ಕೆ ಸ್ವಲ್ಪವೂ ಸಮವಲ್ಲ ಎಂದು ನಿಂದಿಸಿ ಮರೆಯಾಗಿಬಿಟ್ಟಿತು ಎಂಬುದು ಭಾರತದ ಕಥೆ.

೩) ಕೃಷ್ಣನು, ಮುನಿಗಳು ಅದನ್ನು ಕೇಳಿ ನಗಲು ಅವರಿಗೆ ಅದರ ಹಿನ್ನೆಲೆ ತಿಳಿದಿದ್ದುದೇ ಕಾರಣವಾಗಿತ್ತು, ಆ ಮುಂಗುಸಿಯ ಒಂದು ಪಕ್ಕ ಹಾಗೆ ಚಿನ್ನದ್ದಾದುದಕ್ಕೆ ಅತಿಥಿಯ ಪಾದೋದಕ ಕಾರಣವಾಗಿರಲಿಲ್ಲ, ಶಿವ ಧರಿಸಿದ ವಿಷ್ಣುಪಾದೋದಕವಾದ ಗಂಗೆ ಅವನ ತಲೆಯನ್ನೇನೂ ಚಿನ್ನವಾಗಿಸಿಲ್ಲವಷ್ಟೆ! ಆ ಅಸುರನಿಗೆ ದುರ್ಬುದ್ಧಿ ಹುಟ್ಟಲಿ ಎಂಬ ಕಾರಣದಿಂದ ದೇವತೆಗಳೇ ಹಾಗೆ ಅದನ್ನು ಚಿನ್ನದ್ದಾಗಿಸಿದ್ದರು. ಈ ರಹಸ್ಯವನ್ನು ಬಲ್ಲವರಾದ್ದರಿಂದ ಕೃಷ್ಣ ಮತ್ತು ಮುನಿಗಳು ನಸುನಕ್ಕರು ಎಂದರ್ಥ. ಹಾಗೆ ನಸುನಕ್ಕು ಅದರ ಅಭಿಪ್ರಾಯ ಸರಿಯೆಂಬ ಭಾವವನ್ನು ದೃಢಪಡಿಸಿದರು. ಈ ಬಗ್ಗೆ ಎವರ ಮುಂದೆ ಬಂದಿದೆ (ಶ್ಲೋ. ೧೬೩, ೧೬೪).

ಕೃಷ್ಣಸ್ಯ ಪಾಂಡವಾನಾಂ ಚ ಮಖಾದೇಶ್ಚ ಗುಣಾನ್ ಬಹೂನ್ ।
ವದಂತೋ ಭರ್ತ್ಸಯಾಂಚಕ್ರುಸ್ತನ್ಮತಜ್ಞಾ ಮಧುದ್ವಿಷಃ ॥ ೧೬೨ ॥

ಅ: ಕೃಷ್ಣನ ಅಭಿಪ್ರಾಯವನ್ನು ಅರಿತಿದ್ದ ಮುನಿಗಳು ಕೃಷ್ಣನ ಹಾಗೂ ಪಾಂಡವರ ಮತ್ತು ಯಜ್ಞಾದಿಗಳ ಬಹಳ ಗುಣಗಳನ್ನು ವರ್ಣಿಸುತ್ತಾ ಅದನ್ನು ನಿಂದಿಸಿದರು.

ದೈತ್ಯ ಮುಂಗುಸಿಯ ಹಿನ್ನೆಲೆ

ಶ್ರಾದ್ಧಾರ್ಥಂ ಹಿ ಪಯಃ ಪೂರ್ವಂ ಜಮದಗ್ನೇರದೂಷಯತ್ ।
ನಾಕುಲೇನೈವ ರೂಪೇಣ ಕ್ರೋಧಸ್ತಂ ಪಿತರೋಽಶಪನ್ ॥ ೧೬೩ ॥

---

೧೬೨. ತಂ ಮತಜ್ಞಾ ಇತಿ ಪಾಠೇ ಮಧುದ್ವಿಷೋ ಮತಜ್ಞಾಃ ... । – (ಜ.)

ಭವ ತ್ವಂ ನಕುಲಸ್ತಾವದ್ಯಾವದ್ಧರ್ಮಾದಿಕಾನ್ ಸುರಾನ್ ।
ಕ್ಷೇಪ್ಸ್ಯಸೀತಿ ತಮೋ ಘೋರಂ ಭೂಯಃ ಪಾಪೇನ ಯಾತ್ವಯಮ್ ।
ಇತ್ಯಭಿಪ್ರೇತ್ಯ ತೈಃ ಶಪ್ತಸ್ತಥಾ ಕೃತ್ವಾ ತಮೋಽಭ್ಯಯಾತ್ ॥ ೧೬೪ ॥

ಅ: ಹಿಂದೆ ಶ್ರಾದ್ಧಕ್ಕಾಗಿ ಇರಿಸಿದ್ದ ಜಮದಗ್ನಿಯ ಹಾಲನ್ನು ಆ ಕ್ರೋಧಾಭಿಮಾನಿಯಾದ ಅಸುರನು ಮುಂಗುಸಿರೂಪದಿಂದಲೇ ಎಂಜಲು ಮಾಡಿದ್ದ. ಅವನಿಗೆ ಪಿತೃದೇವತೆಗಳು ಶಾಪವಿತ್ತರು-''ನೀನು ಧರ್ಮರಾಜಾದಿ ದೇವತೆಗಳನ್ನು ನಿಂದಿಸುವವರೆಗೂ ಮುಂಗುಸಿಯಾಗಿಯೇ ಇರು'' ಎಂದು. ಆ ಪಾಪದಿಂದ ಅವನು ಘೋರವಾದ ತಮಸ್ಸನ್ನು ಹೊಂದಲಿ ಎಂಬ ಅಭಿಪ್ರಾಯದಿಂದ ಅವರು ಶಪಿಸಿದ್ದರು. ಅವನು ಹಾಗೆ ಮಾಡಿ ತಮಸ್ಸಿಗೆ ತೆರಳಿದ.

---

೧೬೩. ಪಯಃ ಪೂರ್ವಂ ಜಮದಗ್ನೇರದೂಷಯದಿತ್ಯತ್ರ ಅದೂಷಯತ್ =ಉಚ್ಛಿಷ್ಟಂ ಕೃತ್ವಾ ಅದೂಷಯದಿತ್ಯರ್ಥಃ ॥ – (ವಾ.)

೧೬೩. ಶ್ರಾದ್ಧಂ ಸಂಕಲ್ಪಯಾಮಾಸ ಜಮದಗ್ನಿಃ ಪುರಾ ಕಿಲ ।
ಹೋಮಧೇನುಸ್ತಮಾಗಾಚ್ಚ ಸ್ವಯಮೇವ ದುದೋಹ ತಾಮ್ ॥
ತತ್ ಪಯಃ ಸ್ಥಾಪಯಾಮಾಸ ನವೇ ಭಾಂಡೇ ದೃಢೇ ಶುಚೌ ।
ತಚ್ಚ ಕ್ರೋಧಸ್ವರೂಪೇಣ ಪಿಠರಂ ಧರ್ಮ ಆವಿಶತ್ ॥
ಜಿಜ್ಞಾಸುಸ್ತಮೃಷಿಶ್ರೇಷ್ಠಂ ಕಿಂ ಕುರ್ಯಾದ್ ವಿಪ್ರಿಯೇ ಕೃತೇ ।
ಇತಿ ಸಂಚಿತ್ಯ ಧರ್ಮಃ ಸ ಧರ್ಷಯಾಮಾಸ ತತ್ ಪಯಃ ॥
ಪಿತೄಣಾಮಭಿಷಂಗಾಚ್ಚ ನಕುಲತ್ವಮುಪಾಗತಃ ।
ಸ ತಾನ್ ಪ್ರಸಾದಯಾಮಾಸ ಶಾಪಸ್ಯಾಂತೋ ಭವೇದಿತಿ ॥
ತೈಶ್ಚಾಪ್ಯುಕ್ತಃ ಕ್ಷಿಪನ್ ಧರ್ಮಂ ಶಾಪಸ್ಯಾಂತಮವಾಪ್ಸ್ಯಸಿ ।
ತೈಶ್ಚೋಕ್ತೋ ಯಜ್ಞಯಾನ್ ದೇಶಾನ್ ಧರ್ಮಾರಣ್ಯಂ ತಥೈವ ಚ ।
ಜುಗುಪ್ಸಮಾನೋ ಧಾವನ್ ಸ ತಂ ಯಜ್ಞಂ ಸಮುಪಾಸದತ್ ॥
ಧರ್ಮಪುತ್ರಮಥಾಕ್ಷಿಪ್ಯ ಸಕ್ತುಪ್ರಸ್ಥೇನ ತೇನ ಸಃ ।
ಮುಕ್ತಃ ಶಾಪಾತ್ ತತಃ ಕ್ರೋಧೋ ಧರ್ಮೋ ಹ್ಯಾಸೀದ್ ಯುಧಿಷ್ಠಿರಃ ॥
– ಭಾರತ (ಆಶ್ವಮೇಧಿಕ. ೯೨/೪೧-೪೩, ೪೯-೫೨)

೧೬೪. ಭವ ತ್ವಂ ನಕುಲಸ್ತಾವದಿತ್ಯಸ್ಯ ಅಯಂ ಕ್ರೋಧನಾಮಕೋ ದೈತ್ಯಃ ॥ – (ವಾ.)

೧೬೪. ಭೂಯಃ ಪಾಪೇನ ಭೂಯಶ್ಚ ತತ್ ಪಾಪಂ ಚ ಭೂಯಃ ಪಾಪಮ್, ತೇನ ಪರಮವೈಷ್ಣವಪಾಂಡವೇಷು ದ್ವೇಷಾತ್ ತತ್ಕೃತಯಜ್ಞನಿಂದನಾಖ್ಯಮಹತ್ತರಪಾಪೇನೇತ್ಯರ್ಥಃ। ಅಂಧಂತಮಃ ಯಾತ್ವಿತ್ಯಭಿಪ್ರೇತ್ಯ ಯಾವದ್ಧರ್ಮಾದಿಕಾನ್ ಸುರಾನ್ ಕ್ಷೇಪ್ಸ್ಯಸಿ ತಾವತ್ತ್ವಂ ನಕುಲೋ ಭವೇತಿ ತೈಃ ಶಪ್ತಸ್ತಥಾ ಕೃತ್ವಾ ತಮೋಽಭ್ಯಗಾದಿತಿ ಯೋಜನಾ। ಪಯೋದೂಷಣಮಾತ್ರೇಣ ಅಂಧಂತಮಃಪ್ರಾಪ್ತ್ಯಯೋಗಾತ್ ದುರ್ಯೋನಿರೂಪಾ ನಕುಲತ್ವೇಽಚಿತಾ। ಪರಮವೈಷ್ಣವಪಾಂಡವದ್ವೇಷಾನಂತರಂ ತಮಃಪ್ರಾಪ್ತಿರಿತಿ ಪಿತೄಣಾಂ ಭಾವ ಇತಿ ಜ್ಞೇಯಮ್ ॥ – (ವಾ.)

ವಿ: ೧) ಜಮದಗ್ನಿ ಒಮ್ಮೆ ಶ್ರಾದ್ಧಕ್ಕೆಂದು ಹೋಮಧೇನುವಿನ ಹಾಲು ಕರೆದು ಪಾತ್ರೆಯಲ್ಲಿ ಇರಿಸಿದ್ದರು, ಅದನ್ನು ಎಂಜಲು ಮಾಡಿದ್ದರಿಂದ ಪಿತೃದೇವತೆಗಳು ಅವನನ್ನು ಮುಂಗುಸಿಯಾಗು–ವಂತೆಯೂ, ಪಾಂಡವರ ಯಜ್ಞವನ್ನು ನಿಂದಿಸುವವರೆಗೂ ಅದೇ ರೂಪದಲ್ಲಿ ಇರುವಂತೆಯೂ ಶಪಿಸಿದರು. ಹಾಗೆ ಮುಂಗುಸಿ ರೂಪದ ಅವನು ಪಾಂಡವರಂತಹ ಪರಮ ಭಗವದ್ಭಕ್ತರನ್ನು ನಿಂದಿಸಿ ಮಹಾಪಾತಕಿಯೆಂದು ಸಾಬೀತಾಗಿ ಅಂಧಂತವಸ್ಸಿಗೆ ತೆರಳಲಿ ಎಂಬುದೇ ಅವರ ಉದ್ದೇಶವಾಗಿತ್ತು ಹಾಗೆಯೇ ಮಾಡಿದ ಅವನು ಮುಂದೆ ಅಂಧಂತವಸ್ಸಿಗೆ ತೆರಳಿದ ಎಂದರ್ಥ.

೨) ಈ ಪ್ರಸಂಗ ರಾಮನ ಪಟ್ಟಾಭಿಷೇಕಕ್ಕೆ ವಿಘ್ನ ಮಾಡುವ ಮೂಲಕ ಮಂಥರೆಯಾಗಿ ಜನಿಸಿದ್ದ ಅಲಕ್ಷ್ಮಿ ತಮಸ್ಸಿಗೆ ತೆರಳಿದ ಪ್ರಸಂಗದಂತಿರುವುದನ್ನು ಗಮನಿಸಬೇಕು.(೫/೧,೨) ಅಪರಾಧ ಚಿಕ್ಕದಾದರೂ ಅದನ್ನು ತುಂಬಾ ಉತ್ತಮರಿಗೆ ಮಾಡಿದಾಗ ಮಹಾಪಾತಕಕ್ಕೆ ಕಾರಣ; ಸರ್ವಾನರ್ಥಕ್ಕೆ ಸಾಧನ ಎಂದು ಇದರ ಭಾವ.

ಅರ್ಹತೆಯಿಂದಲೇ ಮುಖ್ಯಫಲ

ಯದ್ಯಪ್ಯಲ್ಪಧನತ್ಯಕ್ತಂ ವಿತ್ತಂ ಬಹುಫಲಂ ಭವೇತ್ ।
ತಥಾಽಪ್ಯನಂತಫಲದಾಃ ಕರ್ತುರೇವ ಮಹಾಗುಣಾಃ ॥ ೧೬೫ ॥

ಅ: ಅಲ್ಪ ಧನವುಳ್ಳವನು ನೀಡಿದ ಧನ ಅಧಿಕ ಫಲವನ್ನು ಕೊಡುವುದು ನಿಜ, ಆದರೆ ಅಧಿಕ ಫಲವನ್ನು ಮುಖ್ಯವಾಗಿ ನೀಡುವುದು ಅದನ್ನು ಆಚರಿಸುವವನ ಜ್ಞಾನಭಕ್ತ್ಯಾದಿ ಮಹಾಗುಣಗಳೇ.

ವಿ: ೧) ಮೇಲ್ನೋಟಕ್ಕೆ ದರಿದ್ರ ಮಾಡುವ ದ್ರವ್ಯದಾನ ಶ್ರೀಮಂತರು ಮಾಡುವ ದ್ರವ್ಯದಾನಕ್ಕಿಂತ ಹೆಚ್ಚು ಫಲ ಕೊಡುವುದು ನಿಜ ಆದರೆ, ಅದಕ್ಕಿಂತ ಮುಖ್ಯವಾದುದು ಅವನೊಳಗಿನ ಅನುಸಂಧಾನದ ಹಿರಿಮೆ.

---

೧೬೫. ಯದ್ಯಪ್ಯಲ್ಪಧನತ್ಯಕ್ತಂ = ಅಲ್ಪಧನೇನ ತ್ಯಕ್ತಂ ವಿತ್ತಂ ಬಹುಫಲಂ= ಬಹು ಫಲಂ ಯಸ್ಯ ತತ್ ಬಹುಫಲಂ ಭವೇತ್। ತಥಾಽಪಿ ಕರ್ತುರ್ಮಹಾಗುಣಾ ಏವ ಅನಂತಫಲದಾಃ ತತ್ರಾಪಿ= ಮಹಾಗುಣಾನಾಂ ಮಧ್ಯೇಽಪಿ ಸತಾಂ ಪ್ರೀತಿಃ ಅನಂತಫಲದಾ। ಸತ್ಸು ವರಃ = ಉತ್ತಮೋತ್ತಮಸ್ಸನ್ ಹರಿರೇವ ಹಿ। ಹಿ ಶಬ್ದೇನ ''ಸದೇವ ಸೌಮ್ಯೇದಮಗ್ರ ಆಸೀತ್'' ಇತಿ ಶ್ರುತೇಃ ''ಸಚ್ಛಬ್ದ ಉತ್ತಮಂ ಬ್ರೂಯಾತ್'' ಇತಿ ಸ್ಮೃತೇಶ್ಚ ಭಗವತ ಏವ ಸಚ್ಛಬ್ದವಾಚ್ಯತ್ವಪ್ರಸಿದ್ಧಿಂ ಸೂಚಯತಿ। ತತಃ ಕಂ ಪ್ರಕೃತ ಇತ್ಯತ ಆಹ ಪಾರ್ಥೇಭ್ಯ ಇತಿ। ಗುಣೈಃ ಜ್ಞಾನಭಕ್ತ್ಯಾದಿಗುಣೈಃ। ಪಾರ್ಥೇಭ್ಯೋಽಧಿಕಃ ಸಮೋ ವಾ ಪುಮಾನ್ ಕರ್ತಾ ಕೋ ಭವೇದಿತಿ ಸಂಬಂಧಃ ॥ – (ವಾ.)

೨) ಜ್ಞಾನಭಕ್ಯಾದಿಗಳು ಹೆಚ್ಚಿದಂತೆ ಫಲ ಹೆಚ್ಚಾಗಿ ಲಭಿಸುವುದು ಎಂಬುದು ಸಿದ್ಧಾಂತ. ಶ್ರೀಮಂತನೂ ಆಗಿ ಗುಣವಂತನೂ ಆಗಿ ಮಹಾಧನವನ್ನು ದಾನವಿತ್ತಾಗ ಅವನಿಗೆ ಲಭಿಸುವ ಫಲ ಅತ್ಯುತ್ತಮವಾದುದು ಎಂದರ್ಥ – **'ದಾನಂ ಧ್ರುವಂ ಫಲತಿ ಪಾತ್ರಗುಣಾನುಕೂಲ್ಯಾತ್'**.

ಸತಾಂ ಪ್ರೀತಿಶ್ಚ ತತ್ರಾಪಿ ಸದ್ವರೋ ಹರಿರೇವ ಹಿ ।
ಪಾರ್ಥೇಭ್ಯೋಽಭ್ಯಧಿಕಃ ಕರ್ತಾ ಸಮೋ ವಾ ಕೋ ಗುಣೈರ್ಭವೇತ್ ॥ ೧೬೬ ॥

ಅ: ಸಜ್ಜನರ ಸಂತೋಷ ಮತ್ತೊಂದು ಕಾರಣ, ಸಜ್ಜನರಲ್ಲಿ ಅತ್ಯುತ್ತಮನಾದವನು ಶ್ರೀಹರಿಯೇ ಆಗಿರುವನು. ಗುಣಗಳಿಂದಾಗಿ ಪಾಂಡವರಿಗಿಂತ ಮಿಗಿಲಾದ ಅಥವಾ ಸಮನಾದ ಕರ್ತೃ ಬೇರಾವನಿರುವನು.

ವಿ: ೧) ಕರ್ತೃವಿನ ಗುಣಗಳು, ದಾನದ ಪ್ರಮಾಣಗಳಂತೆ ಅದರಿಂದಾಗುವ ಸಜ್ಜನರ ಪ್ರೀತಿ ಫಲದ ಪ್ರಮಾಣವನ್ನು ನಿರ್ಣಯಿಸುವ ಮತ್ತೊಂದು ಮುಖ್ಯ ಸಾಧನ. ಪಾಂಡವರು ಜ್ಞಾನ ಭಕ್ಯಾದಿ ಗುಣಗಳಿಂದ ಅತ್ಯಂತ ಮಿಗಿಲಾದವರು.

೨) ಯಾರ ಮೂಲಕ ಸಕಲರೂ ಸತ್ಕರ್ಮಗಳನ್ನು ಶ್ರೀಹರಿಗೆ ಸಮರ್ಪಿಸಬೇಕೋ ಅಂತಹ ಭಾರತೀರಮಣನಾದ ಮುಖ್ಯಪ್ರಾಣ ಭೀಮನಾಗಿ ಯಜ್ಞಕರ್ತೃವಾಗಿರುವನು, ಅದರಂತೆ ಅರ್ಜುನ ಧರ್ಮರಾಜಾದಿಗಳೂ ಸಹ. ಜೀವೋತ್ತಮನಾದ ಭೀಮನಿಗೆ ಸಮನಾದ ಮತ್ತೊಬ್ಬ ಕರ್ತೃ ಎಲ್ಲಿರುವನು? ಇನ್ನು ಅಶ್ವಮೇಧ ಕ್ರತುಶ್ರೇಷ್ಠವಾದಂತಹ ಮಹಾಯಾಗ, ಆ ಯಜ್ಞದಿಂದ ತೃಪ್ತನಾದವನಂತೂ ಸರ್ವೋತ್ತಮನಾದ ಸಾಕ್ಷಾತ್ ಶ್ರೀಹರಿ.

೩) ಹೀಗೆ ಫಲಕ್ಕೆ ಕಾರಣವಾಗುವಂತಹ ಪ್ರತಿಯೊಂದೂ ಸಹ ಪಾಂಡವರ ಆ ಅಶ್ವಮೇಧದಲ್ಲಿ ಪೂರ್ಣ ಪ್ರಮಾಣದಲ್ಲಿ ಇದ್ದುದರಿಂದ ಅವರ ಯಾಗದ ಫಲ ಅತ್ಯಂತ ಶ್ರೇಷ್ಠವಾದುದು ಎಂದರ್ಥ.

ಪಾಂಡವರ ಯಜ್ಞದ ಪ್ರಶಂಸೆ

ಸತಾಂ ಚ ಪ್ರವರೋ ವಿಷ್ಣುಃ ಸದ್ಭಿರ್ಮುನಿಸುರೈರ್ಯುತಃ ।
ಪ್ರತ್ಯಕ್ಷತಃ ಕಾರಯತಿ ಪಾರ್ಥೈಃ ಪ್ರಿಯತಮೈಶ್ಚ ತೈಃ ॥ ೧೬೭ ॥

ಯಂ ಮಖಿಪ್ರವರಂ ತಸ್ಯ ಸಮಂ ಕಿಂ ಶುಭಸಾಧನಮ್ ।
ಪತಂತಿ ಪೈಂಗಿನಶ್ಚೈತಾನ್ಮಂತ್ರಾನನ್ವರ್ಥಕಾನಿಹ ॥ ೧೬೮ ॥

ಅ: ಸಜ್ಜನರಲ್ಲಿ ಸರ್ವಶ್ರೇಷ್ಠನಾದ ವಿಷ್ಣು ಸಜ್ಜನರಾದ ಮುನಿಗಳಿಂದಲೂ, ದೇವತೆ-ಗಳಿಂದಲೂ ಕೂಡಿದವನಾಗಿ, ಅತ್ಯಂತಪ್ರಿಯರಾದ ಪಾಂಡವರಿಂದ ಯಾವ ಶ್ರೇಷ್ಠಯಜ್ಞವನ್ನು ಪ್ರತ್ಯಕ್ಷತಃ ಮಾಡಿಸುತ್ತಿರುವನೊ, ಅಂತಹ ಯಜ್ಞಕ್ಕೆ ಸಮಾನವಾದ ಇತರ ಶುಭಸಾಧನ ಯಾವುದು? ಪೈಂಗಿಶಾಖೆಯವರು ಅನ್ವರ್ಥಕವಾದ ಈ ಮಂತ್ರಗಳನ್ನು ಪಠಿಸುವರು.

ವಿ: ಸರ್ವೋತ್ತಮನಾದ ವಿಷ್ಣು ಸಕಲಸುರಮುನಿಗಳ ಸಮೇತನಾಗಿ ಇಂತಹ ಶ್ರೇಷ್ಠಯಜ್ಞವನ್ನು ಮಾಡಿಸಿರುವಾಗ, ಇದಕ್ಕಿಂತ ಶುಭಸಾಧನವಾದ ಬೇರೆ ಕಾರ್ಯ ಯಾವುದು ಎಂದು ಅರ್ಥ.

ವೈಷ್ಣವಕೃತವಾದದ್ದು ಅನಂತ

ಅವೈಷ್ಣವಕೃತಂ ಕರ್ಮ ಸರ್ವಮಂತವದುಚ್ಯತೇ ।
ಅನಂತಂ ವೈಷ್ಣವಕೃತಂ ತತ್ರ ವರ್ಣಕ್ರಮಾತ್ ಪರಮ್ ॥ ೧೬೯ ॥

ಅ: ವಿಷ್ಣುಭಕ್ತಿ ಇಲ್ಲದವರು ಮಾಡಿದ ಸಕಲಕರ್ಮವೂ ನಶ್ವರಫಲ ನೀಡುವುದು. ವಿಷ್ಣುಭಕ್ತರು ಮಾಡಿದ ಕರ್ಮ ಅನಂತಫಲ ನೀಡುವುದು. ಅದರಲ್ಲೂ ವರ್ಣಕ್ರಮದಿಂದ ಮೇಲುಮೇಲಿನವರ ಕರ್ಮ ಹೆಚ್ಚು ಸಫಲ.

ವಿ: ಇಲ್ಲಿಂದ ೧೭೨ರ ವರೆಗಿನ ಶ್ಲೋಕಗಳು ಪೈಂಗಿಶ್ರುತಿಯ ವಚನಗಳು.

ವೈಷ್ಣವೈರಪಿ ಮತ್ಕರ್ಮ ಕೃತಂ ಶತಗುಣಂ ತತಃ ।
ಗಾಂಧರ್ವಂ ಕರ್ಮ ತಸ್ಮಾಚ್ಚ ಪಿತೃಭಿರ್ಮುನಿಭಿಸ್ತತಃ ॥ ೧೭೦ ॥

---

೧೬೭. ಸತಾಂ ಪ್ರೀತಿರಪಿ ಪಾರ್ಥೇಷ್ವೇವಾಸ್ತೀತ್ಯಾಹ ಸತಾಂ ಚೇತಿ। ಸತಾಂ ವಿಷ್ಣುಃ ಸದ್ಭಿಃ ಮುನಿಸುರೈರ್ಯುತಃ ಸನ್ ಪ್ರಿಯತಮೈಃ ಪಾರ್ಥೈಃ ಪ್ರತ್ಯಕ್ಷತೋ ಯಂ ಮಖವರಂ ಕಾರಯತೀತ್ಯರ್ಥಃ। ಅನೇನ ಸತಃ ಪರಮಾತ್ಮನಃ ಸತಾಂ ಮುನಿಸುರಾಣಾಂ ಚ ಪರಮಾ ಪ್ರೀತಿಃ ಪಾಂಡವೇಷ್ವೇವಾಸ್ತೀತಿ ಸೂಚಿತಮ್। ಸತಾಂ ಸತ್ತ್ವಿತಿ ಚ ಸತ್ಪದೋಕ್ತಬಹುತ್ವ-ಘಟನಾಯ ಸದ್ಭಿರ್ಮುನಿಸುರೈರ್ಯುತಮಿತ್ಯುಕ್ತಮ್। ತೇಷು ಮಹಾಪ್ರೀತ್ಯಭಾವೇ ಪ್ರತ್ಯಕ್ಷತಃ ಸ್ಥಿತ್ವಾ ಕುತಸ್ತ್ವಮಿಮಂ ಮಖಂ ಕಾರಯೇದಿತಿ ಭಾವಃ। ತಸ್ಯ ಮಖಸ್ಯ ಸಮಂ ಶುಭಸಾಧನಂ ಕಿಮ್। ನ ಕಿಮಪೀತಿ ಸಮಗ್ರವಾಕ್ಯಯೋಜನಾ ॥
– (ವಾ.)

೧೬೯. ತತ್ರ ವರ್ಣಕ್ರಮಾತ್ತರಮಿತ್ಯತ್ರ ತತ್ರ = ವೈಷ್ಣವಕೃತಕರ್ಮಸ್ವಪಿ ವರ್ಣಕ್ರಮಾತ್ = ಬ್ರಾಹ್ಮಣಾದಿವರ್ಣಕ್ರಮಾತ್। ಪರಂ = ಕ್ರಮೇಣೋತ್ತಮಮ್। ಶೂದ್ರಕೃತಾತ್ಕರ್ಮಣಃ ವೈಶ್ಯಕೃತಂ ಕರ್ಮೋತ್ತಮಮ್। ವೈಶ್ಯಕೃತಾತ್ಕರ್ಮಣಃ ಕ್ಷತ್ರಿಯಕೃತಂ ಕರ್ಮೋತ್ತಮಮ್। ಕ್ಷತ್ರಿಯಕೃತಾತ್ಕರ್ಮಣಃ ಬ್ರಾಹ್ಮಣಕೃತಂ ಕರ್ಮೋತ್ತಮಮಿತ್ಯರ್ಥಃ ॥ – (ವಾ.)

೧೬೯. ಅಂತವತ್ ತು ಫಲಂ ತೇಷಾಂ ತದ್ಭವತ್ಯಲ್ಪಮೇಧಸಾಮ್ । – ಗೀತಾ (೭/೨೩)

ದೇವಶಕ್ರಶಿವಬ್ರಹ್ಮಕೃತಂ ತಸ್ಮಾತ್ ಕ್ರಮೇಣ ಚ ।
ಶತೋತ್ತರಮಿತಿ ಜ್ಞೇಯಂ ನಾನ್ಯದ್ಬ್ರಹ್ಮಕೃತೋಪಮಮ್ ॥ ೧೭೧ ॥

ಅ: ವೈಷ್ಣವರಲ್ಲೂ ಮನುಷ್ಯರು ಮಾಡಿದ ಕರ್ಮಗಳಿಗಿಂತ ಗಂಧರ್ವರು ಮಾಡಿದ ಕರ್ಮ ನೂರುಗುಣ ಮಿಗಿಲು. ಅದಕ್ಕಿಂತ ಪಿತೃಗಳಿಂದ ಮಾಡಿದ್ದು, ಅದಕ್ಕಿಂತ ಮುನಿಗಳಿಂದ ಮಾಡಿದ್ದು, ಅದಕ್ಕಿಂತ ದೇವತೆಗಳು ಇಂದ್ರ, ಶಿವ, ಬ್ರಹ್ಮರು ಮಾಡಿದ್ದು ಕ್ರಮವಾಗಿ ನೂರುಗುಣ ಶ್ರೇಷ್ಠವಾದದ್ದು ಎಂದು ತಿಳಿಯಬೇಕು. ಬ್ರಹ್ಮ ಮಾಡಿದ ಕರ್ಮಕ್ಕೆ ಸಮಾನವಾದುದು ಮತ್ತೊಂದಿಲ್ಲ.

ವಿ: ೧) ಅವೈಷ್ಣವರು ಮಾಡಿದ್ದು ಅಲ್ಪಫಲ ನೀಡಿದರೆ, ವೈಷ್ಣವರು ಮಾಡಿದ್ದು ಅನಂತಫಲ. ಅದರಲ್ಲೂ ವರ್ಣಕ್ರಮದಲ್ಲಿ ಎಂದರೆ ಶೂದ್ರಮಾಡಿದ್ದಕ್ಕಿಂತ ವೈಶ್ಯ ಮಾಡಿದ್ದು ಹೆಚ್ಚು ಫಲ, ಅದಕ್ಕಿಂತ ಕ್ಷತ್ರಿಯ ಮಾಡಿದ್ದು ಹೆಚ್ಚು ಫಲ, ಅದಕ್ಕಿಂತ ಬ್ರಾಹ್ಮಣ ಮಾಡಿದ್ದು ಹೆಚ್ಚು ಫಲ ಎಂದರ್ಥ. ಇದರಂತೆ ಆಶ್ರಮಕ್ರಮದಲ್ಲೂ ತಾರತಮ್ಯವನ್ನು ತಿಳಿಯಬಹುದು.

೨) ಬ್ರಹ್ಮದೇವರು ಮಾಡಿದ್ದು ಎಂದರೆ ವಾಯುದೇವರು ಮೊದಲಾದ ಋಜುಗಳು ಮಾಡಿದ್ದು ಎಂದರ್ಥ. ಪಾಂಡವರಲ್ಲಿ ಭೀಮಸೇನ ಸಾಕ್ಷಾತ್ ಭಾವಿಬ್ರಹ್ಮನಾದ ವಾಯುದೇವ–ನಾದ್ದರಿಂದ ಪಾಂಡವರ ಆ ಯಾಗ ಅತ್ಯಂತ ಅಪೂರ್ವವಾದುದು ಎಂದು ಸ್ಥಿರಪಡುವುದು ಎಂದರ್ಥ.

೩) ಆ ಬ್ರಾಹ್ಮಣದಂಪತಿಗಳು ದೇವತೆಗಳು ಋಷಿಗಳೇನಲ್ಲ. ಜೊತೆಗೆ ಅವರು ನೀಡಿದ್ದು ಸಹ ಯಮನ ಮೂಲಕವಾಗಿ ಶ್ರೀಹರಿಗೇ ಹೊರತು, ಸಾಕ್ಷಾತ್ ಶ್ರೀಹರಿಗಲ್ಲ. ಆದರೆ ಇಲ್ಲಿ ಯಜ್ಞ ಮಾಡುತ್ತಿರುವ ಯಜಮಾನನೇ ಸಾಕ್ಷಾತ್ ಯಮ. ಭೀಮಾರ್ಜುನರಂತೂ ಅವನಿಗಿಂತ ಮಿಗಿಲಾದ ವಾಯು ಇಂದ್ರರು. ಆರಾಧಿತನಾಗಿರುವ ಕೃಷ್ಣನಂತೂ ಯಜ್ಞಭೋಕ್ತೃವಾದ ನಾರಾಯಣ.

೪) ಯಜ್ಞದ ನೇತೃತ್ವ ವಹಿಸಿರುವುದೂ ಅವನ ಮತ್ತೊಂದು ರೂಪವಾದ ವ್ಯಾಸರೂಪ. ಹೀಗೆ ಸಕಲ ದೃಷ್ಟಿಗಳಲ್ಲೂ ಇದು ಆ ಯಾಗಕ್ಕಿಂತ ಊಹಾತೀತವಾದಷ್ಟು ಶ್ರೇಷ್ಠವಾದುದು ಎಂದು ತಿಳಿಯಬೇಕು.

೫) ವರ್ಣಕ್ರಮದಲ್ಲಿ ಪಾಂಡವರು ಕ್ಷತ್ರಿಯರಾದರೂ, ಸ್ವರೂಪತಃ ದೇವತೆಗಳಾದ್ದರಿಂದ ಅವರ ಕಾರ್ಯದ ಫಲವನ್ನು ಆ ಲೆಕ್ಕದಲ್ಲಿ ಅಳೆಯಬೇಕೇ ಹೊರತು, ವರ್ಣದ ಲೆಕ್ಕದಲ್ಲೂ ಅಲ್ಲ.

ವೈಷ್ಣವತ್ವದ ತಾರತಮ್ಯ

ವೈಷ್ಣವತ್ವಂ ಕ್ರಮಾದ್ವೃದ್ಧಂ ಬ್ರಹ್ಮಾಂತಂ ಜೀವರಾಶಿಷು ।
ಫಲಾಧಿಕ್ಯಂ ಕರ್ಮಣಾಂ ಹಿ ವಿಷ್ಣೋಃ ಪ್ರೀತ್ಯೈವ ನಾನ್ಯಥಾ ॥ ೧೭೨ ॥

ಅ: ಜೀವರಾಶಿಗಳಲ್ಲಿ ವಿಷ್ಣುಭಕ್ತಿ ಬ್ರಹ್ಮದೇವರ ವರೆಗೆ ಕ್ರಮವಾಗಿ ಹೆಚ್ಚುತ್ತಾ ಹೋಗುವುದು. ಕರ್ಮಗಳಿಗೆ ಅಧಿಕಫಲ ಸಿಗುವುದೂ ಸಹ ಶ್ರೀವಿಷ್ಣುಪ್ರೀತಿಯಿಂದಲೇ ಹೊರತು, ಇತರ ಕಾರಣಗಳಿಂದಲ್ಲ.

ವಿ: ಭಕ್ತಿತಾರತಮ್ಯ ವಿಷ್ಣುಪ್ರೀತಿತಾರತಮ್ಯಕ್ಕೆ ಗಮಕ. ಪಾಂಡವರ ವಿಷ್ಣುಭಕ್ತಿ ಆ ಬ್ರಾಹ್ಮಣ-ಕುಟುಂಬದ ವಿಷ್ಣುಭಕ್ತಿಗಿಂತ ಅತ್ಯಂತಮಿಗಿಲಾದುದು. ಸ್ವತಃ ಶ್ರೀಹರಿ ಪ್ರತ್ಯಕ್ಷ ನಿಂತು ಆ ಯಾಗವನ್ನು ಮಾಡಿಸುತ್ತಿದ್ದುದೇ ಅದಕ್ಕೆ ನಿದರ್ಶನ. ಆದ್ದರಿಂದ ಪಾಂಡವರ ಯಾಗ ಆ ಬಾಹ್ಮಣಕುಟುಂಬದ ತ್ಯಾಗಕ್ಕಿಂತ ಅತ್ಯಂತಶ್ರೇಷ್ಠವಾದುದು ಎಂದರ್ಥ.

ಇತಿ ತೇನ ನ ಪಾರ್ಥಾನಾಂ ಕರ್ಮಣಾऽನ್ಯತ್ಸಮಂ ಕ್ವಚಿತ್ ।
ಗುಣೈರ್ಜ್ಞಾನಾದಿಭಿಃ ಕ್ವಾಪಿ ತಸ್ಮಾತ್ ಕ್ರೋಧಃ ಸ ತಾಮಸಃ ।
ವಿನಿಂದ್ಯ ತಾನ್ ಸುಸತ್ವಸ್ಥಾಂಸ್ತಮೋऽಂಧಮುಪಜಗ್ಮಿವಾನ್ ॥ ೧೭೩ ॥

ಅ: ಆದ್ದರಿಂದ ಪಾಂಡವರ ಕರ್ಮಕ್ಕೆ ಸಮನಾದ ಮತ್ತೊಂದು ಕರ್ಮ ಎಲ್ಲೂ ಇಲ್ಲ. ಜ್ಞಾನಾದಿಗುಣಗಳಲ್ಲಿ ಅವರಿಗೆ ಸಮರಾದವರೂ ಬೇರಿಲ್ಲ. ಆದ್ದರಿಂದ ಕ್ರೋಧಾಭಿ-ಮಾನಿಯಾದ ಆ ದೈತ್ಯ ಮಹಾತಾಮಸಿಯಾಗಿದ್ದು ಅತ್ಯಂತಸಾತ್ತ್ವಿಕರಾದ ಪಾಂಡವರನ್ನು ನಿಂದಿಸಿ, ಅಂಧಂತಮಸ್ಸಿಗೇ ತೆರಳಿದ.

ವಿ: ೧) ಶ್ರೀಮದಾಚಾರ್ಯರು ಹೀಗೆ ಪಾಂಡವರ ಯಜ್ಞ ಅತ್ಯಂತಮಿಗಿಲಾದುದು ಎಂದು ಸಾಧಿಸುತ್ತಾ ಆ ಬ್ರಾಹ್ಮಣಕುಟುಂಬ ಮಾಡಿದ ತ್ಯಾಗವೂ ಸಹ ಉತ್ತಮವಾದುದು ಎಂದು ಪ್ರಶಂಸಿಸಿರುವರು. ಹೀಗೆ ಇಬ್ಬರಿಗೂ ಅಪಚಾರವಾಗದಂತೆ ಬರೆದಿರುವುದು ಶ್ರೀಮದಾಚಾರ್ಯರ ನಿರ್ಣಯದ ವೈಶಿಷ್ಟ್ಯ.

೨) ಆದರೆ ಇತರ ವ್ಯಾಖ್ಯಾನಕಾರರು ಆ ಬ್ರಾಹ್ಮಣಕುಟುಂಬದ ತ್ಯಾಗವನ್ನು ಬಣ್ಣಿಸುವ ಭರದಲ್ಲಿ ಆ ಮುಂಗುಸಿಯಂತೆ ಪಾಂಡವರ ಆ ಅಪೂರ್ವಯಾಗವನ್ನು ತಾವೂ ತೆಗಳಿರುವರು.

---

೧೭೩. ಇತಿ ತೇನ ನ ಪಾರ್ಥಾನಾಮಿತ್ಯತ್ರ ಇತಿಪದಸ್ಯ ಪಠಂತೀತಿ ಪೂರ್ವೇಣಾನ್ವಯಃ ॥ –(ವಾ.)

ಅದರಿಂದ ಅವರ ವ್ಯಾಖ್ಯಾನದ ಅಧ್ಯಯನದ ಫಲ ಮುಂಗುಸಿಗೆ ದೊರಕಿದ ಗತಿಯಂತೆ ದುರಂತವೆನ್ನದೆ ವಿಧಿಯಿಲ್ಲ.

ಯುಧಿಷ್ಠಿರನಿಗೆ ಕೃಷ್ಣ ತಿಳಿಸಿದ ವೈಷ್ಣವಧರ್ಮಗಳು

ಅಥ ಪೃಷ್ಟೋ ವಾಸುದೇವಃ ಸುರವಿಪ್ರಾದಿಸಂಸದಿ ।
ಯುಧಿಷ್ಠಿರೇಣ ಸಂಹೃಷ್ಟೋ ಜಗಾದಾಶೇಷತಃ ಪ್ರಭುಃ ॥ ೧೭೪ ॥

ಅ: ಬಳಿಕ ದೇವತೆಗಳು, ಮುನಿಗಳು ನೆರೆದಿದ್ದ ಆ ದೇವಸಭೆಯಲ್ಲಿ ಧರ್ಮರಾಜ ಕೇಳಿಕೊಳ್ಳಲು ಪ್ರಭುವಾದ ಶ್ರೀಕೃಷ್ಣ ಬಹಳ ಸಂತೋಷದಿಂದ ಸಕಲವೈಷ್ಣವಧರ್ಮಗಳನ್ನೂ ಉಪದೇಶಿಸಿದ.

ತೇ ಚ ಶ್ರುತ್ವಾऽಖಿಲಾನ್ ಧರ್ಮಾನ್ ಭಕ್ತ್ಯಾ ಪರಮಯಾ ಯುತಾಃ ।
ಪೂಜಯಂತೋ ಜಗನ್ನಾಥಮಾಪುಶ್ಚ ಪರಮಾಂ ಮುದಮ್ ॥ ೧೭೫ ॥

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮಹಾಭಾರತತಾತ್ಪರ್ಯನಿರ್ಣಯೇ ಪಾಂಡವಾಶ್ವಮೇಧಕಥನಂ ನಾಮ
ತ್ರಿಂಶೋऽಧ್ಯಾಯಃ ॥ ೩೦ ॥

ಅ: ಅವರೆಲ್ಲರೂ ಸಕಲಧರ್ಮಗಳನ್ನು ಕೃಷ್ಣನ ಬಾಯಿಂದ ಕೇಳಿ ಅತ್ಯಂತಶ್ರೇಷ್ಠವಾದ ಭಕ್ತಿಯಿಂದ ಕೂಡಿದವರಾಗಿ ಜಗನ್ನಾಥನಾದ ಕೃಷ್ಣನನ್ನು ಪೂಜಿಸುತ್ತಾ ಪರಮಾನಂದವನ್ನು ಹೊಂದಿದರು.

ವಿ: ೧) ಮಹಾಭಾರತದಲ್ಲಿ ಈ ಕೃಷ್ಣೋಪದೇಶದ ಭಾಗ ಆಶ್ವಮೇಧಿಕಪರ್ವದಲ್ಲಿ ವೈಷ್ಣವಧರ್ಮಪರ್ವ ಎಂಬ ಉಪಪರ್ವವಾಗಿ ಕಂಡುಬರುವುದು.

೨) ಅದರಲ್ಲಿ ಪೂಜಾವಿಧಾನ, ವರ್ಣಾಶ್ರಮಧರ್ಮಗಳ ವಿವೇಚನೆ, ದ್ವಾದಶೀವ್ರತ, ವಿಷ್ಣುಪಂಚಕವ್ರತ ಮೊದಲಾದ ವೈಷ್ಣವಧರ್ಮಗಳ ವಿವೇಚನೆ ಬಂದಿದ್ದು ಇಲ್ಲಿ ತಿಳಿಸಿರುವ ವೈಷ್ಣವಮಹಿಮೆಗೆ ನಿದರ್ಶನದಂತಿದೆ.

೩) **'ರುದ್ರಂ ಸಮಾಶ್ರಿತಾ ದೇವಾ ...'** (೨/೧೧೭) ಎಂಬ ಶ್ಲೋಕ ಇಲ್ಲಿಯದೇ. ಅದನ್ನು ಶ್ರೀಮದಾಚಾರ್ಯರು ಎರಡನೆಯ ಅಧ್ಯಾಯದಲ್ಲಿ ಹಾಗೆಯೇ ತಿಳಿಸಿರುವರು ಸಹ ಎಂದು ಗಮನಿಸಬೇಕು.

೪) ಈ ಪರ್ವ ಮತ್ತೊಮ್ಮೆ ಮಹಾಭಾರತವನ್ನು ಶುದ್ಧವೈಷ್ಣವಸತ್ಕೃತಿ ಎಂದು ದೃಢಪಡಿಸುವ ಅಪೂರ್ವಭಾಗ ಎಂಬುದನ್ನು ಗಮನಿಸಬೇಕು.

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಪ್ರಣೀತ ಮಹಾಭಾರತತಾತ್ಪರ್ಯನಿರ್ಣಯದಲ್ಲಿ 'ಪಾಂಡವಾಶ್ವಮೇಧಕಥನ'ವೆಂಬ ಮೂವತ್ತನೆಯ ಅಧ್ಯಾಯ ಮುಗಿಯಿತು ॥ ೩೦ ॥

॥ ಶ್ರೀಕೃಷ್ಣಾರ್ಪಣಮಸ್ತು ॥

★★★★★

---

೧೭೪. ಪಶ್ಚಿಮೇನಾಶ್ವಮೇಧೇನ ಯದಾ ಸ್ನಾತೋ ಯುಧಿಷ್ಠಿರಃ ।
ತದಾ ರಾಜಾ ನಮಸ್ಕೃತ್ಯ ಕೇಶವಂ ಪುನರಬ್ರವೀತ್ ॥
ವಸಿಷ್ಠಾದ್ಯಾಸ್ತಪೋಯುಕ್ತಾ ಮುನಯಸ್ತತ್ತ್ವದರ್ಶಿನಃ ।
ಶ್ರೋತುಕಾಮಾಃ ಪರಂ ಗುಹ್ಯಂ ವೈಷ್ಣವಂ ಧರ್ಮಮುತ್ತಮಮ್ ॥
ತಥಾ ಭಾಗವತಾಶ್ಚೈವ ತತಸ್ತಂ ಪರ್ಯವಾರಯನ್ ॥ – ಭಾರತ (ಆಶ್ವಮೇಧಿಕ. ೯೨)

೧೭೪. ಏತೇಭ್ಯಃ ಸರ್ವಧರ್ಮೇಭ್ಯೋ ದೇವ ತ್ವನ್ಮುಖನಿಸೃತಾಃ ।
ಪಾವನತ್ವಾತ್ ಪವಿತ್ರತ್ವಾತ್ ವಿಶಿಷ್ಟಾ ಇತಿ ಮೇ ಮತಿಃ ॥
ತಸ್ಮಾದ್ಧಿತ್ವಾಂ ಪ್ರಪನ್ನಸ್ಯ ತ್ವದ್ಭಕ್ತಸ್ಯ ಚ ಕೇಶವ ।
ಯುಷ್ಮದೀಯಾನ್ ವರಾನ್ ಧರ್ಮಾನ್ ಪುಣ್ಯಾನ್ ಕಥಯ ಮೇಽಚ್ಯುತ ॥ (ಯುಧಿಷ್ಠಿರನ ಪ್ರಾರ್ಥನೆ)
– ಭಾರತ (ಆಶ್ವಮೇಧಿಕ. ಅ. ೯೨)

೧೭೫. ಶ್ರುತ್ವಾ ಭಾಗವತಾನ್ ಧರ್ಮಾನ್ ಸಾಕ್ಷಾದ್ ವಿಷ್ಣೋರ್ಜಗದ್ಗುರೋಃ ।
ಪ್ರಹೃಷ್ಟಮನಸೋ ಭೂತ್ವಾ ಚಿಂತಯಂತೋಽದ್ಭುತಾಃ ಕಥಾಃ ।
ಋಷಯಃ ಪಾಂಡವಾಶ್ಚೈವ ಪ್ರಣೇಮುಸ್ತಂ ಜನಾರ್ದನಮ್ ।
ಪೂಜಯಾಮಾಸ ಗೋವಿಂದಂ ಧರ್ಮಪುತ್ರಃ ಪುನಃ ಪುನಃ ॥
ದೇವಾ ಬ್ರಹ್ಮರ್ಷಯಃ ಸಿದ್ಧಾ ಗಂಧರ್ವಾಪ್ಸರಸಸ್ತಥಾ ।
ಋಷಯಶ್ಚ ಮಹಾತ್ಮಾನೋ ಗುಹ್ಯಕಾ ಭುಜಗಾಸ್ತಥಾ ॥
ವಾಲಖಿಲ್ಯಾ ಮಹಾತ್ಮಾನೋ ಯೋಗಿನಸ್ತತ್ತ್ವದರ್ಶಿನಃ ।
ತಥಾ ಭಾಗವತಾಶ್ಚಾಪಿ ಪಂಚಕಾಲಮುಪಾಸಕಾಃ ।
ಕೌತೂಹಲಸಮಾಯುಕ್ತಾ ಭಗವದ್ಭಕ್ತಿಮಾಗತಾಃ ॥
ಶ್ರುತ್ವಾ ಪರಮಂ ಪುಣ್ಯಂ ವೈಷ್ಣವಂ ಧರ್ಮಶಾಸನಮ್ ॥
ವಿಮುಕ್ತಪಾಪಾಃ ಪೂತಾಸ್ತೇ ಸಂವೃತ್ತಾಸ್ತತ್ ಕ್ಷಣೇನ ತು ।
ಪ್ರಣಮ್ಯ ಶಿರಸಾ ವಿಷ್ಣುಂ ಪ್ರತಿನಂದ್ಯ ಚ ತಾಃ ಕಥಾಃ ॥ – ಭಾರತ (ಆಶ್ವಮೇಧಿಕ. ಅ. ೯೨)

ಅಧ್ಯಾಯ - ೩೧

(ಶ್ರೀಕೃಷ್ಣಾವತಾರಚರಿತೇ ಶ್ರೀಕೃಷ್ಣಸನ್ನಿಧೌ ಪಾಂಡವರಾಜ್ಯಪಾಲನಮ್)

(ಯುಧಿಷ್ಠಿರನಿಗೆ ಭೀಮೋಪದೇಶ, ಧೃತರಾಷ್ಟ್ರನ ವಿರಕ್ತಿ, ವನಗಮನ, ವಿದುರನ ದೇಹತ್ಯಾಗ, ವ್ಯಾಸರ ಅನನ್ಯಹಿರಿಮೆ, ಧೃತರಾಷ್ಟ್ರಾದಿಗಳ ನಿರ್ಯಾಣ)

ಧರ್ಮಕಾರ್ಯಕ್ಕೆ ನಾಳೆಯೆಂದ ಧರ್ಮರಾಜ

ಯಜ್ಞೇಶ್ವರೇಣಾಭಿಯುತೇಷು ಭಕ್ತ್ಯಾ
ಮಹೀಂ ಪ್ರಶಾಸತ್ಸು ಪೃಥಾಸುತೇಷು ।
ವಿವಕ್ಷುರಾಗಾನ್ನಿಶಿ ವಿಪ್ರವರ್ಯೋ
ಯುಧಿಷ್ಠಿರಂ ವಿತ್ತಮಭೀಪ್ಸಮಾನಃ ॥ ೧ ॥

ಅ: ಯಜ್ಞೇಶ್ವರನಾದ ಶ್ರೀಕೃಷ್ಣನಿಂದ ಕೂಡಿದವರಾಗಿ ಪಾಂಡವರು ಹರಿಭಕ್ತಿಯಿಂದ ಕೂಡಿ ಭೂಮಿಯನ್ನು ಪಾಲಿಸುತ್ತಿದ್ದಾಗ ಯಜ್ಞ ಮಾಡುವ ಬಯಕೆಯಿಂದ ವಿಪ್ರಶ್ರೇಷ್ಠನೊಬ್ಬ ಹಣವನ್ನು ಬಯಸಿ ರಾತ್ರಿಯಲ್ಲಿ ಯುಧಿಷ್ಠಿರನ ಬಳಿಗೆ ಬಂದ.

ವಿ: ೧) ಪಾಂಡವರ ರಾಜ್ಯ ರಾಮರಾಜ್ಯದಂತೆಯೇ ಇದ್ದ ಅಪೂರ್ವ ರಾಜ್ಯ, ಒಬ್ಬ ಬ್ರಾಹ್ಮಣ ಮಧ್ಯರಾತ್ರಿಯಲ್ಲಿ ಮಹಾರಾಜನನ್ನು ನೇರವಾಗಿ ನೋಡಿ ತನ್ನ ಬೇಡಿಕೆಯನ್ನು ಮುಂದಿಡುವ ಅವಕಾಶವನ್ನು ನೀಡುವಷ್ಟು ಸುವ್ಯವಸ್ಥಿತವಾಗಿದ್ದ ರಾಜ್ಯ ಅದು.

೨) ಧರ್ಮ ಮಧ್ಯರಾತ್ರಿಯಲ್ಲೂ ತನ್ನ ಬಳಿಗೆ ಬರಲು ಅವಕಾಶ ನೀಡುವುದು ಎಂಬ ವಿಶೇಷ ಪ್ರಮೇಯ ಇದರಿಂದ ಸೂಚಿತ. ಮಧ್ಯರಾತ್ರಿಯಲ್ಲಿ ನಡೆಯುವ ಅಧ್ಯಯನವೂ ಸಹ ಫಲಕಾರಿಯೆಂದೇ ಶಾಸ್ತ್ರವಚನ ಇದೆಯಲ್ಲವೆ![1]

ಭೀಮನಿಂದ ಅಭೀಷ್ಟಸಿದ್ಧಿ

ಪ್ರಾತರ್ದದಾನೀತಿ ನೃಪಸ್ಯ ವಾಕ್ಯಂ
ನಿಶಮ್ಯ ವಿಪ್ರಸ್ತ್ವರಿತೋ ಮಖಾರ್ಥೇ ।
ಭೀಮಂ ಯಯಾಚೇ ಸ ನೃಪೋಕ್ತಮಾಶು
ನಿಶಮ್ಯ ಚಾದಾನ್ನಿಜಹಸ್ತಭೂಷಣಮ್ ॥ ೨ ॥

---

೧. ಅತ್ಯಶಕ್ಯೇ ತು ನಿದ್ರಾದೌ ಪುನರೇವ ಸಮಾಚರೇತ್ । – ಅನುವ್ಯಾಖ್ಯಾನ (೩/೩/೭೯)

ಕ್ಷಣದಾಸು ವಿಚಕ್ಷಣಃ ಸ ವೀಕ್ಷ್ಯ ಪ್ರಚುರಪ್ರಜ್ಞಮನೋಜ್ಞಶಾಸ್ತ್ರಸಾರಮ್ ।
ಅಪರಾವಿದಿತಃ ಪ್ರಸಾದಗರ್ಭಂ ವಿದಧೇ ವಿಸ್ಮಯಮಾಂತರಂ ಮಹಾಂತಮ್॥ – ಸುಮಧ್ವವಿಜಯ(೧೩/೬೭)

ಅ: ಬೆಳಿಗ್ಗೆ ಕೊಡುವೆನೆಂದು ಧರ್ಮರಾಜ ಹೇಳಲು ಯಜ್ಞಕ್ಕೆ ಅವಸರವಿದ್ದ ಬ್ರಾಹ್ಮಣ ಭೀಮನನ್ನು ಬೇಡಿದ. ಧರ್ಮರಾಜ ಹೇಳಿದ್ದನ್ನು ಕೇಳಿ ಭೀಮ ತಾನು ಕೂಡಲೇ ತನ್ನ ಕೈಯ ಆಭರಣವನ್ನು ನೀಡಿದ.

---

೨. ಮುಹೂರ್ತಾತಿಕ್ರಮಶಂಕಯಾ ತ್ವರಾವಾನ್ ... । – (ಜ.)

೨. ಪುರಾ ಯುಧಿಷ್ಠಿರೋ ರಾಜಾ ಧರ್ಮಾತ್ಮಾ ನಿತ್ಯದಾನವಾನ್ ।
ಕೃತವಾನ್ ಸ್ವಗೃಹದ್ವಾರೇ ಮಹಾಭೇರೀಂ ನೃಪೋತ್ತಮಃ ॥
ಯಃ ಕಶ್ಚಿದರ್ಥೀ ಹ್ಯಾಸ್ಯೇತ ಸ ಹನ್ಯಾದ್ ಭೇರಿಕಾಮಿಮಾಮ್ ।
ಆಹೂಯ ನಿಕಟೇ ಸ್ವಸ್ಯ ಶ್ರುತ್ವಾ ವಾಂಛಿತಮರ್ಥಿನಃ ॥
ಪೂರಯಿಷ್ಯಾಮಿ ತದ್ವಾಂಛಾಂ ಯಾವಚ್ಛಕ್ನೋಮಿ ನಾನ್ಯಥಾ ॥
ಇತ್ಯಾಸೀತ್ತದ್ಧನಂ ಸ್ಫೀತಂ ಸರ್ವದಿಕ್ಷು ಚ ವಿಶ್ರುತಮ್ ॥
ಶ್ರುತ್ವಾ ಕಶ್ಚಿದ್ ದ್ವಿಜೋಽಭ್ಯಾಗಾತ್ ಸ್ವಯಮೇವ ಹರಿಸ್ತುಯಃ ॥
ಗತವಾಂಸ್ತತ್ಪರೀಕ್ಷಾರ್ಥೇ ನಿಶೀಥೇ ಭೇರಿಮಾಹನತ್ ॥
ಶ್ರುತ್ವೈವ ಭೇರಿನಾದಂ ಸ ಪ್ರೇಷಯಾಮಾಸ ಸತ್ವರಮ್ ।
ಸ್ವದೂತಾನರ್ಥಿನೋ ರಾಜಾ ಸಕಾಶೇ ಜ್ಞಾತುಮೀಪ್ಸಿತಮ್ ॥
ತೇ ತೂರ್ಣಂ ವಿಪ್ರಮಾಗತ್ಯ ಜ್ಞಾತ್ವಾ ತಸ್ಯ ಮನೋಗತಮ್ ।
ರಾಜ್ಞೇ ನಿವೇದಯಾಮಾಸುರಥ ರಾಜಾಽವದತ್ ಸ್ವಯಮ್ ॥
ವಿಜ್ಞಾಪಯತ ಮೇ ವಾಕ್ಯಂ ದ್ವಿಜಾಯಾಸ್ಮೈ ಸುಸನ್ನತಾಃ ।
ಪ್ರಾತರಾಗಚ್ಛ ಭೋ ವಿಪ್ರ ಯಥೇಷ್ಟಂ ದಾಸ್ಯತೇ ಧನಮ್ ॥
ಇತಿ ತದ್ವಚನಂ ದೂತಾಃ ವಿಪ್ರಾಯಾಹುಃ ಸುಸನ್ನತಾಃ ।
ತದೈವ ಭೀಮಸದನಂ ಗತವಾನ್ ಯಾಚಕೋ ದ್ವಿಜಃ ।
ತದ್ ದ್ವಾರಿ ಸಂಸ್ಥಿತಾಂ ಭೇರೀಂ ನ್ಯಹನತ್ತದ್ಧ್ವನಿಂ ತಥಾ ॥
ಭೀಮ ಆಶ್ರುತ್ಯ ದೂತೈಸ್ತಂ ದ್ವಿಜಮಾನೀಯ ಸತ್ವರಮ್ ।
ತದೀಪ್ಸಿತಂ ಧನಂ ಪ್ರಾದಾತ್ ಹರ್ಷಭೇರೀಂ ತತಃ ಪರಮ್ ॥
ಶೀಘ್ರಮಾವಾದಯಾಮಾಸ ತದ್ಧ್ವನಿಂ ಶ್ರುತವಾನ್ ನೃಪಃ ।
ಭೀಮಸ್ಯಾದ್ಯ ನಿಶೀಥೇಽಸ್ಮಿನ್ ಕಿಮಾಸೀದ್ಧರ್ಷಕಾರಣಮ್ ॥
ಇತಿ ಸಂಚಿತ್ಯಂ ದೂತಾನ್ ಸ್ವಾನ್ ಭೀಮಾಯ ಪ್ರಾಹಿಣೋದ್ ದ್ರುತಮ್ ।
ಭೀಮಸ್ತಾನಾಹ ಮೇ ಹರ್ಷೋ ಮಹಾನದ್ಯಾಭವದ್ ಧ್ರುವಮ್ ॥
ಯದ್ಧರ್ಮರಾಜೋ ನಿಶ್ಚಿತ್ಯ ಯಾವತ್ ಪ್ರಾತಃ ಸ್ವಜೀವನಮ್ ।
ಅತ ಏವೋಕ್ತವಾನ್ ವಿಪ್ರಮರ್ಥಿನಂ ಗೃಹಮಾಗತಮ್ ।
ಪ್ರಾತರ್ಯಾಹಿ ಚ ದಾಸ್ಯಾಮಿ ತವೇಷ್ಟಂ ಧನಮಿತ್ಯುತ ॥
ಇತಿ ನಿಶ್ಚಯಮಾಕರ್ಣ್ಯ ಧರ್ಮರಾಜಸ್ಯ ಜೀವಿತೇ ।
ಹರ್ಷೋ ಮಹಾನಭೂದದ್ಯ ತೇನ ಭೇರೀಮವಾದಯಮ್ ॥
ಭೀಮಸ್ಯ ತದ್ವಚೋ ದೂತಾಃ ಶೀಘ್ರಮಾವೇದಯನ್ ನೃಪೇ ।

ಏಃ ೧) ಬ್ರಾಹ್ಮಣ ಧರ್ಮರಾಜನನ್ನು ಕೇಳಿ ಸಫಲವಾಗದೇ ಭೀಮನನ್ನು ಕೇಳಿ ಸಫಲನಾದ. ಧರ್ಮರಾಜ ಧರ್ಮದ ಸಂಕೇತವಾದರೆ, ಭೀಮಸೇನ ಜ್ಞಾನದ ಸಂಕೇತ. ಕೇವಲ ಧರ್ಮಕಾರ್ಯಗಳಿಂದ ಈಡೇರದ ಅಪೇಕ್ಷೆಗಳು ಜ್ಞಾನಕಾರ್ಯದಿಂದ ಕೂಡಲೇ ಈಡೇರುವವು ಎಂಬ ತತ್ವಕ್ಕೆ ಇದು ನಿದರ್ಶನ – **'ಸರ್ವೇಽಪಿ ಪುರುಷಾರ್ಥಾಃ ಸ್ಯುಃ ಜ್ಞಾನಾದೇವ ನ ಸಂಶಯಃ'.**

೨) ಧರ್ಮರಾಜ ಬೆಳಿಗ್ಗೆ ಕೊಡುವುದಾಗಿ ಹೇಳಿದ್ದರಿಂದ ಭೀಮಸೇನ ಆಗಲೇ ಕೋಶದಿಂದ ಹಣ ಕೊಡಲು ಸಾಧ್ಯವಿರಲಿಲ್ಲ, ಆದರೆ ಯಜ್ಞದಂತಹ ಶ್ರೇಷ್ಠ ಕಾರ್ಯಕ್ಕೆ ನೆರವು ನೀಡದಿರಲೂ ಸಾಧ್ಯವಿರಲಿಲ್ಲ, ಅಂತಹ ಸಂದರ್ಭದಲ್ಲಿ ಭೀಮಸೇನ ಬೊಕ್ಕಸದಿಂದ ಹಣ ನೀಡದೇ ತನ್ನ ಸ್ವಂತ ವಸ್ತುವನ್ನು ನೀಡಿ ಆ ಧರ್ಮಕಾರ್ಯಕ್ಕೆ ನೆರವಾದ.

೩) ಯಜ್ಞದಂತಹ ಶ್ರೇಷ್ಠಕಾರ್ಯಕ್ಕೆ ಹಾಗೆ ನೆರವು ನೀಡುವ ಮೂಲಕ ಮಧ್ಯರಾತ್ರಿ–ಯಲ್ಲೂ ಸಹ ಅಂತಹ ಧರ್ಮಪ್ರಜ್ಞೆಯನ್ನು ತೊರೆಯದಿರಬೇಕು ಎಂಬ ಸಂದೇಶವನ್ನು ನೀಡಿದ.

ಯುಧಿಷ್ಠಿರೋಽಥ ಧರ್ಮಾತ್ಮಾ ಪಶ್ಚಾತ್ತಾಪೇನ ತಪ್ತವಾನ್ ॥
ತದಾನೀಮೇವ ಭೀಮಸ್ಯ ಗೃಹಮಾಗತ್ಯ ತಂ ದ್ವಿಜಮ್ ।
ಬಹು ಕ್ಷಮಾಪಯಾಮಾಸ ದತ್ವಾ ತಸ್ಮೈ ಧನಂ ಬಹು ।
ನ ಜಗ್ರಾಹ ಧನಂ ತತ್ತು ದೀಯಮಾನಂ ಮುಹುರ್ಮುಹುಃ ॥
ಭೀಮೇನಾಪೂರಿತಂ ಮೇಽದ್ಯ ವಾಂಛಿತಂ ನೃಪಸತ್ತಮ ।
ಸರ್ವಥಾ ನ ಗ್ರಹೀಷ್ಯಾಮಿ ತೃಷ್ಣಾ ಪುಣ್ಯಸ್ಯ ನಾಶಿನೀ ॥
ಆವಶ್ಯಕಂ ಹಿ ಯಾಚೇತ ನಾಧಿಕಂ ಬ್ರಾಹ್ಮಣಃ ಕ್ವಚಿತ್ ।
ಅತಿತೃಷ್ಣಾಪರೋ ಯಸ್ತು ಸ ಸ್ತೇನೋ ದಂಡಮರ್ಹತಿ ॥
ತತೋ ಭೀಮಂ ಸಮಾಲಿಂಗ್ಯ ವತ್ಸ ಮೇ ಸ್ವಗುರುರ್ಮಹಾನ್ ॥
ಯದಿತ್ಥಂ ಕೃತವಾನ್ ಶ್ರೇಯ ಇಹಲೋಕೇ ಪರತ್ರ ಚ ।
ಮುಹುರಶ್ರುಪರೀತಾಕ್ಷೋ ಹಾ ಹಾ ವಂಚಿತ ಇತ್ಯಪಿ ॥
ಪಶ್ಚಾತ್ತಾಪೀ ಮಹಾರಾಜಃ ಶಂಸಮಾನೋಽನುಜಂ ಸ್ವಕಮ್ ।
ಧನ್ಯಮಸ್ಯ ಶ್ರುತಂ ಲೋಕೇ ಧನ್ಯಮಸ್ಯ ಚ ಜೀವಿತಮ್ ।
ಯತ ಇತ್ಥಂ ವಿವೇಕೋಽಸ್ಯ ಧಿಗ್ಧಿಗ್ ಮೇ ಜೀವಿತಂ ಶ್ರುತಮ್ ॥
ಏತಸ್ಮಿನ್ನಂತರೇ ವಿಪ್ರೋಭೌ ಕೃಷ್ಣಃ ಸ್ವಯಂ ದ್ವಿಜಃ ।
ನೀಲಮೇಘರುಚಿಃ ಶ್ರೀಮಾನ್ ಪೀತವಾಸಾಶ್ಚತುರ್ಭುಜಃ ॥
ಸಾಂತ್ವಯಾಮಾಸ ರಾಜಾನಂ ಮಾ ರೋದೀರ್ಮಾ ತಪೋ ನೃಪ ।
ಧರ್ಮೇ ವಿಲಂಬೋ ನ ಕಾರ್ಯ ಇತಿ ವೇದಯಿತುಂ ತವ ॥
ಬ್ರಾಹ್ಮಣೇಭೂಯ ನೃಪತೇ ತವಾಂತಿಕಮುಪಾಗಮಮ್ ।
ಧರ್ಮಸ್ಯೇಹ ವಿಲಂಬೇನ ವಂಚಿತಾ ಬಹವೋ ನರಾಃ ॥

– ವರಾಹಪುರಾಣ ಚಾತುರ್ಮಾಸ್ಯಮಾಹಾತ್ಮ್ಯ ಅ. ೨೩ ಶ್ಲೋ. ೧೭೨-೧೮೪

೪) ಬ್ರಾಹ್ಮಣನಿಗೆ ಆ ಮಧ್ಯರಾತ್ರಿಯಲ್ಲಿ ಯುವರಾಜನಾದ ಭೀಮನನ್ನು ಸಹ ನೋಡಲು ಸಾಧ್ಯವಾದದ್ದು ಆ ರಾಜ್ಯದ ಮತ್ತೊಂದು ಹಿರಿಮೆ. ಧರ್ಮರಾಜನೇ ಆ ಸಮಯದಲ್ಲಿ ಎಚ್ಚರವಿದ್ದು ಆ ವಿಪ್ರನನ್ನು ಸ್ವಾಗತಿಸಿದಾಗ ಪ್ರಳಯ ಕಾಲದಲ್ಲೂ ನಿದ್ರೆ ಇರದ ವಾಯುವಿನ ಅವತಾರನಾದ ಭೀಮಸೇನ ಅವನನ್ನು ಹಾಗೆ ಸ್ವಾಗತಿಸಿದಲ್ಲಿ ಅಚ್ಚರಿಯೇನಿಲ್ಲ.

೫) ಪುರಂದರದಾಸರ ಪತ್ನಿ, ದಾಸರ ಪೂರ್ವಜೀವನದಲ್ಲಿ ಬ್ರಾಹ್ಮಣನೊಬ್ಬ ಮಗನ ಉಪನಯನಕ್ಕೆಂದು ಬೇಡಿದಾಗ ಗಂಡನ ಅನುಮತಿಯಿಲ್ಲದೇ ತನ್ನ ಮೂಗುತಿಯನ್ನು ದಾನವಾಗಿತ್ತ ಪ್ರಸಂಗ ಇದರ ಸ್ಫೂರ್ತಿಯಿಂದ ನಡೆದದ್ದು ಎಂದು ಊಹಿಸಬಹುದು. ಅಲ್ಲೂ ಸಹ ಆ ಬ್ರಾಹ್ಮಣ ಸಾಕ್ಷಾತ್ ಶ್ರೀಹರಿಯೇ ಎಂದು ಪ್ರಸಿದ್ಧ.

ಭೀಮನಿಂದ ನಂದಿಘೋಷ

ಅನರ್ಘ್ಯಮಗ್ನಿಪ್ರತಿಮಂ ವಿಚಿತ್ರ-
ರತ್ನಾಂಚಿತಂ ವಿಪ್ರವರಸ್ತದಾಪ್ಯ ।
ಯಯೌ ಕೃತಾರ್ಥೋ೭ಥ ಚ ನಂದಿಘೋಷ-
ಮಕಾರಯದ್ವಾಯುಸೂನುಸ್ತದೈವ ॥ ೩ ॥

ಅ: ಅಮೂಲ್ಯವಾದ, ಅಗ್ನಿಯಂತೆ ಹೊಳೆಯುತ್ತಿದ್ದ, ವಿಚಿತ್ರವಾದ ರತ್ನಗಳಿಂದ ಕೂಡಿದ್ದ ಆ ಭೀಮನ ಹಸ್ತಾಭರಣವನ್ನು ಪಡೆದು ಆ ವಿಪ್ರೋತ್ತಮ ಕೃತಾರ್ಥನಾಗಿ ತೆರಳಿದ. ಬಳಿಕ ಆಗಲೇ ಭೀಮಸೇನ ಆನಂದಸೂಚಕವಾದ ಜಯಭೇರಿಯನ್ನು ಮಾಡಿಸಿದ.

ವಿ: ೧) ಭೀಮ ಹಾಗೆ ನೀಡಿದ ಆಭರಣ ತುಂಬಾ ಅಮೂಲ್ಯವಾಗಿತ್ತು, ಬೆಲೆಕಟ್ಟಲಾಗದ ಅದನ್ನು ಪಡೆದ ಬ್ರಾಹ್ಮಣ ತನ್ನ ಬಯಕೆ ಈಡೇರಿದ ಸಂತೃಪ್ತಿಯಿಂದ ತೆರಳಿದ.

೨) ಹಾಗೆ ಬ್ರಾಹ್ಮಣವೇಷದಿಂದ ಬಂದಿದ್ದು ಸಾಕ್ಷಾತ್ ಶ್ರೀಹರಿಯೇ ಎಂಬ ವಿಶೇಷಾಂಶ ವರಾಹಪುರಾಣದ ಚಾತುರ್ಮಾಸ್ಯಮಾಹಾತ್ಮ್ಯದಲ್ಲಿದೆ (ಅಧ್ಯಾಯ ೨೩, ಶ್ಲೋಕ ೭೨–೧೯೪).

---

೩. ರತ್ನಾನ್ವಿತಮ್ (ಪಾಠಾಂತರ)

೩. ನಂದಿಘೋಷಮಕಾರಯದಿತ್ಯತ್ರ ನಂದಃ ಆನಂದಃ ತದ್ವತಾಂ ಘೋಷಃ ನಂದಿಘೋಷಃ। ಆನಂದವಿಶೇಷೇ ಜಾತೇ ಕ್ರಿಯಮಾಣವಾದ್ಯಘೋಷ ಇತ್ಯರ್ಥಃ ॥ – (ವಾ.)

೩. ನಂದಿರವಂ ಉತ್ಸವಭೇರಿರವಮ್ ॥ – (ಜ.)

ನಂದಿಘೋಷಕ್ಕೆ ಕಾರಣ

ಅಕಾಲಜಂ ತಂ ತು ನಿಶಮ್ಯ ರಾಜಾ
ಪಪ್ರಚ್ಛ ದೂತೈಸ್ತಮುವಾಚ ಭೀಮಃ ।
ಯನ್ಮರ್ತ್ಯದೇಹೋಽಪಿ ವಿನಿಶ್ಚಿತಾಯು-
ರಭೂನ್ನೃಪಸ್ತೇನ ಮಮಾಸ ಹರ್ಷಃ ॥ ೪ ॥

ಅ: ಅಕಾಲದಲ್ಲಿ ಉಂಟಾದ ಆ ಜಯಘೋಷವನ್ನು ಕೇಳಿ ಧರ್ಮರಾಜ ದೂತರ ಮೇಲೆ ದೂತರನ್ನು ಅಟ್ಟಿ ಭೀಮನನ್ನು ವಿಚಾರಿಸಿದ. ಭೀಮ ಅವನಿಗೆ ತಿಳಿಸಿದ ''ಮರ್ತ್ಯದೇಹದಲ್ಲಿದ್ದು ಧರ್ಮರಾಜ ತನ್ನ ಆಯುಷ್ಯದ ಬಗ್ಗೆ ನಿಶ್ಚಯ ಜ್ಞಾನವನ್ನು ಹೊಂದಿರುವನು, ಅದರಿಂದಾಗಿ ನನಗೆ ಹರ್ಷವಾಯಿತು''.

ವಿ: ೧) ಮನುಷ್ಯಜನ್ಮ ಎಷ್ಟು ಅಮೂಲ್ಯವೋ ಅಷ್ಟೇ ಅಸ್ಥಿರ; ನಾಶವಾಗುವಂತಹುದು; ಅದಕ್ಕೇ ಅದು ಮರ್ತ್ಯ. ಆದ್ದರಿಂದ ಧರ್ಮಸಾಧನೆಯ ಅವಕಾಶವನ್ನು ಸರ್ವಥಾ ಮುಂದೆ ಹಾಕಕೂಡದು. ಧರ್ಮರಾಜ ಬೆಳಿಗ್ಗೆ ಹಣ ನೀಡುವುದಾಗಿ ಹೇಳಿದ ಎಂದರೆ ಅಲ್ಲಿಯವರೆಗೂ ಅವನು ಬದುಕಿರುವುದು ನಿಶ್ಚಿತ ಎಂದು ಅವನು ತಿಳಿದಿರುವನು ಎಂದಾಯಿತು. ತನ್ನ ಆಯುಷ್ಯದ ಬಗ್ಗೆ ಅಷ್ಟು ಸ್ಪಷ್ಟಜ್ಞಾನ ಹೊಂದಿರುವನು ಎಂದರೆ ಬೆಳಗಿನ ವರೆಗೆ ಮೃತ್ಯುವಿನ ಮೇಲೆ ಜಯ ಸಾಧಿಸಿದವನು ಎಂದರ್ಥ. ಅದಕ್ಕಾಗಿಯೇ ಅಪಾರಹರ್ಷ; ಅದರಿಂದಾಗಿ ನಂದಿಘೋಷ ಎಂದು ಭಾವ.

೨) ಇಲ್ಲಿ ತತ್ವವು ರೋಚಕವಾಗಿರುವಂತೆ ಭೀಮ ಅದನ್ನು ತಿಳಿಸಿದ ರೀತಿಯೂ ಸಹ ಅತ್ಯಂತ ರೋಚಕ ಎಂಬುದನ್ನು ಗಮನಿಸಬೇಕು. ಇಲ್ಲಿಯ ದೂತೈಃ ಎಂಬ ಪದದ ಸ್ವಾರಸ್ಯವನ್ನು ಶ್ರೀವಾದಿರಾಜರು 'ದೂತರ ಮೇಲೆ ದೂತರನ್ನು ಅಟ್ಟಿ' ಎಂದು ಅಪೂರ್ವವಾಗಿ ವಿವರಿಸಿರುವರು.

ಧರ್ಮಪರನಾದ ಧರ್ಮರಾಜ

ಇತೀರಿತೋಽಸೌ ನೃಪತಿಸ್ತ್ವರೇತ
ಧರ್ಮಾರ್ಥಮಿತ್ಯಸ್ಯ ಮತಂ ಪ್ರಪೂಜಯನ್ ।
ಜಗಾದ ಸಾಧ್ವಿತ್ಯಥ ಭೂಯ ಏವ
ಧರ್ಮೇ ತ್ವರಾವಾನಪಿ ಸಂಬಭೂವ ॥ ೫ ॥

---

೪. ಪಪ್ರಚ್ಛ ದೂತೈರಿತ್ಯತ್ರ ದೂತೈಃ ಪಪ್ರಚ್ಛ= ದೂತೋಪರಿ ದೂತಂ ಪ್ರೇಷಯಿತ್ವಾ ಪಪ್ರಚ್ಛೇತ್ಯರ್ಥಃ। ತಂ = ಪ್ರಥಮಮಾಗತಂ ದೂತಮ್ ॥ –(ವಾ.)

ಅ: ಭೀಮ ಹೀಗೆ ತಿಳಿಸಲು ಧರ್ಮರಾಜ ಧರ್ಮಾಚರಣೆಯಲ್ಲಿ ವಿಲಂಬ ಸಲ್ಲದು ಎಂಬ ಭೀಮನ ಭಾವವನ್ನು ತಿಳಿದು ಗೌರವಿಸಿದ. ಛಲೇ! ಎಂದು ನುಡಿದ. ಬಳಿಕ ಧರ್ಮಾಚರಣೆಯಲ್ಲಿ ತ್ವರೆ ಮಾಡುವವನೂ ಆದ.

ವಿ: ೧) ಜೀವಿ ಹುಟ್ಟುವಾಗಲೇ ಮೃತ್ಯು ತಲೆಯೇರಿ ಕುಳಿತಿರುತ್ತದೆ. ಎಂದರೆ ಸಾವು ಯಾವ ಕ್ಷಣದಲ್ಲೂ ಒದಗಬಹುದಾದ ದೊಡ್ಡ ಅಪಾಯ ಎಂದು ತಿಳಿದೇ ಧರ್ಮಾಚರಣೆಯಲ್ಲಿ ಮನುಷ್ಯ ಸದಾ ಜಾಗೃತನಾಗಿ ತ್ವರೆಯಿಂದ ವರ್ತಿಸಬೇಕು ಎಂಬುದು ಭೀಮ ಸಂದೇಶದ ಸಾರ :

ಅಜರಾಮರವತ್ ಪ್ರಾಜ್ಞಃ ವಿದ್ಯಾಮರ್ಥಂ ಚ ಸಾಧಯೇತ್ ।
ಗೃಹೀತ ಇವ ಕೇಶೇಷು ಮೃತ್ಯುನಾ ಧರ್ಮಮಾಚರೇತ್ ॥ – (ಸ್ಮೃತಿ)

೨) ಧರ್ಮರಾಜ ಭೀಮನ ಸಂದೇಶವನ್ನು ಗ್ರಹಿಸಿದ, ತನ್ನ ತಪ್ಪಿನ ಅರಿವಾಯಿತು. ತನ್ನನ್ನು ಎಚ್ಚರಿಸಿದ್ದಕ್ಕಾಗಿ ಭೀಮನನ್ನು ಬಹಳವಾಗಿ ಅಭಿನಂದಿಸಿ, ಅನಂತರ ಕಾಲದಲ್ಲಿ ಮುಂಚೆಗಿಂತ ಹೆಚ್ಚು ತ್ವರೆಯಿಂದ ಧರ್ಮಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡ. ಹೀಗೆ ಸ್ವತಃ ಧರ್ಮಮೂರ್ತಿಯಾದ ಧರ್ಮರಾಜನಿಗೇ ಧರ್ಮಪ್ರಜ್ಞೆ ಹೆಚ್ಚಿಸಿದ ಭೀಮನದು ವಿಶೇಷ ಹಿರಿಮೆ. ಭೀಮನ ಧರ್ಮಕಾರ್ಯ ಧರ್ಮರಾಜನಿಗೂ ಆದರ್ಶವಾಯಿತು, ಅದರಿಂದಾಗಿಯೇ ಭೀಮನನ್ನು ಮಹಾಭಾರತ **'ಸತ್ಯೇ ಚ ಧರ್ಮೇ ಚ ರತಃ ಸದೈವ'**(೨೨/೨೯೩) ಎಂದು ಕೊಂಡಾಡಿದೆ.

೩) ಧರ್ಮವನ್ನು ಆಚರಿಸಲು ಒಂದು ದಿನ ಸ್ವಲ್ಪ ವಿಳಂಬ ಮಾಡಿದ್ದಕ್ಕಾಗಿ ಭೀಮಸೇನ ನಂದಿಘೋಷ ಮಾಡಿದ. ಪ್ರತಿಯೊಂದು ಧರ್ಮಕಾರ್ಯವನ್ನೂ ಮುಂದೆ ಹಾಕುವ ಜನಗಳ ಬಗ್ಗೆ ವಾಯುದೇವರು ಅದೆಷ್ಟು ನಂದಿಘೋಷ ಮಾಡಬಹುದೋ ಊಹಿಸಬಹುದು. ಧರ್ಮಕಾರ್ಯ ಮಾಡದ ಜನರ ಬಗ್ಗೆಯಂತೂ ಯಮಘೋಷವೇ ನಿಶ್ಚಿತ.

೪) ಪುರಂದರದಾಸರ ''ತಾಸು ಬಾರಿಸುತಿದೆ ಕೇಳಿ ಹರಿದಾಸರೆಲ್ಲ'' ಎಂಬ ಕೀರ್ತನೆ ಈ ಪ್ರಸಂಗದ ಸ್ಫೂರ್ತಿಯಿಂದ ರಚಿತವಾದದ್ದು ಎಂದು ಭಾವಿಸಬಹುದು.

ಧೃತರಾಷ್ಟ್ರನ ಬಗ್ಗೆ ಅನುಕಂಪ

ಅಥಾಂಬಿಕೇಯಂ ವಿಷಯೇಷು ಸಕ್ತಂ
ದುಃಸಂಗದುಷ್ಟಂ ಕೃತಭೂರಿದೋಷಮ್ ।
ಸಮಸ್ತರಾಜಾಪ್ಯಯಹೇತುಭೂತಂ
ವಿಚಾರ್ಯ ತಂ ಮಾರುತಿರನ್ವಕಂಪತ ॥ ೬ ॥

ಅ: ಬಳಿಕ ಧೃತರಾಷ್ಟ್ರ ದುಷ್ಪಸಂಗದಿಂದಾಗಿ ದೂಷಿತನಾಗಿ, ಸಮಸ್ತ ರಾಜರುಗಳ ವಿನಾಶಕ್ಕೆ ಕಾರಣನಾಗಿ ಮಹತ್ತರವಾದ ಪಾಪಕಾರ್ಯವನ್ನು ಮಾಡಿದ್ದರೂ ವಿಷಯಭೋಗಗಳಲ್ಲಿ ಮೈಮರೆತಿದ್ದುದನ್ನು ಕಂಡು ಭೀಮಸೇನ ಅನುಕಂಪ ತೋರಿದ.

ವಿ: ೧) ಪಾಂಡವ ರಾಜ್ಯಭಾರದಲ್ಲಿ ಧೃತರಾಷ್ಟ್ರ ಸುಖವಾಗಿಯೇ ನೆಲೆಸಿದ್ದ. ಆದರೆ, ಅವನಿಗೆ ತಾನು ತನ್ನ ಮಕ್ಕಳ ಮೇಲಿನ ವ್ಯಾಮೋಹದಿಂದಾಗಿ ಅಪಾರ ಕ್ಷತ್ರಿಯರ ನಾಶಕ್ಕೆ ಕಾರಣನಾದ ಬಗ್ಗೆ ಸ್ವಲ್ಪವೂ ಪಶ್ಚಾತ್ತಾಪ ಹುಟ್ಟಿರಲಿಲ್ಲ ಬದಲಾಗಿ ಕೇವಲ ಭೋಗಗಳಲ್ಲಿ ಆಸಕ್ತನಾಗಿ ತನ್ನ ಜೀವನವನ್ನು ಕಳೆಯುತ್ತಿದ್ದ. ಅದು ಅವನ ಶ್ರೇಯಸ್ಸಿಗೆ ಕಾರಣವಾಗದು ಎಂಬ ಭಾವನೆಯಿಂದ ಭೀಮ ಅನುಕಂಪ ಹೊಂದಿದ ಎಂದರ್ಥ.

೨) ಹಾಗೆ ಪಾಪ ಕಳೆದುಕೊಳ್ಳದಿದ್ದಲ್ಲಿ ತಾರೆ ಮೊದಲಾದವರಂತೆ ತಮ್ಮ ಮೂಲರೂಪವನ್ನು ಸೇರಲಾಗದೆ, ವ್ಯಥೆ ಪಡುವುದು ಅನಿವಾರ್ಯ ಎಂದು ಭಾವ (೨೦/೧೬೧).

ಭೀಮನು ಧೃತರಾಷ್ಟ್ರನಿಗೆ ವೈರಾಗ್ಯ ಹುಟ್ಟಿಸಿದ ವೈಖರಿ

ಅಕುರ್ವತಸ್ತೀಕ್ಷ್ಣತಪಃ ಕುತಶ್ಚಿ-
ನ್ನೈವ ಸ್ವಲೋಕಾಪ್ತಿರಮುಷ್ಯ ಭೂಯಾತ್ ।
ರಾಗಾಧಿಕೋಽಯಂ ನ ತಪಶ್ಚ ಕುರ್ಯಾ-
ದಿತ್ಯಸ್ಯ ವೈರಾಗ್ಯಕರಾಣಿ ಚಕ್ರೇ ॥ ೭ ॥

ಅ: ಅವನು ಉಗ್ರ ತಪಸ್ಸನ್ನು ಕೈಗೊಳ್ಳದಿದ್ದಲ್ಲಿ ಯಾವ ಕಾರಣದಿಂದಲೂ ಅವನಿಗೆ ತನ್ನ ಸ್ವಲೋಕದ ಪ್ರಾಪ್ತಿ ಆಗದು. ಮಿತಿಮೀರಿದ ವಿಷಯಾಸಕ್ತಿಯನ್ನು ಹೊಂದಿರುವ ಇವನು ತಪಸ್ಸನ್ನು ಮಾಡಲಾರ ಎಂದು ತಿಳಿದು ಅವನಿಗೆ ವೈರಾಗ್ಯಕ್ಕೆ ಕಾರಣವಾಗುವಂತಹ ಕಾರ್ಯ-ಗಳನ್ನು ಭೀಮ ಮಾಡತೊಡಗಿದ.

---

೬. ಸಮಸ್ತರಾಜಾಪ್ಯಯಸ್ಯಾತಿಶಯೇನ ಹೇತುಮಿತ್ಯರ್ಥಃ। – (ಸ.)

೭. ಅಸ್ಯ ಧೃತರಾಷ್ಟ್ರಸ್ಯ ಲೋಕಾಪ್ತಿರ್ನಿಜಲೋಕಾಪ್ತಿಃ। – (ವೇ.)

೭. ವೈರಾಗ್ಯಕರಾಣಿ ಚಕ್ರ ಇತ್ಯತ್ರ ವೈರಾಗ್ಯಕರಾಣಿ ಕರ್ಮಾಣೀತಿ ಯೋಗ್ಯಪದಾಧ್ಯಾಹಾರಃ – (ವಾ.)

೭. **ನೈವಾತ್ಮಲೋಕಾಪ್ತಿರಿತಿ ಕ್ವಚಿತ್ ಪಾಠಃ।** – (ತಾ.)

ವಿ: ೧) ಧೃತರಾಷ್ಟ್ರ ತನ್ನ ಆ ಪಾಪದ ಪರಿಹಾರಕ್ಕಾಗಿ ಪಶ್ಚಾತ್ತಾಪಪಟ್ಟು ದೊಡ್ಡ ತಪಸ್ಸನ್ನೇ ಮಾಡಬೇಕು. ಇಲ್ಲದಿದ್ದಲ್ಲಿ ಅವನಿಗೆ ಅವನ ಗಂಧರ್ವಲೋಕ ಲಭಿಸದು. ಆದರೆ, ಭೋಗಾಸಕ್ತನಾದ ಧೃತರಾಷ್ಟ್ರ ತಪಸ್ಸು ಮಾಡುವ ಯೋಚನೆಯಲ್ಲೂ ತೊಡಗಿರಲಿಲ್ಲ. ಅವನಿಗೆ ಎಚ್ಚರಿಕೆ ನೀಡಿ ಉದ್ಧಾರದ ಹಾದಿಯನ್ನು ತೋರಲೆಂದು ಭೀಮ ಕೆಲವು ವಿಚಿತ್ರವಾದ ಕಾರ್ಯಗಳನ್ನು ಮಾಡತೊಡಗಿದ ಎಂದರ್ಥ.

೨) ವಿಶೇಷವಾಗಿ ಭೀಮನ ಮೇಲೆ ಧೃತರಾಷ್ಟ್ರನಿಗೆ ಕೋಪವಿದ್ದ ವಿವರ ಈಗಾಗಲೇ ಬಂದಿದೆ. ಅದು ಪರಿಹಾರವಾಗದಿದ್ದಲ್ಲಿ ಅವನಿಗೆ ಸದ್ಗತಿ ದೊರಕದು ಎಂಬ ಕಾರಣವೂ ಇಲ್ಲಿ ಗ್ರಾಹ್ಯ.

ಆಜ್ಞಾಂ ಪರೈರಸ್ಯ ನಿಹಂತಿ ಸೋದರೈ-
ರ್ವಧೂಜನೈರಪ್ಯತಿಪೂಜಿತೇಽಸ್ಮಿನ್ ।
ಸ ನಿಷ್ಪನತ್ಯೇವಮಪೀತರೈಃ ಸ್ವೈಃ
ಸುಪೂಜಿತೋ ನಾಸ ತದಾ ವಿರಾಗಃ ॥ ೮ ॥

ಅ: ಸಹೋದರರು, ಸ್ತ್ರೀಜನರು, ಧೃತರಾಷ್ಟ್ರನನ್ನು ಅತಿಯಾಗಿ ಆದರಿಸುತ್ತಿದ್ದುದನ್ನು ಕಂಡು ಭೀಮ ಇತರರಿಂದ ಧೃತರಾಷ್ಟ್ರನ ಆದೇಶವನ್ನು ಉಲ್ಲಂಘನೆ ಮಾಡಿಸತೊಡಗಿದ. ತಾನೂ ಸಹ ಹಾಗೆ ಮಾಡಿದ. ಹಾಗಿದ್ದರೂ ಇತರರು ಅವನನ್ನು ಸತ್ಕರಿಸುತ್ತಲೇ ಇದ್ದುದರಿಂದ ಧೃತರಾಷ್ಟ್ರನಿಗೆ ವೈರಾಗ್ಯ ಹುಟ್ಟಲಿಲ್ಲ.

ವಿ: ತನ್ನ ಅಪೇಕ್ಷೆಗಳು ಭೀಮನಿಂದ ಈಡೇರದ ಪ್ರಸಂಗವನ್ನು ಕಂಡಾಗಲೂ ಧೃತರಾಷ್ಟ್ರ ಬೇರೆಯವರಿಂದ ಆ ಕಾರ್ಯಗಳನ್ನು ಮಾಡಿಸಿಕೊಂಡು ಭೋಗಾಸಕ್ತನಾಗಿಯೇ ಮುಂದುವರೆದ ಎಂದರ್ಥ.

---

೮. ಸ ನಿಷ್ಪನತ್ಯೇವಮಪೀತ್ಯತ್ರ ಏವಂ = ಆಜ್ಞೋಲ್ಲಂಘನಾದಿನಾ ಭೀಮೇ ನಿಷ್ಪನತಿ = ನಿರಾಕುರ್ವತ್ಯಪೀತರೈರರ್ಜುನಾದಿಭಃ ಸುಪೂಜಿತಃ ತದಾ ವಿರಾಗಃ ವೀತೋ ರಾಗೋ ಯಸ್ಮಾತ್ಸ ವಿರಾಗಃ। ವಿರಕ್ತೋ ನಾಸ। ಯದ್ವಾ ''ನಿಷ್ಪನಿಃ ದುರಿತಾ ಬಾಧಮಾನ'' ಇತಿ ಶ್ರುತೌ ನಃ ದುರಿತಾ = ದುರಿತಾನಿ ಬಾಧಮಾನಃ ಸನ್ ನಿಷ್ಪನಿಃ ನಿರಾಕುರ್ವಿತಿ ಲೋಟ ವೈದಿಕಪ್ರಯೋಗಾತ್ ನಿಷ್ಪನತೀತಿ ಲಟಿ ರೂಪಮ್ ಸ್ವಾಜ್ಞೋಲ್ಲಂಘನಕರ್ತ್ಯನ್ ಜನಾನ್ = ಗ್ರಾಮಜನಾನ್ ಹುಂಕಾರಾದಿನಾ ನಿರಾಕರೋತೀತ್ಯರ್ಥಃ। ಸ ಭೀಷಯತ್ಯೇವೇತಿ ಲೌಕಿಕಪ್ರಯೋಗೇ ಸಂಭವತ್ಯಪಿ ವೈದಿಕಪ್ರಯೋಗಮೇವ ಮಾನಯನ್ ಸ್ವಸ್ಯ ವೈದಿಕಾಗ್ರೇಸರತಾಂ ಖ್ಯಾಪಯತಿ– (ವಾ.)

೮. ...ನಿಷ್ಪನ್ ಅತಿತರಾಂ ಶಬ್ದಂ ಕರೋತಿ ಅತ್ಯಂತಂ ಭರ್ತ್ಸನಂ ಕರೋತೀತ್ಯರ್ಥಃ। .....

೮. ... ನಿಷ್ಪನತಿ ಅವಜ್ಞಾಸೂಚಕಶಬ್ದಂ ಕರೊತಿ। – (ಜ.)

ಇತರರಿಂದ ಧೃತರಾಷ್ಟ್ರನ ಸೇವೆ

ಸರ್ವೇ ಹಿ ಪಾರ್ಥಾಸ್ತಮೃತೇ ಸಭಾರ್ಯಾ
ವೈಚಿತ್ರವೀರ್ಯಂ ಪರಮಾದರೇಣ ।
ಪರ್ಯೇವ ಚಕ್ರುಃ ಸತತಂ ಸಭಾರ್ಯಂ
ಕೃಷ್ಣಾ ಚ ನ ಸ್ಯಾತ್ ತನಯಾರ್ತಿಮಾನಿತಿ ॥ ೯ ॥

ಅ: ಭೀಮನ ಹೊರತು ಎಲ್ಲ ಪಾಂಡವರು ಸಪತ್ನೀಕರಾಗಿ ಧೃತರಾಷ್ಟ್ರನನ್ನು ಅವನ ಪತ್ನಿಯಾದ ಗಾಂಧಾರಿಯೊಂದಿಗೆ ಪರಮಾದರದಿಂದ ಸದಾ ಉಪಚರಿಸುತ್ತಿದ್ದರು. ಪುತ್ರಶೋಕದಿಂದ ನೋಯದಿರಲೆಂದು ದ್ರೌಪದಿಯೂ ಉಪಚರಿಸುತ್ತಿದ್ದಳು.

ಎ: ೧) ಇತರರಂತೆ ದ್ರೌಪದಿಯೂ ಸಹ ಧೃತರಾಷ್ಟ್ರ ಗಾಂಧಾರಿಯರನ್ನು ಉಪಚರಿಸುತ್ತಿದ್ದರೂ ಇತರರಂತೆ ದ್ರೌಪದಿಯದು ಕೇವಲ ಕುರುಡು ಗೌರವ ಭಾವವಾಗಿರಲಿಲ್ಲ. ಉಪಚರಿಸದಿದ್ದರೆ

---

೯. ಪರ್ಯೇವ ಚಕ್ರುರಿತ್ಯತ್ರ ಪರಿಚಕ್ರುರೇವ= ಸೇವಾಮೇವ ಚಕ್ರುರಿತ್ಯರ್ಥಃ। ಕೃಷ್ಣಾ ಚ ತನಯಾರ್ತಿಮಾನ್= ತನಯನಾಶೇನಾರ್ತಿಮಾನ್ನ ಸ್ಯಾದಿತಿ ಪರಿಚಕ್ರೇ= ಪರಿಚರ್ಯಾಂ ಚಕ್ರೇ – (ವಾ.)

೯. ಸಭಾರ್ಯಂ ಸಸ್ತ್ರೀಕಮ್ । ಕೃಷ್ಣಾ ದ್ರೌಪದೀ ಚ ತನಯಾರ್ತಿಮಾನ್ ಪುತ್ರನಿಮಿತ್ತಶೋಕವಾನ್ ನ ಸ್ಯಾದಿತಿ ಪರಿಚಕ್ರೇ । ನ ತ್ವಿತರವತ್ ಪರಮಾದರೇಣೇತ್ಯರ್ಥಃ । – (ವ.)

೯. ಮಹಾಪಾಪಸಾಧನದುಷ್ಪತನಯಶೋಕವಾನ್ ನ ಸ್ಯಾದಿತಿ ವಿಚಾರ್ಯ ಭೀಮಾನುಜ್ಞಾಂ ಗೃಹೀತ್ವಾ ಕೃಪಯೈವ ಪರಿಚಕ್ರ ಇತಿ । ಏತೇನ ಕೃಷ್ಣಾ ಪತಿವ್ರತಾ ಅತೋ ಭೀಮೇನ ಯಥಾ ಕೃಪಯಾ ವೈಚಿತ್ರವೀರ್ಯೋದ್ಧಾರಾರ್ಥಂ ಪ್ರವೃತ್ತಿಃ ಕೃತಾ ತಥೈವ ಭೀಮಾನುಜ್ಞಾಂ ಗೃಹೀತ್ವಾ ಕೃಪಯಾ ವೈಚಿತ್ರವೀರ್ಯೋದ್ಧಾರಾರ್ಥಂ ಪ್ರವೃತ್ತಿಃ ಕರ್ತವ್ಯಾ । ಭೀಮವಿರುದ್ಧಪ್ರವೃತ್ತಿಃ ಕಥಂ ಕೃತೇತಿ ಶಂಕಾ ಪರಾಸ್ತಾ । ಮಹಾಪಾಪಸಾಧನದುಷ್ಟೇತಿ ಸಮಸ್ತಪದಾಧ್ಯಾಹಾರೇಣ ದುಷ್ಪುತ್ರಶೋಕನಿಮಿತ್ತಮಹಾಪಾಪಾನುತ್ಪಾದಾರ್ಥಂ ಭೀಮಾನುಜ್ಞಾಂ ಗೃಹೀತ್ವಾ ಕೃಪಯಾ ಸೇವಾಂ ಚಕ್ರ ಇತ್ಯರ್ಥ ಅತ್ರೋಚ್ಯತ ಇತ್ಯಂಗೀಕಾರಾತ್ ॥ – (ಸ.)

೯. ಕೃಷ್ಣಾ ಪರಮಾದರೇಣ ಪರ್ಯೇವ ಚಕ್ರ ಇತಿ ಪ್ರತಿಭಾತಿ ನ ತದುಕ್ತಂ ತಸ್ಯಾಃ ಪತಿವ್ರತತ್ವಾತ್ ಭೀಮಂ ಋತೇ ನ ತಸ್ಮಿನ್ ಭೀಮಸ್ಯಾನಾದರಶ್ರವಣಾತ್ ಭೀಮಸ್ಯಾನಾದರೇಣ ತಸ್ಯಾ ಆದರಸ್ಯ ಕರ್ತುಮಶಕ್ತತ್ವಾತ್ ತಸ್ಮಾದಾದರೇಣ ಪರ್ಯೇವ ಚಕ್ರುರಿತಿ ಕಥಮುಚ್ಯತ ಇತಿ ಚೇನ್ನ । ಕೃಷ್ಣಾ ಚೇತ್ಯತ್ರ ಚ ಶಬ್ದಸ್ತ್ವರ್ಥಃ ಚಕ್ರುರಿತ್ಯತ್ರತ್ಯ ಇವಶಬ್ದಃ ಇತಿಶಬ್ದೇನ ಸಂಬಧ್ಯತೇ । ತೇನ ಕೃಷ್ಣಾತು ತನಯಾರ್ತಿಮಾನ್ ನ ಸ್ಯಾದಿತ್ಯೇವ ಪರಿಚಕ್ರೇ । ನ ಭಕ್ತ್ಯೇತ್ಯುಕ್ತಂ ಭವತಿ । ತಥಾ ಚಾಸ್ಯಾ ಅಪಿ ಅಸ್ಖಲನಾದರಾನ್ನ ಪಾತಿವ್ರತ್ಯಭಂಗ ಇತಿ ಭಾವಃ । – (ತಿ.)

೯. ಉಪಾತಿಷ್ಠಂತ ತೇ ಸರ್ವೇ ಕೌರವೇಂದ್ರಂ ಯಥಾ ಪುರಾ ।
ಕುಂತೀ ಚ ದ್ರೌಪದೀ ಚೈವ ಸಾತ್ವತೀ ಚ ಯಶಸ್ವಿನೀ ॥
ಉಲೂಪೀ ನಾಗಕನ್ಯಾ ಚ ದೇವೀ ಚಿತ್ರಾಂಗದಾ ತಥಾ ।
ಧೃಷ್ಟಕೇತೋಶ್ಚ ಭಗಿನೀ ಜರಾಸಂಧಸುತಾ ತಥಾ ॥
ಏತಾಶ್ಚಾನ್ಯಾಶ್ಚ ಬಹ್ವ್ಯೋ ವೈ ಯೋಷಿತಃ ಪುರುಷರ್ಷಭ ।
ಯಥಾ ಪುತ್ರವಿಯುಕ್ತೋಽಯಂ ನ ಕಿಂಚಿದ್ ದುಃಖಮಾಪ್ನುಯಾತ್ ॥
ಇತಿ ತಾನನ್ವಶಾಸದ್ ಭಾತೄನ್ ನಿತ್ಯಮೇವ ಯುಧಿಷ್ಠಿರಃ ॥ – ಭಾರತ (ಆಶ್ರಮ. ೧/೨೨-೨೬)

ಅವನು ತನ್ನ ಮಕ್ಕಳ ಸಾವಿಗಾಗಿ ಶೋಕಿಸುತ್ತಾ ಅದಕ್ಕೆ ಕಾರಣನಾದ ಭೀಮನ ಮೇಲೆ ದ್ವೇಷ ಹೊಂದುವ ಪ್ರಸಂಗ ಒದಗುತ್ತಿತ್ತು. ಅದರಿಂದಾಗಿ ಅವನಿಗೆ ಪಾಪದ ಪ್ರಮಾಣ ಮತ್ತೂ ಹೆಚ್ಚುತ್ತಿತ್ತು. ಹಾಗೆ ವಾಯುದ್ರೋಹಕ್ಕೆ ಅವನು ತೊಡಗದಿರಲಿ ಎಂಬ ಕಾರಣದಿಂದಾಗಿ ದ್ರೌಪದಿ ಭೀಮನ ಅನುಮತಿ ಪಡೆದೇ ಅವನನ್ನು ಉಪಚರಿಸುತ್ತಿದ್ದಳು.

೨) ದ್ರೌಪದಿ ಭೀಮನ ಮನೋಭಾವವನ್ನು ಬಲ್ಲಂತಹ ಮಹಾಸಾಧ್ವಿ. ಆದ್ದರಿಂದ ಭೀಮನಿಗೆ ವಿರುದ್ಧವಾಗಿ ವರ್ತಿಸಿದಳು ಎಂದು ಸರ್ವಥಾ ತಿಳಿಯಬಾರದು. ಅದರೊಂದಿಗೆ ಸ್ತ್ರೀಯರು ಮೃದುಧೋರಣೆ ಹೊಂದಿರಬೇಕೆಂಬ ಲೋಕನೀತಿಯನ್ನು ತೋರಿಸಿದಳು ಎಂದೂ ತಿಳಿಯಬೇಕು.

ಸ ಪ್ರೀಯಮಾಣೋ ನಿತರಾಂ ಚ ತೇಷು
ನೈವಾಧಿಕಂ ಪ್ರೀಯತೇ ಭೀಮಸೇನೇ ।
ಸ್ಮರನ್ ಸುತಾಂಸ್ತೇನ ಹತಾನ್ ಸಮಸ್ತಾ-
ನಪಿ ಪ್ರಭಾವಂ ಪರಮಸ್ಯ ಜಾನನ್ ॥ ೧೦ ॥

ಅ: ಧೃತರಾಷ್ಟ್ರ ಇತರರ ಬಗ್ಗೆ ಬಹಳ ಸಂತುಷ್ಟನಾಗುತ್ತಿದ್ದರೂ ಭೀಮಸೇನನಲ್ಲಿ ಮಾತ್ರ ಅವನ ಮಹಾಪ್ರಭಾವವನ್ನು ಬಲ್ಲವನಾಗಿದ್ದರೂ ತನ್ನ ಮಕ್ಕಳೆಲ್ಲ ಅವನಿಂದ ಹತನಾದವರು ಎಂದು ನೆನೆಯುತ್ತಾ ಅಷ್ಟಾಗಿ ಪ್ರೀತನಾಗುತ್ತಿರಲಿಲ್ಲ.

ವಿ: ಅವನಿಗೆ ಇತರರ ಮೇಲಿದ್ದ ಪ್ರೀತಿ ಭೀಮನ ಮೇಲೆ ಉಂಟಾಗಿರಲಿಲ್ಲ. ಇತರರ ಪ್ರೀತಿಗಿಂತ ಭೀಮನ ಮೇಲಿನ ಪ್ರೀತಿಯೇ ಸದ್ಗತಿಗೆ ಸಾಧಕ ಎಂದು ಶಾಸ್ತ್ರವಾಣಿ. ಧೃತರಾಷ್ಟ್ರ ಅದಕ್ಕೆ ವಿರುದ್ಧವಾಗಿಯೇ ವರ್ತಿಸುತ್ತಿದ್ದ.

---

೧೦. ಸ್ಮರನ್ ಸುತಾಂಸ್ತೇ ನ ಹತಾನ್ ಸಮಸ್ತಾನಪಿ ಪ್ರಭಾವಂ ಪರಮಸ್ಯ ಜಾನನ್ ಇತ್ಯತ್ರ ಪರಮಸ್ಯ ಸರ್ವೋತ್ತಮಸ್ಯ ಹರೇಃ ಪ್ರಭಾವಂ ಸಾಮರ್ಥ್ಯಂ ಜಾನನ್ ಕಥಂ ಅಯಮೇವ ಸ್ವತಂತ್ರಃ ಭೀಮಸ್ತು ನಿಮಿತ್ತಮಾತ್ರಮಿತಿ ಅಥವಾ ಅಸ್ಯ ಭೀಮಸ್ಯ ಪರಮೋತ್ತಮಂ ಪ್ರಭಾವಂ ಜಾನನ್ನಪಿ ನೈವೈತತ್ಕೃಷ್ಣಯಾ ಜ್ಞಾತಮಿತ್ಯತ್ರ ಆಲೋಚನಾಭಾವ ಇತಿ ಶೇಷಃ । – (ತಿ.)

೧೦. ಪರಮಸ್ಯ ಜಾನನ್ ಇತ್ಯತ್ರ ಅಸ್ಯ = ಭೀಮಸ್ಯ ಪರಂ ಪ್ರಭಾವಂ ಜಾನನ್ನಪಿ ನ ಪ್ರೀಯತೇ = ಮಹಾನ್ ಸಮರ್ಥೋಽಸೀತಿ ನ ಸ್ತೌತೀತಿ ಭಾವಃ । – (ವಾ.)

೧೦. ಏವಂ ತೇ ಧರ್ಮರಾಜಸ್ಯ ಶ್ರುತ್ವಾ ವಚನಮರ್ಥವತ್ ।
ಅವಿಶೇಷಮವರ್ತಂತ ಭೀಮಮೇಕಂ ತದಾ ವಿನಾ ॥
ನಹಿ ತತ್ ತಸ್ಯ ವೀರಸ್ಯ ಹೃದಯಾದಪಸರ್ಪತಿ ।
ಧೃತರಾಷ್ಟ್ರಸ್ಯ ದುರ್ಬುದ್ಧ್ಯಾ ಯತ್ ಕೃತಂ ದ್ಯೂತಕಾರಿತಮ್ ॥ – ಭಾರತ (ಆಶ್ರಮ. ೧/೨೬,೨೭)

ಭೀಮಸೇನ ಮಾಡಿದ ಅಪೂರ್ವಕಾರ್ಯ

ತಸ್ಯಾಪನೇತುಂ ವಿಷಯೇಷು ಸಕ್ತಿಂ
ದ್ವೇಷಂ ತಥೈವಾತ್ಮನಿ ಭೀಮಸೇನಃ ।
ಜಗಾದ ಮಾದ್ರೀಸುತಯೋಃ ಸಮಕ್ಷ-
ಮಾಸ್ಫೋಟ್ಯ ಸಂಶೃಣ್ವತ ಏವ ತಸ್ಯ ॥ ೧೧ ॥

ಅ: ಭೀಮಸೇನ ಧೃತರಾಷ್ಟ್ರನ ಮಿತಿಮೀರಿದ ಭೋಗಾಸಕ್ತಿಯನ್ನು, ತನ್ನಲ್ಲಿನ ದ್ವೇಷವನ್ನೂ ಕಳೆಯಲೆಂದು ನಕುಲ, ಸಹದೇವರ ಎದುರಿನಲ್ಲಿ ಧೃತರಾಷ್ಟ್ರನಿಗೆ ಕೇಳಿಸುವಂತೆಯೇ ಭುಜ ತಟ್ಟಿಕೊಂಡು ನುಡಿದ.

ವಿ: ಮೇಲ್ನೋಟಕ್ಕೆ ಭೀಮನ ಆ ಕಾರ್ಯಗಳಿಂದ ಧೃತರಾಷ್ಟ್ರನಿಗೆ ಸಂಕಟವಾಗಿ ದ್ವೇಷವೇ ಹೆಚ್ಚಿದರೂ ಮುಂದೆ ಅವನು ತಪಸ್ಸಿನಲ್ಲಿ ತೊಡಗಿದಾಗ ಅದಕ್ಕೆಲ್ಲ ಭೀಮನ ಆ ವರ್ತನೆಯೇ ಕಾರಣ ಎಂದು ಅರಿತು ವಿಶೇಷವಾಗಿ ಆದರವನ್ನೇ ಮಾಡಿದ. ಆದ್ದರಿಂದ ಭೀಮನ ಆ ಕಾರ್ಯ ಅಂತತಃ ಧೃತರಾಷ್ಟ್ರನಿಗೆ ತನ್ನ ಮೇಲಿದ್ದ ದ್ವೇಷವನ್ನು ತೊರೆಯಲು ಕಾರಣವಾಯಿತು.

ತಾವಿಮೌ ಮೇ ಭುಜೌ ವೃತ್ತೌ ಪೀನೌ ಚಂದನರೂಷಿತೌ ।
ಯಯೋರಂತರಮಾಸಾದ್ಯ ಜರಠಸ್ಯ ಸುತಾ ಹತಾಃ ॥ ೧೨ ॥

ಅ: ಈ ದುಂಡಾದ, ಪುಷ್ಟವಾದ, ಶ್ರೀಗಂಧ ಲೇಪಿತವಾದ ಎರಡು ಭುಜಗಳ ನಡುವೆ ಸಿಲುಕಿಯೇ ಈ ಮುದುಕನ ಪುತ್ರರೆಲ್ಲ ಹತರಾದರು.

ವಿ: ಭೀಮ ಧೃತರಾಷ್ಟ್ರನಿಗೆ ಕೇಳುವಂತೆಯೇ ಇಂತಹ ಕಟು ನುಡಿಗಳನ್ನು ನುಡಿಯುವ ಮೂಲಕ ಅವನಿಗೆ ಜೀವನದಲ್ಲಿ ವೈರಾಗ್ಯ ಹುಟ್ಟುವಂತೆ ಮಾಡಿದ ಎಂದರ್ಥ.

---

೧೧. ದ್ವೇಷಂ ತಥೈವಾತ್ಮನಿ ಭೀಮಸೇನ ಇತ್ಯತ್ರ ಉತ್ಪನ್ನವೈರಾಗ್ಯಸ್ಯ ಧೃತರಾಷ್ಟ್ರಸ್ಯ ತಪಸ್ಯವಸ್ಥಾನದಶಾಯಾಂ ಭೀಮಪ್ರೇರಣಯಾ ಮಮೇಯಂ ಸುಬುದ್ಧಿರಾಸೀದಿತಿ ಸ್ವಸ್ಮಿನ್ ದ್ವೇಷೋಽಪಿ ಕ್ರಮೇಣ ಗಮಿಷ್ಯತೀತಿ ಭಾವೇನ ದ್ವೇಷಮಪನೇತುಮಿತ್ಯುಕ್ತಮ್ – (ವಾ.)

೧೧. ಅನ್ವವರ್ತತ ಭೀಮೋಽಪಿ ನಿಶ್ಚಿತೋ ಧರ್ಮಜಂ ನೃಪಮ್ ।
ಧೃತರಾಷ್ಟ್ರಂ ಚ ಸಂಪ್ರೇಕ್ಷ್ಯ ಸದಾ ಭವತಿ ದುರ್ಮನಾಃ ॥
ರಾಜಾನಮನುವರ್ತಂತಂ ಧರ್ಮಪುತ್ರಮಮಿತ್ರಹಾ ।
ಅನ್ವವರ್ತತ ಕೌರವ್ಯೋ ಹೃದಯೇನ ಪರಾಙ್ಮುಖಃ ॥ – ಭಾರತ (ಆಶ್ರಮ. ೩/೩,೪)

ಯಮೌ ತದನ್ವಮೋದೇತಾಂ ತತ್ಸ್ನೇಹಾದ್ಗೌರವಾದಪಿ ।
ನೈವ ತತ್ಕೃಷ್ಣಯಾ ಜ್ಞಾತಂ ಪೃಥಯಾ ಚ ಸಪುತ್ರಯಾ ॥ ೧೩ ॥

ಅ: ನಕುಲ ಸಹದೇವರು ಭೀಮನ ಮೇಲಿನ ಪ್ರೀತಿಯಿಂದಲೂ, ಗೌರವದಿಂದಲೂ ಅವನ ಮಾತುಗಳನ್ನು ಒಪ್ಪಿದರು. ಅದು ದ್ರೌಪದಿಗಾಗಲೀ, ಕುಂತಿಗಾಗಲೀ, ಧರ್ಮರಾಜ ಮೊದಲಾದವರಿಗಾಗಲೀ ತಿಳಿಯಲಿಲ್ಲ.

ಎ: ಭೀಮನ ಕಾರ್ಯ ನಕುಲ ಸಹದೇವರಿಗೆ ಹೊರತು ಇತರರಿಗೆ ತಿಳಿಯಲಿಲ್ಲ; ತಿಳಿದಿದ್ದಲ್ಲಿ ಅದಕ್ಕೆ ಅವಕಾಶ ನೀಡದೇ ಧೃತರಾಷ್ಟ್ರನಿಗೆ ಸಮಾಧಾನ ನೀಡುತ್ತಿದ್ದುದರಿಂದ ಅವನಿಗೆ ಮತ್ತೆ ವಿಷಯಾಸಕ್ತಿಯೇ ಹೆಚ್ಚುತ್ತಿತ್ತು. ದ್ರೌಪದಿಗೆ ತಿಳಿಯಲಿಲ್ಲ ಎಂಬುದು ಲೋಕದೃಷ್ಟಿಯಿಂದ ಮಾತ್ರ; ವಾಸ್ತವವಾಗಿ ದ್ರೌಪದಿಯು ಸಕಲವನ್ನೂ ಬಲ್ಲವಳೇ ಆಗಿದ್ದಳು (೧೮/೧೦೨).

ವಿದುರನಿಂದ ಭೀಮನ ಕಾರ್ಯದ ವಿಶ್ಲೇಷಣೆ

ತಚ್ಛ್ರುತ್ವೋತ್ಥನ್ನಿರ್ವೇದಂ ಕ್ಷತ್ತಾ ಜ್ಯೇಷ್ಠಸ್ಯ ವರ್ಧಯನ್ ।
ಉವಾಚ ಜೀವಿತಾಶಾ ತೇ ನನು ರಾಜನ್ ಗರೀಯಸೀ ॥ ೧೪ ॥

---

೧೨. ಅಥ ಭೀಮಃ ಸುಹೃನ್ಮಧ್ಯೇ ಬಾಹುಶಬ್ದಂ ತಥಾऽಕರೋತ್ ।
ಸಂಶ್ರವೇ ಧೃತರಾಷ್ಟ್ರಸ್ಯ ಗಾಂಧಾರ್ಯಾಶ್ಚಾಪ್ಯಮರ್ಷಣಃ ॥
ಸ್ಮೃತ್ವಾ ದುರ್ಯೋಧನಂ ಶತ್ರುಂ ಕರ್ಣದುಃಶಾಸನಾವಪಿ ।
ಪ್ರೋವಾಚೇದಂ ಸುಸಂರಬ್ಧೋ ಭೀಮಃ ಸ ಪರುಷಂ ವಚಃ ॥
ಅಂಧಸ್ಯ ನೃಪತೇಃ ಪುತ್ರಾ ಮಯಾ ಪರಿಘಬಾಹುನಾ ।
ನೀತಾ ಲೋಕಮಮುಂ ಸರ್ವೇ ನಾನಾಶಸ್ತ್ರಾಸ್ತ್ರಯೋಧಿನಃ ॥
ಇಮೌ ತೌ ಪರಿಘಪ್ರಖ್ಯೌ ಭುಜೌ ಮಮ ದುರಾಸದೌ ।
ಯಯೋರಂತರಮಾಸಾದ್ಯ ಧಾರ್ತರಾಷ್ಟ್ರಾಃ ಕ್ಷಯಂ ಗತಾಃ ॥
ತಾವಿಮೌ ಚಂದನೇನಾಕ್ತೌ ಚಂದನಾರ್ಹೌ ಚ ಮೇ ಭುಜೌ ।
ಯಾಭ್ಯಾಂ ದುರ್ಯೋಧನೋ ನೀತಃ ಕ್ಷಯಂ ಸಸುತಬಾಂಧವಃ ।
ಏತಾಶ್ಚಾನ್ಯಾಶ್ಚ ವಿವಿಧಾಃ ಶಲ್ಯಭೂತಾ ನರಾಧಿಪ ॥
ವೃಕೋದರಸ್ಯ ತಾ ವಾಚಃ ಶ್ರುತ್ವಾ ನಿರ್ವೇದಮಾಗಮತ್ ॥ – ಭಾರತ (ಆಶ್ರಮ. ೩/೪-೧೧)

೧೩. ರಾಜ್ಞಸ್ತು ಚಿತ್ತಂ ರಕ್ಷಂತೌ ನೋಚತುಃ ಕಿಂಚಿದಪ್ರಿಯಮ್ ಇತ್ಯಾಶ್ರಮವಾಸಿಕೇ । – (ಜ.)

೧೩. ನಾನ್ವಬುಧ್ಯತ್ ತದ್ರಾಜಾ ಕುಂತೀಪುತ್ರೋ ಯುಧಿಷ್ಠಿರಃ ।
ಶ್ವೇತಾಶ್ವೋ ವಾऽಥ ಕುಂತೀ ವಾ ದ್ರೌಪದೀ ವಾ ಯಶಸ್ವಿನೀ ॥
ಮಾದ್ರೀಪುತ್ರೌ ಚ ಧರ್ಮಜ್ಞೌ ಚಿತ್ತಂ ತಸ್ಯಾನ್ವವರ್ತತಾಮ್ ॥
ರಾಜ್ಞಸ್ತು ಚಿತ್ತಂ ರಕ್ಷಂತೌ ನೋಚತುಃ ಕಿಂಚಿದಪ್ರಿಯಮ್ ॥ – ಭಾರತ (ಆಶ್ರಮ. ೩/೧೩,೧೪)

ಅ: ಭೀಮನ ಮಾತನ್ನು ಕೇಳಿ ಧೃತರಾಷ್ಟ್ರನಿಗೆ ವೈರಾಗ್ಯ ಹುಟ್ಟಿತು. ವಿದುರ ಅದನ್ನು ಹೆಚ್ಚಿಸಲೆಂದು ಅವನಿಗೆ ತಿಳಿಸಿದ 'ರಾಜನೇ, ನಿನಗೆ ಬದುಕಿನ ಮೇಲೆ ಆಸೆ ಅತಿಯಾಗಿದೆ'.

ವಿ: ಬದುಕುವ ಆಸೆ ತಪ್ಪೇನೂ ಅಲ್ಲ, ಆದರೆ ಅಂತಹ ಅಕಾರ್ಯವನ್ನು ಮಾಡಿಯೂ ಅದರ ಬಗ್ಗೆ ಪಶ್ಚಾತ್ತಾಪ ಪಡದೇ ವಿಷಯಲೋಲುಪನಾಗಿಯೇ ಬದುಕುವ ಆಸೆಯು ಸರ್ವಥಾ ಸರಿಯಲ್ಲ ಎಂದು ವಿದುರ ನುಡಿದ ಎಂದು ತಿಳಿಯಬೇಕು.

ವಿದುರ ಬೋಧಿಸಿದ ವೈರಾಗ್ಯ

ಅಹೋ ಗರೀಯಸೀ ಜಂತೋರ್ಜೀವಿತಾಶಾ ಯಯಾ ಭವಾನ್ ।
ಭೀಮಾಪವರ್ಜಿತಂ ಪಿಂಡಮಾದತ್ತೇ ಗೃಹಪಾಲವತ್ ॥ ೧೫ ॥

ಅ: ಆಶ್ಚರ್ಯ, ಜೀವಿಗೆ ಜೀವದ ಆಸೆ ದೊಡ್ಡದು. ಅದರಿಂದಾಗಿಯೇ ನೀನು ಭೀಮ ಎಸೆಯುವ ಪಿಂಡವನ್ನು ನಾಯಿಯಂತೆ ತಿನ್ನುತ್ತಿ.

ವಿ: ಇದು ಭಾಗವತದ ಶ್ಲೋಕ (೧/೧೩/೨೩), ಇಲ್ಲಿಯ ಗೃಹಪಾಲ ಶಬ್ದಕ್ಕೆ ನಾಯಿ ಎಂದರ್ಥ. ನಾಯಿ ಆಹಾರಕ್ಕಾಗಿ ನಾಲಿಗೆ ಚಾಚಿ ಕೂತಿರುವಂತೆ ಧೃತರಾಷ್ಟ್ರ ಭೀಮು ನೀಡುವ ಅನ್ನಕ್ಕೆ ಬಾಯಿ ಬಿಟ್ಟು ಕೂತಿರುವನು ಎಂಬುದು ಇಲ್ಲಿಯ ವ್ಯಂಗ್ಯ.

ವಿದುರ ಮಾಡಿದ ಭೀಮನ ಪ್ರಶಂಸೆ

ನ ಚಾಪರಾಧ್ಯೋ ಭೀಮಸ್ಯ ಬ್ರುವತಸ್ತ್ವಮಿದಂ ವಚಃ ।
ಅಗ್ನಿರ್ನಿಸೃಷ್ಟೋ ದತ್ತಶ್ಚ ಗರೋ ದಾರಾಶ್ಚ ದೂಷಿತಾಃ ।
ಹೃತಂ ಕ್ಷೇತ್ರಂ ಧನಂ ಯಸ್ಯ ಕಿಂ ಭೀಮೇನ ಕೃತಂ ತ್ವಯಿ ॥ ೧೬ ॥

---

೧೫. ವಿದುರಸ್ತದಭಿಪ್ರೇತ್ಯ ಧೃತರಾಷ್ಟ್ರಮಭಾಷತ ।
ರಾಜನ್ನಿರ್ಗಮ್ಯತಾಂ ಶೀಘ್ರಂ ಪಶ್ಯೇದಂ ಭಯಮಾಗತಮ್ ॥
ಪಿತೃಭ್ರಾತೃಸುಹೃತ್ಪುತ್ರಾ ಹತಾಸ್ತೇ ವಿಗತಂ ವಯಃ ।
ಆತ್ಮಾ ಚ ಜರಯಾ ಗ್ರಸ್ತಃ ಪರಗೇಹಮುಪಾಸಸೇ ॥ – ಭಾಗವತ (೧/೧೩/೧೯-೨೧)

೧೫. ಭೀಮಾಪವರ್ಜಿತಂ ಪಿಂಡಮಿತ್ಯತ್ರ ಭೀಮೇನಾಪವರ್ಜಿತಂ = ಪಿತೃಣಾಂ ಪಿಂಡವತ್ ತಿರ್ಯಗಫಸ್ತೇನ ದತ್ತಮ್। ಅತ ಏವಾನ್ನಮಿತ್ಯನುಕ್ತ್ವಾ ಪಿಂಡಮಿತ್ಯಾಹ। ಪಿಂಡಂ = ಅನ್ನಪಿಂಡಂ ಗೃಹಪಾಲಃ = ಶ್ವಾ॥ – (ವಾ.)

೧೫. ಅಹೋ ಮಹೀಯಸೀತಿ ಕ್ಷೇಪಕಮಿತಿ ಕೇಚಿತ್ । ತಥಾಪಿ ಆಚಾರ್ಯೋಕ್ತಿಸಮ್ಮಿಶ್ರಿತತ್ವಾದ್ವ್ಯಾಖ್ಯಾತಮ್ । – (ಜ.)

೧೫. ಮಹೀಯಸೀ – (ಪಾಠಾಂತರ)

ಅ: ನಿನಗೆ ಇಂತಹ ಮಾತನ್ನಾಡುವ ಭೀಮನದೇನೂ ತಪ್ಪಿಲ್ಲ, ನೀವು ಬೆಂಕಿಯಿಟ್ಟಿರಿ, ವಿಷ ಹಾಕಿದಿರಿ, ಹೆಂಡತಿಯನ್ನು ಅವಮಾನಿಸಿದಿರಿ, ಧನ, ಭೂಮಿಗಳನ್ನು ಕಿತ್ತುಕೊಂಡಿರಿ. ಆದರೆ, ಭೀಮ ನಿಮಗೆ ಪ್ರತಿಯಾಗಿ ಏನಾದರೂ ಕೆಡುಕು ಮಾಡಿದನೇ?.

ವಿ: ವಿದುರ ಈ ಮಾತುಗಳಲ್ಲಿ ಕೌರವರು ಭೀಮನಿಗೆ ಮಾಡಿದ ಅಪಚಾರವನ್ನು ತಿಳಿಸಿ ಆಗೆಲ್ಲ ಭೀಮ ಪ್ರತಿಯಾಗಿ ಏನೂ ಮಾಡದೇ ತಡೆದುಕೊಂಡಿದ್ದ ಎಂಬ ಅಂಶವನ್ನು ಸ್ಫುಟಪಡಿಸಿದ.

ಅಲಮಾಸಜ್ಜತಸ್ತೇऽದ್ಯ ನಿರ್ವೇದಕರಮೀರಿತಮ್ ।
ಉಪಕಾರಾಯ ಭೀಮೇನ ತವ ದ್ವೇಷಂ ತ್ಯಜಾತ್ರ ತತ್ ॥ ೧೭ ॥

ಅ: ವಿಷಯಗಳಲ್ಲಿ ಅತಿಯಾಗಿ ಆಸಕ್ತನಾಗಿರುವ ನಿನಗೆ ಉಪಕಾರ ಮಾಡಲೆಂದು ಭೀಮ ಇಂತಹ ವೈರಾಗ್ಯ ಹುಟ್ಟಿಸುವ ಮಾತುಗಳನ್ನು ಆಡುತ್ತಿರುವನು. ಅವನಲ್ಲಿ ನಿನ್ನ ದ್ವೇಷವನ್ನು ತೊರೆ.

ವಿ: ೧) 'ಭೀಮ ಈಗಲೂ ಸಹ ನಿನಗೆ ಅಪಕಾರ ಮಾಡುತ್ತಿಲ್ಲ; ನಿನಗೆ ವೈರಾಗ್ಯ ಹುಟ್ಟಲೆಂದು ನಿನ್ನ ಹಿತೈಷಿಯಾಗಿಯೇ ಅವನು ಹೀಗೆ ಮಾಡುತ್ತಿರುವನು; ಅದನ್ನು ಅರ್ಥ ಮಾಡಿಕೊಂಡು ದ್ವೇಷ ತೊರೆದು ಪ್ರೀತಿ ಮಾಡು' ಎಂದರ್ಥ.

೨) ಇತರರು ನಿನ್ನ ಮೇಲೆ ತೋರುವ ಪ್ರೀತಿ ನಿನ್ನ ಉದ್ಧಾರಕ್ಕೆ ಕಾರಣವಾಗದು, ಭೀಮನು ನಡೆದುಕೊಳ್ಳುವ ಈ ವಿಚಿತ್ರ ರೀತಿ ಮಾತ್ರ ನಿನ್ನ ಉದ್ಧಾರಕ್ಕೆ ಕಾರಣ. ಆದ್ದರಿಂದ ಭೀಮನೇ ನಿನಗೆ ಅತ್ಯಂತ ಹಿತೈಷಿ ಎಂಬುದು ವಿದುರನ ಭಾವ.

---

೧೫. ಅಹೋ ಮಹೀಯಸೀ ಜಂತೋರ್ಜೀವಿತಾಶಾ ಯಥಾ ಭವಾನ್ ।
ಭೀಮಾಪವರ್ಜಿತಂ ಪಿಂಡಮಾದತ್ತೇ ಗೃಹಪಾಲವತ್ ॥ – ಭಾಗವತ (೧/೧೩-೨೩)

೧೬. ಅಗ್ನಿರ್ನಿಸೃಷ್ಟೋ ದತ್ತಶ್ಚ ಗರೋ ದಾರಾಶ್ಚ ದೂಷಿತಾಃ ।
ಹೃತಂ ಕ್ಷೇತ್ರಂ ಧನಂ ಯೇಷಾಂ ತದ್ದನ್ನೈರಸುಭಿಃ ಕಿಯತ್ ॥ – ಭಾಗವತ (೧/೧೩/೨೩)

೧೭. ತಸ್ಯಾಪಿ ತವ ದೇಹೋऽಯಂ ಕೃಪಣಸ್ಯ ಜಿಜೀವಿಷೋಃ ॥
ಪರೈತ್ಯನಿಚ್ಛತೋ ಜೀರ್ಣೋ ಜರಯಾ ವಾಸಸೀ ಇವ ।
ಗತಸ್ವಾರ್ಥಮಿಮಂ ದೇಹಂ ವಿರಕ್ತೋ ಮುಕ್ತಬಂಧನಃ ॥
ಅವಿಜ್ಞಾತಗತಿರ್ನಹ್ಯಾತ್ ಸ ವೈ ಧೀರ ಉದಾಹೃತಃ ।
ಯಃ ಸ್ವಕಾತ್ ಪರತೋ ವೇಹ ಜಾತನಿರ್ವೇದ ಆತ್ಮವಾನ್ ॥
ಹೃದಿ ಕೃತ್ವಾ ಹರಿಂ ಗೇಹಾತ್ ಪ್ರವ್ರಜೇತ್ ಸ ನರೋತ್ತಮಃ ॥ – ಭಾಗವತ (೧೩/೨೪-೨೬)

ತಪಸ್ಸು ಮಾಡಲು ಸಂದೇಶ

ವಿಮುಚ್ಯ ದ್ವೇಷಕಾಮೌ ತ್ವಂ ವನೇ ತೀರ್ಥನಿಷೇವಕಃ ।
ತಪಸಾऽऽರಾಧಯ ಹರಿಂ ತತಃ ಪೂತೋ ಭವಿಷ್ಯಸಿ ॥ ೧೮ ॥

ಅ: ರಾಗದ್ವೇಷಗಳನ್ನು ತೊರೆದು ಕಾಡಿನಲ್ಲಿ ತೀರ್ಥಗಳನ್ನು ಸೇವಿಸುತ್ತಾ ಶ್ರೀಹರಿಯನ್ನು ತಪಸ್ಸಿನಿಂದ ಆರಾಧಿಸು, ಶುದ್ಧನಾಗುವಿ.

ವಿ: ಇಲ್ಲಿ ರಾಗದ್ವೇಷಗಳು ಎಂದರೆ ವಿಷಯಗಳ ವಿಷಯಗಳ ಮೇಲೆ ಮೋಹ, ಭೀಮನ ಮೇಲೆ ದ್ವೇಷ ಎಂದರ್ಥ. ಇಲ್ಲಿ ಕಾಡಿನಲ್ಲಿ ತೀರ್ಥಗಳನ್ನು ಸೇವಿಸುವುದು ಎಂದರೆ ತಪೋವನಗಳಲ್ಲಿದ್ದು ಸಚ್ಛಾಸ್ತ್ರಗಳನ್ನು ಶ್ರವಣ ಮಾಡುವುದು ಎಂಬ ಅರ್ಥ ವಿಶೇಷವಾಗಿ ವಿವಕ್ಷಿತ. ಮುಖ್ಯವಾದ ತೀರ್ಥಯಾತ್ರೆ* ಎಂದರೆ ಅದೇ ಅಲ್ಲವೇ.

ಧೃತರಾಷ್ಟ್ರ ಕೈಗೊಂಡ ಉಪವಾಸ ವ್ರತ

ಇತ್ಯುಕ್ತೋ ದ್ವೇಷಮುತ್ಸೃಜ್ಯ ಭೀಮೇ ನಿರ್ವೇದಮಾಗತಃ ।
ಅನುಜ್ಞಾಂ ತಪಸೇ ಪ್ರಾಪ್ತುಮುಪವಾಸಪರೋऽಭವತ್ ॥ ೧೯ ॥

ಅ: ವಿದುರ ಹೀಗೆ ತಿಳಿಸಲು ಧೃತರಾಷ್ಟ್ರ ಭೀಮನ ಮೇಲೆ ದ್ವೇಷವನ್ನು ಬಿಟ್ಟುವೈರಾಗ್ಯವನ್ನು ಹೊಂದಿದ. ತಪಸ್ಸಿಗೆ ಧರ್ಮರಾಜನ ಅನುಮತಿ ಪಡೆಯಲೆಂದು ಉಪವಾಸದಲ್ಲಿ ತೊಡಗಿದ.

ವಿ: ೧) ಈ ಮೊದಲು ಅವನು ಹೊಂದಿದ್ದ ವಿರಕ್ತಿ ವಿದುರನ ಮಾತಿನಿಂದ ದೃಢವಾಯಿತು. ಭೀಮನ ಕಾರ್ಯಗಳ ಭಾವವನ್ನು ವಿವರಿಸಿದ್ದು ವಿದುರ. ಭೀಮನಂತಹ ಜ್ಞಾನಿಗಳ ನಡತೆಯ ವಿಶ್ಲೇಷಣೆ ಧರ್ಮಜ್ಞರಿಗೆ ಮಾತ್ರ ಸಾಧ್ಯ ಎಂದು ಇದರ ಅರ್ಥ.

೨) ದ್ರೋಣಾದಿಗಳಿಗೆ ಹೇಗೋ (೨೬/೨೮೩, ೨೮೪) ಹಾಗೆ ಧೃತರಾಷ್ಟ್ರನಿಗೂ ಸಹ ವಿರಕ್ತಿ ಮೂಡಿದ್ದು ಭೀಮನಿಂದಲೇ ಎಂಬುದು ಗಮನಾರ್ಹ. ವಾಯುದೇವರ ವಚನದಿಂದಲೇ ನಿಜವಾದ ವೈರಾಗ್ಯ ಲಭಿಸುವುದು ಎಂದು ಇದರ ಭಾವ.

೩) ಧರ್ಮರಾಜ ಸುಲಭವಾಗಿ ತನ್ನನ್ನು ತಪಸ್ಸಿಗೆ ತೆರಳಲು ಬಿಡಲಾರನೆಂದು ಅರಿತಿದ್ದ ಧೃತರಾಷ್ಟ್ರ ಅವನಿಂದ ಅನುಮತಿ ಪಡೆಯಲೆಂದು ಉಪವಾಸವ್ರತ ಕೈಗೊಂಡ ಎಂದರ್ಥ.

---

* ತೀರ್ಥಶಬ್ದೋ ಮುಖ್ಯತಃ ಪಾವನೇಷು ವರ್ತತೇ । ನಾನ್ಯತ್ರ । ತತ್ರ ಪ್ರಯೋಗಸ್ತು ನ ತತ್ತ್ವವಿದಾಂ ಮನೋಜ್ಞಃ । ತಾದೃಶಾಸ್ತು ಭಗವತ್ತತ್ತ್ವವಿದೋ ಭಾಗವತಾ ಏವ .... ॥ – ಭಾಗವತಸಾರೋದ್ಧಾರ(೨೦/೩)

೧೯. ತತಃ ಪಂಚದಶೇ ವರ್ಷೇ ಸಮತೀತೇ ನರಾಧಿಪಃ ।
ರಾಜಾ ನಿರ್ವೇದಮಾಪೇದೇ ಭೀಮವಾಗ್ಬಾಣಪೀಡಿತಃ । – (ಆಶ್ರಮ. ೩/೧೨)

ಭೋಜನ ಸ್ವೀಕರಿಸಲು ಯುಧಿಷ್ಠಿರನ ಕೋರಿಕೆ

ಅನಶ್ನಂತಂ ಚತುರ್ಥೇऽಹ್ನಿ ಧೃತರಾಷ್ಟ್ರಂ ಯುಧಿಷ್ಠಿರಃ ।
ಜ್ಞಾತ್ವಾ ಸಂಪ್ರಾರ್ಥಯಾಮಾಸ ಭೋಜನಾರ್ಥಂ ಪುನಃ ಪುನಃ ॥ ೨೦ ॥

ಅ: ನಾಲ್ಕನೆಯ ದಿನ ಅವನು ಉಣ್ಣದಿದ್ದುದನ್ನು ತಿಳಿದು ಧರ್ಮರಾಜ ಅವನೆಡೆಗೆ ಧಾವಿಸಿ ಭೋಜನ ಮಾಡಲು ಮತ್ತೆಮತ್ತೆ ಕೇಳಿಕೊಂಡ.

ಎ: ೧) ಧೃತರಾಷ್ಟ್ರ ಹಾಗೆ ಉಪವಾಸಕ್ಕೆ ಕುಳಿತದ್ದು ಧರ್ಮರಾಜನ ಗಮನಕ್ಕೆ ಬಂದದ್ದು ನಾಲ್ಕನೆಯ ದಿನ. ಮೂರು ದಿವಸದ ಉಪವಾಸ ಧರ್ಮರಾಜನನ್ನು ಅವನೆಡೆಗೆ ಬರುವಂತೆ ಮಾಡಿತು.

೨) ಇದರಂತೆ ದಶಮಿ, ಏಕಾದಶಿ, ದ್ವಾದಶಿಯೆಂಬ ಮೂರು ದಿನದ ವ್ರತ ನಮ್ಮ ಧರ್ಮಪ್ರಾಪ್ತಿಗೆ ಸಾಧನ ಎಂದರ್ಥ. ಭೀಮನಿಂದ ಜ್ಞಾನ ಬಂದದ್ದೂ ಸಹ ಉಪವಾಸದಿಂದ ಜ್ಞಾನ ಲಭಿಸುವುದಕ್ಕೆ ಸಂಕೇತ – **'ಏಷಯಾ ಏನಿವರ್ತಂತೇ ನಿರಾಹಾರಸ್ಯ ದೇಹಿನಃ'**.

ಅನುಜ್ಞೆ ಪಡೆಯಲು ಧೃತರಾಷ್ಟ್ರನ ಹಟ

ಅನುಜ್ಞಾಂ ವನವಾಸಾಯ ತ್ವತ್ತಃ ಪ್ರಾಪ್ಯೈವ ಸರ್ವಥಾ ।
ಭೋಕ್ಷ್ಯೇऽನ್ಯಥಾ ನೇತಿ ವದನ್ ಧೃತರಾಷ್ಟ್ರಃ ಶ್ರಮಾನ್ವಿತಃ ।
ಉಪವಾಸಕೃಶೋ ಭಾರ್ಯಾಂ ಶಿಶ್ರಿಯೇ ಮೂರ್ಛಿತಃ ಕ್ಷಣಾತ್ ॥ ೨೧ ॥

ಅ: ನಿನ್ನಿಂದ ವನವಾಸಕ್ಕೆ ಅನುಮತಿಯನ್ನು ಪಡೆದ ಅನಂತರವೇ ನಾನು ಉಣ್ಣುವುದು, ಇಲ್ಲವಾದಲ್ಲಿ ಇಲ್ಲ ಎಂದು ನುಡಿಯುತ್ತಾ ಉಪವಾಸದಿಂದ ಬಳಲಿದ್ದ ಧೃತರಾಷ್ಟ್ರ ಕ್ಷಣದಲ್ಲೇ ಮೂರ್ಛಿತನಾಗಿ ಗಾಂಧಾರಿಯ ಮೇಲೆ ಒರಗಿದ.

---

೨೦. ಅಸ್ಯ ಪಾಪಸ್ಯ ಶುದ್ಧ್ಯರ್ಥಂ ನಿಯತೋऽಸ್ಮಿ ಸುದುರ್ಮತಿಃ ।
ಚತುರ್ಥೇ ನಿಯತೇ ಕಾಲೇ ಕದಾಚಿದಪಿ ಚಾಷ್ಟಮೇ ॥ – ಭಾರತ (ಆಶ್ರಮ. ೩-೨೫)

೨೧. ಅಹಮಪ್ಯುಪವತ್ಸ್ಯಾಮಿ ಯಥೈವಾಯಂ ಗುರುರ್ಮಮ ।
ಯದಿ ರಾಜಾ ನ ಭುಂಕ್ತೇऽಯಂ ಗಾಂಧಾರೀ ಚ ಯಶಸ್ವಿನೀ ॥ – ಭಾರತ (ಆಶ್ರಮ. ೩-೬೬)

೨೧. ತತೋऽಬ್ರವೀನ್ಮಹಾತೇಜಾ ಧೃತರಾಷ್ಟ್ರೋ ಯುಧಿಷ್ಠಿರಮ್ ।
ಅನುಜ್ಞಾತಸ್ತ್ವಯಾ ಪುತ್ರ ಭುಂಜೀಯಮಿತಿ ಕಾಮಯೇ ॥ – ಭಾರತ (ಆಶ್ರಮ. ೩-೮೬)

೨೧. ಇತ್ಯುಕ್ತ್ವಾ ಸ ತು ಧರ್ಮಾತ್ಮಾ ವೃದ್ಧೋ ರಾಜಾ ಕುರೂದ್ವಹಃ ।
ಗಾಂಧಾರೀಂ ಶಿಶ್ರಿಯೇ ಧೀಮಾನ್ ಸಹಸೈವ ಗತಾಸುವತ್ ॥ – ಭಾರತ (ಆಶ್ರಮ. ೩/೬೭,೬೮)

ಎ: ಧರ್ಮರಾಜ ಭೋಜನಕ್ಕೆ ಒತ್ತಾಯಿಸಿದರೂ ಧೃತರಾಷ್ಟ್ರ ಕೇಳದೇ ವನವಾಸಕ್ಕೆ ತೆರಳಲು ಅನುಮತಿ ನೀಡಲೇಬೇಕೆಂದು ಹಟ ಹಿಡಿದ. ಮೂರ್ಛೆ ಬರುವಷ್ಟು ಬಳಲಿಕೆಯಾಗಿದ್ದರೂ ಅವನು ತನ್ನ ಹಟ ಬಿಡಲಿಲ್ಲ. ಭೀಮನಿಂದ ಬಂದ ವೈರಾಗ್ಯ ಅಷ್ಟು ದೃಢವಾಗಿದ್ದುದಕ್ಕೆ ಅದು ಗಮಕ.

ಧರ್ಮರಾಜನ ಅಮೃತಸ್ಪರ್ಶ

ಶಂತಮೇನ ಕರೇಣಾಥ ಧರ್ಮಜಸ್ತಂ ಮೃದು ಸ್ಪೃಶನ್ ।
ಶನೈಃ ಸಂಜ್ಞಾಮಗಮಯದಬ್ರವೀಚ್ಚ ಸುದುಃಖಿತಃ ॥ ೨೨ ॥

ಅ: ಧರ್ಮರಾಜ ತನ್ನ ಬಹಳ ನೆಮ್ಮದಿ ನೀಡುವಂತಹ ಕೈಯಿಂದ ಧೃತರಾಷ್ಟ್ರನನ್ನು ಮೆದುವಾಗಿ ಸ್ಪರ್ಶಿಸಿ ಮೆಲ್ಲಗೆ ಎಚ್ಚರ ಹುಟ್ಟಿಸಿದ. ಬಳಿಕ ತುಂಬ ದುಃಖಿತನಾಗಿ ಹೇಳಿದ.

ಎ: ೧) ಧರ್ಮರಾಜನ ಕರಸ್ಪರ್ಶ ನೆಮ್ಮದಿ ನೀಡುವಂತಹುದು, ಧರ್ಮಾಚರಣೆಯ ಫಲವೂ ಅಂತಹುದೇ. ಅದರ ಅನುಭವ ಅತ್ಯಂತ ಹಿತಕರ ಎನ್ನಲು ಇದು ಸೂಚಕ. ಶಂತನು ತನ್ನ ಕರ–ಸ್ಪರ್ಶದಿಂದ ಸುಖ ನೀಡುತ್ತಿದ್ದ ಎವರ ಈಗಾಗಲೇ ಬಂದಿದೆ (೧೧/೧೮).

೨) ಅವನು ವರುಣನ ಅವತಾರನಾಗಿ ಹಾಗೆ ಮಾಡಿದ್ದರೆ, ಧರ್ಮರಾಜ ಯಮನ ಅವತಾರನಾಗಿ ಹೀಗೆ ಮಾಡಿದ್ದು ವಿಶೇಷ. ಧರ್ಮದ ಸ್ಪರ್ಶ ಧೃತರಾಷ್ಟ್ರನಿಗೆ ಎಚ್ಚರ ನೀಡಿತು. ಧರ್ಮಾಚರಣೆ ತತ್ತ್ವ ಜಾಗೃತಿ ಮೂಡಿಸುವುದು ಎನ್ನಲೂ ಇದು ಸೂಚಕ.

ತಪಸ್ಸಿಗೆ ತಾನೇ ತೆರಳಲು ಧರ್ಮರಾಜನ ನಿಶ್ಚಯ

ಪುರಸ್ಕೃತ್ಯ ಯುಯುತ್ಸುಂ ತ್ವಂ ಕುರು ರಾಜ್ಯಮಕಂಟಕಮ್ ।
ವಯಮೇವ ತ್ವದರ್ಥಾಯ ಕುರ್ಮಃ ಸರ್ವೇ ತಪೋ ವನೇ ॥ ೨೩ ॥

---

೨೨. ಶಂತಮೇನ ಕರೇಣೇತ್ಯತ್ರ ಅತಿಶಯೇನ ಶಂ ಸುಖಂ ಯಸ್ಮಾತ್ ಸಃ ಶಂತಮಃ ತೇನ ಅತಿಶಯಿತಸುಖ-ಕರೇಣೇತ್ಯರ್ಥಃ – (ವಾ.)

೨೨. ಅತಿಶಯಂ ಶಂ ಸುಖಂ ಯಸ್ಮಾದಸೌ ಶಂತಮಃ ತೇನ ತಥಾ ।

೨೨. ಅತಿಶಯಿತಸುಖವಾಚಕಾಚ್ಛಂತಮಶಬ್ದಾನ್ಮತ್ವರ್ಥೀಽಚಮಂಗೀಕೃತ್ಯ ಶಂತಮೇನೇತ್ಯಸ್ಯಾತಿಶಯಿತಸುಖಪ್ರ-ದೇನೇತ್ಯರ್ಥಸ್ಯೋಕ್ತತ್ವಾತ್ .... ॥ – (ಸ.)

೨೨. ಮೃದುಶಬ್ದೋ ಮೃದುಸ್ಪರ್ಶಪರಃ ಮೃದ್ವಿತಿಕ್ರಿಯಾವಿಶೇಷಣಮಿತಿ ಚಾಂಗೀಕೃತ್ಯ ಮೃದುಸ್ಪರ್ಶೋ ಯಥಾ ಭವತಿ ತಥಾ ಸ್ಪೃಶನ್ನಿತ್ಯರ್ಥಸ್ಯೋಕ್ತತ್ವಾತ್ ॥ – (ಸ.)

ಅ: ನೀನು ಯುಯುತ್ಸುವನ್ನು ಮುಂದೆ ಮಾಡಿಕೊಂಡು ನಿಷ್ಕಂಟಕವಾದ ರಾಜ್ಯವನ್ನು ಪಾಲಿಸು, ನಿನಗೋಸ್ಕರ ನಾವೆಲ್ಲರೂ ಕಾಡಿನಲ್ಲಿ ತಪಸ್ಸು ಮಾಡುವೆವು.

ವಿ: ೧) ಧರ್ಮರಾಜನ ಈ ಮಾತು ರಾಮಾಯಣದಲ್ಲಿನ ಭರತನ ಮಾತಿನಂತಿರುವುದನ್ನು ಗಮನಿಸಬೇಕು. ರಾಮನನ್ನು ರಾಜ್ಯವಾಳಲು ಆಹ್ವಾನಿಸುವ ಭರತ ಅವನು ಕೈಗೊಂಡಿದ್ದ ವನವಾಸವನ್ನು ತಾನು ಪೂರೈಸುವುದಾಗಿ ತಿಳಿಸಿದ; ಇಲ್ಲಿ ಧೃತರಾಷ್ಟ್ರನ ವನವಾಸವನ್ನು ಧರ್ಮರಾಜ ತಾನು ಮಾಡುವುದಾಗಿ ಹೇಳಿದ; ಧರ್ಮರಾಜನ ಈ ಮಾತಿಗೆ ಭರತನ ಆ ವರ್ತನೆ ಪ್ರೇರಣೆ ಎನ್ನಬಹುದು.

೨) ಭರತ ಮಾಡಿದ್ದು ಭಕ್ತಿಪೂರ್ವಕ ತ್ಯಾಗವಾದರೆ, ಧರ್ಮರಾಜ ಮಾಡಿದ್ದು ಅತಿ–ಪ್ರೀತಿಯ ಹಿನ್ನೆಲೆಯ ತ್ಯಾಗ ಎಂಬ ವ್ಯತ್ಯಾಸ ಗಮನಾರ್ಹ. ತನ್ನನ್ನು ಅರಮನೆಯಲ್ಲೇ ಕಾಡುಪಾಲು ಮಾಡಿದ್ದ ದುರ್ಯೋಧನಾದಿಗಳ ವರ್ತನೆ ಎಲ್ಲಿ? ತಾವೇ ಇವನಿಗಾಗಿ ಕಾಡು ಸೇರಬಯಸುವ ಪಾಂಡವರ ವರ್ತನೆ ಎಲ್ಲಿ? ಧೃತರಾಷ್ಟ್ರನಂತಹ ಹುಟ್ಟುಕುರುಡನ ಕಣ್ತೆರೆಸಿದ ಅಪೂರ್ವ ವರ್ತನೆ ಧರ್ಮರಾಜನದು.

ತಪಸ್ಸಿಗೆ ತೆರಳುವ ಧೃತರಾಷ್ಟ್ರನ ದೃಢ ಸಂಕಲ್ಪ

ನೇತ್ಯಾಹ ಧೃತರಾಷ್ಟ್ರಸ್ತಂ ಕುಲಧರ್ಮೋ ಹಿ ನೋ ವನೇ ।
ಅಂತೇ ದೇಹಪರಿತ್ಯಾಗಸ್ತನ್ಮಾಽನುಜ್ಞಾತುಮರ್ಹಸಿ ॥ ೨೪ ॥

ಅ: ಧೃತರಾಷ್ಟ್ರ ಅವನಿಗೆ 'ಆಗದು, ಅಂತ್ಯಕಾಲದಲ್ಲಿ ಕಾಡಿನಲ್ಲಿ ದೇಹತೊರೆಯುವುದು ನಮಗೆ ಕುಲಧರ್ಮ. ಅದರಿಂದ ನೀನು ನನಗೆ ಅನುಮತಿ ನೀಡು' ಎಂದ.

ವಿ: ಇತರ ಸಮಯದಲ್ಲಾಗಿದ್ದರೆ ಧೃತರಾಷ್ಟ್ರ ಅಂತಹ ಬೇಡಿಕೆಗೆ ಒಪ್ಪುವವನೇ, ಆದರೆ ಭೀಮ ಹುಟ್ಟಿಸಿದ್ದ ವೈರಾಗ್ಯ ವನವಾಸಕ್ಕೆ ಹೊರಡುವ ದಾರ್ಢ್ಯ ಹುಟ್ಟಿಸಿತ್ತು

---

೨೩. ಔರಸೋ ಭವತಃ ಪುತ್ರೋ ಯುಯುತ್ಸುರ್ನೃಪಸತ್ತಮ ।
ಅಸ್ತು ರಾಜಾ ಮಹಾರಾಜ ಯಮನ್ಯಂ ಮನ್ಯತೇ ಭವಾನ್ ॥
ಅಹಂ ವನಂ ಗಮಿಷ್ಯಾಮಿ ಭವಾನ್ ರಾಜ್ಯಂ ಪ್ರಶಾಸತು ॥ – ಭಾರತ (ಆಶ್ರಮ. ೩/೪೭)

೨೩. ಯದಿ ತ್ವವಶ್ಯಂ ವಸ್ತವ್ಯಂ ಕರ್ತವ್ಯಂ ಚ ಪಿತುರ್ವಚಃ ।
ಅಹಮೇವ ನಿವತ್ಸ್ಯಾಮಿ ಚತುರ್ದಶ ಸಮಾ ವನೇ ॥ – ವಾ.ರಾ. (೨/೧೧೧/೨೬)

೨೪. ಉಚಿತಂ ನಃ ಕುಲೇ ತಾತ ಸರ್ವೇಷಾಂ ಭರತರ್ಷಭ ।
ಪುತ್ರೇಷ್ವೈಶ್ವರ್ಯಮಾಧಾಯ ವಯಸೋಽಂತೇ ವನಂ ನೃಪ ॥ – ಭಾರತ (ಆಶ್ರಮ. ೩/೩೮)

ವ್ಯಾಸಾಗಮನ

ತಯೋರ್ವಿವದತೋರೇವಂ ಕೃಷ್ಣದ್ವೈಪಾಯನಃ ಪ್ರಭುಃ ।
ಸರ್ವಜ್ಞಃ ಸರ್ವಕರ್ತೇಶ ಆವಿರ್ಭೂತೋಽಬ್ರವೀನ್ನೃಪಮ್ ॥ ೨೫ ॥

ಅ: ಅವರಿಬ್ಬರು ಹಾಗೆ ವಿವಾದದಲ್ಲಿ ತೊಡಗಿದ್ದಾಗ ಪ್ರಭುವಾದ ವೇದವ್ಯಾಸರು ಅಲ್ಲಿ ಕಾಣಿಸಿಕೊಂಡರು. ಸರ್ವಜ್ಞರೂ, ಸರ್ವಕರ್ತೃವೂ ಆದ ಅವರು ಧರ್ಮರಾಜನಿಗೆ ತಿಳಿಸಿದರು.

ವಿ: ಎಂದಿನಂತೆ ಅಂತಹ ವಿಷಮಸನ್ನಿವೇಶದಲ್ಲಿ ವೇದವ್ಯಾಸರು ಅಲ್ಲಿಗೆ ಆಗಮಿಸಿದರು. ಹಾಗೆ ಆಗಮಿಸುತ್ತ ತಾವು ಸರ್ವಜ್ಞರು, ಸರ್ವಕರ್ತೃಗಳು ಎಂಬುದನ್ನು ಸೂಚಿಸಿದರು ಸಹ ಎಂದು ತಿಳಿಯಬೇಕು.

ಧೃತರಾಷ್ಟ್ರನನ್ನು ಬೀಳ್ಕೊಡಲು ಧರ್ಮರಾಜನಿಗೆ ವ್ಯಾಸರ ಆದೇಶ

ತಪಸಾ ಸರ್ವದೋಷಾಣಾಂ ಕ್ಷಯಕಾಮಮಿಮಂ ನೃಪಮ್ ।
ಅನುಜಾನೀಹಿ ನೈವಾಸ್ಯ ಧರ್ಮವಿಘ್ನಕರೋ ಭವ ॥ ೨೬ ॥

ಅ: ''ತಪಸ್ಸಿನಿಂದ ತನ್ನೆಲ್ಲ ಪಾಪಗಳನ್ನು ಕಳೆದುಕೊಳ್ಳಬಯಸುವ ಧೃತರಾಷ್ಟ್ರನಿಗೆ ಅನುಮತಿ ನೀಡು, ಅವನ ಧರ್ಮಸಾಧನೆಗೆ ನೀನು ಅಡ್ಡಿಯಾಗದಿರು.

ವಿ: ಶ್ರೀವೇದವ್ಯಾಸರು ಅವರ ವಿವಾದವನ್ನು ಪರಿಹರಿಸುತ್ತಾ ಕೊಟ್ಟ ನಿರ್ಣಯವಿದು. ಇದು ಭೀಮನ' ಸಂಕಲ್ಪಕ್ಕೆ ಅನುಗುಣವಾದ ನಿರ್ಣಯವಾಗಿರುವುದನ್ನು ಗಮನಿಸಬೇಕು. ಇದು 'ಹನುಮನ ಮತವೇ ಹರಿಯ ಮತವು' ಎಂಬುದಕ್ಕೆ ಮತ್ತೊಂದು ನಿದರ್ಶನ.

ಕಾಲೇ ನಿರ್ವೇದಮಾಪನ್ನಸ್ತಪಸಾ ದಗ್ಧಕಿಲ್ಬಿಷಃ ।
ಶುಭಾಂ ಗತಿಮಯಂ ಯಾಯಾದನ್ಯಥಾ ನ ಕಥಂಚನ ॥ ೨೭ ॥

ಅ: ಸಕಾಲದಲ್ಲಿ ವೈರಾಗ್ಯ ಹೊಂದಿ ತಪಸ್ಸಿನಿಂದ ಪಾಪಗಳನ್ನು ಪರಿಹರಿಸಿಕೊಂಡಲ್ಲಿ ಇವನು ಸದ್ಗತಿಯನ್ನು ಪಡೆಯುವನು. ಇಲ್ಲವಾದಲ್ಲಿ ಸರ್ವಥಾ ಇಲ್ಲ.

---

೨೬. ಸೋಽಯಂ ಮಯಾಽಭ್ಯನುಜ್ಞಾತಸ್ತ್ವಯಾ ಚ ಪೃಥಿವೀಪತಿಃ ।
ಕರೋತು ಸ್ವಮಭಿಪ್ರಾಯಂ ಮಾಽಸ್ಯ ವಿಘ್ನಕರೋ ಭವ ॥

(ಶ್ರೀವ್ಯಾಸವಚನ) – ಭಾರತ (ಆಶ್ರಮ. ೪/೧೧)

ಎಃ ವೇದವ್ಯಾಸರ ಉಪದೇಶ ಮನನೀಯವಾದುದು. ಸಾತ್ವಿಕ ವ್ರತ ಉಪವಾಸಗಳಿಗೆ ಅಡ್ಡಿ ಮಾಡುವುದು ವ್ಯಾಮೋಹದ ಫಲ. ಅಂತಹ ವ್ಯಾಮೋಹವನ್ನು ತೊರೆದು ಏಕಾದಶ್ಯಾದಿ ವ್ರತಗಳಲ್ಲಿ ಸಜ್ಜನರನ್ನು ತೊಡಗಿಸುವುದು ತೊಡಗಿದವರ ಉದ್ಧಾರಕ್ಕೂ, ತೊಡಗಿಸಿದವರ ಉದ್ಧಾರಕ್ಕೂ ಸಾಧನ ಎಂಬ ತತ್ವ ಇದರಿಂದ ಸೂಚಿತ.

ಧರ್ಮರಾಜನಿಗೆ ಧೃತರಾಷ್ಟ್ರನ ಧರ್ಮೋಪದೇಶ

ಇತ್ಯುಕ್ತೋ ಧರ್ಮರಾಜಸ್ತಮನುಜಜ್ಞೇ ಸ ಚಾಶಿತಃ ।
ಶಿಕ್ಷಯಾಮಾಸ ಸದ್ಧರ್ಮಾನ್ ನೀತಿಂ ಚ ವಿದುಷೇಽಪ್ಯಲಮ್ ॥ ೨೮ ॥

ಧೃತರಾಷ್ಟ್ರನಿಂದಲೂ ಧರ್ಮ ಕೇಳಿದ ಧರ್ಮರಾಜನ ವಿನಯ

ಕೇವಲಸ್ನೇಹತೋ ರಾಜ್ಞೇ ಶುಶ್ರಾವ ವಿನಯಾತ್ಸ ಚ ।
ಅನುಜ್ಞಾಯ ಗೃಹಂ ಪ್ರಾಪ್ತೇ ಧರ್ಮಜೇ ವಿದುರಂ ಪುನಃ ॥ ೨೯ ॥

ಶ್ರಾದ್ಧಕ್ಕೆಂದು ಧೃತರಾಷ್ಟ್ರ ಮಾಡಿದ ಧನಯಾಚನೆ-
ಅದನ್ನು ನೀಡಲು ನಿರಾಕರಿಸಿದ ಭೀಮನ ಧರ್ಮದೀಕ್ಷೆ

ಶ್ರಾದ್ಧಾಯ ವಿತ್ತಮಾಕಾಂಕ್ಷನ್ ಪ್ರೈಷಯಾಮಾಸ ತದ್ವಚಃ ।
ಶ್ರುತ್ವಾ ಯುಧಿಷ್ಠಿರೋ ಭೀಮಮಾಹ ದಾತವ್ಯಮದ್ಯ ನಃ ॥ ೩೦ ॥

---

೨೮. ಅನುಜಜ್ಞೇ ಸ ಚಾಶಿತ ಇತ್ಯತ್ರ "ಅಶು ಭಕ್ಷಣ" ಇತಿ ಧಾತೋಃ ಅಶಿತಃ= ಕೃತಭೋಜನಃ – (ವಾ.)

೨೮. ಇದಂ ತು ಯಾಚೇ ನೃಪತೇ ತ್ವಾಮಹಂ ಶಿರಸಾ ನತಃ ।
ಕ್ರಿಯತಾಂ ತಾವದಾಹಾರಸ್ತತೋ ಗಚ್ಛಾಶ್ರಮಂ ಪ್ರತಿ ॥
(ಧೃತರಾಷ್ಟ್ರನನ್ನು ಕುರಿತು ಯುಧಿಷ್ಠಿರವಚನ) – (ಆಶ್ರಮ. ೪/೨೨)

೨೮. ಭೀಷ್ಮೇಣ ಸರ್ವಮುಕ್ತೋಽಸಿ ಕೃಷ್ಣೇನ ವಿದುರೇಣ ಚ ।
ಮಯಾಽಪ್ಯವಶ್ಯಂ ವಕ್ತವ್ಯಂ ಪ್ರೀತ್ಯಾ ತೇ ನೃಪಸತ್ತಮ ॥
(ಯುಧಿಷ್ಠಿರನನ್ನು ಕುರಿತು ಧೃತರಾಷ್ಟ್ರವಚನ) – ಭಾರತ (ಆಶ್ರಮ. ೭/೨೧)

೨೯. ಭೀಷ್ಮೇ ಸ್ವರ್ಗಮನುಪ್ರಾಪ್ತೇ ಗತೇ ಚ ಮಧುಸೂದನೇ ।
ವಿದುರೇ ಸಂಜಯೇ ಚೈವ ಕೋಽನ್ಯೋ ಮಾಂ ವಕ್ತುಮರ್ಹತಿ ॥
(ಯುಧಿಷ್ಠಿರನ ವಚನ) – ಭಾರತ (ಆಶ್ರಮ. ೮/೨)

ಪುತ್ರಪೌತ್ರಾಪ್ತಬಂಧೂನಾಂ ಶ್ರಾದ್ಧೇಚ್ಛೋರ್ವಿತ್ತಮಂಜಸಾ ।
ತಮಾಹ ಭೀಮಃ ಪಾಪಾನಾಂ ವಿಮುಖಾನಾಂ ಮಧುದ್ವಿಷಃ ॥ ೩೧ ॥

ಪಾರಲೌಕಿಕಸಾಹಾಯ್ಯಂ ನ ಕಾರ್ಯಮಿತರಾರ್ಥತಃ ।
ದತ್ತೇನಾಪಿ ಹಿ ವಿತ್ತೇನ ಪುತ್ರಶ್ರಾದ್ಧಂ ಕರಿಷ್ಯತಿ ।
ತಜ್ಜ್ಞಾತ್ವಾ ದದತಾಂ ದೋಷೋ ಭವೇದಿತಿ ವಿಚಿಂತಯನ್ ॥ ೩೨ ॥

ಅ: ವ್ಯಾಸರು ಹೀಗೆನ್ನಲು ಧರ್ಮರಾಜ ಧೃತರಾಷ್ಟ್ರನಿಗೆ ಅನುಮತಿ ನೀಡಿದ. ಧೃತರಾಷ್ಟ್ರ ಭೋಜನ ಮಾಡಿದ; ಬಳಿಕ ಉತ್ತಮ ಜ್ಞಾನಿಯೇ ಆಗಿದ್ದ ಧರ್ಮರಾಜನಿಗೆ ಸದ್ಧರ್ಮಗಳನ್ನು, ನೀತಿಯನ್ನು ಕೇವಲ ಸ್ನೇಹದಿಂದ ಉಪದೇಶಿಸಿದ. ಧರ್ಮರಾಜನು ವಿನಯದಿಂದ ಅವನ್ನೆಲ್ಲ ಕೇಳಿದ. ವನವಾಸಕ್ಕೆ ಅನುಮತಿಯಿತ್ತು ಅರಮನೆಗೆ ಧರ್ಮರಾಜ ತೆರಳಿದ ಮೇಲೆ ಧೃತರಾಷ್ಟ್ರ ವಿದುರನನ್ನು ತನ್ನ ಮಕ್ಕಳಿಗೆ ಶ್ರಾದ್ಧ ಮಾಡಲು ಹಣವನ್ನು ಬಯಸಿ ಧರ್ಮರಾಜನ ಬಳಿಗೆ ಕಳುಹಿಸಿಕೊಟ್ಟ. ಅವನ ಮಾತನ್ನು ಕೇಳಿ ಧರ್ಮರಾಜ 'ಪುತ್ರರು, ಪೌತ್ರರು, ಆಪ್ತರು, ಬಂಧುಗಳು ಆದವರಿಗೆ ಶ್ರಾದ್ಧ ಮಾಡಬಯಸಿರುವ ಧೃತರಾಷ್ಟ್ರನಿಗೆ ನಾವು ಹಣ ನೀಡುವುದು ಉಚಿತ' ಎಂದು ಭೀಮನಿಗೆ ಹೇಳಿದ. ಮಧುಸೂದನನಾದ ಶ್ರೀಹರಿಯಿಂದ ವಿಮುಖರಾದವರಿಗೆ ಪರಲೋಕದ ಹಿತಕ್ಕೆ ಸಾಧನವಾಗುವ ನೆರವನ್ನು ನೀಡಕೂಡದು. ಇತರರಿಗೋಸ್ಕರ ಅದನ್ನು ಕೊಟ್ಟಾಗಲೂ ಅವನು ಆ ಹಣದಿಂದ ತನ್ನ ಮಕ್ಕಳ ಶ್ರಾದ್ಧವನ್ನು ಮಾಡುವನು. ಅದನ್ನು ತಿಳಿದೂ ಕೊಡುವವರಿಗೆ ದೋಷ ಒದಗುವುದು ಎಂದು ಆಲೋಚಿಸಿ ಭೀಮ ಅವನಿಗೆ ಹೇಳಿದ :

ವಿ: ೧) ಜೀವನವಿಡೀ ಪಾಂಡವರ ದ್ರೋಹಕ್ಕೆ ಒಂದು ರೀತಿಯಲ್ಲಿ ಕಾರಣನಾಗಿದ್ದ ಧೃತರಾಷ್ಟ್ರ ಧರ್ಮರಾಜನಿಗೆ ಧರ್ಮನೀತಿಗಳನ್ನು ಉಪದೇಶ ಮಾಡಿದ್ದು ಒಂದು ವಿಪರ್ಯಾಸ. ಅವನಿಗೆ ಧರ್ಮರಾಜನ ಪರಿಜ್ಞಾನ ತನಗಿಂತ ತುಂಬಾ ಮಿಗಿಲಾದುದು ಎಂಬ ಸ್ಪಷ್ಟ ಅರಿವಿದ್ದರೂ ತಾನು ಹಿರಿಯ ಎಂಬ ಭಾವನೆಯಿಂದಷ್ಟೇ ತಿಳಿಸಿದ.

೨) ಧರ್ಮರಾಜ ಆದರ್ಶವ್ಯಕ್ತಿ ಅಂಥವನ ಉಪದೇಶವನ್ನೂ ಸಹ ಅವನ ಸಮಾಧಾನಕ್ಕೆಂದು ಶಾಂತರೀತಿಯಿಂದಲೇ ಕೇಳಿಸಿಕೊಂಡಿದ್ದು ಅವನ ಹಿರಿಮೆ. ತನಗಿಂತ

---

೩೨. ಇತರಾರ್ಥತಃ= ದುರ್ಯೋಧನಾದಿತರೇಷಾಂ ಭೀಷ್ಮಾದೀನಾಮರ್ಥತಃ ಭೀಷ್ಮಾದೀನಾಂ ಶ್ರಾದ್ಧಾರ್ಥಮಿತಿ ಯಾವತ್ -(ವಾ.)

ಕಡಿಮೆಯಾದವರು ಸದ್ವಿಷಯಗಳ ಪ್ರವಚನ ಮಾಡುವಾಗ ಉತ್ತಮರಾದವರು ಸಹ ಪ್ರೀತಿಯಿಂದ ಕೇಳಿ ಉತ್ತೇಜನ ನೀಡುವುದು ಶ್ರೇಷ್ಠ ಕರ್ತವ್ಯ ಎಂಬ ತತ್ವ ಇದರಿಂದ ಸೂಚಿತ ಎಂದು ತಿಳಿಯಬೇಕು.

೩) ವಿದುರನ ಮೂಲಕ ಮಕ್ಕಳ ಶ್ರಾದ್ಧಕ್ಕೆಂದು ಧೃತರಾಷ್ಟ್ರ ಹಣ ಬೇಡಿದಾಗ ಧರ್ಮರಾಜ ಒಪ್ಪಿದರೂ ಭೀಮ ಒಪ್ಪಲಿಲ್ಲ; ಅದಕ್ಕೆ ಕಾರಣ ಇಲ್ಲಿ ವಿವರವಾಗಿ ಬಂದಿದೆ.

೪) ಶ್ರಾದ್ಧ ಪಕ್ಷಾದಿಪಿತೃಕಾರ್ಯಗಳೆಲ್ಲ ಹರಿಪ್ರೀತಿಕರವಾದ ಶ್ರೇಷ್ಠ ಕಾರ್ಯಗಳು. ಆದರೆ, ಕೌರವರು ಹರಿದ್ವೇಷಿಗಳಾದ ಮಹಾಪಾಪಿಗಳು. ಅಂಥವರಿಗೆ ಶ್ರಾದ್ಧಾದಿಗಳನ್ನು ಮಾಡುವುದು ನಿಷಿದ್ಧ.

೫) ಅವನು ಭೀಷ್ಮಾದಿಗಳಿಗೆ ಶ್ರಾದ್ಧ ಮಾಡುವುದು ವಿಹಿತವೇ ಆದರೂ, ಇವನು ಅದಕ್ಕಾಗಿ ನೀಡಿದ ಹಣವನ್ನು ಇವರ ಶ್ರಾದ್ಧಕ್ಕೂ ಉಪಯೋಗಿಸುವುದರಿಂದ ಅದಕ್ಕೆ ನೆರವಾದ–ವರಿಗೂ ದೋಷ ತಪ್ಪದು. ಅದರಿಂದಾಗಿ ತಾನು ಬೊಕ್ಕಸದಿಂದ ಹಣ ನೀಡಲಾರೆ ಎಂದು ಭೀಮ ನುಡಿಯುವನು.

೬) ಇಂತಹ ಅಪೂರ್ವ ವೈಷ್ಣವದೀಕ್ಷೆಯಿಂದಾಗಿಯೇ ಭೀಮಸೇನ ಶುದ್ಧಭಾಗವತ–ಧರ್ಮರತ ಎಂದು ಪ್ರಸಿದ್ಧನಾಗಿರುವನು (೧೮/೪). ಮೇಲ್ನೋಟಕ್ಕೆ ಒರಟುತನದಂತೆ ಕಾಣುವ ಈ ಪ್ರಸಂಗ ವಾಸ್ತವವಾಗಿ ವಿಶಿಷ್ಟ ವೈಷ್ಣವ ದೀಕ್ಷೆಯ ಪ್ರತೀಕ ಎಂಬುದು ತಾತ್ಪರ್ಯ.

ದುರ್ಯೋಧನಾದಿಗಳು ಹಾಳಾಗಲಿ

ಕಷ್ಟಾತ್ ಕಷ್ಟತರಂ ಯಾಂತು ಸರ್ವೇ ದುರ್ಯೋಧನಾದಯಃ ।
ಭೀಷ್ಮಾದೀನಾಂ ವಯಂ ಶ್ರಾದ್ಧಕರ್ತಾರಸ್ತೇನ ಕಿಂ ತತಃ ॥ ೩೩ ॥

ಅ: ದುರ್ಯೋಧನಾದಿಗಳೆಲ್ಲ ಕಷ್ಟಕ್ಕಿಂತ ಹೆಚ್ಚು ಕಷ್ಟತರವಾದ ದುರ್ಗತಿಯನ್ನೇ ಹೊಂದಲಿ. ಭೀಷ್ಮಾದಿಗಳಿಗೆ ನಾವು ಶ್ರಾದ್ಧ ಮಾಡುವೆವು. ಅದರಿಂದ ಧೃತರಾಷ್ಟ್ರನಿಗೇಕೆ ನಾವು ನೀಡಬೇಕು.

ವಿ: ೧) ಹಣ ನೀಡದಿದ್ದಲ್ಲಿ ದುರ್ಯೋಧನಾದಿಗಳಿಗೆ ಶ್ರಾದ್ಧ ತಪ್ಪಿ ಅವರು ದುರ್ಗತಿಗೆ ತೆರಳಿ ನರಳಬೇಕಾಗುವುದಲ್ಲ ಎಂಬ ಶಂಕೆಗೆ ಇಲ್ಲಿ ಉತ್ತರವಿದೆ. ಪರಮ ಪಾಪಿಗಳಾದ ಅವರು ಹಾಗೆ ನರಳುವುದೇ ಉಚಿತ. ಪ್ರಜೆಗಳ ಕಣ್ಣಲ್ಲಿ ನೀರು ತರಿಸಿ ಅಸಂಖ್ಯ ರಾಜರ ರಕ್ತದಿಂದ ಭೂಮಿಯನ್ನು

ತೋಯಿಸಿ ಮಹಾಪಾತಕಿಗಳಾಗಿರುವ ಅವರಿಗೆ ಎಂತಹ ದುರ್ಗತಿಯಾದರೂ ಉಚಿತವೇ ಎಂಬುದು ಭೀಮನ ನಿಶ್ಚಯ.

೨) ಅವರೊಂದಿಗೆ ಭೀಷ್ಮಾದಿಗಳಿಗೂ ಶ್ರಾದ್ಧ ತಪ್ಪುವುದಲ್ಲ ಎಂಬ ಪ್ರಶ್ನೆಗೂ ಸಮಾಧಾನ ನೀಡಿರುವನು; ಅವರಿಗೆ ತಾವೇ ಶ್ರಾದ್ಧಮಾಡುವುದರಿಂದ ದುರ್ಗತಿ ಸರ್ವಥಾ ಲಭಿಸದು ಎಂದರ್ಥ.

ಕರ್ಣನಿಗೆ ಶ್ರಾದ್ಧ ಮಾಡುವ ಅಧಿಕಾರ

ಕಾನೀನತ್ವಾತ್ ತು ಕರ್ಣಸ್ಯ ಸಹಾಸ್ಮಾಭಿಃ ಪೃಥೈವ ಹಿ ।
ಶ್ರಾದ್ಧಕರ್ಮಣ್ಯಧಿಕೃತಾ ಕಿಂ ತಸ್ಮೈ ದೀಯತೇ ಧನಮ್ ।
ಇತ್ಯುಕ್ತವಂತಂ ನೃಪತಿರರ್ಜುನಶ್ಚೋಚತುಃ ಪುನಃ ॥ ೩೪ ॥

ಅ: ಕರ್ಣ ಕಾನೀನನಾದ್ದರಿಂದ ಅವನಿಗೆ ಕುಂತಿಯೇ ನಮ್ಮೊಂದಿಗೆ ಶ್ರಾದ್ಧ ಮಾಡುವ ಅಧಿಕಾರ ಹೊಂದಿರುವಳು. ಆದ್ದರಿಂದ ಶ್ರಾದ್ಧ ಮಾಡಲು ಧೃತರಾಷ್ಟ್ರನಿಗೇಕೆ ಹಣ ನೀಡಬೇಕು. ಭೀಮಸೇನ ಹೀಗೆನ್ನಲು ಧರ್ಮರಾಜ ಮತ್ತು ಅರ್ಜುನ ಮತ್ತೆ ಕೇಳಿಕೊಂಡರು :

ವಿ: ಕರ್ಣನಿಗೆ ಶ್ರಾದ್ಧ ಮಾಡುವರಾರು ಎಂಬ ಪ್ರಶ್ನೆಗೆ ಇಲ್ಲಿ ಉತ್ತರವಿದೆ, ಕರ್ಣ ಅಣ್ಣನಾಗಿರುವುದರಿಂದ ಅವನ ಶ್ರಾದ್ಧಕ್ಕೆ ತಮಗೆ ಅಧಿಕಾರ. ಅವನು ಕನ್ಯಾಪುತ್ರನಾದ್ದರಿಂದ ಕುಂತಿಗೆ ಮುಖ್ಯಾಧಿಕಾರ. ಆದ್ದರಿಂದ ಅವನ ಶ್ರಾದ್ಧಕ್ಕಾಗಿ ಸಹ ಧೃತರಾಷ್ಟ್ರನಿಗೆ ಹಣ ನೀಡಬೇಕಿಲ್ಲ ಎಂದರ್ಥ.

---

೩೩. ಇದು ಭಾರತವಚನ (ಆಶ್ರಮ. ೧೧/೧೯)

೩೪. ಕಾನೀನತ್ವಾತ್ತು ಕರ್ಣಸ್ಯೇತ್ಯತ್ರ ಪಾಂಡೋರ್ವಿವಾಹಾನಂತರಂ ಜಾತತ್ವೇ ಅಸ್ಮಾಕಮಗ್ರಜೋ ಭವಿಷ್ಯತಿ। ತದಾऽಸ್ಮಾಭಿಃ ಶ್ರಾದ್ಧಂ ದೇಯಮ್। ಕನ್ಯಾದಶಾಯಾಮೇವ ಜಾತತ್ವಾತ್ ಪ್ರಸವಿತ್ರ್ಯಾ ಕುಂತ್ಯೈವ ದಾತವ್ಯಮಿತಿ ಭಾವೇನ ಕಾನೀನತ್ವಾದಿತ್ಯುಕ್ತಮ್ ॥ – (ವಾ.)

೩೪. ವಯಂ ಭೀಷ್ಮಸ್ಯ ದಾಸ್ಯಾಮಃ ಪ್ರೇತಕಾರ್ಯಂ ತು ಫಾಲ್ಗುನ ।
ಸೋಮದತ್ತಸ್ಯ ನೃಪತೇರ್ಭೂರಿಶ್ರವಸ ಏವ ಚ ॥
ಬಾಹ್ಲೀಕಸ್ಯ ಚ ರಾಜರ್ಷೇರ್ದ್ರೋಣಸ್ಯ ಚ ಮಹಾತ್ಮನಃ ।
ಅನ್ಯೇಷಾಂ ಚೈವ ಸರ್ವೇಷಾಂ ಕುಂತೀ ಕರ್ಣಾಯ ದಾಸ್ಯತಿ ॥
ಶ್ರಾದ್ಧಾನಿ ಪುರುಷವ್ಯಾಘ್ರ ಮಾ ಪ್ರಾದಾತ್ ಕೌರವೋ ನೃಪಃ ॥ (ಇತ್ಯಾದಿ ಭೀಮನ ವಚನ)
– ಭಾರತ (ಆಶ್ರಮ. ೧೧/೧೬–೨೪)

ತಮ್ಮ ಪಾಲಿನ ಹಣ ನೀಡಲು ಭೀಮನಿಗೆ ಧರ್ಮಜನ ಆದೇಶ

ಯಿಯಾಸೋರ್ಯಾಚಮಾನಾಯ ನಿಜಬಾಹುಬಲಾರ್ಜಿತಮ್ ।
ದೇಹಿ ವಿತ್ತಂ ಪರಮತಃ ಕಿಂ ತ್ವಾಮೇಷೋऽಭಿಯಾಚತೇ ॥ ೩೫ ॥

ಇತ್ಯುಕ್ತಮಪಿ ನೇತ್ಯೇವ ಬ್ರುವಾಣಂ ಶುದ್ಧಧಾರ್ಮಿಕಮ್ ।
ಅಪ್ರೀತ್ಯಾ ಜೋಷಮಾಸ್ವೇತಿ ಪ್ರೋಚ್ಯೋವಾಚ ಯುಧಿಷ್ಠಿರಃ ॥ ೩೬ ॥

ಕೋಶತೋ ಯದ್ಬಹಿರ್ವಿತ್ತಂ ದಾನಭೋಗಾದಿಕಾರಣಮ್ ।
ಮಮ ಸನ್ನಿಹಿತಂ ಸರ್ವಂ ತತ್ತಿತ್ರೇऽದ್ಯಾರ್ಪಿತಂ ಮಯಾ ॥ ೩೭ ॥

ಅ: ''ಧೃತರಾಷ್ಟ್ರ ಕಾಡಿಗೆ ತೆರಳಬಯಸಿರುವನು. ನಮ್ಮನ್ನು ಹಣ ಬೇಡುತ್ತಿರುವನು, ಅವನಿಗೆ ಅವನ ಬಾಹುಬಲದಿಂದ ಸಂಪಾದಿತವಾದ ಹಣವನ್ನೇ ನೀಡು, ಇನ್ನು ಮುಂದೆ ಅವನು ಹಾಗೆ ನಿನ್ನನ್ನು ಕೇಳುವನೇ?''. ಅವರು ಹಾಗೆಂದರೂ ಶುದ್ಧ ಧಾರ್ಮಿಕನಾದ ಭೀಮಸೇನ ಆಗದು ಎಂದೇ ಹೇಳಿದ. ಧರ್ಮರಾಜ ಅಸಮಾಧಾನದಿಂದ ಹೇಳಿದ -'ನೀನು ಸುಮ್ಮನಿರು, ಬೊಕ್ಕಸಕ್ಕೆ ಸೇರದ, ಹೊರಗಿನದಾದ ದಾನ, ಭೋಗ ಮೊದಲಾದವುಗಳಿಗೆ ಕಾರಣವಾಗುವ ನನ್ನ ಹಣವನ್ನೆಲ್ಲ ನಾನೀಗ ಧೃತರಾಷ್ಟ್ರನಿಗೆ ನೀಡುವೆ'.

---

೩೫. ನಿಜಬಾಹುಬಲಾರ್ಜಿತಮಿತ್ಯತ್ರ ನಿಜಬಾಹುಬಲಾರ್ಜಿತಂ = ಧೃತರಾಷ್ಟ್ರಬಾಹುಬಲಾರ್ಜಿತಂ ವಿತ್ತಂ ದೇಹಿ। ಅತಃ ಪರಂ ಏಷ ಕಿಮಭಿಯಾಚತೇ। ತದಾರ್ಜಿತಮೇವ ಧನಂ ತಸ್ಮೈ ದೇಹಿ। ತೇನ ತವ ಪಾಪಂ ನ ಸ್ಯಾದಿತಿ ಭಾವಃ – (ವಾ.)

೩೫. ಭವತಾ ನಿರ್ಜಿತಂ ವಿತ್ತಂ ದಾತುಮಿಚ್ಛತಿ ಕೌರವಃ । ಭೀಷ್ಮಾದೀನಾಂ ಮಹಾಬಾಹೋ ತದನುಜ್ಞಾತುಮರ್ಹಸಿ । ಕೌರವೋ ಧೃತರಾಷ್ಟ್ರ ಇತ್ಯಾಶ್ರಮವಾಸಿಕೇ ... । – (ಜ.)

೩೬. ಜೋಷಮಾಸ್ವೇತ್ಯತ್ರ ಜೋಷಮಾಸ್ವ = ತೂಷ್ಣೀಮಾಸ್ವ। ಪ್ರೋಚ್ಯೋವಾಚೇತ್ಯತ್ರ ಭೀಮಂ ಪ್ರತ್ಯುಕ್ತಪ್ರಕಾರೇಣ ಪ್ರೋಚ್ಯ ಉವಾಚ = ವಕ್ಷ್ಯಮಾಣಪ್ರಕಾರೇಣ ಪುನರುವಾಚ – (ವಾ.)

೩೬. ಜೋಷಂ ತೂಷ್ಣೀಂ... । – (ವ.)

೩೬. ತಮೇವಂವಾದಿನಂ ರಾಜಾ ಕುಂತೀಪುತ್ರೋ ಯುಧಿಷ್ಠಿರಃ ।
ಉವಾಚ ವಚನಂ ಧೀಮಾನ್ ಜೋಷಮಾಸ್ವೇತಿ ಭರ್ತ್ಸಯನ್ ॥ – ಭಾರತ (ಆಶ್ರಮ. ೧೧/೨೫)

೩೭. ಯಾವದಿಚ್ಛತಿ ಪುತ್ರಾಣಾಂ ಶ್ರಾದ್ಧಂ ತಾವದ್ದದಾಮ್ಯಹಮ್ ।
ಭೀಷ್ಮಾದೀನಾಂ ಚ ಸರ್ವೇಷಾಂ ಸುಹೃದಾಮುಪಕಾರಿಣಾಮ್ ॥
ಮಮ ಕೋಶಾದಿತಿ ವಿಭೋ ಮಾ ಭೂದ್ ಭೀಮಃ ಸುದುರ್ಮನಾಃ ॥
(ಯುಧಿಷ್ಠಿರನ ವಚನ) – ಭಾರತ (ಆಶ್ರಮ. ೧೨/೪,೫)

೩೭. ಯನ್ಮಮಾಸ್ತಿ ಧನಂ ಕಿಂಚಿದರ್ಜನಸ್ಯ ಚ ವೇಶ್ಮನಿ ।
ತಸ್ಯ ಸ್ವಾಮೀ ಮಹಾರಾಜ ಇತಿ ವಾಚ್ಯಃ ಸ ಪಾರ್ಥಿವಃ ॥ – ಭಾರತ (ಆಶ್ರಮ. ೧೨/೧೧)

ವಿ: ಭೀಮು ಧೃತರಾಷ್ಟ್ರನ ಬಾಹುಬಲಾರ್ಜಿತವಾದ ವಿತ್ತ ಎನ್ನುವುದನ್ನೂ ಒಪ್ಪುವುದಿಲ್ಲ, ಬೊಕ್ಕಸದ ಧನವೆಲ್ಲ ಪ್ರಜೆಗಳ ಸೊತ್ತು, ಹರಿದ್ರೋಹಿಯಂತೆ ಪ್ರಜಾದ್ರೋಹಿಯೂ ಆದ ದುರ್ಯೋಧನನಿಗೆ ಅದನ್ನು ನೀಡುವುದು ಸರ್ವಥಾ ಅನುಚಿತ ಎಂದೇ ಪರಮ ಧಾರ್ಮಿಕನಾದ ಅವನ ನಿಶ್ಚಯ. ಕೊನೆಗೆ ಭೀಮನನ್ನು ಒಪ್ಪಿಸಲು ಆಗದ ಧರ್ಮರಾಜ ತನ್ನ ವೈಯಕ್ತಿಕವಾದ ಧನವನ್ನು ಧೃತರಾಷ್ಟ್ರನಿಗೆ ಕೊಡುವುದಾಗಿ ಹೇಳಿದ.

ಧರ್ಮರಾಜನ ನಿರ್ಣಯಕ್ಕೆ ಅರ್ಜುನನ ಸಹಮತ

ಏವಮೇವಾರ್ಜುನೋಽಪ್ಯಾಹ ವಿದುರಂ ಪುನರೂಚತುಃ ।
ಮುಖ್ಯಧರ್ಮರತೇ ಭೀಮೇ ನ ಪಿತಾ ಕ್ರೋದ್ಧುಮರ್ಹತಿ ॥ ೩೮ ॥

ಅ: ಅರ್ಜುನನೂ ಸಹ ಹಾಗೆಯೇ ಹೇಳಿದ, ಧರ್ಮರಾಜ ಅರ್ಜುನರು ವಿದುರನನ್ನು ಕೇಳಿಕೊಂಡರು - ''ಮುಖ್ಯಧರ್ಮದಲ್ಲಿ ನಿರತನಾದ ಭೀಮನ ಮೇಲೆ ಧೃತರಾಷ್ಟ್ರ ಕೋಪಿಸಿಕೊಳ್ಳಕೂಡದು''.

ವಿ: ೧) ಧರ್ಮರಾಜನಂತೆ ಅರ್ಜುನನೂ ತನ್ನ ವೈಯಕ್ತಿಕ ಧನವನ್ನು ನೀಡಲು ಸಿದ್ಧನಾದ.

೨) ಭೀಮು ಒಬ್ಬ ವಿಪ್ರೋತ್ತಮನಿಗೆ ಯಜ್ಞ ಕಾರ್ಯದಂತಹ ಪವಿತ್ರ ಕಾರ್ಯಕ್ಕೆ ತನ್ನ ವೈಯಕ್ತಿಕ ಕಂಕಣವನ್ನು ನೀಡಿ ಆದರ್ಶವನ್ನು ತೋರಿಸಿದ್ದರೆ, ಅರ್ಜುನ ಧರ್ಮರಾಜರು ಧೃತರಾಷ್ಟ್ರ ಮಾಡಹೊರಟ ಕೌರವರ ಶ್ರಾದ್ಧದಂತಹ ಹೀನ ಕಾರ್ಯಕ್ಕೆ ತಮ್ಮ ವೈಯಕ್ತಿಕ ಸಂಪತ್ತನ್ನು ನೀಡಿದರು. ಇಲ್ಲೂ ಸಹ ಭೀಮನ ಎತ್ತರಕ್ಕೆ ಇವರು ಏರದಾದರು ಎಂಬ ಅಂಶವನ್ನು ಗಮನಿಸಬೇಕು.

೩) ಅವರು ಭೀಮನನ್ನು ಮುಖ್ಯಧರ್ಮರತ ಎಂದು ಕರೆಯುವ ಮೂಲಕ ಅವನ ಎತ್ತರ ತಮಗೆ ಆಗದು ಎಂಬ ಅಸಾಮರ್ಥ್ಯವನ್ನೂ ತಿಳಿಸಿರುವುದು ಗಮನಾರ್ಹ.

ವಿದುರ ತಿಳಿಸಿದ ಭೀಮಧರ್ಮದ ಮರ್ಮ

ಇತ್ಯುಕ್ತೋ ವಿತ್ತಮಾದಾಯ ಗತ್ವಾ ಕ್ಷತ್ತಾಽಗ್ರಜೇಽಬ್ರವೀತ್ ।
ಯುಧಿಷ್ಠಿರಾರ್ಜುನೌ ಭಕ್ತಿಂ ನಿತರಾಂ ತ್ವಯಿ ಚಕ್ರತುಃ ॥ ೩೯ ॥

ನಾತಿಹೃಷ್ಟಸ್ತ್ವದಾಜ್ಞಾಯಾಂ ಭೀಮಸ್ತನ್ಮಾ ಕ್ರುಧೋಽತ್ರ ಚ ।
ಶುದ್ಧೇ ಕ್ಷತ್ರಿಯಧರ್ಮೇ ಹಿ ನಿರತೋ ಯದ್ವೃಕೋದರಃ ॥ ೪೦ ॥

ಅ: ಅವರು ಹಾಗೆ ಹೇಳಲು ವಿದುರ ಆ ಹಣವನ್ನು ತೆಗೆದುಕೊಂಡು ಧೃತರಾಷ್ಟ್ರನ ಬಳಿಗೆ ಹೋಗಿ ತಿಳಿಸಿದ; 'ಧರ್ಮರಾಜ ಅರ್ಜುನರು ನಿನ್ನ ಬಗ್ಗೆ ತುಂಬಾ ಆದರ ತೋರಿದರು. ಆದರೆ

ಭೀಮ ನಿನ್ನ ಆದೇಶವನ್ನು ಅಷ್ಟಾಗಿ ಮೆಚ್ಚಲಿಲ್ಲ; ಅವನು ಪರಿಶುದ್ಧವಾದ ಕ್ಷತ್ರಿಯಧರ್ಮದಲ್ಲಿ ತನ್ನನ್ನು ತೊಡಗಿಸಿಕೊಂಡವನು; ಅದರಿಂದ ಅವನ ಮೇಲೆ ಕೋಪಮಾಡಿಕೊಳ್ಳಬೇಡ'.

ವಿ: ವಿದುರ ಧರ್ಮಜ್ಞ, ಅವನು ಭೀಮನ ವರ್ತನೆಯನ್ನು ಸಮರ್ಥಿಸಿ ಧೃತರಾಷ್ಟ್ರನಿಗೆ ಅವನ ಬಗ್ಗೆ ತಪ್ಪು ತಿಳಿಯದಿರು ಎಂದು ಎಚ್ಚರಿಸುವುದು ಗಮನಾರ್ಹ (ಆಶ್ರಮ. ೧೩/೮):

ಏವಂ ಪ್ರಾಯೋ ಹಿ ಧರ್ಮೋಽಯಂ ಕ್ಷತ್ರಿಯಾಣಾಂ ನರಾಧಿಪ ।
ಯುದ್ಧೇ ಕ್ಷತ್ರಿಯೇ ಧರ್ಮೇ ಚ ನಿರತೋಽಯಂ ವೃಕೋದರಃ ॥

ಧರ್ಮಾರ್ಜುನರೂ ಧರ್ಮಿಷ್ಠರೇ

ನೃಪಾರ್ಜುನೌ ಧರ್ಮರತಾವಪಿ ಲೋಕಕೃಪಾಪರೌ ।
ಅಜಾತಕೋಪಸ್ತಚ್ಛ್ರುತ್ವಾ ಧೃತರಾಷ್ಟ್ರಃ ಪ್ರಶಾಂತಧೀಃ ॥ ೪೧ ॥

ಅ: ಧರ್ಮರಾಜ ಅರ್ಜುನರೂ ಧರ್ಮಿಷ್ಠರೇ ಆದರೂ ಲೋಕದ ಮೇಲೆ ಕೃಪೆ ತೋರುವವರು. ವಿದುರ ಹಾಗೆ ಹೇಳಿದ್ದನ್ನು ಕೇಳಿ ಧೃತರಾಷ್ಟ್ರ ಕೋಪಗೊಳ್ಳಲಿಲ್ಲ. ಪ್ರಶಾಂತ ಮನಸ್ಕನೇ ಆಗಿದ್ದ.

ವಿ: ಧೃತರಾಷ್ಟ್ರ ಭೀಮನಿಂದ ಪಡೆದ ವೈರಾಗ್ಯ ಅಚಲವಾಗಿತ್ತು ಕ್ರಮವಾಗಿ ಅವನಲ್ಲಿ ದ್ವೇಷ ಮರೆಯಾಗಿ ಭಕ್ತಿ ಹುಟ್ಟತೊಡಗಿದ್ದಕ್ಕೆ ಈ ಪ್ರಸಂಗ ಸೂಚಕ ಎಂಬುದನ್ನು ಗಮನಿಸಬೇಕು.

ಧೃತರಾಷ್ಟ್ರ ಮಾಡಿದ ದುರ್ಯೋಧನಾದಿಗಳ ಶ್ರಾದ್ಧ

ಕೃತ್ವಾ ಶ್ರಾದ್ಧಾನಿ ಸರ್ವೇಷಾಂ ಮಹಾದಾನಾನ್ಯನಾರತಮ್ ।
ದಶರಾತ್ರಂ ದದೌ ಶುದ್ಧಮನಸಾ ನಿರ್ಋಣತ್ವಧೀಃ ॥ ೪೨ ॥

---

೪೦. ನ ಚ ಮನ್ಯುಸ್ತ್ವಯಾ ಕಾರ್ಯ ಇತಿ ತ್ವಾಂ ಪ್ರಾಹ ಧರ್ಮರಾಟ್ ।
ಸಂಸ್ಮೃತ್ಯ ಭೀಮಸ್ತದ್ವೈರಂ ಯದನ್ಯಾಯವದಾಚರತ್ ॥
ಏವಂ ಪ್ರಾಯೋ ಹಿ ಧರ್ಮೋಽಯಂ ಕ್ಷತ್ರಿಯಾಣಾಂ ನರಾಧಿಪ ।
ಯುದ್ಧೇ ಕ್ಷತ್ರಿಯಧರ್ಮೇ ಚ ನಿರತೋಽಯಂ ವೃಕೋದರಃ ॥
(ಧೃತರಾಷ್ಟ್ರನನ್ನು ಕುರಿತು ವಿದುರನ ವಚನ) – ಭಾರತ (ಆಶ್ರಮ. ೧೩/೭,೮)

೪೨. ನಿರ್ಋಣತ್ವಧೀರಿತ್ಯಸ್ಯ ನಿರ್ಗತಂ ಪಿತೃಋಣಂ ಯಸ್ಮಾತ್ಸಃ ನಿರ್ಋಣಃ ತಸ್ಯ ಭಾವಃ ನಿರ್ಋಣತ್ವಮ್। ತತ್ರ ಧೀರ್ಯಸ್ಯೇತಿ ವಿಗ್ರಹಃ। – (ವಾ.)

ಅ: ಧೃತರಾಷ್ಟ್ರ ಪುತ್ರಋಣವನ್ನು ಪರಿಹರಿಸಿಕೊಳ್ಳಲೆಂದು ಅವರಿಗೆ ಶ್ರಾದ್ಧವನ್ನು ಮಾಡಿ ಶುದ್ಧ ಮನಸ್ಸಿನಿಂದ ಹತ್ತು ದಿನಗಳ ಕಾಲ ನಿರಂತರವಾಗಿ ಮಹಾದಾನಗಳನ್ನು ನೀಡಿದ.

ಎ: ೧) ಧೃತರಾಷ್ಟ್ರನಿಗೆ ಅಯೋಗ್ಯರಾದ ಕೌರವರಿಗೆ ಶ್ರಾದ್ಧ ಮಾಡದಿರುವಷ್ಟು ಉತ್ತಮ ದೀಕ್ಷೆ ಬಂದಿರದಿದ್ದರೂ ಹಾಗೆ ಶ್ರಾದ್ಧ ಮಾಡುವಾಗ ಆ ಪಾಪಿಗಳ ಋಣ ಪರಿಹಾರವಾಗಲಿ ಎಂಬ ವಿವೇಕ ಮೂಡಿತ್ತು ಎಂಬುದು ಗಮನಾರ್ಹ.

೨) ಭೀಮನ ಅಂತಹ ಮಾತುಗಳಿಂದ ಅವನಿಗೆ ಆ ಶ್ರಾದ್ಧ ಕಾರ್ಯದ ಆಂತರ್ಯವೂ ಸಹ ತಿಳಿಯುವಂತಾಯಿತು ಎಂಬುದು ಇಲ್ಲಿ ಗಮನಿಸಬೇಕಾದ ಅಂಶ.

೩) ಅನ್ನಪಾನಗಳೊಂದಿಗೆ ವಾಹನ, ಸುವರ್ಣರತ್ನಗಳು, ದಾಸದಾಸಿಯರು, ಗ್ರಾಮ, ಆನೆ, ಕುದುರೆ, ಕನ್ಯೆಯರು – ಹೀಗೆ ಬಗೆಬಗೆಯ ದಾನಗಳನ್ನು ಅವನು ಮಾಡಿದ.

ಮಕ್ಕಳ ತಪ್ಪಿಗೆ ಪ್ರಜೆಗಳ ಕ್ಷಮೆ ಬೇಡಿದ ಧೃತರಾಷ್ಟ್ರ

ಸರ್ವಂ ಸಮರ್ಪ್ಯ ಗೋವಿಂದೇ ಪಾರ್ಥೇಭ್ಯೋಽನ್ಯೇಭ್ಯ ಏವ ಚ ।
ಸ್ವಜನೇಭ್ಯಃ ಸಮಾದಾಯ ಸ್ರವನ್ನೇತ್ರೇಭ್ಯ ಉಚ್ಚಧೀಃ ।
ಅನುಜ್ಞಾಂ ನಿರ್ಗತಃ ಪ್ರಾಹ ಪೌರಜಾನಪದಾನ್ ನೃಪಃ ॥ ೪೩ ॥

---

೪೨. ಪಾಪಿಷ್ಠಪುತ್ರಾಣಾಂ ಋಣಮೋಚನೇ ತತ್ಸಂಬಂಧಃ ಪುನರ್ನ ಸ್ಯಾದಿತಿ ಬುದ್ಧಿಮಾನಿತಿ ಭಾವಃ । –(ಜ.)

೪೨. ಋಣಮೋಚನಾರ್ಥಂ ಸ್ವಕರ್ತವ್ಯತ್ವೇನ ಕೃತಮಿತಿ ಭಾವಃ ॥ –(ವ.)

೪೨. ಇತ್ಯುಕ್ತೇ ವಿದುರೇಣಾಥ ಧೃತರಾಷ್ಟ್ರೋಽಭಿನಂದ್ಯ ತಾನ್ ।
ಮನಶ್ಚಕ್ರೇ ಮಹಾದಾನೇ ಕಾರ್ತಿಕ್ಯಾಂ ಜನಮೇಜಯ ॥ –ಭಾರತ (ಆಶ್ರಮ. ೧೩/೧೫)

೪೨. ಕಾರಯಿತ್ವಾಽನ್ನಪಾನಾನಿ ಯಾನಾನ್ಯಾಚ್ಛಾದನಾನಿ ಚ ।
ಸುವರ್ಣಮಣಿರತ್ನಾನಿ ದಾಸೀದಾಸಮಜಾವಿಕಮ್ ॥
ಕಂಬಲಾನಿ ಚ ರತ್ನಾನಿ ಗ್ರಾಮಾನ್ ಕ್ಷೇತ್ರಂ ತಥಾ ಧನಮ್ ।
ಸಾಲಂಕಾರಾನ್ ಗಜಾನಶ್ವಾನ್ ಕನ್ಯಾಶ್ಚೈವ ವರಸ್ತ್ರಿಯಃ ॥
ಶತದೇಯೇ ದಶಶತಂ ಸಹಸ್ರೇ ಚಾಯುತಂ ತಥಾ ।
ದೀಯತೇ ವಚನಾದ್ರಾಜ್ಞಃ ಕುಂತೀಪುತ್ರಸ್ಯ ಧೀಮತಃ ॥ - ಭಾರತ (ಆಶ್ರಮ. ೧೪/೩,೪,೧೦)

೪೨. ಏವಂ ಸ ಪುತ್ರಪೌತ್ರಾಣಾಂ ಪಿತೄಣಾಮಾತ್ಮನಸ್ತಥಾ ।
ಗಾಂಧಾರ್ಯಾಶ್ಚಮಹಾರಾಜ ಪ್ರದದಾವೌರ್ಧ್ವದೇಹಿಕಮ್ ॥
ದಶಾಹಮೇವಂ ದಾನಾನಿ ದತ್ವಾ ರಾಜಾಽಂಬಿಕಾಸುತಃ ।
ಬಭೂವ ಪುತ್ರಪೌತ್ರಾಣಾಮನೃಣೋ ಭರತರ್ಷಭ ॥ –ಭಾರತ (ಆಶ್ರಮ. ೧೪/೧೫,೧೮)

ಅ: ಉತ್ತಮ ಬುದ್ಧಿಶಾಲಿಯಾದ ಧೃತರಾಷ್ಟ್ರ ಸಕಲ ಕರ್ಮಗಳನ್ನೂ ಶ್ರೀಕೃಷ್ಣನಿಗೆ ಸಮರ್ಪಿಸಿ ಪಾಂಡವರಿಂದಲೂ, ಇರರ ಬಂಧುಜನರಿಂದಲೂ ಅನುಮತಿ ಪಡೆದುಕೊಂಡು ಕಾಡಿಗೆ ಹೊರಟು ನಿಂತವನಾಗಿ ಪಟ್ಟಣಿಗರನ್ನು, ಗ್ರಾಮಸ್ಥರನ್ನು ಕಣ್ಣೀರಧಾರೆ ಸುರಿಸುತ್ತಾ ಕೇಳಿಕೊಂಡ :

ಧರ್ಮತೋ ರಕ್ಷಿತಾ ಯೂಯಮಸ್ಮತ್ಪೂರ್ವೈರ್ಮಹಾತ್ಮಭಿಃ ।
ನ ಚಾಹಂ ಪರಮಸ್ನೇಹಾದ್ಯುಷ್ಮಾಭಿಃ ಸುಕೃಪಾಲುಭಿಃ ।
ಅರಕ್ಷಿತೇತಿ ಕಥಿತಃ ಪ್ರಮಾದಾದಪಿ ಸಜ್ಜನಾಃ ॥ ೪೪ ॥

ಅ: ''ನೀವೆಲ್ಲ ಮಹಾತ್ಮರಾದ ನನ್ನ ಪೂರ್ವಜರಿಂದ ಧರ್ಮದಿಂದ ಪಾಲಿಸಲ್ಪಟ್ಟಿರಿ. ಆದರೆ, ನಾನು ನಿಮ್ಮನ್ನು ಹಾಗೆ ನೋಡಿಕೊಳ್ಳಲಿಲ್ಲ. ನೀವು ಕೃಪಾಳುಗಳಾದ್ದರಿಂದ ಸಜ್ಜನರಾದ್ದರಿಂದ ನನ್ನ ಮೇಲಿನ ಪರಮ ಸ್ನೇಹದಿಂದಾಗಿ ತಪ್ಪಿಯೂ ನನ್ನನ್ನು ಪಾಲಿಸದವನು ಎಂದು ಕರೆದಿಲ್ಲ.

ಇಷ್ಟಂ ಚ ಯಜ್ಞೈಃ ಪೂರ್ತೈಶ್ಚ ಚರಿತಂ ಯುಷ್ಮದಾಶ್ರಯಾತ್ ।
ಪುತ್ರಸ್ತು ಮಮ ಪಾಪಾತ್ಮಾ ಸರ್ವಕ್ಷತ್ರವಿನಾಶಕಃ ।
ಸರ್ವಾತಿಶಂಕೀ ಮೂಢಶ್ಚ ವೃದ್ಧಾನಾಂ ಶಾಸನಾತಿಗಃ ॥ ೪೫ ॥

ಸೌಭ್ರಾತ್ರಂ ಯೇನ ಸಂತ್ಯಜ್ಯ ಪಾಂಡವೇಷು ಮಹಾತ್ಮಸು ।
ಕೃತಂ ವಿರೂಪಂ ಸುಮಹತ್ ಕುರ್ಯಾದ್ಯನ್ನಾಪರಃ ಕ್ವಚಿತ್ ॥ ೪೬ ॥

ಅ: ನಿಮ್ಮ ನೆರವಿನಿಂದ ನಾನು ಯಜ್ಞಗಳನ್ನು ಆಚರಿಸಿದೆ, ಕೆರೆ ಬಾವಿಗಳನ್ನು ತೋಡಿಸಿದೆ, ಆದರೆ ಪಾಪಿಷ್ಠನಾದ ನನ್ನ ಮಗ ಮೂರ್ಖ; ಸಕಲ ಕ್ಷತ್ರಿಯರ ನಾಶಕ್ಕೆ ಕಾರಣನಾದ. ಎಲ್ಲರಲ್ಲೂ ಸಂದೇಹಿಸಿದ. ಹಿರಿಯರ ಆದೇಶವನ್ನು ಉಲ್ಲಂಘಿಸಿದ. ಪಾಂಡವರಂತಹ ಮಹಾತ್ಮರ ಮೇಲೆ ಸೋದರಭಾವವನ್ನು ತೊರೆದು, ಬೇರಾರೂ ಎಲ್ಲೂ ಮಾಡದಂತಹ ಬಗೆಬಗೆಯ ಮಹಾ ದ್ರೋಹವನ್ನು ಮಾಡಿದ.

---

೪೪. ಯುಷ್ಮಾಭಿಃ ಸುಕೃಪಾಲುಭಿರಿತ್ಯತ್ರ ಹೇ ಸಜ್ಜನಾಃ ಪರಮಸ್ನೇಹಾತ್ ಸುಕೃಪಾಲುಭಿರ್ಯುಷ್ಮಾಭಿಃ ಅರಕ್ಷಿತಾ= ಭವತಾಂ ರಕ್ಷಣಮಕರ್ತಾऽಪ್ಯಹಂ ಪ್ರಮಾದಾದಪ್ಯರಕ್ಷಿತೇತಿ ರಕ್ಷಣಾಕರ್ತೇತಿ ನ ಕಥಿತ ಇತಿ ಯೋಜನಾ। ಯದ್ವಾ ಪ್ರಮಾದಾದರಕ್ಷಿತಾऽಪ್ಯಹಂ ಸುಕೃಪಾಲುಭಿರ್ಯುಷ್ಮಾಭಿಃ ಅರಕ್ಷಿತೇತಿ ನ ಕಥಿತ ಇತಿ ಯೋಜನಾ ॥ – (ವಾ.)

೪೫. ಪೂರ್ತೈಃ ಕೂಪತಟಾಕಾದ್ಯೈಃ ॥ – (ಜ.)

ದುರ್ಯೋಧನಾದಿಗಳು ದುಷ್ಟರು ಎಂದ ಧೃತರಾಷ್ಟ್ರ

ಅಪ್ರಿಯಾಣಿ ಚ ಕೃಷ್ಣಸ್ಯ ಸುಬಹೂನ್ಯಾಚರತ್ ಕುಧೀಃ ।
ಪ್ರಾಯಸ್ತೇನಾಪಿ ಮಂದೇನ ಯುಷ್ಮಾಸ್ವಪ್ಯಶಿವಂ ಕೃತಮ್ ॥ ೪೭ ॥

ಭ್ರಾತರೋಽಸ್ಯ ಚ ಸರ್ವೇಽಪಿ ತಚ್ಛೀಲಮನುವರ್ತಿನಃ ।
ಹತಾಶ್ಚ ಸ್ವೇನ ಪಾಪೇನ ಸಸುತಾಮಾತ್ಯಬಾಂಧವಾಃ ॥ ೪೮ ॥

ಅ: ಕೆಟ್ಟಬುದ್ಧಿಯ ಅವನು ಕೃಷ್ಣನಿಗೂ ಅನೇಕ ಅಪ್ರಿಯವಾದ ಕಾರ್ಯಗಳನ್ನು ಮಾಡಿದ, ಮೂರ್ಖನಾದ ಅವನು ನಿಮಗೂ ಬಹಳ ಕೆಟ್ಟದ್ದನ್ನೇ ಮಾಡಿದ; ಅವನ ತಮ್ಮಂದಿರೆಲ್ಲ ಅವನ ನಡತೆಯನ್ನೇ ಅನುಸರಿಸಿದವರು. ತಮ್ಮ ಪಾಪದಿಂದ ಮಕ್ಕಳು, ಮಿತ್ರರು, ಬಾಂಧವರೊಂದಿಗೆ ನಾಶವಾದರು.

ವಿ: ಇತರ ಕೌರವರೂ ದುರ್ಯೋಧನನಂತಹ ದುಷ್ಟರೇ ಎನ್ನುವ ಮೂಲಕ ಸ್ವತಃ ಧೃತರಾಷ್ಟ್ರ ಭೀಮ ಮಾಡಿದ ಸಕಲಕೌರವರ ವಧೆ ಯುಕ್ತವೆಂದೇ ಸಾರಿದಂತಾಯಿತು ಎಂಬುದು ಗಮನಾರ್ಹ.

ವನಗಮನಕ್ಕೆ ಅನುಮತಿ ನೀಡಲು ಧೃತರಾಷ್ಟ್ರನ ಪ್ರಾರ್ಥನೆ

ಸೋಽಹಂ ವಯೋಗತಶ್ಚೈವ ಪುತ್ರಾದಿಭಿರಭಿಪ್ಲುತಃ ।
ತತ್ಸಂಬಂಧಕೃತಂ ಪಾಪಂ ಸ್ವಕೃತಂ ಚಾಪ್ಯಪೇಶಲಮ್ ।
ಪಾಂಡವೇಷು ಸಕೃಷ್ಣೇಷು ತಪಸಾ ಮಾರ್ಷ್ಟುಮುದ್ಯತಃ ॥ ೪೯ ॥

ಅ: ನಾನು ವಯಸ್ಸಾದವನು, ಮಕ್ಕಳಿಂದ ಬಹಳವಾಗಿ ನೊಂದವನು, ಅವರ ಸಂಬಂಧದಿಂದಾಗಿ ನಾನು ಕೃಷ್ಣನಲ್ಲೂ, ಪಾಂಡವರಲ್ಲೂ ಬಹಳ ಕೆಟ್ಟದಾಗಿ ನಡೆದುಕೊಂಡದ್ದನ್ನು ತಪಸ್ಸಿನಿಂದ ಪರಿಹರಿಸಿಕೊಳ್ಳಲು ಉದ್ಯುಕ್ತನಾಗಿರುವೆ.

---

೪೭. ತೇನಾಪಿ ಮಂದೇನೇತ್ಯತ್ರ ಯುಷ್ಮಾಸ್ವಪೀತಿ ಅಪಿಪದಸಂಬಂಧಃ ॥ – (ವಾ.)

೪೮. ಹತಾಶ್ಚಸ್ವೇನ ಪಾಪೇನೇತ್ಯತ್ರ ಸ್ವೇನ= ಸ್ವಕೀಯೇನ ಪಾಪೇನೇತ್ಯರ್ಥಃ। ಪುತ್ರಾದಿಭಿರಭಿಪ್ಲುತ ಇತ್ಯತ್ರ ಅಭಿಪ್ಲುತಃ ''ಪ್ಲು ಪ್ಲವನ'' ಇತಿ ಧಾತೋಃ ಪುತ್ರಾದಿಭಃ ಅಭಿ ಸ್ವೈಃ ಕ್ರಿಯಮಾಣಾನ್ಯಾಯಮಾರ್ಗೇಷು ಪ್ಲುತಃ ಪ್ಲವನಂ ಪ್ರಾಪಿತಃ॥ – (ವಾ.)

೪೯. **ಚಾತ್ಯಪೇಶಲಮ್** (ಪಾಠಾಂತರ)

೪೯. ಅತ್ಯಪೇಶಲಂ = ಅತಿಕ್ರೂರಂ ಪಾಪಕರ್ಮ। ಕೃಷ್ಣೇ ಆಜ್ಞೋಲ್ಲಂಘನರೂಪಂ ಪಾಪಕರ್ಮ। ಪಾಂಡವೇಷು ಅನ್ಯಾಯತೋ ರಾಜ್ಯಾಪಹಾರಾದಿರೂಪಂ ಪಾಪಕರ್ಮ ॥ – (ವಾ.)

ತತ್ರ ಮಾಮನುಜಾನೀಧ್ವಂ ಕೃಪಯಾ ಮಿತ್ರವತ್ಸಲಾಃ ।
ಮತ್ಪ್ರಿಯಾರ್ಥಮಪಿ ಸ್ನೇಹಃ ಪಾಂಡವೇಷು ಮಹಾತ್ಮಸು ।
ಕ್ರಿಯಮಾಣೋಽಪಿ ಕರ್ತವ್ಯೋ ಭೂಯ ಏವ ಸದಾಽಚಲಃ ॥ ೫೦ ॥

ಅ: ಮಿತ್ರವತ್ಸಲರಾದ ತಾವೆಲ್ಲ ನನಗೆ ವನಕ್ಕೆ ತೆರಳಲು ಅನುಮತಿ ನೀಡಬೇಕು. ನೀವು ಮಹಾತ್ಮರಾದ ಪಾಂಡವರಲ್ಲಿ ಮಾಡುತ್ತಿರುವ ಆದರವನ್ನು ನನ್ನ ಸಂತೋಷಕ್ಕಾಗಿ ಇನ್ನೂ ಹೆಚ್ಚಾಗಿ ಸದಾ ಅಚಲವಾಗಿ ಮಾಡುತ್ತಲೇ ಇರಬೇಕು. ಅವರೇ ನನ್ನ ಸತ್ಪುತ್ರರು. ಈ ಲೋಕದಲ್ಲೂ, ಪರಲೋಕದಲ್ಲೂ ಸುಖ ನೀಡುವವರು.

ಪಾಂಡವರನ್ನು ಅನುಸರಿಸಲು ಪ್ರಜೆಗಳಲ್ಲಿ ಕೋರಿಕೆ

ತೇ ಹಿ ಮೇ ಪುತ್ರಕಾಃ ಸಂತ ಇಹಾಮುತ್ರ ಚ ಸೌಖ್ಯದಾಃ ।
ಇತ್ಯುಕ್ತೇ ಸ್ವಗುಣಾನುಚ್ಚೈಃ ಕೀರ್ತಯದ್ಭಿಃ ಸುದುಃಖಿತೈಃ ॥ ೫೧ ॥

ಪರ್ಯಶ್ರುನಯನೈಃ ಕೃಚ್ಛ್ರಾತ್ ಪೌರಜಾನಪದೈಶ್ಚಿರಾತ್ ।
ಅನುಜ್ಞಾತೋ ಯಯೌ ಪಾರ್ಥೈರನುಯಾತಃ ಸುದೂರತಃ ॥ ೫೨ ॥

ಅ: ಧೃತರಾಷ್ಟ್ರ ಹೀಗೆನ್ನಲು ಅವರೆಲ್ಲ ಅವನ ಗುಣಗಳನ್ನು ಗಟ್ಟಿಯಾಗಿ ಹೊಗಳುತ್ತಾ ತುಂಬಾ ದುಃಖಿಸಿದರು. ನೀರು ಸುರಿಸುವ ಕಣ್ಣುಗಳಿಂದ ಬಹಳ ಕಷ್ಟದಿಂದ ಆ ಪಟ್ಟಣಿಗರು ಬಹುಸಮಯದ ಅನಂತರ ಅವನಿಗೆ ವನಕ್ಕೆ ತೆರಳಲು ಅನುಮತಿ ನೀಡಿದರು. ಬಹಳ ದೂರದ ವರೆಗೆ ಪಾಂಡವರು ಅವನನ್ನು ಹಿಂಬಾಲಿಸಿ ನಡೆದರು.

---

೫೦. ... ಭೂಯ ಇತ್ಯಸ್ಯಾವೃತ್ತಿರಂಗೀಕೃತ್ಯ ಪುನಃಪುನರಧಿಕಸ್ನೇಹಃ ಕರ್ತವ್ಯ ಇತ್ಯರ್ಥೇ ಉಚ್ಯತ ಇತ್ಯಭ್ಯುಪಗಮಾತ್॥ – (ಸ.)

೫೦. ಯದಾ ದುರ್ಯೋಧನೇನೇದಂ ಭುಕ್ತಂ ರಾಜ್ಯಮಕಂಟಕಮ್ ।
ಅಪಿ ತತ್ರ ನ ವೋ ಮಂದೋ ದುರ್ಬುದ್ಧಿರಪರಾದ್ಧವಾನ್ ॥
ತಸ್ಯಾಪರಾಧಾದ್ದುರ್ಬುದ್ಧೇರಭಿಯಾನಾನ್ಮಹೀಕ್ಷಿತಾಮ್ ।
ವಿಮರ್ದಃ ಸುಮಹಾನಾಸೀದನಯಾತ್ ಸ್ವಕೃತಾದಥ ।
ಘಾತಿತಾಃ ಕೌರವೇಯಾಶ್ಚ ಪೃಥಿವೀ ಚ ವಿನಾಶಿತಾ ॥
ತನ್ಮಯಾ ಸಾಧು ವಾಽಪೀದಂ ಯದಿ ವಾಽಸಾಧು ವೈ ಕೃತಮ್ ।
ತದ್ವೋ ಹೃದಿ ನ ಕರ್ತವ್ಯಂ ಮಯಾ ಬದ್ಧೋಽಯಮಂಜಲಿಃ ॥
ವೃದ್ಧೋಽಯಂ ಹತಪುತ್ರೋಽಯಂ ದುಃಖಿತೋಽಯಂ ನರಾಧಿಪಃ ।
ಪೂರ್ವರಾಜ್ಞಾಂ ಚ ಪುತ್ರೋಽಯಮಿತಿ ಕೃತ್ವಾಽನುಜಾನಥ ॥ – ಭಾರತ (ಆಶ್ರಮ. ೯/೫-೯)

ಏಃ ಕೃಷ್ಣರಾಯಭಾರಿಯಾಗಿ ಬಂದಿದ್ದಾಗ ಹೇಳಿದ್ದ 'ಪಾಂಡವರೇ ನಿನ್ನ ಸತ್ಪುತ್ರರು'(೨೪/೬೪) ಎಂಬ ಮಾತು ಧೃತರಾಷ್ಟ್ರನಿಗೆ ಈಗ ಮನವರಿಕೆಯಾಗಿರುವುದು ಇದರಿಂದ ಸ್ಪುಟಪಡುವುದು.

ಧೃತರಾಷ್ಟ್ರನನ್ನು ಹಿಂಬಾಲಿಸಿದ ಸಂಜಯಾದಿಗಳು

ಸಂಜಯೋ ವಿದುರಶ್ಚೈನಂ ಸಭಾರ್ಯಮನುಜಗ್ಮತುಃ ।
ಅನುವವ್ರಾಜ ತಂ ಕುಂತೀ ವನಾಯ ಕೃತನಿಶ್ಚಯಾ ॥ ೫೩ ॥

ಅಃ ಸಂಜಯ ಮತ್ತು ವಿದುರರು ಗಾಂಧಾರೀ ಸಮೇತನಾಗಿ ನಡೆದ ಧೃತರಾಷ್ಟ್ರನನ್ನು ಹಿಂಬಾಲಿಸಿದರು. ವನವಾಸಕ್ಕೆಂದು ನಿಶ್ಚಯಮಾಡಿಕೊಂಡು ಕುಂತಿಯೂ ಅವನನ್ನು ಹಿಂಬಾಲಿಸಿದಳು.

---

೫೧. ಪುತ್ರಕಾ ಇತ್ಯಸ್ಯಾಧಿಕಪುತ್ರತ್ವೋಪೇತಾ ಇತ್ಯರ್ಥಃ । –(ಸ.)

ನಾಯಂ ಕಪ್ರತ್ಯಯಃ ಕಿಂತ್ವಾಧಿಕ್ಯೇऽಧಿಕಮಿತಿವಚನಾನುಸಾರೇಣ ಪುಂಶಬ್ದೋಪಲಕ್ಷಿತಪುನ್ನಾಮಕನರಕಾದಿತ್ರಾಣಕರ್ತೃತ್ವರೂಪಂ ಪುತ್ರತ್ವಮಧಿಕಮಿತಿ ವಕ್ತುಮಧಿಕಃ ಕಶಬ್ದಃ ಪ್ರಯುಕ್ತ ಇತ್ಯಭ್ಯುಪಗಮಾತ್ ॥ –(ಸ.)

೫೩. 'ಅನುವವ್ರಾಜ ತಂ ಕುಂತೀ' ಇತಿ ತಾತ್ಪರ್ಯನಿರ್ಣಯೇ ಕಥ್ಯತೇ। ''ಪತಿಂ ಪ್ರಯಾಂತಂ ಸುಬಲಸ್ಯ ಪುತ್ರೀ'' ಇತಿ ಗಾಂಧಾರ್ಯಾ ಏವಾನುಗಮನಂ ಭಾಗವತೇ ಕಥ್ಯತೇ। ಅತೋ ವಿರೋಧ ಇತಿ ನ ಶಂಕನೀಯಮ್। ಸುಬಲಸ್ಯ ಪುತ್ರ್ಯೇವೇತ್ಯನುಕ್ತ್ವಾದುಪಲಕ್ಷಣಯಾ ಕುಂತೀಗಮನಸ್ಯಾಪಿ ಸಂಗ್ರಹೀತುಂ ಶಕ್ಯತ್ವಾತ್। ಅನ್ಯಥಾ ''ವೃಕೋದರಃ ಫಲ್ಗುನಶ್ಚೈವ ವೀರೋ ಮಾದ್ರೀಪುತ್ರೌ ವಿದುರಃ ಸಂಜಯಶ್ಚ। ವೈಶ್ಯಾಪುತ್ರಸ್ಸಹಿತಃ ಸಂಜಯೇನ ಧೌಮ್ಯೋ ವಿಪ್ರಾಶ್ಚಾನ್ವಯುರ್ಬಾಷ್ಪಕಂಠಾಃ। ಕುಂತೀ ಗಾಂಧಾರೀಮನುಸೃತ್ಯ ವ್ರಜಂತೀ ಸ್ಕಂಧಾಸಕ್ತಂ ಹಸ್ತಮಥೋದ್ವಹಂತೀ। ರಾಜಾ ಗಾಂಧಾರೀಸ್ಕಂಧದೇಶೇऽವಸಜ್ಯ ಪಾಣಂ ಯಯೌ ಧೃತರಾಷ್ಟ್ರಃ ಪ್ರತೀತಃ'' ಇತ್ಯಾದಿ ಭಾರತವಾಕ್ಯವಿರೋಧಾತ್। ಅತ ಏವ ''ಭ್ರಾತೃಸಂದರ್ಶಿತಾಧ್ವಾ'' ಇತಿ ಚ ಭಾಗವತೋಕ್ತೋऽಪ್ಯಧ್ವಾ ವಿದುರೇಣ ಸ್ವಗೃಹ ಏವ ಸಂದರ್ಶಿತೋ ವೈರಾಗ್ಯಮಾರ್ಗ ಏವ ನ ತು ವನಮಾರ್ಗಃ। ಉಕ್ತಭಾರತವಾಕ್ಯೇ ಧೃತರಾಷ್ಟ್ರೇಣ ಪಥಿ ಗಾಂಧಾರೀಸ್ಕಂಧಗ್ರಹಣಂ ಕೃತಮ್। ಧೃತನೇತ್ರಪಟ್ಟಬಂಧಯಾ ತಯಾ ಚ ಕುಂತೀಸ್ಕಂಧಗ್ರಹಣಂ ಕೃತ್ವಾ ಗತಮಿತಿ ಕಥಿತತ್ವಾತ್। ಅತ ಏವ 'ಸಂದರ್ಶಿತಪಥೋ ರಾಜಾ ಕುಂತೀವಿದುರಸಂಜಯೈಃ' ಇತ್ಯತ್ರಾಪಿ ಕುಂತೀ ಗಾಂಧಾರೀಮನುಸೃತ್ಯ ವ್ರಜಂತೀತಿ ಭಾರತವಾಕ್ಯೇ ಕುಂತ್ಯಾಃ ಸ್ಕಂಧೇ ಗಾಂಧಾರೀ ಹಸ್ತಂ ನಿಕ್ಷಿಪ್ಯ ಗತಾ। ಗಾಂಧಾರ್ಯಾಸ್ಸ್ಕಂಧೇ ಧೃತರಾಷ್ಟ್ರೋ ಹಸ್ತಂ ನಿಕ್ಷಿಪ್ಯ ಗತ ಇತಿ ಸ್ಪಷ್ಟಂ ಭಾರತೇ ಉಕ್ತತ್ವಾತ್। ಕುಂತ್ಯಾ ಅಧ್ವನಿ ಸಂದರ್ಶಿತವನಮಾರ್ಗಃ ''ಅಗ್ನಿರ್ನಿಸೃಷ್ಟೋ ದತ್ತಶ್ಚ ಗರೋ ದಾರಾಶ್ಚ ದೂಷಿತಾಃ'' ಇತ್ಯಾದಿನಾ ಗೃಹೇ ವಿದುರೋಕ್ತವೈರಾಗ್ಯಮಾರ್ಗಸ್ಯ ಗ್ರಂಥಕೃತೈವೋಕ್ತತ್ವಾತ್ ಗೃಹೇ ಸಂಜಯವಿದುರಾಭ್ಯಾಂ ಸಂದರ್ಶಿತವೈರಾಗ್ಯಮಾರ್ಗ ಇತಿ ಯಥಾಯೋಗ್ಯಮರ್ಥೋ ಗ್ರಾಹ್ಯಃ। ವಿದುರೋಕ್ತವೈರಾಗ್ಯಮಾರ್ಗಃ ತಟಸ್ಥಸಂಜಯಸ್ಯಾಪ್ಯನುಮತ ಇತಿ ಹೇತೋಃ ಸೋऽಪಿ ಗೃಹೀತಃ। ಅತೋ ನ ಭಾಗವತವಿರೋಧಃ। ''ಗೃಹಾನ್ಪ್ರವಿಷ್ಟೋ ಗುರುವಂದನಾಯ'' ''ನ ಚಾಪಶ್ಯತ್ಪಿತರಂ ಸೌಬಲೀಂ ಚ'' ಇತ್ಯತ್ರ ''ಧೃತರಾಷ್ಟ್ರೇ ಮೃತೇ ಸೂತಸ್ಸಂಜಯಃ ಪಾಂಡುಸೂನವೇ। ಗತಿಂ ಶಶಂಸ ಕುಂತ್ಯಾಶ್ಚ ಗಾಂಧಾರೀಧೃತರಾಷ್ಟ್ರಯೋಃ'' ಇತಿ ಭಾಗವತತಾತ್ಪರ್ಯೇ ಉಕ್ತತ್ವಾತ್। ಧೃತರಾಷ್ಟ್ರಮರಣಾನಂತರಂ ಧೃತರಾಷ್ಟ್ರಗೃಹಂ ಪ್ರತ್ಯಾಗತಸ್ಯ ಸಂಜಯಸ್ಯ ಮುಖಾತ್ ಗುರೂಣಾಂ ಕುಂತೀಗಾಂಧಾರೀಧೃತರಾಷ್ಟ್ರಾಣಾಂ ವಂದನಾಯ ''ವದಿ ಅಭಿವಾದನ ಸ್ತುತ್ಯೋಃ'' ಇತಿ

ವನಕ್ಕೆ ನಡೆದ ಕುಂತಿ

ವಾರ್ಯಮಾಣಾಽಪಿ ತನಯೈಃ ಸಭಾರ್ಯೈರ್ಭರ್ಯಶದುಃಖಿತೈಃ ।
ಸಂಸ್ಥಾಪ್ಯ ತಾನ್ ಸುಕೃಚ್ಛ್ರೇಣ ಯಯೌ ಸಾಽನ್ವೇವ ತಂ ನೃಪಮ್ ॥ ೫೪ ॥

ಧಾತೋಃ ಚರಿತಸ್ತಾವನಾಯ ಪ್ರವಿಷ್ಟ ಇತ್ಯೇವಾರ್ಥೋ ಗ್ರಾಹ್ಯಃ ॥ ನ ತು ಗುರೋರ್ಧೃತರಾಷ್ಟ್ರಸ್ಯ ವಂದನಾಯೇತಿ। ತಸ್ಯ ಪ್ರಾಗೇವ ಯುಧಿಷ್ಠಿರೇಣಾನುವ್ರಜ್ಯ ವನಂ ಪ್ರತಿ ಪ್ರೇಷಿತತ್ವಾತ್। ''ಮಾತಾಪಿತರೌ ಪಿತರೌ'' ಇತ್ಯನುಶಾಸನಾತ್। ಪಿತರೌ ಕುಂತೀಧೃತರಾಷ್ಟ್ರೌ ನತು ಜ್ಯೇಷ್ಠಕನಿಷ್ಠಪಿತರೌ ಧೃತರಾಷ್ಟ್ರವಿದುರೌ। ಪಿತೃದರ್ಶನಾಯ ವನಗಮನೇ ಸತಿ ಸ್ವಾತ್ಮನಿ ವಿದುರಪ್ರವೇಶಸ್ಯ ಸ್ವೇನೈವಾನುಭೂತತ್ವಾತ್। ತಥಾ ಚ 'ಪಿತರೌ ಕುಂತೀಧೃತರಾಷ್ಟ್ರೌ ಸೌಬಲೀಂ ಚ ನಾಪಶ್ಯತ್' ಇತ್ಯಸ್ಯಾಪಿ ತಸ್ಯ ಮನಸಿ ತೇಷಾಂ ವಿಪದ್ಭಾವೋ ಬಭೂವೇತಿ ಭಾಗವತತಾತ್ಪರ್ಯೋಕ್ತೇಃ ಧೃತರಾಷ್ಟ್ರಾದೀನ್ ವಿಹಾಯ ಏಕಾಕಿತಯಾಽಽಗತಸಂಜಯಸ್ಯ ಮ್ಲಾನಮಲಿನಮುಖದರ್ಶನೇನ ಸ್ವನಗರ್ಯಾ ಮರಣಸೂಚಕಬಹುತರೋತ್ಪಾತದರ್ಶನೇನ ಚ ಯುಧಿಷ್ಠಿರಸ್ಯ ಮನಸಿ ಧೃತರಾಷ್ಟ್ರಾದಯಸ್ಸರ್ವೇ ಮೃತಾ ಇತ್ಯಧ್ಯವಸಾಯೋಽಭೂತ್। ಅತಃ ಪಿತರೌ ಸೌಬಲೀಂ ಚ ನಾಪಶ್ಯತ್। ಜೀವಂತೋ ನಾಪಶ್ಯದಿತ್ಯೇವಾರ್ಥಃ। ವಿಪದ್ಭಾವ ಇತಿ ಭಾಗವತತಾತ್ಪರ್ಯವಚನಸ್ಯ ವಿಪದೋ ಮಹಾವಿಪದೋ ಭಾವಃ ಭಾವನೇತ್ಯರ್ಥಃ। ಪಿತೃವ್ಯೌ ಕ್ವ ಗತಾವಿತಿ ಭಾಗವತವಚನಸ್ಯಾಪಿ ''ಮಾತಾಪಿತರೌ ಪಿತರೌ'' ಇತಿವತ್ ಪಿತೃವ್ಯೌ ಗಾಂಧಾರೀಧೃತರಾಷ್ಟ್ರೌ ಕ್ವ ಗತಾವಿತಿ ಹೃದ್ಯಪ್ಪಾಪೇಕ್ಷಯೇತಿ ಭಾಗವತತಾತ್ಪರ್ಯೋಕ್ತೇಃ ಇತಃ ಕ್ವ ಗತಾವಿತ್ಯಪಿ ಅದರ್ಶನನಿಮಿತ್ತಃ ಪ್ರಲಾಪ ಏವ। ಅದೃಷ್ಟಮದರ್ಶನಂ ತದಪೇಕ್ಷಯೇತ್ಯರ್ಥಃ। ಗಂಗಾಯಾಂ ದುಃಖಿತೋಽಪತದಿತ್ಯಪಿ ಮುಖಮಾಲಿನ್ಯದರ್ಶನಾತ್ ತಪೋವನಸ್ಥವಿಷಯೈವ ಚಿಂತಾ। ನ ತ್ವೇತದ್ಸ್ನಹಸ್ಥಚಿಂತಾ। ಅದರ್ಶನನಿಮಿತ್ತಃ ಪ್ರಲಾಪೋ ವಾ। ಅತ ಏವ ''ಸ ವಾಽದ್ಯತನಾದ್ರಾಜಾ ಪರತಃ ಪಂಚಮೇಽಹನಿ। ಕಲೇವರಂ ಹಾಸ್ಯತೀ'' ಇತಿ ನಾರದೋಕ್ತೇರಪಿ ಅ ಪರತಃ ಅಧೋಽಧೋ ಗಣನಾಯಾಂ ಪರತಃ ಪೂರ್ವತಃ ಪಂಚಮೇಽಹನಿ ಅತೀತ ಪಂಚಮೇಽಹನೀತಿ ಯಾವತ್। ಕಲೇವರಂ ಹಾಸ್ಯತೀತ್ಯಸ್ಯಾಪಿ 'ಸುಪ್ತಿಪ್ರಪಗ್ರಹಲಿಂಗನರಾಣಾಂ ಕಾಲಹಲಚ್ಸ್ವರಕರ್ಮಯಜ್ಞಾಂ ಚ। ವ್ಯತ್ಯಯಮಿಚ್ಛತಿ ಶಾಸ್ತ್ರಕೃದೇಷಾಂ ಸೋಽಪಿ ಚ ಸಿದ್ಧ್ಯತಿ ಬಾಹುಲಕೇನ' ಇತಿ ಮಹಾವ್ಯಾಕರಣವಚನಾತ್। ''ವ್ಯಾಸಾದಯೋ ವರ್ತಮಾನಮತೀತಾನಾಗತೇ ತಥಾ। ವ್ಯತ್ಯಸ್ಯಾಪಿ ವದಂತ್ಯದ್ಧಾ ಮೋಹನಾರ್ಥಂ ದುರಾತ್ಮನಾಮ್। ಪೌರ್ವಾಪರ್ಯಂ ಯತೋ ನೈವ ಸದೈವ ಪರಿವರ್ತನಾತ್। ಅತಶ್ಚ ವ್ಯತ್ಯಯಾದೇತತ್ ವದಂತಿ ಜ್ಞಾನಚಕ್ಷುಷ'' ಇತಿ ಬ್ರಾಹ್ಮವಚನಾಚ್ಚ ಹಾಸ್ಯತಿ ಅಜಹಾದಿತ್ಯರ್ಥಃ। ಲಿಂಗನರಾಣಾಮಿತ್ಯತ್ರ ಲಿಂಗಾನಾಂ ಸ್ತ್ರೀಪುನ್ನಪುಂಸಕಲಿಂಗಾನಾಂ ನರಾಣಾಂ ಪ್ರಥಮಪುರುಷಮಧ್ಯಮಪುರುಷೋತ್ತಮಪುರುಷಾಣಾಮಿತ್ಯರ್ಥಃ । ನರಪುರುಷಪದಯೋಃ ಪರ್ಯಾಯತ್ವಾತ್। ತಾತ್ಪರ್ಯಕಾರಸ್ತು ಮಹಾಭಾರತತಾತ್ಪರ್ಯನಿರ್ಣಯಾಯ ಪ್ರವೃತ್ತತ್ವಾತ್ ತತ್ರತ್ಯಮೇವಾರ್ಥಂ ಅನುವದನ್ ನಿರ್ಣೀತವಾನ್। ಭಾಗವತೋಕ್ತೇರವಿರೋಧಸ್ತು ಭಾಗವತತಾತ್ಪರ್ಯೋಕ್ತಪ್ರಕಾರೇಣ ದ್ರಷ್ಟವ್ಯಃ। ಅಸ್ಮಾಭಿಸ್ತು ಮಂದಾನಾಮಪಿ ಬೋಧನಾಯ ತದ್ವಾಕ್ಯಾರ್ಥನಿರ್ಣಯಾಯ ಚ ಕಥಾದ್ವಯಮಪಿ ಸಂಗೃಹ್ಯ ಯಥಾಶಕ್ತಿ ನಿರ್ಣಯಃ ಕೃತಃ। ಗ್ರಂಥಕಾರಸ್ತು ತತ್ರೈವ ತದರ್ಥೋಽನುಸಂಧೇಯ ಇತಿ ನಾತ್ರ ಪುನಃ ಸಂಗೃಹೀತವಾನಿತಿ ಸರ್ವಮವದಾತಮ್ ॥ – (ವಾ.)

೫೫. ಇತ್ಯುಕ್ತಾ ಧರ್ಮರಾಜೇನ ಬಾಷ್ಪವ್ಯಾಕುಲಲೋಚನಾ ।
ಜಗಾಮೈವ ತದಾ ಕುಂತೀ ಗಾಂಧಾರೀಂ ಪರಿಗೃಹ್ಯ ಹ ॥ – ಭಾರತ (ಆಶ್ರಮ. ೧೬/೯)

ಅ: ತುಂಬಾ ದುಃಖಿತರಾದ ಪಾಂಡವರು ಸಪತ್ನೀಕರಾಗಿ ತಡೆದರೂ ಕುಂತಿ ಕೇಳಲಿಲ್ಲ. ಬಹು ಕಷ್ಟದಿಂದ ಅವರನ್ನು ಒಪ್ಪಿಸಿ ಅವಳು ಧೃತರಾಷ್ಟ್ರನನ್ನು ಹಿಂಬಾಲಿಸಿ ನಡೆದಳು.

ಕುರುಕ್ಷೇತ್ರ ತಲುಪಿದ ಧೃತರಾಷ್ಟ್ರಾದಿಗಳು

ಸಂದರ್ಶಿತಪಥೋ ರಾಜಾ ಕುಂತೀವಿದುರಸಂಜಯೈಃ ।
ಗಾಂಧಾರೀಸಹಿತಃ ಪ್ರಾಪ ಕುರುಕ್ಷೇತ್ರಂ ಜಗದ್ಗುರೋಃ ।
ಕ್ರಮೇಣೈವಾಶ್ರಮಂ ವ್ಯಾಸದೇವಸ್ಯ ಸುರಪೂಜಿತಮ್ ॥ ೫೫ ॥

ಅ: ಕುಂತಿ, ವಿದುರ, ಸಂಜಯರಿಂದ ದಾರಿ ತೋರಲ್ಪಟ್ಟವನಾಗಿ ಗಾಂಧಾರಿಯೊಂದಿಗೆ ಧೃತರಾಷ್ಟ್ರ ಕುರುಕ್ಷೇತ್ರವನ್ನು ತಲುಪಿದ. ಜಗದ್ಗುರುವಾದ ವೇದವ್ಯಾಸರ ದೇವಪೂಜಿತವಾದ ಆಶ್ರಮವನ್ನು ಕ್ರಮವಾಗಿ ಸೇರಿದ.

ಎ: ಇಲ್ಲಿಯ ವ್ಯಾಸಾಶ್ರಮ ಕುರುಕ್ಷೇತ್ರದಲ್ಲಿಯ ವ್ಯಾಸಾಶ್ರಮ ಎಂಬುದು ಮಹಾಭಾರತದ ವಾಕ್ಯಗಳಿಂದ ಸ್ಫುಟಪಡುವುದು. ಇಲ್ಲಿಯ ವಿವರವೂ ಅದಕ್ಕೆ ಅನುಗುಣವಾಗಿಯೇ ಇದೆ. ಬದರಿಕಾಶ್ರಮದ ವ್ಯಾಸಾಶ್ರಮ ಎನ್ನುವ ಪಕ್ಷ ವೃದ್ಧರಾದ ಅವರಿಗೆಲ್ಲ ಅದು ಅಸಾಧ್ಯ ಎಂಬ ಕಾರಣದಿಂದ ಅಸ್ವರಸ ಎನ್ನಿಸುವುದು. ಕುರುಕ್ಷೇತ್ರದಲ್ಲಿಯ ಶತಯೂಪ ಎಂಬ ರಾಜರ್ಷಿಯ ಆಶ್ರಮದ ಬಳಿ ಅವರೆಲ್ಲ ವಾಸಿಸಿದಂತೆ ತಿಳಿಯುವುದು (ಆಶ್ರಮ. ೧೯/೧೨):

ಸ ದೀಕ್ಷಾಂ ತತ್ರ ಸಂಪ್ರಾಪ್ಯ ರಾಜಾ ಕೌರವನಂದನಃ ।
ಶತಯೂಪಾಶ್ರಮೇ ತಸ್ಮಿನ್ ನಿವಾಸಮಕರೋತ್ ತದಾ ॥

ಮೂರು ವರ್ಷಗಳ ಬಳಿಕ ಸದ್ಗತಿ ಎಂದ ನಾರದರು

ತ್ರಿವತ್ಸರಾದಸ್ಯ ನಿಜಸ್ಯ ಲೋಕ-
ಸ್ಯಾಪ್ತಿಂ ಸಭಾರ್ಯಸ್ಯ ಜಗಾದ ತತ್ರ ।
ಬ್ರಹ್ಮಾಂಕಜಸ್ತೇನ ಭೃಶಂ ಪ್ರತೀತೋ
ವ್ಯಾಸೋಪದಿಷ್ಟಂ ವ್ಯಚರತ್ ತಪೋಽಗ್ರ್ಯಮ್ ॥ ೫೬ ॥

---

೫೫. ಕುರುಕ್ಷೇತ್ರಂ ಪ್ರಾಪ ಜಗದ್ಗುರೋರ್ವ್ಯಾಸಸ್ಯಾಶ್ರಮಂ ಬದರ್ಯಾಖ್ಯಮ್ ॥ –(ವ.)

೫೫. ತತೋ ಭಾಗೀರಥೀತೀರಾತ್ ಕುರುಕ್ಷೇತ್ರಂ ಜಗಾಮ ಸಃ ॥ –ಭಾರತ (ಆಶ್ರಮ. ೧೯//೮)

ಅ: ಅಲ್ಲಿಗೆ ಆಗಮಿಸಿದ ನಾರದರು ಮೂರು ವರ್ಷಗಳ ಬಳಿಕ ಸಪತ್ನೀಕನಾದ ಧೃತರಾಷ್ಟ್ರನಿಗೆ ಸ್ವಲೋಕಪ್ರಾಪ್ತಿ ಎಂದು ತಿಳಿಸಿದರು. ಅದರಿಂದ ತುಂಬಾ ವಿಶ್ವಾಸ ಹೊಂದಿದ ಧೃತರಾಷ್ಟ್ರ ಶ್ರೀವ್ಯಾಸರು ಉಪದೇಶಿಸಿದ್ದ ಉತ್ತಮವಾದ ತಪಸ್ಸನ್ನು ಆಚರಿಸಿದ.

ವಿ: ನಾರದರು ಬಂದು ಧೃತರಾಷ್ಟ್ರನಿಗೆ ಹಾಗೆ ತಿಳಿಸಿದ ವಿವರ ಮಹಾಭಾರತದಲ್ಲಿ ಹೀಗಿದೆ:

ತತ್ರಾಹಮಿದಮಶ್ರೌಷಂ ಶಕ್ರಸ್ಯ ವದತಃ ಸ್ವಯಮ್ ।
ವರ್ಷಾಣಿ ತ್ರೀಣಿ ಶಿಷ್ಟಾನಿ ರಾಜ್ಞೋಽಸ್ಯ ಪರಮಾಯುಷಃ ॥

– ಭಾರತ (ಆಶ್ರಮವಾಸಿಕ. ೨೦/೩೨)

ಧೃತರಾಷ್ಟ್ರಾದಿಗಳನ್ನು ಕಾಣಲು ವ್ಯಾಸಾಶ್ರಮಕ್ಕೆ ಪಾಂಡವರು

ಸಕ್ಷತ್ತೃಗಾಂಧಾರಿಪೃಥೇ ಸಸಂಜಯೇ
ತಪೋಭಿರಾರಾಧಯತಿ ಪ್ರಭುಂ ಹರಿಮ್ ।
ವೈಚಿತ್ರವೀರ್ಯೇಽತ್ರ ಸದಾರಬಂಧು-
ಭೃತ್ಯಾಸ್ತು ಪಾರ್ಥಾ ದದೃಶೇ ಸಮಾಯಯುಃ ॥ ೫೭ ॥

ಅ: ವಿದುರ, ಗಾಂಧಾರೀ, ಕುಂತಿ, ಸಂಜಯರೊಂದಿಗೆ ಧೃತರಾಷ್ಟ್ರ ತಪಸ್ಸುಗಳಿಂದ ಪ್ರಭುವಾದ ಶ್ರೀಹರಿಯನ್ನು ಆರಾಧಿಸುತ್ತಿದ್ದಾಗ ಪಾಂಡವರು ಪತ್ನಿಯರು, ಬಂಧುಗಳು, ಭೃತ್ಯರ ಸಮೇತ ಅವರನ್ನು ನೋಡಲು ಆಗಮಿಸಿದರು.

ವಿ: ಅವರೆಲ್ಲ ಹೀಗೆ ತೆರಳಿದ್ದು ಧೃತರಾಷ್ಟ್ರಾದಿಗಳು ವನಕ್ಕೆ ತೆರಳಿದ ಏಳು ತಿಂಗಳುಗಳ ಅನಂತರ.

ಧರ್ಮರಾಜನಲ್ಲಿ ವಿದುರನ ಐಕ್ಯ

ಕ್ಷತ್ತೈಕತಾಮತ್ರ ಯುಧಿಷ್ಠಿರೇಣ
ಪ್ರಾಪ್ತೋಽಥ ಭಾರ್ಯಾಸಹಿತಂ ಸಸಂಜಯಮ್ ।
ಉಪಾಸಮಾನೇಷು ವಿಚಿತ್ರವೀರ್ಯ
ಪುತ್ರಂ ಪೃಥಾಂ ಚೈವ ಪೃಥಾಸುತೇಷು ॥ ೫೮ ॥

---

೫೮. ಕ್ಷತ್ತೈಕತಾಮತ್ರೇತ್ಯತ್ರ ಉಭಯೋರಪಿ ಯಮಾಂಶತ್ವಾತ್ ಕ್ಷತ್ತಾ = ವಿದುರಾಖ್ಯೋ ಯಮಾಂಶಃ ಯುಧಿಷ್ಠಿರೇಣ = ಯುಧಿಷ್ಠಿರಸ್ಥಯಮಾಂಶೇನ ಏಕತಾಂ = ಏಕೀಭಾವಂ ಪ್ರಾಪ್ತಃ ಪರಕಾಯಪ್ರವೇಶಾಖ್ಯಯೋಗ-ಬಲೇನ ಪ್ರಾಪ್ತಇತ್ಯರ್ಥಃ ॥ – (ವಾ.)

ಅ: ಆಗ ವಿದುರ ಧರ್ಮರಾಜನೊಂದಿಗೆ ಐಕ್ಯ ಹೊಂದಿದ. ಬಳಿಕ ಪಾಂಡವರು ಗಾಂಧಾರಿಯೊಂದಿಗೂ, ಸಂಜಯನೊಂದಿಗೂ ಜೊತೆಯಾಗಿದ್ದ ಧೃತರಾಷ್ಟ್ರನನ್ನೂ, ಮತ್ತು ಕುಂತಿಯನ್ನು ಸೇವಿಸುತ್ತಿದ್ದರು.

ವಿ: ೧) ಧರ್ಮರಾಜ ವಿದುರನು ಧೃತರಾಷ್ಟ್ರಾದಿಗಳೊಂದಿಗೆ ಇಲ್ಲದ್ದನ್ನು ಕಂಡು, ಅವನನ್ನು ಹುಡುಕಿಕೊಂಡು ಹೊರಟಾಗ, ಕಾಡಿನಲ್ಲಿ ವಿದುರ ಕಾಣಿಸಿಕೊಂಡ; ಇವನನ್ನು ನೋಡುತ್ತಲೇ ಓಡತೊಡಗಿದ. ಧರ್ಮರಾಜ ಆತನನ್ನು ಸಂಪರ್ಕಿಸಲು ಧಾವಿಸಿದಾಗ, ಒಂದು ಮರಕ್ಕೆ ಒರಗಿನಿಂತ ವಿದುರ, ಧರ್ಮರಾಜನನ್ನೇ ಎವೆಯಿಕ್ಕದೆ ದಿಟ್ಟಿಸುತ್ತಾ, ಯೋಗಸಿದ್ಧಿಯಿಂದ ತನ್ನ ದೇಹವನ್ನು ತೊರೆದು, ಅವನ ದೇಹವನ್ನು ಪ್ರವೇಶಿಸಿದ.

೨) ಧರ್ಮರಾಜನಿಗೆ ಆಗ ತನ್ನ ದೇಹದಲ್ಲಿ ಚೈತನ್ಯ ಹೆಚ್ಚಿದ ಅನುಭವ ಉಂಟಾಯಿತು. ವಿದುರ ಹೀಗೆ ಧರ್ಮರಾಜನಲ್ಲಿ ಐಕ್ಯ ಹೊಂದಿದ :

'ಸ ಯೋಗಬಲಮಾದಾಯ ವಿವೇಶ ನೃಪತೇಸ್ತನುಮ್ ।
ವಿದುರೋ ಧರ್ಮರಾಜಸ್ಯ ತೇಜಸಾ ಪ್ರಜ್ವಲನ್ನಿವ । – (ಆಶ್ರಮವಾಸಿಕ. ೨೬/೨೭)

---

೫೮. ಧೃತರಾಷ್ಟ್ರವನಪ್ರವೇಶಾನಂತರಂ ಸಪ್ತಮಾಸೇ ಗತೇ ಪಾರ್ಥಾ ಧೃತರಾಷ್ಟ್ರಂ ದ್ರಷ್ಟುಂ ಗತಾಃ । ತದಾ ಯುಧಿಷ್ಠಿರಭಾವೋ ವಿದುರಸ್ಯೇತಿ ॥ – (ರಾ.)

೫೮. ಲೋಕರೀತ್ಯೇತಿ ವಾ ಕ್ಷತ್ತೈಕತಾಮಾಪ ಯುಧಿಷ್ಠಿರೇಣೇತ್ಯತ್ರ ದೇಹಂ ಪರಿತ್ಯಜ್ಯ ಯುಧಿಷ್ಠಿರೇಣೈಕ್ಯಮಗಾದಿತಿ ಗ್ರಾಹ್ಯಮ್ । ತಥೋಕ್ತಂ ಭಾರತೇ – 'ಸ ಯೋಗಬಲಮಾದಾಯ ವಿವೇಶ ನೃಪತೇಸ್ತನುಮ್ । ವಿದುರೋ ಧರ್ಮರಾಜಸ್ಯ ತೇಜಸಾ ಪ್ರಜ್ವಲನ್ನಿವ । ವಿದುರಸ್ಯ ಶರೀರಂ ತು ತಥೈವ ಸ್ತಬ್ಧಲೋಚನಮ್ । ದಗ್ಧುಕಾಮೋಽಭವದ್ವಿದ್ವಾನ್ ಅಥ ವಾಗಭ್ಯಭಾಷತ । ಭೋ ಭೋ ರಾಜನ್ ನ ದಗ್ಧವ್ಯಮೇತದ್ವಿದುರಸಂಜ್ಞಿತಮ್ । ಕಲೇವರಮಿಹೈವಂ ತೇ ಧರ್ಮ ಏಷಃ ಸನಾತನಃ । ಲೋಕಾಃ ಸಾಂತಾನಿಕಾ ನಾಮ ಭವಿಷ್ಯಂತ್ಯಸ್ಯ ಭಾರತ। ಯತಿಧರ್ಮಮವಾಪ್ತೋಽಸೌ ನೈವ ಶೋಚ್ಯಃ ಪರಂತಪ' ಇತಿ ॥ – (ತಿ.)

೫೮. ತತಃ ಸೋಽನಿಮಿಷೋ ಭೂತ್ವಾ ರಾಜಾನಂ ತಮುದೈಕ್ಷತ ।
ಸಂಯೋಜ್ಯ ವಿದುರಸ್ತ್ವಿನ್ ದೃಷ್ಟಿಂ ದೃಷ್ಟ್ಯಾ ಸಮಾಹಿತಃ ॥
ವಿವೇಶ ವಿದುರೋ ಧೀಮಾನ್ ಗಾತ್ರೈರ್ಗಾತ್ರಾಣಿ ಚೈವ ಹ ।
ಪ್ರಾಣಾನ್ ಪ್ರಾಣೇಷು ಚ ದಧದಿಂದ್ರಿಯಾಣೀಂದ್ರಿಯೇಷು ಚ ॥
ಸ ಯೋಗಬಲಮಾಸ್ಥಾಯ ವಿವೇಶ ನೃಪತೇಸ್ತನುಮ್ ।
ವಿದುರೋ ಧರ್ಮರಾಜಸ್ಯ ತೇಜಸಾ ಪ್ರಜ್ವಲನ್ನಿವ ॥
ವಿದುರಸ್ಯ ಶರೀರಂ ತು ತಥೈವ ಸ್ತಬ್ಧಲೋಚನಮ್ ।
ವೃಷ್ಣ್ಯಾಶ್ರಿತಂ ತದಾ ರಾಜಾ ದದರ್ಶ ಗತಚೇತನಮ್ ॥
ಬಲವಂತಂ ತಥಾ ऽऽತ್ಮಾನಂ ಮೇನೇ ಬಹುಗುಣಂ ತದಾ ॥ – ಭಾರತ (ಆಶ್ರಮ. ೨೬/೨೫-೨೯)

೩) ಒಬ್ಬನೇ ದೇವತೆ ಎರಡು ರೂಪಗಳಲ್ಲಿ ಭೂಮಿಯಲ್ಲಿ ಅವತರಿಸಿದಾಗ, ಮೊದಲ ರೂಪ ಅನಂತರದ ರೂಪದಲ್ಲಿ ಐಕ್ಯ ಹೊಂದುವುದು ಎಂಬುದು ನೀಲಾದೇವಿಯ ಪ್ರಸಂಗದಲ್ಲೂ ಕಂಡಿದೆ(೨೦/೪೭).

೪) ಅನಂತರ ಧರ್ಮರಾಜನಿಗೆ ಅಶರೀರವಾಣಿ ಸೂಚಿಸಿತು: ''ವಿದುರ ಯತಿ ಧರ್ಮ–ದಿಂದಿದ್ದು ಶರೀರತ್ಯಾಗ ಮಾಡಿದ್ದರಿಂದ, ಅವನ ದೇಹಕ್ಕೆ ದಹನಾದಿಸಂಸ್ಕಾರ ಮಾಡಬೇಕಿಲ್ಲ''. ಧರ್ಮರಾಜ ಹಿಂದಿರುಗಿದ (ಭಾರತ, ಆಶ್ರಮ. ೨೬/೩೨,೩೩):

ಭೋ ಭೋ ರಾಜನ್ನ ದಗ್ಧವ್ಯಮೇತದ್ವಿದ್ಧುರಸಂಜ್ಞಕಮ್ ।
ಕಲೇವರಮಿಹೈವಂ ತೇ ಧರ್ಮ ಏಷ ಸನಾತನಃ ॥
ಲೋಕಾಃ ಸಾಂತಾನಿಕಾ ನಾಮ ಭವಿಷ್ಯಂತ್ಯಸ್ಯ ಭಾರತ ।
ಯತಿಧರ್ಮಮವಾಪ್ತೋಽಸೌ ನೈಷ ಶೋಚ್ಯಃ ಪರಂತಪ ॥

ವ್ಯಾಸಾಗಮನ

ಪ್ರಾದುರ್ಬಭೂವಾಮಿತಶಕ್ತಿತೇಜೋ
ಜ್ಞಾನಾದ್ಭುತೈಶ್ವರ್ಯಸುಖಾದಿರೂಪಃ ।
ವ್ಯಾಸೋ ಹರಿಸ್ತತ್ರ ಸಮೀಕ್ಷ್ಯ ಸರ್ವೇ
ಸಂಪೂಜಯಾಮಾಸುರುದಗ್ರ್ಯಭಕ್ತ್ಯಾ ॥ ೫೯ ॥

ಅ: ಆಗ ಅಮಿತಶಕ್ತಿ, ತೇಜಸ್ಸು, ಜ್ಞಾನ, ಅದ್ಭುತ ಐಶ್ವರ್ಯ, ಆನಂದ ಮೊದಲಾದವುಗಳ ಸ್ವರೂಪನಾದ ವೇದವ್ಯಾಸರೂಪದ ಶ್ರೀಹರಿ ಕಾಣಿಸಿಕೊಂಡ. ಅವನನ್ನು ಕಾಣುತ್ತಲೇ ಎಲ್ಲರೂ ಅಪಾರಭಕ್ತಿಯಿಂದ ಚೆನ್ನಾಗಿ ಪೂಜಿಸಿದರು.

ಬಯಸಿದ್ದನ್ನು ಬೇಡಲು ವ್ಯಾಸರ ಆದೇಶ

ತೈಃ ಪೂಜಿತಸ್ತತ್ರ ನಿಷಣ್ಣ ಆಹ
ಯದ್ಯದ್ಯದಿಷ್ಟಂ ಪ್ರವದಂತು ತತ್ತತ್ ।
ದಾಸ್ಯಾಮಿ ತಸ್ಯಾದ್ಯ ತದಿತ್ಯಮುಷ್ಮಿನ್
ಭಕ್ತ್ಯುಚ್ಛ್ರಯಃ ಪಾಂಡುಸುತೈಃ ಸದಾರೈಃ ।
ವೃತೋಽತ್ರ ಕುಂತೀ ರವಿಸೂನುಜನ್ಮ–
ಮೃತ್ಯೂತ್ಥದೋಷಾಪಗಮಂ ಯಯಾಚೇ ॥ ೬೦ ॥

ಅ: ಅವರೆಲ್ಲರಿಂದ ಪೂಜಿತರಾಗಿ ಕುಳಿತ ವೇದವ್ಯಾಸರು ಹೇಳಿದರು : ''ಯಾರು ಯಾರಿಗೆ ಯಾವುದು ಯಾವುದು ಇಷ್ಟವೋ ಅದೆಲ್ಲವನ್ನೂ ತಿಳಿಸಿರಿ. ನಾನು ಅದನ್ನೀಗ ಪೂರೈಸುವೆ''. ಅವರು ಹೀಗೆನ್ನಲು ಪಾಂಡವರು ಸಪತ್ನೀಕರಾಗಿ ಶ್ರೀವೇದವ್ಯಾಸರಲ್ಲಿ ಭಕ್ತಿ ವರ್ಧಿಸಲೆಂದು ಬೇಡಿಕೊಂಡರು. ಕುಂತಿ ಕರ್ಣನ ಹುಟ್ಟುಸಾವುಗಳಿಂದ ತನಗೆ ಒದಗಿದ ಪಾಪ ಪರಿಹಾರವಾಗಲೆಂದು ಬೇಡಿದಳು.

---

೫೯. ವ್ಯಾಸಶ್ಚ ಭಗವಾನ್ ವಿಪ್ರೋ ದೇವರ್ಷಿಗಣಸೇವಿತಃ।
ವೃತಃ ಶಿಷ್ಯೈರ್ಮಹಾತೇಜಾ ದರ್ಶಯಾಮಾಸ ಪಾರ್ಥಿವಮ್ ॥
ಭೀಮಸೇನಾದಯಶ್ಚೈವ ಪ್ರತ್ಯುತ್ಥಾಯಾಭ್ಯವಾದಯನ್ ॥ – ಭಾರತ (ಆಶ್ರಮ. ೨೭/೨೨)

೬೦. ಯದ್ಯದಿಷ್ಟಮಿತ್ಯತ್ರ ಯ ಯದಿಷ್ಟಂ = ಯಸ್ಮೇಷ್ಟಂ ತತ್ತತ್ ಪ್ರವದಂತು। ತಸ್ಯ ತದ್ದಾಸ್ಯಾಮೀತ್ಯುಕ್ತೇ ಸತೀತಿ ಯೋಗ್ಯಪದಾಧ್ಯಾಹಾರೇಣಾನ್ವಯಃ। ಅಮುಷ್ಮಿನ್ = ವ್ಯಾಸೇ ॥ – (ವಾ.)

೬೦. ಜನ್ಮಮೃತ್ಯೂತ್ಥದೋಷೇತ್ಯತ್ರ ಕನ್ಯಾದಶಾಯಾಂ ಜಾತತ್ವಾತ್ ಜನ್ಮನಿ ದೋಷಃ। ಭವತಾಂ ಜ್ಯೇಷ್ಠೋಽಯಮಿತ್ಯನುಕ್ತ್ವಾ ಸ್ವಪುತ್ರಕರೇಣ ಮಾರಿತತ್ವಾತ್ ಮೃತ್ಯೌ ದೋಷ ಇತಿ ಜ್ಞೇಯಮ್ – (ವಾ.)

೬೦. ಕುಂತೀ ಚ ರವಿಸೂನೋಃ ಕರ್ಣಸ್ಯ ಜನ್ಮೋತ್ಥಸ್ಯ ಕನ್ಯಾವಸ್ಥಾಯಾಂ ಪುತ್ರಜನನಾಜ್ಜಾತಸ್ಯೇತ್ಯರ್ಥಃ। ಮೃತ್ಯೂತ್ಥಸ್ಯ ಯುದ್ಧಸಮಯೇ ಪುತ್ರತ್ವಾಚ್ಛಾದನೇನ ತಜ್ಜಾತಸ್ಯ ಚ ದೋಷಸ್ಯಾಪಗಮಂ ವಿನಾಶಂ ಯಯಾಚೇ ॥ – (ವ.)

೬೦. ಸಂಶಯೋಚ್ಛೇದನಾರ್ಥಾಯ ಪ್ರಾಪ್ತಂ ಮಾಂ ವಿದ್ಧಿ ಪುತ್ರಕ।
ನ ಕೃತಂ ಯೈಃ ಪುರಾ ಕೈಶ್ಚಿತ್ ಕರ್ಮ ಲೋಕೇ ಮಹರ್ಷಿಭಿಃ ॥
ಆಶ್ಚರ್ಯಭೂತಂ ತಪಸಃ ಫಲಂ ತದ್ ದರ್ಶಯಾಮಿ ವಃ।
ಕಿಮಿಚ್ಛಸಿ ಮಹೀಪಾಲ ಮತ್ತಃ ಪ್ರಾಪ್ತುಮಭೀಪ್ಸಿತಮ್ ॥
ದ್ರಷ್ಟುಂ ಸ್ಪೃಷ್ಟುಮಥ ಶ್ರೋತುಂ ತತ್ಕರ್ತಾಽಸ್ಮಿ ತವಾನಘ ॥ – ಭಾರತ (ಆಶ್ರಮ. ೨೮/೨೩-೨೫)

ಇಮೇ ಚ ದೇವಗಂಧರ್ವಾಃ ಸರ್ವೇ ಚೇಮೇ ಮಹರ್ಷಯಃ।
ಪಶ್ಯಂತು ತಪಸೋ ವೀರ್ಯಮದ್ಯ ಮೇ ಚಿರಸಂಭೃತಮ್ ॥
ತದುಚ್ಯತಾಂ ಮಹಾಪ್ರಾಜ್ಞ ಕಂ ಕಾಮಂ ಪ್ರದದಾಮಿ ತೇ ॥
ಪ್ರವಣೋಽಸ್ಮಿ ವರಂ ದಾತುಂ ಪಶ್ಯ ಮೇ ತಪಸಃ ಫಲಮ್ ॥ – ಭಾರತ (ಆಶ್ರಮ. ೨೯/೨೦-೨೧)

ಯಸ್ಯ ಯಸ್ಯ ತು ಯಃ ಕಾಮಸ್ತಸ್ಮಿನ್ ಕಾಲೇ ಬಭೂವ ಹ।
ತಂ ತಂ ವಿಸೃಷ್ಟವಾನ್ ವ್ಯಾಸೋ ವರದೋ ಧರ್ಮವತ್ಸಲಃ ॥ – ಭಾರತ (ಆಶ್ರಮ. ೩೩/೨೫)

೬೦. ಸ ಮಯಾ ಮೂಢಯಾ ಪುತ್ರೋ ಜ್ಞಾಯಮಾನೋಽಪ್ಯಪೇಕ್ಷಿತಃ।
ತನ್ಮಾಂ ದಹತಿ ವಿಪ್ರರ್ಷೇ ಯಥಾ ಸುವಿದಿತಂ ತವ ॥
ಯದಿ ಪಾಪಮಪಾಪಂ ವಾ ತವೈತದ್ ವಿವೃತಂ ಮಯಾ।
ತನ್ಮೇ ದಹಂತಂ ಭಗವಾನ್ ವ್ಯಪನೇತುಂ ತ್ವಮರ್ಹಸಿ ॥ – ಕುಂತೀಪ್ರಾರ್ಥನೆ (ಆಶ್ರಮ. ೩೦/೧೭,೧೮)

೬೦. ಅಪರಾಧಶ್ಚತೇ ನಾಸ್ತಿ ಕನ್ಯಾಭಾವಂ ಗತಾ ಹ್ಯಸಿ ॥ – ಭಾರತ (ಆಶ್ರಮ. ೩೦/೨೧)

ವಿಃ ೧) ವೇದವ್ಯಾಸರು ಕೇಳುವ ಯಾವುದೇ ವರವನ್ನೂ ಸಹ ತಾವು ಆಗಲೇ ನೀಡುವುದಾಗಿ ತಿಳಿಸುವ ಮೂಲಕ ತಾವು ಸರ್ವಶಕ್ತನಾದ ಶ್ರೀಹರಿ ಎಂಬುದನ್ನು ಸ್ಫುಟಪಡಿಸಿದರು ಎಂಬುದನ್ನೂ ತಿಳಿಯಬೇಕು. ಬೇರಾವ ದೇವತೆಗಳೂ ಹಾಗೆ ಬೇಡಿದ್ದನ್ನೆಲ್ಲ ಕೊಡುವುದಾಗಿ ಘೋಷಿಸಿದ ಉಲ್ಲೇಖ ಕಂಡುಬರುವುದಿಲ್ಲ ಎಂಬುದೂ ಗಮನಾರ್ಹ.

೨) ವೇದವ್ಯಾಸರು ಅಂತಹ ಅವಕಾಶ ನೀಡಿದಾಗಲೂ ಪಾಂಡವರು ಬೇಡಿದ್ದು ಅವರಲ್ಲಿ ವಿಶೇಷಭಕ್ತಿಯನ್ನೇ ಹೊರತು ಬೇರೇನನ್ನೂ ಅಲ್ಲ. ಅವರ ಅಂತಹ ನಿಷ್ಕಾಮಭಕ್ತಿಗೆ ಅವರಲ್ಲಿ ಜೀವೋತ್ತಮನಾದ ಭೀಮಸೇನ ಇದ್ದುದೇ ಮುಖ್ಯಕಾರಣ ಎಂದು ತಿಳಿಯಬೇಕು. ವಾಯುದೇವರ ಆವೇಶ ಇದ್ದ ಪ್ರಹ್ಲಾದ ಯಾವ ಬಯಕೆಯನ್ನೂ ಮುಂದಿಡದಿದ್ದಂತೆ, ವಾಯುದೇವರ ಜೊತೆಗಿದ್ದ ಧರ್ಮರಾಜಾದಿಗಳು ನಿಷ್ಕಾಮನೆಯಿಂದ ವರ್ತಿಸಿದರು ಎಂದು ತಿಳಿಯಬೇಕು.

೩) ಕುಂತಿ ಕನ್ಯೆಯಾಗಿಯೇ ಕರ್ಣನಿಗೆ ಜನ್ಮವಿತ್ತುದು, ಅವನು ತನ್ನ ಪುತ್ರನೆಂದು ತಿಳಿಸದೆ ಪಾಂಡವರಿಂದ ಅವನ ವಧೆಯಾದುದು ತನ್ನ ದೋಷಗಳು ಎಂದು ಕುಂತಿಯ ಭಾವನೆಯಾಗಿತ್ತು. ಅದಕ್ಕೆ ವೇದವ್ಯಾಸರು ಅವಳಿಗೆ ಅದರಿಂದ ಯಾವ ಪಾಪವೂ ಒದಗಿಲ್ಲ ಎಂದು ತಿಳಿಸಿ ಅನುಗ್ರಹಿಸಿದರು :

ಅಪರಾಧಶ್ಚ ತೇ ನಾಸ್ತಿ ಕನ್ಯಾಭಾವಂ ಗತಾ ಹ್ಯಸಿ ।
ದೇವಾಶ್ಚೈಶ್ವರ್ಯವಂತೋ ವೈ ಶರೀರಾಣ್ಯಾವಿಶಂತಿ ವೈ ॥...
ಇತಿ ಕುಂತಿ ವಿಜಾನೀಹಿ ವೈತು ಮೇ ಮನಸೋ ಜ್ವರಃ ॥

– ಭಾರತ (ಆಶ್ರಮ. ೩೦/೨೦, ೨೧, ೨೩)

ಧೃತರಾಷ್ಟ್ರ ಗಾಂಧಾರಿಯರ ವಿಚಿತ್ರ ಬೇಡಿಕೆ

ತೇಷಾಂ ಪ್ರದತ್ತೇಷ್ವಭಿವಾಂಛಿತೇಷು
ವೈಚಿತ್ರವೀರ್ಯಃ ಸಹ ಭಾರ್ಯಯೈವ ।
ಸಮ್ಮಂತ್ರ್ಯ ನಿಶ್ಶೇಷರಣೇಹತಾನಾಂ
ಸಂದರ್ಶನಂ ಪ್ರಾರ್ಥಿತವಾಂಸ್ತಮೀಶಮ್ ॥ ೬೧ ॥

---

೬೧. ನಿಶ್ಶೇಷರಣೇಹತಾನಾಮಿತ್ಯತ್ರ ವನೇಚರಾಣಾಮಿತಿವದಲುಕ್ಸಮಾಸಃ ॥ – (ವಾ.)

೬೧. ಷೋಡಶೇಮಾನಿ ವರ್ಷಾಣಿ ಗತಾನಿ ಮುನಿಪುಂಗವ ।
– ಗಾಂಧಾರೀವಚನ । ಭಾರತ (ಆಶ್ರಮ. ೨೯/೩೮)

ಅ: ಅವರ ಬಯಕೆಗಳನ್ನೆಲ್ಲ ವೇದವ್ಯಾಸರು ಈಡೇರಿಸಿದಾಗ, ಧೃತರಾಷ್ಟ್ರ ಪತ್ನಿಯೊಡನೆ ಸಮಾಲೋಚಿಸಿ, ಯುದ್ಧದಲ್ಲಿ ಹತರಾದವರನ್ನೆಲ್ಲ ತಾವು ನೋಡಬೇಕೆಂದು ಸರ್ವಸಮರ್ಥ-ರಾದ ಅವರನ್ನು ಕೇಳಿದ.

ವಿ: ಇತಿಹಾಸಪುರಾಣಪ್ರಪಂಚದಲ್ಲೇ ಇದೊಂದು ವಿನೂತನವಾದ ಪ್ರಸಂಗ. ಸತ್ತ ಒಬ್ಬಿಬ್ಬ-ರನ್ನು ಮಾತ್ರವಲ್ಲದೆ, ಕುರುಕ್ಷೇತ್ರರಣರಂಗದಲ್ಲಿ ಹತರಾದವರನ್ನೆಲ್ಲ ಕಾಣಬಯಸುವ ವಿಚಾರವೇ ಅತ್ಯಂತರೋಚಕವಾದುದು. ಆ ವೇಳೆಗೆ ಅವರೆಲ್ಲ ಮಡಿದು, ಹದಿನಾರು ವರ್ಷಗಳು ಕಳೆದಿದ್ದವು.

ಮತ್ತೆ ಬದುಕಿದ ಮಡಿದವರು

ತತಸ್ತು ತೇ ಸತ್ಯವತೀಸುತಸ್ಯ
ಸರ್ವೇಶ್ವರಸ್ಯಾಜ್ಞಯಾ ಸರ್ವ ಏವ ।
ಸಮಾಗತಾಃ ಸ್ವರ್ಗಲೋಕಾತ್ ಕ್ಷಣೇನ
ದತ್ತಾ ಚ ದಿವ್ಯಾ ದೃಗಮುಷ್ಯ ರಾಜ್ಞಃ ।
ಊಷುಶ್ಚ ರಾತ್ರಿಂ ಪರಮಾಜ್ಞಯೈವ
ಸರ್ವೇ ಸ್ವಭಾರ್ಯಾಸಹಿತಾ ಯಥಾ ಪುರಾ ॥ ೬೨ ॥

ಅ: ಬಳಿಕ ಸರ್ವೇಶ್ವರರಾದ ಶ್ರೀವೇದವ್ಯಾಸರ ಆದೇಶದಿಂದ ಅವರೆಲ್ಲ ಕ್ಷಣದಲ್ಲೇ ಸ್ವರ್ಗಲೋಕದಿಂದ ಅಲ್ಲಿಗೆ ಆಗಮಿಸಿದರು. ವೇದವ್ಯಾಸರು ಧೃತರಾಷ್ಟ್ರನಿಗೆ ದಿವ್ಯದೃಷ್ಟಿಯನ್ನೂ

---

೬೨. ಸಮಾಗತಾಃ ಸ್ವರ್ಗಲೋಕಾದಿತ್ಯತ್ರ ಸ್ವರ್ಗಲೋಕಾತ್ = ವೀರರಣೋಚಿತಸ್ವರ್ಗಲೋಕಾತ್। ಸರ್ವೇ ಚ ದೃಷ್ಟ್ವಾ ತೃಪ್ತಾ ಇತಿ ಸಂಬಂಧಃ ॥ –(ವಾ.)

೬೨. ಯೇ ಪಾಂಡವಾಸ್ತೇ ಹತಾಸ್ತೇ ಸರ್ವೇ ಸ್ವರ್ಗಮೇವ ಪ್ರಾಪ್ತಾಃ । ನ ತ್ವಧೋಲೋಕಮ್ । ತೇಷಾಂ ವೃದ್ಧಿಃ ಸ್ಯಾತ್ । ಪಾಂಡವಾರ್ಥೇ ಹತಾನಾಂ ಮೋಕ್ಷೇಽಪಿ ಸೌಖ್ಯಸ್ಯೇತಿ । ಪಾಂಡವೇಯಾಶ್ಚ ಪುಣ್ಯಾನಿ ತೇಷಾಂ ವಿಷ್ಣು-ರ್ನಿಯೋಜಕ ಇತ್ಯಾದ್ಯುಕ್ತೇಃ । ಯೇ ದುರ್ಯೋಧನಪಕ್ಷೀಯಾಃ ಅಧೋಲೋಕಂ ಯಾತಾಸ್ತಾನ್ ವಿನಾಚಾರ್ಯ ತೇಜಸೋ ಐಶ್ವರ್ಯಂ ಗತಾಃ ದುರ್ಯೋಧನಾದಯಃ ಕರ್ಣಾತ್ ತತ್ಕ್ಷೇ ಸ್ಥಿತ್ವಾ ದುರ್ಯೋಧನಾರ್ಥೇ ಹತಾಃ ಭೀಷ್ಮಾದ್ಯಾಶ್ಚ ಸ್ವರ್ಗಂ ಗತಾಸ್ತೇ ಸರ್ವೇಽಪಿ ತದಾ ವ್ಯಾಸಾಜ್ಞಯಾ ಸಮಾಗತಾ ಇತಿ । –(ರಾ.)

೬೨. ಯಮಭಟಾ ಅಪಿ ದೇಹವಿಯೋಗಕಾಲೇ ಸ್ವೇಚ್ಛಯಾ ಯಾತನಾದೇಹಂ ನಿರ್ಮಾಯ ತಾಂಸ್ತತ್ರ ಸ್ಥಾಪ್ಯ ಯಮಾಂತಿಕಂ ನಯಂತಿ । ಕಿಮು ವ್ಯಾಸಸ್ಯ ತಾದೃಶೀ ಶಕ್ತಿರಸ್ತೀತಿ ಸೂಚನಾಯ ಸರ್ವೇಶ್ವರಸ್ಯೇತ್ಯುಕ್ತಮ್ । ಯದ್ವಾ ಸ್ವರ್ಗಸ್ಥತೇಜೋಮಯಶರೀರೇಣ ವಾಗತ್ಯ ಪುರಾ ಯಥಾ ತಥಾ ಸ್ವಸ್ವಭಾರ್ಯಾ ಸಹಿತಾಃ ಸಂತೋ ರಾತ್ರಿಮೂಷುರಿತಿ । ತಾಸಾಂ ಸ್ವಪತಿತ್ವಜ್ಞಾನಮಪಿ ಪರಮಾಜ್ಞಯೈವೇತಿ ಜ್ಞೇಯಮ್ ॥ –(ರಾ.)

ನೀಡಿದರು. ಸರ್ವೋತ್ತಮರಾದ ಶ್ರೀವೇದವ್ಯಾಸರ ಆಜ್ಞೆಯಂತೆ ಅವರೆಲ್ಲ ಆ ರಾತ್ರಿಯನ್ನು ಮುಂಚಿನಂತೆ ತಮ್ಮ ಪತ್ನಿಯರೊಂದಿಗೆ ಕಳೆದರು.

ವಿ: ೧) ಅವರೆಲ್ಲ ಸಾಯುವ ಮುನ್ನ ಇದ್ದ ರೀತಿಯಲ್ಲಿಯೇ ಕಾಣಿಸಿಕೊಂಡಿದ್ದು ಮತ್ತೊಂದು ವಿಶೇಷ :

ಯಸ್ಯ ವೀರಸ್ಯ ಯೋ ವೇಷೋ ಯೋ ಧ್ವಜೋ ಯಚ್ಚ ವಾಹನಮ್ ।
ತೇನ ತೇನ ವ್ಯದೃಶ್ಯಂತ ಸಮುಪೇತಾ ನರಾಧಿಪಾಃ ॥

– ಭಾರತ (ಆಶ್ರಮ. ೩೨/೫,೭,೧೪)

ಹಾಗೆ ಅಲ್ಲಿಗೆ ಅವರನ್ನು ಕರೆತರಿಸಿದ್ದು ಮಾತ್ರವಲ್ಲದೆ, ಅವರನ್ನೆಲ್ಲ ಕಾಣುವ ದಿವ್ಯದೃಷ್ಟಿ–ಯನ್ನೂ ಸಹ ಅವನಿಗೆ ನೀಡಿದರು.

೨) ಉದ್ಯೋಗಪರ್ವದಲ್ಲಿ ಕೃಷ್ಣರೂಪದಿಂದ ಅವನಿಗೆ ದಿವ್ಯದೃಷ್ಟಿಯನ್ನು ನೀಡಿದ್ದರೆ, ಇಲ್ಲಿ ಶ್ರೀವ್ಯಾಸರೂಪದಿಂದ ದಿವ್ಯದೃಷ್ಟಿಯನ್ನು ನೀಡಿದರು. ಆ ಮೂಲಕ ಆ ಎರಡೂ ರೂಪಗಳೂ ಒಬ್ಬನೇ ಶ್ರೀಹರಿಯ ರೂಪಗಳು ಎಂದು ದೃಢಪಡಿಸಿದರು ಎಂದು ತಿಳಿಯಬೇಕು.

೩) ಕೃಷ್ಣನ ವಿಶ್ವರೂಪ ಕಂಡ ತನಗೆ ಬೇರೇನೂ ಕಾಣುವುದು ಬೇಕಿಲ್ಲ ಎಂದಿದ್ದು ಅವನು ಈಗ ಹೀಗೆ ಅವರನ್ನೆಲ್ಲ ಕಾಣಬಯಸಿದ್ದು ಅವನಿಗೂ ಒಂದು ಬಗೆಯ ವ್ಯಾಮೋಹ ಉಳಿದುಕೊಂಡದ್ದಕ್ಕೆ ದ್ಯೋತಕ.

೪) ಪಾಂಡವರು ಆ ವ್ಯಾಸಾಶ್ರಮಕ್ಕೆ ತೆರಳುವಾಗ ಯುದ್ಧದಲ್ಲಿ ಮಡಿದಿದ್ದವರ ಪತ್ನಿ–ಯರನ್ನೆಲ್ಲ ತಮ್ಮೊಡನೆ ಕರೆದೊಯ್ದಿದ್ದರಿಂದ ಸ್ವರ್ಗದಿಂದಾಗಮಿಸಿದ ಯೋಧರಿಗೆ ತಮ್ಮ ಪತ್ನಿಯರ ಸಮಾಗಮ ಸಾಧ್ಯವಾಯಿತು ಎಂಬ ವಿಶೇಷಾಂಶವೂ ಮಹಾಭಾರತದಲ್ಲಿದೆ.

---

೬೨. ಪಾಂಡವಾನಾಂ ಚ ಯೇ ಯೋಧಾಃ ಕೌರವಾಣಾಂ ಚ ಸರ್ವಶಃ ।
ರಾಜಾನಶ್ಚ ಮಹಾಭಾಗಾ ನಾನಾದೇಶನಿವಾಸಿನಃ ॥
ತತಸ್ತೇ ಪಾರ್ಥಿವಾಃ ಸರ್ವೇ ಭೀಷ್ಮದ್ರೋಣಪುರೋಗಮಾಃ ।
ಸಸೈನ್ಯಾಃ ಸಲಿಲಾತ್ ತಸ್ಮಾತ್ ಸಮುತ್ತಸ್ಥುಃ ಸಹಸ್ರಶಃ ॥ – ಭಾರತ (ಆಶ್ರಮ. ೩೨/೫,೭,೧೪)

೬೩. ಧೃತರಾಷ್ಟ್ರಸ್ಯ ಚ ತದಾ ದಿವ್ಯಂ ಚಕ್ಷುರ್ನರಾಧಿಪ ।
ಮುನಿಃ ಸತ್ಯವತೀಪುತ್ರಃ ಪ್ರೀತಃ ಪ್ರಾದಾತ್ ತಪೋಬಲಾತ್ ॥
ದಿವ್ಯಜ್ಞಾನಬಲೋಪೇತಾ ಗಾಂಧಾರೀ ಚ ಯಶಸ್ವಿನೀ ॥
ದದರ್ಶ ಪುತ್ರಾಂಸ್ತಾನ್ ಸರ್ವಾನ್ ಯೇ ಚಾನ್ಯೇऽಪಿ ಮೃಧೇ ಹತಾಃ ॥ – ಭಾರತ (ಆಶ್ರಮ.೩೨/೧೭,೧೮)

ಪತಿಗಳೊಂದಿಗೆ ತೆರಳಿದ ಸ್ತ್ರೀಸಂಕುಲ

ತೃಪ್ತಃ ಸದಾರೋ ನೃಪತಿಶ್ಚ ತತ್ರ
ಸರ್ವೇಽಪಿ ದೃಷ್ಟ್ವಾ ಮಹದದ್ಭುತಂ ತತ್ ।
ಅಥಾಜ್ಞಯೈವಾಸ್ಯ ಪರಸ್ಯ ಸರ್ವಾಃ
ಸ್ತ್ರಿಯೋ ನಿಜೇಶೈಃ ಸಹಿತಾ ಯಯುಃ ಸ್ವಃ ॥ ೬೩ ॥

ಅ: ಸಪತ್ನೀಕನಾಗಿ ಧೃತರಾಷ್ಟ್ರ ಮೊದಲಾದವರೆಲ್ಲರೂ ಆ ಪರಮಾದ್ಭುತವನ್ನು ಕಂಡು ಸಂತೃಪ್ತರಾದರು. ಬಳಿಕ ಶ್ರೀವೇದವ್ಯಾಸರ ಆದೇಶದಂತೆ ಸಕಲಸ್ತ್ರೀಯರು ತಮ್ಮ ಪತಿಗಳೊಂದಿಗೆ ಕೂಡಿ ಸ್ವರ್ಗಕ್ಕೆ ತೆರಳಿದರು.

ವಿ: ೧) ವ್ಯಾಸರು ತೋರಿದ್ದು ನಿಜವಾದ ಅರ್ಥದಲ್ಲಿ ಪರಮಾದ್ಭುತ. ಮಾರನೆಯ ಪ್ರಾತಃಕಾಲ ವ್ಯಾಸರು ಬಂದಿದ್ದವರನ್ನೆಲ್ಲ ಮರಳಲು ಆದೇಶಿಸಿ, ಪತಿಲೋಕವನ್ನು ಸೇರಬಯಸುವ ಸ್ತ್ರೀಯರೆಲ್ಲ ಅವರೊಂದಿಗೆ ಆಗಲೇ ತೆರಳಿದರೆ, ಅವರ ಬಯಕೆ ಈಡೇರುವುದೆಂದು ತಿಳಿಸಿದರು.

ಯಾ ಯಾಃ ಪತಿಕೃತಾನ್ ಲೋಕಾನಿಚ್ಛಂತಿ ಪರಮಸ್ತ್ರಿಯಃ ।
ತಾ ಜಾಹ್ನವೀಜಲಂ ಕ್ಷಿಪ್ರಮವಗಾಹಂತ್ವತಂದ್ರಿತಾಃ ॥ – ಭಾರತ(ಆಶ್ರಮ. ೩೩/೧೯)

---

೬೩. ಏಕಾಂ ರಾತ್ರಿಂ ವಿಹೃತ್ಯೈವ ತೇ ವೀರಾಸ್ತಾಶ್ಚ ಯೋಷಿತಃ ।
ಆಮಂತ್ರ್ಯಾನ್ಯೋನ್ಯಮಾಶ್ಲಿಷ್ಯ ತತೋ ಜಗ್ಮುರ್ಯಥಾಗತಮ್ ॥ – ಭಾರತ (ಆಶ್ರಮ. ೩೩/೧೧)

೬೩. ತದದ್ಭುತಮಚಿಂತ್ಯಂ ಚ ಸುಮಹಲ್ಲೋಮಹರ್ಷಣಮ್ ।
ವಿಸ್ಮಿತಃ ಸ ಜನಃ ಸರ್ವೋ ದದರ್ಶಾನಿಮಿಷೇಕ್ಷಣಃ ॥ – ಭಾರತ (ಆಶ್ರಮ. ೩೨/೧೯)

ತದುತ್ಸವಮಹೋದಗ್ರಂ ಹೃಷ್ಟನಾರೀನರಾಕುಲಮ್ ।
ಆಶ್ಚರ್ಯಭೂತಂ ದದೃಶೇ ಚಿತ್ರಂ ಪಟಗತಂ ಯಥಾ ॥ – ಭಾರತ (ಆಶ್ರಮ. ೩೨/೨೦)

೬೩. ತತಸ್ತಸ್ಯ ವಚಃ ಶ್ರುತ್ವಾ ಶ್ರದ್ಧಧಾನಾ ವರಾಂಗನಾಃ ।
ಶ್ವಶುರಂ ಸಮನುಜ್ಞಾಯ ವಿವಿಶುರ್ಜಾಹ್ನವೀಜಲಮ್ ॥
ವಿಮುಕ್ತಮಾನುಷ್ಯದೇಹೈಸ್ತತಸ್ತಾ ಭರ್ತೃಭಿಃ ಸಹ ।
ಪ್ರವಿಶ್ಯ ಕ್ಷತ್ರಿಯಾ ಮುಕ್ತಾ ಜಗ್ಮುರ್ಭರ್ತೃಸಲೋಕತಾಮ್ ।
ಸರ್ವಾಃ ಸರ್ವಗುಣೋಪೇತಾಃ ಸ್ವಸ್ಥಾನಂ ಪ್ರತಿಪೇದಿರೇ ॥ - ಭಾರತ (ಆಶ್ರಮ. ೩೩/೨೦-೨೪)

ದೇವಲೋಕಂ ಯಯುಃ ಕೇಚಿತ್ ಕೇಚಿದ್ ಬ್ರಹ್ಮಸದಸ್ತಥಾ ।
ಕೇಚಿಚ್ಚ ವಾರುಣಂ ಲೋಕಂ ಕೇಚಿತ್ ಕೌಬೇರಮಾಪ್ಲುವನ್ ॥
ತತೋ ವೈವಸ್ವತಂ ಲೋಕಂ ಕೇಚಿಚ್ಚೈವಾಪ್ಲುವನ್ ನೃಪಾಃ ।
ರಾಕ್ಷಸಾನಾಂ ಪಿಶಾಚಾನಾಂ ಕೇಚಿಚ್ಚಾಪ್ಯುತ್ತರಾನ್ ಕುರೂನ್ ॥ - ಭಾರತ (ಆಶ್ರಮ. ೩೩/೨೪,೨೫)

೨) ಕೂಡಲೇ ಅವರೆಲ್ಲ ಗಂಗೆಯಲ್ಲಿ ದೇಹತೊರೆದು, ಅವರೊಂದಿಗೆ ತೆರಳಿಬಿಟ್ಟರು :

ತತಸ್ತಸ್ಯ ವಚಃ ಶ್ರುತ್ವಾ ಶ್ರದ್ಧಧಾನಾ ವರಾಂಗನಾಃ ।
ಶಂತನುಂ ಸಮನುಜ್ಞಾಪ್ಯ ವಿವಿಶುರ್ಜಾಹ್ನವೀಜಲಮ್ ॥

– ಭಾರತ (ಆಶ್ರಮವಾಸಿಕ. ೩೩/೨೦-೨೪)

೩) ಪುತ್ರದರ್ಶನಪರ್ವ ಎಂಬ ಆಶ್ರಮವಾಸಿಕದ ಉಪಪರ್ವದಲ್ಲಿ ಈ ಎಲ್ಲ ವಿವರ–ಗಳೂ ನಿರೂಪಿತವಾಗಿವೆ.

ಜನಮೇಜಯ ಕಂಡ ಪರೀಕ್ಷಿತ

ವಿನೋತ್ತರಾಂ ತಾಂ ತು ಕಥಾಂ ನಿಶಮ್ಯ
ಪಾರೀಕ್ಷಿತೋಽಯಾಚತ ತಾತದೃಷ್ಟಿಮ್ ।
ತಂ ಚಾನಯಾಮಾಸ ತದೈವ ಕೃಷ್ಣೋ
ಹ್ಯಚಿಂತ್ಯಶಕ್ತಿಃ ಸ ವಿಕುಂಠಲೋಕಾತ್ ॥ ೬೪ ॥

ಅ: ಉತ್ತರೆಯ ಹೊರತು ಇತರರೆಲ್ಲ ತೆರಳಿದರು. ಆ ಕಥೆಯನ್ನು ಕೇಳಿದ ಪರೀಕ್ಷಿತನ ಮಗನಾದ ಜನಮೇಜಯ ತಂದೆಯನ್ನು ತೋರಿಸಲು ಬೇಡಿಕೊಂಡ; ಅಚಿಂತ್ಯಶಕ್ತಿಯುಳ್ಳ ವೇದವ್ಯಾಸರು ಆಗಲೇ ಅವನನ್ನು ವೈಕುಂಠಲೋಕದಿಂದ ಕರೆತರಿಸಿದರು.

ವಿ: ೧) ಆಗ ಇತರರೊಂದಿಗೆ ಅಭಿಮನ್ಯುವು ಬಂದಿದ್ದರೂ, ಅವನೊಂದಿಗೆ ಉತ್ತರೆ ತೆರಳಿಲ್ಲ; ಅದಕ್ಕೆ ಪರೀಕ್ಷಿದ್ರಾಜನಿನ್ನೂ ಚಿಕ್ಕವನಿದ್ದುದೇ ಕಾರಣ. ಪಾಂಡುರಾಜನೊಂದಿಗೆ ಕುಂತಿ ತೆರಳಿದಿದ್ದಂತೆ. ಈ ಪ್ರಸಂಗ ಎಂದು ತಿಳಿಯಬೇಕು (೧೪/೫೦–೫೨).

೨) ಸಹಜವಾಗಿಯೇ ಇದನ್ನು ಕೇಳಿದ ಜನಮೇಜಯ ತನ್ನ ತಂದೆ ಪರೀಕ್ಷಿದ್ರಾಜನನ್ನೂ ಸಹ ಹಾಗೆ ನೋಡಲು ಅಪೇಕ್ಷಿಸಿದ. ಅಲ್ಲಿ ಉಪಸ್ಥಿತರಿದ್ದ ಶ್ರೀವೇದವ್ಯಾಸರನ್ನು ಅದಕ್ಕಾಗಿ ಪ್ರಾರ್ಥಿಸಿದ. ಕೂಡಲೇ ಅವರು ಪರೀಕ್ಷಿದ್ರಾಜನನ್ನು ಅಲ್ಲಿಗೆ ಕರೆಸಿ ತೋರಿಸಿದರು. ವ್ಯಾಸರು ತಮ್ಮ ಅಂತಹ ಅದ್ಭುತಮಹಿಮೆಯನ್ನು ಮತ್ತೊಮ್ಮೆ ತೋರಿಸಿದ್ದು ವಿಶೇಷ.

---

೬೪. ವ್ಯಾಸಾಜ್ಞಯಾ ಭರ್ತುರಭಿಮನ್ಯೋಃ ಪ್ರಾಪ್ತತ್ವೇಽಪಿ ಪುತ್ರಂ ಪರಿಪಾಲಯೇತಿ ಭರ್ತುರಾದೇಶೇನೈವೋತ್ತರಾ ನ ಗತೇತಿ ಭಾವೇನೋಕ್ತಂ ವಿನೋತ್ತರಾಮಿತಿ। ಪ್ರಸಂಗಾತ್ಪ್ರಾಪ್ತಾಂ ಭಾವಿಪರ್ವಕಥಾಮಾಹ ತಾಮಿತಿ। ಪಾರೀಕ್ಷಿತಃ= ಪರೀಕ್ಷಿತ್ಪುತ್ರೋ ಜನಮೇಜಯಃ ॥ – (ವಾ.)

೬೪. ಮಮಾಪಿ ವರದೋ ವ್ಯಾಸೋ ದರ್ಶಯೇತ್ ಪಿತರಂ ಯದಿ ।
ತದ್ರೂಪವೇಷವಯಸಂ ಶ್ರದ್ದಧ್ಯಾಂ ಸರ್ವಮೇವ ತೇ ॥ (ಜನಮೇಜಯವಚನ)– ಭಾರತ(ಆಶ್ರಮ.೩೫/೪)

ದೃಷ್ಟ್ವೈವ ಪಾರೀಕ್ಷಿತ ಆಪ ತುಷ್ಟಿಂ
ಸ್ವತಾತಮೀಶೇನ ಸಮಾಹೃತಂ ಪುನಃ ।
ಸಂಪೂಜ್ಯ ತಂ ಕೃಷ್ಣಮಪೀಶವಂದ್ಯಂ
ಕ್ಷಮಾಪಯಾಮಾಸ ಪರೀಕ್ಷಿದಾತ್ಮಜಃ ।
ಚಕ್ರೇ ಚ ವಿಸ್ರಂಭಮತೀವ ಭಾರತೇ
ಪುನಶ್ಚ ತತ್ರತ್ಯಜನೈಃ ಸಮೇತಃ ॥ ೬೫ ॥

ಅ: ಜನಮೇಜಯ ವೇದವ್ಯಾಸರಿಂದ ಕರೆತರಿಸಲ್ಪಟ್ಟ ತನ್ನ ತಂದೆ ಪರೀಕ್ಷಿದ್ರಾಜನನ್ನು ಕಂಡು ಸಂತುಷ್ಟನಾದ. ಬ್ರಹ್ಮಾದಿದೇವತಾವಂದ್ಯನಾದ ಶ್ರೀವೇದವ್ಯಾಸರನ್ನು ಪರಿಪರಿಯಿಂದ ಪೂಜಿಸಿ ತನ್ನನ್ನು ಕ್ಷಮಿಸಲು ಕೇಳಿಕೊಂಡ; ಮತ್ತು ಅಲ್ಲಿದ್ದ ಜನರೊಂದಿಗೆ ಕೂಡಿದವನಾಗಿ ಮಹಾಭಾರತದ ಬಗ್ಗೆ ವಿಶೇಷವಾಗಿ ನಂಬಿಕೆ ಹೆಚ್ಚಿಸಿಕೊಂಡ.

ಎ: ವೇದವ್ಯಾಸರು ಆಗ ಪರೀಕ್ಷಿತನನ್ನು ಮಾತ್ರವಲ್ಲದೆ ಅವನ ಮಂತ್ರಿ ಮೊದಲಾದ ಪರಿವಾರದವರನ್ನೂ, ಶಮೀಕಮುನಿ ಹಾಗೂ ಅವರ ಪುತ್ರ ಶೃಂಗಿಮುನಿಯನ್ನೂ ಸಹ ಕರೆತರಿಸಿದ ಉಲ್ಲೇಖ ಮಹಾಭಾರತದಲ್ಲಿದೆ (ಆಶ್ರಮವಾಸಿಕ. ೩೫/೭,೮):

ತತಸ್ತದ್ಭೂಪವಯಸಮಾಗತಂ ನೃಪತಿಂ ದಿವಃ ।
ಶ್ರೀಮಂತಂ ಪಿತರಂ ರಾಜಾ ದದರ್ಶ ಜನಮೇಜಯಃ ॥
ಶಮೀಕಂ ಚ ಮಹಾತ್ಮಾನಂ ಪುತ್ರಂ ಚ ತಸ್ಯ ಶೃಂಗಿಣಮ್ ।
ಅಮಾತ್ಯಾ ಯೇ ಬಭೂವುಶ್ಚ ರಾಜ್ಞಸ್ತಾಂಶ್ಚ ದದರ್ಶ ಹ ॥

---

೬೫. ಭೀಮೇನ ಪ್ರಕ್ಷಿಪ್ತಾಃ ಗಜಾಃ ತತ್ರ ತತ್ರ ಮೇಘಮಂಡಲಾದೌ ಲಗ್ನಾ ಇದಾನೀಮಪಿ ಕುರುಕ್ಷೇತ್ರೇ ಪತಂತಿ । ಜಾತ್ಯಂಧಸ್ಯ ದಿವ್ಯದೃಷ್ಟಿಂ ದತ್ತ್ವಾ ಮೃತಾನದರ್ಶಯದಿತ್ಯಾದಿಭಾರತಾರ್ಥೇ ಪೂರ್ವಂ ಸಂಶಯಯುಕ್ತಸ್ತದ್ದರ್ಶನಾನಂತರಂ ಅತೀವವಿಸ್ರಂಭಂ ಚಕ್ರ ಇತಿ ಭಾವಃ ॥ – (ಜ.)

೬೫. ಇದಮುಕ್ತಂ ಭವತಿ । ಪೂರ್ವಂ ಭಾರತೇऽತಿವಿಶ್ವಾಸೋ ನಾಭೂದ್ವಿಶ್ವಾಸಮಾತ್ರಮಭೂತ್ । ಪಿತುರ್ದರ್ಶನಾನಂತರಮತಿವಿಶ್ವಾಸಸ್ತು ಪಿತೃದರ್ಶನಾತ್ ಪೂರ್ವಂ ಪಿತೃದರ್ಶನಾನಂತರಂ ಚಾಭೂದತಃ ಪುನಃಶಬ್ದಃ ಪ್ರಯುಕ್ತ ಇತಿ ॥ – (ಸ.)

೬೫. ಇತ್ಯುಕ್ತವಚನೇ ತಸ್ಮಿನ್ ನೃಪೇ ವ್ಯಾಸಃ ಪ್ರತಾಪವಾನ್ ।
ಪ್ರಸಾದಮಕರೋದ್ ಧೀಮಾನಾನಯಚ್ಚ ಪರೀಕ್ಷಿತಮ್ ॥ - ಭಾರತ (ಆಶ್ರಮ. ೩೫/೬)

೬೫. ತತಃ ಸೋऽವಭೃಥೇ ರಾಜಾ ಮುದಿತೋ ಜನಮೇಜಯಃ ।
ಪಿತರಂ ಸ್ನಾಪಯಾಮಾಸ ಸ್ವಯಂ ಸ್ನೌ ಚ ಪಾರ್ಥಿವಃ ॥ - ಭಾರತ (ಆಶ್ರಮ. ೩೫/೯)

೬೫. ಋಷಿರ್ದ್ವೈಪಾಯನೋ ಯತ್ರ ಪುರಾಣಸ್ತಪಸೋ ನಿಧಿಃ ।
ಯಜ್ಞೇ ಕುರುಕುಲಶ್ರೇಷ್ಠತಸ್ಯ ಲೋಕಾವುಭೌ ಜಿತೌ ॥ - ಭಾರತ (ಆಶ್ರಮ. ೩೫/೧೨)

ಅದರಂತೆ ಜನಮೇಜಯನ ಸರ್ಪಯಾಗದ ಅವಭೃಥದಲ್ಲಿ ಎಲ್ಲರೂ ಪಾಲ್ಗೊಂಡ ವಿವರವೂ ಅಲ್ಲಿದೆ (ಆಶ್ರಮವಾಸಿಕ. ೩೫/೯).

ತತಃ ಸೋಽವಭೃಥೇ ರಾಜಾ ಮುದಿತೋ ಜನಮೇಜಯಃ ।
ಪಿತರಂ ಸ್ನಾಪಯಾಮಾಸ ಸ್ವಯಂ ಸಸ್ನೌ ಚ ಪಾರ್ಥಿವಃ ॥

ಅದನ್ನೆಲ್ಲ ಪ್ರತ್ಯಕ್ಷ ಕಂಡದ್ದರಿಂದ ಅವನಿಗೆ ಮಹಾಭಾರತದ ಐತಿಹಾಸಿಕತ್ವದ ಬಗ್ಗೆ ಶ್ರದ್ಧೆ ಅಪಾರವಾಗಿ ಹೆಚ್ಚಿತು ಎಂದರ್ಥ.

ಮರಳಿ ಹಸ್ತಿನಾಪುರಕ್ಕೆ ಪಾಂಡವರು

ಪಾರ್ಥಾಃ ಪುನಃ ಪ್ರಾಪ್ಯ ಪುರಂ ಸ್ವಕೀಯಂ
ಧರ್ಮೇಣ ಪೃಥ್ವೀಂ ಪರಿಪಾಲಯಂತಃ ।
ಭೋಗಾನರಾಗಾ ಅಜುಷಂತ ಯೋಗ್ಯಾನ್
ಯುಕ್ತಾ ಜಗದ್ಧಾತರಿ ವಾಸುದೇವೇ ॥ ೬೬ ॥

ಅ: ಪಾಂಡವರು ಮತ್ತೆ ತಮ್ಮ ಪಟ್ಟಣವನ್ನು ಸೇರಿ ಪೃಥ್ವಿಯನ್ನು ಧರ್ಮದಿಂದ ಪರಿಪಾಲಿಸತೊಡಗಿದರು. ತಮಗೆ ವಿಹಿತವಾದ ಭೋಗಗಳನ್ನು ಅವುಗಳಲ್ಲಿ ಲಾಲಸೆ ಹೊಂದದೆ, ಜಗದ್ಧಾರಕನಾದ ಶ್ರೀಕೃಷ್ಣನಲ್ಲಿ ಭಕ್ತಿಯಿಂದ ಕೂಡಿದವರಾಗಿ ಸೇವಿಸಿದರು.

ದಾವಾಗ್ನಿಯಲ್ಲಿ ಧೃತರಾಷ್ಟ್ರಾದಿಗಳ ನಿರ್ಯಾಣ

ವರ್ಷತ್ರಯಾಂತೇ ತೃಸಮಾಹಿತಾಗ್ನಿಂ
ತ್ಯಕ್ತಾಗ್ನಿಭಿಸ್ತೈರ್ವನಮಾಲಿಹದ್ಭಿಃ ।
ತೇ ಶುಶ್ರುವುರ್ಧೃತರಾಷ್ಟ್ರಂ ಸಭಾರ್ಯಂ
ಸಹೈವ ಕುಂತ್ಯಾ ಪರಿದಗ್ಧದೇಹಮ್ ॥ ೬೭ ॥

---

೬೭. ವರ್ಷತ್ರಯಾಂತೇ ತೃಸಮಾಹಿತಾಗ್ನಿಮಿತ್ಯತ್ರ ''ಲಿಹ ಆಸ್ವಾದನ'' ಇತಿ ಧಾತೋಃ ವನಂ ಅ = ಸಮಂತಾತ್ ಲಿಹದ್ಭಿಃ ತೈರಗ್ನಿಭಿಃ = ಪೂರ್ಣಾಗ್ನಿಭಿಃ ಪರಿತೋಽಪಿ ವಿದ್ಯಮಾನತ್ವಸೂಚನಾಯ ಬಹುವಚನಮ್। ತೃನಃ = ಆತ್ಮನಃ ಸ್ವಸ್ಯ। ಸಮಾಹಿತಾಗ್ನಿಂ = ಔಪಾಸನಾಗ್ನಿಂ ತ್ಯಕ್ತ್ವಾ = ದತ್ತ್ವಾ ಸಂಯೋಜ್ಯೇತ್ಯರ್ಥಃ। ''ತ್ಯಾಗೋ ವಿಹಾಯಿತಂ ದಾನಮ್'' ಇತ್ಯಮರಃ ॥ –(ವಾ.)

ಆ: ಮೂರುವರ್ಷಗಳ ಕೊನೆಯಲ್ಲಿ ತನ್ನಲ್ಲಿ ಸಮಾರೋಪ ಮಾಡಿಕೊಂಡಿದ್ದ ಔಪಾಸನಾಗ್ನಿಯನ್ನು ಧೃತರಾಷ್ಟ್ರ ದಾವಾಗ್ನಿಯಲ್ಲಿರಿಸಿದಾಗ ಅದರಿಂದ ಅವನು ಪತ್ನಿಯಾದ ಗಾಂಧಾರಿಯೊಂದಿಗೂ, ಕುಂತಿಯೊಂದಿಗೂ ದಗ್ಧದೇಹನಾದದ್ದನ್ನು ಪಾಂಡವರು ಕೇಳಿದರು.

ವಿ: ೧) ಧೃತರಾಷ್ಟ್ರ ಕುರುಕ್ಷೇತ್ರದಿಂದ ಹರಿದ್ವಾರಕ್ಕೆ ಹೋಗಿ, ಅಲ್ಲಿ ಒಂದು ಯಜ್ಞ ಮಾಡಲೆಂದು ತಾನು ಹೃದಯದಲ್ಲಿ ಸಮಾರೋಪ ಮಾಡಿಕೊಂಡಿದ್ದ ಔಪಾಸನಾಗ್ನಿಯನ್ನು ಅಗ್ನಿಕುಂಡದಲ್ಲಿ ಪ್ರತಿಷ್ಠಾಪಿಸಿದ. ಇಷ್ಟಿ ಪೂರೈಸಿದ ಮೇಲೆ ಅದು ಕಾಡ್ಗಿಚ್ಚಾಗಿ ಪಸರಿಸಿತು.

---

೬೭. ಶುಶ್ರುವುಃ= ಚಕ್ಷುಷ್ಮತ್ವೇನ ಬಲವತ್ವೇನ ಚ ಶೀಘ್ರಂ ಪಲಾಯನಾತ್ ವನಾಗ್ನಿತೋ ಮುಕ್ತಸಂಜಯಮುಖಾತ್ ಶುಶ್ರುವುರಿತ್ಯರ್ಥಃ। ವ್ರೀಳಾಮುಖಂ ಧ್ಯಾನಪರಮಿತ್ಯತ್ರ ವ್ರೀಳಯೈವ ಮುಖಂ ಯಸ್ಯ ಸಃ ಸ ತಥೋಕ್ತಃ। ಅವನತಮುಖಮಿತ್ಯರ್ಥಃ ॥ – (ವಾ.)

೬೭. ಯದ್ವಾ ಆತ್ಮನಿ ಸಮಾಹಿತೋ ಅಗ್ನಿರ್ಯೇನ ತಂ ದೇಹಂ ತ್ಯಕ್ತ್ವಾ ವಿದ್ಯಮಾನಂ ಅಗ್ನಿಭಃ ಕೇವಲದಾವಾಗ್ನಿಭಿಃ ಪರಿದಗ್ಧದೇಹಂ ಶುಶ್ರುವುರಿತ್ಯರ್ಥಃ । ಅಥವಾ ಆಗತಂ ದಾವಾಗ್ನಿಂ ದೃಷ್ಟ್ವಾ ಆತ್ಮಸಮಾಹಿತಾಗ್ನಿಂ ತತ್ರ ತ್ಯಕ್ತ್ವಾ ಆವಾಹ್ಯ ವನಮಾಲಿಹದ್ಭಿಸ್ತೈರಾವಾಹಿತೈರ್ದಾವಾಗ್ನಿಭಃ ಪರಿದಗ್ಧದೇಹಂ ಶುಶ್ರುವುರಿತ್ಯರ್ಥಃ । ವ್ರೀಡಾಮುಖಂ ಧ್ಯಾನಪರಂ ನಿಶಮ್ಯೇತಿ । ಮೃತಿಕಾಲೇ ಧ್ಯಾನಪರಂ ಪೂರ್ವಕೃತಸ್ಮರಣೇನ ಲಜ್ಜಿತಂ ಶುಶ್ರುವುರಿತ್ಯರ್ಥಃ । ವೀಟಾಮುಖಮಿತಿ ಕ್ವಚಿತ್ ಪಾಠಃ । ಶ್ವಾಸನಿರೋಧಾರ್ಥಂ ಶಿಲಾವಕ್ತ್ರಮಿತ್ಯರ್ಥಃ। – (ತಾ.)

೬೭. ಧೃತರಾಷ್ಟ್ರೇ ಗತೇ ಸೂತಃ ಸಂಜಯಃ ಪಾಂಡುಸೂನವೇ । ಗತಿಂ ಶಶಂಸ ಕುಂತ್ಯಾಶ್ಚ ಗಾಂಧಾರೀಧೃತರಾಷ್ಟ್ರಯೋರಿತಿ ॥ – (ಜ.)

೬೭. 'ಭೀಮಸಂತರ್ಜಿತೋ ರಾಜ್ಞಸ್ತ್ವನುಜ್ಞಾಂ ಪ್ರಾಪ್ಯ ಯತ್ನತಃ।
ಧೃತರಾಷ್ಟ್ರೋ ವನೇವಾಸಮಕರೋದ್ವತ್ಸರತ್ರಯಮ್।
ವಿದುರಸ್ತದ್ದಿದೃಕ್ಷಾರ್ಥಮಾಗತೇಷು ವನಂ ಪುರಾತ್ ।
ಪಾಂಡವೇಷು ತು ರಾಜಾನಂ ಪ್ರವಿಶ್ಯೈಕತ್ವಮಾಗತಃ।
ತತೋ ದಾವಾಗ್ನಿನಾ ದಗ್ಧಂ ಧೃತರಾಷ್ಟ್ರಂ ಚ ಸೌಬಲೀಮ್।
ಶ್ರುತ್ವಾ ಕುಂತೀಂ ಚ ಚಿಂತಾಂ ತೇ ಪ್ರಾಪುಃ ಪಾಂಡುಸುತಾಸ್ತದಾ ॥
ತಾಂಸ್ತದಾ ನಾರದೋ ವಿದ್ವಾನ್ ಶಮಯಾಮಾಸ ಧರ್ಮವಿತ್ ।
ಉಕ್ತ್ವೋತ್ತಮಾಂ ಗತಿಂ ತೇಷಾಂ ನಿಷ್ಠಾಂ ತಾತ್ಕಾಲಿಕೀಂ ತಥಾ ॥'

– ಸ್ಕಾಂದವಚನ ಭಾ. ತಾ. (೧/೧೨/೩೧)

೬೭. ಧೃತರಾಷ್ಟ್ರೇ ಮೃತೇ ಸೂತಃ ಸಂಜಯಃ ಪಾಂಡುಸೂನವೇ ।
ಗತಿಂ ಶಶಂಸ ಕುಂತ್ಯಾಶ್ಚ ಗಾಂಧಾರೀಧೃತರಾಷ್ಟ್ರಯೋಃ ॥

– ಬ್ರಹ್ಮಾಂಡಪುರಾಣವಚನ ॥ (ಭಾ. ತಾ.೧/೧೨/೩೧)

೬೭. ಏವಂ ವರ್ಷಾಣ್ಯತೀತಾನಿ ಧೃತರಾಷ್ಟ್ರಸ್ಯ ಧೀಮತಃ ।
ವನವಾಸೇ ತಥಾ ತ್ರೀಣಿ ನಗರೇ ದಶ ಪಂಚ ಚ ॥ - ಭಾರತ (ಆಶ್ರಮ.೩೯/೨೫)

೨) ಧೃತರಾಷ್ಟ್ರ, ಗಾಂಧಾರಿ, ಕುಂತಿಯರು ಅದರಲ್ಲಿ ದಗ್ಧರಾದರು. ಅದು ಸಂಸ್ಕೃತಾಗ್ನಿಯೇ ಆಗಿದ್ದರಿಂದ ಅವರ ಮರಣ ದುರ್ಮರಣವಾಗಲಿಲ್ಲ. ಸಂಜಯ ಧೃತರಾಷ್ಟ್ರನ ಆಜ್ಞೆಯಂತೆ ಅಲ್ಲಿಂದ ಓಡಿ ಪಾರಾದ. ಅವನಿಂದ ವಿಷಯ ತಿಳಿದ ನಾರದರು, ಅದನ್ನು ಪಾಂಡವರಿಗೆ ತಿಳಿಸಿದರು.

೩) ಧೃತರಾಷ್ಟ್ರ ಕೊನೆಯ ಆರು ತಿಂಗಳು ವಾಯುಭಕ್ಷನಾಗಿಯೂ, ಗಾಂಧಾರಿ ಜಲಾಹಾರಳಾಗಿಯೂ, ಕುಂತಿ ಮಾಸೋಪವಾಸವ್ರತಯುಕ್ತಳಾಗಿಯೂ, ಸಂಜಯನು ಷಷ್ಠಭುಕ್ತವ್ರತಪರಾಯಣನಾಗಿಯೂ ಇದ್ದ ವಿವರ ಮಹಾಭಾರತದಲ್ಲಿದೆ :

ತ್ವಗಸ್ಥಿಮಾತ್ರಲೇಶಃ ಸ ಷಣ್ಮಾಸಾನಭವನ್ನೃಪಃ ।
ಗಾಂಧಾರೀ ತು ಜಲಾಹಾರಾ ಕುಂತೀ ಮಾಸೋಪವಾಸಿನೀ ॥
ಸಂಜಯಃ ಷಷ್ಠಭುಕ್ತೇನ ವರ್ತಯಾಮಾಸ ಭಾರತ ॥–(ಆಶ್ರಮವಾಸಿಕ.೩೭/೧೩, ೧೪)

೪) ಧೃತರಾಷ್ಟ್ರನಿಗೆ ದಾವಾಗ್ನಿಯಿಂದ ತಪ್ಪಿಸಿಕೊಳ್ಳುವ ಶಕ್ತಿ ಇರಲಿಲ್ಲ; ಆಸಕ್ತಿಯೂ ಇರಲಿಲ್ಲ ಎಂಬ ವಿಶೇಷಾಂಶ ಮಹಾಭಾರತದಲ್ಲಿದೆ (ಆಶ್ರಮವಾಸಿಕ. ೩೭/೨೭, ೨೮) :

ನೈಷ ಮೃತ್ಯುರನಿಷ್ಟೋ ನೋ ನಿಃಸೃತಾನಾಂ ಗೃಹಾತ್ ಸ್ವಯಮ್ ।
ಜಲಮಗ್ನಿಸ್ತಥಾ ವಾಯುರಥವಾऽಪಿ ವಿಕರ್ಷಣಮ್ ।
ತಾಪಸಾನಾಂ ಪ್ರಶಸ್ಯಂತೇ ಗಚ್ಛ ಸಂಜಯ ಮಾ ಚಿರಮ್ ॥

೫) ಧೃತರಾಷ್ಟ್ರ ಗಾಂಧಾರಿ ಕುಂತಿಯರು ಕುರುಕ್ಷೇತ್ರಯುದ್ಧದ ಅನಂತರ ಒಟ್ಟು ಹದಿನೆಂಟು ವರ್ಷಗಳ ಕಾಲ ಬದುಕಿದ್ದರು.

ಪಾಂಡವರಿಂದ ಪಿತೃಕಾರ್ಯ

ವ್ರೀಳಾಮುಖಂ ಧ್ಯಾನಪರಂ ನಿಶಮ್ಯ
ಸ್ವರ್ಯಾತಮಾತ್ಮೀಯಪಿತೃವ್ಯಮಾಶು ।
ಸಮೇತ್ಯ ಭರ್ತ್ರಾ ಪ್ರತಿಪೂಜ್ಯಮಾನಾಂ
ಕುಂತೀಂ ಚ ತಪ್ತಾ ವಿದಧುಃ ಕ್ರಿಯಾಶ್ಚ ॥ ೬೮ ॥

---

೬೮. ವ್ರೀಳಾಮುಖಾ ಧ್ಯಾನಪರಾ ನಿಶಮ್ಯ (ಪಾಠಾಂತರ)

೬೮. ಆತಸ್ಥೇ ಸ ತಪಸ್ತೀವ್ರಂ ಪಿತಾ ತವ ತಪೋಧನಃ ।
ವೀಟಾಂ ಮುಖೇ ಸಮಾಧಾಯ ವಾಯುಭಕ್ಷೋऽಭವನ್ಮುನಿಃ ॥ – ಭಾರತ (ಆಶ್ರಮವಾಸಿಕ. ೩೭/೧೨)

೬೮. ವ್ರೀಡಾಮುಖಂ ಅಶ್ವಕಬಲಪೂರ್ಣಮುಖಮ್ । –(ವ.)

ಅ: ತಮ್ಮ ದೊಡ್ಡಪ್ಪನಾದ ಧೃತರಾಷ್ಟ್ರ ಲಜ್ಜೆಯಿಂದ ಕೂಡಿದ ಮುಖವುಳ್ಳವನಾಗಿ, ಧ್ಯಾನದಲ್ಲಿ ತೊಡಗಿ, ಸ್ವರ್ಗಕ್ಕೆ ತೆರಳಿದ್ದನ್ನು, ಕುಂತಿ ತನ್ನ ಪತಿಯಾದ ಪಾಂಡುರಾಜನೊಂದಿಗೆ ಜೊತೆಗೂಡಿ ಸುಖಿಯಾಗಿರುವುದನ್ನೂ ಕೇಳಿ, ದುಃಖಿತಪ್ತರಾದ ಪಾಂಡವರು ಅವರ ಉತ್ತರಕ್ರಿಯೆಗಳನ್ನು ಪೂರೈಸಿದರು.

ವಿ: ಧೃತರಾಷ್ಟ್ರಾದಿಗಳು ಮರಣಿಸಿದ್ದನ್ನು ಮಾತ್ರ ಹೇಳದೆ, ಅವರೆಲ್ಲ ಸ್ವಯೋಗ್ಯವಾದ ಉತ್ತಮಗತಿಯನ್ನೇ ಹೊಂದಿದ್ದನ್ನು ಸಹ ನಾರದರು ತಿಳಿಸಿದರು ಎಂದರ್ಥ.

ತೇ ವಿಷ್ಣುಭಕ್ತ್ಯಾ ಪರಿಪೂತಕರ್ಮಭಿ-
ರ್ಜ್ಞಾನೇನ ಚಾಂತೇ ತಮನುಸ್ಮರಂತಃ ।
ಪಾರ್ಥೈಃ ಸುಪುತ್ರೈಃ ಸುಕೃತೋರ್ಧ್ವಕರ್ಮಭಿ-
ರ್ವ್ಯದ್ಧಿಂ ಸುಖಸ್ಯಾಪುನರನಪ್ಯಯಾಂ ಶುಭಾಮ್ ॥ ೬೯ ॥

ಅ: ಅವರೆಲ್ಲ ವಿಷ್ಣುಭಕ್ತಿಯಿಂದ ಕೂಡಿ ಅತ್ಯಂತಪವಿತ್ರವಾದ ಪುಣ್ಯಕರ್ಮಗಳನ್ನು ಮಾಡಿದವರು; ಅಂತ್ಯಕಾಲದಲ್ಲೂ ಅವನನ್ನೇ ಸ್ಮರಿಸಿದವರು. ಸತ್ಪುತ್ರರಾದ ಪಾಂಡವರಿಂದ ಚೆನ್ನಾಗಿ ಔರ್ಧ್ವದೈಹಿಕಕ್ರಿಯೆಗಳನ್ನು ಹೊಂದಿದವರು. ಅದರಿಂದ ಅವರು ಶಾಶ್ವತವಾದ ಸುಖಾತಿಶಯವನ್ನು ವಿಶೇಷವಾಗಿ ಹೊಂದಿದರು.

---

೬೯. ಅನಪ್ಯಯಾಂ ಶುಭಾಮಿತ್ಯತ್ರ ಅಪ್ಯಯೋ ನಾಶಃ ತದ್ರಹಿತಾಮಿತ್ಯರ್ಥಃ। ವ್ಯಾಸಸಕಾಶಮೇತ್ಯೇತ್ಯತ್ರ ಧೃತರಾಷ್ಟ್ರಮರಣಾನಂತರಂ ತಾಂ ಕಥಾಂ ಹಸ್ತಿನಪುರಂ ಪ್ರವಿಶ್ಯ ಪಾಂಡವಾನ್ ಪ್ರತಿ ಕಥಯಿತ್ವಾ ಪುನರ್ವ್ಯಾಸ-ಸಕಾಶಮೇತ್ಯ ನಿಜಾಂ ಗತಿಂ ಪ್ರವೇದಿವಾನಿತ್ಯರ್ಥಃ – (ವಾ.)

೬೯. ಸ್ವತಃ ಸದ್ಗತಿಯೋಗ್ಯಸ್ಯ ಪುತ್ರಾದೇರ್ಹೇತುತಾ ಭವೇತ್ । ಯೋಗ್ಯತಾऽನಾದಿಭಕ್ತಿಃ ಸ್ಯಾದಯೋಗ್ಯಸ್ಯ ಕುತೋ ಗತಿರಿತಿ ವಚನಾತ್ ಶುಭತ್ವಾತ್ ಸುಖಸ್ಯಾಭವ್ಯದ್ಧಿಂ ಪ್ರಾಪುರಿತಿ ಭಾವಃ ॥ – (ಜ.)

೬೯. ತತೋऽವಗಾಹ್ಯ ಸಲಿಲೇ ಸರ್ವೇ ತೇ ನರಪುಂಗವಾಃ ।
ಯುಯುತ್ಸುಮಗ್ರತಃ ಕೃತ್ವಾ ದದುಸ್ತೋಯಂ ಮಹಾತ್ಮನೇ ॥
ಗಾಂಧಾರ್ಯಾಶ್ಚ ಪೃಥಾಯಾಶ್ಚ ವಿಧಿವನ್ನಾಮಗೋತ್ರತಃ ।
ಶೌಚಂ ನಿರ್ವರ್ತಯಂತಸ್ತೇ ತತ್ರೋಷುರ್ನಗರಾದ್ ಬಹಿಃ ॥
ಪ್ರೇಷಯಾಮಾಸ ಸ ನರಾನ್ ವಿಧಿಜ್ಞಾನಾಪ್ತಕಾರಿಣಃ ।
ಗಂಗಾದ್ವಾರಂ ನರಶ್ರೇಷ್ಠೋ ಯತ್ರ ದಗ್ಧೋऽಭವನ್ನೃಪಃ ॥
ತತ್ರೈವ ತೇಷಾಂ ಕೃತ್ಯಾನಿ ಗಂಗಾದ್ವಾರೇऽನ್ವಶಾತ್ ತದಾ ।
ಕರ್ತವ್ಯಾನೀತಿ ಪುರುಷಾನ್ ದತ್ತದೇಯಾನ್ ಮಹೀಪತಿಃ ॥
ದ್ವಾದಶೇऽಹನಿ ತೇಭ್ಯಃ ಸ ಕೃತಶೌಚೋ ನರಾಧಿಪಃ ।
ದದೌ ಶ್ರಾದ್ಧಾನಿ ವಿಧಿವದ್ ದಕ್ಷಿಣಾವಂತಿ ಪಾಂಡವಃ ॥ – ಭಾರತ (ಆಶ್ರಮ. ೩೯/೧೨-೧೬)

ಎಃ ೧) ವಿಷ್ಣುಭಕ್ತಿ ಪುಣ್ಯಕರ್ಮಗಳ ಆಚರಣೆ, ಅಂತ್ಯಕಾಲಸ್ಮರಣೆಗಳಂತೆ ಅವರ ಪುತ್ರರು ಮಾಡುವ ಔರ್ಧ್ವದೈಹಿಕಕ್ರಿಯೆಗಳು ಸಹ ಅವರ ಸದ್ಗತಿಗೆ ಸಾಧನ ಎಂಬ ವಿಶೇಷಾಂಶ ಇಲ್ಲಿದೆ.

೨) ಪಾಂಡವರು ಅವರ ಸದ್ಗತಿಗೋಸ್ಕರ ಬಗೆಬಗೆಯ ವಿಶೇಷದಾನಗಳನ್ನು ಮಾಡಿದ ವಿವರ ಮಹಾಭಾರತದಲ್ಲಿದೆ (ಆಶ್ರಮವಾಸಿಕ. ೩೯/೧೭–೨೦) :

ಧೃತರಾಷ್ಟ್ರಂ ಸಮುದ್ದಿಶ್ಯ ದದೌ ಸ ಪೃಥಿವೀಪತಿಃ ।
ಸುವರ್ಣಂ ರಜತಂ ಗಾಶ್ಚ ಶಯ್ಯಾಶ್ಚ ಸುಮಹಾಧನಾಃ ॥
ಗಾಂಧಾರ್ಯಾಶ್ಚೈವ ತೇಜಸ್ವೀ ಪೃಥಾಯಾಶ್ಚ ಪೃಥಕ್ ಪೃಥಕ್ ।
ಸಂಕೀರ್ತ್ಯ ನಾಮಾನೀ ರಾಜಾ ದದೌ ದಾನಮನುತ್ತಮಮ್ ॥
ಯೋ ಯದಿಚ್ಛತಿ ಯಾವಚ್ಚ ತಾವತ್ ಸ ಲಭತೇ ನರಃ ।
ಶಯನಂ ಭೋಜನಂ ಯಾನಂ ಮಣಿರತ್ನಮಥೋ ಧನಮ್ ॥
ಯಾನಮಾಚ್ಛಾದನಂ ಭೋಗಾನ್ ದಾಸೀಶ್ಚ ಸಮಲಂಕೃತಾಃ ।
ದದೌ ರಾಜಾ ಸಮುದ್ದಿಶ್ಯ ತಯೋರ್ಮಾತ್ರೋರ್ಮಹೀಪತಿಃ ॥

ವ್ಯಾಸರಿಂದ ಸಂಜಯನಿಗೆ ಸದ್ಗತಿ

ಗಾವದ್ಗಣೇರ್ವ್ಯಾಸಸಕಾಶಮೇತ್ಯ
ಶುಶ್ರೂಷಯಾ ತಸ್ಯ ಪುನರ್ನಿಜಾಂ ಗತಿಮ್ ।
ಪ್ರಪೇದಿವಾನ್ ಪಾಂಡುಸುತಾಶ್ಚ ಕೃಷ್ಣಂ
ಪ್ರತೀಕ್ಷಮಾಣಾಃ ಪೃಥಿವೀಮಶಾಸನ್ ॥ ೭೦ ॥

ಅಃ ಸಂಜಯ ಶ್ರೀವೇದವ್ಯಾಸರ ಬಳಿಗೆ ತೆರಳಿ, ಅವರನ್ನು ಸೇವಿಸುವ ಮೂಲಕ ತನ್ನ ನಿಜಗತಿಯನ್ನು ಹೊಂದಿದ. ಪಾಂಡವರು ಕೃಷ್ಣನ ಪರಂಧಾಮಗಮನವನ್ನು ಪ್ರತೀಕ್ಷಿಸುತ್ತಾ ಭೂಮಿಯನ್ನು ಪಾಲಿಸಿದರು.

---

೭೦. '.... ಪಾಂಡುಸುತಾಶ್ಚ ಕೃಷ್ಣಂ ಪ್ರತೀಕ್ಷಮಾಣಾಃ ಪೃಥಿವೀಮಶಾಸನ್ । ಅಷ್ಟಾದಶಾಬ್ದಾಃ ಪೃಥಿವೀಂ ಸಮಸ್ತಾಂ ಪ್ರಶಾಸತಾಮೇವಮಗುರ್ಮಹಾತ್ಮನಾಮ್' ಇತ್ಯತ್ರ ದುರ್ಯೋಧನಪತನಾನಂತರಂ ಧೃತರಾಷ್ಟ್ರಮೃತಿಪರ್ಯಂತಂ ಸೌರಮಾನೇನಾಷ್ಟಾದಶಾಬ್ದಾಃ । ತದನಂತರಮಪಿ ಅಷ್ಟಾದಶಾಬ್ದಾ ಅಗುರಿತ್ಯರ್ಥಃ । 'ಷಟ್‌ತ್ರಿಂಶಾಬ್ದಂ ಪುನಃ ಕೃಷ್ಣಃ ಕೃತಮೇವಾನ್ವವರ್ತಯತ್' ಇತಿ ವಕ್ಷ್ಯಮಾಣತ್ವಾತ್ (೩೨/೧೦) । ಉಕ್ತಂ ಚಾದಿಪರ್ವಣಿ ..... ॥ ಸೌರಮಾಸಾಷ್ಟಾದಶಾಬ್ದಾನಾಂ ಷಡುತ್ತರಸಪ್ತಮಾಸಾ ಅಧಿಕಾ ಭವಂತಿ । ತಥಾ ಚ ದುರ್ಯೋಧನ- ಮೃತ್ಯನಂತರಂ ಷಣ್ಮಾಸಪರ್ಯಂತಂ ಅರ್ಜುನಸ್ಯಾನುಗೀತೋಪದೇಶಃ ತತಃ ಪರೀಕ್ಷಿದುತ್ಪತ್ತಿಃ ತತೋ ಯಜ್ಞಾರಂಭಃ ಚಾಂದ್ರಮಾನೇನ ಪಂಚದಶವರ್ಷಪರ್ಯಂತಂ ಅಶ್ವಮೇಧಯಜ್ಞಕರಣಂ ಯಜ್ಞಾನಂತರಂ ವಿಂಶದ್ದಿವಸೇ ಗತೇ ಧೃತರಾಷ್ಟ್ರಸ್ಯ ವೈರಾಗ್ಯಜನನಂ ತತಃ ಪಂಚದಶಾಹಾನಾಂತರಂ ವನಪ್ರವೇಶಃ ತತ್ರ ವರ್ಷತ್ರಯಂ ತಪಶ್ಚರಣಮ್ । 'ಅನಶ್ನಂತಂ ಚತುರ್ಥೇऽಹ್ನಿ ಧೃತರಾಷ್ಟ್ರಂ ಯುಧಿಷ್ಠಿರಃ । ದಶರಾತ್ರಮಿ'ತ್ಯಾದ್ಯುಕ್ತೇಃ ಧೃತರಾಷ್ಟ್ರಮೃತ್ಯನಂತರಂ ಅಷ್ಟಾದಶಾಬ್ದ-ವಿವರಣಂ ಕ್ರಿಯತೇ ॥ –(ರಾ.)

ವಿ: ತಾನು ಪರಂಧಾಮಕ್ಕೆ ತೆರಳುವವರೆಗೂ ಪಾಂಡವರು ಭೂಮಿಯನ್ನು ಪಾಲಿಸಬೇಕು ಎಂದು ಶ್ರೀಕೃಷ್ಣ ಆದೇಶ ನೀಡಿದ್ದ ವಿವರ ಮುಂದೆ ಬಂದಿದೆ (೩೨/೫೪). ಅದನ್ನು ನಿರೀಕ್ಷಿಸುತ್ತಾ ಪಾಂಡವರು ರಾಜ್ಯವಾಳತೊಡಗಿದರು ಎಂದರ್ಥ.

ಪಾಂಡವರ ರಾಜ್ಯಭಾರ

ಅಷ್ಟಾದಶಾಬ್ದಾಃ ಪೃಥಿವೀಂ ಸಮಸ್ತಾಂ
ಪ್ರಶಾಸತಾಮೇವಮಗುರ್ಮಹಾತ್ಮನಾಮ್ ।
ಅರಿಕ್ತಧರ್ಮಾರ್ಥಸುಖೋತ್ತಮಾನಾ-
ಮನುಜ್ಝಿತಾನಂತಪದಸ್ಮೃತೀನಾಮ್ ॥ ೭೧ ॥

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮಹಾಭಾರತತಾತ್ಪರ್ಯನಿರ್ಣಯೇ ಶ್ರೀಕೃಷ್ಣಾವತಾರಚರಿತೇ ಶ್ರೀಕೃಷ್ಣಸನ್ನಿಧೌ ಪಾಂಡವರಾಜ್ಯಪಾಲನಂ ನಾಮ ಏಕತ್ರಿಂಶೋಽಧ್ಯಾಯಃ ॥ ೩೧ ॥

ಅ: ಸಮಸ್ತಭೂಮಿಯನ್ನು ಹೀಗೆ ಪಾಲಿಸುತ್ತಾ ಮಹಾತ್ಮರಾದ ಪಾಂಡವರು ಹದಿನೆಂಟು ವರ್ಷಗಳನ್ನು ಕಳೆದರು. ಅವರು ಧರ್ಮ, ಅರ್ಥಗಳನ್ನು ತೊರೆಯದೆ ಪರಮಸುಖಿಗಳಾಗಿದ್ದವರು. ದೇಶತಃ ಕಾಲತಃ ಗುಣತಃ ಕೊನೆಯಿರದ ಶ್ರೀಹರಿಯ ಪಾದಸ್ಮರಣೆಯನ್ನು ಎಂದೂ ತೊರೆಯದವರಾಗಿದ್ದರು.

ವಿ: ಪಾಂಡವರ ರಾಜ್ಯಭಾರ ಹರಿಸ್ಮರಣೆರೂಪವಾಗಿ ಅವನ ಸೇವಾರೂಪವಾಗಿತ್ತೇ ಹೊರತು, ವಿಷಯಭೋಗರೂಪವಾಗಿ ಸರ್ವಥಾ ಇರಲಿಲ್ಲ ಎಂದರ್ಥ.

॥ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯಪ್ರಣೀತ ಮಹಾಭಾರತತಾತ್ಪರ್ಯನಿರ್ಣಯದಲ್ಲಿ 'ಪಾಂಡವರಾಜ್ಯಪಾಲನ'ವೆಂಬ ಮೂವತ್ತೊಂದನೆಯ ಅಧ್ಯಾಯ ಮುಗಿಯಿತು ॥ ೩೧ ॥

॥ ಶ್ರೀಕೃಷ್ಣಾರ್ಪಣಮಸ್ತು ॥

★★★★★

---

೭೧. ಅರಿಕ್ತಧರ್ಮಾರ್ಥೇತ್ಯತ್ರ ಅರಿಕ್ತಾನಿ = ಪೂರ್ಣಾನೀತ್ಯರ್ಥಃ ॥ –(ವಾ.)

ಅಧ್ಯಾಯ - ೩೨

(ಶ್ರೀಮನ್ನಾರಾಯಣಾವತಾರಚರಿತಮ್)

(ಕುರುಕ್ಷೇತ್ರದಲ್ಲಿ ಶ್ರೀಕೃಷ್ಣ ಮಾಡಿದ ದ್ವಾದಶಾಬ್ದಸತ್ರ, ಯಾದವರ ನಿರ್ಯಾಣ, ಶ್ರೀಕೃಷ್ಣಪರಂಧಾಮಗಮನ, ಪಾಂಡವರ ಮಹಾಪ್ರಸ್ಥಾನ, ಯುಧಿಷ್ಠಿರನ ಸ್ವರ್ಗಾರೋಹಣ, ದೇವದಾನವರ ಮೂಲರೂಪಪ್ರಾಪ್ತಿ, ಬುದ್ಧಾವತಾರ, ಮಧ್ವಾವತಾರ, ದುರ್ಗಾವತಾರ, ಕಲ್ಕ್ಯವತಾರ, ಗ್ರಂಥಪರಿಸಮಾಪ್ತಿ)

ಕುರುಕ್ಷೇತ್ರದಲ್ಲಿ ಕೃಷ್ಣ ಮಾಡಿದ ಸತ್ರಯಾಗ

ತತಃ ಕುರುಕ್ಷೇತ್ರಮವಾಪ್ಯ ಕೃಷ್ಣೋ
ದೀಕ್ಷಾಂ ಪ್ರಪೇದೇ ದ್ವಿಷಡಬ್ದಸತ್ರೇ ।
ಸ ಏವ ಚ ವ್ಯಾಸಭೃಗೂದ್ವಹಾತ್ಮಾ
ಚಕ್ರೇಽತ್ರ ಸಾದಸ್ಯಮಜೋಽಪ್ರಮೇಯಃ ॥ ೧ ॥

ಅ: ಬಳಿಕ ಶ್ರೀಕೃಷ್ಣ ಕುರುಕ್ಷೇತ್ರಕ್ಕೆ ತೆರಳಿ ಅಲ್ಲಿ ಹನ್ನೆರಡು ವರ್ಷಗಳ ಯಜ್ಞದಲ್ಲಿ ದೀಕ್ಷೆ ಕೈಗೊಂಡ. ಅಪ್ರಮೇಯನಾದ ಅವನೇ ತನ್ನ ವೇದವ್ಯಾಸ ಪರಶುರಾಮ ರೂಪಗಳಿಂದ ಸದಸ್ಯ ಕಾರ್ಯವನ್ನೂ ನಿರ್ವಹಿಸಿದ.

ವಿ: ೧) ಹದಿನೆಂಟು ವರ್ಷಗಳ ಪಾಂಡವರ ಆಳ್ವಿಕೆಯ ಅನಂತರ ನಡೆದ ಪ್ರಸಂಗವಿದು. ಪಾಂಡವರು ಅಪೂರ್ವವಾದ ಆ ಅಶ್ವಮೇಧಯಾಗ ಪೂರೈಸಿದ ಅನಂತರ ಮೂರು ವರ್ಷಗಳ ಬಳಿಕ ಕೃಷ್ಣನಡೆಸಿದ ದ್ವಾದಶ ವಾರ್ಷಿಕ ಸತ್ರ ಇದಾಗಿತ್ತು.

೨) ಯಜ್ಞಶಾಲೆಯ ಸರ್ವಕ್ರಿಯಾಕಲಾಪಗಳ ಪರಿವೀಕ್ಷಕನಾದ ಋತ್ವಿಕ್ಕನ್ನು ಸದಸ್ಯ ಎನ್ನುವರು.

---

೧. ಸಾದಸ್ಯಮಜೋಽಪ್ರಮೇಯ ಇತ್ಯತ್ರ ಸದಸೋ ಯೋಗ್ಯಃ ಸದಸ್ಯಃ ಯಜ್ಞಸದಸಿ ಕ್ರಿಯಮಾಣ-ಸಕಲವಿಹಿತಕರ್ಮಕೌಶಲನಿಯಾಮಕ ಇತ್ಯರ್ಥಃ। ಸದಸ್ಯಸ್ಯ ಭಾವಃ ಸಾದಸ್ಯಮ್ ॥ – (ವಾ.)

೧. 'ದ್ವಿಷಡಬ್ದಸತ್ರ' ಇತ್ಯತ್ರ ಪ್ರಥಮಸ್ಕಂಧದ್ವಾದಶಾಧ್ಯಾಯತಾತ್ಪರ್ಯವಿರೋಧಪರಿಹಾರಃ **ಏಕಾದಶಸ್ಕಂಧ-ತಾತ್ಪರ್ಯಟೀಕಾಯಾಂ ಮಯಾ ಕೃತೋಽನುಸಂಧೇಯಃ** ॥ – (ಶ್ರೀ.)

ದೇವತೆಗಳು ಮುನಿಗಳು ಮಾಡಿದ ಶ್ರೀಕೃಷ್ಣಸೇವೆ

ತತ್ರರ್ತ್ವಿಜೋ ದಕ್ಷಭೃಗುಪ್ರಧಾನಾಃ
ಪಾರ್ಥಾ ಯದೂನಾಂ ಪ್ರವರೈಃ ಸಮೇತಾಃ ।
ಬ್ರಹ್ಮೇಶಶಕ್ರಪ್ರಮುಖಾಃ ಸುರಾಶ್ಚ
ಚಕ್ರುಃ ಸುಸಾಚಿವ್ಯಮನಂತದಾಸಾಃ ॥ ೨ ॥

ಅ: ಆ ಯಜ್ಞದಲ್ಲಿ ಶ್ರೀಹರಿಭಕ್ತರಾದ ದಕ್ಷ, ಭೃಗು ಮೊದಲಾದ ಋತ್ವಿಕ್‌ಗಳು, ಪಾಂಡವರು, ಯಾದವಶ್ರೇಷ್ಠರು, ಬ್ರಹ್ಮ, ರುದ್ರ, ಇಂದ್ರ ಮೊದಲಾದ ದೇವತೆಗಳು ಅನೇಕ ಬಗೆಯಲ್ಲಿ ಸೇವಕರಾಗಿ ಪಾಲ್ಗೊಂಡರು.

ವಿ: ೧) ಅದು ಸರ್ವೋತ್ತಮನ ಯಜ್ಞವಾದ್ದರಿಂದ ಹರಿಭಕ್ತರಾದ ದೇವತೆಗಳು ಮೊದಲಾಗಿ ಎಲ್ಲರೂ ಪಾಲ್ಗೊಂಡು ಸೇವೆ ಸಲ್ಲಿಸಿದರು ಎಂದರ್ಥ.

೨) ಶ್ರೀಕೃಷ್ಣ ಕೈಲಾಸದಲ್ಲಿ ಮಾಡಿದ್ದ ಯಜ್ಞದಲ್ಲಿ ಬ್ರಹ್ಮಾದಿದೇವತೆಗಳು ಹೀಗೆ ಶ್ರೀಹರಿಯ ಪರಿಚರ್ಯ ಮಾಡಿದ್ದ ವಿವರ ಈಗಾಗಲೇ ಬಂದಿದೆ (೨೨/೧೭೩, ೧೭೪).

ಜಗತ್ತಿಗೇ ಮುದ ನೀಡಿದ ಯಾಗ

ಸರ್ವೇ ಚ ಜೀವಾ ವಸುಧಾತಲಸ್ಥಾ
ಯೇಽನ್ಯೇಽಂತರಿಕ್ಷದ್ಯುಮುಖೋತ್ತರೇಷು ।
ವಸಂತಿ ನಾರಾಯಣಪಾದಸಂಶ್ರಯಾ-
ಸ್ತೇ ಚಾತ್ರ ಸರ್ವೇ ಮುಮುದುಃ ಸನಾಗಾಃ ॥ ೩ ॥

ಅ: ಭೂಮಿಯ ಮೇಲಿನ ಸಕಲಜೀವಿಗಳು ಅದರಂತೆಯೇ ಅಂತರಿಕ್ಷ, ದ್ಯು ಮೊದಲಾದ ಮೇಲಿನ ಲೋಕಗಳಲ್ಲಿ ನೆಲೆಸಿರುವವರು, ಪಾತಾಳ ಲೋಕವಾಸಿಗಳಾದ ನಾಗರು ಮೊದಲಾಗಿ ಶ್ರೀಹರಿಯ ಸಮಸ್ತ ಪಾದಸೇವಕರು ಅದರಲ್ಲಿ ಪಾಲ್ಗೊಂಡು ಸಂತೋಷಿಸಿದರು.

ಜಿಜ್ಞಾಸುಗಳಿಗೆ ತತ್ತ್ವನಿರ್ಣಯ

ಸುನಿರ್ಣಯಸ್ತತ್ತ್ವವಿನಿರ್ಣಯಾರ್ಥಿನಾಂ
ತತ್ತ್ವಸ್ಯ ಚಾಭೂದಿಹ ವಾದಶೀಲಿನಾಮ್ ।
ಮಿಥೋ ವಿವಾದಾತ್ ಸುರಭೂಸುರಾಣಾಂ
ವಾಕ್ಯಾದ್ಧರೇರ್ವ್ಯಾಸಭೃಗೂದ್ವಹಾತ್ಮನಃ ॥ ೪ ॥

ಅ: ದೇವತೆಗಳೊಳಗೂ, ಮುನಿಗಳೊಳಗೂ ಪರಸ್ಪರ ನಡೆದ ತತ್ವಗೋಷ್ಠಿಗಳಿಂದಲೂ, ವ್ಯಾಸ-ಪರಶುರಾಮರೂಪದ ಶ್ರೀಹರಿಯ ಮಾತುಗಳಿಂದಲೂ, ವಾದಶೀಲರಾದ ತತ್ವ-ಜಿಜ್ಞಾಸುಗಳಿಗೆ ಆ ಯಜ್ಞದಲ್ಲಿ ಉತ್ತಮ ತತ್ವನಿರ್ಣಯ ಉಂಟಾಯಿತು.

ವಿ: ಯಜ್ಞದ ಅತ್ಯಂತ ಪ್ರಮುಖ ಅಂಗವಾದ ಜ್ಞಾನಸತ್ರದಲ್ಲಿ ನಡೆದ ತತ್ವಗೋಷ್ಠಿಗಳಿಂದ ಜಿಜ್ಞಾಸುಗಳ ಸಂಶಯಗಳು ಪರಿಹಾರವಾಗಿ ತತ್ವನಿರ್ಣಯ ದೃಢಪಟ್ಟಿತು ಎಂದರ್ಥ.

ಸಕಲ ಪುರುಷಾರ್ಥಗಳ ಪ್ರಾಪ್ತಿ

ಧರ್ಮಾರ್ಥಕಾಮಾನಖಿಲಾನವಾಪು-
ಸ್ತದರ್ಥಿನೋ ಮುಕ್ತಿಮಪೀಹ ಕೃಷ್ಣಾತ್ ।
ಯಥೇಷ್ಟಪಾನಾಶನವಾಸಸೋ ಜನಾ
ವಿಚೇರುರತ್ರಾಮರಮಾನವಾದಯಃ ॥ ೫ ॥

ಅ: ಧರ್ಮ, ಅರ್ಥ, ಕಾಮಗಳನ್ನೆಲ್ಲ ಅದನ್ನು ಬಯಸುವ ಜನ ಕೃಷ್ಣನಿಂದ ಪಡೆದುಕೊಂಡರು. ಮೋಕ್ಷೇಚ್ಛುಗಳಿಗೆ ಮೋಕ್ಷವೂ ಇಲ್ಲಿ ಕೃಷ್ಣನಿಂದ ಲಭಿಸಿತು. ಸುರರು, ಮಾನವರು ಮೊದಲಾದ ಸಕಲ ಜನರು ಯಥೇಷ್ಟವಾದ ಅನ್ನ, ಪಾನ, ವಸ್ತ್ರಗಳನ್ನು ಹೊಂದಿದವರಾಗಿ ಆ ಯಜ್ಞದಲ್ಲಿ ಓಡಾಡಿದರು.

ವಿ: ಸಕಲಪುರುಷಾರ್ಥಪ್ರದನಾದ ಶ್ರೀಕೃಷ್ಣನೇ ಯಜ್ಞಕರ್ತೃವಾದ್ದರಿಂದ ಅದರಲ್ಲಿ ಪಾಲ್ಗೊಂಡ ಸಕಲರಿಗೂ ಸಹ ಧರ್ಮಾದಿಮೋಕ್ಷಾಂತಸಕಲಪುರುಷಾರ್ಥಗಳೂ ಸಿದ್ಧಿಸಿದವು ಎಂದರ್ಥ.

ವೈಕುಂಠದ ವಾತಾವರಣ

ಕ್ಷೇತ್ರಂ ತದಾಸೀದ್ಧರಿಲೋಕಸಮ್ಮಿತಂ
ಯದೀಯುರತ್ರಾಖಿಲಸಜ್ಜನಾ ಯುತಿಮ್ ।
ನಾನಾಪ್ತಕಾಮಾಶ್ಚ ತತೋ ಬಭೂವು-
ರ್ನಿರ್ಯತ್ನದೃಶ್ಯಶ್ಚ ಯತೋಽತ್ರ ಕೇಶವಃ ॥ ೬ ॥

---

೬. ಅಖಿಲಸಜ್ಜನಾ ಯುತಿಮಿತ್ಯತ್ರ ''ಯು ಮಿಶ್ರಣಾಮಿಶ್ರಣಯೋಃ'' ಇತಿ ಧಾತೋಃ ಯುತಿಂ = ಮಿಶ್ರಣಮ್। ಅನಾಪ್ತಕಾಮಾಶ್ಚ ಯತೋ ನ ಬಭೂವುಃ – (ವಾ.)

ಅ: ಕುರುಕ್ಷೇತ್ರ ಆಗ ವೈಕುಂಠಲೋಕಕ್ಕೆ ಸದೃಶವಾಗಿತ್ತು. ಏಕೆಂದರೆ ಅಲ್ಲಿ ಸಕಲಸಜ್ಜನರು ಒಂದೆಡೆ ನೆರೆದಿದ್ದರು. ಅವರಲ್ಲಿ ತಮ್ಮ ಬಯಕೆಗಳನ್ನು ಈಡೇರಿಸಿಕೊಳ್ಳದಿದ್ದವರೇ ಇರಲಿಲ್ಲ; ಮತ್ತು ಅಲ್ಲಿ ಬ್ರಹ್ಮರುದ್ರಾದಿಪ್ರವರ್ತಕನಾದ ಶ್ರೀಕೃಷ್ಣ ಪ್ರಯತ್ನವಿಲ್ಲದೇ ಪ್ರತ್ಯಕ್ಷ ಕಾಣಿಸಿಕೊಳ್ಳುತ್ತಿದ್ದ.

ವಿ: ವೈಕುಂಠಲೋಕದಲ್ಲಿ ಇರುವವರೆಲ್ಲ ಪರಿಪೂರ್ಣಕಾಮರು. ಅವರಿಗೆ ಸದಾ ಭಗವಂತ ಪ್ರತ್ಯಕ್ಷ. ಆ ಯಜ್ಞದಲ್ಲಿಸಹ ಕೃಷ್ಣಪ್ರತ್ಯಕ್ಷನಾಗಿ ಸಕಲರ ಬಯಕೆಗಳನ್ನೂ ಪೂರೈಸುತ್ತಿದ್ದುದರಿಂದ ಅದು ವೈಕುಂಠಲೋಕದಂತಿತ್ತು ಎಂದು ಭಾವ.

ಸತ್ರಯಾಗದ ಪರಿಸಮಾಪ್ತಿ

ದ್ವಾದಶಾಬ್ದಂ ಮಹಾಸತ್ರಮೇವಮೇತಾದೃಶಂ ಹರಿಃ ।
ಸಮಾಪ್ಯಾವಭೃಥಸ್ನಾತಃ ಪೂಜಯಿತ್ವಾಽಖಿಲಾನ್ ಜನಾನ್ ।
ಅನುಜಜ್ಞೇ ಕ್ರಮೇಣೈವ ವತ್ಸರೇಣ ಸಮಾಗತಾನ್ ॥ ೭ ॥

ಅ: ಹೀಗೆ ಶ್ರೀಕೃಷ್ಣನು ಹನ್ನೆರಡು ವರ್ಷಗಳ ಕಾಲ ಅಂತಹ ಮಹಾಯಜ್ಞವನ್ನು ಪೂರೈಸಿ, ಅವಭೃಥಸ್ನಾನ ಮಾಡಿ, ಅಲ್ಲಿಗೆ ಬಂದಿದ್ದ ಸಕಲಸಜ್ಜನರನ್ನೂ ಸತ್ಕರಿಸಿ, ಕ್ರಮವಾಗಿ ಒಂದು ವರ್ಷದಲ್ಲಿ ಬೀಳ್ಕೊಟ್ಟ.

ವಿ: ಆ ಯಜ್ಞದಲ್ಲಿ ಭಾಗವಹಿಸಿದ್ದವರನ್ನು ಬೀಳ್ಕೊಳ್ಳಲು ಒಂದು ವರ್ಷದಷ್ಟು ದೀರ್ಘ ಅವಧಿ ಬೇಕಾಯಿತು ಎಂಬ ಮಾತಿನಲ್ಲಿ ಅದರಲ್ಲಿ ಭಾಗವಹಿಸಿದ್ದ ಜನರ ಸಂಖ್ಯೆಯ ಚಿತ್ರವನ್ನು ಊಹಿಸಿಕೊಳ್ಳಬಹುದು.

---

೭. ಅದ್ಯ ಕಾಂಶ್ಚಿತ್ ಶ್ವಃ ಕಾಂಶ್ಚಿತ್ ಇತಿ ಕ್ರಮೇಣ ವತ್ಸರೇಣ ವತ್ಸರಪರಿಮಿತಕಾಲೇನ ಅನುಜಜ್ಞೇ ಆಜ್ಞಾಪಯಾಮಾಸ ಪ್ರೇಷಯಾಮಾಸೇತ್ಯರ್ಥಃ ॥ - (ಜ.)

೭. ಭಾರತೇ ಚೈಕವಿಂಶದ್ವರ್ಷಾತ್ ಪೂರ್ವಂ ವಿದುರಸ್ಯ ಯುಧಿಷ್ಠಿರಸ್ಯ ಭಾವ ಉಕ್ತ ಇತಿ । ಅತ ಏವಾಶ್ವಮೇಧಾನಂತರಮೇವ ಧೃತರಾಷ್ಟ್ರಸ್ಯ ವನಪ್ರವೇಶಃ । ತದವ್ಯವಧಾನೇನೈವ ಪಾಂಡವಗಮನಂ ವಿದುರಸ್ಯ ಯುಧಿಷ್ಠಿರಸ್ಯ ಭಾವಶ್ಚೇತ್ಯೇತನ್ನ ಕಲ್ಪನಾಮಾತ್ರಮಿತಿ ಜ್ಞೇಯಮ್ । ತತಶ್ಚ ಧೃತರಾಷ್ಟ್ರಮರಣಾನಂತರಮುರ್ವರಿತಾಷ್ಟಾದಶಮಧ್ಯೇ ದ್ವಾದಶಾಬ್ದಂ ಸತ್ರಯಾಗಃ ಕೃಷ್ಣೇನ ಕೃತಃ । ಏಕೇನ ವತ್ಸರೇಣ ಯಜ್ಞಾರ್ಥಂ ಸಮಾಗತಪ್ರೇಷಣಮಿಮೋಕ್ತಂ ತದನಂತರಂ ವತ್ಸರಪಂಚಕಮವಸ್ಥಾನಮಿತಿ ದುರ್ಯೋಧನವಧಾನಂತರಂ ಷಟ್ತ್ರಿಂಶದ್ವರ್ಷಾಣಾಂ ವಿನಿಯೋಗ ಇತ್ಯವಿವಾದಮ್ । - (ತಾ.)

ಯಾದವರಿಗೆ ವಿಪ್ರಶಾಪ - ಉದ್ಧವನಿಗೆ ತತ್ತ್ವೋಪದೇಶ

ಸ್ವಕುಲಂ ಸಂಜಿಹೀರ್ಷುಃ ಸ ವಿಪ್ರಶಾಪಮಜೀಜನತ್ ।
ಉಪದಿಶ್ಯ ಪರಂ ಜ್ಞಾನಮುದ್ಧವಾಯಾಮುಮಾಶ್ರಮಮ್ ॥ ೮ ॥

ಬದರ್ಯಾಖ್ಯಂ ಪ್ರಾಪಯಿತ್ವಾ ಸಪ್ತಮಾಬ್ದಂ ಶತೋತ್ತರಮ್ ।
ಪ್ರತೀಕ್ಷನ್ ಪಾಲಯಾಮಾಸ ಪಾರ್ಥೈಃ ಸಹ ಭುವಂ ಪ್ರಭುಃ ॥ ೯ ॥

ಅ: ಕೃಷ್ಣ ತನ್ನ ಯದುಕುಲವನ್ನು ಉಪಸಂಹರಿಸಬಯಸಿದವನಾಗಿ ಬ್ರಾಹ್ಮಣಶಾಪವನ್ನು ಉಂಟು ಮಾಡಿದ. ಉತ್ತಮಜ್ಞಾನವನ್ನು ಉದ್ಧವನಿಗೆ ಉಪದೇಶಿಸಿ, ಅವನನ್ನು ಬದರಿಕಾಶ್ರಮಕ್ಕೆ ಕಳುಹಿಸಿ, ನೂರ ಏಳನೆಯ ವರ್ಷವನ್ನು ನಿರೀಕ್ಷಿಸುತ್ತಾ ಪಾಂಡವರೊಂದಿಗೆ ಭೂಮಿಯನ್ನು ಪಾಲಿಸತೊಡಗಿದ.

---

೮. ನೈವಾನ್ಯತಃ ಪರಿಭವೋಽಸ್ಯ ಭವೇತ್ ಕಥಂಚಿನ್ಮತ್ಸಂಶ್ರಯಸ್ಯ ವಿಭವೋನ್ನಹನಸ್ಯ ನಿತ್ಯಮ್ ।
ಅಂತಃ ಕಲಿಂ ಯದುಕುಲಸ್ಯ ವಿಧಾಯ ವೇಣುಸ್ತಂಬಸ್ಯ ವಹ್ನಿಮಿವ ಶಾಂತಿಮುಪೈಮಿ ಧಾಮ ॥
ಏವಂ ವ್ಯವಸಿತೋ ರಾಜನ್ ಸತ್ಯಸಂಕಲ್ಪ ಈಶ್ವರಃ ।
ಶಾಪವ್ಯಾಜೇನ ವಿಪ್ರಾಣಾಂ ಸಂಜಹ್ರೇ ಸ್ವಕುಲಂ ವಿಭುಃ ॥ - ಭಾಗವತ (೧೧/೧/೪, ೫)

೮. ಜನಯಿಷ್ಯತಿ ವೋ ಮಂದಾ ಮುಸಲಂ ಕುಲನಾಶನಮ್ ॥ - ಇತಿ ವಿಪ್ರಶಾಪಃ - ಭಾಗವತ(೧೧/೧/೧೬)

ಕರ್ಮಾಣಿ ಪುಣ್ಯನಿವಹಾನಿ ಸುಮಂಗಲಾನಿ ಗಾಯಜ್ಜಗತ್ಕಲಿಮಲಾಪಹರಾಣಿ ಕೃತ್ವಾ ।
ಕಾಲಾತ್ಮನಾ ನಿವಸತಾ ಯದುದೇವಗೇಹೇ ಪಿಂಡಾರಕಂ ಸಮಗಮನ್ ಮುನಯೋ ನಿಸೃಷ್ಟಾಃ ॥
- ಭಾಗವತ (೧೧/೧/೧೧)

ವಿಶ್ವಾಮಿತ್ರೋಽಸಿತಃ ಕಣ್ವೋ ದುರ್ವಾಸಾ ಭೃಗುರಂಗಿರಾಃ ।
ಕಶ್ಯಪೋ ವಾಮದೇವೋಽತ್ರಿರ್ವಸಿಷ್ಠೋ ನಾರದಾದಯಃ ॥ - (ಭಾ. ೧೧/೧/೧೨)

ಯೇನ ಯೂಯಂ ಸುದುರ್ವೃತ್ತಾ ನೃಶಂಸಾ ಜಾತಮನ್ಯವಃ ।
ಉಚ್ಚೇತ್ತಾರಃ ಕುಲಂ ಕೃತ್ಸ್ನಮೃತೇ ರಾಮಜನಾರ್ದನೌ ॥ - ಭಾರತ (ಮೌಸಲ.೧/೨೦)

೮. ಜ್ಞಾತ್ವಾ ಕತಿಪಯೈರ್ವರ್ಷೈಃ ಪೂರ್ವಮೇವ ಜನಾರ್ದನಃ ।
ಮೌಸಲಂ ಜ್ಞಾನಸಂತತ್ಯಾ ಉದ್ಧವಂ ಬದರೀಂ ನಯತ್ ॥
ಸ ಜ್ಞಾನಂ ತತ್ರ ವಿಸ್ತೀರ್ಯ ಪುನರ್ದ್ವಾರವತೀಂ ಯಯೌ ।
ಪೂರ್ವಮೇವೋಪದಿಷ್ಟೋಽಪಿ ಹರಿಣಾ ಜ್ಞಾನಮುದ್ಧವಃ ॥
ಸ್ವರ್ಗಾರೋಹಣಕಾಲೇ ತು ಪುನಃ ಪಪ್ರಚ್ಛ ಕೇಶವಮ್ ।
ಪುನಃ ಶ್ರುತ್ವಾ ಬದರ್ಯಾಂ ತು ವರ್ಷತ್ರಯಮುವಾಸ ಹ ।
ಜ್ಞಾನಂ ಸಂಸ್ಥಾಪ್ಯ ಪಶ್ಚಾಚ್ಚ ಸ್ವೇಚ್ಛಯಾ ಸ್ವರ್ಗತಃ ಪ್ರಭುಃ ॥ - ಇತಿ ಗಾರುಡೇ (ಭಾ. ತಾ. ೩/೫/೪)

ವಿ: ೧) ಅವತಾರಕಾರ್ಯ ಪೂರೈಸಿದ್ದರಿಂದ ಯದುಕುಲವನ್ನು ಉಪಸಂಹರಿಸಲೆಂದು ಕೃಷ್ಣ ಬ್ರಾಹ್ಮಣಶಾಪವೊಂದನ್ನು ಅದಕ್ಕೆ ನಿಮಿತ್ತವನ್ನಾಗಿ ಸೃಷ್ಟಿಸಿದ. ಯಾದವರು ಜಾಂಬವತೀ–

೮. 'ಶಾಪಂ ಶ್ರುತ್ವಾ ಬ್ರಾಹ್ಮಣಾನಾಮುದ್ಧವಃ ಖಿನ್ನಮಾನಸಃ ।
ಉದಾಸೀನಂ ತಥಾ ಕೃಷ್ಣಮಿವ ಸುಪ್ರೀತಮೇವ ಚ ॥
ನಶಿಷ್ಯಮಾಣಂ ಸ್ವಕುಲಂ ಸ್ವರ್ಯಿಯಾಸುಂ ಚ ಕೇಶವಮ್ ।
ಜ್ಞಾತ್ವಾ ಪಪ್ರಚ್ಛ ಭಗವತ್ತ್ವರೂಪಂ ತಮುಪಹ್ವರೇ ॥
ಮೈತ್ರೇಯೋಽಪಿ ತದೈವಾಗಾಜ್ಜಿಜ್ಞಾಸುಸ್ತತ್ತ್ವಮುತ್ತಮಮ್ ।
ತಯೋರದಾತ್ ಸಭಗವಾನ್ ಜ್ಞಾನಂ ನಿರ್ಮಲಮಂಜಸಾ ॥
ಷಡ್ವಿಂಶದ್ವತ್ಸರಾತ್ ಪೂರ್ವಂ ಸ್ವರ್ಗತೇಃ ಪುರುಷೋತ್ತಮಃ ।
ಪ್ರೇಷಯಾಮಾಸ ಚ ಹರಿರುದ್ಧವಂ ಬದರೀಮನು ॥
ಕಲಾಪಗ್ರಾಮಿಣಾಂ ವಕ್ತುಮೇತತ್ತತ್ತ್ವಮಶೇಷತಃ । - ಭಾ. ತಾ. (೧/೧೨/೧೨)

ವಿದುರಂ ತೀರ್ಥಯಾತ್ರಾಸ್ಥಮಂತರಾಲೇ ಸ ಉದ್ಧವಃ ॥
ದೃಷ್ಟ್ವಾ ನಶಿಷ್ಯಮಾಣಂ ಚ ಕುಲಂ ಜಿಗಮಿಷುಂ ಹರಿಮ್ ।
ಕಥಯಿತ್ವಾ ಬದರ್ಯಾಂ ಚ ಕಲಾಪಗ್ರಾಮವಾಸಿನಾಮ್ ॥
ಪ್ರೋಚ್ಯ ತತ್ತ್ವಮಶೇಷೇಣ ವಾಸುದೇವಮುಖೋದ್ಗತಮ್ ।
ಷಡ್ವಿಂಶದ್ವರ್ಷಗಮನೇ ಪುನರಾಗತಿಮಾತ್ಮನಃ ॥
ತೇಷಾಮುಕ್ತ್ವಾ ಪುನಃ ಕೃಷ್ಣಸನ್ನಿಧೌ ವಿಚಚಾರ ಹ ।
ಮೈತ್ರೇಯೋ ವಿದುರಾಯೈತದೂಚಿವಾನ್ ಕೃಷ್ಣಚೋದಿತಃ ॥
ವಿದುರಃ ಪಾಂಡವಾನಾಂ ಚ ವಿನಾ ಯದುವಿನಾಶನಮ್ ।
ಷಟ್ತ್ರಿಂಶದ್ವರ್ಷತಃ ಪೂರ್ವಂ ಜ್ಞಾತ್ವಾಽಪ್ಯಪ್ರಿಯಮೇವ ತತ್ ॥
ನಾವೋಚದ್ವಿದುರೋ ಧೀಮಾಂಸ್ತಸ್ಮಾನ್ನಾಪ್ರಿಯಮಾವದೇತ್' ಇತಿ ಪಾದ್ಮೇ ॥ - ಭಾ. ತಾ. (೧/೧೨/೧೨)

೯. ಸಪ್ತಮಾಬ್ದಂ ಶತೋತ್ತರಮಿತ್ಯತ್ರ ಶತಾತ್ = ವರ್ಷಶತಾದುತ್ತರಂ ಸಪ್ತಮಾಬ್ದಂ = ಸಪ್ತಮಸಂವತ್ಸರಃ ಅವತಾರ-ಸಮಾಪ್ತಿಕಾಲಮಿತಿ ಯಾವತ್ । – (ವಾ.)

೯. 'ಸಪ್ತಮಾಬ್ದಂ ಶತೋತ್ತರಮ್ । ಪ್ರತೀಕ್ಷನ್ ಪಾಲಯಾಮಾಸ ಪಾರ್ಥೈಃ ಸಹ ಭುವಂ ಪ್ರಭುಃ' ಇತ್ಯುಕ್ತಮ್ । ಸಪ್ತೋತ್ತರಂ ಶತಾಬ್ದಮಿತಿ ತದರ್ಥಃ । ನನ್ವತ್ರ ಏಕಾದಶತಾತ್ಪರ್ಯವಿರೋಧಃ ।

'ವತ್ಸರಾಣಾಂ ಶತಂ ಚೈವ ಋತೂನಾಂ ಪಂಚವಿಂಶಕಮ್ ॥
ಸ್ವಲೋಕಗಮನಾಕಾಂಕ್ಷೀ ಬ್ರಹ್ಮಾ ಪ್ರಾಗಾದ್ಯದಾ ಹರಿಃ ।
ಸಂವತ್ಸರದ್ವಯಂ ಚೈವ ಪಶ್ಚಾತ್ ಸ್ಥಿತ್ವಾ ಜನಾರ್ದನಃ ।
ಪ್ರತಿಪೇದೇ ಸ್ವಕಂ ಸ್ಥಾನಂ ಚಾತುರ್ಮಾಸ್ಯಾಧಿಕಂ ಪುನಃ ॥' ಇತಿ ॥

ತಥಾ ಚ ಶತವರ್ಷಾನಂತರಂ ಷಣ್ಮಾಸಾಧಿಕಂ ವರ್ಷಷಟ್ಕಂ ಕೃಷ್ಣಾವತಾರಕಾಲ ಇತ್ಯುಕ್ತ್ವಾದಿತಿ ಚೇತ್, ಉಚ್ಯತೇ । ಏತದ್ಗ್ರಂಥಾನುಸಾರೇಣ ಷಣ್ಮಾಸನ್ಯೂನತಾಯಾ ನ್ಯೂನತ್ವಾಭಾವೇನಾಲ್ಪತ್ವಾದವಿವಕ್ಷೇತ್ಯಭಿಪ್ರಾಯಃ । ಯದ್ವಾ ಸಪ್ತಾಬ್ದಮಿತ್ಯನುಕ್ತ್ವಾ ಸಪ್ತಮಾಬ್ದಮಿತಿ ಹ್ಯತ್ರೋಕ್ತಮ್ । ಸಪ್ತೇತ್ಯುಕ್ತೇ ಸಮಗ್ರಸಪ್ತವರ್ಷಾಃ ಸಮಾ ಯಾಂತಿ । ಸಪ್ತಮೇತ್ಯುಕ್ತೇ ಸಪ್ತವರ್ಷಾಂತರಿತ್ಯಾಯಾತಿ । ತಥಾ ಚ ಷಡ್ವರ್ಷಾನಂತರಂ ಷಣ್ಮಾಸಾನಾಂ ಜಾತತ್ವೇನ ಸಪ್ತಮೋ ವರ್ಷೋ ಭವೇತ್ಕೇವೇತ್ಯಭಿಪ್ರಾಯಃ । ತಥಾ ಚ ಭಾಗವತತಾತ್ಪರ್ಯೋಕ್ತಮೇವ ತತ್ತ್ವಮಿತಿ ಹೃದಯಮ್ ॥ – (ಚ.)

ಪುತ್ರನಾದ ಸಾಂಬನಿಗೆ ಗರ್ಭಿಣೀಸ್ತ್ರೀವೇಷವನ್ನು ತೊಡಿಸಿ, ''ಅವಳು ಎಂತಹ ಮಗುವನ್ನು ಹೆರುವಳು?'' ಎಂಬುದಾಗಿ ಅಲ್ಲಿಗೆ ಆಗಮಿಸಿದ ವಿಶ್ವಾಮಿತ್ರ, ಕಶ್ಯಪ, ನಾರದ ಮೊದಲಾದ ಮಹಾಮುನಿಗಳನ್ನು ಪರೀಕ್ಷಿಸಲೆಂದು ಕೇಳಿದರು. ಅವರು ಜ್ಞಾನದೃಷ್ಟಿಯಿಂದ ವಿಷಯ ತಿಳಿದು ಬಹಳವಾಗಿ ಕೋಪಗೊಂಡು – ''ಇವಳು ನಿಮ್ಮ ವಂಶವನ್ನೆಲ್ಲ ನಾಶಮಾಡುವ ಒನಕೆಯೊಂದನ್ನು ಹೆರುವಳು'' ಎಂದು ಶಪಿಸುವರು. ಅದು ಮೂಲತಃ ಕೃಷ್ಣನೇ ಮಾಡಿದ ವ್ಯವಸ್ಥೆ.

೨) ಗಾಂಧಾರಿಯಿಂದ ಅಂತಹುದೇ ಶಾಪ ಈಗಾಗಲೇ ಒದಗಿತ್ತು ಎಂಬುದನ್ನು ಗಮನಿಸಬೇಕು. ಆ ಎರಡು ಶಾಪಗಳೂ ಸಹ ಕೃಷ್ಣ ಸಂಕಲ್ಪಿಸಿದಂತೆಯೇ ನಡೆದಿದ್ದವು. ಅದಕ್ಕೆ ಕಾರಣವನ್ನು ಮುಂದೆ ತಿಳಿಸುವರು (೩೨/೧೪).

೩) ಉದ್ಧವ ಅದನ್ನೆಲ್ಲ ಗಮನಿಸಿ ತನ್ನನ್ನು ಜೊತೆಗೆ ಕರೆದೊಯ್ಯಲು ಕೃಷ್ಣನನ್ನು ಕೇಳಿಕೊಂಡ, ಕೃಷ್ಣ ಅದಕ್ಕೆ ಒಪ್ಪದೇ ಅವನು ಬದರಿಯಲ್ಲಿ ಕಲಾಪಗ್ರಾಮದಲ್ಲಿನ ಜನಗಳಿಗೆ ತತ್ತ್ವೋಪದೇಶವನ್ನು ಮಾಡಬೇಕೆಂದು ತಿಳಿಸಿ ಅವನಿಗೆ ಸ್ವತಃ ತಾನೇ ತತ್ತ್ವೋಪದೇಶವನ್ನು ಮಾಡಿದ.

೪) ಶ್ರೀಮದ್ಭಾಗವತದಲ್ಲಿ ಅದೆಲ್ಲ ಶ್ರೀಕೃಷ್ಣೋದ್ಧವಸಂವಾದರೂಪವಾಗಿ(ಉದ್ಧವಗೀತೆ) ಏಕಾದಶಸ್ಕಂಧದಲ್ಲಿ ವಿವರವಾಗಿ ನಿರೂಪಿತವಾಗಿದೆ.

೫) ತಾನು ನೂರ ಏಳನೆಯ ವರ್ಷದಲ್ಲಿ ಪರಂಧಾಮಕ್ಕೆ ಹೊರಡಲು ಸಂಕಲ್ಪಿಸಿದ್ದರಿಂದ ಆ ಕಾಲವನ್ನು ಪ್ರತೀಕ್ಷಿಸುತ್ತಾ ಭೂಮಿಯನ್ನು ಪಾಲಿಸುತ್ತಿದ್ದನು ಎಂದರ್ಥ.

೬) ಹಾಗೆ ಉದ್ಧವನಿಗೆ ಶ್ರೀಕೃಷ್ಣ ಉಪದೇಶ ಮಾಡಿದ್ದು ಎರಡು ಸಲ ಎಂಬ ವಿವರ ಭಾಗವತತಾತ್ಪರ್ಯದಲ್ಲಿದೆ (೩/೫/೪).

ಕೃತಯುಗವನ್ನು ಮೀರಿಸಿದ ಕಲಿಯುಗ

ಸಮಾರಬ್ಧಂ ಕಲಿಯುಗಂ ಯದಾ ದುರ್ಯೋಧನೋಽಪತತ್ ।
ಷಟ್ತ್ರಿಂಶಾಬ್ದಂ ಪುನಃ ಕೃಷ್ಣಃ ಕೃತಮೇವಾನ್ವವರ್ತಯತ್ ॥ ೧೦ ॥

ಅ: ಯಾವಾಗ ದುರ್ಯೋಧನ ಬಿದ್ದನೋ ಆಗಲೇ ಕಲಿಯುಗ ಪ್ರಾರಂಭವಾಯಿತು. ಕೃಷ್ಣ ಪುನಃ ಮೂವತ್ತಾರು ವರ್ಷಗಳ ಕಾಲ ಕೃತಯುಗವನ್ನೇ ಪ್ರವರ್ತಿಸಿದ.

---

೧೦. ಸಮಾರಬ್ಧಂ ಕಲಿಯುಗಮಿತ್ಯತ್ರ 'ಯುಗಂ ಯುಗ್ಮೇ ಕೃತಾದಿಕೇ' ಇತಿ ವಚನಾತ್ ಯುಗಮಿತಿ ಸಾಧುಃ ।-(ವಾ)

೧೦. 'ಪ್ರಾಪ್ತಂ ಕಲಿಯುಗಂ ವಿದ್ಧಿ....' ಇತಿ ದುರ್ಯೋಧನಪತನಾನಂತರಂ ಬಲರಾಮ ಪ್ರತಿ ಶ್ರೀಕೃಷ್ಣವಚನಮ್ ।
–(ವ್ಯಾ)

ವಿ: ೧) ಭೀಮನ ಗದಾಘಾತಕ್ಕೆ ದುರ್ಯೋಧನ ತೊಡೆ ಮುರಿದು ಬೀಳುತ್ತಲೇ ದ್ವಾಪರಯುಗ ಮುಕ್ತಾಯವಾಗಿ ಕಲಿಯುಗ ಪ್ರಾರಂಭವಾಯಿತು. ಅನಂತರ ಕೃಷ್ಣ ಭೂಲೋಕದಲ್ಲಿ ಇದ್ದದ್ದು ಮೂವತ್ತಾರು ವರ್ಷಗಳ ಕಾಲ. ಅಲ್ಲಿಯವರೆಗೂ ಕೃತಯುಗದ ವೈಭವವೇ ಕಲಿಯುಗದಲ್ಲೂ ಕೃಷ್ಣನ ಸಂಕಲ್ಪದಿಂದಾಗಿ ಉಂಟಾಗಿತ್ತು ಎಂದರ್ಥ.

೨) ಹೀಗೆ ಕಲಿಯುಗದಲ್ಲಿ ಕೃತಯುಗದ ವೈಭವವನ್ನು ತರುವ ಮೂಲಕ ತಾನು ಕಾಲನಿಯಾಮಕ, ಕಾಲಪ್ರವರ್ತಕ ಎಂಬ ತತ್ತ್ವವನ್ನು ಶ್ರೀಕೃಷ್ಣ ಸೂಚಿಸಿದ ಎಂದು ತಿಳಿಯಬೇಕು.

ಕೃತಾದಪಿ ವಿಶೇಷೋಽಯಂ ಯತ್ಪುಣ್ಯಸ್ಯಾಧಿಕಂ ಫಲಮ್ ।
ಅಲ್ಪಮೇವ ಚ ಪಾಪಸ್ಯ ಕಾಲಾತ್ ಕೃಷ್ಣಾಜ್ಞಯಾ ತಥಾ ॥ ೧೧ ॥

ಅ: ಕೃಷ್ಣನ ಆದೇಶದಿಂದಾಗಿ ಪುಣ್ಯಕ್ಕೆ ಅಧಿಕಫಲ, ಪಾಪಕ್ಕೆ ಅಲ್ಪಫಲವೆಂಬ ಕಾರಣ-ದಿಂದಾಗಿ ಆ ಕಾಲ ಕೃತಯುಗಕ್ಕಿಂತಲೂ ವಿಶೇಷವೆನ್ನಿಸಿತ್ತು.

ವಿ: ೧) ಆ ಮೂವತ್ತಾರು ವರ್ಷಗಳು ಕೃತಯುಗದಂತಿದ್ದುದು ಮಾತ್ರವಲ್ಲದೇ, ಕೃತಯುಗಕ್ಕಿಂತಲೂ ಶ್ರೇಷ್ಠವಾಗಿದ್ದವು ಎಂದರ್ಥ. ಕಾಲ ಸ್ವಭಾವದಂತೆ ಅದು ಕಲಿಯುಗವಾದರೂ ಕೃಷ್ಣನ ಅನುಗ್ರಹದಿಂದಾಗಿ ಆ ಕಾಲದಲ್ಲಿ ನಡೆದ ಸಾಮಾನ್ಯ ಪುಣ್ಯಕಾರ್ಯಕ್ಕೂ ಅತ್ಯಧಿಕಫಲ; ಪಾಪಕಾರ್ಯಕ್ಕೆ ಅಲ್ಪಫಲ ಲಭಿಸುತ್ತಿತ್ತು.

೨) ಆದರೆ ಕೃತಯುಗದಲ್ಲಿ ಹಾಗಲ್ಲ, ಅಲ್ಲಿ ಪುಣ್ಯಕ್ಕೆ ಸಮಾನಫಲ, ಪಾಪಕ್ಕೆ ಅಧಿಕಫಲ. ಈ ರೀತಿಯ ವಿಶೇಷದಿಂದಾಗಿ ಆ ಮೂವತ್ತಾರು ವರ್ಷಗಳ ಕಾಲ ಕೃತಯುಗಕ್ಕಿಂತ ಮಿಗಿಲಾಗಿದ್ದ ಅತ್ಯಂತ ಅಪೂರ್ವವಾದ ಕಾಲವಾಗಿತ್ತು ಎಂದರ್ಥ.

೩) ಕೈಲಾಸಯಾತ್ರಾಪ್ರಸಂಗದಲ್ಲಿ ಒಂದುವರ್ಷವನ್ನು ಹನ್ನೆರಡುವರ್ಷವನ್ನಾಗಿಸಿದ್ದ ಶ್ರೀಕೃಷ್ಣ ಇಲ್ಲಿ ಕಲಿಯುಗವನ್ನು ಕೃತಯುಗಕ್ಕಿಂತ ಮಿಗಿಲಾಗಿಸಿದ ಎಂಬುದು ವಿಶೇಷ; ಇವೆಲ್ಲ ಅವನು ಕಾಲಪ್ರವರ್ತಕ ಎಂಬುದಕ್ಕೆ ದ್ಯೋತಕ.

ಬ್ರಹ್ಮಾದಿಗಳಿಂದ ಅವತಾರ ಪರಿಸಮಾಪ್ತಿಗೆ ಪ್ರಾರ್ಥನೆ

ಏವಂ ಸುಧಾರ್ಮಿಕೇ ಲೋಕೇ ಹರಿಭಕ್ತಿಪರಾಯಣೇ ।
ನಷ್ಟೇಷು ಕಲಿಲಿಂಗೇಷು ಯುಗವೃತ್ತಿಮಭೀಪ್ಸವಃ ॥ ೧೨ ॥

ಬ್ರಹ್ಮರುದ್ರಾದಯೋ ದೇವಾಃ ಸ್ತುತ್ವಾ ಕೇಶವಮವ್ಯಯಮ್ ।
ವ್ಯಜ್ಞಾಪಯನ್ ಸ್ವಲೋಕಾಪ್ತಿಮೋಮಿತ್ಯಾಹ ಸ ಚಾಚ್ಯುತಃ ॥ ೧೩ ॥

ಅ: ಹೀಗೆ ಲೋಕ ಹರಿಭಕ್ತಿಯಲ್ಲಿ ನಿರತವಾಗಿ ಧರ್ಮನಿಷ್ಠೆಯಿಂದ ಕೂಡಲು ಕಲಿಯುಗದ ಲಕ್ಷಣಗಳು ಕಾಣೆಯಾಗಲು ಕಲಿಯುಗದ ಪ್ರವೃತ್ತಿ ನಡೆಯಬೇಕೆಂದು ಬಯಸಿದ ಬ್ರಹ್ಮರುದ್ರಾದಿ ದೇವತೆಗಳು ಅವ್ಯಯನಾದ ಶ್ರೀಕೃಷ್ಣನನ್ನು ಸ್ತೋತ್ರ ಮಾಡಿ ಅವನು ತನ್ನ ಲೋಕಕ್ಕೆ ಹಿಂದಿರುಗಬೇಕೆಂದು ವಿಜ್ಞಾಪಿಸಿಕೊಂಡರು. ಕೃಷ್ಣನು ''ಆಗಲಿ'' ಎಂದ.

ವಿ: ಯುಗಧರ್ಮಗಳ ಪ್ರವರ್ತನೆ ದೇವತೆಗಳ ಕರ್ತವ್ಯಗಳಲ್ಲಿ ಒಂದು. ಆಗ ಕಲಿಯುಗಕ್ಕೆ ಸಲ್ಲದ ಕೃತಯುಗದ ವಾತಾವರಣವೇ ಮೂಡಿದ್ದರಿಂದ ಜಗತ್ತೆಲ್ಲ ಧರ್ಮಪರವಾಗಿ ಹರಿಭಕ್ತರತವಾಗಿ ಇದ್ದಿತು. ಅದು ಹಾಗೆ ಮುಂದುವರೆಯುವುದು ಯುಗಧರ್ಮವಲ್ಲವೆಂದು ಬಗೆದು ಬ್ರಹ್ಮಾದಿಗಳು ಶ್ರೀಕೃಷ್ಣನನ್ನು ಹಾಗೆ ಪ್ರಾರ್ಥಿಸಿದರು ಎಂದರ್ಥ. ಬ್ರಹ್ಮಾದಿಗಳು ಮಾಡಿದ ಆ ಪ್ರಾರ್ಥನೆಯ ವಿವರ ಶ್ರೀಮದ್ಭಾಗವತದಲ್ಲಿ ಬಂದಿದೆ. ರಾಮಾಯಣದಲ್ಲೂ ಶ್ರೀರಾಮಾವತಾರವನ್ನು ಪರಿಸಮಾಪ್ತಿಗೊಳಿಸಲು ದೇವತೆಗಳು ಹೀಗೆ ಪ್ರಾರ್ಥನೆ ಸಲ್ಲಿಸಿದ ವಿವರ ಬಂದಿದೆ (೯/೪೫).

ಯದುಕುಲದ ಉಪಸಂಹಾರದ ಹಿನ್ನೆಲೆ

ಪ್ರಾಚುರ್ಯೇ ಸಜ್ಜನಸ್ಯ ಸ್ಯಾನ್ನ ಕಲೇರ್ವೃದ್ಧಿರಂಜಸಾ ।
ಇತಿ ಸ್ವಕುಲಸಂಹೃತ್ಯೈ ಪ್ರಭಾಸಮನಯತ್ ಪ್ರಭುಃ ॥ ೧೪ ॥

ಅ: ಸಜ್ಜನರೇ ಭೂಮಿಯಲ್ಲಿ ಅಧಿಕ ಸಂಖ್ಯೆಯಲ್ಲಿದ್ದರೆ ಕಲಿಯ ಪ್ರಾಬಲ್ಯ ಸರಿಯಾಗಿ ಆಗದು ಎಂದು ಪ್ರಭುವಾದ ಶ್ರೀಕೃಷ್ಣ ತನ್ನ ಕುಲವನ್ನು ಸಂಹರಿಸಲೆಂದು ಪ್ರಭಾಸಕ್ಕೆ ಕರೆದೊಯ್ದ.

ವಿ: ೧) ದೇವಾಂಶಸಂಭೂತರಾದ ಯಾದವರು ಭೂಮಿಯಲ್ಲಿದ್ದರೆ ಅವರ ಪ್ರಭಾವದಿಂದಾಗಿ ಕಲಿಗೆ ಪ್ರಾಬಲ್ಯ ಸರ್ವಥಾ ಲಭಿಸದು. ಅದರಿಂದಾಗಿ ಅವರು ಇನ್ನು ಸ್ವಲೋಕಕ್ಕೆ ತೆರಳುವುದು ಉಚಿತ ಎಂದು ಕೃಷ್ಣ ಹಾಗೆ ಮಾಡಿದ ಎಂಬುದು ಇಲ್ಲಿ ನೀಡಿರುವ ಕಾರಣ.

---

೧೪. 'ಸತಾಮಪಿ ಕಲೌ ಪ್ರಾಪ್ತೇ ವಿಕಾರೋ ಮನಸೋ ಭವೇತ್ ।
ತಸ್ಮಾದ್ಯದೂಂಶ್ಚ ಸಂಜಹ್ರೇ ನೈತೇ ಸ್ಯುಃ ಪಾಪಿನಸ್ತ್ವಿತಿ ।
ಪುನರ್ಲೋಕವಿವೃದ್ಧ್ಯರ್ಥಮೌತ್ತರೇಯಾದಿಕಾನ್ ಹರಿಃ ।
ಆವಿಶ್ಯ ರಕ್ಷಾಮಕರೋಜ್ಜಗತಃ ಪುರುಷೋತ್ತಮಃ ।
ಸ್ವಾತ್ಮನಃ ಸಹ ಯಾನೇನ ಪುರುಷಾರ್ಥೋಽಧಿಕೋ ಭವೇತ್ ।
ಇತ್ಯನುಗ್ರಹಬುದ್ಧ್ಯಾ ಚ ಸಂಜಹ್ರೇ ಸ್ವಕುಲಂ ವಿಭುಃ' ಇತಿ ಚ ॥ - ಭಾ.ತಾ. (೧೧/೬/೩೧)

೨) ಅದರಂತೆ ಕಲಿಯ ಪ್ರಾಬಲ್ಯದಿಂದಾಗಿ ಸಾಮಾನ್ಯದೇವತೆಗಳ ಅವತಾರರಾದ ಯಾದವರಿಗೆ ಮನೋವಿಕಾರ ಉಂಟಾಗಿ ಸಾಧನೆಗೆ ಪ್ರತಿಕೂಲವಾಗಬಹುದು ಎಂಬುದು ಭಾಗವತತಾತ್ಪರ್ಯದಲ್ಲಿ ನೀಡಿರುವ ಕಾರಣ. ಮೇಲ್ನೋಟಕ್ಕೆ ಎರಡಕ್ಕೂ ವಿರೋಧವಿರುವಂತೆ ಕಂಡರೂ, ವಾಸ್ತವಿಕವಾಗಿ ಎರಡೂ ಮುಖ್ಯಕಾರಣಗಳೇ ಆಗಿವೆ ಎಂಬುದನ್ನು ಗಮನಿಸಬೇಕು. ಉತ್ತಮದೇವತೆಗಳ ಅಂಶರಾದ ಯಾದವರು ಇರುವುದರಿಂದ ಕಲಿಪ್ರಾಬಲ್ಯಕ್ಕೆ ಧಕ್ಕೆ; ಸಾಮಾನ್ಯದೇವತೆಗಳ ಅವತಾರರಾದ ಯಾದವರಿಗೆ ಕಲಿಪ್ರಾಬಲ್ಯದಿಂದಾಗಿ ಮನೋವಿಕಾರಾದಿ ರೂಪ ಅಪಾಯ ಎಂಬ ವ್ಯವಸ್ಥೆಯಿಂದಾಗಿ ಯಾವ ವಿರೋಧವೂ ಇರದು. ಅದರೊಂದಿಗೆ ಅವರು ತನ್ನೊಂದಿಗೆ ತಮ್ಮ ಲೋಕಗಳಿಗೆ ನಡೆದರೆ ಅವರಿಗೆಲ್ಲ ವಿಶೇಷ ಪುಣ್ಯಪ್ರಾಪ್ತಿ ಎಂಬ ಮತ್ತೊಂದು ಕಾರಣವನ್ನು ಸಹ ಅಲ್ಲಿ ನೀಡಿರುವರು.

ಸ್ವಗೃಹದಲ್ಲಿ ಮರಣ ಪುಣ್ಯಕರವಲ್ಲ

ಪುಣ್ಯಕ್ಷೇತ್ರೇಽಪಿ ನ ಮೃತಿಃ ಸ್ವಗೃಹೇ ತ್ವತಿಧರ್ಮದಾ ।
ಗತ್ವೈವಾಲ್ಪಮಪಿ ಕ್ಷೇತ್ರಂ ಸ್ಯಾನ್ಮಹತ್ಫಲಮಿತ್ಯಜಃ ॥ ೧೫ ॥

ದ್ವಾರಕೆಯಿಂದ ಪ್ರಭಾಸಕ್ಕೆ ಯಾದವರು

ಪ್ರಕಾಶಯಿತುಮೇವೈತಾನ್ ಪ್ರಭಾಸಾಯ ಕುಶಸ್ಥಲಾತ್ ।
ನೀತ್ವಾ ದಾನಾನಿ ಸದ್ಧರ್ಮಾಂಸ್ತೈರಕಾರಯದಚ್ಯುತಃ ॥ ೧೬ ॥

ಅ: ಪುಣ್ಯಕ್ಷೇತ್ರವಾಗಿದ್ದರೂ ಸ್ವಗೃಹದಲ್ಲಿ ಮರಣ ಹೆಚ್ಚು ಪುಣ್ಯಕರವಾದುದಲ್ಲ, ಆದ್ದರಿಂದ ಅಲ್ಪವಾಗಿದ್ದರೂ ಬೇರೊಂದು ಕ್ಷೇತ್ರಕ್ಕೆ ಹೋಗಿ ಮರಣ ಹೊಂದುವುದು ಮಹತ್ಫಲಕ್ಕೆ ಕಾರಣ ಎಂಬ ತತ್ವವನ್ನು ತಿಳಿಸಲೆಂದು ಕೃಷ್ಣ ಅವರನ್ನೆಲ್ಲ ದ್ವಾರಕೆಯಿಂದ ಪ್ರಭಾಸಕ್ಕೆ ಕರೆದೊಯ್ದು ಅವರಿಂದ ದಾನಗಳನ್ನು, ಉತ್ತಮ ಪುಣ್ಯಕಾರ್ಯಗಳನ್ನು ಮಾಡಿಸಿದ.

ವಿ: ೧) ಅಂತ್ಯಕಾಲದಲ್ಲಿ ತನ್ನ ವಾಸಸ್ಥಾನದಿಂದ ಬೇರೊಂದು ಪುಣ್ಯಕ್ಷೇತ್ರಕ್ಕೆ ತೆರಳಿಯೇ ದೇಹ ತೊರೆಯಬೇಕೆಂಬುದು ಶಾಸ್ತ್ರವಿಧಿ. ತಾನಿರುವ ಕ್ಷೇತ್ರ ಪುಣ್ಯಕ್ಷೇತ್ರವಾಗಿದ್ದರೂ, ಅಲ್ಲಿ ಮರಣಿಸದೆ ಮತ್ತೊಂದು ಪುಣ್ಯಕ್ಷೇತ್ರಕ್ಕೆ ತೆರಳಿಯೇ ದೇಹ ತ್ಯಜಿಸಬೇಕು. ಅಂತಹ ಕ್ಷೇತ್ರ ತಾನು ವಾಸಿಸುವ ಕ್ಷೇತ್ರಕ್ಕಿಂತ ಕಡಿಮೆ ಪುಣ್ಯಕ್ಷೇತ್ರವಾಗಿದ್ದರೂ ಹೆಚ್ಚು ಪುಣ್ಯದಾಯಕ ಎಂಬ ವಿಶೇಷಾಂಶವನ್ನು ತೋರಿಸಲೆಂದು ಯಾದವರನ್ನೆಲ್ಲ ಹಾಗೆ ದ್ವಾರಕೆಯಿಂದ ಪ್ರಭಾಸಕ್ಕೆ ಕರೆದೊಯ್ದ ಎಂದರ್ಥ.

---

೧೬. ಗೃಹಾತ್ ಪ್ರವ್ರಜಿತೋ ಧೀರಃ ಪುಣ್ಯತೀರ್ಥಜಲಾಪ್ಲುತಃ ॥ ಭಾಗವತ (೨/೧/೧೬)

೨) ದ್ವಾರಕ್ಕಿಂತ ಪ್ರಭಾಸಕ್ಕಿಂತ ಶ್ರೇಷ್ಠ ಪುಣ್ಯಕ್ಷೇತ್ರವೆನ್ನಲು ಅದು ಸಪ್ತಮಹಾಕ್ಷೇತ್ರಗಳಲ್ಲಿ ಒಂದಾಗಿರುವುದೇ ಕಾರಣ :

ಅಯೋಧ್ಯಾ ಮಥುರಾ ಮಾಯಾ ಕಾಶೀ ಕಾಂಚೀ ಅವಂತಿಕಾ ।
ಪುರೀ ದ್ವಾರವತೀ ಚೈವ ಸಪ್ತೈತೇ ಮೋಕ್ಷದಾಯಿಕಾ ॥

೩) ಕೃಷ್ಣನಹಾಗೆ ಯಾದವರನ್ನು ಅಲ್ಲಿಗೆ ಕರೆದೊಯ್ಯಲು ಕೆಲವು ದುಶ್ಶಕುನಗಳನ್ನು ಉಂಟು ಮಾಡಿ ಅವುಗಳ ಪರಿಹಾರಕ್ಕೆಂದು ಪ್ರಭಾಸಕ್ಕೆ ತೆರಳೋಣ ಎಂದು ಅಲ್ಲಿಗೆ ಕರೆದೊಯ್ಯುವ ನೆಪ ಹೂಡಿದ.

೪) ಆ ಪ್ರಭಾಸಕ್ಷೇತ್ರ ಇಂದು ಸೋಮನಾಥ ಎಂದು ಪ್ರಸಿದ್ಧವಾದ ಕ್ಷೇತ್ರ. ಅದು ಸರಸ್ವತೀ, ಹಿರಣ್ಯಾ, ಕಪಿಲಾ ಎಂಬ ಮೂರು ನದಿಗಳ ಸಂಗಮ. ಅದಕ್ಕೆ ಪ್ರಾಚೀತ್ರಿವೇಣೀ ಎಂದು ಭಾಗವತದಲ್ಲಿ ಉಲ್ಲೇಖವಿದೆ. ಆ ಮೂರೂ ಮುಂದೆ ಸಮುದ್ರ ಸೇರುವ ಪುಣ್ಯಕ್ಷೇತ್ರ ಈ ಪ್ರಭಾಸ.

ಸರಸ್ವತೀಹಿರಣ್ಯಾಭ್ಯಾಂ ಸಂಗೋ ಯತ್ರಾಪರಾಂಬುಧೇಃ।
ಪ್ರಭಾಸಾಖ್ಯಂ ತದಾಭಾತಿ ಪ್ರಭಾऽऽಸ ಹಿ ಯತೋ ಭುವಃ ॥
– ತೀರ್ಥಪ್ರಬಂಧ (೧/೮೮)

ಯಾದವರ ವಿನಾಶ - ಬಲರಾಮನ ದೇಹತ್ಯಾಗ

ತೇ ತತಃ ಶಾಪದೋಷೇಣ ಕೃಷ್ಣೇನೈವ ವಿಮೋಹಿತಾಃ ।
ಮೈರೇಯಮತ್ತಾ ಅನ್ಯೋನ್ಯಂ ನಿಪಾತ್ಯ ಸ್ವಂ ತನೂಂ ಗತಾಃ ।
ತದ್ದೃಷ್ಟ್ವಾ ಬಲದೇವೋऽಪಿ ಯೋಗೇನ ಸ್ವತನುಂ ಯಯೌ ॥ ೧೭॥

---

೧೭. ಕೃಷ್ಣೇನೈವ ವಿಮೋಹಿತಾಃ ಮೋಹನಸಂಹಾರಾದೌ ಕೃಷ್ಣ ಏವ ಮುಖ್ಯಕಾರಣಂ ಶಾಪಾದಿಕಮಮುಖ್ಯ-ಕಾರಣಮಿತ್ಯೇವಾರ್ಥಃ। - (ಜ.)

೧೭. ಷಟ್ತ್ರಿಂಶೇऽಥ ತತೋ ವರ್ಷೇ ವೃಷ್ಣೀನಾಮನಯೋ ಮಹಾನ್ ।
ಅನ್ಯೋನ್ಯಂ ಮುಸಲೈಸ್ತೇ ತು ನಿಜಘ್ನುಃ ಕಾಲಚೋದಿತಾಃ ॥ - ಭಾರತ (ಮೌಸಲ. ೧/೧೩)

೧೭. ರಾಮಃ ಸಮುದ್ರವೇಲಾಯಾಂ ಯೋಗಮಾಸ್ಥಾಯ ಪೌರುಷಮ್ ।
ತತ್ಯಾಜ ಲೋಕಂ ಮಾನುಷ್ಯಂ ಸಂಯೋಜ್ಯಾತ್ಮಾನಮಾತ್ಮನಿ ॥ - ಭಾಗವತ (೧೧/೩೦/೨೬)

ಅಥಾಪಶ್ಯದ್ಯೋಗಯುಕ್ತಸ್ಯ ತಸ್ಯ ನಾಗಂ ಮುಖಾನ್ನಿಶ್ಚರಂತಂ ಮಹಾಂತಮ್ ।
ಸಹಸ್ರಶೀರ್ಷಃ ಪರ್ವತಾಭೋಗವರ್ಷ್ಮಾ ರಕ್ತಾನನಃ ಸ್ವಾಂ ತನುಂ ತಾಂ ವಿಮುಚ್ಯ ।
ಸಮ್ಯಕ್ ಚ ತಂ ಸಾಗರಃ ಪ್ರತ್ಯಗೃಹ್ಣಾತ್ಸಾಗಾ ದಿವ್ಯಾಃ ಸರಿತಶ್ಚೈವ ಪುಣ್ಯಾಃ ॥- ಭಾರತ (ಮೌಸಲ. ೪/೧೩,೧೪)

ಅ: ಅವರೆಲ್ಲ ಕೃಷ್ಣನಿಂದಲೇ ಮೋಹಕ್ಕೊಳಗಾಗಿ, ಆ ಶಾಪದೋಷದಿಂದಾಗಿ ಮದ್ಯಪಾನದಿಂದ ಮೈಮರೆತು ಒಬ್ಬರನ್ನೊಬ್ಬರು ಸಂಹರಿಸಿಕೊಂಡು ತಮ್ಮ ಮೂಲರೂಪವನ್ನು ಸೇರಿದರು. ಅದನ್ನು ಕಂಡು ಬಲರಾಮನೂ ಸಹ ಯೋಗದಿಂದ ತನ್ನ ಮೂಲರೂಪವನ್ನು ಸೇರಿದ.

ವಿ: ೧) ಪ್ರಭಾಸದಲ್ಲಿ ದಾನಕಾರ್ಯವನ್ನು ಪೂರೈಸಿದ ಅವರಿಗೆ ಶ್ರೀಹರಿಯ ಸಂಕಲ್ಪದಂತೆ ಒದಗಿದ್ದ ಶಾಪದ ಪ್ರಭಾವದಿಂದಾಗಿ ಮದ್ಯಪಾನ ಮಾಡುವ ಕಾರ್ಯಕ್ಕೆ ಮನಸ್ಸು ಹಾಕುವಂತಾಯಿತು. ಅದರಿಂದಾಗಿ ಮೈಮರೆತ ಅವರು ಒಬ್ಬರನ್ನೊಬ್ಬರು ದೂಷಿಸುತ್ತಾ ಹೊಡೆದಾಡಿದರು. ಸಮುದ್ರದ ಅಂಚಿನಲ್ಲೇ ಬೆಳೆದಿದ್ದ ವಿಶಿಷ್ಟ ಬಗೆಯ ಏರಕ ಎಂಬ ಹುಲ್ಲಿನಿಂದ ಅವರು ಒಬ್ಬರನ್ನೊಬ್ಬರು ಹೊಡೆದುಕೊಂಡರು.

೨) ವಿಪ್ರಶಾಪದಿಂದ ಹುಟ್ಟಿದ ಒನಕೆಯನ್ನು ಅವರು ಅರೆದು ಪುಡಿ ಮಾಡಿ ಸಮುದ್ರದಲ್ಲಿ ಬೆರೆಸಿದ್ದರು(ಭಾಗವತ೧೧/೧/೨೧,೨೨); ಅದೇ ಏರಕವೆಂಬ ಹುಲ್ಲಿನ ರೂಪದಲ್ಲಿ ಹುಟ್ಟಿತ್ತು.

೩) ಬ್ರಾಹ್ಮಣ ಶಾಪದಿಂದಾಗಿ ಅವುಗಳಿಗೆ ವಜ್ರಾಯುಧದಂತಹ ಶಕ್ತಿ ಒದಗಿ ಅದರ ಪೆಟ್ಟಿಗೆ ಅವರೆಲ್ಲ ಹತರಾಗಿ ಬೀಳತೊಡಗಿದರು.

೪) ಜೊತೆಗೆ ಸ್ವತಃ ಕೃಷ್ಣಬಲರಾಮರೂ ಅವುಗಳಿಂದ ಅವರನ್ನು ಹೊಡೆಯುತ್ತಾ ಸಂಹರಿಸಿದರು (ಭಾರತ ಮೌಸಲ. ೩/೩೬, ೩೭) :

ಏರಕಾನಾಂ ತತೋ ಮುಷ್ಟಿಂ ಕೋಪಾಜ್ಜಗ್ರಾಹ ಕೇಶವಃ ।
ತದಭೂನ್ಮುಸಲಂ ಘೋರಂ ವಜ್ರಕಲ್ಪಮಯೋಮಯಮ್ ॥
ಜಘಾನ ಕೃಷ್ಣಸ್ತಾಂಸ್ತೇನ ಯೇ ಯೇ ಪ್ರಮುಖತೋಽಭವನ್ ।
ತತೋಽಂಧಕಾಶ್ಚ ಭೋಜಾಶ್ಚ ಶೈನೇಯಾ ವೃಷ್ಣಯಸ್ತಥಾ ॥

೫) ಕೃಷ್ಣ ಹಾಗೆ ಮಾಡುವ ಮೂಲಕ ತಾನೇ ಲೋಕಗಳ ಪ್ರಳಯಕಾರಕನಾದ ನಾರಾಯಣ ಎಂಬುದನ್ನು ಸ್ಫುಟಪಡಿಸಿದ ಎಂದೂ ತಿಳಿಯಬಹುದು – 'ಜನ್ಮಾದ್ಯಸ್ಯ ಯತಃ'.

೬) ಆ ದೃಶ್ಯವನ್ನು ಕಂಡ ಬಲರಾಮ ಅವತಾರಕಾರ್ಯ ಪೂರೈಸಿತು ಎಂಬ ವಿಷಯವನ್ನು ಅರಿತು ತಾನು ಸ್ವಲ್ಪ ದೂರಕ್ಕೆ ತೆರಳಿ ಅಲ್ಲಿ ಯೋಗಶಕ್ತಿಯಿಂದ ದೇಹವನ್ನು ತೊರೆದು ಸರ್ಪದ ಆಕೃತಿಯನ್ನು ಹೊಂದಿ ಮೂಲರೂಪಕ್ಕೆ ತೆರಳಿದ.

೭) ಇಂದಿಗೂ ಪ್ರಭಾಸ ಕ್ಷೇತ್ರದಲ್ಲಿ ಬಲರಾಮ ಹಾಗೆ ಮೂಲರೂಪಕ್ಕೆ ತೆರಳಿದ ಸ್ಥಳ ಎಂದು ಗುಹೆಯೊಂದನ್ನು ತೋರಿಸುವರು.

ಪಾಂಡವರಿಗೆ ದಾರುಕನ ಮೂಲಕ ಸಂದೇಶ

ತತಃ ಪರೇಶೋಽಗಣಿತಾನುಭಾವಃ
ಸ್ವಸಾರಥಿಂ ಪಾಂಡವಾನಾಂ ಸಕಾಶಮ್ ।
ಸ್ವಲೋಕಯಾನಪ್ರತಿವೇದನಾಯ
ಸ್ವಸ್ಯಾನು ಚೈಷಾಂ ತ್ವರಯಾಽಭ್ಯಯಾತಯತ್ ॥ ೧೮ ॥

ಅ: ಬಳಿಕ ಸರ್ವೋತ್ತಮ ದೇವತೆಯೂ, ಅಪರಿಮಿತಸಾಮರ್ಥ್ಯಶಾಲಿಯೂ ಆದ ಶ್ರೀಕೃಷ್ಣ ತನ್ನ ಹಿಂದೆಯೇ ಅವರು ತಮ್ಮ ಲೋಕಕ್ಕೆ ತೆರಳಬೇಕು ಎಂದು ತಿಳಿಸಲೆಂದು ತನ್ನ ಸಾರಥಿಯನ್ನು ಪಾಂಡವರ ಬಳಿಗೆ ತ್ವರೆಯಿಂದ ಕಳುಹಿಸಿಕೊಟ್ಟ.

ವಿ: ಕೃಷ್ಣ ತನ್ನ ಸಾರಥಿಯಾದ ದಾರುಕನನ್ನು ಪಾಂಡವರಿಗೆ ಅವರ ಸ್ವರ್ಗಾರೋಹಣಕ್ಕೆ ಸೂಚನೆಯನ್ನಾಗಿ ಕಳುಹಿಸಿಕೊಟ್ಟ ಎಂದರ್ಥ.

ಜರಾ ಬೇಡನಿಂದ ಶರಪ್ರಯೋಗ

ಅಥಾಸತಃ ಪಿಪ್ಪಲಮೂಲ ಈಶಿತು-
ರೂರುಸ್ಥಿತಂ ಪಾದತಲಂ ಸುತಾಮ್ರಮ್ ।
ದೃಷ್ಟ್ವಾಽಽ ಜರಾ ನಾಮ ಸಸರ್ಜ ಶಲ್ಯಂ
ಭಕ್ತೋಽಪ್ಯಲಂ ರೋಹಿತಂ ಶಂಕಮಾನಃ ॥ ೧೯ ॥

ಅ: ಸರ್ವೇಶನಾದ ಕೃಷ್ಣ ಒಂದು ಅಶ್ವತ್ಥದ ಬುಡದಲ್ಲಿ ತನ್ನ ತೊಡೆಯ ಮೇಲೆ ತುಂಬಾ ಕೆಂಪಾಗಿದ್ದ ತನ್ನ ಅಂಗಾಲನ್ನು ಇರಿಸಿಕೊಂಡಿದ್ದನ್ನು ಕಂಡು ಸ್ವಭಾವತಃ ಶ್ರೇಷ್ಠ ಕೃಷ್ಣಭಕ್ತನೇ ಆಗಿದ್ದ

---

೧೮. ಸ್ವಲೋಕಯಾನೇತ್ಯತ್ರ ಸ್ವಸ್ಯ ಅನು ಏಷಾಂ ಪಾಂಡವಾನಾಮಪಿ ಸ್ವಲೋಕಯಾನಪ್ರತಿವೇದನಾಯ= ಬೋಧನಾಯೇತ್ಯರ್ಥಃ। –(ವಾ.)

೧೯. ಅಥಾಸತಃ ಪಿಪ್ಪಲಮೂಲ ಇತ್ಯತ್ರ ಆಸತಃ= ಉಪವಿಷ್ಟಸ್ಯ 'ಆಸ ಉಪವೇಶನ' ಇತಿ ಧಾತೋಃ ಶತ್ರಂತಸ್ಯ ರೂಪಮಿದಮ್। ರೋಹಿತಂ ಶಂಕಮಾನ ಇತ್ಯತ್ರ 'ಗೋಕರ್ಣಪೃಷತೈಣೈರ್ಶ್ಯರೋಹಿತಾ' ಇತ್ಯನುಶಾಸನಾತ್ ರೋಹಿತಃ ಮೃಗವಿಶೇಷಃ॥ –(ವಾ.)

೧೯. ರಾಮನಿರ್ಯಾಣಮಾಲೋಕ್ಯ ಭಗವಾನ್ ದೇವಕೀಸುತಃ।
ನಿಷಸಾದ ಧರೋಪಸ್ಥೇ ತೂಷ್ಣೀಮಾಸಾದ್ಯ ಪಿಪ್ಪಲಮ್ ॥
ಬಿಭ್ರಚ್ಚತುರ್ಭುಜಂ ರೂಪಂ ಭ್ರಾಜಿಷ್ಣುಪ್ರಭಯಾ ಸ್ವಯಾ।
ದಿಶೋ ವಿತಿಮಿರಾಃ ಕುರ್ವನ್ ವಿಧೂಮ ಇವ ಪಾವಕಃ॥

ಜರಾ ಎಂಬ ಒಬ್ಬ ಬೇಡನು ಅದನ್ನು ರೋಹಿತಮೃಗವೆಂದು ಶಂಕಿಸಿ ಬಾಣವನ್ನು ಪ್ರಯೋಗಿಸಿದ.

ವಿ: ೧) ಆ ಜರಾ ಬೇಡನು ಸಹ ವಸುದೇವಪುತ್ರನೇ ಎಂಬ ವಿಶೇಷಾಂಶ ಮಹಾಭಾರತ–ದಲ್ಲಿದೆ. ಎಂದರೆ ಅವನು ಸಂಬಂಧದಲ್ಲಿ ಕೃಷ್ಣನಿಗೆ ತಮ್ಮನೇ ಆಗಬೇಕಾದವನು. ಆದರೆ, ಅವನು ಶೂದ್ರಸ್ತ್ರೀಯಲ್ಲಿ ಜನಿಸಿ ನಿಷಾದ ಪ್ರಮುಖನೆನಿಸಿದ್ದ. ಉತ್ತಮ ಧನುರ್ಧಾರಿಯೂ ಆಗಿದ್ದ:

ಶೂದ್ರಾಯಾಮಭವದ್ವೀರೋ ವಸುದೇವಾನ್ಮಹಾಬಲಃ ।
ಜರಾ ನಾಮ ನಿಷಾದಾನಾಂ ಪ್ರಭುಃ ಸರ್ವಧನುಷ್ಮತಾಮ್ ॥

– (ತಿ. ಮತ್ತು ವಿ.ಗಳಲ್ಲಿ ಉದಾಹೃತ)

೨) ಅವನು ಪ್ರಯೋಗಿಸಿದ ಬಾಣದ ತುದಿ ಆ ವಿಪ್ರಶಾಪದಿಂದ ಹುಟ್ಟಿದ್ದ ಒನಕೆಯ ಕಬ್ಬಿಣದಿಂದಲೇ ತಯಾರಿಸಲ್ಪಟ್ಟಿತ್ತು. ವಿಪ್ರಶಾಪದ ಹಿರಿಮೆಯನ್ನು ಸಾರಲೆಂದು ಕೃಷ್ಣ ಹಾಗೆ ಯೋಜಿಸಿದ್ದ ಎಂದು ತಿಳಿಯಬೇಕು. ಇಂದಿಗೂ ಪ್ರಭಾಸದಲ್ಲಿ ಕೃಷ್ಣ ಹಾಗೆ ಕುಳಿತಿದ್ದನೆಂದು ಹೇಳಲಾಗುವ ಅಶ್ವತ್ಥವೃಕ್ಷದ ಬುಡವನ್ನು ತೋರಿಸುವರು. ಅಲ್ಲಿ ಅದಕ್ಕೆ ಸ್ಮಾರಕವಾಗಿ ಇಂದು ಕೆಲವು ವಿಗ್ರಹಗಳನ್ನೂ ಸಹ ಮಾಡಿಸಿಟ್ಟಿರುವರು.

ಬೇಡನಿಗೆ ಸದ್ಗತಿ ನೀಡಿದ ಕೃಷ್ಣ

ಅಚ್ಛೇದ್ಯಾಭೇದ್ಯದೇಹಸ್ಯ ಶಲ್ಯೇ ಪಾದಮುಪಸ್ಥಿತೇ ।
ಸಮೀಪಮಾಗತೋ ವ್ಯಾಧೋ ದೃಷ್ಟ್ವಾ ಭೀತೋऽಪತದ್ಭುವಿ ॥ ೨೦ ॥

---

೧೯. ಶ್ರೀವತ್ಸಾಂಕಂ ಘನಶ್ಯಾಮಂ ತಪ್ತಹಾಟಕವರ್ಚಸಮ್ ।
ಕೌಶೇಯಾಂಬರಯುಗ್ಮೇನ ಪರಿವೀತಂ ಸುಮಂಗಲಮ್ ॥
ಸುಂದರಸ್ಮಿತವಕ್ತ್ರಾಬ್ಜಂ ನೀಲಕುಂತಲಮಂಡಿತಮ್ ।
ಪುಂಡರೀಕಾಭಿರಾಮಾಕ್ಷಂ ಸ್ಫುರನ್ಮಕರಕುಂಡಲಮ್ ॥
ಕಟಿಸೂತ್ರಬ್ರಹ್ಮಸೂತ್ರಕಿರೀಟಕಟಕಾಂಗದೈಃ ।
ಹಾರನೂಪುರಮುದ್ರಾಭಿಃ ಕೌಸ್ತುಭೇನ ವಿರಾಜಿತಮ್ ।
ವನಮಾಲಾಪರೀತಾಂಗಂ ಮೂರ್ತಿಮದ್ಭಿರ್ನಿಜಾಯುಧೈಃ ।
ಕೃತ್ವೋರೌ ದಕ್ಷಿಣಂ ಪಾದಮಾಸೀನಂ ಪಂಕಜಾರುಣಮ್ ॥ - ಭಾಗವತ (೧೧/೩೦/೨೭-೨೮)

೧೯. ಮುಸಲಾವಯಶೇಷಾಯಃ ಖಂಡಕೃತೇಷುರ್ಲುಬ್ಧಕೋ ಜರಾ ।
ಮೃಗಸ್ಯಾಕಾರಂ ತಚ್ಚರಣಂ ವಿವ್ಯಾಧ ಮೃಗಶಂಕಯಾ ॥ - ಭಾಗವತ (೧೧/೩೦/೩೩)

೧೯. ಶಲ್ಯಂ ಸಾಂಬಗರ್ಭಜಾತಮುಸಲಶೇಷನಿರ್ಮಿತಬಾಣಂ ಸಸರ್ಜ । - (ಜ.)

೨೦. ಚತುರ್ಭುಜಂ ತಂ ಪುರುಷಂ ದೃಷ್ಟ್ವಾ ಸ ಕೃತಕಿಲ್ಬಿಷಃ ।
ಭೀತಃ ಪಪಾತ ಶಿರಸಾ ಪಾದಯೋರಸುರದ್ವಿಷಃ ॥ - ಭಾಗವತ (೧೧/೩೦/೩೪)

ಅ: ಕೃಷ್ಣನ ದೇಹ ಅಚ್ಛೇದ್ಯವೂ, ಅಭೇದ್ಯವೂ ಆದುದು. ಆ ಬಾಣ ಅವನ ಪಾದಕ್ಕೆ ಬೀಳುತ್ತಲೇ ಸಮೀಪಕ್ಕೆ ಬಂದ ಆ ಬೇಡ ಅದನ್ನು ನೋಡಿ ಭಯಪಟ್ಟು ನೆಲದ ಮೇಲೆ ಬಿದ್ದ.

ವಿ: ತಾನು ಬಾಣ ಪ್ರಯೋಗಿಸಿದ್ದು ಮೃಗಕ್ಕಲ್ಲದೆ ಕೃಷ್ಣನ ಪಾದಕ್ಕೆಂದು ತಿಳಿದ ಆ ಬೇಡ ಅದಕ್ಕಾಗಿ ಪರಿಪರಿಯಾಗಿ ವಿಲಾಪ ಮಾಡುತ್ತಾ ಭೂಮಿಯ ಮೇಲೆ ಬಿದ್ದು ಹೊರಳಿದ ಎಂಬ ವಿವರ ಭಾಗವತದಲ್ಲಿದೆ.

ವಿಪ್ರವಾಕ್ಯಂ ಮಾನಯಾನಃ ಕಾರಯಿತ್ವಾನಮುನಾ ಹರಿಃ ।
ಪಾಪಂ ಮಾಂ ಜಹಿ ದೇವೇತಿ ಯಾಚಂತಮನಯದ್ದಿವಮ್ ॥ ೨೧ ॥

ಅ: ವಿಪ್ರವಾಕ್ಯವನ್ನು ಗೌರವಿಸಲೆಂದು ಕೃಷ್ಣ ಅವನಿಂದ ಹಾಗೆ ಮಾಡಿಸಿದ. ''ಪಾಪಿಯಾದ ನನ್ನನ್ನು ಎಲೈ ದೇವನಾದ ಕೃಷ್ಣನೆ! ಕೊಲ್ಲು'' ಎಂದು ಬೇಡತೊಡಗಿದ ಅವನನ್ನು ಕೃಷ್ಣ ಸ್ವರ್ಗಕ್ಕೆ ಕಳುಹಿಸಿದ.

ವಿ: ೧) ಜರಾ ವ್ಯಾಧನು ತನ್ನ ತಪ್ಪಿಗಾಗಿ ಮರುಗುತ್ತಾ ಅದಕ್ಕಾಗಿ ತನ್ನನ್ನೇ ಕೊಲ್ಲಲು ಕೃಷ್ಣನನ್ನು ಕೇಳಿಕೊಂಡ, ಕೃಷ್ಣ ಅವನನ್ನು ಸಮಾಧಾನಪಡಿಸಿ ಅದರಿಂದ ಯಾವ ಪಾಪವೂ ಅವನಿಗೆ ಒದಗಿಲ್ಲವೆಂದು ತಿಳಿಸಿ, ಆಗಲೇ ಸ್ವರ್ಗದಿಂದ ವಿಮಾನ ತರಿಸಿ, ಅದರ ಮೂಲಕ ಸ್ವರ್ಗಕ್ಕೆ ಕಳುಹಿಸಿದ.

೨) ಹಾಗೆ ಸಶರೀರನಾಗಿ ತನ್ನ ಭಕ್ತನನ್ನೇ ಸ್ವರ್ಗಕ್ಕೆ ಕಳುಹಿಸುವ ತಾನು ಸರ್ವಥಾ ದೇಹವನ್ನು ತೊರೆಯುವವನಲ್ಲವೆಂಬುದನ್ನು ಸಹ ಲೋಕಕ್ಕೆ ತಿಳಿಸಿಕೊಟ್ಟ ಎಂದು ತಿಳಿಯಬೇಕು.

ಬೇಡನಾಗಿ ಬಂದಿದ್ದ ಭೃಗು

ಪಾದಪ್ರಹಾರದೋಷೇಣ ತಂ ಭೃಗುಂ ವ್ಯಾಧತಾಂ ಗತಮ್ ।
ಪಶ್ಚಾತ್ತಾಪೇನ ಭಕ್ತ್ಯಾ ಚ ಸುಪ್ರೀತಸ್ತಚ್ಛರೀರಿಣಮ್ ।
ಸಾಜ್ಞಾಪ್ರಾಪ್ತವಿಮಾನೇನ ದಿವಂ ನಿನ್ಯೇ ಜನಾರ್ದನಃ ॥ ೨೨ ॥

---

೨೧. ವಿಪ್ರವಾಕ್ಯಂ ಮಾನಯಾನ ಇತ್ಯತ್ರ ಸಾಂಬಗರ್ಭಮುಸಲಂ ಯದೂನಾಂ ನಾಶಾಯ ಭವತೀತಿ ಗರ್ಗಾಖ್ಯ-ವಿಪ್ರವಾಕ್ಯಮ್ । ಕೃಷ್ಣಪಾದೇ ಪತಿತಶರಸ್ಯಾಪಿ ಸಮುದ್ರೇ ಸ್ಥಿತಮೀನಗ್ರಸ್ತಮುಸಲಶೇಷಾಯಃಕೃತತ್ವಾದಿತಿ ಶೇಷಃ । -(ವಾ.)

೨೧. ತಮಾಶು ಜಹಿ ವೈಕುಂಠ ಪಾಪ್ಮಾನಂ ಮೃಗಲುಬ್ಧಕಮ್ ।
ಯಥಾ ಪುನರಹಂ ತ್ವೇವಂ ನ ಕುರ್ಯಾಂ ಸದತಿಕ್ರಮಮ್ ॥ - ಭಾಗವತ (೧೧/೩೦/೩೭)

೨೨. ಅಲ್ಪದೋಷಸ್ಯ ಪಶ್ಚಾತ್ತಾಪೇನ ಪರಿಹೃತತ್ವಾದಿತಿ ಭಾವಃ । – (ವ.)

ಅ: ತನ್ನನ್ನು ಕಾಲಿನಿಂದ ಒದ್ದ ಪಾಪದಿಂದಾಗಿ ಭೃಗುಮುನಿ ಹಾಗೆ ಬೇಡನಾಗಿ ಜನಿಸಿದ್ದ. ಶ್ರೀಕೃಷ್ಣ ಅವನ ಪಶ್ಚಾತ್ತಾಪಕ್ಕೂ, ಭಕ್ತಿಗೂ ಸುಪ್ರೀತನಾಗಿ ಅವನನ್ನು ಆ ಶರೀರದಿಂದಲೇ ತನ್ನ ಆಜ್ಞೆಯಂತೆ ಆಗಮಿಸಿದ ವಿಮಾನದಲ್ಲಿ ಸ್ವರ್ಗಕ್ಕೆ ಕಳುಹಿಸಿದ.

ಎ: ೧) ತ್ರಿಮೂರ್ತಿಗಳಲ್ಲಿ ಸರ್ವೋತ್ತಮನನ್ನು ತಿಳಿಯಲೆಂದು ಭೃಗುಮುನಿ ವೈಕುಂಠಕ್ಕೆ ತೆರಳಿ ಅಲ್ಲಿ ಶ್ರೀಹರಿಯನ್ನು ತನ್ನ ಕಾಲಿನಿಂದ ಎದೆಗೆ ಒದ್ದ ಕಥೆ ಭಾಗವತ, ಪದ್ಮಪುರಾಣ, ಭವಿಷ್ಯೋತ್ತರಪುರಾಣ ಮೊದಲಾದವುಗಳಲ್ಲಿ ಪ್ರಸಿದ್ಧವಾದುದು.

೨) ಹಾಗೆ ಶ್ರೀಹರಿಯನ್ನು ಹೊಡೆದಿದ್ದ ಪಾಪದಿಂದಾಗಿ ಭೃಗುಮುನಿ ಜರಾನಾಮಕ ಬೇಡನಾಗಿ ಜನಿಸಿದ್ದ. ಅವನ ಪ್ರಾರಬ್ಧ ಪೂರೈಸಿ, ಅವನಿಂದು ಕೃಷ್ಣನಿಂದ ಉದ್ಧೃತನಾದ.

೩) ಎದೆಗೆ ಪಾದದಿಂದ ಹೊಡೆದಿದ್ದ ಅವನು ಇಂದು ಪಾದಕ್ಕೆ ಬಾಣದಿಂದ ಹೊಡೆದದ್ದು ವಿಶೇಷ. ಹರಿಪಾದವೆಂದರೆ ಹರಿಸ್ವರೂಪ ಎಂದರ್ಥ :

ಉತ್ತಮಾನಾಂ ಸ್ವರೂಪಂ ತು ಪಾದಶಬ್ದೇನ ಭಣ್ಯತೇ ।

ಹಾಗೆ ಬಾಣ ಹೊಡೆಯುವುದು ಜಿಜ್ಞಾಸೆಯ ಸಂಕೇತ (**'ಪ್ರಣವೋ ಧನುಃ ಶರೋ ಹ್ಯಾತ್ಮಾ ಬ್ರಹ್ಮ ತಲ್ಲಕ್ಷ್ಯಮುಚ್ಯತೇ'**). ಅಂತಹ ಜಿಜ್ಞಾಸೆಯಿಂದಲೇ ಬ್ರಹ್ಮಜ್ಞಾನದ ಪ್ರಾಪ್ತಿ ಎಂಬ ತತ್ವ ಅಥರ್ವಣೋಪನಿಷತ್ತಿನಲ್ಲಿ ನಿರೂಪಿತವಾಗಿದೆ. ಹೀಗೆ ಪ್ರತಿಯೊಬ್ಬ ಸಾಧಕನೂ ಶ್ರೀಹರಿಯನ್ನು ಚಿಂತಿಸಿದಾಗ ಜ್ಞಾನದ್ವಾರಾ ಮುಕ್ತನಾಗುವನು ಎಂಬುದು ಅಲ್ಲಿಯ ಸಂದೇಶ. ಇದು ಅದಕ್ಕೆ ಅಪೂರ್ವ ನಿದರ್ಶನ.

ನೀಚಾಂ ಯೋನಿಂ ನೀಚನೀಚಕರ್ಮಾಪ್ತಂ ನೀಚಕರ್ಮತಃ ।
ಅದುಷ್ಟತ್ವಾತ್ ತು ಮನಸೋ ಭಕ್ತಿಲೋಪೋ ನ ಚಾಪ್ಯಭೂತ್ ।
ಭೃಗೋರತ್ರಾಬುದ್ಧಿಪೂರ್ವಂ ನಾತಿದೋಷಕೃದಪ್ಯಭೂತ್ ॥ ೨೩ ॥

ಅ: ತುಂಬಾ ನೀಚಕರ್ಮದಿಂದಾಗಿ ನೀಚಯೋನಿಯನ್ನು ಹೊಂದಿ ನೀಚಕ್ಕಿಂತ ನೀಚವಾದ ಕರ್ಮವನ್ನು ಮಾಡಿದ್ದ ಅವನನ್ನು ಕೃಷ್ಣ ಉದ್ಧರಿಸಿದ. ಮನಸ್ಸು ನಿರ್ಮಲವಾದದ್ದರಿಂದ ಆ

---

೨೨. ತತಾಡೋರಸಿ ಗೋವಿಂದಂ ಭೃಗುಃ ಪಾದತಲೇನ ತಮ್ ॥
- ಭವಿಷ್ಯೋತ್ತರ ಪುರಾಣ (ವೇಂಕಟೇಶಮಾಹಾತ್ಮ್ಯ ೨/೨೪)

೨೩. ಇತ್ಯಾದಿಷ್ಟೋ ಭಗವತಾ ಕೃಷ್ಣೇನೇಚ್ಛಾಶರೀರಿಣಾ ।
ತ್ರಿಃ ಪರಿಕ್ರಮ್ಯ ತಂ ನತ್ವಾ ವಿಮಾನೇನ ದಿವಂ ಯಯೌ ॥ - ಭಾಗವತ (೧೧/೩೧/೪೦)

ಭೃಗುಮುನಿಗೆ ಭಕ್ತಿಲೋಪವೂ ಸಹ ಆಗಲಿಲ್ಲ. ತಿಳಿಯದೇ ಬಾಣ ಪ್ರಯೋಗಿಸಿದ್ದರಿಂದ ಅದು ಅವನಿಗೆ ಹೆಚ್ಚು ಪಾಪಕರವೂ ಆಗಲಿಲ್ಲ.

ವಿ: ೧) ಭೃಗುಮುನಿ ಶ್ರೀಹರಿಯ ಎದೆಗೆ ಒದ್ದಾಗ ದ್ವೇಷಭಾವವೇನೂ ಇರದೇ ಅವನ ಸರ್ವೋತ್ತಮತ್ವವನ್ನು ಸಾಧಿಸುವ ಛಲವೇ ಇದ್ದುದರಿಂದ ಅವನ ಆ ಕಾರ್ಯ ಮಹತ್ತರವಾದ ಪಾಪಕಾರ್ಯವಾಗಲಿಲ್ಲ. ಅದರಿಂದಾಗಿಯೇ ಜರಾನಾಮಕ ಬೇಡನಾಗಿದ್ದಾಗಲೂ ಅವನಲ್ಲಿ ಭಕ್ತಿ ಲೋಪವಾಗಿರಲಿಲ್ಲ.

೨) ಬೇಡನಾಗಿದ್ದಾಗ ತಿಳಿಯದೇ ಬಾಣ ಪ್ರಯೋಗಿಸಿದ್ದರಿಂದ ಅದೂ ಸಹ ಅಷ್ಟು ದೊಡ್ಡ ದೋಷವಾಗಲಿಲ್ಲ. ಹೀಗೆ ಭೃಗುಮುನಿಯ ಆ ಪ್ರಸಂಗ ಒಂದು ವಿಚಿತ್ರಪ್ರಸಂಗವಾಗಿರುವುದನ್ನು

೨೩.. ನೀಚಾ ಯೋನಿಃ । ಕರ್ಮ ಚ ಪ್ರಾಪ್ತಂ ಭೃಗುಣೇತಿ ಶೇಷಃ । – (ವೇ.)

೨೫.. ನೀಚಾಂ ಯೋನಿಂ ನೀಚನೀಚಕರ್ಮಾಪ್ತಮಿತ್ಯತ್ರ ನೀಚಕರ್ಮತಃ= ಕೃಷ್ಣವಕ್ಷಸ್ತಾಡನಾಖ್ಯನೀಚಕರ್ಮತಃ ನೀಚಾಂ ಯೋನಿಂ= ವ್ಯಾಧಯೋನಿಮ್। ನೀಚನೀಚಕರ್ಮ = ಕೃಷ್ಣಪಾದೇ ಶರತಾಡನಾಖ್ಯಾತ್ಯಂತನೀಚಕರ್ಮ ಚ ಆಪ್ತಂ= ಭೃಗುಮ್ । ಕರ್ತರಿ ಕ್ತಃ। ದಿವಂ ನಿನ್ಯ ಇತಿ ಪೂರ್ವೇಣಾನ್ವಯಃ। ಪದಾ ವಕ್ಷಸ್ತಾಡನಾದಪಿ ಶರೇಣ ಕೃಷ್ಣಪಾದತಾಡನಸ್ಯಾತ್ಯುಗ್ರತ್ವಾತ್ ನೀಚನೀಚೀತ್ಯುಕ್ತಮ್। ಸರ್ವೋತ್ತಮತ್ವಶೋಧನಾರ್ಥಂ ವಕ್ಷಸ್ತಾಡನಾತ್ ನಾತಿಪಾಪಮಿತಿ ಸೂಚನಾರ್ಥಂ ನೀಚೇತ್ಯೇವೋಕ್ತಮ್ । – (ವಾ.)

೨೫.. ನೀಚಪ್ರಾರಬ್ಧಕರ್ಮತ ಇತ್ಯರ್ಥಃ । ಟೀಕಾಯಾಂ ನೀಚಾಂ ಯೋನಿಂ ಪ್ರಾಪ್ತಂ ತಥಾ ನೀಚಕರ್ಮತಃ ಪಾದಪ್ರಹಾರಾಖ್ಯಕರ್ಮತಃ ನೀಚನೀಚಂ ಮೃಗಪಕ್ಷಿವಧಾದಿಕರ್ಮ ಚ ಪ್ರಾಪ್ತಮಿತ್ಯರ್ಥಃ । ಉಕ್ತಃ ಯತೋ ನ ದರ್ಶಿತೇತಿ । ವೃಷಭಾವತಾರೇ ऽಪಿ ದಾವಾಗ್ನಿಪ್ರವೇಶಮಾತ್ರಸ್ಯೈವ ದರ್ಶಿತತ್ವಾದಿತಿ ಭಾವಃ। – (ತಾ.)

೨೫.. ಏತದೇವ ಸ್ಪಷ್ಟಯತಿ ಅದುಷ್ಟತ್ವಾತ್ತ್ವಿತಿ। ತು = ಉಕ್ತಕಾರ್ಯವಿಶೇಷಾರ್ಥಂ ಕೃತತ್ವೇನ ಮನಸೋ ऽದುಷ್ಟತ್ವಾದಿತ್ಯರ್ಥಃ। ತರ್ಹಿ ಇದಾನೀಂತನಾತಿನೀಚಕರ್ಮಣಾ ತಮಃ ಪ್ರಾಪ್ತಿಃ ಕುತೋ ನಾಭೂದಿತ್ಯತ ಉಕ್ತಂ ಅತ್ರೇತಿ। ಅತ್ರ= ಕೃಷ್ಣಾವತಾರೇ ಅಬುದ್ಧಿಪೂರ್ವಂ ಕೃತಂ ಶರತಾಡನಂ ನೀಚನೀಚಮಪಿ। ಅಬುದ್ಧಿಪೂರ್ವಮಿ-ತ್ಯುಪಲಕ್ಷಣಮ್। ಪಶ್ಚಾತ್ತಾಪೇನ ಪಾಪಂ ಮಾಂ ಜಹೀತಿ ಪಾದೇ ಪ್ರಣಾಮಸಹಿತಂ ಚೇತ್ಯಪಿ ದ್ರಷ್ಟವ್ಯಮ್। ಅತಿದೋಷಕೃತ್ = ತಮಃಪ್ರಾಪಕಸ್ಥೂಲದೋಷಕೃತ್। ಅಪಿಪದೇನ ಭಕ್ತರೂಪಮಹಾಪ್ರಾಯಶ್ಚಿತ್ತಕರಣಾತ್ ಕೃಷ್ಣಚರಣಸ್ಯೇಷದಪಿ ವೇಧಾಭಾವೇನ ಸುವರ್ಣಪುಷ್ಪಪೂಜಾವತ್ ಅಯೋಮಯಪುಷ್ಪಪೂಜೋಪಮತ್ವೇನ ಈಷದಪಿ ದೋಷೋ ನಾಸ್ತೀತಿ ಸೂಚಿತಮ್। ಅನ್ಯಥಾ ತೇನೈವ ಶರೀರೇಣ ಸ್ವರ್ಗಾರೋಹಣಾಯೋಗಾತ್ – (ವಾ.)

೨೫.. ನೀಚಾಂ ಯೋನಿಂ ನೀಚನೀಚೇತಿ ಪಾಠೇ ... । – (ಜ.)

೨೫.. ಯಥಾ ಕುಶಸ್ತಾಧ್ಯಸನಂ ಮುರದ್ವಿಷಃ ಪದಾಂಬುಜೇ ವ್ಯಾಧವರಸ್ಯ ಗರ್ಹಿತಮ್ ॥ – ಸು.ವಿ. (೪/೮)

೨೫.. ವ್ಯಾಧಸ್ಯ ತದ್ದೇಹೇನೈವ ಸ್ವರ್ಗದಾನಂ ವ್ಯಾಧೋ ऽಪಿ ಏತದ್ದೇಹೇನೈವ ಮದನುಗ್ರಹೇಣೈವ ಸ್ವರ್ಗಂ ಗತಃ ಕಿಮ್ವಹಮಿತಿ ಕೈಮುತ್ಯ ದ್ಯೋತನಾರ್ಥಮ್ । ದಿವಂ ನಿನ್ಯೇ । ತತ್ರ ಚಾಕಾಶಗಂಗಾಯಾಂ ದೇಹಂ ತ್ಯಕ್ತ್ವಾ ಸ್ವರ್ಗಂ ಗತಃ । ಧರ್ಮಜವತ್ । - ಪ್ರಮಾಣಸಂಗ್ರಹ

ಗಮನಿಸಬೇಕು. ಶ್ರೀಕೃಷ್ಣನ ದೇಹ ಜ್ಞಾನಾನಂದಮಯ; ಅದರಂತೆ ಅವನಿಂದ ಅಭಿನ್ನವಾದ ಪಾದವೂ ಸಹ ಅಚ್ಛೇದ್ಯ, ಅಭೇದ್ಯ. ಬೇಡ ಬಾಣ ಪ್ರಯೋಗಿಸಿದರೂ ಅದಕ್ಕೆ ಯಾವುದೇ ಹಾನಿಯೂ ಸರ್ವಥಾ ಆಗಲು ಸಾಧ್ಯವಿರಲಿಲ್ಲ.

೩) ಕೃಷ್ಣನ ಪಾದವೆಂದರೆ ವಿಷ್ಣುಪಾದ ಎಂದರ್ಥ. ವಿಷ್ಣುಪಾದ ಎಂದರೆ ಆಕಾಶ ಎಂದೂ ಆಗುವುದು. ಆಕಾಶಕ್ಕೆ ಬಾಣ ಪ್ರಯೋಗಿಸಿದಾಗ ಅದಕ್ಕೆ ವಿಕಾರ ಒದಗಲು ಸಾಧ್ಯವೇ? ಅದರಂತೆ ಮುಖ್ಯವಾಗಿ ವಿಷ್ಣುಪಾದಕ್ಕೆ ಆ ಬೇಡನ ಬಾಣದಿಂದ ಏನಾದೀತು! ಎಂಬ ವಿಶೇಷಾರ್ಥವನ್ನು ಗಮನಿಸಬೇಕು.

೪) ಹಾಗೆ ಸ್ವರ್ಗಕ್ಕೆ ತೆರಳಿದ ಬೇಡ ಅಲ್ಲಿ ಧರ್ಮರಾಜನಂತೆ ಅವನೂ ಆಕಾಶಗಂಗೆಯಲ್ಲಿ ದೇಹ ತೊರೆದ ಎಂಬ ವಿಶೇಷಾಂಶ ಪ್ರಮಾಣಸಂಗ್ರಹದಲ್ಲಿದೆ. ಇದರಿಂದ ಮನುಷ್ಯರೂಪದಲ್ಲಿ ಜನಿಸಿದ ದೇವತೆಗಳು ಸಹ ಆ ದೇಹವನ್ನು ತೊರೆಯದೆ ಮೂಲರೂಪವನ್ನು ಹೊಂದುವುದು ಸರ್ವಥಾ ಅಸಾಧ್ಯ ಎಂಬ ವಿಶೇಷಪ್ರಮೇಯ ಸ್ಫುಟಪಡುವುದು.

ಶ್ರೀಕೃಷ್ಣನ ಪರಂಧಾಮಗಮನ ವೈಭವ

ತತೋ ವಿರಿಂಚೇಶಪುರಂದರಾದ್ಯಾಃ
ಪುನಃ ಸ್ತುವಂತೋಽಭಿಯಯುಃ ಪ್ರಣಮ್ಯ ।
ಕೃಷ್ಣಂ ಸ ಚಾಶ್ವೇವ ಯಯೌ ಸ್ವಲೋಕಂ
ಸ್ವತೇಜಸಾ ಸರ್ವಮಿದಂ ಪ್ರಕಾಶಯನ್ ॥ ೨೪ ॥

ಅ: ಬಳಿಕ ಬ್ರಹ್ಮ, ಶಿವ, ಇಂದ್ರ ಮೊದಲಾದವರು ಪುನಃ ಸ್ತುತಿಸುತ್ತಾ ಕೃಷ್ಣನ ಬಳಿಗೆ ಬಂದು ನಮಸ್ಕರಿಸಿ ಹಿಂಬಾಲಿಸಿದರು. ಕೃಷ್ಣ ತನ್ನ ಕಾಂತಿಯಿಂದ ಇದೆಲ್ಲವನ್ನೂ ಬೆಳಗುತ್ತಾ ಬೇಗನೆ ತನ್ನ ಲೋಕಕ್ಕೆ ತೆರಳಿದನು.

ಭೂಲೋಕದಲ್ಲಿ ಕೃಷ್ಣರೂಪ - ಸೂರ್ಯಮಂಡಲದಲ್ಲಿ ಮತ್ತೊಂದು ರೂಪ

ಗೋಪಾಲಮಂತ್ರಂ ಭಜತಾಂ ಫಲಪ್ರದೋ
ಹ್ಯೇಕೇನ ರೂಪೇಣ ಸ ಭುವ್ಯದೃಶ್ಯಃ ।
ತಸ್ಥೌ ದ್ವಿತೀಯೇನ ಚ ಸೂರ್ಯಮಂಡಲೇ
ತೃತೀಯಮಾಸೀಚ್ಛವಪೂಜಿತಂ ವಪುಃ ॥ ೨೫ ॥

ಅ: ಕೃಷ್ಣಮಂತ್ರವನ್ನು ಭಜಿಸುವವರಿಗೆ ಫಲ ನೀಡುವವನಾಗಿ ಅವನು ಒಂದು ರೂಪದಿಂದ ಭೂಮಿಯಲ್ಲಿ ಅದೃಶ್ಯನಾಗಿ ನೆಲೆಸಿದ. ಎರಡನೆಯ ರೂಪದಿಂದ ಸೂರ್ಯಮಂಡಲದಲ್ಲಿ ನೆಲೆಸಿದ. ಮೂರನೆಯ ರೂಪ ಶಿವನಿಂದ ಪೂಜಿತವಾಗಿ ನೆಲೆಸಿತು.

ವಿ: ೧) ಇಲ್ಲಿ 'ಗೋಪಾಲಮಂತ್ರ' ಎಂದರೆ ಗೋಪಾಲಕೃಷ್ಣಮಂತ್ರ, ಶ್ರೀಕೃಷ್ಣಮಂತ್ರ ಎಂದರ್ಥ. ಕೃಷ್ಣಮಂತ್ರ ನಾರಾಯಣಮಂತ್ರದಂತೆ ಅವಶ್ಯ ನಿತ್ಯ ಜಪಿಸಲೇಬೇಕಾದ ಮಂತ್ರ. ಸ್ತ್ರೀಯರಿಗಂತೂ ಗುರುಮಂತ್ರವೆಂದರೆ ಇದೇ.

೨) ಶ್ರೀಮದಾಚಾರ್ಯರು ಶ್ರೀಮದ್ಭಾಗವತತಾತ್ಪರ್ಯನಿರ್ಣಯದಲ್ಲಿ ತಿಳಿಸಿರುವಂತೆ ಆಯಾ ಯುಗದ ರೂಪಗಳು ಹಾಗೂ ಹಿಂದಿನ ಯುಗದ ರೂಪಗಳು ವಿಶೇಷವಾಗಿ ವಿಘ್ನ-ಪರಿಹಾರಕವಾಗಿ ಸಿದ್ಧಿಪ್ರದಗಳು. ಆದರಿಂದಾಗಿಯೇ ಅವುಗಳ ಉಪಾಸನೆ ಶಾಸ್ತ್ರಗಳಲ್ಲಿ ವಿಶೇಷವಾಗಿ ವಿಹಿತವಾಗಿದೆ :

'ಧ್ರುವಂ ತಯೈವ ಮುಚ್ಯಂತೇ ಯಾಂ ಮೂರ್ತಿಂ ಪ್ರದಿಶೇದ್ಗುರುಃ ।
ಶಿಷ್ಯಾಣಾಂ ಯೋಗ್ಯತಾऽಭಜ್ಞೋ ವಿಘ್ನಹಾನಿಸ್ತು ತದ್ಯುಗೇ।
ಅವತೀರ್ಣಹರೇರ್ಮೂರ್ತ್ಯಾ ತತ್ಪೂರ್ವಯುಗಜೀನ ಚ।
ನೃಸಿಂಹಮೂರ್ತ್ಯಾ ಚ ತಥಾ ಯಾಂ ಚಾನ್ಯಾಂ ಪ್ರದಿಶೇದ್ಗುರುಃ' ಇತಿ ಸ್ವಾಭಾವ್ಯೇ ॥
– ಭಾ.ತಾ. (೧೧/೫/೩೫)

೩) ಕೃಷ್ಣಜಯಂತೀ ಆಚರಣೆಯೂ ಸಹ ಈ ಹಿನ್ನೆಲೆಯಲ್ಲೇ ಇತರ ಅವತಾರಗಳ ಜಯಂತಿಗಳಿಗಿಂತ ವಿಶೇಷವಾಗಿ ವಿಹಿತವಾಗಿದೆ.

ಸರ್ವಾಸಾಂ ತು ಜಯಂತೀನಾಂ ಶ್ರೇಷ್ಠಾ ಕೃಷ್ಣಾಷ್ಟಮೀ ಮತಾ ।
ಯಸ್ಯಾತ್ಸನ್ನಿಹಿತಾऽತ್ಯಂತಂ ತತ್ಕೈವೋಪವಸೇನ್ನರಃ ॥
ಸರ್ವಾಸ್ವಪಿ ಜಯಂತೀಷು ಪೂಜಾ ಕಾರ್ಯಾ ವಿಶೇಷತಃ ।
ಸಾನ್ನಿಧ್ಯ ಏವ ಕರ್ತವ್ಯಃ ಉಪವಾಸೋ ನ ದೂರಗಃ ॥ – ಭಾರದ್ವಾಜಸಂಹಿತಾ

೪) 'ಕೃಷ್ಣವರ್ಣಂ ಕಲೌ ಕೃಷ್ಣಂ' ಎಂಬ ಮಾತು ಶ್ರೀಮದ್ಭಾಗವತದಲ್ಲಿದೆ(೧೧/೫/೩೨).

೫) ಕೃಷ್ಣಾವತಾರ ಕಲಿಯುಗದಲ್ಲಿ ವ್ಯಕ್ತವಾದ ಅವತಾರವಲ್ಲವಾದರೂ, ಕಲಿಯುಗದಲ್ಲೂ ಮೂವತ್ತಾರು ವರ್ಷಗಳ ಕಾಲ ದೃಗ್ಗೋಚರವಾಗಿದ್ದ ವಿಶೇಷರೂಪ ಎಂಬುದನ್ನು ಗಮನಿಸಬೇಕು.

---

೨೪. ಬ್ರಹ್ಮರುದ್ರಾದಯಸ್ತೇ ತು ದೃಷ್ಟ್ವಾ ಯೋಗಗತಿಂ ಹರೇಃ ।
ವಿಸ್ಮಿತಾಸ್ತಂ ಪ್ರಶಂಸಂತಃ ಸ್ವಂ ಸ್ವಂ ಲೋಕಂ ಯಯುಸ್ತದಾ ॥ - ಭಾಗವತೇ (೧೧/೩೧/೧೦)

೨೫. ಗೋಪಾಲಮಂತ್ರಂ ಭಜತಾಂ ಉಪಾಸಕಾನಾಂ ತು ಕಲೌ ಸರ್ವವೈಷ್ಣವಮಂತ್ರಾಪೇಕ್ಷಯಾ ... । - (ಜ.)

ಹೀಗಾಗಿ ಆ ರೂಪದ ಮಂತ್ರವನ್ನು ಜಪಿಸುವವರಿಗೆ ವಿಶೇಷವಾಗಿ ಫಲ ನೀಡಲೆಂದು ಕೃಷ್ಣ ಒಂದು ರೂಪದಿಂದ ಭೂಲೋಕದಲ್ಲಿಯೇ ನೆಲೆಸಿದ ಎಂದರ್ಥ.

ಬ್ರಹ್ಮಲೋಕದಲ್ಲಿ ನಾಲ್ಕನೆಯ ರೂಪ

ಸಂಪೂಜಿತಂ ಬ್ರಹ್ಮಲೋಕೇ ಚತುರ್ಥಂ
ಕಂಜೋದ್ಭವೇನಾಥ ಪರಂ ಸ್ವಧಾಮ ।
ಸಮಾಪ್ನುವಾನಂ ವಪುರಸ್ಯ ಪಂಚಮಂ
ಭಕ್ತ್ಯಾಽನ್ವಯುರ್ದೇವವರಾಃ ಸ್ವಶಕ್ತ್ಯಾ ॥ ೨೬ ॥

ಅ: ನಾಲ್ಕನೆಯ ರೂಪ ಬ್ರಹ್ಮಲೋಕದಲ್ಲಿ(ಬ್ರಹ್ಮನಿಂದ ವಿಶೇಷವಾಗಿ ಪೂಜಿತವಾಗಿ) ನೆಲೆಸಿತು. ಬಳಿಕ ಶ್ರೇಷ್ಠವಾದ ತನ್ನ ಮೂಲರೂಪವನ್ನು ಸೇರುತ್ತಿದ್ದ ಶ್ರೀಕೃಷ್ಣನ ಐದನೆಯ ರೂಪವನ್ನು ದೇವಶ್ರೇಷ್ಠರುಗಳು ಭಕ್ತಿಯಿಂದ ತಮ್ಮ ಶಕ್ತಿಗನುಸಾರವಾಗಿ ಹಿಂಬಾಲಿಸಿದರು.

ವಿ: ಲೋಕಗಳಲ್ಲಿ ತಾರತಮ್ಯವಿರುವಂತೆ, ಪರಂಧಾಮಕ್ಕೆ ತೆರಳಿದ ಶ್ರೀಕೃಷ್ಣರೂಪವನ್ನು ಹಿಂಬಾಲಿಸಿ ನಡೆದ ದೇವತೆಗಳಲ್ಲೂ ತಾರತಮ್ಯವಿರುವುದನ್ನೂ ಇಲ್ಲಿ 'ಸ್ವಶಕ್ತ್ಯಾ' ಎಂಬ ಪದದಿಂದ ತಿಳಿಸಿರುವರು ಎಂದು ತಿಳಿಯಬೇಕು.

ತತ್ತೇಜಸಾ ತೇ ಪ್ರತಿಮುಷ್ಟದೃಷ್ಟಯಃ
ಪುರುಷ್ಟುತಾದ್ಯಾ ಅಮಿತೋರುದೀಧಿತೇಃ ।
ಯಾವತ್ ಸ್ವಗಮ್ಯಂ ತ್ವನುಗಮ್ಯ ತಸ್ಥು-
ರ್ನಿಮೀಲಿತಾಕ್ಷಾ ವಿಹತೋರ್ಧ್ವಚಾರಾಃ ॥ ೨೭ ॥

ಅ: ಅಪರಿಮಿತ ಮಹಾಪ್ರಕಾಶದಿಂದ ಕೂಡಿದ ಶ್ರೀಕೃಷ್ಣನ ಐದನೆಯ ರೂಪದ ಕಾಂತಿಯಿಂದ ಇಂದ್ರಾದಿದೇವತೆಗಳಿಗೆ ದೃಷ್ಟಿ ಮಂಕಾಯಿತು. ತಮ್ಮಿಂದ ಎಷ್ಟು ದೂರ ಹಿಂಬಾಲಿಸಲು ಸಾಧ್ಯವೋ, ಅಷ್ಟು ದೂರ ಅನುಸರಿಸಿ ಕಣ್ಣು ಮುಚ್ಚಿದವರಾಗಿ, ಮೇಲೆ ಹೋಗಲಾಗದೆ ನಿಂತುಬಿಟ್ಟರು.

---

೨೭. ಪುರುಷ್ಟುತಾದ್ಯಾ ಇತ್ಯತ್ರ ಪುರುಷ್ಟುತಃ = ಇಂದ್ರಃ। ''ಬ್ರಹ್ಮೈನಂ ಪಶ್ಯತಿ ಸ್ಫುಟಮ್'' ಇತಿ ವಚನಾತ್ ಸದಾ ಸ್ಪಷ್ಟದ್ರಷ್ಟುರ್ಬ್ರಹ್ಮಣಃ ಬಹುತರಮೋಹಾಭಾವಸೂಚನಾಯ ಪುರುಷ್ಟುತಾ –(ವಾ.)

ವಿ: ತುಂಬಾ ಕತ್ತಲೆಯಲ್ಲಿರುವುದನ್ನು ಕಣ್ಣು ಕಾಣಲಾರದು; ಅದರಂತೆ ತುಂಬಾ ಹೆಚ್ಚು ಬೆಳಕನ್ನೂ ಸಹ. ಇಲ್ಲಿ ಅದದ್ದೂ ಹಾಗೆಯೇ. ಅನಂತಪ್ರಕಾಶನಾದ ಭಗವಂತನನ್ನು ಸಾಕಲ್ಯೇನ ಕಾಣುವ ಸಾಮರ್ಥ್ಯ ಅವನಿಗೆ ಹೊರತು ಮತ್ತಾರಿಗೂ ಇಲ್ಲ ಎಂಬ ವಿಶೇಷಾಂಶ ಇದರಿಂದ ಸೂಚಿತ. ಅರ್ಜುನನಿಗೆ ದಿವ್ಯದೃಷ್ಟಿ ನೀಡುತ್ತಾ ಹೇಳಿದ ಮಾತೂ ಅದೇ ಆಗಿದೆ(ಗೀತಾ ೧೧/೪, ೪೮). ಆ ದಿವ್ಯದೃಷ್ಟಿಯೂ ಸಹ ಪರಮಾತ್ಮನನ್ನು ಸಮಗ್ರ ನೋಡಲು ಸಮರ್ಥವಾಗಿಸದು ಎಂಬುದೂ ಇದರಿಂದ ಸೂಚಿತ.

ಶ್ರೀಕೃಷ್ಣನೊಂದಿಗೆ ಬ್ರಹ್ಮನ ಏಕಾಂತ ಸಂಭಾಷಣೆ

ವೀಂದ್ರೇಶಶೇಷಾನುಗತಃ ಸ್ವಯಂಭೂ-
ರ್ಧಾಮ ಪ್ರವಿಷ್ಟಂ ತಮಜಂ ಪ್ರಣಮ್ಯ ।
ವೀಂದ್ರಾದಿಕೈರಪ್ಯಯುತಃ ಸ್ವಪಿತ್ರಾ ऽऽ-
ಶ್ಲಿಷ್ಟೋ ರಹಶ್ಚಾಕಥಯತ್ ತಥಾ ऽಸ್ತೌತ್ ॥ ೨೮ ॥

ಅ: ಗರುಡ, ರುದ್ರ, ಶೇಷರಿಂದ ಹಿಂಬಾಲಿಸಲ್ಪಟ್ಟು, ಬ್ರಹ್ಮದೇವರು ತನ್ನ ಪರಂಧಾಮವನ್ನು ಪ್ರವೇಶಿಸಿದ ಆ ಶ್ರೀಕೃಷ್ಣನನ್ನು ನಮಿಸಿ, ಗರುಡಾದಿಗಳನ್ನು ಬಿಟ್ಟು ತಾನೊಬ್ಬನೇ ತನ್ನ ತಂದೆ-ಯಾದ ಆ ಶ್ರೀಹರಿಯಿಂದ ಆಲಿಂಗಿತನಾಗಿ ರಹಸ್ಯವಾಗಿ ಸಂಭಾಷಿಸಿದ. ಹಾಗೆಯೇ ಸ್ತುತಿಸಿದ.

ವಿ: ೧) ಪರಂಧಾಮದವರೆಗೆ ಬ್ರಹ್ಮದೇವರನ್ನು ಹಿಂಬಾಲಿಸಿ ತೆರಳಲು ಗರುಡ ಶೇಷ ರುದ್ರರಿಗೆ ಸಾಧ್ಯವಾಯಿತಾದರೂ, ಇನ್ನೂ ಮುಂದಕ್ಕೆ ತೆರಳಿ ಪರಂಧಾಮಕ್ಕೆ ತೆರಳಿದ ಹರಿಯನ್ನು ನಮಿಸಲು, ಅವನಿಂದ ಆಲಿಂಗಿತನಾಗಲು, ಏಕಾಂತದಲ್ಲಿ ಸಂಭಾಷಿಸಲು, ವಿಶೇಷವಾಗಿ ಸ್ತುತಿಸಲು ಸಾಧ್ಯವಾದದ್ದು ಬ್ರಹ್ಮದೇವರಿಗೆ ಮಾತ್ರ ಎಂಬುದು ಇಲ್ಲಿಯ ವಿಶೇಷ.

೨) ಶ್ರೀರಾಮಾವತಾರದಲ್ಲಿ ಹೇಗೋ ಹಾಗೆ ಇಲ್ಲೂ ಸಹ ಫಲದಾನದ ವರದಿಯನ್ನು ಒಪ್ಪಿಸಿದರು ಎಂದು ತಿಳಿಯುವುದು.

ಮೂಲರೂಪದೊಂದಿಗೆ ಶ್ರೀಕೃಷ್ಣನ ಐಕ್ಯ

ಸ ಪೂರ್ವರೂಪೇಣ ಸಮಾಪ್ಯ ಚೈಕ್ಯಂ
ವಿಭಜ್ಯ ಚೇಚ್ಛಾನುಸೃತೋ ऽಥ ರೇಮೇ ।
ಹರಿಃ ಶ್ರಿಯಾ ಬ್ರಹ್ಮಮುಖೈಶ್ಚ ಮುಕ್ತೈಃ
ಸಂಪೂಜ್ಯಮಾನೋ ऽಮಿತಸದ್ಗುಣಾತ್ಮಾ ॥ ೨೯ ॥

ಅ: ಅಮಿತಸದ್ಗುಣಸ್ವರೂಪನಾದ ಶ್ರೀಕೃಷ್ಣ ತನ್ನ ಮೂಲರೂಪದೊಂದಿಗೆ ಐಕ್ಯವನ್ನು ಹೊಂದಿಯೂ, ಪ್ರತ್ಯೇಕವಾಗಿಯೂ ಇರುತ್ತಾ, ಮಹಾಲಕ್ಷ್ಮಿಯಿಂದಲೂ, ಬ್ರಹ್ಮ ಮೊದಲಾದ ಮುಕ್ತರಿಂದಲೂ ಚೆನ್ನಾಗಿ ಪೂಜಿತನಾಗಿ, ಸ್ವೇಚ್ಛಾನುಸಾರವಾಗಿ ವಿಹರಿಸಿದ.

ತಮ್ಮ ಲೋಕಗಳಿಗೆ ಮರಳಿದ ಬ್ರಹ್ಮಾದಿಗಳು

ಬ್ರಹ್ಮಾऽಪಿ ಶರ್ವಾದಿಯುತಃ ಸ್ವಲೋಕಂ
ಪ್ರಾಪ್ತಃ ಪುನಸ್ತತ್ರ ಗತಂ ಚ ಕೃಷ್ಣಮ್ ।
ರೇಮೇऽಭಿಪಶ್ಯನ್ ಪ್ರತಿಪೂಜಯಂಸ್ತಂ
ಸುರಾಶ್ಚ ಸರ್ವೇ ರವಿಬಿಂಬಸಂಸ್ಥಮ್ ॥ ೩೦ ॥

ಅ: ಬ್ರಹ್ಮದೇವರು ರುದ್ರಾದಿಗಳೊಂದಿಗೆ ಕೂಡಿ, ತನ್ನ ಲೋಕಕ್ಕೆ ತೆರಳಿ, ಅಲ್ಲಿದ್ದ ಕೃಷ್ಣನನ್ನು ವಿಶೇಷವಾಗಿ ನೋಡುತ್ತಲೂ, ಪರಿಪರಿಯಿಂದ ಪೂಜಿಸುತ್ತಲೂ ಆನಂದಿಸಿದರು. ಇತರ ಎಲ್ಲ ದೇವತೆಗಳು ಸೂರ್ಯಬಿಂಬದಲ್ಲಿದ್ದ ಕೃಷ್ಣನನ್ನು ನೋಡುತ್ತಾ ಪೂಜಿಸಿ, ನಲಿದರು.

ಶ್ರೀಕೃಷ್ಣನ ದೇಹತ್ಯಾಗದ ನಾಟಕ

ಯತೋ ನ ದರ್ಶಿತಾ ಭ್ರಾಂತಿಃ ಪ್ರಾದುರ್ಭಾವೇಷ್ವಪಿ ಕ್ವಚಿತ್ ।
ದೇಹತ್ಯಾಗಾನುಕಾರೇಣ ಹರಿಣಾ ತದಿಹಾಚ್ಯುತಃ ॥ ೩೧ ॥

ಮೋಹಯಿತ್ವಾऽಸುರಾನಂಧಂತಮಃ ಪ್ರಾಪಯಿತುಂ ಪ್ರಭುಃ ।
ಚಿದಾನಂದೈಕದೇಹೋऽಪಿ ತ್ಯಕ್ತಂ ದೇಹಮಿವಾಪರಮ್ ॥ ೩೨ ॥

---

೨೮. ರಹಶ್ಚಾಕಥಯದಿತ್ಯತ್ರ ತ್ವದಂಗಸಂಗಾದತಿಪವಿತ್ರೀಕೃತಗೋಪ್ಯಾದೀನಾಂ ಪೂರ್ವಸ್ಮಾದುತ್ತಮಂ ಸ್ಥಾನಂ ದಿಶಾಮೀತ್ಯಾದಿಕಥಾ ಅಕಥಯದಿತ್ಯರ್ಥಃ – (ವಾ.)

೨೯. ಇಚ್ಛಾऽನುಸೃತಾ ಯೇನ ಸ ಇಚ್ಛಾನುಸೃತಃ – (ವಾ.)

೩೨. ಕೃಷ್ಣೋ ಹ್ಯತ್ಯಕ್ತದೇಹೋऽಪಿ ತ್ಯಕ್ತದೇಹವದೇವ ಚ ।
ಲೋಕಾನಾಂ ದರ್ಶಯಾಮಾಸ ಸ್ವರೂಪಸದೃಶಾಕೃತಿಮ್ ॥
ಯೇನ ರೂಪೇಣ ಕಂಸಾದೀನ್ ಜಘ್ನೇ ತದ್ರೂಪ ಏವ ಹಿ ।
ಪೂಜ್ಯತೇऽದ್ಯಾಪಿ ಶಕ್ರಾದ್ಯೈರ್ನಿರ್ಮಿತಾऽನ್ಯಾ ಶವಾಕೃತಿಃ ।
ಸ್ವರ್ಗಾರೋಹಣಕಾಲೇ ಹಿ ಜನಾಸ್ತೇನೈವ ಮೋಹಿತಾಃ ।
ಯತ್ತದ್ರೂಪಂ ನಿಜಂ ವಿಷ್ಣೋರ್ದೃಷ್ಟಂ ಸರ್ವನರೈರ್ಭುವಿ ।
ಅದ್ಯಾಪಿ ತದ್ದೇವಲೋಕೇ ಪೂಜ್ಯತೇ ಸರ್ವದೈವತೈಃ ॥ ಇತ್ಯಾದಿ ಸ್ಕಾಂದೇ ॥ – ಐತರೇಯಭಾಷ್ಯ (೨/೪/೮)

ಸೃಷ್ಟ್ವಾ ಸ್ವದೇಹೋಪಮಿತಂ ಶಯಾನಂ ಭುವ್ಯಗಾದ್ದಿವಮ್ ।
ದಾರುಕೋಕ್ತ್ಯಾ ಸಮಾಯಾತಃ ಪಾರ್ಥಸ್ತಮದಹತ್ ತದಾ ॥ ೩೩ ॥

ಅ: ಅಚ್ಯುತನಾದ ಶ್ರೀಹರಿ ತನ್ನ ಆ ಮುಂಚಿನ ಯಾವ ಅವತಾರಗಳಲ್ಲೂ ಒಮ್ಮೆಯೂ ದೇಹತ್ಯಾಗರೂಪದ ಭ್ರಾಂತಿಯನ್ನು ಉಂಟುಮಾಡಿರಲಿಲ್ಲ. ಅದರಿಂದ ಇಲ್ಲಿ ಅಸುರರನ್ನು ಮೋಹಗೊಳಿಸಿ, ಅಂಧಂತಮಸ್ಸಿಗೆ ಕಳುಹಿಸಲೆಂದು ತಾನು ಕೇವಲ ಜ್ಞಾನಾನಂದದೇಹನಾದರೂ, ತನ್ನ ದೇಹದಂತಹ ಮತ್ತೊಂದು ದೇಹವನ್ನು ನಿರ್ಮಿಸಿ, ಅದನ್ನು ತೊರೆದು, ಭೂಮಿಯಲ್ಲಿ ಒರಗಿಸಿ, ವೈಕುಂಠಕ್ಕೆ ತೆರಳಿದ. ಅರ್ಜುನ ದಾರುಕನ ಮಾತಿನಂತೆ ಅಲ್ಲಿಗೆ ಬಂದು ಅದನ್ನು ದಹನಮಾಡಿದ.

ವಿ: ೧) ಆ ಮುಂಚಿನ ಮತ್ಸ್ಯಾದ್ಯವತಾರಗಳಲ್ಲಿ ಶ್ರೀಹರಿ ದೇಹತ್ಯಾಗ ಮಾಡಿದ್ದಂತೆ ನಟಿಸಿದ ಪ್ರಸಂಗ ಬಂದಿಲ್ಲ. ರಾಮಾವತಾರದಲ್ಲಿ ಜನಿಸಿದಂತೆ ನಟಿಸಿದ್ದರೂ, ಸಶರೀರನಾಗಿಯೇ ಗಗನಕ್ಕೆ ಏರಿದ್ದರಿಂದ ಆಗಲೂ ದೇಹತ್ಯಾಗದ ಭ್ರಮೆ ಅಸುರರಿಗೆ ಹುಟ್ಟುವಂತಿರಲಿಲ್ಲ. ಆದ್ದರಿಂದ ಕೃಷ್ಣಾವತಾರದಲ್ಲಿ ಇತರರಂತೆ ತನಗೂ ದೇಹವಿಯೋಗ ಉಂಟು ಎಂಬ ಭ್ರಮೆಯನ್ನು ಅಯೋಗ್ಯರಿಗೆ ಉಂಟುಮಾಡಲೆಂದು ಕೃಷ್ಣ ಹಾಗೆ ದೇಹತ್ಯಾಗದ ನಟನೆಯನ್ನು ಮಾಡಿದ ಎಂದರ್ಥ.

---

೩೨. ಪ್ರದರ್ಶ್ಯತಪ್ರತಪಸಾಮವಿತೃಪ್ತದೃಶಾಂ ನೃಪಾಮ್ ।
ಆದಾಯಾಂತರಧಾದ್ಯಸ್ತು ಸ್ವಬಿಂಬಂ ಲೋಕಲೋಚನಮ್ ॥ - ಭಾಗವತ (೩/೨/೧೧)

ಜಗತಾಂ ಮೋಹನಾರ್ಥಾಯ ಭಗವಾನ್ ಪುರುಷೋತ್ತಮಃ ।
ದರ್ಶಯನ್ ಮಾನುಷೀಂ ಚೇಷ್ಟಾಂ ತಥಾ ಮೃತಕವದ್ವಿಭುಃ ।
ಪ್ರಕಾಶಯೇದದೇಹೋಽಪಿ ಮೋಹಾಯ ಚ ದುರಾತ್ಮನಾಮ್ ॥
ಮಾಯಯಾ ಮೃತಕಂ ದೇಹಂ ತದಾ ಸೃಷ್ಟ್ವಾ ಪ್ರದರ್ಶಯೇತ್ ॥
ಕುತೋ ಹಿ ಮೃತಕಂ ತಸ್ಯ ಮೃತ್ಯುಭಾವಾತ್ ಪರಾತ್ಮನಃ ॥ - ಭಾ. ತಾ. (೧೧/೩೧/೧೩)

ಪೃಥಿವೀಲೋಕಸಂತ್ಯಾಗೋ ದೇಹತ್ಯಾಗೋ ಹರೇಃ ಸ್ಮೃತಃ ।
ನಿತ್ಯಾನಂದಸ್ವರೂಪತ್ವಾದನ್ಯಸ್ಯೈವೋಪಪದ್ಯತೇ ।
ದರ್ಶಯೇಜ್ಜನಮೋಹಾಯ ಸದೃಶೀಂ ಮೃತಕಾಕೃತಿಮ್ ।
ನಟವದ್ ಭಗವಾನ್ ವಿಷ್ಣುಃ ಪರಜ್ಞಾನಾಕೃತಿಃ ಸ್ವಯಮ್ ॥ - ಇತಿ ಸ್ಕಾಂದೇ -(ಭಾ. ತಾ. ೩./೪/೨೮)

'ವಿಷ್ಣೋಃ ಕಲೇವರತ್ಯಾಗೋ ಭೂತ್ಯಾಗೋಽನ್ಯೋ ನ ವಿದ್ಯತೇ ।
ಕಲೇವರತ್ಯಾಗೋಽನ್ಯೇಷಾಂ ಪಂಚತ್ವಂ ಸಮುದೀರಿತಮ್' ಇತಿ ಕೌರ್ಮೇ । - ಭಾ.ತಾ. (೫/೬/೬)

೩೩. ತತಃ ಶರೀರೇ ರಾಮಸ್ಯ ವಾಸುದೇವಸ್ಯ ಚೋಭಯೋಃ ।
ಅನ್ವಿಷ್ಯ ದಾಹಯಾಮಾಸ ಪುರುಷೈರಾಪ್ತಕಾರಿಭಿಃ ॥ - ಭಾರತ (ಮೌಸಲ. ೭/೩.೧)

೨) ವಾಸ್ತವವಾಗಿ ಕೃಷ್ಣ ಕಂಸಾದಿಗಳನ್ನು ಕೊಂದ ತನ್ನ ನಿಜರೂಪದಿಂದಲೇ ಪರಂಧಾಮಕ್ಕೆ ತೆರಳಿದ. ಅಜ್ಞಜನರಿಗೆ ಭ್ರಾಂತಿ ಬರಲೆಂದು ತನ್ನ ದೇಹದಂತಹ ಮತ್ತೊಂದು ದೇಹವನ್ನು ಸೃಷ್ಟಿಸಿ, ಭೂಮಿಯಲ್ಲಿ ಬೀಳಿಸಿ ನಡೆದ. ಈ ಸೂಕ್ಷ್ಮ ತಿಳಿಯದ ಅಸುರಜನ ಕೃಷ್ಣನನ್ನು ದೇಹಬಿಟ್ಟವನೆಂದೇ ತಿಳಿದರು.

೩) ಈ ಪ್ರಸಂಗ ಸೀತಾದೇವಿ ತಾನು ಕೈಲಾಸಕ್ಕೆ ತೆರಳುವ ಮುನ್ನ ಆ ದಂಡಕಾರಣ್ಯದಲ್ಲಿ ತನ್ನ ಆಕೃತಿಯನ್ನು ನಿರ್ಮಿಸಿ, ಇರಿಸಿದ ಪ್ರಸಂಗವನ್ನು ಹೋಲುವುದನ್ನು ಗಮನಿಸಬೇಕು(೫/೩೭). ಅದನ್ನು ಮಾಡಿದ್ದು ಮಹಾಲಕ್ಷ್ಮಿಯಾದರೆ, ಇದನ್ನು ಮಾಡಿದ್ದು ಮಹಾವಿಷ್ಣು ಎಂಬುದು ವಿಶೇಷ. ಅಲ್ಲಿ ನಿಜವಾದ ಸೀತೆಯ ಅಪಹರಣವೇ ಆಯಿತು ಎಂದು ಜನ ಭ್ರಮಿಸಿದಂತೆ, ಇಲ್ಲಿಯೂ ಸಹ ಕೃಷ್ಣನೇ ಮೃತನಾದ ಎಂದು ಭ್ರಮಿಸಿದರು.

ಅವಜಾನಂತಿ ಮಾಂ ಮೂಢಾ ಮಾನುಷೀಂ ತನುಮಾಶ್ರಿತಮ್। –ಗೀತಾ(೯/೧೧)

೪) ಸಂಜ್ಞಾದೇವಿ ತನ್ನ ಆಕೃತಿಯನ್ನು ಹೋಲುವ ಛಾಯಾದೇವಿಯನ್ನು ಸೃಷ್ಟಿಸಿದ ವಿವರ ಹರಿವಂಶದಲ್ಲಿದೆ. ಅದನ್ನು ಗುರುತಿಸಲು ಅವಳ ಪತಿಯಾದ ಸೂರ್ಯನಿಗೂ ಅನೇಕವರ್ಷಗಳೇ ಬೇಕಾದ ವಿವರವೂ ಅಲ್ಲಿದೆ ಎಂಬುದನ್ನು ಗಮನಿಸಬೇಕು. ತನ್ನ ಪತ್ನಿ ಮಾಡಿದ ಆ ಸೃಷ್ಟಿಯನ್ನೇ ಪತಿಯಾದ ಸೂರ್ಯನಿಗೆ ಅರಿಯಲು ಸಾಧ್ಯವಾಗದಿದ್ದಾಗ, ಕೃಷ್ಣ ಮೋಹ ಕವಿಸಲೆಂದೇ ಮಾಡಿದ ಈ ಲೀಲೆ ಸಹಜವಾಗಿಯೇ ಅಸುರಜನಕ್ಕೆ ಮೋಹಕವಾಯಿತು. ಇದರಂತೆ ರತಿದೇವಿ ಮಾಯಾದೇವಿ ಎಂಬ ರೂಪವನ್ನು ಧರಿಸಿದ್ದ ವಿವರವೂ ಗಮನಾರ್ಹ(೧೭/೧೪೯).

೫) ಅರ್ಜುನ ಹಾಗೆ ಆ ಕೃತಕದೇಹವನ್ನು ದಹಿಸಿದ ಸ್ಥಳ ಇಂದು ಪ್ರಭಾಸದಲ್ಲಿ 'ದೇಹೋತ್ಸರ್ಗತೀರ್ಥ' ಎಂದು ಪ್ರಸಿದ್ಧವಾಗಿದೆ.

ಬಲರಾಮಾದಿಗಳಿಗೆ ಅರ್ಜುನನಿಂದ ಅಂತ್ಯಕಾರ್ಯ

ರೌಹಿಣೇಯಾದಿಕಾನಾಂ ಚ ಶರೀರಾಣಿ ಪ್ರಧಾನತಃ ।
ದಾರುಕೋ ವಿಷ್ಣುಲೋಕಂ ತು ಪುನರಾಪ ಯಥಾऽऽಗತಮ್ ॥ ೩೪ ॥

---

೩೪. ಶರೀರಾಣಿ ಪ್ರಧಾನತ ಇತ್ಯತ್ರ ಪ್ರಧಾನತಃ= ಪ್ರಧಾನಾನಿ –(ವಾ.)

೩೪. ಯಥಾ ಪ್ರಧಾನತಶ್ಚೈವ ಚಕ್ರೇ ಸರ್ವಾಸ್ತಥಾ ಕ್ರಿಯಾಃ ।
ಯೇ ಹತಾ ಬ್ರಹ್ಮಶಾಪೇನ ಮುಸಲೈರೈರಕೋದ್ಭವೈಃ ॥ - ಭಾರತ (ಮೌಸಲ. ೭/೩೦)

ಬಂಧೂನಾಂ ನಷ್ಟಗೋತ್ರಾಣಾಮರ್ಜುನಃ ಸಾಂಪರಾಯಿಕಮ್ ।
ಹತಾನಾಂ ಕಾರಯಾಮಾಸ ಯಥಾವದನುಪೂರ್ವಶಃ ॥ - ಭಾಗವತ (೧೧/೩೧/೨೨)

ಅ: ಅರ್ಜುನ ಬಲರಾಮ ಮೊದಲಾದವರ ಶರೀರಗಳನ್ನು ಸಹ ಮುಖ್ಯವಾಗಿ ದಹನ ಮಾಡಿದ. ದಾರುಕ ಬಂದಿದ್ದಂತೆಯೇ ಮರಳಿ ವಿಷ್ಣುಲೋಕಕ್ಕೆ ತೆರಳಿದ.

ವಿ: ೧) ಬಲರಾಮಾದಿಗಳು ಅಪ್ರಾಕೃತದೇಹದವರಲ್ಲವಾದ್ದರಿಂದ ಅವರು ದೇಹವನ್ನು ತೊರೆದೇ ಹೊರಟಿದ್ದರು. ಅಂತಹವರ ಸಂಖ್ಯೆ ಅಪಾರವಾಗಿದ್ದರಿಂದ ಅವರಲ್ಲಿ ಪ್ರಧಾನರಾದವರ ದೇಹಗಳನ್ನು ಮಾತ್ರ ಅರ್ಜುನ ದಹನಮಾಡಿದ ಎಂದರ್ಥ.

೨) ದಾರುಕ ಮತ್ತು ಮಾತಲಿ ಇಬ್ಬರೂ ವಿಶಿಷ್ಟಸಾರಥಿಗಳು. ಮಾತಲಿ ಇಂದ್ರಸಾರಥಿ–ಯಾದರೆ, ದಾರುಕ ಉಪೇಂದ್ರನಾದ ಶ್ರೀಹರಿಯ ಸಾರಥಿ. ಭೂಲೋಕಕ್ಕೆ ಮೂಲರೂಪದಿಂದಲೇ ಬಂದು, ತಮ್ಮಮೂಲಸ್ಥಾನಕ್ಕೆ ಹಾಗೆಯೇ ತೆರಳುವುದು ಇವರಿಬ್ಬರ ವಿಶೇಷ.

ರುಗ್ಮಿಣಿ ಸತ್ಯಭಾಮೆಯರು ಅದೃಶ್ಯರಾದರು

ತಥೈವ ಜನಮೋಹಾಯ ಪ್ರಾಪ್ಯ ವಹ್ನಾವದೃಶ್ಯತಾಮ್ ।
ರುಗ್ಮಿಣ್ಯಗಾದ್ಧರೇಃ ಪಾರ್ಶ್ವಂ ಸತ್ಯಾ ಕೃತ್ವಾತಪಸ್ತಥಾ ॥ ೩೫ ॥

ಅ: ಅದರಂತೆ ಅಸುರಜನಮೋಹಕ್ಕೆಂದು ರುಗ್ಮಿಣಿಯು ಅಗ್ನಿಯಲ್ಲಿ ಅದೃಶ್ಯಳಾಗಿ ಶ್ರೀಹರಿಯ ಬಳಿಗೆ ತೆರಳಿದಳು. ಅದರಂತೆಯೇ ಸತ್ಯಭಾಮಾದೇವಿ ತಪಸ್ಸು ಮಾಡಿ ಕಾಡಿನಲ್ಲಿ ಅದೃಶ್ಯಳಾಗಿ ಹರಿಯನ್ನು ಸೇರಿದಳು.

ವಿ: ಇಲ್ಲಿ ಅಗ್ನಿಯಲ್ಲಿ ತೆರಳಿದಂತೆ ಮಾಡಿದರೆ ಸೀತೆಯು ಅಗ್ನಿಯಿಂದ ಬಂದಂತೆ ಮಾಡಿದಳು ಎಂಬುದು ವಿಶೇಷ (೮/೨೨೨, ೨೨೩). ಸೀತಾರೂಪ ಭೂಮಿಯಲ್ಲಿ ಅದೃಶ್ಯವಾದದ್ದೂ ಇದರಂತೆಯೇ.

ಅವರಿಬ್ಬರದು ಅಪ್ರಾಕೃತ ಶರೀರ

ಚಿದಾನಂದೈಕದೇಹೇऽಪಿ ದ್ವಿರೂಪೇ ಇವ ತೇ ಯತಃ ।
ಏಕೈವಾತಃ ಕೃಷ್ಣವತ್ ತೇ ದುಷ್ಟಾನ್ ಮೋಹಯತಸ್ತಥಾ ॥ ೩೬ ॥

ಅ: ರುಗ್ಮಿಣೀ, ಸತ್ಯಭಾಮೆಯರು ಒಬ್ಬ ಮಹಾಲಕ್ಷ್ಮಿಯೇ ಎರಡು ಪ್ರತ್ಯೇಕ ರೂಪ–ದವರಂತೆ ಇದ್ದವರು; ಅವರೂ ಸಹ ಕೃಷ್ಣನಂತೆ ದುಷ್ಟರನ್ನು ಮೋಹಗೊಳಿಸುವರು.

ವಿ: ೧) ಕೃಷ್ಣನಂತೆ ರುಗ್ಮಿಣೀ, ಸತ್ಯಭಾಮೆಯರೂ ಸಹ ಕೇವಲ ಜ್ಞಾನಾನಂದಮಯ ರೂಪರಾದ್ದರಿಂದ ಅವರಿಗೂ ದೇಹವಿಯೋಗದ ಪ್ರಸಕ್ತಿಯೇ ಇಲ್ಲ. ಅವರೂ ಸಹ ಹಾಗೆಯೇ

ಮೂಲರೂಪಕ್ಕೆ ತೆರಳಿದರು. ಆದರೂ, ಅಸುರಜನರಿಗೆ ರುಗ್ಮಿಣಿಯು ಅಗ್ನಿಪ್ರವೇಶ ಮಾಡಿ–ದಂತೆಯೂ, ಸತ್ಯಭಾಮೆಯು ತಪಸ್ಸಿಗೆಂದು ಕಾಡಿಗೆ ತೆರಳಿ ದೇಹ ತೊರೆದಂತೆ ಮಾಡಿದರು:

'ಅಗ್ನಾವಂತರ್ದಧೇ ಭೈಷ್ಮೀ ಸತ್ಯಭಾಮಾ ವನೇ ತಥಾ ।
ನ ತು ದೇಹವಿಯೋಗೋऽಸ್ತಿ ತಯೋಃ ಶುದ್ಧಚಿದಾತ್ಮನೋಃ' ಇತಿ ಚ ॥ -

ಭಾ.ತಾ.(೧೧/೩೧/೨೦)

೨) ಶ್ರೀಹರಿಯು ಹೇಗೆ ಅಸುರಮೋಹನವನ್ನು ಮಾಡುವನೋ ಅದರಂತೆಯೇ ಮಹಾಲಕ್ಷ್ಮಿಯೂ ಸಹ ಅಸುರ ಜನರನ್ನು ಮೋಹಗೊಳಿಸುವಳು – **'ಯಾಂ ಯಾಂ ಪರೇಶ ಉರುಧೈವ ಕರೋತಿ ಲೀಲಾಂ ತಾಂ ತಾಂ ಕರೋತ್ಯನು ತಥೈವ ರಮಾऽಪಿ ದೇವೀ'** (೫/೩೫).

ಇತರ ಮಹಾಮಹಿಷಿಯರ ದೇಹತ್ಯಾಗ

ಅನ್ಯಾ ಮಹಾಮಹಿಷ್ಯಸ್ತು ತ್ಯಕ್ತ್ವಾ ದೇಹಂ ಹುತಾಶನೇ ।
ಕಾಶ್ಚಿತ್ ಕಾಶ್ಚಿತ್ ತು ತಪಸಾ ತ್ಯಕ್ತದೇಹಾ ಹರಿಂ ಯಯುಃ ॥ ೩೭ ॥

ಅ: ಇತರ ಆರು ಮಹಾಮಹಿಷಿಯರು ಅಗ್ನಿಯಲ್ಲಿ ದೇಹವನ್ನು ತೊರೆದು, ಕೆಲವರು ತಪಸ್ಸು ಮಾಡಿ ದೇಹವನ್ನು ತೊರೆದು ಶ್ರೀಹರಿಯನ್ನು ಹೊಂದಿದರು.

ವಿ: ಜಾಂಬವತಿ ಮೊದಲಾದವರು ಹಾಗೆ ದೇಹ ತೊರೆದ ವಿವರ ಹೀಗಿದೆ:

ರುಕ್ಮಿಣೀ ತ್ವಥ ಗಾಂಧಾರೀ ಶೈಬ್ಯಾ ಹೈಮವತೀತ್ಯಪಿ ।
ದೇವೀ ಜಾಂಬವತೀ ಚೈವ ವಿವಿಶುರ್ಜಾತವೇದಸಮ್ ॥
ಸತ್ಯಭಾಮಾ ತಥೈವಾನ್ಯಾ ದೇವ್ಯಃ ಕೃಷ್ಣಸ್ಯ ಸಮ್ಮತಾಃ ।
ವನಂ ಪ್ರವಿವಿಶೂ ರಾಜಂಸ್ತಾಪಸ್ಯೇ ಕೃತನಿಶ್ಚಯಾಃ ॥

– ಭಾರತ(ಮೌಸಲ ೭/೭೩,೭೪)

ರೇವತಿ ಮೊದಲಾದವರ ದೇಹತ್ಯಾಗ

ರೌಹಿಣೇಯಾದಿಕಾನಾಂ ಚ ಭಾರ್ಯಾ ವಹ್ನಿಮುಖೇ ತನುಮ್ ।
ತ್ಯಕ್ತ್ವಾ ಸ್ವಭರ್ತೃನೇವಾಪುಃ ಸರ್ವಾ ಏವ ಪತಿವ್ರತಾಃ ॥ ೩೮ ॥

ಅ: ಬಲರಾಮ ಮೊದಲಾದವರ ಪತ್ನಿಯರು ಅಗ್ನಿಮುಖದಲ್ಲಿ ದೇಹವನ್ನು ತೊರೆದು ತಮ್ಮ ಪತಿಗಳನ್ನೇ ಸೇರಿದರು; ಅವರೆಲ್ಲ ಮಹಾಪತಿವ್ರತೆಯರೇ ಆದವರು.

ವಿ: ಪತಿವ್ರತೆಯಾಗಿ ಬಾಳುವವರಿಗೆ ಪತಿಲೋಕ ಲಭಿಸುವುದು ಎಂಬ ತತ್ತ್ವ ಇದರಿಂದ ಸೂಚಿತ.

ವಸುದೇವನ ದೇಹತ್ಯಾಗ

ವಸುದೇವಃ ಪಾರ್ಥಮುಖಾತ್ ಶ್ರುತ್ವೈತದ್ಯೋಗಮಾಸ್ಥಿತಃ ।
ತ್ಯಕ್ತ್ವಾ ದೇಹಂ ಕಶ್ಯಪತ್ವಂ ಪ್ರಾಪ ಕೃಷ್ಣಾನುರಾಗತಃ ॥ ೩೯ ॥

ಅ: ಅರ್ಜುನನ ಮುಖದಿಂದ ವಸುದೇವ ಅದನ್ನು ಕೇಳಿ ಯೋಗಾರೂಢನಾಗಿ ದೇಹವನ್ನು ತೊರೆದು ಕೃಷ್ಣನ ಮೇಲಿನ ಭಕ್ತಿಯಿಂದಾಗಿ ಕಶ್ಯಪತ್ವವನ್ನು ಹೊಂದಿದ.

ವಿ: ವಸುದೇವ ಕಶ್ಯಪನ ಅವತಾರವಾದ್ದರಿಂದ ಅವನು ದೇಹ ತೊರೆದು ತನ್ನ ಮೂಲ-ರೂಪವನ್ನು ಸೇರಿದ ಎಂದರ್ಥ(೧೧/೨೨೧-೨೨೩).

ಅರ್ಜುನನಿಂದ ವಸುದೇವಾದಿಗಳಿಗೆ ಅಂತ್ಯಕ್ರಿಯೆ

ತಸ್ಯಾರ್ಜುನೋಽಶ್ವಮೇಧಾಗ್ನಾವಂತ್ಯಕರ್ಮಾಕರೋತ್ ತದಾ ।
ತ್ಯಕ್ತದೇಹಾಸ್ತಸ್ಯ ಭಾರ್ಯಾ ವಹ್ನೌ ಪ್ರಾಪುಸ್ತಮೇವ ಚ ॥ ೪೦ ॥

ಅ: ಅರ್ಜುನ ಅವನ ಅಶ್ವಮೇಧಾಗ್ನಿಯಲ್ಲಿಯೇ ಆಗ ಅವನ ಅಂತ್ಯಕ್ರಿಯೆಯನ್ನು ಮಾಡಿದ. ವಸುದೇವನ ಪತ್ನಿಯರು ಅಗ್ನಿಯಲ್ಲಿ ದೇಹ ತೊರೆದು ಅವನನ್ನೇ ಹೊಂದಿದರು.

ವಿ: ದೇವಕಿ ಮೊದಲಾದ ವಸುದೇವಪತ್ನಿಯರೂ ಸಹ ಸಹಗಮನ ಮಾಡಿ ಕಶ್ಯಪಪತ್ನಿಯರಾಗಿ ಅವನನ್ನು ಸೇರಿದರು ಎಂದರ್ಥ.

ಸಮುದ್ರದಲ್ಲಿ ಮುಳುಗಿದ ದ್ವಾರಕೆ

ಸ್ತ್ರಿಯೋ ಬಾಲಾಂಸ್ತಥಾಽಽದಾಯ ಧನಂ ಚೈವ ಧನಂಜಯಃ ।
ನಿರ್ಯಯೌ ದ್ವಾರವತ್ಯಾಸ್ತಾ ಜಗ್ರಾಹ ಚ ಸಾಗರಃ ॥ ೪೧ ॥

---

೩೯. ಶ್ರುತ್ವಾ ತದ್ಯೋಗಮಿತ್ಯತ್ರ ತತ್ ಕೃಷ್ಣಗಮನಾದಿಕಂ ಶ್ರುತ್ವೇತಿ ಸಂಬಂಧಃ — (ವಾ.)

೩೯. ಶ್ವೋಭೂತೇऽಥ ತತಃ ಶೌರಿರ್ವಸುದೇವಃ ಪ್ರತಾಪವಾನ್ ।
ಯುಕ್ತ್ವಾऽऽತ್ಮಾನಂ ಮಹಾತೇಜಾ ಜಗಾಮ ಗತಿಮುತ್ತಮಾಮ್ ॥ - ಭಾರತ (ಮೌಸಲ. ೭/೧೫)

೪೦. ತಸ್ಯಾಶ್ವಮೇಧಿಕಂ ಛತ್ರಂ ದೀಪ್ಯಮಾನಾಶ್ಚ ಪಾವಕಾಃ ॥ - ಭಾರತ (ಮೌಸಲ. ೭/೨೧)

ತಂ ವೈ ಚತಸೃಭಿಃ ಸ್ತ್ರೀಭಿರನ್ವಿತಂ ಪಾಂಡುನಂದನಃ ।
ಅದಾಹಯಚ್ಚಂದನೈಶ್ಚ ಗಂಧೈರುಚ್ಚಾವಚೈರಪಿ ॥ - ಭಾರತ (ಮೌಸಲ. ೭/೨೫)

ಅ: ಅರ್ಜುನನು ಹೆಂಗಸರನ್ನು, ಹಾಗೆಯೇ ಮಕ್ಕಳನ್ನು, ಧನವನ್ನು ತೆಗೆದುಕೊಂಡು ದ್ವಾರಾವತಿಯಿಂದ ಹೊರಟ. ದ್ವಾರಕೆಯನ್ನು ಸಮುದ್ರ ಮುಳುಗಿಸಿತು.

ವಿ: ಕೃಷ್ಣಪರಂಧಾಮಕ್ಕೆ ತೆರಳಿದ ಏಳನೆಯ ದಿನ ದ್ವಾರಕೆಯು ಸಮುದ್ರದಲ್ಲಿ ಲೀನವಾಗುವುದು ಎಂಬ ವಿವರ ಭಾಗವತಾದಿಗಳಲ್ಲಿ ಬಂದಿದೆ. ಅದರಂತೆ ಅರ್ಜುನ ಅವರನ್ನೆಲ್ಲ ಕರೆದುಕೊಂಡು ಮುಂದೆ ಸಾಗುತ್ತಿದ್ದಂತೆಯೇ ಸಮುದ್ರ ದ್ವಾರಕೆಯನ್ನು ಮುಳುಗಿಸುತ್ತಾ ಬಂದಿತು ಎಂದರ್ಥ.

ಅರ್ಜುನನ ಹೀನಾಯ ಸೋಲು

ಸ್ತ್ರೀಬಾಲಸಹಿತೇ ಪಾರ್ಥ ಏಕಸ್ಮಿನ್ ಪಥಿ ಗಚ್ಛತಿ ।
ಶಾಪಾತ್ ಸುಪಾಪಾ ಆಭೀರಾಃ ಸ್ತ್ರೀಜನಾನ್ ಜಹುರುದ್ಧತಾಃ ॥ ೪೨ ॥

ಅ: ಹೆಂಗಸರು ಮಕ್ಕಳೊಂದಿಗೆ ಅರ್ಜುನ ಒಬ್ಬನೇ ದಾರಿಯಲ್ಲಿ ಸಾಗುತ್ತಿದ್ದಾಗ ಶ್ರೀಕೃಷ್ಣನ ಶಾಪದಿಂದ ಮಹಾಪಾಪಿಗಳಾದ ಉನ್ಮತ್ತರಾದ ಆಭೀರರು ಸ್ತ್ರೀಜನರನ್ನು ಅಪಹರಿಸಿದರು.

ಮ್ಲೇಚ್ಛರ ವಶರಾದ ಕೃಷ್ಣಪತ್ನಿಯರು

ಯಾಸ್ತಾಃ ಷೋಡಶಸಾಹಸ್ರವನಿತಾಃ ಶತಸಂಯುತಾಃ ।
ಕೃಷ್ಣಶಾಪಾನ್ಮ್ಲೇಚ್ಛವಶಂ ಯಯುರ್ದರ್ಪನಿಮಿತ್ತತಃ ॥ ೪೩ ॥

ಹ್ರಿಯಮಾಣೇ ಧನೇ ಚೈವ ವನಿತಾಸು ಚ ವಾಸವಿಃ ।
ಯುಯುತ್ಸುರ್ಗಾಂಡಿವಂ ಸಜ್ಯಂ ಕೃಚ್ಛ್ರೇಣೈವ ಚಕಾರ ಹ ॥ ೪೪ ॥

---

೪೧. ನಿರ್ಯಾತೇ ತು ಜನೇ ತಸ್ಮಿನ್ ಸಾಗರೋ ಮಕರಾಲಯಃ ।
ದ್ವಾರಕಾಂ ರತ್ನಸಂಪೂರ್ಣಾಂ ಜಲೇನಾಪ್ಲಾವಯತ್ ತದಾ ॥
ಯದ್ ಯದ್ಧಿ ಪುರುಷವ್ಯಾಘ್ರೋ ಭೂಮೇಸ್ತಸ್ಯಾ ವ್ಯಮುಂಚತ ।
ತತ್ ತತ್ ಸಂಪ್ಲಾವಯಾಮಾಸ ಸಲಿಲೇನ ಸ ಸಾಗರಃ ॥ - ಭಾರತ (ಮೌಸಲ. ೭/೪೧,೪೨)

೪೧. ದ್ವಾರಕಾಂ ಹರಿಣಾ ತ್ಯಕ್ತಾಂ ಸಮುದ್ರೋಽಪ್ಲಾವಯತ್ ಕ್ಷಣಾತ್ ।
ವರ್ಜಯಿತ್ವಾ ಮಹಾರಾಜ ಶ್ರೀಮದ್ಭಗವದಾಲಯಮ್ ॥ – ಭಾಗವತ (೧೧/೩೧/೨೩)

೪೨. ಪ್ರೇಕ್ಷತಸ್ತ್ವೇವ ಪಾರ್ಥಸ್ಯ ವೃಷ್ಣ್ಯಂಧಕವರಸ್ತ್ರಿಯಃ ।
ಜಗ್ಮುರಾದಾಯ ತೇ ಮ್ಲೇಚ್ಛಾಃ ಸಮಂತಾಜ್ಜನಮೇಜಯ ॥ – ಭಾರತ (ಮೌಸಲ. ೭/೬೩)

೪೨. ಆಭೀರಾಃ ಮ್ಲೇಚ್ಛವಿಶೇಷಾಃ ॥ - (ಜ.)

ಅ: ಕೃಷ್ಣನ ಹದಿನಾರುಸಾವಿರದ ಒಂದು ನೂರು ಪತ್ನಿಯರು ಶಾಪದಿಂದ ಮ್ಲೇಚ್ಛವಶರಾದರು. ಧನವು ಮತ್ತು ಸ್ತ್ರೀಯರು ಹಾಗೆ ಆಭೀರರಿಂದ ಅಪಹೃತರಾದಾಗ ಅರ್ಜುನ ಯುದ್ಧ ಮಾಡಲು ಬಯಸಿ ಗಾಂಡೀವವನ್ನು ತುಂಬಾ ಕಷ್ಟದಿಂದಲೇ ಹೆದೆಯೇರಿಸಿದ.

ವಿ: ಮಹಾವೀರನಾದ ಅರ್ಜುನನಿಗೆ ಆ ವರೆಗೂ ಸುಲಭಸಾಧ್ಯವೆನ್ನಿಸಿದ್ದ ಗಾಂಡೀವದ ಹೆದೆ ಏರಿಸುವ ಕಾರ್ಯ ಅಂದು ತುಂಬಾ ಕಷ್ಟಸಾಧ್ಯವೆನ್ನಿಸಿದ್ದು ವಿಶೇಷ; ಅದಕ್ಕೆ ಕಾರಣ ಮುಂದೆ ಬಂದಿದೆ.

ಅಸ್ತ್ರಮರೆತ ಅಸ್ತ್ರಜ್ಞಚೂಡಾಮಣಿ

ಕ್ಷೀಣಾಸ್ತಸ್ಯ ಶರಾ ದೈವಾನ್ನಾಸ್ತ್ರಾಣಿ ಸ್ಮೃತಿಮಾಯಯುಃ ।
ಸ ತದ್ದೈವಕೃತಂ ಜ್ಞಾತ್ವಾ ಸಂಸ್ಮರನ್ ಪುರುಷೋತ್ತಮಮ್ ।
ನಿಘ್ನನ್ ಶತ್ರೂನ್ ಗಾಂಡಿವೇನ ಶೇಷಂ ರಕ್ಷನ್ ಕುರೂನಗಾತ್ ॥ ೪೫ ॥

ಅ: ದೇವಮಾಯೆಯಿಂದ ಅವನ ಬಾಣಗಳು ಸಹ ಬರಿದಾದವು; ಅಸ್ತ್ರಗಳು ಸಹ ಮರೆಯತೊಡಗಿದವು. ಅವನು ಅದನ್ನು ದೈವಕೃತವೆಂದು ಬಗೆದು ಪುರುಷೋತ್ತಮನಾದ ಕೃಷ್ಣನನ್ನು ಬಹಳವಾಗಿ ಸ್ಮರಿಸುತ್ತಾ ಗಾಂಡೀವದಿಂದಲೇ ಶತ್ರುಗಳನ್ನು ಸಂಹರಿಸುತ್ತಾ ಉಳಿದವರನ್ನು ರಕ್ಷಿಸಿಕೊಂಡು ಕುರುಕ್ಷೇತ್ರಕ್ಕೆ ತೆರಳಿದ.

---

೪೫. ತತೋऽರ್ಜುನೋ ಧನುರ್ದಿವ್ಯಂ ಗಾಂಡೀವಮಜರಂ ಮಹತ್ ।
ಆರೋಪಯಿತುಮಾರೇಭೇ ಯತ್ನಾದಿವ ಕಥಂಚನ ॥
ಚಕಾರ ಸಜ್ಜಂ ಕೃಚ್ಛ್ರೇಣ ಸಂಭ್ರಮೇ ತುಮುಲೇ ಸತಿ ॥
ಚಿಂತಯಾಮಾಸ ಶಸ್ತ್ರಾಣಿ ನ ಚ ಸಸ್ಮಾರ ತಾನ್ಯಪಿ ॥
ವೈಕೃತಂ ತನ್ಮಹದ್ ದೃಷ್ಟ್ವಾ ಭುಜವೀರ್ಯೇ ತಥಾ ಯುಧಿ ॥
ದಿವ್ಯಾನಾಂ ಚ ಮಹಾಸ್ತ್ರಾಣಾಂ ವಿನಾಶಾತ್ ವ್ರೀಡಿತೋऽಭವತ್ ॥ - ಭಾರತ (ಮೌಸಲೇ. ೭/೫೫/೫೬)

೪೫. ಕ್ಷಣೇನ ತಸ್ಯ ತೇ ರಾಜನ್ ಕ್ಷಯಂ ಜಗ್ಮುರಜಿಹ್ಮಗಾಃ ।
ಅಕ್ಷಯಾ ಹಿ ಪುರಾ ಭೂತ್ವಾ ಕ್ಷೀಣಾಃ ಕ್ಷತಜಭೋಜನಾಃ ॥
ಸ ಶರಕ್ಷಯಮಾಸಾದ್ಯ ದುಃಖಶೋಕಸಮಾಹತಃ ।
ಧನುಷ್ಕೋಟ್ಯಾ ತದಾ ದಸ್ಯೂನವಧೀತ್ ಪಾಕಶಾಸನಿಃ ॥
ಅಸ್ತ್ರಾಣಾಂ ಚ ಪ್ರಣಾಶೇನ ಬಾಹುವೀರ್ಯಸ್ಯ ಸಂಕ್ಷಯಾತ್ ।
ಧನುಷಶ್ಚಾವಿಧೇಯತ್ವಾಚ್ಛರಾಣಾಂ ಸಂಕ್ಷಯೇಣ ಚ ॥
ಬಭೂವ ವಿಮನಾಃ ಪಾರ್ಥೋ ದೈವಮಿತ್ಯನುಚಿಂತಯನ್ ॥
ನ್ಯವರ್ತತ ತತೋ ರಾಜನ್ ನೇದಮಸ್ತೀತಿ ಚಾಬ್ರವೀತ್ ॥ - ಭಾರತ (ಮೌಸಲ. ೭/೬೧,೬೨,೬೫,೬೬)

ಏಃ ೧) ಗಾಂಡೀವದ ಹೆದೆಯೇರಿಸುವುದು ಕಷ್ಟವಾದದ್ದರ ಜೊತೆಗೆ ಅವನ ಅಕ್ಷಯಬತ್ತಳಿಕೆಗಳೂ ಬರಿದಾದವು. ಅಸ್ತ್ರಗಳೂ ಸಹ ಮರೆತು ಹೋದವು. ಅರ್ಜುನನಿಗೆ ಆಗ ಅದೆಲ್ಲ ದೈವಸಂಕಲ್ಪವೆಂಬ ಅರಿವಾಯಿತು. ಕೃಷ್ಣ ''ತಾನು ಪರಂಧಾಮಕ್ಕೆ ತೆರಳುವವರೆಗೂ ಅರ್ಜುನನಿಗೆ ಸೋಲಿಲ್ಲ'' ಎಂದು ಇಂದ್ರನಿಗೆ ವಚನವಿತ್ತದ್ದನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು. (೨೦/೧೩೪) ಅದರಿಂದಾಗಿ ಅರ್ಜುನನಿಗೆ ಇಂತಹ ಪರಿಸ್ಥಿತಿ ಒದಗಿತು ಎಂದರ್ಥ. ಅರ್ಜುನನ ಆ ಪರಿಸ್ಥಿತಿಯನ್ನು ಅವನೇ ಹೇಳುವ ಪರಿ ಶ್ರೀಮದ್ಭಾಗವತದಲ್ಲಿ ಹೀಗಿದೆ (೧/೧೪/೨೧):

ತದ್ವೈ ಧನುಸ್ತ ಇಷವಃ ಸ ರಥೋ ಹಯಾಸ್ತೇ ಸೋಽಹಂ ರಥೀ ನೃಪತಯೋ ಯತ ಆಮನಂತಿ ।
ಸರ್ವಂ ಕ್ಷಣೇನ ತದಭೂದಸದೀಶರಿಕ್ತಂ ಭಸ್ಮನ್ ಹುತಂ ಕುಹಕರಾದ್ಧಮಿವೋಪ್ತಮೂಷೇ ॥

ಶ್ರೀಹರಿಯ ಅನುಗ್ರಹ ತಪ್ಪಿದರೆ ನಮ್ಮ ಸಕಲ ಅಪೂರ್ವಸಾಮಗ್ರಿಗಳೂ ಹೇಗೆ ಸತ್ತ್ವಹೀನವೆನ್ನಿಸುವವು ಎಂಬುದಕ್ಕೆ ಇದೊಂದು ಉತ್ತಮ ನಿದರ್ಶನ.

೨) ಗರ್ವಿತರಾಗಿದ್ದ ಕೃಷ್ಣಪತ್ನಿಯರು ಮ್ಲೇಚ್ಛವಶರಾಗಲು ಅನುಕೂಲವಾಗಲೆಂದು ಅರ್ಜುನನಿಗೆ ಬಲಕ್ಷಯವೂ ಆಗುವಂತೆ ಅಷ್ಟಾವಕ್ರಮುನಿ ನೀಡಿದ್ದ ಶಾಪವೂ ಅದಕ್ಕೆ ಮತ್ತೊಂದು ಕಾರಣ ಎಂದು ಮಹಾಭಾರತದಲ್ಲಿದೆ :

ಸ್ತ್ರಿಯಶ್ಚ ತಾಃ ಪುರಾ ಶಪ್ತಾಃ ಪ್ರಹಾಸಕುಪಿತೇನ ವೈ ।
ಅಷ್ಟಾವಕ್ರೇಣ ಮುನಿನಾ ತದರ್ಥಂ ತ್ವದ್ಬಲಕ್ಷಯಃ ॥ – ಭಾರತ (ಮೌಸಲ. ೮/೨೭)

ಕುರುಕ್ಷೇತ್ರದಲ್ಲಿ ಶ್ರೀವ್ಯಾಸಸಂದರ್ಶನ

ತದಾ ಕುರುಕ್ಷೇತ್ರಗತಂ ಜಗದ್ಗುರುಂ
ಸುಪೂರ್ಣವಿಜ್ಞಾನಬಲಾಬ್ಧಿಪತ್ಸುಖಮ್ ।
ತಮೇವ ವಾಸಿಷ್ಠಕುಲೋದ್ವಹಂ ಹರಿಂ
ನಿರೀಕ್ಷ್ಯ ದುಃಖೇನ ಪಪಾತ ಪಾದಯೋಃ ॥ ೪೬ ॥

ಅಃ ಆಗ ಕುರುಕ್ಷೇತ್ರದಲ್ಲಿದ್ದ ಪರಿಪೂರ್ಣವಾದ ಜ್ಞಾನ ಬಲಗಳ ಸಾಗರನೂ, ಉತ್ತಮ ಸುಖಪೂರ್ಣನೂ, ಜಗದ್ಗುರುವೂ ಆದ ವೇದವ್ಯಾಸರೂಪದ ಆ ಶ್ರೀಹರಿಯನ್ನೇ ಕಂಡು ಅರ್ಜುನ ದುಃಖದಿಂದ ಅವರ ಪಾದಗಳಲ್ಲಿ ಬಿದ್ದನು.

---

೪೬. ಸ ತತ್ ಕೃತ್ವಾ ಪ್ರಾಪ್ತಕಾಲಂ ಬಾಷ್ಪೇಣಾಪಿಹಿತೋಽರ್ಜುನಃ ।
ಕೃಷ್ಣದ್ವೈಪಾಯನಂ ವ್ಯಾಸಂ ದದರ್ಶಾಸೀನಮಾಶ್ರಮೇ ॥ - ಭಾರತ । (ಮೌಸಲ. ೭/೭೬)

ವಿ: ಕೃಷ್ಣವಿರಹದ ದುಃಖವನ್ನು ಅದೇ ಕೃಷ್ಣನ ಮತ್ತೊಂದು ರೂಪವಾದ ವೇದವ್ಯಾಸರ ಬಳಿಯಲ್ಲಿ ತೋಡಿಕೊಳ್ಳಲೆಂದು ಅರ್ಜುನ ಹಾಗೆ ಪಾದಕ್ಕೆರಗಿದ ಎಂದರ್ಥ.

ವ್ಯಾಸರಿಂದ ಅರ್ಜುನನ ಸಾಂತ್ವನ

ಸ ತೇನ ಪುಂಸಾಂ ಪ್ರವರೇಣ ಹೇತುಭಿಃ
ಸಂಬೋಧಿತೋಽಜ್ಞಾನತಮೋಽಂಶುಮಾಲಿನಾ ।
ಸಂಸ್ಥಾಪ್ಯ ಚೇತಃ ಪುನರೇವ ತಸ್ಮಿನ್
ಜಹೌ ಶುಚಃ ಪ್ರಾಯಶ ಏವ ಧೈರ್ಯಾತ್ ॥ ೪೭ ॥

ಅ: ಅರ್ಜುನ ಪುರುಷೋತ್ತಮನೂ, ಅಜ್ಞಾನವೆಂಬ ಕತ್ತಲೆಗೆ ಭಾಸ್ಕರನೂ ಆದ ಶ್ರೀವೇದವ್ಯಾಸರೂಪದ ಶ್ರೀಹರಿಯಿಂದ ಬಹುಬಗೆಯಿಂದ ಯುಕ್ತಿಯುಕ್ತ ಮಾತುಗಳಿಂದ ಬೋಧಿತನಾದ. ಅರ್ಜುನ ವೇದವ್ಯಾಸರಲ್ಲಿ ತನ್ನ ಮನಸ್ಸನ್ನು ಮತ್ತೆ ನೆಲೆಗೊಳಿಸಿ ಧೈರ್ಯದಿಂದ ತನ್ನ ಶೋಕವನ್ನು ಬಹಳವಾಗಿ ಪರಿಹರಿಸಿಕೊಂಡ.

ಸದ್ಗತಿಗೆ ತೆರಳಿದ ಕೃಷ್ಣಪತ್ನಿಯರು

ಸ್ತ್ರಿಯೋ ಮ್ಲೇಚ್ಛಹೃತಾಃ ಕೃಷ್ಣಪ್ರೇಷಿತಾದ್ ದಾಲ್ಭ್ಯ ತಃ ಪುನಃ ।
ಗೋವಿಂದೈಕಾದಶೀಂ ಶ್ರುತ್ವಾ ಕೃತ್ವಾ ಸಾರಸ್ವತೇ ಜಲೇ ।
ನಿಮಜ್ಯ ವಾಯೋರ್ವಚನಾತ್ ತ್ಯಕ್ತದೇಹಾ ದಿವಂ ಯಯುಃ ॥ ೪೮ ॥

---

೪೭. ವಾಸುದೇವಾಂಘ್ರ್ಯ ಭಿಧ್ಯಾನಪರಿಬೃಂಹಿತರಂಹಸಾ ।
ಭಕ್ತ್ಯಾ ನಿರ್ಮಥಿತಾಶೇಷಕಷಾಯಧಿಷಣೋಽರ್ಜುನಃ ।
ಗೀತಂ ಭಗವತಾ ಜ್ಞಾನಂ ಯತ್ ತತ್ ಸಂಗ್ರಾಮಮೂರ್ಧನಿ ।
ಕಾಲಕರ್ಮತಮೋರುದ್ಧಂ ಪುನರಧ್ಯಗಮತ್ ಪ್ರಭುಃ ॥ - ವಿ. ಭಾಗವತ (೧/೧೫/೧,೨)

೪೮. ಗೋವಿಂದೈಕಾದಶೀಂ ಶ್ರುತ್ವೇತ್ಯತ್ರ ಯದಾ ಮಾರ್ಗಶೀರ್ಷಾದಿಮಾಸಾನಾಂ ದೇವತಾಃ ಕೇಶವಾದ್ಯಾಃ ತದಾऽऽಷಾಢಸ್ಯಾಪಿ ವಾಮನ ಏವ ದೇವತಾ। ಯದಾ ತು ಸಾಂವತ್ಸರೀಕದ್ವಾದಶಶುಕ್ಲೈಕಾದಶೀನಾಂ ಚ ಕೇಶವಾದ್ಯಾಃ ದೇವತಾಃ ಸಾಂವತ್ಸರಿಕದ್ವಾದಶಕೃಷ್ಣೈಕಾದಶೀನಾಂ ತು ಸಂಕರ್ಷಣಾದಿದ್ವಾದಶಮೂರ್ತಯೋ ದೇವತಾಃ ತದಾ ಚೈತ್ರಶುದ್ಧೈಕಾದಶೀಮಾರಭ್ಯ ಗಣನಾಯಾಮಾಷಾಢಶುದ್ಧೈಕಾದಶ್ಯಾಃ ಗೋವಿಂದೋ ದೇವತಾ। ತಾಂ ಆಷಾಢಶುದ್ಧೈಕಾದಶೀಂ ಕೃತ್ವಾ= ಸ್ವಕೃತದರ್ಪಪರಿಹಾರಕತಯಾ ಕೃತ್ವಾ ಶಾಪದಾತುಃ ಗೋವಿಂದಸ್ಯ ಕೃಪಾಂ ಚ ಲಬ್ಧ್ವಾ। ಯದ್ಯಪಿ ವಿಷ್ಣುಪ್ರೀತ್ಯರ್ಥ ಏಕಾದಶೀವ್ರತಂ ಸರ್ವದಾ ಕುರ್ವಂತಿ ತಥಾऽಪಿ ಪ್ರಾಯಶ್ಚಿತ್ತತಯಾ ಕರಣಾತ್ ವಿಶಿಷ್ಯೋಕ್ತಿಃ। ವಾಯೋರ್ವಚನಾತ್ = ಅಶರೀರತಯಾ ಅದೃಶ್ಯವಾಯೋರ್ವಚನಾತ್ – (ವಾ.)

ಅ: ಆಭೀರರಿಂದ ಅಪಹೃತರಾದ ಕೃಷ್ಣಪತ್ನಿಯರು ಕೃಷ್ಣ ಕಳುಹಿಸಿದ ದಾಲ್ಭ್ಯ ಮುನಿಯಿಂದ ಗೋವಿಂದೈಕಾದಶೀವ್ರತವನ್ನು ಕೇಳಿ ಆಚರಿಸಿ, ಸರಸ್ವತೀನದಿಯ ಜಲದಲ್ಲಿ ಮಿಂದು, ವಾಯುವಿನ ವಚನದಂತೆ ದೇಹವನ್ನು ತೊರೆದು ಸ್ವರ್ಗಕ್ಕೆ ತೆರಳಿದರು.

ವಿ: ೧) ಕೃಷ್ಣಪತ್ನಿಯರಾದ ಆ ಹದಿನಾರು ಸಾವಿರದ ನೂರು ಜನರು ಹಾಗೆ ಮ್ಲೇಚ್ಛರಿಂದ ಅಪಹೃತರಾಗಲು ಅವರೆಲ್ಲ ಗರ್ವಿತರಾಗಿದ್ದುದೇ ಕಾರಣ.

೨) ಅವರಿಗೆ ಹಾಗೆ ಆಭೀರರ ಆಕ್ರಮಣದಿಂದ ಗರ್ವ ಪರಿಹಾರವಾದ ಮೇಲೆ ದಾಲ್ಭ್ಯ ಮುನಿಗಳಿಂದ ಅದರ ಪರಿಹಾರದ ಮಾರ್ಗವನ್ನು ತಿಳಿದು, ಗೋವಿಂದೈಕಾದಶೀ ವ್ರತವನ್ನು ಆಚರಿಸಿ, ಸರಸ್ವತೀನದಿಯಲ್ಲಿ ಮಿಂದರು.

೩) ಆಗ ಆ ನದಿಯಲ್ಲೇ ದೇಹ ತೊರೆಯಲು ಅಶರೀರವಾಣಿ ಸೂಚನೆ ನೀಡಿದ್ದರಿಂದ ಅವರೆಲ್ಲ ಆ ನದಿಯಲ್ಲೇ ದೇಹವನ್ನು ತೊರೆದು ಸದ್ಗತಿಗೆ ತೆರಳಿದರು. ದಾಲ್ಭ್ಯ ಮುನಿಯನ್ನು ಕಳಿಸಿದ್ದೂ ಸಹ ಶ್ರೀಕೃಷ್ಣನೇ.

೪) ಇಲ್ಲಿ ಗೋವಿಂದೈಕಾದಶೀ ಎಂಬುದಕ್ಕೆ ಆಷಾಢ ಶುಕ್ಲ ಏಕಾದಶೀ ಎಂದೂ, ಫಾಲ್ಗುಣ ಶುಕ್ಲ ಏಕಾದಶೀ ಎಂದೂ ವಿವರಗಳು ವ್ಯಾಖ್ಯಾನಗಳಲ್ಲಿವೆ.

೫) ಅವರೆಲ್ಲ ಸದಾ ಏಕಾದಶೀವ್ರತವನ್ನು ಆಚರಿಸುವವರೇ ಆದರೂ ಆಗ ಪ್ರಾಯಶ್ಚಿತ್ತರೂಪವಾಗಿ ವಿಶೇಷವಾಗಿ ಆಚರಿಸಿದರು ಎಂದು ತಿಳಿಯಬೇಕು ಎಂಬ ವಿವರಣೆ ವಾದಿರಾಜೀಯದಲ್ಲಿದೆ.

ಅರ್ಜುನ ಮಾಡಿದ ರಾಜ್ಯವ್ಯವಸ್ಥೆ

ಅರ್ಜುನಸ್ತು ಕುರುಕ್ಷೇತ್ರೇ ಹಾರ್ದಿಕ್ಯಯುಯುಧಾನಯೋಃ ।
ಸುತೌ ಸಾರಸ್ವತೇ ಚೈವ ದೇಶೇ ರಾಜ್ಯೇऽಭ್ಯಷೇಚಯತ್ ॥ ೪೯ ॥

---

೪೮. ಏವಂ ನಾರದಶಾಪೇನ ಕೇಶವಸ್ಯ ಚ ಧೀಮತಃ ।
ವೇಶ್ಯಾತ್ವಮಾಗತಾಃ ಸರ್ವಾ ಭವತ್ಕಃ ಕಾಮಮೋಹಿತಾಃ ॥
(ಕೃಷ್ಣಪತ್ನಿಯರನ್ನು ಕುರಿತು ದಾಲ್ಭ್ಯರ ವಚನ) – ಮತ್ಸ್ಯಪುರಾಣ (೬೯/೨೫)

೪೯. ಚೈತ್ರಾದಿಶುದ್ಧದ್ವಾದಶ್ಯೇಕಾದಶೀನಾಂ ಕೇಶವಾದಿದ್ವಾದಶಮೂರ್ತೀನಾಂ ದೇವತಾತ್ವಾದಾಷಾಢ-ಶುದ್ಧೈಕಾದಶ್ಯಾಃ ಗೋವಿಂದದೇವತಾತ್ವೇನ ಗೋವಿಂದೈಕಾದಶೀತ್ವಮುಕ್ತಮ್ । ತಥಾ ಚೈತ್ರಾದಿಕೃಷ್ಣೈಕಾದಶೀ-ದ್ವಾದಶೀನಾಂ ಸಂಕರ್ಷಣಾದಯಃ ಕ್ರಮಾದ್ ದ್ವಾದಶದೇವತಾಃ ॥ – (ಜ.)

ಅ: ಅರ್ಜುನನು ಕೃತವರ್ಮ ಮತ್ತು ಸಾತ್ಯಕಿಯರ ಪುತ್ರರನ್ನು ಕುರುಕ್ಷೇತ್ರ ಮತ್ತು ಸಾರಸ್ವತದೇಶದ ರಾಜ್ಯದಲ್ಲಿ ಅಭಿಷೇಕಿಸಿದನು.

ಕೃಷ್ಣನ ಮರಿಮೊಮ್ಮಗನಿಗೆ ರಾಜ್ಯಾಭಿಷೇಕ

ಅನಿರುದ್ಧಸುತಂ ವಜ್ರಂ ಪ್ರಿಯಂ ಕೃಷ್ಣಸ್ಯ ಸದ್ಗುಣಮ್ ।
ಸ ಶೂರಸೇನೇಂದ್ರಪ್ರಸ್ಥರಾಜಾನಮಕರೋದ್ವಶೀ ॥ ೫೦ ॥

ಅ: ಕೃಷ್ಣನಿಗೆ ಪ್ರಿಯನೂ, ಉತ್ತಮ ಗುಣವಂತನೂ ಆದ ಅನಿರುದ್ಧನ ಪುತ್ರ ವಜ್ರನನ್ನು ಯೋಗಿಯಾದ ಅರ್ಜುನ ಶೂರಸೇನ ದೇಶ ಮತ್ತು ಇಂದ್ರಪ್ರಸ್ಥಗಳಿಗೆ ರಾಜನನ್ನಾಗಿ ಮಾಡಿದ.

ವಿ: ವಜ್ರ ಅನಿರುದ್ಧನ ಮಗ. ಎಂದರೆ, ಕೃಷ್ಣನ ಮರಿಮೊಮ್ಮಗ ಎಂದರ್ಥ. ಯಾದವರೆಲ್ಲ ಮಡಿಯದೇ ಅವರಲ್ಲಿ ವಜ್ರ ಮೊದಲಾದ ಅನೇಕರು, ಸ್ತ್ರೀಯರು, ಬಾಲಕರ ಸಹಿತ ಉಳಿದದ್ದು ಗಾಂಧಾರೀಶಾಪ, ವಿಪ್ರಶಾಪಗಳನ್ನೆಲ್ಲ ತಾನು ಪರಿಹರಿಸಬಲ್ಲ ಸಮರ್ಥ ಎಂಬ ಕೃಷ್ಣನ ಸಂಕಲ್ಪದಿಂದ ಎಂದು ತಿಳಿಯಬೇಕು. ಅವರೆಲ್ಲರ ಶಾಪಕ್ಕಿಂತಲೂ ಯಾದವವಿನಾಶ ಮೂಲತಃ ಕೃಷ್ಣನ ಸಂಕಲ್ಪವೇ ಆಗಿತ್ತು ಎಂದರ್ಥ.

ಪರೀಕ್ಷಿದ್ರಾಜನಿಗೆ ಪಟ್ಟಾಭಿಷೇಕ

ಸ್ತ್ರೀಬಾಲಾಂಶ್ಚ ಧನಂ ಚೈವ ತಸ್ಮಿನ್ ಸಂಸ್ಥಾಪ್ಯ ಫಲ್ಗುನಃ ।
ಯಯೌ ಭ್ರಾತೄನಶೇಷಂ ಚ ವೃತ್ತಂ ತೇಷಾಮವರ್ಣಯತ್ ॥ ೫೧ ॥

ಅ: ಹೆಂಗಸರನ್ನು, ಮಕ್ಕಳನ್ನು, ಧನವನ್ನು ವಜ್ರನ ವಶಕ್ಕೆ ಒಪ್ಪಿಸಿ ಅರ್ಜುನ ಧರ್ಮರಾಜಾದಿ ಸೋದರರ ಬಳಿಗೆ ನಡೆದ. ಅವರಿಗೆ ಸಕಲ ವೃತ್ತಾಂತವನ್ನೂ ತಿಳಿಸಿದ.

---

೪೯. ಹಾರ್ದಿಕ್ಯತನಯಂ ಪಾರ್ಥೋ ನಗರೇ ಮಾರ್ತಿಕಾವತೇ ।
ಭೋಜರಾಜಕಲತ್ರಂ ಚ ಹೃತಶೇಷಂ ನರೋತ್ತಮಃ ॥...
ಯೌಯುಧಾನಿಂ ಸರಸ್ವತ್ಯಾಂ ಪುತ್ರಂ ಸಾತ್ಯಕಿನಃ ಪ್ರಿಯಮ್ ।
ನ್ಯವೇಶಯತ ಧರ್ಮಾತ್ಮಾ ವೃದ್ಧಬಾಲಪುರಸ್ಕೃತಮ್ ॥ – ಭಾರತ (ಮೌಸಲ ೭/೬೯, ೭೧)

೫೦. ಇಂದ್ರಪ್ರಸ್ಥೇ ದದೌ ರಾಜ್ಯಂ ವಜ್ರಾಯ ಪರವೀರಹಾ ॥ – ಭಾರತ (ಮೌಸಲ.೭/೭೨)

೫೦. ಸ್ತ್ರೀಬಾಲವೃದ್ಧಾನಾದಾಯ ಹತಶೇಷಾನ್ ಧನಂಜಯಃ ।
ಇಂದ್ರಪ್ರಸ್ಥಂ ಸಮಾವೇಶ್ಯ ವಜ್ರಂ ತತ್ರಾಭ್ಯಷೇಚಯತ್ ॥ - ಭಾಗವತ (೧೧/೩೧/೨೫)

೫೧. ಕುರುಕ್ಷೇತ್ರೇ ಕೃತವರ್ಮಸುತಂ ಸಾರಸ್ವತೇ ಸಾತ್ಯಕಿಸುತಮಿತಿ ಕ್ರಮೇಣೈವ ಯೋಜ್ಯಮ್ ॥ - (ಜ.)

ವಿ: ಕೃಷ್ಣನ ಪರಂಧಾಮ ಗಮನದಿಂದಾದ ನೋವನ್ನು ಅರ್ಜುನ ಧರ್ಮರಾಜನಲ್ಲಿ ತೋಡಿಕೊಳ್ಳುವ ಬಗೆ ತುಂಬಾ ವಿವರವಾಗಿ ಶ್ರೀಮದ್ಭಾಗವತದಲ್ಲಿ ವರ್ಣಿತವಾಗಿದೆ (೧/೧೪/೫–೨೭) ಅದನ್ನು ಸೂಚಿಸಲು ಇಲ್ಲಿ **'ಅವರ್ಣಯತ್'** ಎಂಬ ಪದವನ್ನು ಪ್ರಯೋಗಿಸಿರುವರು ಎಂದು ತಿಳಿಯಬಹುದು.

ಪರೀಕ್ಷಿತನಿಗೆ ರಾಜ್ಯಾಭಿಷೇಕ

ತೇ ಚಾವಿಯೋಗಸಮಯಂ ಸ್ಮರಂತೋ ಮುರವೈರಿಣಃ ।
ಅಭ್ಯಷಿಂಚನ್ ಭಾಗವತಂ ಮಹಾರಾಜ್ಯೇ ಪರೀಕ್ಷಿತಮ್ ॥ ೫೨ ॥

ಅ: ಪಾಂಡವರು ತಮಗೆ ಕೃಷ್ಣನ ವಿಯೋಗವಾಗದಂತೆ ಅವನೊಂದಿಗೆ ಮಾಡಿಕೊಂಡಿದ್ದ ನಿಯಮವನ್ನು ಸ್ಮರಿಸಿಕೊಂಡು ಭಗವದ್ಭಕ್ತನಾದ ಪರೀಕ್ಷಿತನನ್ನು ಮಹಾರಾಜಪದವಿಯಲ್ಲಿ ಅಭಿಷೇಕ ಮಾಡಿದರು.

ವಿ: ಕೃಷ್ಣನು ಪರಂಧಾಮಕ್ಕೆ ತೆರಳಿದ ಬಳಿಕ ತಾವೂ ಭೂಲೋಕದಲ್ಲಿ ಉಳಿದರೆ ಅವನ ವಿಯೋಗವನ್ನು ಹೊಂದಿದಂತಾಗುವುದು ಎಂಬ ಆಲೋಚನೆಯಿಂದ ಪಾಂಡವರು ಕೃಷ್ಣನನ್ನು ಪ್ರಾರ್ಥಿಸಿಕೊಂಡಿದ್ದರು. ಕೃಷ್ಣ ಅದಕ್ಕೆ ಪರಿಹಾರವಾಗಿ ತಾನು ಪರಂಧಾಮಕ್ಕೆ ತೆರಳುತ್ತಿದ್ದಂತೆಯೇ ಅವರೂ ಸ್ವರ್ಗಾರೋಹಣ ಮಾಡಬೇಕೆಂದು ಆದೇಶ ನೀಡಿದ್ದ. ಅದನ್ನು ಪಾಂಡವರು ಪ್ರತೀಕ್ಷಿಸುತ್ತಿದ್ದರು. ಅಂತಹ ಸಮಯ ಆಗ ಒದಗಿದ್ದರಿಂದ ಅವರು ಪರೀಕ್ಷಿದ್ರಾಜನಿಗೆ ರಾಜ್ಯ ಒಪ್ಪಿಸಿ ಮಹಾಪ್ರಸ್ಥಾನಕ್ಕೆ ಸಿದ್ಧರಾದರು ಎಂದರ್ಥ.

ಮ್ಲೇಚ್ಛರ ಶಿಕ್ಷಣಕ್ಕೆ ಪರೀಕ್ಷಿದ್ರಾಜನಿಗೆ ಆದೇಶ

ಸ್ತ್ರೀಹಾರಿಣಾಂ ಚ ಮ್ಲೇಚ್ಛಾನಾಂ ವಧಾಯೈನಮಯೋಜಯನ್ ।
ಕೃತಂ ಚ ತೇನ ತತ್ಕರ್ಮ ವೋಢ್ರಾ ಪೈತಾಮಹೀಂ ಧುರಮ್ ॥ ೫೩ ॥

---

೫೨. ತೇ ಚಾವಿಯೋಗಸಮಯಮಿತ್ಯತ್ರ ಅವಿಯೋಗಃ = ಮಮ ಗಮನಾನಂತರಂ ಭವದ್ಭಿರಪ್ಯನುಗಮನೇ ಕೃತೇ ಸತಿ ಭವತಾಂ ಮಮ ಚಾವಿಯೋಗಃ ಸ್ಯಾತ್ ಮಯಿ ಊರ್ಧ್ವಲೋಕಂ ಗತೇ ಸತ್ಯಪಿ ಭವದ್ಭಿರ್ಭೂಮಾವೇವ ಸ್ಥಿತೈ ವಿಯೋಗಃ ಸ್ಯಾತ್। ಅತೋ ಮದ್ಗಮನಾನಂತರಮೇವ ಭವಂತೋಽಪಿ ಶೀಘ್ರಮಾಯಾಂತ್ವಿತಿ ದಾರುಕಮುಖೇನ ಪ್ರೇಷಿತಕೃಷ್ಣಸಂಕೇತಮ್ । –(ವಾ.)

೫೩. ಪೈತಾಮಹೀಂ ಧುರಮಿತ್ಯತ್ರ ಪಿತಾಮಹಪರಾಭವಹೇತೂನಾಂ ವಧಃ ಸಾಕ್ಷಾತ್ತತ್ಪುತ್ರಾಭಾವೇ ಪೌತ್ರೇಣೈವ ಕರ್ತವ್ಯ ಇತಿ ಸೂಚಿತಮ್ –(ವಾ.)

ಅ: ಸ್ತ್ರೀಯರನ್ನು ಅಪಹರಿಸಿದ ಮ್ಲೇಚ್ಛರ ವಧೆಗೆ ಪರೀಕ್ಷಿತನನ್ನು ನಿಯಮಿಸಿದರು. ತಾತಂದಿರ ಭಾರವನ್ನು ಹೊತ್ತ ಪರೀಕ್ಷಿದ್ರಾಜ ಮುಂದೆ ಆ ಕಾರ್ಯವನ್ನು ಪೂರೈಸಿದ.

ಪಾಂಡವರ ಮಹಾಪ್ರಸ್ಥಾನಕ್ಕೆ ಕಾರಣ

ಸಮಯಂ ಪರಿರಕ್ಷದ್ಭಿರ್ನ ಪಾರ್ಥೈರೇವ ತತ್ ಕೃತಮ್ ।
ವಾಸುದೇವಪದಾ ಸ್ಪೃಷ್ಟಭೂಕಂಟಕಸಮುದ್ಧೃತಿಃ ।
ಸಮಯಃ ಪಾಂಡವಾನಾಂ ಹಿ ತಸ್ಯೈವಾನುಗತಿಃ ಪರಮ್ ॥ ೫೪ ॥

ಅ: ಕೃಷ್ಣನೊಂದಿಗೆ ಮಾಡಿಕೊಂಡಿದ್ದ ನಿಯಮವನ್ನು ಪರಿಪಾಲಿಸಲೆಂದು ಪಾಂಡವರು ತಾವೇ ಆ ಕಾರ್ಯವನ್ನು ಮಾಡಲಿಲ್ಲ. ಕೃಷ್ಣನ ಪಾದಸ್ಪರ್ಶ ಇರುವಷ್ಟು ಕಾಲ ಮಾತ್ರ ಭೂಮಿಗೊದಗುವ ಕಂಟಕವನ್ನು ಪರಿಹರಿಸುವುದು ಪಾಂಡವರ ನಿಯಮವಾಗಿತ್ತು; ಬಳಿಕ ಕೃಷ್ಣನನ್ನೇ ಹಿಂಬಾಲಿಸಬೇಕು ಎಂಬುದೂ ಸಹ.

ವಿ: ಪಾಂಡವರು ಶ್ರೀಕೃಷ್ಣನ ಭೂಭಾರಹರಣಕಾರ್ಯದಲ್ಲಿ ಸೇವೆ ಸಲ್ಲಿಸಲೆಂದು ಅವತರಿಸಿದ್ದರು. ಕೃಷ್ಣನೊಂದಿಗೇ ತಮ್ಮ ಅವತಾರಕಾರ್ಯವನ್ನು ಮುಕ್ತಾಯಗೊಳಿಸುವುದು ಅವರ ನಿಯಮವಾಗಿತ್ತು ಅದರಿಂದ ಆ ಮ್ಲೇಚ್ಛರ ನಿಗ್ರಹ ಕಾರ್ಯವನ್ನು ತಾವೇ ಮಾಡದೇ ಅದನ್ನು ಪರೀಕ್ಷಿದ್ರಾಜನಿಗೆ ವಹಿಸಿದರು ಎಂದರ್ಥ.

ಅನುವ್ರಜದ್ಭಿರ್ವಿಶ್ವೇಶಂ ನಾಸ್ಮಾಭಿರ್ಭೂಸ್ತದುಜ್ಝಿತಾ ।
ಭೋಜ್ಯಾ ರಕ್ಷ್ಯಾಽಪಿ ವಾ ತೇಷಾಮಿತ್ಯೇವ ಸಮಯಃ ಪುರಾ ॥ ೫೫ ॥

---

೫೪. ವಾಸುದೇವಪದಾಸ್ಪೃಷ್ಟಭೂಕಂಟಕಸಮುದ್ಧೃತಿರಿತ್ಯತ್ರ ವಾಸುದೇವಪದಾ= ಶ್ರೀಕೃಷ್ಣಚರಣೇನ ಸ್ಪೃಷ್ಟಾ ಯಾ ಭೂಮಿಃ ತಸ್ಯಾಂ ಕಂಟಕಸಮುದ್ಧೃತಿಃ= ಕಂಟಕಭೂತದೈತ್ಯಾನಾಂ ಸಂಹಾರಃ ಕ್ರಿಯತೇ। ವಾಸುದೇವಚರಣ-ಸ್ಪರ್ಶರಹಿತಾಯಾಂ ತು ನ ಕ್ರಿಯತೇ। ಪರಂ = ಭುವಿ ವಾಸುದೇವಪಾದಸ್ಪರ್ಶಾಪಗಮಾತ್ಪಶ್ಚಾತ್ ತಸ್ಯೈವಾನುಗತಿಃ ಕ್ರಿಯತ ಇತಿ ಸಮಯಃ= ಸಂಕೇತಃ ಯುಕ್ತಶ್ಚಾಯಂ ಸಮಯಃ। ರಾಜನಿ ಸ್ಥಿತೇ ಭಟಾ ಅಪಿ ಸಹೈವ ತಿಷ್ಠಂತಿ। ರಾಜನಿ ಗತೇ ಚ ಸಹೈವ ಗಚ್ಛಂತೀತಿ ಲೋಕಪ್ರಸಿದ್ಧೇರಿತಿ ಭಾವಃ – (ವಾ.)

೫೪. ಯದ್ವಾ ಪದಾಭ್ಯಾಮಸ್ಪೃಷ್ಟಾ ಚ ಸಾಭೂಶ್ಚೇತಿ । ...ಪಾಂಡವಾನಾಂ ಸಮಯಃ ಸಂಕೇತಕಾಲಃ ಸಿದ್ಧಾಂತೋ ವಾ । - (ಜ.)

೫೫. ನಾಹಂ ವೃಷ್ಣಿಪ್ರವೀರೇಣ ಬಂಧುಭಿಶ್ಚೈವ ಮಾತುಲ ।
ವಿಹೀನಾಂ ಪೃಥಿವೀಂ ದ್ರಷ್ಟುಂ ಶಕ್ಷ್ಯಾಮೀಹ ಕಥಂಚನ ॥ – ಭಾರತ (ಮೌಸಲ. ೭/೨)

ಅ: ನಾವು ಕೃಷ್ಣನನ್ನು ಅನುಸರಿಸಿ ನಡೆಯಬೇಕು. ಅವನಿಲ್ಲದ ಭೂಮಿಯನ್ನು ಭೋಗಿಸುವುದಾಗಲೀ, ರಕ್ಷಿಸುವುದಾಗಲೀ ಮಾಡಕೂಡದು ಎಂಬುದು ಪಾಂಡವರು ಹಿಂದೆಯೇ ಕೈಗೊಂಡ ನಿಯಮವಾಗಿತ್ತು.

ದ್ರೌಪದಿಯಲ್ಲಿ ಐಕ್ಯಳಾದ ಕಾಳೀ

ತತ್ರ ಕಾಲೀ ಭೀಮಭಾರ್ಯಾ ವೈಷ್ಣವಂ ಯೋಗಮಾಸ್ಥಿತಾ ।
ಕೃಷ್ಣಯೈಕತ್ವಮಾಪನ್ನಾ ತ್ಯಕ್ತ್ವಾ ದೇಹಂ ತು ಮಾನುಷಮ್ ॥ ೫೬ ॥

ಅ: ಆಗ ಭೀಮಪತ್ನಿಯಾದ ಕಾಳೀ ವೈಷ್ಣವಯೋಗವನ್ನು ಸ್ವೀಕರಿಸಿ ತನ್ನ ಮಾನುಷ ದೇಹವನ್ನು ತೊರೆದು ದ್ರೌಪದಿಯೊಂದಿಗೆ ಐಕ್ಯಹೊಂದಿದಳು.

ವಿ: ವಿದುರ ಯುಧಿಷ್ಠಿರನಲ್ಲೂ, ನೀಲಾದೇವಿ ತನ್ನ ಮತ್ತೊಂದು ನೀಲಾರೂಪದಲ್ಲೂ ಐಕ್ಯ ಹೊಂದಿದಂತೆ, ಭಾರತ್ಯವತಾರಳಾದ ಕಾಳೀದೇವಿ ತನ್ನ ಮತ್ತೊಂದು ರೂಪವಾದ ದ್ರೌಪದಿಯಲ್ಲಿ ಐಕ್ಯ ಹೊಂದಿ ದೇಹ ತೊರೆದಳು ಎಂದರ್ಥ.

ಹಸ್ತಿನಾಪುರದಲ್ಲೇ ಉಳಿದ ಸುಭದ್ರೆ ಮೊದಲಾದವರು

ಸುಭದ್ರಾದ್ಯಾಸ್ತು ಯಾ ಭಾರ್ಯಾಃ ಪಾರ್ಥಾನಾಂ ತು ತದಾಜ್ಞಯಾ ।
ಯುಯುತ್ಸುಶ್ಚಾತ್ರ ಶಿಕ್ಷಾರ್ಥಂ ಪೌತ್ರಸ್ಯೈ ವಾವಸನ್ ಪುರೇ ॥ ೫೭ ॥

ಅ: ಸುಭದ್ರೆ ಮೊದಲಾದ ಇತರ ಪಾಂಡವ ಪತ್ನಿಯರು, ಹಾಗೂ ಯುಯುತ್ಸು, ಪಾಂಡವರ ಆದೇಶದಂತೆ ಮೊಮ್ಮಗನಾದ ಪರೀಕ್ಷಿದ್ರಾಜನಿಗೆ ಮಾರ್ಗದರ್ಶನ ಮಾಡಲೆಂದು ಹಸ್ತಿನಾಪುರದಲ್ಲೇ ಉಳಿದುಕೊಂಡರು.

ಪಾಂಡವರ ಮಹಾಪ್ರಸ್ಥಾನ

ಸಂತ್ಯಜ್ಯ ರಾಜಚಿಹ್ನಾನಿ ವೈಷ್ಣವಂ ಯೋಗಮಾಸ್ಥಿತಾಃ ।
ವೀರಾಧ್ವಾನಂ ಯಯುಃ ಸರ್ವೇ ಕೃಷ್ಣಯಾ ಸಹ ಪಾಂಡವಾಃ ॥ ೫೮ ॥

---

೫೮. ವೀರಾಧ್ವಾನಂ = ವೀರಾಣಾಂ ಯೋಗಿನಾಂ ಅಧ್ವಾನಂ = ಮಾರ್ಗಮ್। ಈಶಾನೀಮಿತ್ಯರ್ಥಃ ತದೇವ ಸ್ಪಷ್ಟಯತಿ ಪ್ರಾಗುದೀಚೀಮಿತಿ। ಪ್ರಾಗುದೀಚೀದಿಶೋರ್ಮಧ್ಯೇ ಕೋಣೇ ವಿದ್ಯಮಾನಾ ದಿಕ್ ಪ್ರಾಗುದೀಚೀ ತಾಂ ರೌದ್ರೀಂ ದಿಶಮಿತ್ಯರ್ಥಃ – (ವಾ.)

ಅ: ಎಲ್ಲ ಪಾಂಡವರು ರಾಜಚಿಹ್ನೆಗಳನ್ನು ತೊರೆದು, ವೈಷ್ಣವಯೋಗದಲ್ಲಿ ತೊಡಗಿದವರಾಗಿ ದ್ರೌಪದಿಯೊಂದಿಗೆ ಮಹಾಪ್ರಸ್ಥಾನ ಕೈಗೊಂಡರು.

ವಿ: ೧) ವೀರಾಧ್ವಾನವೆಂದರೆ ಮಹಾಪ್ರಸ್ಥಾನ; ಆಹಾರವನ್ನು ತೊರೆದು ಈಶಾನ್ಯದಿಕ್ಕಿನಿಂದ ಆರಂಭಿಸಿ ಪ್ರದಕ್ಷಿಣಾಕಾರವಾಗಿ ಸತತ ಸಂಚಾರ ಕೈಗೊಂಡು ದೇಹ ತೊರೆಯುವವರೆಗೂ ಸಾಗುವ ವಿಶಿಷ್ಟವಾದ ವ್ರತ :

ಅಪರಾಜಿತಾಂ ವಾಸ್ಥಾಯ ವ್ರಜೇದ್ದಿಶಮಜಿಹ್ಮಗಃ ।
ಆನಿಪಾತಾಚ್ಛರೀರಸ್ಯ ಯುಕ್ತೋ ವಾರ್ಯನಿಲಾಶನಃ ॥ – ಮನುಸ್ಮೃತಿ (೬/೩೧)

೨) ಅವರ ಜೊತೆಗೆ ನಾಯಿಯ ರೂಪದಲ್ಲಿ ಯಮನು ಸಹ ಅವರನ್ನು ಹಿಂಬಾಲಿಸಿದ ವಿವರ ಮಹಾಭಾರತದಲ್ಲಿದೆ:

ಶ್ವಾ ಚೈವಾನುಯಯಾವೇಕಃ ಪ್ರಸ್ಥಿತಾನ್ ಪಾಂಡವಾನ್ ವನಮ್ ।

– ಮಹಾಪ್ರಸ್ಥಾನ (೧/೩೩)

೩) ಈ ವಿವರ ಇಲ್ಲಿಯೂ ಮುಂದೆ ಬರುವುದು (ಶ್ಲೋ. ೮೦).

ಸಮುದ್ರದಲ್ಲಿ ಗಾಂಡೀವ

ಪ್ರಾಗುದೀಚೀಂ ದಿಶಂ ಪೂರ್ವಂ ಯಯುಸ್ತತ್ರಾರ್ಜುನೋ ಧನುಃ ।
ನಾತ್ಯಜಲ್ಲೋಭತಸ್ತಂ ತು ಸಮುದ್ರಮುಪ ಪಾವಕಃ ।
ದೃಷ್ಟ್ವಾ ಯಯಾಚೇ ರಾಜಾನಂ ತದುಕ್ತಃ ಪ್ರಾಸ್ಯದಂಬುಧೌ ॥ ೫೯ ॥

---

೫೮. ತತಃ ಸ ರಾಜಾ ಕೌರವ್ಯೋ ಧರ್ಮಪುತ್ರೋ ಯುಧಿಷ್ಠಿರಃ ।
ಉತ್ಸೃಜ್ಯಾಭರಣಾನ್ಯಂಗಾಜ್ಜಗೃಹೇ ವಲ್ಕಲಾನ್ಯುತ ॥
ಭೀಮಾರ್ಜುನಯಮಾಶ್ಚೈವ ದ್ರೌಪದೀ ಚ ಯಶಸ್ವಿನೀ ॥ - ಭಾರತ (ಮೌಸಲ. ೧/೨೦)

೫೮. ಕೃತೋಪವಾಸಾಃ ಕೌರವ್ಯ ಪ್ರಯಯುಃ ಪ್ರಾಙ್ಮುಖಾಸ್ತತಃ ।
ಯೋಗಯುಕ್ತಾಮಹಾತ್ಮಾನಸ್ತ್ಯಾಗಧರ್ಮಮುಪೇಯುಷಃ ॥ - ಭಾರತ (ಮೌಸಲ. ೧/೨೯)

೫೮. ಭ್ರಾತರಃ ಪಂಚ ಕೃಷ್ಣಾ ಚ ಷಷ್ಠೀ ಶ್ವಾ ಚೈವ ಸಪ್ತಮಃ । ಆತ್ಮನಾ ಸಪ್ತಮೋ ರಾಜಾ ನಿರ್ಯಯೌ ಗಜಸಾಹ್ವಯಾದಿತಿ ಮಹಾಪ್ರಾಸ್ಥಾನಿಕೇ । ವೀರಾಧ್ವಾನಂ ವೀರಪ್ರಾಪ್ಯಮಾರ್ಗಮ್ । - (ಜ.)

೫೯. ತೂಣೌ ಧನುಶ್ಚೇತಿ ಶೇಷಃ । ಸ ಜಲೇ ಪ್ರಾಕ್ಷಿಪಚ್ಚೈತತ್ ತಥಾಕ್ಷಯ್ಯೇ ಮಹೇಷುಧೀ ಇತಿ ಮಹಾಪ್ರಾಸ್ಥಾನಿಕೇ॥ - (ಜ.)

ಅ: ಅವರು ಮೊದಲಿಗೆ ಈಶಾನ್ಯದಿಕ್ಕಿಗೆ ತೆರಳಿದರು. ಅವರಲ್ಲಿ ಅರ್ಜುನ ಲೋಭದಿಂದಾಗಿ ಗಾಂಡೀವವನ್ನು ತೊರೆದಿರಲಿಲ್ಲ; ಸಮುದ್ರದ ಬಳಿಯಲ್ಲಿ ಅಗ್ನಿ ಅದನ್ನು ನೋಡಿ ಧರ್ಮರಾಜನನ್ನು ಕೋರಿದ; ಧರ್ಮರಾಜನ ಮಾತಿನಂತೆ ಅರ್ಜುನ ಅದನ್ನು ಸಮುದ್ರದಲ್ಲಿ ಹಾಕಿದ.

ವಿ: ೧) ಇತರ ಪಾಂಡವರು ತಮ್ಮ ಶಸ್ತ್ರಾಸ್ತ್ರಗಳನ್ನೆಲ್ಲ ತೊರೆದು ಮಹಾಪ್ರಸ್ಥಾನ ಕೈಗೊಂಡಿದ್ದರೆ, ಅರ್ಜುನ ಇತರ ಶಸ್ತ್ರಾಸ್ತ್ರಗಳನ್ನು ತೊರೆದಿದ್ದರೂ ಗಾಂಡೀವವನ್ನೂ ಅಕ್ಷಯಬತ್ತಳಿಕೆಗಳನ್ನೂ ತನ್ನೊಂದಿಗೆ ತೆಗೆದುಕೊಂಡೇ ಹೊರಟಿದ್ದ. ಅದಕ್ಕೆ ಅವನಿಗೆ ಅದರ ಮೇಲಿದ್ದ ವಿಶೇಷವಾದ ಅಭಿಮಾನವೇ ಕಾರಣವಾಗಿತ್ತು:

ಗಾಂಡೀವಂ ತು ಧನುರ್ದಿವ್ಯಂ ನ ಮುಮೋಚ ಧನಂಜಯಃ ।
ರತ್ನಲೋಭಾನ್ಮಹಾರಾಜ ತೇ ಚಾಕ್ಷಯ್ಯೇ ಮಹೇಷುಧೀ ॥

– ಭಾರತ (ಮಹಾಪ್ರಸ್ಥಾನಿಕ. ೧/೩೪)

೨) ಆದರೆ, ಅದು ಅವನ ಧನುಸ್ಸೇನೂ ಆಗಿರಲಿಲ್ಲ; ಅಗ್ನಿ ಅದನ್ನು ಅವನಿಗೆ ನೀಡಿದ್ದ. ಅದನ್ನು ಗಮನಿಸಿದ ಅಗ್ನಿ ಅದನ್ನು ಮರಳಿ ತನಗೆ ಕೊಡಿಸಬೇಕೆಂದು ಧರ್ಮರಾಜನನ್ನು ಬೇಡಿದ, ಧರ್ಮರಾಜ ಹಾಗೆ ಮಾಡಲು ತಿಳಿಸಿದಾಗ ಅರ್ಜುನ ಅದನ್ನು ಸಮುದ್ರದಲ್ಲಿ ಹಾಕಿದ.

ಗಂಧಮಾದನದಲ್ಲಿ ಪಾಂಡವರು

ಪ್ರಾತಿಭಾವ್ಯಂ ತು ವರುಣೇ ನಿಸ್ತೀರ್ಯಾಗ್ನಿರದೃಶ್ಯತಾಮ್ ।
ಯಯೌ ತೇऽಪಿ ಯಯುಃ ಕ್ಷಿಪ್ರಂ ಪ್ಲವಂತಃ ಸಪ್ತವಾರಿಧೀನ್ ॥ ೬೦ ॥

---

೫೯. ಗಾಂಡಿವಂ ತು ಧನುರ್ದಿವ್ಯಂ ನ ಮುಮೋಚ ಧನಂಜಯಃ ।
ರತ್ನಲೋಭಾನ್ಮಹಾರಾಜ ತೇ ಚಾಕ್ಷಯ್ಯೇ ಮಹೇಷುಧೀ ॥ - ಭಾರತ (ಮೌಸಲ. ೧/೩೪)
ಅಗ್ನಿಂ ತಂ ದದೃಶುಸ್ತತ್ರ ಸ್ಥಿತಂ ಶೈಲಮಿವಾಗ್ರತಃ ।
ಮಾರ್ಗಮಾವೃತ್ಯ ತಿಷ್ಠಂತಂ ಸಾಕ್ಷಾತ್ತುರುಷವಿಗ್ರಹಮ್ ॥ - ಭಾರತ (ಮೌಸಲ. ೧/೩೫)
ವರುಣಾದಾಹೃತಂ ಪೂರ್ವಂ ಮಯೈತತ್ ಪಾರ್ಥಕಾರಣಾತ್ ।
ಗಾಂಡೀವಂ ಧನುಷಾಂ ಶ್ರೇಷ್ಠಂ ವರುಣಾಯೈವ ದೀಯತಾಮ್ ॥ - ಭಾರತ. (ಮೌಸಲ. ೧/೪೧)
ಸ ಜಲೇ ಪ್ರಾಕ್ಷಿಪಚ್ಚೈತತ್ ತಥಾಕ್ಷಯ್ಯೇ ಮಹೇಷುಧೀ ।
ತತೋऽಗ್ನಿರ್ಭರತಶ್ರೇಷ್ಠ ತತ್ರೈವಾಂತರಧೀಯತ ॥ - ಭಾರತ (ಮೌಸಲ. ೧/೪೩)

೬೦. ಪ್ರಾತಿಭಾವ್ಯಂ ತು ವರುಣ ಇತ್ಯತ್ರ ಪ್ರತಿಭವತೀತಿ ಪ್ರತಿಭೂಃ ವಿಪರೀತಕಾರೀತ್ಯರ್ಥಃ। ತಸ್ಯ ಭಾವಃ ಪ್ರಾತಿಭಾವ್ಯಮ್। ನಿಸ್ತೀರ್ಯ= ಪರಿಹೃತ್ಯ। ವರುಣಸ್ಯಧನುಷಃ ಪ್ರಾಗಗ್ನಿನಾऽಪಹಾರಾತ್ ವರುಣಸ್ಯಾಗ್ನಾವೀಷದ್ವೈರಂ ಸ್ಥಿತಮ್। ತತ್ಪರಿಹೃತ್ಯೇತ್ಯರ್ಥಃ – (ವಾ.)

ಅಹೋಭಿಃ ಸಪ್ತಭಿರ್ಯೋಗಂ ಸಮಾರೂಢಾಃ ಪ್ರದಕ್ಷಿಣಮ್ ।
ಕೃತ್ವಾ ಕ್ಷಚಿದಸಜ್ಜಂತಃ ಆಸೇದುರ್ಗಂಧಮಾದನಮ್ ॥ ೬೧ ॥

ಅ: ಅಗ್ನಿ ವರುಣನ ಋಣವನ್ನು ಪರಿಹರಿಸಿಕೊಂಡು ಮರೆಯಾದ. ಅವರೂ ಸಹ ಬೇಗನೆ ಏಳು ದಿನಗಳಲ್ಲಿ ಸಪ್ತಸಮುದ್ರಗಳನ್ನು ಯೋಗಬಲದಿಂದ ದಾಟಿ ಸಾಗಿದರು. ಎಲ್ಲಿಯೂ ನಿಲ್ಲದೆ ಭೂಮಿಯನ್ನು ಪ್ರದಕ್ಷಿಣೆ ಮಾಡಿ ಗಂಧಮಾದನ ಪರ್ವತಕ್ಕೆ ಆಗಮಿಸಿದರು.

ವಿ: ೧) ಗಾಂಡೀವವನ್ನು ತಂದುಕೊಟ್ಟಿದ್ದು ಅಗ್ನಿಯಾದರೂ, ಅದನ್ನು ಅವನು ತಂದಿದ್ದು ವರುಣನಿಂದ (೨೦/೨೨ಒ). ಅರ್ಜುನ ಅದನ್ನು ಸಮುದ್ರದಲ್ಲಿ ಹಾಕಿದ್ದರಿಂದ ಅದು ವರುಣನಿಗೆ ತಲುಪಿತು. ಅಗ್ನಿ ತನ್ನ ಕಾರ್ಯವನ್ನು ಪೂರೈಸಿಕೊಂಡು ಅದೃಶ್ಯನಾದ.

೨) ಏಳು ದಿನಗಳಲ್ಲಿ ಸಪ್ತಸಮುದ್ರಗಳನ್ನೂ ದಾಟುವಂತಹ ಮಹಾಯೋಗಸಿದ್ಧಿ ಪಾಂಡವರದಾಗಿತ್ತು ಎಂಬುದು ಇಲ್ಲಿಯ ವಿಶೇಷ. ವಾಯುಭಾರತಿಯರಾದ ಭೀಮದ್ರೌಪದಿಯರಿಗೆ ಅಂತಹ ಯೋಗಶಕ್ತಿ ಸಹಜವಾಗಿದ್ದರೂ, ಅವರ ಜೊತೆಯಿದ್ದದ್ದರಿಂದ ಇತರ ಪಾಂಡವರಿಗೂ ಅದು ಸಾಧ್ಯವಾಯಿತು ಎಂದು ತಿಳಿಯಬಹುದು.

ಭೀಮಾದಿಗಳ ದೇಹಪಾತ

ಅತ್ರ ನಾರಾಯಣಕ್ಷೇತ್ರೇ ತೇಷಾಂ ತನ್ವೋऽಪತನ್ ಕ್ರಮಾತ್ ।
ದ್ರೌಪದೀಸಹದೇವಾದಿಪಂಚಾನಾಂ ತತ್ರ ಮಾರುತಿಃ ॥ ೬೨ ॥

---

೬೦. ವರುಣೇ ವರುಣವಿಷಯೇ ಪ್ರಾತಿಭಾವ್ಯಂ ಪ್ರತಿಭೂತಂ ನಿಸ್ತೀರ್ಯ ಧನುರಾದಾನೇನ ನಿಸ್ತೀರ್ಯ ಅರ್ಜುನಾಯ ಧನುರ್ದೇಹಿ ತತ್ಪುನರಹಂ ತೇ ದಾಸ್ಯಾಮೀತಿ ಯತ್ಕಥನಂ ತತ್ಪ್ರತಿಭೂತ್ವಂ ... । - (ಜ.)

೬೧. ಅನುಲ್ಲಂಘ್ಯಮಹಾವಿಸ್ತೀರ್ಣಸಮುದ್ರೋಲ್ಲಂಘನೇ ಶಕ್ತಿಂ ಸೂಚಯಿತುಂ ಯೋಗಂ ಸಮಾರೂಢಾ ಇತ್ಯುಕ್ತಮ್। ಸಮ್ಯಗಾರೂಢಾಃ ಸಮಾರೂಢಾಃ। ಶುಕನಾರದಾದಿವತ್ ಬಹುತರಯೋಗಾಭ್ಯಾಸೇನ ಗಗನಮಾರ್ಗೇऽಪಿ ಗಮನಶಕ್ತಿರಭೂದಿತಿ ಭಾವಃ - (ವಾ.)

೬೧. ಅಸಜ್ಜಂತಃ ಅತಿಷ್ಠಂತಃ । - (ವ.)

೬೧. ಉದೀಚೀಂ ಪುನರಾವೃತ್ಯ ಯಯುರ್ಭರತಸತ್ತಮಾಃ ।
ಪ್ರಾದಕ್ಷಿಣ್ಯಂ ಚಿಕೀರ್ಷಂತಃ ಪೃಥಿವ್ಯಾ ಯೋಗಧರ್ಮಿಣಃ ॥ - ಭಾರತ (ಮೌಸಲ. ೧/೪೬)

೬೧. ತಂ ಚಾಪ್ಯತಿಕ್ರಮಂತಸ್ತೇ ದದೃಶುರ್ವಾಲುಕಾರ್ಣವಮ್ ।
ಅವೈಕ್ಷಂತ ಮಹಾಶೈಲಂ ಮೇರುಂ ಶಿಖರಿಣಾಂ ವರಮ್ ॥ - ಭಾರತ (ಮೌಸಲ. ೨/೨)

ಸದೇಹನಾಕಾನಿಚ್ಛುತ್ವಾದ್ದೇಹಪ್ರಪತನಂ ಹಿ ತತ್ ।
ತೇಷಾಮಿಹೇತಿ ಯಾಥಾರ್ಥ್ಯಂ ಜಾನನ್ ಪಪ್ರಚ್ಛ ಧರ್ಮಜಮ್ ।
ಕೇನ ಕೇನಾಪತದ್ದೇಹೋ ದೋಷೇಣ ನ ಇತಿ ಕ್ರಮಾತ್ ॥ ೬೩ ॥

ಅ: ಗಂಧಮಾದನದಲ್ಲಿ ನಾರಾಯಣಕ್ಷೇತ್ರದಲ್ಲಿ ದ್ರೌಪದಿ ಸಹದೇವ ಮೊದಲಾದ ಐವರ ದೇಹಗಳು ಕ್ರಮವಾಗಿ ಬಿದ್ದವು. ಆಗ ಭೀಮಸೇನ ಅವರೆಲ್ಲ ಸದೇಹರಾಗಿ ಸ್ವರ್ಗವನ್ನು ಬಯಸದವರಾದ್ದರಿಂದ ಹಾಗೆ ದೇಹ ತೊರೆದರು ಎಂಬ ವಸ್ತುಸ್ಥಿತಿಯನ್ನು ಬಲ್ಲವನಾದರೂ ಧರ್ಮರಾಜನನ್ನು ಕೇಳಿದ - ''ಯಾವ ಯಾವ ದೋಷದಿಂದ ನಮ್ಮ ದೇಹಗಳು ಹಾಗೆ ಕ್ರಮವಾಗಿ ಬೀಳುತ್ತಿವೆ?'' ಎಂದು.

ವಿ: ೧) ಗಂಧಮಾದನದಲ್ಲಿ ತೆರಳುತ್ತಿದ್ದಾಗ ಅವರ ದೇಹಗಳು ಕ್ರಮವಾಗಿ ಬೀಳತೊಡಗಿದವು, ಮೊದಲು ದ್ರೌಪದಿ, ಅನಂತರ ಸಹದೇವ, ಬಳಿಕ ನಕುಲ, ಅನಂತರ ಅರ್ಜುನ, ಕೊನೆಯಲ್ಲಿ ಭೀಮಸೇನ ಕ್ರಮವಾಗಿ ದೇಹವನ್ನು ತೊರೆದರು ಎಂದರ್ಥ.

೨) ಹಾಗೆ ಅವರೆಲ್ಲ ದೇಹ ತೊರೆದದ್ದು ಮನುಷ್ಯದೇಹವನ್ನು ಪಡೆದವರು ಅದನ್ನು ತೊರೆದೇ ತಮ್ಮ ಮೂಲರೂಪವನ್ನು ಸೇರಿಕೊಳ್ಳಬೇಕು ಎಂಬ ತತ್ವವನ್ನು ತಿಳಿಸಲು. ಅದನ್ನು ಭೀಮ ಬಲ್ಲವನಾದರೂ ಧರ್ಮರಾಜನನ್ನು ಅವರ ದೇಹಗಳೆಲ್ಲಾ ಹಾಗೆ ಬೀಳಲು ಕಾರಣವಾದ ದೋಷ ಯಾವುದು ಎಂದು ಪ್ರಶ್ನಿಸಿದನು ಎಂದರ್ಥ. ಹಾಗೆ ಕೇಳಲು ಕಾರಣ ಮುಂದೆ ಬಂದಿದೆ. (೩೨/೬೪)

೩) 'ಭೀಮಸೇತು'ದಿಂದ ಸ್ವಲ್ಪ ದೂರದಲ್ಲಿ ಒಂದು ಕುಲದೇವಿಯ ಮಂದಿರವಿದ್ದು, ಅಲ್ಲಿಯೇ ದ್ರೌಪದಿಯು ತನ್ನ ದೇಹವನ್ನು ತೊರೆದಳೆಂದು ಪ್ರತೀತಿ. ಮುಂದೆ ಲಕ್ಷ್ಮೀವನ ಎಂಬಲ್ಲಿ ನಕುಲ, ಸಹಸ್ರಧಾರಾ ಎಂಬ ಸ್ಥಳದಲ್ಲಿ ಸಹದೇವ, ಅಲ್ಲಿಂದ ಮೂರು ಕಿ.ಮೀ. ದೂರದಲ್ಲಿರುವ ಚಕ್ರತೀರ್ಥದ ಬಳಿ ಅರ್ಜುನ ಹಾಗೂ ಸತ್ಯಪಥ(ಸತೋಪಂಥ್) ಸರೋವರದ ಬಳಿ ಭೀಮಸೇನ – ಹೀಗೆ ಕ್ರಮವಾಗಿ ದೇಹ ತೊರೆದರು ಎಂದು ಪ್ರತೀತಿ.

---

೬೩. ಸದೇಹನಾಕಾನಿಚ್ಛುತ್ವಾದಿತ್ಯತ್ರ ದೇಹೇನ ಸಹ ನಾಕಮಿಚ್ಛವೋ ನ ಭವಂತೀತಿ ಸದೇಹನಾಕಾನಿಚ್ಛವಃ ತೇಷಾಂ ಭಾವಃ ಸದೇಹನಾಕಾನಿಚ್ಛುತ್ವಮ್। ತಸ್ಮಾದೇವ ಕಾರಣಾತ್ ತೇಷಾಂ = ದ್ರೌಪದ್ಯಾದೀನಾಮ್। ತದ್ದೇಹಪ್ರಪತನಮಿತಿ ಯಾಥಾರ್ಥ್ಯಂ ಜಾನನ್ ಮಾರುತಿಃ ಸ್ವಚ್ಛಂದಮೃತ್ಯೂನಾಂ ತೇಷಾಂ ದೇಹೇನೈವ ಸಹ ಋಷೀಣಾಮಿವ ಸ್ವರ್ಗಗಮನೇ ಶಕ್ತರಸ್। ಅತಃ ಮಾನುಷಾಣಾಮಿವ ನ ತದ್ದೇಹಪತನಂ ಪಾಪಾದಿನಿಮಿತ್ತಮ್। ಕಿಂತು ಮಾನುಷಂ ದೇಹಂ ಸ್ವರ್ಗಂ ಪ್ರತಿ ಕಿಮರ್ಥಂ ನ ಯಾಮ ಇತಿ ಸ್ವೇಚ್ಛಯೈವ ದೇಹತ್ಯಾಗ ಇತಿ ಜಾನನ್ ಮಾರುತಿರಿತಿ ಭಾವಃ। ಹಿ ಶಬ್ದೇನ ವಕ್ಷ್ಯಮಾಣಶ್ರುತಿಪ್ರಸಿದ್ಧಿಂ ಸೂಚಯತಿ ॥ – (ವಾ.)

ಯುಧಿಷ್ಠಿರ ಹೇಳಿದ ಅರ್ಜುನಾದಿಗಳ ದೋಷಗಳು

ಮೃತಿಕಾಲೇ ಹಿ ಯೋ ಯಸ್ಯ ದೋಷಂ ವಕ್ತ್ಯೃಣಮೋಚನಮ್ ।
ತಸ್ಮಾತ್ ಸ್ಯಾದುಕ್ತದೋಷಸ್ಯೇತ್ಯಾಹ ಯಚ್ಛ್ರುತಿರೇವ ತತ್ ।
ಋಣಮೋಕ್ಷಾಯ ಸರ್ವೇಷಾಂ ಭೀಮೋ ದೋಷಾನವಾದಯತ್ ॥ ೬೪ ॥

ಅ: ಮರಣಕಾಲದಲ್ಲಿ ಯಾರು ಯಾರ ದೋಷವನ್ನು ತಿಳಿಸುವನೋ ಅವನಿಗೆ ಆ ದೋಷ ಹೇಳಿದವರ ಋಣದ ಮೋಚನವಾಗುವುದು ಎಂದು ಶ್ರುತಿಯು ತಿಳಿಸಿರುವುದರಿಂದ ಅವರೆಲ್ಲರ ಋಣಪರಿಹಾರಕ್ಕಾಗಿ ಭೀಮಸೇನ ಧರ್ಮರಾಜನಿಂದ ದೋಷಗಳನ್ನು ಹೇಳಿಸಿದ.

ವಿ: ಅಂತ್ಯಕಾಲದಲ್ಲಿ ಸತ್ತವರ ದೋಷಗಳನ್ನು ಹೇಳುವವನ ಋಣ ಸತ್ತವರಿಗೆ ಪರಿಹಾರವಾಗುವುದು ಎಂದು ಶ್ರುತಿವಚನ. ದ್ರೌಪದಿ ಮೊದಲಾದವರಿಗೆ ಧರ್ಮರಾಜನ ಋಣವನ್ನು ಮೋಚನ ಮಾಡಿಸಲೆಂದು ಭೀಮಸೇನ ಹಾಗೆ ಪ್ರಶ್ನೆ ಕೇಳಿದ ಎಂದರ್ಥ.

ಭೀಮಾದಿಗಳದ್ದು ಇಚ್ಛಾಮರಣ

ಸೋಽಪೀಚ್ಛಾಪತಿತಾನ್ ದೇಹಾನಜಾನನ್ ಶುದ್ಧಕರ್ಮಣಾಮ್ ।
ಅಪಶ್ಯನ್ ಕಾರಣಂ ಪ್ರಾಹ ದೋಷಾನ್ ಸ್ಯಾದೇವಮಿತ್ಯಪಿ ।
ರಾಜಾ ಸಂಭಾವನಾಮಾತ್ರಂ ನಹಿ ಕಾರ್ಯಮಕಾರಣಮ್ ॥ ೬೫ ॥

---

೬೪. ತಸ್ಮಾತ್ಸ್ಯಾದುಕ್ತದೋಷಸ್ಯೇತ್ಯತ್ರ ಉಕ್ತೋ ದೋಷೋ ಯಸ್ಯ ತಸ್ಯ ಪುಂಸಃ ತಸ್ಮಾತ್= ದೋಷಕಥನಾತ್ ಋಣಮೋಚನಂ ಸ್ಯಾತ್। ಮರಣಕಾಲೇ ದೋಷೇ ಕಥಿತೇ ಸತಿ ''ಧರ್ಮಃ ಕ್ಷರತಿ ಕೀರ್ತನಾತ್'' ಇತಿ ನ್ಯಾಯೇನ ಅಧರ್ಮೋಽಪಿ ಕೀರ್ತನಾನ್ನಶ್ಯತಿ। ಅತಸ್ತದೀಯದೋಷಪರಿಹಾರಾತ್ ತಸ್ಯ ಋಣಮೋಚನಂ ಭವತೀತಿ ಭಾವಃ॥ – (ವಾ.)

೬೫. ಸ ರಾಜಾಽಪಿ ಕಾರ್ಯಮಕಾರಣಂ ನ ಹಿ ಯಸ್ಮಾತ್ ತಸ್ಮಾದೇವಂ ಸ್ಯಾದಪಿ ಭವಿತುಮರ್ಹತ್ಯಪಿ ಇತಿ ಸಂಭಾವನಾಮಾತ್ರಂ ಯಥಾ ಭವತಿ ತಥಾ ದೋಷಾನ್ ಪ್ರಾಹ। – (ವೇ.)

೬೫. ಹಿ = ಯಸ್ಮಾತ್ ಕಾರ್ಯಮಕಾರಣಂ ನ ತಸ್ಮಾದೇವಂ ಕಶ್ಚಿದ್ದೋಷಃ ಸ್ಯಾದಿತಿ ಸಂಭಾವನಾಮಾತ್ರಾತ್। ರಾಜಾ ದೋಷಾನಾಹ ನ ತು ದೋಷಾನ್ನಿಶ್ಚಿತ್ಯೇತಿ ಭಾವಃ। ಸಂಭಾವನಾಮಾತ್ರಮಿತಿ ಪಾಠೇ ಸಂಭಾವನಾಮಾತ್ರಂ ಯಥಾ ಭವತಿ ತಥೇತಿ ಕ್ರಿಯಾವಿಶೇಷಣಮ್ – (ವಾ.)

೬೫. ದ್ರೌಪದ್ಯಾಂ ಭೀಮಮನು ಯುಧಿಷ್ಠಿರಾದಿತ್ರಿಭ್ಯಃ ಪಾರ್ಥೇ ಅಧಿಕಪಕ್ಷಪಾತಾಖ್ಯದೋಷಂ ಸಹದೇವೇ ನೀತಿಜ್ಞತ್ವಾಭಿಮಾನಾಖ್ಯದೋಷಂ ನಕುಲೇ ರೂಪಿತ್ವಾಭಿಮಾನಾಖ್ಯದೋಷಂ ಭೀಮೇ ಬಲಿತ್ವಾಭಿಮಾನಾಖ್ಯದೋಷಂ ಪ್ರಾಹೇತ್ಯರ್ಥಃ॥ - (ಜ.)

ಅ: ಧರ್ಮರಾಜ ಅವರೆಲ್ಲ ಸ್ವೇಚ್ಛೆಯಿಂದ ದೇಹ ತೊರೆದ ಪರಿಶುದ್ಧ ಕರ್ಮರತರು ಎಂದು ಅರಿಯದೇ ದೋಷವೇನೂ ಕಾಣದಿದ್ದರೂ ಯಾವುದೋ ಒಂದು ದೋಷದಿಂದಲೇ ಹಾಗಾಗಿರಬೇಕು, ಕಾರಣವಿಲ್ಲದೇ ಕಾರ್ಯವಾಗದಲ್ಲವೇ ಎಂದು ಕೇವಲ ಊಹೆಯಿಂದ ಹೇಳತೊಡಗಿದ.

ವಿ: ೧) ಅವರೆಲ್ಲ ದೇಹ ತೊರೆದದ್ದು ಸ್ವೇಚ್ಛೆಯಿಂದ ಎಂಬ ತತ್ವವನ್ನು ಗಮನಿಸದ ಧರ್ಮರಾಜ ಅದಕ್ಕೆ ಕಾರಣ ಹುಡುಕತೊಡಗಿದ. ಅದಾವುದೂ ಕಾಣದಿದ್ದಾಗ ತಾನೇ ಕೆಲವು ದೋಷಗಳನ್ನು ಕಲ್ಪಿಸಿ ತಿಳಿಸತೊಡಗಿದ ಎಂದರ್ಥ. ಮುಖ್ಯ ಕಾರಣ ಅವನಿಗೆ ತಿಳಿದಿರಲಿಲ್ಲವಾದ್ದರಿಂದ ಕಾರ್ಯವಾಗಲು ಕಾರಣವೊಂದು ಇರಲೇಬೇಕು ಎಂಬ ಊಹೆಯಿಂದ ಅವನು ಹಾಗೆ ದೋಷಗಳನ್ನು ಕಲ್ಪಿಸಿ ಹೇಳಿದ ಎಂದರ್ಥ.

೨) ಅದರಂತೆ ಅವನು ದ್ರೌಪದಿಯ ಪತನಕ್ಕೆ ಅವಳಿಗೆ ಅರ್ಜುನನಲ್ಲಿದ್ದ ಪಕ್ಷಪಾತ, ಸಹದೇವನಿಗೆ ತಾನು ನೀತಿಜ್ಞನೆಂಬ ಅಹಂಕಾರ, ನಕುಲನಿಗೆ ಸೌಂದರ್ಯದ ಮದ, ಅರ್ಜುನ ಒಂದೇ ದಿನದಲ್ಲಿ ಎಲ್ಲ ಶತ್ರುಗಳನ್ನು ನಾಶಮಾಡುವೆನೆಂದು ತಿಳಿಸಿಯೂ ಮಾಡದೇ ಹೋದ ತಪ್ಪು, ಭೀಮನಿಗೆ ಅತಿಭೋಜನ ಹಾಗೂ ತಾನೇ ಬಲಶಾಲಿಯೆಂಬ ಅಹಂಕಾರ – ಇವು ಕಾರಣವಾದವು ಎಂದು ತಿಳಿಸಿದ. ಪಾಪದಿಂದ ದೇಹ ತ್ಯಕ್ತವಿಲ್ಲ
ಶ್ರುತಿ ಪ್ರಮಾಣ

ಸ್ವಚ್ಛಂದಮೃತ್ಯವೋ ಯೋಗಾದ್ದೇಹಾನುತ್ಸೃಜ್ಯ ಪಾಂಡವಾಃ ।
ಕೃಷ್ಣಾ ಚಾಪುಃ ಪರಂ ಸ್ಥಾನಂ ಯನ್ನ ಯಾಂತ್ಯಪಿ ದೇವತಾಃ ।
ಇತಿ ಶ್ರುತೇರ್ನ ತೇ ಪಾಪಾದ್ದೇಹಾಂಸ್ತತ್ಯಜುರೂರ್ಜಿತಾಃ ॥ ೬೬ ॥

ಅ: ಪಾಂಡವರು ಹಾಗೂ ದ್ರೌಪದಿ ಸ್ವೇಚ್ಛಾಮರಣಿಗಳು, ಯೋಗದಿಂದ ಅವರೆಲ್ಲ ದೇಹವನ್ನು ತೊರೆದು ದೇವತೆಗಳೂ ಹೊಂದಲಾಗದಂತಹ ಉತ್ತಮ ಲೋಕಗಳನ್ನು ಪಡೆದರು ಎಂಬ ಶ್ರುತಿಯಿರುವುದರಿಂದ ಮಹಾಶಕ್ತಿಶಾಲಿಗಳಾದ ಅವರು ಸರ್ವಥಾ ಪಾಪದಿಂದ ದೇಹ ತೊರೆದವರಲ್ಲ.

ವಿ: ೧) ಭೀಷ್ಮರಂತೆ ದ್ರೌಪದಿ ಮತ್ತು ಪಾಂಡವರು ಇಚ್ಛಾ ಮರಣಿಗಳು, ಭೀಷ್ಮರಿಗೆ ಅದಕ್ಕೆ ಶಂತನುವಿನ ವರ ಕಾರಣವಾಗಿದ್ದರೆ, ಅವರಿಗಿಂತ ಉತ್ತಮದೇವತೆಗಳಾದ ಪಾಂಡವರಿಗೆಲ್ಲ ಸ್ವಾಭಾವಿಕವಾಗಿಯೇ ಆ ಸಿದ್ಧಿ ಲಭಿಸಿತ್ತು ಎಂಬುದು ವಿಶೇಷ.

೨) ಶ್ರುತಿಯೇ ಹೀಗೆ ಸ್ಪಷ್ಟ ಅವರ ದೇಹತ್ಯಾಗದ ಬಗ್ಗೆ ವಿವರಣೆ ನೀಡಿರುವಾಗ ಅವರು ದೋಷಗಳಿಂದಾಗಿ ದೇಹವನ್ನು ತೊರೆದರು ಎನ್ನುವುದು ಸರ್ವಥಾ ಅನುಚಿತ ಎಂದರ್ಥ.

೩) ಭೀಮನ ಮಟ್ಟಿಗಂತೂ ಆತನ ಹನುಮದ್ರೂಪ ಇಂದೂ ಚಿರಂಜೀವಿ–ಯಾಗಿರುವುದು, ಮಧ್ವರೂಪ ಇಂದೂ ಬದರಿಯಲ್ಲಿ ಶ್ರೀವೇದವ್ಯಾಸರ ಬಳಿ ಇರುವುದು ಗಮನಾರ್ಹ – ಸ್ವಚ್ಛಃ ಸ್ವಚ್ಛಂದ ಮೃತ್ಯುಃ (ವಾಯುಸ್ತುತಿ).

ಸ್ಮೃತಿ ಪ್ರಮಾಣ.

ಋಣಾನ್ಯಸ್ಮೈ ದೋಷೋಕ್ತ್ಯಾ ಸ್ವಾನಾಂ ಭೀಮಃ ಸ್ವಕಾಂ ತನುಮ್ ।
ತತ್ಯಾಜ ಪರಮಂ ಧ್ಯಾಯನ್ನಾಪ ಚ ಸ್ಥಾನಮುತ್ತಮಮ್ ।
ಇತಿ ಸ್ಕಂದಪುರಾಣೋಕ್ತಂ ವ್ಯಾಸವಾಕ್ಯಮೃಷೀನ್ ಪ್ರತಿ ॥ ೬೭ ॥

ಅ: ಭೀಮಸೇನ ದೋಷಗಳನ್ನು ಹೇಳಿಸುವ ಮೂಲಕ ತನ್ನವರಿಗೆ ಅವನ ಋಣವನ್ನು ಪರಿಹರಿಸಿ ಶ್ರೀಹರಿಯನ್ನು ಧ್ಯಾನಿಸುತ್ತಾ ತನ್ನ ದೇಹವನ್ನೂ ತೊರೆದ ಹಾಗೂ ಉತ್ತಮ ಸ್ಥಾನವನ್ನೂ ಪಡೆದ ಎಂಬುದಾಗಿ ಋಷಿಗಳನ್ನು ಕುರಿತು ಸ್ಕಂದ ಪುರಾಣದಲ್ಲಿ ಬಂದಿರುವ ವ್ಯಾಸವಚನವಿದೆ.

ವಿ: ಶ್ರುತಿವಚನದಂತೆ ಸ್ಮೃತಿವಚನವೂ ಸಹ ಪಾಂಡವರು ಇಚ್ಛಾ ಮರಣಿಗಳು ಎಂಬುದನ್ನು ದೃಢಪಡಿಸುವುದು ಎಂದರ್ಥ.

ದ್ರೌಪದಿ ನಿರ್ದೋಷಳು

ಭೀಮಾದೃತೇ ಹಿ ಚತುರ್ಷು ಪಕ್ಷಪಾತಸ್ತು ವಾಸವೌ ।
ಯೋಗ್ಯ ಏವೇತಿ ಕೃಷ್ಣಾಯಾ ನ ದೋಷಃ ಸ್ಯಾತ್ ಕಥಂಚನ ॥ ೬೮ ॥

---

೬೮. ತಸ್ಯ ಕೋ ದೋಷಃ ಕಥಂಚನಾಸೌ ದೋಷೋ ಭವೇದಿತ್ಯರ್ಥಃ। ಸರ್ವಥಾ ನಿರ್ದೋಷದ್ರೌಪದ್ಯಾಃ ದೋಷಾಯೋಗಾತ್। ಅಜ್ಞದೃಷ್ಟ್ಯಾ ದೋಷತಯಾ ಪ್ರತೀಯಮಾನಂ ದೋಷಮುದ್ಭಾವ್ಯ ಯುಕ್ತಿಬಲಾತ್ತಸ್ಯಾ-ದೋಷತಾಮುಪಪಾದಯತಿ। ಭೀಮಾದೃತ ಇತ್ಯಾದಿನಾ। ಚತುರ್ಷು = ಧರ್ಮರಾಜಾರ್ಜುನನಕುಲಸಹದೇವೇಷು ವಾಸವೌ ಕೃಷ್ಣಾಯಾಃ ಪಕ್ಷಪಾತಃ ಯೋಗ್ಯ ಏವ। ಇಂದ್ರರೂಪಸ್ಯಾರ್ಜುನಸ್ಯ ಧರ್ಮರಾಜನಕುಲಸಹದೇವೇಭ್ಯೋಽ-ಧಿಕದೇವತಾತ್ವಾತ್ ಅತೋಽಸೌ ದ್ರೌಪ – (ವಾ.)

೬೮. ಪಕ್ಷಪಾತೋ ಮಹಾನಸ್ಯಾ ವಿಶೇಷೇಣ ಧನಂಜಯೇ ।
ತಸ್ಯೈತತ್ ಫಲಮದ್ಯೈಷಾ ಭುಂಕ್ತೇ ಪುರುಷಸತ್ತಮ ॥

ಆತ್ಮನಃ ಸದೃಶಂ ಪ್ರಾಜ್ಞಂ ನೈಷೋಽಮನ್ಯತ ಕಂಚನ ।
ತೇನ ದೋಷೇಣ ಪತಿತಸ್ತಸ್ಮಾದೇಷ ನೃಪಾತ್ಮಜಃ ॥

ರೂಪೇಣ ಮತ್ಸಮೋ ನಾಸ್ತಿ ಕಶ್ಚಿದಿತ್ಯಸ್ಯ ದರ್ಶನಮ್ ।
ಅಧಿಕಶ್ಚಾಹಮೇವೈಕ ಇತ್ಯಸ್ಯ ಮನಸಿ ಸ್ಥಿತಮ್ ॥

ಅ: ಭೀಮನ ಹೊರತು ಇತರ ನಾಲ್ವರಲ್ಲಿ ಅರ್ಜುನನ ಬಗ್ಗೆ ದ್ರೌಪದಿಗೆ ಪಕ್ಷಪಾತವಿದ್ದುದು ಯೋಗ್ಯವೇ ಆದ್ದರಿಂದ ಅದು ಸರ್ವಥಾ ದೋಷವೆನ್ನಿಸದು.

ವಿ: ಭೀಮನ ಅನಂತರ ಪಾಂಡವರಲ್ಲಿ ಇಂದ್ರಾವತಾರನಾದ ಅರ್ಜುನನದೇ ಪ್ರಧಾನಸ್ಥಾನ. ಅದರಿಂದಾಗಿ ದ್ರೌಪದಿ ಅರ್ಜುನನಲ್ಲಿ ಪಕ್ಷಪಾತ ಹೊಂದಿದ್ದುದು ಉಚಿತವೇ ಆಗಿತ್ತು. ವಾಯುವಿನ ಆವೇಶ ಇತರರಿಗಿಂತ ಹೆಚ್ಚಾಗಿ ಅವನಲ್ಲಿಯೇ ಇತ್ತು ಎಂಬುದು ಅಂತಹ ಪಕ್ಷಪಾತಕ್ಕೆ ಮುಖ್ಯ ಕಾರಣ. ಆದ್ದರಿಂದ ಅದು ದೋಷವಲ್ಲ ಎಂದರ್ಥ.

ಭೀಮನೂ ನಿರ್ದೋಷ (ಅತಿಭೋಜನ)

ನೀತಿರೂಪೇ ವೀರ್ಯಬಲೇ ಮಹಾಂತ್ಯೇಷಾಂ ಯತಃ ಕ್ರಮಾತ್ ।
ಪ್ರಾಣತ್ವಾದ್ಭೋಗಶಕ್ತಿಶ್ಚ ನ ಹಿ ದೋಷಾಯ ಮಾರುತೇಃ ॥ ೬೯ ॥

ಅ: ನೀತಿ, ರೂಪ, ವೀರ್ಯ, ಬಲಗಳು ಪಾಂಡವರಲ್ಲಿ ಕ್ರಮವಾಗಿ ಹೆಚ್ಚು ಹೆಚ್ಚಾಗಿ ಇದ್ದವು. ಅದರಿಂದ ಅದು ದೋಷಕ್ಕೆ ಕಾರಣವಾಗದು. ಭೀಮಸೇನ ಮುಖ್ಯಪ್ರಾಣನಾದ್ದರಿಂದ ಅವನಿಗೆ ಭೋಗಶಕ್ತಿ ದೋಷವಾಗದು.

ವಿ: ಭೀಮನ ಬಹುಭೋಜನ ಗುಣವೇ ಹೊರತು ದೋಷವಲ್ಲ. ಬಹುಭೋಜನ ದೋಷವಾಗುವುದು ಅಜೀರ್ಣವಾದಾಗ, ಭೀಮಸೇನ ಕಾಲಕೂಟವನ್ನು ಅನಾಯಾಸವಾಗಿ ಜೀರ್ಣಿಸಿಕೊಂಡ ಮಹಾಯೋಗಿ. ಆದ್ದರಿಂದ ಆತನ ಬಹುಭೋಜನ ಶ್ರುತಿಯಿಂದಲೇ ಪ್ರಶಂಸಿತವಾದ ಶ್ರೇಷ್ಠಗುಣ. ಅದನ್ನು ಅರಿಯದೆ ದೋಷವೆಂದು ಭಾವಿಸಿದ್ದು ಧರ್ಮರಾಜನದೇ ದೋಷ ಎಂದರ್ಥ.

ಏಕಾಹ್ನಾ ನಿರ್ದಹೇಯಂ ವೈ ಶತ್ರೂನಿತ್ಯರ್ಜುನೋಽಬ್ರವೀತ್ ।
ನ ತತ್ ಕೃತವಾನೇಷ ಶೂರಮಾನೀ ತತೋಽಪತತ್ ॥
ಅವಮೇನೇ ಧನುರ್ಗ್ರಾಹಾನೇಷ ಸರ್ವಾಂಶ್ಚ ಫಾಲ್ಗುನಃ ।
ತಥಾ ಚೈತನ್ನ ತು ತಥಾ ಕರ್ತವ್ಯಂ ಭೂತಿಮಿಚ್ಛತಾ ॥

ಅತಿಭುಕ್ತಂ ಚ ಭವತಾ ಪ್ರಾಣೇನ ಚ ವಿಕತ್ಥಸೇ ।
ಅನವೇಕ್ಷ್ಯ ಪರಂ ಪಾರ್ಥ ತೇನಾಸಿ ಪತಿತಃ ಕ್ಷಿತೌ ॥

- ಕ್ರಮಾತ್ ಯುಧಿಷ್ಠಿರೋಕ್ತಯಃ । -ಭಾರತ (ಮಹಾಪ್ರಸ್ಥಾನ. ೬,೯,೧೫,೨೧,೨೨,೨೫)

೬೯. ಯತಃ ಊರ್ಜಿತಾ ಇತ್ಯರ್ಥಃ । -(ವ.)

ಭೀಮನದು ಅಹಂಕಾರವಲ್ಲ

ಯಥಾಸ್ವರೂಪವಿಜ್ಞಾನಮಾತ್ಮನ್ಯಪಿ ನ ದೋಷಕೃತ್ ।
ಇತಿ ವ್ಯಾಸಸ್ಮೃತೇರೇಷಾಮುಕ್ತದೋಷೋದ್ಭವಃ ಕಥಮ್ ॥ ೭೦ ॥

ಅ: ತನ್ನ ಸ್ವರೂಪವನ್ನು ಯಥಾವತ್ತಾಗಿ ತಿಳಿದುಕೊಳ್ಳುವುದು ದೋಷಕ್ಕೆ ಕಾರಣವಲ್ಲ ಎಂದು ವ್ಯಾಸಸ್ಮೃತಿಯಲ್ಲಿರುವುದರಿಂದ ಧರ್ಮರಾಜ ಹೇಳಿರುವ ದೋಷಗಳು ಅವರಿಗೆ ಹೇಗೆ ತಾನೇ ಯುಕ್ತ?.

---

೬೯. ನೀತಿರೂಪೇ ವೀರ್ಯಬಲೇ ಮಹಾಂತ್ಯೇಷಾಂ ಯತಃ ಕ್ರಮಾದಿತ್ಯತ್ರ ನೀತಿರೂಪೇ ವೀರ್ಯಬಲೇ ಇತ್ಯೇತಾನಿ ವಿಶೇಷಣಾನಿ ಸಂತಿ। ತತ್ರ ನೀತಿಃ = ಲೌಕಿಕವಿವೇಕಬುದ್ಧಿರೂಪತ್ವಾದಲ್ಪೋ ಗುಣಃ ರೂಪಂ ಸ್ತ್ರೀಣಾಂ ಪ್ರಿಯಮಿತಿ ಕೃತ್ವಾ ತತೋಽಪ್ಯಧಿಕೋ ಗುಣಃ ವೀರ್ಯಂ ಕ್ಷತ್ರಿಯಸ್ಯಾಪೇಕ್ಷಿತಗುಣತ್ವಾತ್ ತತೋಽಪ್ಯಧಿಕೋ ಗುಣಃ। ಬಲಂ ತು ಕ್ಷತ್ರಿಯಾಣಾಂ ಮಹಾಗುಣಾಃ ಇತಿ ಕೃತ್ವಾ ಸರ್ವೇಭ್ಯೋಽಪ್ಯಧಿಕೋ ಗುಣಃ ಅತಃ ಕ್ರಮೇಣ ತೇಷು ದ್ರೌಪದ್ಯಾ ಅಭಿಮಾನೋ ನ ದೋಷಾಯೇತಿ ಭಾವಃ। ಇದಾನೀಂ ಭೀಮಸ್ಯಾಜ್ಞದೃಷ್ಟ್ಯಾ ಪ್ರಾಪ್ತಂ ದೋಷಂ ಪರಿಹರತಿ। ಪ್ರಾಣತ್ವಾದಿತಿ। ಪ್ರಾಣತ್ವಾತ್ = "ಅನ ಚೇಷ್ಟಾಯಾಮ್" ಇತಿ ಧಾತೋಃ ಸರ್ವಪ್ರಾಣಿಚೇಷ್ಟಕತ್ವಾತ್ ಸರ್ವಪ್ರಾಣಿಚೇಷ್ಟಕತ್ವೇನ ಸರ್ವದೇಹೇಷು ಸ್ಥಿತ್ವಾ ತೈಃ ಕ್ರಿಯಮಾಣಭೋಜನಾದಿಭೋಗೇಷು ಪ್ರಥಮಂ ಪಂಚಪಂಚಾಹುತಿಸ್ವೀಕರ್ತೃತ್ವೇನ ಸರ್ವಾಹುತ್ಯನ್ನಮೇಲನೇ ಸತಿ ಮೇರೋರಪ್ಯಧಿಕತ್ವಾತ್। ದಿನೇದಿನೇ ದ್ವಿವಾರಂ ತ್ರಿವಾರಂ ವಾ ತಾದೃಶಾನ್ನಭೋಕ್ತುರ್ವಾಯೋಃ ಸಹಸ್ರಪ್ರಸ್ಥಾನ್ನಭೋಜನೇ ಶಕ್ತಿಃ ಕಂ ವರ್ಣನೀಯಾ। ಅತೋ ಭೀಮಸ್ಯ ಸ್ವರೂಪಚಿಂತಾಯಾಂ ಭೋಗಶಕ್ತಿರಪಿ ದೋಷೋ ನೇತಿ ಭಾವಃ — (ವಾ.)

೬೯. ಪ್ರಾಣತ್ವಾತ್ ಪ್ರಧಾನವಾಯುಸ್ವರೂಪತ್ವಾತ್ ಭೋಗಶಕ್ತಿಃ ಬಹ್ವನ್ನಭೋಕ್ಷ್ಯಶಕ್ತಿಃ ಮಾರುತೇಃ ದೋಷಾಯ ನ ಹಿ, ಕಿಂತು ಪಿತುಮಾನಿತಿ ಪ್ರತಿಪಾದ್ಯಗುಣ ಏವೇತ್ಯರ್ಥಃ। ಪಿತುರಿತ್ಯನ್ನನಾಮ ॥ - (ಜ.)

೬೯. ಪ್ರಾಣಾಪಾನಸಮಾಯುಕ್ತಃ ಪಚಾಮ್ಯನ್ನಂ ಚತುರ್ವಿಧಮ್ । - ಗೀತಾ (೧೫/೧೪)

೭೦. ನನು ಸರ್ವೇಭ್ಯೋಽಪ್ಯಹಂ ಬಲವಾನ್। ಅತಃ ಕ್ಷತ್ರಿಯೇಷ್ವಹಮೇವೋತ್ತಮಶ್ಚೇತಿ ಸರ್ವದಾ ವದತಿ। ಅಸ್ಮಿನ್ನರ್ಥೇ "ಅಧಃ ಸಪತ್ನಾ ಮೇ ಪದೋರಿಮೇ ಸರ್ವೇ ಅಭಿಷ್ಟಿತಾಃ" ಇತ್ಯಾದಿ ಶ್ರುತೀಶ್ಚ ಪ್ರಮಾಣೀಕರೋತಿ। ತಸ್ಮಾದಹಂಕಾರರೂಪತ್ವಾತ್ ಮಹಾದೋಷೋಽಯಮಿತ್ಯಾಶಂಕ್ಯ ಸ್ಮೃತ್ಯೈವ ಪರಿಹರತಿ। ಯಥಾ ಸುರೂಪೇತಿ। ಆತ್ಮನಿ = ಸ್ವಸ್ಮಿನ್। ತದ್ವತಿ ತತ್ಕಾರಕಜ್ಞಾನತ್ವೇನ ಪ್ರಮಾಣರೂಪತಯಾ ತತ್ತ್ವಜ್ಞಾನರೂಪತ್ವಾತ್ ನಾಯಂ ಭೀಮಸ್ಯ ದೋಷಃ। ಕಿಂತು ಗುಣ ಏವೇತಿ ಭಾವಃ। ಅನ್ಯಥಾ "ಮತ್ತಃ ಪರತರಂ ನಾಸ್ತಿ" ಇತಿ ವದತೋ ಜಾನತಶ್ಚ ಹರೇರಪಿ ದೋಷಿತ್ವಂ ಸ್ಯಾತ್। ತದಪಿ ಯಥಾವಸ್ತುಜ್ಞಾನರೂಪತ್ವಾದೇವ ನ ದೋಷ ಇತಿ ಪರಿಹರಣೀಯಮ್। ತರ್ಹಿ ಸಮಂ ಭೀಮೇಽಪೀತಿ ಜ್ಞೇಯಮ್। ಅನೇನೈವ ಭೀಮಾದ್ಯತೇ ಚತುರ್ಷು ಅರ್ಜುನ ಏವಾಧಿಕ ಇತಿ ಜ್ಞಾತ್ವಾ ದ್ರೌಪದ್ಯಾ ಅಭಿಮಾನಾಪರಪರ್ಯಾಯೋ ಯಃ ಸ್ನೇಹಃ ಸೋಽಪಿ ನ ದೋಷ ಇತಿ ಸೂಚಿತಮ್। ಅನೇನೈವ ವೀರೋಽಹಂ ರೂಪವಾನಹಂ ನೀತಿಮಾನಹಮಿತ್ಯರ್ಜುನನಕುಲಸಹದೇವಾನಾಂ ಯದಾತ್ಮಸ್ವರೂಪವಿಜ್ಞಾನಂ ತನ್ನಿಮಿತ್ತೋ ಯೋಽಭಿಮಾನಶ್ಚ ಸೋಽಪಿ ಯಥಾವಸ್ತುಜ್ಞಾನರೂಪತ್ವಾತ್ ನ ದೋಷ ಇತಿ ಸಿದ್ಧಮ್ — (ವಾ.)

೭೦. 'ಅಸ್ವರೂಪೇ ಸ್ವರೂಪತ್ವಮತಿರೇವ ಹ್ಯಹಂಕೃತಿಃ।
ತ್ಯಾಜ್ಯಾ ಸರ್ವತ್ರ ಮಮತಾ ಜ್ಞಾತ್ವಾ ಸರ್ವಂ ಹರೇರ್ವಶೇ' ಇತಿ ಚ ॥ - ಗೀತಾತಾತ್ಪರ್ಯ (೨/೭೧)

ವಿ: ಭೀಮಸೇನ ತನ್ನನ್ನು ಮಹಾಬಲಾಢ್ಯನೆಂದು, ನಕುಲ ರೂಪವಂತನೆಂದು, ಸಹದೇವ ನೀತಿಜ್ಞನೆಂದು, ಅರ್ಜುನ ವೀರನೆಂದು ತಿಳಿದಿದ್ದರಲ್ಲಿ ತಪ್ಪೇನಿಲ್ಲ. ಅವರು ಆ ಗುಣಗಳನ್ನು ಹೊಂದಿದವರೇ. ಭೀಮನಂತೂ ಅದನ್ನು ಪೂರ್ಣ ಪ್ರಮಾಣದಲ್ಲೇ ಹೊಂದಿದ್ದವನು.

ಇತರರ ದೋಷವು ದೇಹತ್ಯಾಗಕ್ಕೆ ಕಾರಣವಲ್ಲ

ಕದಾಚಿದತಿಮಾನೋ೭ಪಿ ತ್ರಯಾಣಾಮೇಷು ಜಾಯತೇ ।
ತಥಾ೭ಪಿ ತತ್ಫಲಂ ನೈತತ್ ತಾರತಮ್ಯಂ ಹಿ ಮುಕ್ತಿಗಮ್ ॥ ೭೧ ॥

ಅ: ಕೆಲವೊಮ್ಮೆ ಅರ್ಜುನಾದಿ ಮೂವರಿಗೆ ತಮ್ಮ ಗುಣಗಳ ಬಗ್ಗೆ ಅತಿಯಾದ ಅಹಂಕಾರವು ಉಂಟಾಗುತ್ತಿತ್ತು. ಆದರೆ ಅವರು ದೇಹ ತೊರೆದದ್ದಕ್ಕೆ ಅದು ಕಾರಣವಲ್ಲ. ಅದು ಮುಕ್ತಿಯಲ್ಲಿನ ತಾರತಮ್ಯಕ್ಕೆ ಕಾರಣ.

ವಿ: ಭೀಮನ ಹೊರತು ಇತರರಿಗೆ ತಮ್ಮಲ್ಲಿರುವ ಗುಣಗಳ ಬಗ್ಗೆ ಕೆಲವೊಮ್ಮೆ ಯೋಗ್ಯತೆಗೆ ಮೀರಿದ ಅಹಂಭಾವ ಉಂಟಾಗುತ್ತಿತ್ತು ಎಂಬುದು ನಿಜ, ಆದರೆ ಅದೂ ಸಹ ಹೀಗೆ ದೇಹ ತೊರೆಯುವುದಕ್ಕೆ ಕಾರಣವಾಗಿರಲಿಲ್ಲ. ಅದು ಅವರಿಗೆ ಮುಕ್ತಿಯಲ್ಲಿ ಆನಂದ ತಾರತಮ್ಯಕ್ಕಷ್ಟೇ ಕಾರಣ.

---

೭೧. ಕದಾಚಿದರ್ಜುನಾದಯಃ ಕಲ್ಯಾವೇಶವಶಾತ್ ಸ್ವಯೋಗ್ಯತಾತಿರೇಕೇಣಾಪಿ ಮಾನಂ ಕುರ್ವಂತಿ। ಸೋ೭ಪಿ ನ ತೇಷಾಂ ದೇಹಪಾತಹೇತುರ್ದೋಷ ಇತಿ ಯುಕ್ತ್ಯಾ ಸಾಧಯತಿ ಕದಾಚಿದತಿಮಾನ ಇತಿ। ಏಷು ಭೀಮಾದಿಷು ತ್ರಯಾಣಾಂ = ಅರ್ಜುನನಕುಲಸಹದೇವಾನಾಂ ಕದಾಚಿತ್ ಸ್ವಯೋಗ್ಯತಾಮತಿಕ್ರಮ್ಯ ಮಾನಃ ಅತಿಮಾನಃ ಸ್ವಯೋಗ್ಯತಾಯಾ ಅತಿಶಯಿತಮಾನೋ ಜಾಯತೇ। ತಥಾ೭ಪ್ಯೇತದಪರೋಕ್ಷಜ್ಞಾನಿನಾಂ ದೇಹನಿಪತನಂ ತತ್ಫಲಂ ನ= ಅತಿಮಾನಾಖ್ಯಸಂಚಿತದೋಷಫಲಂ ನ। ದ್ವಿವಿಧೋ ಹಿ ಅತಿಮಾನೋ೭ಸ್ತಿ। ಸ್ವಾವರಾಪೇಕ್ಷಯಾ ಸ್ವಾಧಿಕಾಪೇಕ್ಷಯಾ ಚೇತಿ। ತತ್ರಾದ್ಯಃ ಅಪರೋಕ್ಷಜ್ಞಾನಿನಃ ನ ಸ್ಪೃಶತ್ಯೇವ। ಅತೋ ನೈತಸ್ಯ ತತ್ಫಲಮ್। ಹಿ ಶಬ್ದೇನ ''ತದಧಿಗಮ ಉತ್ತರಪೂರ್ವಾಘಯೋರಶ್ಲೇಷವಿನಾಶೌ ತದ್ವ್ಯಪದೇಶಾದಿ'' ತಿ ಸೌತ್ರಪ್ರಸಿದ್ಧಿಂ ಸೂಚಯತಿ। ದ್ವಿತೀಯೇ೭ಪಿ ಏತದ್ದೇಹಪತನಂ ತತ್ಫಲಂ ನ। ಕಿಂತು ಮುಕ್ತಿಗಂ ತಾರತಮ್ಯಂ = ಸುಖವೃದ್ಧಿಹ್ರಾಸಾಖ್ಯತಾರತಮ್ಯಮೇವ ತತ್ಫಲಮ್। ಹಿ ಶಬ್ದೇನ ''ಗುಣದೋಷೈಃ ಸುಖಸ್ಯಾಪಿ ವೃದ್ಧಿಹ್ರಾಸೌ ವಿಮುಕ್ತಿಗೌ' ಇತಿ ಪ್ರಮಾಣಪ್ರಸಿದ್ಧಿಂ ಸೂಚಯತಿ। ಏತದಪ್ಯಪರೋಕ್ಷಜ್ಞಾನಿನಾಂ ನರಾಣಾಮೇವ। ತತ್ಪೈವ ನೃಣಾಮಿತ್ಯುಕ್ತತ್ವಾತ್। ''ಸುರಾಣಾಂ ಮುಕ್ತೌ ತು ಸುಖಂ ಕ್ಲೃಪ್ತಂ ಯಥಾಕ್ರಮಮ್'' ಇತಿ ವಚನಾತ್ ದೇವರೂಪಪಾಂಡವಾನಾಂ ಏತದ್ದೇಹಪತನಮಪಿ ನ ತತ್ಫಲಮ್। ಏತನ್ಮುಕ್ತಿಗಂ ತಾರತಮ್ಯಮಪಿ ತತ್ಫಲಂ ನೇತ್ಯಾವೃತ್ತ್ಯಾ ಯೋಜನಾ। ಕಿಂತು ತತೋ೭ಪ್ಯಧಿಕತರಪುಣ್ಯಕರಣೇನ ತಂ ದೋಷಮೇವ ಕ್ಷಪಯಂತಿ। ಹಿ ಶಬ್ದೇನಾತ್ರಾಪಿ ''ಪ್ರಾಪ್ತಹಾನಿರಭೂನ್ನೈವ ಕ್ಲೃಪ್ತಹಾನಿಃ ಕಥಂಚನ'' ಇತಿ ಪುರಾಣಪ್ರಸಿದ್ಧಿಂ ಸೂಚಯತಿ ॥ – (ವಾ.)

೭೧. ಅಭಿಮಾನೇ ಸತ್ಯಪಿ ಏತದ್ದೇಹಪಾತನಂ ತತ್ಫಲಂ ನೀತ್ಯಾದಿಷು ಅಭಿಮಾನದೋಷಫಲನಂ ನ। - (ಜ.)

ಗುಣದೋಷಾಧಿಕಾಲ್ಪತ್ವಾದತ್ರಸ್ಥಮಪಿ ಹಿ ಶ್ರುತಮ್ ।
ಪ್ರಾರಬ್ಧಕರ್ಮನಾಶೇ ಹಿ ಪತೇದ್ದೇಹೋಽಪ್ಯಪಾಪಿನಃ ॥ ೭೨ ॥

ಅ: ಗುಣದೋಷಗಳು ಹೆಚ್ಚುಕಡಿಮೆ ಆಗುವುದು ಸಂಸಾರದಲ್ಲಿನ ದೇಹಪಾತಾದಿಗಳಿಗೆ ಕಾರಣವಲ್ಲ. ಪ್ರಾರಬ್ಧಕರ್ಮ ಕಳೆದ ಮೇಲೆ ಯಾವುದೇ ಪಾಪವಿಲ್ಲದವನ ದೇಹವೂ ಸಹ ಬಿದ್ದೇ ಬೀಳುವುದು.

ವಿ: ಅಪರೋಕ್ಷಜ್ಞಾನಿಯೂ ಸಹ ಪ್ರಾರಬ್ಧ ಕರ್ಮ ತೀರಿದ ಮೇಲೆ ದೇಹ ತೊರೆದೇ ಮೋಕ್ಷಕ್ಕೆ ತೆರಳಬೇಕಾದದ್ದು ಶಾಸ್ತ್ರವಿಧಿ. ಅಲ್ಲಿ ಹೇಗೆ ಪಾಪವು ದೇಹನಾಶಕ್ಕೆ ಕಾರಣವಾಗುವ ಪ್ರಸಕ್ತಿಯಿರದೋ, ಅದರಂತೆ ಇಲ್ಲೂ ಸಹ ಎಂದು ತಿಳಿಯಬೇಕು.

ಯುಧಿಷ್ಠಿರನಿಗೂ ದೇಹತ್ಯಾಗ ಅನಿವಾರ್ಯ

ಯುಧಿಷ್ಠಿರೋಽಪಿ ಹಿ ಸ್ವರ್ಗಂ ಬುಭುಜೇ ನೈವ ತತ್ತನುಃ ।
ಅತಿಮಾನಾದಯೋ ದೋಷಾಃ ಕುತ ಏವ ಹಿ ಮಾರುತೇಃ ॥ ೭೩ ॥

ಅ: ಧರ್ಮರಾಜನೂ ಸಹ ಅದೇ ದೇಹದಿಂದಲೇ ಸ್ವರ್ಗವನ್ನು ಅನುಭವಿಸಲಿಲ್ಲವಷ್ಟೇ! ಅಂದಮೇಲೆ ಭೀಮಸೇನನಿಗೆ ಅತಿಯಾದ ಅಹಂಕಾರಾದಿ ದೋಷಗಳು ಹೇಗೆ ತಾನೇ ಒದಗುವವು.

---

೭೨. ತತ್ರ ಕೈಮುತ್ಯಮಾಹ ಗುಣದೋಷೇತಿ। ನೃಣಾಮಪ್ಯಪರೋಕ್ಷಜ್ಞಾನಾನಂತರಂ ಗುಣದೋಷಯೋರಧಿಕತ್ವಾದಲ್ಪತ್ವಾದ್ವಾ ಅತ್ರಸ್ಥಂ = ಅತ್ರ ಸಂಸಾರೇ ಸ್ಥಂ = ವಿದ್ಯಮಾನಮ್। ಏತತ್ = ದೇಹಪಾತಾದಿಕಮ್ ತತ್ಫಲಂ= ಗುಣದೋಷಯೋಃ ಫಲಂ ನ ಕಿಂತು ಮುಕ್ತಿಗಂ ತಾರತಮ್ಯಂ ಸುಖವೃದ್ಧಿಹ್ರಾಸಾಖ್ಯತಾರತಮ್ಯಮೇವ ಶ್ರುತಂ= ತತ್ಫಲತ್ವೇನ ಶ್ರುತಮ್। ತದಾ ಕಿಂ ವಕ್ತವ್ಯಮ್। ದೇವಾನಾಮೇಷಾಮಪಾಪಾನಾಂ ಪಾಪಾದ್ದೇಹಪಾತೋ ನೇತಿ ಸಮಗ್ರಶ್ಲೋಕಸ್ಯಾಭಿಪ್ರಾಯಃ। ತರ್ಹಿ ಅಕಾರಣಕಾರ್ಯೋತ್ಪತ್ತೇರಸಂಭವಾತ್ ದೃಷ್ಟಕಾರ್ಯೇ ಕಿಂ ಕಾರಣಮಿತ್ಯತ ಆಹ ಆರಬ್ಧೇತಿ। ಅಪಾಪಿನೋಽಪಿ= ಪಾಪರಹಿತಸ್ಯೋತ್ತಮಸ್ಯಾಪಿ। ಏವಂ ಚ ಪ್ರಾಕ್ ಪಾಪಸ್ಯ ದೇಹನಾಶಂ ಪ್ರತ್ಯನ್ವಯತೋ ವ್ಯಭಿಚಾರೋ ದರ್ಶಿತಃ। ಇದಾನೀಮಪಾಪಿನೋಽಪಿ ಪತೇದಿತ್ಯುಕ್ತ್ಯಾ ಪಾಪಾಭಾವೇಽಪಿ ದೇಹನಾಶೋ ಭವೇದಿತಿ ವ್ಯತಿರೇಕವ್ಯಭಿಚಾರೋ ದರ್ಶಿತಃ। ದೇಹಾರಂಭಕಪ್ರಾರಬ್ಧಕರ್ಮನಾಶಾದೇವ ದೇಹನಾಶಃ ನ ತು ಪಾಪಾದಿತಿ ಭಾವಃ। –(ವಾ.)

೭೨. ಹಿ ಯಸ್ಮಾದ್ವ್ಯತಿರೇಕವ್ಯಭಿಚಾರಾ ದೋಷಾ ದೇಹಪಾತಕಾರಣಂ ನ ಭವತೀತ್ಯರ್ಥಃ। –(ವ.)

೭೨. **ವೇದಾಂಗತೀರ್ಥಾಸ್ತು** – ಅಪರೋಕ್ಷಜ್ಞಾನಾನಂತರಂ ಕೃತಸ್ಯ ಗುಣಸ್ಯಾಧಿಕತ್ವಾದ್ದೋಷಸ್ಯಾಲ್ಪತ್ವಾನ್ನ ದೇಹಪಾತಸ್ತತ್ಫಲಮಿತ್ಯಾಚಕ್ಷತೇ । ಇತರಟೀಕಾಸು ಪ್ರಕಾರಾಂತರೇಣ ವ್ಯಾಖ್ಯಾತಮ್ । ಏಮತೋ ದೇಹವಿನಾಶಃ ಪಾಪಹೇತುಕೋ ವಿನಾಶಿತ್ವಾತ್ ಸಮ್ಮತವತ್ । .... –(ತಾ.)

ವಿ: ಧರ್ಮರಾಜ ಆಗ ಸಶರೀರ ಸ್ವರ್ಗಕ್ಕೆ ತೆರಳಿದರೂ ಮುಂದೆ ಅವನು ದೇವತೆಗಳ ಮಾತಿನಂತೆ ಆ ದೇಹವನ್ನು ತೊರೆದೇ ತನ್ನ ಮೂಲರೂಪವನ್ನು ಸೇರುವನು (೩೨/೧೧೦). ಎಂದ ಮೇಲೆ ದೇಹತ್ಯಾಗ ಅನಿವಾರ್ಯ ಎಂಬುದೇ ಸಿದ್ಧಾಂತ.

ಋಜುಗಳ ಹಿರಿಮೆ

ಅನಾದಿಕಾಲತಃ ಸರ್ವದೋಷಹೀನಾ ಗುಣಾಧಿಕಾಃ ।
ಸರ್ವಜೀವಗಣೇಭ್ಯೋ ಯೇ ತೇ ಹಿ ವಾಯುತ್ವಮಾಪ್ನುಯುಃ ।
ಋಜವೋ ನಾಮ ಯೇ ದೇವಾ ದೇವಾನಾಮಪಿ ದೇವತಾಃ ॥ ೭೪ ॥

ಅ: ಅನಾದಿಕಾಲದಿಂದ ಸಕಲದೋಷರಹಿತರೂ, ಸಕಲಜೀವರಲ್ಲೂ ಅಧಿಕಗುಣಗಳಿಂದ ಕೂಡಿದವರೂ ಆದವರೇ ವಾಯುಪದವಿಯನ್ನು ಹೊಂದುವರು. ಋಜುಗಳು ಎಂಬ ಆ ದೇವತೆಗಳು ದೇವತೆಗಳಿಗೂ ದೇವತೆಗಳು.

ವಿ: ಇನ್ನು ಭೀಮ ಅನಾದಿ ಕಾಲದಿಂದ ಸಕಲ ದೋಷರಹಿತ, ಸಕಲ ಗುಣಪೂರ್ಣನಾದ ವಾಯುದೇವ, ಎಂದೂ ದೋಷವಿರದ ಅವನಿಗೆ ಈಗ ಅಂತಹ ದೋಷದ ಪ್ರಸಕ್ತಿಯಾದರೂ ಎಲ್ಲಿ?

ಕೃಷ್ಣ ಮಾಡಿದ ಭೀಮ ಪ್ರಶಂಸೆ

ಅಭಾವಂ ಹ್ಯತಿಮಾನಾದೇರ್ಭೀಮಸ್ಯಾಹ ಚ ಕೇಶವಃ ॥ ೭೫ ॥

ಯತ್ಕಿಂಚಾತ್ಮನಿ ಕಲ್ಯಾಣಂ ಸಂಭಾವಯಸಿ ಪಾಂಡವ ।
ಸಹಸ್ರಗುಣಮಪ್ಯೇತತ್ ತ್ವಯಿ ಸಂಭಾವಯಾಮ್ಯಹಮ್ ॥ ೭೬ ॥

---

೭೫. ಪಾಪಾದೇಷಾಂ ದೇಹನಾಶೋ ನೇತ್ಯತ್ರ ಯುಕ್ತ್ಯಂತರಂ ಚಾಹ ಯುಧಿಷ್ಠಿರೋಽಪೀತಿ। ಯುಧಿಷ್ಠಿರೋಽಪಿ ತತ್ತನುಃ = ಸಾ ಮಾನುಷೀ ತನುರ್ಯಸ್ಯ ಸಃ ತಥೋಕ್ತಃ। ಸ್ವರ್ಗಂ ನೈವ ಬುಭುಜೇ ಹಿ ಪರೇಷಾಂ ಪಾಪೇನ ದೇಹಪಾತೋ ಜಾತ ಇತಿ ವದನ್ ಸ್ವಸ್ಮಿನ್‌ದೋಷಮಕಥಯಂಶ್ಚ ಕುತಃ ಸ್ವದೇಹಮಜಹಾತ್। ಪ್ರಾರಬ್ಧಕರ್ಮವಶಾತ್ ಸ್ವಸ್ಯ ದೇಹಪಾತಶ್ಚೇತ್ ಅನ್ಯತ್ರಾಪಿ ತಥೇತಿ ನ್ಯಾಯಸಾಮ್ಯಪ್ರಸಿದ್ಧಿದ್ಯೋತನಾಯ ಹಿ ಶಬ್ದಃ। ಕಿಂ ಚ ಸರ್ವದೇವೋತ್ತಮರ್ಜುಗಣಸ್ಥವಾಯ್ವಾತ್ಮಕಭೀಮಸ್ಯಾತಿಮಾನಾದಯೋ ದೋಷಾಃ ಸರ್ವಥಾಽಸಂಭಾವಿತಾ ಇತಿ ಸಪ್ರಮಾಣಕಮಾಹ ಅತಿಮಾನಾದಯಃ ಇತ್ಯಾದಿನಾ – (ವಾ.)

೭೬. ಸಹಸ್ರಗುಣಮಾಹಾತ್ಮ್ಯೇಷು ಸತ್ಸ್ವಪಿ ತ್ವಂ ಆತ್ಮನ್ಯಲ್ಪಮೇವ ಸಂಭಾವಯಸೀತಿ ಕೇಶವೇನ ಭೀಮಂ ಪ್ರತಿ ನಿರೂಪಣಾತ್। ಸ್ವಸ್ಮಿನ್ ವಿದ್ಯಮಾನಾನೇಕಗುಣಾನವ್ಯಹಂಕಾರಿತ್ವಭೀತ್ಯಾ ಆಕಥಯತೋ ಭೀಮಸ್ಯ ಕುತಃ ಸ್ವಯೋಗ್ಯತಾತಿರೇಕೇಣ ಸ್ವಸ್ಮಿನ್ ಗುಣಕಥನರೂಪಾತಿಮಾನ ಇತಿ ಭಾವ ಇತಿ ತಸ್ಮಾದಿತ್ಯಸ್ಯ ಇತ್ಯು – (ವಾ.)

ಇತಿ ತಸ್ಮಾದ್ಯಥಾ ಯುದ್ಧೇ ಧರ್ಮಹಾನಿಮಮನ್ಯತ ।
ಏವಮತ್ರಾಪ್ಯಧರ್ಮೇಣ ದೇಹಪಾತಂ ನೃಪೋಽಬ್ರವೀತ್ ॥ ೭೭ ॥

ಅ: ಕೃಷ್ಣನು ಭೀಮನಿಗೆ ಅತಿಯಾದ ಅಹಂಕಾರಾದಿಗಳು ಸರ್ವಥಾ ಇಲ್ಲ ಎಂದು ತಿಳಿಸಿರುವನು. ಆದ್ದರಿಂದ ಧರ್ಮರಾಜ ಯುದ್ಧ ಮಾಡಿದಾಗ ಅಧರ್ಮವಾಯಿತೆಂದು ಹೇಗೆ ತಪ್ಪಾಗಿ ತಿಳಿದನೋ, ಅದರಂತೆ ಇಲ್ಲೂ ಸಹ ಅಧರ್ಮದ ಕಾರಣದಿಂದಾಗಿ ದೇಹಪಾತವಾಯಿತು ಎಂದು ಹೇಳಿದನು.

ವಿ: ೧) ಭೀಮನಲ್ಲಿ ಅಹಂಕಾರಾದಿ ದೋಷಗಳಿಲ್ಲವೆಂಬುದು ಸಾಕ್ಷಾತ್ ಪರದೈವವಾದ ಕೃಷ್ಣನ ವಾಕ್ಯಗಳಿಂದಲೇ ಸ್ಪಷ್ಟವಾಗಿರುವಾಗ, ಅದಕ್ಕೆ ವಿರುದ್ಧವಾದ ಧರ್ಮರಾಜನ ಮಾತಿಗೆ ಯಾವುದೇ ಬೆಲೆಯಿಲ್ಲ ಎಂದಾಗುವುದು.

೨) ಧರ್ಮರಾಜ ಧರ್ಮಯುದ್ಧವನ್ನೇ ಅಧರ್ಮ ಎಂದು ಶಂಕಿಸಿದವನು, ಅದರಂತೆ ಇಲ್ಲೂ ಸಹ ನಿಷ್ಕಾರಣವಾಗಿ ಹಾಗೆ ಊಹಿಸಿರುವನೇ ಹೊರತು ಅದು ವಸ್ತುಸ್ಥಿತಿಯಲ್ಲ ಎಂದರ್ಥ.

ಪಾಂಡವರ ದೇಹಪಾತದ ಕ್ರಮ

ಪೂಜ್ಯೇಭ್ಯಃ ಪೂರ್ವಮೇವೈಷಾಂ ದೇಹಪಾತಮಭೀಪ್ಸತಾಮ್ ।
ತತ್ಕ್ರಮಾತ್ ದೇಹಪಾತೋಽಭೂನ್ನ ಪಾಪಾನ್ಮುಚ್ಯತಾಂ ಯಥಾ ॥ ೭೮ ॥

---

೭೬. ಶ್ರೀಕೃಷ್ಣವಚನ (ಮಹಾಭಾರತ ಉದ್ಯೋಗ ೭೭/೩.)।

೭೭. ತರ್ಹಿ ಧರ್ಮರಾಜಃ ಕುತೋ ದೋಷಮಾಹೇತ್ಯಾಶಂಕ್ಯ ಅಪಾಪೇ ಪಾಪಶಂಕಿತ್ವಂ ತಸ್ಯ ಸ್ವಭಾವ ಇತಿ ಭಾವೇನಾಹ ಯಥಾ ಯುದ್ಧೇ ಧರ್ಮಹಾನಿಮಿತಿ — (ವಾ.)

೭೮. ಮುಚ್ಯತಾಂ ಮೋಕ್ಷಂ ಪ್ರಾಪ್ನುವತಾಮ್ । — (ವೇ.)

೭೮. ಕಿಂ ಚ ಮುಕ್ತಿಕಾಲೇ ಮುಮುಕ್ಷೂಣಾಮುತ್ತಮಾಧಿಕಾರಿಣಾಂ ದೈವಿಕೋ ದೇಹಃ ಕಾಮಾದೇವ ಕ್ರಮಾತ್ ಸ್ವಸ್ವಪೂಜ್ಯೇಷು ನಶ್ಯತಿ। ನ ತು ಪಾಪೇನ। ಕಿಮುತ ನಟವತ್ಕಾರ್ಯವಶಾದ್‌ಗೃಹೀತೋ ಮಾನುಷೋ ದೇಹಃ ಇತಿ ಭಾವೇನಾಹ ಪೂಜ್ಯೇಭ್ಯ ಇತಿ। ಯಥಾ ಮುಚ್ಯತಾಂ ಅಗ್ನ್ಯಾದಿರುದ್ರಾಂತಾವರದೇವಾನಾಂ ದೇಹಪಾತಃ ಪೂಜ್ಯೇಭ್ಯಃ= ಬ್ರಹ್ಮಾದ್ಯುತ್ತಮೋತ್ತಮದೇವೇಭ್ಯಃ ಪೂರ್ವಂ= ಪೂರ್ವಮೇವ ತತ್ಕ್ರಮಾತ್ ಕೇವಲಂ ಮುಮುಕ್ಷಯೈವಾಭೂತ್ ನ ಪಾಪಾತ್। ಏವಮೇವೈಷಾಂ ದ್ರೌಪದ್ಯಾ ಸಹ ಪಾಂಡವಾನಾಂ ಪೂಜ್ಯೇಭ್ಯಃ ಧರ್ಮರಾಜಾದಿಭ್ಯಃ ಪೂರ್ವಂ ಪೂರ್ವಮೇವ ಜುಗುಪ್ಸಿತಸ್ವಾಪ್ರಿಯಮಾನುಷದೇಹಪಾತಃ ಮುಮುಕ್ಷಯೈವಾಭೂತ್ ನ ತು ಪಾಪಾತ್। ಪಾಪೇನ ನಾಶಶ್ಚೇತ್ ವಯೋಜ್ಯೇಷ್ಠಸ್ಯ ಕೃಷ್ಣಾಕ್ಯೇಽಪ್ಯನಾಶ್ವಾಸಾಖ್ಯಮಹಾಪಾಪಂ ಕುರ್ವತಃ ಧರ್ಮರಾಜಸ್ಯೈವ ಸ್ಯಾತ್। ತತಃ ಜ್ಯೇಷ್ಠಕ್ರಮೇಣೈವಾಪರೇಷಾಮಪಿ ಸ್ಯಾತ್। ನತು ಪ್ರತಿಲೋಮೇನೇತಿ ಭಾವಃ। ನ ಹಿ ಪಂಚಸು ಭರ್ತೃಷು ಸತ್ಸು ಭಾರ್ಯಾಯಾಃ ಪೂರ್ವಂ ಗಮನಂ ಕ್ವಾಪಿ ದೃಷ್ಟಮ್। ಅತ ಉಕ್ತ ಏವಾಭಿಸಂಧಿಃ — (ವಾ.)

ನ ಹಿ ಪಾಪಫಲಾನ್ಮೃತ್ಯೌ ದೇಹಪಾತಃ ಕಥಂಚನ ।
ಕಿಂ ತು ಕರ್ಮಕ್ಷಯಾದೇವ ತಥಾ ಸರ್ವತ್ರ ನಿಶ್ಚಿತಃ ॥ ೭೯ ॥

ಅ: ತಮ್ಮ ಹಿರಿಯರಿಗಿಂತಲೂ ಮುಂಚಿತವಾಗಿಯೇ ದೇಹಬಿಡಲು ಬಯಸಿದ ಅವರಿಗೆ ಆ ಕ್ರಮದಲ್ಲಿಯೇ ದೇಹಪಾತವಾಯಿತು; ಪಾಪದ ಕಾರಣದಿಂದಾಗಿ ಅಲ್ಲ; ಮುಕ್ತಿಗೆ ತೆರಳುವವರಿಗೆ ಹೇಗೋ ಹಾಗೆ.

ವಿ: ಅವರ ದೇಹಪಾತಕ್ಕೆ ಕಾರಣವನ್ನು ತಿಳಿಸಿದ ಅನಂತರ ಆ ಕ್ರಮದಲ್ಲೇ ದೇಹ ತೊರೆಯಲು ಕಾರಣವನ್ನು ಇಲ್ಲಿ ತಿಳಿಸಿರುವರು. 'ವ್ಯುತ್ಕ್ರಮೇಣ ಲಯಃ' ಎಂಬುದು ಶಾಸ್ತ್ರನಿಯಮ, ಎಂದರೆ ಮೊದಲು ಹುಟ್ಟಿದವನು ಅನಂತರವೂ, ಅನಂತರ ಹುಟ್ಟಿದವರು ಮೊದಲು ದೇಹ ತೊರೆಯಬೇಕು ಎಂಬುದು ನಿಯಮ. ಅದರಂತೆ ಪತಿಗಿಂತ ಮೊದಲು ಪತ್ನಿ ದೇಹತೊರೆಯಬೇಕು ಎಂಬುದು ಸಹ. ಈ ನಿಯಮಕ್ಕನುಗುಣವಾಗಿ ದ್ರೌಪದಿ ಎಲ್ಲರಿಗಿಂತ ಮುಂಚಿತವಾಗಿಯೂ, ಬಳಿಕ ಕ್ರಮವಾಗಿ ಸಹದೇವ, ನಕುಲ, ಅರ್ಜುನ, ಭೀಮಸೇನ ನಾಲ್ವರೂ ದೇಹ ತೊರೆದರು ಎಂದರ್ಥ.

ಧರ್ಮಜನ ಮುಂದೆ ದೇವರಥ

ತೇಷು ಸ್ವರ್ಲೋಕಾನ್ ಪ್ರಾಪ್ತೇಷು ಧರ್ಮಜಃ ಸ್ವಾತ್ಮನಾ ಸಹ ।
ಯಯೌ ಪುರೋ ದೇವರಥಸ್ತದಾऽಸ್ಯಾವತತಾರ ಹ ॥ ೮೦ ॥

ಅ: ಭೀಮ ಮೊದಲಾದವರು ತಮ್ಮ ಲೋಕಗಳಿಗೆ ತೆರಳಿದ ಮೇಲೆ ಧರ್ಮರಾಜನು ನಾಯಿರೂಪದ ತನ್ನೊಂದಿಗೆ ಮುಂದೆ ಸಾಗಿದನು. ಆಗ ಅವನ ಮುಂದೆ ದೇವರಥ ಇಳಿದು ಬಂದಿತು.

---

೭೮. ಲಯೋ ಭವೇದ್ವ್ಯುತ್ಕ್ರಮತೋ ಹಿ ತೇಷಾಮ್ - ಇತಿ (೩/೩೧) ವತ್ ।

೭೯. ವಿಮತೋ ದೇಹಪಾತಃ ಪಾಪಹೇತುಕೋ ನ ಭವತಿ । ಉತ್ತಮಾಂಗಭೂತದೇಹಪಾತತ್ವಾತ್ । ಯಥಾ ಮುಚ್ಯಮಾನಾನಾಮಿತ್ಯಾಹ – ಪಾಪಾನ್ಮುಚ್ಯತಾಂ ಯಥಾ ॥ – (ತಾ.)

೭೯. ನಿಕ್ಷಿಪ್ಯ ಮಾನುಷಂ ದೇಹಂ ಗತಾಸ್ತೇ ಭರತರ್ಷಭ ॥ -ಭಾರತ (ಮಹಾ. ೩/೬)

೭೯. ಸರ್ವತ್ರ ವೇದೇಷು ನಿರ್ಣಯಗ್ರಂಥೇಷು ಚ । - (ಜ.)

೮೦. ಧರ್ಮಜಃ ಸ್ವಾತ್ಮನಾ ಸಹೇತ್ಯತ್ರ ಸ್ವಾತ್ಮನಾ = ಸ್ವದೇಹೇನೇತ್ಯರ್ಥಃ – (ವಾ.)

೮೦. ತತಃ ಸನ್ನಾದಯನ್ ಶಕ್ರೋ ದಿವಂ ಭೂಮಿಂ ಚ ಸರ್ವಶಃ ।
ರಥೇನೋಪಯಯೌ ಪಾರ್ಥಮಾರೋಹೇತ್ಯವ್ರವೀಚ್ಚತಮ್ ॥ - ಭಾರತ (ಮಹಾ ೩/೧)

ವಿ: ಬಳಿಕ ಧರ್ಮರಾಜ ಮುಂದೆ ಸಾಗಿದ, ಅವನೊಂದಿಗೆ ಹಸ್ತಿನಾಪುರದಿಂದ ಹೊರಟಾಗಿನಿಂದಲೂ ಒಂದು ನಾಯಿ ಹಿಂಬಾಲಿಸಿ ಬಂದಿತ್ತು ಆ ನಾಯಿ ಸ್ವತಃ ಯಮಧರ್ಮನ ರೂಪವೇ ಆಗಿತ್ತು

ನಾಯಿಯ ರೂಪದಲ್ಲಿ ಯಮಧರ್ಮ

ರಥಮಾರುಹೇತಿ ಕಥಿತೋ ರಥಿನಾ ಪುರತಃ ಶುನಃ ।
ಆರೋಹಮಕ್ರುವೀನ್ನೈತದ್ಯುಕ್ತಮಿತ್ಯಾಹ ಸೋಽಪಿ ತಮ್ ॥ ೮೧ ॥

ಅ: 'ರಥವನ್ನೇರು' - ಎಂದು ಸಾರಥಿ ನುಡಿದಾಗ 'ಮೊದಲು ನಾಯಿ ಏರಬೇಕು' ಎಂದು ಧರ್ಮರಾಜ ಹೇಳಿದ, ಸಾರಥಿ - 'ಅದು ಯುಕ್ತವಲ್ಲ' ಎಂದು ನುಡಿದ.

ವಿ: ನಾಯಿ ಅಂತಹ ಶ್ಲಾಘ್ಯವಾದ ಪ್ರಾಣಿಯಲ್ಲ, ಅದರ ಸ್ಪರ್ಶವಿರಲಿ ದರ್ಶನವೂ ಸಹ ಪಾವಿತ್ರ್ಯಕ್ಕೆ ಕುಂದುಂಟುಮಾಡುವುದು ಎಂಬ ಮಾತುಗಳನ್ನು ತಿಳಿಸಿ ಆ ದೇವದೂತ ನಾಯಿಯನ್ನು ಜೊತೆಯಲ್ಲಿ ಕರೆತರುವುದು ಬೇಡ ಎಂದು ತಿಳಿಸಿದ ಎಂದರ್ಥ :

ಸ್ವರ್ಗೇ ಲೋಕೇ ಶ್ವತಾಂ ನಾಸ್ತಿ ಧಿಷ್ಣ್ಯಮಿಷ್ಟಾಪೂರ್ತಂ ಕ್ರೋಧವಶಾ ಹರಂತಿ ।
ತತೋ ವಿಚಾರ್ಯ ಕ್ರಿಯತಾಂ ಧರ್ಮರಾಜ ತ್ಯಜ ಶ್ವಾನಂ ನಾತ್ರ ನೃಶಂಸಮಸ್ತಿ ॥...
ಶುನಾ ದೃಷ್ಟಂ ಕ್ರೋಧವಶಾ ಹರಂತಿ ಯದ್ದತ್ತಮಿಷ್ಟಂ ವಿವೃತಮಘೋ ಹೃತಂ ಚ ।
ತಸ್ಮಾಚ್ಛುನಸ್ತ್ಯಾಗಮಿಮಂ ಕುರುಷ್ವ ಶುನಸ್ತ್ಯಾಗಾತ್ ಪ್ರಾಪ್ಸ್ಯಸೇ ದೇವಲೋಕಮ್ ॥
– (ಮಹಾಪ್ರಸ್ಥಾನ. ೩/೧೦, ೧೩)

ನಾರುಹೇಯಂ ವಿನಾ ಶ್ವಾನಮಿತಿ ತೇನ ಸ್ಥಿರೋದಿತೇ ।
ಸ್ವರೂಪಂ ದರ್ಶಯಾಮಾಸ ಧರ್ಮೋ ಹ್ಯಾತ್ಮಸ್ವರೂಪತಾಮ್ ॥ ೮೨ ॥

ಅ: 'ನಾನು ಆ ನಾಯಿಯನ್ನು ಬಿಟ್ಟು ರಥವೇರಲಾರೆ' ಎಂದು ಧರ್ಮರಾಜ ಖಚಿತವಾಗಿ ತಿಳಿಸಲು ಯಮಧರ್ಮ ತನ್ನ ಸ್ವರೂಪವನ್ನು ತೋರಿಸಿದ. ನಾಯಿ ರೂಪದಲ್ಲಿದ್ದವನು ಅವನೇ ಅಲ್ಲವೇ.

---

೮೧. ಕಥಿತೋ ರಥಿನೇತ್ಯತ್ರ ರಥಿನಾ= ರಥಸ್ಥೇನ ಸೂತೇನ – (ವಾ.)

೮೨. ಅಯಂ ಶ್ವಾ ಭೂತಭವ್ಯೇಶ ಭಕ್ತೋ ಮಾಂ ನಿತ್ಯಮೇವ ಹ ।
ಸ ಗಚ್ಛೇತ ಮಯಾ ಸಾರ್ಧಮಾನೃಶಂಸ್ಯಾ ಹಿ ಮೇ ಮತಿಃ । - ಭಾರತ (ಮಹಾ. ೩/೭)

ವಿ: ಧರ್ಮರಾಜ ತಾನೆಂದೂ ಆಶ್ರಿತರನ್ನು ಕೈಬಿಡುವವನಲ್ಲವೆಂದೂ, ತನ್ನನ್ನು ಹಿಂಬಾಲಿಸಿ ಬಂದ ನಾಯಿಯನ್ನು ಸರ್ವಥಾ ಬಿಡಲಾರೆನೆಂದೂ ಸ್ಪಷ್ಟವಾಗಿ ತಿಳಿಸಿದ (ಮಹಾಪ್ರಸ್ಥಾನ. ೩/೧೭). ಮುಂದೆ ಆ ನಾಯಿ ಸ್ವತಃ ಯಮಧರ್ಮ ಎಂಬುದು ತಿಳಿಯಿತು.

ಆನೃಶಂಸ್ಯಪರತ್ವೇನ ಕೀರ್ತಿಮೇವಾತ್ಮನೋ ವೃಷಃ ।
ಖ್ಯಾಪಯಾಮಾಸ ಕೌಂತೇಯರೂಪಿಣೋ ಧರ್ಮಸೂಕ್ತಿಭಿಃ ॥ ೮೩ ॥

ಅ: ಹೀಗೆ ಕೃಪಾಳು ಎನ್ನಿಸುವ ಮೂಲಕ ಯಮಧರ್ಮ ತನ್ನ ಯುಧಿಷ್ಠಿರರೂಪದ ಕೀರ್ತಿಯನ್ನು ಧರ್ಮಸೂಕ್ತಿಗಳ ಮೂಲಕ ಪ್ರಚುರಪಡಿಸಿದ.

ವಿ: ೧) ನರಕಾಧಿಪತಿಯಾಗಿರುವ ಕಾರಣದಿಂದ ಯಮನ ಬಗ್ಗೆ ತುಂಬಾ ಕ್ರೂರಿ, ನಿಷ್ಕರುಣಿ ಎಂಬ ಭಾವನೆ, ಜನಗಳಲ್ಲಿ ಹುಟ್ಟಿರುವುದುಂಟು. ಆದರೆ ಅವರು ಅಂತಹ ಶಿಕ್ಷೆಯ ವಿಭಾಗವನ್ನು ನೋಡಿಕೊಳ್ಳುವುದರಿಂದ ಅವರು ನ್ಯಾಯನಿಷ್ಠುರರೆಂದು ಅರ್ಥವೇ ಹೊರತು, ಕ್ರೂರಿ, ನಿಷ್ಕರುಣಿ ಎಂಬುದಾಗಿ ತಿಳಿಯಬಾರದೆಂದು ಅವನ ಧರ್ಮರಾಜರೂಪದ ಈ ದಯಾಪರತೆಯಿಂದ ತಿಳಿದುಬರುವುದು,

೨) ಈ ಯುಧಿಷ್ಠಿರರೂಪದಲ್ಲಿ ಅಂತಹ ದಯಾಪರತೆ ವಿಶೇಷವಾಗಿ ಕಂಡುಬರಲು ಅವನೊಳಗೆ ಶ್ರೀವಾಯುದೇವರು ಸೌಮ್ಯನಾಮಕರೂಪದಿಂದ ನೆಲೆಸಿರುವುದೂ ಮತ್ತೊಂದು ಅತ್ಯಂತಪ್ರಮುಖಕಾರಣ ಎಂದು ತಿಳಿಯಬೇಕು (೧೨/೧೨೯).

ಗಗನ ಮಾರ್ಗದಲ್ಲಿ ಯುಧಿಷ್ಠಿರ

ತತಃ ಸ ರಥಮಾರುಹ್ಯ ಲೋಕಾನಾಮುತ್ತರೋತ್ತರಮ್ ।
ಅತಿಕ್ರಮ್ಯಾಖಿಲಾನ್ ರಾಜ್ಞೋ ಜಗಾಮ ಶ್ರೀಪತಿಪ್ರಿಯಃ ॥ ೮೪ ॥

ಅ: ಬಳಿಕ ಶ್ರೀಹರಿಪ್ರಿಯನಾದ ಧರ್ಮರಾಜ ಆ ರಥವನ್ನೇರಿ ಮೇಲೆ ಮೇಲಿನ ಲೋಕಗಳ ಸಕಲರಾಜರನ್ನು ಮೀರಿ ಮುಂದೆ ನಡೆದ.

ವಿ: ೧) ಧರ್ಮರಾಜ ದೇವತೆಯಾದ್ದರಿಂದ ಅವನು ಯಮನ ಸಭೆಯನ್ನು ಮಾತ್ರ ಸೇರುವಂತಹ ರಾಜರಿಗಿಂತ ಉತ್ತಮಸ್ಥಾನವನ್ನು ಪಡೆದ ಎಂದರ್ಥ. ದೇವತೆಗಳು ಇಂದ್ರಸಭೆಯಲ್ಲಿ ನೆಲೆಸುವರು ಎಂಬ ವಿವರ ಈಗಾಗಲೇ ಬಂದಿದೆ (೨೧/೬೩).

---

೮೪. ಅತಿಕ್ರಮ್ಯಾಖಿಲಾನ್‌ರಾಜ್ಞ ಇತ್ಯತ್ರ ರಾಜ್ಞಃ = ಮಧ್ಯೇ ಮಧ್ಯೇ ಸ್ಥಿತ ವೀರಸ್ವರ್ಗಗಾನ್‌ನೃಪಾನ್ – (ವಾ.)

೨) ಧರ್ಮರಾಜ ಹಾಗೆ ಸ್ವರ್ಗಾರೋಹಣ ಮಾಡಿದಾಗ ಅವನಿಗೆ ನೂರೆಂಟು ವರ್ಷಗಳು ಪೂರೈಸಿದ್ದವು. ಪಾಂಡವರ ವಯೋಮಾನಕ್ಕೆ ಅನುಗುಣವಾಗಿ ಅವರ ಜೀವನದ ಪ್ರಮುಖ ಘಟ್ಟಗಳ ಏವರ ಮಹಾಭಾರತದಲ್ಲಿ ಬಂದಿದೆ :

ಜನಮೇಜಯಃ -

ಪಾಂಡವಾನಾಂ ತಥಾ ಪುಣ್ಯಂ ಕುತ್ರ ವಾಸಃ ಕಿಯದ್ದಿನಮ್ ।
ಏತದಾಚಕ್ಷ್ವ ಭಗವನ್ ಪೃಚ್ಛತೇ ಬ್ರಾಹ್ಮಣೋತ್ತಮ ।

ವೈಶಂಪಾಯನಃ -

ಪಾಂಡವಾನಾಂ ತಥಾ ಪುಣ್ಯಂ ಶೃಣು ಕೌರವನಂದನ ।
ಜಗಾಮ ಹಸ್ತಿನಪುರಂ ಷೋಡಶಾಬ್ದೋ ಯುಧಿಷ್ಠಿರಃ ॥
ಭೀಮಃ ಪಂಚದಶಾಬ್ದಸ್ತು ಬೀಭತ್ಸುರ್ವೈ ಚತುರ್ದಶ ।
ತ್ರಯೋದಶಾಬ್ದೌ ತು ಯಮೌ ಜಗೃತುರ್ನಾಗಸಾಹ್ವಯಮ್ ॥
ತತ್ರ ತ್ರಯೋದಶಾಬ್ದಾನಿ ಧಾರ್ತರಾಷ್ಟ್ರೈಃ ಸಹೋಷಿತಃ ।
ಷಣ್ಮಾಸಾನ್ ವೈ ಜತುಗೃಹಾನ್ಮುಕ್ತಾ ಜಾತೋ ಘಟೋತ್ಕಚಃ ॥
ಷಣ್ಮಾಸಾನೇಕಚಕ್ರಾಯಾಂ ವರ್ಷಂ ಪಂಚವರ್ಷಾಣಿ ಭಾರತ ॥
ಇಂದ್ರಪ್ರಸ್ಥೇऽವಸಂಸ್ತೇ ತ್ರೀಣಿ ವರ್ಷಾಣಿ ವಿಂಶತಿಃ ।
ದ್ವಾದಶಾಬ್ದಾ ತಥೈಕಂಚ ಬಭ್ರಮುರ್ಯುತಕರ್ಶಿತಾಃ ॥
ಭುಕ್ತ್ವಾ ಷಟ್ ತ್ರಿಂಶತಂ ರಾಜ್ಯಂ ಸಾಗರಾಂತಾಂ ವಸುಂಧರಾಮ್ ।
ಮಾಸೈಃ ಷಡ್ಭಿರ್ಮಹಾತ್ಮಾನಃ ಸರ್ವೇ ಕೃಷ್ಣಪರಾಯಣಾಃ ॥
ರಾಜ್ಯೇ ಪರೀಕ್ಷಿತಂ ಸ್ಥಾಪ್ಯ ಇಷ್ಟಾಂ ಗತಿಮವಾಪ್ನುವನ್ ।
ಏವಂ ಯುಧಿಷ್ಠಿರಶ್ಚಾಪಿ ಆಯುರಷ್ಟೋತ್ತರಂ ಶತಮ್ ।
ಅರ್ಜುನಾತ್ ಕೇಶವೋ ಜ್ಯೇಷ್ಠಃ ಷಡ್ಭಿರ್ಮಾಸೈರ್ಮಹಾಭುಜಃ ॥

– ಇತ್ಯಾದಿಪರ್ವಣಿ (ಪ್ರ.)

ಇಂದ್ರಲೋಕದಲ್ಲಿ ದುರ್ಯೋಧನ

ಸರ್ವೇಷಾಮುತ್ತರಂ ಲೋಕಮೈಂದ್ರಂ ಪ್ರಾಪ್ಯೇದಮೇವ ತೇ ।
ಸ್ಥಾನಮಿತ್ಯುದಿತೋ ದೇವೈರ್ದುರ್ಯೋಧನಮವೈಕ್ಷತ ॥ ೮೫ ॥

---

೮೫. ಉತ್ತರಂ ಲೋಕಮೈಂದ್ರಮಿತ್ಯತ್ರ ಐಂದ್ರಂ = ಇಂದ್ರೇಣ ಸ್ವಲೀಲಾರ್ಥಂ ಕೃತಂ ಲೋಕಂ ನತು ಸಾಕ್ಷಾದಮರಾವತೀಮ್ – (ವಾ.)

೮೫. ಸ್ವರ್ಗಂ ತ್ರಿವಿಷ್ಟಪಂ ಪ್ರಾಪ್ಯ ಧರ್ಮರಾಜೋ ಯುಧಿಷ್ಠಿರಃ ।
ದುರ್ಯೋಧನಂ ಶ್ರಿಯಾ ಜುಷ್ಟಂ ದದರ್ಶಾಸೀನಮಾಸನೇ ॥ - (ಸ್ವರ್ಗಾ. ೧/೪)

ಅ: ಎಲ್ಲಕ್ಕಿಂತ ಮೇಲಿನ ಲೋಕವಾದ ಇಂದ್ರಲೋಕವನ್ನು ಸೇರಿ, ದೇವತೆಗಳಿಂದ ''ಇದೇ ನಿನ್ನ ಸ್ಥಾನ'' ಎಂದು ತಿಳಿಸಲ್ಪಟ್ಟ ಧರ್ಮರಾಜ ಅಲ್ಲಿ ದುರ್ಯೋಧನನನ್ನು ಕಂಡ.

ದುರ್ಯೋಧನನ ಬಗ್ಗೆ ಕಿಡಿ ಕಾರಿದ ಧರ್ಮರಾಜ

ಸಭ್ರಾತೃಕಂ ಜ್ವಲಂತಂ ಚ ಸರ್ವೇಷಾಮುಪರಿ ಸ್ಥಿತಮ್ ।
ತಂ ದೃಷ್ಟ್ವಾ ಪರಮಕ್ರುದ್ಧೋ ನಿಮೀಲ್ಯ ನಯನೇ ಶುಭೇ ॥ ೮೬ ॥

ಅ: ಸೋದರರೊಂದಿಗೆ ಎಲ್ಲರಿಗಿಂತ ಮೇಲಿದ್ದು, ಮೆರೆಯುತ್ತಿದ್ದ ದುರ್ಯೋಧನನನ್ನು ಕಂಡು, ಬಹಳ ಕ್ರುದ್ಧನಾಗಿ ತನ್ನ ಮಂಗಳಕರವಾದ ಎರಡು ಕಣ್ಣುಗಳನ್ನೂ ಮುಚ್ಚಿಕೊಂಡ.

ವಿ: ಭೂಲೋಕದಲ್ಲಿ ಇದ್ದಾಗ ದುರ್ಯೋಧನನ ಮೇಲೆ ಒಮ್ಮೆಯೂ ವ್ಯಕ್ತಪಡಿಸದಿದ್ದ ಮಹಾಕೋಪವನ್ನು ಧರ್ಮರಾಜ ಆಗ ವ್ಯಕ್ತಪಡಿಸಿದ ಎಂಬುದು ಇಲ್ಲಿಯ ವಿಶೇಷ.

ಪಾಂಡವರು ಮೊದಲಾದವರು ಎಲ್ಲಿ

ಭ್ರಾತರೋ ಮೇ ಕ್ವ ಕೃಷ್ಣಾ ಚ ಸಕರ್ಣಾಃ ಕ್ವ ಚ ಬಾಂಧವಾಃ ।
ಧೃಷ್ಟದ್ಯುಮ್ನಾದಯಃ ಪುತ್ರಾ ಹೈಡಿಂಬಾದ್ಯಾಶ್ಚ ಸರ್ವಶಃ ॥ ೮೭ ॥

---

೮೫. ಐಂದ್ರಮಿತಿ । ಏತೇನ ದುರ್ಯೋಧನಸ್ಯ ಸಾಂಕಲ್ಪಿಕಸ್ವರ್ಗವಾಸ ಇತಿ ವದಂತೋ ನಿರಸ್ತಾಃ । ಆಚಾರ್ಯ-ತೇಜಸಾಮುಖ್ಯಸ್ಯೈವೋಪಪತ್ತೇಃ । ತದುಕ್ತಂ ಗೀತಾತಾತ್ಪರ್ಯೇ । 'ದಕ್ಷಿಣಾತರ್ಪಿತಾನಾಂ ಆಚಾರ್ಯಾಣಾಂ ತು ತೇಜಸಾ । ಯಾಂತಿ ಸ್ವರ್ಗಂ ಗತಃ ಕ್ಷಿಪ್ರಂ ತಮೋಽಂಧಂ ಪ್ರಾಪ್ನುವಂತಿ ಚ' ಇತಿ । ಅತೋ ದುರ್ಯೋಧನಸ್ಯ ಸ್ವರ್ಗದೇಶವಿಶೇಷೇ ವಾಸೋ ನ ತು ದೇವವೀಥಿಕಾದೌ । ವೈಷ್ಣವಾನುಗ್ರಹರೂಪಬ್ರಹ್ಮಾದಿವರಾತ್। ಹಿರಣ್ಯಕಶಿಪ್ವಾದೀನಾಂ ಸ್ವರ್ಗಾಧಿಪತ್ಯಸ್ಯಾಪಿ ದರ್ಶನಾತ್ । ಪುರಾಧಿಪತ್ಯೇ ಏಕದೇಶಾವಸ್ಥಾನಮಾತ್ರಸ್ಯ ಸುತರಾಂ ಸಂಭವಾತ್। ಉತ್ತಮೋತ್ತಮಸ್ವರ್ಗಪ್ರದೇಶವಾಸ ಉಪಪದ್ಯತ ಇತ್ಯಾಹುಃ । – (ತಾ.)

೮೬. ನಿಮೀಲ್ಯ ನಯನೇ ಶುಭೇ ಇತ್ಯಸ್ಯ ಶುಭಾರ್ಥಂ ನಯನೇ ನಿಮೀಲ್ಯೇತ್ಯರ್ಥಃ ॥ – (ಸ.)

೮೬. ಯೇಽಪಿ ರಾಜರ್ಷಯಃ ಸರ್ವೇ ಯೇ ಚಾಪಿ ಸಮುಪಸ್ಥಿತಾಃ ।
ಕೀರ್ತಿಂ ಪ್ರಚ್ಛಾದ್ಯ ತೇಷಾಂ ವೈ ಕುರುರಾಜೋಽಧಿತಿಷ್ಠತಿ ॥ - ಭಾರತ (ಮಹಾ. ೩/೨೧)

೮೭. ಕ್ವ ತೇ ಮಹಾರಥಾಃ ಸರ್ವೇ ಶಾರ್ದೂಲಸಮವಿಕ್ರಮಾಃ । - ಭಾರತ (ಮಹಾ. ೩/೨೧)

೮೭. ಭೀಮಂ ಚ ಭೀಮವಿಕ್ರಾಂತಂ ಪ್ರಾಣೇಭ್ಯೋಽಪಿ ಪ್ರಿಯಂ ಮಮ ।
ಆರ್ಜುನಂ ಚೇಂದ್ರಸಂಕಾಶಂ ಯಮೌ ಚೈವ ಯಮೋಪಮೌ ॥
ದ್ರಷ್ಟುಮಿಚ್ಛಾಮಿ ತಾಂ ಚಾಹಂ ಪಾಂಚಾಲೀಂ ಧರ್ಮಚಾರಿಣೀಮ್ ॥.....
ನ ಚೇಹ ಸ್ಥಾತುಮಿಚ್ಛಾಮಿ ಸತ್ಯಮೇವಂ ಬ್ರವೀಮಿ ವಃ ।
ಕಿಂ ಮೇ ಭ್ರಾತೃವಿಹೀನಸ್ಯ ಸ್ವರ್ಗೇಣ ಸುರಸತ್ತಮಾಃ ।
ಯತ್ರ ತೇ ಮಮ ಸ ಸ್ವರ್ಗೋ ನಾಯಂ ಸ್ವರ್ಗೋ ಮತೋ ಮಮ ॥ -ಭಾರತ (ಸ್ವರ್ಗಾ. ೨/೩,೧೦-೧೨)

ಯಾದವಾಶ್ಚೇತಿ ಪಪ್ರಚ್ಛ ದೇವಾಸ್ತೇ ಚ ತಮಬ್ರುವನ್ ।
ಕಿಂ ತೇ ತೈಃ ಸ್ವಕೃತಂ ಕರ್ಮ ಭುಜ್ಯತೇಽತ್ರ ನ ಚಾಪರೈಃ ॥ ೮೮ ॥

ಅ: ''ನನ್ನ ಸೋದರರೆಲ್ಲಿ? ದ್ರೌಪದಿಯೆಲ್ಲಿ? ಕರ್ಣನೆಲ್ಲಿ? ಇತರ ಬಾಂಧವರೆಲ್ಲಿ? ಧೃಷ್ಟದ್ಯುಮ್ನಾದಿಗಳೆಲ್ಲಿ? ಘಟೋತ್ಕಚ ಮೊದಲಾದ ಪುತ್ರರುಗಳು ಎಲ್ಲಿ? ಯಾದವರೆಲ್ಲಿ?'' ಎಂದು ಧರ್ಮರಾಜ ಕೇಳಿದ. ದೇವತೆಗಳು ಅವನಿಗೆ ಹೇಳಿದರು : ''ಅವರಿಂದ ನಿನಗೇನು? ಇಲ್ಲಿ ತಾವು ಮಾಡಿದ ಕರ್ಮವನ್ನೇ ಅವರು ಅನುಭವಿಸುವರು; ಇತರರಲ್ಲ''.

ವಿ: ಉತ್ತಮಸ್ಥಾನವೆಂದು ದೇವತೆಗಳು ತೋರಿಸಿದ ಆ ಸ್ಥಳದಲ್ಲಿ ಭೀಮಸೇನಾದಿ ಪಾಂಡವರಿಂದ ಪ್ರಾರಂಭಿಸಿ, ಸಾತ್ತ್ವಿಕರಾರೂ ಕಾಣದ್ದನ್ನು ಗಮನಿಸಿ, ಧರ್ಮರಾಜ ಹಾಗೆ ಪ್ರಶ್ನಿಸಿದ ಎಂದರ್ಥ.

ಮಹಾಪಾಪಿ ದುರ್ಯೋಧನ

ಇತ್ಯುಕ್ತ ಆಹ ಪಾಪೋಽಯಂ ಪೃಥಿವೀಕ್ಷಯಕಾರಕಃ ।
ಸರ್ವಾತಿಶಂಕೀ ಮಿತ್ರಧ್ರುಜ್ ನಾರಾಯಣಪರಾಙ್ಮುಖಃ ॥ ೮೯ ॥

ನಾಸ್ತಿಕೋಽತಿಶಠಃ ಕ್ರೂರೋ,ದ್ವೇಷ್ಟಾ ವಿಷ್ಣೋಶ್ಚ ತದ್ಭವಾಮ್ ।
ಕಥಂ ದುರ್ಯೋಧನಃ ಸ್ಥಾನಂ ಸರ್ವೋತ್ತಮಮವಾಪ್ತವಾನ್ ॥ ೯೦ ॥

ಅ: ದೇವತೆಗಳು ಹೀಗೆನ್ನಲು ಧರ್ಮರಾಜ ಕೇಳಿದ ''ದುರ್ಯೋಧನ ಈ ಭೂಮಿಯನ್ನೇ ನಾಶಮಾಡಿದ ಪಾಪಿ, ಎಲ್ಲವನ್ನೂ ಸಂದೇಹಿಸುವವನು, ಮಿತ್ರದ್ರೋಹಿ, ನಾರಾಯಣನಿಗೆ ವಿಮುಖನಾದವನು, ನಾಸ್ತಿಕ, ಮಹಾವಂಚಕ, ಕ್ರೂರಿ, ವಿಷ್ಣುವನ್ನು ಅವನ ಭಕ್ತರನ್ನು ದ್ವೇಷಿಸುವವನು, ಇಂಥವನು ಇಂತಹ ಸರ್ವೋನ್ನತವಾದ ಸ್ಥಾನವನ್ನು ಹೇಗೆ ಹೊಂದಿದ?

---

೮೯. ನಾಸ್ತಿಕಃ ಕೃತಘ್ನಃ ಅತಿಶಠಃ ಮಹಾಧೂರ್ತಃ ಕೇವಲಂ ಹರಿಸೇವಾಪರಾಙ್ಮುಖ ಇತಿ ಕಿಂತ್ವಿತಿ ಚಾರ್ಥಃ । - (ಜ.)

೮೯. ಸರ್ವಾತಿಶಂಕೀತ್ಯಸ್ಯ ಸರ್ವವಿಷಯಕಾ ಇತಿ ದೃಢವಿಪರೀತನಿಶ್ಚಯವಾನಿತ್ಯರ್ಥಃ । - (ಸ.)

೮೯. ಯದಿ ದುರ್ಯೋಧನಸ್ಯೈತೇ ವೀರಲೋಕಾಃ ಸನಾತನಾಃ ।
ಅಧರ್ಮಜ್ಞಸ್ಯ ಪಾಪಸ್ಯ ಪೃಥಿವೀಸುಹೃದಾಂ ದ್ರುಹಃ ॥
ಯತ್ಕೃತೇ ಪೃಥಿವೀ ನಷ್ಟಾ ಸಹಯಾ ಸನರದ್ವಿಪಾ ।
ವಯಂ ಚ ಮನ್ಯುನಾ ದಗ್ಧಾ ವೈರಂ ಪ್ರತಿಚಿಕೀರ್ಷವಃ ॥ - ಭಾರತ (ಸ್ವರ್ಗ. ೧/೨೦,೨೧)

೯೦. ವಿಷ್ಣೋಶ್ಚ ತದ್ಭವಾಮಿತ್ಯತ್ರ ತದ್ಭವಾಂ= ಸಃ= ವಿಷ್ಣುರೇವ ಭೂಃ ಸ್ಥಾನಂ ಆಧಾರೋ ಯೇಷಾಂ ತೇ ತದ್ಭವೋ = ವೈಷ್ಣವಾ ಇತ್ಯರ್ಥಃ ॥ - (ವಾ.)

ಏ: ದುರ್ಯೋಧನನ ಪ್ರಮುಖ ದೋಷಗಳನ್ನೆಲ್ಲ ಧರ್ಮರಾಜ ಇಲ್ಲಿ ಪಟ್ಟಿ ಮಾಡಿರುವುದು ವಿಶೇಷ.

ಕಥಂ ಚ ಸರ್ವಧರ್ಮಜ್ಞಾ ನಾರಾಯಣಪರಾಯಣಾಃ ।
ಸಂಸ್ಥಿತಾಃ ಪರಮೇ ಧರ್ಮೇ ದೃಶ್ಯಂತೇಽತ್ರ ನ ಮತ್ಪ್ರಿಯಾಃ ॥ ೪೧ ॥

ಅ: ಸಕಲ ಧರ್ಮಗಳನ್ನು ತಿಳಿದವರು, ನಾರಾಯಣನನ್ನೇ ಆಶ್ರಯಿಸಿದವರು, ಪರಮ ಧರ್ಮದಲ್ಲಿ ನಿಷ್ಠರಾದವರು ಆದ ನನ್ನ ಪ್ರೀತಿಪಾತ್ರರಾರೂ ಇಲ್ಲೇಕೆ ಕಾಣುತ್ತಿಲ್ಲ?

ಏ: ದುರ್ಯೋಧನನಂತಹ ಪಾಪಿಗಳು ಅಂತಹ ಉನ್ನತ ಸ್ಥಾನದಲ್ಲಿ ಮೆರೆಯುತ್ತಿದ್ದರೆ, ಅಲ್ಲಿ ಸಾತ್ವಿಕರಾದ ಒಬ್ಬರೂ ಇಲ್ಲದಿದ್ದುದು ಮತ್ತೊಂದು ಆಶ್ಚರ್ಯ.

ಯತ್ರ ಸಂತಸ್ತು ತೇ ಸಂತಿ ತತ್ರ ಸ್ಥಾತವ್ಯಮೇವ ಮೇ ।
ನಿರಯೇಽಪಿ ನ ಚಾತ್ಯಾಪಿ ಹ್ಯನೇನ ಸಹ ಪಾಪಿನಾ ॥ ೪೨ ॥

ಅ: ಸಜ್ಜನರಾದ ಅವರು ಎಲ್ಲಿರುವರೋ ಅಲ್ಲಿಯೇ ನಾನೂ ಇರಬೇಕು; ನರಕದಲ್ಲಾದರೂ ಸರಿಯೇ. ಈ ಪಾಪಿಯೊಂದಿಗೆ ಇಲ್ಲಿ ನಾನು ಇರಲಾರೆ'.

ಏ: ಧರ್ಮರಾಜ ದುರ್ಯೋಧನನಿರುವ ಸ್ಥಾನ ಸ್ವರ್ಗಲೋಕವೇ ಆದರೂ ಸರಿ ಅದು ತನಗೆ ಬೇಡ ಎನ್ನುವ ಮೂಲಕ ತನ್ನ ಧರ್ಮನಿಷ್ಠೆ ಸ್ವರ್ಗಾದಿ ಫಲಪ್ರಾಪ್ತಿಗೋಸ್ಕರವಾಗಿರದೇ ಸಹಜ–ವಾಗಿಯೇ ನಡೆದಿದ್ದ ಶ್ರೇಷ್ಠ ಕಾರ್ಯ ಎಂಬುದನ್ನು ಸ್ಫುಟಪಡಿಸಿದ.

ಬಂಧುಗಳಿಡೆಗೆ ಧರ್ಮರಾಜ

ಅಸ್ಯ ವೀರತಮಸ್ಯೇದಂ ಧಾರ್ತರಾಷ್ಟ್ರಸ್ಯ ಯುಜ್ಯತೇ ।
ಇತ್ಯುಕ್ತ್ವಾ ದೇವತಾ ದೂತಂ ಸ್ವಾನಾಂ ಸಂದರ್ಶನಾರ್ಥಿನಃ ॥ ೪೩ ॥

---

೪೨. ಶುಭಂ ವಾ ಯದಿ ವಾ ಪಾಪಂ ಭ್ರಾತೄಣಾಂ ಸ್ಥಾನಮದ್ಯ ಮೇ ।
ತದೇವ ಪ್ರಾಪ್ತುಮಿಚ್ಛಾಮಿ ಲೋಕಾನನ್ಯಾನ್ ನ ಕಾಮಯೇ ॥ - (ಮಹಾ ೩/೩೧)

ತೈರ್ವಿನಾ ನೋತ್ಸಹೇ ವಸ್ತುಮಿಹ ದೈತ್ಯನಿಬರ್ಹಣ ।
ಗಂತುಮಿಚ್ಛಾಮಿ ತತ್ರಾಹಂ ಯತ್ರ ತೇ ಭ್ರಾತರೋ ಗತಾಃ ॥ (ಮಹಾ.೩/೩೮)

ರಾಜ್ಞಃ ಸಂಪ್ರೇಷಯಾಮಾಸುಸ್ತತ್ಸಂದರ್ಶಿತವರ್ತ್ಮನಾ ।
ದುರ್ಗಂಧೇನ ಸುಕೃಚ್ಛ್ರೇಣ ತಮಸಾ ಪ್ರಾವೃತೇನ ಚ ॥ ೯೪ ॥

ಅ: 'ಮಹಾವೀರನಾದ ದುರ್ಯೋಧನನಿಗೆ ಇದು ದೊರಕಿದೆ' ಎಂದು ನುಡಿದು ದೇವತೆಗಳು ತಮ್ಮ ದೂತನನ್ನು ತನ್ನ ಬಂಧುಗಳನ್ನು ಕಾಣಬಯಸಿದ ಧರ್ಮರಾಜನೊಂದಿಗೆ ಕಳುಹಿಸಿಕೊಟ್ಟರು. ಧರ್ಮರಾಜ ಅವನು ತೋರಿದ ಹಾದಿಯಲ್ಲಿ ನಡೆದ. ಅದರಲ್ಲಿ ಸಹಿಸಲಾಗದ ದುರ್ಗಂಧ ತುಂಬಿತ್ತು ಕತ್ತಲೆ ಆವರಿಸಿತ್ತು.

ಧರ್ಮರಾಜನಿಗೆ ನರಕದರ್ಶನ

ಗತ್ವೈವ ಕಿಯತೀಂ ಭೂಮಿಂ ತದ್ದುರ್ಗಂಧಾಸಹೋ ನೃಪಃ ।
ಇಚ್ಛನ್ನಿವರ್ತನಂ ತತ್ರ ಸ್ವಾನಾಂ ವಾಚ ಇವಾಶೃಣೋತ್ ॥ ೯೫ ॥

---

೯೪. ಪಂಥಾನಾಮಶುಭಂ ದುರ್ಗಂ ಸೇವಿತಂ ಪಾಪಕರ್ಮಭಿಃ ।
ತಮಸಾ ಸಂಹೃತಂ ಘೋರಂ ಕೇಶಶೈವಲಶಾದ್ವಲಮ್ ।
ಯುಕ್ತಂ ಪಾಪಕೃತಾಂ ಗಂಧೈರ್ಮಾಂಸಶೋಣಿತಕರ್ದಮಮ್ ॥
ದಶೋತ್ಸಾತಕಭಲ್ಲೂಕಮಕ್ಷಿಕಾಮಶಕಾವೃತಮ್ ।
ಇತಶ್ಚೇತಶ್ಚ ಕುಣಪೈಃ ಸಮಂತಾತ್ ಪರಿವಾರಿತಮ್ ॥
ಅಸ್ಥಿಕೇಶಸಮಾಕೀರ್ಣಂ ಕೃಮಿಕೀಟಸಮಾಕುಲಮ್ ।
ಜ್ವಲನೇನ ಪ್ರದೀಪ್ತೇನ ಸಮಂತಾತ್ ಪರಿವೇಷ್ಟಿತಮ್ ॥
ಅಯೋಮುಖೈಶ್ಚ ಕಾಕಾದ್ಯೈರ್ಗೃಧ್ರೈಶ್ಚ ಸಮಭಿದ್ರುತಮ್ ।
ಸೂಚೀಮುಖೈಸ್ತಥಾ ಪ್ರೇತೈರ್ವಿಂಧ್ಯಶೈಲೋಪಮೈರ್ವೃತಮ್ ॥
ಮೇದೋರುಧಿರಯುಕ್ತೈಶ್ಚ ಚ್ಛಿನ್ನಬಾಹೂರುಪಾಣಿಭಿಃ ।
ನಿಕೃತ್ತೋದರಪಾದೈಶ್ಚ ತತ್ರ ತತ್ರ ಪ್ರವೇರಿತೈಃ ॥
ಸ ತು ತಕುಣಪದುರ್ಗಂಧಮಶಿವಂ ಲೋಮಹರ್ಷಣಮ್ ।
ಜಗಾಮ ರಾಜಾ ಧರ್ಮಾತ್ಮಾ ಮಧ್ಯೇ ಬಹುವಿಚಿಂತಯನ್ ॥
ದದರ್ಶೋಷ್ಣೋದಕೈಃ ಪೂರ್ಣಾಂ ನದೀಂ ಚಾಪಿ ಸುದುರ್ಗಮಾಮ್ ।
ಅಸಿಪತ್ರವನಂ ಚೈವ ನಿಶಿತಂ ಕ್ಷುರಸಂವೃತಮ್ ॥
ಕರಂಭವಾಲುಕಾಸ್ತಪ್ತಾ ಆಯಸೀಶ್ಚ ಶಿಲಾಃ ಪೃಥಕ್ ।
ಲೋಹಕುಂಭೀಶ್ಚ ತೈಲಸ್ಯ ಕ್ವಾಥ್ಯಮಾನಾಃ ಸಮಂತತಃ ॥
ಕೂಟಶಾಲ್ಮಲಿಕಂ ಚಾಪಿ ದುಃಸ್ಪರ್ಶಂ ತೀಕ್ಷ್ಣಕಂಟಕಮ್ ॥
ದದರ್ಶ ಚಾಪಿ ಕೌಂತೇಯೋ ಯಾತನಾಃ ಪಾಪಕರ್ಮಿಣಾಮ್ ॥ - ಭಾರತ (ಸ್ವರ್ಗಾ.೨/೧೬-೨೫)

೯೫. ಸ್ವಾನಾಂ ವಾಚ ಇವಾಶ್ರುಣೋದಿತ್ಯಸ್ಯ ಸ್ವಾನಾಂ ವಾಚ ಇವ ವಿದ್ಯಮಾನಾಃ ಅತ ಏವ ಸ್ವಾನಾಂ ವಾಚ ಏವೇತಿ ಪ್ರತೀಯಮಾನಾ ವಾಚ ಅಶ್ರುಣೋದಿತ್ಯರ್ಥಃ ॥ – (ಸ.)

ಅ: ಸ್ವಲ್ಪದೂರ ಹೋದಮೇಲೆ ಆ ದುರ್ಗಂಧವನ್ನು ಸಹಿಸಲಾಗದ ಧರ್ಮರಾಜ ಹಿಂದಿರುಗಲು ಬಯಸಿದ. ಆಗ ತನ್ನವರವಂತಿದ್ದ ಮಾತುಗಳನ್ನು ಕೇಳಿಸಿಕೊಂಡ.

ಕ್ಷಣಂ ತಿಷ್ಠ ಮಹಾರಾಜ ಸನ್ನಿಧಾನಬಲಾತ್ ತವ ।
ವೇದನಾ ನೋ ನ ಮಹತೀತ್ಯೇತಚ್ಛ್ರುತ್ವಾ ಯುಧಿಷ್ಠಿರಃ ॥ ೯೬ ॥

ಕೇ ಯೂಯಮಿತಿ ಪಪ್ರಚ್ಛ ದೀನಧ್ವನಿವಿಶಂಕಿತಃ ।
ಭೀಮೋಽಹಮರ್ಜುನಃ ಕರ್ಣ ಇತ್ಯಾದ್ಯುಕ್ತಮಿವಾಶ್ರುಣೋತ್ ॥ ೯೭ ॥

ಅ: ''ಮಹಾರಾಜ! ಒಂದು ಕ್ಷಣ ನಿಲ್ಲು, ನಿನ್ನ ಸನ್ನಿಧಾನದ ಬಲದಿಂದಾಗಿ ನಮಗೆ ನೋವು ಕಡಿಮೆಯೆನ್ನಿಸುತ್ತಿದೆ''. ಆ ಧ್ವನಿಯಲ್ಲಿನ ದೈನ್ಯವನ್ನು ಸಂದೇಹಿಸಿ ಧರ್ಮರಾಜನು 'ನೀವು ಯಾರು?' ಎಂದು ಕೇಳಿದ. 'ನಾನು ಭೀಮ', 'ನಾನು ಅರ್ಜುನ', 'ನಾನು ಕರ್ಣ' ಎಂದು ಮೊದಲಾಗಿ ಹೇಳಿದಂತಾಯಿತು. ಧರ್ಮರಾಜ ಅದನ್ನು ಕೇಳಿಸಿಕೊಂಡ.

ಧರ್ಮರಾಜನ ಬಂಧುಪ್ರೇಮ

ಶ್ರುತ್ವಾ ತತ್ಕೃಪಯಾऽऽವಿಷ್ಟಃ ಶೋಕಾಮರ್ಷಸಮನ್ವಿತಃ ।
ಆಹ ದೂತಂ ಯಥೇಷ್ಟಂ ತ್ವಂ ಗಚ್ಛ ನಾಹಮಿತೋ ವ್ರಜೇ ॥ ೯೮ ॥

---

೯೫. ಯುಧಿಷ್ಠಿರಸ್ತು ನಿರ್ವಿಣ್ಣಸ್ತೇನ ಗಂಧೇನ ಮೂರ್ಛಿತಃ ।
ನಿವರ್ತತೇ ಧೃತಮನಾಃ ಪರ್ಯಾವರ್ತತ ಭಾರತ ॥ - ಭಾರತ (ಸ್ವರ್ಗಾ.೨/೩೦)

೯೬. ಸಂತಿಷ್ಠಸ್ವ ಮಹಾಬಾಹೋ ಮುಹೂರ್ತಮಪಿ ಭಾರತ ।
ತ್ವಯಿ ತಿಷ್ಠತಿ ಕೌರವ್ಯ ಯಾತನಾऽಸ್ಮಾನ್ ನ ಬಾಧತೇ ॥
ಏವಂ ಬಹುವಿಧಾ ವಾಚಃ ಕೃಪಣಾ ವೇದನಾವತಾಮ್ ।
ತಸ್ಮಿನ್ ದೇಶೇ ಸ ಶುಶ್ರಾವ ಸಮಂತಾದ್ ವದತಾಂ ನೃಪ ॥ - ಭಾರತ (ಸ್ವರ್ಗ.೨/೩೫, ೩೬)

೯೭. ಅಬುದ್ಧ್ಯಮಾನಸ್ತಾವಾಚೋ ಧರ್ಮಪುತ್ರೋ ಯುಧಿಷ್ಠಿರಃ ।
ಉವಾಚ ಕೇ ಭವಂತೋ ವೈ ಕಿಮರ್ಥಮಿಹ ತಿಷ್ಠಥ ॥ - ಭಾರತ (ಸ್ವರ್ಗ.೨/೩೯)

೯೭. ಇತ್ಯುಕ್ತಾಸ್ತೇ ತತಃ ಸರ್ವೇ ಸಮಂತಾದವಭಾಷಿರೇ ।
ಕರ್ಣೋऽಹಮರ್ಜುನೋऽಹಂ ಧೃಷ್ಟದ್ಯುಮ್ನೋऽಹಮಿತ್ಯುತ ॥
ದ್ರೌಪದೀ ದ್ರೌಪದೇಯಾಶ್ಚ ಇತ್ಯೇವಂ ತೇ ವಿಚುಕ್ರುಶುಃ ॥ - ಭಾರತ (ಸ್ವರ್ಗ.೨/೪೦)

೯೮. ಸ ತೀವ್ರಗಂಧಸಂತಪ್ತೋ ದೇವದೂತಮುವಾಚ ಹ ।
ಗಮ್ಯತಾಂ ತತ್ರ ಯೇಷಾಂ ತ್ವಂ ದೂತಸ್ತೇಷಾಮುಪಾಂತಿಕಮ್ ॥
ನ ಹ್ಯಹಂ ತತ್ರ ಯಾಸ್ಯಾಮಿ ಸ್ಥಿತೋऽಸ್ಮೀತಿ ನಿವೇದ್ಯತಾಮ್ ।
ಮತ್ಸಂಶ್ರಯಾದಿಮೇ ದೂತಾಃ ಸುಖಿನೋ ಭ್ರಾತರೋ ಹಿ ಮೇ ॥ – (ಸ್ವರ್ಗಾರೋಹಣ.೨/೫೧,೫೨)

ಅ: ಆ ಧ್ವನಿಯನ್ನು ಕೇಳಿ ಧರ್ಮರಾಜ ಕರುಣೆಯಿಂದ ಕೂಡಿದವನಾಗಿ ಶೋಕ, ದುಃಖಗಳನ್ನು ಹೊಂದಿದವನಾಗಿ ಆ ದೂತನಿಗೆ ತಿಳಿಸಿದ 'ನೀನು ಇಷ್ಟ ಬಂದಲ್ಲಿಗೆ ತೆರಳು, ನಾನು ಇಲ್ಲಿಂದ ಬರಲಾರೆ.

ಸ್ವರ್ಗ ಬೇಡವೆಂದ ಧರ್ಮರಾಜ

ನ ಚ ಸ್ವರ್ಗೇಣ ಮೇ ಕಾರ್ಯಂ ತ್ಯಕ್ತ್ವಾ ಸ್ವಜನಮೀದೃಶಮ್ ।
ಇತ್ಯುಕ್ತಃ ಪ್ರಯಯೌ ದೂತಸ್ತಸ್ಥಾವೇವ ಯುಧಿಷ್ಠಿರಃ ॥ ೯೯ ॥

ಅ: 'ಇಂತಹ ಬಂಧುಜನರನ್ನು ಬಿಟ್ಟು ನನಗೆ ಸ್ವರ್ಗದಿಂದ ಆಗಬೇಕಾದ್ದಿಲ್ಲ'. ಅವನು ಹೀಗೆನ್ನಲು ದೂತ ಅಲ್ಲಿಂದ ತೆರಳಿದ, ಧರ್ಮರಾಜ ಅಲ್ಲಿಯೇ ನಿಂತ.

ವಿ: ೧) ತನ್ನ ಸುಖಕ್ಕಿಂತಲೂ ತನ್ನ ಬಂಧುಜನಗಳ ಹಿತವೇ ಪ್ರಧಾನ ಎನ್ನುವುದು ಧರ್ಮರಾಜನ ಜೀವನದೃಷ್ಟಿ. ಅದರಿಂದಾಗಿಯೇ ಅವತಾರಕಾಲದಲ್ಲಿ ಅಂತಹ ಉನ್ನತಿಯನ್ನು ಗಳಿಸಲು ಅವನಿಗೆ ಸಾಧ್ಯವಾಗಿತ್ತು ಎಂದು ತಿಳಿಯಬೇಕು.

೨) ರಾಮಾಯಣದಲ್ಲಿ ಮಂಥರೆ ರಾಮನ ಪಟ್ಟಾಭಿಷೇಕವನ್ನಾದರೂ ನಿಲ್ಲಿಸಿ ತನ್ನ ಸ್ವಗತಿಯನ್ನು ಪಡೆದುಕೊಳ್ಳಲೆಂದು ಪ್ರಯತ್ನಿಸಿದ ವಿವರ (೫/೨) ಅವಳ ಪರಮ ತಾಮಸ ಪ್ರವೃತ್ತಿಗೆ ದ್ಯೋತಕವಾದರೆ, ಧರ್ಮರಾಜನ ಈ ವರ್ತನೆ ಅವನ ಪರಮ ಸಾತ್ವಿಕ ಪ್ರವೃತ್ತಿಗೆ ದ್ಯೋತಕ ಎಂದು ತಿಳಿಯಬೇಕು.

ಮಾಯವಾದ ನರಕ

ತತೋಽತ್ರ ದೇವಾಃ ಪುರುಹೂತಪೂರ್ವಕಾಃ
ಸಮಾಯಯುಃ ಸ್ನೇಹವಶಾದ್ಯುಧಿಷ್ಠಿರೇ ।
ತೇಷ್ವಾಗತೇಷ್ವೇವ ನ ತತ್ರ ವಾಚೋ
ದೀನಾ ನ ದುರ್ಗಂಧತಮೋಽಪ್ಯಪಶ್ಯತ್ ॥ ೧೦೦ ॥

---

೧೦೦. ಸ್ಥಿತೇ ಮುಹೂರ್ತೇ ಪಾರ್ಥೇ ತು ಧರ್ಮರಾಜೇ ಯುಧಿಷ್ಠಿರೇ ।
ಆಜಗ್ಮುಸ್ತತ್ರ ಕೌರವ್ಯ ದೇವಾಃ ಶಕ್ರಪುರೋಗಮಾಃ ॥ - ಭಾರತ (ಸ್ವರ್ಗಾರೋಹಣ. ೩/೧)

೧೦೦. ತೇಷು ಭಾಸುರದೇಹೇಷು ಪುಣ್ಯಾಭಿಜನಕರ್ಮಸು ।
ಸಮಾಗತೇಷು ದೇವೇಷು ವ್ಯಗಮತ್ ತತ್ ತಮೋ ನೃಪ ॥
ನಾದೃಶ್ಯತ ಚ ತಾಸ್ತತ್ರ ಯಾತನಾಃ ಪಾಪಕರ್ಮಿಣಾಮ್ ॥ - ಭಾರತ (ಸ್ವರ್ಗಾರೋಹಣ. ೩/೩,೪)

ಅ: ಆಗ ಅಲ್ಲಿಗೆ ಇಂದ್ರ ಮೊದಲಾದ ದೇವತೆಗಳು ಧರ್ಮರಾಜನ ಮೇಲಿನ ಸ್ನೇಹಕ್ಕೊಳಗಾಗಿ ಆಗಮಿಸಿದರು. ಅವರು ಹಾಗೆ ಆಗಮಿಸುತ್ತಲೇ ಅಲ್ಲಿ ದೀನವಚನಗಳಾಗಲೀ, ದುರ್ಗಂಧವಾಗಲೀ, ಕತ್ತಲೆಯಾಗಲೀ ಕಾಣದಾದವು.

ಸ್ವರ್ಗಕ್ಕೆ ಮಿಗಿಲಾದ ದಿವ್ಯಲೋಕ

ಸ್ವರ್ಗೋತ್ತಮಂ ದೇಶಮಪಶ್ಯದೇತ-
ದಭ್ರಾಂತಚೇತಾಃ ಸ ಯುಧಿಷ್ಠಿರಸ್ತದಾ ।
ಆಹಾತ್ರ ಧರ್ಮಃ ಪುನರಾತ್ಮಸದ್ಮಶಃ
ಪ್ರಕಾಶಯನ್ ಪಾಂಡುಸುತಾಭಿಧಂ ಸ್ವಮ್ ॥ ೧೦೧ ॥

ಅ: ಭ್ರಮೆರಹಿತವಾದ ಬುದ್ಧಿಯ ಧರ್ಮರಾಜ ಆಗ ಅಲ್ಲಿ ಸ್ವರ್ಗಕ್ಕಿಂತ ಮಿಗಿಲಾದ ಪ್ರದೇಶವನ್ನು ಕಂಡನು. ಯಮ ಮತ್ತೆ ತನ್ನ ಉತ್ತಮ ಕೀರ್ತಿಯನ್ನು ಪ್ರಸಿದ್ಧಿಗೊಳಿಸುತ್ತಾ ಯುಧಿಷ್ಠಿರರೂಪದ ತನಗೆ ತಿಳಿಸಿದ.

---

೧೦೧. ತತೋ ವಾಯುಃ ಸುಖಿಸ್ಪರ್ಶಃ ಪುಣ್ಯಗಂಧವಹಃ ಶುಚಿಃ ।
ವವೌ ದೇವಸಮೀಪಸ್ಥಃ ಶೀತಲೋಽತೀವ ಭಾರತ ॥
ಮರುತಃ ಸಹ ಶಕ್ರೇಣ ವಸವಶ್ಚಾಶ್ವಿನೌ ಸಹ ।
ಸಾಧ್ಯಾ ರುದ್ರಾಸ್ತಥಾ ऽऽದಿತ್ಯಾ ಯೇ ಚಾನ್ಯೇऽಪಿ ದಿವೌಕಸಃ ।
ಸರ್ವೇ ತತ್ರ ಸಮಾಜಗ್ಮುಃ ಸಿದ್ಧಾಶ್ಚ ಪರಮರ್ಷಯಃ ॥ - ಭಾರತ ಸ್ವರ್ಗ (೩/೬,೭,೮)

೧೦೧. ಧರ್ಮೋ ವಿಗ್ರಹವಾನ್ ಸಾಕ್ಷಾದುವಾಚ ಸುತಮಾತ್ಮನಃ ।
ಭೋ ಭೋ ರಾಜನ್ ಮಹಾಪ್ರಾಜ್ಞ ಪ್ರೀತೋऽಸ್ಮಿ ತವ ಪುತ್ರಕ ॥
ಮದ್ಭಕ್ತ್ಯಾ ಸತ್ಯವಾಕ್ಯೈಶ್ಚ ಕ್ಷಮಯಾ ಚ ದಮೇನ ಚ ।
ಏಷಾ ತೃತೀಯಾ ಜಿಜ್ಞಾಸಾ ತವ ರಾಜನ್ ಕೃತಾ ಮಯಾ ।
ನ ಶಕ್ಯಸೇ ಚಾಲಯಿತುಂ ಸ್ವಭಾವಾತ್ ಪಾರ್ಥ ಹೇತುತಃ ॥
ಪೂರ್ವಂ ಪರೀಕ್ಷಿತೋ ಹಿ ತ್ವಂ ಪ್ರಶ್ನಾದ್ ದ್ವೈತವನೇ ಮಯಾ ।
ಅರಣೀಸಹಿತಸ್ಯಾರ್ಯೇ ತಚ್ಚ ನಿಸ್ತೀರ್ಣವಾನಸಿ ॥
ಸೋದರ್ಯೇಷು ವಿನಷ್ಟೇಷು ದ್ರೌಪದ್ಯಾ ತವ ಭಾರತ ।
ಶ್ವರೂಪಧಾರಿಣಾ ತತ್ರ ಪುನಸ್ತ್ವಂ ಮೇ ಪರೀಕ್ಷಿತಃ ॥
ಇದಂ ತೃತೀಯಂ ಭ್ರಾತೄಣಾಮರ್ಥೇ ಯತ್ ಸ್ಥಾತುಮಿಚ್ಛಸಿ ॥ - ಭಾರತ (ಸ್ವರ್ಗ.೩/೩೧-೩೫)

ಸತ್ತ್ವಪರೀಕ್ಷೆಯಲ್ಲಿ ಮತ್ತೊಮ್ಮೆ ಗೆದ್ದ ಧರ್ಮರಾಜ - ನರಕದರ್ಶನಕ್ಕೆ ಕಾರಣ

ಧರ್ಮಾದ್ವಿಶಿಷ್ಟಾ ಹಿ ಸದಾ ನೃಶಂಸತಾ
ದೃಷ್ಟಾ ಚ ಸಾ ತ್ವಯ್ಯಧಿಕಾ ತ್ರಿಶೋ ಮಯಾ ।
ಶಕ್ಯೋಽಪ್ಯವಾಚ್ಯೇನಮಿದಂ ಮೃಷಾ ತೇ
ಪ್ರದರ್ಶಿತಂ ದ್ರೋಣಕೃತೇ ಮೃಷಾ ಗಿರಃ ॥ ೧೦೨ ॥

ಕೃಚ್ಛ್ರಾದಿದಂ ತೇ ಕಥಿತಂ ನ ಚಾತಿ-
ವಿಸ್ರಂಭ ಆಸೀತ್ ತವ ಕೃಷ್ಣವಾಕ್ಯೇ ।
ನ ಹ್ಯಾಜ್ಞಯಾ ವಾಸುದೇವಸ್ಯ ಕಿಂಚಿತ್
ಪಾಪಂ ಭವೇತ್ ಸರ್ವವಿಧರ್ಮಿಣೋಽಪಿ ॥ ೧೦೩ ॥

---

೧೦೨. ದೃಷ್ಟಾ ಚ ಸಾ ತ್ವಯ್ಯಧಿಕಾ ತ್ರಿಶೋ ಮಯೇತ್ಯತ್ರ ಸಾ = ದಯಾಲುತ್ವಾಪರಪರ್ಯಾಯಾ ಆನೃಶಂಸ್ಯತಾ ತ್ವಯಿ ತ್ರಿಶೋ ದೃಷ್ಟಾ। ಯಕ್ಷಪ್ರಶ್ನೇ ಚತುರ್ಣಾಂ ಮಧ್ಯೇ ಏಕಸ್ಯೋತ್ಥಾನಂ ಸ್ಯಾದಿತ್ಯುಕ್ತೇ ಸ್ವಸ್ಯ ಸಾಕ್ಷಾದವರಜೌ ಭೀಮಾರ್ಜುನೌ ವಿಹಾಯ ಯದ್ಯೇಕಸ್ಯಾತ್ ತರ್ಹಿ ನಕುಲೋಽಸ್ತ್ವಿತಿ ಪ್ರಾರ್ಥನೇನ ಮಾತೃರಹಿತತ್ವಾದನಾಥೇ ನಕುಲೇ ಏಕವಾರಂ ದಯಾಲುತಾ ಪ್ರಾಗ್ದೃಷ್ಟಾ। ಪುನಃ ಸ್ವರ್ಗಾರೋಹಣಸಮಯೇ ಶುನಿ ದಯಾಲುತಾ ದೃಷ್ಟಾ। ಭೀಮಾದೀನಾಮಾರ್ತಸ್ವರಶ್ರವಣೇನ ತೇಷು ದಯಾಲುತಾ ದೃಷ್ಟೇತ್ಯೇವಂ ಕ್ರಮೇಣ ತ್ರಿಶೋ ದೃಷ್ಟೇತ್ಯರ್ಥಃ। ಶಕ್ಯೋಽಪ್ಯವಾಚ್ಯೇನಮಿತ್ಯತ್ರ ಯಸ್ಮಾತ್ ದ್ರೋಣಕೃತೇ ಮೃಷಾ ಗಿರಃ= ಜೀವನ್ನಪ್ಯಶ್ವತ್ಥಾಮಾ ಹತ ಇತ್ಯನೃತವಾಕ್ಯಸ್ಯ ಕೃಚ್ಛ್ರಾತ್= ವಚನೇ ಸಂಕಟಾತ್ ತೇ= ತ್ವಯಾ ಇದಂ= ಅಶ್ವತ್ಥಾಮಸದೃಶಂ ಕುಂಜರಾಖ್ಯಂ ವಸ್ತು ಕಥಿತಮ್। ಯಸ್ಮಾಚ್ಚ ತವ ಕೃಷ್ಣವಾಕ್ಯೇ ಅತಿವಿಸ್ರಂಭಃ= ಅತಿವಿಶ್ವಾಸಃ ನಾಸೀತ್ ತಸ್ಮಾತ್ತೇ ಇದಂ= ದುರ್ಗಂಧತಮ ಅಧಿಕಂ ಮೃಷಾ= ನರಕ ಇತಿ ಭ್ರಾಂತ್ಯಾ ಪ್ರದರ್ಶಿತಮಿತಿ ಯೋಜನಾ। ವಸ್ತುತಸ್ತು ಸ್ವರ್ಗೇಽಸ್ಮಿನ್ ಲೋಕೇ ದುರ್ಗಂಧತಮ ಆದೀನಾಂ ಸ್ವಭಾವತೋಽಭಾವಾತ್ ಭಗವದ್ಭಾಕ್ಯೇಽವಿಶ್ವಾಸಾಖ್ಯಮಹಾಪಾಪಕರ್ತುರ್ಯುಧಿಷ್ಠಿರಸ್ಯ ದುಃಖಂ ಭೋಜಯಿತುಂ ದೇವಾನಾಂ ನಿರಯೋ ನಾಸ್ತೀತಿ (೨/೮೮) ವಚನೇನ ಸಾಕ್ಷಾನ್ನರಕದುಃಖಸ್ಯ ದಾತುಮಯೋಗ್ಯತ್ವಾಚ್ಚ ಸ್ವಾಪ್ನಪದಾರ್ಥವತ್ ತಾತ್ಕಾಲಿಕದುರ್ಗಂಧಾದಿಕಂ ಸೃಷ್ಟ್ವಾ ಪ್ರದರ್ಶಿತಮ್। ಯುಧಿಷ್ಠಿರಸ್ಯ ಚ ಸಾಕ್ಷಾನ್ನರಕ ಏವೇತಿ ಭ್ರಾಂತಿರ್ಜಾತಾ ನ ತ್ವಯಂ ಸಾಕ್ಷಾನ್ನರಕಃ। ಅತ ಏವ ಮೃಷೇತಿ ತದಾಽಭ್ರಾಂತಚೇತಾ ಇತಿ ಚೋಕ್ತಮ್। ತದಾಽಭ್ರಾಂತಚೇತಾ ಇತಿ ವಚನಾತ್ ಪೂರ್ವಂ ನರಕಾದಿಭ್ರಾಂತಿರಸ್ತೀತಿ ಸೂಚಿತಮ್। ತಥಾ ತಾತ್ಕಾಲಿಕಸೃಷ್ಟ ಸ್ವಾಪ್ನವ್ಯಾಘ್ರಾದಿಜೀವವತ್। ಕಾಂಶ್ಚಿತ್ ಜೀವಾನ್ ಭೀಮಾದಿರೂಪೇಣ ಸೃಷ್ಟ್ವಾ ತನ್ಮುಖೇನಾರ್ತಸ್ವರಾದೀನಾಂ ಕಾರಿತತ್ವಾತ್ ಸ್ವಾನಾಂ ವಾಚ ಇವಾಶೃಣೋತ್। ಭೀಮೋಽಹಮರ್ಜುನೋಽಹಂ ಕರ್ಣೋಽಹಮಿತ್ಯಾ ಗರ್ತ್ವೈವ ಕಿಯತೀಂ ಭೂಮಿಮಿತಿ ಉಪಸ್ವರ್ಗಪ್ರಾಪ್ತೇರುಕ್ತತ್ವಾತ್। ದುರ್ಯೋಧನಸ್ವರ್ಗೋಽಪಿ ನ ಸಾಕ್ಷಾತ್ ಸ್ವರ್ಗಃ ಕಿಂತು ಸ್ವರ್ಗಾದಧಃ ಸ್ವರ್ಗಾಯೋಗ್ಯಾನಾಮಪಿ ದೈತ್ಯಾದೀನಾಂ ಪ್ರಾರಬ್ಧಕರ್ಮಜಸುಖಭೋಗಾಯ ನಿರ್ಮಿತಃ ಕಶ್ಚಿದುಪಸ್ವರ್ಗ ಇತ್ಯಾದಿಕಮೂಹ್ಯಮ್ – (ವಾ.)

೧೦೨. ವ್ಯಾಜೇನ ಹಿ ತ್ವಯಾ ದ್ರೋಣಃ ಉಪಚೀರ್ಣಃ ಸುತಂ ಪ್ರತಿ ।
ವ್ಯಾಜೇನೈವ ತತೋ ರಾಜನ್ ದರ್ಶಿತೋ ನರಕಸ್ತವ । - ಭಾರತ (ಸ್ವರ್ಗ. ೩/೧೬)

ಆ: 'ಧರ್ಮಕ್ಕಿಂತ ದಯೆ ಸದಾ ತುಂಬಾ ಮಿಗಿಲಾದದ್ದು, ಅದನ್ನು ನಿನ್ನಲ್ಲಿ ನಾನು ವಿಶೇಷವಾಗಿ ನಾನು ಮೂರು ಬಾರಿ ಕಂಡೆ'. ಇಂದ್ರ ಸಹ ಧರ್ಮರಾಜನಿಗೆ ತಿಳಿಸಿದ 'ದ್ರೋಣನಿಗೆ ಸುಳ್ಳು ಹೇಳಿದ್ದಕ್ಕಾಗಿ ನಿನಗೆ ಸುಳ್ಳುನರಕ ತೋರಿಸಲ್ಪಟ್ಟಿತು. ಏಕೆಂದರೆ ನೀನು ಕೃಷ್ಣ ಹೇಳಿದ ಆ ಮಾತನ್ನು ಕಷ್ಟದಿಂದ ನುಡಿದೆ. ನಿನಗೆ ಕೃಷ್ಣನ ಮಾತಿನಲ್ಲಿ ಪೂರ್ಣ ವಿಶ್ವಾಸ ಇರಲಿಲ್ಲ, ಕೃಷ್ಣನ ಆಜ್ಞೆಯಂತೆ ಸಕಲ ನಿಷಿದ್ಧ ಕಾರ್ಯಗಳನ್ನು ಆಚರಿಸಿದರೂ ಸ್ವಲ್ಪ ಪಾಪವೂ ಸಹ ಬರಲಾರದು'.

ಏ: ೧) ಯಕ್ಷಪ್ರಶ್ನೆಯ ಪ್ರಸಂಗದಲ್ಲಿ ನಕುಲ ಬದುಕಲಿ ಎಂದದ್ದು, ಸ್ವರ್ಗಾರೋಹಣ ಕಾಲದಲ್ಲಿ ನಾಯಿಯನ್ನೂ ಸಹ ರಥದಲ್ಲಿ ಕೂಡಿಸಿಕೊಳ್ಳಲು ತಿಳಿಸಿದ್ದು, ಈ ಪ್ರಸಂಗದಲ್ಲಿ ತನ್ನ ಸುಖಕ್ಕಿಂತ ತನ್ನ ಬಂಧುಗಳ ಹಿತ ಮುಖ್ಯ ಎಂದು ನುಡಿದದ್ದು ಯಮಧರ್ಮ ಧರ್ಮರಾಜನನ್ನು ಪರೀಕ್ಷಿಸಿದ ಮೂರು ವಿಶಿಷ್ಟ ಪ್ರಸಂಗಗಳು.

೨) ಮೇಲ್ನೋಟಕ್ಕೆ ಮಹಾಭಾರತದಲ್ಲಿ ಅಂತಹ ಕೃತಕ ನರಕದ ದರ್ಶನವಾಗಲು ಅವನು ದ್ರೋಣರಿಗೆ ಅಶ್ವತ್ಥಾಮಾ ಹತಃ ಎಂಬುದಾಗಿ ಸುಳ್ಳಾಡಿದ್ದೇ ಕಾರಣ ಎಂಬಂತೆ ಕಾಣುವುದು.

೩) ಆದರೆ, ತನ್ನ ಧರ್ಮ ತೊರೆದು ಕೌರವರಂತಹ ಪಾಪಿಗಳ ಪಕ್ಷದಲ್ಲಿ ಸೇರಿ ಧರ್ಮದ ವಿರುದ್ಧ ಕಾದಾಡುತ್ತಿದ್ದ ದ್ರೋಣರನ್ನು ವಧಿಸಲು ಅವನ ಅಪೇಕ್ಷೆಯಂತೆಯೇ ಅಪ್ರಿಯವಾದ ವಾರ್ತೆಯನ್ನು ತಿಳಿಸಬೇಕಿತ್ತು, ಆಗ ಕೃಷ್ಣ ಅಶ್ವತ್ಥಾಮಾ ಹತಃ ಎನ್ನಲು ತಿಳಿಸಿದ. ಆದರೆ, ಹಾಗೆ ಹೇಳಿದರೆ ಸುಳ್ಳಾಡಿದಂತಾದೀತು ಎಂದು ಬಗೆದು ಧರ್ಮರಾಜ ಆ ಮಾತಿಗೆ ಕುಂಜರ ಎಂಬ ಶಬ್ದವನ್ನು ಸೇರಿಸಿಕೊಂಡು ನುಡಿದ.

೪) ಶಾಸ್ತ್ರವಿಹಿತವಾದ ಸಂದರ್ಭಗಳಲ್ಲಿ ಸುಳ್ಳಾಡುವುದೇ ವಿಹಿತ ಎಂಬ ಮಾತು ಆ ಕೌಶಿಕ ಬ್ರಾಹ್ಮಣನ ಪ್ರಸಂಗದಲ್ಲಿ ಈಗಾಗಲೇ ಬಂದಿದೆ (೨೭/೧೧೭).

೫) ಆದರೆ, ಧರ್ಮರಾಜ ಹಾಗೆ ಮಾಡದೇ ತನಗೆ ಸುಳ್ಳಾಡಿದ ಪಾಪ ಬರದಿರಲೆಂದು ಕೃಷ್ಣನ ಮಾತಿಗೆ ಕುಂಜರ ಎಂದು ಸೇರಿಸಿಕೊಂಡು ನುಡಿದ. ಸಕಲ ಧರ್ಮಪ್ರವರ್ತಕನಾದ ಶ್ರೀಕೃಷ್ಣನ ಮಾತಿನಲ್ಲೇ ಸಂದೇಹಪಟ್ಟದ್ದರಿಂದ ಧರ್ಮರಾಜನಿಗೆ ಸುಳ್ಳಾಡಿದ ಪಾಪವೇ ಒದಗಿತು ಎಂದು ತಿಳಿಯಬೇಕು. ಅದರಿಂದಾಗಿ ಧರ್ಮರಾಜನಿಗೆ ನರಕದರ್ಶನವಾಯಿತು ಎಂದರ್ಥ.

೬) ಇದು ಸುಳ್ಳು ನರಕವಾದಂತೆ ದುರ್ಯೋಧನನಿಗೆ ಇದು ಸ್ವರ್ಗ ಎಂದು ತಿಳಿಸಿದ್ದೂ ಸಹ ಸುಳ್ಳು ಎಂದೇ ತಿಳಿಯಬೇಕು, ಎಂದರೆ ಇದರಂತೆ ಅದೂ ಸಹ ಕೃತಕ ಸ್ವರ್ಗ ಎಂದರ್ಥ.

ಬ್ರಹ್ಮಾಪರಾಕ್ಷೈ ೇಽಪಿ ವಿಕರ್ಮ ಸೂಚಕಂ
ಪ್ರಾರಬ್ಧಪಾಪಸ್ಯ ವಿಘಾತನಂ ಯಥಾ ।
ಪಶ್ಚಾತ್ರ ಭೀಮಪ್ರಮುಖಾನ್ ಸುಖಿಸ್ಥಾನ್
ಸಂಪೂಜ್ಯಮಾನಾಂಸ್ತ್ರಿದಶೈಃ ಸುರೂಪಾನ್ ॥ ೧೦೪ ॥

---

೧೦೪. ನನ್ವಪರೋಕ್ಷಜ್ಞಾನೋತ್ತರಕೃತಪುಣ್ಯಪಾಪಯೋಃ ಪ್ರಾಯಶೋಽಶ್ಲೇಷಾತ್ ಹರಿಗುರುದ್ರೋಹಾದಿ-ಪ್ರಬಲಪುಣ್ಯಪಾಪಯೋಃ ಶ್ಲೇಷೇಽಪಿ ಮುಕ್ತಾನಾಂದವೃದ್ಧಿಹ್ರಾಸಹೇತುತ್ವೇನ ಇಹಾನುಭೂಯಮಾನದುಃಖಾಹೇತುತ್ವಾಚ್ಚ। ಆತ್ಮಾಪರೋಕ್ಷಜ್ಞಾನಿನೋ ಯುಧಿಷ್ಠಿರಸ್ಯ ದೋಷೇಣೇದಾನೀಂತನದುಃ ಖಾನುಭವಃ ಕಥಮಿತ್ಯತ ಆಹ ಬ್ರಹ್ಮಾಪರೋಕ್ಷ ಇತಿ। ಬ್ರಹ್ಮಣಃ ಅಪರೋಕ್ಷೇ = ಅಪರೋಕ್ಷಜ್ಞಾನೇ ಜಾತೇ ಯದ್ವಿಕರ್ಮ = ಅಪರೋಕ್ಷ-ಜ್ಞಾನಾನಂತರಂ ಕೃತಂ ಪಾಪಕರ್ಮೇತ್ಯರ್ಥಃ। ತತ್ = ಪ್ರಾರಬ್ಧಪಾಪಸ್ಯ= ಅಪರೋಕ್ಷಜ್ಞಾನಕಾಲೇ ಭೋಕ್ತುಮಾರಬ್ಧಪಾಪಸ್ಯ ಸೂಚಕಮೇವ ನ ತ್ವಿದಾನೀಂ ಅನುಭೂಯಮಾನದುಃಖಸಾಧನಮ್। ದುಃ ಖಾದಿಕಂ ತು ಪ್ರಾರಬ್ಧಕರ್ಮವಶಾದೇವ। ಅತೋ ನ ವಿರೋಧಃ। ತತ್ರ ದೃಷ್ಟಾಂತಮಾಹ। ವಿಘಾತನಂ ಯಥೇತಿ। ಕರ್ಮವಶಾದೇವಮ್ರಿಯಮಾಣಸ್ಯ ಪುಂಸಃ ವಿಘಾತನಂ ಯಥಾ ತತ್ಕರ್ಮ ಸೂಚಕಂ ನತು ಸ್ವಯಮೇವ ಮಾರಕಮ್। ಜೀವನಾದೃಷ್ಟವತೋ ವಿಷಪಾನೇಽಪಿ ಮರಣಾಭಾವಾತ್ ತಥೇತ್ಯರ್ಥಃ — (ವಾ.)

೧೦೪. ತದುಕ್ತಂ ಅನುವ್ಯಾಖ್ಯಾನೇ — ಚಂದ್ರಸುಗ್ರೀವಯೋಶ್ಚೈವ ಸ್ವೋಚ್ಚದಾರಪರಿಗ್ರಹಾತ್ ಇತ್ಯಾದಿನಾ । ತಥಾಚ ಪಾಪಾಧಿಕ್ಯೇ ಗುಣಾಲ್ಪತ್ವೇಽತ್ರೈವ ಫಲಂ ಭವತೀತಿ ಜ್ಞೇಯಮ್ । ಯಥಾ ಪಾಂಡುಮಾಂಡವ್ಯಾದೀನಾಂ ತಸ್ಮಾದಭಿಮಾನಫಲಂ ದೇಹಪತನಂ ನೈವೇತಿ ಭಾವಃ। -(ಜ.)

೧೦೪. ವಿಘಾತನಮಿತ್ಯುಪಲಕ್ಷಣಂ ಜಲಾಗ್ನಿಶಸ್ತ್ರಪಾತಾದಿಕಮಪಿ ಗ್ರಾಹ್ಯಮ್ । - (ಜ.)

೧೦೪. ಬ್ರಹ್ಮಾಪರೋಕ್ಷೈ ೇ ಜಾತೇಽಪಿ ವಿಕರ್ಮಪ್ರಾರಬ್ಧಪಾಪಸ್ಯ ಪ್ರಾರಬ್ಧಪಾಪಫಲಸ್ಯ ಸೂಚಕಮಪ್ರಧಾನ-ಕಾರಣಮ್ । ಅತ್ರ ದೃಷ್ಟಾಂತಮಾಹ — ವಿಘಾತನಮಿತಿ । ಯಥಾ ವಿಘಾತನಂ ಮರಣಾಪಾದಕಕರ್ಮಫಲಸ್ಯ ಸೂಚಕಮಪ್ರಧಾನಕಾರಣಂ ತಥೈವೇತಿ। — (ಸ.)

೧೦೪. ಅತ್ರಾನುಭವಂ ಸಂಪಾದಯಂತ್ಯಾಚಾರ್ಯಾಃ। ಲೋಕೇ ರಾಜಾ ಭೃತ್ಯಕೃತಾಲ್ಪಾಪರಾಧೇನ ನ ಕುಪ್ಯತಿ। ಅತ ಏವ ನ ದಂಡಂ ಚ ಕರೋತಿ। ತತಃ ಪರಂ ತೇನೈವ ಭೃತ್ಯೇನ ಮಹಾಪರಾಧೇ ಕೃತೇ ಪೂರ್ವಾಪರಾಧಂ ಸಂಸ್ಮೃತ್ಯ ತದಾನೀಂ ಕೃತಮಹಾಪರಾಧಯೋಗ್ಯದಂಡಾಪೇಕ್ಷಯಾ ಅಧಿಕದಂಡಂ ಕರೋತ್ಯೇವೇತಿ । ಕೇಚಿತ್ ತು ಸೂಚಕತ್ವಂ ನಾಮ ಜ್ಞಾಪಕತ್ವಮಿತ್ಯಾಹುಃ । ತದಸತ್ । ನಾಸತ್ಯತಾ ತಸ್ಯ ಚ ತತ್ರ ಹೇತುತ ಇತ್ಯಾದಿವಿರೋಧಾತ್ । ತಥಾ ಚಾಪ-ರೋಕ್ಷೋತ್ತರಭಾವಿಪಾಪಸ್ಯ ಸ್ವಾತಂತ್ರ್ ೇಣ ದುಃಖಹೇತುತ್ವಾಭಾವೇಽಪಿ ಉಕ್ತವಿಧಸಂಭವಾನ್ನ ದೋಷ ಇತಿ ಭಾವಃ। — (ತಾ.)

೧೦೪. ಪ್ರಾರಬ್ಧಕರ್ಮಜಸ್ಯೈವ ವಿಷಭಕ್ಷಾನ್ಮೃತೇರಿವ ॥ - ಅನುವ್ಯಾಖ್ಯಾನ (೩/೪/೧೬)

೧೦೪. 'ಪ್ರಾರಬ್ಧಕರ್ಮಣೈವೈಷಾಂ ಕ್ಲಪ್ತದುಃಖಸ್ಯ ಸೂಚಕಮ್ ।
ಇದನೀಂತನಕರ್ಮ ಸ್ಯಾದ್ವ್ರ ಣಹೇತುರ್ಯಥಾ ರಣಃ ।
ದೇವಾದೀನಾಂ ಸ್ಥಿತಪ್ರಜ್ಞಭಾವಾನ್ನೈವಾನ್ಯಥಾ ಭವೇತ್ ।
ಪ್ರಾರಬ್ಧಮಪಿ ತು ಕ್ವಾಪಿ ಕಿಂಚಿದ್ವಿಘಟಿತಂ ಭವೇತ್' ಇತಿ ಚ ॥ - ಭಾ.ತಾ.(೬/೧೩/೧)

೧೦೪. ವರದರಾಜೀಯವ್ಯಾಸತೀರ್ಥೀಯವೇದಾಂಗತೀರ್ಥೀಯಾನಂತಭಟ್ಟೀಯವಾದಿರಾಜೀಯೇಷು ಯದುಕ್ತಂ ತತ್ ತತ್ರೈವ ಬೋದ್ಧವ್ಯಮ್ । ತೈರ್ಯದನುಕ್ತಂ ತತ್ಕಿಂಚಿದತ್ರ ಮಯೋಕ್ತಮ್ ॥ — (ಶ್ರೀ.)

ಅ: ಬ್ರಹ್ಮಾಪರೋಕ್ಷ ಉಂಟಾದ ಮೇಲೆ ಜ್ಞಾನಿ ಮಾಡಿದ ಪಾಪಕರ್ಮ ಪ್ರಾರಬ್ಧಪಾಪಕ್ಕೆ ವಿಷಾನ್ನ ಭೋಜನದಂತೆ ಸೂಚಕ. ಈಗ ಇಲ್ಲಿ ಆನಂದದಿಂದಿರುವ, ದೇವತೆಗಳಿಂದ ವಿಶೇಷವಾಗಿ ಆರಾಧಿತವಾದ ಸುರೂಪದಿಂದ ಕೂಡಿರುವ ಭೀಮ ಮೊದಲಾದವರನ್ನು ನೋಡು.

ವಿ: ಧರ್ಮರಾಜ ಅಪರೋಕ್ಷಜ್ಞಾನಿಯಾದ್ದರಿಂದ ಅವನಿಗೆ ಸುಳ್ಳು ಹೇಳುವ ದೋಷ ಹೇಗೆ ತಟ್ಟಿತು ಎಂದು ಇಲ್ಲಿಯ ಮತ್ತೊಂದು ಪ್ರಶ್ನೆ. ಅದಕ್ಕೆ ಉತ್ತರ ಹೀಗಿದೆ : ಸ್ವೋತ್ತಮ ದ್ರೋಹದ ಹೊರತು ಇತರ ಪಾಪಗಳ ಲೇಪ ಅಪರೋಕ್ಷಜ್ಞಾನಿಗಳಿಗೆ ಸರ್ವಥಾ ಇಲ್ಲ. ಅದರಂತೆ ಧರ್ಮರಾಜನ ಮಾತು ನರಕದರ್ಶನಕ್ಕೆ ಕಾರಣವಾಗುವಂತಹುದಲ್ಲ. ಯುಧಿಷ್ಠಿರನಿಗೆ ನರಕದರ್ಶನವಾದದ್ದು ಪ್ರಾರಬ್ಧದ ಫಲ; ಆಯುಷ್ಯ ತೀರಿದವನ ಸಾವಿಗೆ ವಿಷಭಕ್ಷಣವು ಹೇಗೋ ಹಾಗೆ.

ಕುತಃ ಪರಬ್ರಹ್ಮದೃಶಾಂ ಸುಶುದ್ಧ-
ಸತ್ಕರ್ಮಣಾಂ ವಿಷ್ಣುಪರಾಯಣಾನಾಮ್ ।
ಪರೇಣ ಯೋಗೇನ ವಿಸೃಷ್ಟತನ್ವಾಂ
ದುಃಖಂ ಭವೇದ್ದೇವವರಾಧಿಪಾನಾಮ್ ॥ ೧೦೫ ॥

ಅ: ಪರಬ್ರಹ್ಮಾಪರೋಕ್ಷವನ್ನು ಹೊಂದಿದ, ಅತ್ಯಂತ ಶುದ್ಧವಾದ ಸತ್ಕರ್ಮಗಳಲ್ಲಿ ತೊಡಗಿದ, ವಿಷ್ಣುವನ್ನು ನಂಬಿದ, ಉತ್ತಮವಾದ ಯೋಗದಿಂದ ದೇಹತೊರೆದ, ದೇವಶ್ರೇಷ್ಠರುಗಳಾದ ಅವರಿಗೆ ದುಃಖವೆಂತು ಒದಗೀತು?.

ವಿ: ದುಃಖಪರಿಹಾರಕ್ಕೆ ಬ್ರಹ್ಮಾಪರೋಕ್ಷ ಮೊದಲಾದ ಎಲ್ಲವೂ ಕಾರಣವಾಗಿರುವಾಗ, ಅವೆಲ್ಲವನ್ನೂ ಹೊಂದಿದ ದೇವಶ್ರೇಷ್ಠರುಗಳಾದ ಪಾಂಡವರಿಗೆ ಸರ್ವಥಾ ದುಃಖವಿಲ್ಲ. ಆದ್ದರಿಂದ ಅಲ್ಲಿ ತೋರಿಸಿದ ನರಕ ಸುಳ್ಳು ನರಕ ಎಂದೇ ಅರ್ಥ.

---

೧೦೫. ಪರೇಣ ಯೋಗೇನ ವಿಸೃಷ್ಟತನ್ವಾಮಿತ್ಯತ್ರ ''ಸ್ತ್ರಿಯಾಂ ಮೂರ್ತಿಸ್ತನುಸ್ತನೂಃ'' ಇತಿ ವಚನೇನ ಊಕಾರಾಂತ ತನೂಶಬ್ದಸ್ಯಾಪಿ ಸತ್ವಾತ್ ತಸ್ಯ ಷಷ್ಠೀಬಹುವಚನೇ ದೀರ್ಘತ್ವಾನ್ನಡಭಾವ ಇತಿ ಪುಂಸಿ ನುಡಾಗಮಸ್ಯಾಪಿ ನಿಷಿದ್ಧತ್ವಾತ್ ವಿಸೃಷ್ಟತನ್ವಾಮಿತಿ ಸಾಧುಃ ವಿಸೃಷ್ಟದೇಹಾನಾಮಿತ್ಯರ್ಥಃ। – (ವಾ.)

೧೦೫. ನ ಚ ತೇ ಭ್ರಾತರಃ ಪಾರ್ಥ ನರಕಾರ್ಹಾ ವಿಶಾಂಪತೇ।
ಮಾಯೈಷಾ ದೇವರಾಜೇನ ಮಹೇಂದ್ರೇಣ ಪ್ರಯೋಜಿತಾ ॥
ನ ಕೃಷ್ಣಾ ರಾಜಪುತ್ರೀ ಚ ನರಕಾರ್ಹಾ ಕಥಂಚನ ॥ - ಭಾರತ (ಸ್ವರ್ಗ. ೩/೩೬-೩೯)

ಏತೇ ಹಿ ದೇವಪ್ರವರಾಃ ಪೃಥಿವ್ಯಾಂ
ಜಾತಾ ಭುವೋ ಭಾರಜಿಹೀರ್ಷುಮೀಶಮ್ ।
ಪ್ರತೋಷ್ಯ ತದ್ಭಾವಿತಬುದ್ಧಿಕರ್ಮಭಿಃ
ಪುನಶ್ಚ ತೇನೈವ ಸಹಾಪಿರೇ ದಿವಮ್ ॥ ೧೦೬ ॥

ಅ: ಇವರೆಲ್ಲ ಧರೆಗಿಳಿದು ಬಂದ ದೇವಶ್ರೇಷ್ಠರುಗಳು. ಭೂಭಾರಹರಣವನ್ನು ಬಯಸಿದ ಶ್ರೀಹರಿಯನ್ನು ಸಂತೋಷಪಡಿಸಿ ಅವನಲ್ಲಿ ಬುದ್ಧಿಯನ್ನು ತೊಡಗಿಸಿ, ಕರ್ಮಗಳನ್ನು ಸಮರ್ಪಿಸಿ ಇವರೆಲ್ಲ ಅವನೊಂದಿಗೆ ಮರಳಿ ಸ್ವರ್ಗವನ್ನು ಪಡೆದಿರುವರು.

ವಿ: ಪಾಂಡವರ ಪಕ್ಷದಲ್ಲಿದ್ದ ಪ್ರತಿಯೊಬ್ಬರೂ ಸ್ವರ್ಗ ಪಡೆದ ಉಲ್ಲೇಖ ಭಾರತದಲ್ಲಿದೆ.

ಸ್ವಪಕ್ಷಾಶ್ಚೈತ ಯೇ ತುಭ್ಯಂ ಪಾರ್ಥಿವಾ ನಿಹತಾ ರಣೇ ।
ಸರ್ವೇ ಸ್ವರ್ಗಮನುಪ್ರಾಪ್ತಾಸ್ತಾನ್ ಪಶ್ಯ ಭರತರ್ಷಭ ॥ – ಭಾರತ (ಸ್ವರ್ಗ. ೩/೧೮)

ದೇಹ ತೊರೆಯಲು ಧರ್ಮರಾಜನಿಗೆ ಸಂದೇಶ

ನ ತೇ ನೃಪಾದ್ಯಾಪಿ ಹಿ ಮಾನುಷೋ ಗತೋ
ಭಾವಸ್ತತೋ ದ್ವೇಷ್ಟಿ ಸುಯೋಧನಾದೀನ್ ।
ನಿಮಜ್ಯ ತದ್ವಿಷ್ಣುಪದೋದಕೇऽತ್ರ
ವಿಸೃಜ್ಯ ದೇಹಂ ಭಜ ದೇವಭಾವಮ್ ॥ ೧೦೭ ॥

---

೧೦೬. ತದ್ಭಾವಿತಬುದ್ಧಿಕರ್ಮಭಿರಿತ್ಯತ್ರ ತಸ್ಮಿನ್ಭಾವಿತಾನಿ ಸ್ಥಾಪಿತಾನಿ ಚ ತಾನಿ ಬುದ್ಧಿಕರ್ಮಾಣಿ ತೈಃ ತದರ್ಪಿತಬುದ್ಧಿಕರ್ಮಭಿರಿತ್ಯರ್ಥಃ – (ವಾ.)

೧೦೭. ತತೋ ದ್ವೇಷ್ಟಿ ಸುಯೋಧನಾದೀನಿತ್ಯತ್ರ ತತಃ= ಮಾನುಷಭಾವಾತ್ ಭವಾನ್ ಸುಯೋಧನಾದೀನ್ ದ್ವೇಷ್ಟೀತಿ ಯೋಜನಾ। ನನು ದುರ್ಯೋಧನಾದಿಷು ದೇವಾನಾಂ ದ್ವೇಷೋ ಸುತರಾಮಪೇಕ್ಷಿತಃ। ಅತಃ ಮಾನುಷಭಾವಾತ್ ದ್ವೇಷ್ಟೀತಿ ಕಥಮಿತಿ ಚೇತ್ಸತ್ಯಮ್। ದುರ್ಯೋಧನಾದಿಭಿಃ ಉಕ್ತೋಪಸ್ವರ್ಗೇऽನುಭೂಯಮಾನಂ ಸುಖಂ ಪ್ರಾರಬ್ಧಪುಣ್ಯವಶಾದೇವ। ತಸ್ಯ ಚ ಫಲದಾತಾರೋ ದೇವಾಃ। ತಾವನ್ಮಾತ್ರೇಣ ನ ದ್ವಿಷಂತಿ। ಕಿಂತು ತಮೋಯೋಗ್ಯೋऽಯಮಂಧೇತಮಸಿ ಪತಿತ್ವಾ ಮಹಾದುಃಖಂ ಅನುಭವತ್ವಿತ್ಯೇವ ದ್ವಿಷಂತಿ। ತವ ತ್ವಯಂ ದ್ವೇಷಃ ಮಾನುಷಭಾವೇನ ತತ್ಕೃತಕರ್ಮವಶತ್ವಜ್ಞಾನಾದೇವೇತಿ ಭಾವೇನ ತತೋ ಭವಾನ್ ದ್ವೇಷ್ಟೀತ್ಯುಕ್ತಮ್ । – (ವಾ.)

೧೦೭. ಹೇ ನೃಪ ತೇ ಮಾನುಷೋ ಭಾವಃ ಪೂರ್ವಂ ಕದಾಪಿ ನ ಗತಃ । ಹಿ ಯಸ್ಮಾತ್ ಅದ್ಯ ಇದಾನೀಂ ಭವಾನ್ ಸುಯೋಧನಾದೀನ್ ದ್ವೇಷ್ಟಿ ತತಃ ಕಾರಣಾತ್ ತೇ ಮಾನುಷೋ ಭಾವಃ ಅದ್ಯ ಇದಾನೀಂ ಭವಾನ್ ಸುಯೋಧನಾದೀನ್ ದ್ವೇಷ್ಟಿತತಃ ಕಾರಣಾತ್ ತೇ ಮಾನುಷೋ ಭಾವಃ ಅದ್ಯ ಇದಾನೀಂ ಗತ ಇತಿ ।

ಏತೇನ 'ಹಿ ಯಸ್ಮಾತ್ ಸುಯೋಧನಾದೀನ್ ದ್ವೇಷ್ಟಿ ತತಃ ಕಾರಣಾತ್ ತೇ ಮಾನುಷೋ ಭಾವೋऽದ್ಯಾಪಿ ನ ಗತ' ಇತಿ ಕಥನಮಯುಕ್ತಮ್ । ಮಾನುಷಭಾವವರ್ಜಿತಾನಾಂ ಭೀಮಾದೀನಾಂ ಸುಯೋಧನಾದಿದ್ವೇಷದರ್ಶನಾತ್ ।

ಅ: ರಾಜನೇ, ನಿನಗಿನ್ನೂ ಮನುಷ್ಯಭಾವ ಹೋಗಿಲ್ಲ, ಆದರಿಂದಾಗಿ ದುರ್ಯೋಧನಾದಿಗಳನ್ನು ದ್ವೇಷಿಸುತ್ತಿರುವಿ. ಆದ್ದರಿಂದ ಇಲ್ಲಿಯ ವಿಷ್ಣುಪಾದೋದಕವಾದ ಗಂಗಾಜಲದಲ್ಲಿ ಮಿಂದು ದೇಹವನ್ನು ತೊರೆದು ದೇವಸ್ವಭಾವವನ್ನು ಹೊಂದು.

ವಿ: ೧) ಧರ್ಮರಾಜ ದುರ್ಯೋಧನಾದಿಗಳನ್ನು ದ್ವೇಷಿಸಿದ್ದು ತಪ್ಪಲ್ಲ; ಆದರೆ ಅದರ ಹಿಂದಿನ ಭಾವ ಶುದ್ಧವಾದ ದೇವಭಾವವಾಗಿರದೇ ಮನುಷ್ಯ ಸ್ವಭಾವವಾಗಿತ್ತು; ದೇವತೆಗಳು ದ್ವೇಷಿಸುವುದು ನ್ಯಾಯಾಧೀಶರಂತೆ, ಅವರಿಗೆ ವೈಯಕ್ತಿಕವಾದ ದ್ವೇಷಾದಿಗಳಿರುವುದಿಲ್ಲ; ತಾತ್ಪಿಕವಾಗಿ ಮಾತ್ರ ಇರುವವು. ಧರ್ಮರಾಜನಿಗೆ ಈ ಸಮಯದಲ್ಲಿ ವೈಯಕ್ತಿಕವಾದ ದ್ವೇಷಾದಿಗಳು ಮೂಡಿದ್ದು ಅವನಿನ್ನೂ ಮನುಷ್ಯ ಸ್ವಭಾವವನ್ನು ತೊರೆದಿಲ್ಲ ಎಂಬುದಕ್ಕೆ ದ್ಯೋತಕ.

೨) ದುರ್ಯೋಧನಾದಿಗಳಿಗೆ ಪ್ರಾರಬ್ಧಪುಣ್ಯಗಳ ಫಲದಿಂದಾಗಿ ಅಂತಹ ಕೃತಕ ಸ್ವರ್ಗದ ಭೋಗ ದೊರಕಿತು, ಅದು ತಾತ್ಕಾಲಿಕ. ಅದನ್ನರಿಯದೇ ಅವರು ಅದನ್ನೇಕೆ ಪಡೆದರು ಎಂದು ಪ್ರಶ್ನಿಸುವುದು ಅವನು ಇನ್ನೂ ದೇವತ್ವವನ್ನು ಪಡೆದಿಲ್ಲ ಎಂಬುದಕ್ಕೆ ದ್ಯೋತಕ.

೩) ಭೀಮಸೇನ, ದ್ರೌಪದಿಯರು ದುರ್ಯೋಧನನನ್ನು ಎಲ್ಲರಿಗಿಂತ ಹೆಚ್ಚಾಗಿ ದ್ವೇಷಿಸಿದವರು. ಆದರೆ, ಅವರದು ಮೇಲೆ ಹೇಳಿದಂತೆ ತಾತ್ಪಿಕ ದ್ವೇಷವಾದ್ದರಿಂದ ಅದು ಹರಿಪ್ರೀತಿಕರವಾಗಿ ದೇವಸ್ವಭಾವವಾಯಿತೇ ಹೊರತು ಮನುಷ್ಯಸ್ವಭಾವವಲ್ಲ ಎಂಬ ವಿಶೇಷಾಂಶವನ್ನು ಗಮನಿಸಬೇಕು.

ದುರ್ಯೋಧನಾದಿಗಳದು ಕೃತಕ ಸ್ವರ್ಗ

ಸುಯೋಧನಾದ್ಯಾ ಯದಿಮೇ ಸುಪಾಪಾ
ಆರಬ್ಧಧರ್ಮಕ್ಷಯಮಾಪ್ಯ ನಿತ್ಯೇ ।
ನಿಃಶೇಷಸೌಖ್ಯೋಜ್ಝಿತನಿತ್ಯದುಃಖೇ ಽ-
ವಶಾಃ ಪತಿಷ್ಯಂತ್ಯಪುನರ್ನಿವೃತ್ತಾಃ ॥ ೧೦೮ ॥

ಇತ್ಯುಕ್ತ ಆಹ ಪಾಪೋ ಽಯಂ ಪೃಥಿವೀಕ್ಷಯಕಾರಕಃ । ಸರ್ವಾತಿಶಂಕೀ ಮಿತ್ರಧ್ರುಗ್ ನಾರಾಯಣಪರಾಙ್ಮುಖಃ ।

ಇತ್ಯುಕ್ತಾನ್ಯಥಾನುಪಪತ್ತ್ಯಾ ದುರ್ಯೋಧನಾದೀನ್ ದೃಷ್ಟ್ವಾ ಶುಭಾರ್ಥಂ ಧರ್ಮರಾಜೇನ ನಯನಾಚ್ಛಾದನಸ್ಯ ಕೃತತ್ವಾತ್ ತದನ್ಯಥಾನುಪಪತ್ತ್ಯಾ ಚ ಧರ್ಮರಾಜಸ್ಯ ಮಾನುಷೋ ಭಾವೋ ಗತ ಇತ್ಯರ್ಥಸ್ಯ ಸಿದ್ಧತ್ವಾಚ್ಚೇತಿ ದೂಷಣಂ ಪರಾಸ್ತಂ. ಅತ್ರ ಮಾನುಷೋ ಭಾವೋ ಽದ್ಯಾಪಿ ನ ಗತ ಇತ್ಯರ್ಥೋ ನೋಚ್ಯತೇ । ಕಿಂತು ಪೂರ್ವಮಿತ್ಯಾದೇಃ ಶೇಷೇಣ ಪೂರ್ವಂ ಕದಾಪಿ ಮಾನುಷೋ ಭಾವೋ ನ ಗತಃ ಇದಾನೀಂ ಮಾನುಷೋ ಭಾವೋ ಗತ ಇತ್ಯರ್ಥ ಉಚ್ಯತೇ ಇತಿ ಸ್ವೀಕರಣಾತ್ ॥ – (ಸ.)

ಅ: ಈ ಮಹಾಪಾಪಿಗಳಾದ ದುರ್ಯೋಧನ ಮೊದಲಾದವರು ಪ್ರಾರಬ್ಧಪುಣ್ಯಕ್ಷಯವನ್ನು ಹೊಂದಿದ ಬಳಿಕ ಸಂಪೂರ್ಣವಾಗಿ ಸುಖಲೇಶವೂ ಇಲ್ಲದ ನಿತ್ಯದುಃಖಮಯವಾದ ನಿತ್ಯ ನರಕದಲ್ಲಿ ವಿಷ್ಣುವಶರಾಗಿ ಬೀಳುವರು. ಮತ್ತೆಂದೂ ಹಿಂತಿರುಗಿ ಬರುವವರಲ್ಲ.

ಎ: ದುರ್ಯೋಧನಾದಿಗಳದು ಏನಿದ್ದರೂ ಪ್ರಾರಬ್ಧಪುಣ್ಯ ನಿಮಿತ್ತಿಕವಾದ ಭೋಗ ಮಾತ್ರ. ಅದು ತೀರಿದ ಮೇಲೆ ಅವರು ತೆರಳುವುದು ಸಂಪೂರ್ಣ ದುಃಖಾತ್ಮಕವಾದ ಅಂಧಂತಮಸ್ಸಿಗೆ. ಆದ್ದರಿಂದ ಇಂತಹ ದ್ವೇಷ ಬೇಡ ಎಂದರ್ಥ. ಅವರಿಗೆ ದೊರೆತದ್ದು ಮುಖ್ಯಸ್ವರ್ಗವಲ್ಲ, ಉಪಸ್ವರ್ಗ.

ದೇವಾಂಶರಿಗೆ ಮುಕ್ತಿ ಉಚಿತ

ದೇವಾಂಶಜಾ ಯೇ ತು ಸಮಸ್ತಶಸ್ತೇ
ಸ್ವಮೂಲರೂಪಂ ಸಮವಾಪ್ಯ ಕಾಲೇ ।
ಸ್ವತಾರತಮ್ಯಾನುಸೃತಾಂ ವಿಮುಕ್ತಿಂ
ಪ್ರಾಪ್ಸ್ಯಂತಿ ನಾತ್ರಾಪಿ ವಿಚಾರ್ಯಮಸ್ತಿ ॥ ೧೦೯ ॥

---

೧೦೮. ದುರ್ಯೋಧನಾದೀನಾಂ ಸಾಂಕಲ್ಪಿಕಸ್ವರ್ಗ ಏವ । ನತು ಮುಖ್ಯಸ್ವರ್ಗಪ್ರಾಪ್ತಿಃ ॥ – (ರಾ.)

೧೦೮. 'ಯೇ ನ ಜಾನಂತಿ ತಂ ವಿಷ್ಣುಂ ಯಾಥಾತಥ್ಯೇನ ಸಂಶಯಾತ್ ।
ಜಿಜ್ಞಾಸವಶ್ಚ ನಿತರಾಂ ಶ್ರದ್ಧಾವಂತಃ ಸುಸಾಧವಃ ।
ನಿರ್ಣೀತ್ಯಾಣಾಮಭಾವೇನ ಕೇವಲಂ ಜ್ಞಾನವರ್ಜಿತಾಃ ।
ತೇ ಯಾಕಾಃ ಸ್ವರ್ಗಭೋಗಕ್ಷಯೇ ಯಾಂತಿ ಮನುಷ್ಯತಾಮ್ ।
ಯೈರ್ನಿಶ್ಚಿತಂ ಪರತ್ವಂ ತು ವಿಷ್ಣೋಃ ಪ್ರಾಯೋ ನ ಯಾತನಾಮ್ ।
ಬ್ರಹ್ಮಹತ್ಯಾದಿಭಿರಪಿ ಯಾಂತ್ಯಾಧಿಕ್ಯೇ ಚಿರಂ ನ ತು ।
ವಿಶೇಷ ಏವ ತೇಷಾಂ ತು ತದನ್ಯೇಷಾಂ ವಿಪರ್ಯಯಃ ।
ಯೇ ತು ಭಾಗವತಾಚಾರ್ಯೈಃ ಸಮ್ಯಗ್ಜ್ಞಾದಿ ಕುರ್ವತೇ ।
ಬಹಿರ್ಮುಖಾ ಭಗವತೋ ನಿವೃತ್ತಾಶ್ಚ ವಿಕರ್ಮಣಃ ।
ದಕ್ಷಿಣಾತರ್ಪಿತಾನಾಂ ತು ಹ್ಯಾಚಾರ್ಯಾಣಾಂ ತು ತೇಜಸಾ ।
ಯಾಂತಿ ಸ್ವರ್ಗಂ ತತಃ ಕ್ಷಿಪ್ರಂ ತಮೋऽಂಧಂ ಪ್ರಾಪ್ನುವಂತಿ ಚ ।
ತದನ್ಯೇ ನೈವ ಚ ಸ್ವರ್ಗಂ ಯಾಂತಿ ವಿಷ್ಣುಬಹಿರ್ಮುಖಾಃ' ಇತಿ ನಾರದೀಯೇ ॥
- ಗೀತಾತಾತ್ಪರ್ಯ (೨/೪೨-೪೪)

೧೦೯. ಅತ್ರ ದೈತ್ಯಾನಾಂ ತಮಃಪ್ರಾಪ್ತಿವಿಷಯೇ ದೇವಾನಾಂ ಮುಕ್ತಿಪ್ರಾಪ್ತಿವಿಷಯೇ ॥ - (ಜ.)

ಅ: ದೇವಾಂಶದಿಂದ ಸಂಭೂತರಾದವರು ಯಾರಿರುವರೋ ಅವರೆಲ್ಲರೂ ತಮ್ಮ ಮೂಲ ರೂಪವನ್ನು ಹೊಂದಿ ಪ್ರಳಯ ಕಾಲದಲ್ಲಿ ತಮ್ಮ ಯೋಗ್ಯತಾ ತಾರತಮ್ಯಕ್ಕೆ ಅನುರೂಪವಾದ ಮುಕ್ತಿಯನ್ನು ಪಡೆಯುವರು. ಈ ಬಗ್ಗೆ ಸಂಶಯ ಇಲ್ಲ.

ಗಂಗೆಯಲ್ಲಿ ದೇಹ ತೊರೆದ ಯುಧಿಷ್ಠಿರ

ಇತ್ಯುಕ್ತ ಆಶ್ವೇವ ನಿಮಜ್ಯ ಗಂಗಾಂ
ಧರ್ಮಾತ್ಮಜಸ್ತಂ ಪ್ರವಿಸೃಜ್ಯ ದೇಹಮ್ ।
ಸದ್ಯೋ ಬಭೌ ದೈವಮವಾಪ್ಯ ಕಾಯಂ
ವಿಸೃಷ್ಟರೋಷಾದಿಸಮಸ್ತದೋಷಃ ॥ ೧೧೦ ॥

ಅ: ದೇವತೆಗಳು ಹೀಗೆನ್ನಲು ಧರ್ಮರಾಜ ಆಲ್ಲಿ ಗಂಗೆಯಲ್ಲಿ ಮಿಂದು ತನ್ನ ಆ ದೇಹವನ್ನು ಕೂಡಲೇ ತೊರೆದ. ಆ ಕ್ಷಣದಲ್ಲೇ ದಿವ್ಯದೇಹವನ್ನು ಹೊಂದಿ ಕೋಪ ಮೊದಲಾದ ಸಕಲ ದೋಷಗಳನ್ನು ಕಳೆದುಕೊಂಡವನಾದ.

ವಿ: ಅಂತೂ ಭೀಮಾದಿಗಳು ದೇಹ ತೊರೆದದ್ದಕ್ಕೆ ನಿಷ್ಕಾರಣವಾಗಿ ದೋಷಾರೋಪಣ ಮಾಡಿದ್ದ ಧರ್ಮರಾಜ ತಾನೂ ಸಹ ದೇವತೆಗಳ ಮಾತಿನಂತೆ ದೇಹ ತೊರೆಯುವ ಮೂಲಕ ದೇಹತ್ಯಾಗ ಶಾಸ್ತ್ರ ವಿಧಿಗೆ ಅನುಗುಣವಾಗಿ ನಡೆದ ಪುಣ್ಯ ಕಾರ್ಯವೇ ಹೊರತು, ಪಾಪದ ಫಲವಲ್ಲ ಎಂಬುದನ್ನು ಅರಿತುಕೊಂಡ ಎಂದು ತಿಳಿಯಬಹುದು.

ಧರ್ಮರಾಜ ಕಂಡ ಬಂಧುಜನರು

ಸ ತು ಪ್ರಪಶ್ಯನ್ ಸ್ವಜನಂ ಸಮಸ್ತಂ
ಸ್ವಮೂಲರೂಪಾತಿಸಮೀಪಸಂಸ್ಥಮ್ ।
ದದರ್ಶ ಭೀಮಂ ಚ ಮರುತ್ಸಮೀಪೇ
ಮಧ್ಯೇ ಜ್ವಲಂತಂ ಮರುತಾಂ ಗಣಸ್ಯ ॥ ೧೧೧ ॥

---

೧೧೦. ಗಂಗಾಂ ದೇವನದೀಂ ಪುಣ್ಯಾಂ ಪಾವನೀಮೃಷಿಸಂಸ್ತುತಾಮ್ ।
ಅವಗಾಹ್ಯ ತತೋ ರಾಜಾ ತನುಂ ತತ್ಯಾಜ ಮಾನುಷೀಮ್ ॥
ತತೋ ದಿವ್ಯವಪುರ್ಭೂತ್ವಾ ಧರ್ಮರಾಜೋ ಯುಧಿಷ್ಠಿರಃ ।
ನಿರ್ವೈರೋ ಗತಸಂತಾಪೋ ಜಲೇ ತಸ್ಮಿನ್ ಸಮಾಪ್ಲುತಃ ॥ - ಭಾರತ (ಸ್ವರ್ಗ. ೩/೪೨,೪೩)

ಅ: ಧರ್ಮರಾಜ ತನ್ನ ಸಕಲ ಬಂಧುಜನರೂ ಅವರ ಮೂಲರೂಪದ ಅತ್ಯಂತ ಸಮೀಪದಲ್ಲಿ ಇರುವುದನ್ನು ಕಂಡನು. ಮರುದ್ಗಣದ ಮಧ್ಯದಲ್ಲಿ ವಾಯುವಿನ ಬಳಿಯಲ್ಲಿ ಕಂಗೊಳಿಸುತ್ತಿದ್ದ ಭೀಮನನ್ನು ಕಂಡ.

ವಿ: ಅವತರಿಸಿ ಬಂದಿದ್ದ ಪ್ರತಿಯೊಬ್ಬ ದೇವಾಂಶ ಸಂಭೂತನೂ ತನ್ನ ಮೂಲರೂಪದ ಬಳಿಯಲ್ಲಿ ಕುಳಿತಿದ್ದುದನ್ನು ಧರ್ಮರಾಜ ಕಂಡ. ವಿಶೇಷವಾಗಿ ಭೀಮಸೇನ ಮರುದ್ಗಣದ ಮಧ್ಯದಲ್ಲಿ ಮುಖ್ಯಪ್ರಾಣನ ಬಳಿ ಇದ್ದುದನ್ನು ಕಂಡ.

ಭೀಮನ ಪಕ್ಕದಲ್ಲಿ ದ್ರೌಪದಿ

ದದರ್ಶ ಕೃಷ್ಣಾಮಪಿ ತತ್ಸಮೀಪೇ
ಶ್ರಿಯಾ ಜ್ವಲಂತೀಂ ಸಮತೀತ್ಯ ಚಾನ್ಯಾಃ ।
ಸ್ಪೃಷ್ಟುಂ ಚ ಸಂಸ್ಕಾರವಶಾದಿಯೇಷ
ನಿಷಿಧ್ಯ ತಂ ಪ್ರಾಹ ಸುರಾಧಿರಾಜಃ ॥ ೧೧೨ ॥

ಅ: ಆ ಭೀಮನ ಬಳಿಯಲ್ಲಿ ಧರ್ಮರಾಜ ಇತರರೆಲ್ಲರನ್ನೂ ಮೀರಿಸಿ ಕಾಂತಿಯಿಂದ ಬೆಳಗುತ್ತಿದ್ದ ದ್ರೌಪದಿಯನ್ನು ಕಂಡ. ಸಂಸ್ಕಾರವಶದಿಂದಾಗಿ ಧರ್ಮರಾಜ ಅವಳನ್ನು ಸ್ಪರ್ಶಿಸಲು ಇಚ್ಛಿಸಿದ. ದೇವೇಂದ್ರ ಅವನನ್ನು ತಡೆದು ನುಡಿದ.

---

೧೧೧. ಅಥಾಪರಸ್ಮಿನ್ನುದ್ದೇಶೇ ಮರುದ್ಗಣವೃತಂ ವಿಭುಮ್ ।
ಭೀಮಸೇನಮಥಾಪಶ್ಯತ್ ತೇನೈವ ವಪುಷಾ ಽನ್ವಿತಮ್ ॥
ವಾಯೋರ್ಮೂರ್ತಿರ್ಮತಃ ಪಾರ್ಶ್ವೇ ದಿವ್ಯಮೂರ್ತಿಸಮನ್ವಿತಮ್ ।
ಶ್ರಿಯಾ ಪರಮಯಾ ಯುಕ್ತಂ ಸಿದ್ಧಿಂ ಪರಮಿಕಾಂ ಗತಮ್ ॥

೧೧೨. ತಥಾ ದದರ್ಶ ಪಾಂಚಾಲೀಂ ಕಮಲೋತ್ಪಲಮಾಲಿನೀಮ್ ।
ವಪುಷಾ ಸ್ವರ್ಗಮಾಕ್ರಮ್ಯ ತಿಷ್ಠಂತೀಮರ್ಕವರ್ಚಸಮ್ ॥
ಅಖಿಲಂ ಸಹಸಾ ರಾಜಾ ಸ್ಪಷ್ಟುಮೈಚ್ಛದ್ ಯುಧಿಷ್ಠಿರಃ ॥
ಶ್ರೀರೇಷಾ ದ್ರೌಪದೀರೂಪಾ ತ್ವದರ್ಥೇ ಮಾನುಷಂ ಗತಾ ।
ಅಯೋನಿಜಾ ಲೋಕಕಾಂತಾ ಪುಣ್ಯಗಂಧಾ ಯುಧಿಷ್ಠಿರ ॥
ರತ್ಯರ್ಥಂ ಭವತಾಂ ಹ್ಯೇಷಾ ನಿರ್ಮಿತಾ ಶೂಲಪಾಣಿನಾ ॥
ದ್ರುಪದಸ್ಯ ಕುಲೇ ಜಾತಾ ಭವದ್ಭಿಶ್ಚೋಪಜೀವಿತಾ । - ಭಾರತ (ಸ್ವರ್ಗ. ೪/೧೦-೧೩.)

೧೧೨. ಯಾಂ ಸ್ಪಷ್ಟುಮಿಚ್ಛಂತಮಜಾತಶತ್ರುಂ ನ್ಯವಾರಯತ್ ಸ್ವಸ್ಥಮಜಾತಶತ್ರುಮ್ ।
ಶಂರೂಪಾನೇ ನಿತ್ಯರತೇರಿಯಂ ಶ್ರೀರಿತಿ ಸ್ಮ ದೇವೇಡ್ಯದಿತೇರಿಯಂ ಶ್ರೀಃ ॥ -ಯಮಕಭಾರತ (೫೩.)

ವಿ: ದ್ರೌಪದಿ ಭೀಮನ ಪಕ್ಕದಲ್ಲಿ ಕಂಗೊಳಿಸುತ್ತಿದ್ದುದು ಆಕೆ ಸಾಕ್ಷಾತ್ ಭಾರತಿ ಎಂಬುದಕ್ಕೆ ಸೂಚಕ. ಅದನ್ನು ಗಮನಿಸದ ಧರ್ಮರಾಜ ತನ್ನ ಪತ್ನಿ ಎಂದು ಭಾವಿಸಿ ಸ್ಪರ್ಶಿಸಲು ಬಯಸಿದ ಎಂದರ್ಥ.

ದ್ರೌಪದಿ ಯಾರು?

ಏಷಾ ಹಿ ಸಾಕ್ಷಾಜ್ಜಗತಾಂ ಪ್ರಿಯಸ್ಯ
ಪ್ರಾಣಾತ್ಮನೋ ಜೀವವರೇಶ್ವರಸ್ಯ ।
ಪ್ರಾಣಪ್ರಿಯಾ ಶ್ರೀರಿತಿ ನಾಮ ಯಸ್ಯಾಃ
ಶಮಾತ್ಮಕೇಽಸ್ಮಿನ್ ರಮತೇ ಯದೇಷಾ ॥ ೧೧೩ ॥

ಅ: 'ಈ ಭಾರತಿಯು ಜಗತ್ತುಗಳಿಗೆ ಪ್ರಿಯನೂ, ಮುಖ್ಯಪ್ರಾಣಸ್ವರೂಪನೂ, ಜೀವೋತ್ತಮನೂ ಆದ ವಾಯುವಿನ ಪ್ರಾಣಪ್ರಿಯೆ, ಸುಖರೂಪನಾದ ಪ್ರಾಣನಲ್ಲಿ ಸದಾ ರಮಿಸುವುದರಿಂದ ಇವರಿಗೆ ಶ್ರೀ ಎಂದು ಹೆಸರು'

ವಿ: ಮಹಾಭಾರತದಲ್ಲಿ ದ್ರೌಪದಿ ಶ್ರೀ ಎಂದು ವರ್ಣಿತವಾಗಿರುವಳು. ಅಲ್ಲಿ ಶ್ರೀ ಎಂದರೆ ಸುಖರೂಪಿಯಾದ ವಾಯುವಿನಲ್ಲಿ ರಮಿಸುವ ಭಾರತಿ ಎಂದರ್ಥ ಎಂದು ತಿಳಿಸಿರುವರು.

ಯುಷ್ಮಚ್ಚತುರ್ದೇಹಗತಸ್ಯ ವಾಯೋ-
ರ್ವಾಯುಪ್ರಿಯಾ ಭೀಮತನೋಸ್ತಥೈವ ।
ಭೋಗಾಯ ಸೃಷ್ಟಾ ಪುರುಷೋತ್ತಮೇನ
ಯುಷ್ಮತ್ಪ್ರಿಯಾರ್ಥಂ ಭವತಾಂ ಚ ದಾರೈಃ ॥ ೧೧೪ ॥

ಅ: ನಿಮ್ಮ ನಾಲ್ವರ ದೇಹದಲ್ಲಿ ಪ್ರವೇಶಿಸಿದ್ದ ವಾಯುವಿಗೂ ಅದರಂತೆ ಭೀಮ ರೂಪದ ವಾಯುವಿನ ಭೋಗಕ್ಕೋಸ್ಕರವಾಗಿ,. ನಿಮ್ಮೆಲ್ಲರ ಪ್ರೀತಿಗೋಸ್ಕರ ನಿಮ್ಮ ಪತ್ನಿಯರೊಂದಿಗೂ ಕೂಡಿದವಳಾಗಿ ಇವಳು ಪುರುಷೋತ್ತಮನಾದ ಶ್ರೀಹರಿಯಿಂದ ಸೃಷ್ಟಳಾಗಿದ್ದಳು.

ಪ್ರೀತಿಸ್ತತೋ ಹ್ಯಭ್ಯಧಿಕಾ ಬಭೂವ
ಭೀಮಸ್ಯ ಚಾಸ್ಯಾಸ್ತದನು ಸ್ಮ ಪಾರ್ಶ್ವೇ ।
ತತೋ ಭವತ್ಸ್ವೇವ ಯಥಾಕ್ರಮೇಣ
ಗುಣಾನುಸಾರೇಣ ಸಮೀರಣಸ್ಯ ॥ ೧೧೫ ॥

ಅ: ಅದರಿಂದಾಗಿ ಇವಳು ಭೀಮನಿಗೆ ಅತ್ಯಂತ ಪ್ರೀತಿಪಾತ್ರಳಾಗಿದ್ದಳು. ಅನಂತರ ಅರ್ಜುನನಲ್ಲೂ ಅನಂತರ ನಿಮ್ಮಲ್ಲೂ ವಾಯುದೇವರ ಆವೇಶಕ್ಕನುಗುಣವಾಗಿ ಕ್ರಮವಾಗಿ ಪ್ರೀತಿ ಹೊಂದಿದ್ದಳು.

ವಿ: ದ್ರೌಪದಿ ವಿಶೇಷವಾಗಿ ಭೀಮನನ್ನು, ಬಳಿಕ ಅರ್ಜುನನನ್ನು ಹೆಚ್ಚಾಗಿ ಪ್ರೀತಿಸಲು ಭೀಮ ಸಾಕ್ಷಾತ್ ಮುಖ್ಯಪ್ರಾಣನಾಗಿದ್ದುದು, ಅರ್ಜುನನಲ್ಲಿ ವಿಶೇಷವಾಗಿ ಪ್ರಾಣನ ಆವೇಶವಿದ್ದುದು ಕಾರಣ. ಹೀಗೆ ಹೇಳುವ ಮೂಲಕ ಧರ್ಮರಾಜನಿಗೆ ದ್ರೌಪದಿ ಅರ್ಜುನನಲ್ಲಿ ವಿಶೇಷ ಪಕ್ಷಪಾತ ಮಾಡುತ್ತಿದ್ದಳು ಎಂಬ ಪ್ರಶ್ನೆಗೆ ಉತ್ತರ ನೀಡಿರುವರು.

ಏಷಾ ಹಿ ಸಾ ಶುದ್ಧತನುಃ ಪ್ರಜಾತಾ
ಶಚ್ಯಾದಿಯೋಗಾಪಗತಾऽಗ್ರ್ಯದೇಹಾ ।
ಯೂಯಂ ಚ ಸರ್ವೇ ಮರುತೋ ವಿಶೇಷ
ಸಂಯೋಗಹೀನಾಃ ಸ್ವಶರೀರಸಂಸ್ಥಾಃ ॥ ೧೧೬ ॥

ಅ: ಈಗ ಈ ದ್ರೌಪದಿಯು ಶಚಿ ಮೊದಲಾದವರ ಆವೇಶವಿಲ್ಲದಿರುವ ಉತ್ತಮ ದೇಹವನ್ನು ಹೊಂದಿರುವ ಶುದ್ಧ ಭಾರತೀ ರೂಪಳಾಗಿರುವಳು. ಅದರಂತೆ ನೀವೆಲ್ಲರೂ ವಾಯುದೇವರ ವಿಶೇಷಾವೇಶ ರಹಿತರಾಗಿ ನಿಮ್ಮ ನಿಮ್ಮ ದೇಹಗಳಲ್ಲಿ ಇರುವಿರಿ.

ವಿ: ಧರ್ಮರಾಜಾದಿಗಳಲ್ಲಿ ವಿಶೇಷ ಕಾರಣದಿಂದಾಗಿ ಉಂಟಾಗಿದ್ದ ವಾಯುದೇವರ ಆವೇಶ ಈಗಿಲ್ಲ. ಅದರಂತೆ ದ್ರೌಪದೀ ದೇಹದಲ್ಲಿ ಶಚಿ ಮೊದಲಾದ ಇತರ ದೇವತಾಸ್ತ್ರೀಯರೂ ಇಲ್ಲ.

ಸ್ಪರ್ಶೇऽಪಿ ನಾಸ್ಯಾಃ ಪವಮಾನಪತ್ನ್ಯಾಃ
ಸುಪೂತತಾऽಲಂ ಭವತಾಮಿದಾನೀಮ್ ।
ನ ಚೋತ್ತರತ್ರಾಪಿ ಭವೇತ್ ಕಥಂಚಿ-
ದ್ದಿವೌಕಸಾಂ ಮಾನುಷದೇಹಿನೋ ಯಥಾ ॥ ೧೧೭ ॥

ಅ: ಆದ್ದರಿಂದ ವಾಯುಪತ್ನಿಯಾದ ಇವಳನ್ನು ಸ್ಪರ್ಶಮಾಡುವುದಕ್ಕೋಸ್ಕರ ಯೋಗ್ಯವಾದ ಶುದ್ಧಿ ನಿಮಗೆ ಇಲ್ಲ. ಮುಂದೆಯೂ ಅದು ನಿಮಗೆ ಸರ್ವಥಾ ಒದಗುವುದಿಲ್ಲ. ದೇವತೆಗಳ ಸ್ಪರ್ಶ ಯೋಗ್ಯತೆ ಮನುಷ್ಯ ದೇಹಿಗಳಿಗೆ ಹೇಗೆ ಇರದೋ ಹಾಗೆ.

---

೧೧೫. ಗುಣಾನುಸಾರೇಣ ಸಮೀರಣಸ್ಯೇತ್ಯತ್ರ ಸಮೀರಣಸ್ಯ ಗುಣಾನುಸಾರೇಣ= ಸನ್ನಿಧಾನಾಖ್ಯಗುಣಾನುಸಾರೇಣ – (ವಾ.)

ವಿ: ಮನುಷ್ಯದೇಹದಲ್ಲಿದ್ದಾಗ ನಿಮಗೆ ಆವೇಶ ಬಲದಿಂದಾಗಿ ಒದಗಿದ್ದ ಯೋಗ್ಯತೆ ದೇವದೇಹವನ್ನು ಪಡೆದ ನಿಮಗೆ ಇಲ್ಲವಾದ್ದರಿಂದ ದ್ರೌಪದಿಯನ್ನು ಸ್ಪರ್ಶಿಸಲು ಸರ್ವಥಾ ಅಶಕ್ಯ ಎಂದು ಭಾವ.

ಧರ್ಮರಾಜನಿಗೆ ಮೂಲರೂಪಪ್ರಾಪ್ತಿ

ಇತೀರಿತಂ ತಂ ಪ್ರತಿಸನ್ನಿವೃತ್ತಂ
ವಿನಾಶಯನ್ ಮಾನುಷವಾಸನಾಂ ಸ್ವಯಮ್ ।
ಸಮಾಶ್ಲಿಷಚ್ಛುದ್ಧತನುಃ ಸ್ತನೋತ್ಥೋ
ಧರ್ಮೋ ಹರೇಃ ಸೋಽಭವದಾಶು ತತ್ಸಮಃ ॥ ೧೧೮ ॥

ಅ: ಇಂದ್ರ ಹೀಗೆ ತಿಳಿಸಲು ಧರ್ಮರಾಜ ಹಿಂದೆ ಸರಿದ. ಅವನಲ್ಲಿದ್ದ ಮಾನುಷ ವಾಸನೆಯನ್ನು ಕಳೆಯಲೆಂದು ಶ್ರೀಹರಿಯ ಬಲಸ್ತನದಿಂದ ಉದ್ಭವಿಸಿದ ಶುದ್ಧ ದೇಹನಾದ ಯಮಧರ್ಮ ಸ್ವತಃ ಅವನನ್ನು ಗಾಢವಾಗಿ ಆಲಿಂಗಿಸಿದ. ಕೂಡಲೇ ಧರ್ಮರಾಜ ಯಮಧರ್ಮನಿಗೆ ಸಮಾನನಾದನು.

ವಿ: ಅದರಂತೆ ವಿದುರನೂ ಯಮಧರ್ಮನಲ್ಲಿ ಐಕ್ಯ ಹೊಂದಿದ ವಿವರ ಮಹಾಭಾರತದಲ್ಲಿದೆ.

ಧರ್ಮಮೇವಾವಿಶತ್ ಕ್ಷತ್ತಾ ರಾಜಾ ಚೈವ ಯುಧಿಷ್ಠಿರಃ ॥
– (ಸ್ವರ್ಗಾರೋಹಣ. ೫/೨೨)

ದೇವಾಂಶರ ಮೂಲರೂಪಪ್ರಾಪ್ತಿ

ತತಸ್ತು ಪಾರ್ಥಾ ಅಖಿಲಾಃ ಸ್ವಮೂಲ-
ರೂಪೈಃ ಸಹೈವಾವಿವಿಶುರ್ಮುದಾಽನ್ವಿತಾಃ ।
ಸ್ವೀಯಾನಿ ಧಾಮಾನಿ ತತೋಽಪ್ಯನೂನ-
ಭೋಗಾಃ ಸದಾರಾ ನ್ಯವಸಂಶ್ಚ ತತ್ರ ॥ ೧೧೯ ॥

---

೧೧೮. ಸ್ತನೋತ್ಥೋ ಧರ್ಮೋ ಹರೇರಿತ್ಯತ್ರ ಸ್ತನೋತ್ಥಃ= ದಕ್ಷಿಣಸ್ತನಾದುತ್ಪನ್ನಃ। ಧರ್ಮಃ= ಧರ್ಮರೂಪೀ ಯಮಃ – (ವಾ.)

೧೧೯. ಸಹೈವಾವಿವಿಶುರಿತ್ಯತ್ರ ಏ= ಸಮಂತಾತ್। ವಿವಿಶುಃ= ಉಪವೇಶನಂ ಚಕ್ರುಃ। ಸ್ವಮೂಲರೂಪೈಃ ಸಹೈಕಾಸನೇ ಉಪವಿಷ್ಟಾ ಏವ। ನ ತ್ವೈಕ್ಯಂ ಪ್ರಾಪ್ತಾ ಏವೇತಿ ಭಾವಃ ॥ – (ವಾ.)

ಅ: ಬಳಿಕ ಸಕಲ ಪಾಂಡವರು ಸಂತಸದಿಂದ ಕೂಡಿದವರಾಗಿ ಮೂಲರೂಪಗಳೊಂದಿಗೆ ತಮ್ಮ ಲೋಕಗಳನ್ನು ಪ್ರವೇಶಿಸಿದರು. ಅಲ್ಲಿ ಕೊರತೆ ಎನ್ನಿಸದ ಭೋಗದಿಂದ ಕೂಡಿದವರಾಗಿ ಸಪತ್ನೀಕರಾಗಿ ನೆಲೆಸಿದರು.

ಪಾಂಡವರಿಗೆ ಮತ್ತೆ ಕೃಷ್ಣ ಸಮಾಗಮ

ತತ್ರಾಪಿ ಕೃಷ್ಣೇನ ಸಮಾಗಮೋऽಭೂತ್
ಪುರೇವ ತೇಷಾಮಪಿ ತತ್ಪರಾಣಾಮ್ ।
ಚಿಕ್ರೀಡ ಏಭಿಃ ಸಹಿತಸ್ತಥೈವ
ಕೃಷ್ಣೋऽಪಿ ತದ್ವತ್ ಸರಥೋऽರ್ಜುನೇನ ॥ ೧೨೦ ॥

ಅ: ಕೃಷ್ಣಭಕ್ತರಾದ ಪಾಂಡವರಿಗೆ ಹಿಂದಿನಂತೆ ಅಲ್ಲಿಯೂ ಶ್ರೀಕೃಷ್ಣನೊಡನೆ ಸಮಾಗಮ–ವಾಯಿತು. ಕೃಷ್ಣನೂ ಹಾಗೆಯೇ ಹಿಂದಿನಂತೆ ಅರ್ಜುನನೊಂದಿಗೆ ರಥದೊಂದಿಗೆ ವಿಹರಿಸಿದ.

ವಿ: ಸ್ವರ್ಗಾರೋಹಣದ ಅನಂತರವೂ ಮುಂಚಿನಂತೆ ಕೃಷ್ಣನ ಸಮಾಗಮವನ್ನು ಹೊಂದಿದ್ದು ಪಾಂಡವರ ಮತ್ತೊಂದು ವಿಶೇಷವಾಯಿತು. ಅಲ್ಲಿಯೂ ಕೃಷ್ಣ ರಥದೊಡನೆ ಅರ್ಜುನನೊಂದಿಗೆ ವಿಹರಿಸಿದ್ದು ಮತ್ತೊಂದು ಗಮನಾರ್ಹವಾದ ಅಂಶ.

ಅಸುರರಿಗೆ ಪುಣ್ಯಕ್ಷಯ

ಅನ್ಯೇ ಚ ದೇವಾಂಶಭವಾಃ ಸಮಸ್ತಾಃ
ಸ್ವಮೂಲರೂಪೈಕ್ಯಮವಾಪುರಾಶು ।
ಕರ್ಮಕ್ಷಯಾದೇವ ಸುರೇತರಾಸ್ತು
ಪುಣ್ಯಕ್ಷಯಂ ಪ್ರಾಪ್ಯ ಭುವಿ ಪ್ರಜಾತಾಃ ॥ ೧೨೧ ॥

---

೧೨೧. ಅನ್ಯೇ ತು ದೇವಾಂಶಭವಾ ಇತ್ಯತ್ರ ಕರ್ಮಕ್ಷಯಾತ್ = ಸ್ವಪ್ರಾರಬ್ಧಕರ್ಮಕ್ಷಯಾತ್। ಸ್ವಮೂಲರೂಪೈಕ್ಯ–ಮವಾಪುಃ। ಅನ್ಯೇ ಚ ದೇವಾಃ ಕರ್ಮಕ್ಷಯಾದಿತಿ ವದತಾ ಪಂಚಪಾಂಡವಾನಾಂ ಸ್ವಮೂಲರೂಪಾತ್ ಪೃಥಗ್ಭೂತಗೇವ ಸುಖಾನುಭವಹೇತುಭೂತಪ್ರಾರಬ್ಧಪುಣ್ಯಕರ್ಮಶೇಷೋऽಸ್ತೀತಿ ಸೂಚಿತಮ್। ಸುರೇತರಾಸ್ತು ಸಂವತ್ಸರಾಣಾಂ ತ್ರಿಶತೋತ್ತರಂ ಚತುಃ ಸಹಸ್ರಂ ದಿವ್ಯಾನ್ ಭೋಗಾನನುಭೂಯ= ವೀರಸ್ವರ್ಗೇऽನುಭೂಯ ಪುಣ್ಯಕ್ಷಯಂ ಪ್ರಾಪ್ಯ ಭುವಿ ಪ್ರಜಾತಾ ಇತಿ ಯೋಜನಾ ॥ –(ಪಾ.)

ಅ: ದೇವಾಂಶಸಂಭೂತರಾದ ಇತರರು ಸಹ ಕರ್ಮಕ್ಷಯವಾದೊಡನೆಯೇ ತಮ್ಮ ಮೂಲರೂಪದೊಂದಿಗೆ ಐಕ್ಯ ಹೊಂದಿದರು. ಅಸುರರು ಪುಣ್ಯಕ್ಷಯವನ್ನು ಹೊಂದಿ ಭೂಮಿಯಲ್ಲಿ ಜನಿಸಿದರು.

ವಿ: ೧) ದ್ರೋಣಾದಿ ಇತರ ದೇವತೆಗಳೂ ಸಹ ಹೀಗೆ ತಮ್ಮ ಮೂಲರೂಪದೊಂದಿಗೆ ಪ್ರಾರಾಬ್ಧಕರ್ಮಕ್ಷಯದ ಅನಂತರ ಐಕ್ಯ ಹೊಂದಿದರು. ಅದರಂತೆ ಅಸುರರು ಪುಣ್ಯಕ್ಷಯದ ಅನಂತರ ಭೂಮಿಯಲ್ಲಿ ಹುಟ್ಟಿ ಆಗಲೂ ಸಹ ತಾವೇ ಭಗವಂತ ಎಂಬ ಅಸದುಪಾಸನೆಯನ್ನೇ ಮಾಡಿದರು.

೨) ಆಗಲೂ ಸಹ ಎಂದು ಹೇಳುವ ಮೂಲಕ ಅಷ್ಟೆಲ್ಲಾ ಅನರ್ಥ ಪರಂಪರೆಯ ಅನುಭವದ ಅನಂತರವೂ ಅವರ ಉಪಾಸನೆಯ ರೀತಿ ಬದಲಾಗಲಿಲ್ಲ ಎಂಬ ವಿಶೇಷವೂ ಸೂಚಿತ.

ಭೂಲೋಕದಲ್ಲಿ ಅಸುರರ ಹುಟ್ಟು

ಚತುಃಸಹಸ್ರಂ ತ್ರಿಶತೋತ್ತರಂ ತೇ
ಸಂವತ್ಸರಾಣಾಮನುಭೂಯ ದಿವ್ಯಾನ್ ।
ಭೋಗಾನ್ ನರತ್ವೇಽಪಿ ಸದೇಶ್ವರೋಽಹ-
ಮಸಜ್ಜಗಚ್ಚೇತಿ ಧಿಯಾಽಽಪ್ನುವಂಸ್ತಮಃ ॥ ೧೨೨ ॥

ಅ: ನಾಲ್ಕು ಸಾವಿರದ ಮುನ್ನೂರು ವರ್ಷಗಳ ಪರ್ಯಂತ ಸ್ವರ್ಗದಲ್ಲಿ ದಿವ್ಯಭೋಗಗಳನ್ನು ಅನುಭವಿಸಿ ಆಗಲೂ ಸದಾ ನಾನೇ ಈಶ್ವರ, ಜಗತ್ತು ಸುಳ್ಳು ಎಂಬ ಬುದ್ಧಿಯನ್ನು ಹೊಂದಿ ತಮಸ್ಸನ್ನು ಹೊಂದಿದರು.

ಅಸುರರ ದುಃಖತಾರತಮ್ಯ

ದುಃಖೇಽಪಿ ತೇಷಾಮಿಹ ತಾರತಮ್ಯಂ
ಕಲೇಃ ಪರಂ ದುಃಖಮಿಹಾಖಿಲಾಚ್ಚ ।
ಯಥಾ ವಿರಿಂಚಸ್ಯ ಸುಖಂ ಪರಂ ಸ್ಯಾ-
ನ್ಮುಕ್ತೌ ಹರಿದ್ವೇಷಕೃತೋ ವಿಶೇಷಃ ॥ ೧೨೩ ॥

ಅ: ದುಃಖದಲ್ಲೂ ಅವರಲ್ಲಿ ತಾರತಮ್ಯವುಂಟು. ಕಲಿಗೆ ಇತರ ಎಲ್ಲರಿಗಿಂತಲೂ ಅತ್ಯಂತ ಹೆಚ್ಚಿನ ದುಃಖ. ಮುಕ್ತಿಯಲ್ಲಿ ಬ್ರಹ್ಮದೇವರಿಗೆ ಹೇಗೆ ಅತ್ಯಂತ ಹೆಚ್ಚಿನ ಸುಖವೋ ಅದರಂತೆ. ಅಸುರರಲ್ಲಿ ಹರಿದ್ವೇಷದ ಕಾರಣದಿಂದಾಗಿ ಇಂತಹ ವಿಶೇಷ. ಯೋಗ್ಯರಲ್ಲಿ ಸುಖತಾರತಮ್ಯ-ವಿರುವಂತೆ, ಅಯೋಗ್ಯರಲ್ಲಿ ದುಃಖತಾರತಮ್ಯವಿರುವುದು ಎಂದರ್ಥ. ಯೋಗ್ಯರಲ್ಲಿ ಬ್ರಹ್ಮ ಹೆಚ್ಚು ಸುಖಿಯಾದರೆ, ಅಯೋಗ್ಯರಲ್ಲಿ ಕಲಿ ಹೆಚ್ಚು ದುಃಖಿ ಎಂದು ಭಾವ. ಹರಿಭಕ್ತಿ ಸುಖಕ್ಕೆ ಸಾಧನವಾದರೆ, ಹರಿದ್ವೇಷ ದುಃಖಕ್ಕೆ ಸಾಧನ.

ಕೇಚಿತ್ ಪಿಶಾಚಾಸುರರಾಕ್ಷಸತ್ವ-
ಮವಾಪ್ಯ ವಿಷ್ಣೋರಪಿ ತತ್ಪರಾಣಾಮ್ ।
ದ್ವೇಷಾತ್ ತಮೋಽಂಧಂ ತ್ವರಯಾ ಸಮಾಪ್ನುಯು-
ರ್ದೇವಾಃ ಸ್ವಕಾಲೇ ನಿಜಯೋಗ್ಯಮುಕ್ತಿಮ್ ॥ ೧೨೪ ॥

ಅ: ಕೆಲವರು ಪಿಶಾಚಿಗಳಾಗಿಯೂ, ಅಸುರರಾಗಿಯೂ, ರಾಕ್ಷಸರಾಗಿಯೂ ಜನಿಸಿ ವಿಷ್ಣುವಿನಲ್ಲೂ ಅವನ ಭಕ್ತರಲ್ಲೂ ದ್ವೇಷ ಮಾಡಿ ಅಂಧಂತಮಸ್ಸನ್ನು ಬೇಗನೆ ಹೊಂದಿದರು. ದೇವತೆಗಳು ತಮಗೆ ವಿಹಿತವಾದ ಕಾಲದಲ್ಲಿ ತಮಗೆ ಯೋಗ್ಯವಾದ ಮುಕ್ತಿಯನ್ನು ಪಡೆದರು.

ವಿ: ಕೆಲವರು ಹಾಗೆ ಮನುಷ್ಯರಾಗಿ ಜನಿಸಿ ಸಾಧನೆ ಮಾಡಿದರೆ ಮತ್ತೆ ಕೆಲವರು ಅಸುರ ರಾಕ್ಷಸಾದಿಗಳಾಗಿ ಹುಟ್ಟಿ, ಸಾಧನೆ ಮಾಡಿದರು. ಎಂದರೆ ಎಲ್ಲರೂ ಮನುಷ್ಯರಾಗಿಯೇ ಸಾಧನೆ ಮಾಡಿದರು ಎಂದಲ್ಲ ಎಂದರ್ಥ. ಸಾಧನೆ ಯಾವ ಯೋನಿಯಲ್ಲಿಯೇ ಮಾಡಿದರೂ ಅವರ ಗುರಿ ಮಾತ್ರ ಹರಿದ್ವೇಷವೇ (ತತ್ಫಲವಾಗಿ ಅಂಧಂತಮಸ್ಸೇ) ಆಗಿದ್ದಿತು ಎಂಬುದು ವಿಶೇಷ. ಅದರಂತೆ ದೇವತೆಗಳ ಸಾಧನೆಯೂ ಸಹ. ಆದರೆ ಅವರ ಗುರಿ ಮಾತ್ರ ಹರಿಪ್ರೀತಿಯಾಗಿತ್ತು ಎಂಬುದು ವಿಶೇಷ.

ಕಲಿಯುಗದಲ್ಲಿ ಭೀಮಾವತಾರ

ಚತುಃಸಹಸ್ರೇ ತ್ರಿಶತೋತ್ತರೇ ಗತೇ
ಸಂವತ್ಸರಾಣಾಂ ತು ಕಲೌ ಪೃಥಿವ್ಯಾಮ್ ।
ಜಾತಃ ಪುನರ್ವಿಪ್ರತನುಃ ಸ ಭೀಮೋ
ದೈತ್ಯೈರ್ನಿಗೂಢಂ ಹರಿತತ್ತ್ವಮಾಹ ॥ ೧೨೫ ॥

ಅ: ಕಲಿಯುಗದಲ್ಲಿ ನಾಲ್ಕು ಸಾವಿರದ ಮುನ್ನೂರು ವರ್ಷಗಳು ಕಳೆದ ಮೇಲೆ ಆ ಭೀಮನೇ ಮತ್ತೆ ವಿಪ್ರರೂಪದಿಂದ ಭೂಮಿಯಲ್ಲಿ ಜನಿಸಿ, ದೈತ್ಯರಿಂದ ಮರೆಯಾಗಿದ್ದ ಹರಿತತ್ತ್ವವನ್ನು ಉಪದೇಶಿಸಿದ.

ಎ: ಭೀಮಸೇನ ಮಧ್ವರೂಪದಿಂದ ಅವತರಿಸಿ ತತ್ತ್ವಪ್ರಸಾರ ಮಾಡಿದ ಅಪೂರ್ವ ಉಲ್ಲೇಖ ಇದಾಗಿದೆ. ಇದು ಮಧ್ವಾಚಾರ್ಯರ ಕಾಲನಿರ್ಣಯಕ್ಕೂ ಅತ್ಯಂತ ಉಪಯುಕ್ತವಾದ ವಿವರ. ಇದರಂತೆ ಅವರ ಅವತಾರ ಕಾಲ ಕ್ರಿ.ಶ. ೧೨೦೦ ಎಂದಾಗುವುದು.

ದ್ರೌಪದಿಯ ಮತ್ತೊಂದು ರೂಪ

ತದೈವ ಕೃಷ್ಣೋಽಪಿ ಭುವಿ ಪ್ರಜಾತಾ
ಪ್ರೀತ್ಯೈ ಹರೇರಂಧತಮಸ್ಯಪಾತಯತ್ ।
ಮಹಾಸುರಾನ್ ವಿಷ್ಣುಪರಾರ್ಜುನಾದ್ಯಾಃ
ಕೃತೇ ಪ್ರಜಾತಾ ಹರಿತೋಷಣಾಯ ॥ ೧೨೬ ॥

---

೧೨೫. ವಿಪ್ರತನುಃ ಸ ಭೀಮ ಇತಿ ಅನೇನ ಮೂಲರೂಪಾದ್ವಿಶಿಷ್ಯಜಾತಃ ಕಿಂತು ಭೈಮೀತನುರಿತ್ಯುಕ್ತರೀತ್ಯಾ ಭೀಮ ಏವ ಮಧ್ವ ಇತ್ಯುಕ್ತಂ ಭವತಿ । ಕೃಷ್ಣೇತಿ । ಅನೇನ ಪಂಚಸ್ವರೂಪಾಯಾ ಉತ್ಪತ್ತಿಮಭಿಪ್ರೇತಿ ಸಾ ಚ ಕಲ್ಯಾಣೀತಿ ಸಂಪ್ರದಾಯವಿದಃ । ಕಲೌ ಪ್ರಜಾತಾ ಇತಿ । ಅರ್ಜುನಾದ್ಯಾ ಕಲೌ ಯುಗೇ ಪ್ರಜಾತಾ ಇತ್ಯರ್ಥಃ । ಕೃತೇ ಪ್ರಜಾತ ಇತಿ ಪಾಠೇ ಹರಿತೋಷಣಾಯ ಕೃತೇ ಹರಿತೋಷಣಪ್ರಯೋಜನಾಯೇತ್ಯರ್ಥಃ । ಕೇಚಿತ್ ತು ಕೃತಯುಗೇ ಪ್ರಜಾತಾ ಇತ್ಯರ್ಥಮಾಹುಃ । – (ತಾ.)

೧೨೫. ವಿವರಗಳಿಗೆ ನಮ್ಮ ಪ್ರಕಾಶನದ 'ಶ್ರೀಮಧ್ವಾಚಾರ್ಯರ ಕಾಲನಿರ್ಣಯ' ಕೃತಿಯನ್ನು ನೋಡಿ.

೧೨೬. ತದಾ ತಸ್ಮಿನ್ ಕಾಲೇ ಕೃಷ್ಣಾದ್ರೌಪದೀ ಭುವಿ ಪ್ರಜಾತಾ ... ।

... ಹರಿತೋಷಣಾಯ ಕೃತೇ ಯುಗೇ ಭುವಿ ಪ್ರಜಾತಾಃ ... । – (ವ.)

೧೨೬. ಕೃತೇ ವೈವಸ್ವತಮನ್ವಂತರಾಪೇಕ್ಷಯಾ ಏಕೋನತ್ರಿಂಶತ್‌ಕೃತಯುಗೇ ಹರಿತೋಷಣಾಯ ಪ್ರಜಾತಾಃ ।- (ಜ.)

೧೨೬. 'ತದೈವ ಕೃಷ್ಣೋಪಿ ಭುವಿ ಪ್ರಜಾತಾ' ಇತ್ಯತ್ರ ಕೃಷ್ಣಾ ಭಾರತೀ ನಾಮ್ನಾ ಚಂದ್ರೇತಿ ಪ್ರಜಾತಾ । ಕೇಚಿತ್ ಉಮಾದಿಭರೇಕದೇಹಾ ಸತೀ ನಾಮ್ನಾ ಚಂದ್ರವತೀ ಬಭೂವೇತ್ಯಾಹುಃ ॥ – (ರಾ.)

೧೨೬. '...ತದೈವಾರ್ಜುನಾದ್ಯಾಶ್ಚ ಪ್ರಜಾತಾ' ಇತ್ಯುಕ್ತತ್ವೇನ ಕಲಿಕಾಲ ಏವ ಜನ್ಮೋಕ್ತೇಃ । ಅತ ಏವ ಪದ್ಮನಾಭತೀರ್ಥಶ್ರೀಮಚ್ಚರಣಾ ಶೇಷಾವತಾರಾಃ । ಜಯತೀರ್ಥಶ್ರೀಮಚ್ಚರಣಾಃ ಇಂದ್ರಾವತಾರಾಃ । ಶ್ರೀಕೃಷ್ಣಪೂಜಕಾ ಅಷ್ಟೌ ಮಧ್ವಶಿಷ್ಯಾಃ ಅಷ್ಟದಿಕ್ಪಾಲಾ ಇತಿ ಸಿದ್ಧಿಃ । ಯಥೋಕ್ತಂ ವ್ಯಾಸಕೃತಮಧ್ವಕಾಂಡೇ–

ಮಧ್ವಶಿಷ್ಯಾ ಮಹಾತ್ಮಾನೋ ದೇವಾ ಏವ ಭುವಂಗತಾಃ ।
ತೇಷು ಮುಖ್ಯೌ ವಿಷ್ಣುತೀರ್ಥಪದ್ಮನಾಭಾಖ್ಯಯೋಗಿನೌ ॥ ಇತಿ ॥
ಅತೋ ನ ಪಾಂಡವಾನಾಂ ಸ್ವಮೂಲರೂಪೇಣ ಐಕ್ಯಪ್ರಾಪ್ತಿಃ । ಅತ ಏವೋಕ್ತಮನಂತರಾತೀತಗ್ರಂಥೇ ॥ -(ಚ.)

ಅ: ಆಗಲೇ ದ್ರೌಪದಿಯೂ ಭೂಮಿಯಲ್ಲಿ ಅವತರಿಸಿ ಹರಿಪ್ರೀತಿಗಾಗಿ ಮಹಾದೈತ್ಯರನ್ನು ಅಂಧಂತಮಸ್ಸಿನಲ್ಲಿ ಬೀಳಿಸಿದಳು. ವಿಷ್ಣುಭಕ್ತರಾದ ಅರ್ಜುನ ಮೊದಲಾದವರು ಹರಿಪ್ರೀತಿಗಾಗಿ ಆಗಲೇ ಜನಿಸಿದರು.

ವಿ: ೧) ದ್ರೌಪದಿಯು ಸಹ ಮಧ್ವಾವತಾರ ಕಾಲಕ್ಕೆ ಅವತರಿಸಿದ ಉಲ್ಲೇಖ ಇಲ್ಲಿದೆ. ವ್ಯಾಖ್ಯಾನಗಳಿಂದ ತಿಳಿಯುವಂತೆ ಸಂಸ್ಕೃತದಲ್ಲಿ ಅನೇಕ ಗೇಯಕೃತಿಗಳನ್ನು ರಚಿಸಿರುವ ಕಲ್ಯಾಣಿದೇವಿಯೇ ಅವರು. ಬೃಹದಾರಣ್ಯಕೋಪನಿಷದ್ಭಾಷ್ಯದಲ್ಲಿ ಉಲ್ಲೇಖಿಸಲ್ಪಟ್ಟಿರುವ ಚಂದ್ರಾ ಎಂಬ ರೂಪ ಇದೇ ಎಂದು ಕೆಲವರ ಅಭಿಮತ :

ಶಿವಕನ್ಯೇಂದ್ರಸೇನಾ ಚ ದ್ರೌಪದೀ ಕಾಶಿಜಾ ತಥಾ ।
ಚಂದ್ರೇತ್ಯಾದಿಸ್ವರೂಪಾಯಾಃ ..... ॥ – ಪೈಂಗಿಶ್ರುತಿ (ಬೃಹದ್ಭಾಷ್ಯ)

೨) ಅರ್ಜುನಾದಿಗಳೂ ಸಹ ಮಧ್ವಾವತಾರದ ಸಮಯದಲ್ಲೇ ಅವತರಿಸಿ ತಮ್ಮ ಸಾಧನೆಯನ್ನು ವಿಶೇಷರೀತಿಯಲ್ಲಿ ಮಾಡಿದರು ಎಂಬ ಅಂಶವೂ ಇಲ್ಲಿ ಸೂಚಿತ; ಇದು ಶ್ರೀಜಯತೀರ್ಥರು ಇಂದ್ರಾಂಶರು ಎಂಬ ಪ್ರಸಿದ್ಧಿಗೆ ಪೋಷಕವಾಗುವುದು.

೩) ಅರ್ಜುನಾದಿಗಳು ಹಾಗೆ ಜನಿಸಿದ್ದು ಕೃತಯುಗದಲ್ಲಿ ಎಂದು ಕೆಲವು ವ್ಯಾಖ್ಯಾನಕಾರರ ಮತ.

ಬ್ರಹ್ಮನಾಗಿ ಭೀಮ – ಸರಸ್ವತಿಯಾಗಿ ಭಾರತಿ

ಪುನಶ್ಚ ತೇ ಸ್ಥಾನಮವಾಪ್ಯ ಸರ್ವೇ
ಸ್ವೀಯಂ ಪರಾಂತೇ ತು ವಿಮುಕ್ತಿಮಾಪ್ನುಯುಃ ।
ವಾಯುತ್ವಮಾಪ್ತಃ ಸ ಹನೂಮದಂಶೋ
ಬ್ರಾಹ್ಮಂ ಪದಂ ಪ್ರಾಪ್ಯ ವೃಕೋದರಶ್ಚ ।
ವಾಗೀಶ್ವರೀತ್ವಂ ಗತಯೈವ ಕೃಷ್ಣಯಾ
ಸಹೈವ ಮುಕ್ತಿಂ ಗಮಿತಾಽಖಿಲೋತ್ತಮಾಮ್ ॥ ೧೨೭ ॥

ಅ: ಅವರು ಮತ್ತೆ ತಮ್ಮ ಸ್ಥಾನವನ್ನು ಹೊಂದಿ ಪರಕಾಲದ ಕೊನೆಯಲ್ಲಿ ಸಮುಚಿತವಾದ ಮುಕ್ತಿಯನ್ನು ಹೊಂದುವರು. ಹನುಮಂತನ ಅವತಾರನಾದ ಭೀಮಸೇನ ವಾಯುರೂಪದೊಂದಿಗೆ ಐಕ್ಯಹೊಂದಿ ಬ್ರಹ್ಮಪದವಿಯನ್ನು ಪಡೆಯುವನು. ದ್ರೌಪದಿಯು ಸರಸ್ವತಿಪದವಿಯನ್ನು ಹೊಂದುವಳು; ಬಳಿಕ ಅವರಿಬ್ಬರೂ ಉತ್ತಮವಾದ ಮುಕ್ತಿಯನ್ನು ಹೊಂದುವರು.

---

೧೨೭. ವೃಕೋದರಶ್ಚೇತ್ಯತ್ರ ಭೀಮಾಂಶಸ್ಯೈವ ಮಧ್ವತ್ವಾತ್ ನ ಪೃಥಗುಕ್ತಿಃ ॥ – (ವಾ.)

ವಿ : ೧) ವಾಯುದೇವರು ಬ್ರಹ್ಮಪದವಿಯನ್ನು ಹೊಂದಿ ಮುಕ್ತರಾಗುವಂತೆ ಭಾರತೀದೇವಿ ಸರಸ್ವತಿಪದವಿಯನ್ನು ಹೊಂದಿ ಮುಕ್ತರಾಗುವರು ಎಂದರ್ಥ.

೨) ಇಲ್ಲಿ ಪರಾಂತ ಎಂದರೆ ಪರಕಾಲದ ಕೊನೆ. ಪರಕಾಲ ಎಂದರೆ ಬ್ರಹ್ಮದೇವರ ಒಟ್ಟು ಆಯುಷ್ಯ. ಇದರಿಂದ ಪರಾಂತೇ ಎಂಬುದಕ್ಕೆ ಬ್ರಹ್ಮಪ್ರಳಯದಲ್ಲಿ ಎಂದು ಅರ್ಥವಾಗುವುದು.

ವಾಯುಭಾರತಿಯರ ವಿಶೇಷ ಹರಿಸೇವೆ

ಭುವಿ ದ್ಯುಲೋಕೇ ಚ ವಿರಿಂಚತಾಯಾಂ
ಮುಕ್ತೌ ಚ ತಾಭ್ಯಾಮಧಿಕಂ ಸಮಸ್ತಾತ್ ।
ಸಂತೋಷ್ಯತೇ ಪೂರ್ಣಗುಣೋ ರಮೇಶಃ
ಸದೈವ ನಿತ್ಯೋರ್ಜಿತಸದ್ಭಕ್ತಿಭ್ಯಾಮ್ ॥ ೧೨೮ ॥

ಅ: ಭೂಲೋಕದಲ್ಲೂ, ದೇವಲೋಕದಲ್ಲೂ, ಬ್ರಹ್ಮಪದವಿಯಲ್ಲೂ, ಮುಕ್ತಿಯಲ್ಲೂ ವಾಯು ಭಾರತಿಯರು ಎಲ್ಲರಿಗಿಂತ ಮಿಗಿಲಾಗಿ ಗುಣಪೂರ್ಣನಾದ ಲಕ್ಷ್ಮೀಪತಿ ಶ್ರೀಹರಿಯನ್ನು ಸದಾ ಪರಿಪೂರ್ಣವಾದ ಭಕ್ತಿಯಿಂದ ವಿಶೇಷವಾಗಿ ಸಂತೋಷಪಡಿಸುವರು.

ವಿ : ವಾಯು ಭಾರತಿಯರ ಹರಿಸೇವೆಯು ಮೂಲರೂಪ, ಅವತಾರರೂಪಗಳಲ್ಲೂ, ದೇವಲೋಕ, ಭೂಲೋಕಗಳಲ್ಲೂ ಬ್ರಹ್ಮಪದವಿಯಲ್ಲೂ, ಕೊನೆಗೆ ಮುಕ್ತಿಯಲ್ಲೂ ಸಹ ಇತರ ಎಲ್ಲ ದೇವತೆಗಳ ಸೇವೆಗಿಂತ ಅತ್ಯಂತ ಅಧಿಕ ಎಂಬ ವಿಶೇಷಾಂಶ ಇಲ್ಲಿದೆ. ಇತರ ದೇವತೆಗಳು ಸ್ಥಳ, ರೂಪ, ಪದವಿ ಮೊದಲಾದ ವಿವಿಧ ಪ್ರಸಂಗಗಳಲ್ಲಿ ಕಾರಣಾಂತರದಿಂದ ತಮ್ಮ ಯೋಗ್ಯತೆಗೆ ತಕ್ಕ ಸೇವೆಯನ್ನು ಸಹ ಸಲ್ಲಿಸುವಲ್ಲಿ ವಿಫಲರಾಗುವರು. ಅಶ್ವತ್ಥಾಮ, ವಾಲಿ, ಕರ್ಣ ಮೊದಲಾದ ರೂಪಗಳಲ್ಲಿ ರುದ್ರ, ಇಂದ್ರ, ಸೂರ್ಯರು ಹಾಗೆ ಸೇವೆಯಲ್ಲಿ ಲೋಪ ಮಾಡಿದ್ದು ಪ್ರಸಿದ್ಧವೇ ಆಗಿದೆ.

ಉಕ್ತವಿಷಯಕ್ಕೆ ಪ್ರಮಾಣಗಳು

'ಭೂಷನ್ನಯೋಧಿ ಬಭ್ರುಷು ನಮ್ನತೇ'
'ಬಳಿತ್ಥಾ ತದ್ವಪುಷೇ ಧಾಯಿ ದರ್ಶತಮ್' ।
'ತಾಂ ಸು ತೇ ಕೀರ್ತಿಂ ಮಘವನ್ಮಹಿತ್ವೇ'-
ತ್ಯಾದಿಸೂಕ್ತಾನಿ ಚ ತತ್ಪ್ರಮಾಣಮ್ ॥ ೧೨೯ ॥

ಅ: 'ಭೂಷನ್ನಯೋಧಿ ಬಭ್ರುಷು ನಮ್ನತೇ' 'ಬಳಿತ್ಥಾ ತದ್ವಪುಷೇ ಧಾಯಿ ದರ್ಶತಮ್' 'ತಾಂ ಸು ತೇ ಕೀರ್ತಿಂ ಮಘವನ್ಮಹಿತ್ವಾ' - ಇವೇ ಮೊದಲಾದ ಸೂಕ್ತಗಳು ಇದಕ್ಕೆ ಪ್ರಮಾಣವಾಗಿವೆ.

---

೧೫. ತಾಂ ಸು ತೇ ಕೀರ್ತಿಂ ಮಘವನ್ ಮಹಿತ್ವಾ
ಯತ್ ತ್ವಾಭೀತೇ ರೋದಸೀ ಅಹ್ವಯೇತಾಮ್ ।
ಪ್ರಾವೋ ದೇವಾಂ ಅತಿರೋ ದಾಸಮೋಜಃ
ಪ್ರಜಾಯೈತ್ವಸ್ಯೈ ಯದಶಿಕ್ಷ ಇಂದ್ರ ॥ – (ಋಗ್ವೇದ ೧೦/೫೪/೧)

೧೬. ಭೂಷನ್ನಯೋಽಧಿ ಬಭ್ರುಷು ನಮ್ನತೇ ವೃಷೇವ ಪತ್ನೀರಭ್ಯೇತಿ ರೋರುವತ್ ।
ಓಜಾಯಮಾನಸ್ತನ್ವಶ್ಚ ತನ್ವಶ್ಚ ಶುಂಭತೇ ಭೀಮೋ ನ ಶೃಂಗಾ ದವಿಧಾವ ದುರ್ಗೃಭಃ ॥ ಋ.೧/೧೪೦/೬

೧೬. ಭೂಷನ್, ನ, ಯಃ, ಅಧಿ, ಬಭ್ರೌಷು, ನಮ್ನತೇ, ವೃಷಾ, ಇವ, ಪತ್ನೀಃ, ಅಭಿ, ಏತಿ, ರೋರುವತ್, ಓಜಾಯಮಾನಃ, ತನ್ವಃ, ಚ, ಶುಂಭತೇ, ಭೀಮಃ, ನ, ಶೃಂಗಾ, ದವಿಧಾವ, ದುರಃ ಗೃಭಃ, ತಾಂ, ಸು, ತೇ, ಕೀರ್ತಿಂ, ಮಘವನ್, ಮಹಿತ್ವಾ, ಯತ್ವಾ, ಭೀತೇ, ರೋದಸೀ, ಅಹ್ವಯೇತಾಂ, ಪ್ರ, ಆವಃ, ದೇವಾನ್, ಆ, ಅತಿರಃ, ದಾಸಂ, ಓಜಃ, ಪ್ರಜಾಯೈ, ತು, ಅಸ್ಯೈ, ಯತ್, ಅಶಿಕ್ಷಃ, ಇಂದ್ರ ಇತಿ ಪದಚ್ಛೇದಃ। ಅಸ್ಯಾಃ ಶ್ರುತೇರಯಮರ್ಥಃ। ''ಷದಲೃ ವಿಶರಣಗತ್ಯವಸಾದನೇ'' ಷ್ವಿತಿ ಧಾತೋಃ ಭೂಮ್ನಾಂ ಷನ್ ಸನ್ ಗಚ್ಛನ್ ಭೀಮಃ ಗತೇರಪ್ರತಿಹತತ್ವಸೂಚನಾಯ ಷಕಾರಸ್ಯ ನ ಸಕಾರಾದೇಶಃ। ಯಃ ಭೀಮಃ ಅಧಿ = ಅಧಿಕಂ ಬಭ್ರೌಷು ಬಭ್ರೌಃ ಕಪಿಲಪಿಂಗಲ ಇತ್ಯಭಿಧಾನಾತ್ ಕಪಿಲಪಿಂಗಲೇಷು ಗಜತುರಗಾದಿಶತ್ರುಸೈನ್ಯೇಷು। ಉಪಲಕ್ಷಣಂ ಚೈತತ್। ನಾನಾವರ್ಣೇಷು ಚತುರಂಗಸೈನ್ಯೇಷು ನ ನನ್ನತೇ = ನ ಪ್ರಹ್ವೀಭವತಿ। ಸ್ವಯಮೇವ ತಾನ್ ಸರ್ವಾನ್ ಪ್ರಹ್ವೀಕರೋತಿ। ನತು ಸ್ವಯಂ ಕಸ್ಯಾಪಿ ಪ್ರಹ್ವೀಭವತೀತ್ಯರ್ಥಃ। ಅತ ಏವ ಅಶ್ವತ್ಥಾಮ್ನಾ ಪ್ರಯುಕ್ತನಾರಾಯಣಾಸ್ತ್ರಾಪಿ ನ ನಮಶ್ಚಕ್ರೇ। ''ರಯಿಗಯಿಶಬ್ದ'' ಇತಿ ಧಾತೋಃ ರೋರುವತ್ = ಅತಿಶಯೇನ ಧ್ವನಿಂ ಕುರ್ವನ್ ವೃಷೇವ = ವೃಷಭ ಇವ ಪತ್ನೀಃ = ಕಾಲೀದ್ರೌಪದ್ಯಾದಿಪತ್ನೀಃ, ಅಭ್ಯೇತಿ। ಜಿತಮನಸ್ಕತ್ವಾತ್ ಪತ್ನೀಃ ನಾನುಸರತಿ। ಹನುಮದ್ರೂಪವತ್ ಮಧ್ವರೂಪವಚ್ಚ ಸ್ತ್ರೀರಹಿತಶ್ಚ ನೇತಿ ಭಾವಃ। ಯೋ ಭೀಮಃ ಓಜಾಯಮಾನಃ= ಓಂಕಾರವಾಚ್ಯಪರಮಾತ್ಮಜ್ಞಯಾ ಜಾಯಮಾನಃ। ''ವಾಯೋರ್ದಿವ್ಯಾನಿ ರೂಪಾಣಿ ಪದ್ಮತ್ರಯಯುತಾನಿ ಚ'' ಇತಿ ವಚನಾತ್ ತನ್ವಃ= ತನೂಃ। ಶುಂಭತೇ= ಶೋಭಯತಿ। ದುರ್ಗೃಭಃ= ಪರೈರ್ಗೃಹೀತುಮಶಕ್ಯಃ ಛಂದಸಿ ಹಕಾರಸ್ಯ ಭಕಾರಾದೇಶಃ। ಸ ಭೀಮಃ ಶೃಂಗಾ= ಶೃಂಗೌ ''ಸುಪಾಂ ಸುಲು'' ಗಿತಿ ಸೂತ್ರಾತ್ ದ್ವಿವಚನಸ್ಯ ಡಾದೇಶಃ। ಗಿರಿಶೃಂಗೌ ನ= ಇವ ಛಂದಸಿ ನಕಾರಸ್ಯೋಪಮಾರ್ಥೋಽಪ್ಯಸ್ತಿ। ''ಮೃಗಂ ನ ಭೀಮ'' ಇತ್ಯಾದಿಪ್ರಯೋಗದರ್ಶನಾತ್। ಗಿರಿಶೃಂಗೋಪಮೌ ದ್ವೌ ಗಜಾವಿತ್ಯರ್ಥಃ। ದೃಷ್ಟಾಂತೇನ ದಾರ್ಷ್ಟಾಂತಿಕೋಽಪಿ ಸೂಚ್ಯತೇ। ದವಿಧಾವ= ದ್ವಾಭ್ಯಾಂ ಕರಾಭ್ಯಾಂ ಬಹುದೂರಂ ಧಾವಯಾಮಾಸ। ''ದವಿಯಶ್ಚ ಚ ದವಿಷ್ಠಂ ಚ ಸುದೂರ'' ಇತ್ಯಮರಃ। ಅಂತರಿಕ್ಷಂ ಪ್ರತ್ಯುದಕ್ಷಿಪದಿತಿ ಭಾವಃ। ಏತೇನ ಭೀಮಸ್ಯ ಶೌರ್ಯಾತಿಶಯಃ ಅಲಂಪಟತಾ ಬಾಹುಬಲಂ ಚೇತ್ಯೇತಾನಿ ಸೂಚಿತಾನಿ ಭವಂತಿ।

ಬಳಿತ್ಥೇತಿ ಸೂಕ್ತಸ್ಯಾರ್ಥಃ ಪ್ರಾಗೇವೋಕ್ತಃ।

ಹೇ ಮಘವನ್ = ಅನ್ನವನ್ ಬಹ್ವನ್ನಶಕ್ತಿಮನ್ನಿತ್ಯರ್ಥಃ। ಇಂದ್ರ = ಪರಮೈಶ್ವರ್ಯಸಂಪನ್ನ ಭೀಮ ತ್ವಂ ಪ್ರ = ಪ್ರಕರ್ಷೇಣ ಆವಃ = ಅರಕ್ಷಃ ಇತಿ ಯತ್ ದಾಸಂ ''ದೋ ಅವಖಂಡನ'' ಇತಿ ಘಾತೋಃಖಂಡನಶೀಲಂ ಓಜಃ = ಶತ್ರುಸಾಮರ್ಥ್ಯಂ ಆ = ಸಮ್ಯಕ್ ಅತಿರಃ = ತಿರಸ್ಕೃತವಾನಿತಿ ಯತ್ ತ್ವಸ್ಯೈ = ತವ ವಿದ್ಯಮಾನಾಯೈ ಪ್ರಜಾಯೈ ಅಶಿಕ್ಷಃ= ಧರ್ಮಮಶಿಕ್ಷ ಇತಿ ಯತ್ ತಾಂ= ತೇ ಸುಕೀರ್ತಿಂ ತ್ವಾ= ತ್ವಾಂ ಪ್ರತಿ ಭೀತೇ ತವ ಗದಾಪ್ರಹಾರಂ ದೃಷ್ಟ್ವಾ ಭೀತೇ ಇತ್ಯರ್ಥಃ। ರೋದಸೀ= ದ್ಯಾವಾಪೃಥಿವ್ಯೌ ಅಹ್ವಯೇತಾಂ= ಆಹ್ವಯೇತಾಮ್। ಹೇ ಭೀಮೇತ್ಯಾಮಂತ್ರ್ಯ ಅಸುತ್ತಾಮಿತಿ ಯಾವದಿತಿ ॥ – (ವಾ.)

ವಿ : ೧) 'ಭೂಷನ್ನಯೋಧಿ' ಎಂಬುದು ಋಗ್ವೇದದ ಮಂತ್ರ (೧/೧೪೦/೬). 'ಬಳಿತ್ಥಾ ತದ್ವಪುಷೇ ಎಂಬುದು ಪ್ರಾಣಾಗ್ನಿಸೂಕ್ತ ಎಂದು ಪ್ರಸಿದ್ಧವಾಗಿರುವ ಋಗ್ವೇದದ ಬಳಿತ್ಥಾಸೂಕ್ತ. 'ತಾಂ ಸುತೇ ಕೀರ್ತಿ೦' ಎಂಬುದು ಋಗ್ವೇದದ ದಶಮ ಮಂಡಲದ ೫೪ನೆಯ ಸೂಕ್ತ.

೨) ಇವುಗಳಲ್ಲಿ ಬಳಿತ್ಥಾಸೂಕ್ತದ ಅರ್ಥ ೨ನೆಯ ಅಧ್ಯಾಯದಲ್ಲಿ (ಹಾಗೂ ಈ ಸಂಪುಟದ ಪರಿಶಿಷ್ಟದಲ್ಲಿ) ಪೂರ್ಣವಾಗಿ ಕೊಡಲಾಗಿದೆ. ಉಳಿದ ಎರಡು ಮಂತ್ರಗಳ ಅರ್ಥವನ್ನು ಪರಿಶಿಷ್ಟದಲ್ಲಿಕೊಡಲಾಗಿದೆ.

೩) ಇವೇ ಮೊದಲಾದ ವೇದದ ಸೂಕ್ತಗಳಲ್ಲಿ ಶ್ರೀವಾಯುದೇವರ ಮೂಲರೂಪ ಹಾಗೂ ಅವತಾರ ರೂಪಗಳ ಹಿರಿಮೆ ಜೀವಕೋಟಿಯಲ್ಲಿ ಅತ್ಯಂತ ಮಿಗಿಲಾದುದು ಎಂಬ ವಿಷಯ ನಿರೂಪಿತವಾಗಿದೆ. ಆದ್ದರಿಂದ ಇದು ಅತ್ಯಂತ ಸುನಿರ್ಣೀತವಾದ ಮಹಾಪ್ರಮೇಯ ಎಂದರ್ಥ.

ಭೀಷ್ಮರು ತಿಳಿಸಿದ ಭೀಮಾವತಾರ

ಅನ್ಯಾನಿ ವಾಕ್ಯಾನಿ ಚ ವೈದಿಕಾನಿ
ಸಪಂಚರಾತ್ರೋಕ್ತಪುರಾಣಕಾನಿ ।
ಪೃಷ್ಟಶ್ಚ ಭೀಷ್ಮೋ೭ತ್ರ ಯುಧಿಷ್ಠಿರೇಣ
ತನ್ಮೋಕ್ಷಧರ್ಮೇಷ್ವಪಿ ಕಿಂಚಿದಾಹ ॥ ೧೩೦ ॥

ಅ: ಇತರ ವೇದವಚನಗಳು, ಪಂಚರಾತ್ರದ ಮಾತುಗಳು, ಪುರಾಣದ ಮಾತುಗಳು ಈ ವಿಷಯದಲ್ಲಿ ಪ್ರಮಾಣವಾಗಿವೆ. ಯುಧಿಷ್ಠಿರ ಕೇಳಿದಾಗ ಭೀಷ್ಮರು ಮೋಕ್ಷಧರ್ಮಗಳಲ್ಲೂ ಇದರ ಬಗ್ಗೆ ಸ್ವಲ್ಪ ತಿಳಿಸಿರುವರು.

ವಿ : ೧) ವೇದವಚನಗಳಲ್ಲಿಮಾತ್ರವಲ್ಲದೇ ಪಂಚರಾತ್ರ, ಪುರಾಣ ಮೊದಲಾದ ಪೌರುಷೇಯ ಗ್ರಂಥಗಳಲ್ಲೂ ವಾಯುದೇವರ ಅವತಾರತ್ರಯಗಳ ಮಹಿಮೆ ನಿರೂಪಿತವಾಗಿದೆ ಎಂದರ್ಥ. ಅಂತಹ ವಾಕ್ಯಗಳ ಸಂಗ್ರಹವನ್ನು ಶ್ರೀವಾದಿರಾಜರ ಯುಕ್ತಿಮಲ್ಲಿಕಾ, ವೈಶ್ವನಾಥಿ ನಾರಾಯಣಾಚಾರ್ಯರ ಮಧ್ವಮಂತ್ರಾರ್ಥಮಂಜರೀ ಮೊದಲಾದ ಕೃತಿಗಳಲ್ಲಿ ಸೂಕ್ತ ವಿವರಣೆ–ಗಳೊಂದಿಗೆ ಕಾಣಬಹುದು. ಅನೇಕ ಪುರಾಣವಾಕ್ಯಗಳ ಅಂತಹ ಸಂಗ್ರಹವನ್ನು ಮಧ್ವಭೂಷಣ ಮೊದಲಾದ ಕೃತಿಗಳಲ್ಲಿ ನೋಡಬಹುದು.

---

೧೩೦. ಸಪಂಚರಾತ್ರೋಕ್ತಪುರಾಣಕಾನೀತ್ಯತ್ರ ಪಂಚರಾತ್ರವಚನಸಹಿತಾನಿ ಪುರಾಣಕಾನಿ ಯೇಷಾಂ ತಾನಿ ತಥೋಕ್ತಾನಿ। ರಾಜಸತಾಮಸಪುರಾಣಾನಾಂ ವ್ಯಾವೃತ್ತ್ಯರ್ಥಂ ಸಪಂಚರಾತ್ರೋಕ್ತಿಪುರಾಣಕಾನೀತ್ಯುಕ್ತಮ್ – (ವಾ.)

೧೩೦. ನಮ್ಮ ಪ್ರಕಾಶನದ ಸುಮಧ್ವವಿಜಯದ ಪರಿಶಿಷ್ಟದಲ್ಲಿ ಆ ವಾಕ್ಯಗಳನ್ನು ಸಂಗ್ರಹಿಸಿ ಕೊಡಲಾಗಿದೆ.

೨) ಇದರೊಂದಿಗೆ ಶಾಂತಿಪರ್ವದಲ್ಲಿ ಪ್ರಸಂಗವಶಾತ್ ಯುಧಿಷ್ಠಿರ ತಮ್ಮ ಮುಂದಿನ ಸಾಧನೆಯ ಬಗ್ಗೆ ಪ್ರಶ್ನಿಸಿದಾಗ ಭೀಷ್ಮರು ಅವರೆಲ್ಲ ಪುನಃ ಮನುಷ್ಯರಾಗಿ ಜನಿಸಿ ಅಪೂರ್ವ ಸಾಧನೆ ಮಾಡುವ ವಿವರವನ್ನು ನೀಡುವರು. ಆ ವಾಕ್ಯಗಳು ಹೀಗಿವೆ :

ಶುದ್ಧಾಭಿಜನಸಂಪನ್ನಾಃ ಪಾಂಡವಾಃ ಸಂಶಿತವ್ರತಾಃ ।
ವಿಹೃತ್ಯ ದೇವಲೋಕೇಷು ಪುನರ್ಮಾನುಷಮೇಷ್ಯಥ ॥
ಪ್ರಜಾವಿಸರ್ಗಂ ಚ ಸುಖೇನ ಕಾಲೇ ಪ್ರತ್ಯೇತ್ಯ ದೇವೇಷು ಸುಖಾನಿ ಭುಕ್ತ್ವಾ ।
ಸುಖೇನ ಸಂಯಾಸ್ಯಥ ಸಿದ್ಧಸಂಸ್ಥಾಂ ಮಾ ವೋ ಭಯಂ ಭೂದ್ ವಿಮಲಾಃ ಸ್ವರ್ಗೇ ॥
-ಭಾರತೇ । (ಶಾಂತಿ. ೨೮೦/೬೯,೭೦)

ಪಾಂಡವ ಸಂತತಿಯ ರಾಜ್ಯಭಾರ

ಏವಂ ಪ್ರಯಾತೇಷು ಸಕೇಶವೇಷು
ಸ್ವಾನೇವ ಲೋಕಾನ್ ಯದುಪಾಂಡವೇಷು ।
ಪರೀಕ್ಷಿದಾದ್ಯಾಸ್ತು ತದನ್ವಯೋತ್ಥಾ
ವ್ಯಾಸಾನುಶಿಷ್ಟಾಃ ಪೃಥಿವೀಮರಕ್ಷನ್ ॥ ೧೩೧ ॥

ಅ: ಹೀಗೆ ಕೃಷ್ಣ, ಯಾದವರು, ಪಾಂಡವರು ತಮ್ಮ ಲೋಕಗಳಿಗೆ ತೆರಳಿದ ಮೇಲೆ ಅವರ ವಂಶದಲ್ಲಿ ಜನಿಸಿದ ಪರೀಕ್ಷಿತ ಮೊದಲಾದವರು ವೇದವ್ಯಾಸರಿಂದ ಶಿಕ್ಷಿತರಾಗಿ ಭೂಮಿಯನ್ನು ಪಾಲಿಸಿದರು.

ವಿ : ಚಂದ್ರವಂಶದ ಪ್ರಧಾನ ಪುರುಷರಾದ ಯಾದವರ ಹಾಗೂ ಪಾಂಡವರ ಸಂತತಿಯ ರಾಜರು ಭೂಮಿಯನ್ನು ಪಾಲಿಸಿದರು. ಹಾಗೆ ಪಾಂಡವರ ಸಂತತಿ ಭೂಮಿಯನ್ನು ಪಾಲಿಸಿದ್ದು ಕಲಿಯುಗದಲ್ಲಿ ಒಟ್ಟು ಒಂದು ಸಾವಿರ ವರ್ಷಗಳ ಕಾಲ ಎಂಬ ವಿವರ ಈಗಾಗಲೇ ಬಂದಿದೆ (೨೮/೧೭೯).

ಕಲಿಯುಗದಲ್ಲೂ ಉಳಿದುಕೊಂಡ ಧರ್ಮ

ತೈಃ ಕ್ಷೇಮಕಾಂತೈರಿಹ ಭಾರತಾದಿ-
ಶಾಸ್ತ್ರೈಃ ಶೃಣ್ವದ್ಭಿರಶೇಷವಿದ್ಭಿಃ ।
ವ್ಯಾಸಪ್ರಸಾದಾಚ್ಚ ಕಲೌ ಚ ಧರ್ಮೋ
ಜ್ಞಾನಂ ಚ ಸುತ್ರಾತಮಗಾನ್ನ ನಾಶಮ್ ॥ ೧೩೨ ॥

ಅ: ಕ್ಷೇಮಕನ ವರೆಗಿನ ಆ ರಾಜರು ಭಾರತಾದಿ ಶಾಸ್ತ್ರಗಳನ್ನು ಕೇಳುತ್ತ ಎಲ್ಲವನ್ನೂ ಬಲ್ಲವರಾಗಿದ್ದರು. ಅವರು ಚೆನ್ನಾಗಿ ರಕ್ಷಣೆ ಮಾಡಿದ್ದರಿಂದಾಗಿಯೂ, ಶ್ರೀವೇದವ್ಯಾಸರ ಪ್ರಭಾವದಿಂದಾಗಿಯೂ ಕಲಿಯುಗದಲ್ಲಿ ಧರ್ಮ ಮತ್ತು ಜ್ಞಾನಗಳು ನಾಶಹೊಂದಲಿಲ್ಲ.

ವಿ : ಉತ್ತಮ ರಾಜ್ಯಪಾಲನೆಯ ಯಶಸ್ಸು ಪ್ರಧಾನವಾಗಿ ಧರ್ಮ, ಜ್ಞಾನಗಳ ಸಂರಕ್ಷಣೆಯಲ್ಲಿದೆ. ಪಾಂಡವ ಸಂತತಿಯ ಕೊನೆಯ ರಾಜ ಕ್ಷೇಮಕ. ಅಲ್ಲಿಯ ವರೆಗೂ ದಕ್ಷರಾದ ರಾಜರೇ ಭೂಮಿಯನ್ನು ಪಾಲಿಸಿದ್ದರಿಂದಲೂ, ಶ್ರೀವೇದವ್ಯಾಸರ ಉಪದೇಶದ ಬಲದಿಂದಾಗಿಯೂ ಧರ್ಮ, ಜ್ಞಾನಗಳು ಕಲಿಯುಗದಲ್ಲೂ ಸಹ ಉತ್ತಮ ಸ್ಥಿತಿಯಲ್ಲೇ ಉಳಿದು ಬಂದವು ಎಂಬುದು ವಿಶೇಷ.

ಧರ್ಮವಿಪ್ಲವಕ್ಕೆ ತ್ರಿಪುರಾಸುರರ ಅವತಾರ

ಸಂವತ್ಸರಾಣಾಂ ತು ಸಹಸ್ರಕೇ ಗತೇ
ಪ್ರಾಪ್ತೇಷು ವಿದ್ಯಾಮಖಿಲೇಷು ಸತ್ಸು।
ದಗ್ಧಾಃ ಪುರಾ ಯೇ ತ್ರಿಪುರಂ ಘ್ನತೈವ
ರುದ್ರೇಣ ಜಾತಾಃ ಪೃಥಿವೀತಲೇ ತೇ ॥ ೧೩೩ ॥

ಅ: ಕಲಿಯುಗದಲ್ಲಿ ಒಂದು ಸಾವಿರ ವರ್ಷಗಳು ಕಳೆದು ಎಲ್ಲ ಸಜ್ಜನರು ತತ್ತ್ವಜ್ಞಾನವನ್ನು ಪಡೆದುಕೊಂಡರು. ತ್ರಿಪುರರನ್ನು ನಾಶಮಾಡಿದ್ದ ರುದ್ರದೇವರಿಂದ ಬೂದಿಯಾಗಿದ್ದ ತ್ರಿಪುರಾಸುರರು ಭೂಮಿಯಲ್ಲಿ ಜನಿಸಿದರು.

ವಿ : ಒಂದೆಡೆ ಉತ್ತಮ ರಾಜ್ಯಪಾಲನೆಯ ಪ್ರಭಾವದಿಂದಾಗಿ ಸಜ್ಜನರು ಜ್ಞಾನ ಪಡೆಯು-ತ್ತಿದ್ದಂತೆಯೆ, ಅಸುರವೃಂದವೂ ಆ ವೇಳೆಗೆ ಭೂಮಿಯಲ್ಲಿ ಹುಟ್ಟಿತು ಎಂದರ್ಥ.

ಅಸುರರಿಗೂ ತಲುಪಿದ ತತ್ತ್ವವಿದ್ಯೆ

ಅದರ್ಶನಂ ಸರ್ವಮುನೀಂದ್ರವೃಂದೈಃ
ಸಹೈವ ಸಜ್ಞಾನಮಹಾನಿಧಾನೇ।
ವ್ಯಾಸೇ ಪ್ರಯಾತೇಽಪಿ ಸುತತ್ತ್ವವಿದ್ಯಾ
ತತ್ಸಂಪ್ರದಾಯಾದಪಿ ತೈರವಾಪ್ತಾ ॥ ೧೩೪ ॥

---

೧೩೨. ಜ್ಞಾನಂ ಚ ಸುತ್ರಾತಮಿತ್ಯತ್ರ ಕಲಾವಪಿ ಸಹಸ್ರವರ್ಷಪರ್ಯಂತಂ ಪಾಂಡವಸಂತತೇಃ ಸತ್ತ್ವಾನ್ನಾಶಂ ನಾಗಾದಿತಿ ಭಾವಃ। ಅತ ಏವ ಸಂವತ್ಸರಾಣಾಂ ತು ಸಹಸ್ರಕೇ ಗತೇತ್ಯುತ್ತರತ್ರ ವಕ್ಷ್ಯತಿ – (ವಾ.)

ಅ: ಸಕಲ ಮುನಿಶ್ರೇಷ್ಠರ ಸಮೂಹಗಳೊಂದಿಗೆ, ಸಕಲಜ್ಞಾನದ ಮಹಾನಿಧಿಯಾದ ಶ್ರೀವೇದವ್ಯಾಸರು ಕಣ್ಣಿಗೆ ಕಾಣದಾಗಿದ್ದರಿಂದಲೂ ಸಹ ಆ ಅಸುರರೂ ಸಹ ಅವರ ಸಂಪ್ರದಾಯದ ಬಲದಿಂದಾಗಿ ತತ್ತ್ವವಿದ್ಯೆಯನ್ನು ಪಡೆದುಕೊಂಡರು.

ವಿ: ೧) ಪಾಂಡವರ ಸಂತತಿ ಮರೆಯಾಗುವ ವೇಳೆಗೆ ಮುನಿಶ್ರೇಷ್ಠರುಗಳು ಜನಗಳ ಮಧ್ಯೆ ಕಾಣಿಸಿಕೊಳ್ಳುವುದು ನಿಂತಿತು. ಶ್ರೀವೇದವ್ಯಾಸರೂಪದ ದರ್ಶನವೂ ಸಹ ಜನರಿಗೆ ಲಭಿಸದಾಯಿತು. ಆದರೂ ಸಂಪ್ರದಾಯದ ಬಲದಿಂದಾಗಿ ಉಳಿದಿದ್ದ ವಿದ್ಯೆ ಆ ಅಸುರರಿಗೂ ತಲುಪಿತು ಎಂದರ್ಥ.

೨) ಯೋಗ್ಯರೀತಿಯಲ್ಲಿ ಪಾಲಿಸಿದಾಗ ವಿದ್ಯೆಯನ್ನು ಪಡೆಯುವ ಯೋಗ ಸಾಮಾನ್ಯರಿಗೂ ಲಭಿಸುವಂತಾಗುವುದು ಎಂಬ ಪ್ರಮೇಯ ಇಲ್ಲಿ ನಿರೂಪಿತವಾಗಿದೆ. ಆದ್ದರಿಂದ ಯೋಗ್ಯರಿಗೆ ವಿದ್ಯೆ ಲಭಿಸಲಿ ಎಂಬ ಸದುದ್ದೇಶದಿಂದ ತತ್ತ್ವಜ್ಞಾನ ಪ್ರಸಾರ ಕಾರ್ಯವನ್ನು ತಪ್ಪದೆ ಸದಾ ಮಾಡುತ್ತಿರಬೇಕು ಎಂಬ ಸಂದೇಶ ಇದರಿಂದ ಸೂಚಿತ.

ಅಸುರರು ಜ್ಞಾನ ಪಡೆಯಲು ಕಾರಣ

ಉತ್ಸಾದಿತತ್ವಾತ್ ತು ದುರಾಗಮಾನಾಂ
ತತ್ಸಂಪ್ರದಾಯಸ್ಯ ಚ ನಾಶಿತತ್ವಾತ್ ।
ಪ್ರಸಾರಿತತ್ವಾಚ್ಚ ಸದಾಗಮಾನಾಂ
ಪಾಪಾ ಅಪಿ ಜ್ಞಾನಮವಾಪುರೇತತ್ ॥ ೧೩೫ ॥

ಅ: ದುರಾಗಮಗಳೆಲ್ಲ ನಾಶವಾಗಿದ್ದರಿಂದಲೂ, ಅವುಗಳ ಸಂಪ್ರದಾಯವೂ ಮರೆಯಾಗಿದ್ದರಿಂದಲೂ, ಸದಾಗಮಗಳು ಪ್ರಸಾರಗೊಂಡಿದ್ದರಿಂದಲೂ ಪಾಪಿಗಳೂ ಸಹ ತತ್ತ್ವಜ್ಞಾನವನ್ನು ಪಡೆದುಕೊಂಡರು.

ವಿ: ೧) ವ್ಯಾಸ, ಭೀಮರ ನೇತೃತ್ವದಲ್ಲಿ ನಡೆದ ಜ್ಞಾನಕಾರ್ಯದಿಂದಾಗಿ ದುರಾಗಮಗಳು ನಿರ್ಮೂಲವಾಗಿದ್ದವು. ದುರಾಗಮಗಳನ್ನು ಬಲ್ಲವರ ಸಂಪ್ರದಾಯವೂ ನಾಶಹೊಂದಿತ್ತು ಅದರಿಂದಾಗಿ ಪಾಪಿಗಳು ಸಹ ಶುದ್ಧವಾದ ತತ್ತ್ವಜ್ಞಾನವನ್ನು ಪಡೆಯುವಂತಾಯಿತು ಎಂದರ್ಥ. ಸದಾಗಮಗಳು ಪ್ರವರ್ತಿತವಾಗಿದ್ದು ಅದಕ್ಕೆ ಮುಖ್ಯಕಾರಣವಾಯಿತು.

---

೧೩೫. ಏತೇನ ಸಂವತ್ಸರಾಣಾಂ ಸಹಸ್ರಕೇ ಗತ ಇತಿ ಪೂರ್ವಾರ್ಧೋ೯ಸಂಗತ ಇತಿ ದೂಷಣಂ ಪರಾಸ್ತಮ್ ।
ಬುದ್ಧಾವತಾರಂ ಕೃತ್ವೇತ್ಯಾದೇಃ ಶೇಷೇಣ ಸಂಗತೇರುಕ್ತತ್ವಾತ್ ॥ – (ಸ.)

೧೩೫. ಜ್ಞಾನಂ ಚ ಸೂತ್ರಾರ್ಥಮಗಾದಿತಿ ಕ್ವಚಿತ್ ಪಾಠಃ ॥ – (ಜ.)

೨) ಇಲ್ಲಿ ದುರಾಗಮಗಳ ನಾಶ ಎಂದರೆ ಅವುಗಳಲ್ಲಿನ ದುರ್ವಿಚಾರಗಳ ಸಯುಕ್ತಿಕ ನಿರಾಕರಣೆ ಎಂದರ್ಥ. ಸದಾಗಮಗಳ ಪ್ರಸಾರವೆಂದರೆ ಶಬ್ದತಃ ಗ್ರಂಥದ ಸಂರಕ್ಷಣೆ ಎಂದೂ, ಪಾಠಪ್ರವಚನಗಳ ಮೂಲಕ ಅವುಗಳ ಅರ್ಥಪ್ರಸಾರವೆಂದೂ ತಿಳಿಯಬೇಕು.

ಶುನಾ ಪುರೋಡಾಶಮಿವಾವಲೀಢಂ
ವೇದಶ್ರುತಿಂ ವಾಽಂತ್ಯಜನೈರವಾಪ್ತಾಮ್ ।
ಅನಂತದುಃಖಾಪ್ತಿಸುಯೋಗ್ಯದೈತ್ಯೈ-
ರ್ವಿದ್ಯಾಮವಾಪ್ತಾಂ ತು ನ ಸೇಹಿರೇ ಸುರಾಃ ॥ ೧೩೬ ॥

ಅ: ನಾಯಿ ಪುರೋಡಾಶಕ್ಕೆ ಬಾಯಿ ಹಾಕುವಂತೆ, ಅಂತ್ಯಜರು ವೇದಶ್ರವಣ ಪಡೆಯುವಂತೆ, ಕೊನೆಯಿರದ ದುಃಖಕ್ಕೆ ಅತ್ಯಂತ ಯೋಗ್ಯರಾದ ದೈತ್ಯರು ತತ್ತ್ವವಿದ್ಯೆಯನ್ನು ಪಡೆದುದನ್ನು ದೇವತೆಗಳು ಸಹಿಸದಾದರು.

ವಿ : ಪುರೋಡಾಶವೆಂದರೆ ಹವಿಸ್ಸು, ಅದಕ್ಕೆ ನಾಯಿ ಬಾಯಿ ಹಾಕಿದಂತೆ ಅನರ್ಹರು ತತ್ತ್ವಜ್ಞಾನವನ್ನು ಪಡೆದ ಸನ್ನಿವೇಶ ಆಯಿತು ಎಂದರ್ಥ. ಅಪೂರ್ವ ಶಸ್ತ್ರಾಸ್ತ್ರಗಳನ್ನು ಲೋಕಕಂಟಕರಾದ ಜನ ತಮ್ಮ ವಶಕ್ಕೆ ಪಡೆದುಕೊಂಡರೆ ಹೇಗೆ ಅದು ಸಮಾಜಕ್ಕೆ ಹಾನಿಕರವೋ ಅಯೋಗ್ಯರು ಪಡೆಯುವ ತತ್ತ್ವಜ್ಞಾನವೂ ಸಹ ಹಾಗೆಯೇ ಹಾನಿಕರ ಎಂಬುದು ಶಾಸ್ತ್ರಗಳ ನಿರೂಪಣೆ.

ಜ್ಞಾನವಿರುವವರಿಗೆ ತಮಸ್ಸು ಆಗದು

ನಾವಾಗ್ಗತಿಃ ಕ್ವಾಪಿ ಸುವೇದಿನಾಂ ಭವೇತ್
ಪ್ರಾಪ್ಯಂ ಸುಖಂ ನಿತ್ಯಮವಶ್ಯಮೇಭಿಃ ।
ಪ್ರಾಪ್ಯಂ ತಮೋಽಂಧಂ ತ್ವಸುರೈರ್ನ ಮುಕ್ತಿಃ
ಕದಾಚಿದಾಪ್ಯೇತದಚಿಂತಯನ್ ಸುರಾಃ ॥ ೧೩೭ ॥

ಅ: ತತ್ತ್ವ ತಿಳಿದವರಿಗೆ ಅಧೋಗತಿ ಎಲ್ಲೂ ಆಗುವಂತಿಲ್ಲ. ಅವರು ನಿತ್ಯಸುಖವನ್ನು ಅವಶ್ಯ ಪಡೆಯಲೇಬೇಕಾಗುವುದು. ಆದರೆ ಅಸುರರಿಗೆ ಲಭಿಸಬೇಕಾದದ್ದು ಅಂಧಂತಮಸ್ಸೇ ಹೊರತು ಮುಕ್ತಿಯಲ್ಲ. ಆದ್ದರಿಂದ ದೇವತೆಗಳು ಆಲೋಚಿಸಿದರು.

ವಿ : ಈಗಾಗಲೇ ಹನ್ನೊಂದನೆಯ ಅಧ್ಯಾಯದ ಕೊನೆಯಲ್ಲಿ ನಿರೂಪಿತವಾಗಿರುವಂತೆ ತತ್ತ್ವಜ್ಞಾನ ಯಾವುದೇ ಹಿನ್ನೆಲೆಯಲ್ಲಿ ಬಂದಿದ್ದರೂ ಅದಕ್ಕೆ ಒಂದು ಬಗೆಯ ಸತ್ಫಲ ಅನಿವಾರ್ಯ(೧೧/೨೦೭,

೨೦೮). ಆದರೆ ಅಂತಹ ಸತ್ಫಲವನ್ನು ಪಡೆಯುವ ಅರ್ಹತೆ ಅಯೋಗ್ಯರಿಗೆ ಇರುವುದಿಲ್ಲ, ಅದನ್ನು ತಪ್ಪಿಸುವ ಉಪಾಯದ ಬಗ್ಗೆ ದೇವತೆಗಳು ಯೋಚಿಸಿದರು ಎಂದರ್ಥ.

ದೇವತೆಗಳ ವಿಶಿಷ್ಟಕಾರ್ಯವೈಖರಿ

ಜ್ಞಾನಪ್ರದಾನಾಯ ಸತಾಂ ತದನ್ಯ-
ಜ್ಞಾನಪ್ರಣಾಶಾಯ ಚ ವಿಷ್ಣುನೈತೇ ।
ಕ್ಲೃಪ್ತಾಸ್ತತಸ್ತೇ ಸವಿರಿಂಚಶರ್ವಾ
ವಿಜ್ಞಾಪಯಾಮಾಸುರುಪೇತ್ಯ ವಿಷ್ಣುಮ್ ॥ ೧೩೮ ॥

ಅ: ಸಜ್ಜನರಿಗೆ ಜ್ಞಾನ ನೀಡಲು, ಇತರರಿಗೆ ಜ್ಞಾನ ಕಳೆಯಲು ಶ್ರೀಹರಿಯಿಂದ ದೇವತೆಗಳು ನೇಮಿತರಾಗಿರುವರು. ಆದ್ದರಿಂದ ಬ್ರಹ್ಮ ರುದ್ರಾದಿ ದೇವತೆಗಳು ವಿಷ್ಣುವಿನ ಬಳಿಗೆ ತೆರಳಿ ವಿಜ್ಞಾಪಿಸಿಕೊಂಡರು.

ವಿ: ದೇವತೆಗಳ ವಿಶಿಷ್ಟಕಾರ್ಯದ ಬಗ್ಗೆ ಇಲ್ಲಿ ಉಲ್ಲೇಖವಿದೆ. ಸಜ್ಜನರಿಗೆ ಜ್ಞಾನಪ್ರಾಪ್ತಿ ಅಸಜ್ಜನರಿಗೆ ಮಿಥ್ಯಾಜ್ಞಾನಪ್ರಾಪ್ತಿ ಆಗುವಂತೆ ಯೋಜಿಸುವುದು ದೇವತೆಗಳ ವಿಶೇಷ ಕರ್ತವ್ಯ. ಅದಕ್ಕೆಂದೇ ಅವರು ಅಂತಹ ವಿಶೇಷ ಪ್ರಸಂಗಗಳಲ್ಲಿ ಯೋಗ್ಯರಿಗೆ ಜ್ಞಾನ ನೀಡಲೆಂದು, ಅದರಂತೆ ಅಸುರರಿಗೆ ಮಿಥ್ಯಾಜ್ಞಾನ ನೀಡಲೆಂದು ಶ್ರೀಹರಿಯನ್ನು ಪ್ರಾರ್ಥಿಸಿಕೊಂಡರು; ಪುರಾಣಗಳಲ್ಲಿ ಇಂತಹ ಪ್ರಸಂಗಗಳು ಅನೇಕಬಾರಿ ಬಂದಿರುವುದರ ಹಿನ್ನೆಲೆ ಇದರಿಂದ ತಿಳಿಯುವುದು.

ಬ್ರಹ್ಮಾದಿಗಳು ಮಾಡಿದ ಶ್ರೀಹರಿಯ ಪ್ರಾರ್ಥನೆ

ಕ್ಷೀರೋದಧೇರುತ್ತರತೀರನಿಷ್ಠಿತೈ-
ರಭಿಷ್ಟುತಃ ಸುಷ್ಠುತಿಭಿಃ ಪುರುಷ್ಟುತಃ ।
ಪ್ರದಾಯ ತೇಷಾಮಭಯಂ ರಮಾಪತಿಃ
ಕ್ಷಣಾದಭೂಚ್ಚಾರುತಮಾಕೃತಿಃ ಶಿಶುಃ ॥ ೧೩೯ ॥

---

೧೩೮. 'ಜ್ಞಾನದಾನಂ ತು ದೇವಾನಾಂ ಫಲದಾನಂ ಚ ಕರ್ಮಣಾಮ್ ।
ವಿಷ್ಣುನಾ ವಿಹಿತಂ ಪೂರ್ವಂ ಪುನರ್ದೇವನರಾಸುರಾಃ । - ಬೃಹದಾರಣ್ಯಕೋಪನಿಷದ್ಭಾಷ್ಯೇ

ಜ್ಞಾನದಾನಮೇವ ದೇವಾನಾಂ ವಿಹಿತಂ ..... । (ಶ್ರುತಿಃ) - ಇತಿ ನ್ಯಾಯವಿವರಣೇ

ಅ: ಕ್ಷೀರಸಮುದ್ರದ ಉತ್ತರ ತೀರದಲ್ಲಿ ಸೇರಿದ ಅವರು ಉತ್ತಮ ಸ್ತುತಿಗಳಿಂದ ಸ್ತುತಿಸಿದಾಗ ಶ್ರೀಹರಿ ಅವರಿಗೆ ಅಭಯ ನೀಡಿದ. ಕ್ಷಣದಲ್ಲೇ ಅತ್ಯಂತ ಸುಂದರವಾದ ಆಕೃತಿಯ ಮಗುವಿನ ರೂಪವನ್ನು ಧರಿಸಿದ.

ವಿ: ಹಿಂದಿನಂತೆ (೧೦/೧) ದೇವತೆಗಳು ಕ್ಷೀರಸಾಗರದ ಉತ್ತರ ತೀರದಲ್ಲಿ ಹರಿಯನ್ನು ಪ್ರಾರ್ಥಿಸಿದಾಗ ಅವನು ಕೂಡಲೇ ಒಂದು ಸುಂದರ ಶಿಶುವಿನ ರೂಪವನ್ನು ತಳೆದು ಅವರ ಅಭೀಷ್ಟವನ್ನು ಪೂರೈಸಲು ತೊಡಗಿದ ಎಂದರ್ಥ. ಅಂದು ಜ್ಞಾನದಾನಕ್ಕಾಗಿ ಶ್ರೀವ್ಯಾಸರೂಪವನ್ನು ಪ್ರಕಟಿಸಿದರೆ, ಇಂದು ಅಸುರರ ಜ್ಞಾನನಾಶಕ್ಕಾಗಿ ಬುದ್ಧರೂಪವನ್ನು ತೋರಿದ.

ಶುದ್ಧೋದನನಾಗಿ ತ್ರಿಪುರಾಸುರ - ಗಯೆಯಲ್ಲಿ ಬುದ್ಧಾವತಾರ

ಯಸ್ತ್ರೈಪುರಾಣಾಂ ಪ್ರಥಮೋಽತ್ರ ಜಾತಃ
ಶುದ್ಧೋದನೇತ್ಯೇವ ಜನೇತಿ ಚೋಕ್ತಃ ।
ಕ್ಷೇತ್ರೇ ಗಯಾಖ್ಯೇಽಸ್ಯ ಶಿಶುಂ ಪ್ರಜಾತಂ
ಸಂಪ್ರಾಸ್ಯ ದೂರೇಽತ್ರ ಬಭೂವ ವಿಷ್ಣುಃ ॥ ೧೪೦ ॥

ಅ: ತ್ರಿಪುರಾಸುರರಲ್ಲಿ ಮೊದಲನೆಯವನು ಭೂಮಿಯಲ್ಲಿ ಜನಿಸಿ ಶುದ್ಧೋದನನೆಂದು, ಜಿನನೆಂದು ಕರೆಯಲ್ಪಡುತ್ತಿದ್ದ. ಅವನಿಗೆ ಗಯಾಕ್ಷೇತ್ರದಲ್ಲಿ ಆಗ ತಾನೇ ಜನಿಸಿದ ಮಗುವನ್ನು ದೂರಕ್ಕೆಸೆದು ಶಿಶುರೂಪದ ಶ್ರೀಹರಿ ತಾನು ಅಲ್ಲಿ ಮಲಗಿದ.

---

೧೪೦. ಕ್ಷೇತ್ರೇ ಗಯಾಖ್ಯೇಽಸ್ಯ ಶಿಶುಂ ಪ್ರಜಾತಮಿತ್ಯತ್ರ-

'ತತಃ ಕಲೌ ಸಂಪ್ರವೃತ್ತೇ ಸಮ್ಮೋಹಾಯ ಸುರದ್ವಿಷಾಮ್।
ಬುದ್ಧೋ ನಾಮ್ನಾ ಜನಸುತಃ ಕೀಕಟೇಷು ಭವಿಷ್ಯತಿ'

ಇತಿ (೧/೩/೨೪) ಭಾಗವತವಚನಾತ್ ಜನಸುತತಯಾಽಸ್ಯೈಕವಾರಂ ಬುದ್ಧಾವತಾರೋಽಸ್ತಿ।

'ದೇವದ್ವಿಷಾಂ ನಿಗಮವರ್ತ್ಮನಿ ವಿಪ್ಲುತಾನಾಂ ಪೂರ್ಭರ್ಮಯೇನ ಸಹತಾಭಿರದೃಶ್ಯಮೂರ್ತಿಃ।
ಲೋಕಾನ್ ಘ್ನತಾ ಮತಿವಿಮೋಹಮತಿಪ್ರಲೋಭಂ ವೇಷಂ ವಿಧಾಯ ಯದಭಾಷತ ಔಪಧರ್ಮ್ಯಮ್ ॥'

– ಇತಿ (೨/೭/೩೭) ದ್ವಿತೀಯಸ್ಕಂಧವಚನಾತ್ ತ್ರೈಪುರಸ್ತ್ರೀಣಾಮೌಪಧರ್ಮ್ಯಂ ಉಪಪತಿಗರ್ಹ್ಯ ಇತಿ ಪ್ರಮೇಯಸಂಬಂಧಿಧರ್ಮಂ ಭಾಷಿತುಮಪ್ಯೇಕವಾರಂ ಬುದ್ಧಾವತಾರೋಽಸ್ತೀತಿ ಜ್ಞೇಯಮ್ – (ವಾ.)

೧೪೦. ಕ್ಷೇತ್ರೇ ಭಾರ್ಯಾಯಾಂ ಗಯಾಖ್ಯಕ್ಷೇತ್ರವಿಶೇಷೇ ವಾ ... । - (ಜ.)

೧೪೦. ಮೋಹನಾರ್ಥಂ ದಾನವಾನಾಂ ಬಾಲರೂಪೀ ಪಥಿ ಸ್ಥಿತಃ ।
ಪುತ್ರಂ ತಂ ಕಲ್ಪಯಾಮಾಸ ಮೂಢಬುದ್ಧಿರ್ಜಿನಃ ಸ್ವಯಮ್ ॥
ತತಃ ಸಮ್ಮೋಹಯಾಮಾಸ ಜಿನಾದ್ಯಾನಸುರಾಂಶಕಾನ್ ।
ಭಗವಾನ್ ವಾಗ್ಭಿರುಗ್ರಾಭಿರಹಿಂಸಾವಾಚಿಭಿರ್ಹರಿಃ ॥ - ಇತಿ ಬ್ರಹ್ಮಾಂಡೇ (ಭಾ. ತಾ. ೧/೩/೨೪)

ವಿ : ೧) ಬುದ್ಧಾವತಾರ ಶ್ರೀಹರಿಯ ದಶಾವತಾರದಲ್ಲಿ ಒಂಭತ್ತನೆಯ ಅವತಾರ. ಅದು ನಡೆದದ್ದು ಎರಡು ಸಲ. ಮೊದಲನೆಯ ರೂಪದಿಂದ ತ್ರಿಪುರಾಸುರರ ಪತ್ನಿಯರ ಪಾತಿವ್ರತ್ಯವನ್ನು ಭಂಗಗೊಳಿಸಿ ಆ ಅಸುರರ ನಾಶಕ್ಕೆ ಕಾರಣನಾಗಿದ್ದ:

'ದೇವದ್ವಿಷಾಂ ನಿಗಮವರ್ತ್ಮನಿ ವಿಷ್ಠಿತಾನಾಂ
ಪೂರ್ಭಿರ್ಮಯೇನ ಸಹಿತಾಭಿರದೃಶ್ಯಮೂರ್ತಿಃ ।
ಲೋಕಾನ್ ಹ್ಲತಾ ಮತಿವಿಮೋಹಮತಿಪ್ರಲೋಭಂ
ವೇಷಂ ವಿಧಾಯ ಯದಭಾಷತ ಔಪಧರ್ಮ್ಯಮ್ ॥' – ಭಾಗವತ (೨/೭/೩೭)

ಎರಡನೆಯದು ಈ ರೂಪ ಎಂಬ ವಿಶೇಷ ವಿವರಗಳು ವಾದಿರಾಜೀಯದಲ್ಲಿದೆ.

೨) ಬುದ್ಧಾವತಾರವಾದ ಸ್ಥಳ ಸುಪ್ರಸಿದ್ಧವಾದ ಗಯಾಕ್ಷೇತ್ರ.

ಬುದ್ಧರೂಪದ ವೈಭವ

ಅಜಾನಮಾನಾಃ ಸ್ವಶಿಶುಂ ಗತಂ ತಂ
ಶಿಶುಂ ಹರಿಂ ವೀಕ್ಷ್ಯ ನಿಜಂ ಸ್ಮ ಮೇನಿರೇ ।
ತೇಷಾಂ ತದಾ ವೈದಿಕಕರ್ಮ ವೀಕ್ಷ್ಯ
ಸಂಪ್ರಾಹಸತ್ ತದ್ವಪುಷೈವ ಕೇಶವಃ ॥ ೧೪೧ ॥

ಅ: ತಮ್ಮ ಮಗು ದೂರ ಬಿಸಾಡಲ್ಪಟ್ಟದ್ದನ್ನು ಅರಿಯದ ಅವರೆಲ್ಲ ಆ ಶಿಶುರೂಪದ ಹರಿಯನ್ನೇ ತಮ್ಮ ಮಗುವೆಂದು ಭ್ರಮಿಸಿದರು. ಆಗ ಅವರ ವೈದಿಕಕ್ರಮವನ್ನು ಕಂಡು ಶ್ರೀಹರಿಯು ಆ ರೂಪದಿಂದಲೇ ಜೋರಾಗಿ ನಕ್ಕ.

ವಿ : ಹುಟ್ಟಿದ ಮಗುವಿಗೆ ವೇದೋಕ್ತಕ್ರಮದಲ್ಲಿ ಅವರು ಸಂಸ್ಕಾರ ಮಾಡತೊಡಗಿದಾಗ ಅವರನ್ನು ಆ ಕಾರ್ಯ ತೊರೆಯುವಂತೆ ಮಾಡಲೆಂದು ಶಿಶುರೂಪದ ಶ್ರೀಹರಿ ಅವರನ್ನು ಅಪಹಾಸ್ಯ ಮಾಡುವಂತೆ ನಕ್ಕ ಎಂದರ್ಥ.

ಶಿಶುವಾಗಿ ದೇವವೃಂದವನ್ನು ಗೆದ್ದ ಬುದ್ಧ

ತಂ ಜಾತಮಾತ್ರಂ ಪ್ರಹಸಂತಮೀಕ್ಷ್ಯ
ಸುವಿಸ್ಮಿತೈಃ ಪೃಷ್ಟ ಉವಾಚ ವಿಷ್ಣುಃ ।
ಬುದ್ಧೋಽಹಮಿತ್ಯೇವ ಸುನಿತ್ಯಬೋಧಾ-
ಜ್ಜಗಾದ ಚೈಷಾಮಥ ಬುದ್ಧದರ್ಶನಮ್ ॥ ೧೪೨ ॥

ಅ: ಜನಿಸಿದೊಡನೆಯೇ ಹಾಗೆ ಮಗು ಗಹಗಹಿಸುತ್ತಿದ್ದುದನ್ನು ಕಂಡು ಬಹಳವಾಗಿ ಆಶ್ಚರ್ಯಪಟ್ಟ ಅವರು ಕೇಳಿದಾಗ ಶ್ರೀಹರಿ ತಿಳಿಸಿದ : 'ನಾನು ಬುದ್ಧ'. ಪರಿಪೂರ್ಣವಾದ ನಿತ್ಯಜ್ಞಾನಸ್ವರೂಪನಾದ ಅವನು ಹಾಗೆ ಹೇಳಿ ಅವರಿಗೆ ಬುದ್ಧದರ್ಶನವನ್ನು ತಿಳಿಸಿದ.

ಸಕಲ ದೇವತೆಗಳ ಪರಾಭವ

ತಥಾऽಪ್ಯವಿಶ್ವಾಸಮವೇಕ್ಷ್ಯ ತೇಷಾಂ
ಸಸ್ಮಾರ ದೇವಾನಖಿಲಾನ್ ಜನಾರ್ದನಃ।
ವಿಜ್ಞಾಯ ತೇ ತಸ್ಯ ಮನೋಗತಂ ನಿಜಾನ್
ಪ್ರಚಿಕ್ಷಿಪುರ್ಹೇತಿಗಣಾನಮುಷ್ಮಿನ್ ॥ ೧೪೩ ॥

ಅ: ಆದರೂ ಅವರಿಗೆ ತನ್ನಲ್ಲಿ ವಿಶ್ವಾಸ ಮೂಡದಿದ್ದುದನ್ನು ಕಂಡು ಬುದ್ಧರೂಪದ ಶ್ರೀಹರಿ ಸಕಲ ದೇವತೆಗಳನ್ನು ಯುದ್ಧ ಮಾಡಲು ಬರುವಂತೆ ಸ್ಮರಿಸಿದ. ಅವರು ಅವನ ಭಾವವನ್ನು ಅರಿತು ತಮ್ಮ ಆಯುಧಗಳ ಸಮೂಹವನ್ನು ಅವನ ಮೇಲೆ ಎಸೆದರು.

ವಿ : ೧) ಬುದ್ಧರೂಪದ ಶ್ರೀಹರಿ ಹಾಗೆ ಹೇಳಿ ಬುದ್ಧದರ್ಶನವನ್ನು ಉಪದೇಶಿಸಿದರೂ ಶುದ್ಧೋದನಾದಿಗಳು ಅದನ್ನು ನಂಬಲಿಲ್ಲ. ಅದಕ್ಕೆ ಮೇಲೆ ಹೇಳಿದಂತೆ ಸ್ಫುಟವಾದ ತತ್ತ್ವಜ್ಞಾನದ ಪ್ರಸಾರದಿಂದಾಗಿ ಅವರಲ್ಲಿ ಹುಟ್ಟಿದ್ದ ಒಂದು ಬಗೆಯ ಜ್ಞಾನ ಕಾರಣವಾಗಿತ್ತು.

೨) ಅವರಲ್ಲಿ ನಂಬಿಕೆ ಹುಟ್ಟಿಸಲೆಂದು ಶ್ರೀಹರಿ ತನ್ನ ಸರ್ವೋತ್ತಮತ್ವವನ್ನು ನಿರೂಪಿಸಲೆಂದು ಸಕಲ ದೇವತೆಗಳನ್ನೂ ಅಲ್ಲಿಗೆ ಕರೆದ. ಅವನ ಮನೋಗತ ತಿಳಿದ ದೇವತೆಗಳು ಅಲ್ಲಿಗೆ ಧಾವಿಸಿ ತಮ್ಮ ಆಯುಧಗಳನ್ನು ಅವನ ಮೇಲೆ ಪ್ರಯೋಗಿಸಿದರು ಎಂದರ್ಥ.

ಶಿವಾದಿಗಳೂ ಪರಾಭವಗೊಂಡರು

ಸ ಜಾತಮಾತ್ರಃ ಶಿವಪೂರ್ವಕಾಣಾಂ
ಶೂಲಾದಿಹೇತೀರಖಿಲಾ ನಿಗೀರ್ಯ।
ದೈತ್ಯಾತಿಮೋಹಾಯ ನಿಜಂ ಚ ಚಕ್ರಂ
ಸ್ವಮುಕ್ತಮಾಶ್ವೇವ ವಶೀ ಸಮಗ್ರಹೀತ್ ॥ ೧೪೪ ॥

---

೧೪೪. ಶೂಲಾದಿಹೇತೀಃ ತ್ರಿಶೂಲಾದ್ಯಾಯುಧಾನಿ ...। - (ಜ.)

ಅ: ಆಗ ತಾನೇ ಹುಟ್ಟಿದ್ದ ಶಿಶುರೂಪದ ಶ್ರೀಹರಿ ಶಿವ ಮೊದಲಾದವರ ತ್ರಿಶೂಲ ಮೊದಲಾದ ಆಯುಧಗಳನ್ನೆಲ್ಲ ನುಂಗಿಹಾಕಿದ. ಅಸುರರನ್ನು ಬಹಳವಾಗಿ ಮರುಳು-ಗೊಳಿಸಲೆಂದು ತಾನು ವಿಷ್ಣುರೂಪದಿಂದ ಪ್ರಯೋಗಿಸಿದ ಚಕ್ರವನ್ನು ಸಹ ಕೂಡಲೇ ಕೈಯಲ್ಲಿ ಹಿಡಿದುಕೊಂಡ.

ವಿ: ೧) ಇದರಿಂದ ಹಾಗೆ ಬಂದ ದೇವತೆಗಳಲ್ಲಿ ಸ್ವತಃ ಮೂಲರೂಪದ ವಿಷ್ಣುವೂ ಇದ್ದ ಎಂದಾಗುವುದು. ಇತರರು ತಮ್ಮ ಆಯುಧಗಳನ್ನು ಪ್ರಯೋಗಿಸಿದಂತೆ ವಿಷ್ಣುವೂ ತನ್ನ ಚಕ್ರವನ್ನು ಪ್ರಯೋಗಿಸಿದ. ಸ್ವತಃ ವಿಷ್ಣುವೇ ಆದ ಬುದ್ಧ ಅದನ್ನೂ ಸಹ ಕೈಯಲ್ಲಿ ಹಿಡಿದುಕೊಂಡ.

೨) ಹಾಗೆ ಸಕಲ ದೇವತೆಗಳೊಂದಿಗೆ ವಿಷ್ಣುವೂ ಪರಾಭವಗೊಂಡ ಎಂಬ ಭ್ರಮೆ ಅಸುರರಿಗೆ ಹುಟ್ಟುವಂತಾಯಿತು ಎಂದರ್ಥ.

ಚಕ್ರಾಸನನಾಗಿ ಬುದ್ಧ

ತದಾಸನತ್ವೇನ ವಿಧಾಯ ತಸ್ಮಿನ್
ಸಮಾಸ್ಥಿತಂ ದೇವಗಣಾಃ ಪ್ರಣಮ್ಯ ।
ಜಗ್ಮುಃ ಸ್ವಧಾಮಾನಿ ವಚಾಂಸಿ ಚಾಸ್ಯ
ಸ್ವೀಚಕ್ರುರಾಶ್ವೇವ ಜಿನಾದಿದೈತ್ಯಾಃ ॥ ೧೪೫ ॥

ಅ: ಶ್ರೀಹರಿ ಆ ಚಕ್ರವನ್ನು ತನಗೆ ಆಸನವನ್ನಾಗಿ ಮಾಡಿಕೊಂಡು ಅದರ ಮೇಲೆ ಕುಳಿತ. ಅವನಿಗೆ ದೇವತೆಗಳ ಗುಂಪುಗಳು ನಮಸ್ಕರಿಸಿ ತಮ್ಮ ಲೋಕಗಳಿಗೆ ತೆರಳಿದವು. ಜಿನ ಮೊದಲಾದ ದೈತ್ಯರು ಕೂಡಲೆ ಅವನ ಮಾತುಗಳನ್ನು ಸ್ವೀಕರಿಸಿದರು.

ವಿ: ೧) ಹೀಗೆ ಆ ಮಗು ಎಲ್ಲ ದೇವತೆಗಳಿಗಿಂತಲೂ ಮಿಗಿಲಾದವನು, ಸರ್ವೋತ್ತಮ ಎಂಬುದನ್ನು ಗಮನಿಸಿದ ಅವರು ಆತನ ಮಾತನ್ನು ಸಂಪೂರ್ಣವಾಗಿ ಒಪ್ಪಲು ಸಿದ್ಧರಾದರು ಎಂದರ್ಥ.

೨) ವಿಷ್ಣುಸರ್ವೋತ್ತಮತ್ವವೇ ಅಲ್ಲೂ ಸಹ ಸಿದ್ಧವಾದದ್ದು ವಿಶೇಷ. ಆದರೆ ಆ ಬುದ್ಧನನ್ನು ವಿಷ್ಣುವಿಗಿಂತ ಮಿಗಿಲಾದ ಮತ್ತೊಬ್ಬ ದೇವತೆ ಎಂದು ಭ್ರಮಿಸಿದ್ದು ಮಾತ್ರ ಅವರ ಮಹಾ ಪಾತಕವಾಯಿತು ಎಂಬುದು ಮತ್ತೊಂದು ವಿಶೇಷ.

ಬುದ್ಧನ ಉಪದೇಶ

ತೇ ಜ್ಞಾನಧರ್ಮಾವಪಹಾಯ ಪಾಪಾ
ವಿಮೋಹಿತಾ ದೇವವರೇಣ ಸರ್ವೇ ।
ಜಗ್ಮುಸ್ತಮೋಽಂಧಂ ಕ್ಷಣಿಕಂ ಸಮಸ್ತಂ
ಜ್ಞಾನಂ ನ ಸಚ್ಚೇತಿ ದೃಢಂ ಸ್ಮರಂತಃ ॥ ೧೪೬ ॥

ಅ: ಆ ಪಾಪಿಗಳೆಲ್ಲರು ದೇವೋತ್ತಮನಾದ ಶ್ರೀಹರಿಯಿಂದ ಬಹಳವಾಗಿ ಮೋಹಿತರಾಗಿ ಜ್ಞಾನ, ಧರ್ಮಗಳನ್ನು ತೊರೆದು ಸಕಲವನ್ನೂ ಕ್ಷಣಿಕ, ಸತ್ಯವಲ್ಲ ಎಂದು ದೃಢವಾಗಿ ತಿಳಿದು ಅಂಧಂತಮಸ್ಸಿಗೆ ತೆರಳಿದರು.

ವಿ : ಆಗ ಬುದ್ಧ ಉಪದೇಶಿಸಿದ ಕ್ಷಣಿಕತ್ವವಾದ, ಶೂನ್ಯವಾದಗಳನ್ನೇ ಪರತತ್ತ್ವವೆಂದು ಭಾವಿಸಿ ಆ ವರೆಗೂ ನಂಬಿದ್ದ ವೈದಿಕ ಧರ್ಮ, ಜ್ಞಾನಗಳನ್ನು ತೊರೆದು ಅಸದುಪಾಸನೆಗೆ ತೊಡಗಿದ ಆ ಅಸುರರು ಅಂಧಂತಮಸ್ಸಿಗೆ ತೆರಳಿದರು ಎಂದರ್ಥ.

ಸುರವೃಂದಕ್ಕೆ ತಾರಕವಾದ ಬುದ್ಧದರ್ಶನ

ನಾರಾಯಣಃ ಪ್ರಾಪ್ಯ ಸುರೇಂದ್ರವೃಂದಂ
ವೃತ್ತಂ ಚ ತೇಷಾಮಖಿಲಂ ನಿಗದ್ಯ ।
ಪೃಷ್ಟಶ್ಚ ತೈರಾಹ ನಿಜಂ ಹೃದಿಸ್ಥಂ
ಬೌದ್ಧಾಗಮಾರ್ಥಂ ಸೃತಿಬಂಧಮೋಚನಮ್ ॥ ೧೪೭ ॥

ಅ: ಬುದ್ಧರೂಪದ ನಾರಾಯಣ ದೇವಸಮೂಹದ ಬಳಿಗೆ ತೆರಳಿ ಅವರಿಗೆ ನಡೆದ ವಿಷಯವನ್ನೆಲ್ಲ ತಿಳಿಸಿದ. ಅವರು ಕೇಳಿಕೊಂಡಾಗ ತನ್ನ ಮನಸ್ಸಿನಲ್ಲಿದ್ದ ಸಂಸಾರ ಬಂಧನದ ಬಿಡುಗಡೆಗೆ ಕಾರಣವಾಗುವ ಬೌದ್ಧಶಾಸ್ತ್ರದ ಅರ್ಥವನ್ನು ತಿಳಿಸಿದ.

ವಿ : ೧) ಬುದ್ಧರೂಪದಿಂದ ಶ್ರೀಹರಿ ಹೇಳಿದ ಮಾತುಗಳು ಒಳಗಿನ ಅರ್ಥದಲ್ಲಿ ಯಥಾರ್ಥವೇ ಆಗಿದ್ದವು. ಶ್ರೀಹರಿ ಎಂದೂ ಅಸತ್ಯ ನುಡಿಯದವನಾದ್ದರಿಂದ ಅವನು ನುಡಿದ ಬೌದ್ಧದರ್ಶನವೂ ಸಹ ಶ್ರೇಷ್ಠ ತಾತ್ತ್ವಿಕ ದರ್ಶನವೇ ಆಗಿದೆ ಎಂಬುದು ಇದರಿಂದ ತಿಳಿಯುವ ವಿಶೇಷಾಂಶ. ಎಂದರೆ ಮೇಲ್ನೋಟದ ಅರ್ಥದಲ್ಲಿ ಅದು ಅಪ್ರಾಮಾಣಿಕವೇ ಆದರೂ ಒಳಗಿನ ಅರ್ಥದಲ್ಲಿ ಅತ್ಯಂತ ಯಥಾರ್ಥವಾದ ದರ್ಶನ ಎಂದರ್ಥ.

೨) ಅಂತಹ ಅಂತರಾರ್ಥದ ವಿವರಣೆಯನ್ನು ಮುಂದಿನ ಶ್ಲೋಕಗಳಲ್ಲಿ ನೀಡಿರುವರು.

ಬೌದ್ಧದರ್ಶನದ ಅಂತರಾರ್ಥ

ಕ್ಷಣಾದಯಃ ಕ್ಷಣಿಕಾಸ್ತದ್ವಿಶೇಷಾ
ಯತಃ ಪ್ರಯಾಂತ್ಯೇವ ನಿಸರ್ಗತೋಽಖಿಲಾಃ ।
ತತಃ ಸ್ಥಿರತ್ವೇಽಪಿ ವಿಶೇಷಸಂಶ್ರಯಾ-
ದುಕ್ತಂ ಕ್ಷಣಸ್ಥಾಯಿ ಮಯಾ ಸಮಸ್ತಮ್ ॥ ೧೪೮ ॥

ಅ: ಕ್ಷಣಾದಿಗಳು, ಅವುಗಳ ವಿಶೇಷಗಳು ಎಲ್ಲವೂ ನೈಸರ್ಗಿಕವಾಗಿ ಸ್ವಲ್ಪ ಕಾಲದಲ್ಲೇ ನಾಶ ಹೊಂದುವುದರಿಂದ ಮೂಲತಃ ಅವು ಸ್ಥಿರವಾಗಿದ್ದರೂ ಕ್ಷಣಿಕವೆನ್ನಿಸುವವು. ಹೀಗೆ ವಿಶೇಷವನ್ನು ಗಮನದಲ್ಲಿಟ್ಟುಕೊಂಡು ನಾನು ಸಕಲವೂ ಕ್ಷಣಿಕ ಎಂದು ತಿಳಿಸಿದೆ.

ವಿ: ೧) ಕ್ಷಣಿಕ ಎಂಬುವುದಕ್ಕೆ ಮೇಲ್ನೋಟದ ಅರ್ಥ ಯಾವುದೂ ಶಾಶ್ವತವಲ್ಲ, ಒಂದು ಕ್ಷಣಮಾತ್ರ ಇರುವಂತಹುದು, ಕೊನೆಗೆ ಎಲ್ಲವೂ ಶೂನ್ಯ ಎಂದಾಗುವುದು. ಅದರ ಮುಖ್ಯಾರ್ಥ ಅದಲ್ಲ.

೨) ಎಲ್ಲ ಪದಾರ್ಥಗಳೂ ಕ್ಷಣಿಕ ಎಂದರೆ ಕ್ಷಣದ ಸಂಬಂಧವನ್ನು ಹೊಂದಿರುವವುಗಳು ಎಂದರ್ಥ. ಎಂದರೆ ಕಾಲದ ಸಂಬಂಧವನ್ನು ಹೊಂದಿರುವುದರಿಂದ ಸತ್ಯವೇ ಆದವುಗಳು.

---

೧೪೮. ಕ್ಷಣಾದಯಃ ಕ್ಷಣಿಕಾ ಇತ್ಯತ್ರ ಆದಿಪದೇನ ಘಟಾದಯಃ ಸರ್ವೇ ಪದಾರ್ಥಾ ಗೃಹ್ಯಂತೇ। ತದ್ವಿಶೇಷಾ ಇತ್ಯನೇನ ನಿಮೇಷಯಾಮಾದ್ಯಾಃ ಕಾಲವಿಶೇಷಾ ಗೃಹ್ಯಂತೇ। ತತ್ರ ಕ್ಷಣಾದಯಃ ಸರ್ವೇಽಪಿ ಕ್ಷಣಮಾತ್ರವರ್ತಿತ್ವಾದೇವ ಕ್ಷಣಿಕಾಃ। ಕ್ಷಣಾನಾಂ ಕ್ಷಣವೃತ್ತಿತ್ವಂ ನಾಮ ನ ಕ್ಷಣಾಂತರವರ್ತಿತ್ವಮ್। ಪೂರ್ವಕ್ಷಣಸ್ಯ ಕ್ಷಣಾಂತರೇ ಅಭಾವಾತ್। ಕಿಂತು ಸ್ಥಿತಿಕಾಲೇ ಕ್ಷಣಾಖ್ಯೇ ಸ್ವಸ್ಮಿನ್ನೇವ ವರ್ತಿತ್ವಮ್। ಉತ್ಪತ್ತಿಕ್ಷಣಸ್ಯ ನಾಶಕ್ಷಣಸ್ಯ ಚ ಸ್ಥಿತಿಕಾಲತ್ವಾಭಾವಾತ್ ಸ್ಥಿತಿಕಾಲೇ ಕ್ಷಣಮಾತ್ರವರ್ತಿತ್ವಸ್ಯ ನ ಭಂಗಃ ಇಮಾಂ ಬುದ್ಧದೇವಾಭಿಪ್ರೇತಾಂ ಶಬ್ದಮರ್ಯಾದಾಮಜಾನಾನಾ ಬೌದ್ಧಾಸ್ತು ಪೂರ್ವೋತ್ತರಕಲಾವಿಕಲಕ್ಷಣವರ್ತಿತ್ವಂ ಕ್ಷಣಿಕತ್ವಮಾಹುಃ। ಅತೋ ಭ್ರಮಮೂಲಂ ತಚ್ಛಾಸ್ತ್ರಮ್। ಶಬ್ದಮರ್ಯಾದಾಭಿಜ್ಞಾ ದೇವಪ್ಯಾದಯಸ್ತು ಅಸ್ಮದುಕ್ತವಿಧಯೈವ ಕ್ಷಣಿಕತ್ವಂ ವ್ಯಜಾನನ್। ಅತೋ ಬುದ್ಧವಚನಸ್ಯ ನ ಕ್ವಾಪಿ ಅಪ್ರಾಮಾಣ್ಯಮ್। ಕಿಂ ತು ಅಶಿಕ್ಷಿತಧಿಯಾಂ ಬೌದ್ಧಾನಾಮೇವ ಮತಂ ಕುಮತಮಿತಿ ಭಾವಃ। ನನು ಸ್ವಕ್ಷಣೇ ಏವ ಸ್ವಸ್ಯ ವರ್ತಿತ್ವಂ ನಾಮ ಸ್ವಸ್ಮಿನ್ನೇವ ಸ್ವಸ್ಯ ವರ್ತಿತ್ವಮ್। ಏವಂ ಚಾತ್ಮಾಶ್ರಯಃ ಸ್ಯಾದಿತ್ಯತ ಉಕ್ತಂ ವಿಶೇಷಸಂಶ್ರಯಾದಿತಿ। ಏಕಸತ್ತ್ವೇಽಪ್ಯಪರನಾಶಾಖ್ಯಿಭೇದಾಸಾಧಾರಣಕಾರ್ಯಮಂತರೇಣ ಅಶೇಷಭೇದ-ಕಾರ್ಯಕಾರಿಣಾ ವಿಶೇಷೇಣ ನಿರ್ವಾಹ್ಯಮೇತದಿತಿ ಹೃದಯಮ್। ತರ್ಹಿ ಘಟೇಽಪಿ ಘಟಃ ಕುತೋ ನಾಂಗೀಕ್ರಿಯತ ಇತಿ ಚೋದ್ಯಂ ನೈಮಿತ್ತಿಕೇ ಸತಿ ನಿಮಿತ್ತಾನುಸರಣಂ ನ ತು ನಿಮಿತ್ತೇ ಸತಿ ನೈಮಿತ್ತಿಕಕಲ್ಪನಾ । ತಾಪನಿಮಿತ್ತಘರ್ಮಜಲಸ್ಯ ಶಿಲಾಯಾಮಾಪಿ ಕಲ್ಪನಾಪ್ರಸಂಗಾತ್ । ಕಾಕೇಭ್ಯೋ ದಧಿ ರಕ್ಷ್ಯತಾಮಿತ್ಯತ್ರ ಕಾಕಪದೇನ ದಧ್ಯುಪಘಾತಕ-ಮಾರ್ಜಾರಾದೀನಾಮಪ್ಯುಪಲಕ್ಷಣವತ್ ಕ್ಷಣಪದೇನಾಪ್ಯಲ್ಪಕಾಲರೂಪಾಃ ಸರ್ವೇಽಪಿ ಕಾಲಾಃ ಉಪಲಕ್ಷ್ಯಂತೇ। ಏವಂ ಚ ಲವನಿಮೇಷಯಾಮಾದಿರೂಪಕಾಲಾವಯವೇಷು ಘಟಾದ್ಯನಿತ್ಯಜಗತ್ಸು ಚ ಕ್ಷಣಿಕತ್ವಂ ನಾಮ ಅಲ್ಪಕಾಲಾವಸ್ಥಾಯಿತ್ವಮೇವ ಭಗವತೋ ಭಾವ ಇತ್ಯಾಹ ಅತಃ ಪ್ರಯಾಂತ್ಯೇವ ಹಿ ನಿಸರ್ಗತೋಽಖಿಲಾ ಇತಿ। ಕ್ಷಣಸ್ಥಾಯಿ= ಕ್ಷಣೇ ಕ್ಷಣಪದೋಪಲಕ್ಷಿತಾಲ್ಪಕಾಲೇ ಚ ಸ್ಥಾಯೀತ್ಯರ್ಥಃ – (ವಾ.)

ಸ್ವರೂಪತಃ ನಿತ್ಯವಾಗಿದ್ದರೂ ಬದಲಾವಣೆಯನ್ನು ಹೊಂದುವಂತಹುಗಳು. ಗೀತೆಯಲ್ಲಿ ಬಂದಿರುವ ಅಶ್ವತ್ಥ ಶಬ್ದದ ವಿವರಣೆಯೇ ಇದಾಗಿದೆ ಎಂಬುದನ್ನು ಗಮನಿಸಬೇಕು.

೩) ಒಟ್ಟಾಗಿ ಶ್ರೀಹರಿ ಒಬ್ಬನೇ ಸದಾ ಒಂದೇ ತೆರನಾಗಿ ಇರುವವನು, ಉಳಿದ ವಿಶ್ವ ಸದಾ ಒಂದಲ್ಲ ಒಂದು ರೀತಿಯಲ್ಲಿ ಬದಲಾವಣೆಗೆ ಒಳಪಡುವಂತಹುದು ಎಂದು ಅದರ ಭಾವ.

---

೧೪೮. ನನು ಕಥಂ ಜಗತಃ ಕ್ಷೀಣತ್ವಂ ಪ್ರತ್ಯಭಿಜ್ಞಾಬಲೇನ ಸ್ಥಿರಾತ್ಮಕತ್ವಸ್ಯ ಪ್ರಮಿತತ್ವೇನ ವಿರೋಧಾತ್ ತವ ಚ ಋತಭಾಷಿತ್ವೇನ ತ್ವದ್ವಚನಸ್ಯಾಹೇಯತ್ವಾದಿತ್ಯಾಶಯೇನ ಪೃಷ್ಟೋऽಭ್ಯಯಾನ್ಸ ಕ್ಷಣಿಕತ್ವೋಕ್ತಭಿಪ್ರಾಯಮಾಹ – ಕ್ಷಣಾದಯ ಇತಿ । ಕ್ಷಣಾದಯಃ ಕಾಲವಿಶೇಷಾಃ । ತನ್ನಿಮಿತ್ತಿಕಾಕಾಶವರ್ಣಘಟಾದಿನಿತ್ಯಾನಿತ್ಯವಸ್ತುನಿಷ್ಠಾಃ ಸಂಯೋಗಾದಯೋ ಧರ್ಮಾಃ ನಿಸರ್ಗತಃ ಪ್ರಯಾಂತಿ । ತೇಷ್ಯಾಶುತರವಿನಾಶಿನಃ ತತೋ ಘಟಾದೇಃ ಪ್ರತ್ಯಭಿಜ್ಞಾಬಲಾತ್ ಸ್ಥಾಯಿತ್ವೇऽಪಿ ವಿಶೇಷಸಂಶ್ರಯಾನ್ಮಯಾ ಸಮಸ್ತಂ ಜಗತ್ ಕ್ಷಣಸ್ಥಾಯೀತ್ಯುಕ್ತಮಿತ್ಯರ್ಥಃ । ಯದ್ವಾ ಕ್ಷಣಾದಯಃ ಕ್ಷಣಿಕಾಃ ಆದಿಪದೇನ ಕದಲೀಮುಕುಲಿತಪತ್ರವಿಕಾರಮನೋವಿಕಾರೋಪಚಯಾದಯಃ । ಸ್ವಾಸ್ಥೇನ ಪ್ರತಿಕ್ಷಣಭಾವಿನೋ ಜಗದ್ಧರ್ಮಾ ಗ್ರಾಹ್ಯಾಃ । ಉಕ್ತಂ ಚ ವಿಷ್ಣುತೀರ್ಥಶ್ರೀಮಚ್ಚರಣೈಃ – 'ಕ್ಷಣೇ ಕ್ಷಣೇऽನ್ಯಥಾಭಾವಾದನಿತ್ಯಂ ಚ ಸದಾ ಜಗತ್' ಇತಿ । ತತಶ್ಚ ಯತಸ್ತದ್ವಿಶೇಷಃ । ಕ್ಷಣಕದಲೀಪತ್ರವಿಕೃತ್ಯಾದಿಕೃತಾಃ ಘಟಾಕಾಶಕದಲ್ಯಾದಿನಿಷ್ಠಾಃ ಕಾಲಸಂಯೋಗಪರಿಮಾಣಾದಿಧರ್ಮಾಃ ನಿಸರ್ಗತಃ ಪ್ರಯಾಂತಿ । ಕ್ಷಣಮಾತ್ರವಿನಾಶಿನಸ್ತತ್ತ್ವತ್ತೇऽಪಿ ವಿಶೇಷಸಂಶ್ರಯಾತ್ ಕಾಲಕೃತಾತ್ ಸಂಯೋಗಾದೀನ್ ಪತ್ರವಿಕೃತ್ಯಾದಿ-ನಿಮಿತ್ತಕಾನ್ ವಿಕಾರವಿಶಿಷ್ಟತ್ವಪರಿಮಾಣಾದೀನ್ ವಿಶೇಷಾನ್ ಧರ್ಮಾನಾಶ್ರಿತ್ಯ ಸಮಸ್ತಂ ಜಗತ್ ಕ್ಷಣಸ್ಥಾಯೀತ್ಯುಕ್ತಮಿತ್ಯರ್ಥಃ । ನನು ಧರ್ಮಾಣಾಂ ಕ್ಷಣಿಕತ್ವೇऽಪಿ ಧರ್ಮೀಭೂತಜಗತಸ್ತ್ವದುಕ್ತೇ ಕ್ಷಣಿಕತ್ವೇ ಕಿಮಾಯಾತಮಿತ್ಯತ ಆಹ – ತದ್ವಾನಿತಿ । ತದ್ವಾನ್ ವಿಶೇಷವಾನ್ । ಧರ್ಮೀ ವಿಶೇಷೋ ಧರ್ಮಶ್ಚ ಯತೋ ನ ಭಿನ್ನಃ ಯತಶ್ಚ ಕ್ಷಣಾದಿಕೃತಾ ವಿಶೇಷಾ ನಿಸರ್ಗತಃ ಪ್ರಯಾಂತಿ । ಅತಃ ಸ್ವಾಭಿನ್ನವಿಶೇಷಸಂಶ್ರಯಾತ್ । ಸ್ಥಿರಮಪಿ ಕ್ಷಣಾಸ್ಥಾಯೀತ್ಯುಕ್ತಮಿತಿ ಪೂರ್ವಸಂಬಂಧಃ । ನನು ಧರ್ಮಧರ್ಮಿಣೋರಭೇದೇ ಯಂ ಧರ್ಮೀ ಧರ್ಮೋऽಯಮಿತಿ ವ್ಯವಹಾರಃ ಧರ್ಮಿಣಃ ಸ್ಥಾಯಿತ್ವಂ ಧರ್ಮಾಣಾಂ ನಾಶ ಇತಿ ವ್ಯವಸ್ಥಾ ಚ ಕಥಮಿತ್ಯತೋ ವಿಶೇಷಬಲಾದಿತ್ಯತ ಆಹ – ಸ್ವನಿರ್ವಾಹಕೇತಿ । ಸ್ವನಿರ್ವಾಹಕಶಕ್ತಿವಿಶೇಷಃ । ವಿಶೇಷಯುಕ್ತಾವಿತಿ ವಾಚ್ಯೇ ಸ್ವನಿರ್ವಾಹಕಶಕ್ತೇರಿತ್ಯುಕ್ತಿಸ್ತು ವಿಶೇಷವಿಶೇಷೀಭಾವಘಟನಾಯ ವಿಶೇಷಾಂತರಾಯೇ (?) ಕ್ಷಣಪರಸ್ಮಿನ್ನಿವ ಸ್ವಸ್ಮಿನ್ನಪಿ ಭೇದವ್ಯವಹಾರನಿರ್ವಾಹಕಃ ಸ ಏವೇತಿ ಸೂಚಯಿತುಮಿತಿ ಜ್ಞೇಯಮ್ । ನನು ಅಯಾವದ್ದ್ರವ್ಯಭಾವಿನ್ಯ ಲೇಭೇ .....ಭೇದೇನೈವ ಸರ್ವಾನುಪಪತ್ತಿಶಮನಾದ್ವಿಶೇಷವೈಯ್ಯರ್ಥ್ಯಮಿತಿ ಚೇತ್ ವಿಶೇಷಮಂತರೇಣ ವಿರುದ್ಧಯೋರ್ಭೇದಾಭೇದಯೋರೇಕಸ್ಮಿನ್ ಯುಗಪದೇವಾತ್ರಾವಸ್ಥಾನೇನ ವಿಶೇಷಸ್ಯೈವ ವ್ಯವಹಾರಘಟಕಭೇದಾನುಗ್ರಹದ್ವಾರಾ ವ್ಯವಹಾರನಿರ್ವಾಹಕತ್ವೇನ ಸಾರ್ಥಕ್ಯಾತ್ । ಅತ ಏವ ಜನ್ಮಾಧಿಕರಣೇ ಭೇದಹೀನೇ ತ್ವಪರ್ಯಾಯಶಬ್ದಾಂತರನಿಯಾಮಕಃ ॥ ವಿಶೇಷೋ ನಾಮ ಕಥಿತಃ ಸೋऽಸ್ತಿ ವಸ್ತುಷ್ವಶೇಷತಃ । ಇತ್ಯನುವ್ಯಾಖ್ಯಾನೇ ಏವಮೇವಾನುಪಪತ್ತಿಮಾಶಂಕ್ಯ ಸುಧಾಯಾಮಿತ್ಥಮೇವ ಪರಿಹೃತಮ್ । ನನು ಭೇದಾಭೇದಾಂಗೀಕಾರೇಣಾನುಪಪತ್ತೇಃ ಶಮನಾತ್ ಕಿಂ ವಿಶೇಷೇಣೇತಿ ಚೇನ್ನ । ಪರಸ್ಪರವಿರೋಧಯೋರ್ಭೇದಾಭೇದಯೋರೇಕತ್ರಾವಸ್ಥಾನದ್ಯೋತನಾಯಾಪಿ ವಿಶೇಷಸ್ಯಾಂಗೀಕರಣೀಯತ್ವಾತ್ । ಪ್ರತೀತತ್ವಾತ್ ಕೋ ವಿರೋಧ ಇತಿ ಚೇತ್ ಸತ್ಯಮ್ । ಪ್ರತೀತಿರೇವ ಕಥಮಿತಿ । ..... – (ತಾ.)

೧೪೮. ಕ್ಷಣಾದಿಕಾಲಸಂಬಂಧಾತ್ ಮಯಾ ಸಮಸ್ತಂ ಶತೇ ಪಂಚಾಶನ್ನ್ಯಾಯೇನ ಕ್ಷಣಸ್ಥಾಯಿ ಕ್ಷಣೇ ತಿಷ್ಠತೀತಿ ಕ್ಷಣಸ್ಥಾಯೀತ್ಯುಕ್ತಮ್ ॥ – (ಜ.)

ತದ್ವಾನ್ ವಿಶೇಷಶ್ಚ ಯತೋ ನ ಭಿನ್ನೌ
ಸದಾ ಸ್ವನಿರ್ವಾಹಕಶಕ್ತಿಯುಕ್ತೌ।
ಅತಃ ಕ್ಷಣಸ್ಥಾಯಿ ಸಮಸ್ತಮೇತತ್
ಸ್ಥಿರಾತ್ಮಕಂ ಚೇತಿ ಹಿ ನಾಸ್ತಿ ಭೇದಃ ॥ ೧೪೯ ॥

ಅ: ವಿಶೇಷವನ್ನು ಹೊಂದಿರುವ ಪದಾರ್ಥ ಮತ್ತು ಆ ವಿಶೇಷವು ಬೇರೆಯಲ್ಲವಾದ್ದರಿಂದ ಅವು ಸ್ವನಿರ್ವಾಹಕ ಶಕ್ತಿಯನ್ನು ಹೊಂದಿರುವವು. ಆದ್ದರಿಂದ ಈ ಸಮಸ್ತ ಪ್ರಪಂಚ ಕ್ಷಣಸ್ಥಾಯಿ ಹಾಗೂ ಸ್ಥಿರ ಎಂದು ಹೇಳಿದಾಗ ವಿರೋಧವಿರದು.

ವಿ : ವಿಶೇಷ ಎಂಬುದು ವಾಸ್ತವಿಕವಾಗಿ ಅಭೇದವಿದ್ದಲ್ಲಿ, ಭೇದವ್ಯವಹಾರಕ್ಕೆ ಕಾರಣವಾಗುವ ಧರ್ಮ. ದ್ವೈತದರ್ಶನದಲ್ಲಿ ಇದರ ಸ್ಥಾನ ಅಪೂರ್ವವಾದುದು. ಆ ವಿಶೇಷವನ್ನು ಒಪ್ಪುವುದರಿಂದ ಮೇಲ್ನೋಟಕ್ಕೆ ವಿರುದ್ಧವೆಂದು ಕಾಣುವ ಅನೇಕ ಬಗೆಯ ವ್ಯವಹಾರ ಪ್ರಾಮಾಣಿಕವೆಂದು ಸ್ಫುಟಪಡುವುದು. ಅಂತಹ ವಿಶೇಷವು ವಸ್ತುಹಾಗೂ ಅದರಿಂದ ಅಭಿನ್ನವಾದ ಸಹಜ ಧರ್ಮಗಳ ಸಂಬಂಧವನ್ನು ಭಿನ್ನವೆಂಬಂತೆ ವ್ಯವಹರಿಸಲು ನೆರವಾಗುವುದು. ಆ ವಿಶೇಷವೂ ಸಹ ಸ್ವನಿರ್ವಾಹಕವಾದುದು. ಆದ್ದರಿಂದ ಒಂದೇ ಪದಾರ್ಥ ವಿಕ್ಷಣವೃತ್ತಿಯಾಗಿರುವಂತೆ ಅನೇಕಕ್ಷಣ–ವೃತ್ತಿಯಾಗುವುದರಲ್ಲೂ ವಿರೋಧವಿರದು ಎಂದರ್ಥ.

ಜ್ಞೋಽಹಂ ಸದೈಕಃ ಪರಮೋ ಮಯೈತತ್
ಸದಾಽನನೀಯಂ ಹಿ ಯತೋಽಸ್ವತಂತ್ರಮ್ ।
ಜ್ಞಾನಾತ್ಮಕಂ ವಿಶ್ವಮತೋ ಮಯೋಕ್ತಂ
ಜಡಸ್ವರೂಪಂ ಚ ಕಿಮು ಸ್ಮ ಚೇತನಮ್ ॥ ೧೫೦ ॥

---

೧೪೯. ಸೋಽಯಂ ವಿಶೇಷಃ ಕ್ಷಣ ಇವ ಘಟಾದಿಪ್ರಪಂಚೇ ಅಂಗೀಕರ್ತವ್ಯಃ। ಅನ್ಯಥಾ ಘಟಪಟತ್ವಾದ್ಯಭಿನ್ನಘಟಾದೀನಾಮಾಧಾರಾಧೇಯಭಾವೋ ನ ಸ್ಯಾತ್। ಏವಂ ಚ ಸಕಲಪದಾರ್ಥೇಷು ಸ್ಥಿತವಿಶೇಷಾಣಾಂ ಕಥಂ ಕ್ಷಣಿಕತ್ವಮಿತ್ಯತ ಆಹ ತದ್ವಾನ್ವಿಶೇಷಶ್ಚೇತಿ। ತದ್ವಾನ್= ವಿಶೇಷವಾನ್ ಕ್ಷಣಲವಾದಿಃ ಘಟಪಟಾದಿಶ್ಚ ತತ್ತನ್ನಿಷ್ಠೋ ವಿಶೇಷಶ್ಚ ಯತೋ ನ ಭಿನ್ನೌ ಅತಃ ಕ್ಷಣಾದೀನಾಂ ಕ್ಷಣಿಕತ್ವವತ್ ತತ್ತನ್ನಿಷ್ಠವಿಶೇಷಾಣಾಮಪಿ ತದ್ವದೇವ ಕ್ಷಣಿಕತ್ವಮ್। ಕ್ಷಣೇ ಕ್ಷಣವರ್ತಿತ್ವೇನ ಅನ್ಯತ್ಕಾಲಾವಸ್ಥಾಯಿತ್ವೇನೇತ್ಯಭಿಸಂಧಿಃ। ಅಭಿನ್ನತ್ವೇ ಕಥಂ ತದ್ವಾನ್ವಿಶೇಷಶ್ಚೇತಿ ಪ್ರಯೋಗ ಇತ್ಯತ ಉಕ್ತಂ ಸ್ವನಿರ್ವಾಹಕಶಕ್ತಿಯುಕ್ತಾವಿತಿ। ತತ್ರ ತದ್ವತಃ ಸ್ವನಿರ್ವಾಹಕತ್ವಂ ಗ್ರಹಾವಿಷ್ಟಪುರುಷಸ್ಯ ಶಕ್ತಿವಿಶೇಷವತ್ ವಿಶೇಷಸಂಬಂಧಾದೇವ ನತು ಸ್ವಶಕ್ತ್ಯಾ ಗ್ರಹಸ್ಯೇವ ವಿಶೇಷಸ್ಯ ತು ಸ್ವತ ಏವೇತಿ ವಿವೇಕಃ। ಯಸ್ಮಿನ್ನಭಿನ್ನೇ ಭೇದಕಾರ್ಯಂ ಕರೋತಿ ಅತಃ ಅಭಿನ್ನೇ ಸ್ವಸ್ಮಿನ್ ಸ್ವಧರ್ಮಿಣಿ ಚ ಧರ್ಮಧರ್ಮಿಭಾವಾಖ್ಯಭೇದಕಾರ್ಯಂ ಸ್ವಯಮೇವ ಕರೋತೀತ್ಯತಃ ಸ್ವನಿರ್ವಾಹಕತ್ವಮಿತಿ ಭಾವಃ। ಸಮಸ್ತಂ= ವಿಶೇಷಸಹಿತಂ ಸರ್ವಂ ಜಗದಿತ್ಯರ್ಥಃ ॥ –(ವಾ.)

ಅ: ಸ್ವತಂತ್ರನಾದ ನಾನು ಸರ್ವೋತ್ತಮನಾಗಿದ್ದು 'ಜ್ಞ' ಎನಿಸಿರುವೆನು. ನನ್ನಿಂದ ಸದಾ ಈ ವಿಶ್ವ ಅನನೀಯವಾಗಿದೆ (ಪ್ರವೃತ್ತಿ ಹೊಂದುತ್ತಿದೆ). ಅದು ಅಸ್ವತಂತ್ರವಾಗಿರುವುದೇ ಅದಕ್ಕೆ ಕಾರಣ. ಆದ್ದರಿಂದ ಜಡರೂಪವಾದ ವಿಶ್ವ ಜ್ಞಾನಾತ್ಮಕವಾದುದು ಎಂದು ನಾನು ಹೇಳಿದೆ, ಇನ್ನು ಚೇತನವು ಜ್ಞಾನಾತ್ಮಕವೆಂಬುದು ಕೈಮುತ್ಯಸಿದ್ಧ.

ಎ : ೧) ಸರ್ವವೂ ಜ್ಞಾನರೂಪ, ಎಂದರೆ ವಾಸ್ತವಿಕವಾಗಿ ವಸ್ತುಇರದೇ ಆ ವಸ್ತುವಿನ ಜ್ಞಾನವೇ ಆ ವಸ್ತುವಿನ ಆಕಾರದಲ್ಲಿ ಕಾಣಿಸಿಕೊಳ್ಳುವುದು. ಸರ್ವಚೈತನ್ಯವಾದ (ವಿಜ್ಞಾನವಾದ) ಎಂದು ಇದಕ್ಕೆ ಹೆಸರು. ಇದು ಶಾಸ್ತ್ರಸಮ್ಮತವಾದ ವಿಚಾರವಲ್ಲ. ಮೇಲ್ನೋಟಕ್ಕೆ ಬುದ್ಧದರ್ಶನ ಇದನ್ನು ಪ್ರತಿಪಾದಿಸುವಂತೆ ಕಾಣುತ್ತದೆ. ಅದರ ನಿಜವಾದ ಅರ್ಥದ ವಿವೇಚನೆ ಇಲ್ಲಿದೆ.

೨) ಅದರಂತೆ ಜ್ಞಾನಾತ್ಮಕ ಎಂಬುದಕ್ಕೆ ಜ್ಞ ಎಂದರೆ ಸ್ವತಂತ್ರನಾದ ಶ್ರೀಹರಿ, ಅವನಿಂದ ಪ್ರವೃತ್ತಿಯನ್ನು ಹೊಂದುವುದರಿಂದ ಇದು ಜ್ಞಾನಾತ್ಮಕ. ಇದಕ್ಕೆಂದೂ ಸ್ವತಂತ್ರ ಪ್ರವೃತ್ತಿಯಿಲ್ಲ ಎಂದಾಗುವುದು. ಜ್ಞ+ಅನ = ಜ್ಞ ನಾಮಕನಾದ ಶ್ರೀಹರಿಯಿಂದ ಪ್ರವೃತ್ತಿ ಹೊಂದಿಸಲ್ಪಡು–ವಂತಹುದು ಎಂದರ್ಥ; ಈ ಅರ್ಥದಲ್ಲಿ ಜಡವಿಶ್ವವು ಜ್ಞಾನಾತ್ಮಕ; ಇನ್ನು ಚೇತನವಾದ ವಿಶ್ವ ಜ್ಞಾನಾತ್ಮಕವೆಂಬುದು ಕೈಮುತ್ಯಸಿದ್ಧ.

ಶಂಶೀಲಕೋಽಹಂ ಯತ ಏವ ಚೋಚ್ಚಃ
ಶುನಾಮಕಸ್ತದ್ಧಿ ಮಯಾ ನಿಧೇಯಮ್ ।
ಶೂನ್ಯಾಭಿಧಂ ದೋಷವಿರುದ್ಧರೂಪೋ
ದೋಷೋಜ್ಝಿತೋಽನ್ಯಸ್ತ್ವಖಿಲಾದನಾಮಾ ॥ ೧೫೧ ॥

---

೧೫೦. ಇದಾನೀಂ ವಿಜ್ಞಾನವಾದಿಮತೇ ಜ್ಞಾನಾತ್ಮಕಂ ಜಗದಿತ್ಯುಕ್ತಸ್ಯಾಭಿಪ್ರಾಯಮಾಹ। ಜ್ಞೋಽಹಮಿತಿ। ಜ್ಞಃ= ಜ್ಞಾನರೂಪ ಇತ್ಯರ್ಥಃ। ''ಅನ ಚೇಷ್ಟಾಯಾ'' ಮಿತಿ ಧಾತೋಃ ಅನನೀಯಂ= ಚೇಷ್ಟಿತವ್ಯಮಿತ್ಯರ್ಥಃ। ''ಅತ ಸಾತತ್ಯಗಮನ'' ಇತಿ ಧಾತೋಃ ಜ್ಞಾನರೂಪೇಣ ಮಯಾ ಗಮನಾಗಮನಕರ್ತೃ ಜ್ಞಾನಾತ್ಮಕಮ್ – (ವಾ.)

೧೫೦. ಜ್ಞಾನಾತ್ಮಕಂ ವಿಶ್ವಮಿತ್ಯುಕ್ತಂ ತತ್ರ ಚೇತನಸ್ಯ ಚಿದಾತ್ಮಕತ್ವಂ ಪ್ರಸಿದ್ಧಮಿತ್ಯಭಿಪ್ರೇತ್ಯ ಜಡಸ್ಯ ಚಿದಾತ್ಮಕತಾಮಾಹ – ಜ್ಞ ಇತಿ । ಸದಾ ಸರ್ವಕಾಲಂ ಏಕಃ ಮುಖ್ಯತಯಾ ಪರಮಃ ಉತ್ಕೃಷ್ಟಃ ಜ್ಞಃ ಜ್ಞಾತಾ ಯತಃ ಅಸ್ವತಂತ್ರಂ ಏತದ್ವಿಶ್ವಂ ಮಯಾ ಜ್ಞೇನ ಅನನೀಯಂ ಚೇಷ್ಟನೀಯಂ ಯತಃ ಅತಃ ಜಡಸ್ವರೂಪಂ ಜಡಾತ್ಮಕಂ ವಿಶ್ವಂ ಚಾಪಿ ಜ್ಞಾನಾತ್ಮಕಂ ಮಯಾ ಉಕ್ತಂ ಚೇತನಸ್ಯ ಜ್ಞಾನಾತ್ಮಕತ್ವಸ್ಯ ಸರ್ವಸಿದ್ಧತ್ವಾಚ್ಚೇತನಂ ಕಿಮು ಸ್ಮ ಜ್ಞಾನಾತ್ಮಕಮಿತಿ ಕಿಮು ವಕ್ತವ್ಯಮಿತ್ಯರ್ಥಃ । ಏತೇನ ಜ್ಞೇನ ಅನಿತಿ ಚೇಷ್ಟತೇ ಆತ್ಮಾ ಸ್ವರೂಪಂ ಯಸ್ಯೇತಿ ವಿಗ್ರಹಃ ॥ - (ಜ.)

೧೫೧. ಶೂನಾ ನೀಯತ ಇತಿ ಶೂನ್ಯಮ್ । – (ವೇ.)

ಏನೈವ ಸಾದ್ಯಂ ತ್ವಸದೇವಮತ-
ಸ್ತ್ವಭಾವ ಏನೈವ ಭವೇದ್ಯತಸತ್ತ್ ।
ಇತ್ಯಾದಿ ಬೋದ್ಧವ್ಯಮಿದಂ ಸಮಸ್ತಂ
ಮಯೋದಿತಂ ಕ್ವಾಪಿ ನ ಹೇಯಮಸ್ತಿ ॥ ೧೫೨ ॥

ಅ: ನಾನು ಅತ್ಯಂತಸುಖಸ್ವರೂಪನಾದವನು, ಆದ್ದರಿಂದಲೇ ಉತ್ತಮನಾಗಿರುವೆನು. ಆದ್ದರಿಂದ ನನಗೆ **'ಶೂ'** ಎಂದು ಹೆಸರು. **'ಶೂ'** ನಾಮಕನಾದ ನನ್ನಿಂದ ಈ ವಿಶ್ವ ಪ್ರತಿ

---

೧೫೧. ಶಂಶೀಲಕ ಇತ್ಯತ್ರ ''ತಾಚ್ಛೀಲಿಕ ಉ ಪ್ರತ್ಯಯ'' ಇತಿ ವಚನಾತ್ ಶು = ಸುಖಶೀಲಃ ಉಚ್ಚಶ್ಚ = ಸವರ್ಣದೀರ್ಘೇ ಕೃತೇ ಶೂಃ = ಸುಖಶೀಲಃ ಉಚ್ಚಶ್ಚೇತ್ಯರ್ಥಮಭಿಪ್ರೇತ್ಯ ಶೂನಾಮಕ ಇತ್ಯುಕ್ತಮ್। ಶ್ವಾ = ಉಕ್ತವಿಧಯಾ ಶೂನಾಮಕೇನ ಮಯಾ ನಿ ''ಯಾ ಪ್ರಾಪಣ'' ಇತಿ ಧಾತೋಃ ನ್ಯಮ್ ಇತಸ್ತತಃ ಪ್ರಾಪಣಯೋಗ್ಯಂ ಜಗಾದಿತ್ಯಭಿಪ್ರೇತ್ಯಾಹ। ತದ್ಧಿ ಮಯಾ ವಿಧೇಯಮಿತಿ। ಯತ್ ಪೂರ್ವೋಕ್ತಂ ಜಗತ್ ತತ್ ಶೂನಾಮಕೇನ ಮಯಾ ವಿ = ವಿವಿಧಕಾರ್ಯೇಷು ಧೇಯಂ = ಧರ್ತುಂ ಯೋಗ್ಯಮಿತ್ಯರ್ಥಃ। ಅಸಜ್ಜಗದಿತ್ಯಸ್ಯಾರ್ಥಮಾಹ - ದೋಷವಿರುದ್ಧರೂಪ ಇತಿ। ತದ್ವಿರುದ್ಧತದಭಾವತದನ್ಯಾರ್ಥಕನಞಃ ನ ಲೋಪೋ ನಞ ಇತಿ ನಕಾರಾಖ್ಯಹಲೋ ಲೋಪೇ ಸತಿ ಉರ್ವರಿತಾಕಾರಸ್ಯೈವ ದೋಷವಿರುದ್ಧಾರ್ಥಕತ್ವೇನ ದೋಷವರ್ಜಿತತ್ವಾತ್ ಜಗದನ್ಯತ್ವಾಚ್ಚ ಮದ್ವಾಚಕತ್ವಮ್। ''ಷದಲೃ ವಿಶರಣಗತ್ಯವಸಾದನೇಷು'' ಇತಿ ಧಾತೋಃ ಕರ್ಮಣಿ ವ್ಯುತ್ಪತ್ತ್ಯಾ ಅವಸಾದ್ಯತೇ ನಾಶ್ಯತ ಇತಿ ಸತ್। ಏವಂ ಚ ಏನಂ ಅಕಾರವಾಚ್ಯೇನ ಮಯಾ ನಾಶ್ಯಂ ಜಗತ್ ಅಸದಿತ್ಯುಚ್ಯತೇ। ನ ತ್ವತ್ಯಂತಾಸತ್ವಾದಿತಿ ಭಾವೇನಾಹ ದೋಷವಿರುದ್ಧರೂಪ ಇತ್ಯಾದಿನಾ — (ವಾ.)

೧೫೧. ಯತ್ತಸ್ಯ ವ್ಯಾಪಕಂ ರೂಪಂ ಪರಂ ನಾರಾಯಣಾಭಿಧಮ್ ।
ಶೂನ್ಯಂ ಬ್ರಹ್ಮೇತಿ ತತ್ಪ್ರಾಹುರ್ದ್ವಿತೀಯಂ ಸ್ರಷ್ಟೃ ಯತ್ತತಃ ।
ಪರಮಃ ಪುರುಷೋ ನಾಮ ಮಿತಂ ತದ್ದೇಶತೋ ವಿಭೋಃ ।
ತೃತೀಯಂ ವಾಸುದೇವಾಖ್ಯಂ ಜಗದಾವರಕಂ ಮಿತಮ್ ।
ದೇಶತೋ ಜಗದಾವಿಷ್ಟಂ ತುರೀಯಂ ವಿಷ್ಣುನಾಮಕಮ್' ಇತಿ ಬ್ರಹ್ಮತರ್ಕೇ ॥ - ಭಾ.ತಾ.(೩./೧೨/೨)

೧೫೧. ಅಹಂ ಶಂ ಶೀಲಕಃ ಸುಖಸ್ವಭಾವಃ ಉಚ್ಚಶ್ಚ ಉತ್ತಮಶ್ಚ ಯತಃ ಅತಃ ಶೂನಾಮಕಃ ಶೂ ಇತಿ ನಾಮ ಯಸ್ಯ ಸ ತಥಾ । ಶಂಶೀಲಕತ್ವಾಚ್ಛುಃ । ಉಚ್ಚತ್ವಾತ್ ಉಃ । ಶುಶ್ಚಾಸಾವುಶ್ಚೇತಿ ಶೂ ಇತಿ ವಿಗ್ರಹಃ । ಯತೋ ಮಯಾ ಶೂನಾಮ್ನಾ ತದ್ವಿಶ್ವಂ ನಿಧೇಯಂ ಸ್ಥಾಪನೀಯಂ ಹಿ ಯಸ್ಮಾತ್ ತಸ್ಮಾತ್ ಶೂನ್ಯಾಭಿಧಂ ಶೂನ್ಯನಾಮಕಂ ಮಯಾ ಉಕ್ತಮಿತಿ ಶೇಷಃ । ಶ್ವಾ ನೀಯತ ಇತಿ ಶೂನ್ಯಮಿತಿ ವಿಗ್ರಹಃ । ಅಸಚ್ಛಬ್ದಾರ್ಥಮಾಹ – ದೋಷೇತಿ । ದೋಷವಿರುದ್ಧರೂಪಃ ದೋಷವಿರುದ್ಧಸದ್ಗುಣಸ್ವರೂಪತ್ವಾದಿತ್ಯರ್ಥಃ । ದೋಷೋಜ್ಝಿತತ್ವಾತ್ ಅಖಿಲಾಜ್ಜಗತಃ ಅನ್ಯಸ್ತು ಅನ್ಯತ್ವಾಚ್ಚ ಅನಾಮಾ । ಅ ಇತಿ ನಾಮ ಯಸ್ಯ ಸ ತಥೋಕ್ತಃ । ಅಶಬ್ದಸ್ಯ ತದ್ವಿರುದ್ಧತದಭಾವತದನ್ಯವಾಚಕತ್ವಾತ್ ಅಹಂ ಚ ದೋಷವಿರುದ್ಧಃ ದೋಷೋಜ್ಝಿತಃ ಅಖಿಲಾದನ್ಯಃ ಅತಃ ಅನಾಮಾ ಇತಿ ಭಾವಃ ॥ - (ಜ.)

೧೫೨. ಘಟತ್ವಾದಿಸಾಮಾನ್ಯಂ ಅಭಾವ ಇತಿ ಯತ್ತ್ವೇನೋಕ್ತಂ ತಸ್ಯಾಭಿಪ್ರಾಯಮಾಹ ಅಭಾವ ಇತಿ। ಯತಃ ಯೇನ= ಅಕಾರವಾಚ್ಯೇನ ಮಯಾ ಏತತ್= ಸಾಮಾನ್ಯರೂಪಂ ಜಗತ್ ಭವೇತ್ ತೇನೈವಾಭಾವಃ। ನ ತ್ವನ್ಯಾಪೋಹರೂಪತ್ವೇನೇತಿ ಭಾವಃ — (ವಾ.)

ಹಂತದಲ್ಲೂ ನಿಯಮಿಸಲ್ಪಡುವುದು; ಆದರಿಂದ ಇದಕ್ಕೆ **ಶೂನ್ಯ** ಎಂದು ಹೆಸರು. ದೋಷ ವಿರುದ್ಧ ಸ್ವರೂಪನೂ, ದೋಷರಹಿತನೂ, ಸರ್ವವಿಲಕ್ಷಣನೂ ಆದ್ದರಿಂದ ನನಗೆ **ಅ** ಎಂದು ಹೆಸರು. **'ಅ'** ನಾಮಕನಾದ ನನ್ನಿಂದ ಜನಿಸುವುದರಿಂದ ಇದಕ್ಕೆ **ಅಭಾವ** ಎಂದು, ನಾಶ ಹೊಂದುವುದರಿಂದ **ಅಸತ್** ಎಂದು ಹೆಸರು. ಇವೇ ಮೊದಲಾಗಿ ನಾನು ಹೇಳಿದ ಎಲ್ಲವನ್ನೂ ತಿಳಿಯಬೇಕು. ಇದರಲ್ಲಿ ಅಗ್ರಾಹ್ಯವಾದದ್ದು ಯಾವುದೂ ಇಲ್ಲ.

